Reg. No. B. 1270. Monday, 3rd October, 1938.

ವರ್ಷ ೨೧

ಕಾನಡಾವೃತ್ತ

ಸಂಚಿಕೆ ೧೪

ಪತ್ರದ ವರ್ಗಣಿ.

ವರುಷದಲ್ಲಿಯ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪೈಕಾ ಟೈಪಿನ (೧೨ ಪಾಯಿಂಟ ಇದ್ದ) ೪ ಸಾಲುಗಳವರೆಗೆ ರೂ.1-0-0 ೪ ನಂತ್ರ ಪ್ರತಿಸಾಲಿಗೆ 0-2-0. ಹೆಚ್ಚಿಂಗದ ಸಾಲು ಎಷ್ಟು ಹೊತ್ತಿಯುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗೆ ಪತ್ರವ್ಯವಹಾರ ಯು ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೩ ಮಾಹೆ ಅಕ್ಟೋಬರ ಸನ್ ೧೯೩೮ನೇ ಇಸವಿ.)*-

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital. In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd. 1906.

RESOURCES OVER A CRORE.

CANARA BANK, LIMITED.

ADMITTED FACTS.

People have selected us as their Bankers for deposits, secured loans and exchange business, because (1) they know almost all their deposits are (i) invested on fully secured loans on gold, valuable securities, G. P. Notes and the like, (ii) held in cash on hand as fluid resources, (2) they have found us always at their side adopting the safety first policy in respect of our secured loans; (3) they are convinced that we render maximum exchange facilities on moderate remuneration (4) all our employees at every office are always willing and promptly attending to their constituents. (5) we have adopted from the beginning the modest policy of rendering public service safe-guarding all the interests of the Bank.

We are popular for four Public Service, and our marked progress is the proof of confidence reposed in us by the public.

THE AGRICULTURAL & INDUSTRIAL BANK, LTD.

ಈಗ ಮಹಾಯುದ್ಧಯೋಗ ಖಂಡಿತ!

ಪ್ರಾಚೀನ ಅಗಸ್ತ್ಯ ಮಹಾಮುನಿಗಳ ಜ್ಯೋತಿಷ!

[ನಿರೀಕ್ಷಕನು ಕಳಿಹಾಕಿದ್ದು]

ಮಹಾಯುದ್ಧಯೋಗಗಳ ಕುರಿತು ಬೇರೆ ಬೇರೆ ಜ್ಯೋತಿಷಿಗಳು ಬೇರೆ ಬೇರೆ ಪ್ರಕಾರಗಳಿಂದ ಭವಿಷ್ಯ ವರ್ತಿಸುತ್ತಿದ್ದಾರೆ ಮಹಾಯುದ್ಧಯೋಗ ಉಂಟೆಂದು ಕೆಲವರ ಪ್ರತಿಪಾದನೆ, ಈ ವರ್ಷ ಮಹಾಯುದ್ಧ ಇಲ್ಲವಾಗಿ ಇನ್ನು ಹಲವರ ಗಣಿತ, ಹೀಗೆ ಮಹಾಯುದ್ಧಯೋಗದ ಕುರಿತು ಮತಭೇದವಾಗಿದೆ ಈ ಸಮಯ ಪ್ರಾಚೀನ ಅಗಸ್ತ್ಯ ಮುನಿಗಳು ಬರೆದಿಟ್ಟ ಗ್ರಂಥದ ಉಲ್ಲೇಖ ಮಾಡುವದುಚಿತ ಈ ಗ್ರಂಥ ತಾಳೆ ಎಲೆ ಮೇಲೆ ಬರೆದದ್ದು, ಭಾಷೆ ತಮಿಳು, ಲಿಪಿ, ೨೪ ಅಧ್ಯಾಯಗಳವು ಈ ಗ್ರಂಥದ ಹೆಸರು ನಾಡಿ ಎಂದು ಗ್ರಂಥಕರ್ತರು ಅಗಸ್ತ್ಯ ಮಹಾಮುನಿಗಳು ಈ ಗ್ರಂಥ ಸುಮಾರು ೨೦೦೦ ವರ್ಷಗಳ ಹಿಂದಿನದೆಂದು ಶೋಧಕರ ಅಭಿಪ್ರಾಯ ಅಗಸ್ತ್ಯಮುನಿಗಳ ಕಾಲ ಇನ್ನೂ ನಿಶ್ಚಿತವಾಗಿಲ್ಲ ಈ ಗ್ರಂಥದಲ್ಲಿ ಈ ಕಾಲದ ಗ್ರಹಸ್ಥಿತಿಗಳ ಫಲಿತಾಂಶಗಳಿವೆ. ಅವನ್ನು ಜ್ಯೋತಿಷಿ ಪಿ ಎಸ್. ದೇವಶಿಖಾಮಣಿ ನಾಯನರರವರು ಅಭ್ಯಾಸ ಮಾಡಿ ಫಲವನ್ನು ಮುಂಬಯಿಯ 'ಫ್ರಿ ಪ್ರೆಸ್ ಜರ್ನಲ್' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ

***

ಸಂಧಿ, ಸಮರ, ಡೊಂಬಿ ಇವುಗಳ ಕಾರಕ ಗ್ರಹಗಳು ಮೂರು – ಕುಜ, ಗುರು, ಶನಿ ಗ್ರಂಥದಲ್ಲಿ "ಯುದ್ಧ" ಶಬ್ದದ ಉಲ್ಲೇಖವಿಲ್ಲ "ರಾಷ್ಟ್ರಗಳ ದ್ವೇಷ" "ಮಾನವ ಪ್ರಾಣಿಗಳ ನಾಶ" ಹೀಗೆ ವಚನಗಳಿವೆ ೨೪ ವರ್ಷಗಳ ಹಿಂದೆ ತಾ ೩-೮-೧೯೧೪ನೇ ಮಹಾಯುದ್ಧ ಒದಗಿತ್ತು ಆ ಕಾಲದಲ್ಲಿ ಈ ಪ್ರಕಾರ ಗ್ರಹಸ್ಥಿತಿಯಿತ್ತು:

ಮೀನ	ಮೇಷ	ವೃಷಭ	ಮಿಥುನ
			ಬುಧ ಶನಿ
ರಾಹು	೩—೮—೧೪ನೇ ದಿನದ ಗ್ರಹಸ್ಥಿತಿ		ಸೂರ್ಯ
ಗುರು			ಕೇತು ಶುಕ್ರ
ಚಂದ್ರ			ಕುಜ
ಧನು	ವೃಶ್ಚಿಕ	ತುಲಾ	ಕನ್ಯಾ

ಶನಿಯು ಮಿಥುನದಲ್ಲಿದ್ದಾನೆ ಕುಜನು ಕನ್ಯಾರಾಶಿಯಲ್ಲಿ ಗುರುವು ಮಕರ ರಾಶಿಯಲ್ಲಿ ಚಂದ್ರನು ಗುರುವಿನಿಂದ ದ್ವಾದಶ ಸ್ಥಾನದಲ್ಲಿದ್ದಾನೆ ಗುರುವಿನಿಂದ ಷಷ್ಠ, ಅಷ್ಟಮ ದ್ವಾದಶ ಸ್ಥಾನದಲ್ಲಿ ಚಂದ್ರನಿದ್ದರೆ ಲೋಕಕ್ಕೆ ಅಶುಭ ಯೋಗ ಈಗ ಶನಿಯು ಮೀನ ರಾಶಿಯಲ್ಲಿದ್ದಾನೆ ಮಿಥುನ, ಮೀನ, ಕನ್ಯಾ ಅಥವಾ ಧನು ಈ ರಾಶಿಗಳ ಪೈಕಿ ಒಂದೇ ರಾಶಿಯಲ್ಲಿ ಮಹಾಯುದ್ಧ ಕಾಲದ ಮಿಥುನ ಶನಿ ಈಗ ಮೀನ ಶನಿ, ಶನಿ ಗ್ರಹದ ಮಟ್ಟಿಗೆ ಸಮರ ಪ್ರವರ್ತಕವಾದರೆ ಗುರುವು ವಕ್ರಗತಿಯಿಂದ ಮಕರ ರಾಶಿಗೆ, ಕುಜನು ಕನ್ಯಾ ರಾಶಿಗೆ ಪ್ರವೇಶ ಮಾಡುವ ಯೋಗ ಸದ್ಯಕ್ಕೆ ಒದಗಿಬರುತ್ತದೆ ಇದರಿಂದ ಜನಾಂಗಗಳಿಗೂ ಮಾನವಕೋಟಿಗೂ ಅಕಲ್ಯಾಣ ಸಂಭವಿಸುವ ಯೋಗವಿದೆ ಪುನಃ ಕಳೆದ ಮಹಾಯುದ್ಧದ ಗ್ರಹಸ್ಥಿತಿಯೇ ಇಂದಿಗೆ ಪ್ರಾದುರ್ಭೂತವಾಗುತ್ತದೆ ಗುರುವು ಮಕರ–ಕುಂಭ ಇವೆರಡು ರಾಶಿಗಳಲ್ಲಿ ಭ್ರಮಣ ಮಾಡುತ್ತಾನೆ ಇವೆರಡು ರಾಶಿಗಳ ಸ್ವಾಮಿ ಶನಿ ಈವಾಗ ಶನಿ-ಗುರು ವಕ್ರ ಈ ಮೂರೂ ಗ್ರಹಗಳು ವಕ್ರಗತಿಯವಾಗಿವೆ ಶನಿಯು ಮೀನ ರಾಶಿಯಲ್ಲಿ ತಾ ೨೪-೬-೩೮ನೇ ಯಿಂದ ತಾ ೧೦-೧೧-೩೮ನೇ ವರೆಗೆ, ಆ ಮೇಲೆ ವಕ್ರಗತಿಯಿಂದ ಕುಂಭ ರಾಶಿಯಲ್ಲಿ ಪ್ರವೇಶ ಮಾಡಿ ತಾ ೨೯-೧-೩೯ನೇ ವರೆಗೆ ಅಲ್ಲಿ ಉಳಿದು, ನಂತರ ಮೀನ ರಾಶಿಯಲ್ಲಿ ಪ್ರವೇಶ ಮಾಡಿ ಈಗ ಅಲ್ಲಿ ಇದ್ದಾನೆ ಗುರುವು ಮಕರ ರಾಶಿಯಲ್ಲಿ ಪ್ರವೇಶ ಮಾಡಿದ್ದು ತಾ ... ನೇಗೆ ... ನೇ ವರೆಗೆ ಅಲ್ಲಿ ಉಳಿದು ಆ ಮೇಲೆ ವಕ್ರಗತಿಯಿಂದ ಧನು ರಾಶಿಯಲ್ಲಿ ಪ್ರವೇಶ ಮಾಡಿ ತಾ ... ನೇಗೆ ಮಕರ ರಾಶಿಯಲ್ಲಿ ಸೇರಿ ಅಲ್ಲಿ ತಾ ೨೪ ... ನೇ ವರೆಗೆ ಉಳಿದು ಮುಂದೆ ಕುಂಭ ರಾಶಿಯಲ್ಲಿ ಪ್ರವೇಶಿಸಿ ತಾ ೩೧ ... ನೇಗೆ, ಅಂದರೆ ನಿನ್ನೆ ರವಿವಾರ ವಕ್ರಗತಿಯಿಂದ ಮಕರ ರಾಶಿಯಲ್ಲಿ ಪ್ರವೇಶ ಮಾಡುತ್ತಾನೆ ಮಕರ ರಾಶಿಯಲ್ಲಿ ಗುರುವಿನ ಮುಕ್ಕಾಮ ತಾ ... ನೇ ವರೆಗೆ, ಆ ಮೇಲೆ ಪುನಃ ಆತನು ಕುಂಭ ರಾಶಿಗೆ ಹೋಗುತ್ತಾನೆ ಮೀನ ರಾಶಿಯಲ್ಲಿ ಶನಿ ಇದ್ದಾಗ ಮಕರ ರಾಶಿಯನ್ನು ಗುರುವು ಬಿಟ್ಟು ವಕ್ರಗತಿಯಿಂದ ಧನು ರಾಶಿಯನ್ನು ಸೇರುವಾಗ ಚೀನ ಜಪಾನ ಯುದ್ಧ ಒದಗಿತು ಆ ಕಲಹ ತಾ. ೧೩-೭-೩೭ನೇಗೆ ಪ್ರಾರಂಭವಾಯಿತು ಆ ಕಾಲದೊಳಗಿನ ಗ್ರಹಸ್ಥಿತಿ ಈ ಪ್ರಕಾರ —

ಮೀನ	ಮೇಷ	ವೃಷಭ	ಮಿಥುನ
ಶನಿ		ಕೇತು ಶುಕ್ರ	ಸೂರ್ಯ ಬುಧ
	೧೩-೭-೩೭ನೇ ದಿನದ ಗ್ರಹಸ್ಥಿತಿ		
ಗುರು			ಚಂದ್ರ
	ರಾಹು	ಕುಜ	
ಧನು	ವೃಶ್ಚಿಕ	ತುಲಾ	ಕನ್ಯಾ

ಶನಿಯು ಮೀನದಲ್ಲಿ, ಗುರುವು ಮಕರದಲ್ಲಿ ಚಂದ್ರನು ಸಿಂಹದಲ್ಲಿ ಅಂದರೆ ಗುರುವಿನಿಂದ ಅಷ್ಟಮ ಸ್ಥಾನದಲ್ಲಿ, ಕುಜನು ತುಲಾ ರಾಶಿಯಲ್ಲಿ ಅಂದರೆ ಕುಜನಿಂದ ಗುರುವು ಚತುರ್ಥ ಸ್ಥಾನದಲ್ಲಿದ್ದರು. ಈ ಪರಿಸ್ಥಿತಿಯ ಮೂಲಕ ಚೀನ–ಜಪಾನ ದೇಶಗಳೊಳಗೆ ಯುದ್ಧವಾಯಿತು. ಅಗಸ್ತ್ಯ ಮುನಿಗಳು ತಮ್ಮ ಗ್ರಂಥದಲ್ಲಿ ಈ ಯೋಗಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಟ್ಟಿಲ್ಲ ಸ್ಥಳಿಕ ಘಟನೆಯಾದ್ದರಿಂದ ಹಿಂದುಸ್ಥಾನಕ್ಕೆ ಹೆಚ್ಚಿನ ಮಟ್ಟಿಗೆ ಈ ಯೋಗ ಅನ್ವಯಿಸುವದಿಲ್ಲಾದ್ದರಿಂದ ಅವರು ಆ ಪ್ರಕಾರ ಅಲಕ್ಷ ಮಾಡಿದ್ದಿರಬೇಕು. ಯಾಕಂದರೆ ಭರತಭೂಮಿಗೆ ಅನ್ವಯಿಸುವ ಘಟನೆಗಳಿಗಷ್ಟೇ ಗ್ರಂಥದಲ್ಲಿ ಪ್ರಾಧಾನ್ಯವಿರುವದಾಗಿ ಅವರು ಬರೆದಿದ್ದಾರೆ

***

ಮೀನ–ಶನಿ, ಮಿಥುನ–ಶನಿ, ಕನ್ಯಾ–ಶನಿ ಇಲ್ಲವೆ ಧನು ಶನಿ ಮಕರ-ಗುರುವಿನೊಡನೆ ಕೂಡಿದಾಗ ಯಾವದಾದರೊಂದು ಜನಾಂಗಕ್ಕೆ ಏನಾದರೊಂದು ಅರಿಷ್ಟ ಘಟಿಸಲೇಬೇಕೆಂದು ಅಗಸ್ತ್ಯ ಮಹಾಮುನಿಗಳ ಜ್ಯೋತಿಷ. ತಾ ೧೧—೩—೩೮ ನೇಗೆ ಚಂದ್ರನು ಗುರುವಿನಿಂದ ಷಷ್ಠ ಸ್ಥಾನದಲ್ಲಿ ಬಂದೊಡನೆ ದೊಡ್ಡ ಜನಾಂಗವು ಚಿಕ್ಕ ಜನಾಂಗವನ್ನು ನುಂಗಿ ಬಿಡುವದೆಂದು ಅಗಸ್ತ್ಯ ಮಹರ್ಷಿಗಳು ಬರೆದಿದ್ದಾರೆ. ಇಂಥ ಯೋಗ ಘಟಿಸಿದ್ದು ತಾ. ೨೯—೧—೩೮ನೇ ಯಿಂದ ತಾ ೨೪—೩—೩೮ನೇ ವರೆಗಿನ ಅವಧಿಯಲ್ಲಿ ಚಂದ್ರನು ತಾ. ೧೧—೩—೩೮ನೇ ರಾತ್ರಿ ೧೦ ಘಂಟೆಗೆ ಷಷ್ಠ ಸ್ಥಾನದಲ್ಲಿ ಬಂದೊಡನೆ ಆಸ್ಟ್ರಿಯಾ ದೇಶವು ಹಿಟ್ಲರರ ವಶವಾಯಿತು ಈವಾಗ ಚಿಕ್ಕ ರಾಷ್ಟ್ರವು (ಆಸ್ಟ್ರಿಯಾ ದೇಶವು) ಯುದ್ಧ ಮಾಡದೆ ಹಿಟ್ಲರನ ಸ್ವಾಧೀನವಾಯಿತ. ಗ್ರಂಥದಲ್ಲಿ ಚಿಕ್ಕ-ದೊಡ್ಡ ರಾಷ್ಟ್ರ ಹೀಗೆ ಉಲ್ಲೇಖವಿದೆ. ಈಗಿನ ಘಟನೆಗಳ ಮೇಲಿಂದ ಅವು ಆಸ್ಟ್ರಿಯಾ, ಜರ್ಮನಿಯೆಂದು ಇಲ್ಲಿ ನಮೂದಿಸಲ್ಪಟ್ಟಿವೆ. ಆಸ್ಟ್ರಿಯಾದವರು ಯುದ್ಧಕ್ಕಾಗಿ ಏಕೆ ಸೊಂಟ ಕಟ್ಟಲಿಲ್ಲ? ಎಂದು ಯಾರೂ ಪ್ರಶ್ನಿಸಬಹುದು. ಮಹಾಮುನಿಗಳು ಕಾರಣ ಹೇಳುತ್ತಾರೆ - ಕುಜನು ಯುದ್ಧದೊಡೆಯ, ಸೇನಾಪತಿ ಆತನಿಗೆ ಆ ಕಾಲದಲ್ಲಿ ಯುದ್ಧಾಧಿಕಾರ ಕೊಡುವ ರಾಶಿ ಅನುಕೂಲವಿರಲಿಲ್ಲ ಕುಜನು ಮೇಷ ರಾಶಿಯಲ್ಲಿದ್ದನ, ಆ ರಾಶಿ ಯುದ್ಧಕಾರಕವಲ್ಲ ಸಪ್ಟೆಂಬರ್‌ದಲ್ಲಿ ತಾ ೨೧-೫ ೩೮ನೇಗೆ ಮ್ಯುನಿಸಿಪಾಲಿಟಿಯ ಇಲೆಕ್ಶನುಗಳಾದವು ಆ ಕಾಲದಲ್ಲಿ ಝೆಕೊಸ್ಲೊವಾಕಿಯಾ–ಜರ್ಮನಿ ದೇಶಗಳೊಳಗೆ ಯುದ್ಧವಾಯಿತೆಂಬ ಕೋಲಾಹಲ ಕೂಡ ಹಬ್ಬಿತ್ತು, ಉಭಯ ಸೈನ್ಯಗಳು ಸಜ್ಜಾಗಿದ್ದವು ಆದರೆ, ಯುದ್ಧ ಒದಗಿಬರಲಿಲ್ಲ. ಯಾಕಂದರೆ ಗುರುವು ಆ ಕಾಲದಲ್ಲಿ ಮಕರ ರಾಶಿಯನ್ನು ಬಿಟ್ಟು ಕುಂಭ ರಾಶಿ ಸೇರಿದ್ದನು. ಅದರಿಂದ ಯುದ್ಧಯೋಗ ಕೂಡಿಬರಲಿಲ್ಲ, ಯುದ್ಧದ ಗಡಿಬಿಡಿಯಲ್ಲಿಯೇ ಆ ಯೋಗ ದಾಟಿತು ಆದರೆ ಅರಿಷ್ಟ ಇನ್ನೂ ಆ ಜನಾಂಗದ ಮೇಲೆ ಬರಲಿಕ್ಕಿದೆ ಯಾಕಂದರೆ ಗುರುವು ಕುಂಭ ರಾಶಿಯಲ್ಲಿಯೇ ಉಳಿಯದೊಲ್ಲನ, ವಕ್ರಗತಿಯಿಂದ ಮಕರಕ್ಕೆ ಬರುತ್ತಾನೆ, ನಿನ್ನೆ ಬಂದನು ಗ್ರಂಥದಲ್ಲಿ ಝೆಕೊಸ್ಲೊವಾಕಿಯಾದ ಉಲ್ಲೇಖ ಇರದಿರುವದು ಸಹಜ. ಆದರೆ ತಾ ೧೧-೩-೩೮ನೇ ಯೋಗದಲ್ಲಿ ನುಂಗಿದ ಜನಾಂಗದ ನೆರೆಹೊರೆಯಲ್ಲಿಯೇ ಮುಂದಿನ ಘಟನೆ ಒದಗುವದೆಂದು ಮಹಾಮುನಿಗಳು ಬರೆದಿಟ್ಟಿದ್ದಾರೆ. ಅದರ ಮೇಲಿಂದ ಅದು ಝೆಕೊಸ್ಲೊವಾಕಿಯಾ ದೇಶವೆಂದು ಗೊತ್ತುಪಡಿಸಲಾಗಿದೆ

ಬ್ರಿಟಿಶರು ಯುದ್ಧದಲ್ಲಿ ದುಮುಕುವ ತಾ. ೩೦—೧೧—೧೯೩೮ !

ತಾ. ೨೪-೯-೩೮ನೇಯಿಂದ ಗ್ರಹಗಳ ಸ್ಥಿತಿ ಬದಲುತ್ತದೆ. ಗ್ರಹಗಳು ಉಭಯ ಸೈನ್ಯದೋಪಾದಿಯಲ್ಲಿ ರಾಶಿಚಕ್ರದೊಳಗೆ ಬರುತ್ತವೆ

	ಮೀನ	ಮೇಷ	ವೃಷಭ	ಮಿಥುನ	
ಮೀನ	ಶನಿ	ಕೇತು			ಮಿಥುನ
ಕುಂಭ	ಗುರು	೨೪—೯—೩೮ನೇ ದಿನದ ಗ್ರಹಸ್ಥಿತಿ.			ಕರ್ಕಾಟಕ
ಮಕರ				ಕುಜ	ಸಿಂಹ
ಧನು			ರಾಹು ಶುಕ್ರ	ರವಿ ಬುಧ ಚಂದ್ರ	ಕನ್ಯಾ
	ಧನು	ವೃಶ್ಚಿಕ	ತುಲಾ	ಕನ್ಯಾ	

ಕುಜ, ರವಿ, ಬುಧ, ಚಂದ್ರ, ಶುಕ್ರ, ರಾಹು ಈ ಗ್ರಹಗಳು ಸಿಂಹ-ಕನ್ಯಾ-ತುಲಾ ರಾಶಿಗಳಲ್ಲಿ, ಗುರು, ಶನಿ, ಕೇತುಗಳು ಕುಂಭ-ಮೀನ-ಮೇಷ ರಾಶಿಗಳಲ್ಲಿ ಎದುರು ಬದುರಾಗಿ ನಿಂತಿವೆ. ಉಭಯ ಸೈನ್ಯದೋಪಾದಿಯಲ್ಲಿ ಗ್ರಹಗಳು ನಿಂತದ್ದೆ, ಯುದ್ಧಯೋಗ ಕೂಡಿ ಬಂತೆಂದು ಅಗಸ್ತ್ಯ ಮಹಾ ಮುನಿಗಳು ಅಭಿಪ್ರಾಯಪಡುತ್ತಾರೆ. ಮಕರ ರಾಶಿಯಿಂದ ಕುಂಭಕ್ಕೆ ಸಂಕ್ರಮಣ ಮಾಡಿದ ಶನಿಯು ವಕ್ರಗತಿಯಿಂದ ಪುನಃ ಮಕರ ರಾಶಿಯಲ್ಲಿ ಪ್ರವೇಶ ಮಾಡಿದೊಡನೆ ಯುದ್ಧಯೋಗ ಪೂರ್ಣವಾಗುತ್ತದಾಗಿ ಅಗಸ್ತ್ಯ ಮಹಾ ಮುನಿಗಳ ನಿರ್ಧಾರ-ವಚನ. ನಿನ್ನೆ ಆ ಯೋಗ ಕೂಡಿಬಂತು. ನಿನ್ನೆಯೇ ಚಂದ್ರನು ಧನು ರಾಶಿಯಲ್ಲಿ ಅಂದರೆ ಗುರುವಿನಿಂದ ದ್ವಾದಶ ಸ್ಥಾನದಲ್ಲಿ ಬಂದನು. ಇದೇ ಯುದ್ಧದ ಪ್ರಾರಂಭಯೋಗ. ನಿನ್ನಿನ ಗ್ರಹಸ್ಥಿತಿ ಹೀಗೆ —

	ಮೀನ	ಮೇಷ	ವೃಷಭ	ಮಿಥುನ	
ಮೀನ	ಶನಿ	ಕೇತು			ಮಿಥುನ
ಕುಂಭ		೨—೧೦—೩೮ನೇ ದಿನದ ಗ್ರಹಸ್ಥಿತಿ			ಕರ್ಕಾಟಕ
ಮಕರ	ಗುರು			ಕುಜ	ಸಿಂಹ
ಧನು	ಚಂದ್ರ	ಶುಕ್ರ	ರಾಹು	ಬುಧ ರವಿ	ಕನ್ಯಾ
	ಧನು	ವೃಶ್ಚಿಕ	ತುಲಾ	ಕನ್ಯಾ	

ಕುಜನು ಕನ್ಯಾರಾಶಿಯಲ್ಲಿ ಸೇರಿರುವದಿಲ್ಲ, ಆದರೆ, ಕುಜನ ಕನ್ಯಾಸಂಕ್ರಮಣ ಇನ್ನು ೧೨ ದಿವಸಗಳಲ್ಲುಂಟು, ಆತನು ಕನ್ಯಾಮುಖನೆಂದು ಹೇಳಬಹುದು. ಆದರಿಂದ ಈ ಯೋಗ ಯುದ್ಧಪ್ರಾರಂಭ ಸೂಚಕ ಮಾತ್ರ. ಈ ಯೋಗದಿಂದ ಜನಾಂಗಗಳೊಳಗೆ ಶತ್ರುತ್ವ ಹುಟ್ಟುವದು, ದೊಡ್ಡ ರಾಷ್ಟ್ರವು ಚಿಕ್ಕ ಜನಾಂಗವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸುವದು. ಯುದ್ಧಪ್ರಾರಂಭ ಕಾರಣನಾದ ಪ್ರಭುವು ಅಧಿಕಾರ ಹೊಂದುವನು, ದೊಡ್ಡ ದೊಡ್ಡ ರಾಷ್ಟ್ರಗಳು ವಿಚಾರಮಗ್ನವಾಗುವವು, ಹೇರಳ ಮನುಷ್ಯ-ಹಾನಿಯಾಗುವದು, ಹೀಗೆ ಅಗಸ್ತ್ಯ ಮಹಾಮುನಿಗಳ ಅಭಿಪ್ರಾಯ. ಮಕರ-ಗುರು, ಮೀನ ಶನಿ ಯೋಗ ಪ್ರಾರಂಭವಾಗುವ ೧|| ವರ್ಷ ಪೂರ್ವದಿಂದ ಲೋಕದೊಳಗೆ ತರತರದ ಅನರ್ಥ ಒದಗುತ್ತಿರಬೇಕೆಂದು ಅಗಸ್ತ್ಯ ಮಹಾಮುನಿಗಳು ನಾಡಿ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಈ ಯೋಗ ಪ್ರಾರಂಭವಾದದ್ದು ತಾ. ೨೯-೧-೩೮ನೇಗೆ, ಶನಿಯು ಮೀನದಲ್ಲಿ ಮೊಟ್ಟಮೊದಲು ಸಂಕ್ರಮಣ ಮಾಡಿದಾಗ. ಅದಕ್ಕೂ ಪೂರ್ವದಲ್ಲಿ ಗುರುವು ಮಕರ ರಾಶಿಯಲ್ಲಿ ಸಂಕ್ರಮಣ ಮಾಡಿರುತ್ತಿದ್ದನು. ತಾ. ೨೯-೧-೩೮ರಿಂದ ೧೮ ತಿಂಗಳು ಹಿಂದೆ ಎಣಿಸಿದರೆ, ಸರಾಸರಿ ೧೯೩೬ನೇ ಇಸ್ವಿ ಜುಲೈ ತಿಂಗಳು ಬರುತ್ತದೆ. ಅದೇ ಸಮಯ ಸ್ಪೇನದೊಳಗಿನ ಯಾದವಿಗೆ ಪ್ರಾರಂಭವಾಗಿತ್ತು. ಸ್ಪೇನದೊಳಗಿನ ಯಾದವಿಯ ಕಾಲಕಾಲದ ಅವಸ್ಥಾಂತರಗಳನ್ನು ನಾನು ಈ ಹಿಂದೆ ವರ್ಣಿಸಿದ್ದೇನೆ. ಚೀನ ಜಪಾನ ಕಲಹವು ಈ ೧೮ ತಿಂಗಳುಗಳ ಅವಧಿಯಲ್ಲಿಯೇ ಒದಗಿಬಂತು. ಇದರಮೇಲಿಂದ ಮಹಾಮುನಿಗಳು ೨೦೦೦ ವರ್ಷಗಳ ಹಿಂದೆ ಬರೆದಿಟ್ಟ ಭವಿಷ್ಯ ನಿಜವಾಗುವದೆಂದು ಭಾವನೆಯುಂಟಾಗುತ್ತದೆ. ಹಿಟ್ಲರ ಮಹಾಪ್ರಭು (Dictator)ವು ಝೆಕೊಸ್ಲೋವಾಕಿಯಾ ಜನಾಂಗಕ್ಕೆ ತನ್ನ ಹೇಳಿಕೆಯನ್ನು ಮನ್ನಿಸಿ ಶರಣಾಗತವಾಗಲು ಮೊನ್ನೆ ೧ನೇ ತಾರೀಖಿನ ತನಕ ಅವಕಾಶ ಕೊಟ್ಟಿದ್ದಾನೆ. ಹಿಟ್ಲರನ ಅವಧಿ ಮುಗಿಯುವದಕ್ಕೂ ಈ ಯೋಗ ಕೂಡಿ ಬರಲಿಕ್ಕೂ ಗಂಟುಬೀಳುತ್ತದೆ. ಇದರ ಮೇಲಿಂದಲೂ ಈವಾಗ ಮಹಾಯುದ್ಧ ಅಪರಿಹಾರ್ಯವೆಂದು ತಾನೇ ಸಿದ್ಧವಾಗುತ್ತದೆ.

***

ಈ ಯೋಗ ಪ್ರಬಲವಾಗುವದು, ಸಂಪೂರ್ಣವಾಗಿ ಯುದ್ಧಸ್ವಾಮಿಯಾದ ಕುಜನ ಅಧೀನವಿದೆ. ಆತನು ಯುದ್ಧ ಸೇನಾಪತಿ, ಕನ್ಯಾ ರಾಶಿಯಲ್ಲಿ ಆತನ ಪ್ರವೇಶವಾದನಂತರ ಆತನಿಗೆ ಸೇನಾಪತಿಯ ಅಧಿಕಾರ ದೊರೆಯುವದಿಲ್ಲ. ಆತನ ಕನ್ಯಾ ಸಂಕ್ರಮಣ ಆಶ್ವೀನ ಕೃಷ್ಣ ೫ಮಿ ಶುಕ್ರವಾರ ತಾ. ೧೪—೧೦—೩೮ನೇಗೆ. ಆ ಕಾಲದಲ್ಲಿ ಮಕರ-ಗುರು, ಮೀನ-ಶನಿ, ಮಿಥುನ ಚಂದ್ರ, ಹೀಗೆ ಯೋಗ ಕೂಡಿಬರುತ್ತದೆ. ಮಕರ-ಗುರುವಿನಿಂದ ಮಿಥುನ-ಚಂದ್ರನು ಷಷ್ಠ ಸ್ಥಾನದಲ್ಲಿರುತ್ತಾನೆ. ಹೀಗೆ ಮಿಥುನ-ಚಂದ್ರ, ಕನ್ಯಾ-ಕುಜ, ಮಕರ ಗುರು, ಮೀನ ಶನಿ ಯೋಗ ಕೂಡಿಬರುವದು ಮೂರೇ ದಿನ. ಆಶ್ವೀನ ವ|| ೫ಮಿ ಶುಕ್ರವಾರದಿಂದ ೭ಮಿ ರವಿವಾರ ವರೆಗೆ ೩ ದಿನ ಮಾತ್ರ, ಅಕ್ಟೋಬರ ತಾ. ೧೪ನೇಯಿಂದ ೧೬ನೇ ವರೆಗೆ. ೭ಮಿ ರವಿವಾರ ರಾತ್ರಿ ಚಂದ್ರನು ಕರ್ಕ ರಾಶಿಗೆ ಸಂಕ್ರಮಣ ಮಾಡುತ್ತಾನೆ. ಈ ೩ ದಿನಗಳ ಅವಧಿಯೊಳಗಿನ ಗ್ರಹಸ್ಥಿತಿ ಹೀಗ

	ಮೀನ	ಮೇಷ	ವೃಷಭ	ಮಿಥುನ	
ಮೀನ	ಶನಿ	ಕೇತು		ಚಂದ್ರ	ಮಿಥುನ
ಕುಂಭ		೧೪ ೧೬ ೧೦ ೩೮ ನೇ ದಿನದ ಗ್ರಹಸ್ಥಿತಿ			ಕರ್ಕಾಟಕ
ಮಕರ	ಗುರು				ಸಿಂಹ
ಧನು		ಶುಕ್ರ	ರಾಹು	ರವಿ ಬುಧ ಕುಜ	ಕನ್ಯಾ
	ಧನು	ವೃಶ್ಚಿಕ	ತುಲಾ	ಕನ್ಯಾ	

ಕಳೆದ ಮಹಾಯುದ್ಧದ ಕಾಲದಲ್ಲಿ ಅಂದರೆ ತಾ. ೬-೮-೧೯೧೪ನೇಗೆ ಇದ್ದ ಯೋಗವೇ ತಾ. ೧೪/೧೬-೧೦ ೩೮ನೇಗೆ ಕೂಡಿಬರುತ್ತದೆ. ಗುರು, ಕುಜ ಗ್ರಹಗಳು ಮಕರ-ಕನ್ಯಾ ರಾಶಿಗಳಲ್ಲಿವೆ. ಮಿಥುನ-ಶನಿಯ ಬದಲಿಗೆ ಈಗ ಮೀನ ಶನಿ, ಇವೆರಡರ ಫಲ ಒಂದೇ! ಚಂದ್ರನು ಆಗ ಗುರುವಿನಿಂದ ದ್ವಾದಶ ಸ್ಥಾನದಲ್ಲಿದ್ದನು, ಈಗ ಷಷ್ಠಸ್ಥಾನದಲ್ಲಿದ್ದಾನೆ. ಗುರುವಿನಿಂದ ಚಂದ್ರನು ದ್ವಾದಶ, ಅಷ್ಟಮ, ಷಷ್ಠ ಈ ಯಾವದೇ ಸ್ಥಾನಗಳಲ್ಲಿದ್ದರೂ ಫಲವೊಂದೇ. ಈ ದೃಷ್ಟಿಯಿಂದ ಇವೆರಡೂ ಗ್ರಹಸ್ಥಿತಿಗಳನ್ನು ಪರಾಂಬರಿಸಿದರೆ ಮಹಾಯುದ್ಧಕಾಲದ ಗ್ರಹಸ್ಥಿತಿಗೂ, ಆಶ್ವೀನ ವ|| ೫ ಮಿಯಿಂದ ೮ ಮಿ (೭ ಮಿ ಕ್ಷಯವಾಗಿದೆ) ವರೆಗಿನ ೩ ದಿನಗಳ ಗ್ರಹಸ್ಥಿತಿಗೂ ಕೂಡಿಬರುತ್ತದೆ. ಈ ಮುಹೂರ್ತ ಜನಾಂಗಗಳೊಳಗೆ ಶತ್ರುತ್ವ ದೃಢವಾಗುವ ಯೋಗ, ಕುಜನು ಸೇನಾಪತಿಯಾದ್ದರಿಂದಲೂ, ಕನ್ಯಾ ರಾಶಿಯಲ್ಲಿ ಸಂಕ್ರಮಣ ಮಾಡುವ ಪೂರ್ವದಲ್ಲಿ ಸಿಂಹ ರಾಶಿಯಲ್ಲಿದ್ದು ಮೀನ ಶನಿಗೆ ನೋಡುತ್ತಿದ್ದದರಿಂದಲೂ ಚಿಕ್ಕ ರಾಷ್ಟ್ರವು ಯುದ್ಧ ಮಾಡದೆ ಕೈಕಟ್ಟಿಕೊಂಡು ಶರಣಾಗತವಾಗುವ ಲಕ್ಷಣಗಳಿಲ್ಲ, ಯುದ್ಧಕ್ಕೇ ಸಜ್ಜಾಗಿ ನಿಲ್ಲುವ ಯೋಗವಿದು. ಕನ್ಯಾ-ಕುಜನು ಮಕರ-ಗುರುವಿಗೆ ನೋಡುತ್ತಿದ್ದದರಿಂದ ಆಶ್ವೀನ ವ|| ೫ಮಿಯಿಂದ ೮ಮಿ ವರೆಗಿನ ಅವಧಿಯಲ್ಲಿ ಚಿಕ್ಕ ರಾಷ್ಟ್ರಗಳ ಪಕ್ಷ ಹಿಡಿದು ಬಲಾಢ್ಯ ಜನಾಂಗವು ಯುದ್ಧದಲ್ಲಿ ಸೇರಬೇಕು. ಶನಿಯ ಮಕರಸಂಕ್ರಮಣ ಕಾಲದಲ್ಲಿ ಅಂದರೆ ನಿನ್ನೆ ಚಿಕ್ಕ ರಾಷ್ಟ್ರಕ್ಕೂ ದೊಡ್ಡ ರಾಷ್ಟ್ರಕ್ಕೂ ಯುದ್ಧ ಪ್ರಾರಂಭವಾಗುವದು. ಮತ್ತು ಕುಜನ ಕನ್ಯಾ ಸಂಕ್ರಮಣ ಕಾಲದಲ್ಲಿ ಚಿಕ್ಕ ರಾಷ್ಟ್ರದ ಪಕ್ಷಪಾತಿಯಾಗಿ ದೊಡ್ಡ ದೊಡ್ಡ ರಾಷ್ಟ್ರಗಳು ಯುದ್ಧದಲ್ಲಿ ಪ್ರವೇಶಿಸುವವು. ಮಹಾಮುನಿಗಳು ಮಿತಿ-ತಾರೀಖುಗಳನ್ನು ನಮೂದಿಸಲಿಲ್ಲ, ಯೋಗಗಳನ್ನು ಉಲ್ಲೇಖಿಸಿ, ಅವುಗಳ ಫಲವನ್ನು ಮಾತ್ರ ಬರೆದಿಟ್ಟಿದ್ದಾರೆ

***

ಮಾರ್ಗಶೀರ್ಷ ಶು|| ೮ಮಿ ಬುಧವಾರ ಕುಜನು ತುಲಾ ರಾಶಿಗೆ ಸಂಕ್ರಮಣ ಮಾಡುತ್ತಾನೆ. ಅದೇ ೨ ದಿನ ಮುಂಚೆ ಶುಕ್ರನು ವಕ್ರಗತಿಯಿಂದ ವೃಶ್ಚಿಕದಿಂದ ತುಲಾ ರಾಶಿ ಪ್ರವೇಶ ಮಾಡುತ್ತಾನೆ. ಈ ಬಹುಧಾನ್ಯ ಸಂವತ್ಸರದಲ್ಲಿ ಶುಕ್ರನು ಅರಸನು, ಕುಜನು ಸೇನಾಧಿಪತಿಯು, ಅರಸನೂ ಸೇನಾಧಿಪತಿಯೂ ಒಂದೆಡೆ ಕೂಡುತ್ತಾರೆ. ರಾಜನೂ ಸೇನಾಧಿಪತಿಯೂ ಒಂದೆಡೆ ಕೂಡಿದಾಗ ರಾಜನು ಸೇನಾಧಿಪನ ಅಧೀನನಾಗುತ್ತಾನೆ. ಈ ಯೋಗ ೨೦೦೦ ವರ್ಷಗಳೊಳಗೊಮ್ಮೆ ಸಹ ಒದಗಿ ಬರುವದು ದುರ್ಘಟವೆಂದು ಅಗಸ್ತ್ಯ ಮಹಾಮುನಿಗಳು ಅಭಿಪ್ರಾಯಪಡುತ್ತಾರೆ. ಈವಾಗ ಲೋಕದಲ್ಲಿ ಪ್ರಕ್ಷೋಭೆಯುಂಟಾಗಬೇಕೆಂದು ಮಹಾಮುನಿಗಳ ವಚನ. ಆ ದಿನದ ಅಂದರೆ ತಾ. ೩೦-೧೧-೩೮ನೇ ಗ್ರಹಸ್ಥಿತಿಯನ್ನು ಪರಾಂಬರಿಸಬೇಕು. ಸೇನಾಪತಿ ಕುಜನು ತುಲಾ ಸಂಕ್ರಮಣ ಮಾಡಿ ಅರಸನಾದ ಶುಕ್ರನೊಡನೆ ಕೂಡಿದ ಯೋಗದಲ್ಲಿ ಅರಸರ ಆಧಿಪತ್ಯದಲ್ಲಿರುವ ದೊಡ್ಡ ಜನಾಂಗವು ಯುದ್ಧದಲ್ಲಿ ಸೇರುವದೆಂದು ಅಗಸ್ತ್ಯ ಮಹಾಮುನಿಗಳು ಬರೆದಿಟ್ಟಿದ್ದಾರೆ. ಯುದ್ಧದಲ್ಲಿ ಸೇರಬಾರದೆಂದು ಈ ಜನಾಂಗವು ಈ ವರೆಗೆ ಅಲಿಪ್ತವಾಗಿತ್ತಂತೆ

(೧೧ನೇ ಪಾನದ ಮೇಲೆ ಮುಂದುವರಿಸಿದೆ)

ಭಟಕಳ ಪೇಟೆಯಲ್ಲಿ ದೈವೀ ಪ್ರಕೋಪ!

ದಿನ ಬೆಳಗಾಗುವಷ್ಟರಲ್ಲಿ ಸರ್ವನಾಶ!!

ನಡುರಾತ್ರಿಯಲ್ಲಿ ಅಕಲ್ಪಿತ ಮಳೆ! ನೂರಾರು ಮನೆಗಳು ಕುಸಿದು ಬಿದ್ದವು! ನೂರಾರು ದನ-ಕರುಗಳು ತೇಲಿ ಸತ್ತವು! ಎಷ್ಟೋ ಜನರು ಮುಳುಗಿ ಇಲ್ಲವೆ ಹೂತುಬಿದ್ದು ಸತ್ತರು! ೧॥ ಸಾವಿರ ಜನರು ನಿರಾಶ್ರಿತರಾದರು! ಒಂದು ಲಕ್ಷ ರೂಪಾಯಿಗಿಂತ ಹೆಚ್ಚಿನ ಹಾನಿಯಾಗಿದೆ! ಎಲ್ಲೆಲ್ಲೂ ಕರುಣಾಜನಕ ನೋಟಗಳು!

[ಸ್ವಂತ ಪ್ರತಿನಿಧಿಗಳಿಂದ]

ಭಟಕಳ, ತಾ. ೧—೧೦—೩೮

ಕಳೆದ ಬುಧವಾರ ರಾತ್ರೆ ಮೂಡಭಟಕಳ, ಮುಟ್ಟಳ್ಳಿ, ಪೂರ್ವ ವರ್ಗ ಮುಂಡಳ್ಳಿ, ಭಂಡಾರಿಹಿತ್ಲು, ಸವಾಯತಕೇರಿ ದರಾಬ ಗೋರಿಕಲ್ ಮುಂತಾದ ಗ್ರಾಮಗಳಲ್ಲಿ ಅಕಲ್ಪಿತ ಮತ್ತು ವಿಪರೀತ ಮಳೆಯಾದ್ದರಿಂದ ಒದಗಿದ ಅನರ್ಥವನ್ನು ಬಣ್ಣಿಸಲಸದಳ. ಬುಧವಾರ ಸಂಜೆಯಿಂದ ಮಳೆಯು ಜೋರು ಸುರಿಯುತ್ತಿತ್ತು, ಆದರೂ ರಾತ್ರೆ ೧೦ ಘಂಟೆಯ ತನಕ ಭೀಕರ ಸಂಕಟದ ಕಲ್ಪನೆ ಯಾರಿಗೂ ಇದ್ದಿಲ್ಲ. ಎಲ್ಲರೂ ಎಂದಿನಂತೆ ಊಟ ಮುಗಿಸಿ ಸ್ವಸ್ಥವಾಗಿ ಮಲಗಿದ್ದರು. ನಡುರಾತ್ರೆಯ ಸಮಯ ಮಳೆಗೆ ಕಳೆಯೇರಿತು! ಮೇಘರಾಜನು ಪ್ರಕ್ಷುಬ್ಧನಾಗಿ ಘೋರ್ಗರೆದು ಮಳೆಗರೆಯಹತ್ತಿದನು! ಇಂಥ ಮಳೆ ಇತ್ತಲಾಗಿ ಒಂದೆಂದೂ ಆಗಿಲ್ಲವೆಂದು ಹಿರಿಯರು ಹೇಳುತ್ತಾರೆ! ೩-೪ ತಾಸು ಮಳೆ ಬಿದ್ದಿರಬಹುದು. ಆದರೆ ಅಷ್ಟರಲ್ಲೇ ಜಲಪ್ರಳಯವಾಯಿತು! ಎಲ್ಲಿ ನೋಡಿದಲ್ಲಿ ನೀರು! ರಸ್ತೆಗಳಲ್ಲಿಯೂ ನೀರು! ಹೊಲ ಹಿತ್ತಲುಗಳಲ್ಲಿ ನೀರು! ಮನೆಗಳಲ್ಲೂ ನೀರು ಬರಹತ್ತಿತು! ಶರಾಬಿ ಹೊಳೆಗೆ ನೀರು ಏರಹತ್ತಿತು. ೨-೩॥ ಆಳು ನೀರು ಏರಿತು. ಇನ್ನೂ ಏರುತ್ತಿತ್ತು. ಆದರೆ ಅಷ್ಟರಲ್ಲಿ ಗೋರಿಕಲ್ ಹೊಳೆಗೆ (ಮೂಡಭಟಕಳ [illegible] ವರ್ಗ ಬದಿಗೆ ಹರಿಯುವ ಹಾಗೂ ಶರಾವತೀ ನದಿಗೆ [illegible] ಕೂಡುವ ಹಳ್ಳ) [illegible] ಕಲ್ಲು [illegible] ಒಮ್ಮೆಲೇ ಮುರಿದುಹೋಯಿತು. ಆಗ ಮಹಾಪೂರ ವಿಸ್ತಾರವಾಯಿತು. ದೈವೀಕೃಪೆಯಿಂದಲೇ ಅದು ಹಟಿಸಿಲ್ಲ! ಇಲ್ಲ [illegible] ಮಾರ್ಗವಿಲ್ಲದೆ ಇನ್ನೂ ಏನೇನು ಅನರ್ಥಗಳಾಗುತ್ತಿದ್ದವೋ ಏನೋ! ಅಂತು ರಾತ್ರೆ ೩-೩॥ ಘಂಟೆಗೆ ಮಳೆಯ ನೀರು ಇಳಿಯಲಾರಂಭಿಸಿತು. ಒಂದೆರಡು ತಾಸಿನಲ್ಲಿ [illegible] ಇಳಿದುಹೋಯಿತು. ಆಗ ನೋಡುವದೇನು! [illegible] ನೋಡಿದಲ್ಲಿ ಕಡಕೊಂಡು ಬಿದ್ದ ಮನೆಗಳು! ಹಾಳಾಗಿಹೋದ ಕೊಟ್ಟಿಗೆಗಳು! ತೇಲಿ ಹೋದ ದನಕರುಗಳು! ಸತ್ತು ಬಿದ್ದ ದನಕರುಗಳು! ಮುಳುಗಿ ಸತ್ತುಹೋದ ಜನರ ಹೆಣಗಳು! ನಾಲ್ಕೂ ಬದಿಗೆ ಮನೆಮಾರು, ವಸ್ತ್ರ, ಪಾತ್ರೆ, ಆಸ್ತಿಪಾಸ್ತಿ ಮುಂತಾದ್ದೆಲ್ಲ ಕಳಕೊಂಡು, ಚಳಿ ಮಳೆಯಲ್ಲಿ ನಡುಗುತ್ತಿದ್ದ ಸಾವಿರಾರು ನಿರಾಶ್ರಿತ ಸ್ತ್ರೀ ಪುರುಷರೂ ಮಕ್ಕಳೂ ಕಣ್ಣಿಗೆ ಬೀಳುತ್ತಿದ್ದರು. ಆ ಕರುಣಾಜನಕ ನೋಟ ನೋಡಿ «ಬಂಡೆಗಳೂ ಅಳುತ್ತಿದ್ದವು, ವಜ್ರದ ಹೃದಯವೂ ಒಡೆಯುತ್ತಿತ್ತು!»

ಒಂದೆರಡು ಕಡೆ ನಡೆದ ಘಟನೆಗಳ ವಿವರಗಳನ್ನು ನಮೂದಿಸದೆ ಇರಲಾರೆ. ಮೂಡಭಟಕಳದೊಳಗಿನ ಒಬ್ಬ ಒಕ್ಕಲಿಗನು ನಡುರಾತ್ರೆ ಎಚ್ಚತ್ತನು. ನೆರೆನೀರು ಏರುತ್ತಿದ್ದುದನ್ನು ಅವನು ಕಂಡನು. ಕೂಡಲೆ ಹೆಂಡರು ಮಕ್ಕಳನ್ನೆ ಎಬ್ಬಿಸಿದನು. ನೀರು ಇನ್ನೂ ಏರುತ್ತಿದೆ! ಕುತ್ತಿಗೆ ತನಕ ನೀರು ಏರಿತು! ಮಕ್ಕಳನ್ನೂ ಹೆಂಡತಿಯನ್ನೂ ಕಟ್ಟಿಕೊಂಡು, ಉಸಿರಾಡಲು ಬಾಯಿಯನ್ನಷ್ಟು ನೀರಿನ ಮೇಲಿಡಲು ಹೇಗೆ ಗಟ್ಟಿಯಾಗಿ ನಿಂತನು. ನೀರು ಮತ್ತೂ ಏರುತ್ತಿದೆ! ಮುಂದೇನು ಮಾಡುವದೆಂದು ತೋಚದೆ ಒಕ್ಕಲಿಗನು ದಿಙ್ಮೂಢನಾದನು! ಅಷ್ಟರಲ್ಲಿ ಆತನಿಗೆ ಮನೆಯಲ್ಲಿದ್ದ ಮಂಚದ ನೆನಪಾಯಿತು. ಹೆಂಡತಿ-ಮಕ್ಕಳಿಗೆ ಕಟ್ಟಿಕೊಂಡು ಮಂಚವಿದ್ದಲ್ಲಿ ಓಡಿಹೋದನು. ಗಾಬರಿಯಲ್ಲಿ ಹೆಂಡತಿಯ ಕೈ ತಪ್ಪಿಹೋಯಿತು! ಆ ದುರ್ದೈವಿಯು ನೀರಲ್ಲಿ ಮುಳುಗಿ ಸತ್ತುಹೋದಳು. ಮರುದಿನ ಅವಳ ಶವ ಅಲ್ಲೇ ಬಿದ್ದದ್ದು ಕಂಡುಬಂತು!

ಮುಂಡಕನಗುಂಡಿಯಲ್ಲಿ ಒದಗಿದ ಅನರ್ಥದ ಕತೆ ಕೇಳಿದವರಂತೂ ಕರಳು ಕರಗುತ್ತಿದೆ! ಗುಡ್ಡದಡಿಯಲ್ಲಿ ಒಂದೇ ಮನೆಯಿತ್ತು. ಮನೆಯಲ್ಲಿ ನವರಾತ್ರಿಯ ಉತ್ಸವ ನಡೆದಿತ್ತು. ಭಟ್ಟರೂ ಮನೆಯ ಜನರೂ ಉತ್ಸಾಹದಿಂದ ಉತ್ಸವ ಮಾಡುತ್ತಿದ್ದರು. ಅಷ್ಟರಲ್ಲಿ ಅಕಸ್ಮಾತ್ತಾಗಿ ಮಳೆಯ ರಭಸಕ್ಕೆ ಗುಡ್ಡವೇ ಕಡಕೊಂಡು ಬಿದ್ದು, ಆ ಮನೆಯೂ ಮನೆಯೊಳಗಿನ ಜನರೂ ಗುಡ್ಡದಡಿ ಹೂತು ಬಿದ್ದರು! ಮನೆಯಲ್ಲಿ ಎಷ್ಟು ಜನರಿದ್ದರು, ಎಷ್ಟು ಜನರು ಸತ್ತರು ಎಂಬುದು ತಿಳಿಯಲು ಮಾರ್ಗವಿಲ್ಲ. ಮಣ್ಣು ಅಗಿದು ತೆಗೆದು ಪೂರ್ಣ ಪತ್ತೆ ಹಚ್ಚಲಿಕ್ಕೆ ಇನ್ನೂ ೩-೪ ದಿನಗಳು ಬೇಕಾದೀತು. ಈ ವರೆಗೆ ನಾಲ್ಕು ಹೆಣಗಳು ಸಿಕ್ಕಿವೆ!

ಆ ಕಾಳರಾತ್ರಿಯಲ್ಲಿ ಸಂಭವಿಸಿದ ಜನರ ಗೋಳಾಟ ಕಲ್ಪನೆಯಿಂದಲೇ ತಿಳಿಯಬೇಕಲ್ಲದೆ ಬಾಯಿಯಿಂದ ಹೇಳಲು ಯಾರಿಗೂ ಸಾಧ್ಯವಾಗದು. ಜೀವದಾಸೆಗೆ ಓಡಾಡುವ ಹೆಂಗಸರು-ಮಕ್ಕಳ ಆರ್ತಧ್ವನಿಯನ್ನೂ, ದನ-ಕರುಗಳ ಕೂಗಾಟವನ್ನೂ, ಕಗ್ಗತ್ತಲೆಯಲ್ಲಿ ಸ್ವತಃ ಅಸಹಾಯರಾಗಿ ತರಂಗಿಸ್ವಂತ ಹೆಂಡರು ಮಕ್ಕಳಿಗೆ ಸಹಾಯ ಮಾಡಲಾಗದ ದೀನ ಗಂಡಸರ ಕರುಣ ವಿಲಾಪಗಳನ್ನೂ ಬಣ್ಣಿಸಲು ಎಂದಾದರೂ ಸಾಧ್ಯವೇ? ಈ ಸಂಕಟಗ್ರಸ್ತ ಜನರ ಗೋಳು ಹೊಳೆಯಾಚೆಗೆ ಇರುವ ಜನರಿಗೆ ಕಾಣದಲೇ ತಿಳಿಯಿತು. ಆದರೆ ಉಕ್ಕಿ ಹರಿಯುವ ಹೊಳೆಯಲ್ಲಿ ಸಾಗುವವರಾರು? ಯಾರಿಗೆ ಧೈರ್ಯ ಬರಬೇಕು? ಇಂತಹ ಮಹಾ ಸಂಕಟದಲ್ಲೂ ಕೆಲವು ಸಾಹಸಿಗ ಸ್ವಯಂಸೇವಕರು ನೆರೆ ನೀರಲ್ಲಿ ಧುಮುಕಿ

[ಪುರವಣಿ ನೋಡಿರಿ.]

ಜಾಹೀರ ನೋಟೀಸು.

ಅಪ್ರಾಯಸ್ತ ಪುರುಷೋತ್ತಮ ಮಂಜನಾಥ ಶಾನಭಾಗ ಬಾಳೇರಿ ಕೋಡಕಣಿ ರಕ್ಷಕ ಅನಂತ ಮತ್ತು ಶಾನಭಾಗ ಸಾ| ಹೊನ್ನಾವರ ಇವರು ಈ ಮೂಲಕ ಜಾಹೀರಪಡಿಸುವದೇನಂದರೆ.— ಅಪ್ರಾಯಸ್ತನು ವಿದ್ಯಾರ್ಥಿಯಾಗಿ ನನ್ನಲ್ಲಿ ಉಳಿದಿರುತ್ತಾನೆ. ಆತನಿಗೆ ಅವಿಭಕ್ತ ಕುಟುಂಬದ ಮೆನೇಜರರಾದ ಚಿಗಪ್ಪ ಭಕ್ತಾ ಪುರುಷೋತ್ತಮ ಶಾನಭಾಗ ಬಾಳೇರಿ ಇವರು ಸರಿಯಾಗಿ ನಡಿಸಿಕೊಳ್ಳುವದಿಲ್ಲ. ಆತನಿಗೆ ವಂಚಿಸುವದಕ್ಕಾಗಿ ಸದ್ರಿಯವರು ಅಲ್ಪರ ದುರ್ಬೋಧನೆಗೆ ಬಲಿಬಿದ್ದು ಕುಟುಂಬದ ಆಸ್ತಿಯನ್ನು ಪರರ ಸ್ವಾಧೀನ ಮಾಡುವ ತಯಾರಿಯಲ್ಲಿದ್ದಾರೆಂದು ತಿಳಿದು ಬರುತ್ತದೆ. ಕುಟುಂಬದ ಆಸ್ತಿ ಪರಾಧೀನ ಮಾಡುವಂಥ ಯಾವದೇ ಪ್ರಸಂಗವಿಲ್ಲ. ಕಾರಣ ಅಂದ ಪರಾಧೀನತೆಗಳು ಅಪ್ರಾಯಸ್ತನಿಗೆ ಬಾಧಿಸಲಾರವು. ಮುಂಜಾಗ್ರತೆ ಬಗ್ಗೆ ಈ ನೋಟೀಸು ಕೊಟ್ಟಿದೆ.

ಹೊನ್ನಾವರ, ತಾ. ೨೭—೯—೧೯೩೮

A. M. Shanbhag.

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಪಿ. ಎನ್ ಶ್ರೀನಿವಾಸರಾವ್, ಲಿವ್ಹರ್ ಸ್ಪೆಶಲಿಸ್ಟ,
ಎಂ ಪಿ ಪ್ರಾಸಾದಿಕ ಔಷಧಾಲಯ
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ
ಸುಬ್ರಾಯ ಸೀತಾರಾಮ ಹೆಗ್ಡೆ, ರಿತಿ ನಾರಾಯಣ ಶರ್ಮಾ ಗಡ್ಡೆಮನೆ,
ಲೋಕಮಾನ್ಯ ತಿಲಕ ವಾಚನ ಮಂದಿರ,
ಅಂಕೋಲಾ

ಭಟಕಳ ಪೇಠೆಯಲ್ಲಿ ದೈವೀ ಪ್ರಕೋಪ!

(೪ನೇ ಪಾನದಿಂದ ಮುಂದುವರಿದದ್ದು)

ತೇಲಿ ಹೋಗುವ ಜನರಿಗೆ ಬದುಕಿದ್ದಾರೆಂದು ಸಮಾಧಿ ಸಲು ಅತ್ಯಾನಂದವಾಗುತ್ತದೆ

ಬೆಳಗಾಗುತ್ತಲೇ ರಾತ್ರೆ ಆದ ಅನರ್ಥದ ಕಲ್ಪನೆ ಬರ ಹತ್ತಿತು. ಹಲವರು ನಗ್ನಾವಸ್ಥೆಯಲ್ಲಿ ನಡುಗುತ್ತಿದ್ದರು! ಹೆಂಗಸೆಯರಿಗೆ ನಾಚಿಕೆ ಕಾಯ್ದುಕೊಳ್ಳಲು ಉಟ್ಟ ಒದ್ದೆ ಸೀರೆಯ ವಿನಹ ಇನ್ನಾವ ಸಾಧನೆಯೂ ಇದಿಲ್ಲ! ಮನೆ-ಮಾರು, ಕಾಳುಕಡಿ, ವಸ್ತ್ರ-ಪಾತ್ರೆ, ಪೆಟ್ಟಿಗೆ, ಸರ್ವಸ್ವವನ್ನು ಕಳಕೊಂಡ ಸಾವಿರಾರು ಜನರು “ಮುಂದೇನು ಗತಿ?” ಎಂದು ನಿರಾಶರಾಗಿ,ದುರ್ದೈವಿಗಳಾಗಿ ಅಲ್ಲಲ್ಲಿ ಅಲೆದಾಡುವದು ಕಂಡುಬರುತ್ತಿತ್ತು! ಒಂದೇ ರಾತ್ರಿಯಲ್ಲಿ — ೩-೪ ತಾಸುಗಳಲ್ಲಿ — ಅವರ ಸಂಸಾರವೆಲ್ಲ ಈ ಪರಿ ಹಾಳಾದದ್ದು ಕಂಡು ಯಾವ ಕಣ್ಣುಗಳಾದರೂ ನೀರು ಬಾರದೆ ಉಳಿದೀತೇ?

ಆದರೆ ಕಣ್ಣೀರು ಸುರಿಸಲಿಕ್ಕಾಗಲಿ ಶೋಕಿಸುತ್ತ ಕೂಡ್ರಲಿಕ್ಕಾಗಲಿ ಸಮಯವಿದ್ದಿಲ್ಲ ನಿರಾಶ್ರಿತರಿಗೆ ಆಶ್ರಯ ಮಾಡಿಕೊಡುವದು, ಇದ್ದಬಿದ್ದ ಆಸ್ತಿಯ ರಕ್ಷಣೆ ಮಾಡುವದು, ನೀರೊಳಗೆ ಇನ್ನೂ ಬದುಕಿದ್ದ ಜನರಿಗೆ ಸುರಕ್ಷಿತ ಸ್ಥಳಕ್ಕೆ ಮುಟ್ಟಿಸುವದು, ಸಿಕ್ಕಷ್ಟು ಶವಗಳನ್ನು ಕೂಡಿಸಿ ಅವುಗಳ ಅಂತ್ಯ ಸಂಸ್ಕಾರದ ವ್ಯವಸ್ಥೆ ಮಾಡುವದು, ಹುಗಿದು ಬಿದ್ದ ಪಶುಗಳನ್ನು ಹೊರಕ್ಕೆ ತೆಗೆಯುವದು ಇವೇ ಮೊದಲಾದ ಕರ್ತವ್ಯಗಳಿದ್ದವು ಇಲ್ಲಿಯ ನಾಗರಿಕರನೇಕರು ಒಟ್ಟಾಗಿ ಈ ಕಾರ್ಯಕ್ಕೆ ತೊಡಗಿದರು ನಿರಾಶ್ರಿತ ಜನರಿಗೆ ಶಾಲೆಗಳಲ್ಲೂ, ದೇವಸ್ಥಾನಗಳಲ್ಲೂ, ತಕಿಯಾ ಪಳ್ಳಿಯಲ್ಲೂ ಸ್ಥಳ ಮಾಡಿಕೊಡಲಾಗಿದೆ. ಅಲ್ಲೇ ಅವರಿಗೆ ಊಟ-ಉಪಚಾರಗಳ ವ್ಯವಸ್ಥೆ ಮಾಡಿಕೊಡಲಾಗಿದೆ ನಿರಾಶ್ರಿತರಾದವರಲ್ಲಿ ಮೊಗೇರ, ನಾಮಧಾರಿ, ಮುಸಲ್ಮಾನ ಮೊದಲಾದ ಜಾತಿಗಳ ಬಡವರೇ ಹೆಚ್ಚಾಗಿರುತ್ತಾರೆ

ಮೊನ್ನೆ ಗುರುವಾರ ಮುಂಜಾನೆಯೇ ಈ ಭೀಕರ ಉತ್ಪಾತದ ಸಾದ್ಯಂತ ವರ್ತಮಾನವು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು ಕೂಡಲೇ ಪ್ರಾಂತಸಾಹೇಬ ರಾ ಕೊಯಿಮತ್ತೂರರವರು ಹೊರಟು ಇಲ್ಲಿಗೆ ಬಂದು ಎಲ್ಲ ವ್ಯವಸ್ಥೆಯನ್ನು ಸ್ವತಃ ನೋಡುತ್ತಿದ್ದಾರೆ ಹಾಳುಸುರಿಯುತ್ತಿರುವ ಗೂಡುಗಳೊಳಗೆ ಮಣ್ಣಡಿ ಹುಗಿದು ಬಿದ್ದ ವಸ್ತು-ಒಡವೆಗಳ ಕಳವಾಗದಂತೆ ಸ್ಪೆಶಲ್ ಪೋಲೀಸರ ಕಾವಲು ಇಟ್ಟಿರುತ್ತಾರೆ ಈಹೊತ್ತು ಜಿಲ್ಲಾಧಿಪರಾದ ರಾ| ಬಖಲೇಯವರೂ ಜಿಲ್ಲಾಧ್ಯಕ್ಷರಾದ ರಾ. ಶಾಸ್ತ್ರಿಯವರೂ ಬಂದಿರುತ್ತಿದ್ದು ಎಲ್ಲ ಪರಿಸ್ಥಿತಿಯನ್ನು ಕಣ್ಣಾರೆ ನೋಡಿಕೊಳ್ಳುತ್ತಿದ್ದಾರೆ

ಈತನಕ ನಡೆದ ಚೌಕಶಿಯ ಮೇಲಿಂದ ಸತ್ತವರ ಸಂಖ್ಯೆ ೫೩ ಇದುತ್ತದಾಗಿಯೂ, ೧೮೯ ಮನೆಗಳು ನೆಲಸಮವಾಗಿರುತ್ತವೆಂತಲೂ, ೧೦೦೪ ಜನರು ನಿರಾಶ್ರಿತರಾಗಿರುತ್ತಾರಾಗಿಯೂ, ೩೨ ದನಗಳ ಶವಗಳು ಸಿಕ್ಕಿರುವವಾಗಿಯೂ, ಇನ್ನೂ ಬಹಳ ಪಶುಗಳು ಕಾಣೆಯಾಗಿವೆಯೆಂತಲೂ ತಿಳಿದುಬಂದಿದೆ. ಅಂತು ೧ ಲಕ್ಷ ರೂಪಾಯಿಗಿಂತ ಹೆಚ್ಚು ಬೆಲೆ ಬಾಳುವ ಆಸ್ತಿ ನಿರಿನಾಶವಾಗಿ ಹೋಗಿರಬೇಕೆಂದು ಲಕ್ಷ ಮಾಡಲಾಗಿದೆ

ನಿರಾಶ್ರಿತರ ಕಷ್ಟಪರಿಹಾರದ ವ್ಯವಸ್ಥೆ ಮಾಡುವ ಬಗ್ಗೆ ಮೊನ್ನೆಯೇ ಮುದಿಾಲಕರಿಗಳಾದ ರಾ| ಚಂದಾವರಕರರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ನಾಗರಿಕರು ಈ ಕೆಳಗೆ ಕಾಣಿಸಿದವರ ಕಷ್ಟಪರಿಹಾರ ಸಮಿತಿಯನ್ನು ನೇಮಿಸಿದ್ದಾರೆ

ಡಾ| ಎಸ್ ವ್ಹಿ. ಕವಲಗುಡ್ಡ (ಅಧ್ಯಕ್ಷ), ಹಾಜಿ ಮೊಹೆದ್ದೀನ ಸಾಹೇಬ, ರಾ| ನಾಗಪ್ಪಾ ವಾಮನ ನಾಯಕ, ಕೇ ಎಮ್ ಯಾಜಿ, ಹನುಮಂತ ಮ್ಹಾಳಪ್ಪ, ಗಣಪಯ್ಯ ವಾಮನ ಶಾನಭಾಗ, ಕಾತಿಮಜಿ ಹಸನ ಸಾಹೇಬ, ಜೀವೋತ್ತಮ ಭಟ್ಟ, ಗಣಪಯ್ಯ ಮಂಜನಾಥ ಕಾಮತ, ದಾಮುದಾ ಅಬುಮಹಮ್ಮದ ಅಮಿನ, ದಾಮುದಾ ಅಬುಮಹಮ್ಮದ ಆಮಿನ ಸಾಹೇಬ, ಕೇ. ಎನ್ ಶಾನಭಾಗ ಮತ್ತು ಜೇ. ಎಚ್. ಶಮಸುದ್ದೀನ (ಕಾರ್ಯದರ್ಶಿ). ನಿರಾಶ್ರಿತರ ಸಂಕಟಪರಿಹಾರ ಮಾಡಲು ಅವಶ್ಯವಿದ್ದಲ್ಲಿ ವ್ಯವಸ್ಥೆ ಮಾಡಲಿಕ್ಕೆ ಈ ಸಮಿತಿಗೆ ಅಧಿಕಾರ ಕೊಡಲಾಗಿದೆ

ಕಷ್ಟಪರಿಹಾರ ಸಮಿತಿಯವರು ಈಗಾಗಲೇ ರೂ. ೫೨೦ರಷ್ಟು ವಂತಿಕೆ ದೊರಕಿಸಿದ್ದಾರೆ ನಗರ ಸಭೆಯವರು ನಿರಾಶ್ರಿತ ರನಿಧಿಗೆ ರೂ ೭೫ ಕೊಡಬೇಕೆಂದು ಠರಾವು ಮಾಡಿಸಿದ್ದಾರೆ

ಆದರೆ ಸ್ಥಾನಿಕ ಜನರ ಸಹಾಯದಿಂದಲೇ ನಿರಾಶ್ರಿತರ ಕಷ್ಟಪರಿಹಾರ ಆಗುವಂತಿಲ್ಲ. ಸರಕಾರದವರೂ ಕರ್ನಾಟಕ ಪ್ರಾಂತದ ಧನಿಕರೂ ಮುಂದಾಗಿ ಉದಾರಾಶ್ರಯ ಕೊಡುವದು ಅವಶ್ಯವಿದೆ ಇಂಜಿನಿಯರ ಖಾತೆಯವರು ಎಲ್ಲಾದರೂ ವಿಶೇಷ ಕಾಮಗಾರಿಗಳನ್ನು ಪ್ರಾರಂಭಿಸಿ ನಿರಾಶ್ರಿತರಿಗೆ ಉದ್ಯೋಗ ಕಲ್ಪಿಸಿ ಕೊಡಬೇಕಾದದೂ ಅವಶ್ಯವಿದೆ ಈ ಬಗ್ಗೆ ಜಿಲ್ಲಾಧ್ಯಕ್ಷ ರಾ| ಶಾಸ್ತ್ರಿಯವರು ಜಿಲ್ಲಾ ಕೊಂಗ್ರೆಸ ಕಮಿಟಿಯ ಪರವಾಗಿ ಬೇಗನೇ ಸಾರ್ವಜನಿಕ ಪ್ರಕಟಣೆ ಹೊರಡಿಸುವವರಿದ್ದಾರೆ

ಮೊನ್ನೆಯ ಮಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಗಡಿಯಲ್ಲಿರುವ ಎರಡು ಸಂಕಗಳು ಮುರಿದುಹೋಗಿ ರಹದಾರಿ ಕಟ್ಟಾಗಿವೆ ಟಪಾಲು ತಲೆಹೊರೆಯ ಮೇಲೆ ಒಯ್ಯಬೇಕಾಗಿದೆ

ನಿರಾಶ್ರಿತ ನಿಧಿಗೆ ಸಹಾಯ ಮಾಡಿದವರು

ಮೆಸರ್ಸ ಮೌಲಾನಾ ಮತ್ತು ಕಂಪನಿ ರೂ ೧೨೫, ಸಯ್ಯದ ಮಹಮ್ಮದ ಸಾಹೇಬ ಮತ್ತು ಬಂಧುಗಳು ರೂ ೫೦, ರಾ| ಸಯ್ಯದ ಅಬದುಲ್ ರಹಿಮಾನ ದಾವೂಸಾಹೇಬ ರೂ ೩೦, ಡಾ| ಕವಲಗುಡ್ಡ ರೂ. ೨೫, ರಾ ದಾಮುದಾ ಹಾಜಿ ಮೊಹೆದ್ದೀನ ಸಾಹೇಬ ೨೫, ರಾ| ಸಯ್ಯದ ಅಬ್ದುಲ ಸಮದ ಸಾಹೇಬ ೨೫, ರಾ ವಾಮನ ಗಣಪಯ್ಯ ಶಾನಭಾಗ ರೂ ೨೫, ರಾ ಸಿದ್ದಿಕಾ ಮಹಮ್ಮದ ಅಕ್ರಮ ಮಹಮ್ಮದ ಮುನೀರ ರೂ ೧೧, ರಾ| ನಾರಾಯಣ ಗಣಪಯ್ಯ ಶಾನಭಾಗ ೫, ರಾ| ದಾಮುದಾ ಅಬು ಹುಸೇನ ವಿ ಹಸನ ೫, ರಾ| ಜಿ ಎಮ್ ಕಾಮತ ೫, ರಾ| ಕೇ ಎಮ್ ಯಾಜಿ ೫, ರಾ| ಎನ್. ಎಸ್. ಶಿರಾಲಿ ೫, ರಾ ಸಿದ್ದಿಕಾ ಅಬುಲ್ ಹಸನ್ ಸಾಹೇಬ ೫, ರಾ| ಸಿದ್ದಿಕಾ ಮೊಹೆದ್ದೀನ ೫, ರಾ| ಜೀವೋತ್ತಮ ಭಟ್ಟ ೨, ರಾ| ದೇವಪ್ಪಾ ಚೆರ್ಡಪ್ಪ ಶೆಟ್ಟಿ ೧, ರಾ| ಪಿ ಎಮ್. ಪಡಿಯಾರ ೧, ರಾ| ಬಿ ವ್ಹಿ ಪ್ರಭು ೧ ಅಧಿಕಾರಿಗಳು ರೂ ೪೦

(ಅಕ್ಕಿ) ರಾ| ವಾಮನ ನರಸಿಂಹ ನಾಯಕ ೫ ಮುಡಿ, ಹನುಮಂತ ಮ್ಹಾಳಪ್ಪ ೩ ಮುಡಿ, ನಾರಾಯಣ ಮಂಜಣ್ಣ ಶ್ಯಾನಭಾಗ ಶಿರಾಲಿ ೨ ಮುಡಿ, ವಾಸಪ್ಪ ಶೇಷಗಿರಿ ಬಾಳಗಿ ೧ ಮುಡಿ, ಎಡೋಜಾ ಮಾಣುನಾಯಕ ೧ ಮುಡಿ, ಎಸ್ ಎಮ್. ಕಾಮತ ೧ ಮುಡಿ

ದಯಾವತಿ ಹಡಗ ಮುಳುಗಿತು!

ನಮ್ಮಾ ಭಟಕಳ ಪೇಠೆಯಲ್ಲಿ ಈ ಪರಿ ಅನರ್ಥ ಒದಗಿದಾಗಲೇ ಮಲ್ಪೆಯ ಬಳಿ ಸಮುದ್ರದಲ್ಲಿ ದಯಾವತಿ ಉಗಿ ಹಡಗವು ಬಂಡೆಗಪ್ಪಳಿಸಿ ಜಲಸಮಾಧಿ ಹೊಂದಿತು ದಯಾವತಿಯು ಇಲ್ಲಾಗಲಿ ಕುಂದಾಪುರದಲ್ಲಾಗಲಿ ಬಂದರ ಪಾಡದೆ ನೆಟ್ಟಗೆ ಮಲ್ಪೆಗೆ ಹೋಯಿತು. ಮುಂಜಾನೆ ೪-೫ ಘಂಟೆಯ ಸುಮಾರಿಗೆ ಹಡಗವು ಮಲ್ಪೆಯಿಂದ ೧-೧½ ಮೈಲು ಅಂತರದಲ್ಲಿರುವ ಬಹಾದ್ದೂರಗಡ ಗುಡ್ಡದ ಬಳಿ ತಲ್ಪಿತು ಒಂದೇ ಸವನೆ ಮಳೆ ಸುರಿಯುತ್ತಿತ್ತು, ಸುತ್ತಲು ಮಂಜು ಮುಸುಕಿದಂತಾಗಿತ್ತು ಮುಂದೆ ದಾರಿ ಕಾಣುತ್ತಿದ್ದಿಲ್ಲ ಅಷ್ಟರಲ್ಲಿ ಹಡಗವು ನೀರೊಳಗಿದ್ದ ಒಂದು ಬಂಡೆಗೆ ಅಪ್ಪಳಿಸಿ ಒಡೆಯಿತು! ಕಪ್ತಾನರು ಕೂಡಲೆ ಬಂದರದ ಮೇಲಿನ ಜನರಿಗೆ ಒದಗಿದ ಮಹಾಸಂಕಟದ ಸೂಚನೆ ಕೊಟ್ಟರು ಮಲ್ಪೆಯಿಂದ ಮೋಟಾರ ಲೊಂಚು ಓಡಿ ಹೋಗಿ ಹಡಗದಲ್ಲಿದ್ದ ಎಲ್ಲ ಪ್ರಯಾಣಿಕರನ್ನು ಬಂದರಕ್ಕೆ ಮುಟ್ಟಿಸಿತು ಈಗ ಹಡಗದಲ್ಲಿ ಪ್ರವಾಸಿಕರೂ ಖಲಾಸಿಗಳೂ ಕೂಡಿ ೩೦೦ಕ್ಕೆ ಮೇಲ್ಪಟ್ಟು ಜನರಿದ್ದರಾಗಿ ತಿಳಿಯುತ್ತದೆ ಜನರು ಇಳಿದು ಹೋಗುವಷ್ಟರಲ್ಲಿ ಹಡಗದಲ್ಲಿ ನೀರು ತುಂಬಿ ಹಡಗವು ತಳಕ್ಕೆ ಹೋಯಿತು!

SAVE AND BE SAVED

"IF ONLY I HAD SAVED SOMETHING, I WOULD NEVER HAVE COME TO THIS STATE!" This is the sad and tragic exclamation of many unfortunate persons in straitened circumstances

It is the desire of the Syndicate to arm every individual against such a calamity, and accordingly it has devised the famous Pigmy Deposit Scheme which will not only help you to meet many of your unexpected wants of the future, but also make you cheerful and self-reliant

THE CANARA INDUSTRIAL & BANKING SYNDICATE LTD.,

ESTD. (Incorporated in British India) 1925.

MEMBER: Reserve Bank of India, Bankers' Clearing House, Bombay.

Authorised Capital	Rs. 10 00,000	Paid up Capital	Rs 3,86 880
Issued Capital	Rs 8 00,000	Reserves	Rs 2,16 700
Subscribed Capital	Rs. 7 74,500	**Total Resources Exceed Rs 51 Lacs.**	

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ.

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ. ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ.

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು.

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ.

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ. ಧಾರಾಳ ಕಮಿಶನ್, ವಿಪುಲ ಸೌಕರ್ಯ; ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ.

ನಮ್ಮ ಏಜಂಟರು:—

ಭಟ್ಕಳ :—	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ.	ಹೊನ್ನಾವರ —	ಶಾಮಂತ ಸ್ಟೋರ್ಸ.
ಅಂಕೋಲಾ:—	ವೇದಮೂರ್ತಿ ಹನುಮಟ್ಟೆ ಕೇಶವ ಭಟ್ಟ.	ಗೋಕರ್ಣ :—	ಎಮ್. ವ್ಹಿ. ಬಸ್ರೀಕರ, ಮರ್ಚಂಟ.
ಕಾರವಾರ :—	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ.	ಶಿರ್ಸಿ :—	ಆರ್. ವ್ಹಿ. ಧಾಕಪ್ಪಾ, ಕೆಮಿಸ್ಟ.

ವಿಳಾಸ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಬ್ರೆಂಚ್ ಆಫೀಸು: ಕುಮಟಾ. ಉ. ಕ.

OR

BHUVANENDRA PRODUCTS LTD.
Head Office: **KATAPADI, S. K.**

SERVICE & PROMPTNESS

A Feature and a Fact with the "POPULAR"

M. VENKATESH PAI,
Banker.

Sri Krishna Bhavan,
Mangalore
25th July, 1938.

The Managing Director,
The Popular Insurance Co., Ltd.,
MANGALORE.

Policy No. 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father-in-law, Sri Nagar Vasudeva Shenoy who passed away on the 19th instant.

I quite appreciate too the service you rendered the claimant in voluntarily forwarding the Claim Papers and assisting in their completion. Then the cheque for Rs 2,558-7-0 is delivered to the claimant and all within the short period of 6 days.

This spirit of service and promptitude evinced by the 'POPULAR' is highly laudable and it is but proper that the Company should be 'POPULAR.' It should naturally bring home to the public immense advantages of getting insured with a local Life Office and I would certainly recommend the Company to all.

I wish the Company a brilliant career of usefulness and prosperity.

Yours faithfully,
(Sd.) M. Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,

Head Office: MANGALORE.

Branch: *PROSPECT CHAMBERS, Hornby Road, BOMBAY.*

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನಕ್ಕೆ ದಿಲ್ಲಿಯಲ್ಲಿ ಶನಿವಾರ ತಾ. ೨೪ನೇಗೆ ಪ್ರಾರಂಭವಾಯಿತು. ಅಧ್ಯಕ್ಷರಾದ ಶ್ರೀ| ಸುಭಾಸ ಚಂದ್ರ ಬೋಸರವರು ಹಾಜರಿರಲಿಲ್ಲ. ಕಲಕತ್ತೆಯಿಂದ ವಿಮಾನ ಮಾರ್ಗವಾಗಿ ಅವರು ಹೊರಟಾಗ್ಯೂ ಕಾನಪುರಕ್ಕೆ ಬಂದು ತಲ್ಪುವಷ್ಟರಲ್ಲಿ ೧೦೪ ಡಿಗ್ರಿ ತನಕ ಜ್ವರ ಏರಿದರಿಂದ ಅವರು ಕಾನಪುರದಲಿಯೇ ಡಾ|| ಖರೇಯವರು ದ್ರೋಹಿಗಳೆಂದು ಕಾರ್ಯಕಾರಿ ಮಂಡಳದವರು ಎಣಿಸಿದ್ದೇ ತಪ್ಪು; ಬಾಬು ರಾಜೇಂದ್ರ ಪ್ರಸಾದರು ಮಹಾಕೋಸಲ ಪ್ರಧಾನರಿಗೆ ಮುಖ್ಯ ಪ್ರಧಾನರ ಅಪ್ಪಣೆಯ ಮೇರೆಗೆ ರಾಜಿನಾಮೆ ಕೊಡದಂತೆ ಹೇಳಿದ್ದು ತಪ್ಪು; ಆ ಪ್ರಕಾರ ಸಲಹೆ ಕೊಡಲಿಕ್ಕೆ ಬಾಬು ರಾಜೇಂದ್ರ ಪ್ರಸಾದರಿಗೆ ಅಧಿಕಾರವಿದ್ದಿಲ್ಲ; ಪಾರ್ಲಿಮೆಂಟರಿ ಬೋರ್ಡಿಗೂ ಇಂಥ ಅಧಿಕಾರವಿಲ್ಲ; ಗವ್ಹರ್ನರರು ರಾತ್ರಿ ಹಗಲು ಮಾಡಿದ್ದು ಯಾರ ಉದ್ದಿಶ್ಯ? ಡಾ|| ಖರೇಯವರ ಉಪಕಾರಕ್ಕೋ, ರಾಷ್ಟ್ರೀಯ ಸಭೆಯ ಉಪಕಾರಕ್ಕೋ? ಕೊಂಗ್ರೆಸ ಕಾರ್ಯಕಾರಿ ಮಂಡಳ ಮತ್ತು ಪಾರ್ಲಿಮೆಂಟರಿ ಬೋರ್ಡುಗಳ ವರ್ತನ ಚೌಕಶಿ ಮಾಡಲು ನಮ್ಮ ಆಕ್ಷೇಪವಿಲ್ಲ. ನಮ್ಮ ವರ್ತನ ನಿಷೇಧಾರ್ಹವಿದ್ದರೆ, ನಮ್ಮನ್ನು ಕಿತ್ತುಹಾಕಲು ನೀವು ಅಧಿಕಾರಬಟ್ಟವರಿದ್ದೀರಿ. ಡಾ| ಖರೇಯವರಿಗೆ ಮುಖ್ಯ ಪ್ರಧಾನಪದ ಬಿಡಲು ಒಪ್ಪಿಗೆಯಿರಲಿಲ್ಲ. ೧ ವರ್ಷದ ತನಕ ಡಾ| ಖರೇಯವರು ಪಾರ್ಲಿಮೆಂಟರಿ ಬೋರ್ಡ

ಸ್ವೈ|| ವಾ|| ಬೆಳಗಿ ಅನಂತರಾಯರು!

ಶಿರ್ಸಿಯ ಲೋಕಪ್ರಿಯ ವಕೀಲ ಶ್ರೀ|| ಅನಂತರಾವ ಕೃಷ್ಣ ಬೆಳಗಿಯವರು ಬುಧವಾರ ಬೆಳಿಗ್ಗೆ ತೀರಿಕೊಂಡರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಶ್ರೀ|| ಬೆಳಗಿ ಅನಂತರಾಯರು ನಾಮಾಂಕಿತ ವಕೀಲರಿದ್ದು ಎಲ್ಲರಿಗೂ ಬೇಕಾದವರಾಗಿದ್ದರು. ಫೌಜದಾರಿ ಮೊಕದ್ದಮೆಗಳಲ್ಲಿ ಇವರ ಪ್ರಾವೀಣ್ಯ ವಿಶೇಷ! ಬಡಬಗ್ಗರಿಗೆ ಇವರು ಒಳ್ಳೇ ರೀತಿಯಿಂದ ನಡಿಸುತ್ತಿದ್ದರು. ನಿಗರ್ವಿ ಸ್ವಭಾವದವರಿದ್ದು ಸಕಲರ ಕೆಲಸಗಳನ್ನು ಪ್ರೀತಿಯಿಂದಲೂ ಅಭಿಮಾನದಿಂದಲೂ ಮಾಡಿ ಒಳ್ಳೇ ಹೆಸರು ಪಡೆದಿದ್ದರು. "ವೃತ್ತ"ದ ಮೇಲಿನ ಖಟ್ಲೆಗಳಲ್ಲಿ ನಿರಪೇಕ್ಷ ಬುದ್ಧಿಯಿಂದ ಇವರು ಮಾಡಿದ ಉಪಕಾರವನ್ನು "ವೃತ್ತ"ವು ಎಂದಿಗೂ ಮರೆಯದು. ಇವರು ಧರ್ಮಾಭಿಮಾನಿಗಳಾಗಿದ್ದು ತೀರ್ಥಯಾತ್ರೆಗಳನ್ನು ಮಾಡಿ ಶ್ರೇಯಸ್ಸು ಸಂಪಾದಿಸಿದ್ದಾರೆ. ಸಹೋದರರಾದ ರಾ|| ಪದ್ಮನಾಭರಾಯರು ತೀರಿಕೊಂಡ ೧೫-೨೦ ದಿನಗಳಲ್ಲಿಯೇ ಇವರು ತೀರಿಕೊಂಡದ್ದು ಶೋಚನೀಯ! ಅದರೆ, ವಿಧಿಘಟನೆಗೆ ಉಪಾಯವಿಲ್ಲವಷ್ಟೇ! ಅವರ ಪತ್ನಿಯೂ ಇಬ್ಬರು ಮಗಳಂದಿರೂ ಮಲತಾಯಿಯೂ ಕಾಲಚಕ್ರದ ಕಡೆಗೆ ದೃಷ್ಟಿಯನ್ನಿಟ್ಟು ಸಾಂತ್ವನ ಮಾಡಿಕೊಳ್ಳಬೇಕು. ಇವರ ನಿಧನದ ದೆಸೆಯಿಂದ ಶಿರ್ಸಿಯೊಳಗಿನ ಪೇಟೆ ಮುಚ್ಚಿಕೊಂಡಿತ್ತು. ಮೃತಾತ್ಮರಿಗೆ ಸದ್ಗತಿ ದೊರೆಯಲೆಂದು ನಾವು ಜಗದೀಶನೆಡೆ ಪ್ರಾರ್ಥಿಸುವೆವು.

ವಾರ್ತೆಗಳು.

— ಮುಂಬಯಿ ಸರಕಾರವು ಪ್ರಾಯಸ್ಥರಿಗೆ ಓದು-ಬರಹ ಕಲಿಸುವ ಯೋಜನೆ ತಯಾರಿಸುವದಕ್ಕಾಗಿ ಒಂದು ಮಂಡಳವನ್ನೇರ್ಪಡಿಸಿದೆ. ವರ್ಧಾದೊಳಗಿನ ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘದ ಕಾರ್ಯಕರ್ತರ ಶಾಲೆಯಲ್ಲಿ ಕಾಗದ ತಯಾರಿಸುವ ಮತ್ತು ಗಾಣಗಳಿಂದ ಎಣ್ಣೆ ತಯಾರಿಸುವ ಶಿಕ್ಷಣ ಪಡೆಯುವವರಿಗೆ ಮುಂಬಯಿ ಸರಕಾರವು ೨೫ ಶಿಷ್ಯವೃತ್ತಿಗಳನ್ನು ಕೊಡಮಾಡಿದೆ. ವರ್ಗಗಳು ಡಿಸೆಂಬರ ೧ನೇ ತಾರೀಖಿನಿಂದ ೫ ತಿಂಗಳ ತನಕ ನಡೆಯುವವು. ಪ್ರತಿಯೊಬ್ಬ ವಿದ್ಯಾರ್ಥಿಗೆ ಅಂತು ರೂ. ೮೦ ಸಿಗುವವು. ಶಾಲೆಯ ಫೀ, ಊಟ ಉಳಕೊಳ್ಳುವ ಖರ್ಚಿಗೆ ಇವು ಸಾಕು. ದಾರಿಯ ವೆಚ್ಚ, ಇತರ ಕೋಳ ಖರ್ಚನ್ನು ವಿದ್ಯಾರ್ಥಿಯು ಸಹಿಸಬೇಕು. ಕಲಿಯಲಿಚ್ಛಿಸುವವರು ತಾ. ೧೫-೧೦-೩೮ನೇದರೊಳಗಾಗಿ ಅ. ಭಾ. ಗ್ರಾಮೋದ್ಯೋಗ ಸಂಘದ ಮುಂಬಯಿ ಪ್ರಾಂತಿಕ ಮಂಡಳಕ್ಕೆ ಅರ್ಜಿ ಮಾಡಿಕೊಳ್ಳಬೇಕು. ಸ್ಥಳಿಕ ಕೊಂಗ್ರೆಸ ಕಮಿಟಿ, ಸಹಕಾರ ಸಂಘ ಇಲ್ಲವೆ ಅ. ಭಾ. ಕೈಗಾರಿಕೆ ಸಂಘದ ಶಿಫಾರಸುಪತ್ರ ಪಡೆದವರ ಅರ್ಜಿಗಳ ವಿಚಾರ ಮಾತ್ರ ಮಾಡಲಾದೀತು. ಅರ್ಜಿದಾರರು ೨೫ ವರ್ಷ ವಯಸ್ಸಿನೊಳಗಿನವರಿದ್ದು ದೃಢಕಾಯದವರಿರಬೇಕು, ಶಾರೀರಿಕ ಕಷ್ಟ ಮಾಡಲು ತಯಾರಿರಬೇಕು ತಕ್ಕ ಮಟ್ಟಿಗೆ ಹಿಂದೀ ಇಲ್ಲವೆ ಇಂಗ್ಲಿಷ ಭಾಷೆಯ ಪರಿಚಯವಿರಬೇಕು.

— ಮುಂಬಯಿ ಇಲಾಖೆಯಲ್ಲಿ ಮೂರು ವಿಭಾಗಗಳಿವೆ:- ಉತ್ತರ, ಮಧ್ಯ, ದಕ್ಷಿಣ. ಮಧ್ಯ ವಿಭಾಗವನ್ನು ರದ್ದುಮಾಡಿ ಮಧ್ಯವಿಭಾಗಕ್ಕೊಳಪಟ್ಟ ಜಿಲ್ಲೆಗಳನ್ನು ಉತ್ತರ-ದಕ್ಷಿಣ ವಿಭಾಗಗಳೊಳಗೆ ಹಂಚಿಹಾಕಿ ಒಂದು ಕಮಿಶನರ-ಕಚೇರಿಯ ಖರ್ಚು ಕಡಿಮೆ ಮಾಡಬೇಕಾಗಿ ಮುಂಬಯಿ ಸರಕಾರವು ನಿರ್ಧರಿಸಿದೆ. ಕಮಿಶನರರು ಕೆಲ ಕಾಲ ಬೆಳಗಾವಿಯಲ್ಲಿಯೂ, ಕೆಲ ಕಾಲ ಪುಣೆಯಲ್ಲಿಯೂ ಮುಕ್ಕಾಮು ಮಾಡುವರು.

— ಬ್ರಿಟಿಶ ಪಾರ್ಲಿಮೆಂಟಿನ ಸಭೆ ಬುಧವಾರ ನಡೆದು ಮುಖ್ಯ ಪ್ರಧಾನರಾದ ಮಿ|| ಚೆಂಬರಲೇನರವರ ಭಾಷಣವಾದೊಡನೆ ವಿಸರ್ಜನ ಹೊಂದಿತು. ಹಿಟ್ಲರರೊಡನೆ ಸಂಭಾಷಣ ನಡಿಸುವದಕ್ಕಾಗಿ ಚೆಂಬರಲೇನರು ಮ್ಯುನಿಚ್ಗೆ ಹೋಗಬೇಕಾಗಿತ್ತು; ಆದರಿಂದ ಸಭೆಯ ಕಾರ್ಯ ಅಷ್ಟಕ್ಕೇ ತಡಿಸಲ್ಪಟ್ಟಿತು. ಈಹೊತ್ತು ಪುನಃ ಪಾರ್ಲಿಮೆಂಟು ಸಭೆ ಸೇರಿ ಹೊಸ ಪರಿಸ್ಥಿತಿಯನ್ನು ವಿಚಾರ ಮಾಡುವದು.

— ಸಿಂಧ ಪ್ರಾಂತಿಕ ಸರಕಾರವು ಗೋವಾ ಸೋದ್ರಿಯ ಟಿಕೇಟುಗಳನ್ನು ಮಾರಾಟ ಮಾಡಬಾರದಾಗಿ ನಿರ್ಬಂಧಿಸಿದೆ. ಸರಕಾರಿ ಅಧಿಕಾರಿಗಳು ಖಾದಿಯನ್ನು ಪುರಸ್ಕರಿಸಬಾರದೆಂಬ ಭಾವನೆ ಈಗಲೂ ಉಂಟು; ಅದು ತಪ್ಪು; ಸರಕಾರಿ ಅಧಿಕಾರಿಗಳು ಖಾದಿಯನ್ನು ಧರಿಸಬಹುದು, ಟೊಪ್ಪಿಗೆಗಳನ್ನು ಹಾಕಿಕೊಳ್ಳಬಹುದು; ಗ್ರಾಮ-ಕೈಗಾರಿಕೆಗಳನ್ನು ಸಿಂಧ ಸರಕಾರವು ಪ್ರೋತ್ಸಾಹಿಸುತ್ತದೆ; ಎಂಬದಾಗಿ ಸಿಂಧ ಸರಕಾರವು ಹುಕುಮು ಹೊರಡಿಸಿರುತ್ತದೆ

— ಯುದ್ಧವಾದರೆ ಮೇಲಧಿಕಾರಿಗಳಿಂದ ಬರುವ ಅಪ್ಪಣೆಗಳನ್ನು ಸ್ವೀಕರಿಸುವದಕ್ಕಾಗಿ ಸಿಂಧ ಸರಕಾರದ ಕರಾಚಿಯೊಳಗಿನ ಪ್ರಾಂತಿಕ ಸರಕಾರದ ಕಚೇರಿಯಲ್ಲಿ ರಾತ್ರಿ ಇಬ್ಬ ಅಧಿಕಾರಿಗಳು ಮಲಗಿರಬೇಕೆಂದು ಚೀಫ ಸೆಕ್ರೆಟರಿಯವರು ಹುಕುಮು ಹೊರಡಿಸಿದ್ದಾರೆ.

ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಪೇಕ್ಷೆಯಂತೆ ಡಾ| ಖರೇಯವರು ತಪ್ಪು ಒಪ್ಪಿಕೊಂಡು ಮುಖ್ಯ ಪ್ರಧಾನ ಅಧಿಕಾರಕ್ಕೆ ರಾಜಿನಾಮೆ ಕೊಟ್ಟ ಬಳಿಕ, ಮುಂದಿನ ನಿರ್ಬಂಧಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೈಕೊಂಡಿದ್ದು ತಪ್ಪೆಂದು ಶ್ರೀ| ಅಣೇಯವರ ಅಭಿಮತ. ಕೊಂಗ್ರೆಸ ಎಸೆಂಬ್ಲಿ ಪಕ್ಷದ ನಾಯಕತ್ವಕ್ಕೆ ರಾಜಿನಾಮೆ ಕೊಡಬೇಕೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ಸೂಚನೆ ಮಾಡಿದ್ದೂ ಅವರಿಗೆ ನಾಯಕರಾಗಿ ಆರಿಸದಂತೆ ಕಾರ್ಯಕಾರಿ ಮಂಡಳವು ಚಟುವಟಿಕೆ ನಡಿಸಿದ್ದೂ ತಪ್ಪೆಂದು ಶ್ರೀ|| ಮಾಧವರಾವ ಅಣೇಯವರು ಅಭಿಪ್ರಾಯಪಟ್ಟರು. ಯಾವದೇ ಪ್ರಕಾರ ದಾಕ್ಷಿಣ್ಯ ತೋರಲಿಲ್ಲ; ಕೈಕೊಂಡ ಕೆಲಸ ತಪ್ಪಿದರೆ, ತಪ್ಪೆಂದು ಅವರ ಮನವರಿಕೆಯಾದರೆ ಮಾತ್ರ, ಅದಕ್ಕೆ ಒಪ್ಪಿಗೆ ಕೊಡಲು ತಿಳಿಸಿದ್ದೆತು. ಗವ್ಹರ್ನರರು ರಾಜ್ಯಘಟನೆಯಂತೆ ನಡೆದರೆಂದು ಶ್ರೀ|| ಅಣೇಯವರು ವಾದಿಸುತ್ತಾರೆ; ಡಾ|| ಖರೇಯವರು ರಾಜಿನಾಮೆ ಕೊಟ್ಟದ್ದು ರಾತ್ರಿ ೧೧ ಘಂಟೆಗೆ! ಅಲ್ಲಿಂದ ಮುಂಜಾವು ೫ ಘಂಟೆ ವರೆಗೂ ಗವ್ಹರ್ನರರಿಗೂ ಹಿಂದುಸ್ಥಾನ ಸರಕಾರಕ್ಕೂ ಭಾರತ ಮಂತ್ರಿಗಳಿಗೂ ತಂತಿ-ವ್ಯವಹಾರ ನಡೆದು ಮಹಾಕೋಸಲದ ಮಂತ್ರಿಗಳಿಗೆ ಪದಚ್ಯುತಿಯಾಗಿ, ಡಾ|| ಖರೇಯವರ ಹೊಸ ಪ್ರಧಾನ ಮಂಡಳ ನೇಮಿಸಲ್ಪಟ್ಟಿತು! ವಿಚಾರದಿಂದ ನಿರ್ಣಯಿಸಿದ್ದಾರೆ" ಡಾ|| ಪಟ್ಟಾಭಿ ಸೀತಾರಾಮಯ್ಯನವರು ಆಕ್ಷೇಪಕರಿಗೆ ಉತ್ತರ ಕೊಟ್ಟು ರಾ| ಬಾಲಕೃಷ್ಣ ಶರ್ಮಾರವರ ತಿದ್ದು-ಕ್ರಮದ ಉಪಸೂಚನೆಯನ್ನು ಸ್ವೀಕರಿಸಿದ ಬಳಿಕ, ಮತಗಣನೆಯಾಗಿ ಈ ಉಪಸೂಚನೆ ಸಹಿತ ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಆ ಮೇಲೆ ಸಂಯುಕ್ತ ರಾಜ್ಯಘಟನೆಯನ್ನು ವಿರೋಧಿಸುವ ಠರಾವನ್ನು ಬಾಬು ರಾಜೇಂದ್ರ ಪ್ರಸಾದರು ಸೂಚಿಸಿದರು: ಈಗಿನ ಸಂಯುಕ್ತ ರಾಜ್ಯಘಟನೆ ನಿರರ್ಥಕವೆಂದೂ ಅದನ್ನು ಬಲಾತ್ಕಾರದಿಂದ ಹಿಂದು

(೧೦ನೇ ಪಾನಿನ ಮೇಲೆ ಮುಂದುವರಿದಿದೆ.)

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ದಿ ಹನುಮಾನ್ ಟ್ರಾನ್ಸ್‌ಪೋರ್ಟ ಕಂಪೆನಿ, ಲಿಮಿಟೆಡ್,

ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಗ್ಗೆ ಹೊರಟರೆ ಆ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ ನಿಮಗೆ ಆಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,

UDIPI. S. KANARA.

This spirit of service and prompt tude evinced by the POPULAR is highly laudable and it is but proper that the Company should be POPULAR It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully,

(Sd) M Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to.-

THE POPULAR INSURANCE CO. LIMITED,

Head Office: MANGALORE.

Branch: *PROSPECT CHAMBERS, Hornby Road, BOMBAY*

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಅಧಿವೇಶನಕ್ಕೆ ದಿಲ್ಲಿಯಲ್ಲಿ ಶನಿವಾರ ತಾ ೨೪ನೇಗಿ ಪ್ರಾರಂಭವಾಯಿತು. ಅಧ್ಯಕ್ಷರಾದ ಶ್ರೀ| ಸುಭಾಷ ಚಂದ್ರ ಬೋಸರವರು ಹಾಜರಿರಲಿಲ್ಲ. ಕಲಕತ್ತೆಯಿಂದ ವಿಮಾನ ಮಾರ್ಗವಾಗಿ ಅವರು ಹೊರಟಾಗ್ಯೂ ಕಾನಪುರಕ್ಕೆ ಬಂದು ತಲ್ಪುವಷ್ಟರಲ್ಲಿ ೧೦೪ ಡಿಗ್ರಿ ತನಕ ಜ್ವರ ಏರಿದ್ದರಿಂದ ಅವರು ಕಾನಪುರದಲ್ಲಿಯೇ ಇಳಿದರು. ಅದರಿಂದ ಮೌ|| ಅಬುಲ ಕಲಮ ಆಜಾದರವರಿಗೆ ಸರ್ವರೂ ಏಕಮತದಿಂದ ಅಧ್ಯಕ್ಷರಾಗಿ ನೇಮಿಸಿಕೊಂಡು ಅ ಭಾ. ಕೊಂ ಕಮಿಟಿಯ ಸಭಾ ಕಾರ್ಯವನ್ನಾರಂಭಿಸಿದರು. ಮಧ್ಯಪ್ರಾಂತದ ಡಾ|| ಖರೇಯವರ ಕುರಿತು ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಕೈಕೊಂಡ ತೀರ್ಮಾನವನ್ನು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯು ಪುರಸ್ಕರಿಸುತ್ತದೆಂಬ ಠರಾವನ್ನು ಡಾ|| ಪಟ್ಟಾಭಿಸೀತಾರಾಮಯ್ಯನವರು ಮಂಡಿಸಿದರು. ಮಧ್ಯಪ್ರಾಂತ ಪ್ರಕರಣದ ಸಕಲ ಪರಿಸ್ಥಿತಿಯನ್ನು ಸಮಾಲೋಚಿಸಿ ಡಾ|| ಖರೇಯವರು ರಾಷ್ಟ್ರೀಯ ಸಭೆಯವರೆಂದು ಹೇಳಿಸಿಕೊಂಡು ರಾಷ್ಟ್ರೀಯ ಸಭೆಗೆ ದ್ರೋಹ ಬಗೆದಿದ್ದಾರೆಂದು ಡಾ|| ಪಟ್ಟಾಭಿಯವರು ಪ್ರತಿಪಾದಿಸಿದರು. ರಾಜಿನಾಮೆ ಕೊಟ್ಟ ತರುವಾಯ ಡಾ|| ಖರೇಯವರು ಕೊಂಗ್ರೆಸಿಗೆ ಪ್ರತಿಸ್ಪರ್ಧಿಯಾಗಿ ಲೋಕಶಾಹಿ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿದರೆಂತಲೂ ಹೊಸ ಮಂತ್ರಿಮಂಡಳದ ವಿರುದ್ಧ ಅಪನಂಬಿಗೆಯ ಠರಾವನ್ನು ಸೂಚಿಸಲು ಬೆಂಬಲ ಕೊಟ್ಟರೆಂತಲೂ ಡಾ|| ಪಟ್ಟಾಭಿಯವರು ಆರೋಪ ಹೊರಿಸಿ ಅವರ ವರ್ತನವನ್ನು ಬಲವಾಗಿ ಟೀಕಿಸಿದರು. ಶ್ರೀ|| ಶಂಕರರಾವ ದೇವರವರು ಈ ಸೂಚನೆಗೆ ಅನುಮೋದನೆ ಕೊಟ್ಟ ಬಳಿಕ, ರಾ|| ಭೂಪೇಂದ್ರನಾಥ ಸನ್ಯಾಲರವರು ಉಪಸೂಚನೆಯನ್ನು ಸೂಚಿಸಿದರು. ಡಾ|| ಖರೇಯವರು ಪಾರ್ಲಿಮೆಂಟರಿ ಬೋರ್ಡಿನ ಮೇಲೆ ಮಾಡಿದ ಆರೋಪಗಳನ್ನು ಪರಿಶೋಧಿಸುವದಕ್ಕಾಗಿ ಒಂದು ಮಂಡಳವನ್ನು ನೇಮಿಸಬೇಕೆಂದು ಡಾ|| ಸನ್ಯಾಲರವರ ಉಪಸೂಚನೆ. ರಾ|| ಸಹಸ್ರಬುದ್ಧೆಯವರೂ ಇದೇ ಅರ್ಥದ ಮತ್ತೊಂದು ಉಪಸೂಚನೆಯನ್ನು ಸೂಚಿಸಿ ಚೌಕಶಿಯಾಗಬೇಕೆಂದರು. ಡಾ|| ಖರೇಯವರ ಮೇಲೆ ಶಿಸ್ತುಭಂಗದ ಕ್ರಮ ಕೈಕೊಳ್ಳಬೇಕಾಗಿ ರಾ| ಬಾಲಕೃಷ್ಣ ಶರ್ಮಾರವರು ಸೂಚಿಸಿದರು. ಶ್ರೀ| ಮಾಧವರಾವ ಅಣೇಯವರು ಮೂಲ ಠರಾವನ್ನೂ ಎಲ್ಲ ಉಪಸೂಚನೆಗಳನ್ನೂ ವಿರೋಧಿಸಿದರು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಪೇಕ್ಷೆಯಂತೆ ಡಾ| ಖರೇಯವರು ತಪ್ಪು ಒಪ್ಪಿಕೊಂಡು ಮುಖ್ಯ ಪ್ರಧಾನ ಅಧಿಕಾರಕ್ಕೆ ರಾಜಿನಾಮೆ ಕೊಟ್ಟ ಬಳಿಕ, ಮುಂದಿನ ನಿರ್ಬಂಧಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೈಕೊಂಡಿದ್ದು ತಪ್ಪೆಂದು ಶ್ರೀ| ಅಣೇಯವರ ಅಭಿಮತ. ಕೊಂಗ್ರೆಸ ಎಸೆಂಬ್ಲಿ ಪಕ್ಷದ ನಾಯಕತ್ವಕ್ಕೆ ರಾಜಿನಾಮೆ ಕೊಡಬೇಕೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ಸೂಚನೆ ಮಾಡಿದ್ದೂ ಅವರಿಗೆ ನಾಯಕರಾಗಿ ಆರಿಸದಂತೆ ಕಾರ್ಯಕಾರಿ ಮಂಡಳವು ಚಟುವಟಿಕೆ ನಡಿಸಿದ್ದೂ ತಪ್ಪೆಂದು ಶ್ರೀ|| ಮಾಧವರಾವ ಅಣೇಯವರು ಅಭಿಪ್ರಾಯಪಟ್ಟರು. ಡಾ|| ಖರೇಯವರು ದ್ರೋಹಿಗಳೆಂದು ಕಾರ್ಯಕಾರಿ ಮಂಡಳದವರು ಎಣಿಸಿದ್ದೇ ತಪ್ಪು; ಬಾಬು ರಾಜೇಂದ್ರ ಪ್ರಸಾದರು ಮಹಾಕೋಸಲ ಪ್ರಧಾನರಿಗೆ ಮುಖ್ಯ ಪ್ರಧಾನರ ಅಪ್ಪಣೆಯ ಮೇರೆಗೆ ರಾಜಿನಾಮೆ ಕೊಡದಂತೆ ಹೇಳಿದ್ದು ತಪ್ಪು, ಆ ಪ್ರಕಾರ ಸಲಹೆ ಕೊಡಲಿಕ್ಕೆ ಬಾಬು ರಾಜೇಂದ್ರ ಪ್ರಸಾದರಿಗೆ ಅಧಿಕಾರವಿದ್ದಿಲ್ಲ, ಪಾರ್ಲಿಮೆಂಟರಿ ಬೋರ್ಡಿಗೂ ಇಂಥ ಅಧಿಕಾರವಿಲ್ಲ, ಭಿನ್ನ ಭಿನ್ನ ಪ್ರಾಂತಿಕ ಪ್ರಧಾನ ಮಂಡಳಗಳ ಧೋರಣಗಳೊಳಗೆ ಐಕ್ಯಮತ್ಯ ಸಂಘಟಿಸುವದಷ್ಟೇ ಪಾರ್ಲಿಮೆಂಟರಿ ಬೋರ್ಡಿನ ಕೆಲಸ, ಪ್ರಧಾನ ಮಂಡಳದೊಳಗಿನ ಅಂತಃಕಾರಭಾರದಲ್ಲಿ ಕೈಹಾಕುವದು ಲೋಕಶಾಹಿಗೆ ಭೂಷಣವಲ್ಲ, ಹೀಗೆ ಶ್ರೀ| ಅಣೇಯವರು ಪ್ರತಿಪಾದಿಸಿ, ಡಾ| ಖರೇಯವರಿಗೆ ಶಾಸನ ಮಾಡಬಾರದೆಂದೂ, ಡಾ| ಖರೇಯವರ ಈಗಿನ ವರ್ತನದ ಮೇಲಿಂದ ನಿರ್ಣಯ ಕೊಡುವದು ಅನ್ಯಾಯವಾಗುವದೆಂದೂ, ಡಾ| ಖರೇಯವರು ಅಪನಂಬಿಗೆಯ ಠರಾವಿಗೆ ನಿರುಪಾಯದಿಂದ ಬೆಂಬಲ ಕೊಡಬೇಕಾಯಿತಾಗಿಯೂ ಹೇಳಿ, ಮೂಲ ಠರಾವನ್ನೂ ಉಪಸೂಚನೆಗಳನ್ನೂ ಶ್ರೀ| ಅಣೇಯವರು ವಿರೋಧಿಸಿದರು. ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರವರು ಶ್ರೀ|| ಅಣೇಯವರಿಗೆ ಉತ್ತರ ಕೊಡಹತ್ತಿದಾಗ ಥಟ್ಟನೆ ಬಿರುಗಾಳಿ ಬೀಸಿ, ಅಖಿಲ ಭಾರತೀಯ ಕೊಂಗ್ರೆಸ ಕಮಿಟಿ ಸೇರಿದ ಸಭಾಮಂಟಪವು ನಡುಗಲಾರಂಭಿಸಿತು. ಅದರಿಂದ ಅಂದಿನ ಸಭೆ ಅಷ್ಟಕ್ಕೇ ವಿಸರ್ಜಿಸಲ್ಪಟ್ಟಿತು. ಮರುದಿನ ರವಿವಾರ ಪುನಃ ಸಂಜೆ ೪|| ಘಂಟೆಗೆ ಸಭೆ ಸೇರಿತು. ಸರದಾರ ವಲ್ಲಭಭಾಯಿ ಪಟೇಲರವರು ನುಡಿದದ್ದೇನಂದರೆ — " ಪಾರ್ಲಿಮೆಂಟರಿ ಬೋರ್ಡಿಗೆ ಪ್ರಧಾನ ಮಂಡಳಗಳ ಮೇಲೆ ಅಂಕೆಯಿಡಲು ಸರ್ವಾಧಿಕಾರ ಕೊಡೋಣಾಗಿದೆ. ನಾವು ಯಾವದೇ ಪ್ರಧಾನ ಮಂಡಳದ ಅಂತಃಕಾರಭಾರದಲ್ಲಿ ಕೈಹಾಕಲಿಲ್ಲ, ನಾವು ಪ್ರಧಾನರಿಗೆ ಬೆಂಬಲ ಕೊಡುತ್ತಿರುತ್ತೇವೆ. ಡಾ|| ಖರೇಯವರಿಗೆ ನಾವು ಪ್ರಧಾನ ಇಸಮುಗಳನ್ನು ಸೂಚಿಸಿಕೊಟ್ಟವರಲ್ಲ. ಮಧ್ಯಪ್ರಾಂತ ಮಂತ್ರಿಮಂಡಳದೊಳಗಿನ ವ್ಯಾಪಾರಗಳನ್ನು ಕಾಲಕಾಲಕ್ಕೆ ಪಾರ್ಲಿಮೆಂಟರಿ ಬೋರ್ಡಿಗೆ ತಿಳಿಸುತ್ತೇವಾಗಿ ಮೊದಲು ಡಾ|| ಖರೇಯವರು ತಿಳಿಸಿ, ಪಾರ್ಲಿಮೆಂಟರಿ ಬೋರ್ಡಿನ ಸಭೆಯಾದ್ದಲ್ಲಿ ತಮ್ಮ ಬೆಂದು ಹೊರಬೀಳುವದೆಂದು ಅವರು ಗಾಬರಿಯಿಂದ ರಾಜಿನಾಮೆ ಕೊಟ್ಟರು. ನಾವು ಡಾ|| ಖರೇಯವರ ಮೇಲೆ ಯಾವದೇ ಪ್ರಕಾರ ದಾಕ್ಷಿಣ್ಯ ಹಾಕಲಿಲ್ಲ, ಕೈಕೊಂಡ ಕೆಲಸ ತಪ್ಪಿದರೆ, ತಪ್ಪೆಂದು ಅವರ ಮನವರಿಕೆಯಾದದೆ ಮಾತ್ರ, ಅದಕ್ಕೆ ಒಪ್ಪಿಗೆ ಕೊಡಲು ತಿಳಿಸಿದ್ದೆವು. ಗವ್ಹರ್ನರರು ರಾಜ್ಯಘಟನೆಯಂತೆ ನಡೆದರೆಂದು ಶ್ರೀ| ಅಣೇಯವರು ವಾದಿಸುತ್ತಾರೆ, ಡಾ|| ಖರೇಯವರು ರಾಜಿನಾಮೆ ಕೊಟ್ಟದ್ದು ರಾತ್ರಿ ೧೧ ಘಂಟೆಗೆ| ಅಲ್ಲಿಂದ ಮುಂಜಾವು ೫ ಘಂಟೆ ವರೆಗೂ ಗವ್ಹರ್ನರರಿಗೂ ಹಿಂದುಸ್ಥಾನ ಸರಕಾರಕ್ಕೂ ಭಾರತ ಮಂತ್ರಿಗಳಿಗೂ ತಂತಿ–ವ್ಯವಹಾರ ನಡೆದು ಮಹಾಕೋಸಲದ ಮಂತ್ರಿಗಳಿಗೆ ಪದಚ್ಯುತಿಯಾಗಿ, ಡಾ|| ಖರೇಯವರ ಹೊಸ ಪ್ರಧಾನ ಮಂಡಳ ನೇಮಿಸಲ್ಪಟ್ಟಿತು। ಗವ್ಹರ್ನರರು ರಾತ್ರಿ ಹಗಲು ಮಾಡಿದ್ದು ಯಾರ ಉದ್ದಿಶ್ಯ? ಡಾ|| ಖರೇಯವರ ಉಪಕಾರಕ್ಕೋ, ರಾಷ್ಟ್ರೀಯ ಸಭೆಯ ಉಪಕಾರಕ್ಕೋ? ಕೊಂಗ್ರೆಸ ಕಾರ್ಯಕಾರಿ ಮಂಡಳ ಮತ್ತು ಪಾರ್ಲಿಮೆಂಟರಿ ಬೋರ್ಡುಗಳ ವರ್ತನ ಚೌಕಶಿ ಮಾಡಲು ನಮ್ಮ ಆಕ್ಷೇಪವಿಲ್ಲ. ನಮ್ಮ ವರ್ತನ ನಿಷೇಧಾರ್ಹವಿದ್ದರೆ, ನಮ್ಮನ್ನು ಕಿತ್ತುಹಾಕಲು ನೀವು ಅಧಿಕಾರಪಟ್ಟವರಿದ್ದೀರಿ. ಡಾ| ಖರೇಯವರಿಗೆ ಮುಖ್ಯ ಪ್ರಧಾನಪದ ಬಿಡಲು ಒಪ್ಪಿಗೆಯಿರಲಿಲ್ಲ. ೧ ವರ್ಷದ ತನಕ ಡಾ| ಖರೇಯವರು ಪಾರ್ಲಿಮೆಂಟರಿ ಬೋರ್ಡಿನ ಸಲಹೆ ಕೇಳಿ ನಡಕೊಂಡಿದ್ದುಂಟು. ಪಂಚಮಾಡಿಯಲ್ಲಿ ಒಡಂಬಡಿಕೆಯಾದದ್ದು ಎಲ್ಲ ಪ್ರಧಾನರೊಳಗೆ, ಒಡಂಬಡಿಕೆಯಂತೆ ಕಾಯಿದೆ ಮತ್ತು ವ್ಯವಸ್ಥೆ ಇಲಾಖೆಯನ್ನು ಡಾ| ಖರೇಯವರು ಬಿಟ್ಟುಕೊಡಲಿಕ್ಕೆ ಬದ್ಧರಿದ್ದರು. ಅದರಂತೆ ಅವರು ನಡಕೊಳ್ಳಲಿಲ್ಲ. ಇತರ ಪ್ರಧಾನರ ಮೇಲೆ ಆರೋಪಗಳಿದ್ದವು, ಅವನ್ನು ನಾವು ಚೌಕಶಿ ಮಾಡಿದ್ದೇವೆ, ತಪ್ಪಿದ್ದಲ್ಲಿ ಅವನ್ನು ತಿದ್ದಿಕೊಳ್ಳಬೇಕಾಗಿಯೂ ನಾವು ತಿಳಿಸಿ ಸರಿಯಾಗಿ ನಡಕೊಂಡು ಅಧಿಕಾರಿಗಳ ಆದರವನ್ನು ಸಂಪಾದಿಸಲು ಅವರಿಗೆ ಸಲಹೆ ಕೊಟ್ಟಿದ್ದೇವೆ. ಪಾರ್ಲಿಮೆಂಟರಿ ಬೋರ್ಡು ಡಾ|| ಖರೇಯವರಿಗೆ ಎಂದೂ ಹುಕುಮು ಮಾಡಲಿಲ್ಲ. ಸಹಕಾರಿ ಪ್ರಧಾನರ ವರ್ತನದ ಕುರಿತು ಸಹಕಾರಿಗಳ ಪರೋಕ್ಷ ಚೌಕಶಿ ಮಾಡಬಾರದಾಗಿ ಅವರಿಗೆ ತಿಳಿಸಿತ್ತು. ಇದಕ್ಕವರು ಒಪ್ಪಿದ್ದರು, ಆದರೆ ಅದರಂತೆ ನಡೆಯಲಿಲ್ಲ." ಆ ಮೇಲೆ ರಾ|| ಮಾನವೇಂದ್ರನಾಥ ರೊಯ್, ಆಚಾರ್ಯ ನರೇಂದ್ರ ದೇವರವರ ಭಾಷಣಗಳಾದವು. ಮಾನವೇಂದ್ರನಾಥ ರೊಯ್‌ರವರು ಪಾರ್ಲಿಮೆಂಟರಿ ಬೋರ್ಡಿನ ನಡತೆಯ ಚೌಕಶಿಯಾಗಬೇಕೆಂದರು. ಆಚಾರ್ಯ ನರೇಂದ್ರ ದೇವರವರು ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಈ ಪ್ರಕರಣದಲ್ಲಿ ಕೈಕೊಂಡ ನಿರ್ಣಯ ಯೋಗ್ಯವೆಂದರು. ಶ್ರೀ|| ರಾಜಗೋಪಾಲಾಚಾರ್ಯರವರು ನುಡಿದದ್ದೇನಂದರೆ - 'ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ರಜೆ ಕೊಡಬೇಕೆಂದು ಡಾ| ಖರೇಯವರು ಸೂಚನೆ ಮಾಡಿದ್ದರು, ನಾನು ಅದನ್ನು ಧಿಕ್ಕರಿಸಿದೆ, ಇಂಥ ಕ್ರಾಂತಿಕಾರಕ ಸೂಚನೆಗಳನ್ನು ರಾಷ್ಟ್ರೀಯ ಸಭೆಯವರು ಕೈಕೊಳ್ಳಲಿಕ್ಕಿಲ್ಲವಾಗಿ ನಾನು ಮದ್ರಾಸದ ಗವ್ಹರ್ನರರಿಗೆ ಅಭಿವಚನ ಕೊಟ್ಟ ಮೇರೆಗೆ 'ಸ್ವಾತಂತ್ರ್ಯ ದಿನ ರಜೆ ಕೊಡಬಾರದೆಂದು ಕೊಂ ಕಾ. ಮಂಡಳದ ನಿರ್ಣಯವಾಯಿತಾಗಿ ನನ್ನ ಮೇಲೆ ಡಾ|| ಖರೇಯವರ ಆರೋಪ. ಇದು ತೀರ ಸುಳ್ಳು. ಈ ಸೂಚನೆಯಲ್ಲಿ ತಥ್ಯಾಂಶವೇನೂ ಇಲ್ಲವೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳದವರು ಸ್ವತಂತ್ರ ವಿಚಾರದಿಂದ ನಿರ್ಣಯಿಸಿದ್ದಾರೆ" ಡಾ|| ಪಟ್ಟಾಭಿ ಸೀತಾರಾಮಯ್ಯನವರು ಆಕ್ಷೇಪಕರಿಗೆ ಉತ್ತರ ಕೊಟ್ಟು ರಾ| ಬಾಲಕೃಷ್ಣ ಶರ್ಮಾರವರ ಶಿಸ್ತು-ಕ್ರಮದ ಉಪಸೂಚನೆಯನ್ನು ಸ್ವೀಕರಿಸಿದ ಬಳಿಕ, ಮತಗಣನೆಯಾಗಿ ಈ ಉಪಸೂಚನೆ ಸಹಿತ ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಆ ಮೇಲೆ ಸಂಯುಕ್ತ ರಾಜ್ಯಘಟನೆಯನ್ನು ವಿರೋಧಿಸುವ ಠರಾವನ್ನು ಬಾಬು ರಾಜೇಂದ್ರ ಪ್ರಸಾದರು ಸೂಚಿಸಿದರು. ಈಗಿನ ಸಂಯುಕ್ತ ರಾಜ್ಯಘಟನೆ ನಿರರ್ಥಕವೆಂದೂ ಅದನ್ನು ಬಲಾತ್ಕಾರದಿಂದ ಹಿಂದು

(೧೦ನೇ ಪಾನಿನ ಮೇಲೆ ಮುಂದುವರಿದೆ)

ಕಾನಡಾವೃತ್ತ.

೧೨ನೇ ಬಹುಧಾನ್ಯ ಸಂವತ್ಸರ ಆಶ್ವೀನ ಶು ೧೦ಮಿ, ಸೋಮವಾರ

ಶ್ರೀ ಚಾಮುಂಡೇಶ್ವರಿಗೆ ವಿಜಯವಾಗಲಿ!

ಸನಾತನಿಗಳಿಗೆಲ್ಲ ನವರಾತ್ರಿ ಅದೊಂದು ಪವಿತ್ರವಾದ ಉತ್ಸವ। ಈವಾಗ ಲೋಕಶಕ್ತಿರೂಪಿಯಾದ ಶ್ರೀ ಪಾರ್ವತೀ ದೇವಿಯರು ಶ್ರೀ ಚಾಮುಂಡೇಶ್ವರೀ ಅವತಾರ ಧರಿಸಿ ಮಹಿಷಾಸುರ ರಾಕ್ಷಸನ ಕೊಲೆ ಮಾಡಿ ತ್ರಸ್ತ ಲೋಕಕ್ಕೆ ಸುಖವನ್ನುಂಟು ಮಾಡಿದ ಪವಿತ್ರ ಪ್ರಸಂಗದ ಸ್ಮಾರಕವಿದು. ಮಹಿಷಾಸುರ ರಾಕ್ಷಸನು ಬೇರೆ ಬೇರೆ ರೂಪಗಳನ್ನು ಧರಿಸಿ ಮೈಸೂರಿನ ಚಾಮುಂಡೇಶ್ವರೀ ಬೆಟ್ಟದ ಪ್ರದೇಶದಲ್ಲಿ ಲೋಕಕಂಟಕನಾಗಿದ್ದನೆಂದೂ ಶ್ರೀ ಪಾರ್ವತೀ ದೇವಿಯರು ಸಂಕಟಗ್ರಸ್ತರ ಆರ್ತಸ್ವರವನ್ನು ಕೇಳಿ ಚಾಮುಂಡೇಶ್ವರೀ ರೂಪವನ್ನು ಧರಿಸಿ ಮಹಿಷಾಸುರನಿಗೆ ಮರ್ದಿಸಿ ಲೋಕರಕ್ಷಣ ಮಾಡಿದರಾಗಿಯೂ ಹೇಳುತ್ತಾರೆ. ಆದರಿಂದ ಮೈಸೂರಿನಲ್ಲಿ ಪ್ರತಿವರ್ಷ ನವರಾತ್ರಿಯ ಹಬ್ಬವು ರಾಜವೈಭವದಿಂದ ನೆರವೇರುತ್ತದೆ. ಮೈಸೂರಿನ ಮಹಾಸ್ವಾಮಿಯವರು ಕುಲಸ್ವಾಮಿನಿಯಾದ ಶ್ರೀ ಚಾಮುಂಡೇಶ್ವರೀ ದೇವಿಯ ಪೂಜೆಯನ್ನು ಭಕ್ತಿಯಿಂದ ನಡಿಸಿ ದಸರೆಯ ದಿನ ರಥವನ್ನು ಸ್ವತಃ ಎಳೆಯುವ ನೋಟ ನಿಜವಾಗಿಯೂ ಅಪೂರ್ವವಾದದು। ಮಹಾಸ್ವಾಮಿಯವರ ಕುಲಪರಂಪರೆಯೇ ಹೀಗೆ। ಪೂರ್ವ ಕಾಲದಲ್ಲಿ ರಥೋತ್ಸವದ ಸಮಯ ಶ್ರೀ ಚಾಮುಂಡೇಶ್ವರೀ ದೇವಿಯ ರಥ ಎಳೆಯುತ್ತಿರುವಾಗ ರಕ್ಷಣ ರಥ ಒಂದಡೆ ನಿಂತುಹೋಯಿತೆಂದೂ, ಎಷ್ಟು ಪ್ರಯತ್ನ ಮಾಡಿದಾಗ್ಯೂ ಅದನ್ನು ಮುಂದೆ ಒಯ್ಯಲಿಕ್ಕಾಗಲಿಲ್ಲವಾಗಿಯೂ ಆ ಕಾಲದಲ್ಲಿ ಪಲ್ಲಕ್ಕಿ ಹತ್ತಿ ರಥೋತ್ಸವದಲ್ಲಿ ಸೇರಿದ ಮಹಾಸ್ವಾಮಿಯವರು ತಟ್ಟನೆ ಇಳಿದು ರಥದ ಹಗ್ಗಕ್ಕೆ ಕೈಹಚ್ಚಿದೊಡನೆ ಗರಿಯಂತೆ ಓಡಿಹೋಯಿತೆಂದೂ ಆಖ್ಯಾಯಿಕೆಯುಂಟು. ಅಂದಿನಿಂದ ಮೈಸೂರಿನ ಮಹಾಸ್ವಾಮಿಯವರು ರಥವನ್ನು ಎಳೆಯುವ ಸಂಪ್ರದಾಯ ಬಿದ್ದಿತೆಂದು ಹೇಳುತ್ತಾರೆ. ಲೋಕರಕ್ಷಕ ಶ್ರೀ ಚಾಮುಂಡೇಶ್ವರಿಯ ಮಹಿಮೆಯಿದು। ಮಹಾಸ್ವಾಮಿಯವರು ರಾಜಗೌರವವನ್ನು ತೊರೆದು ಸಾಮಾನ್ಯ ಪ್ರಜೆಗಳೊಡನೆ ಶ್ರೀ ದೇವಿಯ ಸೇವೆ ಮಾಡುವ ಸುಪ್ರಸಂಗವಿದು। ಇಂಥ ಪ್ರಸಂಗವನ್ನು ಘಟಿಸಿದ ಮಹಿಮೆಯುಳ್ಳ ಶ್ರೀ ಚಾಮುಂಡೇಶ್ವರೀ ದೇವಿಗೆ ಜಯಜಯಕಾರವಿರಲೆಂದು ನಾವು ಭಕ್ತಿಪೂರ್ವಕವಾಗಿ ಹಾರೈಸಿ ಲೋಕಕಂಟಕರು ನಾಶಹೊಂದಲೆಂದೂ, ಲೋಕರಕ್ಷಣೆಯಾಗಲೆಂದೂ ಲೋಕಸುಖವಾಗಲೆಂದೂ ಶ್ರೀ ದೇವಿಯ ಚರಣಾರವಿಂದಗಳಲ್ಲಿ ಪ್ರಾರ್ಥಿಸುತ್ತೇವೆ.

ಇಂದು ವಿಜಯಾದಶಮಿ. ವಿಜಯದ ನಿದರ್ಶಕವಾದ ಶಮೀವೃಕ್ಷದ ಪೂಜೆಯನ್ನು ಇಂದಿಗೆ ಸರ್ವರೂ ನಡಿಸಿ ಬರುವ ವರುಷ ಸರ್ವರಿಗೂ ಸಮಸ್ತ ವ್ಯಾಪಾರ-ವ್ಯವಹಾರಗಳಲ್ಲಿ ವಿಜಯವಾಗಲೆಂದೂ ಅಭಿವೃದ್ಧಿಯಾಗಲೆಂದೂ ಪ್ರಾರ್ಥಿಸಿ ಆಪ್ತೇಷ್ಟಮಿತ್ರರಿಗೆ ಶಮೀಪತ್ರಗಳನ್ನು ಹಂಚುವ ಸಂಪ್ರದಾಯವಿದೆ. ಶಮೀಪತ್ರಗಳಿಗೆ ಸುವರ್ಣವೆಂದು ಸಂಬೋಧಿಸುವದುಂಟು. ಆಪ್ತೇಷ್ಟರೊಳಗೆ ಐಕ್ಯಮತ್ಯವನ್ನೂ ಗೌರವವನ್ನೂ ಮಮತೆಯನ್ನೂ ಬೆಳೆಸುವ ಶುಭ ಪ್ರಸಂಗ ಇಂದು, ವಿಜಯಾದಶಮಿಗೆ. ಇಂಥ ಶುಭ ಸಂಪ್ರದಾಯಕ್ಕೆ ಕಾರಣವಾದ ಶ್ರೀ ಚಾಮುಂಡೇಶ್ವರೀ ದೇವಿಯವರಿಗೆ ವಿಜಯವಾಗಲೆಂದು ಈಹೊತ್ತು ಸರ್ವರೂ ಎಲ್ಲೆಲ್ಲಿಯೂ ಪ್ರಾರ್ಥಿಸುತ್ತಾರೆ.

ಸನಾತನಿಗಳು ಹೊಸ ಹೊಸ ಉಪಕ್ರಮಗಳನ್ನು ಕೈಕೊಳ್ಳುವದು ಇಂದಿನಿಂದ। ಶ್ರೀ ರಾಮದೇವರು ಸೀತಾಹರಣ ಮಾಡಿದ ಲಂಕೇಶ್ವರ ರಾವಣನ ನಾಶ ಮಾಡಲು ಹೊರಟ ಸುದಿನವು ಇಂದು। ಪ್ರತಾಪಿ ಪಾಂಡವನೆಂದು ಖ್ಯಾತಿಗೊಂಡ ಅರ್ಜುನನು ದಿಗಂತ ಕೀರ್ತಿಪದದ ಮಹಾಭಾರತ ಯುದ್ಧಕ್ಕಾಗಿ ಕುದುರೆಗಳನ್ನು ಸಜ್ಜುಗೊಳಿಸಿದ್ದು ಇದೇ ವಿಜಯಾದಶಮಿಗೆ। ಆದರಿಂದ ಇಂದು ಆಯುಧಪೂಜೆ ಮಾಡುವ ಸಂಪ್ರದಾಯ ಬಿದ್ದಿದೆ. ಶಸ್ತ್ರಾಸ್ತ್ರಗಳನ್ನೂ ಕೈಗಾರಿಕೆಯ ಆಯುಧಗಳನ್ನು ಇಂದಿಗೆ ಪೂಜೆ ಮಾಡಿ ಅವುಗಳಿಂದ ವಿಶೇಷ ಕ್ರಿಯೆಯನ್ನು ಪ್ರಾಪ್ತಿಯಾಗುವಂತೆ ಬೇಡಿಕೊಳ್ಳಲಾಗುತ್ತದೆ. ಈ ಪ್ರಕಾರ ಪ್ರತಿವರುಷ ಮಾನವನಿಗೆ ಉದ್ಧಾರಮಾರ್ಗವನ್ನು ಬೋಧಿಸುವ ಪ್ರಾಚೀನ ದಿನ ಈಹೊತ್ತು ವಿಜಯಾದಶಮಿಗೆ।

ಈ ಬಾರಿ ವಿಜಯಾದಶಮಿ ಒಳ್ಳೇ ಮಹತ್ವದ್ದಿದೆ. ಯುರೋಪ ಖಂಡದೊಳಗೆ ಯುದ್ಧದ ಕಾರ್ಮೋಡಗಳು ಕವಿಕವಿದು ನಿಂತಿವೆ. ಕಡೆಗೊಂದು ಯುದ್ಧ ಮಳೆ ಬೀಳುವದೆಂದು ಜನರಿಗೆಲ್ಲ ಭೀತಿ. ಜರ್ಮನಿಯ ಹಿಟ್ಲರನಂತೂ ಯುದ್ಧದ ಪರಿವೆ ಹಿಡಿಯದೆ, ಸುಡೆಟನ್ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಮಹತ್ವಾಕಾಂಕ್ಷೆ ಹಿಡಿದು ಇಡೀ ಲೋಕವನ್ನೇ ನಡುಗಿಸುತ್ತಿದ್ದಾನೆ. ಝೆಕ್ ಜನಾಂಗವನ್ನು ಕಾಪಾಡುವದಕ್ಕಾಗಿ ಝೆಕ್ ಲೋಕಶಾಹಿ ಸರಕಾರದ ಪ್ರಮುಖರಿಂದ ಡಾ|| ಬೇನ್ಸರವರು ಪರಮಾವಧಿಯ ಪ್ರಯತ್ನ ಪಡುತ್ತಿದ್ದಾರೆ. ಯುದ್ಧದಿಂದ ಸುಖವಿಲ್ಲ, ಅದನ್ನು ಕೈಕೊಳ್ಳುವದು ಕ್ಷೇಮಕರವಲ್ಲ, ಎಷ್ಟಕ್ಕೂ ಬಲಾತ್ಕಾರಕ್ಕೀಡಾಗಬೇಡಿ, ತಾಳ್ಮೆ! ತಾಳ್ಮೆ!! ತಾಳ್ಮೆ!!!" ಎಂದು ಹಿಟ್ಲರರಿಗೆ ಎಲ್ಲರೂ ಮುಂಜಾಗ್ರತೆ ಕೊಡುತ್ತಿದ್ದಾರೆ. ಯುದ್ಧಪ್ರಾಪ್ತವಾಗಿದರೆ ಲೋಕಶಾಹಿಯ ಪುರಸ್ಕರ್ತರು ಹಿಟ್ಲರರಿಗೆ ಎದುರಾಗಬೇಕಾದೀತೆಂದೂ ತಿಳಿಸಲಾಗುತ್ತದೆ. ವಿಜಯಾದಶಮಿಯ ಸಮಯದಲ್ಲಿಯೇ ಈ ಯೋಗ ಕೂಡಿಬಂದಿದೆ. ವಿಜಯಾದಶಮಿಯ ಪೂರ್ವರಂಗವನ್ನು ವಿಚಾರ ಮಾಡಿದರೆ, ಲೋಕಕಂಟಕರಿಗೆ ಕ್ಷೇಮವಿಲ್ಲವೆಂದೇ ಯಾರೂ ಭಾವಿಸುವದು ಸಹಜ. ಮಹಿಷಾಸುರನು ತರತರದ ಬಲಾತ್ಕಾರಗಳನ್ನೂ ಪೀಡನೆಗಳನ್ನೂ ನಡಿಸಿ ಮದೋನ್ಮತ್ತನಾದಾಗ್ಯೂ, ಕೊನೆಗೆ ಆತನು ಪಾರ್ವತೀ ದೇವಿಯರಿಂದ ಹತನಾದನು. ಲೋಕಕಂಟಕರಿಗೆ ಶಾಸನವಾಗಲಿಕ್ಕೇ ಬೇಕು, ಅವರಿಗೆಂದೂ ಕ್ಷೇಮವಿಲ್ಲ। "ಎಂಬ ಸದ್ಬೋಧೆಯನ್ನು ನವರಾತ್ರಿಯ ಉತ್ಸವದಿಂದ ನಾವು ಕಲಿಯಬೇಕು ಮತ್ತು ಆ ಪಾರಕ್ಕೆ ಚಿತವಾಗಿ ನಮ್ಮ ನಡಾವಳಿಯನ್ನು ಮಾರ್ಪಡಿಸಿಕೊಳ್ಳಬೇಕು, ಎಂಬ ಉದ್ದೇಶದಿಂದಲೇ ಶ್ರೀ ಪಾರ್ವತೀ ದೇವಿಯರು ಶ್ರೀ ಚಾಮುಂಡೇಶ್ವರೀ ರೂಪವನ್ನು ಧರಿಸಿ ಕೊಬ್ಬಿದ ಮಹಿಷಾಸುರನಿಗೆ ಮರ್ದಿಸಿದುದು! ಜನರು ಲೋಕಕಂಟಕವ್ಯಾಪಾರಗಳನ್ನು ತಾವಾಗಿಯೇ ವಿಚಾರದಿಂದ ತೊರೆದು ಲೋಕೋಪಕಾರನಿರತರಾಗಬೇಕೆಂಬುದೇ ಶ್ರೀ ಪಾರ್ವತೀದೇವಿಯರ ಅವತಾರಕಾರ್ಯ। ಲೋಕಕಂಟಕತನ ಯಾವದೊಂದು ವ್ಯಕ್ತಿಗೆ ನಿಯಂತ್ರಿತವಾಗಿಲ್ಲ, ಅದೊಂದು ವ್ಯಕ್ತಿಯಲ್ಲಿರುವ ಗುಣ, ದುರ್ಗುಣ, ದುರಾಶೆ! ಆ ದುರಾಶೆಯನ್ನು ಬುದ್ಧಿಪೂರ್ವಕವಾಗಿ ಜನರು ತ್ಯಜಿಸಿ ಸದ್ಗುಣಗಳನ್ನೂ ಸತ್ಪ್ರೇರಣೆಗಳನ್ನೂ ಸಂಗ್ರಹಿಸಬೇಕೆಂದು ಶ್ರೀ ಮಹಿಷಾಸುರಮರ್ದಿನಿಯು ಬೋಧಿಸುತ್ತಾಳೆ. ನಮ್ಮ ಜಡ ದೇಹದೊಳಗೆ ಸಾಧುಗುಣಗಳಿವೆ, ರಾಕ್ಷಸ ಗುಣಗಳಿವೆ, ರಾಕ್ಷಸ ಗುಣಗಳನ್ನು ನಷ್ಟಪಡಿಸಿಕೊಂಡು ಸಾಧು ಗುಣಗಳ ವಿಕಾಸ ಮಾಡಿಕೊಳ್ಳಲು ಈಹೊತ್ತಿನಿಂದ ನಿರ್ಧಾರ ಮಾಡಿಕೊಂಡು ಲೋಕದೊಳಗೆ ವಿಜಯಶಾಲಿಯಾಗಬೇಕೆಂದು ವಿಜಯಾದಶಮಿಯು ನಮಗೆ ಬೋಧಿಸುತ್ತದೆ। ಯಾಕೆಂದರೆ, ದೇಹದೊಳಗೆ ಮನೆಮಾಡಿಕೊಂಡಿರುವ ದುರ್ಗುಣಗಳಿಗೆ ಚೇತನ ಕೊಡುವ ಇಂದ್ರಿಯಗಳನ್ನು ಜಯಿಸಿದವನೇ ಲೋಕವನ್ನು ಜಯಿಸಬಲ್ಲನು। ವಿಜಯಾದಶಮಿಯ ಸುಮುಹೂರ್ತದಲ್ಲಿ ಪ್ರತಿಯೊಬ್ಬರೂ ಆತ್ಮಶುದ್ಧಿಗಾಗಿ, ಆತ್ಮವಿಕಾಸಕ್ಕಾಗಿ ಸತತೋದ್ಯೋಗ ಮಾಡುವ ಘೋರ ನಿರ್ಧಾರ ಮಾಡಬೇಕು, ಅಂದರೆ ಮಾತ್ರ ನವರಾತ್ರಿಯ ವ್ರತವು ಸಾರ್ಥಕವಾಗಬಲ್ಲದು.

ಈವಾಗ ಹಿಂದದೇಶವು ಒಳ್ಳೇ ಇಕ್ಕಟ್ಟಿನಲ್ಲಿ ಸಿಲುಕಿ ಪೇಚಾಡುತ್ತಿದೆ. ಹಿಂದುಸ್ಥಾನವು ಕೈಕೊಂಡ ಸ್ವಾತಂತ್ರ್ಯ ಸಂಗ್ರಾಮವು ಇನ್ನೂ ಪೂರ್ತಿಯಾಗಿಲ್ಲ. ದಿನಗಳೆದ ಹಾಗೆ ಅದು ಭೀಕರವಾಗುತ್ತ ನಡೆದಿದೆ. ಸತ್ಯ-ಅಹಿಂಸೆಗಳ ಆಶ್ರಯದಿಂದ ನಡೆದ ಈ ಸಂಗ್ರಾಮದ ಸತ್ವಪರೀಕ್ಷೆ ಈಗ, ಇದೀಗ! ಯುರೋಪ ಖಂಡದೊಳಗೆ ಹಿಂಸಾಪ್ರೇರಿತ ಸಾಮ್ರಾಜ್ಯವಾದಿ ಮಹತ್ವಾಕಾಂಕ್ಷಿಗಳು ಸ್ವಂತ ಹೆಚ್ಚಳಕ್ಕಾಗಿ ಹೋರಾಡುತ್ತಿರುವಾಗ ಹಿಂದುಸ್ಥಾನವು ಯಾವ ಪ್ರಕಾರದಿಂದ ವರ್ತಿಸಬೇಕೆಂದು ನಾವೀಗ ನಿರ್ಣಯಿಸುವ ಸಮಯವಿದು. ಲೋಕಕಂಟಕರ ಪಾರುಪತ್ಯವಾಗಬೇಕು, ತ್ರಸ್ತ ಜನಾಂಗಗಳ ಲೋಕರಕ್ಷಣೆಯಾಗಬೇಕು, ಇಂಥ ಪ್ರಸಕ್ತಿಯಲ್ಲಿ ನಮ್ಮಲ್ಲಿ ಮನೆಮಾಡಿಕೊಂಡಿರುವ ಲೋಕಕಂಟಕ ಪ್ರವೃತ್ತಿಯನ್ನು ಬುದ್ಧಿಪೂರ್ವಕವಾಗಿ ತೊರೆದು ನಾವು ನಿರ್ಮಲಚಿತ್ತರಾಗತಕ್ಕದ್ದು. ನಿರ್ಮಲಚಿತ್ತರಾದನಂತರ ನಮಗೆ ತಕ್ಕ ದಾರಿ ತೋರಬಹುದು, ರಾಷ್ಟ್ರೀಯ ಸಭೆಯವರ ಮೇಲೆ ಹೆಚ್ಚಿನ ಜೋಕಾಬದಾರಿಕೆಯುಂಟು. ರಾಷ್ಟ್ರೀಯ ಸಭೆಯವರು ಲೋಕಶಾಂತಿಯ ಪುರಸ್ಕರ್ತರು. ಆದರಿಂದ ಕಾಂಗ್ರೆಸ ಕಾರ್ಯಕಾರಿ ಮಂಡಳದವರು ಹಿಂದುಸ್ಥಾನದ ಧೋರಣವನ್ನು ನಿರ್ಧರಿಸಲೋಸುಗ ದಿಲ್ಲಿಯೊಳಗೆ ಆಲೋಚನೆ ಮಾಡುತ್ತಲಿದ್ದಾರೆ. ಶ್ರೀ ಚಾಮುಂಡೇಶ್ವರೀ ದೇವಿಯು ಅವರಿಗೂ ಹಿಟ್ಲರ ಪ್ರಭೃತಿ ಲೋಕಪ್ರಭುಗಳಿಗೂ ಅನುಗ್ರಹಿಸಿ ಹಿಂಸಾಚಾರದಿಂದ ಕ್ಷೇಮವಿಲ್ಲವೆಂದು ಪ್ರೇರೇಪಿಸಿ, ಲೋಕರಕ್ಷಣೆಯ ಕಾರ್ಯವನ್ನು ನೆರವೇರಿಸಿಕೊಳ್ಳಲೆಂದು ಪ್ರಾರ್ಥಿಸಿ ಶ್ರೀ ಚಾಮುಂಡೇಶ್ವರೀ ದೇವಿಯರಿಗೆ ಜಯವಾಗಲೆಂದು ಪುನಃ ಘೋಷಿಸುವೆವು.

ಸದ್ಯಕ್ಕೆ ಯುದ್ಧ ತಡೆಯಿತು !

[ನಿರೀಕ್ಷಕನು ಬರೆದುದು]

ಯುದ್ಧಯೋಗ ದಾಟಿಹೋಯಿತೋ ಏನೋ ನಾ ಹೇಳಲಾರೆ ಅಂತು ಸದ್ಯಕ್ಕೆ ಯುದ್ಧ ತಡೆದಂತೆಯೇ ಸೈ ! ಹಿಟ್ಲರರು ಸುಡೆಟನ್‌ಜರ್ಮನ್ ಪ್ರದೇಶವನ್ನು ಮೊನ್ನೆ ಶನಿವಾರದೊಳಗೆ ಆಕ್ರಮಿಸಿ ಬಿಡುವೆವೆಂದು ಹಟ ತೊಟ್ಟಿದ್ದರಷ್ಟೇ ! ಅದಕ್ಕಾಗಿ ಝೆಕ್ ಗಡಿನಾಡಿನಲ್ಲಿ ಜರ್ಮನ್‌ಸೈನ್ಯ ಸಜ್ಜಾಗಿ ನಿಂತಿತ್ತು ಯುದ್ಧಸ್ಫೋಟವಾಗುವದೆಂದು ಎಲ್ಲರೂ ಹೌಹಾರಿದ್ದರು ಬ್ರಿಟಿಶ ಮುಖ್ಯ ಪ್ರಧಾನರಾದ ಮಿ|| ಚೆಂಬರಲೇನರವರು ದೂತರನ್ನು ಕಳುಹಿ ಹಿಟ್ಲರರಿಗೆ ೨೪ ತಾಸುಗಳ ತನಕ ಕೈತಡೆಯಹೇಳಿದರು ಅದರಂತೆ ಹಿಟ್ಲರರು ಕೈತಡೆದು ಮ್ಯುನಿಚ್ ಪಟ್ಟಣದಲ್ಲಿ ನಾಲ್ಕು ಬಲಾಢ್ಯ ಜನಾಂಗಗಳ ಪರಿಷತ್ತನ್ನು ನೆರಿಸಿದರು ಇಟಾಲಿಯ ಮುಸೂಲಿನಿ, ಫ್ರಾನ್ಸದ ಮುಖ್ಯ ಪ್ರಧಾನರಾದ ಡಿಲೆಡೆರ್, ಬ್ರಿಟಿಶ ಮುಖ್ಯ ಪ್ರಧಾನರಾದ ಚೆಂಬರಲೇನ ಮತ್ತು ಜರ್ಮನಿಯ ಹಿಟ್ಲರರು ಕೂಡಿ ಮ್ಯುನಿಚ್ ಪಟ್ಟಣದಲ್ಲಿ ದೀರ್ಘಾಲೋಚನೆ ಮಾಡಿದರು ಈ ಸಭೆಗಾಗಿ ಬ್ರಿಟಿಶ ಮುಖ್ಯಪ್ರಧಾನರಾದ ಮಿ|ಚೆಂಬರಲೇನರವರು ಬುಧವಾರದ ಪಾರ್ಲಿಮೆಂಟಿನ ಕಾರ್ಯ ಮುಗಿಸಿಕೊಂಡು ಮರುದಿನ ಗುರುವಾರ ವಿಮಾನ ಮಾರ್ಗವಾಗಿ ಮ್ಯುನಿಚ್ ಪಟ್ಟಣಕ್ಕೆ ತೆರಳಿದರು ಡಿಲೆಡೆರ್‌ರವರೂ ಪಾರೀಸ ಪಟ್ಟಣದಿಂದ ವಿಮಾನ ಮಾರ್ಗವಾಗಿ ಮ್ಯುನಿಚ್ ಪಟ್ಟಣಕ್ಕೆ ಹೋಗಿದರು. ಮುಸೊಲಿನಿಯವರನ್ನು ಕರತರಲು ಸ್ವತಃ ಹಿಟ್ಲರರೇ ಜರ್ಮನ್ ಸೀಮೆಯ ಕುಫ್‌ಸ್ಟೀನ ಸ್ಟೇಶನಿಗೆ ಹೋಗಿ ತಮ್ಮ ಸ್ಪೆಶಲ್ ಉಗಿಬಂಡಿಯಲ್ಲಿ ಮುಸೂಲಿನಿಯವರನ್ನು ಕರತಂದರು ಸರಿಯಾಗಿ ಮಧ್ಯಾಹ್ನ ೧೨|| ಘಂಟೆಗೆ ನಾಲ್ವರೂ ಆಲೋಚನೆ ಮಾಡತೊಡಗಿದರು. ೨|| ಘಂಟೆಯ ತನಕ ಪ್ರಾಸ್ತಾವಿಕ ಚರ್ಚೆಯಾಯಿತಂತೆ ಆಮೇಲೆ ಕೆಲ ಹೊತ್ತು ವಿಶ್ರಮಿಸಿ, ಪುನಃ ೪|| ಘಂಟೆಗೆ ನಾಲ್ವರೂ ಸಭೆಸೇರಿದರು ರಾತ್ರಿ ೮|| ಘಂಟೆಯ ತನಕ ಪುನಃ ಚರ್ಚೆ ನಡೆಯಿತು ನಾಲ್ವರೂ ಹಿಟ್ಲರರಲ್ಲಿಯೇ ಭೋಜನ ಮಾಡಿದರು ಪುನಃ ರಾತ್ರಿ ೧೦ ಘಂಟೆಗೆ ಸಭೆಯಾಗಿ ಬೆಳಗಿನ ೧|| ಘಂಟೆಗೆ ಸುಡೆಟನ್ ಪ್ರದೇಶವನ್ನು ಹಿಟ್ಲರರಿಗೆ ಒಪ್ಪಿಸಬೇಕೆಂದು ನಿರ್ಣಯವಾಯಿತು ಆ ನಿರ್ಣಯಕ್ಕೆ ಒಪ್ಪಬೇಕಾಗಿ ಝೆಕ್ ಸರಕಾರಕ್ಕೆ ತಿಳಿಸಲಾಯಿತು ಬ್ರಿಟಿಶ-ಫ್ರೆಂಚರು ಕೂಡಿ ಮಾಡಿದ ನಿರ್ಣಯವನ್ನು ಝೆಕ್ ಸರಕಾರಕ್ಕೆ ಉಲ್ಲಂಘಿಸಲು ಉಪಾಯವಿರಲಿಲ್ಲ ಝೆಕ್ ಸರಕಾರವು ಒಪ್ಪಿಗೆ ಕೊಟ್ಟಿರುವದಾಗಿ ಚೆಂಬರಲೇನರಿಗೆ ತಿಳಿಸಲಾಯಿತು ಯಾವ ಯಾವ ಪ್ರದೇಶಗಳನ್ನು ಹೇಗೆ ಹೇಗೆ ಒಪ್ಪಿಸಬೇಕೆಂಬದರ ಕುರಿತು ನಿಯಮಗಳಾಗಲಿಕ್ಕಿವೆ ಆ ನಿಯಮಗಳು ಇನ್ನೊಂದು ವಾರದಲ್ಲಿ ತಯಾರಾಗುವವು ಆ ನಿಯಮದಂತೆ ಸುಡೆಟನ್ ಪ್ರದೇಶವನ್ನು ಹಿಟ್ಲರರಿಗೆ ಒಪ್ಪಿಸಬೇಕೆಂದು ಗೊತ್ತಾಗಿ ಝೆಕ್ ಸರಕಾರವು ನಿರ್ಣಯವನ್ನು ಮನ್ನಿಸಿತೆಂಬ ಪ್ರಕಟಣೆ ಹೊರಟಿದೆ ಹಿಟ್ಲರರು ತಮ್ಮ ನಿರ್ಧಾರವನ್ನು ಸಾಧಿಸಿಕೊಂಡ ಬಗ್ಗೆ ಬರ್ಲಿನ್‌ದಲ್ಲಿ ವಿಜಯೋತ್ಸವಗಳಾಗುತ್ತಿವೆ ಹಿಟ್ಲರನು ವಿಜಯಶಾಲಿಯೆಂಬುದು ನಿಃಸಂದೇಹವಾದದ್ದು, ಆತನ ಸಾಹಸಕ್ಕೆ ನಾನು ಮೆಚ್ಚಿದೆ ! ವೀರಶ್ರೀಯಿಂದ ಆತನು ಲೋಕವನ್ನೇ ನಡುಗಿಸಿ ತನ್ನ ಕಾರ್ಯ ಸಾಧಿಸುತ್ತಿದ್ದಾನೆ ತನ್ನ ಕಾರ್ಯ ಸಾಧನೆಯ ಅಡ್ಡ ಬರುವ ಇಡೀ ಲೋಕಕ್ಕೆ ದಿಟ್ಟಾಗಿ ಹೋರಾಡಲು ಆತನು ಒಗ್ಗಾಲಿನ ಮೇಲೆ ಸಿದ್ಧನು ! ಇಂಥ ವೀರನಿಗೆ, ಸಾಹಸಿಗನಿಗೆ, ಧೈರ್ಯಶಾಲಿಗೆ, ನಿರ್ಭಯನಿಗೆ, ನಿರ್ಧಾರ ಪುರುಷನಿಗೆ ಜಯವಾದರೆ ಆಶ್ಚರ್ಯ ಏನು ! ಸುಡೆಟನ್ ಪ್ರದೇಶ ಕೊಟ್ಟಲ್ಲಿ ಯುರೋಪ ಖಂಡದಲ್ಲಿ ತನಗೆ ಇನ್ನೇನೂ ಬೇಡವೆಂದು ಹಿಟ್ಲರನು ಚೆಂಬರಲೇನರಿಗೆ ವಚನಕೊಟ್ಟಿದ್ದಾನಂತೆ! ಆದರಿಂದ ಚೆಂಬರಲೇನರು ಝೆಕ್ ಸರಕಾರಕ್ಕೆ ಸುಡಟನ್ ಪ್ರದೇಶದ ತ್ಯಾಗ ಮಾಡಹಚ್ಚಿ, ಲೋಕವನ್ನು ಮಹಾಯುದ್ಧದ ಆಪತ್ತಿನಿಂದ ಕಾಯುವ ಪರಸ್ಪರ ಸಹಕಾರವನ್ನು ಒದಗಿಸಿತೆಂದಿದ್ದಾರೆ ಆದರಿಂದ ಸದ್ಯಕ್ಕೆ ಯುದ್ಧ ತಡದು ನಿಂತಿದೆ. ಜರ್ಮನ್-ಪ್ರಧಾನ ಲೋಕಸಂಖ್ಯೆಯುಳ್ಳ ಪ್ರದೇಶಗಳು ಜರ್ಮನಿಗೆ ಒಪ್ಪಿಸಲ್ಪಡುವವು ಬ್ರಿಟಿಶ-ಫ್ರೆಂಚರ ಆಶ್ರಯದಲ್ಲಿಯೇ ಈ ಕಾರ್ಯ ನಡೆಯುವದು ಆದರೆ ಇದರಿಂದ ಅಲ್ಲಿಯ ಪರಿಸ್ಥಿತಿ ಸುಧಾರಿಸಿತೆಂದು ನಾವು ತಿಳಿಯಲಾರೆ ಝೆಕ್ ಜನಾಂಗವನ್ನು ಸಂಪೂರ್ಣವಾಗಿ ನಾಶ ಮಾಡಬೇಕೆಂದು ಹಿಟ್ಲರರು ಪಣ ತೊಟ್ಟಿದ್ದಾರೆ ಝೆಕೊಸ್ಲೊವಾಕಿಯಾ ಜನಾಂಗದ ಅಸ್ತಿತ್ವವನ್ನೇ ಹಿಟ್ಲರರು ಅಲ್ಲಗಳೆಯುತ್ತಾರೆ ಹಿಟ್ಲರರ ಪ್ರೇರಣೆಯಿಂದಲೇ ಪೋಲಂಡ ಸರಕಾರವು ಪೋಲ-ಪ್ರಧಾನ ಪ್ರದೇಶವನ್ನು ತನಗೆ ಇದೇ ತಾ ೧೦ರೊಳಗೆ ಒಪ್ಪಿಸಬೇಕಾಗಿ ಝೆಕ್ ಸರಕಾರಕ್ಕೆ ಆಜ್ಞೆ ಕೊಟ್ಟಿದೆ. ಮ್ಯುನಿಚ್‌ದೊಳಗಿನ ಒಪ್ಪಂದದಿಂದ ತಾವು ಒಡ್ಡರಲ್ಲವಾಗಿಯೂ ಸುಡೆಟನ್ ಪ್ರದೇಶವನ್ನು ವಜಾ ಮಾಡಿ ಉಳಿದ ಪ್ರದೇಶವನ್ನು ಝೆಕೊಸ್ಲೊವಾಕಿಯಾ ಜನಾಂಗವೆಂದು ಮನ್ನಿಸಲಿಕ್ಕೆ ತಾವು ಸಿದ್ಧರಿಲ್ಲವಾಗಿಯೂ ಪೋಲಂಡ ಸರಕಾರದ ನಿರ್ಧಾರ ! ಅಂತೆಯೇ ಹಂಗೇರಿಯ ಸರಕಾರವೂ ಹಂಗೇರಿಯನ್‌ರಿದ್ದ ಭಾಗವನ್ನು ತನಗೊಪ್ಪಿಸಲು ಕೇಳಿಕೊಂಡಿದೆ. ಹೀಗೆಲ್ಲ ಝೆಕ್ ಜನಾಂಗದ ಮೇಲೆ ದಾಳಿ ಬಂದಾಗ ಝೆಕ್ ಸರಕಾರವು ಹೇಗೆ ನಡಕೊಳ್ಳುವದೆಂದು ತಿಳಿಯಲು ನಾನು ಕುತೂಹಲಪಡುತ್ತೇನೆ ಅದನ್ನು ರಕ್ಷಿಸಲು ಬ್ರಿಟಿಶ-ಫ್ರೆಂಚರು ಯಾವ ಉಪಾಯ ಮಾಡುತ್ತಾರೆಂದು ನನಗೆ ತಿಳಿಯದಾಗಿದೆ ಝೆಕ್ ಸರಕಾರವು ಉಭಯ ಸಂಕಟದಲ್ಲಿ ಸಿಲುಕಿ ಪೇಚಾಡುತ್ತಿದೆ ಬ್ರಿಟಿಶ-ಫ್ರೆಂಚರಿಗೆ ಅವಮಾನ್ಯ ಮಾಡಲು ಆದಕ್ಕು ಬಾಯುವಿಲ್ಲ, ಮನ್ನಿಸಹೋದರೆ ಉಳಿಗಾಲವಿಲ್ಲ ! ಇಂಥ ರಾಜನೀತಿಯಲ್ಲಿ ಅಲ್ಲಿಯ ಪರಿಸ್ಥಿತಿ ಜೇಡಿಕಾಲಿ ಹೊಡೆಯುತ್ತಿದೆ ಪೋಲಂಡದ ಸೈನಿಕರು ಝೆಕೊಸ್ಲೊವಾಕಿಯಾದ ಟೆಶೆನ್ ನಗರವನ್ನು ನಿನ್ನೆ ಮುತ್ತುವ ಸಕಲ ಸಿದ್ಧತೆಗಳನ್ನು ನಡಿಸಿದ್ದರು ಆದೇನಾಯಿತೆಂದು ನನಗೆ ತಿಳಿಯಲಿಲ್ಲ ಬ್ರಿಟಿಶ ಪ್ರಧಾನ ಮಂಡಳದಲ್ಲಿಯೂ ಒಮ್ಮತವಿಲ್ಲ ನೌಕಾ ಇಲಾಖೆಯ ಮಂತ್ರಿಗಳಾದ ಮಿ|| ಡಫ್‌ಕೂಪರರವರು ಚೆಂಬರಲೇನರವರ ವಿದೇಶ ಧೋರಣವನ್ನು ನಿಷೇಧಿಸಿ ಮೊನ್ನೆ ಶನಿವಾರ ರಾಜೀನಾಮೆ ಕೊಟ್ಟಿದ್ದಾರೆ ಇನ್ನೂ ಕೆಲ ಮಂತ್ರಿಗಳಿಗೂ ಈಗಿನ ವಿದೇಶ ಧೋರಣ ಅಸಮ್ಮತವಂತೆ ! ಅವರೇನು ಮಾಡುತ್ತಾರೆಂದು ನೋಡಬೇಕು ! ಮುಂಬಯಿ 'ಟೈಮ್ಸ' ಪತ್ರಿಕೆಯ ಹಿಂದಿನ ಸಂಪಾದಕರಾದ ಸರ್ ಸ್ಟೆನ್‌ಲೇ ರೀಡರವರು ಈವಾಗ ಪಾರ್ಲಿಮೆಂಟಿನ ಸಭಾಸದರಿದ್ದಾರೆ ಬುಧವಾರ ಪಾರ್ಲಿಮೆಂಟಿನ ಸಭೆಯಲ್ಲಿ ಮುಖ್ಯ ಪ್ರಧಾನ ಚೆಂಬರಲೇನರವರು ಯುರೋಪ ಖಂಡದೊಳಗಿನ ಪರಿಸ್ಥಿತಿಯನ್ನು ವಿವರಿಸುವಾಗ ಅವರು ಹಾಜರಿದ್ದರು "ಇನ್ನೂ ನಾವು ಬೆಟ್ಟದೊಳಗಿಂದ ಪಾರಾಗಲಿಲ್ಲವಾಗಿಯೂ ನಿಬಿಡಾರಣ್ಯದಲ್ಲಿ ಚಿಕ್ಕದೊಂದು ದಾರಿ ಕಾಣುತ್ತದಾಗಿ" ಯೂ ಅವರು ಮುಂಬಯಿಯ 'ಟೈಮ್ಸ' ಕರ್ತರಿಗೆ ತಂತಿಯಿಂದ ತಿಳಿಸಿದ್ದಾರೆ (We are not out of the wood but we see just a gap in the impenetrable forest) ಹೀಗೆ ಗಡಿಬಿಡಿ ನಡೆಯುತ್ತಿರುವಾಗ, ಇದರ ಫಲಿತಾಂಶವೇನಾದೀತೆಂದು ಇದೀಗಲೇ ಹೇಳುವದು ಕಠಿಣ ಸಂಧಿಯಾದರಾಗ್ಯೂ ಯುದ್ಧ ಸಿದ್ಧತೆ ನಡೆದೇ ಇದೆ. ಬ್ರಿಟನ್‌ದೇಶದೊಳಗೆ ಸೈನ್ಯ ಪಥಕಗಳ ತಯಾರಿ ಭವಿಷ್ಯದ ಯುದ್ಧವನ್ನೇ ಗುರಿಯಾಗಿಟ್ಟುಕೊಂಡು ನಡೆದಿರುವದಾಗಿ ಸುದ್ದಿಗಾರರು ಹೇಳುತ್ತಾರೆ ಗುರುವಾರ ಸಂಜೆ ಮುಂಬಯಿ ಗವ್ಹರ್ನರರಿಗೂ ಗೃಹಮಂತ್ರಿಗಳಾದ ನಾ|| ಮುನಶಿಯವರಿಗೂ ಯುದ್ಧಪ್ರಸಕ್ತಿಯಲ್ಲಿ ಕೈಕೊಳ್ಳಬೇಕಾದ ಉಪಾಯಗಳ ಚರ್ಚೆಯಾಯಿತಂತೆ ! ಕಲಕತ್ತೆಯೊಳಗಿನ ವಾಹನ ಇಲಾಖೆಯವರು ಸೈನ್ಯದಲ್ಲಿ ಸೇರಬಯಸುವ ಮೋಟರ ಡ್ರಾಯ್ವ್ಹರರ ಯಾದಿ ತಯಾರಿಸುತ್ತಿದ್ದಾರಾಗಿ ಕಲಕತ್ತೆಯ 'ಸ್ಟೇಟ್ಸ್‌ಮನ್' ಪತ್ರಕರ್ತರು ಪ್ರಕಟಿಸುತ್ತಾರೆ. ಯುದ್ಧವಾದರೆ, ಸೈನ್ಯಭರತಿಗೆ ವಿಳಂಬವಾಗಬಾರದೆಂದು ಈ ಮುಂಜಾಗ್ರತೆ ಕೊಳ್ಳಲಾಗುತ್ತದಂತೆ ! ಬಂಗಾಲದ ಗವ್ಹರ್ನರರು ಗುರುವಾರವೇ ಪ್ರಧಾನ ಮಂಡಳದೊಡನೆ ಯುದ್ಧಕಾಲದಲ್ಲಿ ಬಂಗಾಲ ಇಲಾಖೆಯೊಳಗೆ ಕೈಕೊಳ್ಳಬೇಕಾದ ಉಪಾಯಗಳ ಕುರಿತು ಚರ್ಚೆ ಮಾಡಿದರಾಗಿ ಪ್ರಕಟವಾಗಿದೆ. ಸೈನಿಕರೂ ಸೈನ್ಯಾಧಿಕಾರಿಗಳೂ ರಜೆ ಪಡಕೊಂಡು ಹಿಂದುಸ್ಥಾನದ ಹೊರಹೋಗಬಾರದೆಂಗಿಯೂ, ಹುಕುಮು ಹೊರಟ ೪೮ ತಾಸುಗಳಲ್ಲಿ ಸೈನ್ಯದಲ್ಲಿ ಹಾಜರಾಗುವಂತೆ ಹಿಂದುಸ್ಥಾನಸರಕಾರವು ಏರ್ಪಡಿಸಿರುವದಾಗಿಯೂ ತಿಳಿಯುತ್ತದೆ ಯುದ್ಧಹಡಗಗಳಿಗೆ ವಾಡಿಕೆಯಾಗಿ ಬಿಳೇ ಬಣ್ಣ ಹಚ್ಚುತ್ತಾರು ಯುದ್ಧಕಾಲದಲ್ಲಿ ಮಾತ್ರ ಬೂದಿಬಣ್ಣ ಹಚ್ಚುತ್ತಾರೆ, ಈವಾಗ ಮುಂಬಯಿಯೊಳಗಿನ ಹಡಗುಪಡೆಗಳಿಗೆ ಬೂದಿಬಣ್ಣದ ಲೇಪ ನಡೆದದಾಗಿ ಪ್ರಕಟವಾಗಿದೆ ! ಆದಾಗ್ಯೂ ಯುದ್ಧವಾದರೆ ಮುಂಬಯಿಗೆ ಭಯವಿಲ್ಲ, ಹಿಂದುಸ್ಥಾನಕ್ಕೂ ಭಯವಿಲ್ಲ, ಇದೊಂದು ಸ್ವಾಗತ ವಿಷಯ, ಹೀಗೆ ಸುದ್ದಿಗಾರರು ಒದರುತ್ತಾರೆ ! ಯುದ್ಧನಿರ್ಧಾರವಾದ್ದಲ್ಲಿ ಮಹಾತ್ಮರೊಡನೆ ಬ್ರಿಟಿಶ ಸರಕಾರವು ರಾಷ್ಟ್ರೀಯ ಸಭೆಯ ಸಹಕಾರವನ್ನಪೇಕ್ಷಿಸಿ ಒಡಂಬಡಿಕೆಯ ಪ್ರಸ್ತಾಪ ನಡಿಸಬಹುದೆಂದು ಮುಂಬಯಿಯ 'ಟೈಮ್ಸ' ಪತ್ರಿಕಾಕರ್ತರು ಗ್ರಹಿಸುತ್ತಾರೆ ತಕ್ಕಮಟ್ಟಿಗೆ ಸರಕಾರದ ಅಂತರಂಗ ಮುಂಬಯಿಯ 'ಟೈಮ್ಸ' ಪತ್ರಿಕೆಯಲ್ಲಿ ಪ್ರತಿಬಿಂಬಿತವಾಗುತ್ತದಾಗಿ ನಾನು ಹೇಳಬಲ್ಲೆ ! ಇಷ್ಟೆಲ್ಲ ಒಳಕಾರಸ್ಥಾನಗಳು ನಡೆಯುತ್ತಿರುವಾಗ, ಯುದ್ಧ ಯೋಗ ದಾಟಿತೆಂದು ನಾನು ಯಾವ ಧೈರ್ಯದಿಂದ ಹೇಳಲಿ ? ಸದ್ಯಕ್ಕೆ ಯುದ್ಧ ತಡೆದಿದೆ, ಎಂದಿಷ್ಟು ಹೇಳಬಲ್ಲೆ

ಸ್ಥಾನಿಕ ವೃತ್ತಾಂತ.

ಕುಮಟಾ— ಹಸ್ತಾ ನಕ್ಷತ್ರದ ಮಳೆ ಅನ್ಯ [illegible] ತ್ರದ ಮಳೆಯಂತೆ ಬೀಳುತ್ತಿದೆ! ಕಳೆದ ಬುಧವಾರದಿಂದ ವಿಪರೀತ ಮಳೆ, ಜೊತೆಗೆ ಅಬ್ಬರದ ಗಾಳಿಯಿಂದ ಬತ್ತಿ ಹೋದ ಹೊಳೆ ಹಳ್ಳಗಳೆಲ್ಲ ಹರಿಯುತ್ತಿವೆ! [illegible] ದಾವೆಗುಂಟ ಭಯಂಕರ ತುಫಾನು ಬದವ [illegible] ತ್ರೆಗೆ ಇಷ್ಟ ಕಾಳಿ ಮುಂಬಯಿಯಿಂದ ದಯಾನತಿ [illegible] ಬರ ಪದಿತ್ತು ಆದರೆ ಇಲ್ಲ ಎಂದರೆ [illegible] ಪ್ರದವಿರುತ್ತದೆ [illegible], ಇಲ್ಲಿಯ ವ್ಯಾಪಾರಿಕರನ್ನು ಕಾರವಾರದಲ್ಲಿ [illegible] ಉಗಿಹಡಗ [illegible] ಇಲ್ಲಿಯ ಪ್ರತಿನಿಧಿಗಳು ದಯಾನತಿಯ ಕಪ್ತಾನರಿಗೆ ಮುಂಜಾಗ್ರತೆಯ ತಂತೀ ಕಳಿಸಿದರು ಅದರಂತೆ [illegible] ಗಳವರು ಕಾರವಾರದಲ್ಲಿಳಿದರು ದಯಾನತಿಯು ಇಲ್ಲಿ ಬಂದರ ವಾಸದೆ ಮುಂದಾಯಿತು ಮರು ದಿನ ಆ ಹಡಗವು ಮಲ್ಪೆಯ ಸಮೀಪ ಬಂಡೆಗೆ ಅಪ್ಪಳಿಸಿ [illegible] ಹೊಂದಿತೆಂದು ತಿಳಿಯುತ್ತಿದೆ ಹಡಗದ ಮೇಲಿನ ಯಾವ ತ್ತಾ ಜನರು ಮಾತ್ರ [illegible] ನೆಲ ಮುಟ್ಟಿದರೆಂಬ ದೇಂದು ಸಂತೋಷದ ವಾರ್ತೆ [illegible] ಶುಕ್ರವಾರ ಮುಂಬ ಯಿಯಿಂದ ಹೊರಟ ಹಡಗವು ನೆಟ್ಟಗೆ ಮಲ್ಪೆಗೆ ಹೋಗಿರುವ ದಂತೆ ಹೇಳ್ಲಿ ಈ ಅಕಾಲಿಕ ಮಳೆಯಿಂದ ಬಹಳ ಅನರ್ಥ ಗಳಾಗಿವೆ ಈ ತಾಲೂಕಿನ ಉತ್ತರ ಭಾಗ [illegible] ಭೂಮಿಗಳಲ್ಲೂ ಭತ್ತದ ಬೆಳೆ ಹಣ್ಣಾಗಿ ಕೊಯಿಲಿಗೆ ತಯಾರಾಗಿದೆ ಮಳೆಯಿಂದ ಕೊಯಿಲು ಮಾಡಲು ಆತಂಕವುಂಟಾಗಿದೆ. ಭತ್ತವೆಲ್ಲ ಉದುರಿ ಹಾಗೂ ಹುಲ್ಲು ಹಾಳಾಗಿ ಬಂದ ಬೆಳೆ ಭೂಮಿಪಾಲಾಗಿ ಹೋಗುತ್ತದೆ [illegible] ಭಯಭೀತರಾಗಿದ್ದಾರೆ ಆಕಾಲಿಕ ಮಳೆಯಿಂದಲೂ ಹವೆಯಲ್ಲಿ ಆಗುವ ವಿಲಕ್ಷಣ ಬದಲಾವಣೆಗಳಿಂದಲೂ [illegible] ನೆಗಡಿ, ಕೆಮ್ಮು ಮುಂತಾದ ತರತರದ ಬೇನೆಗಳು ಉತ್ಪನ್ನವಾಗಿವೆ ಎಲ್ಲೂ ಕ್ಷೇಮವಿಲ್ಲ, ಸುಖವಿಲ್ಲ [illegible] ನೇ ಕಾಯಬೇಕು ಈ ವಾರ ಬಿದ್ದ ಮಳೆ [illegible] ಆಗಿರುತ್ತದೆ ಈ ವರೆಗೆ ಬಿದ್ದ ಒಟ್ಟು ಮಳೆ [illegible] ಇಂಚು ಆದಂತಾಯಿತು

ಕಳೆದ ವಾರ ಪ್ರಕಟವಾದ ಇಲ್ಲಿಯ ಅರ್ಬನ್ ಬೇಂಕಿನ ಮಹಾಸಭೆಯ ವೃತ್ತಾಂತದಲ್ಲಿ ಕೆಲವು ತಪ್ಪು ಸಂಗತಿಗಳು ಪ್ರಕಟವಾಗಿವೆಯೆಂದು ಬೇಂಕಿನ ಮೇನೇಜರ ರಾ ಗಣಪತಿ ಅಚ್ಯುತ ಶಾನಭಾಗರು ತಿಳಿಸುತ್ತಾರೆ " ಬೆಟ್ಟಿನ ವಾಗ್ [illegible] ಇಲ್ಲದಿದ್ದರೆ, ಕೆಲವು ವಂಚನೆಗಳಾದರೂ ಇರುವದಿಲ್ಲವೇ" ಎಂದು ಒಬ್ಬರು ಕೇಳಿದ ಪ್ರಶ್ನೆಗೆ, " ಬದರ್ಫ ಅದ [illegible] ಕೂಪ ಬಗ್ಗೆಳನು ಮಾಡಿದ ವಂಚನೆಯು ವಿನಹ ಇನ್ನಾವ ವಂಚನೆಯೂ [illegible] ನಗೆ ಕಂಡು ಬರಲಿಲ್ಲ " ಎಂದು [illegible] [illegible] ಉತ್ತರ ಕೊಟ್ಟಿದ್ದರೆಂತಲೂ, ಅವ [illegible] ಇದೆಂಬುದು ತಪ್ಪೆಂತಲೂ ರಾ [illegible] [illegible] ತಿಳಿಸುತ್ತಾರೆ [illegible] ಸಾಲಗಳ ರಕಮಿನಲ್ಲಿ ೪೦-೫೦ [illegible] ಎಂದು ರಾ ಮೇನೇಜರು ಹೇಳಿದ್ದರಂತೆ " ಬೇಂಕಿಗೆ ಬರತಕ್ಕ ಸಾಲ ೭೦ [illegible] ಅದರಲ್ಲಿ ೪೦ [illegible] ರೂ [illegible] ಇದರಲ್ಲಿ ವಸೂಲ ಆಗದ ಸಾಲ [illegible] ಚೌಕಶಿ ಮಾಡಲು ನೇಮಿಸಿದ ಸಮಿತಿಯವರು [illegible] ಸಾಲ ಮುಳುಗಬಹುದೆಂದು ಲೆಕ್ಕ [illegible] ಆದರೆ ಮುಳುಗುವ ಸಾಲದ ರಕಮು [illegible] ಒಂದಿಷ್ಟು ಹೆಚ್ಚಿಗೆಯೇ ಇರಬಹುದಾಗಿ [illegible] ಹೀಗೆ ರಾ ಮೇನೇಜರರು ಹೇಳಿದ್ದರೆಂದು ಮೆನೇಜರರು ತಿಳಿಸುತ್ತಾರೆ ರಾ ಶೇಷಗಿರಿ [illegible] ಕಾರ್ಯವಾಹಕ ಮಂಡಳದಲ್ಲಿ ಜಾತಿವಾರ ಪ್ರತಿನಿಧಿಗಳು [illegible] ಸೂಚಿಸಿದ [illegible] ಜನರಲ್ಲಿ ಕೆಲವರು [illegible] ಕೆಲವರು ಮೆಂಬರರಾಗಿ [illegible] ವರ್ಷ [illegible] ದವರೂ, ಕೆಲವರು ಕಾಯಂ [illegible] ನಿಯಮಗಳಂತೆ ಅವಶ್ಯವುಳ್ಳಷ್ಟು ಶೇರು ಗಳನ್ನು ಧಾರಣ ಮಾಡದಿದ್ದವರೂ ಇದ್ದರಂತೆ ಆದ್ದರಿಂದ ಅಧ್ಯಕ್ಷರು ರಾ| [illegible] ಶಾನಭಾಗರ ಉಪಸೂಚನೆಯ [illegible] ಮತಕ್ಕೆ ಹಾಕಿದರಾಗಿಯೂ, ಸಭೆಗೆ ಬಂದಿದ್ದ [illegible] ಸದಸ್ಯರಲ್ಲಿ [illegible] ಉಪಸೂಚನೆಗೆ ಮತ ಕೊಟ್ಟಿದ್ದರೆಂತಲೂ ಆದ್ದರಿಂದ ಅದು ಬಿದ್ದು ಹೋಯಿತೆಂತಲೂ ಮೇನೇಜರರು ತಿಳಿಸುತ್ತಾರೆ

ನಿನ್ನೆ [illegible] ಸಪ್ತಾಹದ ಮುಕ್ತಾಯವಾಯಿತು ಮುಂಜಾನೆ ನಗರಸಂಕೀರ್ತನೆಯೂ ಧ್ವಜವಂದನೆಯೂ [illegible] ಮಧ್ಯಾಹ್ನದ ತನಕ ಸ್ವಯಂಸೇವಕರು ಮನೆ ಮನೆ ತಿರುಗಿ [illegible] ಮಾಡಿದರು ಅಪರಾಹ್ಣದಲ್ಲಿ ಮೆರ ವಣಿಗೆಯಾಗಿ ಸಂಜೆಯ ಕಡೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನ [illegible] ಮಹಾತ್ಮರಿಗೆ ದೀರ್ಘಾಯುರಾರೋಗ್ಯ ದಯಪಾಲಿಸಲು [illegible] ಚರಣಾರವಿಂದಗಳಲ್ಲಿ [illegible] ಪ್ರಾರ್ಥನೆಯಾಯಿತು

[illegible] ಸಪ್ತಾಹದಲ್ಲಿ ಸಂತೆಯಲ್ಲೂ ಮನೆ-ಮನೆ ಮಾರಾ ಟದಲ್ಲೂ [illegible] ಸಂಜೆಯ ತನಕ ರೂ [illegible] ಖಾದಿ ವಿಕ್ರಯವಾಯಿತು ಮಳೆಯಿಲ್ಲದಿದ್ದರೆ ಮತ್ತು ಜನರಿಗೆ ಬೇಕಾದ ಖಾದಿ ಇರುತ್ತಿದ್ದರೆ ಈ ಅಂಕೆ ಸಹಜವಾಗಿ ಸಾವಿರಕ್ಕೆ ಸಮೀಪ ಬರುತ್ತಿತ್ತು ನಿನ್ನೆ ತನಕ ಈ ಊರಲ್ಲಿ ೫೯೭ ಮಂದಿ ಕೊಂಗ್ರೆಸ ಸದಸ್ಯರಾಗಿದ್ದಾರೆ. ಕಳೆದ ವರ್ಷ ೬೫೪ ಸದಸ್ಯರಾಗಿದ್ದರು ಜನರ ಕೊಂಗ್ರೆಸ ಭಕ್ತಿ ಕುಗ್ಗಿತೇನು ?

ಮುಂಬಯಿ ಸರಕಾರದಿಂದ ನೇಮಿಸಿದ ಔದ್ಯೋಗಿಕ ಚೌಕಶಿ ಮಂಡಳದ ಪರವಾಗಿ ರಾ॥ ಎಸ್ ಸಿ ಮುಜುಮ ದಾರರವರು ೨೬ ೧೯ನೇ ಸೋಮವಾರ ಇಲ್ಲಿ ಬಂದು ೩ ದಿನಗಳ ತನಕ ಉಳಿದು ಚಮಗಾರ, ಗುಡಗಾರ ಮೊದಲಾದ ಕೈಗಾರಿಕೆಯವರೊಡನೆ ಸಮಕ್ಷ ಮಾತನಾಡಿ, ಅವರ ಉದ್ಯೋಗದ ಕ್ರಮಗಳನ್ನರಿತುಕೊಂಡರು. ಮತ್ತು ಅವರ ಉದ್ಯೋಗಕ್ಕೆ ಬರುವ ತೊಡಕುಗಳನ್ನೂ, ಉತ್ಕರ್ಷಕ್ಕೆ ಅವಶ್ಯವಿರುವ ಉಪಾಯಗಳನ್ನೂ ಅವರಿಂದ ತಿಳಕೊಂಡು ಹೋಗಿದ್ದಾರೆ

ಹಳದೀಪೂರದಿಂದ ಮುಷ್ಟಿಯೊಡನೆ ಸರಾಯಿ ಬಾಟ್ಲಿ ತರುತ್ತಿದ್ದ ಬಗ್ಗೆ ಧಾರೇಶ್ವರದಲ್ಲಿ ಹಿಡಿಯಲ್ಪಟ್ಟ ಪರಕಂತ್ರ ಜಾತಿಯವನ ಮೇಲೆ ಮೊನ್ನೆ ಶುಕ್ರವಾರ ತನಿಖೆ ನಡೆದು ರೂ ೫ ದಂಡ ವಿಧಿಸಲಾಯಿತು, ಗುಡೇಅಂಗಡಿಯ ನಾರಾಯಣ ಪರಶುರಾಮ ಭಟ್ಟ ಕಂತೆಮನೆ ಇವರಲ್ಲಿ ಬಂಗಿ ಗಿಡ ಬೆಳಸಿದ್ದು ತಪಾಸಾಗಿ, ಖಟ್ಲೆ ನಡೆದು ಅವರಿಗೆ ರೂ ೨೦ ದಂಡ ವಿಧಿಸಲಾಯಿತು.

ಹೆಗಡೆ ತಣ್ಣೀರಕುಳಿ ರಸ್ತೆ ಮಾಡಿಸುವ ಬಗ್ಗೆ ಸರಕಾರಿ ಧನಸಹಾಯ ಮಂಜೂರ ಆದ ಮೇಲೆಗೆ, ಕಳೆದ ಏಪ್ರಿಲ್ ತಿಂಗಳಲ್ಲಿ ಕುಮಟಾ ಮಾಮಲೇದಾರರು ಹೆಗಡೆಯೊಳಗೆ ರಾ। ದಾಮೋದರ ಅಚ್ಯುತ ಪೈ ಅಧ್ಯಕ್ಷತೆಯಲ್ಲಿ ಒಂದು ಮಾರ್ಗರಚನಾ-ಕಮಿಟಿಯನ್ನು ನೇಮಿಸಿದ್ದರು ರಸ್ತೆಯ ಯೋಜನೆಯೂ ಖರ್ಚಿನ ಪಟ್ಟಿಯೂ ಮಂಜೂರಾಗಿ ಬಂದವು ಕಮಿಟಿಯವರು ಕೆಲಸಕ್ಕೆ ಪ್ರಾರಂಭ ಮಾಡಿದರು ಮತ್ತು ಕೆಲವು ಹಣ ಮುಂಗಡ ಕೇಳಿದರು, ಆದರೆ ಮುಂಗಡ ಹಣ ಕೊಡಬರುವದಿಲ್ಲವಾಗಿಯೂ, ಕೆಲಸ ಆದಂತೆ ಬಿಲುಗಳನ್ನು ಕಳಿಸಿದರೆ ಹಣ ಸಿಗುವದೆಂತಲೂ ಕಚೇರಿಯಿಂದ ಉತ್ತರ ಬಂತು ಅದರಂತೆ ಕಮಿಟಿಯವರು ಕೆಲಸ ಪ್ರಾರಂಭಿಸಿ ರಸ್ತೆಯ ಆಚೆ-ಈಚೆಯ ಗಟಾರುಗಳನ್ನು ತೋಡಿಸಿದರು ೨೦೦ ರೂಪಾಯಿಯಷ್ಟು ಕೆಲಸವಾಯಿತು, ಈ ಕೆಲಸ ತಪಾಸ ಮಾಡಿಸಿ ಹಣ ಕೊಡಿಸಬೇಕಾಗಿ ಅಧಿಕಾರಿಗಳಿಗೆ ೨-೩ ಬಾರಿ ಬರೆದು ಹಾಕಿತು ಆದರೆ ಬಹಳ ಕಾಲದ ವರೆಗೆ ತಪಾಸಕರೂ ಇಲ್ಲ! ಅಳತೆ ಮಾಡುವವರೂ ಇಲ್ಲ! ಹಣವೂ ಇಲ್ಲ! ಕೂಲಿಯಾಳುಗಳು ಕೂಲಿಯಿಲ್ಲದೆ ಬಳಲಬೇಕಾಯಿತು! ಇಂಥ ಪರಿಸ್ಥಿತಿಯಲ್ಲಿ ಕಮಿಟಿಯವರು ಕೆಲಸ ನಿಲ್ಲಿಸಬೇಕಾದದು ಆಶ್ಚರ್ಯವೇ ? ಮುಂದೆ ಕಳೆದ ತಾ ೧೦ನೇಗೆ ಅಳತೆ ಅಧಿಕಾರಿಯು ಬಂದು ಅಳತೆ ಮಾಡಿದನು ತಾ ೧೩ಕ್ಕೆ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ, ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ ಮತ್ತು ಗೋಕರ್ಣ.

ಈ ಬೇಂಕಿನ ಒಂದು ಶಾಖೆಯು ಉತ್ತರ ಕಾನಡಾ ಜಿಲ್ಲಾ ಅಂಕೋಲಾ ಪೇಟೆಯೊಳಗಿನ ಶ್ರೀ॥ ವಿಶ್ವನಾಥ ಪ್ರಭುಗಳ ಕಟ್ಟಡದ ಉಪ್ಪರಿಗೆಯಲ್ಲಿ, ತಾರೀಕು 3-10-1938ನೇ ಸೋಮವಾರ ದಿವಸ ತೆರೆಯಲ್ಪಡುವದು. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ, 28—9—1938

THE AGRICULTURAL & INDUSTRIAL BANK, LTD.

ಬೀಲು ತಯಾರಾಗಿ ಕಚೇರಿಗೆ ಹೋಯಿತು ಆದರೆ ಇನ್ನೂ ಹಣ ಸಿಗುವದಿಲ್ಲ! ಕಲೆಕ್ಟರ ಸಾಹೇಬರ ಮಂಜೂರಿ ಬರಲಿಲ್ಲವಂತೆ! ಕಲೆಕ್ಟರ ಸಾಹೇಬರಿಗೆ ಕಳಿಸಿದ ರಿಪೋರ್ಟಿಗೂ ಉತ್ತರವಿಲ್ಲ! ಹೀಗೆಲ್ಲ ಅಧಿಕಾರಿಗಳು ಕಾಗದ ಕುದುರೆಗಳನ್ನು ಓಡಾಡಿಸುತ್ತ ಕುಳಿತರೆ ಕೆಲಸ ಹೇಗಾಗಬೇಕು? ಕಮಿಟಿಯವರಿಗೂ ಕೆಲಸಗಾರರಿಗೂ ಉತ್ಸಾಹ ಎಲ್ಲಿಂದ ಬರಬೇಕು? ಲೋಕೋಪಯೋಗಿ ಕಾರ್ಯಗಳಿಗೆ ಮಂಜೂರ ಆದ ಹಣವು "ಲೆಪ್ಸ" ಆಗದೆ ಹೇಗೆ ಉಳಿದೀತು? ಮಂತ್ರಿಮಂಡಳದವರು ಇತ್ತ ಲಕ್ಷ ಕೊಟ್ಟು ಎಲ್ಲ ಕಾರ್ಯಗಳೂ ಕೆಲಸಗಳೂ ಬೇಗ ಆಗುವಂತೆ ತ್ವರ್ಯವೇ ಏರ್ಪಾಟು ಮಾಡಬೇಕಾಗಿ ನಮ್ರ ಸೂಚನೆ ಮಾಡುತ್ತೇವೆ, ಹೀಗೆ ಸವರಿ ಮಾರ್ಗ ಕಮಿಟಿಯವರು ಬರೆಯುತ್ತಾರೆ.

ಹೊನ್ನಾವರ— (ತಾ ೧-೧೦-೩೮) ೩-೪ ದಿನಗಳಿಂದ ಅಬ್ಬರದ ಮಳೆ ಬೀಳುತ್ತಿದೆ. ಗಾಳಿಯೂ ಬಹಳ ಮಟ್ಟಿ, ಹಡಗಗಳ ರಹದಾರಿ ಕಟ್ಟಾಗಿದೆ

ಈಗ ಧಾನ್ಯ-ದವಸುಗಳ ಧಾರಣೆ ಬಹಳೇ ಇಳಿದಿರುವದನ್ನು ಅನುಲಕ್ಷಿಸಿ ನಗರ ಸಭೆಯ ಆಮದು-ರಫ್ತು ಸುಂಕದ ದರವನ್ನು ಕಡಿಮೆ ಮಾಡಬೇಕಾಗಿಯೂ, "ಟರ್ಮಿನಲ್" ತೆರಿಗೆ ಆಕರಿಸಬಾರದಾಗಿಯೂ ಸ್ಥಾನಿಕ ವರ್ತಕರು ನಗರ ಸಭೆಗೆ ಹಿಂದೆ ಅರ್ಜಿ ಮಾಡಿದ್ದರು ನಗರ ಸಭೆಯವರು ಈ ಕುರಿತು ಆಲೋಚನೆ ಮಾಡುವದಕ್ಕೆ ಒಂದು ಉಪಮಂಡಳ ನೇಮಿಸಿ ೩-೪ ತಿಂಗಳಾಯಿತು ಇನ್ನೂ ಮಂಡಳದ ವರದಿಯಿಲ್ಲ! ಇಷ್ಟು ಸಣ್ಣ ಕೆಲಸ ಮಾಡಲು ತಿಂಗಳುಗಟ್ಟಲೆ ಕಾಲಹರಣ ಮಾಡಿದರೆ ಹೇಗೆ? ನಗರಾಧ್ಯಕ್ಷರು ಉಪಮಂಡಳದವರಿಗೆ ಎಚ್ಚರಿಕೆ ಕೊಡಬಾರದೇ?

ಶ್ರೀ ದುರ್ಗಾದೇವಿಯ ಮುಂದೆ ನಾಳೆ ಬರುವ ದಸರೆ ಹಬ್ಬದಲ್ಲಿ ಪ್ರಾಣವಧೆಯಾಗದಂತೆ ಅಹಿಂಸಾ ಮಂಡಳದವರು ಪ್ರಯತ್ನ ನಡಿಸಿದ್ದಾರೆ.

ಭಟಕಳ— ಭಟಕಳ ಪೇಟಾ ಪೈಕಿ ಕೊಪ್ಪ, ತೆಕ್ಕೆ, ಕೋಟಖಂಡ, ಮಾರುಕೇರಿ, ಕೋಣಾರ, ಕುಂದವಡ, ಹೇರೂರ, ಹಡ್ಲೂರ ವಗೈರೆ ಹಳ್ಳಿಗಳೊಳಗಿನ ತೋಟಿಗರು ಜಿಲ್ಲಾಧಿಪರಿಗೆ ಅರ್ಜಿ ಮಾಡಿ, ತಮ್ಮ ಹೀನ-ದೀನ ಸ್ಥಿತಿಯನ್ನು ಅರುಹಿ ಈ ವರ್ಷ ತೀರ್ವೆಯನ್ನು ಮಾಫಿ ಮಾಡಬೇಕೆಂದು ಬೇಡಿಕೊಂಡಿದ್ದಾರೆ ಹೋದ ವರ್ಷ ವಿಪರೀತ ಕೊಳೆ ಬಂದದ್ದರಿಂದ ಬಹಳ ಅಡಿಕೆ ಮರಗಳೂ ತೆಂಗಿನ ಸಸಿಗಳೂ ನಾಶವಾಗಿ ಹೋದವೆಂತಲೂ, ಬೇಸಿಗೆಯಲ್ಲಿ ಸಾಕಷ್ಟು ನೀರಿನ ಪುರವಟಿಯಾಗದ್ದರಿಂದ ತೋಟಗಳ ದುರ್ದಶೆಯಾಯಿತೆಂತಲೂ, ಈ ಸಾರೆ ಮುಂಚೆ ಅತಿವೃಷ್ಟಿ, ಮುಂದೆ ಅನಾವೃಷ್ಟಿ ಹೀಗೆ ಕಷ್ಟಗಳಾದ್ದರಿಂದ ಈ ವರ್ಷದ ಅಡಿಕೆ ಬೆಳೆಯು ತೀರ ಕೆಟ್ಟುಹೋಗಿದೆಯೆಂತಲೂ, ೩ರಿಂದ ೫ ಆಣೆ ತನಕ ಬೆಳೆ ಬಂದಿರುವದಾಗಿ ಅಧಿಕಾರಿಗಳೇ ಲೆಕ್ಕ ಹಾಕಿದ್ದಾರೆಂತಲೂ, ಇದೀಗ ಪುನಃ ರಭಸದ ಮಳೆ ಬೀಳುತ್ತಿರುವದರಿಂದ ಇದ್ದ-ಬಿದ್ದ ಬೆಳೆ ಸಹ ಕೈಗೆ ಸಿಗುವದು ಕಷ್ಟವಾಗಿರುತ್ತದೆಂತಲೂ, ತೀರ್ವೆ ತೆರಲು ಅನುಕೂಲವಾಗದೆಂತಲೂ ಅವರು ಜಿಲ್ಲಾಧಿಪರಿಗೆ ತಿಳಿಸಿದ್ದಾರೆ. ಜಿಲ್ಲಾಧಿಪರು ಅವರಿಗೆ ನೆರವಾಗತಕ್ಕದ್ದು ಕರ್ತವ್ಯವಿದೆ

ಬೆಂಗ್ರೆ ಗ್ರಾಮದ ಮಾವಿನಕಟ್ಟೆಯ ಸಮೀಪ ಒಂದು ಹೊಸ ಗಾಂವಟಿ ಶಾಲೆ ಸ್ಥಾಪನೆಯಾಗಿದೆ ಇದೀಗ ಶಾಲೆಯಲ್ಲಿ ೩೦ ಹುಡುಗರು ಸೇರಿದ್ದಾರೆ. ಇನ್ನೂ ಬರುತ್ತಿದ್ದಾರೆ

ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಈ ವರ್ಷದಿಂದ ಪ್ರಾಣಬಲಿಯನ್ನು ನಿಲ್ಲಿಸುತ್ತೇವಾಗಿಯೂ, ಪ್ರಾಣಬಲಿಯ ಬದಲು ವಿಶೇಷ ಸಾತ್ವಿಕ ಪೂಜೆ ಸಲ್ಲಿಸಲು ಅಹಿಂಸಾ ಮಂಡಳದವರು ಕೆಲವೊಂದು ಕಾಯಂ ಧನಸಹಾಯ ಮಾಡಬೇಕಾಗಿಯೂ ಕಳೆದ ವರ್ಷ ನವರಾತ್ರಿಯಲ್ಲಿ ಗುಡಿಯ ಚಾಲಕರು ಮಂಡಳದವರಿಗೆ ತಿಳಿಸಿದ್ದರು ಅದರಂತೆ ಮುಂಬಯಿಯ ಜೀವದಯಾಸಂಘವು ರೂ ೧೫೦ರ ನಿಧಿಯನ್ನು ತಮ್ಮಲ್ಲೇ ತೆಗೆದಿಟ್ಟು ಪ್ರತಿ ವರ್ಷ ಅದರ ಬಡ್ಡಿ ರೂ ೫ ಕಳಿಸಿಕೊಡುವ ಏರ್ಪಾಟು ಮಾಡಿದ್ದಾರೆ ಚಾಲಕರು ಮಾತ್ರ ತಮ್ಮ ಮಾತು ನಡಿಸಬೇಕು

ಸಿಂಪಾ— ಇಲ್ಲಿಯ ಮುಖ್ಯ ಬೆಳೆ ಭತ್ತವು. ಈ ವರ್ಷ ಪ್ರಾರಂಭದಲ್ಲಿ ಚೆನ್ನಾಗಿ ಮಳೆಯಾದ್ದರಿಂದ ರೈತರು ಒಳ್ಳೇ ಬೆಳೆ ಬರುವದೆಂದು ಆಶೆ ಮಾಡಿದ್ದರು. ಆದರೆ ಆಗೋಸ್ತ ತಿಂಗಳಲ್ಲಿ ಮಳೆಯು ಮೋಸ ಮಾಡಿತು! ನೆಟ್ಟಿಯ ಹಂಗಾಮಿನಲ್ಲೇ ಮಳೆಯಿಲ್ಲದ ಮೇಲೆ ಬೆಳೆ ಬರುವದೆಲ್ಲಿಂದ? ಹಾಗೂ ಹೀಗೂ ಹುಟ್ಟಿದ ಸಸಿಗಳಿಗೆ "ಪಿಲಿ" (ಹೂತ್ತೆ ಬರುವಲ್ಲೇ ಪೊಳ್ಳು ಪೊಳಕೆಯುಂಟಾಗಿ ತೆನೆಯೇ ಬರದಂತೆ ಮಾಡುವ) ರೋಗವು ಬಂದಿದೆ. ಅಂತೂ ಈ ವರ್ಷ ಬರಗಾಲವೆಂದೇ ಹೇಳಬಹುದು. ಜಿಲ್ಲಾಧಿಕಾರಿಗಳು ವಿಶೇಷ ಆಣೇವಾರಿಯನ್ನು ಮಾಡಿಸಿ ರೈತರಿಗೆ ತೀರ್ವೆ ಸೂಟ ದೊರಕಿಸದಿದ್ದರೆ ಗತಿಯಿಲ್ಲ.

ಅವರ್ಸಾ— (ತಾ. ೧೫-೯-೩೮) ಇಲ್ಲಿಯ ಕನ್ನಡ ಶಾಲೆಯ ನಿವೃತ್ತ ಮುಖ್ಯಾಧ್ಯಾಪಕರಾದ ರಾ|| ಗೋವಿಂದ ಶೇಟಿಯಾರವರ ನೇತೃತ್ವದಲ್ಲಿ ನರಸಿಂಹ ಸ್ಕೂಲ ಎಂಬ ಹೊಸ ಶಾಲೆ ತೆರೆಯಲ್ಪಟ್ಟಿದೆ ಶಾಲೆಯಲ್ಲಿ ಹಿಂದೀ, ಇಂಗ್ಲಿಷ ಭಾಷೆಗಳ ಶಿಕ್ಷಣವೂ ಔದ್ಯೋಗಿಕ ಶಿಕ್ಷಣವೂ ಕೊಡಲಾಗುವದಂತೆ

ಕೊಂಗ್ರೆಸ ಕಾರ್ಯಕರ್ತರು ಕೊಂಗ್ರೆಸ ಸದಸ್ಯರ ನೋಂದಣಿಯ ಕೆಲಸ ಆರಂಭಿಸಿದ್ದಾರೆ. ಈ ತನಕ ಬರೀ ೧೫-೧೬ ಸದಸ್ಯರಾಗಿದ್ದಾರೆ! ಜನರಿಗೆ ಉತ್ಸಾಹವಿಲ್ಲವೆನ್ನಬೇಕೇ? ಕಾರ್ಯಕರ್ತರಿಗೆ ಉತ್ಸಾಹವಿಲ್ಲವೆನ್ನಬೇಕೇ?

“ಬಡ ರೈತ”ನೊಬ್ಬನು ಬರೆಯುತ್ತಾನೆ- “ನನಗೂ ಇಲ್ಲಿಯ ಒಬ್ಬ ಶ್ರೀಮಂತನಿಗೂ ಅತಿಕ್ರಮಣದ ವ್ಯಾಜ್ಯವುಂಟಾಯಿತು ಈ ವ್ಯಾಜ್ಯವನ್ನು ಊರಲ್ಲೇ ಪಟೇಲ-ಶಾನಭೋಗರ ವಿದ್ಯಮಾನ ಬಗೆಹರಿಸಿಕೊಳ್ಳಬೇಕೆಂದು ನಿಶ್ಚಯಿಸಿ ನಾನು ಆ ಗ್ರಾಮಾಧಿಕಾರಿಗಳಿಗೆ ಬಿನ್ನವಿಸಿದೆನು, ಇಬ್ಬರೂ ತಿರಸ್ಕರಿಸಿದರು, ಅದೇ ಮುಂದೆ ಕೆಲವು ದಿನಗಳಲ್ಲಿ ಸದರಿ ಶ್ರೀಮಂತರು ಕರೆಕಳಿಸಿದ ಕೂಡಲೇ ನಕಾಶೆ, ರಿಕಾರ್ಡ ವಗೈರೆ ತಕ್ಕೊಂಡು ಓಡಿಬಂದರು! ಮತ್ತು ಎಲ್ಲ ವಸ್ತುಸ್ಥಿತಿಯನ್ನು ತಿಳಕೊಂಡು, “ಈ ಅತಿಕ್ರಮಣದಿಂದ ನಿನಗೆ ಹಿತವಿದೆ, ತಕ್ರಾರು ಮಾಡಬೇಡ.” ಎಂದು ಹೇಳಿ ಹೋದರು ನನಗೆ ಅವರ ಮಾತಿನ ಅರ್ಥವೇ ತಿಳಿಯಲಿಲ್ಲ! ಗ್ರಾಮಾಧಿಕಾರಿಗಳು ಬಡವರು, ಶ್ರೀಮಂತರು ಎಂದು ಪಂಕ್ತಿಪ್ರಪಂಚ ಮಾಡಿ ಬಡವರಿಗೆ ದಣಿಸಬಹುದೇ? ಮೇಲಧಿಕಾರಿಗಳು ಅವರಿಗೆ ಬುದ್ಧಿ ಕಲಿಸಿಕೊಡಬೇಕಾಗಿ ನನ್ನ ಪ್ರಾರ್ಥನೆಯಿದೆ.” ಇತ್ಯಾದಿ

ಯಲ್ಲಾಪುರ— (ತಾ ೧೫-೯-೩೮) ಎರಡು ಮೂರು ವಾರಗಳಿಂದ ಮಳೆಯಿಲ್ಲ ರೈತರ ಗೋಳು! ಅಡಿಕೆ ಮರಗಳಿಗೆ ಈ ವರ್ಷ ಕೊಳೆ ವಿಶೇಷ ಎರಗಿದ್ದರೂ ಬೆಳೆ ತೀರ ಕಡಿಮೆ ಬಂದಿದೆ. ಊರಲ್ಲೆಲ್ಲ ಜ್ವರದ ಬೇನೆ ಹಬ್ಬಿದೆ

(ತಾ ೨೧-೯-೩೮) ಮನೆ ನೆಟ್ಟಿಗೆ ದಳಿಜ್ವರದ ಬಾಧೆ ಬಹಳವಾಗಿದೆ ನಿನ್ನೆಯಿಂದ ತುಸು ತುಸು ಮಳೆ ಬೀಳಹತ್ತಿದೆ ಮಳೆ ಒತ್ತರದಿಂದ ಬಿದ್ದರೆ ಭತ್ತದ ಸಸಿಗಳಿಗೆ ಹತ್ತಿದ ಹುಳಗಳ ನಾಶವಾಗದು ಈ ತನಕ ೬೭ ಇಂಚು ಮಳೆಯಾಗಿದೆ ಆದರೆ ವಾರ್ಷಿಕ ಸರಾಸರಿಗಿಂತ ೩೦-೩೫ ಇಂಚು ಕಡಿಮೆಯಾಗಿದೆ. ಈಗ ಜಲೋ ಮಳೆ ಬಿದ್ದರೆ ಮಾತ್ರ ರೈತರ ಬಾಳ್ವೆ ದೇವರ ಮನಸ್ಸಿನಲ್ಲಿ ಏನಿದೆ ಯಾರು ಬಲ್ಲರು?

(ಪುರವಣಿ ನೋಡಿರಿ.)

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ



ಲಿವ್ಹರ್ ಕ್ಯೂರ್

ಲಿವ್ಹರ್ ಮತ್ತು ಯಕೃತ್
ವಿಕಾರಗಳ ಮೇಲೆ
ಅಮೋಘವಾದ ಉಪಾಯ!
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ
ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ,

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,
ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.
ಶಾಖೆ:- ಅರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ

(ಸನೇ ಪಾನಸಿಂದ ಮುಂದರಿಸಿದ್ದು)

ಸ್ಥಾನದ ಮೇಲೆ ಹೇರಿಸಿದರೆ ಅನರ್ಥವಾಗುವದೆಂದೂ ಅ. ಭಾ. ಕೊಂಗ್ರೆಸ ಕಮಿಟಿಯು ಈ ಮೂಲಕ ಬ್ರಿಟಿಶ ಸರಕಾರಕ್ಕೆ ತಿಳಿಸತಕ್ಕದ್ದಾಗಿ ಬಾಬು ರಾಜೇಂದ್ರ ಪ್ರಸಾದರವರು ಸೂಚಿಸಿದರು. ಇದಕ್ಕೆ ಆಚಾರ್ಯ ನರೇಂದ್ರದೇವರು ಅನುಮೋದನೆ ಕೊಟ್ಟರು. ಚರ್ಚೆಯಾಗಿ ಈ ಠರಾವು ಬಹುಮತದಿಂದ ಮಂಜೂರಾಯಿತು. ಆ ಮೇಲೆ ಶ್ರೀ| ಸತ್ಯಮೂರ್ತಿಗಳು ಸಂಸ್ಥಾನಗಳೊಳಗಿನ ರಾಜಕಾರಣದ ಠರಾವನ್ನು ಸೂಚಿಸಿದರು. 'ತ್ರಾವಣಕೋರ ಸಂಸ್ಥಾನದಲ್ಲಿ ನಡೆದ ದಬ್ಬಾಳಿಕೆಯಿಂದ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗೆ ವ್ಯಸನವಾಗಿದೆ. ಸಂಸ್ಥಾನಿಕರು ಪ್ರಜಾಪ್ರಭುತ್ವವನ್ನು ಸ್ಥಾಪಿಸುವದಕ್ಕಾಗಿ ಸಂಸ್ಥಾನ ಕೊಂಗ್ರೆಸ ಮಂಡಳಗಳ ಪ್ರತಿನಿಧಿಗಳ ಸಹಕಾರದಿಂದ ಮಂಡಳಗಳನ್ನೇರ್ಪಡಿಸಿಕೊಂಡು ಆಲೋಚಿಸಬೇಕು. ಸಂಸ್ಥಾನದವರು ನಡೆಸಿದ ದಬ್ಬಾಳಿಕೆ, ಜನರ ಮೇಲೆ ಹೊರಿಸಿದ ಆರೋಪಗಳನ್ನು ವಿಚಾರಿಸಲು ಸಂಸ್ಥಾನದ ಹೊರಗಿನ ನಿಷ್ಪಕ್ಷಪಾತಿ ನ್ಯಾಯಾಧೀಶರನ್ನು ನೇಮಿಸಿಕೊಂಡು ವಿಚಾರ ನಡಿಸಬೇಕು. ಹೈದರಾಬಾದ ಸಂಸ್ಥಾನದಲ್ಲಿಯೂ, ಧೇಂಕನಾಲ, ತಲಚರ, ಕಾಶ್ಮೀರ ಸಂಸ್ಥಾನಗಳಲ್ಲಿಯೂ ನಡೆದ ಲೋಕಕಂಟಕ ಶಾಸನಗಳ ಕುರಿತು ಅ. ಭಾ. ಕೊಂಗ್ರೆಸ ಕಮಿಟಿಯು ನಿಷೇಧ ವ್ಯಕ್ತಪಡಿಸುತ್ತದೆ. ರಾಷ್ಟ್ರೀಯ ಸಭೆಯು ಸಂಸ್ಥಾನಗಳೊಳಗೆ ಪ್ರತ್ಯಕ್ಷವಾಗಿ ಹೋರಾಡಬಯಸುವದಿಲ್ಲ, ಸಂಸ್ಥಾನಿಕರ ಮುಖಪ್ರಾಲಿಕೆಯಿಂದಲೇ ಪ್ರಜಾಪ್ರಭುತ್ವವನ್ನು ಸ್ಥಾಪಿಸಲೆಳಸುತ್ತದೆ' ಈ ಠರಾವನ್ನು ಶ್ರೀ ಸತ್ಯಮೂರ್ತಿಗಳು ಸರ್ವಾನುಮತಿಯಿಂದ ಮಂಜೂರ ಮಾಡಬೇಕೆಂದು ವಿನಂತಿಮಾಡಿಕೊಂಡರು. ಸಂಸ್ಥಾನಿಕರಿಗೆ ಅ. ಭಾ. ಕೊಂ. ಕಮಿಟಿಯು ಸ್ನೇಹ-ಸೌಹಾರ್ದದಿಂದ ತಮ್ಮ ಸಂಬಂಧದಲ್ಲಿ ಕಾಲೋಚಿತವಾದ ಲೋಕಶಾಹಿಯನ್ನು ಸ್ಥಾಪಿಸಲು ವಿನಂತಿಮಾಡಿಕೊಳ್ಳುತ್ತದೆಂದು ಶ್ರೀ| ಸತ್ಯಮೂರ್ತಿಗಳು ಪ್ರತಿಪಾದಿಸಿದರು. ಪ್ರೊ| ರಂಗಾ ಮೊದಲಾದ ಉಗ್ರವಾದಿಗಳಿಗೆ ಈ ಸೌಮ್ಯ ಠರಾವು ಮಾನ್ಯವಾಗಲಿಲ್ಲ. ಅವರು ಕೊಂಗ್ರೆಸ ಕಮಿಟಿಗೆ ಪ್ರತ್ಯಕ್ಷವಾಗಿ ಸಂಸ್ಥಾನಗಳಲ್ಲಿ ಲೋಕಶಾಹಿಯ ಪರವಾಗಿ ಸಂಗ್ರಾಮ ಹೂಡಲು ಉಪಸೂಚನೆಗಳನ್ನು ಸೂಚಿಸಿದರು. ಇವೆಲ್ಲ ಉಪಸೂಚನೆಗಳು ರದ್ದಾಗಿ ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಯುದ್ಧಪ್ರಾಪ್ತವಾಗಿದ್ದಲ್ಲಿ ಅ. ಭಾ. ಕೊಂ. ಕಮಿಟಿಯ ಸಕಲ ಅಧಿಕಾರಗಳನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳವು ನಡೆಸತಕ್ಕದ್ದೆಂಬ ಠರಾವಿನ ಚರ್ಚೆ ಸೋಮವಾರ ನಡೆಯಿತು. ಈ ದಿನ ಸುಭಾಸಚಂದ್ರ ಬೋಸರವರು ಕಾನಪುರದಿಂದ ಒಂದು ತಪ್ಪಿದರು, ಅದರಿಂದ ಅವರೇ ಅಧ್ಯಕ್ಷರಾಗಿದ್ದರು. ಈ ಠರಾವು ಸರ್ವಾನುಮತಿಯಿಂದ ಮಂಜೂರಾಯಿತು. ಇದಲ್ಲದೆ, ಬ್ರಹ್ಮದೇಶದೊಳಗಿನ ದೊಂಬಿಯಲ್ಲಿ ನಷ್ಟಪಟ್ಟವರೊಡನೆ ಸಹಾನುಭೂತಿಪ್ರದರ್ಶನ ಮಾಡುವ ಠರಾವನ್ನು ಅಧ್ಯಕ್ಷರೇ ಸೂಚಿಸಿ ಮನ್ನಿಸಿಕೊಂಡರು. ಆ ಮೇಲೆ ಡಾ|| ಅಶ್ರೊಫ್‌ರವರು ಹಿಂದುಸ್ಥಾನಿ ಭಾಷೆಯ ಪ್ರಚಾರಕ್ಕಾಗಿ ಒಂದು ಮಂಡಳವನ್ನು ಸ್ಥಾಪಿಸಬೇಕೆಂದೂ, ಆ ಮಂಡಳದೊಳಗ ಬಾಬು ರಾಜೇಂದ್ರ ಪ್ರಸಾದ, ಮೌ| ಅಬುಲ ಕಲಮ ಆಝಾದ, ಮೌಲ್ವಿ ಅಬ್ದುಲ್ ಹಕ್, ಆಚಾರ್ಯ ನರೇಂದ್ರ ದೇವ, ಬಾಬು ಪುರುಷೋತ್ತಮದಾಸ ಟಂಡನ್‌ರವರು ಸಭಾಸದರಿರಬೇಕೆಂದೂ ಸೂಚಿಸಿದರು. ಬಿಹಾರ ಸರಕಾರವು ಈ ಕುರಿತು ಅವಶ್ಯವುಳ್ಳ ಚೌಕಶಿ ಮಂಡಳವನ್ನು ಏರ್ಪಡಿಸಿರುವದಾಗಿಯೂ ಆ ಮಂಡಳದ ತೀರ್ಮಾನಗಳು ಇಡೀ ಭರತಖಂಡಕ್ಕೆ ಅನ್ವಯಿಸುವದಾಗಿಯೂ ಮೌಲಾನಾರವರು ಹೇಳಿ ಠರಾವನ್ನು ವಿರೋಧಿಸಿದರು. ಮತಗಣನೆಯಾಗಿ ಠರಾವು ತಿರಸ್ಕರಿಸಲ್ಪಟ್ಟಿತು. ರಾಷ್ಟ್ರೀಯ ಸಭೆಯ ಅಧ್ಯಕ್ಷರೂ ಇತರ ಕೊಂಗ್ರೆಸ ಪ್ರಮುಖರೂ ಅ. ಭಾ. ಮುಸ್ಲೀಮ ಲೀಗಿನ ಅಧ್ಯಕ್ಷರೊಡನೆ ಒಡಂಬಡಿಕೆಯ ಪ್ರಸ್ತಾಪ ನಡಿಸಿದ್ದರಿಂದ ಅರಾಷ್ಟ್ರೀಯ ಸಂಸ್ಥೆಗೆ ಅನಾವಶ್ಯಕವಾದ ಗೌರವ ಪ್ರಾಪ್ತವಾಯಿತೆಂದೂ ರಾಷ್ಟ್ರೀಯ ಮುಸಲ್ಮಾನರಿಗೆ ಅನ್ಯಾಯವಾಯಿತೆಂದೂ ಮುನಶಿ ಅಹಮ್ಮದ ದಿನ್‌ರವರು ಠರಾವನ್ನು ಸೂಚಿಸಿದರು. ಈ ಠರಾವಿಗೆ ಮೌ|| ಅಬುಲ ಕಲಮ ಆಝಾದರವರೂ ಸರದಾರ ವಲ್ಲಭಭಾಯಿ ಪಟೇಲರವರೂ ಶ್ರೀ|| ಸಯ್ಯದ ಅಬ್ದುಲ್ಲಾ ಬ್ರೆಲ್ವಿಯವರೂ ವಿರೋಧಿಸಿದರು; ರಾಷ್ಟ್ರೀಯ ಸಭೆಯು ಲೋಕಶಾಹಿ ಸಂಸ್ಥೆಯಾಗಿದ್ದರಿಂದ ದೇಶದೊಳಗಿನ ಯಾವತ್ತೂ ಹಿತಸಂಬಂಧಗಳುಳ್ಳ ಜನರೊಡನೆ ಒಡಂಬಡಿಕೆಯ ಪ್ರಯತ್ನ ನಡಿಸಲು ಬದ್ಧವಿರುವದಾಗಿಯೂ, ಇದರಿಂದ ರಾಷ್ಟ್ರೀಯ ಮುಸಲ್ಮಾನರ ಗೌರವಹಾನಿಯಾಗಕಾರಣವಿಲ್ಲವಾಗಿಯೂ, ರಾಷ್ಟ್ರೀಯ ಸಭೆಯ ಗೌರವ ಬೆಳೆಯಿತಾಗಿಯೂ ಮೌಲಾನಾರವರು ತಿಳಿಸಿಹೇಳಿದರು. ಕೊಂಗ್ರೆಸ ಕಾರ್ಯಕಾರಿ ಮಂಡಳದ ಮೇಲೆ ಅವನಂಬಿಗೆಯ ಠರಾವಿದೆಂದು ಸರದಾರ ವಲ್ಲಭಭಾಯಿ ಪಟೇಲರವರು ತಿಳಿಸಿಹೇಳಿದರು. ಸಮಾಜಗಳ ಸಮಾಧಾನಕ್ಕಾಗಿ ರಾಷ್ಟ್ರೀಯ ಸಭೆಯು ಸಕಲ ಪ್ರಯತ್ನಗಳನ್ನು ಕೈಕೊಳ್ಳಲು ಬದ್ಧವಿರುತ್ತದೆಂದು ಶ್ರೀ|| ಸಯ್ಯದ ಅಬ್ದುಲ್ಲಾ ಬ್ರೆಲ್ವಿಯವರು ಅಭಿಪ್ರಾಯಪಟ್ಟರು. ಮುಸ್ಲಿಮ್ ಲೀಗಿನ ಅಧ್ಯಕ್ಷರು ಅಶಕ್ಯ ಧೋರಣವನ್ನು ಸ್ವೀಕರಿಸಿದ್ದಾರೆಂದೂ ಸಮಾಜಗಳೊಳಗಿನ ವೈಷಮ್ಯಗಳನ್ನು ಪರಿಹರಿಸಲಿಕ್ಕೆ ರಾಷ್ಟ್ರೀಯ ಸಭೆಯು ಸಮಸ್ತ ಉಪಾಯಗಳನ್ನು ಕೈಕೊಂಡಿರುವದಾಗಿ ಈಗ ಲೋಕಕ್ಕೆ ಖಾತ್ರಿಯಾಗಿರುವದಾಗಿಯೂ ಇದರಿಂದ ರಾಷ್ಟ್ರೀಯ ಸಭೆಯ ಗೌರವಕ್ಕೆ ಹಾನಿಯಾಗಲಿಲ್ಲವೆಂದೂ ಶ್ರೀ|| ಸುಭಾಸಚಂದ್ರ ಬೋಸರು ಅಧ್ಯಕ್ಷಸ್ಥಾನದಿಂದ ವಿವರಿಸಿದ ಬಳಿಕ, ಠರಾವು ಪ್ರಚಂಡ ಬಹುಮತದಿಂದ ಧಿಕ್ಕರಿಸಲ್ಪಟ್ಟಿತು. ಬಲುಚಿಸ್ತಾನದೊಳಗಿನ ಬುಕ್ತಿ ಜನರಿಗೆ ಬ್ರಿಟಿಶ ಸರಕಾರವು ವಿಪುಳವಾಗಿ ಪೀಡಿಸುತ್ತದೆಂದೂ, ಅದು ನಿಷೇಧಾರ್ಹವೆಂದೂ, ಅದನ್ನು ಕೂಡಲೆ ಸುಧಾರಿಸಬೇಕಾಗಿಯೂ ಬ್ರಿಟಿಶ ಅಧಿಕಾರಿಗಳಿಗೆ ತಿಳಿಸುವ ಠರಾವನ್ನು ಅಧ್ಯಕ್ಷರೇ ಸೂಚಿಸಿ ಮನ್ನಿಸಿಕೊಂಡರು. ಶ್ರೀ|| ಭುಲಾಭಾಯಿ ದೇಸಾಯಿಯವರು ನಾಗರಿಕ-ರಕ್ಷಣೆಯ ಠರಾವನ್ನು ಸೂಚಿಸಿದರು. ನಾಗರಿಕ-ಸ್ವಾತಂತ್ರ್ಯವೆಂದು ಹಲವರು ಹಿಂಸಾಚಾರ ನಡಿಸಲು ಪ್ರೇರೇಪಿಸುತ್ತಾರೆ, ಇಂಥವರಿಗೆ ನಿರ್ಬಂಧಿಸುವದಕ್ಕಾಗಿ ಕೊಂಗ್ರೆಸ ಸರಕಾರಗಳು ತಕ್ಕ ಉಪಾಯ ಕೈಕೊಳ್ಳಬೇಕಾದೀತೆಂದು ಈ ಠರಾವಿನಲ್ಲಿ ನಮೂದಿಸಿತ್ತು. ಶ್ರೀ|| ಭುಲಾಭಾಯಿ ದೇಸಾಯಿಯವರು ಈ ಠರಾವನ್ನು ಮಂಡಿಸಿದ ಬಳಿಕ, ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ಅನುಮೋದಿಸಿದರು. ರಾಷ್ಟ್ರೀಯ ಸಭೆಯವರು ಲೋಕಕಂಟಕರಾದರೆಂದು ಸಮಾಜಸತ್ತಾವಾದಿಗಳೂ ಕಿಸಾನ ಪಕ್ಷದವರೂ ಪ್ರತಿಪಾದಿಸಿ ೧೦ ಉಪಸೂಚನೆಗಳನ್ನು ಸೂಚಿಸಿದರು. ಡಾ|| ಬಂಕಿಮ ಮುಕರ್ಜಿ, ಡಾ|| ಎಮ್. ಆರ್. ಮಸಾನಿ, ಸ್ವಾಮಿ ಸಹಜಾನಂದ ಸರಸ್ವತಿ, ಡಾ| ದತ್ತ ಮುಝುಮದಾರ, ಪ್ರೊ|| ರಂಗಾ ಮೊದಲಾದವರು ವಿರೋಧಿಸಿ, ಈ ಠರಾವನ್ನು ರದ್ದುಪಡಿಸಬೇಕೆಂದರು. ಸ್ವಾತಂತ್ರ್ಯದ ಹೆಸರಲ್ಲಿ ಸ್ವೇಚ್ಛಾಚಾರ ನಡೆದದೆಂದೂ ಅದನ್ನು ನಿರ್ಬಂಧಿಸುವದಕ್ಕಾಗಿ ಈ ಠರಾವು ಸೂಚಿಸಲಾಗಿದೆಂದೂ, ಅಹಿಂಸೆಯ ಅಭಾವದಲ್ಲಿ ನಾಗರಿಕ-ಹಕ್ಕಿನ ಪಾಲನೆಯಾಗುವದಿಲ್ಲವೆಂದೂ ಬಾಬು ರಾಜೇಂದ್ರ ಪ್ರಸಾದರವರು ವಾದಿಸಿ ಮೂಲ ಠರಾವಿಗೆ ಬೆಂಬಲವಿತ್ತರು. ಡಾ|| ಪಟ್ಟಾಭಿಸೀತಾರಾಮಯ್ಯಾ, ಸರದಾರ ವಲ್ಲಭಭಾಯಿ ಪಟೇಲ, ಪಂ|| ಗೋವಿಂದ ವಲ್ಲಭಪಂತ ಮೊದಲಾದವರ ಭಾಷಣಗಳಾದ ಬಳಿಕ, ವಿರೋಧಕರು ತಮ್ಮ ಉಪಸೂಚನೆಗಳು ಮನ್ನಣೆಹೊಂದುವ ಆಶೆ ಕಾಣದ್ದರಿಂದ, ನಿಷೇಧವೆಂದು ಸಭಾಸ್ಥಾನದಿಂದ ಎದ್ದು ನಡೆದರು. ಆ ಮೇಲೆ ಮತಗಣನೆಯಾಗಿ, ಶ್ರೀ|| ಭುಲಾಭಾಯಿ ದೇಸಾಯಿಯವರು ಸೂಚಿಸಿದ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಇಷ್ಟಾಗಲಿಕ್ಕೆ ರಾತ್ರಿ ೨ ಘಂಟೆ ಬಡಿದವು. ಸಭೆ ವಿಸರ್ಜಿಸಲ್ಪಟ್ಟಿತು.

ಕೊಂಗ್ರೆಸ ಕಾರ್ಯಕಾರಿ ಮಂಡಳವು ಇನ್ನೂ ದಿಲ್ಲಿಯಲ್ಲಿಯೇ ನಿತ್ಯವೂ ಸಭೆಗೂಡುತ್ತಲಿದೆ. ಯುರೋಪ ಖಂಡದೊಳಗಿನ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಲಿದೆ. ಝೆಕ್ ಸರಕಾರದೊಡನೆ ಸಹಾನುಭೂತಿಯನ್ನು ಪ್ರದರ್ಶಿಸುವ ತೀರ್ಮಾನ ಕೈಕೊಳ್ಳಲಾಗಿದೆ. ಈಗಿನ ಪರಿಸ್ಥಿತಿ ಬಿಕ್ಕಟ್ಟಿನದಾದ್ದರಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳವು ದಿನಾಲು ಸಭೆಗೂಡಬೇಕೆಂದು ನಿರ್ಣಯವಾಗಿದೆ. ಯುದ್ಧಪರಿಸ್ಥಿತಿಯಲ್ಲಿ ರಾಷ್ಟ್ರೀಯಸಭೆಯ ಧೋರಣವನ್ನು ನಿರ್ಧರಿಸುವ ಕುರಿತು ಆಲೋಚನೆಯಾಗುತ್ತಲಿದೆ. ಯುದ್ಧವಾಗುವ ಪ್ರಸಕ್ತಿಯಲ್ಲಿ ಹಿಂದುಸ್ಥಾನವು ಕೈಕೊಳ್ಳಬೇಕಾದ ಧೋರಣವನ್ನೂ ಅದನ್ನು ಸ್ಥಿರಪಡಿಸಬೇಕಾದ ಉಪಾಯಗಳನ್ನೂ ಮಹಾತ್ಮರು ಕಲ್ಪಿಸಿಟ್ಟಿದ್ದಾರಂತೆ! ಯುದ್ಧಪ್ರಸಂಗದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ಕೈಕೊಳ್ಳುವ ನಿರ್ಣಯವನ್ನು ಕೊಂಗ್ರೆಸ ಸರಕಾರಗಳು ಪುರಸ್ಕರಿಸುವದು ನಿಶ್ಚಯ. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಯ ಸಮಯ ಕೊಂಗ್ರೆಸ ಪ್ರಾಂತಗಳ ಮುಖ್ಯ ಪ್ರಧಾನರು ನಿಮಂತ್ರಿಸಲ್ಪಟ್ಟಿದ್ದರು. ಅವರೊಡನೆ ಮಹಾತ್ಮರೂ ಕೊಂಗ್ರೆಸ ಕಾರ್ಯಕಾರಿ ಮಂಡಳದವರೂ ಆಲೋಚನೆ ಮಾಡಿದ್ದಾರೆ. ಮಹಾತ್ಮರೊಡನೆ ಬ್ರಿಟಿಶ ಸಾಮ್ರಾಜ್ಯ ಸರಕಾರವು ಮುಂದಿನ ಕಾರ್ಯಕ್ರಮದ ಕುರಿತು ಆಲೋಚನೆಮಾಡಬಹುದಾಗಿ ಹೇಳುತ್ತಾರೆ. ಯುದ್ಧವಾದಲ್ಲಿ, ಯುದ್ಧದೊಳಗೆ ಪ್ರವೇಶಿಸಬಾರದೆಂದು ಕೊಂಗ್ರೆಸ ಕಾರ್ಯಕಾರಿ ಮಂಡಳವು ನಿರ್ಧರಿಸುವಲ್ಲಿ ಪ್ರಧಾನ ಮಂಡಳಗಳನ್ನು ವಿಸರ್ಜಿಸಿ ಗವ್ಹರ್ನರರು ಸರ್ವಾಧಿಕಾರ ಪಡೆಯುವರೆಂದೂ, ಹಿಂದುಸ್ಥಾನ ಸರಕಾರವು ರಾಜಶಾಸನಗಳನ್ನು ಹೊರಡಿಸಿ ಲೋಕಸ್ವಾತಂತ್ರ್ಯವನ್ನು ನಿರ್ಬಂಧಿಸುವದೆಂದೂ ಹೇಳುತ್ತಾರೆ. ಹೀಗೆ ಸರ್ವಾಧಿಕಾರ ಪಡೆಯಬಾರದೆಂದು ಸಾಮ್ರಾಜ್ಯ ಸರಕಾರದ ಮುನೀಮರು ಗಾಂಧಿ ಮಹಾತ್ಮರೊಡನೆ ಸಂಧಾನದ ಸಂಭಾಷಣೆಯನ್ನು ನಡಿಸುವ ಪ್ರಸಂಗವಿರುವದಾಗಿ ಸುದ್ದಿಗಾರರ ಅಂಬೋಣ.

ಈಗ ಮಹಾಯುದ್ಧಯೋಗ ಖಂಡಿತ!

(೩ನೇ ಪಾನಿನಿಂದ ಮುಂದರಿಸಿದ್ದು)

ಈ ಜನಾಂಗವಾದರೂ ಮೀನ ಶನಿ, ಮಕರ-ಗುರುವಿನ ಯೋಗದಲ್ಲಿ ಆಕ್ರಮಿಸಲ್ಪಟ್ಟ ಚಿಕ್ಕ ಜನಾಂಗದ ಪಕ್ಷಪಾತಿಯಾಗಿ ಅರಸರ ಅಧಿಪತ್ಯದೊಳಗಿನ ಜನಾಂಗವು ಹೋರಾಡುವದಂತೆ!

ಮೀನ	ಮೇಷ	ವೃಷಭ	ಮಿಥುನ	
ಮೀನ	ಶನಿ	ಕೇತು		ಮಿಥುನ
ಕುಂಭ	ಗುರು ಚಂದ್ರ	೩೦-೧೧-೩೮ನೇ ದಿನದ ಗ್ರಹಸ್ಥಿತಿ.		ಕರ್ಕಾಟಕ
ಮಕರ				ಸಿಂಹ
ಧನು	ಬುಧ	ರವಿ	ಶುಕ್ರ ಕುಜ ರಾಹು	ಕನ್ಯಾ
	ಧನು	ವೃಶ್ಚಿಕ	ತುಲಾ	ಕನ್ಯಾ

ಈ ಉಲ್ಲೇಖ ಈವಾಗ ಬ್ರಿಟಿಶ ದೇಶಕ್ಕೇ ಅನ್ವಯಿಸುತ್ತದೆಂದು ನಮೂದಿಸುವದನವಶ್ಯಕ. ಯುದ್ಧಯೋಗ ಪ್ರಾರಂಭವಾದಂದಿನಿಂದ ಶುಕ್ರ-ಕುಜಯುತಿ ಕೂಡಿಬಂದದ್ದು ಇದೇ ಸಲ! ಇವೆರಡೂ ಗ್ರಹಗಳು ಒಂದಕ್ಕೊಂದು ಕೂಡಿಬರದಂತೆ ಭ್ರಮಣಮಾಡುತ್ತಿದ್ದವು ಮಿಥುನದಲ್ಲಿ ಕುಜನಿದ್ದರೆ ಕರ್ಕದಲ್ಲಿ ಶುಕ್ರ, ಕರ್ಕದಲ್ಲಿ ಕುಜ ಬಂದೊಡನೆ ಸಿಂಹದಲ್ಲಿ ಶುಕ್ರ ಹೀಗೆ ಒಬ್ಬರಿಗೊಬ್ಬರು ತಪ್ಪಿಸಿಕೊಳ್ಳುತ್ತಿದ್ದರು ಈ ಯೋಗವಾದರೂ ಕೂಡಿಬರುತ್ತಿದ್ದಿಲ್ಲ ಶುಕ್ರನು ವೃಶ್ಚಿಕದಿಂದ ವಕ್ರವಾಗಿ ತುಲಾಕ್ಕೆ ಸಂಕ್ರಮಣ ಮಾಡಿದ್ದರಿಂದ ಆರಸು-ಸೇನಾಧಿಪತಿಗಳು ಒಂದು ರಾಶಿಯಲ್ಲಿ ಕೂಡಿದರು. ಯುದ್ಧ ಪರಿಹರಿಸಬೇಕೆಂದು, ಯುದ್ಧದೊಳಗಿಂದ ಅಲಿಪ್ತವಾಗಿರಬೇಕೆಂದು ಬ್ರಿಟಿಶ ಪ್ರಧಾನ ಮಂಡಳವು ನಡಿಸಿದ ವಿಧವಿಧದ ಓಡಾಟಗಳು, ತರತರದ ಕಾರಸ್ಥಾನಗಳು ಕುಜ-ಶುಕ್ರರ ಭ್ರಮಣದ ಫಲಿತಾಂಶಗಳು ಬ್ರಿಟಿಶರು ಈ ಯೋಗದೊಳಗೆ ಯುದ್ಧದಲ್ಲಿ ಸೇರಿದೊಡನೆ ಯುದ್ಧಕ್ಕೆ ಪ್ರಚಂಡ ರೂಪಬಂದು ಇಡೀ ಭೂಮಂಡಳವೇ ಮಹಾಯುದ್ಧದಿಂದ ವ್ಯಾಪಿಸಿ ಹೋಗುತ್ತದೆ. ಹೀಗೆ ಯುದ್ಧವು ವಿಶ್ವವ್ಯಾಪಿಯಾದ ೧೦-೧೧ ದಿನಗಳಲ್ಲಿ ಪ್ರತಿಪಕ್ಷದ ಅಪಜಯವಾಗುವ ಯೋಗವುಂಟು.

* * *

ಲೋಕಕಂಟಕವಾಗಿ ನಾಗಿಹೋದ ಜನಾಂಗಕ್ಕೆ ಅಪಜಯವಾಗುವ ಯೋಗ ಚಂದ್ರನ ಕರ್ಕ ಸಂಕ್ರಮಣ ಕಾಲದಲ್ಲಿ. ಅಂದರೆ ಕುಂಭ-ಗುರುವಿನಿಂದ ಚಂದ್ರನು ಷಷ್ಟಸ್ಥಾನದಲ್ಲಿ ಸಂಕ್ರಮಣ ಮಾಡಿದಾಗ ಈ ಉಲ್ಲೇಖ ಜರ್ಮನಿಯ ಹಿಟ್ಲರರಿಗೇ ಅನ್ವಯಿಸುವಂತಹದು. ಈ ಯೋಗ ಒದಗಿಬರುವದು ಮಾರ್ಗಶೀರ್ಷ ಕೃ| ಅಷ್ಟ ರವಿವಾರ ತಾ. ೧೧-೧೨-೩೮ ನೇಗ ಅದೇ ಒಂದು ತಿಂಗಳಲ್ಲಿ ಅಂದರೆ ಪುಷ್ಯ ಕೃ| ಹಿಂಸ್ಯೆ ವರೆಗೆ "ನೀಚರ ಪ್ರದೇಶಗಳಲ್ಲಿ" ಕಲಹ, ಮತ್ಸರ, ಬಡದಾಟ, ಹೋರಾಟ ಮೊದಲಾದವುಗಳು ನಡದು ಭಯಂಕರ ನಷ್ಟವಾಗುವದು. ನೀಚರ ಪ್ರದೇಶದ ಉಲ್ಲೇಖ ಪಾಶ್ಚಿಮಾತ್ಯ ದೇಶಗಳನ್ನು ಉದ್ದೇಶಿಸಿ ಬರೆದಿದೆ. ಈ ಗ್ರಹಸ್ಥಿತಿ ಪಾಶ್ಚಿಮಾತ್ಯ ದೇಶಗಳಿಗೇ ಬಾಧೆ ಕೊಡುವದು; ಹೊರತು ಪೌರ್ವಾತ್ಯ ದೇಶಗಳಿಗೆ ಇವುಗಳಿಂದ ಬಾಧೆಯಿಲ್ಲ. ಪೌರ್ವಾತ್ಯ ದೇಶಗಳಿಗೇನೂ ಹೆದರಿಕೆಯಿಲ್ಲವಾಗಿ ಅಗಸ್ತ್ಯ ಮಹಾಮುನಿಗಳು ಆಶ್ವಾಸನ ಕೊಡುತ್ತಾರೆ. ಆ ಕಾಲದ ಗ್ರಹಸ್ಥಿತಿ ಹೀಗುಂಟು:—

ಮೀನ	ಮೇಷ	ವೃಷಭ	ಮಿಥುನ	
ಮೀನ	ಶನಿ	ಕೇತು		ಮಿಥುನ
ಕುಂಭ	ಗುರು	೧೧-೧೨-೩೮ನೇ ದಿನದ ಗ್ರಹಸ್ಥಿತಿ.		ಕರ್ಕಾಟಕ
ಮಕರ	ರವಿ ಚಂದ್ರ			ಸಿಂಹ
ಧನು	ಬುಧ	ಶುಕ್ರ ಕುಜ	ರಾಹು	ಕನ್ಯಾ
	ಧನು	ವೃಶ್ಚಿಕ	ತುಲಾ	ಕನ್ಯಾ

ವೃಷಭದಿಂದ ಕನ್ಯಾ ವರೆಗಿನ ರಾಶಿಗಳಲ್ಲಿ ಗ್ರಹಗಳಿಲ್ಲ, ಎಲ್ಲ ಗ್ರಹಗಳು ತುಲಾದಿಂದ ಮೇಷ ವರೆಗಿನ ರಾಶಿಗಳಲ್ಲಿ ಸೇರಿವೆ. ಈ ಗ್ರಹಸ್ಥಿತಿಯ ಮೇಲಿಂದ ಪಾಶ್ಚಿಮಾತ್ಯ ದೇಶಗಳಿಗೇ ಅರಿಷ್ಟವೆಂದೂ ಪೌರ್ವಾತ್ಯ ದೇಶಗಳಿಗೆ ಭಯವಿಲ್ಲವೆಂದೂ ಮಹಾಮುನಿಗಳು ಅಭಿಪ್ರಾಯ ಪಟ್ಟಿದ್ದಾರೆ.

* * *

ಗುರುವು ಕುಂಭ ರಾಶಿಯಿಂದ ಮೀನರಾಶಿಗೆ ಸಂಕ್ರಮಣ ಮಾಡಿದಾಗ ಭಯಂಕರ ಅನರ್ಥವೊದಗುವದು. ಇದು ಪ್ರಮಾಥಿ ಸಂ|| ಚೈತ್ರ ಕೃ| ಅಮಾ (ತಾ. ೮-೪-೧೯೩೯)ನೇಗೆ ಆ ಸಮಯ ಪಶ್ಚಿಮಾತ್ಯ ಜನಾಂಗಗಳಲ್ಲಿ ಕಲಹಗಳ ಪರಮಾವಧಿಯಾಗಿ ಸರ್ವನಾಶವಾಗುವದು. ಸೋತವರಿಗಂತು ನಾಶವೇ, ಗೆದ್ದವರಿಗೂ ಯುದ್ಧದ ದಣುವಾಗಿ ಸಾಕು—ಬೇಕಾಗುವದು. ಅಂತು ಝೆಕೊಸ್ಲೊವಾಕಿಯಾ ಜನಾಂಗದ ಮೇಲಿನ ಆಪತ್ತು ದಾಟಿ ಅದು ಬದುಕುತ್ತದೆ.

* * *

ಹಿಂದುಸ್ಥಾನದ ಮಟ್ಟಿಗೆ ಶುಕ್ರ-ಕುಜರು ತುಲಾ ರಾಶಿಯಲ್ಲಿ ಒಟ್ಟಾದಾಗ ಕೆಲವು ಗಡಿಬಡಿಯಾಗುವದಾಗಿ ಅಗಸ್ತ್ಯ ಮಹಾಮುನಿಗಳ ಎಣಿಕೆ. ಬ್ರಿಟಿಶರು ಯುದ್ಧದಲ್ಲಿ ಸೇರುವ ಯೋಗ ಇದೇ ಎಂದು ಮಹರ್ಷಿಗಳು ಸೂಚಿಸಿದಾಗ, ಈ ಯೋಗದಲ್ಲಿ ಹಿಂದುಸ್ಥಾನದೊಳಗೆ ಗಡಿಬಿಡಿಯಾಗುವದು ಸಹಜ ಈ ಗಡಿಬಿಡಿಯ ಫಲವಾಗಿ ಹಿಂದುಸ್ಥಾನದ ಸ್ಥಿತಿ ೧-೩ ತಿಂಗಳುಗಳಲ್ಲಿ ಬಹುಮಟ್ಟಿಗೆ ಸುಧಾರಿಸುವದೆಂದು ಮಹಾಮುನಿಗಳು ಆಶೀರ್ವಾದ ಕೊಡುತ್ತಾರೆ ಯೋಗಗಳೂ ಯುರೋಪ ಖಂಡದೊಳಗಿನ ಘಟನೆಗಳೂ ಇದೀಗಲೇ ಕೂಡಿಬರುತ್ತವೆ. ಹಿಟ್ಲರರ ಮನಪ್ರೊಲಿಕೆಗಾಗಿ, ಯುದ್ಧಪರಿಹಾರಕ್ಕಾಗಿ ಚೆಂಬರಲೇನ ಮುದುಕರು ಸೊಂಟ ಬಿಗಿದಿದ್ದಾರೆ ಯೋಗಗಳು ಸಾರ್ಥಕವಾಗುವವೋ ನಿರರ್ಥಕವಾಗುವವೋ? ಎಂಬ ಸಂಗತಿ ನಾನೇನು ಹೇಳಲಾರೆ. ಆಗು-ಹೋಗುಗಳಿಗೆ ಮಾನವನು ಒಡೆಯನಲ್ಲವಷ್ಟೇ! ಅಗಸ್ತ್ಯ ಮಹಾಮುನಿಗಳು ಹಾಗೆಯೇ ಎಣಿಸಿ, ಅಂತೆಯೇ ಭಾವಿಸಿ ಜ್ಯೋತಿಷ ಗ್ರಂಥವನ್ನು ಬರೆದಿದ್ದಾರೆ. ಮಾನವನು ಸ್ವತಂತ್ರ ಪ್ರಾಣಿಯಲ್ಲ; ದೈವಾಧೀನನಾತನು ವಿಧಿಘಟನೆಯಂತೆ ಕರ್ಮಭೂಮಿಯಲ್ಲಿ ಕ್ಲಪ್ತ ಕರ್ಮಗಳನ್ನು ನಡಿಸಲು ಆತನು ಹುಟ್ಟುತ್ತಾನೆ. ಶ್ರೀಮದ್ಭಗವದ್ಗೀತೆಯಲ್ಲಿ ಸಾರಥಿಯಾದ ಶ್ರೀ ಕೃಷ್ಣ ಪರಮಾತ್ಮನು ರಥಿಕನಾದ ಪಾರ್ಥನೆಡೆ ನುಡಿದಂತೆ, ಮಾನವನು ನಿಮಿತ್ತಮಾತ್ರನು; ಅಲ್ಲದೆ ಕಾರ್ಯಕರ್ತನಲ್ಲ! ಆ ಅಧಿಕಾರ ಮಾನವನಿಗೆ ವಿಧಿಯಿಂದ ಕೊಡಲ್ಪಡಲಿಲ್ಲ ವಿಧಿಘಟನೆಯಂತೆ ಗ್ರಹಗಳು ಭ್ರಮಿಸುತ್ತವೆ, ಅವುಗಳ ಪ್ರತಿಕ್ರಿಯಾರೂಪದಿಂದ ಭೂಲೋಕದೊಳಗಿನ ವ್ಯಾಪಾರಗಳು ನಡೆಯುತ್ತವೆ. ಅಗಸ್ತ್ಯ ಮಹಾಮುನಿಗಳಂಥ ಮಹಾಜ್ಞಾನಿಗಳ ವಚನ ಸತ್ಯವಾಗಲೇಬೇಕು ಆದರಿಂದ ಈಗಿನ ಘಟನೆಗಳ ರೂಪ ತಿಳಿಯಲೆಂದು ಆ ಗ್ರಂಥದೊಳಗಿನ ಉಲ್ಲೇಖಗಳನ್ನು ಒಂದೆಡೆ ಕಲೆಹಾಕಿದ್ದೇನೆ ಅಭ್ಯಾಸಿಗಳು ಪರಾಂಬರಿಸಿ ಸದ್ಬೋಧೆ ಪಡೆಯಲಿ!

25,000 ವಿವಿಧ ಶಬ್ದಗಳುಳ್ಳ! ಹೊಸ ನಿಘಂಟು!!

ಸ್ಟುಡಂಟ್ಸ ಮೊಡರ್ನ ಪ್ರೆಕ್ಟಿಕಲ್ ಡಿಕ್ಸನರಿ.

ಇಂಗ್ಲಿಷ ಕನ್ನಡ

ಬರೆದವರು:- ವೈಷ್ಣಧಾಮ ಡಿ. ಕೆ. ಭಾರದ್ವಾಜ ವಿದ್ಯಾಭೂಷಣ ಮೈಸೂರ ಯೂನಿವರ್ಸಿಟಿ ವ್ಯಾಸ ಚಾನ್ಸಲರರ ಮುನ್ನುಡಿಯುಳ್ಳ, ಸರ್ ಎಮ್ ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ|| ಯು. ರಾಮರಾಯರು ಹರಸಿದ ಈ ಡಿಕ್ಸನರಿಯು ಇಡೀ ಕರ್ನಾಟಕದಲ್ಲಿ ಹೊಸ ಸಾಹಸ. ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕಂಥದ್ದು ಬೆಲೆ ಕೇವಲ ೩ ರೂ. ಟಪಾಲ ಖರ್ಚು ಪ್ರತ್ಯೇಕ ಸಿಗುವಸ್ಥಳ - ದಿ ನ್ಯೂ ಸಪ್ಲೈ ಏಜನ್ಸಿ, ಕುಮಟಾ.

ಬನ್ನಿರಿ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಊಟಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ "ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:— ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಓಂ

'दशमूलारिष्ट.'
'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕೊಡದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ ಆದರೆ ಈ ಪ್ರಾಂತದಲ್ಲಿ ಎಲ್ಲಾ ಗಂಧ ವನಸ್ಪತಿಗಳು ತಾಜಾ ಸಿಗುವದರಿಂದ ಇತರ ಗುಣವು ಬಲು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ದೂರ ಮಾಡಿಸಿ ಮೈಯಲ್ಲಿ ತಾಕತ್ತನ್ನೂ, ಶಕ್ತಿಯನ್ನೂ ತುಂಬುಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ ಉದರರೋಗ, ... ಶಿರೋಗ ಮೂತ್ರಕೃಚ್ಛ್ರ, ದಾತುಕ್ಷೀಣತೆ ಗರ್ಭಾಶಯ ಶಚ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಿರುತ್ತದೆ

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸ ದಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದಮೊದಲಿನಂತೆ ನವತಾರ ಣ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡಬೇಕು

೧೬ ಔನ್ಸ ಬಟ್ಲಿಗೆ ರೂ ೧—೪—೦
,, ಬಟ್ಲಿಗೆ ರೂ ೬ ೧೨—೦
,, ಬಾಟ್ಲಿಗೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಮಿಶ್ರ ಕೂಷ್ಮಾಂಡಪಾಕ, ವೃದ್ಧಿ ಸನದ್ರಾಕ್ಷಾರಿಷ್ಟ, ಕುಮಾರಿ ಆಸವ, ಏಕಾಂಗವೀರ ವುನರ್ನವಾ ಆಸವ, ಅಶೋಕಾರಿಷ್ಟ ಕನಕ ಬಿಂದು ... ಸಾರಸ್ವತ ... ನಾರಾಯಣ ತೈಲ, ... ಗರ ತೈಲ ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ ಕನ್ನಡ)

ಶ್ರೀಧೂತಪಾಪೇಶ್ವರ ಆಯುರ್ವೇದ ಕಾರಖಾನೆ

TRADE MARK

ಪನವೇಲಿ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಮತ್ತು ಅಶಕ್ತತೆಯ ಮೇಲೆ ಉಪಯುಕ್ತ ಔಷಧವು

ಅಭ್ರಲೋಹ
ABHRALOHA

ಡೆಪೋ ... — ಕಾರಂಜ ರ ಮೆಸರ್ಸ ಮುಮುವಾರ ಕಸಬೇಕರ ಬ್ರದರ್ಸ ... ಹುಬ್ಬಳ್ಳಿ ... ಕಲ್ಯಾಣಪುರ ಬ್ರದರ್ಸ

ದಿ ಬೊಂಬಾಯಿ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908

ಈ ಕಂಪನಿಯು ಪ್ರೀಮಿಯಮ್ ... ಇದ್ದು, ... ದರಗಳೂ, ಶರ್ತುಗಳೂ ಬಹಳ ಸೋಯಿಸ್ಕರ ... ಪಾಲಿಸಿಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯು ... ವಹಿಸಲ್ಪಟ್ಟಿದೆ

ಮ್ಯುಚ್ಯುವಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ವಿಸ್ತೃತ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು

Kumta Agents
D K Nayak Bros
K N Nayak
Honavar Agent
R V Prabhu

K. Padmanabha Rao & Sons.
BELGAUM
Chief Agents for
Karnatak Districts & S M States

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಸ್ಯದ ಪುಡಿ ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರ ಮಂದಿ

(Registered Trade Mark)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂದೆತಲೆಸೋವು ತಲೆಯಲ್ಲಿಯು, ಮೂಗಿನ ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ... ಗಳನ್ನು ... ನಸ್ಯ ... ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ... ಎಲ್ಲವೂ ಪರಿಹಾರವಾಗುವದು ಇದನ್ನು ಅನೇಕ ಪೃಥಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪ್ಯಾಕೆಟ ... ಒಂದಕ್ಕೆ ಕ್ರಯ ರೂ ... ರೂ ೨-೮-೦ ವಿ ಪಿ ... ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ... ಬರೆಯಿರಿ

ಪತ್ರ ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦ ... ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270.

Monday, 10th October, 1938.

ವರ್ಷ ೨೧

ಕಾನಡಾವೃತ್ತ

THE KANARA NEWS

ಸಂಚಿಕೆ ೧೫

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नत्यातिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ ಟೈಪಿನ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ 1-0-0
ಆ ನಂತರ ಪ್ರತಿಸಾಲಿಗೆ 0-2-0
ಹತ್ತಿಂಗಳ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೧೦ ಮಾಹೆ ಅಕ್ಟೋಬರ ಸನ್ ೧೯೩೮ನೇ ಇಸವಿ)

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans Cellateral may be either gold, produce of various kinds, shares of a prosperous company, documentary trade bills, or a life insurance policy with sufficient surrender value

We grant only secured loans. Subject to this condition the large resources of this bank and the expert services of its staff are always available to businessmen and trading concerns

Estd 1906

RESOURCES
OVER A CRORE.

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ
ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
1—10—1938

The Agricultural & Industrial Bank, Ltd.

ವಾರ್ತೆಗಳು.

— ಪುಣೆಯೊಳಗೆ ಮುಂಬಯಿ ಎಸೆಂಬ್ಲಿಯ ಅಧಿವೇಶನ ಇನ್ನೂ ನಡೆದಿದೆ. ಕೂಲಿಕಾರ ಸಂರಕ್ಷಣೆಯ ಕಾನೂನಿನ ಚರ್ಚೆ ನಡೆದಿದೆ. ರಾ|| ಝಾಬವಾಲಾ, ಪರೂಳೆಕರ ಮೊದಲಾದ ಕೂಲಿಕಾರ ಪಕ್ಷದ ಸಭಾಸದರು ಅನಾವಶ್ಯಕವಾಗಿ ಉದ್ದುದ್ದ ಭಾಷಣಗಳನ್ನು ಮಾಡಿ ಕಾಲಹರಣ ಮಾಡುತ್ತಿದ್ದಾರೆ ಬಾರಿಬಾರಿಗೂ ವ್ಯಕ್ತಿಶಃ ಮತಗಣನೆಯಾಗಬೇಕೆಂದು ದುರಾಗ್ರಹ ಹಿಡಿಯುತ್ತಾರೆ. ಬುಧವಾರದ ಸಭೆಯಲ್ಲಿ ಈ ಪ್ರಕಾರ ೧೨ ಬಾರಿ ಮತಗಣನೆ ಮಾಡಬೇಕಾಯಿತು. ಬಾರಿಬಾರಿಗೂ ವಿರೋಧ ಪಕ್ಷದವರು ಸೋತರು, ಸರಕಾರ ಪಕ್ಷ ಗೆದ್ದಿತು ಆದರೆ ಮತಗಣನೆಯಲ್ಲಿಯೇ ೩| ತಾಸು ಕಳೆದು ಹೋದವು ಆದರಿಂದ ಇನ್ನು ಮುಂದೆ ಸಭೆಯನ್ನು ಈಗಿನಂತೆ ಅಪರಾಹ್ಣ ೩|| ಘಂಟೆಯಿಂದ ೭|| ತನಕ ೪ ತಾಸು ಕೆಲಸ ನಡಿಸುವ ಬದಲು, ಮಧ್ಯಾಹ್ನ ೧೧||ಯಿಂದ ೧| ತನಕ ೨ ತಾಸು, ಅಪರಾಹ್ಣ ೨||ಯಿಂದ ಸಂಜೆ ೭ರ ತನಕ ೪|| ತಾಸು, ಹೀಗೆ ೬|| ತಾಸು ನಡಿಸಬೇಕೆಂದು ಅಧ್ಯಕ್ಷರು ಬುಧವಾರದ ಸಭೆಯಲ್ಲಿ ಅಪ್ಪಣೆ ಮಾಡಿದ್ದಾರೆ. ನಿಸ್ಸಾರಣವಾಗಿ ವ್ಯಕ್ತಿಶಃ ಮತಗಳನ್ನು ಕೇಳಿ ಕಾಲಹರಣ ಮಾಡದೆ, ಚರ್ಚೆಯನ್ನು ಸಂಕ್ಷಿಪ್ತವಾಗಿ, ಸುಸಂಗತವಾಗಿ, ವಿಷಯಾಂತರ ಮಾಡದೆ ತರ್ಕಗಳ ಪುನರುಕ್ತಿಯಾಗದಂತೆ ನಡಿಸಬೇಕೆಂದು ವಿರೋಧ ಪಕ್ಷದವರಿಗೆ ಅಧ್ಯಕ್ಷರು ವಿನಂತಿ ಮಾಡಿಕೊಂಡರು

— ಸರ್ವಾಧಿಪತಿಗಳಾದ ಲಿನ್‌ಲಿದ್‌ಗೋ ದೊರೆಗಳು ರಜೆ ಕೊಂಡು ಲಂಡನಿಗೆ ಹೋಗಿದ್ದರಷ್ಟೇ! ಅವರು ಇದೇ ಬರುವ ಅಕ್ಟೋಬರ ೨೪ನೇ ತಾರೀಖಿಗೆ ಮರಳಿ ಮುಂಬಯಿಗೆ ಇಳಿಯುತ್ತಾರೆ ಹಾಗೆಯೇ ನೆಟ್ಟಗೆ ದಿಲ್ಲಿಗೆ ಹೋಗಿ ಹಾಜರಾಗುವರು ಆ ಮೇಲೆ ರಾಷ್ಟ್ರೀಯ ಸಭೆಯವರ ಆಕ್ಷೇಪಗಳನ್ನು ವಿಚಾರಿಸಿ ಸಂಯುಕ್ತ ರಾಜ್ಯಘಟನೆಯಲ್ಲಿ ಆದಷ್ಟು ತಿದ್ದುಪಾಟಗಳನ್ನು ಮಾಡಲಿರುವರಂತೆ ಪಾರ್ಲಿಮೆಂಟಿನ ಮನ್ನಣೆಯಿಲ್ಲದೆ ತಿದ್ದುಪಾಟಗಳನ್ನು ಒದಗಿಸಿ ತರಲು ಅಸಾಧ್ಯವಿರುವ ಸಂಗತಿಯಲ್ಲಿ ಆ ಪ್ರಕಾರ ಬ್ರಿಟಿಶ ಪ್ರಧಾನ ಮಂಡಳಕ್ಕೆ ಸೂಚಿಸಿ ಸಂಯುಕ್ತ ರಾಜ್ಯಘಟನೆಯಲ್ಲಿ ಅವಶ್ಯವಿದ್ದ ತಿದ್ದುಪಾಟಗಳನ್ನು ಮಾಡ ತಿಳಿಸುವರಾಗಿ ಸುದ್ದಿಗಾರರು ಹೇಳುತ್ತಾರೆ

— ಮಹಾತ್ಮರು ಗಡಿನಾಡಿಗೆ ತೆರಳಿದ್ದಾರೆ ಬುಧವಾರ ಸಂಜೆ ಪೇಶಾವರಕ್ಕೆ ತಲ್ಪಿದರು ಪೇಶಾವರ ಸ್ಟೇಶನಿನ ಮೇಲೆ ಸಾವಿರಾರು ಜನರು ತಂಡಗಟ್ಟಿ ದರ್ಶನೋತ್ಸುಕರಾಗಿ ಸೇರಿದ್ದರು ಗಡಿನಾಡಿನ ಗಾಂಧಿಗಳೆಂದ ಖ್ಯಾತಿಗೊಂಡ ಖಾನ ಅಬ್ದುಲ್ಲ ಗಫ್ಫಾರಖಾನರವರ ನಿವಾಸಸ್ಥಾನವಾದ ಉತಮಾಂಝಿಯಲ್ಲಿ ಮಹಾತ್ಮರು ಕೆಲ ಕಾಲ ವಿಶ್ರಾಂತಿ ಪಡೆದು ಗಡಿನಾಡಿನ ಪರಿಸ್ಥಿತಿಯನ್ನು ಅಭ್ಯಾಸ ಮಾಡುವರು ಪಠಾಣರ ಮನಸ್ಥಿತಿ, ಅವರ ತೊಡಕುಗಳು ಮೊದಲಾದವುಗಳನ್ನು ಮಹಾತ್ಮರು ಪ್ರತ್ಯಕ್ಷ ತಿಳಕೊಳ್ಳುವರು. ಪಠಾಣರ ಧೀರವೃತ್ತಿ, ಸಾಹಸ ವೃತ್ತಿಗಳನ್ನ ತಿಳಿಕೊಂಡು ಅಹಿಂಸೆಯ ತಳಹದಿಯ ಮೇಲೆ ಹಿಂದುಸ್ಥಾನದ ಗಡಿಸೀಮೆಯನ್ನು ಸಂರಕ್ಷಿಸಿಕೊಳ್ಳುವ ಉಪಾಯವನ್ನು ಪರಿಶೋಧಿಸುವರು ಪಾಳೆಯಗಾರರ ಉಪಟಳದ ಮೂಲಕ ಈ ಭಾಗದಲ್ಲಿ ಹಿಂದುಸ್ಥಾನದ ಸೈನ್ಯ ಇಲಾಖೆಯವರು ಕೋಟ್ಯಾವಧಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ ಅದನ್ನು ತಪ್ಪಿಸಲೋಸುಗ ಸುಖ ಶಾಂತಿಗಳನ್ನು ನೆಲಿಸಿಕೊಳ್ಳುವ ಉಪಾಯಗಳನ್ನು ಕಂಡು ಹಿಡಿಯುವದಕ್ಕಾಗಿ ಮಹಾತ್ಮರು ಗಡಿನಾಡಿನ ಸಂಚಾರವನ್ನು ಕೈಕೊಂಡಿದ್ದಾರೆ ಮಹಾತ್ಮರಿಗೆ ಹಾದಿಯಲ್ಲಿ ಲಾಹೋರದೊಳಗೆ ಒಳ್ಳೇ ಸಂಭ್ರಮದಿಂದ ಸ್ವಾಗತವಾಯಿತು. ನೂರಾರು ಜನರು ಸ್ಟೇಶನಿನಲ್ಲಿ ಪ್ಲೆಟಫಾರ್ಮ ಟಿಕೀಟು ಕೊಂಡು ಮಹಾತ್ಮರಿಗೆ ನೋಡಹೋಗಿದ್ದರು. ಅವು ಖರ್ಚಾದ ಬಳಿಕ, ಬಳಿಯಲ್ಲಿರುವ ಸ್ಟೇಶನಿನ ಟಿಕೇಟು ಕೊಂಡುಕೊಂಡರು. ಹಲವರು ಮಹಾತ್ಮರಿಗೆ ೫-೫ ರೂಪಾಯಿ ಕೊಟ್ಟು ತಮ್ಮ ಪುಸ್ತಕಗಳ ಮೇಲೆ ಮಹಾತ್ಮರ ಸಹಿ ಪಡಕೊಂಡರು. ಮಹಾತ್ಮರು ಆರೋಗ್ಯದಿಂದಿದ್ದಾರೆ ಹಾಸ್ಯವದನದಿಂದ ಮಹಾತ್ಮರು ಜನರಿಗೆಲ್ಲ ಸಂತೋಷಗೊಳಿಸಿ ಪೇಶಾವರಕ್ಕೆ ಮುಂದಾದರು

— ಗಾಂಧಿ ಜಯಂತಿಯ ಪ್ರೀತ್ಯರ್ಥ ದೇಶತುಂಬ ಬೇರೆ ಬೇರೆ ಪ್ರಕಾರದಿಂದ ಕಾರ್ಯಕ್ರಮಗಳು ನಡೆದವು ಪ್ರತಿಯೊಂದೆಡೆಯಲ್ಲಿಯೂ ಮಹಾತ್ಮರ ಅಭೀಷ್ಟಚಿಂತನ ಮಾಡಲಾಯಿತು. ಮಹಾತ್ಮರಿಗೆ ದೀರ್ಘಾಯುರಾರೋಗ್ಯವನ್ನು ಕರುಣಿಸಬೇಕೆಂದು ದಯಾಘನ ಜಗತ್ಪಾಲಕನಕಡೆ ಅಂಗಲಾಚಿ ಪ್ರಾರ್ಥಿಸಿಕೊಳ್ಳಲಾಯಿತು. ಹಲವು ಕಡೆಗಳಲ್ಲಿ ಕೈನೂಲಿನ ಪಂದ್ಯಾಟಗಳು ನಡೆದವು. ಹಲವೆಡೆ ಖಾದಿಯ ಸಂತೆಗಳಾದವು. ಸ್ವಯಂಸೇವಕರು ಮನೆಮನೆ ತಿರುಗಿ ಖಾದಿಯ ಮಾರಾಟ ಮಾಡಿದರು. ಈ ವರ್ಷ ಮದರಾಸ್ಸ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಗಾಂಧಿ ಟೊಪ್ಪಿಗೆ ಮಾರಾಟದ ಒಂದು

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ.

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ತ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್ ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ — **ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ**

ಅಂಕೋಲಾ — **ವೇದಮೂರ್ತಿ ಹನುಮಾಟ್ಟೆ ಕೇಶವ ಭಟ್ಟ.**

ಕಾರವಾರ — **ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ.**

ಹೊನ್ನಾವರ — **ಕಾಮತ ಸ್ಟೋರ್ಸ್.**

ಗೋಕರ್ಣ — **ಎಮ್ ವ್ಹಿ. ಬಸ್ತೀಕರ, ಮರ್ಚಂಟ.**

ಶಿರಸಿ — **ಆರ್. ವ್ಹಿ. ಭಾಕಪ್ಪಾ, ಕೆಮಿಸ್ಟ.**

ವಿಳಾಸ.—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಬ್ರೆಂಚ್ ಆಫೀಸು. ಕುಮಟಾ. ಉ. ಕ.

OR

BHUVANENDRA PRODUCTS LTD.
Head Office: **KATAPADI, S. K.**

ವಿಶೇಷ ಕಾರ್ಯಕ್ರಮವನ್ನೇರ್ಪಡಿಸಿ ಪುರಸ್ಕರಿಸಿದರು. ಸುಮಾರು ೬೦ ಸಾವಿರ ಗಾಂಧಿ-ಟೊಪ್ಪಿಗಗಳನ್ನು ಅವರು ಆವಾಗ ಮಾರಾಟ ಮಾಡಿದರು. ಹೆಚ್ಚಾಗಿ ವಿದ್ಯಾರ್ಥಿಗಳೇ ಇವನ್ನು ಕೊಂಡು ಕೊಂಡಿದ್ದರೆ. ಆದರೆ ನಿಜಾಮ ರಾಜ್ಯದ ಔರಂಗಾಬಾದದಲ್ಲಿ ಮಹಾತ್ಮರ ಸಾಮಾಜಿಕ ಜೀವನಕ್ರಮವನ್ನು ಬೋಧಿಸುವ ಸಭೆಗೆ ಪ್ರತಿಬಂಧಿಸಲಾಯಿತು. ಹಿಂದೀ ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಅಂಗವೆಂದು ಇದಕ್ಕೆ ೫೩ನೇ ಗಸ್ತಿಯಂತೆ ಪ್ರತಿಬಂಧಿಸಲಾಯಿತು. ಆದರೂ ರವಿವಾರ ತಾ. ೨ನೇಗೆ ಪ್ರಭಾತಫೇರಿ, ಈಶಪ್ರಾರ್ಥನೆ, ಖಾದಿಯ ಮಾರಾಟ ಮೊದಲಾದವುಗಳು ನಡೆದವು. ಮಹಾತ್ಮರ ಜೀವನಕ್ರಮದ ಕುರಿತು ಒಂದು ಹಸ್ತಪತ್ರಿಕೆಯೂ ಹಂಚಲ್ಪಟ್ಟಿತು. ರವಿವಾರ ನಿಜಾಮ ರಾಜ್ಯದಲ್ಲಿ ಶಾಲೆಗಳಿಗೆ ರಜೆಯಿಲ್ಲ, ಅಲ್ಲಿ ಶುಕ್ರವಾರ ರಜೆ. ಆದರೆ ಆ ದಿನ ಹುಡುಗರು ಶಾಲೆಗೆ ಹೋಗಲಿಲ್ಲ. ಗಿರಣಿ ಕೂಲಿಕಾರರೂ ಆ ದಿನ ಕೆಲಸಕ್ಕೆ ಹೋಗಲಿಲ್ಲ. ಹೀಗೆ ಸಂಸ್ಥಾನಿ-ಹಿಂದುಸ್ಥಾನದಲ್ಲಿಯೂ ಸಂಸ್ಥಾನೇತರ ಹಿಂದುಸ್ಥಾನದಲ್ಲಿಯೂ ಗಾಂಧಿ ಜಯಂತಿಯ ಉತ್ಸವವು ಸ್ಥಳಿಕ ಪರಿಸ್ಥಿತಿಗನುರೂಪವಾಗಿ ಸಮಾಚರಿಸಲ್ಪಟ್ಟಿತು.

— ರಜಪುತಾನಾದೊಳಗಿನ ಬಿಕಾನೇರ ಮತ್ತು ಜಯಪುರ ಸಂಸ್ಥಾನಗಳಲ್ಲಿ ಈ ಬಾರಿ ಏನೂ ಮಳೆಯಿಲ್ಲ. ಜನರು ನಿರ್ಗತಿಕರಾಗಿದ್ದಾರೆ. ದನ-ಕರುಗಳ ಬಾಳ್ವೆಯಂತು ಹೇಳತೀರದು, ಮೇವಿಲ್ಲದೆ ಅವು ಬಳಲುತ್ತಿವೆ. ಒಕ್ಕಲಿಗರು ಅವನ್ನು ಸಾಕಲಾಗದೆ ಕೊಟ್ಟಿಗೆಯಿಂದ ಹೊರಬಿಟ್ಟಿದ್ದಾರೆ. ತೀರ ಬಡವರು ೬-೮ ಆಣೆಗಳಿಗೊಂದರಂತೆ ಅವನ್ನು ಮಾರುತ್ತಿದ್ದಾರೆ! ಧರ್ಮಾತ್ಮರು ಮೂಕ ದನ-ಕರುಗಳಿಗೆ ಹುಲ್ಲು ಪೂರೈಸುವ ಏರ್ಪಾಟು ಮಾಡಿ ಗೋರಕ್ಷಣೆಯ ಶ್ರೇಯಸ್ಸನ್ನು ಪಡೆಯಬೇಕಾಗಿ ಮಾರವಾಡಿ ಸಂಕಟ ನಿವಾರಕ ಸಂಸ್ಥೆಯ ಕಾರ್ಯದರ್ಶಿಗಳು ಪ್ರಾರ್ಥಿಸಿಕೊಳ್ಳುತ್ತಾರೆ.

— ಗ್ವಾಲೇರ ಸಂಸ್ಥಾನಕ್ಕೊಳಪ್ಪಿದ ಖಾನಿಯಾಧಾನಾದ ಮಾಂಡಲೀಕರಾದ ರಾಜಾ ಖಲಾದಸಿಂಗರಾವ್‌ರವರು ಸಂಸಾರತ್ಯಾಗ ಮಾಡಿ ಪರಮಾತ್ಮನ ಧ್ಯಾನಮಗ್ನರಾಗಿ ಮುಂದಿನ ಆಯುಷ್ಯವನ್ನು ಕಳೆಯುವ ನಿರ್ಧಾರ ಮಾಡಿದ್ದಾರೆ. ಮಗ ದೇವೇಂದ್ರಪ್ರತಾಪಸಿಂಗಜಿಯವರಿಗೆ ಸಂಸ್ಥಾನದ ಕಾರಭಾರ ವಹಿಸಿ ಅವರು ಸದ್ಯಕ್ಕೇ ಸನ್ಯಾಸಿಯಾಗಿ ತೆರಳುವವರಿದ್ದಾರೆ.

— ರಾಜಕೀಯ ಅಪರಾಧಗಳಿಗಾಗಿ ಬಂಗಾಲದೊಳಗೆ ಸಾವಿರಾರು ದೇಶಾಭಿಮಾನಿಗಳು ಕಾರಾಗೃಹವಾಸವನ್ನನುಭವಿಸುತ್ತಿದ್ದಾರೆ. ಈಗ ಪ್ರಾಂತಗಳಿಗೆ ಪ್ರಾಂತಿಕ ರಾಜ್ಯಕಾರಭಾರದ ಮಟ್ಟಿಗೆ ಸರ್ವಾಧಿಕಾರ ದೊರೆತಿರುವದಾಗಿ ಹೇಳುತ್ತಾರೆ. ಇಂಥ ಸಮಯದಲ್ಲಿ ತಮಗೆ ಬಿಡುಗಡೆಯಾಗುವದು ಕ್ರಮಪ್ರಾಪ್ತವೆಂದು ಬಂಗಾಲದೊಳಗಿನ ರಾಜಕೀಯ ಕೈದಿಗಳು ಅಭಿಪ್ರಾಯಪಟ್ಟು ಬಿಡುಗಡೆಗಾಗಿ ಉಪೋಷಣವ್ರತವನ್ನು ಸಹ ಕೈಕೊಂಡಿದ್ದರು. ಮಹಾತ್ಮರು ಬಂಗಾಲ ಸರಕಾರದೊಡನೆ ಮಧ್ಯಸ್ಥಿಕೆ ನಡಿಸಿ ರಾಜಕೀಯ ಕೈದಿಗಳಿಗೆ ಬಿಡುಗಡೆ ಮಾಡುವ ಮಹಾಪ್ರಯತ್ನವನ್ನು ನಡಿಸುವ ಅಭಿವಚನ ಕೊಟ್ಟು ಬಂಗಾಲ ಸರಕಾರದೊಡನೆ ರಾಯಭಾರ ನಡಿಸಿದ್ದರು. ಈ ಕುರಿತು ತಾ. ೧೪-೪-೩೮ನೆಯಿಂದ ಮಹಾತ್ಮರಿಗೂ ಬಂಗಾಲ ಸರಕಾರದ ಗೃಹಮಂತ್ರಿಗಳಾದ ನಾಝಿಮುದ್ದೀನರವರಿಗೂ ನಡೆದ ಪತ್ರವ್ಯವಹಾರ ಪ್ರಕಟವಾಗಿದೆ. ಕೈದಿಗಳು ಸ್ವಾರ್ಥಕ್ಕಾಗಿ ಅಪರಾಧಕ್ಕೀಡಾಗಲಿಲ್ಲವೆಂದೂ, ರಾಜ್ಯಾಧಿಕಾರಪ್ರಾಪ್ತಿಗಾಗಿಯೇ ಹಿಂಸಾಚಾರ ಪ್ರವೃತ್ತರಾದರೆಂದೂ, ರಾಜ್ಯಸುಧಾರಣೆಗೆ ಅವರ ಸ್ವಾರ್ಥತ್ಯಾಗವೇ ಕಾರಣವಾಗಿದ್ದದರಿಂದ ಅವರಿಗೆ ಬಿಡುಗಡೆಯಾಗಬೇಕೆಂದೂ ಮಹಾತ್ಮರು ಸರಕಾರದ ಕಡೆ ರಾಯಭಾರ ನಡಿಸಿದರು. ದಯೆಯ ಯಾಚನೆಯನ್ನು ತಾವು ಮಾಡುವದಿಲ್ಲವೆಂದೂ, ಅಭಿಮಾನಿ ಕೈದಿಗಳು ಸಹ ಅಂಥ ಪ್ರವೃತ್ತಿಯನ್ನು ಧಿಕ್ಕರಿಸುತ್ತಾರಾಗಿಯೂ, ಮಾನಹಾನಿಯಾಗುವಂಥ ಯಾವದೇ ಕ್ರಮಕ್ಕೆ ಅವರ ಒಪ್ಪಿಗೆಯಿಲ್ಲವಾಗಿಯೂ ಮಹಾತ್ಮರು ನಿರ್ಧಾರದಿಂದ ತಿಳಿಸಿದ್ದರು. ಸಲಹೆಗಾರ ಮಂಡಳವನ್ನು ನೇಮಿಸಿಕೊಂಡು ತಾವು ವಿಚಾರ ಮಾಡಿ ಬಿಡುಗಡೆ ಮಾಡುತ್ತೇವಾಗಿ ಬಂಗಾಲ ಸರಕಾರದಿಂದ ಉತ್ತರ ಸಿಗಲು, "ಬೇಕಾದ ಉಪಾಯ ಮಾಡಿರಿ, ನಿರ್ದಿಷ್ಟ ತಾರೀಖಿನೊಳಗೆ ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕೆಂ"ದು ಮಹಾತ್ಮರು ಆಗ್ರಹ ಮಾಡಿದರು. ಅದಕ್ಕೆ ಬಂಗಾಲ ಸರಕಾರವು ಒಪ್ಪಲಿಲ್ಲ. ಪುನಃ ಮಹಾತ್ಮರು ಪ್ರಕಟಣೆಯನ್ನು ಹೊರಡಿಸಿ ಬರುವ ಎಪ್ರಿಲ್ ೧೦ನೇ ತಾರೀಖಿನೊಳಗೆ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ವಿಧಿಸಿದ್ದಾರೆ. ಪಕ್ಷಾಭಿಮಾನದಿಂದ ರಾಜಕೀಯ ಕೈದಿಗಳ ವಿಷಯ ವಿಚಾರವಾಗಬಾರದಾಗಿಯೂ ಮಹಾತ್ಮರು ಸೂಚಿಸಿ, ಸಕಲರಿಗೂ ತಾಳ್ಮೆ ಹಿಡಿಯಹೇಳಿದ್ದಾರೆ. ಬಂಗಾಲ ಸರಕಾರಕ್ಕೆ ನಿಷ್ಠುರತನದಿಂದ ಟೀಕಿಸಬಾರದಾಗಿಯೂ ಮಹಾತ್ಮರ ವಿನಂತಿ. "ಕೈದಿಗಳ ಕಷ್ಟಗಳನ್ನು ನಾನು ಬಲ್ಲೆ. ಕಾರಣಾಂತರಗಳಿಂದ ಅನೇಕಾವರ್ತಿ ನಾನು ಸೆರೆಮನೆವಾಸವನ್ನು ಅನುಭವಿಸಿದ್ದೇನೆ. ರಾಜಕೀಯ ಕೈದಿಗಳ ಮನೋವ್ಯಥೆಯನ್ನೂ ದೇಶಸೇವಾಲಾಲಸೆಯನ್ನೂ ನಾನು ಅರಿತಿದ್ದೇನೆ. ನಾನು ಅವರಿಗೆ ಹೊಣೆ ನಿಂತಿದ್ದೇನೆ, ಗಾಂಭೀರ್ಯದಿಂದ ವಚನ ಕೊಟ್ಟಿದ್ದೇನೆ. ಆದರಿಂದ ಅವರು ಏಪ್ರಿಲ್ ೧೦ನೇ ತಾರೀಖಿನ ತನಕ ತಾಳ್ಮೆ ಹಿಡಿಯಬೇಕು. ನಾನು ದೊಡ್ಡ ಮನುಷ್ಯನಲ್ಲ, ಅದ್ಭುತ ಚಮತ್ಕಾರವನ್ನು ಮಾಡಿತೋರಿಸಲಾರೆ. ಪರಮಾತ್ಮನು ಅನುಗ್ರಹಿಸಿದಷ್ಟೇ ಶಕ್ತಿ ನನಗಿರಬಲ್ಲದು. ಆತನು ರಾಷ್ಟ್ರೀಯ ಸಭೆಯ ವಿದ್ಯಮಾನ ದುಡಿಯುತ್ತಿದ್ದಾನೆ. ರಾಷ್ಟ್ರೀಯ ಸಭೆಯ ಶಕ್ತಿ-ಗೌರವಗಳೇ ನನ್ನ ಶಕ್ತಿ-ಗೌರವಗಳು! ರಾಷ್ಟ್ರೀಯ ಸಭೆಯ ಪ್ರತಿಷ್ಠೆ ಆ ಸಂಸ್ಥೆಯ ಧ್ಯೇಯದಲ್ಲಿಂಟು, ಸತ್ಯ ಅಹಿಂಸೆಗಳಿಂದಲೇ ರಾಷ್ಟ್ರೀಯ ಸಭೆಯು ಲೋಕೋದ್ಧಾರವನ್ನು ನಡಿಸುತ್ತಿದೆ" ಹೀಗೆ ಮಹಾತ್ಮರು ತಮ್ಮ ಪ್ರಕಟಣೆಯ ಕೊನೆಗೆ ಬರೆದು ಸಕಲರಿಗೂ ಸಮಾಧಾನ ತಾಳಲಪ್ಪಣೆ ಕೊಟ್ಟಿದ್ದಾರೆ.

— ಅಕಾಲ ಅತಿವೃಷ್ಟಿಯಿಂದ ದಕ್ಷಿಣ ಕನ್ನಡ, ಬೆಳಗಾವಿ ಜಿಲ್ಹೆಗಳಲ್ಲಿಯೂ ಬಹಳೇ ಹಾನಿಯಾಗಿದೆ. ಉಡುಪಿ, ಮಲ್ಪೆ, ಕುಂದಾಪುರ, ಬೈಂದೂರು ಕಡೆಗಳಲ್ಲಿ ಬಹಳ ಹಾನಿಯಾಗಿದೆ. ಬೈಂದೂರಿನಲ್ಲಿ ಭಯಂಕರ ಮಳೆ ಸುರಿಯಿತು. ಬುಧವಾರ ೨೮ನೇ ತಾರೀಖಿಗೆ ೧ ಘಂಟೆಗೆ ಸೇಲ್ಪಟ್ಟು ಅಂದರೆ ೧೫॥ ಇಂಚು ಮಳೆ ಎಡೆಬಿಡದೆ ಸುರಿಯಿತು. ತೆರಪಿಲ್ಲದ ಮಳೆ! ಎಲ್ಲೆಲ್ಲಿಯೂ ನೀರು. ಗುಡಿಸಲು-ಮನೆಗಳು ಕುಸಿದುಬಿದ್ದವು. ಅನೇಕ ದನಗಳು ತೇಲಿಹೋದವು. ಹೊಲಗಳಲ್ಲಿ ನೀರು ತುಂಬಿ ಹುಟ್ಟಿದ ಬೆಳೆ ಮಣ್ಣುಪಾಲಾಯಿತು. ಉಡುಪಿಯಲ್ಲಿಯೂ ಇದೇ ಪ್ರಕಾರ ಹಾನಿ! ತುಂಬ ಮಳೆಗಾಲದಲ್ಲಿ ಕಟ್ಟಿದ ನೆರೆಗಿಂತ ಈಗಿನ ನೆರೆ ಹಿರಿದು! ೧೪-೧೫ ವರ್ಷಗಳ ಹಿಂದೆ ಅಲ್ಲಿ ಹಿರಿನೆರೆ ಕಟ್ಟಿತ್ತು, ಆಗಲೂ ಇಷ್ಟು ನೆರೆ ಏರಿರಲಿಲ್ಲ! ಮೋಟಾರುಗಳ ಓಡಾಟ ಸಹ ನಿಂತುಹೋಯಿತು! ಬೆಳಗಾವಿ ಜಿಲ್ಹೆಯ ಹಳ್ಳಿಗಳಲ್ಲಿಯೂ ಇದೇ ಹಾಡು! ಹೀಗೆಯೇ ಒಂದೇಸವನೆ ಮಳೆ! ಅಥಣಿಯಲ್ಲಿ ವಿಪರೀತ ಮಳೆ ಸುರಿದು ಎಷ್ಟೋ ಮನೆಗಳು ಕುಸಿದುಬಿದ್ದವು. ಒಂದು ಮನೆಯಲ್ಲಿ ಮೂವ ಮಕ್ಕಳು ಸಿನೆಮಾ ನಾಟಕ ನೋಡಿ ಹಿಂತಿರುಗಿ ಮನೆಗೆ ಬಂದು ತಾಯಿ-ತಂದೆಗಳಿಗೆ ನಾಟಕದೊಳಗಿನ ಚಿತ್ರಗಳನ್ನು ಉಲ್ಲಾಸದಿಂದ ಬಣ್ಣಿಸುತ್ತ ನಿದ್ದೆಗೈಯ್ಯುತ್ತಿದ್ದರು! ಥಕ್ಕನೆ ಮನೆಯ ಮಾಳಿಗೆ ಕುಸಿದುಬಿತ್ತು; ಆ ಮೂವರು ಹುಡುಗರೂ ಅಲ್ಲಿಯೇ ತೀರಿಕೊಂಡರು, ತಾಯಿ-ತಂದೆಗಳು ಒಬ್ಬ ಮಗಳೊಡನೆ ಪಾರಾದರು. ಮಳೆಯಿಂದ ಗೋದಾವರಿ ನದಿಗೂ ನೆರೆಕಟ್ಟಿದೆ, ಹಿರಿನೆರೆ! ನಾಸಿಕ ಪಟ್ಟಣದಲ್ಲಿಯೂ ನೀರು ಏರಿದೆ! ಪೋಲೀಸ ಠಾಣ್ಯದ ಮೆಟ್ಟಲುಗಳ ತನಕ ನೀರು! ರಾಜಮಾರ್ಗಗಳು ಜಲಮಯವಾದವು. ಅನೇಕ ಮನೆಗಳು ನೀರುಪಾಲಾದವು. ಚಂದ್ರಭಾಗಾ ನದಿಗೆ ದಿನಬೆಳಗಾಗುವದರೊಳಗೆ ೬ ಫೂಟು ನೀರು ಏರಿ ನದಿಯನ್ನು ದಾಟಲಾಗದೆ ಮೋಟರುಗಳು ಹಿಂತಿರುಗಬೇಕಾಯಿತು. ಮುಂಬಯಿಯಲ್ಲಿಯೂ ಇದೇ ಅವಸ್ಥೆ! ಜೆ. ಜೆ. ಆಸ್ಪತ್ರಿ, ನಳಬಜಾರ, ಜೆಕೊಬ್ ಸರ್ಕಲ್, ದಾದರ, ಮಾಟುಂಗಾ ಕಡೆಗಳಲ್ಲಿ ಮಾರ್ಗಗಳ ಮೇಲೆಲ್ಲ ನೀರು! ಮೊಳಕಾಲು ತನಕ ನೀರೇ ನೀರು! ಬುಧವಾರ ಸಂಜೆ ೫ ಘಂಟೆಯಿಂದ ಮಧ್ಯರಾತ್ರಿಯ ತನಕ ಎಡೆಬಿಡದೆ ಮಳೆಸುರಿಯಿತು. ಟ್ರಾಮ್ ಬಂಡಿಗಳ ಓಡಾಟ ನಿಲ್ಲಿಸುವ ಪ್ರಸಂಗ ಬಂತು! ಮುಂಬಯಿಯಿಂದ ೯೦೦ ಮಂದಿ ಸೈನಿಕರನ್ನು ಹತ್ತಿಸಿಕೊಂಡು ಬುಧವಾರ ತಾ ೨೮ನೇಗೆ ಪಾಲಿಸ್ತಾನಕ್ಕೆ ಹೊರಟಿದ್ದ ಹಡಗ ಅರಬೀ ಸಮುದ್ರದಲ್ಲಿ ಮುಳುಗಿ ಹೋಯಿತೆಂದು ವಾರ್ತೆ! ಬ್ರಿಟಿಶ ಇಂಡಿಯಾ ಹಡಗ ಕಂಪನಿಯವರು ಇನ್ನೂ ಈ ಕುರಿತು ಖುಲಾಸೆ ಪ್ರಕಟಿಸಲಿಲ್ಲ! ಮುಂಬಯಿಯ ಪತ್ರಿಕೆಯವರು ಕೇಳಿದರೂ ಕಂಪನಿಯವರೂ ಅಧಿಕಾರಿಗಳೂ ಮೌನ ತಳೆದಿದ್ದಾರೆ.

— ದಿಲ್ಲಿಯೊಳಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ॥ ಸುಭಾಷಚಂದ್ರ ಬೋಸರವರ ಅಧ್ಯಕ್ಷತೆಯಲ್ಲಿ ಔದ್ಯೋಗಿಕ ಇಲಾಖೆಯ ಮಂತ್ರಿಗಳ ಪರಿಷತ್ತು ಸೇರಿ ಹಿಂದುಸ್ಥಾನದೊಳಗೆ ದೊಡ್ಡ ದೊಡ್ಡ ಕಾರಖಾನೆಗಳನ್ನು ಸ್ಥಾಪಿಸಬೇಕಾಗಿ ನಿರ್ಣಯವಾಗಿದೆ. ಇದಕ್ಕಾಗಿ ಅಖಿಲ ಭಾರತೀಯ ಔದ್ಯೋಗಿಕ ಮಹಾಮಂಡಲವು ನೇಮಿಸಲ್ಪಟ್ಟಿದೆ. ಈ ಮಂಡಳದವರು ಬೇರೆ ಬೇರೆ ಪ್ರಾಂತಗಳೊಳಗಿನ ಪರಿಸ್ಥಿತಿಯನ್ನು ವಿಚಾರಿಸಿ, ಆಯಾ ಭಾಗಕ್ಕೆ ಉಚಿತವಾದ ಕಾರಖಾನೆಗಳನ್ನು ಸ್ಥಾಪಿಸಬೇಕಾಗಿ ನಿರ್ಣಯಗಳಾಗಿವೆ. ರಷ್ಯ ದೇಶದ ಮಾದರಿಯ ಮೇರೆಗೆ ಹಿಂದುಸ್ಥಾನದೊಳಗೆ ಔದ್ಯೋಗಿಕ ಕ್ರಾಂತಿಯನ್ನು ಸಂಪಾದಿಸಿ ದೇಶದ ಅಭ್ಯುದಯ ಸಾಧಿಸಬೇಕೆಂದು ರಾಷ್ಟ್ರಪತಿಗಳು ಸೂಚಿಸಿದರು. ಕಾಂಗ್ರೆಸ ಪ್ರಾಂತಗಳೊಳಗಿನ ಔದ್ಯೋಗಿಕ ಇಲಾಖೆಯ ಮಂತ್ರಿಗಳು ಈ ಮಹಾಮಂಡಳದಲ್ಲಿ ಸೇರ್ಪ

(೧೮ನೇ ಪಾನದ ಮೇಲೆ ಮುಂದರಿಸಿದೆ)

ಪತ್ರಕರ್ತರ ನುಡಿಗನ್ನಡಿ.

೧ ಘಟಕಗಳೊಳಗ ಒದಗಿದ ಜಲಪ್ರಳಯದ ವಾರ್ತೆಯನ್ನೋದಿದರೆ ಮನಸ್ಸು ವ್ಯಾಕುಲಗೊಳ್ಳುತ್ತದೆ. ಭಾವೀ ಕಷ್ಟಗಳನ್ನು ಕನಸು ಮನಸ್ಸಿನಲ್ಲಿ ಸಹ ಎಣಿಸದೆ ಹೆಂಡರು-ಮಕ್ಕಳೊಡನೆ ಸುಖನಿದ್ರೆ ಅನುಭವಿಸುತ್ತಿದ್ದ ನೂರಾರು ಜನರು ನಡುರಾತ್ರಿಯೊಳಗ ನೆರೆ-ನೀರಿನ ಪ್ರವೇಶದಿಂದ ಎಚ್ಚರವಾಗುವದೂ ೨-೩ ತಾಸುಗಳಲ್ಲಿ ಸರ್ವಸ್ವವನ್ನು ಕಳಕೊಂಡು ನಿರ್ಗತಿಕರಾಗುವದೂ ಕಾಲಮಹಿಮೆಯೇ ಸೈ! ಅನಿತ್ಯವಾದೀ ಸಂಸಾರ, ಮಾಯಾಪ್ರಪಂಚವಿದು! ಎಂಬ ವೇದಾಂತೋಕ್ತಿಗಳು ಪ್ರತ್ಯಕ್ಷವಾಗಿ ದೃಗ್ಗೋಚರವಾಗುವ ಅಕಲ್ಪಿತ ಯೋಗವಿದು! ಯಾವಾತನ, ಯಾವ ಹೊತ್ತಿಗೆ, ಯಾವ ಪರಿಯಿಂದ ಸಂಕಟದಲ್ಲಿ ಸಿಲುಕಿ ಬಳಲುವನೆಂದು ಯಾರಿಂದಲೂ ಹೇಳಲಸಾಧ್ಯ! ಅಘಟಿತ ಘಟನೆಗಳನ್ನು ಲೀಲೆಯಿಂದ ನಡಿಸುವ ಪರಮಾತ್ಮನಿಗೇ ಅದೆಲ್ಲ ಗೋಚರ! ಇಂಥ ಆಪತ್ಕಾಲದಲ್ಲಿ ಶ್ರೀಮಂತ-ಬಡವ, ಉಚ್ಚ ನೀಚವೆಂಬ ಭೇದಭಾವ ಹಿಡಿಯದೆ ಸರ್ವರೂ ಶಕ್ತಿಮೀರಿ ನಿರಾಶ್ರಿತರಿಗೆ ಸಹಾಯ ನೀಡಬೇಕಾಗಿ ನಾವು ಪ್ರಾರ್ಥಿಸಿಕೊಳ್ಳುತ್ತೇವೆ. ಶ್ರೀಮಂತರಿಗಿಂತ ಬಡವರೇ ಮುಂದಾಗಿ ಸಹಾಯ ಮಾಡಬೇಕೆಂದು ನಮ್ಮ ಪ್ರಾರ್ಥನೆ. ಯಾಕೆಂದರೆ ಬಡವರ ಬಡತನದ ಸಹಾಯದಿಂದ ಬಡವರಿಗೊದಗಿದ, ಬಡವರಿಗೊದಗುತ್ತಿರುವ ದೈವೀ ಸಂಕಟಗಳು ದೂರವಾಗಬಲ್ಲವು. ಸುದಾಮದೇವರ ಅವಲನ್ನು ಶ್ರೀಕೃಷ್ಣ ಪರಮಾತ್ಮನು ಪ್ರೀತಿಯಿಂದ ಸೇವಿಸಿ ಸುದಾಮದೇವರ ಉದ್ಧಾರ ಮಾಡಿದ್ದಾನೆ. ಆದರಿಂದ ಬಡವರು ಬಡತನವೆಂದು ಸಂಕೋಚಪಡದೆ, ನಿರಾಶ್ರಿತ ನಿಧಿಗಾಗಿ ತಮ್ಮ ಕೈಲಾದಷ್ಟು ಸಹಾಯ ಮಾಡಬೇಕಾಗಿ ನಾವು ಆಗ್ರಹಪೂರ್ವಕ ವಿನಂತಿ ಮಾಡಿಕೊಳ್ಳುತ್ತೇವೆ. "ಹತ್ತರ ಹುಲ್ಲುಕಡ್ಡಿ, ಒಬ್ಬನ ತಲೆಹೊರೆ" ಎಂಬ ಗಾದೆ ಮಾತನ್ನು ಎಲ್ಲರೂ ಬಲ್ಲಾದ ವಿಷಯ. ಅಂತೆಯೇ ಪ್ರತಿಯೊಬ್ಬರೂ ಎಣಿಸಿ, ಬಂಧುವರಿಗೆ ಸಂಕಟಕಾಲದಲ್ಲಿ ನೆರವಾಗಲು ಬಂಧುಧರ್ಮದಿಂದ ನಾವು ಬದ್ಧರಿದ್ದೇವೆಂದೂ, ಆದನ್ನು ಎಂತಹ ಬಡಸ್ಥಿತಿಯಲ್ಲಿದ್ದರೂ ಪಾರಗಾಣಿಸಿ ತೀರಬೇಕೆಂದೂ ಎಣಿಸಿ ಶ್ರೀ ದೇವರು ಅನುಗ್ರಹಿಸಿದ ಶಕ್ತಿಯ ಮಟ್ಟಿಗೆ ನೆರವಾಗಲೇ ಬೇಕು. ಶ್ರೀಮಂತರಿಗೆ ಧರ್ಮ ಮಾಡಲು ನಾವು ವಿನಂತಿ ಮಾಡಿಕೊಳ್ಳುವದನವಶ್ಯಕ. ಬಾಂಧವರಿಗೆ ಸಂಕಟ ಕಾಲದಲ್ಲಿ ನೆರವಾಗಲು ಸಾಮರ್ಥ್ಯವುಳ್ಳವರು ಸ್ವಯಂಸ್ಫೂರ್ತಿಯಿಂದ ಧರ್ಮಕಾರ್ಯದಲ್ಲಿ ನೆರವಾಗಬೇಕು. ನಿರಾಶ್ರಿತರು ಭಿಕ್ಷೆ ಬೇಡುವವರಲ್ಲ, ಸ್ವಕಷ್ಟದಿಂದ, ಮರ್ಯಾದೆಯಿಂದ ಹೊಟ್ಟೆ ಹೊರೆಕೊಳ್ಳುವವರು. ಯಾವ ಕ್ಷೋಭದಿಂದಲೋ ಏನೋ, ಅವರಿಗೀ ಗತಿಯೊದಗಿಬಂದಿದೆ!! ಅದೇ ಅವಸ್ಥೆ ಯಾರಿಗೂ ಯಾವಾಗಲೂ ಬರಬಹುದೆಂದು ಎಣಿಸಿ ದೈವೀ ಕ್ಷೋಭೆಯ ಶಾಂತಿಗಾಗಿ, ಸಮಾಧಾನಕ್ಕಾಗಿ ಧರ್ಮ ಮಾಡಬೇಕೆಂದು ನಮ್ಮ ವಿನಂತಿಯಿದೆ. ಘಟಕಗಳ ಡಾ|| ಕೌಲಗುಡ್ಡರವರ ಅಧ್ಯಕ್ಷತೆಯಲ್ಲಿ ಏರ್ಪಟ್ಟ ನೆರೆನಿರಾಶ್ರಿತ ಸಹಾಯಕ ಮಂಡಳವು ನಿರಾಶ್ರಿತ ನಿಧಿಯ ವಿನಿಯೋಗವನ್ನು ತಕ್ಕ ರೀತಿಯಿಂದ ನಡಿಸುವದಾಗಿ ನಾವು ಸಕಲರಿಗೂ ಆಶ್ವಾಸನ ಕೊಡಬಲ್ಲೆವು. ಆದರಿಂದ ಸರ್ವರೂ ಐಕ್ಯಮತ್ಯದಿಂದ ನಿರಾಶ್ರಿತರಿಗೆ ಬದುಕಿಸಿಕೊಳ್ಳಲು ಆವಶ್ಯವುಳ್ಳ ಸಕಲ ಸಹಾಯಗಳನ್ನು ನೀಡುವಂತೆ ನಾವು ಕೋರುತ್ತೇವೆ.

---

೨ ನಿರಾಶ್ರಿತರಿಗೆ ಧರ್ಮಾರ್ಥವಾಗಿ ಊಟ ಉಣಕೊಳ್ಳುವ ವ್ಯವಸ್ಥೆಯನ್ನು ಶಾಶ್ವತವಾಗಿ ನಡಿಸುವದು ಅಸಾಧ್ಯ ಮಾತು. ಆ ಪ್ರಕಾರ ನಡಿಸಬೇಕೆಂದು ನಿರಾಶ್ರಿತರು ಎಣಿಸಬಾರದು. ಅವರೆಲ್ಲರೂ ಬೇರೆ ಬೇರೆ ಉದ್ದಿಮೆಯವರಿದ್ದು ಬೇರೆ ಬೇರೆ ಹೊರೆ ನಡಿಸಿ ಜೀವನೋಪಾಯ ಸಾಗಿಸುತ್ತಿದ್ದರು. ಅನೇಕರು ಒಕ್ಕಲಿಗರು, ಅನೇಕರು [illegible]ಗರು, ಅನೇಕರು ಕೂಲಿ ಕಸ್ತ ಮಾಡುವವರು, ಇ[illegible]ರಿಗೆ ಉದ್ಯೋಗ ಹಚ್ಚಿಕೊಡಬೇಕು, ಜೀವನೋಪಾಯ ಸಾಗಿಸಲು ಅವಶ್ಯವುಳ್ಳ ಸಾಧನ ಸಾಮಗ್ರಿಗಳನ್ನು ಪೂರೈಸಬೇಕು. ಅಧಿಕಾರಿಗಳು ನಿರಾಶ್ರಿತರ ಕಷ್ಟನಿವಾರಣೆಯ ಕಾರ್ಯದಲ್ಲಿ ಸಹಕರಿಸುತ್ತಿದ್ದಾರೆಂದು ತಿಳಿದು ನಮಗೆ ತುಂಬಾ ಸಂತೋಷವಾಗಿದೆ. ಅಧಿಕಾರಿಗಳು ಇವರಿಗೆ ಉಳಕೊಳ್ಳಲು ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಅವಶ್ಯವುಳ್ಳ ಸಾಹಿತ್ಯಗಳನ್ನು ಪುಕ್ಕಟೆಯಾಗಿ ಪೂರೈಸಬೇಕು. ಸರಕಾರದವರು ಕಾಮಗಾರಿಗಳನ್ನು ಪ್ರಾರಂಭಿಸಿ ಒಕ್ಕಲಿಗರಿಗೂ ಕೂಲಿಯಾಳುಗಳಿಗೂ ಜೀವನೋಪಾಯ ತೋರಿಸಿಕೊಡಬೇಕು. ನಿರಾಶ್ರಿತ ಸಹಾಯಕ ಮಂಡಳದವರು ನಿರಾಶ್ರಿತರ ಯಾದಿಯನ್ನೊಂದು ತಯಾರಿಸಿ ಅವರ ಉದ್ದಿಮೆಗಳ ಪತ್ತೆ ಹಚ್ಚಿ ಆಯಾ ಉದ್ದಿಮೆಗಳನ್ನು ನಡಿಸಲು ಅವರವರಿಗೆ ಅನುಕೂಲತೆ ಮಾಡಿಕೊಡಬೇಕು. ಇದೇ ನಿರಾಶ್ರಿತ ಸಹಾಯಕ ಮಂಡಳದ ಪ್ರಧಾನ ಕಾರ್ಯವೆಂದು ನಾವು ಎಣಿಸುತ್ತೇವೆ. ಲೋಕಪ್ರಮುಖರೂ ಅಧಿಕಾರಿಗಳೂ ಒಮ್ಮನಸ್ಸಿನಿಂದ ಈ ಕೆಲಸವನ್ನು ಕೈಕೊಂಡರೆ ತ್ವರ್ಯವೇ ನೆರೆನಿರಾಶ್ರಿತರು ಉದ್ಧಾರಹೊಂದುವರು.

---

೩ ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘದವರು ಗ್ರಾಮೋದ್ಯೋಗ ಪತ್ರಿಕೆಯಲ್ಲಿ ಅಕ್ಕಿಯ ಆಹಾರದ ಕುರಿತು ಪ್ರಕಟಿಸಿದ ಮಾಹಿತಿ ವಿಚಾರಾರ್ಹವಿದೆ. ಬೆಂಗಳೂರಿನ ಶಾಸ್ತ್ರಸಂಶೋಧಕ ಸಂಸ್ಥೆಯ ಡಾ|| ಏ ಶ್ರೀನಿವಾಸನ್‌ರವರು ಅಕ್ಕಿಯೊಳಗಿರುವ ದ್ರವ್ಯಗಳನ್ನು ಪರಿಶೋಧಿಸಿದ್ದಾರೆ. ಗಿರಣಿಗಳಲ್ಲಿ ಅಕ್ಕಿಯನ್ನು ತಯಾರಿಸುವ ಕ್ರಮದಿಂದ ಅಕ್ಕಿಯೊಳಗಿರುವ ಆಹಾರಸತ್ವಗಳೂ, ಸ್ನಿಗ್ಧ ಪದಾರ್ಥಗಳೂ, ಲೋಹಾಂಶಗಳೂ ಬಹುವಾಗಿ ಕುಗ್ಗುತ್ತವೆಂದು ಅವರ ಅಭಿಪ್ರಾಯ. ಗಿರಣಿಗಳಲ್ಲಿ ಅಕ್ಕಿಯನ್ನು ಹಸನ ಮಾಡಹೋಗದೆ ಕೈಯಿಂದ ಕುಟ್ಟಿ ಅಕ್ಕಿಯನ್ನು ತಯಾರಿಸಿದ್ದಲ್ಲಿ ಈ ಪದಾರ್ಥಗಳು ಅಕ್ಕಿಯಲ್ಲುಳಿದು ಶಾರೀರಿಕ ಬೆಳವಣಿಗೆಗೆ ನೆರವಾಗುತ್ತವಾಗಿಯೂ ಅವರ ಅಂಬೋಣವುಂಟು. ಗಿರಣಿಯಲ್ಲಿ ತಯಾರಾದ ಅಕ್ಕಿಯನ್ನು ಹಾಗೆಯೇ ಸೇವಿಸಿದರೆ ಕೆಲ ಮಟ್ಟಿಗಾದರೂ ಪ್ರಯೋಜನ ಸಿಗುತ್ತಿತ್ತು, ಜನರು ಅದನ್ನು ಚೊಕ್ಕವಾಗಿ ತೊಳೆದು, ಆ ಮೇಲೆ ಬೇಯಿಸಿ, ಗಂಜಿ ನೀರನ್ನು ಸೋಸಿ ಅನ್ನ ಮಾಡಿ ಉಣ್ಣುವ ಸಂಪ್ರದಾಯ ಬಿದ್ದಿದೆ. ಇದರಿಂದ ಅಕ್ಕಿಯಲ್ಲಿರುವ ಪೋಷಕ ದ್ರವ್ಯಗಳೆಲ್ಲ ಒಂದೊಂದಾಗಿ ನಷ್ಟವಾಗುತ್ತವೆ. ಇತ್ತಲಾಗಿ ಹಲ್ಲಿನ ರೋಗ ಹೆಚ್ಚಾಗಲು ಗಿರಣಿ ಅಕ್ಕಿಯ ಆಹಾರವೇ ಕಾರಣವೆಂದು ಶೋಧಕರ ಅಭಿಪ್ರಾಯ. ಅಕ್ಕಿಯಲ್ಲಿ ಕಾರ್ಬೋ-ಹೈಡ್ರೇಟ್ಸ್ (carbo-hydrates) ಎಂಬ ದ್ರವ್ಯವುಂಟು. ಹಲ್ಲು ಹಾಳಾಗದಂತೆ ಕಾಪಾ

SAVE AND BE SAVED

"IF ONLY I HAD SAVED SOMETHING, I WOULD NEVER HAVE COME TO THIS STATE! This is the sad and tragic exclamation of many unfortunate persons in straitened circumstances

It is the desire of the Syndicate to arm every individual against such a calamity, and accordingly it has devised the famous Pigmy Deposit Scheme which will not only help you to meet many of your unexpected wants of the future, but also make you cheerful and self reliant

THE CANARA INDUSTRIAL & BANKING SYNDICATE LTD.,

ESTD (Incorporated in British India) 1925

MEMBER: Reserve Bank of India, Bankers' Clearing House, Bombay.

Authorised Capital	Rs	10,00,000	Paid up Capital	Rs	3,86,880
Issued Capital	Rs	8 00 000	Reserves	Rs	2,16,700
Subscribed Capital	Rs	7,74,500	**Total Resources Exceed Rs. 51 Lacs.**		

ಡುವ ದ್ರವ್ಯವಿದು! ಯಂತ್ರಗಳಿಂದ ಅಕ್ಕಿಯನ್ನು ಪಾಲಿಶ ಮಾಡುವ ಕ್ರಮದಲ್ಲಿ ಈ ದ್ರವ್ಯ ನಷ್ಟ ಹೊಂದುತ್ತದೆ. ಇದಕ್ಕೆ ಆಫ್ರಿಕೆಯ ಬಂತುಸ ಜಾತಿಯವರೇ ಸಾಕ್ಷಿ. ಅವರು ಗಿರಣಿಯ ಹಿಟ್ಟು, ಬಿಳೇ ಸಕ್ಕರೆ ಮೊದಲಾದ ಸಾಮುಗ್ರಿಗಳನ್ನು ಉಪಯೋಗಿಸ ಪ್ರಾರಂಭಿಸಿದಂದಿನಿಂದ ಅವರ ಹಲ್ಲುಗಳು ಕೆಟ್ಟು ಹೋಗಿವೆ. ಅದರಿಂದ ಜನರು ಗಿರಣಿಯಲ್ಲಿ ತಯಾರಾಗುವ ಅನ್ನಸಾಮುಗ್ರಿಗಳನ್ನು ಸೇವಿಸಬಾರದಾಗಿಯೂ ಅವುಗಳ ಬದಲಿಗೆ ಕೈಯಿಂದ ಕುಟ್ಟಿದ ಅಕ್ಕಿ, ಕೈಯಿಂದ ಬೀಸಿದ ಹಿಟ್ಟು, ಬೆಲ್ಲ ಮೊದಲಾದವುಗಳನ್ನೇ ಉಪಯೋಗಿಸಿ ಕ್ಷೇಮ ಸಾಧಿಸಿಕೊಳ್ಳಬೇಕಾಗಿಯೂ ಗ್ರಾಮೋದ್ಯೋಗ ಸಂಘದವರು ವಿನಂತಿ ಮಾಡಿಕೊಂಡಿದ್ದಾರೆ. ಸ್ವಹಿತದ ವಿಷಯವಾದ್ದರಿಂದ ಈ ಕುರಿತು ನಾವು ಹೆಚ್ಚಾಗಿ ಹೇಳುವದನವಶ್ಯಕ. ಈ ಉಪಕ್ರಮದಿಂದ ಗ್ರಾಮೋದ್ಯೋಗಗಳ ಅಭಿವೃದ್ಧಿಯಾಗುವದಲ್ಲದೆ ಗ್ರಾಮದ ಆರೋಗ್ಯರಕ್ಷಣೆಯೂ ಆಗುವಂತಿದೆ.

---

೪ ನಮ್ಮ ಮುಂಬಯಿ ಸರಕಾರದ ಔದ್ಯೋಗಿಕ ಇಲಾಖೆಯ ಮಂತ್ರಿಗಳಾದ ನಾ॥ ಪಾಟೀಲರವರು ನಮ್ಮತ್ತ ಕಡೆ ಸದ್ಯಕ್ಕೇ ಬರುವವರಿದ್ದಾರೆಂದು ತಿಳಿಯುತ್ತದೆ. ಈವಾಗ ಫೋರೆಸ್ಟ ಕಂಟ್ರಾಕ್ಟರರ ಸ್ಥಿತಿ ನೆಟ್ಟಗಿಲ್ಲ. ಬೇರೆ ಬೇರೆ ಕಾರಣಗಳ ಮೂಲಕ ಉರುವಲಕ್ಕೆ ಗಿರಾಕಿ ಕಡಿಮೆ. ಇದ್ದ ಗಿರಾಕಿಯಿಂದ ಕಟ್ಟಿಗೆಗೆ ಯೋಗ್ಯ ದರ ಸಿಗದೆ, ಕಂಟ್ರಾಕ್ಟಿಗೆ ಪಡೆದ ಕೂಪುಗಳೊಳಗಿಂದ ಕ್ಲಪ್ತ ಕಾಲದಲ್ಲಿ ಪೂರ್ಣ ಕಟ್ಟಿಗೆ ತರಲಾಗದೆ ಅಡವಿಯಲ್ಲಿಯೇ ಅವನ್ನು ಅವರು ಬಿಟ್ಟು ಬರುತ್ತಾರೆ. ಮುಂದೆ ಅದು ಸುಟ್ಟು ಹಾಳಾಗುತ್ತದೆ. ಹೀಗೆ ಹೇರಳ ಸಂಪತ್ತು ಬೆಟ್ಟದಲ್ಲಿಯೇ ನಷ್ಟವಾಗುತ್ತದೆ. ಉರುವಲದಿಂದ ಎಣ್ಣೆ, ದ್ರವಗಳು, ಇದ್ದಲಿ, ಡಾಮರು ಮೊದಲಾದ ಸಾಮುಗ್ರಿಗಳು ತಯಾರಿಸಬರುತ್ತವೆ. ಆ ಕುರಿತು ನಮ್ಮ ಪ್ರದೇಶದಲ್ಲಿ ವಿಚಾರಿಸಬೇಕು. ಅಂದರೆ, ಸೃಷ್ಟಿಸಂಪತ್ತಿನಿಂದ ಜನಸಾಮಾನ್ಯರಿಗೆ ಒಳ್ಳೇ ಪ್ರಯೋಜನ ದೊರೆದೀತು. ಈವಾಗ ದಿಲ್ಲಿಯೊಳಗೆ ಔದ್ಯೋಗಿಕ ಪ್ರಧಾನರ ಪರಿಷತ್ತು ಸೇರಿ ಉದ್ದಿಮೆಗಳ ಸಂಘಟನೆಗಾಗಿ ಔದ್ಯೋಗಿಕ ಮಹಾಮಂಡಳ ನೇಮಿಸಲ್ಪಟ್ಟಿದೆ. ಈ ಮಹಾಮಂಡಳವು ಗಿರಣಿಗಳನ್ನು ಸ್ಥಾಪಿಸುವ ಸಂಕಲ್ಪ ಮಾಡಿದೆ. ಇಂಥ ಪ್ರಸಕ್ತಿಯಲ್ಲಿ ನಮ್ಮಲ್ಲಿಯ ಫೋರೆಸ್ಟ ಕಂಟ್ರಾಕ್ಟರರು ಬೆಟ್ಟದಲ್ಲಿ ಹಾಳಾಗುತ್ತಿರುವ ಸಾಮುಗ್ರಿಗಳ ಗ್ರಹಿಕೆಯನ್ನು ನಾ॥ ಪಾಟೀಲರ ಕಡೆ ಅರಿಕೆ ಮಾಡಿಕೊಂಡು ಅವುಗಳ ಸದ್ವ್ಯಯವಾಗುವಂತೆ ಅವಶ್ಯವುಳ್ಳ ವ್ಯವಸ್ಥೆ ಮಾಡಹೇಳಬೇಕು. ಫೋರೆಸ್ಟ ಕಂಟ್ರಾಕ್ಟರರು ವ್ಯವಹಾರಿಕರಿದ್ದು ಅವರಿಗೆ ಈ ವ್ಯಾಪಾರದ ಒಳ್ಳೇ ಮಾಹಿತಿಯಿರುವ ಮೂಲಕ ಅವರೇ ಮುಂದಾಗಿ ಆಲೋಚನೆ ಮಾಡಬೇಕೆಂದು ನಮ್ಮ ಸೂಚನೆ. ನಮ್ಮ ಜಿಲ್ಹೆಯೊಳಗೆ ಫೋರೆಸ್ಟ ಕಂಟ್ರಾಕ್ಟರರ ಸಂಘವಿರುವದೆಂಬುದನ್ನು ನಾವು ಬಲ್ಲೆವು. ಆ ಸಂಘದ ವಿದ್ಯಮಾನ ಸಭೆಸೇರಿಸಿ, ಫೋರೆಸ್ಟ ಕಂಟ್ರಾಕ್ಟರರೆಲ್ಲರೂ ಆಲೋಚನೆ ಮಾಡಿ ಅಡವಿ-ಸಾಮುಗ್ರಿಗಳಿಂದ ನಮ್ಮ ಜಿಲ್ಹೆಗೆ ಪ್ರಯೋಜನವಾಗುವಂತೆ ಉಪಾಯಯೋಜನೆ ಮಾಡಬೇಕಾಗಿ ನಾವು ಸೂಚಿಸುತ್ತೇವೆ. ಸಂಘದ ವಿದ್ಯಮಾನ ನಾ॥ ಪಾಟೀಲರವರಿಗೆ ಮಾನಪತ್ರ ಸಮರ್ಪಿಸುವ ಕಾರ್ಯಕ್ರಮವನ್ನು ಒದಗಿಸಿತಂದರೆ ಒಳಿತು. ಸಾಹುಕಾರರ ವಿಚಾರಗಳೂ, ಸಂಕಲ್ಪಗಳೂ ಜನರಿಗೆ ತಿಳಿಯುವವು.

---

೫ ದಿಲ್ಲಿಯೊಳಗೆ ಸೇರಿದ ಅ. ಭಾ. ಕಾಂ. ಕಮಿಟಿಯ ಸಭೆಯಲ್ಲಿ ಶ್ರೀ॥ ಭುಲಾಭಾಯಿ ದೇಸಾಯಿಯವರು ಸೂಚಿಸಿ ಮನ್ನಿಸಿದಂಥ ಹಿಂಸಾಚಾರ ನಿರ್ಬಂಧದ ಠರಾವನ್ನು ಪುರಸ್ಕರಿಸಲು ನಮಗೆ ತುಂಬಾ ಸಂತೋಷವೆನಿಸುತ್ತದೆ. ಹಲವು ಹಿಂಸಾಚಾರಿಗಳು ಕಾಂಗ್ರೆಸ ಕಮಿಟಿಗಳಲ್ಲಿ ಅಧಿಕಾರ ಪಡೆದು ಹಿಂಸಾಚಾರ ಪ್ರವೃತ್ತರಾಗುತ್ತಾರೆಂಬ ಮಾತು ಈಗ ಎಲ್ಲರಿಗೂ ಗೊತ್ತಿದ್ದ ವಿಷಯ. ಇಂಥವರಿಗೆ ನಿರ್ಬಂಧಿಸುವದಕ್ಕಾಗಿ ಕಾಂಗ್ರೆಸ ಸರಕಾರಗಳು ನಿರ್ದಾಕ್ಷಿಣ್ಯದಿಂದ ಕಠೋರ ಉಪಾಯಗಳನ್ನು ಕೈಕೊಳ್ಳಬೇಕೆಂದು ಅ. ಭಾ. ಕಾಂ. ಕಮಿಟಿಯು ವಿಧಿಸಿದೆ. ಹಿಂಸಾಚಾರ ಕಾಂಗ್ರೆಸ ಸಂಸ್ಥೆಗೆ ಅಪಥ್ಯವೆಂದು ನಾವಾಗಿ ಹೇಳುವದು ಬೇಡ. ಮಹಾತ್ಮರೇ ಆ ವಿಷಯವನ್ನು ಒತ್ತಿಹೇಳಿದ್ದಾರೆ. ಯಾವದೇ ಕಾಲಕ್ಕೆ ಯಾವದೇ ರೀತಿಯಿಂದ ಯಾವದೇ ಕಾರ್ಯಸಾಧನೆಗಾಗಿ ಹಿಂಸಾಚಾರವನ್ನು ಕೈಕೊಳ್ಳಲು ಯಾರಿಗೂ ಕಾಂಗ್ರೆಸ ಧ್ಯೇಯದಂತೆ ಅಧಿಕಾರವಿಲ್ಲ. ಬಿಳೇ ಖಾದಿಯನ್ನು ಧರಿಸಿ ಕಾಂಗ್ರೆಸ ಕಮಿಟಿಯ ಅಧಿಕಾರಿಗಳೆಂದು ಮೆರೆಯುವ ಮಹಾನುಭಾವರೂ ಈ ನಿರ್ಬಂಧಕ್ಕೊಳಪಟ್ಟವರೇ! ಅಹಿಂಸೆಯ ಪಾಲನ, ಸತ್ಯಸಂಧತೆ ಇವು ರಾಷ್ಟ್ರೀಯ ಸಭೆಯು ವಿಧಿಸಿದ ಮೂಲಧರ್ಮ. ಅಂಕೋಲೆಯೊಳಗಿನ ಬೋಳೆ, ವಾಸರಕುದ್ರಿಗೆ, ಬಾಸಗೋಡದೊಳಗಿನ ಜನರೂ ಕಾಂಗ್ರೆಸ ಕಮಿಟಿಯ ಅಧಿಕಾರಿಗಳೂ ಇದನ್ನು ಅರಿತುಕೊಂಡು ಅಲ್ಲಿ ನಡೆದ ಹಿಂಸಾಚಾರಗಳ ಪತ್ತೆ ಮಾಡಬೇಕಾಗಿಯೂ, ಅವನ್ನು ಪತ್ತೆ ಮಾಡಲಾಗದಿದ್ದಲ್ಲಿ ಜಿಲ್ಹಾ ಕಾಂಗ್ರೆಸ ಕಮಿಟಿಯವರೂ ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಜಿಲ್ಹಾಧಿಕಾರಿಗಳೂ ಅವಶ್ಯವುಳ್ಳ ಶಾಸನಕ್ರಮಗಳನ್ನು ಕೈಕೊಳ್ಳಬೇಕಾಗಿಯೂ ನಮ್ಮ ಸೂಚನೆಯಿದೆ. ಜಿಲ್ಹಾ ಕಾಂಗ್ರೆಸ ಕಮಿಟಿಯವರೂ ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಈ ಕುರಿತು ತಕ್ಕಷ್ಟು ಉತ್ಸಾಹಪಡುವದಿಲ್ಲವೆಂದು ನಮ್ಮದೊಂದು ಭಾವನೆಯಾಗಿದೆ. ಅಂಕೋಲೆಯೊಳಗಿನ ಹಿಂಸಾಚಾರ ಅವರಿಗೆ ಸಮ್ಮತವೆಂದು ಎಣಿಸುವದು ದುರ್ಘಟ, ಅಸಮ್ಮತವೆಂದು ಎಣಿಸುವದೂ ಕಠಿಣ. ಅಂಕೋಲೆಯ ತಾಲೂಕ ಕಾಂಗ್ರೆಸ ಕಮಿಟಿಯವರೇ ರಿಪೋರ್ಟುಗಳನ್ನು ತರಿಸಿಕೊಳ್ಳುತ್ತಿದ್ದಾರೆ, ರದ್ದುಪಡಿಸಿಕೊಳ್ಳುತ್ತಿದ್ದಾರೆ! ಪುನಃ ಚೌಕಶಿ ಕಮಿಟಿಗಳನ್ನು ನೇಮಿಸುತ್ತಿದ್ದಾರೆ! ಇದರ ಅರ್ಥವೇ ಜನಸಾಮಾನ್ಯರಿಗೆ ತಿಳಿಯಲೊಲ್ಲದು. ಅಂಕೋಲೆಯ ತಾಲೂಕ ಕಾಂಗ್ರೆಸ ಕಮಿಟಿಯ ಅಧಿಕಾರಿಗಳ ಮೇಲೆಯೇ ಪೀಡಿತರು ಆರೋಪ ಹೊರಿಸುತ್ತಾರಾದ್ದರಿಂದ ಕಾಲಹರಣ ಮಾಡಿ ಹಿಂಸಾಚಾರದ ಪಾಪವನ್ನು ಮರೆಮಾಡುವ ಕಾರಸ್ಥಾನ ನಡೆದಿರಬೇಕೆಂದು ಎಣಿಸಿದರೆ ತಪ್ಪಾಗದು. ಅದರಿಂದ ಕಾಂಗ್ರೆಸ ಕಮಿಟಿಯವರು ಕಾಂಗ್ರೆಸ ಧರ್ಮಪಾಲನೆಗಾಗಿ ಕೊಂಚ ಪ್ರಯತ್ನ ಮಾಡಬೇಕೆಂದು ನಾವು ನಮ್ರಭಾವದಿಂದ ಸೂಚಿಸುತ್ತೇವೆ.

25,000 ವಿವಿಧ ಶಬ್ದಗಳುಳ್ಳ! ಹೊಸ ನಿಘಂಟು!!

ಮಾಡರ್ನ

ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಷನರಿ.

ಇಂಗ್ಲಿಷ ಕನ್ನಡ

ಬರೆದವರು - ವೈದ್ಯಭೂಷಣ ಕೆ. ಭಾರದ್ವಾಜ ವಿದ್ಯಾಭೂಷಣ. ಮೈಸೂರ ಯುನಿವರ್ಸಿಟಿ ವ್ಹಾಯಿಸ ಚಾನ್ಸಲರರ ಮುನ್ನುಡಿಯುಳ್ಳ, ಸರ್ ಎಮ್. ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ॥ ಯು. ರಾಮರಾಯರು ಹರಸಿದ ಈ ಡಿಕ್ಷನರಿಯು ಇದೀಗ ಕರ್ನಾಟಕದಲ್ಲಿ ಹೊಸ ಸಾಹಸ. ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕಂಥದ್ದು. ಬೆಲೆ ಕೇವಲ ೨ ರೂ. ಟಪಾಲ ಪ್ರತ್ಯೇಕ. ಸಿಗುವಸ್ಥಳ - ದಿ ನ್ಯೂ ಸಪ್ಲಾಯಿ ಏಜನ್ಸಿ, ಕುಮಟಾ

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಿಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ॥ ವಿ. ಎನ್. ಶ್ರೀನಿವಾಸರಾವ್, ಲಿವ್ಹರ ಸ್ಪೆಶಲಿಸ್ಟ, ಎಂ. ವಿ. ಪ್ರಾಸಾದಿಕ ಔಷಧಾಲಯ, ಶಿವಮೊಗ್ಗಾ.

☞ ಇವರಲ್ಲಿ ವಿಚಾರಿಸಿರಿ

ಸುಬ್ರಾಯ ಸೀತಾರಾಮ ಶೆಟ್ಟಿ, ೨ಶ್ರೀ ನಾರಾಯಣ ಶರ್ಮಾ ಗೆಸ್ಟಹೌಸ್, ಲೋಕಮಾನ್ಯ ತಿಲಕ ವಾಚನ ಮಂದಿರ ಅಂಕೋಲಾ

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರದ ಆಶ್ವೀನ ವ ೧೮, ಸೋಮವಾರ

ಭೂಕಂದಾಯದ ಪುನರ್ಘಟನೆ.

ನಮ್ಮ ಮುಂಬಯಿ ಸರಕಾರವು ಭೂಕಂದಾಯದ ಧೋರಣವನ್ನು ಪುನರ್ಘಟಿಸುವ ವಿಚಾರದಲ್ಲಿರುವದೆಂದು ತಿಳಿದು ನಾವು ಸಂತೋಷಪಡುತ್ತೇವೆ. ಈಗಿನ ಭೂಕಂದಾಯದ ಧೋರಣ ಲೋಕಮತಕ್ಕೆ ಅಂಕಿತವಾದುದಲ್ಲ, ನಿರಂಕುಶ ಅಧಿಕಾರಿಗಳ ಸ್ವಾರ್ಥಿ ನಕ್ಕೊಳಪಟ್ಟದ್ದು. ಬಾರಿ ಬಾರಿಗೂ ಇವರು ತೀರ್ವೆಯನ್ನು ಒಂದಿಲ್ಲೊಂದು ನೆವ ಹೇಳಿ ಏರಿಸುತ್ತ ಬಂದಿದ್ದಾರೆ. ರಾಜ್ಯಯಂತ್ರದ ಖರ್ಚಿಗೆ ಪರಿಮಿತಿಯಿಲ್ಲ. ಜನರ ಸ್ಥಿತಿಯ ಮಾನದಿಂದ ಅಧಿಕಾರಿಗಳ ಸಂಬಳದ ಮಾನವನ್ನು ನಿರ್ಣಯಿಸದೆ, ತಮ್ಮವರಿಗೆ ಹೆಚ್ಚೆಚ್ಚಿನ ಪ್ರಯೋಜನ ಮಾಡಿಕೊಡುವದಕ್ಕಾಗಿ ಸಂಬಳವನ್ನು ಏರಿಸಿ ಆಡಳಿತೆಯ ಖರ್ಚನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಭೂಕಂದಾಯ ಬೇರೆ ಬೇರೆ ನೆವದಿಂದ ಏರಿಸಲ್ಪಟ್ಟಿತು. ಭೂಕಂದಾಯ ಏರಿಸುವ ಅಧಿಕಾರ ಶಾಯಿದೆ ಕೌನ್ಸಿಲುಗಳಿಗೆ ಇರಬೇಕಾಗಿ ರಾಷ್ಟ್ರೀಯ ಸಭೆಯೂ ಇತರ ಲೋಕಪ್ರಮುಖರೂ ದೀರ್ಘಕಾಲದಿಂದ ಆಂದೋಲನ ನಡಿಸುತ್ತಿದ್ದಾರೆ. ಕೊಂಗ್ರೆಸ ಸರಕಾರವು ಈ ತತ್ವವನ್ನು ಮನ್ನಿಸಿ ಹೊಸ ಕಾನೂನನ್ನು ಸೂಚಿಸಲಿಕ್ಕಿದೆಂದು ತಿಳಿದು ನಾವು ಸಂತೋಷಪಡುತ್ತೇವೆ. ಮತ್ತು ಇಷ್ಟು ಸುಧಾರಣೆಯನ್ನು ಒದಗಿಸಿತರುವ ಸತ್ಸಂಕಲ್ಪಕ್ಕಾಗಿ ಕೊಂಗ್ರೆಸ ಸರಕಾರಕ್ಕೆ ಮನವಣಿ ಹರಸುತ್ತೇವೆ.

ನೂತನ ಉಪಕ್ರಮದಂತೆ, ಭೂಕಂದಾಯ ಧೋರಣವನ್ನು ಪುನರ್ಘಟಿಸಿದ್ದಲ್ಲಿ ಸುಮಾರು ೭೫ ಲಕ್ಷ ರೂಪಾಯಿಗಳ ಉತ್ಪನ್ನ ಕುಗ್ಗುತ್ತದೆ. ಮದ್ಯನಿರೋಧನ ಕಾರ್ಯಕ್ರಮದಿಂದ ಆ ಇಲಾಖೆಯ ೩-೪ ಕೋಟಿ ರೂಪಾಯಿಗಳ ಉತ್ಪನ್ನ ಇಂದಲ್ಲ ನಾಳೆ ಕುಗ್ಗಲೇ ಬೇಕು. ಉತ್ಪನ್ನ ಕುಗ್ಗಿತೆಂದು ಖರ್ಚು ಕುಗ್ಗುವದಿಲ್ಲ. ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಮಾರ್ಗ, ಬಾವಿ, ಕೆರೆ-ಕಾಲುವೆ ಮೊದಲಾದ ಯೋಜನೆಗಳಿಗಾಗಿಯೂ ಹಣ ಬೇಕು. ಹೀಗೆ ಅವಶ್ಯವುಳ್ಳ ಹಣವನ್ನು ಪೂರೈಸಿಕೊಳ್ಳುವ ಬಗೆ ಹೇಗೆ? ದೊಡ್ಡ ದೊಡ್ಡ ತಲಬಿನ ಅಧಿಕಾರಿಗಳ ಸಂಬಳ ಪ್ರಾಂತಿಕ ಸರಕಾರದ ಕಕ್ಷೆಯೊಳಗಿನದಲ್ಲ. ಚಿಕ್ಕ ಪುಟ್ಟ ಅಧಿಕಾರಿಗಳ ಸಂಬಳಕ್ಕೆ ಬಹಳ ಕತ್ತರಿ ಹಾಕಲಿಕ್ಕಾ ಬರುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ನಷ್ಟವಾದ ಉತ್ಪನ್ನವನ್ನು ತುಂಬಿತರುವ ಸಮಸ್ಯೆ ವಿಚಾರಾರ್ಹವಿದೆ. ಮುಂಬಯಿ ಸರಕಾರವು ಈ ವಿಷಯದಲ್ಲಿ ಕೈಕೊಳ್ಳಲಿರುವ ಧೋರಣದ ಕುರಿತು ಪ್ರಾಸ್ತಾವಿಕವಾಗಿ ನಾವು ನಾಲ್ಕು ಮಾತು ಬರೆಯಲಿಚ್ಛಿಸುತ್ತೇವೆ.

ಖೋತ, ವತನದಾರ, ಸರದಾರ, ಇನಾಮುದಾರ ಮೊದಲಾದ ಸರಕಾರಿ ಉಂಬಳಿ ಪಡೆಯುವವರ ಮೇಲೆ ಸರಕಾರವು ಹೊಸ ತೆರಿಗೆಯನ್ನು ಹೇರುವ ವಿಚಾರದಲ್ಲಿಂಟು. ಈ ಉಂಬಳಿಗಳು ಪುರಾತನ ದರಬಾರದ ಅವಶೇಷಗಳು. ಪುರಾತನ ಕಾಲದಲ್ಲಿ ಅವರ ಪೂರ್ವಜರು ನಡಿಸಿದ ರಾಜಸೇವೆಗಾಗಿ ಕೊಟ್ಟ ಉಂಬಳಿಗಳವು. ಈವಾಗ ಅವರಿಂದ ರಾಜ್ಯಭಾರಕ್ಕೇನು ಸಹಾಯವಾಗುತ್ತದೆ? ಆ ಸಹಾಯಕ್ಕಾಗಿ ಅವರಿಗೆ ಯಾವ ಪ್ರಕಾರದಿಂದ, ಎಷ್ಟು ಪ್ರತಿಫಲ ಕೊಡಬಹುದು? ಎಂಬದೊಂದು ವಿಚಾರಾರ್ಹ ಪ್ರಶ್ನೆ. ಅರ್ಥಸಚಿವರಾದ ನಾ। ಅಣ್ಣಾಜಿ ಬಾಬಾಜಿ ಲಠ್ಠೇಯವರು ನುಡಿದಂತೆ, ಪೂರ್ವಜರ ರಾಜಸೇವೆಯ ಆಧಾರದ ಮೇಲೆ, ಈಗಿನವರು ರಾಜ್ಯಭಾರಕ್ಕೆ ತಮ್ಮಿಂದ ಸಲ್ಲುವ ರಾಜಾರ್ಥವನ್ನು ತಪ್ಪಿಸಿಕೊಳ್ಳಬರುವದಿಲ್ಲವಾಗಿ ವ್ಯವಹಾರಿಕರೆಲ್ಲರೂ ಒಪ್ಪಲೇ ಬೇಕು. ಪ್ರಚಲಿತ ಅರ್ಥಕಾರಣದೊಳಗೆ ಖೋತ, ಸರದಾರ, ವತನದಾರ, ಇನಾಮುದಾರ ಮೊದಲಾದವರು ತಮ್ಮ ಕಾರ್ಯಭಾಗವನ್ನು ನಿರ್ವಹಿಸುತ್ತಾರೇನೆಂದು ತಿಳಕೊಂಡು ಕಾಲವಮಾನಕ್ಕುಚಿತವಾಗಿ ಅವರ ಸ್ಥಿತಿಯಲ್ಲಿಯೂ ಪಲ್ಲಟವಾಗಬೇಕೆಂದು ನಾ। ಲಠ್ಠೇಯವರು ಅಭಿಪ್ರಾಯಪಡುತ್ತಾರೆ. ನಾವಾದರೂ ಅದನ್ನು ಒಪ್ಪುತ್ತೇವೆ. ಆದರೆ, ಈ ವಿಷಯ ನಮ್ಮ ಜಿಲ್ಹೆಗೆ ಅನ್ವಯಿಸುವದಿಲ್ಲವಾದುದರಿಂದ ನಾವು ಈ ಕುರಿತು ಯಾವದೇ ಅಭಿಪ್ರಾಯವನ್ನು ವ್ಯಕ್ತಮಾಡಬಯಸುವದಿಲ್ಲ. ನಾ॥ ಲಠ್ಠೇಯವರ ವಿಚಾರ ಗ್ರಾಹ್ಯವಿದೆ, ವಿಚಾರಣೀಯವಿದೆ, ಎಂದಿಷ್ಟೇ ನಾವು ನಮೂದಿಸಬಯಸುತ್ತೇವೆ.

ಇನ್ನೊಂದು ಉತ್ಪನ್ನದ ಮೂಲವನ್ನು ಮುಂಬಯಿ ಸರಕಾರವು ಶೋಧಿಸಿರುವದಾಗಿ ಪ್ರಕಟವಾಗಿದೆ. ನೂರಾರು ಮೈಲುಗಳ ಆಚೆ ವಾಸ್ತವ್ಯ ಮಾಡಿ ರೂ. ೩ ತೀರ್ವೆ ಕೊಟ್ಟು, ಪ್ರತಿಯಾಗಿ ೧೨೦—೧೮೦ ರೂಪಾಯಿಗಳ ಮೇಲ್ಪಟ್ಟ ಗೇಣಿಯನ್ನು ಎತ್ತುವಳಿ ಮಾಡುವ ಐಶ್ವರ್ಯವಂತ ಜಮೀನದಾರರಿದ್ದಾರಾಗಿ ಮುಂಬಯಿ ಸರಕಾರದ ಅಭಿಪ್ರಾಯವಾಗಿರುವದಂತೆ! ಈ ಜಮೀನದಾರರು ಭೂಸುಧಾರಣೆಗಾಗಿ ಏನೂ ನೆರವಾಗುವದಿಲ್ಲವಾಗಿಯೂ, ಒಕ್ಕಲಿಗರ ಪರಿಶ್ರಮದಿಂದ ವಿಲಾಸ ಮಾಡುತ್ತಾರಾಗಿಯೂ, ಪರಪುಷ್ಟರೆಂದೂ, ಇವರ ಮೇಲೆ ಕರ ಹೇರಿ ಸರಕಾರವು ಉತ್ಪನ್ನ ಬೆಳಸಬಹುದೆಂದೂ ಕೊಂಗ್ರೆಸ ಸರಕಾರದ ಗ್ರಹಿಕೆಯಾಗಿರುವದಾಗಿ ತಿಳಿಯುತ್ತದೆ. ನಮ್ಮ ಜಿಲ್ಹೆಯ ಮಟ್ಟಿಗೆ ರೂ ೩। ತೀರ್ವೆಗೆ ೧೨೦ ರೂಪಾಯಿ ಉತ್ಪನ್ನ ಪಡೆಯುವ ಭಾಗ್ಯವಂತರ್‍ಯಾರೂ ಇಲ್ಲವೆಂದು ನಾವು ಖಂಡಿತವಾಗಿ ಹೇಳಬಲ್ಲೆವು. ಸರಾಸರಿ ೧ ರೂಪಾಯಿ ತೀರ್ವೆಗೆ ರೂ. ೩, ಹೆಚ್ಚೆಂದರೆ ರೂ ೫ರಂತೆ ಪ್ರತಿಫಲ ಪಡೆಯುವ ನಿರ್ಭಾಗಿ ಜನರೇ ಎಲ್ಲೆಲ್ಲಿಯೂ ಕಾಣುವರು! ಇಷ್ಟು ಸಹ ಉತ್ಪನ್ನ ಸುಸೂತ್ರ ವಸೂಲ ಬರಬೇಕಾದರೆ ಪೂರ್ವಪುಣ್ಯವೇ ಬೇಕು. ಈಗಂತು ಅನೇಕ ಒಕ್ಕಲಿಗರು ಸ್ವೇಚ್ಛಾಚಾರಿಗಳಾಗಿದ್ದಾರೆ. ಮೊದಲೇ ಗೇಣಿ ಕೊಡುವದು ಯಾರಿಗೂ ಬೇಡ; ಅದರೊಳಗೂ ಒಕ್ಕಲತನದ ಶಾಯಿದೆ ಮೊದಲಾದ ಶಾಯಿದೆಗಳ ಸಂಕಲ್ಪದ ವಾರ್ತೆಯಿಂದಲೇ ಕೆಲ ಒಕ್ಕಲಿಗರು ಒಡೆಯರಿಗೆ ವರ್ಷಾವಧಿ ಗೇಣಿ ತೆರದೆ ದಣಿಸುತ್ತಾರೆ. ಇಂಥ ಪ್ರಸಕ್ತಿಯಲ್ಲಿ ತೀರ್ವೆಯ ೪೦ ಪಟ್ಟು ಉತ್ಪತ್ತಿ ಸಿಗುವ ಬಗೆ ಹೇಗೆಂದು ನಮಗೆ ತಿಳಿಯದ ಮಾತು! ಸರಕಾರಕ್ಕೆ ಈ ಅಂಕಿಗಳನ್ನು ಯಾರು, ಹೇಗೆ ಪೂರೈಸಿದರೆಂದು ತಿಳಿಯಲು ನಾವು ಕುತೂಹಲಪಡುತ್ತೇವೆ. ತೀರ್ವೆ ರೂ. ೧ಕ್ಕೆ ಸರಾಸರಿ ರೂ ೪ರಂತೆ ಗೇಣಿಯನ್ನು ಸರಕಾರವು ಕೊಡಲೊಪ್ಪಿದಲ್ಲಿ ಎಲ್ಲ ಜಮೀನದಾರರು ತಮ್ಮ ಮಾಲ್ಕಿಯನ್ನು ಇಂದಿಗೇ ಬಿಟ್ಟುಕೊಡಲು ಸಿದ್ಧರಿದ್ದಾರೆಂದು ನಾವು ಹೇಳಿದರೆ ಯಾರೂ ಅಲ್ಲಗಳೆಯಲಿಕ್ಕಿಲ್ಲವೆಂದು ನಮ್ಮ ಭಾವನೆ! ಸರಕಾರವು ಆ ಭೂಮಿ, ಈ ಭೂಮಿ ಎಂದು ವ್ಯತ್ಯಾಸ ಮಾಡದೆ ಎಲ್ಲ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು.

ಈ ಪ್ರಕಾರ ಅಂಕಿ ತಯಾರಿಸಿ ಕೊಡುವವರಿಗೆ ವ್ಯವಹಾರಿಕ ಬುದ್ಧಿ ಇಲ್ಲವಾಗಿ ನಾವು ಎಣಿಸುತ್ತೇವೆ. ಸ್ವಲ್ಪ ವಿಚಾರ ಮಾಡಿದರೆ ಸರಕಾರಕ್ಕಾದರೂ ತಿಳಿಯಲೇಬೇಕು. ಯಾಕಂದರೆ ಭೂಕಂದಾಯ ಮೀರಿದಷ್ಟಿತೆಂದು ಜನರು ಗೊಣಗುಟ್ಟುತ್ತಿರುವಾಗ, ಉತ್ಪತ್ತಿಯ ಮಾನ ಹೇಗೆ ವಿಪರೀತವಿರಬಲ್ಲದು? ೧೦೦ ರೂಪಾಯಿ ಉತ್ಪತ್ತಿಗೆ ರೂ. ೩॥ ರಾಜಾರ್ಥ ತೆರುವದೇನು ಭಾರವಾದದ್ದಲ್ಲ. ಈ ಪ್ರಕಾರ ಉತ್ಪತ್ತಿಯಿದ್ದರೆ ಸರಕಾರವು ತೀರ್ವೆ ಇಳಿಸುವ ಕಾರಣವೇನಿದೆ? ಇದ್ದ ತೀರ್ವೆಯನ್ನು ಏರಿಸುವ ವಿಚಾರ ಮಾಡಬೇಕಿತ್ತಲ್ಲವೆ, ಇಳಿಸುವ ಗೋಜಿಗೆ ಹೋಗುವದನವಶ್ಯಕ. ಸರಕಾರವು ಅಲ್ಲದ-ಸಲ್ಲದ ಕಲ್ಪನೆಗಳನ್ನು ಹಿಡಿದು ವರ್ತಿಸಲಾಗದು. ಬೇಸಾಯದ ಉದ್ದಿಮೆಯಿಂದ ಹೊಟ್ಟೆ ತುಂಬುವದಿಲ್ಲವೆಂಬ ಮಾತು ಎಲ್ಲರಿಗೂ ಗೊತ್ತಿದ್ದದ್ದೇ. ಒಕ್ಕಲಿಗರು ತೀರ ಬಡತನದಿಂದ ಸಂಸಾರ ಮಾಡಿದಾಗ್ಯೂ, ಒಡೆಯನಿಗೆ ಸಲ್ಲತಕ್ಕ ಸಂಪೂರ್ಣ ಗೇಣಿ ಇಟ್ಟುಕೊಂಡಾಗ್ಯೂ ೬ ತಿಂಗಳು ಅವರ ಜೀವನ ಸಾಗುವದಿಲ್ಲ. ಭೂಸುಧಾರಣೆ ಮಾಡದೆ ಈ ಪ್ರಕಾರ ಉತ್ಪನ್ನ ಸಿಗುತ್ತಿದ್ದರೆ ಇಡೀ ಹಿಂದುಸ್ಥಾನ ದೇಶದಲ್ಲಿ ಬಡತನವೆಂಬದು ಕಾಣಸಿಗುತ್ತಿದ್ದಿಲ್ಲ. ಕೊಂಗ್ರೆಸ ಸರಕಾರವು ಇಂಥ ಅಂಕಿಗಳನ್ನು ನಂಬಿ ಮೋಸ ಹೋಗಲಾಗದು. ಬೇಕಾದ ರೀತಿಯಿಂದ ಚೌಕಶಿ ಮಾಡಬಹುದು; ಪ್ರಾಪ್ತಿಯಿದ್ದರೆ ತೆರಿಗೆ ತೆರಬಾರದೆಂದು ನಮ್ಮ ಅಂಬೋಣವಿಲ್ಲ. ಯಾಕಂದರೆ ಈಗಿನ ಸರಕಾರಕ್ಕೆ ತೆತ್ತ ತೆರಿಗೆ ನಿರರ್ಥಕವಾಗುವದಿಲ್ಲ; ಪ್ರತಿಯಾಗಿ ಒಂದಿಲ್ಲೊಂದು ರೂಪದಿಂದ ಅದು ಜನರಿಗೇ ತಿರುಗಿ ಸಿಗುತ್ತದೆ. ಪ್ರಾಂತವನ್ನು ಪುನರ್ಘಟಿಸುವ ಕಾರ್ಯಕ್ರಮಕ್ಕಾಗಿ ಅದರ ವಿನಿಯೋಗವಾಗುತ್ತದಾದ ಬಳಿಕ, ಸಾಮರ್ಥ್ಯವಿದ್ದವರೆಲ್ಲರೂ ತಮ್ಮ ತಮ್ಮ ಶಕ್ತಿಯ ಮಟ್ಟಿಗೆ ನೆರವಾಗಲು ಬದ್ಧರಿದ್ದಾರೆಂದು ನಮ್ಮ ಅಭಿಪ್ರಾಯ. ಲೋಕೋಪಕಾರಿ ಕಾರ್ಯಗಳಿಗೆ ವಿನಿಯೋಗಿಸಲು ಸರಕಾರಕ್ಕೆ ಹಣದ ಪೂರೈಕೆಯಾಗಬೇಕೆಂಬ ಮಾತು ಸ್ವಯಂಸಿದ್ಧವಿದೆ. ತೆರಿಗೆ ತೆರಲೊಪ್ಪಿದನಕ ಹಣದ ಪೂರೈಕೆಯಾಗದು. ಆದರಿಂದ ತೆರಿಗೆ ತೆರಬಲ್ಲಾದವರು ತೆರಿಗೆಗಳನ್ನು ತೆರಲೇ ಬೇಕು

ಆದರೆ ಸರಕಾರವು ಈಗಿನ ಜಮೀನದಾರರ ಉತ್ಪತ್ತಿಯನ್ನು ಕಾಲ್ಪನಿಕವಾಗಿ ಉಬ್ಬಿಸಿಕೊಂಡು ಕರಗಿ ಹೇರಲು ಉದ್ಯುಕ್ತರಾಗಬಾರದೆಂದೇ ನಮ್ಮ ಅಂಬೋಣ ಏನಾದರೊಂದು ಕಲ್ಪನೆ ಮಾಡಿಕೊಂಡು ಯಾರೊಬ್ಬರಿಗೆ ದೂರಿ ಉತ್ಪನ್ನ ಮಾಡಲೆಳಸುವದು ಜಾಣ್ಮೆಯಲ್ಲ. ಸರಕಾರವು ಪ್ರಮುಖರೊಡನೆ ಆಲೋಚನೆ ಮಾಡಿ ಸತ್ಯಸ್ಥಿತಿಯನ್ನು ತಿಳಕೊಂಡು ಸರಕಾರಿ ಉತ್ಪನ್ನ ಬೆಳಸುವ ಉಪಾಯ ಕೈಕೊಳ್ಳಬಹುದು. ಈ ಕಾರ್ಯದಲ್ಲಿ ಸಕಲರೂ ಸಂತೋಷದಿಂದ ನೆರವಾಗುವರೆಂದು ನಾವಾಗಿ ನಮೂದಿಸುವದನವಶ್ಯಕ.

ಒಡಂಬಡಿಕೆಯೋ, ಯುದ್ಧಸ್ತಬ್ಧತೆಯೋ ?

[ನಿರೀಕ್ಷಕನು ಬರೆದುದು]

ನಾನು ಯಾವುದನ್ನೂ ಹೇಳಲಾರೆ. ಪಾರ್ಲಮೆಂಟಿನ ಸಭಾಸದರಾದ ಮುಂಬಯಿ 'ಟೈಮ್ಸ' ಪತ್ರಿಕೆಯ ಸಂಪಾದಕರಾಗಿದ್ದ, ನಾನಾಂಕಿತ ರಾಜಕಾರಣಿಗಳೆಂದು ಹೆಸರುಗೊಂಡ ಸರ್ ಸ್ಟೇನ್‌ಲೇ ರೀಡರವರು ಬುಧವಾರ ಮ್ಯುನಿಕ್ ಒಡಂಬಡಿಕೆಯ ಕುರಿತು "Is it Peace or Truce? Every one is asking that; none knows" "ಇದು ಒಡಂಬಡಿಕೆಯೋ, ಯುದ್ಧಸ್ತಬ್ಧತೆಯೋ ? ಪ್ರತಿಯೊಬ್ಬರು ಇದೇ ಪ್ರಶ್ನೆಯನ್ನು ಒತ್ತೊತ್ತಿ ಕೇಳುತ್ತಾರೆ, ಆದರೆ ಯಾರಿಗೂ ಹೇಳಬರದ ಸಂಗತಿಯದು!" ಎಂಬದಾಗಿ ಅಭಿಪ್ರಾಯಪಡುತ್ತಿರುವದ ಬಳಿಕ, ನನ್ನಂಥವನು ಆ ಗೊಡವೆಗೆ ಏಕೆ ಹೋಗಬೇಕು ? ಮ್ಯುನಿಕ್ ಒಡಂಬಡಿಕೆಯನ್ನು ಒದಗಿಸಿದಂದ ಬಗ್ಗೆ ಪಾರ್ಲಮೆಂಟಿನಲ್ಲಿ ಸರ್ವರೂ ಮುಖ್ಯಮಂತ್ರಿ ಚೆಂಬರಲೇನರವರಿಗೆ ಹೊಗಳಿದರು. ಮಹಾಯುದ್ಧದ ಬೇಗೆಯಿಂದ ನಾವು ತಪ್ಪಿದೆವು ' ಎಂಬದಾಗಿ ಎಲ್ಲರೂ ಧನ್ಯವಾದಗಳನ್ನರ್ಪಿಸಿದರು ಆದರೆ ಅದೇ ಸಮಯ ವಿದೇಶ ಪ್ರಧಾನರಾಗಿದ್ದ ಮಿ|| ಎಂಥನಿ ಈಡನ್, ವಿರೋಧ ಪಕ್ಷದ ಪ್ರಧಾನರಾದ ಮೇಜರ ಎಟ್ಲಿ, ಉದಾರಮತವಾದಿ ಪಕ್ಷದ ಸರ್ ಆರ್ಚ ಬೊಲ್ಡ ಸಿಂಕ್ಲೇರ್ ಮೊದಲಾದವರು ಮ್ಯುನಿಕ್ ಒಡಂಬಡಿಕೆಯಿಂದ ಯುರೋಪ ಖಂಡದೊಳಗೆ ಶಾಂತಿಸ್ಥಾಪನೆಯಾಗಲಿಲ್ಲವಾಗಿಯೂ, ಹಿಟ್ಲರ-ಮುಸೊಲಿನಿಯವರಂಥ ಲೋಕಕಂಟಕರಿಗೆ ಸಾಮ್ರಾಜ್ಯವಿಸ್ತಾರಗೈಯ್ಯಲು ಪ್ರೋತ್ಸಾಹ ದೊರಕಿರುವದಾಗಿಯೂ, ಯುದ್ಧದ ಅವಧಿ ಮಾತ್ರ ಮುಂದರಿಯಿತಾಗಿಯೂ ಮ್ಯುನಿಕ್ ಕರಾರಿನ ಧೋರಣವನ್ನು ಅಧಿಕ್ಷೇಪಿಸಿದರು. ಮುಖ್ಯ ಪ್ರಧಾನರಾದ ಮಿ| ಚೆಂಬರಲೇನರವರು ಯುದ್ಧಪರಿಹಾರವಾಯಿತೆಂದು ಹೇಳುತ್ತಾರಲ್ಲವೇ ? ಹಾಗಾದರೆ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸುವದಕ್ಕಾಗಿ ಬ್ರಿಟಿಶ ಸರಕಾರವು ಈಗಲೂ ತಯಾರಿಯಿಡಬೇಕೆಂದು ಮುಖ್ಯ ಪ್ರಧಾನರು ಹೇಳುವ ಕಾರಣವೇನು ? ಯಾರ ವಿರುದ್ಧ ನಾವು ಯುದ್ಧ ಹೂಡುವದಿದೆ ? ಎಂಬದಾಗಿ ಸಭಿಕರು ಮುಖ್ಯ ಪ್ರಧಾನರಿಗೆ ನೇರವಾಗಿ ಕೇಳಲು, ಚೆಂಬರಲೇನರು ನಿರುತ್ತರರಾದರು ಬ್ರಿಟಿಶರು ಮ್ಯುನಿಕ್ ಕರಾರಿನಿಂದ ಹಿಟ್ಲರರಿಗೆ ಝೆಕೊಸ್ಲೊವಾಕಿಯಾದ ಆಹುತಿಯನ್ನೇ ಕೊಟ್ಟುಬಿಟ್ಟಿದ್ದಾರೆ ! ಇದರ ಕಾರಣವೇನು ತಿಳಿಯಿತೇ ? ಹಿಟ್ಲರರ ಚಾಪಲ್ಯವನ್ನು ನಿರ್ಬಂಧಿಸಲು ಬ್ರಿಟಿಶ-ಫ್ರೆಂಚರ ತಯಾರಿಯಿರಲಿಲ್ಲ. ಈ ಸಂಗತಿಯನ್ನು ಮಿ|| ಈಡನ್‌ರವರು ಒಳ್ಳೇ ಚಾತುರ್ಯದಿಂದ ಹೊರಗೆಡಹಿದರು. ಸೈನ್ಯಗಳ ಒಡಾಟವನ್ನು ಕೊಂಚ ಮುಂಚಿತವಾಗಿ ನಡಿಸಿದ್ದರೆ ಹಿಟ್ಲರರು ಈ ಪ್ರಕಾರ ಸೊಕ್ಕುತ್ತಿರಲಿಲ್ಲವೆಂದು ಅವರು ಒಳ್ಳೇ ಕುಶಲತೆಯಿಂದ ಹೇಳಿ, ಚೆಂಬರಲೇನರ ರಾಯಧಾರದ ಮರ್ಮವನ್ನು ಬೈಲಿಗೆಳೆದರು. ಝೆಕೊಸ್ಲೊವಾಕಿಯಾ ಸರಕಾರವು ಈಪರಿ ಸ್ವದೇಶಕ್ಕೊಪ್ಪಿದ ಪ್ರಾಂತದ ತ್ಯಾಗ ಮಾಡಲು ಒಪ್ಪಿ ಯುರೋಪ ಖಂಡಕ್ಕೆ ಉಪಕಾರ ಮಾಡಿರುವದಾಗಿಯೂ ಮಿ|| ಈಡನ್‌ರು ಹೊಗಳಿದರು. ಝೆಕೊಸ್ಲೊವಾಕಿಯಾ ಸರಕಾರದ ಅಧ್ಯಕ್ಷರಾದ ಡಾ|| ಬೇನ್ಸರವರು ರಾಜಿನಾಮೆ ಕೊಟ್ಟಿದ್ದಾರೆ. ಹೊಸ ಮನ್ವಂತರಕ್ಕನುರೂಪವಾಗಿ ನಡೆಕೊಳ್ಳಲು ತಮಗೆ ಸಾಧ್ಯವಿಲ್ಲವಾಗಿಯೂ ರಾಷ್ಟ್ರಸೇವೆಗೆ ತಾವು ಯಾವಾಗಲೂ ಸಿದ್ಧರಿರುವೆವೆಂತಲೂ ಆಕಾಶವಾಣಿಯಿಂದ ಅವರು ಸ್ವಜನರಿಗೆ ಸಂದೇಶ ಕಳುಹಿದ್ದಾರೆ. ಅಗತ್ಯವಿದ್ದಲ್ಲಿ ರಾಷ್ಟ್ರಸೇವೆಗೈಯ್ಯಲು ತಾವು ಪುನಃ ಸಿದ್ಧರಿರುವೆವಾಗಿಯೂ ಅವರು ತಿಳಿಸಿದ್ದಾರೆ ಡಾ|| ಬೇನ್ಸರವರು ಸಭ್ಯ ಗೃಹಸ್ಥರು, ಶಿಸ್ತರು, ಶಾಂತಿಪ್ರಿಯರು, ದೇಶಾಭಿಮಾನಿಗಳು, ತ್ಯಾಗಿಗಳು ! ಹೀಗೆ ಅವರಿಗೆಲ್ಲರೂ ಹೊಗಳುತ್ತಾರೆ ಡಾ| ಬೇನ್ಸರು ಯುದ್ಧಕ್ಕೆ ಸಿದ್ಧರಿದ್ದಾಗ್ಯೂ ಯುರೋಪ ಖಂಡದೊಳಗೆ ಶಾಂತಿಯನ್ನು ಪ್ರಸ್ಥಾಪಿಸುವದಕ್ಕಾಗಿ ಪರಮಾವಧಿಯ ತ್ಯಾಗಮಾಡಿ ತಮ್ಮ ಶಾಂತಿಪ್ರಿಯತೆಯನ್ನು ಸಿದ್ಧಪಡಿಸಿದ ಬಗ್ಗೆ ಅವರಿಗೆ ' Nobel Peace Prize 'ಎಂಬ ಲೋಕಶಾಂತಿ ಪಾರಿತೋಷಕವನ್ನು ಅರ್ಪಿಸುವ ಆಲೋಚನೆ ಮಾಡಿರುತ್ತಾರೆ! ಆಗಲಿ, ಅದೂ ಒಂದು ಸಮಾಧಾನದ ವಿಷಯವೇ. ಇಂಥ ಯೋಗ್ಯತಾವಂತರನ್ನು ಹಿಟ್ಲರ ತೋಳನ ಬಾಯಲ್ಲಿ ಚೆಂಬರಲೇನರು ನೂಕಿ ಯುರೋಪಖಂಡದೊಳಗೆ ರಣದೇವಿಯ ಸಮಾಧಾನ ಮಾಡಲೆಳಸಿದ್ದಾರೆ. ಸುಡೆಟನ್ ಪ್ರದೇಶವನ್ನು ಈಗ ಹಿಟ್ಲರರು ಕ್ರಮವಾಗಿ ಆಕ್ರಮಿಸತೊಡಗಿದ್ದಾರೆ. ಮ್ಯುನಿಕ್ ಕರಾರಿನಲ್ಲಿ ವಿಧಿಸಿದ ಕ್ರಮದಂತೆ, ಸುಡೆಟನ್ ಪ್ರಾಂತವನ್ನು ಈ ಹೊತ್ತಿನೊಳಗೆ ಹಿಟ್ಲರರು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಹಿಟ್ಲರನಿಗೆ ಸಮಾಧಾನವಾಗದೆ ಆತನ ಸಾಮ್ರಾಜ್ಯತೃಷ್ಣೆಯು ಇನ್ನೂ ಪ್ರಕ್ಷುಬ್ಧವಾಗುವದು ಖಂಡಿತ. ಸುಡೆಟನ್ ಪ್ರಾಂತದಿಂದ ಆತನಿಗೆ ೪ ಲಕ್ಷ ಸೈನಿಕರು ಸಿಗುತ್ತಾರೆ ಈಗ ಆತನು ಪೂರ್ವ ಯುರೋಪ ಖಂಡದಲ್ಲಿ ಬಲ್ಗೇರಿಯಾ ಮಾರ್ಗವಾಗಿ ಜರ್ಮನಿಯ ವಿಸ್ತಾರ ಬಗೆಯುವನೆಂದು ನಾನು ಹೇಳಬಲ್ಲೆ. ನಾನೇಕೆ, ಹಿಟ್ಲರನೇ ಈ ಸಂಗತಿಯನ್ನು ಈ ಹಿಂದೆಯೇ ಸ್ಫುಟಗೊಳಿಸಿದ್ದಾನೆ ! " Mein Kempf " ಎಂಬ ಗ್ರಂಥದಲ್ಲಿ ಬೃಹತ್ ಜರ್ಮನಿಯ ಸೀಮೆಯನ್ನು ಆತನು ನಿರ್ದೇಶಿಸಿಟ್ಟಿದ್ದಾನೆ. ಆ ರಾಜ್ಯವಿಸ್ತಾರ ಯೋಜನೆಯಂತೆ ಆತನು ನಡೆಯಲೆಳಸಿದರೆ ಜಗತ್ತಿಗೆ ಸುರಕ್ಷಿತತೆಯಿಲ್ಲವಾಗಿ ಮುಂಬಯಿ 'ಟೈಮ್ಸ' ಕರ್ತರು ಮ್ಯುನಿಕ್ ಕರಾರನ್ನು ಸಮಾಲೋಚಿಸುವಾಗ ಬರೆಯುತ್ತಾರೆ. ಸರ್ ಸ್ಟೇನ್‌ಲೇ ರೀಡರವರೂ ಇದೇ ಪ್ರಕಾರ ಅಭಿಪ್ರಾಯಪಡುತ್ತಾರೆ. ಪೂರ್ವ ಯುರೋಪ ಖಂಡದಲ್ಲಿ ಇನ್ನೂ ಅಪಾಯಸ್ಥಳ (festering spots)ಗಳಿರುವವಾಗಿಯೂ ಅವುಗಳ ಸಮಸ್ಯೆಯನ್ನು ಮಹಾ-ರಾಷ್ಟ್ರಗಳು (Powers) ಬಗೆಹರಿಸಿಕೊಳ್ಳದಿದ್ದರೆ ಶಾಂತಿಸ್ಥಾಪನೆಯಾಗಲಿಕ್ಕಿಲ್ಲವಾಗಿಯೂ ಅಭಿಪ್ರಾಯಪಡುತ್ತಾರೆ. ಸುಡೆಟನ್‌ಸಮಸ್ಯೆ ದೂರವಾಗುವಷ್ಟರಲ್ಲಿ ಪೂರ್ವ ಆಫ್ರಿಕೆಯೊಳಗಿನ ವಸಾಹತುಗಳನ್ನು ಹಿಟ್ಲರನು ಕೇಳುವನಾಗಿಯೂ ಅವನ್ನು ಆತನಿಗೆ ಕೊಡಬಾರದಾಗಿಯೂ ಆಫ್ರಿಕೆಯ ಬ್ರಿಟಿಶ ವಸಾಹತುಗಳಲ್ಲಿ ಆಂದೋಲನ ನಡೆದಿದೆ. ಸ್ಪೇನದೊಳಗಿನ ಯಾದವಿ ಇನ್ನೂ ನಡೆದಿದೆ. ಅದನ್ನು ಬಗೆಹರಿಸುವದಕ್ಕಾಗಿ ಬ್ರಿಟಿಶರು ಮಧ್ಯಸ್ಥಿಕೆ ನಡಿಸಬಹುದು. ಬ್ರಿಟಿಶರೂ ಇಟಾಲಿಯ ಮುಸೊಲಿನಿಯವರೂ ಒಮ್ಮನಸ್ಸು ಮಾಡಿಕೊಂಡು ಕಲಹವನ್ನು ತೀರ್ಮಾನಿಸುವದಕ್ಕಾಗಿ ರೋಮದೊಳಗೆ ವಿಚಾರವಿನಿಮಯ ನಡಿಸಿದ್ದಾರೆ. ಸುಡೆಟನ್ ಪ್ರದೇಶ ಜರ್ಮನಿಗೆ ಒಹಿಸಬೇಕೆಂದು ನಿಶ್ಚಯನಾದಾಗ್ಯೂ ಇನ್ನೂ ಕಾರ್ಯಕ್ರಮ ಪೂರ್ಣವಾಗಿಲ್ಲ. ಜನಾಂಗಗಳೊಳಗಿನ ಯುದ್ಧಭೀತಿ ನಿವಾರಣೆ ಹೊಂದಿಲ್ಲ, ಎಲ್ಲರೂ ಯುದ್ಧತಯಾರಿಯನ್ನೇ ನಡಿಸುತ್ತಿದ್ದಾರೆ. ವಿಮಾನುಗಳ ಮೇಲಿಂದ ಹಲ್ಲೆಯಾಗುವ ಸಂದರ್ಭದಲ್ಲಿ ಪ್ರಜೆಗಳನ್ನು ಸಂರಕ್ಷಿಸಿಕೊಳ್ಳುವದಕ್ಕಾಗಿ ಕಂದಕಗಳನ್ನು ತೋಡುವ ಕೆಲಸ ಲಂಡನಿನಲ್ಲಿ ನಡೆದಿದೆ. ಧೂಮ್ರ ಕವಚಗಳನ್ನು ಉಪಯೋಗಿಸುವ ಕ್ರಮಗಳನ್ನು ಜನರಿಗೆ ಕಲಿಸುವ ಏರ್ಪಾಟು ನಡೆದಿದೆ. ನಮ್ಮ ಮುಂಬಯಿ ಸರಕಾರವೂ ವೈಮಾನಿಕ ಹಲ್ಲೆಗಳಿಂದ ಸಂರಕ್ಷಣೋಪಾಯಗಳನ್ನು ಜನರಿಗೆಲ್ಲ ಕಲಿಸುವದಕ್ಕಾಗಿ ಏರ್ಪಾಟು ಮಾಡಲಿದೆ ಇಂಥ ಸಂದರ್ಭದಲ್ಲಿ ಒಡಂಬಡಿಕೆಯಾಯಿತೆಂದು ಹೇಳಲಿಕ್ಕೆ ಯಾರಿಗೂ ಧೈರ್ಯವಿಲ್ಲ. ಯುದ್ಧ ಹೂಡುವ ಕ್ಷಾತ್ರತೇಜವೂ ಬ್ರಿಟಿಶ-ಫ್ರೆಂಚ ಜನಾಂಗಗಳಲ್ಲಿಲ್ಲ. ಹಿಟ್ಲರ-ಮುಸೊಲಿನಿಯವರಂತು ಇಡೀ ಜನಾಂಗವನ್ನು ಸೈನ್ಯ-ರಾಜ್ಯವೆಂಬಂತೆ ಸಂಘಟಿಸಿ ಸಜ್ಜುಗೊಳಿಸಿದ್ದಾರೆ ಅವರಿಗಿದಿರಾಗುವ ಧೈರ್ಯಶಾಲಿ ಪುರುಷನು ಈಗ ಯುರೋಪಖಂಡದಲ್ಲಿ ಇಲ್ಲ ! ಮಹಾತ್ಮರು ನುಡಿದಂತೆ, ಮ್ಯುನಿಕ್ ಒಪ್ಪಂದದಿಂದ ಲೋಕಕಂಟಕರ ಹಿಂಸಾಪ್ರವೃತ್ತಿಯೇ ಗೆದ್ದಿದೆ; ಅದರಿಂದ ಲೋಕದಲ್ಲಿ ಶಾಂತಿ ಸ್ಥಾಪನೆಯಾಗದು. ಇನ್ನು ಮುಂದೆ ಯುರೋಪ ಖಂಡದೊಳಗೆ ಚಿಕ್ಕರಾಷ್ಟ್ರಗಳು ಬಾಳ್ವೆ ಮಾಡಿಕೊಂಡಿರುವದು ದುರ್ಘಟ ! ದೊಡ್ಡ ಮೀನು ಚಿಕ್ಕ-ಚಿಕ್ಕ ಮೀನುಗಳನ್ನು ನುಂಗುವಂತೆ, ದೊಡ್ಡ-ದೊಡ್ಡ ರಾಷ್ಟ್ರಗಳು ಚಿಕ್ಕ-ಚಿಕ್ಕ ಜನಾಂಗಗಳನ್ನು ನುಂಗಿ ತೇಗವವು. ಇಂಥ ಪ್ರಸಕ್ತಿಯಲ್ಲಿ ಯಾವದೇ ಒಡಂಬಡಿಕೆ ಬಹುಕಾಲ ಬಾಳಬಲ್ಲದೇ ? ಆದರಿಂದಲೇ ಸರ್ ಸ್ಟೇನ್‌ಲೇ ರೀಡರವರು "ಒಡಂಬಡಿಕೆಯೋ, ಯುದ್ಧಸ್ತಬ್ಧತೆಯೋ ?" ಎಂಬ ಸಂದೇಹವಾಚಕ-ಭೀತಿಕಾರಕ ಪ್ರಶ್ನೆಯನ್ನು ಕೇಳಿ ವ್ಯಾಕುಲಚಿತ್ತರಾಗಿದ್ದಾರೆ ಇಂಥ ಸಂದರ್ಭದಲ್ಲಿ ನಾನಾದರೂ ಯಾವ ಅಭಿಪ್ರಾಯ ಕೊಡಲಿ ?

ಸ್ಥಾನಿಕ ವೃತ್ತಾಂತ.

ಕುಮಟಾ— ೩-೪ ದಿವಸಗಳಿಂದ ಬಲು ನಿಲ್ಲಣ ದಿವಸಲೂ ಮಳೆ ಬೀಳುತ್ತದೆ ಒಮ್ಮೊಮ್ಮೆ ಹಗಲು ಸಹ ಮುಗಿಲೊಳಗಿ ಮೋಡಗಳು ಮುಸುಕಿ ಕತ್ತಲೆಯಾಗುತ್ತದೆ ನೆರೆಸವೂ ಆಗುತ್ತದೆ ಈ ಅಕಾಲಿಕ ಅತಿವೃಷ್ಟಿಯಿಂದ ಹೊಲಗಳೊಳಗಿನ ಪೈರಿಗೆ ಅಡ್ಡಬಿದ್ದಿದೆ. ಅಂತು ಗದ್ದೆಯಲ್ಲಿ ಹುಟ್ಟಿದ ಬೆಳೆ ಮನೆಗೆ ಸುರಕ್ಷಿತ ಬರಲಾರದೆಂಬುದು ಖಂಡಿತ! ಒಕ್ಕಲಿಗರೆಲ್ಲರೂ ವ್ಯಸನ ಕ್ರಾಂತರಾಗಿದ್ದಾರೆ ಊರಲ್ಲಿ ಕೆಮ್ಮು, ಜ್ವರ, ವಿಷಮಜ್ವರ ಮುಂತಾದ ಬೇನೆಗಳು ಹಬ್ಬಿವೆ ಈ ವಾರ ೬ ೪೦ ಇಂಚು ಮಳೆಯಾಗಿದೆ ಅಂತು ಈ ವರೆಗಿನ ಮಳೆ ೧೬೬ ೯೧ ಇಂಚು ಆಗಿರುತ್ತದೆ

ಭಟಕಳ ನಿರಾಶ್ರಿತ ನಿಧಿಗಾಗಿ ಇಲ್ಲಿ ವಂತಿಗೆ ಕೂಡಿಸುತ್ತಿದ್ದಾರೆ ಸುಮಾರು ರೂ ೫೦ ವಸೂಲಾಗಿರುತ್ತವೆ ರಾ। ಮೂಲಚಿ ಜೀವರಾಜ ಶೇಟಿ ಇವರು ರೂ ೫೦ ಕೊಟ್ಟಿರುತ್ತಾರೆ

ಈ ವರ್ಷ ಮುಂಜಾಗ್ರತೆ ದಂಡೆಗಳನ್ನು ಸ್ವೀಕರಿಸಕೂಡದಾಗಿ ಮುಲ್ಕೀ ಅಧಿಕಾರಿಗಳಿಗೆ ಸರಕಾರದಿಂದ ಆರ್ಡರು ಬಂದಿರುತ್ತದೆಂದು ತಿಳಿಯುತ್ತದೆ ಪರುಷಗಟ್ಟಲೆ ಗೇಣಿ ಕೊಡದೆ ಒಡೆಯರಿಗೆ ಪೀಡಿಸುತ್ತಿರುವ ಕೆಲವ ಒಕ್ಕಲಿಗರಿಗೆ ಇದರಿಂದ ಉತ್ತೇಜನ ಸಿಕ್ಕಂತಾಗಿದೆ ಒಳ್ಳ ಮುಂಜಾಗ್ರತೆ ದಾವೆಗಳನ್ನು ತಿರಸ್ಕರಿಸಿರೆಂದು ಅಪ್ಪಣೆ ಮಾಡುವದಕ್ಕಿಂತ, ರೈತನು ಒಡೆಯನಿಗೆ ವಂಚಿಸುತ್ತಾನೆಂದು ಮನವರಿಕೆಯಾದನಕ ಮುಂಜಾಗ್ರತೆಯ ಹುಕುಮು ಕೊಡಬಾರದೆಂದು ಸರಕಾರದವರು ವಿಧಿಸಬಹುದಿತ್ತಲ್ಲವೇ?

ರಾ। ಶೇಖಗಿರಿ ಹರಿ ಜಾನಭಾಗ ಇವರು ತಿಳಿಸುತ್ತಾರೆ "ಕುಮಟಾ ಅರ್ಬನ್ ಸಹಕಾರಿ ಬೇಂಕಿನ ಮೆನೇಜರರು ಬೇಂಕಿನ ಮಹಾಸಭೆಯೊಳಗಿನ ಘಟನೆಗಳ ಬಗ್ಗೆ ಬರೆದ ಮಜಕೂರು ಪೂರ್ಣ ಸತ್ಯವಿರುವದಿಲ್ಲ ಕಾರ್ಯನಿರ್ವಾಹಕ ಮಂಡಳದ ಚುನಾವಣೆಯ ಕಾಲಕ್ಕೆ ನಾನು ತಂದ ಉಪಸೂಚನೆಗೆ ೩೩೩ ಸದಸ್ಯರಲ್ಲಿ ಬರೇ ೪ ಜನರು ಮಾತ್ರ ಬೆಂಬಲ ಕೊಟ್ಟರೆಂದು ಮೆನೇಜರರು ಬರೆದು ಹಿಗ್ಗುತ್ತಾರೆ ಮೆನೇಜರರು ೩೩೩ ಸದಸ್ಯರ ಲೆಕ್ಕ ಎಲ್ಲಿಂದ ತಂದರೋ ದೇವರೇ ಬಲ್ಲನು! ಮಹಾಸಭೆ ಕೂಡಿದ ಕೋಣೆಯಲ್ಲಿ ೩೫-೪೦ ಜನರಿಗಿಂತ ಹೆಚ್ಚು ಜನರಿದ್ದಿಲ್ಲ ಹೆಚ್ಚು ಜನರು ಕೂಡ್ರಲಿಕ್ಕೂ ಅಲ್ಲಿ ಅವಕಾಶವಿದ್ದಿಲ್ಲ ಕೆಲವರು ಸಭೆ ಕೂಡಿದ ಹಾಲಿಗೆ ಹೋಗುವ ಏಣಿಯ ಮೇಲೆ, ಕೆಲವರು ಮಾಳಿಗೆಯ ಕೆಳಗೆ, ಕೆಲವರು ಬೇಂಕ ಕಚೇರಿಯ ಹೊರಜಗಲಿಯ ಮೇಲೆ ಕೆಲವರು ಕಚೇರಿಯ ಮುಂದಿನ ರಸ್ತೆಯ ಮೇಲೆ ಹೀಗೆ ಜನರು ನಿಂತಿದ್ದರು ಮೆನೇಜರರಾಗಲಿ ಚೆಅರಮನ್ನರಾಗಲಿ ಸಭಾ ಕೋಣೆಯ ಹೊರಗಿದ್ದ ಈ ಜನರ ಮತಗಳನ್ನು ತಕ್ಕೊಳ್ಳಲಿಲ್ಲ ಅವರಿಗೆ ಸಭೆಯಲ್ಲಿ ಬಂದ ಸೂಚನೆಗಳ ಯಾ ನಡೆದ ಚರ್ಚೆಯ ವೃತ್ತಾಂತವಾದರೂ ತಿಳಿದಿದೆಯೋ ಇಲ್ಲವೋ! ಸಭೆಗೆ ಬಂದಿದ್ದ ಎಲ್ಲ ಜನರಿಗೆ ಸರಿಯಾಗಿ ಕೂಡ್ರಲು ಹಾಗೂ ಚರ್ಚೆ ಕೇಳಿಕೊಂಡು ಮತಗಳನ್ನು ಕೊಡಲು ಉಚಿತ ವ್ಯವಸ್ಥೆ ಮಾಡಿಕೊಟ್ಟಿದ್ದರೆ ನನ್ನ ಉಪಸೂಚನೆಗೆ ಎಷ್ಟೋ ಮತಗಳು ಸಿಗುತ್ತಿದ್ದವೆಂದ ನನಗೆ ಖಾತ್ರಿಯಿದೆ ಒಂದುವೇಳೆ ಬಹುಮತವೇ ನನಗೆ ಸಿಗಬಹುದಿತ್ತು ಆದರೆ ಚೆಅರಮನ್ನರೂ ಅವರ ಬೆಂಬಲಿಗರೂ ಸಭೆ ಪ್ರಾರಂಭವಾಗಲು ೧೦ ತಾಸು ಇರುವಾಗಲೇ ಕಾಯ್ದಿಟ್ಟ ತಮ್ಮ ಸೂಚನೆಗೆ ತಮ್ಮ ಪಕ್ಷಗಳಿಗೆ ಬೆಂಬಲ ಕೊಡುವಂತಹ ಜನರಿಗೆ ತಂದು ಸಭೆಯ ಕೋಣೆಯಲ್ಲಿ ತುಂಬಿಟ್ಟಿದ್ದರು ವಿರೋಧ ಪಕ್ಷದ ಜನರಿಗೆ ಸ್ಥಳ ಸಿಗದಂತೆ ವ್ಯೂಹ ರಚನೆಯಾಗಿತ್ತು ಇಂಥ ಸ್ಥಿತಿಯಲ್ಲಿ ನನ್ನ ಉಪಸೂಚನೆ ಬಿದ್ದುಹೋದದ್ದು ಆಶ್ಚರ್ಯವಲ್ಲ ಕಾರ್ಯಮಂಡಳಕ್ಕೆ ನಾನು ಸೂಚಿಸಿದ ಕೆಲವು ಜನರು ನಿಯಮಗಳನ್ವಯ ಅಪಾತ್ರರಿದ್ದರೆಂದು ಮೆನೇಜರರು ತಿಳಿಸುತ್ತಾರೆ ನನಗೂ ಆ ಸಂಗತಿ ಸಭೆಯಲ್ಲಿ ತಿಳಿದಿತ್ತು ಕೂಡಲೇ ನಾನು ನನ್ನ ಉಪಸೂಚನೆ ನಿಯಮಬಾಹ್ಯ ರಾಗಿರುವಂತ ಭಾಗ ಕಾರ್ಯನಿರ್ವಾಹಕರಾಗಲು ಪಾತ್ರತೆಯುಳ್ಳ ಮೆಂಬರರ ಮಂಡಳ ಸೂಚಿಸಿ ಹೊಸ ಸೂಚನೆ ತರಲಿಕ್ಕೆ ನನಗೆ ಅಸ್ಪದ ಕೊಡಬೇಕೆಂತಲೂ ನಾನು ಸಭಾಧ್ಯಕ್ಷರಿಗೆ ಬಿನ್ನವಿಸಿದೆ ಆದರೆ ಅಧ್ಯಕ್ಷರು ಒಪ್ಪಲಿಲ್ಲ! ಸಭಿಕರಿಗೆ ಬೇಕಾದ ಮಾಹಿತಿ ಪೂರೈಸದೆ ತಮ್ಮ ಇಷ್ಟ ಕಾರ್ಯವನ್ನಷ್ಟೇ ಸಾಧಿಸಲೆಳಸುವ ಅಧ್ಯಕ್ಷರ ದೊಡ್ಡಸ್ತನ ಮೆನೇಜರರು ಹೊಗಳುವದೇಕೆ? ಜನರಿಗೆ ವಂಚಿಸುವದಕ್ಕಿದು? ಒಡಿಟರರಿಂದ ರಾ. ಪರ್ಣೇಕರರು ಮಾಡಿದ ಭಾಷಣದ ಸಾರಾಂಶ ಈ ಬಾರಿ ಪ್ರಕಟವಾದದ್ದು ಸರಿಯಿಲ್ಲವಾಗಿ ಆಕ್ಷೇಪಿಸಿದ್ದು ಸಹ ತಪ್ಪು " ಇತ್ಯಾದಿ

ಇಲ್ಲಿಯ ಗಿಬ್ಬ ಹೈಸ್ಕೂಲಿನಲ್ಲಿ ಶಾಲೆಯ ಪ್ರಾರಂಭದಿಂದ ೧೯ ೨೦ ವರ್ಷಗಳ ವರೆಗೆ ಶಿಕ್ಷಕರಾಗಿ ದುಡಿದು ಸೇವಾನಿವೃತ್ತರಾದ ರಾ। ಮಹಾಬಲೇಶ್ವರ ಸುಬ್ರಾಯ ಗಾಯತೊಂಡೆಯವರು ನಿನ್ನೆ ಮುಂಜಾನೆ ಶ್ವಾಸರೋಗದ ಉಪದ್ರವದಿಂದ ತೀರಿಕೊಂಡರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ ಮೃತಾತ್ಮರು ಒಳ್ಳೇ ಸಾಧುವೃತ್ತಿಯವರೂ, ನಿಸ್ಕಪಟಿಗಳೂ, ತಮ್ಮ ಶಿಷ್ಯವರ್ಗದಲ್ಲಿ ಬಹಳೇ ಪ್ರಿಯರೂ ಆಗಿದ್ದರೆಂದು ಹೇಳಬಹುದು ಅವರ ಅಕಾಲಿಕ ನಿಧನದಿಂದ ಅವರ ಕುಟುಂಬದವರ ಮೇಲೆ ದೊಡ್ಡ ಆಪತ್ತು ಬಂದೊದಗಿದೆ ದೇವರೇ ಅವರಿಗೆ ಕಾಯಬೇಕು ಪರಮಾತ್ಮನು ಮೃತಾತ್ಮರಿಗೆ ಸದ್ಗತಿಯನ್ನೀಯಲಿ!

ಕಳೆದ ತಾ ೨ನೇಗೆ ಮಿರ್ಜಾನದಲ್ಲಿ ಗಾಂಧಿ ಜಯಂತಿಯ ಪ್ರೀತ್ಯರ್ಥ ಪ್ರಭಾತ ಫೇರಿ, ಧ್ವಜವಂದನೆ, ಸಭೆ ಮುಂತಾದ ಕಾರ್ಯಕ್ರಮಗಳು ನಡೆದವು ಸೀಮಾ ಕೊಂಗ್ರೆಸ ಕಮಿಟಿಯ ಸ್ಥಾಪನೆಯಾಗಿ ನಡೆಯಿತು ಕೊಂಗ್ರೆಸ ಕೆಲಸ ಮುಂದರಿಸಲಿಕ್ಕೆ ೧೧ ಜನರದೊಂದು ಕಾರ್ಯಕಾರಿ ಮಂಡಳ ನೇಮಿಸಲಾಗಿದೆ ರಾ। ಮಂಜನಾಥ ಜಾಲಿಸತ್ತಿಯವರು ಈ ಮಂಡಳದ ಅಧ್ಯಕ್ಷರು ರಾ। ಶಂಕರ ಕೃಷ್ಣ ಶಾನಭಾಗರು ಕಾರ್ಯದರ್ಶಿಗಳು ಈ ಸೀಮೆಯಲ್ಲಿ ಈ ವರೆಗೆ ೨೯೬ ಕೊಂಗ್ರೆಸ ಸದಸ್ಯರಾಗಿದ್ದಾರೆ ಈ ತಿಂಗಳ ಕೊನೆಯೊಳಗೆ ೬೦೦ ಸದಸ್ಯರನ್ನಾದರೂ ಮಾಡಬೇಕೆಂದು ಕಾರ್ಯಕರ್ತರು ನಿಶ್ಚಯಿಸಿದ್ದಾರೆ, ಗಾಂಧಿ ಜಯಂತಿಯ ಸಭೆಯಲ್ಲಿ ರಾ। ಮಹಮ್ಮದ ಇಸ್ಮಾಯಿಲ ಉರ್ಫ ಬಡೇಸಾಹೇಬ ಇವರು ಹಿಂದು ಮುಸಲ್ಮಾನ ಐಕ್ಯದ ಆವಶ್ಯಕತೆಯನ್ನು ವಿವರಿಸಿ, ಮುಸಲ್ಮಾನ ಬಾಂಧವರಿಗೆ ರಾಷ್ಟ್ರೀಯ ಸಭೆಯಲ್ಲಿ ಸೇರಲು ಬೋಧಿಸಿದರು ಬೇರೆ ಕೆಲವರು ಮಹಾತ್ಮರ ಗುಣಸಂಕೀರ್ತನೆ ಮಾಡಿದರು ರಾ। ಗೋಪಾಲ ಹೆಗಡೆಯವರು ಕೀರ್ತನರೂಪದಿಂದ ಮಹಾತ್ಮರ ಚರಿತ್ರೆ ಹೇಳಿದರು ೩೦೦-೪೦೦ ಜನರು ಸಭೆಗೆ ಬಂದಿದ್ದರು

ನಾಡುಮಾಸ್ಕೇರಿ ಸೀಮಾ ಕೊಂಗ್ರೆಸ ಕಮಿಟಿಯವರು ಗಂಗಾವಳಿಯಲ್ಲಿ ಒಂದು ಹೊಸ ಶಾಲೆಯನ್ನು ಮಾಡಿದ್ದಾರೆ ಶಾಲೆಯ ಉದ್ಘಾಟನ ಸಮಾರಂಭವು ತಾ ೨೪-೯-೩೮ ನೇಗೆ ರಾ॥ ವಾಮನರಾವ ಹೊದ್ದೆಯವರ ಕೈಯಿಂದ ಜರುಗಿಸಲ್ಪಟ್ಟಿತು ಶಾಲೆಯಲ್ಲಿ ಹರಿಜನ ಹುಡುಗರು ಕೂಡಿ ೬೫ ಮಂದಿ ಹುಡುಗ-ಹುಡುಗಿಯರು ದಾಖಲ ಆಗಿದ್ದಾರೆ ರಾ॥ ಹೊನ್ನಯ್ಯ ನಾಗಪ್ಪ ಕವರಿ ಇವರು ಶಿಕ್ಷಕರಾಗಿ ನೇಮಿಸಲ್ಪಟ್ಟಿದ್ದಾರೆ ಕಳೆದ ತಾ ೨ನೇಗೆ ಈ ಶಾಲೆಯಲ್ಲಿ ಗಾಂಧಿ ಜಯಂತಿಯ ಉತ್ಸವ ಜರುಗಿಸಲ್ಪಟ್ಟಿತು ರಾ॥ ಗಾಂವಕಾರ ಬೀರಣ್ಣ ನಾಯ್ಕರವರು ಮಹಾತ್ಮರ ಜೀವನ ಚರಿತ್ರೆಯನ್ನು ಹುಡುಗರಿಗೆ ತಿಳಿಸಿಹೇಳಿದರು ಊರ ಜನರು ಧ್ವಜವಂದನೆ, ಮೆರವಣಿಗೆ, ಸಭೆ, ಪ್ರಾರ್ಥನೆ ಮುಂತಾದ ಕಾರ್ಯಕ್ರಮಗಳನ್ನಿಟ್ಟು ಮಹಾತ್ಮರ ಜಯಂತಿ ಉತ್ಸವವನ್ನು ನೆರವೇರಿಸಿದರು

ಹಿರೇಗುತ್ತಿ ಸಹಕಾರಿ ಸಂಘದ ಚೆಅರಮನ್ನರ ಬರೆವಣಿಗೆಗೆ ಉತ್ತರರೂಪವಾಗಿ "ಹಿರ್ವ ಸಹಕಾರಿ ಬಂಧುಗಳು ಬರೆಯುವದೇನಂದರೆ "ಚೆಅರಮನ್ನರು ಅಸತ್ಯಕ್ಕೆ ಸತ್ಯದ ಬಣ್ಣ ಕೊಡುತ್ತಿದ್ದಾರೆ ಸಂಘದ ಕಾರ್ಯದರ್ಶಿಗಳ ನಡತೆ

ಮಕ್ಕಳಿಗೆ ವರಪ್ರದಾನ
ಜಮ್ಮಿ ವೆಂಕಟರಮಣಯ್ಯನವರ
ಲಿವ್ಹರ್ ಕ್ಯೂರ್



ಲಿವ್ಹರ್ ಮತ್ತು ಯಕೃತ್
ವಿಕಾರಗಳ ಮೇಲೆ
ಅಮೋಘವಾದ ಉಪಾಯ!
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.
— ಅಥವಾ —
ಜಮ್ಮಿ ವೆಂಕಟರಮಣಯ್ಯ,
ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,
ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.
ಶಾಖೆ.- ಅಕ್ಕಾಟ್ಸ್ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಯ ಬಗ್ಗೆ ಇನ್ನೂ ಚೌಕಶಿ ನಡೆದಿದೆ ಅವರು ತಪ್ಪುಗಾರ ರೋ ಹೇಗೆಂಬದು ಇನ್ನೂ ನಿರ್ಣಯವಾಗಿಲ್ಲ ಹೀಗಿರುವಾಗ ಕಾರ್ಯದರ್ಶಿಗಳು ತಪ್ಪುಗಾರರೆಂದು ಚೆಅರಮನ್ನರು ಹೇಳಹೊರಟದ್ದು ಏತಕ್ಕೆ? ಮಹಾಸಭೆಯ ನೋಟೀಸು ತಾ ೧೧ನೇಗೆ ಹೊರಟಿತ್ತೆಂತಲೂ, ರೀತಿಯಂತೆ ಆಚೆ- ಕಟ್ಟೆಗಳಲ್ಲೂ, ಸಭೆ ಆದದ್ದೆಂಬ ಗುಡಿಯಲ್ಲೂ ಅಂಟಿಸ್ತಾಗಿ ಬರೆಯುತ್ತಾರೆ ಆದರೆ ತಮಗೆ ಸಭೆ ನೇಮಿಸಿದ ಸುದ್ದಿಯೇ ಸಿಗಲಿಲ್ಲೆಂತಲೂ, ಸಭೆಯು ಅಕ್ರಮವಾಯಿತ್ತೆಂತಲೂ ಆಯಾ ಕಡೆಯ ಬಹಳ ಮೆಂಬರರು ಮೇಲಧಿಕಾರಿಗಳ ಕಡೆಗೆ ಅರ್ಜಿ ಮಾಡಿದ್ದಾರೆ ಇವರೆಲ್ಲರೂ ಸುಳ್ಳುಗಾರರೋ, ಚೆಅರಮನ್ನರ ಸಾಧನೆಯೇ ಸುಳ್ಳೋ? ಎಂಬದನ್ನು ಜನರೇ ನಿರ್ಣಯಿಸಲಿ ಸಂಘದ ವಾರ್ಷಿಕ ಮಹಾಸಭೆ ಕರೆಯಿರೆಂದು ಸಂಘವ ಬಹುಪಕ್ಷದ ಸದಸ್ಯರು ಹೇಳುತ್ತಿದ್ದವರ ಕಡೆಗೆ ಕಿವಿಗೊಡದೆ, ಚೆಅರಮನ್ನರು "ವಿಶೇಷ ಸಭೆ" ಕರೆದದ್ದು, ಅದೂ ಕೂಡ ಅಸ್ಪೃಶ್ಯ ಮೆಂಬರರಿಗೆ ಪ್ರವೇಶ ಸಿಗದ ಸ್ಥಳದಲ್ಲಿ ಸಭೆ ಮಾಡಿದ್ದು, ಹಿಂದೆಂದೂ ಸಭೆಯಾಗದ ಸ್ಥಳದಲ್ಲಿ ಸಭೆ ಸೇರಿಸಿದ್ದು ಇವೆಲ್ಲ ಕಾರಸ್ಥಾನದ ದ್ಯೋತಕವಲ್ಲದಿದ್ದರೆ ಇನ್ನೇತರ ದ್ಯೋತಕವೆಂಬದನ್ನು ವಾಚಕರೇ ಊಹಿಸಲಿ" ಇತ್ಯಾದಿ [ಹಿರೇಗುತ್ತಿ ಸಂಘದ ಸಂಬಂಧ ಈ ವರೆಗೆ ನಡೆದ ವಾದ ಸಾಕು ಇನ್ನು ಮುಂದೆ ಈ ವಾದಕ್ಕೆ 'ವೃತ್ತ' ದಲ್ಲಿ ಸ್ಥಳ ಸಿಗದು ಸಂಪಾದಕ]

ಹುಳ್ಳಿಯಲ್ಲಿ ಮುಳುಗಿದ ದಯಾವತಿ ಹಡಗವನ್ನು ಮೇಲಕ್ಕೆ ತೆಗೆಯಲು ಸಾಧ್ಯವುಂಟೋ ಹೇಗೆಂದು ಕಂಪನಿಯವರು ತಪಾಸಣೆ ಮಾಡಿಸಿದ್ದರು ಸಾಧ್ಯವಿಲ್ಲೆಂದು ತಜ್ಞರ ಅಭಿಪ್ರಾಯವಾಯಿತು ಹಡಗವು ಮುಳುಗುವಷ್ಟರಲ್ಲಿ ಅದರೊಳಗಿನ ೫೦೦ರಷ್ಟು ಸರಕುಗಳ ಡಾಗಿನೆಗಳನ್ನು ಮಚ್ವೆಗಳಲ್ಲಿಳಿಸಿ ಬದುಕಿಸಿದ್ದರು ಅವುಗಳಲ್ಲಿ ೧೮೦ ಕುಮಟೆಯಲ್ಲಿಳಿಯುವ ಡಾಗಿನೆಗಳಿದ್ದವು ಅವು ಮೊನ್ನೆ ಕಡವಾರ ಇಲ್ಲಿ ಬಂದು ಇಳಿದಿರುತ್ತವಂತೆ

ಇಲ್ಲಿಯ ನಗರ ಸಭೆಯ ಸಾರ್ವತ್ರಿಕ ಚುನಾವಣೆಯ ಕಾರ್ಯಕ್ರಮ ಪತ್ರಿಕೆ ಇದೀಗ ಪ್ರಸಿದ್ಧವಾಗಿದೆ ಮತದಾನದ ದಿನ ತಾ ೨೮-೧೨-೧೯೪೧ ಎಂದು ನಿಶ್ಚಯಿಸಲ್ಪಟ್ಟಿದೆ

ಹೊನ್ನಾವರ— ವಿಪರೀತ ಮಳೆ ಬೀಳುತ್ತಿದೆ ಹೊಲಗಳಲ್ಲಿ ನೀರು ತುಂಬಿದೆ ರೈತರು ದುಃಖಿಸುತ್ತಿದ್ದಾರೆ

ಜಿಲ್ಹಾಧ್ಯಕ್ಷ ರಾ॥ ಶಾಸ್ತ್ರಿಯವರು ಭಟಕಳದ ನಿರಾಶ್ರಿತರ ಸಹಾಯದ ಬಗ್ಗೆ ನಿಧಿಸಂಗ್ರಹ ಮಾಡಲು ಆರಂಭಿಸಿದ್ದಾರೆ ಪ್ರತಿಯೊಬ್ಬರೂ ಅವರಿಗೆ ನೆರವಾಗಬೇಕು

ಸೇಂಟ ಥೊಮಸ್ ಹೈಸ್ಕೂಲಿನ ವಿದ್ಯಾರ್ಥಿಗಳು ಗಾಂಧಿ ಜಯಂತಿಯನ್ನು ಜರುಗಿಸಿದರು ರಾ॥ ಸಂಗೊಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಮಹಾತ್ಮರ ಗುಣಸಂಕೀರ್ತನ ವಾಯಿತು!

ಇಲ್ಲಿಯ ಬಂದರ-ಉಗ್ರಾಣದಲ್ಲಿ ಒಳ್ಳೇ ಉಪ್ಪು ಸಿಗುವದಿಲ್ಲ ಒಡೆಯಲಾಗದ ಮುದ್ದೆಗಳಿದ್ದವೆ ಜನರು ಪೇಟಾಡುತ್ತಿದ್ದಾರೆ, ಅಧಿಕಾರಿಗಳು ಗಮನಿಸಿದ್ದು ಅವರು ಉಪ್ಪಿನ ಬಗ್ಗೆ ಕಷ್ಟಪಡಬೇಕಾಗಿದೆ!

ಕಳೆದ ವಿಜಯಾ ದಶಮಿಯ ದಿನ ಕದತೋಕೆಯೊಳಗಿನ ಶ್ರೀ ವಿದ್ಯಾರಣ್ಯ ವಾಚನಾಲಯದ ವಾರ್ಷಿಕ ಉತ್ಸವವು ವಿಜೃಂಭಣೆಯಿಂದ ನೆರವೇರಿತು

ಹಳದೀಪುರ— (ತಾ ೬-೧೦-೪೧) ಹದ ನೆಟ್ಟಿಗಿಲ್ಲ ಊರಲ್ಲಿ ತರತರದ ಬೇನೆಗಳು ಹಬ್ಬಿವೆ

ಹಿಂದೆ ಮಳೆಯಿಲ್ಲದೆ ಬೆಳೆ ಕೆಟ್ಟಿತು ಈಗ ಇದ್ದ-ಬಿದ್ದ ಬೆಳೆ ಮಳೆ ಬಿದ್ದು ಕೆಡಹತ್ತಿದೆ ತೀರ್ವೆ, ಗೇಣಿ ವಗೈರೆ ಹೇಗೆ ತೆರುವದೆಂದು ರೈತರು ಚಿಂತಿಸಹತ್ತಿದ್ದಾರೆ

ಹಳದೀಪುರ ಚಂದಾವರ ರಸ್ತೆಯ ಮೇಲಿನ ಗೊಷ್ಟಿಸಂಕ ಜೀರ್ಣವಾಗಿ ಎರಡು ಮೂರು ವರ್ಷಗಳಾದವು ದಿನಾಲು ೫೦-೬೦ ಗಾಡಿಗಳು ಓಡಾಡುವ ರಸ್ತೆಯದು ಜಿಲ್ಹಾ ಬೋರ್ಡಿನವರು ಈ ಸಂಕ ದುರುಸ್ತ ಮಾಡಬಾರದೇ?

ಮುರುಕುಳಿ ಜಂಗಲದಲ್ಲಿ ಕೆಲವರು ಕಲ್ಲು ತೆಗೆಯುತ್ತಾರೆ ಕರ್ಕಿಯವರೊಬ್ಬರು ಈ ಜಂಗಲು ತಮ್ಮ ಮಾಲ್ಕಿ ಹಕ್ಕಿನದೆಂದು ಹೇಳಿ ೧೦೦ ಕಲ್ಲುಗಳಿಗೆ ಇಷ್ಟಾಣೆಯಂತೆ ಎತ್ತುವಳಿ ಮಾಡುತ್ತಿದ್ದಾರೆ ಕೆಲವರು ಈ ಜಂಗಲು ಸರಕಾರಿ ಜಂಗಲವೆಂದು ಹೇಳುತ್ತಾರೆ ಜಂಗಲ ಖಾತೆಯವರು ಚೌಕಶಿ ಮಾಡುವರೇ?

ಗೇರಸೊಪ್ಪ— (ತಾ ೮-೧೦-೪೧) ಮಳೆ ಬಹಳ ರೈತರು ಗೋಳಿಡುತ್ತಾರೆ

ಈ ಸೀಮೆಯಲ್ಲೊಂದು ದವಾಖಾನೆಯಾಗುತ್ತದೆಂದ ಕೂಡಲೆ ಅಳ್ಳಂಕಿಯ ಕೆಲ ಜನರು ದವಾಖಾನೆಗೆ ಅಳ್ಳಂಕಿಯೇ ಪ್ರಶಸ್ತ ಸ್ಥಳವೆಂದು ಸಾಧಿಸಹತ್ತಿದ್ದು ನೋಡಿ ನಗು ಬರುತ್ತಿದೆ! ಅಳ್ಳಂಕಿಯಲ್ಲಿ ತೆರವಾದ ಧರ್ಮಶಾಳೆಯಿದೆಯಂತೆ! ಅಳ್ಳಂಕಿಯು ಮಧ್ಯಸ್ಥಳವಂತೆ! ಗೇರಸಪ್ಪೆಯಲ್ಲಿ ದವಾಖಾನೆಯಾದರೆ ಅಳ್ಳಂಕಿಯ ಜನರಿಗೆ ಬಹು ದೂರವಾಗುತ್ತದಂತೆ! ಅಳ್ಳಂಕಿಯಲ್ಲಿ ದವಾಖಾನೆಯಾದರೆ ಗೇರಸಪ್ಪೆಯ ಜನರಿಗೆ ದೂರವಾಗುತ್ತದೆಂದು ಆ ಜನರಿಗೆ ತಿಳಿಯುವದಿಲ್ಲವೇ? ಗೇರಸಪ್ಪೆಯಷ್ಟು ಅಳ್ಳಂಕಿಯಲ್ಲಿ ಜನವಸತಿಯುಂಟೇ? ಗೇರಸಪ್ಪೆಯು ಹಾಗೆ ಅಳ್ಳಂಕಿಯು ವ್ಯಾಪಾರದ ಕೇಂದ್ರವೇ? ಜಿಲ್ಹಾಧಿಪರು ಅಳ್ಳಂಕಿಯವರ ಮಾತಿಗೆ ಮೋಸಹೋಗಲಿಕ್ಕಿಲ್ಲವೆಂದು ಹಾರೈಸುತ್ತೇವೆ ಹೀಗೆ ಗೇರಸಪ್ಪೆಯ ನಾಗರಿಕರೊಬ್ಬರು ಬರೆಯುತ್ತಾರೆ

ಮಂಕಿ— (ತಾ ೧-೧೦-೪೧) ಒಂದೇ ಸವನೆ ಮಳೆ ಬೀಳುತ್ತಿದೆ ಗಾಳಿಯೂ ಬಹಳ ಅಂತು ಬೆಳೆ ಹಾಳಾಗಿ ಬರಗಾಲ ಬರುವದೆಂದು ತೋರುತ್ತಿದೆ ಒಂದಿಲ್ಲೊಂದು ಬೇನೆಯಂತೂ ಇದ್ದೇ ಇದೆ

ಭಟಕಳ— (ತಾ ೯-೧೦-೪೧) ಮಳೆ ಬೀಳುತ್ತಿದೆ ಊರಲ್ಲಿ ಜ್ವರ, ಕೆಮ್ಮು ಮುಂತಾದ ಬೇನೆಗಳಿವೆ

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತವೆ ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,
UDIPI. S. KANARA

ಗಾಂಧಿ ಜಯಂತಿಯ ದಿನ ನಾಗರಿಕರು ಸ್ಟ್ಯಾ ಇಂಗ್ಲಿಷ ಶಾಳೆಯಲ್ಲಿ ಜಿಲ್ಹಾಧ್ಯಕ್ಷ ರಾ॥ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಹಾತ್ಮರಿಗೆ ದೀರ್ಘಾಯುರಾರೋಗ್ಯ ದಯ ಪಾಲಿಸೆಂದು ದೇವರಲ್ಲಿ ಪ್ರಾರ್ಥನೆ ಮಾಡಿದರು ಹರಿಜನ ಶಾಲೆಯಲ್ಲಿ ಶ್ರೀ ಶಾರದಾಪೂಜನವಾಯಿತು.

ವಿಜಯಾ ದಶಮಿ ದಿನ ಕನ್ನಡ ಶಾಲೆಯಲ್ಲೊಂದು ಹಿಂದೀ ವರ್ಗ ತೆರೆಯಲಾಯಿತು.

ತಾ ೧ನೇಗೆ ಜಿಲ್ಹಾಧಿಕಾರಿಗಳೂ ಜಿಲ್ಹಾಧ್ಯಕ್ಷರೂ ಮಣ ಕನಗುಂಡಿಗೂ, ನೆರೆಯಿಂದ ಹಾಳಾದ ಸ್ಥಳಗಳಿಗೂ ಹೋಗಿ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಬಂದರು ಇಬ್ಬರೂ ಬಹಳ ಮರುಗಿದರು ತಾ ೩ನೇಗೆ ಮ್ಯುನಿ ಸಭಾಗೃಹದಲ್ಲಿ ಜಿಲ್ಹಾಧಿಕಾರಿಗಳ ಅಧ್ಯಕ್ಷತೆಯ ಕೆಳಗೆ ಊರ ಪ್ರಮುಖರ ಸಭೆಯಾಯಿತು ಅಧ್ಯಕ್ಷರು ನೆರೆ-ನಿರಾಶ್ರಿತರಿಗೆ ಸರಕಾರವು ಶಕ್ಯವಿದ್ದ ಸಹಾಯ ಮಾಡುವದಾಗಿಯೂ, ಸಾರ್ವಜನಿಕರೂ ಯಥಾಶಕ್ತಿ ಸಹಾಯ ಮಾಡಬೇಕಾಗಿಯೂ ಹೇಳಿದರು ಮುಂದೆ ತುಸು ಚರ್ಚೆಯಾಗಿ ನಿರಾಶ್ರಿತರ ಬಗ್ಗೆ ಕಂಡರೆ ರೂ. ೫೦ಗಳ ಅರಿವೆ ಅಂಚಡಿಗಳು ಬೇಕೆಂತಲೂ ದಿನಕ್ಕೆ ೧೫ ದಿನ ಸಾಕಾಗುವಷ್ಟು ಅನ್ನ ಸಾಮಗ್ರಿ ಬೇಕೆಂತಲೂ ನಿರ್ಣಯವಾಯಿತು ಜಿಲ್ಹಾಧ್ಯಕ್ಷರು ವಸ್ತ್ರಗಳ ಬಗ್ಗೆ ರೂ. ೩೦೧ ಕೊಡುತ್ತೇವೆಂದು ಜಾಹೀರ ಪಡಿಸಿದರು ಟಾ ಸಾ ಕಾಶಿಮುಜಯವರು ಹಿಂದೆ ಕೊಟ್ಟ ರೂ ೩೫ರ ಮೇಲೆ ಈಗ ಪುನಃ ಅರಿವೆಗಳನ್ನು ಕೊಂಡು ಕೊಳ್ಳುವ ಬಗ್ಗೆ ರೂ ೨೫ ಕೊಡುತ್ತೇವೆಂದು ವಚನ ಕೊಟ್ಟರು ಅದೇ ಸಮಯ ಶ್ರೀ ಚಿತ್ರಾಪೂರ ಮಠಾಧೀಶರ ತಂತಿ ಬಂತು ಶ್ರೀಗಳು ಸಂತ್ರಸ್ತರ ಬಗ್ಗೆ ಸಹತಾಪ ವ್ಯಕ್ತಪಡಿಸಿ, ನಿರಾಶ್ರಿತ ನಿಧಿಗೆ ರೂ ೧೦೧ ಕಾಣಿಕೆ ಕಳಿಸುತ್ತೇವೆಂದು ತಿಳಿಸಿದ್ದರು ಬೇರೆ ಕೆಲವು ಸಭಿಕರೂ ಯಥಾಶಕ್ತಿ ಧನಸಹಾಯವನ್ನಿತ್ತರು.

ಜಿಲ್ಹಾಧ್ಯಕ್ಷರು ವಚನ ಕೊಟ್ಟಂತೆ ರೂ ೩೦೧ರ ವಸ್ತ್ರಗಳನ್ನು ನಿರಾಶ್ರಿತ ನಿಧಿಗೆ ಕಳಿಸಿದ್ದಾರೆ ಅಲ್ಲದೆ ನಿರಾಶ್ರಿತ ನಿಧಿಗೆ ಕೊಡುಗೈಯಿಂದ ಸಹಾಯ ಮಾಡಬೇಕೆಂದು ಜಾಹೀರ ವಿನಂತಿಯನ್ನು ಹೊರಡಿಸಿದ್ದಾರೆ ರಾ॥ ಹೊದ್ದೆಯವರು ನಿರಾಶ್ರಿತರ ಸೇವೆ ಮಾಡುತ್ತಿದ್ದಾರೆ ಮುರ್ಡೇಶ್ವರದ ಕಾಜಿ ಜಮಾಯತ್-ಉಲ್ ಮುಸ್ಲಿಮಿನ್ ಸಂಸ್ಥೆಯವರು ೧೫ ಮುಡಿ ಅಕ್ಕಿ ಕಳಿಸಿಕೊಟ್ಟಿದ್ದಾರೆ ಮುರ್ಡೇಶ್ವರದ ಕೊಂಗ್ರೆಸ ಕಾರ್ಯಕರ್ತರು ರೂ ೫೧ ಕಳಿಸಿದ್ದಾರೆ ಜಿಲ್ಹಾಧಿಕಾರಿಗಳಿಂದ ರೂ ೧೫೦ ಮತ್ತು ಜಿಲ್ಹಾ ಬಜ್ಜರ ಕಡೆಯಿಂದ ರೂ. ೫೦ ನಿರಾಶ್ರಿತ ನಿಧಿಗೆ ಸಿಕ್ಕಿವೆ.

ಈ ತನಕ ೧೦೩೫ ಜನರು ನಿರಾಶ್ರಿತ ನಿಧಿಯಿಂದ ಸಹಾಯ ಪಡೆಯುತ್ತಿದ್ದಾರೆ ಬರೇ ಅನ್ನಸಾಮಗ್ರಿಯ ಬಗೆ ಈ ವರೆಗೆ ರೂ ೩೬೫ ವೆಚ್ಚ ತಗಲಿತು ನಾಳೆ ರವಿವಾರ ನಿಧಿಯ ಅಧ್ಯಕ್ಷ ಡಾ॥ ಕವಲಗುಡ್ಡರವರು ಅರಿವೆ-ಅಂಚಡಿಗಳನ್ನು ಹಂಚುವರು.

ತಾ. ೨೬ರ ನೆರೆಯಿಂದ ಕತ್ರಿ ಮತ್ತು ಹೇರೂರ ಗ್ರಾಮಗಳಿಗೂ ನಷ್ಟವಾಗಿ ೧೫ ಮನೆಗಳು ಕುಸಿದು ಬಿದ್ದಿವೆ ಯೆಂತಲೂ ೫೦ರಷ್ಟು ಜನರು ನಿರಾಶ್ರಿತರಾಗಿದ್ದಾರೆಂತಲೂ ತಿಳಿದುಬಂದಿದೆ. ಹೇರೂರ ದೇವಸ್ಥಾನವು ನೆಲಸಮವಾಗಿ ದೇವರ ಮೂರ್ತಿಯು ಒಳದು ಹೋಗಿವೆ ಮಣ್ಣಿನ ರಾಶಿಯಲ್ಲಿ ಹುಗಿದು ಬಿದ್ದ ಶವಗಳನ್ನು ಅಗಿದು ತೆಗೆಯಬೇಕಾದರೆ ೬೦ ಆಳುಗಳು ಸತತ ೩ ದಿನ ದುಡಿಯಬೇಕಾಯಿತು ಮುಂದಳ್ಳಿಯಲ್ಲಿ ೧೩ ಮನೆಗಳ ಹವ್ಯಕ ಜಾತಿಯವರು ಸರ್ವಸ್ವವನ್ನು ಕಳಕೊಂಡು ನಿರಾಧಾರಿಗಳಾಗಿದ್ದಾರಂತೆ.

ನಿರಾಶ್ರಿತ ಸಹಾಯಕ ಸಮಿತಿಯ ಅಧ್ಯಕ್ಷ ಡಾ ಕವಲಗುಡ್ಡರವರು ಸಾರ್ವಜನಿಕ ವಿಜ್ಞಪ್ತಿಪತ್ರವನ್ನು ಹೊರಡಿಸಿ ಸಹಾಯ ಯಾಚನೆ ಮಾಡಿದ್ದಾರೆ ೩೫೦ರಷ್ಟು ಮನೆಗಳು ಬಳದುಹೋಗಿವೆ ಮನೆ ಮಾರು ಕಳಕೊಂಡವರೆಲ್ಲರೂ ಬಡ ಒಕ್ಕಲಿಗರು ಮತ್ತು ವಿಹಾರಗಾರರು ೧೬೦೦ಕ್ಕೆ ಮೇಲ್ಪಟ್ಟ ಜನರು ನಿರಾಧಾರಿಗಳಾಗಿದ್ದಾರೆ ರೂ ೬೦,೦೦೦ ದಷ್ಟು ಹಾನಿಯಾಗಿರಬೇಕೆಂದು ಲೆಕ್ಕ ಮಾಡಲಾಗಿದೆ ಈ ತನಕ ೧೩ ಜನರ ಹೆಣಗಳು ಸಿಕ್ಕಿವೆ ಬಳದು ಹೋದ ಜನರ ಲೆಕ್ಕ ಸಿಗುವಂತಿಲ್ಲ ನಿರಾಶ್ರಿತರ ಸಂಕಟ ಪರಿಹಾರ ಮಾಡಲು ಕೂಡಲೆ ರೂ ೩೦,೦೦೦ ಹಣವಾದರೂ ಬೇಕು." ಹೀಗೆ ಅವರ ಪತ್ರಿಕೆಯು ನುಡಿಯುತ್ತಿದೆ ಅಲ್ಲಲ್ಲಿ ಕೂಡಿಸಿದ ಹಣವನ್ನು ಡಾ॥ ಕವಲಗುಡ್ಡ, ಅಧ್ಯಕ್ಷ, ನೆರೆ-ನಿರಾಶ್ರಿತ ಸಹಾಯಕ ಸಮಿತಿ, ಭಟಕಳ ಈ ಪತ್ತೆಗೆ ಕಳಿಸಿಕೊಡಬೇಕಾಗಿ ಅಧ್ಯಕ್ಷರು ಬಿನ್ನವಿಸಿದ್ದಾರೆ.

ಶಿರಸಿ— (ತಾ. ೭-೧೦-೩೮) ಭಟಕಳ ನಿರಾಶ್ರಿತ ನಿಧಿಗಾಗಿ ಜಿಲ್ಹಾ ಕೊಂಗ್ರೆಸ ಕಚೇರಿಯವರು ಧನಸಹಾಯ ಒಟ್ಟುಗೂಡಿಸುತ್ತಿದ್ದಾರೆ ಅಡಿಕೆ ವ್ಯಾಪಾರಿ ಸಂಘದವರು ರೂ ೨೫ ಕೊಟ್ಟಿದ್ದಾರೆ ನಗರ ಕೊಂಗ್ರೆಸ ಕಮಿಟಿಯವರು ರೂ ೧೦ ಕೊಟ್ಟಿದ್ದಾರೆ ಅಂತು ನಿನ್ನೆ ಸಂಜೆಯ ತನಕ ರೂ ೯೬।, ಸೀರೆ ೪ ಮತ್ತು ಕಂಬಳಿ ೨ ಇಷ್ಟು ಸಹಾಯ ಸಿಕ್ಕಿದೆ ಕನ್ನಡ ಶಾಲೆಯ ವಿದ್ಯಾರ್ಥಿನಿಗಳು ಊರಲ್ಲಿ ಯಾಚನೆ ಮಾಡಿ ಹಳೇ ಅಂಗಿ, ಶೆಲ್ಲೆ, ಸೀರೆ, ಕುಪ್ಪಸ, ಟೊಪ್ಪಿಗೆ ಪರಚುರ ಮುಂತಾದವುಗಳನ್ನು ಕೂಡಿಸಿಕೊಟ್ಟಿದ್ದಾರೆ.

ಗಾಂಧಿ ಜಯಂತಿ ಉತ್ಸವವು ಈ ಊರಲ್ಲಿ ವಿಜೃಂಭಣೆಯಿಂದ ಜರುಗಿತು ತೆರಪಿಲ್ಲದೆ ಮಳೆ ಬೀಳುತ್ತಿದ್ದದರಿಂದ ಮನೆ ಮನೆ ತಿರುಗಾಡಿ ಖಾದಿ ಮಾರಾಟ ಮಾಡುವ ಕೆಲಸ ಸಾಕಷ್ಟು ಸಾಗಲಿಲ್ಲ ಶ್ರೀ ಮಾರಿಕಾಂಬಾ ಗುಡಿಯಲ್ಲಿ ೩ ದಿನಗಳ ವರೆಗೆ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಪಂದ್ಯಾಟಗಳು ನಡೆದವು ಮಹಾತ್ಮರು ಹುಟ್ಟಿದ ದಿನ ಮುಂಜಾನೆ ನಗರ ಸಂಕೀರ್ತನೆ ನಗರ ಸಭೆಯ ಕಚೇರಿಯ ಮುಂದು ಗಡೆ ರಾ ಪೋಟನಸರರವರ ಕೈಯಿಂದ ಧ್ವಜವಂದನೆ, ಮಹಿಳಾ ಸಮಾಜದವರ ಆಟ ಸಲಾಮಿ ಮೊದಲಾದ ಕಾರ್ಯಕ್ರಮಗಳಾದವು ಆ ಮೇಲೆ ರಾ ಸುಂದರರಾವ ಪಂಡಿತರವರ ಹಸ್ತದಿಂದ ಶ್ರೀ ಮಾರಿಕಾಂಬಾ ಹಾಯಸ್ಕೂಲಿನ ಅಟ್ಟದ ಮೇಲೆ ಹಿಂದೀ ವಿದ್ಯಾಮಂದಿರ ತೆರೆಯಲ್ಪಟ್ಟಿತು ಅಧ್ಯಕ್ಷರೂ ರಾ ತಿಮ್ಮಪ್ಪ ನಾಯಕರವರೂ ರಾಷ್ಟ್ರಭಾಷೆಯ ಮಹತ್ವವನ್ನೂ ಮುಂದಿರದ ಧ್ಯೇಯವನ್ನೂ ತಿಳಿಸಿ ಹೇಳಿದರು ಆ ಬಳಿಕ ರಾ॥ ನಾಯಕರವರ ಅಧ್ಯಕ್ಷತೆಯಲ್ಲಿ ಕನ್ನಡ ಶಾಲೆಯೊಳಗಿನ ವಿದ್ಯಾರ್ಥಿಗಳ ಉತ್ಸವ ನಡೆಯಿತು ಅಧ್ಯಕ್ಷರು ಮಹಾತ್ಮರ ಆಶ್ರಮದಲ್ಲಿ ತಮಗೆ ಸಿಕ್ಕ ಅನುಭವವನ್ನೂ ಶಿಸ್ತು—ಶೀಲಗಳ ಮಹಿಮೆಯನ್ನೂ ಬಣ್ಣಿಸಿದರು ಸಂಜೆ ಮಹಾತ್ಮರ ಛಾಯಾಚಿತ್ರದ ಮೆರವಣಿಗೆಯಾಯಿತು ಶ್ರೀ ಮಾರೆಮ್ಮನವರ ಗುಡಿಯಲ್ಲಿ ರಾ॥ ತಿಮ್ಮಪ್ಪ ನಾಯಕರ ಅಧ್ಯಕ್ಷತೆಯಲ್ಲಿ ಸಭೆಯಾಗಿ, ರಾಷ್ಟ್ರಭಾಷೆಯ ಆವಶ್ಯಕತೆ, ಅಸ್ಪೃಶ್ಯತಾ ನಿವಾರಣೆ, ಖಾದಿಯ ಮಹತ್ವ ಈ ವಿಷಯಗಳ ಮೇಲೆ ವಿದ್ಯಾರ್ಥಿ-ವಿದ್ಯಾರ್ಥಿನಿಗಳ ಭಾಷಣ-ಸ್ಪರ್ಧೆಗಳು ನಡೆದವು ಪಂದ್ಯಾಟಗಳಲ್ಲೂ, ಸ್ಪರ್ಧೆಗಳಲ್ಲೂ ಗೆದ್ದವರಿಗೆ ಇನಾಮುಗಳು ಕೊಡಲ್ಪಟ್ಟವು; ಹರಿಜನ ಹುಡುಗರಿಗೆ ಪಾಟಿ, ಪುಸ್ತಕ, ಖಾದಿ-ಅರಿವೆಗಳು ಹಂಚಲ್ಪಟ್ಟವು ಪಂದ್ಯಾಗಳ ಪ್ರಥಮ ಬಹುಮಾನ ಕು॥ ಎಸ್ ವ್ಹಿ ಪಂಡಿತ ಎಂಬ ವಿದ್ಯಾರ್ಥಿಗೂ ಸಾರ್ವಜನಿಕ ಶಕ್ತಿಪ್ರಯೋಗದ ಬಗ್ಗೆ ಕೊಡಮಾಡಿದ ಪದಕವು ರಾ॥ ನಾಗಪ್ಪಾ ಮುರಾರಿ ಎಂಬವರಿಗೂ ದೊರೆತವು

ಶ್ರೀ ಮಾರಿಮ್ಮನವರ ಪಲ್ಲಕ್ಕಿಯು ಕಳೆದ ವರ್ಷದಿಂದ ಹರಿಜನ ಕೇರಿಯಲ್ಲೂ ಹೋಗುತ್ತದೆ. ಈ ದೇವರಿಗೇ

ವಾರ್ತೆಗಳು.

(೩ನೇ ಪಾನಿನಿಂದ ಮುಂದರಿಸಿದ್ದು.)

ಡೆಯಾಗಿದ್ದಾರೆ. ಸರ್ ವಿಶ್ವೇಶ್ವರಯ್ಯನವರಂಥ ಪ್ರಾಜ್ಞರೂ ಈ ಮಂಡಳದಲ್ಲಿದ್ದಾರೆ. ಇದೀಗಲೇ ಮುಂಬಯಿಯಲ್ಲೊಂದು ಮೋಟರ ಕಾರಖಾನೆಯನ್ನು ಸ್ಥಾಪಿಸುವ ಸಂಕಲ್ಪವಿದೆ. ಅದಕ್ಕಾಗಿ ಶ್ರೀ॥ ಸುಭಾಸಚಂದ್ರ ಬೋಸರವರು ಮುಂಬಯಿಗೆ ಬಂದು ಕಾರಖಾನೆಯವರೊಡನೆ ವಿಚಾರವಿನಿಮಯ ಮಾಡತೊಡಗಿದ್ದಾರೆ ಒರೇ ಗ್ರಾಮೋದ್ಯೋಗದಿಂದ ದೇಶದ ಅಭ್ಯುದಯ ಶೀಘ್ರವಾಗಿ ಆಗಲಾರದಾಗಿಯೂ ಪಾಶ್ಚಾತ್ಯ ದೇಶಗಳಂತೆ ಕಾರಖಾನೆಗಳನ್ನು ಸ್ಥಾಪಿಸಿಕೊಂಡು ತಮ್ಮ ಸಂಸಾರಕ್ಕವಶ್ಯವುಳ್ಳ ಯಾವತ್ತೂ ಸಾಹಿತ್ಯಗಳನ್ನು ನಾವು ಇಲ್ಲಿಯೇ ತಯಾರಿಸಿಕೊಂಡಹೊರತು ದೇಶದ ಉದ್ಧಾರವಾಗದೆಂದೂ ರಾಷ್ಟ್ರಪತಿಗಳು ಅಭಿಪ್ರಾಯಪಟ್ಟಿದ್ದಾರೆ ಅಖಿಲ ಭಾರತೀಯ ಔದ್ಯೋಗಿಕ ಮಹಾಮಂಡಳದವರು ಕಚೇರಿಯನ್ನೇರ್ಪಡಿಸಿಕೊಂಡು ಔದ್ಯೋಗಿಕ ಸಮಸ್ಯೆಗಳನ್ನು ಪರಾಂಬರಿಸಿ ಅವುಗಳಿಗೆ ವ್ಯವಹಾರಿಕ ರೂಪ ಕೊಡುವರು ಸರಕಾರದ ಆಶ್ರಯದಲ್ಲಿ ಇಲ್ಲವೆ ಲೋಕಾಶ್ರಯದಲ್ಲಿ ಬೇರೆ ಬೇರೆ ಕಾರಖಾನೆಗಳು ಸ್ಥಾಪನೆಯಾಗುವವು ಯಂತ್ರಸಾಮಗ್ರಿ, ವಿದ್ಯುತ್ಸಾಹಿತ್ಯ ಮೊದಲಾದ ಯಾವತ್ತೂ ಯಾಂತ್ರಿಕ ಉಪಕರಣಗಳು ದೇಶದಲ್ಲಿಯೇ ಸಿದ್ಧವಾಗಬೇಕೆಂದು ಮಹಾಮಂಡಳದ ಹಿರಿಯಾಸೆ!

ಬನ್ನಿರಿ ! —॥ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ॥— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೋಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ
ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ
ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ
ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೋಟೆಲ್" ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

ಸಂಬಂಧಪಟ್ಟ ಶ್ರೀ ವಾರುತಿ ದೇವರ ಪಲ್ಲಕ್ಕಿಯು ಪಸರಿಯ ದಿನ ಊರಲ್ಲಿ ಹೋಗಿಬರುವ ಪಾಡಿಕೆಯಿದೆ ಆದರೆ ಪಲ್ಲಕ್ಕಿಯನ್ನು ಹರಿಜನ ಕೇರಿಯಲ್ಲಿ ಒಯ್ಯಬೇಕೋ ಬೇಡವೋ ಎಂಬ ಬಗ್ಗೆ ಮೊಕ್ತೇಸರರೊಳಗೆ ಮತಭೇದವಾದ್ದರಿಂದ ಈ ಸಾರೆ ಪಸರೆಯ ದಿನ ಪಲ್ಲಕ್ಕಿಯು ಹೊರಡಲೇ ಇಲ್ಲ. ಮರುದಿನ ಮೊಕ್ತೇಸರರಿಗೂ ಊರ ಪ್ರಮುಖರಿಗೂ ಮಾತುಕತೆ ನಡೆದು ಉತ್ಸವ ಹೊರಡಿಸಲ್ಪಟ್ಟಿತು, ಮತ್ತು ಹರಿಜನ ಬಾಂಧವರ ಕೇರಿಯಲ್ಲೂ ಒಯ್ಯಲ್ಪಟ್ಟಿತು

ಹಿಂದೀ ವರ್ಗಕ್ಕೆ ಈವಾಗಲೇ ಹೆಂಗಸರು, ಗಂಡಸರು ಕೂಡಿ ಹಂಚ್ಕೆ ಮೇಲ್ಪಟ್ಟು ಜನರು ಸೇರಿದ್ದಾರೆ

ಕಳೆದ ಗುರುವಾರ "ಸನ್‌ಲ್ಯಾಟ ಸೋಪ" ಕಂಪನಿಯ ಏಜಂಟರು ಈ ಊರಿಗೆ ಬಂದಿದ್ದರು ಆದರೆ ಕೊಂಗ್ರೆಸ ಕೆಲಸಗಾರರು ವರ್ತಕರಿಗೆ ಸಕಾಲದಲ್ಲಿ ಎಚ್ಚರಿಕೆ ಕೊಟ್ಟದ್ದರಿಂದ ಯಾರೂ ಅವರ ಸರಕು ಕೊಳ್ಳಲೊಪ್ಪಲಿಲ್ಲ ಸನ್‌ಲ್ಯಾಟ ಸಾಬೂನು ವಿದೇಶಿ ಸಾಬೂನು

ದಾಸನಕೊಪ್ಪ ಕನ್ನಡ ಶಾಲೆಯ ವಿದ್ಯಾರ್ಥಿಗಳು ತಾ ೩೦ನೇಗೆ ಶ್ರೀ ಶಾರದಾ ಪೂಜೆಯ ಸಮಾರಂಭವನ್ನು ಬಹು ವೈಭವದಿಂದ ನೆರವೇರಿಸಿದರು ಉತ್ಸವದಲ್ಲಿ ಹ॥ ಭ॥ ಪ॥ ಕೀರ್ತನಾನಂದ ದಾಸರವರ ಧ್ರುವಚರಿತ್ರೆಯ ಮೇಲೆ ಕೀರ್ತನೆಯೂ ನಡೆಯಿತು

ಯಲ್ಲಾಪುರ — (ತಾ ೩೦-೯ ೩೮) ೩-೪ ದಿನಗಳಿಂದ ಮಳೆ ಬಹಳ ಬೀಳುತ್ತಿದೆ ಈ ಮಳೆಯಿಂದ ಹೊಲಗಳಿಗೆ ಪ್ರಯೋಜನವಿಲ್ಲವಂತೆ ಅಡಿಕೆ ತೋಟದವರಿಗೆ ಬಹಳ ಹಾನಿಯಾಗುತ್ತದೆ ಅಡಿಕೆ ಕೊಯ್ಯಲಿಕ್ಕೆ ಆಗುವದಿಲ್ಲ, ಕೊಯ್ದ ಅಡಿಕೆ ಒಣಗಿಸಲಾಗುವದಿಲ್ಲ' ಅಂತು ಕೈಗೆ ಸಿಕ್ಕ ಬೆಳೆ ಬಾಯಿಗೆ ಮುಟ್ಟದಂತೆ ಸ್ಥಿತಿಯಾಗಿದೆ'

ಈ ಮಳೆಯ ಹೊಡತಕ್ಕೆ ಹಂದಿಮುಡಿಯಲ್ಲಿ ಕಟ್ಟಿದ ಹಂಗಾಮಿ ಸಂಕವು ನಿನ್ನೆ ಹರಿದುಹೋಗಿದೆಯಂತೆ ಈ ಹೊತ್ತು ಕಾರವಾರ ಟಪಾಲು ಬರಲೇ ಇಲ್ಲ! ಹಂದಿಮುಡಿ ಹೊಳೆಯಲ್ಲಿ ೪ ೫ ಜನರು ಬಳದು ಹೋಗುತ್ತಿದ್ದರೆಂದು ಜನರು ಹೇಳುತ್ತಾರೆ ಎಲ್ಲಿಯ ಜನರೋ ಏನೋ!

ಹಂದಿಮುಡಿಯ ಸಂಕದ ಹಾಗೆ ಯಲ್ಲಾಪುರ ಅಂಕೋಲಾ ರಸ್ತೆಯ ಮೇಲಿನ ಇನ್ನೂ ಮೂರು ಸಂಕಗಳು ಕೆಟ್ಟುಹೋಗಿವೆ. ಬರುವ ಬೇಸಿಗೆಯಲ್ಲಾದರೂ ಅವುಗಳ ದುರುಸ್ತಿಯಾಗದಿದ್ದರೆ ಮುಂದಿನ ಮಳೆಗಾಲದಲ್ಲಿ ಹಂದಿಮುಡಿ ಸಂಕದ ಗತಿಯೇ ಅವುಗಳ ಗತಿಯಾಗುವದು ಇಂಜಿನಿಯರ ಖಾತೆಯವರು ಅವುಗಳ ದುರುಸ್ತಿ ಯಾಕೆ ಮಾಡರೋ ತಿಳಿಯದು' ಹಣದ ಅಡಚಣೆಯೆಂದು ಹೇಳಬಹುದು ನಿಜವಾಗಿ ಹಣದ ಕೊರತೆಯ ಮೂಲಕ ಈ ಸಂಕಗಳ ದುರುಸ್ತಿ ತಡೆದಿದ್ದರೆ, ಸರಕಾರದವರು ಕಾರವಾರ, ಅಂಕೋಲಾ, ಕುಮಟಾ ರಸ್ತೆಯಲ್ಲಿ ಮಾಡಬಯಸಿದ ಹೊಸ ರಸ್ತೆಗಳ ಕಾರ್ಯಕ್ರಮ ಬದಿಗಿಟ್ಟು, ಈ ಸಂಕಗಳ ದುರುಸ್ತಿಯನ್ನು ಕೂಡಲೆ ಕೈಕೊಳ್ಳಬೇಕಾಗಿ ಸೂಚನೆಯಿದೆ. ಜಿಲ್ಹಾಧಿಕಾರಿಗಳು ಈ ಕಡೆ ಲಕ್ಷ್ಯಕೊಡಲಿಕ್ಕು ಸನ್ಮಾನ್ಯ ಮಂತ್ರಿಗಳಾದ ನಾಯಿ ಸೂರಿಯವರೇ ಇತ್ತ ಗಮನಿಸಬೇಕು

ಇಲ್ಲಿಯ ದೇವೀ ದೇವಸ್ಥಾನದಲ್ಲಿ ಹರಿಜನ ಬಂಧುಗಳ ಪ್ರವೇಶ ಮಾಡಲು ಪ್ರಯತ್ನಿಸಿದ ಬಗ್ಗೆ ಮೊಕ್ತೇಸರರು ರೇಗಿಗೆದ್ದು, ಹರಿಜನರು ದೇವಸ್ಥಾನದಲ್ಲಿ ಬರದಂತೆ ಮೆಜಿಸ್ಟ್ರೇಟರ ಕಡೆಯಿಂದ ಇಂಜಕ್ಶನ್ ಹುಕುಮು ಪಡಕೊಂಡಿದ್ದಾರೆ ದೇವೀ ದೇವಸ್ಥಾನವು ಮೂಲದಲ್ಲಿ ಹರಿಜನರದೇ ದೇವಸ್ಥಾನವಂತೆ. ತಾವು ಅಶಿಕ್ಷಿತ ಅಜ್ಞಾನಿಗಳೆಂದು ದೇವಸ್ಥಾನದ ವ್ಯವಸ್ಥೆಯನ್ನು ಅವರು ಬ್ರಾಹ್ಮಣರಿಗೆ ಒಪ್ಪಿಸಿದ್ದರಂತೆ. ಈಗ ಅದೇ ದೇವಸ್ಥಾನದಲ್ಲಿ ದೇವದರ್ಶನ ಮಾಡಲಿಕ್ಕೆ ಹರಿಜನರಿಗೆ ಪ್ರತಿಬಂಧ "ಕಾಲಸ್ಯ ಕುಟಿಲಾ ಗತಿಃ" ಯೆನ್ನುತ್ತಾರೆ ಇದಕ್ಕೇ! ಹರಿಜನ-ಉದ್ಧಾರದ ಬಗ್ಗೆ ದೇಶದಲ್ಲಿ ನಡೆದಿರುವ ಆಂದೋಲನದ ಕಡೆಗೂ ಮಹಾತ್ಮರ ದಿವ್ಯ ವಿಶ್ವಬಂಧುತ್ವದ ಉಪದೇಶದ ಕಡೆಗೂ ಲಕ್ಷವಿತ್ತು, ಹರಿಜನ ಬಾಂಧವರಿಗೆ ಗುಡಿಯಲ್ಲಿ ಮುಕ್ತದ್ವಾರ ಮಾಡಿಕೊಡಬೇಕಾಗಿ ವಿಶ್ವಸ್ತರ ಸೂಚನೆಯಿದೆ.

ಸರಕಾರದವರು ತಮ್ಮ ಅಧಿಕಾರಿಗಳಿಗೆ ಉಳಿಯಲು ಇಮಾರತುಗಳನ್ನು ಕಟ್ಟಿದ್ದಾರೆ ಅವೊಂದು ಸ್ತುತ್ಯ ಕ್ರಮವೇ ಎಂದು ಹೇಳಬಹುದು ಸರಕಾರಕ್ಕೆ ಇರುವ ಇಮಾರತುಗಳವೆ. ಆದರೆ ಅಲ್ಲಿ ಭಾಡಿಗೆಯಿಲ್ಲ ಇಲ್ಲಿ ಅಧಿಕಾರಿಗಳು ಭಾಡಿಗೆ ತೆರಬೇಕಂತೆ, ಭಾಡಿಗೆ ಬಗ್ಗೆ ಅಧಿಕಾರಿಗಳ ಸಂಬಳದಲ್ಲಿ ೧೦೦ಕ್ಕೆ ೧೦ರಂತೆ ಕತ್ತರಿಸಿಕೊಳ್ಳುತ್ತಾರೆ ತಿಂಗಳೊಂದರ ರೂ ೨೪ರ ವರೆಗೆ ಸಂಬಳ ಕತ್ತರಿಸಲ್ಪಡುತ್ತದೆ' ಇಮಾರತುಗಳಾದರೂ ವಿಶಾಲವಿರುವವೇ? ಮೂರು-ನಾಲ್ಕು ಮಂದಿಗಿಂತ ಹೆಚ್ಚು ಮನೆಯೊಳಗಿನ ಜಾಗ ಸಾಲುವದಿಲ್ಲ' ಇವಕ್ಕೊಂದು ಮನೆ ಭಾಡಿಗೆಗೆ ಹಿಡಿಯಬೇಕು! ಯಲ್ಲಾಪುರದಂತಹ ಬಡ ಊರಲ್ಲಿ ಮನೆಗಳಿಗೆ ತಿಂಗಳೊಂದರ ೧೫-೨೦ ರೂ ಭಾಡಿಗೆಯೆಂದರೇನು?

ಜಾಹೀರ ನೋಟೀಸು.

ಅಪ್ರಾಪ್ತ ಪುರುಷೋತ್ತಮ ಮಂಜುನಾಥ ಶಾನಭಾಗ ಬಾಳೇರಿ ಕೋಡಕಣಿ ರಕ್ಷಕ ಅನಂತ ಮಂಜುನಾಥ ಶಾನಭಾಗ ಸಾ॥ ಹೊನ್ನಾವರ ಇವರು ಈ ಮೂಲಕ ಜಾಹೀರಪಡಿಸುವದೇನಂದರೆ:— ಅಪ್ರಾಪ್ತನು ವಿದ್ಯಾರ್ಥಿಯಾಗಿ ನಮ್ಮಲ್ಲಿ ಉಳಿದಿರುತ್ತಾನೆ. ಆತನಿಗೆ ಅವಿಭಕ್ತ ಕುಟುಂಬದ ಮೆನೇಜರರಾದ ಚಿಗಪ್ಪ, ಭಟ್ಟಾ ಪುರುಷೋತ್ತಮ ಶಾನಭಾಗ ಬಾಳೇರಿ ಇವರು ಸರಿಯಾಗಿ ನಡಿಸಿಕೊಳ್ಳುವದಿಲ್ಲ. ಆತನಿಗೆ ವಂಚಿಸುವದಕ್ಕಾಗಿ ಸದ್ರಿಯವರು ಅಲ್ಪರ ದುರ್ಬೋಧನೆಗೆ ಬಲಿಬಿದ್ದು ಕುಟುಂಬದ ಆಸ್ತಿಯನ್ನು ಪ್ರೋಕಳ ಪರಾಧೀನ ಮಾಡುವ ತಯಾರಿಯಲ್ಲಿದ್ದಾರೆಂದು ತಿಳಿದು ಬರುತ್ತದೆ. ಕುಟುಂಬದ ಆಸ್ತಿ ಪರಾಧೀನ ಮಾಡುವಂಥ ಯಾವದೇ ಪ್ರಸಂಗವಿಲ್ಲ ಕಾರಣ ಅಂಥ ಪರಾಧೀನತೆಗಳು ಅಪ್ರಾಪ್ತನಿಗೆ ಬಾಧಿಸಲಾರವು. ಮುಂಜಾಗ್ರತೆ ಬಗ್ಗೆ ಈ ನೋಟೀಸು ಕೊಟ್ಟಿದೆ.

ಹೊನ್ನಾವರ, ತಾ. ೨೭—೯—೧೯೩೮.

A. M. Shanbhag.

SERVICE & PROMPTNESS

A Feature and a Fact with the "POPULAR"

M. VENKATESH PAI,
Banker,

Sri Krishna Bhavan,
Mangalore.
25th July, 1938

The Managing Director,
The Popular Insurance Co, Ltd,
MANGALORE

Policy No 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father-in law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs. 2 558—7—0 is delivered to the claimant and all within the short period of 6 days

This spirit of service and promptitude evinced by the 'POPULAR' is highly laudable and it is but proper that the Company should be 'POPULAR' It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully,
(Sd.) M. Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: *PROSPECT CHAMBERS, Hornby Road, BOMBAY.*

ॐ

'दशमूलारिष्ट.'
ದಶಮೂಲಾರಿಷ್ಟ

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನು ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶುದ್ಧಿ ಇಲ್ಲದೆ ಮಕ್ಕಳಾಗದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನೂತನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ (ವಿಸ ಎರಡುವರೆ) ದಿನಕ್ಕೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿಗೆ ರೂ ೧—೪—೦.
,, ಬಾಟ್ಲಿ ೬ಕ್ಕೆ ರೂ. ೬ ೧೨—೦.
,, ಬಾಟ್ಲಿ ೧೨ಕ್ಕೆ ರೂ. ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ಮೃದ್ವೀಕಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ಧನ್ವಂತರಿ ಔಷಧಾಲಯ,
ಪೋಸ್ಟ:— ಕುಮಟಾ. (ಉ. ಕನ್ನಡ)

ಶ್ರೀಧೂತಪಾಪೇಶ್ವರ ಆಯುರೌಷಧಿ ಕಾರಖಾನೆ
— TRADE MARK —
ಪನವೇಲ ಕುಲಾಬಾ

— ಈ ಸಂಸ್ಥೆಯ —
ಬಾಣಂತಿತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ
ABHRALOHA

ದೊರೆಯುವ ಸ್ಥಳ— ಕಾರವಾರ-ಮೆಸರ್ಸ ಮುಜುಮದಾರ-ಕಸಬೇಕರ ಬ್ರದರ್ಸ
ಅಂಕೋಲಾ-ದಿ ಸ್ವದೇಶಿ ಡಿಪೋ. ॥ ಕುಮಟಾ- ದೇವಪ್ಪ ಅಯ್ಯನಾಯ್ಕ ॥ ಹೊನ್ನಾವರ - ಕಲ್ಯಾಣಪುರ ಬ್ರದರ್ಸ.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್
ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಹಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಸ್ಕೀಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
K. N Nayak.
Honavar Agent -
R. V. Prabhu

K. Padmanabha Rao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ತಂಬಾಕ್ಕೆ ಸೇರಲ್ಪಟ್ಟರ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೨-೮-೦ ವಿ. ಪಿ. ೦-೬-೦

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ - ಗುರುಬಸವ ಅಂಡ್ ಕಂಪನಿ ಲಿಮಿಟಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B. 1270.

Monday, 17th October, 1938.

ವರ್ಷ ೩೧

ಸಂಚಿಕೆ ೧೬

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ.1-0-0 ಆ ನಂತರ ಪ್ರತಿಸಾಲಿಗೆ 0-2-0. ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುತ್ತವೆ.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೭ ಮಾಹೆ ಅಕ್ಟೋಬರ ಸನ್ ೧೯೩೮ನೇ ಇಸವಿ.)

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital. In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd: 1906

RESOURCES OVER A CRORE.

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ, ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.
ಫಿಕ್ಸೆಡ್, ಸೇವಿಂಗ್ಸ್ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ಮತ್ತಿತರ
ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938.

The Agricultural & Industrial Bank, Ltd.

ಕಾರವಾರ ಮ್ಯುನಿಸಿಪಾಲಿಟಿ ಇಲೆಕ್ಶನ್-ಕಾರಣ!

ಸ್ಥಳೀಕ ಕಾರಣದಲ್ಲಿ ಡಿ॥ ಜಜ್ಜ ಮಿ॥ ಫ್ರೊಟೆರಫೀಲ್ಡರವರ ಪ್ರವೇಶ!

ವಕೀಲರೊಳಗೆ ಅಂದೋಲನ ಇಲೆಕ್ಶನ್-ಗೊಂದಲದ ಕುರಿತು ಅರ್ಜಿಗಳು,
ಡಿ॥ ಜಜ್ಜರ ನ್ಯಾಯನಿಷ್ಠುರತೆಯ ಕುರಿತು ಸಂದೇಹ, ನಾ॥ ಮಂತ್ರಿಗಳ ತನಕ ದೂರು!!

ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಆಯ್ಕೆ ಮುಂದೂಡಲ್ಪಟ್ಟಿತು!!!

[ನಮ್ಮ ವರದಿಗಾರರಿಂದ]

ಕಾರವಾರ, ತಾ ೧೩ ೧೦ ೩೮

ಊರತುಂಬ ಈಗ ಚರ್ಚೆಯ ವಿಷಯವೊಂದೇ ಇಲ್ಲಿಯ ಡಿಸ್ಟ್ರಿಕ್ಟ ಜಜ್ಜರಾದ ಮಿ ಫ್ರೊಟೆರಫೀಲ್ಡರವರು ಸ್ಥಳೀಕ ಕಾರಣ (Local Politics)ಗಳೊಳಗೆ ಕೈಹಾಕಬಹುದೋ ಹೇಗೆ? ಈ ವಿಷಯದ ಪೂರ್ವಾಪರ ತಿಳಕೊಂಡ ಹೊರತು ಈಗಿನ ಚರ್ಚೆಯ ಮರ್ಮ ತಿಳಿಯದು ಅಗಸ್ಟ ೨೨ನೇ ತಾರೀಖಿನಲ್ಲಿ ಮ್ಯುನಿಸಿಪಾಲಿಟಿಯ ಇಲೆಕ್ಶನಾಯಿತು ಇಲೆಕ್ಶನಿನಲ್ಲಿ ೨ ಪಕ್ಷಗಳು ಒಳ್ಳೇ ಹೋರಾಟದಿಂದ ಕಾದಾಡಿದವು ಒಂದು ಡಾ ಮಾವಿನಕುರ್ವೆಯವರ ಪಕ್ಷ, ಇನ್ನೊಂದು ಡಾ ಚಂದಾವರಕರರವರ ಪಕ್ಷ! ಡಾ॥ ಮಾವಿನಕುರ್ವೆ ಚಂದಾವರಕರ ಇವರೀರ್ವರೂ ಇಲ್ಲಿಯ ವಕೀಲರು ಇಲ್ಲಿಯ "ನಾಗರಿಕ" ಪತ್ರಿಕೆಯಲ್ಲಿ ಡಾ ಚಂದಾವರಕರ ಮತ್ತು ಅವರ ಗೆಳೆಯರ ಕುರಿತು ಅನಾವಶ್ಯಕವಾಗಿ ಅಲ್ಲಿದ-ಸಲ್ಲದ ಟೀಕೆ ಬರುತ್ತವೆ, ಅಸಭ್ಯ ಟೀಕೆ ಬರುವದೂ ಉಂಟು ಇಲೆಕ್ಶನ್ ಕಾಲದಲ್ಲಿ ಈ ಟೀಕೆ ವಿಪರೀತಕ್ಕೆ ಮುಟ್ಟಿತು ಈ ಪತ್ರಿಕೆಯ ಚಾಲಕರು ಡಾ॥ ಮಾವಿನಕುರ್ವೆಯವರೆಂದು ಲೋಕಪ್ರತೀತಿ, ತಾವು ಕಾಯಿದೆಯ ಸಲಹೆಗಾರರೆಂದು ಡಾ। ಮಾವಿನಕುರ್ವೆಯವರ ಅಂಬೋಣ ಈ ವಾರ್ತೆ ಡಿಸ್ಟ್ರಿಕ್ಟ ಜಜ್ಜ ಮಿ॥ ಫ್ರೊಟೆರಫೀಲ್ಡರವರಿಗೆ ಹೇಗೆ ತಿಳಿಯಿತೆಂದು ಹೇಳಬರದು ಡಿ। ಜಜ್ಜರಾದ ಮಿ ಫ್ರೊಟೆರಫೀಲ್ಡರವರು ಡಾ। ಮಾವಿನಕುರ್ವೆಯವರಿಗೆ ಡಿಸ್ಟ್ರಿಕ್ಟ ಕೋರ್ಟಿನ ಚೇಂಬರಿನಲ್ಲಿ ಕರೆಸಿ "ನಾಗರಿಕ" ಪತ್ರಿಕೆಯೊಳಗಿನ ಲೇಖನಗಳ ಉಲ್ಲೇಖ ಮಾಡಿ ಡಾ॥ ಮಾವಿನಕುರ್ವೆಯವರಿಗೆ, ಡಾ॥ ಚಂದಾವರಕರರ ಮೇಲೆ ಹೀಗೆ ಟೀಕೆ ಮಾಡುವದು ಸುರಕ್ಷಿತವಲ್ಲೆಂದರು, ಮತ್ಸರವಿದ್ದರೆ ವಿಚಾರವಿನಿಮಯದಿಂದ ದೂರ ಮಾಡಿಕೊಳ್ಳಬೇಕೆಂದರು ಈ ಸಂಭಾಷಣದ ನಮೂನೆ ಡಾ। ಚಂದಾವರಕರರ ಪಕ್ಷಾಭಿಮಾನದಿಂದ ನಡೆಯಿತೆಂದು ಹೇಳುತ್ತಾರೆ! ಆ ಬಳಿಕ, ಇಲೆಕ್ಶನು ಮುಗಿಯಿತು ಅಧ್ಯಕ್ಷರ ಇಲೆಕ್ಶನು ಬಂತು ಡಾ ಚಂದಾವರಕರರು ಈಗಿನ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ೮ ೯ ವರ್ಷಗಳಿಂದ ಇವರೇ ಅಧ್ಯಕ್ಷರಿದ್ದಾರೆ ಇವರೇ ಪುನಃ ಅಧ್ಯಕ್ಷರಾಗಲು ಹವಣಿಸುತ್ತಿದ್ದಾರೆ ಬೇರೊಬ್ಬರನ್ನು ಅಧ್ಯಕ್ಷರಾಗಿ ನೇಮಿಸಬೇಕೆಂದು ಪ್ರತಿಪಕ್ಷಿಗಳ ಅಂಬೋಣ ಡಿ ಜಜ್ಜರು ಉಭಯರಿಗೂ ಚೇಂಬರಿನಲ್ಲಿ ಕರೆಸಿ ಬುದ್ಧಿವಾದ ಹೇಳಿದರು. ಡಾ ಮಾವಿನಕುರ್ವೆಯವರಿಗೆ ಗದ್ದರಿಸಿದರಾಗಿಯೂ ಕೆಲ ಮಟ್ಟಿಗೆ ದುರುಕ್ತಿಗಳನ್ನಾಡಿದರಾಗಿಯೂ ಹೇಳುತ್ತಾರೆ ಅಂತು ಎರಡೂ ಸಂಭಾಷಣಗಳಲ್ಲಿ ಡಿ। ಜಜ್ಜರು ಸಂಬಂಧವಿಲ್ಲದೆ ಸೇರಿಕೊಂಡು ಎರಡೂ ಪಕ್ಷಗಳೊಳಗೆ ಒಡಂಬಡಿಕೆ ಮಾಡಿಸುವ ಬದಲು ಪಕ್ಷಪಾತ ಬೆಳಸಿದರೆಂದು ಪ್ರವಾದವಾಗಿದೆ ಈ ಸಂಭಾಷಣೆಗಳ ಕುರಿತು "ನಾಗರಿಕ" ಪತ್ರಿಕೆಯಲ್ಲಿ ವಿಸ್ತಾರವಾದ ಲೇಖ ಪ್ರಕಟವಾಯಿತು ಡಿ॥ ಜಜ್ಜರ ನಡತೆಯನ್ನು "ನಾಗರಿಕ" ಪತ್ರಿಕೆಯು ಕಟುವಾಗಿ ವಿರೋಧಿಸಿ ಇಂಥ ನಡತೆ ಡಿ॥ ಜಜ್ಜರ ಸ್ಥಾನಕ್ಕೆ ಶೋಭಿಸುವದಿಲ್ಲವೆಂದು ಟೀಕಿಸಿತು ಮೊದಲನೇ ಸಭೆ ಕರೆಕಳಿಸಿದ್ದು ತಾ ೨೭ ೯ ೩೮ನೇಗೆ ಅಂದರೆ ಮ್ಯುನಿಸಿಪಲ್ ಇಲೆಕ್ಶನ ೮ ದಿನ ಮುಂಚೆ ಎರಡನೇ ಬಾರಿ ಕರೆಕಳಿಸಿದ್ದು ತಾ ೧೪ ೯ ೩೮ ನೇಗೆ, ಡಾ ಮಾವಿನಕುರ್ವೆಯವರು 'ಮುಂಬಯಿ ಕ್ರಾನಿಕಲ್' ಪತ್ರಿಕೆಗೆ ಬರೆದ ಪತ್ರ ಪ್ರಕಟವಾದ ಬಳಿಕ 'ಮುಂಬಯಿ ಕ್ರಾನಿಕಲ್' ಪತ್ರಿಕೆಯಲ್ಲಿ ಸರಕಾರಿ ವಕೀಲರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗುವದು ಉಚಿತವಲ್ಲವೆಂದು ಡಾ' ಮಾವಿನಕುರ್ವೆಯವರು ಪ್ರತಿಪಾದಿಸಿ, ಯುಕ್ತ ಕಂಡಲ್ಲಿ ಕಾನೂನಿನೊಳಗೆ ತಿದ್ದುಪಡಿ ಮಾಡಬೇಕಾಗಿಯೂ ಸೂಚಿಸಿದ್ದರು ಇದರಿಂದ ಡಾ ಚಂದಾವರಕರರಿಗೆ ಅಧ್ಯಕ್ಷರಾಗುವ ಸಂಭವ ಕುಗ್ಗಿತೆಂದು ಡಿ ಜಜ್ಜರ ಅಭಿಪ್ರಾಯವಾಯಿತಾಗಿ ತಿಳಿಯುತ್ತದೆ ಡಿ ಜಜ್ಜರಿಗೆ ಮ್ಯುನಿಸಿಪಾಲಿಟಿ ಅಧ್ಯಕ್ಷ ಇಸಮಿನ ಕುರಿತು ಇಷ್ಟು ಹಂಬಲವಾಗುವ ಕಾರಣವೇನೆಂದು ಜನಸಾಮಾನ್ಯರಿಗೆ ತಿಳಿಯುವದಿಲ್ಲ ಈ ಪ್ರಕಾರ ಡಿ ಜಜ್ಜ ಮಿ॥ ಫ್ರೊಟೆರಫೀಲ್ಡರವರು ಸ್ಥಳೀಕ ಕಾರಣಗಳಲ್ಲಿ ಕೈಹಾಕಬಹುದೋ ಹೇಗೆಂದು ಅಲ್ಲಲ್ಲಿ ಈಗಲೂ ಚರ್ಚೆ ನಡೆಯುತ್ತಿದೆ

ಇದೇ ಸಮಯ, ಡಾ॥ ಮಾವಿನಕುರ್ವೆಯವರು ಅಂಕೋಲಾದ ಮ್ಯುನಿಸಿಪಾಲಿಟಿ ವಾರ್ಡಿನಲ್ಲಿ ಸೋತ ಉಮೇದವಾರರೊಬ್ಬರಾದ ಡಾ॥ ದಾಮೋದರ ನಾಗಪ್ಪ ಶ್ಯಾನಭಾಗರು ಡಿ। ಕೋರ್ಟಿನಲ್ಲಿ ಇಲೆಕ್ಶನ್ ಅರ್ಜಿಯನ್ನು ದಾಖಲಪಡಿಸಿ ಡಾ ಮಾವಿನಕುರ್ವೆಯವರು ಮತದಾರರಿಗೆ ಲಂಚ ಕೊಟ್ಟು ಮತ ಪಡೆದು ಆರಿಸಿಬಂದರಾಗಿಯೂ, ಅವರ ಮೆಂಬರತನವನ್ನು ರದ್ದುಪಡಿಸಬೇಕಾಗಿಯೂ ಕಾಯಿದೆಯಂತೆ ಅವಶ್ಯವಿದ್ದ ಬೇರೆ ಕ್ರಮ ಕೈಕೊಳ್ಳಬೇಕಾಗಿಯೂ ಬೇಡಿಕೊಂಡರು ಬೇರೆ ಕ್ರಮಗಳೆಂದರೆ ಇನ್ನು ಮುಂದೆ ಇಲೆಕ್ಶನಿನಲ್ಲಿ ನಿಲ್ಲಬಾರದೆಂದು ವಿಧಿಸುವಿಕೆ ಮತ್ತು ಸುಳ್ಳುತನ ಮಾಡಿದ ಬಗ್ಗೆ ಫೌಜದಾರಿ ಮೊಕದಮೆ ನಡೆಸಲು ಆಜ್ಞೆ ಮಾಡುವಿಕೆ ಈ ಅರ್ಜಿಯ ವಿಚಾರ ಡಿ॥ ಜಜ್ಜರಲ್ಲಿ ನಿರ್ಮಲಚಿತ್ತದಿಂದಲೂ ನಿಷ್ಪಕ್ಷಪಾತದಿಂದಲೂ ನಡೆಯಲಿಕ್ಕಿಲ್ಲವೆಂದು ಡಾ ಮಾವಿನಕುರ್ವೆಯವರು ಎಣಿಸಿದರು ಮತ್ತು ಅರ್ಜಿಯನ್ನು ಇಲ್ಲಿಯ ಡಿ ಕೋರ್ಟಿನಿಂದ ವರ್ಗಾಯಿಸಿಕೊಳ್ಳಲು ಪುಣೆಗೆ ಹೋದರು ಅಲ್ಲಿ ಡಿ॥ ಜಜ್ಜರ ನಡಾವಳಿಯ ಕುರಿತು ನಾನು ದಾರ ಮಂತ್ರಿಗಳಿಗೆ ಅರಿಕೆ ಮಾಡಿಕೊಂಡು ತಮ್ಮ ಅರ್ಜಿಯ ವಿಚಾರವನ್ನು ಬೇರೆ ಕಡೆ ವರ್ಗಾಯಿಸಬೇಕೆಂದೂ, ಆ ಅರ್ಜಿಯ ನಿಕಾಲದ ತನಕ ಕಾರವಾರದೊಳಗಿನ ಇಲೆಕ್ಶನ್ ಅರ್ಜಿಯ ವಿಚಾರವನ್ನು ತಡಿಸಬೇಕಾಗಿಯೂ ಪ್ರಾರ್ಥಿಸಿಕೊಂಡರು ಇಲೆಕ್ಶನ್-ಅರ್ಜಿಯ ವಿಚಾರ ನಿನ್ನೆ ಬುಧವಾರ ಇಟ್ಟಿತ್ತು ಡಾ ಮಾವಿನಕುರ್ವೆಯವರ ಪರವಾಗಿ ಡಾ ದತ್ತಾತ್ರಯ ಭಾಸ್ಕರ ನಾಡಕರ್ಣಿ, ಡಾ। ವಿನಾಯಕ ಶಂಕರ ಗೋಕರ್ಣ ಇವರೀರ್ವ ವಕೀಲರು ಹಾಜರಾದರು ಮೊದಲಿನಿಂದಲೇ ಈ ವಕೀಲರಿಗೂ ಡಿ। ಜಜ್ಜ ಫ್ರೊಟೆರಫೀಲ್ಡರವರಿಗೂ ವಿವಾದವಾಗಹತ್ತಿತು ವಕಾಲತನಾಮೆಯನ್ನು ಕೋರ್ಟಿನ ಕಾರಕೂನರ ಕಡೆ ಹಾಜರಪಡಿಸಬೇಕೆಂದು ಡಿ ಜಜ್ಜರ ಅಭಿಪ್ರಾಯ, ಅವರ ಕಡೆ ಹಾಜರಪಡಿಸಿದರೆ ತಮ್ಮ ಕಡೆ ಹಾಜರಪಡಿಸಿದಂತಾಗುತ್ತದೆಂದು ಡಿ ಜಜ್ಜರು ನುಡಿದರು ಇಲೆಕ್ಶನ್ ಅರ್ಜಿಯ ವಿಚಾರ ಕ್ರಮ ಪ್ರತ್ಯೇಕವೆಂತಲೂ ಅದಕ್ಕೆ ಸಾಮಾನ್ಯ ದಿವಾಣಿ ಕಾಯಿದೆಯ ಕ್ರಮ ಅನ್ವಯಿಸುವದಿಲ್ಲವಾಗಿಯೂ ಯಾವತ್ತೂ ಕ್ರಮಗಳು ಡಿ ಜಜ್ಜರ ಕಡೆಗೇ ನಡೆಯಬೇಕೆಂದು ವಿಧಿಸೋಣಾಗಿರುವದೆಂತಲೂ ಇಲೆಕ್ಶನ್ ಅರ್ಜಿಯನ್ನು ಕಾರಕೂನರ ಕಡೆ ಹಾಜರಪಡಿಸಿದ್ದು ತಪ್ಪೆಂದು ತಮ್ಮ ಆಕ್ಷೇಪವೆಂತಲೂ ಡಾ॥ ನಾಡಕರ್ಣಿಯವರೂ ಡಾ॥ ಗೋಕರ್ಣರವರೂ ವಾದಿಸಿ, ತಮ್ಮ ವಕಾಲತನಾಮೆಯನ್ನು ಡಿ॥ ಜಜ್ಜರ ಕಡೆ ಅಂತು ಹಾಜರಪಡಿಸಿದರು ಆ ಮೇಲೆ, ಅರ್ಜಿಯ ವಿಚಾರವನ್ನು ಸದ್ಯಕ್ಕೆ ತಡಕೊಡಬೇಕಾಗಿಯೂ ಅರ್ಜಿಯನ್ನು ವರ್ಗಾಯಿಸುವ ಕುರಿತು ನಾ॥ ಮಂತ್ರಿಗಳ ಕಡೆಗೆ ಇಲಾಜು ನಡೆದಿರುವದಾಗಿಯೂ ಅವಧಿಯ ಅರ್ಜಿ ದಾಖಲಪಡಿಸಿದರು ಡಿ॥ ಜಜ್ಜರು ಸರಕಾರಿ ವಕೀಲರಾದ ಡಾ॥ ಚಂದಾವರಕರರಿಗೆ ಕರೆಸಿಕೊಂಡು, ಡಾ॥ ನಾಡಕರ್ಣಿ ಗೋಕರ್ಣರವರಿಗೆ ಬಹಳ ಪ್ರಶ್ನೆಗಳನ್ನು ಕೇಳಿದರು "ನಾನು ನ್ಯಾಯದಂತೆ ನಡಕೊಳ್ಳಲಿಕ್ಕಿಲ್ಲವಾಗಿ ನಿಮ್ಮ ಅಂಬೋಣವಿದೆಯೋ ಹೇಗೆ? ಈ ಕುರಿತು ನಿಮ್ಮ ಸ್ವಂತ ಅಭಿಪ್ರಾಯವೇನು? ನಾ॥ ಮಂತ್ರಿಗಳಿಗೆ ಮಾಡಿದ ಅರ್ಜಿಯ ನಕಲು ಇಲ್ಲದೆಯೋ ಹೇಗೆ? ನಾ॥ ಮಂತ್ರಿಗಳಿಗೆ ಅರ್ಜಿ ಮಾಡಿದ ಸಂಗತಿ ದಿಟವೋ ಹೇಗೆ? ವಿಚಾರ (Hearing) ಎಲ್ಲಿಂದ ಶುರುವಾಗುತ್ತದೆ? ಪ್ರಥಮ ನೋಟೀಸು ಆದ ಸಮಯವೇ ವಿಚಾರಕ್ಕೆ ಪ್ರಾರಂಭವಾಗುತ್ತದೋ ಹೇಗೆ? ಈ ಅರ್ಜಿಯ ಸಂಗತಿ ಡಾ॥ ಮಾವಿನಕುರ್ವೆಯವರಿಗೆ ನೋಟೀಸು ಸಿಗುವ ಮೊದಲು ಹೇಗೆ ತಿಳಿಯಿತು?" [ಡಾ' ದಾಮೋದರ ಶ್ಯಾನಭಾಗರ ಅರ್ಜಿಯ ನೋಟೀಸು ಮಂಗಳವಾರ(ತಾ ೧೧-೧೦-೩೮)ಡಾ। ಮಾವಿನಕುರ್ವೆಯವರಿಗೆ ಜಾರಿಯಾಗಿತ್ತು ವಿಚಾರ ಮರುದಿನ ಅಂದರೆ ನಿನ್ನೆ ಬುಧವಾರ ಇಟ್ಟಿತ್ತು'] ಇವೇ ಮೊದಲಾದ, ಇವಕ್ಕೂ ಮಿಗಿಲಾದ ವಿಷಯಗಳನ್ನು ಕೇಳಿಕೊಂಡು, ಅವನ್ನು ಡಿ। ಜಜ್ಜರು ಲಘುಲೇಖಕ ಕಾರಕೂನರಿಂದ ಬರಸಿಕೊಂಡರು ಡಾ॥ ನಾಡಕರ್ಣಿಯವರೂ ಡಾ॥ ಗೋಕರ್ಣರವರೂ ನಿರ್ದಾಕ್ಷಿಣ್ಯದಿಂದ, ತಮ್ಮ ಪಕ್ಷಗಾರರ ಅಂಬೋಣವನ್ನು ಪ್ರತಿಪಾದಿಸಲು ತಾವು ಬದ್ಧರಿದ್ದೇವೆಂದು ಹೇಳಿದರು ಡಾ। ಚಂದಾವರಕರರು ಪಕ್ಷಗಾರರ ಪರವಾಗಿ ಹಾಜರಾಗದ್ದರಿಂದ ಅವರಿಗೆ ಡಿ। ಜಜ್ಜರು ಕರಿಸಿಕೊಳ್ಳುವದು ಅಪ್ರಸ್ತುತವೆಂದು ಡಾ। ನಾಡಕರ್ಣಿ ಗೋಕರ್ಣರವರು ಆಕ್ಷೇಪ ಮಾಡಲು, ತಮ್ಮ ಸಲಹೆಗಾಗಿ ಅವರಿಗೆ ಕರಿಸಿಕೊಂಡಿದ್ದೇವೆಂದು ಮಿ॥ ಫ್ರೊಟೆರಫೀಲ್ಡರವರು ಉದ್ಗರಿಸಿ, ಆ ಪ್ರಕಾರ ಲಘುಲೇಖಕರಿಂದ ವೃತ್ತಾಂತದಲ್ಲಿ ಬರಸಿದರು. ಚರ್ಚೆ ಸಾಧಾರಣ ೩॥ ತಾಸುಗಳ ತನಕ ನಡೆಯಿತು ಮಧ್ಯಾಹ್ನ ೧ ಘಂಟೆಯಿಂದ ೪॥ ಘಂಟೆಯ ತನಕ ಡಾ॥ ನಾಡಕರ್ಣಿ-ಗೋಕರ್ಣರವರು ಹಾಜರಪಡಿಸಿದ ಅವಧಿಯ ಅರ್ಜಿಯನ್ನು ಮನ್ನಿಸಬೇಕೋ ಬೇಡವೋ? ಎಂಬ ಚರ್ಚೆಯೇ ನಡೆಯಿತು ಕೊನೆಗೆ ಡಿ॥ ಜಜ್ಜರು "I want to do justice "ನ್ಯಾಯ ಮಾಡಬೇಕೆಂದು ನನ್ನ ಹಂಬಲವಿದೆ" ಹೀಗೆ ಉದ್ಗರಿಸಿ, ೨ ವಾರಗಳ ಅವಧಿ ಕೊಟ್ಟು ಇಲೆಕ್ಶನ್ ಅರ್ಜಿಯ ವಿಚಾರವನ್ನು ಮುಂದೂಡಿದರು (Hearing) ವಿಚಾರವೆಲ್ಲಿಂದ ಪ್ರಾರಂಭವಾಗುತ್ತದೆಂಬ ಚಿಕಿತ್ಸೆಯ ಮೇಲಿಂದ ಡಿ॥ ಜಜ್ಜರಿಗೆ ನಾ॥ ಮಂತ್ರಿಗಳಿಂದ ಏನಾದರೂ ಬರೆದು ಬಂದಿರಬೇಕೆಂದು ಹಲವರ ಊಹೆ

ವಕೀಲ ವರ್ಗದಲ್ಲಿಯೂ ಡಿ॥ ಜಜ್ಜರ ವರ್ತನದ ಪಡಿನೆಳಲು ಬಿದ್ದಿದೆ "ನಾಗರಿಕ" ಪತ್ರಿಕೆಯಲ್ಲಿ ಡಿ ಜಜ್ಜರ ವರ್ತನವನ್ನು ಆಕ್ಷೇಪಿಸಿ ಬಂದ ಲೇಖದ ನಿಷೇಧ ಮಾಡುವ ಕುರಿತು ಇಲ್ಲಿಯ ವಕೀಲ ಸಂಘದ ಸಭೆ ಅಂತು ಕಳೆದ ಶನಿವಾರ ತಾ ೮ ೧೦ ೩೮ನೇಗೆ ಸೇರಿತು ಡಾ॥ ದತ್ತಾತ್ರಯ ಭಾಸ್ಕರ ನಾಡಕರ್ಣಿಯವರು ಸಭಾಪತಿಗಳಾಗಿ ಆರಿಸಲ್ಪಟ್ಟ ತರುವಾಯ ಡಾ ಪಳದೀಪುರಕರರವರು ಒಂದು ಠರಾವನ್ನು ಸೂಚಿಸಿದರು ಡಿ॥ ಜಜ್ಜರು ಇದಿ' ಜಿಲ್ಲೆಯ ನ್ಯಾಯಾಧಿಕಾರಿಗಳಾದ್ದರಿಂದ ಅವರ ಮೇಲೆ ಅಗೌರವ ತೋರುವಂಥ ಯಾವದೇ ಪ್ರಕಾರಗಳನ್ನು ಯಾರೂ ಕೈಕೊಳ್ಳಬಾರದೆಂತಲೂ, ಅದರಿಂದ ಸಾರ್ವಜನಿಕ ಅಹಿತವಾಗುತ್ತದೆಂತಲೂ, "ನಾಗರಿಕ" ಪತ್ರಿಕೆಯು ಈ ವಿಷಯದ ಕುರಿತು ಪುನರೋಕ್ತ ಟೀಕೆ ಮಾಡಿದ್ದು ಅನುಚಿತವೆಂತಲೂ

ವಕೀಲ ಸಂಘವು ಕಟುವಾಗಿ ನಿಷೇಧಿಸುವಂತೆ ಠರಾವಿನಲ್ಲಿ ನಿರ್ದೇಶಿಸಲಾಗಿತ್ತು. ಡಾ॥ ಪಡ್ಡರು ಸ್ಥಳಿಕ ಕಾರ್ಗಿನವಲ್ಲಿ ಕೈಹಾಕಿದರೋ ಹೇಗೆ? ಹಾಗೆ ಅವರು ನಡಕೊಳ್ಳುವದು ಉಚಿತವೋ ಹೇಗೆ? ಎಂಬವರ ವಿಚಾರ ಈ ಅಭಿಪ್ರಾಯಕ್ಕೆ ಸಂಬಂಧಪಟ್ಟಿದ್ದಿಲ್ಲವೆಂದು ಈ ಠರಾವಿನಲ್ಲಿ ಉಲ್ಲೇಖಿಸಲಾಗಿತ್ತು. ಈ ಠರಾವನ್ನು ತಾವೂ ರಾ॥ ಚಂದಾವರಕರರೂ ಕೂಡಿ ವಿಚಾರ ಮಾಡಿ ತಯಾರಿಸಿದ್ದೇವೆಂತಲೂ, ಈಗ ಸಭೆಗೂಡಿದ ಸಹಕಾರಿಗಳು ಬೇಕಾದ ತಿದ್ದುಪಡಿ ಮಾಡಬಹುದೆಂತಲೂ ರಾ॥ ಹಳದೀಪುರಕರರು ನುಡಿದರು. 'ಸತ್ಯಸ್ಥಿತಿ ನಮಗೆ ಗೊತ್ತಿಲ್ಲ, ಡಾ॥ ಪಡ್ಡರ ಕಡೆಯಿಂದಾಗಲಿ, "ನಾಗರಿಕ" ಪತ್ರಿಕೆಯ ಕಡೆಯಿಂದಾಗಲಿ ವೃತ್ತಾಂತ ಕೇಳಿಕೊಳ್ಳಲು ನಮಗೆ ಸಾಧ್ಯವಿಲ್ಲ ರಾ। ಪಾವಿನಕುರ್ವೆಯವರಿಂದ ನಡೆದ ಸಂಗತಿಗಳನ್ನು ಕೇಳಿಕೊಳ್ಳಲು ಅವರು ಹಾಜರಿಲ್ಲ, ಸತ್ಯಸ್ಥಿತಿಯನ್ನು ಅರಿತುಕೊಂಡಹೊರತು "ನಾಗರಿಕ" ಪತ್ರಿಕೆಯ ಟೀಕೆ ವಾಸ್ತವವೋ ಹೇಗೆಂದು ಅಭಿಪ್ರಾಯ ಕೊಡಬಾರದು, ಆದಕಾರಣ ಇಂದಿನ ಸಭೆಯನ್ನು ವಿಸರ್ಜಿಸಿ ಮುಂದೆ ಸಭೆ ಸೇರಿಸಬೇಕಾಗಿ" ರಾ। ಯಶವಂತ ತ್ರ್ಯಂಬಕ ನಾಡಕರ್ಣಿಯವರು ಉದ್ಗರಿಸಿದರು "'ನಾಗರಿಕ' ಪತ್ರಿಕೆಯಲ್ಲಿ ಈ ವಿಧಾನಗಳು ಪ್ರಕಟವಾಗಿ ೩ ವಾರಗಳಾದವು, ಅವನ್ನು ಡಾ। ಪಡ್ಡರಾಗಲಿ, ಡಾ। ಪಡ್ಡರ ಅಭಿಮಾನಿಗಳಾಗಲಿ ಈ ತನಕ ನಿರಾಕರಿಸಲಿಲ್ಲ, ಆದರಿಂದ ಆ ವಿಧಾನಗಳು ದಿಟವಾದವೆಂದು ನಾವು ಎಣಿಸಬೇಕು. ಡಾ। ಪಡ್ಡರ ವರ್ತನ ಅಸಮರ್ಥನೀಯ ಆದರಿಂದ ಟೀಕೆಯ ಶಬ್ದಗಳ ಕಡೆ ಲಕ್ಷ ಕೊಡಲಾಗದು, ನಿಷೇಧಿಸುವಂತಹದೇನಿಲ್ಲ" ಹೀಗೆ ರಾ॥ ಮಾಧವ ಮಂಜನಾಥ ಶಾನಭಾಗ ಇವರು ಉದ್ಗರಿಸಿದರು ಡಾ॥ ಪಡ್ಡರೂ 'ನಾಗರಿಕ' ಪತ್ರಿಕೆಯವರೂ ನಮ್ಮ ವಕೀಲ ಸಂಘದ ಅಧಿಕಾರಕ್ಕೊಳಪಟ್ಟವರಲ್ಲಾದ್ದರಿಂದ ಈ ವಿಷಯದ ವಿಚಾರವೇ ನಿಯಮಬಾಹ್ಯವೆಂದು ರಾ॥ ಸ್ವಾದಿಯವರು ವ್ಯವಸ್ಥೆಯ ಪ್ರಶ್ನೆಯನ್ನೆತ್ತಿದರು ಅಧ್ಯಕ್ಷರಾದ ರಾ॥ ನಾಡಕರ್ಣಿಯವರು ಈ ಪ್ರಶ್ನೆಯ ಮೇಲೆ ಸಹಕಾರಿಗಳ ಅಭಿಪ್ರಾಯ ಕೇಳಿದರು ವ್ಯವಸ್ಥೆಯ ಪ್ರಶ್ನೆಯೇ ಹುಟ್ಟುವದಿಲ್ಲವೆಂದು ರಾ॥ ಹಳದೀಪುರಕರರ ಅಭಿಪ್ರಾಯ ರಾ॥ ಸ್ವಾದಿಯವರ ವ್ಯವಸ್ಥೆಯ ಪ್ರಶ್ನೆ ಯೋಗ್ಯವಿರುತ್ತದೆಂತಲೂ, ಈ ವಿವಾದಕ್ಕೆ ಸಂಬಂಧಪಟ್ಟ ಮುಖ್ಯ ನಿಜ ಸಂಗತಿಗಳನ್ನು ಹೇಳಬಲ್ಲ ಡಾ॥ ಪಡ್ಡ ಮತ್ತು "ನಾಗರಿಕ" ಪತ್ರಿಕೆಯವರನ್ನು ಕರಸಿ ವಿಚಾರ ನಡಿಸಲಿಕ್ಕೆ ವಕೀಲ ಸಂಘಕ್ಕೆ ಅಧಿಕಾರವಿಲ್ಲೆಂತಲೂ, ಡಾ॥ ಪಡ್ಡರ ವರ್ತನ ಡಾ॥ ಪಡ್ಡರ ನ್ಯಾಯದಾನದ ಕಕ್ಷೆಯಲ್ಲಿ ಸೇರದೆ ಅದಕ್ಕೆ ಮುಕ್ತವಿರುವದೆಂತಲೂ, ಈ ವಿಷಯ ವಿಚಾರ ಮಾಡಲು ವಕೀಲ ಸಂಘಕ್ಕೆ ಅಧಿಕಾರವಿಲ್ಲವಾಗಿಯೂ ರಾ॥ಗೋಕರ್ಣರವರು ಆವೇಶದಿಂದ ಪ್ರತಿಪಾದಿಸಿ ವ್ಯವಸ್ಥೆಯ ಪ್ರಶ್ನೆಯನ್ನು ಎತ್ತಿಹಿಡಿದರು ಸರಕಾರಿ ವಕೀಲರಾದ ರಾ॥ ಚಂದಾವರಕರರು ತಮ್ಮದೇನೂ ಅಭಿಪ್ರಾಯವಿಲ್ಲವೆಂದರು ರಾ। ಮುರ್ಡೇಶ್ವರರು ಈ ವಿಷಯದ ವಿಚಾರವೇ ಬೇಡವೆಂದು ಸೂಚಿಸಿದರು ರಾ॥ ಕಾ॥ ಶೆಟ್ಟಿಯವರು ರಾ॥ ಗೋಕರ್ಣರವರಂತೆಯೇ ಅಭಿಪ್ರಾಯಕೊಟ್ಟರು "ವಕೀಲರೊಳಗೆ ಮತಭೇದವಾಗಿವೆ, ಪಕ್ಷಭೇದವಾಗುವ ಸಂಭವವಿದೆ, ಕಿರಿಯರು (Juniors) ತಮ್ಮ ತಮ್ಮ ಹಿರಿಯರ (Seniors) ಪಕ್ಷ ಹಿಡಿಯುವದು ಸಹಜ, ಈಗಿನ ಕಠಿಣ ವಾತಾವರಣದಲ್ಲಿ ಕಿರಿಯರು ಸ್ವತಂತ್ರ ಮತ ಕೊಡಲಾರರು, ಆದರಿಂದ ಎಲ್ಲ ಹೊಣೆಯನ್ನು ನಾನೇ ಹೊತ್ತುಕೊಳ್ಳುತ್ತೇನೆ, ಮತ್ತು ಈ ಪ್ರಶ್ನೆ ನಿಯಮಬಾಹ್ಯವೆಂದು ನಿರ್ಣಯಿಸುತ್ತೇನೆ" ಹೀಗೆ ಅಧ್ಯಕ್ಷರಾದ ರಾ॥ ನಾಡಕರ್ಣಿಯವರು ಉದ್ಗರಿಸಿ ಸಭೆಯನ್ನು ವಿಸರ್ಜಿಸಿದರು.

ಕಾರವಾರದ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಚುನಾವಣೆ ಇನ್ನೂ ಆಗಲಿಲ್ಲ ಅಧ್ಯಕ್ಷರಾದ ರಾ। ಚಂದಾವರಕರರವರು ಕಳೆದ ಸೋಮವಾರ ತಾ ೧೦ನೇ ಬೆಳಗಿನ ೬ ಘಂಟೆಗೆ ಅಧ್ಯಕ್ಷರ ಆಯ್ಕೆಗಾಗಿ ಸಭೆ ಕರೆದಿದ್ದರು ಆದರಂತೆ ಅಂದಿನ ಸಭೆಗೆ ೧೧ ಸಭಾಸದರು ಹೋಗಿದ್ದರು, ಮೂವರ ಸಭಾಸದರಿಗೆ ಸಭೆಯ ನೋಟೀಸು ಸಿಗಲಿಲ್ಲವೆಂದು, ಅಂದಿನ ಸಭೆಯನ್ನು ರಾ॥ ಚಂದಾವರಕರರು ರದ್ದುಪಡಿಸಿದರು ಮತ್ತು ಸೋಮವಾರದ ಸಭೆಗೆ ಹಾಜರಾಗಲಿಲ್ಲ ಸಭೆ ರದ್ದುಪಡಿಸಿದ ಸಂಗತಿ ಕೆಲವು ಸಭಾಸದರಿಗೆ ಗೊತ್ತಿರಲಿಲ್ಲ ಸಭೆಯ ನೋಟೀಸನ್ನು ಊರಲ್ಲಿದ್ದ ಸಭಾಸದರಿಗೆ ಬುದ್ಧಿಪೂರ್ವಕವಾಗಿ ಮುಟ್ಟಿಸಲಿಲ್ಲವಾಗಿಯೂ, ರಾ॥ ಚಂದಾವರಕರರು ಹುಡುಗಾಟಿಕೆ (hoax) ನಡಿಸುತ್ತಾರಾಗಿಯೂ ಹಲವು ಸಭಾಸದರು ದೂರಿಕೆಯೆಂದು ಕಲೆಕ್ಟರರಿಗೆ ಅರ್ಜಿ ಮಾಡಿಕೊಂಡಿದ್ದಾರೆ ಇನ್ನು ಮುಂದೆ ಅಧ್ಯಕ್ಷರ ಆಯ್ಕೆಯ ಬಗ್ಗೆ ಸಭೆ ಕರೆಯಲು ಅಧ್ಯಕ್ಷರಿಗೆ ಅಧಿಕಾರವಿಲ್ಲೆಂತಲೂ ಈ ಸಭಾಸದರ ಅಂಬೋಣ ಕಲೆಕ್ಟರರು ದೀವಳಿಗೆಯ ಸೂಟಿ ಮುಗಿದ ತರುವಾಯ ಅಧ್ಯಕ್ಷರ ಆಯ್ಕೆಯ ಬಗ್ಗೆ ಸಭೆ ಕರೆಯಬಹುದೆಂದು ಹೇಳುತ್ತಾರೆ.

ರಾ॥ ಮಾನಕಾಮೆಯವರು ರಾ॥ ಚಂದಾವರಕರರ ಪಾರ್ಟಿನಲ್ಲಿ ಸೋತ ಉಮೇದವಾರರು ರಾ॥ ಚಂದಾವರಕರರು ಸರಕಾರಿ ವಕೀಲರಾಗಿ ನೇಮಿಸಲ್ಪಟ್ಟದ್ದರಿಂದ ಮ್ಯುನಿಸಿಪಾಲಿಟಿಯ ಮೆಂಬರರಾಗಲು ಅನರ್ಹರೆಂದೂ, ಅವರ ಮೆಂಬರಿಯನ್ನು ರದ್ದುಪಡಿಸಬೇಕಾಗಿಯೂ, ಅವರ ಸ್ಥಳದಲ್ಲಿ ತಮಗೆ ಮೆಂಬರರೆಂದು ನಿರ್ಣಯಿಸಬೇಕಾಗಿಯೂ ರಾ॥ ಮಾನಕಾಮೆಯವರು ಸರಕಾರಕ್ಕೆ ಬರಕೊಂಡಿದ್ದಾರೆ ಸರಕಾರಿ ನೌಕರರು ಮ್ಯುನಿಸಿಪಾಲಿಟಿ ಲೋಕಲ್ ಬೋರ್ಡ ಮೊದಲಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಸಭಾಸದರಾಗಿರಬಾರದೆಂದು ಸರಕಾರದ ಧೋರಣವಿದೆ ಮೇಲಾಗಿ, ಸರಕಾರಿ ವಕೀಲರು ಮ್ಯುನಿಸಿಪಾಲಿಟಿಯ ಪ್ರಕರಣಗಳಲ್ಲಿ ಸರಕಾರದ ಸಲಹೆಗಾರರಾಗಿರುವದರಿಂದ ಮ್ಯುನಿಸಿಪಾಲಿಟಿಯಲ್ಲಿ ಅವರು ಸೇರಿ ಉಳಿದರೆ ಪಕ್ಷಪಾತದಿಂದ ಅವರು ಅಭಿಪ್ರಾಯ ಕೊಡುವ ಭೀತಿಯುಂಟು ಈ ಅರ್ಜಿಯ ವಿಚಾರ ಸರಕಾರದ ಕಡೆ ನಡೆದಿದೆ

ಹೀಗೆಲ್ಲ ಕಾರವಾರದೊಳಗೆ ಈ ವರ್ಷದ ಮ್ಯುನಿಸಿಪಾಲಿಟಿ ಚುನಾವಣ ಕಾಲದಿಂದ ಚಳವಳಿ ನಡೆದಿದೆ ಇದರ ಪರಿಣಾಮ ಏನೇನಾಗುತ್ತದೆಂದು ಈಗಲೆ ಹೇಳುವದು ಕಠಿಣ. ವಿಚಾರವಂತ ಪ್ರಮುಖರೊಳಗೆ ಪಕ್ಷಾಭಿಮಾನ, ಪಕ್ಷದ್ವೇಷ-ಮತ್ಸರ-ಅಸೂಯೆಗಳು ಮನಸ್ಸಿನಲ್ಲಿ ತಲೆದೋರಿದಾಗ ಪರಿಣಾಮಗಳ ಎಣಿಕೆ ಮಾಡುವದು ಸುಲಭವಲ್ಲವಷ್ಟೇ!

SERVICE & PROMPTNESS

A Feature and a Fact with the "POPULAR"

M VENKATESH PAI
Banker,

Sri Krishna Bhavan,
Mangalore,
25th July, 1938

The Managing Director,
The Popular Insurance Co Ltd,
MANGALORE

Policy No 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father in law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2,558-7-0 is delivered to the claimant and all within the short period of 6 days.

This spirit of service and promptitude evinced by the 'POPULAR' is highly laudable and it is but proper that the Company should be POPULAR It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity.

Yours faithfully
(Sd.) M Venkatesha Pai

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED.
Head Office: MANGALORE.
Branch: ***PROSPECT CHAMBERS, Hornby Road, BOMBAY***

ಪತ್ರಕರ್ತರ ನುಡಿಗನ್ನಡಿ.

೧. ಸಂಯುಕ್ತ ಪ್ರಾಂತದ ಲಖನೌ ವಿಭಾಗದ ಕಮಿಶನರರಾದ ಡಾ|| ನೆಹರೂರವರು ಪರಿಶೋಧಿಸಿದ ವಿದ್ಯುತ್ ಸಂಸ್ಕಾರ ಕ್ರಮವನ್ನು ಈ ಹಿಂದೆ ಪರಾಂಬರಿಸಿ ಗ್ರಾಮೋದ್ಧಾರ ಮನ್ವಂತರದಲ್ಲಿ ಇದರ ಪ್ರಚಾರವಾಗುವದುಚಿತವೆಂದು ಪ್ರತಿಪಾದಿಸಿದ್ದೇವೆ. ಈ ಪ್ರಯೋಗದ ಉದಾಹರಣೆಗಳನ್ನು ಪರಾಂಬರಿಸಿದ ಹಾಗೆ ವಿದ್ಯುತ್‌ಸಂಸ್ಕಾರದಿಂದಲೇ ಗ್ರಾಮೋದ್ಧಾರವಾಗುವದೆಂದು ನಮ್ಮ ಮನವರಿಕೆಯಾಗಿದೆ. ಲಖನೌದೊಳಗೆ ಒಂದು ಪ್ರಾಣಿ ಪ್ರದರ್ಶನಾಲಯ(Zoo)ವಿದೆ. ಇಲ್ಲಿ ಅನೇಕ ಪಶು-ಪಕ್ಷಿಗಳು ಸಾಕಲ್ಪಡುತ್ತವೆ. ಈ ಪ್ರದರ್ಶನ ಮಂಡಳದ ಅಧ್ಯಕ್ಷರು ಡಾ|| ನೆಹರೂರವರು. ಈ ಪ್ರದರ್ಶನಾಲಯದೊಳಗೆ ಕರಡಿ, ಬಾತು ಕೋಳಿ, ಚಮರಮೃಗಗಳು ಅಸ್ವಸ್ಥ ಬಿದ್ದವು. ಚಿಕಿತ್ಸಾಲಯದವರಿಂದ ಅವುಗಳ ಉಪಚಾರ ಮಾಡಲಾಗಲಿಲ್ಲ. ಡಾ|| ನೆಹರೂರವರಿಗೆ ಈ ಸುದ್ದಿ ತಿಳಿದೊಡನೆ ವಿದ್ಯುತ್‌ಸಂಸ್ಕಾರ ಮಾಡಿ ಅವರು ಅವನ್ನು ಸ್ವಸ್ಥ ಪಡಿಸಿದ್ದಾರೆ. ಒಂದು ಕರಡಿ ಮದೋನ್ಮತ್ತವಾಗಿತ್ತು, ಕಾವಲುಗಾರನು ಸಮಾಧಾನ ಮಾಡಲು ಬಹಳ ಪ್ರಯತ್ನ ಮಾಡಿದನು; ಅವೆಲ್ಲ ನಿರರ್ಥಕವಾದವು. ೩ ದಿನಗಳ ತನಕ ಅದು ಆಹಾರ ಕೊಳ್ಳಲಿಲ್ಲ. ಕರಡಿಗೆ ಮದ್ಯದ ಮೇಲೆ ಪ್ರೀತಿ; ಆದರಿಂದ ಕಾವಲುಗಾರನು ಕರಡಿಗೆ ಮದ್ಯ ಕುಡಿಸಲು ಮದ್ಯದ ಬಾಟ್ಲಿಯನ್ನು ಮುಂದೊಡ್ಡಿದನು; ಕರಡಿಯು ಅದನ್ನು ಸೆಳೆಕೊಂಡು ಕಾವಲುಗಾರನಿಗೆ ಹೊಡೆದುಬಿಟ್ಟಿತು. ಆಯುರ್ದಾಯಬಲದಿಂದಲೇ ಕಾವಲುಗಾರನು ಈ ಸಂಕಟದೊಳಗಿಂದ ಪಾರಾದನು! ಡಾ| ನೆಹರೂರವರಿಗೆ ಈ ಸುದ್ದಿ ತಿಳಿಸಲಾಯಿತು. ಡಾ|| ನೆಹರೂರವರು ಝರಿ-ನೀರನ್ನು ಮಣ್ಣಿನ ಗಡಿಗೆಯಲ್ಲಿ ತರಿಸಿ ಅದರೊಳಗೊಂದು ಉಳ್ಳೆಗಡ್ಡೆಯನ್ನು ಕೊಚ್ಚಿ ಹಾಕಿ ಅದಕ್ಕೆ ವಿದ್ಯುತ್‌ಸಂಸ್ಕಾರ ಕೊಟ್ಟು, ಆ ನೀರನ್ನು ಕರಡಿಗೆ ಕುಡಿಯಗೊಟ್ಟರು. ನಳದ ನೀರು ಕುಡಿದು ಕುಡಿದು ಕರಡಿಗೆ ಬೇಸರ ಬಂದಿತ್ತು; ಗಡಿಗೆಯೊಳಗಿನ ನೀರನ್ನು ನೋಡಿದೊಡನೆ ಅದು ರುಚಿ ರುಚಿಯಿಂದ ಕುಡಿಯಿತು! ೨ ದಿನಗಳಲ್ಲಿ ಅದು ಪಾಶಿಯಾಗಿ ಸಾಧುವಾಯಿತು!! ನೋಡಬಂದವರ ಕಡೆ ಅದೀಗ ವಿನೋದದಿಂದ ಜೀಡಿಯನ್ನು ಬೇಡಿಕೊಳ್ಳುತ್ತದೆ! ಚಮರ-ಮೃಗಕ್ಕೆ ಸ್ವಲ್ಪ ಅಸ್ವಾಸ್ಥ್ಯವಾಗಿತ್ತು. ಶೀತ ಪ್ರದೇಶವೇ ಅದಕ್ಕೆ ಬೇಕಾಗಿತ್ತು; ಇಲ್ಲಿವಿದ್ದರೆ ಅದು ಅಸ್ವಸ್ಥ ಬೀಳುತ್ತಿತ್ತು. ಪ್ರಾಂತಿಕಸರಕಾರವು ಇದಕ್ಕಾಗಿ ಹೇರಳ ಹಣ ಖರ್ಚ ಮಾಡಬೇಕಾಗುತ್ತಿತ್ತು. ವಿದ್ಯುತ್ ಸಂಸ್ಕಾರದಿಂದ ಡಾ|| ನೆಹರೂರವರು ಅದರ ಪ್ರಕೃತಿದೋಷವನ್ನು ಪರಿಹರಿಸಿದ್ದಾರೆ! ಪ್ರದರ್ಶನಾಲಯದೊಳಗಿನ ಬಾತು-ಕೋಳಿಗಳು ಸದ್ಯಕ್ಕೆ ಅನ್ನಸತ್ಯಾಗ್ರಹ ಹೂಡಿದವು. ಕಾರಣವೇನೆಂದು ಯಾರಿಗೂ ತಿಳಿಯಲಿಲ್ಲ! ಕೆಲವು ಕೋಳಿಗಳು ಸತ್ತುಹೋದವು! ಡಾ|| ನೆಹರೂರವರು ಬಾತು-ಕೋಳಿ ಉಳಿಯುವ ಕೆರೆಯಲ್ಲಿ ವಿದ್ಯುತ್ ಸಂಸ್ಕಾರವಾಗುವಂತೆ ತಂತಿ ಹಾಕಿಸಿದರು. ಅದರಿಂದ ಬಾತು-ಕೋಳಿಗಳು ಸ್ವಸ್ಥವಾಗಿ ಈಗ ಮೊದಲಿನಂತೆ ಅತ್ತಿತ್ತ ಹಾರ್‍ಯಾಡುತ್ತಿವೆ! ವಿದ್ಯುತ್‌ಸಂಸ್ಕಾರದಿಂದುಂಟಾದ ಚಮತ್ಕಾರಗಳಿವು!!

---

೨. ಪ್ರಾಣಿಗಳ ಅಕ್ಷೇಮಕ್ಕೆ ಪ್ರಾಮುಖ್ಯವಾಗಿ ಖನಿಜಾಂಶಗಳೇ ಕಾರಣವೆಂದು ಡಾ|, ನೆಹರೂರವರ ಅಭಿಪ್ರಾಯ. ಶರೀರದಲ್ಲಿ ಖನಿಜಾಂಶಗಳು ಸೇರಿಕೊಂಡರೆ ಬೇರೆ ಬೇರೆ ವಿಕಾರಗಳುಂಟಾಗುತ್ತವೆಂದು ಅವರದೊಂದು ಸಿದ್ಧಾಂತ. ಎಲ್ಲ ರೋಗಗಳು ಖನಿಜಾಂಶದಿಂದಲೇ ಉದ್ಭವಿಸುತ್ತವೆಂದು ಡಾ|| ನೆಹರೂರವರು ಸಿದ್ಧಪಡಿಸಿಟ್ಟುಕೊಂಡಿದ್ದಾರೆ. ಆದರಿಂದ ಅವನ್ನು ಶರೀರದೊಳಗಿಂದ ಹೊರತಳ್ಳಬೇಕೆಂದೂ ನಾಶಪಡಿಸಬೇಕೆಂದೂ ಅವರು ಅಭಿಪ್ರಾಯಪಡುತ್ತಾರೆ. ಪ್ರದರ್ಶನಾಲಯದಲ್ಲಿ ಎಲ್ಲ ನೀರು ನಳಗಳಿಂದ ಪೂರೈಕೆಯಾಗುತ್ತದೆ; ಕೆರೆಗೂ ಅದೇ ನೀರು. ಮೇಲಾಗಿ, ನೀರನ್ನು ಪರಿಶುದ್ಧಗೊಳಿಸುವದಕ್ಕಾಗಿ ರಸಾಯನಗಳನ್ನು ಉಪಯೋಗಿಸುತ್ತಾರೆ. ರಸಾಯನಗಳ ಮೂಲಕವಾಗಿಯೂ ನಳಗಳ ಮೂಲಕವಾಗಿಯೂ ಖನಿಜಗಳು ಬೆರೆತು ಶರೀರದಲ್ಲಿ ಸೇರುತ್ತವೆ. ಮನುಷ್ಯನಾದರೂ ಇದೇ ಪಾಡು! ಪಟ್ಟಣಗಳಲ್ಲಿ ಸ್ವಾಭಾವಿಕ ನಿರ್ಮಲ ನೀರಿನ ಅಭಾವ, ಕೃತ್ರಿಮವಾಗಿ ಪರಿಶುದ್ಧಗೊಳಿಸಿದ ನೀರನ್ನೇ ಸರ್ವರೂ ಕುಡಿಯಬೇಕು. ತಿನ್ನುವದು, ಕುಡಿಯುವದು ಎಲ್ಲ ಧಾತು-ಪಾತ್ರೆಗಳ ಮೂಲಕ. ಗ್ರಾಮ-ನಿವಾಸಿಗಳ ಅವಸ್ಥೆಯು ತಕ್ಕಮಟ್ಟಿಗೆ ಇದೇ! ಮಣ್ಣಿನ ಗಡಿಗೆಗಳನ್ನು ಉಪಯೋಗ ಮಾಡುವ ರೂಢಿ ಇತ್ತ ಬಹುಮಟ್ಟಿಗೆ ಕುಗ್ಗಿದೆ. ಅದೊಂದು ಕಾಡು ಪ್ರಕಾರವೆಂದೂ ಧಾತು ಪಾತ್ರೆಗಳ ಉಪಯೋಗ ಸುಧಾರಣೆಯೆಂದೂ ಎಣಿಸಲ್ಪಡುತ್ತದೆ. ಡಾ| ನೆಹರೂರವರು ಈ ಪದ್ಧತಿಯಿಂದ ಪ್ರಾಣಿಲೋಕಕ್ಕೆ ಕ್ಷೇಮವಿಲ್ಲವೆಂದು ಎಣಿಸುತ್ತಾರೆ. ಝರಿ-ನೀರನ್ನು ಮಣ್ಣಿನ ಗಡಿಗೆಯಲ್ಲಿ ಹಾಕಿ ಅವರು ಕರಡಿಗೆ ಕುಡಿಯಗೊಟ್ಟ ರಹಸ್ಯವಿದೇ! ಖನಿಜಾಂಶಗಳ ಮೂಲಕ ಕರಡಿಯ ಪ್ರಕೃತಿ ವಿಕಾರ ಹೊಂದಿತ್ತೆಂದು ಡಾ| ನೆಹರೂರವರು ನಿದಾನ ಮಾಡಿ ಅದನ್ನು ಪರಿಹರಿಸಲೋಸುಗ ವಿದ್ಯುತ್‌ಸಂಸ್ಕಾರದ ಉಪಚಾರ ಮಾಡಿದರು. ವಿದ್ಯುತ್‌ಸಂಸ್ಕಾರದ ನೀರಿನ ಉಪಚಾರದಿಂದ ದೇಹದೊಳಗೆ ಸೇರಿಕೊಂಡ ಖನಿಜಾಂಶಗಳ ಪರಿಹಾರವಾಗುವದಲ್ಲದೆ, ದೇಹದೊಳಗುಂಟಾದ ವಿಕೃತಿಗಳು ಬಯಲಾಗಿ ಪ್ರಕೃತಿಯು ಸ್ವಾಭಾವಿಕ ಸ್ಥಿತಿಗೆ ರೂಪಾಂತರ ಹೊಂದುತ್ತದೆ. ಗ್ರಾಮ-ನಿವಾಸಿಗಳು ಇದರಿಂದ ಬೋಧ ಪಡೆದು ತಮ್ಮ ಜೀವನಕ್ರಮದೊಳಗಿನ ಕೃತ್ರಿಮತೆಯನ್ನು ಹೋಗಲಾಡಿಸಬೇಕಾಗಿ ನಾವು ಸೂಚಿಸುತ್ತೇವೆ. ಇದರಿಂದ ಆತ್ಮಕ್ಷೇಮವಾಗುವದಲ್ಲದೆ ಬಹುಮಟ್ಟಿಗೆ ಖರ್ಚಿನ ಉಳಿತಾಯವಾಗುವಂತಿದೆ. ಗ್ರಾಮನಿವಾಸಿಗಳ ಮಾನಸಿಕ, ಶಾರೀರಿಕ, ಸಾಂಪತ್ತಿಕ ಹ್ರಾಸಕ್ಕೆ ಸುಧಾರಣೆ ವಿಪರೀತ ಕಲ್ಪನೆಗಳೇ ಕಾರಣವೆಂದು ನಾವಾಗಿ ಹೇಳುವದನವಶ್ಯಕ. ಮಹಾತ್ಮರೇ ಈ ಸಂಗತಿಯನ್ನು ಅಧಿಕಾರಯುಕ್ತವಾಗಿ ಪ್ರತಿಪಾದಿಸಿ Back to the villages 'ಗ್ರಾಮಗಳಿಗೆ ಹಿಂದಿರುಗಿರಿ' ಎಂದು ಕಂಠೋಕ್ತವಾಗಿ ಸಾರಿದ್ದಾರೆ. 'ಗ್ರಾಮಗಳಿಗೆ ಹಿಂದಿರುಗಿರಿ' ಎಂದರೆ ಗ್ರಾಮಬಾಳ್ವೆಯನ್ನುದ್ಧರಿಸಿರಿ; ಗ್ರಾಮ-ಜೀವನವನ್ನು ಅನುಸರಿಸಿರಿ, ಕೃತ್ರಿಮ ಜೀವನ-ಕ್ರಮವನ್ನು ತೊರೆಯಿರಿ; ಸುಧಾರಣೆಯ ವಿಪರೀತ ಕಲ್ಪನೆಗಳನ್ನು ಬಿಟ್ಟು ಬಿಡಿರಿ; ಸ್ವಾಭಾವಿಕ ಸೃಷ್ಟಿಕ್ರಮದೊಡನೆ ತನ್ಮಯರಾಗಿರಿ; ಸೃಷ್ಟಿಕ್ರಮದಂತೆ ತಯಾರಾಗುವ ಜಿನಸುಗಳಿಂದಲೇ ಬದುಕು-ಬಾಳ್ವೆ ಮಾಡಿಕೊಂಡಿರಗಲಿಯಿರಿ; ಹೀಗೆ ಮಹಾತ್ಮರು ಬೋಧಿಸುತ್ತಿರುವಾಗ, ಪ್ರಾಣಿಶಾಸ್ತ್ರಕ್ಕೂ ಇದು ಸಮ್ಮತವೆಂದು ಡಾ| ನೆಹರೂರವರಂಥ ಪ್ರಾಜ್ಞರು ಸಹ ಸಪ್ರಯೋಗ

SAVE AND BE SAVED

"IF ONLY I HAD SAVED SOMETHING, I WOULD NEVER HAVE COME TO THIS STATE!" This is the sad and tragic exclamation of many unfortunate persons in straitened circumstances.

It is the desire of the Syndicate to arm every individual against such a calamity, and accordingly it has devised the famous Pigmy Deposit Scheme which will not only help you to meet many of your unexpected wants of the future, but also make you cheerful and self-reliant.

THE CANARA INDUSTRIAL & BANKING SYNDICATE LTD.,

ESTD. (Incorporated in British India) 1925.

MEMBER: Reserve Bank of India, Bankers' Clearing House, Bombay.

Authorised Capital	Rs. 10,00,000		Paid up Capital	Rs. 3,86,880
Issued Capital	Rs. 8,00,000		Reserves	Rs. 2,16,700
Subscribed Capital	Rs. 7,74,500		**Total Resources Exceed Rs. 51 Lakhs.**	

ಸಿದ್ಧಪಡಿಸಿಕೊಡುವಾಗ, ಗ್ರಾಮ-ನಿವಾಸಿಗಳು ಸ್ವಕಲ್ಯಾಣವನ್ನು ಉಪೇಕ್ಷಿಸುವದು ಸುರಕ್ಷಿತವಲ್ಲವಷ್ಟೇ !

---

೩. ಇಂಜನಿಯರ ಇಲಾಖೆಯ ಮಂತ್ರಿಗಳಾದ ನಾ|| ನುರಿಯವರಿಗೆ ನಾವು ಮುಂದಾಗಿಯೇ ಅಭಿನಂದಿಸುತ್ತೇವೆ. ನಾ|| ನುರಿಯವರು ಗೇರಸಪ್ಪೆಯ ಕಡಸಲಿನಿಂದ ವಿದ್ಯುಚ್ಛಕ್ತಿಯನ್ನು ನಿರ್ಮಿಸಿ ಅದನ್ನು ನಮ್ಮ ಜಿಲ್ಲೆಯೊಳಗೆ ಪೂರೈಕೆ ಮಾಡುವ ಏರ್ಪಾಟು ಮಾಡಿದ್ದಾರೆ. ಕಡಸಲು ಮೈಸೂರ ಸರಕಾರಕ್ಕೂ ಸಂಬಂಧಪಡುವದರಿಂದ ಮುಂಬಯಿ ಸರಕಾರವು ಮೈಸೂರ ಸರಕಾರದೊಡನೆ ಒಂದು ಕರಾರನಾಮೆಯನ್ನು ಮಾಡಿಕೊಂಡಿರುವದೆಂದೂ ಉಭಯರೂ ಸಹಕಾರದಿಂದ ವಿದ್ಯುತ್‌ಶಕ್ತಿ-ನಿರ್ಮಾಣದ ಯೋಜನೆ ಪುರಸ್ಕರಿಸುವರೆಂದೂ ತಿಳಿಯುತ್ತದೆ. ಡಾ|| ರಾಮಪ್ರಸಾದರವರು ಮೈಸೂರ ಸಂಸ್ಥಾನದೊಳಗಿನ ವಿದ್ಯುತ್-ತಜ್ಞರು. ಅವರಿಗೆ ಮುಂಬಯಿ ಸರಕಾರವು ೬ ತಿಂಗಳ ತನಕ ಮುಂಬಯಿ ಇಲಾಖೆಯೊಳಗೆ ನೇಮಿಸಿಕೊಂಡಿದೆ. ಅವರನ್ನು ಕರಕೊಂಡು ನಾ|| ನುರಿಯವರು ನಾತಾಳ ಹಬ್ಬದ ರಜೆಯಲ್ಲಿ ನಮ್ಮತ್ತ ಕಡೆ ಸಂಚರಿಸಬಹುದೆಂದಾಗಿ ಪ್ರಕಟವಾಗಿದೆ. ಡಾ|| ರಾಮಪ್ರಸಾದರವರು ಸ್ಥಳಿಕ ಪರಿಸ್ಥಿತಿಯನ್ನು ಸಮಕ್ಷ ಅಭ್ಯಾಸ ಮಾಡಿ ವಿದ್ಯುತ್-ನಿರ್ಮಾಣದ ಯೋಜನೆ ತಯಾರಿಸುವರು. ಈ ವಿದ್ಯುಚ್ಛಕ್ತಿಯಿಂದ ಉದ್ದಿಮೆಗಳನ್ನು ಹೊರಡಿಸುವ ಸತ್ಸಂಕಲ್ಪವಿದೆ. ಈ ಉಪಕ್ರಮವನ್ನು ಪುರಸ್ಕರಿಸಿದರೆ ಈವಾಗ ಬೆಟ್ಟದೊಳಗೆ ನಿರರ್ಥಕವಾಗಿ ನಾಶಹೊಂದುವ ಸಾಹಿತ್ಯಗಳೆಲ್ಲ ಸಾರ್ಥಕವಾಗಿ ನಮ್ಮಲ್ಲಿಯ ಬೇಸಾಯಗಾರರಿಗೂ ಜನಸಾಮಾನ್ಯರಿಗೂ ಉದ್ಯೋಗ ದೊರೆತು ಸಕಲ ಪ್ರಕಾರಗಳಿಂದಲೂ ಲೋಕಕಲ್ಯಾಣವಾಗುವದು. ವಿದ್ಯುಚ್ಛಕ್ತಿಯ ಪೂರೈಕೆಯಿಂದ ಪಾಶ್ಚಿಮಾತ್ಯ ದೇಶಗಳಲ್ಲಿಯೂ ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಔದ್ಯೋಗಿಕ ಕ್ರಾಂತಿಯುಂಟಾಗಿದೆ. ಕಡಸಲಿನಿಂದ ಸ್ವಾಭಾವಿಕವಾಗಿ ವಿದ್ಯುಚ್ಛಕ್ತಿ ನಿರ್ಮಾಣ ಹೊಂದುತ್ತದೆ; ಶರಾವತಿಯ ನೀರು ಘೋರ್ಗರೆದು ಕಡಕೊಂಡು ಬೀಳುವಾಗ ಸೃಷ್ಟಿವ್ಯಾಪಾರದಿಂದಲೇ ವಿದ್ಯುತ್ತು ಹುಟ್ಟುತ್ತದೆ; ಅದನ್ನು ಸಂಗ್ರಹಿಸುವದಕ್ಕಷ್ಟೇ ಖರ್ಚು ತಗಲುವದು. ಇದರಿಂದ ವಿದ್ಯುತ್ತು ತೀರ ಅಗ್ಗವಾಗಿ ಪೂರೈಕೆಯಾಗಬಹುದೆಂದೂ, ಬಡಬಗ್ಗರು ಸಹ ಇದನ್ನು ಕೊಂಡುಕೊಳ್ಳಬಹುದೆಂದೂ ಬಲ್ಲವರ ಎಣಿಕೆ. ನಿರರ್ಥಕವಾಗುವ ವಿದ್ಯುತ್ತಿನಿಂದ, ನಿರರ್ಥಕವಾಗುವ ಬೆಟ್ಟದ ಸಾಹಿತ್ಯಗಳ ಕಾರಖಾನೆಗಳುಂಟಾಗಿ ನಮ್ಮಾ ಬಡ ಜಿಲ್ಲೆಯೊಳಗೆ ಸಂಪದಭ್ಯುದಯವಾಗಲೆಂದು ಹಾರೈಸಿ, ಈ ಯೋಜನೆಯನ್ನು ಗಾಂಭೀರ್ಯದಿಂದಲೂ, ಉತ್ಸಾಹದಿಂದಲೂ ಪುರಸ್ಕರಿಸುವ ನಾ|| ನುರಿಯವರಿಗೆ ನಾವು ಮನದಣೆ ಹರಸುತ್ತೇವೆ.

---

೪. ದ್ರಾಕ್ಷಾಸವವನ್ನು ಮಾದಕ ಪದಾರ್ಥದಲ್ಲಿ ಸೇರಿಸಿ ಅದನ್ನು ಪ್ರತಿಬಂಧಿಸಬಾರದಾಗಿ ಮುಂಬಯಿ ಎಸೆಂಬ್ಲಿ ಸಭೆಯಲ್ಲಿ ರಾ|| ರಾಮಚಂದ್ರ ನಾರಾಯಣ ಮಂಡಲೀಕರವರು ಮಾಡಿದ ಸೂಚನೆ ವಿಚಾರಾರ್ಹವಿದೆಂದು ನಮ್ಮ ಅಭಿಪ್ರಾಯ. ದ್ರಾಕ್ಷಾಸವದಲ್ಲಿ ಮಾದಕ ಪದಾರ್ಥವಿರುವದೆಂದು ನಾ|| ಡಾ|| ಗಿಲ್ಡರರವರು ಸರಕಾರಿ ರಸಾಯನ-ಪರೀಕ್ಷಕರ ಅಭಿಪ್ರಾಯಕೊಟ್ಟು ಶೇಕಡಾ ೬ರಷ್ಟು ಮಾದಕ ಪದಾರ್ಥವಿರುವ ದ್ರಾಕ್ಷಾಸವವು ಮದ್ಯನಿರೋಧನ-ಪ್ರದೇಶದಲ್ಲಿ ಅನಿರ್ಬಂಧವಾಗಿ ಮಾರಾಟವಾಗಗೊಟ್ಟರೆ ಮದ್ಯನಿರೋಧನ ಸಾರ್ಥಕವಾಗದೆಂದು ಅಭಿಪ್ರಾಯಪಟ್ಟರು. ಮದ್ಯನಿರೋಧನ ಸಾರ್ಥಕವಾಗಬೇಕೆಂದು ನಮ್ಮ ಅಂಬೋಣವಿದೆ; ಅದನ್ನು ನಿರರ್ಥಕಗೊಳಿಸಲು ನಾವು ಎಷ್ಟಕ್ಕೂ ಸಿದ್ಧರಿಲ್ಲ. ಆದರೆ, ದ್ರಾಕ್ಷಾಸವದಂಥ ಆಯುರ್ವೇದಪ್ರಣೀತ ಔಷಧದ ಪ್ರಚಾರಕ್ಕೆ ನಿರ್ಬಂಧವಾಗುವದು ಅನುಚಿತವೆಂದು ನಮ್ಮ ಅಭಿಪ್ರಾಯ. ದ್ರಾಕ್ಷಾಸವದಲ್ಲಿ ಮಾದಕ ಪದಾರ್ಥಗಳಿರುವದಿಲ್ಲವಾಗಿ ಆಯುರ್ವೇದ ವಿಶಾರದರಾದ ಪಂ|| ತಾರಾನಾಥರವರು ಅಭಿಪ್ರಾಯಪಡುತ್ತಾರೆ. ಇದನ್ನು ರಾ|| ಮಂಡಲೀಕರವರು ಉಲ್ಲೇಖಿಸಿ ವಿಚಾರಕ್ಕಾಗಿ ಆಯುರ್ವೇದ-ತಜ್ಞರ ಸೇರಿಕೆಯಿಂದ ಒಂದು ಮಂಡಳ ನೇಮಿಸಬೇಕೆಂದು ಸೂಚಿಸಿದರು. ನಾ|| ಡಾ|| ಗಿಲ್ಡರರವರು ಆಯುರ್ವೇದದ ಅಭಿಮಾನಿಗಳಲ್ಲವೆಂದು ಸಭಿಕರ ಆರೋಪ. ಇಂಥ ಪ್ರಸಕ್ತಿಯಲ್ಲಿ ನಾ|| ಡಾ|| ಗಿಲ್ಡರರವರು ಆಲೋಚನಾ ಮಂಡಳವನ್ನು ನೇಮಿಸಿಕೊಂಡು ವಿಚಾರ ನಡಿಸಬಹುದಾಗಿ ನಮ್ಮ ಸೂಚನೆ. ಇದು ಶಾಸ್ತ್ರವಿಷಯವಾದ್ದರಿಂದ ನಾ|| ಡಾ|| ಗಿಲ್ಡರರು ಸಂತೋಷದಿಂದ ಒಪ್ಪಿಗೆ ಕೊಡಬೇಕಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಸರ್ವರೂ ಮದ್ಯನಿರೋಧನ ಧ್ಯೇಯದಿಂದಲೇ ಪ್ರೇರಿತರಾಗಿರುವಾಗ, ಮದ್ಯ-ನಿರೋಧನಪ್ರಯೋಗ ಸ್ವಾರ್ಥಕವಾಗಬೇಕೆಂದು ಹಂಬಲಿಸುತ್ತಿರುವಾಗ, ದ್ರಾಕ್ಷಾಸವದಲ್ಲಿ ಮದ್ಯವಿರುವದಾಗಿ ಸಿದ್ಧವಾದರೆ, ಆ ಕುರಿತು ಅವರು ಆಗ್ರಹ ಬಿಡಲೊಪ್ಪಲೇಬೇಕಲ್ಲವೇ?

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,

ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು ! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,

UDIPI. S. KANARA.

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರ ಆಶ್ವೀನ ವ ೯ಮಿ ಸೋಮವಾರ

ಸಮಾಜಪ್ರಮುಖರ ಅವಗಾಹನೆಗಾಗಿ.

ಸಮಾಜ ಪ್ರಮುಖರು ನಿರ್ಮಲಚಿತ್ತದಿಂದಲೂ ನಿರ್ವಿಕಾರಚಿತ್ತದಿಂದಲೂ ವಿಚಾರ ಮಾಡಬೇಕೆಂದು ನಾವು ಸೂಚಿಸುತ್ತೇವೆ ಸಮಾಜಗಳೊಳಗ ಐಕ್ಯವಕ್ಯವಾಗಬೇಕೆಂದು ಸರ್ವರೂ ಹಂಬಲಿಸುತ್ತಿರುವಾಗ, ಐಕ್ಯಸಂಪಾದನದಿಂದಲೇ ಸರ್ವರೂ ಪ್ರೀರಿತರಾಗಿರುವಾಗ, ಐಕ್ಯಮತ್ಯದ, ಮಧ್ಯಸ್ಥಿಕೆಯ, ಒಡಂಬಡಿಕೆಯ ಮಾತುಗಳು ಏಕೆ ನಿರರ್ಥಕವಾಗಬೇಕು ? ಎಂಬದೊಂದು ಸಮಸ್ಯೆ. ಬಂಗಾಲದ ಕಾಯಿದೆ ಕೌನ್ಸಿಲಿನ ಸಭಾಸದರಾದ ಪ್ರೊ|| ಹುಮಾಯೂನ ಕಬೀರರವರು ಈ ಸಮಸ್ಯೆಯ ಒಳಮರ್ಮವನ್ನು ಸ್ಪಷ್ಟಗೊಳಿಸಿದ್ದಾರೆ ಹಿಂದು-ಮುಸಲ್ಮಾನರೊಳಗೆ ಐಕ್ಯಮತ್ಯವಾಗಲೇ ಬೇಕು, ಅದೆಂತು ಸಕಲರ ಸಾಧ್ಯ ಆದಾಗ್ಯೂ ಐಕ್ಯಭಂಗವಾಗುವದೇಕೆ ? ಐಕ್ಯಮತ್ಯದ ರಾಯಭಾರ ಸಾರ್ಥಕವಾಗದಿರಲು ಏನು ಕಾರಣ ? ಹಿಂದು-ಜನಸಾಮಾನ್ಯರ ಹಿತಸಂಬಂಧಗಳು ಬೇರೆ, ಮುಸಲ್ಮಾನ-ಜನಸಾಮಾನ್ಯರ ಹಿತಸಂಬಂಧಗಳು ಬೇರೆ, ಹೀಗೇನಿಲ್ಲ ಜನಸಾಮಾನ್ಯರ ಮಟ್ಟಿಗೆ ಜಾತಿ ಭೇದದಂತೆ, ಧರ್ಮಭೇದದಂತೆ ಹಿತಸಂಬಂಧಗಳಲ್ಲಿ ಭೇದಗಳಿಲ್ಲ ಪ್ರತಿಯೊಬ್ಬರಿಗೂ ಹೊಟ್ಟೆತುಂಬ ಅನ್ನ ಬೇಕು, ಮೈತುಂಬ ಅರಿವೆ ಅಂಚಡಿ ಬೇಕು. ಉಳಕೊಳ್ಳ ಮನೆ ಬೇಕು ತಾತ್ಪರ್ಯವೇನಂದರೆ ಚರಿತಾರ್ಥ ಸುಖದಿಂದ ಸಾಗಿಸಲು ಹೆಚ್ಚಿನ ಅನುಕೂಲತೆ ಬೇಕು ಹಿಂದುವೇ ಇರಲಿ, ಮುಸಲ್ಮಾನನೇ ಇರಲಿ ಯಾರೇ ಇರಲಿ, ಪ್ರತಿಯೊಬ್ಬರಿಗೂ ಬೇಕಾದುದು ಇದು ! ಸಮಾಜೋದ್ಧಾರಕ್ಕಾಗಿ ಹೋರಟ ಪ್ರತಿಯೊಂದು ಸಂಸ್ಥೆಯವರೂ ಇದನ್ನೇ ಹೆಗ್ಗುರಿಯಾಗಿಟ್ಟುಕೊಂಡು ದುಡಿಯುತ್ತಿರುವಾಗ, ಮತಭೇದ, ಮತವೈಷಮ್ಯ, ಐಕ್ಯಭಂಗವಾಗಬಾರದು, ಹೀಗಿದ್ದರೂ ಏಕೆ ವೈಷಮ್ಯಗಳುಂಟಾಗುತ್ತವೆ ? ಎಂಬ ಪ್ರಶ್ನೆಯನ್ನೆತ್ತಿ ಪ್ರೊ|| ಹುಮಾಯೂನ ಕಬೀರರವರ ಪ್ರಕಟಣೆಯಲ್ಲಿ ಉತ್ತರ ಕೊಟ್ಟಿದ್ದಾರೆ

ಬೇರೆ ಬೇರೆ ಸಮಾಜಗಳೊಳಗಿನ ಬುದ್ಧಿಶಾಲಿ (Intelligentia) ಗಳು ತಮ್ಮ ತಮ್ಮ ಹೆಚ್ಚಳಕ್ಕಾಗಿ ಪಕ್ಷಾಭಿಮಾನ ಹಿಡಿದು ಹೋರಾಡುತ್ತಿದ್ದಾರೆ ಇದರೊಳಗೆ ಜನಸಾಮಾನ್ಯರ ಹಿತವಿಚಾರಗಳ ಸಂಬಂಧವಾಗುವದಿಲ್ಲ ದೊಡ್ಡ ದೊಡ್ಡ ಹುದ್ದೆ ದೊಡ್ಡ ಪಗಾರ ಅಧಿಕಾರಗಳನ್ನು ದೊರಕಿಸಿಕೊಂಡು ಸ್ವಂತ ದೊಡ್ಡಸ್ತನವನ್ನು ಲೋಕದಲ್ಲಿ ಮೆರಿಸುವದಕ್ಕಾಗಿ, ಬಡ ಜನಸಾಮಾನ್ಯರಿಗೆ ಸ್ಥಿತಿ ಸುಧಾರಣೆಯ ಬೆಲ್ಲದ ಬೊಟ್ಟು ಹಚ್ಚಿ, ಕುಣಿಸಿ, ದೇಶದೊಳಗ ಅನರ್ಥವನ್ನುಂಟು ಮಾಡುತ್ತಾರೆ ಹುದ್ದೇದಾರರು ಯಾರಾದರೂ ಜನಸಾಮಾನ್ಯರ ಕಷ್ಟ ತಪ್ಪುವದಿಲ್ಲ ಅಗಸನು ಬೇರೆಯಾದ್ದರಿಂದ ಕತ್ತೆಗೆ ಹೊರೆ ಹೊರುವ ಕಷ್ಟ ತಪ್ಪುವದುಂಟೇ? ಅಂತೆಯೆ ಜನಸಾಮಾನ್ಯರ ಸ್ಥಿತಿ ಲೋಕಸೇವೆ ಸಮಾಜಸೇವೆ, ಮಾಡುವ ಸಂಕಲ್ಪಗಳಿಂದ ಬೋರ್ಡು, ಮ್ಯುನಿಸಿಪಾಲಿಟಿ, ಗ್ರಾಮ-ಪಂಚಾಯತು, ಇತ್ಯಾದಿ ಕೊಂ. ಕಮಿಟಿಗಳ ಇಲೆಕ್ಷನುಗಳಲ್ಲಿ ಭಯಂಕರವಾದ ಹೋರಾಟ ನಡೆಯುವದನ್ನು ನಾವು ಆಗಿಂದಾಗ ನೋಡುತ್ತೇವೆ ಕಾರಭಾರಿ ಮಂಡಳ ಅಧ್ಯಕ್ಷರ ನೇಮಣೂಕಿ ಮೊದಲಾದವುಗಳಿಗಾಗಿ ವಿಲಕ್ಷಣವಾದ ಆಂದೋಲನಗಳುಂಟಾಗುತ್ತವೆ ಸೇವೆಯೋ ಲೋಕಸೇವೆಯದು, ಅಂತರ್ಗತ ಸ್ವಾರ್ಥ ಹಾಗು ಆತ್ಮಗೌರವ ! ಇದರಿಂದ ಸಮಾಜಗಳೊಳಗೆ ಐಕ್ಯಭಂಗವಾಗಿ ಬೇರೆ ಬೇರೆ ಜನರಿಗೆ ಕಷ್ಟ ನಷ್ಟಗಳುಂಟಾದಾಗ್ಯೂ ಬುದ್ಧಿಶಾಲಿಗಳು ಇದರ ಪರಿವೆ ಹಿಡಿಯುವದಿಲ್ಲ ಲೋಕಸೇವೆಗಾಗಿಯೇ ತಾವು ಅಧಿಕಾರ ಪಡೆಯಲು ಅರ್ಹರೆಂತಲೂ ಎಣಿಸಿ ಅವರು ಆತ್ಮವಂಚನೆ ಮಾಡಿಕೊಳ್ಳುತ್ತಾರೆ ತಮ್ಮ ಚಟುವಟಿಕೆಗಳಿಂದ ಸಮಾಜಕ್ಕೆ ಅಕಲ್ಯಾಣವಾಗುತ್ತಿದ್ದರೆ, ಅಕ್ಷೇಮವಾಗುತ್ತಿದ್ದರೆ ಆ ಗೊಡವೆಯನ್ನು ತಾವು ಬಿಟ್ಟುಬಿಡಬೇಕೆಂಬ ಆಲೋಚನೆ ಇವರಿಗೆ ಹೊಳೆಯುವದಿಲ್ಲ ಲೋಕಸೇವೆಯ ವಿಶಾಲ ಸನ್ನಿವೇಶದಲ್ಲಿ ಅಧಿಕಾರಿ-ವ್ಯಕ್ತಿಗಳ ಗೌರವ ಗೌಣವಾದದ್ದೆಂದು ಇವರೆಣಿಸುವದಿಲ್ಲ ಆದರಿಂದ ಬುದ್ಧಿಶಾಲಿಗಳ ಗೌರವವೇ ಸಮಾಜಹಿತವೆಂಬ ಭಾವನೆ ರೂಢವಾಗಿ ಹಿಂದು-ಮುಸಲ್ಮಾನರೊಳಗೆ ಕಲಹ, ಜಾತಿ ಜಾತಿಗಳೊಳಗೆ ಪಕ್ಷ ವೈಷಮ್ಯಗಳು ತಲೆದೋರಿ ಅನರ್ಥಗಳೊದಗುತ್ತವೆ ಪ್ರೊ| ಹುಮಾಯೂನ ಕಬೀರರವರು ಕಲಹ-ಸಮಸ್ಯೆಯ ಈ ಅಂಗವನ್ನು ಪ್ರಾಮುಖ್ಯವಾಗಿ ನಿರ್ದೇಶಿಸಿ ಬುದ್ಧಿಶಾಲಿಗಳಿಗ ಸನ್ಮಾರ್ಗ ಹಿಡಿಯಬೋಧಿಸಿದ್ದಾರೆ

ಹುದ್ದೆಗಳು, ಅಧಿಕಾರಗಳು ನಿರರ್ಥಕವೆನಿಸಿದರೆ, ಸತ್ವಶೂನ್ಯವೆನಿಸಿದರೆ ಆ ಕುರಿತು ಬಡದಾಡುವದು ವಿಹಿತವಲ್ಲವಷ್ಟೇ, ಬುದ್ಧಿಶಾಲಿಗಳು ತಾರತಮ್ಯಶೂನ್ಯರೆಂದು ಲೋಕಾಪವಾದ ಹೊಂದುವರು ಹುದ್ದೆಗಳು ಗೌರವಪೂರ್ಣವಾದರೆ, ಪುರುಷಾರ್ಥವೆನಿಸಿದರೆ ಬುದ್ಧಿಶಾಲಿಗಳು ವಿಚಾರವಿನಿಮಯ ಮಾಡಿ ಅವನ್ನು ಒಡಂಬಡಿಕೆಯಿಂದ ಹಂಚಿಕೊಳ್ಳಬೇಕು ಸ್ವಾರ್ಥಾಂಧರಾಗಿ ಮುದ್ದಣ್ಣನಂತೆ ಹಟಹಿಡಿದು ವರ್ತಿಸಲಾಗದು ತೋರಗಾಣಿಕೆಗಾದರೂ ಲೋಕಸೇವೆಯ ಕಾಂಕ್ಷೆಯನ್ನು ಬುದ್ಧಿಶಾಲಿಗಳು ಪ್ರದರ್ಶಿಸುತ್ತಿದ್ದಾಗ ಈ ವ್ಯವಸ್ಥೆಯಾಗುವದು ವಿಹಿತ ಪ್ರೊ| ಹುಮಾಯೂನ ಕಬೀರರವರು ಈ ಸಮಸ್ಯೆಯನ್ನು ಮಹಾತ್ಮರು ದಿಲ್ಲಿಯಲ್ಲಿದ್ದಾಗ ಆಲೋಚಿಸಿದರಾಗಿಯೂ ಈ ವಿಚಾರದಿಂದ ಹಿಂದು-ಮುಸಲ್ಮಾನರೊಳಗೆ ಐಕ್ಯಮತ್ಯವಾಗಬಹುದಾಗಿಯೂ ಅವರು ಅಪೇಕ್ಷಿಸುತ್ತಾರೆ ಪ್ರೊ| ಹುಮಾಯೂನರವರ ಸೂಚನೆಯನ್ನು ನಾವು ಸಂತೋಷದಿಂದ ಅನುಮೋದಿಸುತ್ತೇವೆ ಈಗಿನ ಪ್ರಮುಖರು ಅಥವಾ ಪ್ರಮುಖರೆಂದೆಣಿಸಿಕೊಳ್ಳುವವರು ಲೋಕಸೇವೆಯ ಬಾಯಿಮಾತ ಹೇಳುತ್ತಾರಲ್ಲದೆ, ಲೋಕಸೇವೆಗಾಗಿ ತಲ್ಲಣಿಸುವವರಲ್ಲ. ಅಧಿಕಾರ ಶಕ್ತಿ ಪಡೆದು ಮೆರೆಯುವದಕ್ಕಾಗಿ ಇವರು ಪಕ್ಷ ಕಟ್ಟಿಕೊಂಡು ಜೂಜಾಡುತ್ತಾರೆ ತತ್ವಗಳು ಪಕ್ಷಸ್ವಾರ್ಥಕ್ಕೆ ಅಂಕಿತವಾಗಿ ಪ್ರತಿಪಾದಿಸಲ್ಪಡುತ್ತವೆ. ಇದನ್ನು ನಾವು ದೊಡ್ಡವರ ಪ್ರತಿಯೊಂದು ಕಾರಣದಲ್ಲಿ ಕಾಣಬಹುದು ಪ್ರಮುಖರು ಆತ್ಮನಿರೀಕ್ಷಣೆ ಮಾಡಿದರೆ ಅವರಿಗೂ ನಿಜಸ್ಥಿತಿ ಹೊಳೆಯುವಂತಿದೆ. ಸ್ವಂತ ಪ್ರಪಂಚ ನಡಿಸಲಿಕ್ಕೇ ತಕ್ಕಷ್ಟು ಸಮಯವಿಲ್ಲವೆಂದು ಗೊಣಗುಟ್ಟುವವರು ಪರೋಪಕಾರಕ್ಕಾಗಿ ಹೆಣಗಾಡುವ ಸಂಭವವಾದರೂ ಉಂಟೇ ? ಅದಕ್ಕಾಗಿ ಸ್ವಂತ ಬೊಕ್ಕಸದೊಳಗಿಂದ ಖರ್ಚು ಮಾಡುವಷ್ಟು ಅವರು ವ್ಯವಹಾರಶೂನ್ಯರಾದಾರೇ ?

ಈಗಿನ ದಿನಮಾನ ಲೋಕಜಾಗೃತಿಯದು. ಬುದ್ಧಿಶಾಲಿಗಳು ಕೆಲ ಕಾಲ ವಂಚನೆ ಮಾಡಬಹುದಷ್ಟೇ ! ಆದರೆ ಒಳಗುಟ್ಟು ಬಯಲಾದೊಡನೆ ಪ್ರಮುಖರಿಗೆ ನಷ್ಟವಾಗುವದು ಖಂಡಿತ, ಸಮಾಜದೊಳಗಿನ ಗೌರವವೂ ಕುಗ್ಗುವದು. ಉದಾಹರಣೆಯನ್ನೇ ಕೊಡಬೇಕಾದರೆ, ಸಿಂಧದೊಳಗಿನ ಪ್ರಧಾನ ಮಂಡಳವನ್ನು ಉಲ್ಲೇಖಿಸಬಹುದು ಮುಂಬಯಿಯ ಬೆ|| ಜಿನ್ನಾರರು ಪ್ರಧಾನ ಮಂಡಳದ ಸಕಲ ಸೂತ್ರಗಳನ್ನು ತಮ್ಮ ಕೈಯ್ಯಲ್ಲಿಟ್ಟುಕೊಳ್ಳುವ ವಿಲಕ್ಷಣ--ವಿಕ್ಷಿಪ್ತ ಮಹತ್ವಾಕಾಂಕ್ಷೆ ಹಿಡಿದು ಮುಖ್ಯ ಪ್ರಧಾನರಾದ ನಾ|| ಖಾನಬಹಾದ್ದೂರ ಅಲ್ಲಾಬಕ್ಷರವರಿಗೆ ತಮ್ಮ ಹೇಳಿಕೆಯಂತೆ ವರ್ತಿಸಹೇಳಿದರು ಮುಸ್ಲಿಮ್ ಲೀಗಿನ ಪ್ರತಿಜ್ಞಾಪತ್ರದ ಮೇಲೆ ಸಹಿ ಮಾಡಿ ತಮಗೆ ಶರಣಾಗತರಾಗಬೇಕಾಗಿ ಬೆ|| ಜಿನ್ನಾರವರ ಅಪ್ಪಣೆ, ಇಲ್ಲದಿದ್ದರೆ ಖಾನಬಹಾದ್ದೂರ ಅಲ್ಲಾಬಕ್ಷರು ಮುಸಲ್ಮಾನ ಸಮಾಜದ ವಿರೋಧಿಗಳೆಂದು ಎಣಿಸಲ್ಪಡುವರಾಗಿಯೂ, ಬಹಿಷ್ಕಾರವಾಗುವದಾಗಿಯೂ, ನಿವಾಸಸ್ಥಾನದ ಸುತ್ತು-ಮುತ್ತು ಪಿಕೆಟಿಂಗ ನಡೆಯುವದಾಗಿಯೂ ಜಿನ್ನಾರವರು ಗದ್ದರಿಸಿದರು ನಾ|| ಖಾ| ಬ| ಅಲ್ಲಾಬಕ್ಷರವರು ಈ ಬೆದರಿಕೆಗೆ ಹೆದರದೆ ಬೇಕಾದ ಪರಿಯಿಂದ ತಮಗೆ ಕಾಡಬಹುದೆಂದು ಬೆ|| ಜಿನ್ನಾರವರಿಗೆ ಆವ್ಹಾನ ಕೊಟ್ಟಿದ್ದಾರೆ ಮುಸಲ್ಮಾನ ಸಮಾಜಕ್ಕೆ, ಜನಸಾಮಾನ್ಯರಿಗೆ ಕಲ್ಯಾಣ ಮಾಡಲೋಸುಗ ಖಾನಬಹಾದ್ದೂರ ಅಲ್ಲಾಬಕ್ಷರವರು ಯಾವ ಪರಿಯಿಂದ ಯೋಜಿಸಬೇಕು, ಈಗಿನ ಯೋಜನೆಯಲ್ಲಿ ಯಾವ ತಿದ್ದುಪಾಟಗಳನ್ನು ಮಾಡಬೇಕು ಎಂಬ ಚರ್ಚೆ ನಡೆಯಲಿಲ್ಲ ಮುಖ್ಯ ಪ್ರಧಾನರು ಯಾರಿರಬೇಕು, ಖಾನಬಹಾದ್ದೂರ ಅಲ್ಲಾಬಕ್ಷರಿರಬೇಕೋ, ಬೆ|| ಜಿನ್ನಾರವರಿಗೆ ಅಂಕಿತರಾದ ಸರ್ ಘುಲಾಮ ಹುಸೇನ ಹಿದಾಯತಲ್ಲಾರವರಿರಬೇಕೋ? ಎಂಬ ಚರ್ಚೆಯೇ ನಡೆದು ಕೊನೆಗ ಒಡಂಬಡಿಕೆಯ ಚರ್ಚೆ ವಿಫಲವಾಯಿತು ಆತ್ಮಗೌರವದ, ಸ್ವಾರ್ಥಪರಾಯಣತೆಯ ಭಾವದಲ್ಲಿ ಹೀಗಾಗುವದು ಸಹಜ ಮಾತು ಇವೇ ಪ್ರಕಾರಗಳು ಎಲ್ಲೆಲ್ಲಿಯೂ ನಡೆಯುತ್ತವೆ ಗ್ರಾಮ-ಪ್ರಮುಖರ, ಪಟ್ಟಣ-ಪ್ರಮುಖರ ಚಟುವಟಿಕೆಗಳನ್ನು ನಿರ್ಮಲಚಿತ್ತದಿಂದಲೂ ನಿರಭಿಮಾನದಿಂದಲೂ ನ್ಯಾಯ-ನಿಷ್ಠುರತೆಯಿಂದಲೂ ನಿರೀಕ್ಷಿಸಿದರೆ, ಇದೇ ಸಿದ್ಧಾಂತ ಎಲ್ಲೆಲ್ಲಿಯೂ ಹೊರಡಬೇಕು ಬುದ್ಧಿಶಾಲಿಗಳ ಸ್ವಾರ್ಥಕ್ಕಾಗಿ ಜನಸಾಮಾನ್ಯರು ಕಷ್ಟಪಡುವದನ್ನು ನೋಡಿ ನಮಗೆ ಘೋರ ವ್ಯಸನವಾಗುತ್ತದೆ ಪ್ರತಿಯೊಬ್ಬರೂ ವಿಚಾರವಂತರಾಗಿದ್ದರೆ, ವಿಚಾರದಿಂದ ಬುದ್ಧಿಶಾಲಿಗಳ ಚಟುವಟಿಕೆ

ಗಳನ್ನು ನಿರೀಕ್ಷಿಸಿ ಪುರಸ್ಕಾರ-ಧಿಕ್ಕಾರ ಮಾಡಲುದ್ಯುಕ್ತರಾದರೆ ಬುದ್ಧಿಶಾಲಿಗಳ ಕೆಡಿಗೇಡಿತನಕ್ಕೆ, ಚಪಲ ಚೇಷ್ಟೆಗಳಿಗೆ ನಿರ್ಬಂಧವಾಗಲೇ ಬೇಕು. ಲೋಕಶಿಕ್ಷಣದ ಅಭಾವದಿಂದ ಬುದ್ಧಿಶಾಲಿಗಳಿಗೆ ಸ್ವಂತ ಗೌರವಕ್ಕಾಗಿ ಆಂದೋಲನಗಳನ್ನುಂಟು ಮಾಡಲು ಇಂಬಾದದ್ದು ಹಿಂದವಾಸಿಯರ ದುರ್ದೈವ!

ಬುದ್ಧಿಶಾಲಿ ಸಮಾಜ ಪ್ರಮುಖರು ಸಕಲ ಪರಿಸ್ಥಿತಿಯನ್ನು ಸಮಗ್ರ ಆಲೋಚಿಸಬೇಕು. ತಮ್ಮ ನಡಾವಳಿಯನ್ನು ತಾವೇ ನಿರೀಕ್ಷಿಸಿ ನ್ಯೂನತೆಗಳನ್ನು ಪರಿಹರಿಸಿಕೊಂಡು ಆತ್ಮಶುದ್ಧಿ ಹೊಂದಬೇಕು. ಬುದ್ಧಿಶಾಲಿಗಳೊಳಗಿನ ವೈಷಮ್ಯಗಳಿಂದ ಸಾಮಾಜಿಕ ಹಿತವಿಲ್ಲ, ಬುದ್ಧಿಶಾಲಿಗಳಿಗೂ ಅದರಿಂದ ಎಂದಿಗೂ ಕ್ಷೇಮವಾಗುವದಶಕ್ಯ. ಜನಸಾಮಾನ್ಯರಿಗೆ ಬುದ್ಧಿಶಾಲಿಗಳ ದಿಗ್ವಿಜಯದಿಂದ ಪ್ರಯೋಜನವು ದೊರೆಯದ ಬಳಿಕ ಇಂಥ ಚಟುವಟಿಕೆಗಳಿಂದ ಅನುಭವಿಸಿದ ಕಷ್ಟ-ತ್ಯಾಗಗಳು ನಿರರ್ಥಕವಲ್ಲವೇ? ಜನಸಾಮಾನ್ಯರು ಅಜ್ಞರಾದರೂ ಜಾಗೃತಾವಸ್ಥೆಯಲ್ಲಿದ್ದಾರೆ. ಮಹಾತ್ಮರ ಆತ್ಮಶುದ್ಧಿಯ ಸದ್ಘೋಷ ದಶದಿಕ್ಕುಗಳಲ್ಲಿ ದುಮುದುಮಿಸಿದೆ. ಇಂಥ ಸಂದರ್ಭದಲ್ಲಿ ಆತ್ಮವಂಚನೆ ಮಾಡಿಕೊಂಡು ಲೋಕವಂಚನೆಯ ಕಾರ್ಯವನ್ನು ಬುದ್ಧಿಶಾಲಿ ಪ್ರಮುಖರು ತೊರೆಯಬೇಕೆಂದು ನಾವು ಸೂಚಿಸುತ್ತೇವೆ. ಅಧಿಕಾರ ಲಾಲಸೆಯಿಂದ ಅನಾವಶ್ಯಕವಾದ ಆಂದೋಲನವನ್ನು ನಡಿಸಬಾರದಾಗಿಯೂ, ಬಡಬಗ್ಗರಿಗೆ, ಜನಸಾಮಾನ್ಯರಿಗೆ ದಣಿಸಬಾರದಾಗಿಯೂ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಸ್ವತಃ ಬುದ್ಧಿಶಾಲಿಗಳಿರುವಾಗ ಸಾಮಾನ್ಯ ಬುದ್ಧಿಗನ್ನು ವಿಷಯದ ಬಗ್ಗೆ ಹೆಚ್ಚಿಗೆ ಪ್ರತಿಪಾದಿಸುವದು ಅನವಶ್ಯಕ.

'ವೃತ್ತ'ಕ್ಕೆ ರಜೆ.

ದೀಪವಳಿಗೆಯ ಹಬ್ಬದ ನಿಮಿತ್ತ ತಾ ೨೪-೧೦-೩೮ನೇ ಸಂಚಿಕೆ ಹೊರಡುವದಿಲ್ಲ.
ಮುಂದಿನ ಸಂಚಿಕೆ ತಾ ೩೧-೧೦-೩೮ನೇಗೆ ಹೊರಡುವದು

ಹಿಟ್ಲರರು ಬ್ರಿಟಿಶ-ಪ್ರೆಂಚರ ಬೆನ್ನುಹಿಡಿದರು!

[ನಿರೀಕ್ಷಕನು ಬರೆದುದು]

ಝೆಕೊಸ್ಲೊವಾಕಿಯಾ ಜನಾಂಗವನ್ನು ಪರಸ್ಪರ ಹಿಟ್ಲರ ರಾಕ್ಷಸನಿಗೆ ಆಹುತಿ ಕೊಟ್ಟು, ಬ್ರಿಟಿಶ ಮುಖ್ಯ ಪ್ರಧಾನರಾದ ಮಿ|| ಚೇಂಬರಲೇನರವರು ನಡಿಸಿದ ಕಾರಸ್ಥಾನ ನಿರರ್ಥಕವಾಯಿತೆಂದೇ ನಾನೀಗ ಹೇಳಬಲ್ಲೆ! ಮ್ಯುನಿಕ್ ಒಡಂಬಡಿಕೆಯಾಗಿ ಎರಡು ವಾರಗಳು ಪೂರ್ಣ ಕಳೆಯಲಿಲ್ಲ, ಅಷ್ಟರಲ್ಲಿ ಹಿಟ್ಲರ-ಗಡುತನು ಬ್ರಿಟಿಶ ಜನಾಂಗದ ಮೇಲೆ ಜಿಗಿದು ಹಾರಿದ್ದಾನೆ! ಸಾರಬ್ರೆಕನ್‌ದಲ್ಲಿ ಆತನು ರವಿವಾರ (ತಾ ೯-೧೦-೩೮) ಭಾಷಣ ಮಾಡಿದನು "ಬ್ರಿಟಿಶರಿಗೆ ಜರ್ಮನ್ನರ ವಾರುಪತ್ಯ ಬೇಡ, ಅವರದನ್ನು ನೋಡಿಕೊಳ್ಳುವರು" ಹೀಗೆ ಹಿಟ್ಲರನು ಬ್ರಿಟಿಶರಿಗೆ ಕಿವಿಹಿಂಡಿದ್ದಾನೆ. ಇದರ ಕಾರಣವೇನೆಂದು ತಿಳಿಯಿತೇ? ಮ್ಯುನಿಕ್ ಒಡಂಬಡಿಕೆಯಂತೆ ಜರ್ಮನಿಗೆ ಒಪ್ಪಿಸತಕ್ಕ ಝುಕ್ ಪ್ರದೇಶದ ಮೇಲೆ ಹವಾಸಣೆ ನಡಿಸಲು ಬ್ರಿಟಿಶ ಸರಕಾರವು ರಾಯಭಾರಿಗಳನ್ನು ಕಳುಹಿಸಿದೆ. ಝುಕ್‌ರಿಗೆ ಅನ್ಯಾಯವಾಗದಂತೆ ಇವರು ಜಾಗ್ರತೆ ಕೊಳ್ಳುತ್ತಾರೆ. ಮ್ಯುನಿಕ್ ಒಡಂಬಡಿಕೆಯಂತೆ, ಒಪ್ಪಿಸಿದ ಪ್ರದೇಶ ನನ್ನದು, ಅಲ್ಲಿ ನಾನು ಮನಬಂದಂತೆ ನಡಕೊಳ್ಳುವೆನು, ನನಗೆ ಕೇಳುವವರು ನೀವಾರು?' ಎಂಬ ಅಹಂಕಾರದಿಂದ ಹಿಟ್ಲರನು ಈ ದರ್ಪೋಕ್ತಿಗಳನ್ನಾಡಿದ್ದಾನೆ! ಬ್ರಿಟಿಶ ಪಾರ್ಲಿಮೆಂಟಿನ ಮೇಲೆ ತನ್ನ ನಂಬಿಗೆಯಿಲ್ಲವಾಗಿಯೂ ಪಾರ್ಲಿಮೆಂಟಿನ ರಾಜ್ಯಭಾರ ಕ್ರಮದ ಮೇಲೆ ಮಿ|| ಈಡನ್-ಡಫ್‌ಕೂಪರರಂಥವರು ಅಧಿಕಾರಾರೂಢರಾದರೆ ಯುದ್ಧವಾಗಬಹುದೆಂದೂ ಹಿಟ್ಲರರು ನುಡಿದು, ಜರ್ಮನಿಯಂತೆಯೇ ಇಂಗ್ಲಂಡದಲ್ಲಿಯೂ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದನಕ ಯುರೋಪ ಖಂಡದೊಳಗೆ ಶಾಂತಿ-ಸಮಾಧಾನ ನೆಲೆಗೊಳ್ಳಲಿಕ್ಕಿಲ್ಲವೆಂದು ನಿರ್ಧಾರದಿಂದ ನುಡಿದಿದ್ದಾನೆ. ಜರ್ಮನಿಯೊಳಗಿನ ರಾಜ್ಯಭಾರದ ವರ್ಣನೆಯನ್ನು ಇಲ್ಲಿ ಸ್ವಲ್ಪದರಲ್ಲಿಯೇ ನಮೂದಿಸಿದ್ದೇನೆ. ಅದರಿಂದ ಹಿಟ್ಲರ ಪ್ರಭುವಿನ ಅಸಾಮಾನ್ಯ ಶಕ್ತಿಯ ಕಲ್ಪನೆ ಬರಬಹುದು. ಜರ್ಮನಿಯೊಳಗೆ 'ರೀಚ' ಅಂದರೆ ಲೋಕ(?)ಸಭೆಯುಂಟು, ಆದರೆ ಈ ಲೋಕಸಭೆಯು ನಾಯಕನ (Leaber) ಕಿಂಕರ ಸಭೆಯು, ಸಂಪೂರ್ಣವಾಗಿ ಹಿಟ್ಲರ-ನಾಯಕನ ಅಧೀನವಾದುದು. ಸಭೆಯ ಚುನಾವಣೆಯಲ್ಲಿ ಉಮೇದವಾರರನ್ನು ನಿಶ್ಚಯಿಸುವ ಅಧಿಕಾರ ಹಿಟ್ಲರನಿಗೊಪ್ಪಿದ್ದು, ಆತನ ಸಮ್ಮತಿಯಿದ್ದ ಉಮೇದವಾರರಷ್ಟೇ ಆರಿಸಿಬರುತ್ತಾರೆ. ಅವರಿಗೆ ದೇಶವಿಲ್ಲ, ದೇವರಿಲ್ಲ! ಹಿಟ್ಲರ-ನಾಯಕನೇ ಅವರ ಕುಲದೈವತ, ಸಮಾಜದೈವತ, ದೇಶದೈವತ!! ಹಿಟ್ಲರನಿಗೆ ವಿಧೇಯರಾಗಿ ಅವರು ಸರ್ವದಾ ನಡಕೊಳ್ಳತಕ್ಕದ್ದಿವೆ. ಸೈನ್ಯ ಇಲಾಖೆಯವರೂ ಹಿಟ್ಲರರಿಗೇ ಅಧೀನರು. ಹಿಟ್ಲರನಿಗೆ ಪ್ರಧಾನ ಮಂಡಳವಿದೆ, ಆದರೆ, ಇವರು ಆಲೋಚಕರಲ್ಲ, ಸಲಹೆಗಾರರಲ್ಲ. ರಾಜ್ಯಧೋರಣ ನಿರ್ಣಾಯಕರೂ ಅಲ್ಲ, ಹಿಟ್ಲರನ ಅನುಜ್ಞೆಗಳನ್ನು ಶಿರಸಾ ವಹಿಸಿಕೊಂಡು ಪಾಲಿಸುವ ವಿಧೇಯ ಸೇವಕರು!! ಇಂಥ ರಾಜ್ಯಪದ್ಧತಿಯಲ್ಲಿ ನಾಯಕ-ವ್ಯಕ್ತಿಯು ನಿರ್ಣಯಿಸಿದ ಧೋರಣವೇ ರಾಜ್ಯಧೋರಣ. ಆದ್ದರಿಂದ ಆತನೇ ಸರ್ವಾಂತರ್ಯಾಮಿಯು, ಸರ್ವಸೂತ್ರಚಾಲಕನು, ಸರ್ವಜ್ಞನ, ಸರ್ವನಿಯಾಮಕನ! ಪರಮಾತ್ಮನ ಪ್ರತ್ಯಕ್ಷ ಅವತಾರವೆಂಬಂತೆ ಪ್ರಜೆಗಳು ಆತನನ್ನು ಭಕ್ತಿಯಿಂದ-ಬಲಾತ್ಕಾರದ ಭಕ್ತಿಯಿಂದ-ಭಜಿಸುತ್ತಾರೆ! ಜರ್ಮನಿಯ ರಾಜ್ಯಘಟನೆಯನ್ನು ಅಭ್ಯಾಸಮಾಡಿದ ಡಾ|| ವಿಲಿಯ ಮ್ಯಾಕ್ಸಕಾರ್ಡರವರು "Never before in history has one man wielded such absolute power" "ಒಬ್ಬೊಂಟಿಗ ಪುರುಷನು ಇಷ್ಟು ನಿರಂಕುಶ ಅಧಿಕಾರ ನಡಿಸಿದ್ದು ಇತಿಹಾಸದಲ್ಲಿ ಎಲ್ಲಿಯೂ ಕಾಣೆ!" ಎಂದು ಉದ್ಗರಿಸಿ, ಜರ್ಮನಿಯೊಳಗಿನ ಆಬಾಲವೃದ್ಧ ಸ್ತ್ರೀಪುರುಷರೆಲ್ಲರ ಜೀವನಕ್ರಮದ ಮೇಲೆ ಹಿಟ್ಲರನ ಪ್ರಭುತ್ವವಿರುವದಾಗಿ ಸಾರುತ್ತಾರೆ. ಇದೇ ಪದ್ಧತಿಯನ್ನು ಬ್ರಿಟನಿನಲ್ಲಿಯೂ ಸಂಘಟಿಸಿ ಶಾಂತಿ-ದೂತರಾದ ಚೇಂಬರಲೇನರು ಬ್ರಿಟಿಶ ಜನಾಂಗದ ಪ್ರಭುಗಳಾಗಬೇಕೆಂದು ಹಿಟ್ಲರ ನಿಗ್ರಹ!! "ಪಾಲಿಸ್ತಾನದೊಳಗೆ ನೀವು ಹೇಗೆ ನಡಕೊಳ್ಳುತ್ತೀರೆಂದು ನಾನು ನೋಡುತ್ತೇನೆ!" ಎಂಬದಾಗಿ ಹಿಟ್ಲರರು ನುಡಿದು ಬ್ರಿಟಿಶರಿಗೆ ಚಾಬೂಕು ಹೊಡೆದಿದ್ದಾರೆ! ಮಹಾಯುದ್ಧದ ಒಡಂಬಡಿಕೆಯಂತೆ ಬ್ರಿಟಿಶರು ಜರ್ಮನ್‌ರಿಂದ ಸೆಳಕೊಂಡ ವಸಾಹತುಗಳನ್ನು ಹಿಂತಿರುಗಿ ಪಡಕೊಳ್ಳುವ ಹವಣಿಕೆಯಲ್ಲಿದ್ದಾರೆ! ಆಲ್ಸೇಸ ಲೊರೇನ ಪ್ರಾಂತದಲ್ಲಿ ಜರ್ಮನ್ ವಸತಿಯುಂಟು. ಈ ಪ್ರದೇಶ ಫ್ರಾನ್ಸ ದೇಶಕ್ಕೆ ಸೇರಿದ್ದು ಇದನ್ನೂ ಸೆಳಕೊಳ್ಳುವ ವಿಚಾರ ಹಿಟ್ಲರರಿಗಿರುವದಂತೆ! ಅದರಿಂದ ಬ್ರಿಟಿಶ-ಫ್ರೆಂಚ ಪ್ರಧಾನ ಮಂಡಳಗಳು ದಿಗಿಲುಬಿದ್ದಿವೆ! ಪ್ರಧಾನ ಮಂಡಳಗಳು ಗುಪ್ತವಾಗಿ ಆಪ್ತಾಲೋಚನೆ ಮಾಡತೊಡಗಿವೆ! ಝೆಕೊಸ್ಲೊವಾಕಿಯಾ ದೇಶದಲ್ಲಿ ಹಂಗೇರಿಯದ ವಸತಿಯಿದ್ದ ಪ್ರಾಂತಗಳಿವೆ. ಅವನ್ನು ತಮಗೆ ಬಿಟ್ಟುಕೊಡಬೇಕಾಗಿ ಹಂಗೇರಿಯ ಹಟ. ಈ ಕುರಿತು ಝುಕ್-ಹಂಗೇರಿಯವರ ಮಧ್ಯಸ್ಥಿಕೆ ನಿರರ್ಥಕವಾಯಿತು. ಹಂಗೇರಿಯ ಸರಕಾರವು ಹಿಟ್ಲರನ ಪ್ರೇರಣೆಯಿಂದ ಝೆಕೊಸ್ಲೊವಾಕಿಯಾದ ಮೇಲೆ ಸಾಗಿಹೋಗಲು ಸಕಲ ಸಿದ್ಧತೆ ನಡಿಸಿರುವದಾಗಿ ಸುದ್ದಿ ಬಂದಿದೆ! ಮ್ಯುನಿಕ್ ಒಡಂಬಡಿಕೆಯಂತೆ ಉಳಿದ ಝೆಕೊಸ್ಲೊವಾಕಿಯಾ ಜನಾಂಗವನ್ನು ಅಖಂಡವಾಗಿರುವಂತೆ ಕಾಪಾಡಲು ಬ್ರಿಟಿಶ-ಫ್ರೆಂಚರು ಬದ್ಧರಿದ್ದಾರೆ. ಬ್ರಿಟಿಶ-ಫ್ರೆಂಚ ಜನಾಂಗಗಳ ಸೀಮೆ ಮ್ಯುನಿಕ್ ಒಡಂಬಡಿಕೆಯಿಂದ ಝೆಕೊಸ್ಲೊವಾಕಿಯಾದ ಗಡಿಸೀಮೆಯ ತನಕ ಹಬ್ಬಿದೆ. ಆ ಗಡಿಸೀಮೆಯನ್ನು ಚದರಿಸುವ ಪ್ರಸಕ್ತಿಯಲ್ಲಿ ಬ್ರಿಟಿಶ-ಫ್ರೆಂಚರು ಹಿಟ್ಲರನಿಗೆ ಇದಿರಾಗುವ ಸಂದರ್ಭವುಂಟು. ಸ್ಪೇನ ದೇಶದೊಳಗಿನ ರಾಜಕಾರಣದಲ್ಲಿ ಇಟಲಿಯ ಮುಸೊಲಿನಿಯವರು ತಮ್ಮದೇ ಪ್ರಾಬಲ್ಯವಾಗುವಂತೆ ಕಾರಸ್ಥಾನ ಹೂಡಿದ್ದಾರೆ. ಭೂಮಧ್ಯ ಸಮುದ್ರದೊಳಗೆ ನಡುದಾರಿಯಲ್ಲಿರುವ ಬೆಲೆರಿಕ್ ದ್ವೀಪಗಳನ್ನು ತಮಗೊಪ್ಪಿಸಬೇಕೆಂದೂ ಮುಸೊಲಿನಿಯವರ ಆಗ್ರಹ. ಇವನ್ನು ಮುಸೊಲಿನಿಯವರಿಗೆ ಒಪ್ಪಿಸಿದರೆ, ಸ್ಪೇನ ದೇಶವು ಹಿಟ್ಲರ-ಮುಸೊಲಿನಿಯವರ ಸೂತ್ರಗೊಂಬೆಯಾಗಿ ಫ್ರೆಂಚ ಸರಕಾರಕ್ಕೆ ದಕ್ಷಿಣ ಪಾರ್ಶ್ವದಿಂದ ಅಪಾಯ ಮಾಡುವ ಭೀತಿಯುಂಟು. ಹಿಟ್ಲರನು ತುರ್ಕಸ್ತಾನಕ್ಕೆ ೧| ಕೋಟಿ ಪವನು ಸಾಲ ಕೊಟ್ಟು ಆ ಜನಾಂಗವನ್ನು ತನ್ನ ಪಕ್ಷಕ್ಕೆ ಸೆಳಕೊಳ್ಳಲುದ್ಯುಕ್ತನಾಗಿದ್ದಾನೆ. ಮಿತ್ರರಾಷ್ಟ್ರಗಳ ಸಾಲ ತೀರಿಸ ಹಣವಿಲ್ಲದ ಹಿಟ್ಲರನ ದೊಡ್ಡಸ್ತಿಕೆಯಿದು. ಪಾಲಿಸ್ತಾನದೊಳಗಿನ ಅರಬರಿಗೆ ಬ್ರಿಟಿಶಸರಕಾರದ ವಿರುದ್ಧ ದೊಂಬಿ ಹೂಡಿ ಹೋರಾಡಹಚ್ಚಲು ಹಿಟ್ಲರನ ರಾಜಕಾರಣವೇ ಮೂಲವೆಂದು ಹೇಳುತ್ತಾರೆ. ಸಾರಬ್ರೆಕನ್‌ದೊಳಗಿನ ಭಾಷಣದಿಂದ ಈ ಅನುಮಾನ ದೃಢವಾಗಿದೆ. ಹಿಟ್ಲರನು ಡೆನ್ಯೂಬನದಿಯ ಗುಂಟ ಕಾಲುವೆಯನ್ನು ಕಡಿದು ಪಶ್ಚಿಮ ಪಾರ್ಶ್ವದ ರ್‍ಹೈನ ನದಿಯನ್ನು ಪೂರ್ವ ಪಾರ್ಶ್ವದ ಡ್ಯೂಬ ನದಿಗೆ ಕೂಡಿಸಿ ಅಲ್ಲಿಂದ ಕಪ್ಪು ಸಮುದ್ರಕ್ಕೆ ಬಂದು ಕ್ರಿಮಿಯಾ ಖಂಡದಿಂದ ಉಗಿಬಂಡಿ ಕಲ್ಪಿಸಿ ಇರಾಣ ಅಫಗಾನ ಮಾರ್ಗವಾಗಿ ಹಿಂದೀ ಮಹಾಸಾಗರದೊಳಗ ಓಡ್ಯಾಡುವ ಒಂದು ದೊಡ್ಡ ವ್ಯೂಹವನ್ನೇ ರಚಿಸಿದ್ದಾನೆ. ಈ ಯೋಜನೆ ತಯಾರಾದ ಬಳಿಕ, ಭೂಮಧ್ಯ ಸಮುದ್ರವನ್ನು ಲಘು ದಾರಿಗೆ ಮುಚ್ಚಿದಾಗ್ಯೂ ಜರ್ಮನಿಗೆ ಆತಂಕವೇನಿಲ್ಲ!

ಹೀಗೆಲ್ಲ ಮ್ಯುನಿಕ್‌ದೊಳಗಿನ ಒಡಂಬಡಿಕೆಯನ್ನು ಗಾಳಿಗೆ ತೂರಿಕೊಟ್ಟು ಹಿಟ್ಲರರು ಹೊಸ ಕಾರಸ್ಥಾನ ಹೂಡಿ ಬ್ರಿಟಿಶ-ಫ್ರೆಂಚರಿಗೆ ಯುದ್ಧಕ್ಕೆ ಆಹ್ವಾನ ಕೊಟ್ಟಿದ್ದಾರೆ! ಇದರ ಪರಿಣಾಮವೇನೆಂಬುದು ನಾ ಹೇಳಲಾರೆ. ಆದಕಾರಣವಾಗಿಯೇ ಹಿಟ್ಲರರು ಬ್ರಿಟಿಶ-ಫ್ರೆಂಚರ ಬೆನ್ನುಹಿಡಿದರೆಂದು ಬರೆದುದು

ಸ್ಥಾನಿಕ ವೃತ್ತಾಂತ.

ಕುಮಟಾ— ಉತ್ತರಾ ನಕ್ಷತ್ರದೊಂದಿಗೆ ಮಳೆ [illegible] ನಿಂತಿತು ಮಂಗಳವಾರ ದ ಮಳೆಯು ಹಸಿಯ [illegible] ಒಳ್ಳೇ [illegible] ಬೀಳುತ್ತದೆ ಚಿತ್ತ ನಕ್ಷತ್ರದ [illegible] ಬೀಳುತ್ತ ವೆ ತುಸು ತುಸು [illegible] ಬೀಳುತ್ತಿದೆ [illegible] ಆರಂಭವಾಗಿದೆ ಒಕ್ಕಲಿಗರ [illegible] ಪ್ರಾರಂಭಿ ಸಿದ್ದಾರೆ ಕಳೆದ ವರ್ಷ [illegible] ಇದೆ [illegible] ಈ ತನಕ ಬಿದ್ದ ಮಳೆ [illegible]

ಅವೆ [illegible] ಇಲ್ಲಿಯ ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ್ ಕೋ ಆಪರೇಟಿವ್ಹ ಬ್ಯಾಂಕಿನ ಕಚೇರಿಯಲ್ಲಿ ಈ ಜಿಲ್ಲೆಯ [illegible] ಮಹಾಸಭೆಯಾಗಿ ಕಾರ್ಯನಿರ್ವಾಹಕರ ಚುನಾವಣೆಯಾಯಿತು ಸಾಲಗಾರ ಸದಸ್ಯರ ತರ್ಫೆನಿಂದ [illegible] ತಿಮ್ಮಪ್ಪ ಹೆಗಡೆ [illegible] ಮತ್ತು ವಿನಾಯಕ ವೆಂಕಟರಮಣ ಭಟ್ಟ [illegible] ಇವರೂ, ಸಾಲಗಾರರಲ್ಲದ ಸದಸ್ಯರ ತರ್ಫೆನಿಂದ [illegible] ಸುಂದರರಾವ ಪಂಡಿತ ಮತ್ತು [illegible] ಇವರಿಬ್ಬರೂ ಆರಿಸಿ ಬಂದರು [illegible] ಸಹಕಾರಿ ಬ್ಯಾಂಕಿನವರು [illegible] ಇವರಿಗೆ [illegible] ಮಧ್ಯವರ್ತಿ ಸಹಕಾರಿ ಬ್ಯಾಂಕಿನ [illegible] ಮಂಜನಾಥ [illegible] ಇವರು ಆರಿಸಿಬಂದಿದ್ದಾರೆ [illegible] ಕಾರ್ಯನಿರ್ವಾಹಕರನ್ನು ಸಹಕಾರಿ ಸಂಘಗಳ ರಜಿಸ್ಟ್ರಾರರು ನೇಮಿಸುವರು

[illegible] ನಿರಾಶ್ರಿತರ ಬಗ್ಗೆ ಇನ್ನೂ ನಿಧಿಸಂಗ್ರಹ [illegible] ಯೊಟ್ಟಿಗೆ ರೂ [illegible] ಕೊಟ್ಟಿ [illegible] ತಿಳಿಯುತ್ತದೆ ಈ ವರೆಗೆ ಕೂಡಿಸಿದ ನಿಧಿಯು [illegible] ಕೆಲವರು [illegible] ಮಾಡುತ್ತಿದ್ದಾರೆ, ಹಳೇ ಸೀರೆ ಕುಪ್ಪ [illegible] ಕಂಬಳಿ ಮುಂತಾದವುಗಳನ್ನೂ [illegible] ನಿರಾಶ್ರಿತರ ಸಹಾಯಕ್ಕಾಗಿ [illegible] ಶ್ರೀ [illegible] ರತ್ನಾಬಾಯಿ [illegible] ಅವರ [illegible] ಶ್ರೀ [illegible], ಅಕ್ಕಸಾಲಿಗರು ನಿರ್ಮಿಸಿದ [illegible] ಮೂರ್ತಿಗಿಂತಲೂ ಸೃಷ್ಟಿಕರ್ತನಾದ [illegible] ಚೇತನ ಮೂರ್ತಿಗಳಲ್ಲೇ ದೇವರ [illegible] ಬಡಬಗ್ಗರಿಗೂ ಸಂತ್ರಸ್ತ [illegible] ಮಾಡುವದೇ ಪರಮೇಶ್ವರನ ಪೂಜೆಯು [illegible] ಪ್ರಸ್ತಾಪಿಸಿ, ಕೀರ್ತನೆಯ ಉತ್ತರ ಭಾಗದಲ್ಲಿ [illegible] ಶ್ರೀಯಾಳ ಚರಿತ್ರೆಯನ್ನು [illegible] ಮತ್ತು ಭಟ ಕಳವೊಳಗಿನ [illegible] ನೆರವಾಗಲು ಬೋಧಿಸಿದರು [illegible] ರೂ [illegible] ಮತ್ತು [illegible] ಹೊಸ ವಸ್ತ್ರಗಳು ಸಿಕ್ಕವು

[illegible] ಕಟ್ಟೆಯಲ್ಲಿ [illegible] ಒಂದು [illegible] ಸಿತು! [illegible] ಎಂಬ ಮುದುಕ [illegible] ದನ ಇಬ್ಬ ಮಗಂದಿರು (ಇಪ್ಪತ್ತರ ಇಬ್ಬರು) [illegible] ಮೇಲೆ ಹೋಗಹೊರಟುಬಂದಿದ್ದರು [illegible] ಕಟ್ಟೆಯಲ್ಲಿ ಹೊಳೆ [illegible] ತೀರಿಯ ಬಳಿ ದೋಣಿಯವನಿರಲಿಲ್ಲ. ಆದರಿಂದ ಅವರು ಬೇರೊಂದು ದೋಣಿಯನ್ನು ಹಾಡಿಕೊಂಡು ಹೊಳೆ ದಾಟುತ್ತಿದ್ದರಾಗಿಯೂ, ಸುಂಕದ ಕುರಿತು ಮಾತು [illegible] ದೋಣಿ ಮಗುಚಿ ಬತ್ತಾಗಿಯೂ [illegible] ಮುಳುಗಿ [illegible] ಹೇಳುತ್ತಾರೆ! ಅಲ್ಲ ತಮ್ಮಂದಿರ [illegible] ಮೇಲೆ [illegible] ಕಟ್ಟೆಯ [illegible] ಸಿಕ್ಕಿದವು [illegible] ಸಿಕ್ಕಿದವಂತೆ! [illegible] ಯ ಆಚೆ ಈಚೆ ಜನವಸತಿಯಿದ್ದು ಮುಳುಗಿದವರನ್ನು ಕೂಡಲೆ ಬದುಕಿಸಿಕೊಳ್ಳಲಿಕ್ಕಾಗಲಿ ಶವಗಳನ್ನು ತೆಗೆಯಲಿಕ್ಕಾಗಲಿ ಪ್ರಯತ್ನವಾಗದಿದ್ದದ್ದು ಆಶ್ಚರ್ಯವೇ ಸೈ! ಪೋಲೀಸರು ಸಮಗ್ರ ಚೌಕಶಿಯನ್ನು ಸತ್ಯ-ಪ್ರೀತಿಯಿಂದ ನಡಿಸಿ ಅಪಾಯಕರ ಪೂರ್ವಾಪರವನ್ನು ಪತ್ತೆಹಚ್ಚಿ ತಪ್ಪುಗಾರರನ್ನು ನ್ಯಾಯಸ್ಥಾನಕ್ಕೆ ಎಳೆದೊಯ್ಯುತಕ್ಕದ್ದು.

ಧಾರೇಶ್ವರದಲ್ಲಿ ಕಳೆದ ವಿಜಯಾದಶಮಿಯ ದಿನ "ಬಾಲವಾಚನಾಲಯ" ಸಂಸ್ಥೆಯೊಂದು ಸ್ಥಾಪನೆಯಾಗಿದೆ. ನೆರೆಯ ಹಳ್ಳಿಗಳ ಶಾಲಾ ವಿದ್ಯಾರ್ಥಿಗಳಲ್ಲೂ ಶಾಲೆ ಬಿಟ್ಟ ಪ್ರೌಢರಲ್ಲೂ ವಾಚನಾಭಿರುಚಿ ಹುಟ್ಟಿಸುವದು, ಹಿಂದೀ ಪ್ರಚಾರ, ಪ್ರೌಢ ಶಿಕ್ಷಣ ವ್ಯವಸ್ಥೆ ಮಾಡುವದು ಇತ್ಯಾದಿ ಸಂಸ್ಥೆಯ ಉದ್ದೇಶಗಳು. ಈಗಾಗಲೇ ಸಂಸ್ಥೆಗೆ ೫೦ರಷ್ಟು ಉಪಯುಕ್ತ ಗ್ರಂಥಗಳು ಸಿಕ್ಕಿವೆ. ಧಾರೇಶ್ವರ ಕನ್ನಡ ಶಾಲೆಯ ಶಿಕ್ಷಕರೇ ಪುಸ್ತಕಾಲಯದ ವ್ಯವಸ್ಥೆ ಕೈಕೊಂಡಿದ್ದಾರೆ. ಸಂಜೆ ಹೊತ್ತಿಗೆ ೧ ತಾಸು ಪ್ರೌಢ ಶಿಕ್ಷಣ ವರ್ಗವನ್ನೂ ಅವರು ನಡಿಸುತ್ತಿದ್ದಾರೆ. ವಿದ್ಯಾಭಿಮಾನಿಗಳು ಸಂಸ್ಥೆಗೆ ಉದಾರಾಶ್ರಯ ಕೊಡಬೇಕಾಗಿ ಚಾಲಕರು ಬಿನ್ನವಿಸುತ್ತಾರೆ.

ಅಳಕೋಡ ಗ್ರಾಮದ ನಾರಾಯಣ ಭಟ್ಟರೆಂಬವರಲ್ಲಿ ತೆಂಗಿನ ಕಾಯಿಗಳ ಕಳವಾಗಿತ್ತಾಗಿ ತಿಳಿಯುತ್ತದೆ. ಕಳವಿನ ತಪಾಸಣೆ ಬಗ್ಗೆ ಕುಮಟೆಯ ಜಮಾದಾರರು ಹೋಗಿದ್ದರು. ಜಮಾದಾರರು ರಾ। ವಾಸುದೇವ ಕೃಷ್ಣ ಪೈ ಎಂಬವರ ಜಬಾನಿ ಕೊಳ್ಳುತ್ತಿದ್ದಾಗ ಕತ್ತಗಾಲ ಗ್ರಾಮಸ್ಥರು ನಡುವೆ ಬಿದ್ದು ರಾ। ಪೈರಿಗೆ ಅಡ್ಡಸವಾಲು ಮಾಡಿದರಾಗಿಯೂ ರಾ। ಪೈರು ಈ ಬಗ್ಗೆ ಬೇಸರಗೊಂಡು ಜಮಾದಾರರ ಬಳಿ ದೂರಿ ಕೊಳ್ಳಬೇಕಾಯಿತಾಗಿಯೂ ಜಮಾದಾರರು ಗ್ರಾಮಸ್ಥರಿಗೆ ಹೊರಕಳಿಸಿ ಕೊಡಬೇಕಾಯಿತಾಗಿಯೂ ತಿಳಿಯುತ್ತದೆ. ಕತ್ತಗಾಲ ಗ್ರಾಮಸ್ಥರು ಈ ಉಪದ್ವ್ಯಾಪ ಕೈಕೊಂಡಿದ್ದರ ರಹಸ್ಯವೇನು?

ಜಿಲ್ಲಾ ಕೊಂಗ್ರೆಸ ಕಮಿಟಿಯವರು ಭಟಕಳ ನಿರಾಶ್ರಿತರ ಬಗ್ಗೆ ನಿಧಿಸಂಗ್ರಹ ಮಾಡುತ್ತಿದ್ದಾರಾಗಿ ತಿಳಿಯುತ್ತದೆ.

ಜಿಲ್ಲಾ ಸೀಮೆಯಲ್ಲಿ ಈ ವರ್ಷ ಬೆಳೆ ಚನ್ನಾಗಿ ಬಂದಿಲ್ಲವಾಗಿಯೂ, ಕಾಡುಹಂದಿ ಮುಂತಾದ ಕಾಡುಮೃಗಗಳ ಹಾವಳಿಯಿಂದ ಬಹಳ ನಷ್ಟ ಒದಗಿದೆಯಾಗಿಯೂ, ಅಧಿಕಾರಿಗಳು ಯೋಗ್ಯ ಆಣೇವಾರಿ ಮಾಡಿಸಿ ಒಕ್ಕಲಿಗರಿಗೆ ತಕ್ಕ ಪರಿಹಾರ ಒದಗಿಸಿ ಕೊಡಬೇಕಾಗಿಯೂ ಜಿಲ್ಲಾ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಹಳದೀಪುರ— ಹಳದೀಪುರ ನವಿಲಗೋಣ ರಸ್ತೆ ಇಂಜಿನಿಯರ ಖಾತೆಯವರ ರಸ್ತೆ. ಈ ರಸ್ತೆಯ ಮೇಲಿನ ಕುವೆಳ್ಳಿ ಸಂಕ ಜೀರ್ಣವಾಗಿ ಬಹಳ ಕಾಲವಾಯಿತು! ಇನ್ನೂ ವರೆಗೆ ಅದರ ದುರುಸ್ತಿಯಿಲ್ಲ! ಜನರು ಎಷ್ಟು ಹೇಳಿಕೊಂಡಾಗ್ಯೂ ಖಾತೆಯ ಅಧಿಕಾರಿಗಳು ಕಿವಿಗೊಡುವದಿಲ್ಲವಂತೆ! ಇನ್ನಾರ ಬಳಿ ಹೇಳಿಕೊಂಡರೆ ತಮ್ಮ ಇಷ್ಟ ಕೈಗೂಡುವದೆಂದು ಜನರು ಕೇಳುತ್ತಲಿದ್ದಾರೆ. ಮೊನ್ನೆ ಶುಕ್ರವಾರ ಮಧ್ಯಾಹ್ನ ಈ ಸಂಕವು ಮುರಿದು ಹೋಗಿದೆ. ಮುಂಜಾವಿನಲ್ಲಿ ಹಳದೀಪುರದ ಬಡಿಯ ೩೦೦-೪೦೦ ದನಗಳು ಈ ಸಂಕದ ಮೇಲಿಂದ ಹಾದು ಮೇಯಲಿಕ್ಕೆ ಗುಡ್ಡಕ್ಕೆ ಹೋಗಿದ್ದವು. ಮಧ್ಯಾಹ್ನ ಸಮಯದಲ್ಲಿ ಕಲ್ಲುಗಳಿಂದ ತುಂಬಿದ ಒಂದು ಗಾಡಿಯನ್ನು ಜನರೇ ಎಳೆದು ತರುತ್ತಿರುವಾಗ ಸಂಕವು ಒಮ್ಮಿಂದೊಮ್ಮೆ ಮುರಿದು ಬಿದ್ದು ಗಾಡಿಯೂ ಜನರೂ ಕೆಳಗೆ ನೀರಲ್ಲಿ ಬಿದ್ದರು. ಸುದೈವದಿಂದ ಪ್ರಾಣಹಾನಿಯಾಗಲಿಲ್ಲ. ಜನರಿಗೆ ಬಹಳ ಗಾಯಗಳಾಗಿವೆ. ಸಂಜೆಯಲ್ಲಿ ಮೇಯಹೋದ ಜಾನುವಾರಗಳಿಗೆ ತಿರುಗಿ ಮನೆಗೆ ತರಬೇಕಾದರೆ ಜನರಿಗೆ ಸಾಕುಬೇಕಾಯಿತು! ಎಷ್ಟೋ ದನ-ಕರುಗಳು ಇನ್ನೂ ಆಚೆಗೇ ಇವೆ! ಇಂಜನಿಯರ ಖಾತೆಯವರ ದುರ್ಲಕ್ಷ್ಯದಿಂದ ಒದಗಿದ ಅನಾಹುತವಿದು! ಖಾತೆಯವರು ತಮ್ಮ ಕಾರಭಾರವನ್ನು ಇನ್ನಾದರೂ ಸುಧಾರಿಸುವರೇ? ಕೊಂಗ್ರೆಸ ಮಂತ್ರಿಮಂಡಳವು ಈ ಖಾತೆಯ ಕಾರಭಾರವನ್ನು ಕೂಲಂಕಷವಾಗಿ ಪರಾಂಬರಿಸಿ ಸನಕ

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ



ಲಿವ್ಹರ್ ಕ್ಯೂರ್

ಲಿವ್ಹರ್ ಮತ್ತು ಯಕೃತ್ ವಿಕಾರಗಳ ಮೇಲೆ ಅಮೋಘವಾದ ಉಪಾಯ! ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ,

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,
ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ — ಅಕಾರ್ಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಸ್ಥಾನಿಕ ವೃತ್ತಾಂತ

(೯ನೇ ಪಾನಿನಿಂದ ಮುಂದರಿಸಿದ್ದು)

ಗಾಗಿ ಇಲ್ಲಿ ಬಂತು ಗ್ರಾಮಸ್ಥರೂ ಪೋಲಿಸರೂ ಪರವಾನಿ ಕೊಡಲಡ್ಡಿಯಿಲ್ಲವೆಂದು ಶಿಫಾರಸು ಮಾಡಿದರು ಕೆಲ ದಿನಗಳ ಮೇಲೆ ಗ್ರಾಮಸ್ಥರು ಇನ್ನೊಂದು ವರದಿ ಕಳಿಸಿ, ಸಣ್ಣಯ್ಯನಿಗೆ ಕೋವಿ ಕೊಡಬಾರದೆಂತಲೂ, ಕೊಟ್ಟರೆ ಆತನು ದುರುಪಯೋಗ ಮಾಡ್ಯಾನೆಂತಲೂ ತಿಳಿಸಿದರಾಗಿ ಹೇಳುತ್ತಾರೆ! ಗ್ರಾಮಸ್ಥರ ಈ ಎರಡನೇ ವರದಿಯು ಗುಪ್ತ ಚೌಕಶಿ ಮಾಡುವ ಬಗ್ಗೆ ಇಲ್ಲಿ ಬಂದಿರುತ್ತದಂತೆ! ಜಿಲ್ಲಾಧಿಕಾರಿಗಳು ಸ್ವತಃ ಚೌಕಶಿ ಮಾಡಿ ಸಣ್ಣಯ್ಯನು ಕೋವಿ ಇಟ್ಟುಕೊಳ್ಳಲು ಅಪಾತ್ರನೋ ಹೇಗೆ, ಗ್ರಾಮಸ್ಥರು ಮೊದಲು ಕೋವಿ ಕೊಡಲಡ್ಡಿಯಿಲ್ಲವೆಂದು ಬರೆದುಕೊಟ್ಟು, ಹಿಂದಿನಿಂದ ಕೊಡಬಾರದೆಂದು ಬರೆದು ಹಾಕಿದ್ದರ ರಹಸ್ಯವೇನು? ಎಂಬುದರ ಪತ್ತೆ ಹಚ್ಚಬೇಕು ಇತ್ಯಾದಿ ಗೇರಸಪ್ಪೆಯವರೊಬ್ಬರು ತಿಳಿಸುತ್ತಾರೆ

ಮಂಕಿ— ಮಳೆಯಿಲ್ಲ ಚಳಿ ಬೀಳುತ್ತದೆ

ತಾ ೧೪ನೇಗೆ ಜಿಲ್ಲಾ ಬೇಸಾಯ ಖಾತೆಯ ಅಧಿಕಾರಿಗಳಾದ ರಾ। ಹಬ್ಬುರವರು ಇಲ್ಲಿ ಬಂದಿದ್ದರು ಊರವರ ಸಭೆ ಸೇರಿಸಿ ಅವರು ಊರ ಭತ್ತದ ತೆನೆಗಳನ್ನೂ ಬೇಸಾಯ ಖಾತೆಯವರ ಭತ್ತದ ತೆನೆಗಳನ್ನೂ ಸರಿಹಚ್ಚಿ ತೋರಿಸಿ, ಬೇಸಾಯದ ಕ್ರಮದಲ್ಲಿ ಸುಧಾರಣೆ ಮಾಡುವ ಬಗ್ಗೆ ಉಪದೇಶ ಮಾಡಿದರು

ಕೊಂಗ್ರೆಸ ಕಮಿಟಿ ಸ್ಥಾಪಿಸುವ ಬಗ್ಗೆ ತಾ ೩೦ಕ್ಕೆ ಸಭೆ ಇಟ್ಟಿತ್ತೇನೋ ನಿಜ ಆದರೆ ರಾ। ಗುಲವಾಡಿಯವರು ಅಷ್ಟು ಹೊತ್ತಿಗೆ ಭಟಕಳಕ್ಕೆ ಹೊರಟು ಹೋದರು ಇಲ್ಲಿ ಸಭೆ ಕೂಡಲೇ ಇಲ್ಲ ಇನ್ನೂ ಸಭೆಯಿಲ್ಲ, ಕಮಿಟಿಯಿಲ್ಲ, ಕೊಂಗ್ರೆಸ ಸದಸ್ಯರ ನೋಂದಣಿ ಮಾಡುವವರೂ ಇಲ್ಲ! ಕಳೆದ ವರ್ಷದ ಹಣದ ವ್ಯವಸ್ಥೆಯೂ ಇಲ್ಲ! ಅಂತು ಈ ವರ್ಷ ಇಲ್ಲಿ ಕೊಂಗ್ರೆಸ್ಸಿನ ಪ್ರಚಾರ ಶೂನ್ಯವೆಂದೇ ಹೇಳಬಹುದು!

ಭಟಕಳ— ಚಳಿ ಬೀಳಹತ್ತಿದೆ ಗದ್ದೆಗಳ ಕೊಯಿಲು ಭರದಿಂದ ಸಾಗಿದೆ

ಕಳೆದ ತಾ ೧೦ನೇಗೆ ನಿರಾಶ್ರಿತ ಸಹಾಯಕ ಸಮಿತಿಯ ಸಭೆಯಾಯಿತು ತಾ ೧೫-೧೦-೩೮ರ ತನಕ ನಿರಾಶ್ರಿತರಿಗೆ ಅನ್ನ ಸಾಮಗ್ರಿ ಕೊಡಬೇಕೆಂತಲೂ ಈ ತಿಂಗಳ ಕೊನೆಯೊಳಗಾಗಿ ಕನಿಷ್ಠ ರೂ ೧೦೦೦ದ ಬಟ್ಟೆಗಳನ್ನು ಹಂಚಬೇಕಾಗಿಯೂ ಸಮಿತಿಯು ನಿರ್ಣಯವಾಯಿತು ಸಮಿತಿಯವರು ಹಿಂದುಗಳಿಗೊಂದು ಶಿಬಿರ ಮತ್ತು ಮುಸಲ್ಮಾನರ ಬಗ್ಗೆ ಒಂದು ಶಿಬಿರ ಹೀಗೆ ಎರಡು ಶಿಬಿರಗಳನ್ನು ತೆರೆದಿದ್ದಾರೆ ಹಿಂದು ಶಿಬಿರದಲ್ಲಿ ೯೫೦ ಮತ್ತು ಮುಸಲ್ಮಾನ ಶಿಬಿರದಲ್ಲಿ ೩೦೦ ಜನರು ಆಶ್ರಯ ಪಡೆಯುತ್ತಿದ್ದಾರೆ ತಾ ೧೦ರ ತನಕ ಸಮಿತಿಯ ಕಡೆ ನಗದಿ ರೂ ೫೩೮ ೮-೦ ರೂ ೨೨೫ ವಸ್ತ್ರಗಳು ಮತ್ತು ೨೭ ಮುಡಿ ಅಕ್ಕಿ ಜಮೆಯಾಗಿದ್ದವು ಅವುಗಳಲ್ಲಿ ರೂ ೩೭೦ ಖರ್ಚಾಗಿದ್ದವು ಈ ತನಕ ಸಮಿತಿಯವರು ತಾತ್ಕಾಲಿಕ ಅನ್ನಸಾಮಗ್ರಿಯ ಪ್ರವತಿ ಮತ್ತು ಅರಿವೆ ಅಂಚಡಿಗಳ ಪ್ರಶ್ನೆ ಮಾತ್ರವೇ ಕೈಕೊಂಡಿದ್ದಾರೆ ಶಾಶ್ವತತರೀಕ ಸಹಾಯದ ಪ್ರಶ್ನೆಯ ಆಲೋಚನೆಯನ್ನೇ ಪ್ರಾರಂಭಿಸಿರುವದಿಲ್ಲ ಅರಿವೆ-ಅಂಚಡಿಗಳ ಸಮುಕ್ಕೆ ಬಿಡಿಸಿದ ಬಳಿಕ ಉಳಿಯುವ ಹಾಗೂ ಮನೂಲ ಬರುವ ನಿಧಿಯನ್ನು ಶಾಶ್ವತ ಸಹಾಯಕ್ಕಾಗಿ ಸಮಿತಿಯು ಕಾದಿರುವದು

ಮುಂಬಯಿ ಮೊದಲಾದ ನಗರಗಳಿಂದ ನಿರಾಶ್ರಿತರಿಗೆ ಧನಸಹಾಯದ ಆಶ್ವಾಸನೆಗಳು ಬರುತ್ತಿವೆ ಕಾರವಾರದಿಂದ ರಾ। ಮಂಜನಾಥ ಜೋಶಿಯವರು ತಮ್ಮ ಮಗ್ಗಗಳಲ್ಲಿ ತಯಾರಾದ ೩೨ ಚಾದರ ಜೋಡಿಗಳನ್ನು ಕಳಿಸಿಕೊಟ್ಟಿದ್ದಾರೆ "ದಿ ಹನುಮಾನ್ ಟ್ರಾನ್ಸಪೋರ್ಟ ಕಂಪನಿ"ಯ ಚಾಲಕರು ರೂ ೧೨೫ ಧನಸಹಾಯ ಕಳಿಸಿದ್ದಾರೆ ಮಂಚಿಕೇರಿಯ ರಾ। ಶ್ರೀನಿವಾಸ ಅಣ್ಣಪ್ಪ ಶೇಟ ಇವರು ೧೫ ಅಂಗಿಗಳನ್ನು ಕಳಿಸಿದ್ದಾರೆ ಸಿದ್ದಾಪುರದಿಂದ ರಾ। ಗಣಪಯ್ಯ ಮ್ಹಾಳಪ್ಪ ಪ್ರಭುರವರು ರೂ ೧೦ ಕಳಿಸಿಕೊಟ್ಟಿದ್ದಾರೆ, ಇನ್ನೂ ಕೆಲವು ಹಣ ಕೂಡಿಸಿ ಕಳಿಸುತ್ತೇವೆಂದು ತಿಳಿಸಿದ್ದಾರೆ ಎಸೆಂಬ್ಲಿಯ ಮೆಂಬರರಾದ ರಾ। ಗೋಪಿಯವರು ಮುಖ್ಯಪ್ರಧಾನ ನಾ। ಖೇರರವರಿಗೆ ಎಲ್ಲ ಸಂಗತಿ ಸವಿಸ್ತರ ತಿಳಿಸಿರೆಯೆಂತಲೂ, ಪ್ರಧಾನರು ತಕ್ಕ ಸಹಾಯ ಒದಗಿಸಿಕೊಡುತ್ತೇವೆಂದು ಆಶ್ವಾಸನೆಯಿತ್ತಿದ್ದಾರೆಂತಲೂ ತಾವು (ಗೋಪಿಯವರು) ದೀಪಾವಳಿ ರಜೆಯಲ್ಲಿ ಭಟಕಳಕ್ಕೆ ಬರುತ್ತೇವೆಂತಲೂ ಬರೆದು ತಿಳಿಸಿದ್ದಾರೆ ಸಿರ್ಸಿಯಿಂದ ರಾ। ತಿ ಶ್ರೀ ನಾಯಕರವರು ತಾ ೧೦ನೇಗೆ ಇಲ್ಲಿಗೆ ಬಂದು ಕೆಲವು ಹಳೆಯ ವಸ್ತ್ರಗಳನ್ನು ಕೊಟ್ಟು ಹೋಗಿದ್ದಾರೆ

ತಾ ೧೩ನೇಗೆ ಪ್ರಾಂತ ಸಾಹೇಬರಾದ ರಾ। ಕೊಯಿಮತ್ತೂರಕರವರ ಹಸ್ತದಿಂದ ೨೫೦ ಕುಟುಂಬಗಳ ನಿರಾಶ್ರಿತರಿಗೆ ಹೊಸ ವಸ್ತ್ರಗಳನ್ನು ಕೊಡಿಸಲಾಯಿತು ಇನ್ನುಳಿದವರಿಗೂ ಸಧ್ಯದಲ್ಲೇ ಹಂಚಲ್ಪಡುವವು ಪ್ರಾಂತ ಸಾಹೇಬರು ಹೊಳೆಯ ದಂಡೆಯಂಚಿ ಮನೆಮಾಡಿಕೊಂಡಿರುವ ಜನರಿಗೆ ಎತ್ತರದಲ್ಲಿನ ಸ್ಥಳಗಳಲ್ಲಿ ಸ್ಥಳ ಕೊಡುವ ಕುರಿತು ಆಲೋಚನೆ ನಡಿಸಿದ್ದಾರೆ

ಇಲ್ಲಿಯ ಪೋಲೀಸ ದಳದವರು ನೆರೆ ಬಂದ ಸ್ಥಳದಲ್ಲಿ ತುಡುಗು, ತುಂಟತನಗಳಾಗದಂತೆ ಕಾವಲಿಟ್ಟು ಹಾಗೂ ಇನ್ನಿತರ ಬಗೆಗಳಿಂದ ನಿರಾಶ್ರಿತರಿಗೆ ಒಳಿತಾಗಿ ನೆರವಾಗಿದ್ದಾರೆ ನೀರಲ್ಲಿ ಬಳದು ಹೋಗುತ್ತಿದ್ದ ಸಾಮಾನುಗಳನ್ನು ಒಟ್ಟುಗೂಡಿಸಿ ಆಯಾಯ ಮಾಲೀಕರಿಗೆ ಮುಟ್ಟಿಸಿಕೊಡುವ ಕೆಲಸವನ್ನೂ ಅವರು ಮನಮುಟ್ಟಿ ಮಾಡಿದ್ದಾರೆ

ಬೈಂದೂರ-ಭಟಕಳ ರಹದಾರಿಯು ಪ್ರಾರಂಭವಾಗಿ ೬ ೧೦ ದಿನಗಳಾದವು ಆದರೆ ಟಪಾಲ-ವ್ಯವಸ್ಥೆ ಮಾತ್ರ ಇನ್ನೂ ಸರಿಯಾಗಿಲ್ಲ ೪-೫ ದಿನ ತಡವಾಗಿ ಹುಬ್ಬಳ್ಳಿಯ ಮೇಲಿಂದ ಟಪಾಲ ಬರುತ್ತದಂತೆ! ಅಂಚೆ ಖಾತೆಯಲ್ಲಿ ವ್ಯವಸ್ಥೆಯಿಲ್ಲವೇ?

ಶಿರ್ಸಿ— (ತಾ ೧೪ ೧೦ ೩೮) ಕಳೆದ ವಾರ ತಿಳಿಸಿದ ರೂ ೯೭॥ ಕೂಡಿ ಇಲ್ಲಿಯ ಕೊಂಗ್ರೆಸ ಕಾರ್ಯಕರ್ತರು ಕಳಿಸಿದ ಭಟಕಳ ನಿರಾಶ್ರಿತ ಸಹಾಯಕ ನಿಧಿಯು ಈ ವರೆಗೆ ರೂ. ೨೩೪-೧೧-೦ ಆಗಿರುತ್ತದೆ ಮಹಿಳಾ ಸಮಾಜದವರೇ ರೂ ೭೧ ಒಟ್ಟುಗೂಡಿಸಿ ಕೊಟ್ಟಿರುತ್ತಾರೆ ಶ್ರೀ ಮಾರಿಕಾಂಬಾ ದೇವರ ಭಾಂಡಾರದಿಂದ ರೂ ೫೦ ಕೊಡಲಾಗಿದೆ

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ರಕ್ತವರ್ಧಕ, ತ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಸಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ —	ಕಾಮತ ಸ್ಟೋರ್ಸ
ಅಂಕೋಲಾ —	ವೇದಮೂರ್ತಿ ಹನುಮಟ್ಟಿ ಕೇಶವ ಭಟ್ಟ	ಗೋಕರ್ಣ —	ಎನ್. ವ್ಹಿ. ಬಸ್ತಿಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ	ಶಿರ್ಸಿ —	ಆರ್. ವ್ಹಿ. ಧಾಕಪ್ಪ ಕೆಮಿಸ್ಟ

ವಿಳಾಸ -

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರಾಂಚ್ ಆಫೀಸು: ಕುಮಟಾ. ಉ. ಕ. OR BHUVANENDRA PRODUCTS LTD. Head Office KATAPADI, S K.

ಸಿದ್ದಾಪುರ— (ತಾ. [illegible]) [illegible]

ಅಂಕೋಲಾ— [illegible]

ಕಳೆದ ವಿಜಯಾದಶಮಿಯ ದಿನ ಈ ಊರಲ್ಲಿ "ದಿ [illegible] ಎಂಡ್ ಇಂಡಸ್ಟ್ರಿಯಲ್ ಬೇಂಕಿನ [illegible] ತೆರೆಯಲ್ಪಟ್ಟಿದೆ.

[illegible] ಈ ಕಾಲದಲ್ಲಿ [illegible] ಹೇಳಬಹುದು ಬಡವರು [illegible] ಶ್ರೀಮಂತರು ಮಾತ್ರ [illegible] ಬಡ ಹಸ್ತಕರ ಕಷ್ಟದಿಂದ ಕಳ್ಳತನದಿಂದ [illegible] ಅಬಕಾರಿ ಖಟ್ಲೆಗಳಲ್ಲಿ ಸಿಗುವವರು ಇಂಥ ಹಸ್ತಕರೆ. ಈ ಹಸ್ತಕರಿಗೆ ಮೆಜಿಸ್ಟ್ರೇಟರು [illegible] ದಂಡ ವಿಧಿಸುತ್ತಾರೆ. ಇದರಿಂದ ಹಸ್ತಕರಿಗೆ [illegible] ತಮ್ಮ ಒಡೆಯರ [illegible] ಹಣ ತಂದು ದಂಡ ತುಂಬಿ ಅವರು [illegible] ಕೊಡಲು [illegible] ಶ್ರೀಮಂತರು ನಡಿಸುವ ಈ ಕಳ್ಳ ವ್ಯಾಪಾರಕ್ಕೆ [illegible] ಮೆಜಿಸ್ಟ್ರೇಟರು ಅಬಕಾರಿ ಖಟ್ಲೆಗಳಲ್ಲಿ ಕಠಿಣತರ ಶಿಕ್ಷೆ ವಿಧಿಸುವದು ಅಗತ್ಯವಿದೆ. ಅಬಕಾರಿ ಅಧಿಕಾರಿಗಳು ಈ ಸಂಗತಿಯನ್ನು ಮೆಜಿಸ್ಟ್ರೇಟರ ಲಕ್ಷಕ್ಕೆ ತರಬೇಕು.

ಕಾರವಾರ— ಎಂದಿನಂತೆ ಬಾಡದ ನ್ಯೂ ಇಂಗ್ಲಿಷ ಸ್ಕೂಲಿನ ವಿದ್ಯಾರ್ಥಿಗಳು ಶ್ರೀ ಶಾರದೋತ್ಸವವನ್ನು ಮಾಡಿ, ದಸರೆಯ ದಿನ ೧॥ ತಿಂಗಳು [illegible] 'ನಾರದ ಗರ್ವಭಂಗ" ಎಂಬ ನಾಟಕವನ್ನು ಆಡಿತೋರಿಸಿದರು.

ಬಿಣಗೆಯ ಕನ್ನಡ ಶಾಲೆಯಲ್ಲಿಯೂ ಆಚೆಯ ಸೋಮವಾರ ಶ್ರೀ ಶಾರದಾ ಪೂಜೆಯ ಉತ್ಸವವಾಯಿತು. ಉತ್ಸವಕ್ಕೆ [illegible] ನೂರು ಜನರು ಕೂಡಿದ್ದರು. ಶಾಲೆಯ ಮುಖ್ಯಾಧ್ಯಾಪಕರಾದ [illegible] ಜನಾರ್ದನ ಶೇಣ್ವಿಯವರು ಸ್ವಯಂರಚಿತ ಸರಸ್ವತೀ-ಸ್ತುತಿ, ರಾಟಿಯ ಮಹತ್ವ, ಸಾವಿತ್ರೀ-ಸತ್ಯವಾನ ಚರಿತ್ರೆ, ಮುಂತಾದ ಪದ್ಯಗಳನ್ನು ವಿದ್ಯಾರ್ಥಿಗಳಿಂದ ಹಾಡಿಸಿ ಸಭಿಕರ ಮನರಂಜನೆ ಮಾಡಿದರು.

(ಮಿಕ್ಕಿದ ಸಮಾಚಾರಗಳು ಮುಂದಿನ ಸಂಚಿಕೆಯಲ್ಲಿ)

ವಿಜ್ಞಾಪನೆ.

ಶರಾವತಿ ನದಿಗೆ ತಾ. [illegible] ಅಭೂತಪೂರ್ವ ನೆರೆಕಟ್ಟಿ ನದಿಯ ನೀರು ೨೦ ಅಡಿಗೂ ಮೇಲ್ಪಟ್ಟು ಏರಿತು ಮತ್ತು ಮುಡಭಟಕಳ, ಮುಟ್ಟಳ್ಳಿ, ಕೋಣಾರ, ಪೂರ್ಣವರ್ಗ, ಚೌಥಣಿ, ಸೂಸಗಡಿ (ಭಟಕಳ), ಮುಂಡಳ್ಳಿ, ಬೆಣ್ಣಿ ಮೊದಲಾದ ನದಿಯ ನೆರೆಹೊರೆಯ ಗ್ರಾಮಗಳಲ್ಲಿ ಹೇಳಲಾಗದಷ್ಟು ಕಷ್ಟ-ನಷ್ಟಗಳೊದಗಿವೆ. ಸುಮಾರು [illegible] ಮನೆಗಳು ನೀರುಪಾಲಾದವೆಂದು ಎಣಿಕೆ ಮಾಡಲಾಗಿದೆ. ಈ ಮನೆಗಳ ಬಡ ಒಕ್ಕಲಿಗರವು, ಅಂಬಿಗರವು [illegible] ಮಿಕ್ಕಿ ಜನರು ಮನೆ-ಮಾರುಗಳಿಲ್ಲದೆ ನಿರಾಶ್ರಿತರಾಗಿ ಅಲೆದಾಡುತ್ತಿದ್ದಾರೆ. ರೂ. [illegible] ಸಾವಿರಕ್ಕೆ ಮಿಕ್ಕಿ ಅವರಿಗೆ ನಷ್ಟವಾಗಿರುವದೆಂದು ತಿಳಿಯುತ್ತದೆ. ಕಾಣೆಯಾದವರಲ್ಲಿ ಈವರೆಗೆ [illegible] ಮಂದಿಗಳ ಶವಗಳು ಸಿಕ್ಕಿವೆ. ಹೂಡುವ ಮತ್ತು ಹಿಂಡುವ ಹೋರಿಗಳ ದನ-ಕರುಗಳು ಕಡಲಪಾಲಾದವು.

ನಡುರಾತ್ರಿ [illegible] ಘಂಟೆಯ ಸಮಯ ಈ ಬಡ ಜನರ ಮನೆಗಳಲ್ಲಿ ನೆರೆ-ನೀರು ಸೇರಿತು ಮತ್ತು ಒಂದು ತಾಸಿನೊಳಗೆ ಅದು ವೇಲ್ಬಾಣೆಸಿದಂತೆ ಏರಿತು. ಕಾರಣ ಹೊರಪ್ರದೇಶದಿಂದ ಸಹಾಯ ದೊರೆಯುವದು ಅಶಕ್ಯವಾಯಿತು. ಮನೆಗಳು ಒಮ್ಮೆಲೇ ಕಡಕೊಂಡು ಬಿದ್ದು ಬಳಿಮುಹೋದವು, ಮನೆಯವರಿಗೆ ಸುರಕ್ಷಿತ ಸ್ಥಳಗಳ ಸಹ ಅವಕಾಶ ದೊರೆಯಲಿಲ್ಲ. ಇದರಿಂದ ಅವರಿಗೆ ಸೊತ್ತು ರಕ್ಷಣೆ ಮಾಡಿಕೊಳ್ಳುವದು ಸಂಪೂರ್ಣ ಅಶಕ್ಯವಾಯಿತು. ಅವರಿಗೀಗ ಉಪವಾಸವೇ ಗತಿ! ಬಕ್ಕಲೆಯಾಗಿ ಅವರು ಅಲೆದಾಡುವ ಪ್ರಸಂಗ ಬಂದಿದೆ! ನಿರಾಶ್ರಿತರಿಗೆ, ಸಿರಿ ಧಾರಿಗರಿಗೆ ಸಹಾಯ ನೀಡಲು ಇದೀಗಲೇ ಕನಿಷ್ಠ ರೂ. ೨೦,೦೦೦ ಬೇಕು.

ಒಂದು ನಿರಾಶ್ರಿತ ಸಹಾಯಕ ಮಂಡಳ ಏರ್ಪಡಿಸಲಾಗಿದೆ. ಮತ್ತು ಅದರ ಪದ್ಯವೊಂದ ಜನರಿಗೆ ಸಹಾಯ ಮಾಡುವ ಕೆಲಸ ನಡೆದಿದೆ.

ಔದಾರ್ಯವಂತ ಮಹಾಜನರು ತಮ್ಮ ತಮ್ಮ ಶಕ್ತಿಯಂತೆ ಸಹಾಯವನ್ನು ನೀಡಬೇಕಾಗಿ ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳಲಾಗುತ್ತದೆ. ಕಿಂಚಿತ್ ಸಹಾಯವಾದರೂ ಕೃತಜ್ಞತಾ ಬುದ್ಧಿಯಿಂದ ಸ್ವೀಕರಿಸಲ್ಪಡುವದು. ನಿರಾಶ್ರಿತ ಜನರಿಗೆ ಸಹಾಯ ನೀಡುವದಕ್ಕಾಗಿ ಒಟ್ಟುಗೂಡಿಸಿದ ರಕಮನ್ನು ಡಾ|| ಎನ್. ವ್ಹಿ. ಕವಲಗುಡ್ಡ, ಅಧ್ಯಕ್ಷ, ನೆರೆನಿರಾಶ್ರಿತ ಸಹಾಯಕ ಮಂಡಳ, ಭಟಕಳ ಇವರ ವಿಳಾಸಕ್ಕೆ ದಯಮಾಡಿ ಕಳಿಸಬೇಕು.

ಭಟಕಳ,	**ಜೆ. ಎಚ್. ಶಮಸುದ್ದೀನ,**	**ಡಾ|| ಎನ್. ವ್ಹಿ. ಕವಲಗುಡ್ಡ,**
	ಬಿ ಎ, ಎಲ್ ಎಲ್ ಬಿ,	ಅಧ್ಯಕ್ಷ,
[illegible]	ಕಾರ್ಯದರ್ಶಿ.	ನೆರೆನಿರಾಶ್ರಿತ ಸಹಾಯಕ ಮಂಡಳ, ಭಟಕಳ

NOTICE.

WANTED an experienced qualified hand to act as Secretary of the Honavar Municipality for a period of six months on a minimum salary of R[illegible] The candidates who have passed L. S. G. D. or Sub Overseer examination will be given preference. The application should reach the undersigned by the [illegible] October 1938.
Honavar 11-10-38

S. S. NAGARKATTE,
PRESIDENT,
Municipality, Honavar

25,000 ವಿವಿಧ ಶಬ್ದಗಳುಳ್ಳ ಹೊಸ ವಿಧಾನ
ಮೋಡರ್ನ
ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಷನರಿ.
ಇಂಗ್ಲಿಷ ಕನ್ನಡ

ಬರೆದವರು [illegible] ಭಾರದ್ವಾಜ ವಿದ್ಯಾಭೂಷಣ ಮೈಸೂರ ಯೂನಿವರ್ಸಿಟಿ [illegible] ಮುನ್ನುಡಿಯುಳ್ಳ, ಸರ್ [illegible] ಹೊಗಳಿದ, ಮದ್ರಾಸ ನ್ಯಾಯವಿಧಿ [illegible] ಸಭೆಯ ಅಧ್ಯಕ್ಷ ಡಾ. [illegible] ರಾಮರಾಯರು [illegible] ಈ ಡಿಕ್ಷನರಿಯು ಇದೀಗ ಕರ್ನಾಟಕದಲ್ಲಿ ಹೊಸ [illegible] ಪ್ರತಿಗಳು ಅವಶ್ಯ [illegible] ಕಿಂತ ಕಡಿಮೆ ಬೆಲೆ ಕೇವಲ ೨ ರೂ. [illegible] ಪ್ರತ್ಯೇಕ ಸಿಗುವಸ್ಥಳ - **ದಿ ನ್ಯೂ ಸಪ್ಲೈ ಕಂಪನಿ, ಕುಮಟಾ**

ಬನ್ನಿರಿ ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ !!

ಉಡುಪಿ ಬ್ರಾಹ್ಮಣರ
ದಿ ಮೋಡರ್ನ ಹಿಂದೂ ಹೋಟೆಲ್,
ಮಹಾಶಯರೇ, **ಕುಮಟಾ.** (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಸಹಸ್ರ ಬ್ರಾಹ್ಮಣರೇ ಮೊದಲಾಗಿ
ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ ಬೆಳಗಾಂವ
ಕಡೆಗೆ ಹೋಗುವ ಟ್ರಿವ್ಹೆಲರರಿಗೂ ಉಳಕೊಳ್ಳಲಿಕ್ಕೂ, ಇತರ ಉಪಹಾರಕ್ಕೂ
ಒಳ್ಳೆ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ
"ದಿ ಮೋಡರ್ನ ಹಿಂದೂ ಹೋಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ — ವ್ಯವಸ್ಥೆ ಒಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುಪಡುತ್ತದು

ಬಿ. ರಾಮಕೃಷ್ಣಯ್ಯಾ, ಮಾಲಕ

ಕ್ಷೇಮವಾಗದು. ಈ ರೀತಿ ಹಳದೀಪುರದ ಕೆಲವು ಪ್ರಮುಖ ನಾಗರಿಕರು ಬರೆಯುತ್ತಾರೆ.

ಹೊನ್ನಾವರ—(ತಾ ೧೬-೧೦-೩೮) ಈ ಹೊತ್ತು ಬೆಳಿಗ್ಗೆ ಇಲ್ಲಿ ಒಂದು ಅನರ್ಥ ಸಂಭವಿಸಿತು. ಶರಾವತಿ ಹಡಗವು ಇಲ್ಲಿ ಈ ಹೊತ್ತು ಮುಂಜಾವಿಗೆ ಬಂದರ ಮಾಡಿತು. ಈ ವರ್ಷ ಈ ಬಂದರದಲ್ಲಿ ಬಂದರ ಮಾಡಿದ್ದು ಇದೇ ಮೊದಲನೇ ಹಡಗು. ತಪಾಸಿಗಾಗಿ ಇಲ್ಲಿಯ ಕಸ್ಟಮ್ಸ ಹೆಡ್ ಕಾರಕೂನ ರಾ॥ ಕದ್ರಿಕರರವರು ನಾಯ್ಕ ಜಾತಿ ಮತ್ತು ೭ ಖಲಾಸಿಗಳೊಡನೆ ಕಸ್ಟಮ್ಸ್ ಬೋಟಿಯಲ್ಲಿ ಕೂತು ಹೋಗಿದ್ದರು. ಮರಳಿ ಬರುವಾಗ ಅಳವೆಯಲ್ಲಿ ದೋಣಿ ತೆರೆಗಳಲ್ಲಿ ಮುಳುಗಿತು. ಉಳಿದ ಹಡಗದ ಇಲ್ಲಿಯ ಏಜಂಟರೂ ಮೀನು ಹಿಡಿಯಹೋದ ಅಂಬಿಗರು ೭ ಖಲಾಸಿಗಳಿಗೆ ಪ್ರಯಾಸದಿಂದ ಬದುಕಿಸಿಕೊಂಡರು. ರಾ॥ ಕದ್ರಿಕರರವರ ಶವ ಸಿಕ್ಕಿದೆ. ಜಾತಿಯ ಶವದ ಪತ್ತೆಯಿಲ್ಲ. ಘೋರ ಅನರ್ಥ!

ಹಿಂದೆ ಬಳಕೂರು, ಇಡಗುಂಜಿ, ಕಲಗೋಡ, ಹೆಗ್ಗಾರ, ಅಸಲಗೋಡ, ಟೇರಂಕಿ, ಮಣ್ಣೆ ಮೊದಲಾದ ಶರಾವತಿ ನದಿಯ ದಕ್ಷಿಣ ದಂಡೆಗುಂಟ ಇರುವ ಹಳ್ಳಿಗಳ ಟಪಾಲು ಮಂಕಿ ಅಂಚೆಕಟ್ಟೆಯಿಂದ ಬಟವಡೆಯಾಗುತ್ತಿತ್ತು, ವಾರದಲ್ಲಿ ಎರಡಾವರ್ತಿ ಬಟವಡೆಯಾಗುತ್ತಿತ್ತು. ಈ ಬಗ್ಗೆ ಒಬ್ಬ ಪ್ರತ್ಯೇಕ ಸಿಪಾಯಿಯಿದ್ದನು. ಈ ವ್ಯವಸ್ಥೆಯಿಂದ ಟಪಾಲು ಹೊತ್ತಿಗೆ ಸಿಗುವದಿಲ್ಲವಾಗಿಯೂ ಬಳಕೂರಿನಲ್ಲಿ ಒಂದು ಸಣ್ಣ ಅಂಚೆಕಟ್ಟೆಯನ್ನಿಡಬೇಕಾಗಿಯೂ ಆ ಕಡೆಯ ಜನರು ಚಳವಳಿ ಮಾಡಿದ್ದರ ಫಲವಾಗಿ ಕಳೆದ ವರ್ಷ ಅಕ್ಟೋಬರ ತಿಂಗಳಲ್ಲಿ ಬಳಕೂರಿನಲ್ಲಿ ಒಂದು ಪ್ರಯೋಗಾತ್ಮಕ ಅಂಚೆಕಟ್ಟೆ ತೆರೆಯಲ್ಪಟ್ಟಿತು. ಬಳಕೂರ ಬದಿಯ ಟಪಾಲು-ಬಟವಡೆಗಾಗಿ ಮಂಕಿಯಲ್ಲಿ ನೇಮಿಸಲ್ಪಟ್ಟ ಸಿಪಾಯಿಗೆ ಈ ಕಟ್ಟೆಯಲ್ಲಿ ವರ್ಗ ಮಾಡಲ್ಪಟ್ಟಿತು. ಈ ವ್ಯವಸ್ಥೆಯಿಂದ ಬಳಕೂರಿನವರಿಗೆ ದಿನಾಲು ಮತ್ತು ನೆರೆಹೊರೆಯ ಹಳ್ಳಿಯವರಿಗೆ ವಾರಕ್ಕೆ ಮೂರಾವರ್ತಿ ಟಪಾಲು ಸಿಗಹತ್ತಿತು. ಜನರಿಗೆ ರಜಿಸ್ಟರ, ಮನಿಯಾರ್ಡರ ಮಾಡಲಿಕ್ಕೂ ಅಂಚೆಯ ತಿಕೀಟು ದೊರಕಿಸಲಿಕ್ಕೂ ಬಹಳ ಅನುಕೂಲವಾಯಿತು. ಪ್ರಯೋಗಾತ್ಮಕ ಅವಧಿಯ ೬ ತಿಂಗಳು ಮುಗಿಯುತ್ತಲೆ ಟಪಾಲ ಇಲಾಖೆಯ ಇನ್ಸಪೆಕ್ಟರರು ಬಂದು ಈ ಹೊಸ ಅಂಚೆಕಟ್ಟೆಯ ಕೆಲಸ ಹೇಗೆ ನಡೆದಿದೆ, ಅನುಕೂಲತೆಗಳೆಷ್ಟಿವೆ, ಉತ್ಪನ್ನವೆಷ್ಟಾಯಿತು ವಗೈರೆ ತಪಾಸಣೆ ಮಾಡಿದರು. ಆ ಅವಧಿಯಲ್ಲಿ ಉತ್ಪನ್ನ ಹೆಚ್ಚಿಗೆ ಬರದಿದ್ದರೂ ಮುಂದೆ ಕ್ರಮೇಣ ಬೆಳೆಯುವದಾಗಿಯೂ ಅಂಚೆಕಟ್ಟೆಯ ವೆಚ್ಚ ಸಹಜವಾಗಿ ಗಳಿಸಬಹುದಾಗಿಯೂ ಕಟ್ಟೆಯನ್ನು ಕಾಯಂ ಮಾಡಲು ತಾವು ಶಿಫಾರಸು ಮಾಡುತ್ತೇವಾಗಿಯೂ ಅವರು ಊರ ಪ್ರಮುಖರಿಗೆ ಭರವಸೆ ಹೇಳಿದ್ದರು. ಅದರಂತೆ ಪ್ರಯೋಗಾತ್ಮಕ ಅವಧಿಯು ಪುನಃ ೬ ತಿಂಗಳಿಂದ ಬೆಳೆಸಲ್ಪಟ್ಟಿತು. ಇದೀಗ ಈ ವ್ಯವಸ್ಥೆಯು ಪ್ರಯೋಗಾತ್ಮಕ ಪರಿಯೊಳಗಿಂದ ಶಾಶ್ವತ ಸ್ಥಿತಿಯಲ್ಲಿ ಪರಿಣಮಿಸುವದೆಂದು ಜನರು ಕಲ್ಪಿಸಿಕೊಂಡಿದ್ದರು. ಆದರೆ ಟಪಾಲ ಇಲಾಖೆಯ ಅಧಿಕಾರಿಗಳು ಹಾಗೆ ಮಾಡುವದರ ಬದಲು ಹೊಸ ವಿಚಿತ್ರ ಪದ್ಧತಿಯನ್ನು ಅಮಲಿನಲ್ಲಿ ತಂದಿದ್ದಾರೆ! ಬಳಕೂರಿನ ಜನರ ಟಪಾಲು ಮಾತ್ರ ಅಲ್ಲಿ ದಿನಾಲು ಸಿಗುವದು. ಉಳಿದ ಊರುಗಳ ಟಪಾಲು ಬಳಕೂರ ಅಂಚೆಕಟ್ಟೆಯಾಗುವ ಪೂರ್ವದಲ್ಲಿ ನಡೆದುಬಂದಂತೆ ಮಂಕಿಯಿಂದ ವಾರಕ್ಕೆ ಎರಡಾವರ್ತಿ ಬಟವಡೆಯಾಗುವದು! ಬಟವಡೆ ಸಿಪಾಯಿಯು ಹಿಂದಿನಂತೆ ಮಂಕಿಯಲ್ಲೇ ಉಳಿಯುವನು! ಇದೇನು ಸುವ್ಯವಸ್ಥೆಯೋ ಅವ್ಯವಸ್ಥೆಯೋ? ೧-೨ ಮೈಲು ಅಂತರದಲ್ಲಿರುವ ಬಳಕೂರ ಕಟ್ಟೆಯಿಂದ ಟಪಾಲು ಬಟವಡೆ ಮಾಡುವದರ ಬದಲು ೮ ೯ ಮೈಲು ದೂರದಲ್ಲಿರುವ ಮಂಕಿಯ ಕಟ್ಟೆಯಿಂದ ಬಟವಡೆ ಮಾಡುವದು ಯಾರ ಅನುಕೂಲತೆಗಾಗಿ? ಈ ಟಪಾಲ ಬಟವಡೆಗಾಗಿ ಮಂಕಿಯಲ್ಲಿ ಪ್ರತ್ಯೇಕ ಸಿಪಾಯಿಯು ಬೇಕೆ ಬೇಕು. ಆ ಸಿಪಾಯಿಗೆ ಬಳಕೂರಲ್ಲಿಟ್ಟು ಬಳಕೂರಿನಿಂದಲೇ (ಕಳೆದ ಒಂದು ವರ್ಷ ನಡೆದಂತೆ) ಟಪಾಲ ಬಟವಡೆ ಮಾಡಿಸಿದರೆ ಯಾರಿಗೆ ಏನು ಹಾನಿಯಾಗುತ್ತದೆಂದು ತಿಳಿಯುವದಿಲ್ಲ! ಟಪಾಲ ಇಲಾಖೆಯವರು ಜನತೆಯ ಅನುಕೂಲತೆಗಳನ್ನು ಲಕ್ಷ್ಯಕ್ಕೆ ತಾರದೆ ಒಮ್ಮೊಮ್ಮೆ ಹಾಸ್ಯಾಸ್ಪದ ವ್ಯವಸ್ಥೆ ಮಾಡುತ್ತಾರೆ. ಇದೂ ಅವರೊಳಗಿನದೊಂದು ವ್ಯವಸ್ಥೆ! ಅಧಿಕಾರಿಗಳು ಈ ವ್ಯವಸ್ಥೆಯನ್ನು ರದ್ದುಪಡಿಸಿ ಹಳೇ ಪ್ರಯೋಗಾತ್ಮಕ ವ್ಯವಸ್ಥೆಯನ್ನೇ ಕಾಯಂ ಮಾಡಬೇಕಾಗಿ ಬಳಕೂರ ಸೀಮೆಯ ನೂರಾರು ಜನರು ಟಪಾಲ ಇಲಾಖೆಯ ಮೇಲಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಗೇರಸೊಪ್ಪೆಗಿಂತಲೂ ಅಳ್ಳಂಕಿಯೇ ದವಾಖಾನೆ ತೆರೆಯಲಿಕ್ಕೆ ಯೋಗ್ಯವಾದ ಸ್ಥಳವೆಂದು ಅಳ್ಳಂಕಿಯ ರೈತರೋರ್ವರು ತಿಳಿಸುತ್ತಾರೆ. ಅಳ್ಳಂಕಿಯಲ್ಲಿ ದವಾಖಾನೆಯಾದರೆ ಅಳ್ಳಂಕಿಯ ಸುತ್ತಲೂ ೫-೬ ಮೈಲು ಅಂತರದೊಳಗಿರುವ ೨೭ ಹಳ್ಳಿಗಳ ೧೩,೦೦೦ ಹಳ್ಳಿಗರಿಗೆ ಅನುಕೂಲವಾಗುತ್ತದೆಂತಲೂ, ಗೇರಸೊಪ್ಪೆಯಲ್ಲಿ ದವಾಖಾನೆಯಾದರೆ ೫೦೦ಕ್ಕಿಂತ ಹೆಚ್ಚಿಗೆ ಜನರಿಗೆ ಪ್ರಯೋಜನ ಸಿಗಲಾರದೆಂತಲೂ ಈ ರೈತರ ಪ್ರತಿಪಾದನೆಯಿದೆ. ಜಿಲ್ಲಾ ಬೋರ್ಡಿನವರಾದರೂ ಹಿಂದೆ ಅಳ್ಳಂಕಿಯೇ ದವಾಖಾನೆಗೆ ಯೋಗ್ಯ ಸ್ಥಳವೆಂದು ನಿಶ್ಚಯಿಸಿದ್ದರಾಗಿ ಅವರು ಹೇಳುತ್ತಾರೆ.

ಗದತೋಳಾ ಕೊಂಗ್ರೆಸ ಕಮಿಟಿಯವರು ಭಟಕಳ ನಿರಾಶ್ರಿತ ನಿಧಿಗೆಂದು ರೂ ೧೧-೧೮-೦ ಜಿಲ್ಲಾಧ್ಯಕ್ಷರ ಕಡೆಗೆ ಕಳಿಸಿದ್ದಾರೆ. ಹಿಂದೆ ಈ ಕಮಿಟಿಯವರು "ಟೀನ-ನಿಧಿ"ಗೆಂದು ರೂ ೪-೯-೦ ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ಕಳಿಸಿದ್ದರಂತೆ.

ಗೇರಸೊಪ್ಪ— ಹಲವು ವರ್ಷಗಳಿಂದ ಹಾಳು ಬಿದ್ದು ಕಾಡು ಬೆಳೆದ ನಗರಬಸ್ತಿಕೇರಿಯೊಳಗಿನ ಸರ್ವೆ ನಂಬರ ೧೦೮-೧೦೩ನೇ ಸ್ಥಳಗಳನ್ನು ಸಣ್ಣಯ್ಯನೆಂಬ ಒಕ್ಕಲಿಗನು ಸಾಗುವಳಿಗೆ ಪಡೆದು ಸಾಗುವಳಿ ಮಾಡುತ್ತಿದ್ದಾನೆ. ಅವನು ಬೆಳೆಯ ರಕ್ಷಣೆಯ ಬಗ್ಗೆ ಒಂದು ಕೋವಿ ಬೇಕೆಂದು ಸರಕಾರಕ್ಕೆ ಅರ್ಜಿ ಮಾಡಿದ್ದನು. ಅರ್ಜಿಯು ಸ್ಥಾನಿಕ ಚೌಕಶಿ

(ಪುರವಣಿ ಮೇಲೆ ಮುಂದರಿಸಿದೆ.)

501 ದೃಢವಾಗಿ ನಿಲ್ಲುವದು,
ನಿಧಾನವಾಗಿ ಕರಗುವದು.

ಇತರ ಸಾಬೂನುಗಳು ಬೇಗನೇ ಕರಗುವವು.

501 ಸಾಬೂನು ವಸ್ತ್ರಗಳನ್ನು ಹೆಚ್ಚಾಗಿ ಶುಭ್ರಪಡಿಸುವದಲ್ಲದೆ ಹಣವನ್ನು ಸಹ ಉಳಿಸುವದೆಂಬುವದು ವಿವೇಕವಂತರಿಗೆ ತಿಳಿದ ವಿಷಯವೇ. ಇದು ದೃಢವಾಗಿದ್ದು ಉಪಯೋಗಿಸಲು ಮಿತವಾಗಿ ಕರಗುವದು. ಇತರ ಸಾಬೂನುಗಳಲ್ಲಿ ನೀರಿರುವದರಿಂದ ಶೀಘ್ರವಲ್ಲಿಯೇ ಖರ್ಚಾಗುವವು. 501 ಸಾಬೂನನ್ನು ಕೊಂಡು ಅದರ ಸತ್ವವನ್ನು ಪರೀಕ್ಷಿಸಿರಿ. ನಿಮ್ಮ ವ್ಯಾಪಾರಿಯ ಅಂಗಡಿ ಮೇಲೆ ಹೋಗುವಾಗ ಈ ಸಾಬೂನನ್ನು ಕೊಳ್ಳಿರಿ. ಇದು ನಿಜವಾಗಿ ಸ್ವದೇಶಿ ಸಾಬೂನು.

ವಿವೇಕದಿಂದ ಕೊಳ್ಳಿರಿ.



501 ವಸ್ತ್ರಗಳನ್ನು ಶುಭ್ರಪಡಿಸುವ ಸಾಬೂನನ್ನು ಕೊಳ್ಳಿರಿ.
ಇದರಲ್ಲಿ ಪಶು ಕೊಬ್ಬು ಇಲ್ಲ.
ಟಾಂಕೋ ಸೇಲ್ಸ್ ಡಿಪಾರ್ಟಮೆಂಟು,
೧, ಸಂಟ್ರಲ್ ಸ್ಟ್ರೀಟ, ಬೆಂಗಳೂರು.
ದಿ ಟಾಟಾ ಆಯಿಲ್ ಮಿಲ್ಸ್ ಕಂ॥ ಲಿ॥
ಇವರಿಂದ ತಯಾರಾದುದು.
ಟಾಟಾಪುರಂ ಮತ್ತು ಬೊಂಬಾಯಿ
ಟಾಟಾರವರ ಉತ್ಪತ್ತಿ.

ವಾರ್ತೆಗಳು.

— ಮುಂಬಯಿ ಎಸೆಂಬ್ಲಿಯ ಸಭೆಯೊಳಗೆ ಸತ್ಯಾಗ್ರಹದಲ್ಲಿ ಜಪ್ತಾದ ಭೂಮಿಗಳನ್ನು ತಿರುಗಿ ಕೊಡುವ ಕಾಯಿದೆಯ ಚರ್ಚೆ ಬುಧ ಗುರು ಶುಕ್ರವಾರ ಹೀಗೆ ೩ ದಿನ ನಡೆದು, ಕೊನೆಗೆ ಕಾಯಿದೆ ಮಂಜೂರಾಗಿದೆ. ಕೊನೆಯ ಮೂರನೇ ವಾಚನದ ಕಾಲಕ್ಕೆ ೭೬ ಅನುಕೂಲ, ೨೮ ಪ್ರತಿಕೂಲ ಮತಗಳು ದೊರಕಿ ಬಹುಮತದಿಂದ ಕಾಯಿದೆ ಮಂಜೂರಾಯಿತು. ಪ್ರಥಮ ವಾಚನವನ್ನು ಕಂದಾಯ ಮಂತ್ರಿಗಳಾದ ನಾ|| ದೇಸಾಯಿಯವರು ಸೂಚಿಸಿದೊಡನೆ ಈ ಕಾಯಿದೆ ಸಂಘಟಿಸುವದು ಪ್ರಾಂತಿಕ ಕಾಯಿದೆ ಸಭೆಗಳ ಕಕ್ಷೆಯ ಬಾಹ್ಯವೆಂದು ಪ್ರಗತಿ-ಪಕ್ಷದ ಪರವಾಗಿ ಮಿ|| ಬ್ರೆಂಬಲ್‌ರವರು ವಾದಿಸಿದರು. ಗೃಹ ಮಂತ್ರಿಗಳಾದ ನಾ|| ಮುನಶಿಯವರು ಹಿಂದುಸ್ಥಾನ ಸರಕಾರದ ಕಾಯಿದೆ, ಪ್ರಿವ್ಹಿಕೌನ್ಸಿಲ ನಿರ್ಣಯಗಳ ಆಧಾರ ಕೊಟ್ಟು ಈ ವಿಷಯ ಪ್ರಾಂತಿಕ ಸರಕಾರದ ಕಕ್ಷೆಯೊಳಗಿನದೆಂದೂ ಸಾರ್ವಜನಿಕ ಹೇತು ನಿರ್ಣಯಿಸುವ ಸರ್ವಾಧಿಕಾರ ಪ್ರಾಂತಿಕ ಸರಕಾರಕ್ಕಿರುವದಾಗಿಯೂ ನಾಮುವಾರು ಹೇಳಿ, ಪ್ರಾಂತಿಕ ಸರಕಾರಕ್ಕಿರುವ ಅಧಿಕಾರ ಪ್ರಾಂತಿಕ ಕಾಯಿದೆ ಕೌನ್ಸಿಲುಗಳಿಗೆ ಇರುತ್ತದೆಂದು ತಾನೇ ಸಿದ್ಧವಾಗುತ್ತದಾಗಿ ಹೇಳಿದ ಬಳಿಕ, ಸಭಾಪತಿಗಳು ಬ್ರೆಂಬಲ್‌ರವರ ಆಕ್ಷೇಪವನ್ನು ರದ್ದುಪಡಿಸಿ ನಾ|| ದೇಸಾಯಿಯವರಿಗೆ ಭಾಷಣ ಮಾಡಲಪ್ಪಣೆ ಕೊಟ್ಟರು. ನಾ|| ದೇಸಾಯಿಯವರು ೧| ತಾಸಿನ ತನಕ ಒಳ್ಳೇ ತಲ್ಲಣಗೊಂಡು ಭಾಷಣ ಮಾಡಿ ಈ ಪ್ರಶ್ನೆಯನ್ನು ಸಂಕುಚಿತ ವಿಚಾರದಿಂದ ವಿಚಾರಿಸತಕ್ಕದ್ದಲ್ಲವೆಂತಲೂ, ಸ್ವಾತಂತ್ರ್ಯಕ್ಕಾಗಿ ಧಾರೆಯೆರೆದವರಿಗೆ ನೆರವಾಗಲು ತಾವು ಇಲೆಕ್ಶನ್ ಜಾಹೀರನಾಮೆಯಿಂದ ಬದ್ಧರಿದ್ದೇವೆಂತಲೂ, ಸಮಾಜವು ಸಹ ಹಾಗೆಯೇ ಎಣಿಸಬೇಕೆಂತಲೂ, ದೇಶದ್ರೋಹಿಗಳಿಗೆ, ಸ್ವಾತಂತ್ರ್ಯದ್ರೋಹಿಗಳಿಗೆ ಬೇರೆ ಪರಿಸ್ಥಿತಿಯಲ್ಲಿ ಕಠೋರ ಶಾಸನವಾಗುತ್ತಿತ್ತಾಗಿಯೂ ಯೋಗ್ಯ ಪ್ರತಿಫಲ ಕೊಡುವ ಕ್ರಮದಿಂದ ರಾಷ್ಟ್ರೀಯ ಸಭೆಯವರ ಸಮಾಧಾನವೃತ್ತಿ, ಧರ್ಮಬುದ್ಧಿ ವ್ಯಕ್ತವಾಗುತ್ತವೆಂತಲೂ, ಭೂಮಿ ಕೊಂಡವರು ಕಾಯಿದೆಯ ದುರುಪಯೋಗದಿಂದ ಪ್ರಯೋಜನ ಪಡೆದವರಿದ್ದಾರೆಂತಲೂ ಅವರಿಗೆ ಪ್ರೋತ್ಸಾಹ ಕೊಡುವದು ಹಿತವಲ್ಲೆಂತಲೂ, ಒಡಂಬಡಿಕೆಯ ಸಕಲ ಯತ್ನಗಳು ನಿರರ್ಥಕವಾದ್ದರಿಂದ ತಾವು ಈ ಕಾಯಿದೆಯನ್ನು ಸೂಚಿಸುವ ಪ್ರಸಂಗ ಒಂದಿದೆಯೆಂತಲೂ ನಾ|| ದೇಸಾಯಿಯವರು ಪ್ರತಿಪಾದಿಸಿದರು. ಅಂತು ಜಪ್ತಾದ ಭೂಮಿ ೪೮೭೦೫ ಎಕರೆ, ರೂ ೨೩,೬೧೨ ತೀರ್ವೆ ತೆರುವಂತಹದು. ಇದರೊಳಗೆ ಒಡಂಬಡಿಕೆಯಿಂದ ೯೧೯ ಎಕರೆ ಭೂಮಿ ತಿರುಗಿ ಕೊಡುವ ಏರ್ಪಾಟಾಗಿದೆ. ಭೂಮಿಯ ತೀರ್ವೆ ರೂ. ೪,೬೪೪. ಇದಕ್ಕೆ ಸರಕಾರವು ರೂ. ೨೯,೫೫೭ ಕ್ರಯ ಕೊಟ್ಟಿದೆ. ಉಳಿದ ಭೂಮಿ ಹೊಸ ಕಾಯಿದೆಯಂತೆ ಸ್ವಾಧೀನಪಡಿಸಿಕೊಳ್ಳಲು ಅಧಿಕಾರ ಕೊಡಬೇಕಾಗಿ ಈ ಕಾಯಿದೆಯಲ್ಲಿ ನಮೂದಿಸಲಾಗಿದೆ. ಇಂಥ ಕಾಯಿದೆ ಮಾಡಲು ಸರಕಾರಕ್ಕೆ ಹಕ್ಕಿರುವದಿಲ್ಲವೆಂಬ ಭಾವನೆ ರೂಢವಾಗಿರುವದಾಗಿಯೂ, ಹೊಲ ಕೊಂಡವರು ಯೋಗ್ಯ ಪ್ರತಿಫಲ ಪಡೆದು ಭೂಮಿ ಹಿಂತಿರುಗಿ ಕೊಡಲು ಒಪ್ಪುವದಿಲ್ಲವಾಗಿಯೂ ನುಡಿದರು. ಸರ್ ದೆಹಲವಿಯವರು ನಾ|| ದೇಸಾಯಿಯವರಿಗೆ ಸಾವಧಾನದಿಂದ ಭಾಷಣ ಮಾಡಿದ ಬಗ್ಗೆ ಹೊಗಳಿದರು. ಇನ್ನೊಂದು ವರ್ಷದ ತನಕ ಒಡಂಬಡಿಕೆಯ ಯತ್ನ ಮಾಡಬೇಕೆಂದೂ ಇದೀಗಲೇ ಇಂಥ ಕಾಯಿದೆ ಮಾಡಬಾರದಾಗಿಯೂ ಸೂಚಿಸಿದರು. ಡಾ|| ಜಮುನಾದಾಸ ಮೇಹ್ತಾ, ಕರಂದೀಕರ, ಘುಗಾವಾಲಾ, ರಾ|| ಬ|| ಚಿತಳೇ, ಮಿ|| ಬ್ರೆಂಬಲ್ ಮೊದಲಾದವರು ಈ ಕಾಯಿದೆಯನ್ನು ವಿರೋಧಿಸಿದರು. ಹೀಗೆ ಕಾಯಿದೆ ಮಾಡುವದು ಲೋಕಸುಲಿಗೆಯೆಂದೂ ಪ್ರತಿಯೊಂದು ಸರಕಾರವು ಹಿಂದಿನ ಸರಕಾರದ ನಿರ್ಣಯಗಳನ್ನು ರದ್ದುಪಡಿಸುತ್ತ ಹೋದರೆ ಅನರ್ಥವಾಗುವದೆಂದೂ ಇವರು ವಾದಿಸಿದರು. ಕೊನೆಗೆ ಪ್ರಥಮ ವಾಚನ, ಎರಡನೇ ವಾಚನ ಮಂಜೂರಾದವು. ಮೂರನೇ ವಾಚನದ ಕಾಲಕ್ಕೆ ಮುಖ್ಯ ಮಂತ್ರಿಗಳಾದ ನಾಮದಾರ ಖೇರರವರು ಒಳ್ಳೇ ಆವೇಶದಿಂದ ಭಾಷಣ ಮಾಡಿದರು: ''ಪಕ್ಷಾಭಿಮಾನದಿಂದ ನಾವು ಈ ಕಾಯಿದೆ ಘಟಿಸಲು ಉದ್ಯುಕ್ತರಾಗಲಿಲ್ಲ, ನಿಜವಾದ ಹಕ್ಕುದಾರರಿಗೆ ಭೂಮಿಗಳನ್ನು ನಾವು ಹಿಂತಿರುಗಿ ಕೊಡುತ್ತಿದ್ದೇವೆ, ಇದರೊಳಗೆ ಅನೈತಿಕವಾದುದೇನಿದೆ? ಈ ಪ್ರಕಾರ ಭೂಮಿಗಳ ಮಾರಾಟವಾಗುವಾಗ ಹೀಗೆ ಮಾರಾಟವಾಗುವದು ಯೋಗ್ಯವಲ್ಲೆಂದೂ ಆ ಕಾಲಕ್ಕೆ ಇಡೀ ದೇಶವೇ ಸಾರಿ ಹೇಳಿತ್ತು. ಸ್ವಾತಂತ್ರ್ಯದ ಕಾದಾಟವು ಇಡೀ ದೇಶಕ್ಕೇ ಅನ್ವಯಿಸುತ್ತದೆ, ಸ್ವಾತಂತ್ರ್ಯದಿಂದ ಇಡೀ ದೇಶದ ಉದ್ಧಾರವಾಗುವಾಗ, ಅದಕ್ಕಾಗಿ ಸರ್ವಸ್ವವನ್ನೂ ತೊರೆದ ಬಾಂಧವರಿಗೆ ನೆರವಾಗಿ ಅವರಿಗೊದಗಿದ ನಷ್ಟ ತುಂಬಿ ಕೊಡುವದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಿದೆ. ಈ ಕಾಯಿದೆಯನ್ನು ಪುರಸ್ಕರಿಸಿದರೆ ನಮ್ಮ ಮೇಲೆ ಸಂಕಟ ಒದಗಬಹುದಾಗಿ ನಮಗೆ ಅಂಜಿಕೆ ಹಾಕಲಾಗುತ್ತದೆ. ಸಕಲ ಸಂಕಟಗಳನ್ನು ಎದುರಿಸಲು ನಾವು ಸಿದ್ಧರಿದ್ದೇವೆ" ಹೀಗೆ ನಾ|| ಖೇರರವರು ಸ್ವಾತಂತ್ರ್ಯಾಕಾಂಕ್ಷೆಯಿಂದ ಪ್ರತಿಪಾದಿಸಿ ಮೂರನೇ ವಾಚನವನ್ನು ಮನ್ನಿಸಬೇಕೆಂದು ಬಿನ್ನೈಸಿಕೊಂಡ ಬಳಿಕ, ಮತಗಣನೆಯಾಗಿ ಕಾಯಿದೆ ಬಹುಮತದಿಂದ ಮಂಜೂರಾಯಿತು. ಈಗ ಈ ಕಾಯಿದೆಯು ಮೇಲ್ಸಭೆಯಲ್ಲಿ ಪ್ರಸ್ತಾಪಿಸಲ್ಪಡುವದು. ಅಲ್ಲಿ ಮನ್ನಿಸಲ್ಪಟ್ಟ ಬಳಿಕ, ಗವ್ಹರ್ನರರ ಮನ್ನಣೆಗಾಗಿ ಒಪ್ಪಿಸಲ್ಪಡುವದು. ಆ ಕಾಲದಲ್ಲಿ ಗವ್ಹರ್ನರರು ಮನ್ನಣೆ ಕೊಡದಂತೆ ಹೊಲ ಕೊಂಡವರು ಕಾರಸ್ಥಾನ ಹೂಡಬಹುದೆಂದು ಹೇಳುತ್ತಾರೆ. ಮಿ|| ಬ್ರೆಂಬಲ್‌ರವರಂಥ ಯುರೋಪಿಯನ್‌ರು ವಿರೋಧ ಪಕ್ಷದಲ್ಲಿರುವದರಿಂದ ಗವ್ಹರ್ನರರು ಮನ್ನಣೆ ಕೊಡಲು ಸುಲಭವಾಗಿ ಒಪ್ಪಲಿಕ್ಕಿಲ್ಲವೆಂದು ಕೆಲವರ ಎಣಿಕೆ. ಆದರೆ ಕಾಯಿದೆಯನ್ನು ಸೂಚಿಸಲು ಮೊದಲು ಮನ್ನಣೆ ಕೊಟ್ಟ ಗವ್ಹರ್ನರರು ಕಾಯಿದೆ ಮಂಜೂರಾದ ಬಳಿಕ ಮನ್ನಣೆ ಕೊಡದಿರರೆಂದು ಹಲವರ ಎಣಿಕೆ.

— ಭಾರತ ಉಪಮಂತ್ರಿಗಳಾದ ಕರ್ನಲ್ ಮ್ಯುರ್‌ಹೆಡ್‌ರವರು ಸದ್ಯಕ್ಕೆ ಹಿಂದುಸ್ಥಾನಕ್ಕೆ ಬರುತ್ತಾರೆ. ೪-೫ ದಿನ ಪುಣೆ-ಮುಂಬಯಿ ಕಡೆ ಉಳಿದು ಅವರು ಮುಂದೆ ಹೋಗುತ್ತಾರೆ. ಮಹಾತ್ಮರು ಈಗ ಗಡಿನಾಡಿನಲ್ಲಿ ಸಂಚರಿಸುತ್ತಿದ್ದಾರೆ; ಗಡಿನಾಡಿನ ಜನರೊಡನೆ ವಿಚಾರವಿನಿಮಯ ಮಾಡುತ್ತಿದ್ದಾರೆ. ಕರ್ನಲ್ ಮ್ಯುರ್‌ಹೆಡ್‌ರವರಿಗೂ ಮಹಾತ್ಮರಿಗೂ ಸಮಕ್ಷ ಸಂಭಾಷಣ ನಡೆಯುವದೆಂದು ಪ್ರಕಟವಾಗಿದೆ. ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳು ಲಂಡನಿನಿಂದ ಬುಧವಾರ ಹೊರಟರು. ಈ ವಾರದಲ್ಲಿ ಅವರು ಹಿಂದುಸ್ಥಾನಕ್ಕೆ ಬಂದು ತಲ್ಪುತ್ತಾರೆ. ಹೊರಡುವ ಮುಂಚೆ ಭಾರತ ಮಂತ್ರಿಗಳಾದ ಸರ್ ಝೆಟಲಂಡ ದೊರೆಗಳೊಡನೆ, ವಿದೇಶ ಪ್ರಧಾನರಾದ ಹೆಲಿಫೆಕ್ಸ ದೊರೆಗಳೊಡನೆ ಹಿಂದುಸ್ಥಾನದ ರಾಜ್ಯಭಾರದ ಕುರಿತು ಚರ್ಚೆ ಮಾಡಿದರಾಗಿಯೂ ರಾಷ್ಟ್ರೀಯ ಸಭೆಯ ಮನವೊಲಿಕೆ ಮಾಡುವ ಕುರಿತು ವಿಚಾರ ವಿನಿಮಯ ನಡೆಯಿತಾಗಿಯೂ ಸುದ್ದಿಗಾರರು ತಿಳಿಸುತ್ತಾರೆ. ಲಿನ್‌ಲಿಥ್‌ಗೋ ದೊರೆಗಳು ಹಿಂದುಸ್ಥಾನಕ್ಕೆ ತಲ್ಪಿದೊಡನೆ ಸಂಸ್ಥಾನಿಕರಿಗೆಲ್ಲ ಕರಿಸಿಕೊಂಡು, ಸಂಸ್ಥಾನಗಳೊಳಗಿನ ರಾಜ್ಯ ಸುಧಾರಣೆಯ ಕುರಿತು ಆಲೋಚನೆ ಮಾಡಿ ಅವರಿಗೆ ಸಂಯುಕ್ತ ರಾಜ್ಯಘಟನೆಯಲ್ಲಿ ಸೇರಿಸಿಕೊಳ್ಳುವ ಮುಂಚೆ ಲೋಕಸತ್ತೆಯನ್ನು ಸ್ಥಾಪಿಸುವ ವಿಚಾರ ನಡೆಯುವದಾಗಿಯೂ ಹೇಳುತ್ತಾರೆ. ಶ್ರೀ|| ಭುಲಾಭಾಯಿ ದೇಸಾಯಿಯವರಿಗೆ ಹಿಂದುಸ್ಥಾನ ಸರಕಾರದ ಕಾಯಿದೆಯ ಸಲಹೆಗಾರರಾಗಿ ನೇಮಿಸಿಕೊಂಡು ರಾಜ್ಯಘಟನೆಯಲ್ಲಿ ರಾಷ್ಟ್ರೀಯ ಸಭೆಯ ಸಹಕಾರಕ್ಕುಚಿತವಾದ ಮಾರ್ಪಾಟುಗಳನ್ನು ಒದಗಿಸಿತರುವರಾಗಿಯೂ ಹೇಳುತ್ತಾರೆ. ಕರ್ನಲ್ ಮ್ಯುರ್‌ಹೆಡ್‌ರವರು ಹಿಂದುಸ್ಥಾನದೊಳಗಿನ ಬೇರೆ ಬೇರೆ ದೃಶ್ಯಗಳನ್ನು ನೋಡಲೋಸುಗ ಸಹಜ ಭಾರತ ಪ್ರವಾಸವನ್ನು ಕೈಕೊಂಡಿರುವರಾಗಿಯೂ, ಇದರೊಳಗೆ ರಾಜಕಾರಣವೇನಿಲ್ಲೆಂತಲೂ ಬ್ರಿಟಿಶ ಸರಕಾರದ ಪ್ರಕಟಣೆ. ಇದು ದಿಟವಲ್ಲವಾಗಿ ಲಂಡನಿನೊಳಗಿನ ''ರೇನೊಲ್ಡ್ಸ ವೀಕ್ಲಿ'' ಪತ್ರಿಕೆಯ ಗುಪ್ತ ಚಾರರ ಅಂಬೋಣ. ಲಿನ್‌ಲಿಥ್‌ಗೋ ದೊರೆಗಳು ಮಹಾತ್ಮರೊಡನೆ ಆಲೋಚನೆ ಮಾಡಿ ದಿಲ್ಲಿಯೊಳಗೆ ಇನ್ನು ೨-೩ ತಿಂಗಳುಗಳಲ್ಲಿ ಪ್ರಮುಖರ ಪರಿಷತ್ತನ್ನು ಸೇರಿಸಲಿರುವರೆಂದೂ ಅದಕ್ಕಾಗಿಯೇ ಪ್ರಾಂತಾಧಿಪರೂ ಸರ್ವಾಧಿಪತಿಗಳೂ ರಜೆ ಕೊಂಡು ಲಂಡನಿನಲ್ಲಿ ಸೇರ್ವನಂತೆ ಮುಂದಾಗಿಯೇ ಏರ್ಪಾಟಾಗಿತ್ತೆಂದೂ 'ರೇನೊಲ್ಡ್ಸ ವೀಕ್ಲಿ' ಪತ್ರಿಕೆಯ ಗುಪ್ತಚಾರರ ಗುಪ್ತ ವಾರ್ತೆ. ಕರ್ನಲ್ ಮ್ಯುರ್‌ಹೆಡ್‌ರವರಾದರೂ ಈ ಕಾರ್ಯವನ್ನೇ ಗುರಿಯಿಟ್ಟುಕೊಂಡು ಹಿಂದುಸ್ಥಾನದ ಸಂಚಾರವನ್ನು ಕೈಕೊಂಡಿದ್ದಾರಂತೆ!

— ದನಗಳ ಸೆಗಣಿಯಲ್ಲಿ ಎರಡು ದ್ರವ್ಯಗಳಿವೆ: (೧) ದೀಪಕ (calorific), (೨) ಫಲೋತ್ಪಾದಕ (fertilising). ಹಿಂದುಸ್ಥಾನದೊಳಗೆ ಬಡವರೇ ಹೆಚ್ಚು, ಅವರಿಗೆ ಉರುವಲವನ್ನು ಕೊಂಡುಕೊಳ್ಳಲು ಗತಿಯಿಲ್ಲ; ಆದರಿಂದ ಸೆಗಣಿಯನ್ನು ಉರುವಲವಾಗಿ ಉಪಯೋಗಿಸಿ ಫಲೋತ್ಪಾದಕ ದ್ರವ್ಯವನ್ನು ನಾಶಪಡಿಸುತ್ತಾರೆ. ಇದರಿಂದ ಭೂಮಿಗೆ ಗೊಬ್ಬರ ಸಿಗದೆ ನಷ್ಟವಾಗುತ್ತದೆ. ಸೆಗಣಿಯನ್ನು ಗೊಬ್ಬರವಾಗಿಯೇ ಉಪಯೋಗಿಸಿದರೆ ದೀಪಕ ದ್ರವ್ಯವು ನಾಶವಾಗುತ್ತದೆ. ಆದರಿಂದ ಇವೆರಡೂ ದ್ರವ್ಯಗಳನ್ನು ಸೆಗಣಿಯೊಳಗಿಂದ ಪೃಥಕ್ಕರಿಸುವಂತೆ ಒಂದು ಪ್ರಯೋಗ ಮಾಡಲಾಗಿದೆ. ಗರಗಸದ ಹಿಟ್ಟನ್ನಾಗಲಿ ಇದ್ದಲಿಯ ಚೂರುಗಳನ್ನಾಗಲಿ ಒಂದು ಪಾತ್ರೆಯಲ್ಲಿ ಹಾಕಿ ಸೆಗಣಿಯನ್ನು ಕರಡಿ ಪಾತ್ರೆಯಲ್ಲಿ ಹಾಕಿ ಸೋಸಬೇಕ. ಫಲೋತ್ಪಾದಕ ದ್ರವ್ಯವು ನೀರಿನೊಡನೆ

ಸೋಸಿ ಕೆಳಗೆ ಬೀಳುತ್ತದೆ, ದೀಪಕ ದ್ರವ್ಯವು ಪಾತ್ರೆಯಲ್ಲಿಯೇ ಉಳಿಯುತ್ತದೆ. ಇದರಿಂದ ಬೆರಣಿಗಳನ್ನು ಮಾಡಿ ಉರುವಲಕ್ಕೆ ಉಪಯೋಗಿಸಬಹುದು. ಸೋಸಿ ತೆಗೆದ ನೀರನ್ನು ಗೊಬ್ಬರಕ್ಕುಪಯೋಗಿಸಬಹುದು, ಈ ಕ್ರಮದಿಂದ ಸಗಣಿಯ ಪೂರ್ಣ ಪ್ರಯೋಜನ ಬೇಸಾಯಗಾರರಿಗೆ ದೊರೆತು ಲಾಭವಾಗುವಂತಿದೆ.

— ಸೊಂಡೂರ ಸಂಸ್ಥಾನದ ಮಹಾರಾಜರು ಸಂಸ್ಥಾನದ ಆಡಳಿತೆಯಲ್ಲಿ ಲೋಕಪ್ರಮುಖರನ್ನು ಸೇರಿಸಿಕೊಳ್ಳುವಂತೆ ಏರ್ಪಾಟು ಮಾಡುವ ಸಂಕಲ್ಪವನ್ನು ಸದ್ಯಕ್ಕೆ ಪ್ರಕಟಿಸಿದ್ದಾರೆ. ಸೊಂಡೂರ ಸಂಸ್ಥಾನದ ಆಡಳಿತೆಯಲ್ಲಿ ತಕ್ಕ ತಿದ್ದುಪಾಟಗಳನ್ನು ಸೂಚಿಸುವಂತೆ ವಿಚಾರ ಮಂಡಳವನ್ನು ನೇಮಿಸಿದ್ದಾರೆ.

— ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ|| ಸುಭಾಷಚಂದ್ರ ಬೋಸರವರ ಅಧ್ಯಕ್ಷತೆಯೊಳಗೆ ದಿಲ್ಲಿಯಲ್ಲಿ ಔದ್ಯೋಗಿಕ ಮಂತ್ರಿಗಳ ಸಭೆ ಸೇರಿ ಅಖಿಲ ಭಾರತೀಯ ಔದ್ಯೋಗಿಕ ಮಹಾಮಂಡಳ ನೇಮಿಸಲ್ಪಟ್ಟಿತ್ತಷ್ಟೇ! ಈ ಮಹಾಮಂಡಳಕ್ಕೆ ಪಂ|| ಜವಾಹರಲಾಲರು ಅಧ್ಯಕ್ಷರಾಗಿ ನೇಮಿಸಲ್ಪಡುವವರಿದ್ದಾರೆ. ಮಹಾಮಂಡಳವು ಅಲ್ಲಲ್ಲಿಯ ಪರಿಸ್ಥಿತಿಗುಚಿತವಾಗಿ ಔದ್ಯೋಗಿಕ ಯೋಜನೆಗಳನ್ನು ತಯಾರಿಸಿ ಪುರಸ್ಕರಿಸುವದು. ಪಂ|| ಜವಾಹರಲಾಲರವರು ಸದ್ಯಕ್ಕೇ ಹಿಂದುಸ್ಥಾನಕ್ಕೆ ಬರಲಿದ್ದಾರೆಂದು ಅಲಹಾಬಾದದಲ್ಲಿ ಅವರಿಂದ ಒಂದು ಪತ್ರ ಬಂದಿದೆ.

— ಸೇಲಮದ ಬಳಿಯ ಸವರಸಾಯಿ ಬೆಟ್ಟದಲ್ಲಿ ಒಂದು ಹೆಬ್ಬಾವು ಒಂದು ಕಿರಬನ್ನು ಹಿಂಗಾಲಿನಿಂದ ಹಿಡಿದು ನುಂಗಿತು. ಮಧ್ಯರಾತ್ರಿ ಜನರು ಕಿರಬಿನ ಗರ್ಜನೆ ಕೇಳಿದರು. ಮುಂಜಾವಿಗೂ ಅದೇ ಪ್ರಕಾರ ಗರ್ಜನೆ ಕೇಳಬಂತು. ಅದರಿಂದ ಬೆಟ್ಟಕ್ಕೆ ಹೋಗಿ ನೋಡಿದರೆ ಕಿರಬನ್ನು ಹೆಬ್ಬಾವು ನುಂಗಿದೆ, ಸೊಂಟದಷ್ಟು ನುಂಗಿದೆ, ಮತ್ತೂ ನುಂಗುತ್ತಿದೆ! ಕಿರಬು ಪಾರಾಗಲು ಚಡಪಡಿಸುತ್ತಿದೆ! ಮುಂಗಾಲಿನಿಂದ ಹಾರಿ ಹಾರಿ ಅದು ೨ ಫೂಟು ಕುಳಿ ತೆಗೆಯಿತು; ಆದಾಗ್ಯೂ ಹೆಬ್ಬಾವಿನ ಬಾಯಿಯೊಳಗಿಂದ ಪಾರಾಗಲಾರದು! ಹಳ್ಳಿಗರು ದೂರದಿಂದಲೇ ಮಿಕಿ ಮಿಕಿ ನೋಡುತ್ತಿದ್ದರು! ನುಂಗುವವನನ್ನು ನುಂಗುತ್ತಿರುವ ನೋಟವಿದು! ಜಗತ್ಪಾಲಕನ ಲೀಲೆ! ಅಂತು ಮರುದಿನ ರಾತ್ರಿಯೊಳಗೆ ಇಡೀ ಕಿರಬು ಹೆಬ್ಬಾವಿಗೆ ತುತ್ತಾಯಿತು!!

— ಆಸಾಮದೊಳಗೆ ಕೊಂಗ್ರೆಸ ಪ್ರಧಾನ ಮಂಡಳ ಸ್ಥಾಪಿಸಲ್ಪಟ್ಟಿರುತ್ತದಷ್ಟೇ! ಅದನ್ನು ಕೆಡಹಬೇಕಾಗಿ ಮುಸ್ಲಿಮ್ ಲೀಗಿನವರು ಪ್ರಯತ್ನ ನಡಿಸುತ್ತಿದ್ದಾರೆ. ಯುರೋಪಿಯನ್ ಸಭಾಸದರೊಡನೆ ಗೆಳೆತನ ಬೆಳೆಸುತ್ತಿದ್ದಾರೆ. ಯುರೋಪಿಯನ್ನರು ಕೊಂಗ್ರೆಸ ವಿರೋಧಿಗಳಾಗಿ ವರ್ತಿಸುವದು ಸುರಕ್ಷಿತವಲ್ಲೆಂದು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ|| ಸುಭಾಸಚಂದ್ರ ಬೋಸರವರು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಸೋಮವಾರ ಯುರೋಪಿಯನ್ ಸಂಘದ ಸಭೆ ಶಿಲ್ಲಾಂಗದಲ್ಲಿ ಸೇರಿತ್ತು. ಇಬ್ಬ ಸಭಾಸದರು ರಾಷ್ಟ್ರೀಯ ಸಭೆಯನ್ನು ತೀವ್ರವಾಗಿ ನಿಷೇಧಿಸಿದರು. ಇದರಿಂದ ಒಬ್ಬ ಯುರೋಪಿಯನ್ ಸಭಾಸದರು ಸಂತಪ್ತರಾಗಿ ಸ್ನೇಹಭಾವ ಧೋರಣದಿಂದ ಯುರೋಪಿಯನ್ ಸಂಘದ ಕಾರಭಾರ ನಡೆದರೆ, ತಮ್ಮ ವ್ಯಾಪಾರ-ಸಂಬಂಧಗಳಿಗೆ ಬಾಧೆ ತಟ್ಟುವದೆಂದು ಅಭಿಪ್ರಾಯಪಟ್ಟರು. ಈ ಪ್ರಕಾರ ಟೀಕೆ ಮಾಡುವದು ಅಸಮರ್ಥನೀಯವೆಂದರು ಮತ್ತು ಸಂಘದ ಸಭಾಸದತ್ವಕ್ಕೆ ರಾಜಿನಾಮೆ ಕೊಟ್ಟರು!

— ಮುಂಬಯಿಯ ದಾವುದಿ ಬೋರಾ ಸಮಾಜದ ತಿಮಾಮರಾದ ಸಿದ್ನಾ ತಾಹಿರ ಸೈಫುದ್ದೀನರವರು ನಜಾಫದೊಳಗಿನ ಖಲೀಫ ಹಜರತ್ ಅಲಿ ಇವರ ಸಮಾಧಿಗಾಗಿ ಮುಂಬಯಿಯಲ್ಲಿ ಒಂದು ಗೋಪುರವನ್ನು ಕಟ್ಟಿಸಕೊಡಗಿದ್ದಾರೆ. ೬ ಲಕ್ಷ ತೊಲೆ ಬೆಳ್ಳಿ, ೨೦೦೦ ತೊಲೆ ಚಿನ್ನ ಈ ಗೋಪುರಕ್ಕೆ ಉಪಯೋಗಿಸಲ್ಪಡುವವು. ಈ ಕೆಲಸಕ್ಕಾಗಿ ನೂರಾರು ಮಂದಿ ಶಿಲ್ಪಿಗಳು ದುಡಿಯುತ್ತಿದ್ದಾರೆ. ಖಲೀಫ ಹಜರತ್ ಅಲಿಯವರು ಮಹಮ್ಮದ ಪೈಗಂಬರರ ಅಳಿಯಂದಿರು. ಅವರಿಗೆ ಕುಫಿಯಾದಲ್ಲಿ ಅಮಾನುಷವಾಗಿ ಕೊಲೆ ಮಾಡಲಾಗಿತ್ತು. ನಜಾಫದಲ್ಲಿ ಅವರ ಸಮಾಧಿಯಿದೆ. ಮುಸಲ್ಮಾನರಿಗೆ ಇದು ಪವಿತ್ರ ಕ್ಷೇತ್ರ. ಮಕ್ಕಾ ಕ್ಷೇತ್ರಕ್ಕಿಂತ ಕೊಂಚ ಕಡಿಮೆ ಮಹಿಮೆಯದು. ನಜಾಫ ಇದು ಮರುಭೂಮಿಯೊಳಗಿನ ಒಂದು ವಿಚಿತ್ರ ಪಟ್ಟಣ. ಭೂಪೃಷ್ಠದ ಮೇಲೆ ವಾಸ್ತವ್ಯವಿಲ್ಲ, ಎಲ್ಲೆಲ್ಲಿಯೂ ನೆಲಮನೆಗಳು; ಅವುಗಳಿಗೆ ಸಿಡಾರ್ ಎನ್ನುತ್ತಾರೆ. ದೊಡ್ಡ ದೊಡ್ಡ ಅಂತಸ್ತುಗಳುಳ್ಳ ನೆಲಮನೆಗಳವೆ. ಗಾಳಿ ಆಡುವದಕ್ಕಾಗಿ ಅಂತಸ್ತುಗಳಿಗೆ ಕಿಂಡಿಗಳು ಇಡಲ್ಪಟ್ಟಿವೆ. ಗೋಪುರದ ಕೆಲಸ ಇನ್ನೂ ೬ ತಿಂಗಳ ತನಕ ನಡೆಯುವದು.

— ನಾಗಪುರದ ಲಕ್ಷಾಧೀಶರಾದ ರಾವಬಹಾದ್ದೂರ ಲಕ್ಷ್ಮೀನಾರಾಯಣರವರು ತಮ್ಮ ೫೦ ಲಕ್ಷ ರೂಪಾಯಿಗಳ ಆಸ್ತಿಯನ್ನು ಹಿಂದು ಸಂಸ್ಕೃತಿಯ ಅಭ್ಯಾಸಕ್ಕಾಗಿ ನಾಗಪುರದ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ್ದಾರೆ.

— ಈ ಹೊತ್ತು ತುಲಾ ಸಂಕ್ರಮಣ: ರವಿಯು ತುಲಾರಾಶಿಯಲ್ಲಿ ಪ್ರವೇಶಿಸುತ್ತಾನೆ. ಈ ಮಾಸದಲ್ಲಿ ಕಾವೇರಿ ನದಿಯ ಸ್ನಾನ ಮಾಡಿದರೆ ಪರಮ ಪಾಪಿಯೂ ಕೂಡ ಪಾವನನಾಗಿ ಉದ್ಧಾರ ಹೊಂದುತ್ತಾನೆಂದು ಹಿಂದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಸತ್ಯಧೀರ ಹರಿಶ್ಚಂದ್ರ ಮಹಾರಾಜನು ಕಿಂತಮಹರ್ಷಿಯ ಶಾಪದಿಂದ ವಿಮೋಚನ ಹೊಂದುವದಕ್ಕಾಗಿ ನಾರದ ಮಹರ್ಷಿಗಳ ಸಲಹೆಯ ಮೇರೆಗೆ ತುಲಾ ಮಾಸದಲ್ಲಿ ಕಾವೇರಿ ನದಿಯೊಳಗೆ ಸ್ನಾನ ಮಾಡಿ ಪುನೀತ ಹೊಂದಿದ ಆಖ್ಯಾಯಿಕೆಯುಂಟು. ಈ ಮಾಸದಲ್ಲಿ ಕಾವೇರಿಯೊಳಗೆ ೧೪ ಲೋಕಗಳೊಳಗಿನ ೬೬ ಕೋಟಿ ತೀರ್ಥಗಳು ಬಂದು ಸೇರುತ್ತವೆಂದು ಧಾರ್ಮಿಕ ಹಿಂದುಗಳ ಭಾವನೆ. ತುಲಾ ಮಾಸದ ಇನ್ನೊಂದು ವಿಶೇಷವುಂಟು. ತುಲಾ ಮಾಸಕ್ಕೆ ೩೦ ದಿನಗಳು, ಆದರೆ ಕಾವೇರಿಯ ಸ್ನಾನಕ್ಕೆ ೩೧ನೇ ದಿನ, ಅಂದರೆ ವೃಶ್ಚಿಕ ಮಾಸದ ಮೊದಲನೇ ದಿನವೂ ಹೇಳಲ್ಪಟ್ಟಿದೆ. ಇದಕ್ಕೆ 'ಮುಡುವ ಮೋಕ್ಷ ದಿನ'ವೆನ್ನುತ್ತಾರೆ. ಮುದುಕ ಕುರುಡ ಹೆಳವನೊಬ್ಬನು ಕಾವೇರಿ ಕ್ಷೇತ್ರದ ಮಹಿಮೆ ಕೇಳಿ ಸ್ನಾನ ಮಾಡಹೊರಟನಂತೆ. ಮಾಯಾವರಮ್‌ಕ್ಕೆ ತಲ್ಪುವಷ್ಟರಲ್ಲಿ ತುಲಾ ಮಾಸ ಕಳೆದುಹೋಗಿತ್ತು, ಅದು ತುಲಾ ಮಾಸದ ಮರುದಿನ; ಆತನಿಗೆ ಬಹಳ ವ್ಯಥೆಯಾಯಿತು; ಆತನು ಕ್ಲಪ್ತ ಕಾಲದಲ್ಲಿ ಕ್ಷೇತ್ರಕ್ಕೆ ಬಂದು ತಲ್ಪದ ಬಗ್ಗೆ ಸಿಡಿಮಿಡಿಗೊಂಡು ಮಿಡುಕಿ ಕಾವೇರಿ ನದಿದಂಡೆಯ ಮೇಲೆ ಹೊರಳಾಡಿದನು. ದಯಾಘನನು ಪ್ರಸನ್ನನಾದನು! ತುಲಾ ಮಾಸದ ಕಾವೇರಿಸ್ನಾನ ಕಾಲವನ್ನು ಇನ್ನೊಂದು ದಿನ ಬೆಳೆಸಿರುವದಾಗಿಯೂ ಅಂದು ಸ್ನಾನಮಾಡಿ ಪುನೀತನಾಗಬಹುದಾಗಿಯೂ ಅನುಗ್ರಹಿಸಿದ ಮೇರೆಗೆ, ಇಂದಿಗೂ ಕಾವೇರಿ ಸ್ನಾನಕ್ಕೆ ೩೧ ದಿನಗಳ ತುಲಾ ಮಾಸ ನಡೆದುಬಂದಿದೆ. ೩೦ ದಿನಗಳ ತನಕ ಕಾರಣಾಂತರದಿಂದ ಸ್ನಾನ ಮಾಡಲಾಗದವರು ೩೧ನೇ ದಿನಕ್ಕೆ ತಂಡಗಟ್ಟಿ ಹೋಗಿ ಸ್ನಾನ ಮಾಡಿ ಪಾಪಕ್ಷಾಲನ ಮಾಡಿಕೊಳ್ಳುವ ರೂಢಿ ಬಿದ್ದಿದೆ.

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಿಜಿಸ್ಟರ್ಡ್) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋಮರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ. 3.

ಏತಕ್ಕೆ ಚಿಂತಿಸುವಿರಿ?

ಆಸೇತು ಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ವಿ. ಎನ್ ಶ್ರೀನಿವಾಸರಾವ್,
ಲಿವ್ಹರ್ ಸ್ಪೆಶಲಿಸ್ಟ,
ಎಂ ವಿ ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ.

ಸುಬ್ರಾಯ ಸೀತಾರಾಮ ಹೆಗ್ಡೆ, ಏಜಂಟ
ನಾರಾಯಣ ಶರ್ಮಾ ಗಣಪತಿ ಮನೆ,
ಲೋಕಮಾನ್ಯ ತಿಲಕ ವಾಚನ ಮಂದಿರ,
ಅಂಕೋಲಾ

ॐ

'दशमूलारिष्ट.'

ದಶಮೂಲಾರಿಷ್ಟ

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರಿಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ವಿಷಯವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಅಲ್ಲದೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನೂ, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಅಪರಿಮಿತ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ಪಾಂಡು,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ದೋಷ ಇದ್ದು ಮಕ್ಕಳಿಲ್ಲದೇ ಇರುವವರಿಗೂ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರದ ಸುಗಂಧ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ: — ಪ್ರಸೂತಿ ಆದ ನಂತರ (ಮಿಸ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ತಕ್ಕ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿಗೆ ರೂ ೧—೬—೦.
,, ಬಾಟ್ಲಿ ... ೦
,, ಬಾಟ್ಲಿ ... ೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಉಶೀರಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಅನೇಕ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ: —

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ:— ಕುಮಟಾ. (ಉ. ಕನ್ನಡ)

ಶ್ರೀ ಧೂತಪಾಪೇಶ್ವರ ಆಯುರ್ವೇದೀಯ ಔಷಧ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಳಂತಿತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ

ABHRALOHA

ದೊರೆಯುವ ಸ್ಥಳ— ಕಾರವಾರ ಮೊಹಿದೀನ ... ಕಸಬೇಕರ ಬ್ರದರ್ಸ. ಅಂಕೋಲಾ ... ಕುಮಟಾ ... ಅಮ್ಮನವರು ... ಕಲ್ಯಾಣಪುರ ಬ್ರದರ್ಸ.

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ.

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ... ಇದ್ದು, ... ಕಂಪನಿಯ ದರಗಳೂ, ಶರತ್ತುಗಳೂ ಬಹಳ ಸೋಯಿಯುಳ್ಳ ಇವೆ. ಕಂಪನಿಯು ... ಸರಕಾರಿ ... ಸೆಕ್ಯುರಿಟಿಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬದಾರಿಯ ... ಇಡಲ್ಪಟ್ಟಿವೆ.

ಮ್ಯೂಚುವಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros
K. N Nayak.
Honavar Agent -
R. V. Prabhu

K. PadmanabhaRao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಾಯಂ ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಗಿರಿ ಡಬ್ಬಿ ಕಳಿಸಲ್ಪಡದು.

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ಪ್ಲಾಸ್ಟಿಕ ಡಜನ್ ೧ಕ್ಕೆ ರೂ ೨-೮-೦. ವಿ. ಪಿ ೦-೮-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ.

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. Monday, 31st October, 1938.

ವರ್ಷ ೨೧

ಕಾನಡಾವೃತ್ತ

THE KANARA NEWS.

ಸಂಚಿಕೆ ೧೭

ಪತ್ರದ ವರ್ಗಣಿ.
ಕುಮುಟೆಯಲ್ಲಿ ಅಗಾವು ರೂಪಾಯಿ 2-4-0,
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಏಮ್ ಉದ್ದ) ೮ ಸಾಲುಗಳವರೆಗೆ ರೂ.1-0-0
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಗದ ಸಾಲು ಎಷ್ಟು ಹೆಚ್ಚಿರುವದೋ ಆ ಪ್ರಮಾಣ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ದ್ವಾರಾ ಸಮಕ್ಷ ತಿಳಿಸಲ್ಪಡುವದು.

-*(ಕುಮುಟಾ— ಕಾನಡಾವೃತ್ತ, ಸೋಮವಾರ, ತಾರೀಖು ೩೧ ನೇಹೆ ಅಕ್ಟೋಬರ ಸನ್ ೧೯೩೮ನೇ ಇಸವಿ.)*-

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital. In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd: 1906

RESOURCES
OVER A CRORE.

CANARA BANK,
LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:- { ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮುಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರ
ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938.

The Agricultural & Industrial Bank, Ltd.

ಜಾಹೀರ ನೋಟೀಸು.

ಕುಮಟಾ ಸಬಜಜ್ಜ ಕೋರ್ಟಿನಲ್ಲಿ
ಮುಕ್ಕಾಮು ಕುಮಟಾ ಇಲ್ಲಿ ಸಿ|| 25
ಮೂಲ ನಂ 87—1938

1 ಮೆ|| ತಿಮ್ಮಪ್ಪಾ } ವೈಕುಂಠ ಕಾಮತ ಸಾರಸ್ವತ ಜಾತಿ ವ್ಯಾಪಾರಿ } ವಾದಿರು
2. ಭಿಕ್ಕು } ಸದರು ಸಾ| ಕುಮಟಾ

ವ| ಮಿ| ಎಸ್ ಜಿ. ಶಾನಭಾಗ.

ವಿರುದ್ಧ

1 ದೇವಮ್ಮಾ ಕೋಂ ಪರಂಜಟ್ಟಿ
2 ಹೊನ್ನಮ್ಮಾ ಯಾನೆ ಹೂನ್ನಟ್ಟೆ ಕೋಂ ವಿಷ್ಣು ಭಟ್ಟ
3. ಮೆ ಗಣಪತಿ ನಾರಾಯಣ ಹೆಗಡೆ
4 ಮೆ ಕೃಷ್ಣಾ ಪರಂಜಟ್ಟಿ ಮಾಣೆಮನೆ } ಪ್ರತಿವಾದಿರು

ಹವೀಕ ಜಾತಿಯವರು, 1 2ನೇಯವರು ಮನೆವಾಳ ಧಂದೆಯವರು, 3-4ನೇಯವರು ವೈತಾಬಿ ಕಸಬಿನವರು ಎಲ್ಲರೂ ಕುಮಟಾ ತಾಲೂಕ ಮೂರೂರು ನಿವಾಸಿಕರು.

ಇದರ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ—

ಮೇಲೆ ಬರೆದ ವಾದೀರು ಅಸಲು ದಾವಾ ನಕ್ಕಲಿನಂತೆ ಸ್ವತಃದ ಹಾಗೂ 1-2ನೇ ಪ್ರತಿವಾದಿರ ಎಲ್ಲಾ ಪ್ರಾಮಾಣಿಕ ಧನಕೋ ಜನರ ತರ್ಫೆಸಿಂದ ಈ ನಂಬ್ರದ ಪ್ರತಿವಾದಿರ ಮೇಲೆ ಈ ಕೋರ್ಟ ಪರವಾನಗಿ ಪಡಕೊಂಡು ದಾವಾ ದಾಖಲ ಮಾಡಿರುತ್ತಾರೆ. ಮತ್ತು ಈ ದಾವೆಯು ಮುದ್ದೆಯನ್ನು ದರಾಯಿಸಲಿಕ್ಕೆ ತಾ 17 ಮಾಹೆ ನವಂಬರ ಸನ್ 1938ನೇಗೆ ಇಟ್ಟಿರುತ್ತದೆ ಕಾರಣ ಈ ದಾವಾದಲ್ಲಿ ಯಾರಾದರೂ ತಕ್ರಾರು ಹಾಕುವವರಿದ್ದರೆ ಯಾ ತಮ್ಮನ್ನು ಸಹ ಪಕ್ಷಗಾರನಾಗಿ ಮಾಡಿ ದಾವಾ ಮುಂದರಿಸಬೇಕಾಗಿ ಹೇಳಿ ಕೊಳ್ಳುವವರಿದ್ದಲ್ಲಿ ತಾ 17 11 38ನೇ ದಿನ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟ ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಇಲಾಜು ನಡಿಸಕೊಳ್ಳತಕ್ಕದ್ದು ಹೀಗೆ ಮಾಡಲಿಕ್ಕೆ ನೀವು ತಪ್ಪಿದರೆ ಕೋರ್ಟಿಗೆ ಯುಕ್ತ ಕಂಡ ಹುಕುಂ ಮಾಡಲ್ಪಡುವದು.

ಇದನ್ನು ಈ ಹೊತ್ತು ತಾರೀಖು 28 ಮಾಹೆ ಅಕ್ಟೋಬರ 1938ನೇ ದಿನ ನನ್ನ ಸಹಿ ಮಾಡಿ ಮತ್ತು ಕೋರ್ಟಿನ ಮೊಹರು ಮಾಡಿ ಕೊಡಲ್ಪಟ್ಟಿತು.

(ಕೋರ್ಟಿನ ಮೊಹರು)

R. N. Phenani,
Clerk of the Court

ಕುಮಟಾ ಸಬಜಜ್ಜ ಕೋರ್ಟಿನಲ್ಲಿ
ಮೂಲ ನಂಬರ 87—1938.

೧ ಮೆಸೇಜರ ತಿಮ್ಮಪ್ಪಾ, ಪ್ರಾಯ ೪೦ } ವೈಕುಂಠ ಕಾಮತ, ಇಬ್ಬರೂ ಗೌಡ ಸಾರಸ್ವತ ಜಾತಿಯವರು, ವೃತ್ತ ವ್ಯಾಪಾರಿರು. ಸಾಕೀನ ಕುಮಟಾ ತಾಲೂಕ ಕುಮಟಾ ನಿವಾಸಿಕರು, ಇವರು ಸ್ವಂತದ ಬಗ್ಗೆ ೧-೨ನೇ ಪ್ರತಿವಾದಿರ ಪ್ರಾಮಾಣಿಕ ಧನಕೋ ಜನರ ಬಗ್ಗೆ } ವಾದಿರು
೨ ಭಿಕ್ಕು ಪ್ರಾಯ ೩೪ }

ವಿರುದ್ಧ

೧. ದೇವಮ್ಮಾ ಕೋಂ ಪರಂಜಟ್ಟಿ ಪ್ರಾಯ ೬೫
೨ ಹೊನ್ನಮ್ಮಾ ಯಾನೆ ಹೊನ್ನಟ್ಟಿ ಕೋಂ ವಿಷ್ಣು ಭಟ್ಟ, ಪ್ರಾಯ ೬೦,
೩. ಮೆ|| ಗಣಪತಿ ನಾರಾಯಣ ಹೆಗಡೆ ಪ್ರಾಯ ೪೫
೪. ಮೆ|| ಕೃಷ್ಣಾ ಪರಂಜಟ್ಟಿ ಮಾಣೆಮನೆ, ಪ್ರಾಯ ೪೧, } ಪ್ರತಿವಾದಿರು
ಎಲ್ಲವರೂ ಹವೀಕ ಜಾತಿಯವರು ೧-೨ನೇಯವರು ಮನೆವಾಳ ಧಂದೆಯವರು, ೩ ೪ನೇಯವರು ವೈತಾಬಿ ಕಸಬಿನವರು, ಕುಮಟಾ ತಾಲೂಕ ಮೂರೂರು ನಿವಾಸಿಕರು

ದಾವಾ ರೂಪಾಯಿ ಕೋರ್ಟ ಫಿ ಬಗ್ಗೆ ರೂಪಾಯಿ ೫—೦—೦
ಕೋರ್ಟ ಅಧಿಕಾರ ಹಾಗೂ ವಕೀಲ ಫೀಗಳ ಬಗ್ಗೆ ರೂಪಾಯಿ ೨೫೦—೦—೦

ವಾದಿರು ತಿಳಿಸುವ ವಿವರ —

೧ ಕುಮಟೆಯಲ್ಲಿ ವಾದಿರು ವ್ಯಾಪಾರ ಮಾಡುವ ಅಂಗಡಿಯಲ್ಲಿ ಸಹೋದರಿಯರಾದ ೧ ೨ನೇ ಪ್ರತಿವಾದಿರು, ತಮ್ಮ ಮನೆವಾಳ ಧಂದೆಯ ಅನುಕೂಲತೆಯ ಬಗ್ಗೆ ವೈದ ಸಾಮಾನುಗಳ ಬಾಬ್ತು ವಾದಿರಿಗೆ ಸಲ್ಲತಕ್ಕ ಹಣದ ಬಗ್ಗೆ ವಾದಿರು ಈ ಕೋರ್ಟಿನಲ್ಲಿ ಮೂಲ ನಂಬರ ೧೩೭—೧೯೩೭ನೇಗೆ ದಾವೆ ದಾಖಲ ಮಾಡಿ ಡಿಕ್ರಿ ಪಡಕೊಂಡಿರುತ್ತಾರೆ. ಸದರ ಡಿಕ್ರಿ ಹಣ ಬಾಕಿಯಲ್ಲಿರುತ್ತದೆ

೨. ೧-೨ನೇ ಪ್ರತಿವಾದಿರು ಒಳಸಂಚಿನಿಂದ ವಾದಿಗೂ ಪ್ರಾಮಾಣಿಕ ಧನಕೋರರಿಗೂ, ವಂಚಿಸುವ ಇರಾದೆಯಿಂದ ಈ ಕೆಳಗೆ ಕಾಣಿಸಿದ ೧ನೇ ಪ್ರತಿವಾದಿಯ ಬಾಬ್ತು ಸರ್ವಾದಿ ಆಸ್ತಿಯನ್ನು ಆಪ್ತಿಕರಾದ ೩-೪ನೇ ಪ್ರತಿವಾದಿರ ಹೆಸರಲ್ಲಿ ಅನುಕ್ರಮವಾಗಿ ತಾ ೨೧-೩-೧೯೩೮ ನೇಗೂ, ತಾ ೨೩-೩-೩೮ ನೇಗೂ, ಬಿನ್‌ಮುಬಾದ್ಲೆಯಿಂದ ಕ್ರಯ ದಸ್ತುಗಳನ್ನು ಮಾಡಿಟ್ಟಿರುತ್ತಾರೆ. ೩—೪ನೇ ಪ್ರತಿವಾದಿರಿಗೆ ಏನೊಂದೂ ಹಕ್ಕು ಈ ದಸ್ತೈವಜುಗಳಿಂದ ಪ್ರಾಪ್ತವಾಗಲಿಲ್ಲ. ಸದರ ಆಸ್ತಿಗಳ ಭೋಗವಟೆ ೧ನೇ ಪ್ರತಿವಾದಿಯದೇ ಇರುತ್ತದೆ.

೩. ಕಾರಣ ಸದರ ಎರಡು ದಸ್ತೈವಜುಗಳು ಧನಕೋ ಜನರಿಗೆ ವಂಚಿಸುವ ಇರಾದೆಯಿಂದ ಮಾಡಿಟ್ಟಿದ್ದವೆಂತಲೂ, ಅವುಗಳಿಂದ ಸದರ ೩-೪ನೇ ಪ್ರತಿವಾದಿರಿಗೆ ಏನೊಂದೂ ಹಕ್ಕು ಪ್ರಾಪ್ತವಾಗಲಿಲ್ಲವಾಗಿಯೂ, ವಾದಿರು ಪಡೆದ ಈ ಕೋರ್ಟ ಮೂಲ ನಂಬರು ೧೩೭-೧೯೩೭ನೇ ಡಿಕ್ರಿಯ ಅಮಲಬಜಾವಣೆಯ ವಿರುದ್ಧ ನಿರರ್ಥಕವೆಂತಲೂ, ಜಪ್ತಿ-ಲಿಲಾಂವಿಗೆ ಪಾತ್ರವಾದವುಗಳೆಂತಲೂ ಡಿಕ್ಲೇರೇಶನ್ ಪಡಕೊಳ್ಳಲಿಕ್ಕೆ ವಾದಿರು ಟಿ ಪಿ ಎಕ್ಟ ಕಲಂ 53 ನೇದರನ್ವಯ ಈ ದಾವೆ ಮಾಡುತ್ತಾರೆ

೪. ದಾವಾ ಹೇತುವು ವಾದಿರಿಗೆ ವಂಚನೆ ಸಂಗತಿ ತಿಳಿದ ಸನ್ ೧೯೩೭ನೇ ಇಸ್ವಿ ನವಂಬರ ತಿಂಗಳಲ್ಲಿ ಈ ಕೋರ್ಟ ಸರಹದ್ದಿನ ಮೂರೂರ ಗ್ರಾಮದಲ್ಲಿ ಉಂಟಾಯಿತು.

೫. ದಾವಾ ವಿಚಾರದ ಅಧಿಕಾರ ಈ ಕೋರ್ಟಿಗೆ ಅದೆ

೬ ದಾವಾ ಆಕಾರ ಕೋರ್ಟ ಫೀ ಬಗ್ಗೆ ರೂಪಾಯಿ ೫—೦—೦, ಕೋರ್ಟ ಅಧಿಕಾರ ಹಾಗೂ ವಕೀಲ ಫೀಗಳ ಬಗ್ಗೆ ರೂ. ೨೫೦-೦ ೦ ಇರುತ್ತದೆ

೭ ಕಾರಣ ಅರ್ಜಿ ಅದೆಲ್ಲಾ —

(ಅ) 3ನೇ ಪ್ರತಿವಾದಿಯು ತಾರೀಖು ೨೧-೩-೧೯೩೮ನೇಗೆ A ಪರಿಶಿಷ್ಟದಲ್ಲಿ ಕಾಣಿಸಿದ ಆಸ್ತಿ ಬಾಬ್ತು, ಮತ್ತು ೪ನೇ ಪ್ರತಿವಾದಿಯು ತಾರೀಖು ೨೩-೩-೧೯೩೮ನೇಗೆ B ಪರಿಶಿಷ್ಟದಲ್ಲಿ ಕಾಣಿಸಿದ ಆಸ್ತಿ ಬಾಬ್ತು ೧ನೇ ಪ್ರತಿವಾದಿಯಿಂದ ಪಡಕೊಂಡ ಕ್ರಯದಸ್ತುಗಳು ವಾದಿರು ಪಡಕೊಂಡ ಈ ಕೋರ್ಟ ಮೂಲ ನಂಬರ ೧೩೭ ೧೯೩೭ನೇ ಡಿಕ್ರಿ ಅಮಲಬಜಾವಣೆ ಮಾಡುವಲ್ಲಿಯೂ, ೧ನೇ ಪ್ರತಿವಾದಿಯ ಪ್ರಾಮಾಣಿಕ ಧನಕೋ ಜನರು ನಡಿಸಬಹುದಾದ ಇಲಾಜಿನ ಬಗ್ಗೆ ನಿರರ್ಥಕವೆಂತಲೂ, ವಂಚನೆಯವೆಂತಲೂ ಡಿಕ್ಲೇರೇಶನ್ ಮಾಡಿ ವಾದಿರ ಡಿಕ್ರಿ ನಂಬರ ೧೩೭-೧೯೩೭ನೇಗೆ ಆಸ್ತಿ ಜಪ್ತಿ-ಲಿಲಾಂವಿಗೆ ಪಾತ್ರವೆಂತ ಕೋರ್ಟಿನಿಂದ ಇತ್ಯರ್ಥವಾಗಬೇಕು ಈ ಬಗ್ಗೆ ಆಕಾರ } ೫-೦-೦
ರೂಪಾಯಿ. [ಕೋರ್ಟ ಅಧಿಕಾರದ ಬಗ್ಗೆ ಆಸ್ತಿ ಕ್ರಯ ರೂಪಾಯಿ ೨೫೦ ೦-೦]

(ಬ) ಈ ದಾವೆಯ ವೆಚ್ಚ ಕೊಡಿಸಬೇಕು.

(ಕ) ಕೋರ್ಟಿಗೆ ಯುಕ್ತ ಕಂಡ ಇತರೆ ನ್ಯಾಯಾಶ್ರಯ ಕೊಡಿಸಬೇಕು

ಆಸ್ತಿಯ ವರ್ಣನೆ.

A ಪರಿಶಿಷ್ಟ

ಕುಮಟಾ ತಾಲೂಕ ಮೂರೂರು ಗ್ರಾಮದ ಬಾಬ್ತು:-

ಸೇ.ಜ ನಂಬರ.	ಸರ್ವೇ ನಂಬರ	ಹಿಸ್ಸಾ.	ಕ್ಷೇತ್ರ.	ಆಕಾರ.
೧	೨೩೬	೬	೦-೭-೮	೧ ೧-೦
೨	೨೩೬	೭ಪೈ	೦-೩-೧೨	೦-೮-೬
೩	೨೯೩	೮	೦-೭-೦	೧-೮-೦
೪	೩೬೪	೨	೦-೫-೮	೧-೮-೦
೫	೩೬೭	೨	೦-೧೧-೦	೨-೪-೦
೬	೩೬೭	೪	೦-೩-೧೦	೦-೫-೩
೭	೩೬೭	೫	೦-೧-೧೨	೦-೪-೬
೮	೩೬೭	೬	೦-೧-೮	೦-೦-೬
೯	೩೬೪	೨	೦ ೧೫-೦	೩-೦-೦
೧೦	೩೭೫	೪	೦-೨-೧೪	೦-೧೪-೦
೧೧	೩೮೫	೧	೦-೯-೦	೦-೧೦-೦
೧೨	೩೮೫	೩	೦-೧-೨	೦-೪-೬
೧೩	೩೯೬	೧	೦-೧೫-೦	೦-೯-೦
೧೪	೩೯೯	೦	೦-೩೯-೦ ಖ ೦-೧-೦	೦-೩-೬
೧೫	೨೯೧	೯	೦-೭-೦ ಖ ೦-೧-೦	೦-೦-೬
೧೬	೫೬೪ ಪೈಕಿ		೦-೬-೦	೦-೦-೬
೧೭	೫೬೫ ಪೈಕಿ		೦-೧೨-೪	೦-೦-೭

ಚಿವಶರ್ಫ ಸರ್ವೇ ಬಾಂದಕಲ್ಲು ಗಡಿಗಳೊಳಗಿನ ಆಸ್ತಿ ವ ಇದಕ್ಕೆ ಒಪ್ಪಿದ ನೀರು, ದಾರಿ, ಬೆಟ್ಟ-ಬೇಣ ವಗೈರೆ ಯಾವತ್ತೂ ಹಕ್ಕುಗಳು.

B ಪರಿಶಿಷ್ಟ.

ಕುಮಟಾ ತಾಲೂಕ ಮೂರೂರು ಗ್ರಾಮದ ಬಾಬ್ತು:—

ಮಾಳ್ಕಿ ಬಾಬ್ತು ವ ಮೂಲಗೇಣಿ ಬಾಬ್ತು.

ಸೇಜ ನಂಬರ	ಸರ್ವೇ ನಂಬರ.	ಹಿಸ್ಸಾ	ಕ್ಷೇತ್ರ	ಆಕಾರ
೧	೪೪೯	೫	೦—೧—೨ ಖ ೦—೦—೬	೦—೫—೬ ಮಾಳ್ಕಿ.
೨	೪೪೯	೧೨	೦-೧೫—೪	೪—೯—೦ ಮೂಲಗೇಣಿ
೩	೪೫೦	೨ ೩-೪	೦—೨೯—೮	೦—೧೫—೦ ಮಾಳ್ಕಿ.
೪	೪೪೮	೩ ಪೈಕಿ	೦—೧—೮	೦—೧—೦ ಮೂಲಗೇಣಿ.
೫	೬೬	೫ ಅ, ೫ ಬ	೦-೧೩—೦	೧—೬—೦ ಮಾಳ್ಕಿ.
೬	೪೪೯	೬	೦—೫—೦ ಖ ೦—೧—೦	೧—೮—೦ ಮೂಲಗೇಣಿ
೭	೪೪೯	೭	೦—೨—೮	೦-೧೦—೦ ಮೂಲಗೇಣಿ
೮	೪೪೯	೧೩-೧೪	೦—೧—೬	೦—೪—೬ ಡಿ.
೯	೪೪೯	೧೫-೧೬-೧೭ ೧೮	೦—೨—೨	೦—೭—೯ ಡಿ
೧೦	೪೫೬	೨ ಪೈಕಿ	೦—೦—೩	೦—೦—೬ ಮಾಳ್ಕಿ.
೧೧	೬೭೭ ಪೈಕಿ		೦—೫—೦	೦—೦—೬ ಡಿ.
೧೨	೫೨೧ ಪೈಕಿ		೧-೧೫—೮	೨—೦—೦ ಮೂಲಗೇಣಿ.
೧೩	೫೨೫ ಪೈಕಿ		೧-೩೫—೦	೫—೧—೬ ಡಿ.
೧೪	೨೪೭	೨ ಅ.	೦—೩—೦	೦—೬—೦ } ಪೈಕಿ ೩
೧೫	೨೪೭	೨ ಬ.	೦-೧೩—೮	೧-೧೨—೦ } ಮೂಲಗೇಣಿ.
೧೬	೪೨೨	೨ ಪೈಕಿ	೦-೧೭-೧೪ ಖ ೦—೩-೧೪	೨—೭—೩ ಪೈಕಿ ೩ ಮಾಳ್ಕಿ.
೧೭	೪೬೯ ಪೈಕಿ		೦—೦—೯	೦—೨—೦ } ಪತ್ರೆರ್-
೧೮	೪೭೦ ಪೈಕಿ		೦—೩-೧೦	೦—೨—೩ } ಗೇಣಿದಾರ.

ಚಿವಶರ್ಫ ಸರ್ವೇ ಬಾಂದಕಲ್ಲು ಗಡಿಗಳೊಳಗಿನ ಆಸ್ತಿ ವ ಇದಕ್ಕೊಪ್ಪಿದ ನೀರು, ದಾರಿ, ಬೆಟ್ಟ-ಬೇಣ ವಗೈರೆ ಯಾವತ್ತೂ ಹಕ್ಕುಗಳು. ತಾರೀಕು ೧೩—೪—೧೯೩೮

(ಸಹಿ) ತಿಮ್ಮಪ್ಪಾ ವೈಕುಂಠ ಕಾಮತ

(ಸಹಿ) ಭಿಕ್ಕು ವೈಕುಂಠ ಕಾಮತ.

I drafted.

N. G. Shanbhag,
Pleader.

ನಾವು ವಾದಿ ೧ ತಿಮ್ಮಪ್ಪಾ, ೨ ಭಿಕ್ಕು ವೈಕುಂಠ ಕಾಮತ ಎಂಬವರು ಈ ಕರಾರು ಮಾಡುತ್ತೇವಲ್ಲಾ- ಇದರಲ್ಲಿ ಬರೆದ ಎಲ್ಲಾ ಮಜಕೂರು ನಮ್ಮ ಸ್ವಂತ ಮಾಹಿತಿಯಂತೆ ಬರೆದದ್ದು ಇದ್ದು ಅದು ನಿಜವಿರುತ್ತದೆಂದು ಇದರ ಮೂಲಕ ದೃಢವಾಗಿ ಹೇಳುತ್ತೇವೆ ತಾರೀಖು ಸದರ ಕುಮಟಾ.

(ಸಹಿ) ತಿಮ್ಮಪ್ಪಾ ವೈಕುಂಠ ಕಾಮತ.

ದಾ ತಾ ೨೮—೧೦—೩೮. (ಸಹಿ) ಭಿಕ್ಕು ವೈಕುಂಠ ಕಾಮತ

N. G. Shanbhag,
Pleader.

ದಾ ತಾ. 28—10—38.

R. N. Phenani,
Clerk of the Court.

ವಾರ್ತೆಗಳು.

— ರಜೆ ಕೊಂಡು ಸ್ವದೇಶಕ್ಕೆ ಹೋದ ಸರ್ವಾಧಿಪತಿಗಳಾದ ಲಿನ್‌ಲಿಥ್‌ಗೋ ದೊರೆಗಳು ಸೋಮವಾರ ಮುಂಬಯಿಯಲ್ಲಿ ಬಂದಿಳಿದರು. ಗವ್ಹರ್ನರರಾದ ಸರ್ ರೋಜರ ಲುಮ್ಲೇಯವರೊಡನೆ ಮಧ್ಯಾಹ್ನದ ಭೋಜನವನ್ನು ತೀರಿಸಿಕೊಂಡು ಅಪರಾಹ್ನ ೩ ಘಂಟೆಗೆ ದಿಲ್ಲಿಗೆ ತೆರಳಿದರು. ಬದಲಿ ಸರ್ವಾಧಿಪತಿಗಳಾದ, ಬಂಗಾಲದ ಗವ್ಹರ್ನರರಾದ ಬ್ರೆಬರ್ನ ದೊರೆಗಳು ದಿಲ್ಲಿಯಿಂದ ಅದೇ ದಿನ ಸಾಯಂಕಾಲ ಕಲಕತ್ತೆಗೆ ಹೊರಟು ಹೋದರು. ಸರ್ವಾಧಿಪತಿಗಳು ಲೋಕಪ್ರಮುಖರೊಡನೆ ವಿಚಾರವಿನಿಮಯ ಮಾಡಿ ಸಕಲರಿಗೂ ಸಮಾಧಾನವಾಗುವಂತೆ ಸಂಯುಕ್ತರಾಜ್ಯ ಘಟನೆಯನ್ನು ಸಂಘಟಿಸುವರೆಂದು ಸುದ್ದಿಗಾರರು ತಿಳಿಯುತ್ತಾರೆ. ಸಂಸ್ಥಾನಿಕ ಪ್ರಮುಖರೊಡನೆ ದೊರೆಗಳು ಆಲೋಚನೆ ಮಾಡಿ ಅವರಿಗೂ ಸಮಾಧಾನಪಡಿಸಿ ಸಂಯುಕ್ತ ಘಟನೆಯಲ್ಲಿ ಸೇರಿಸಿಕೊಳ್ಳುವರಾಗಿ ಪ್ರಕಟವಾಗಿದೆ. ಸಂಸ್ಥಾನಿಕರಿಗೂ, ಸಾರ್ವಭೌಮ ಸರಕಾರಕ್ಕೂ ಇರುವ ಕರಾರುಗಳಲ್ಲಿ ಯುಕ್ತ ಕಂಡ ತಿದ್ದುಪಾಟಗಳಾಗುವವಾಗಿಯೂ ಹೇಳುತ್ತಾರೆ. ಸರ್ವಾಧಿಪತಿಗಳು ಸಂಸ್ಥಾನಿಕರ ಅಂತರಂಗವನ್ನು ತಿಳಕೊಳ್ಳುವದಕ್ಕಾಗಿ ದಕ್ಷಿಣ ಹಿಂದುಸ್ಥಾನದ ಸಂಚಾರವನ್ನು ಕೈಕೊಳ್ಳಲಿದ್ದಾರೆ. ತ್ರಾವಣಕೋರ ಮೊದಲಾದ ಸಂಸ್ಥಾನಗಳಲ್ಲಿಯೂ ಸರ್ವಾಧಿಪತಿಗಳು ಸಂಚರಿಸಿ ಆದರಾತಿಥ್ಯವನ್ನು ಸ್ವೀಕರಿಸುವರು. ಬ್ರಿಟಿಶ ಪ್ರಧಾನ ಮಂಡಳದ ಸೂತ್ರಚಾಲಕರಲ್ಲೊಬ್ಬರಾದ ಲೋಥಿಯನ್ ದೊರೆಗಳು ವಿಮಾನ ಮಾರ್ಗವಾಗಿ ಸಿಂಗಾಪುರಕ್ಕೆ ಬಂದಿದ್ದರು. ಅಲ್ಲಿಂದ ಸೋಮವಾರ ಕಲಕತ್ತೆಗೆ ಬಂದಿಳಿದರು ಕಾರ್ಯಕ್ರಮದಂತೆ ಅವರು ರಂಗೂನದಲ್ಲಿ ಉಳಿಯಬೇಕಾಗಿತ್ತು; ಆದರೆ ಥಟ್ಟನೆ ಕಾರ್ಯಕ್ರಮ ಬದಲಿಸಿ ಕಲಕತ್ತೆಯಲ್ಲಿಳಿದು ಅಲ್ಲೇ ಉಳಿದರು. ಮರುದಿನ ಬೆಳಿಗ್ಗೆ ಕರಾಚಿಗೆ ಹೊರಟರು. ಅಲ್ಲಿಂದ ಲಂಡನಿಗೆ ತೆರಳುತ್ತಾರೆ ನಾಳೆ ಪಾರ್ಲಿಮೆಂಟಿನ ಸಭೆಯುಂಟು ಆ ಕಾಲದಲ್ಲಿ ಅವರು ಲಂಡನಿನಲ್ಲಿ ಇರಬೇಕಾದ್ದರಿಂದ ವಿಮಾನ ಮಾರ್ಗವಾಗಿ ಲಗಬಗೆಯಿಂದ ಉಡ್ಡಾಣ ಮಾಡಿದರೆಂದು ಹೇಳುತ್ತಾರೆ. " ಹಿಂದುಸ್ಥಾನ ಸರಕಾರದ ಕಾನೂನಿನಲ್ಲಿ ತಿದ್ದುಪಡಿಯಾಗುವ ಕಾರಣವುಂಟೆಂದು ನಾನು ತಿಳಿಯುವದಿಲ್ಲ" ಹೀಗೆ ದೊರೆಗಳು ಕಲಕತ್ತೆಯೊಳಗಿನ ಪತ್ರಿಕಾ-ಪ್ರತಿನಿಧಿಗಳ ಬಳಿ ಉದ್ಗರಿಸಿದರು ! ಸದ್ಯಕ್ಕೆ ಲೋಥಿಯನ್ ದೊರೆಗಳ ಅಭಿಪ್ರಾಯವೇ ಬ್ರಿಟಿಶ ಸರಕಾರದ ಅಭಿಪ್ರಾಯವಾಗಿದೆ ಹಿಂದುಸ್ಥಾನ ಸರಕಾರದ ಕಾನೂನಿನಲ್ಲಿ ಪ್ರತ್ಯಕ್ಷವಾಗಿ ತಿದ್ದುಪಡಿಗಳಾಗುವ ಸಂಭವವಿಲ್ಲ. ಕಾಯಿದೆಯ ಕಲ್ಮಗಳನ್ನು ಇದ್ದಕ್ಕಿದ್ದ ಹಾಗೆ ಇಟ್ಟು ಲೋಕ-ಪ್ರಮುಖರಿಗೆ ಸಮಾಧಾನವಾಗುವಂತೆ ಕೃತಿಯಲ್ಲಿಯೂ ಮೋರಣದಲ್ಲಿಯೂ ತಿದ್ದುಪಡಿಗಳನ್ನು ಮಾಡಿತರುವ ವಿಚಾರ ನಡೆದಿರಬೇಕೆಂದು ಸುದ್ದಿಗಾರರು ತರ್ಕಿಸುತ್ತಾರೆ

— ಮಹಾತ್ಮರು ಗಡಿನಾಡಿನಲ್ಲಿ ಸಂಚರಿಸುತ್ತಿದ್ದಾರೆ. ಮಹಾತ್ಮರಿಗೆ ಸಂಪೂರ್ಣ ವಿಶ್ರಾಂತಿ ಸಿಗಬೇಕೆಂದು ಖಾನ ಅಬ್ದುಲ್ಲ ಗಫೂರಖಾನರವರೂ ಅಲ್ಲಿಂದಿಂದ ಮುಖ್ಯ ಪ್ರಧಾನ ಡಾ|| ಖಾನಸಾಹೇಬರವರೂ ಏ

(೧೦ನೇ ಪಾನದ ಮೇಲೆ ಮುಂದರಿಸಿದೆ)

ಪತ್ರಕರ್ತರ ಸುತಿಗಸ್ನತಿ.

೧ ಸೂರತ ಜಿಲ್ಲೆಯ ಸರದಾರ ಗರಡಾ ದರ [illegible] ಸದ್ಬುದ್ಧಿ ತಿಳಿಸಲಿಕ್ಕೆ ತೀರಲು ನಮಗೆ ತುಂಬ ಸಂತೋಷ. ಸತ್ಯಾಗ್ರಹದ ಕಾಲದಲ್ಲಿ ಜಪ್ತು ಮಾಡಿದ ಭೂಮಿಗಳನ್ನು ನೂತನ ಕಾನೂನಿನಂತೆ ಅವರ [illegible] ರಿಗೆ ಒಪ್ಪಿಸಲು [illegible] ಗಿದೆ. ಬೂತಂದ [illegible] ದ [illegible] ಯಿದ ವರ ಕಷ ಅವರು ಒರಕೊಟ್ಟ ಒಪ್ಪಿಗೆ ಪತ್ರ ಪ್ರಕಟವಾಗಿದೆ. ಸರದಾರ ವಲ್ಲಭಭಾಯಿ [illegible] ಸರದಾರ ಗರಡಾ ದರವರ ಅಂಬೋಣದಂತೆ ಸರಕಾರವು ಜಪ್ತಾದ ಹೊಲಗಳನ್ನು ಕೊಂಡುಕೊಳ್ಳ ಬೇಕಾಗಿ ಸಲಹೆ ಕೊಟ್ಟಿದ್ದರೆ ಸರದಾರ ಗರಡಾ ದರವರು ಜಪ್ತಾದ ಹೊಲಗಳ ಸಾಗುವಳಿಯ ಬಗ್ಗೆ ಪರಿಶ್ರಮಿಸುತ್ತಿರುವ ಕೆಲವು ಹೊಲಗಳನ್ನು ಕೊಂಡುಕೊಂಡಿದ್ದರು. ಅವು ಒಕ್ಕಲಿಗರಿಗೆ ಪರಸ್ಪರದಿಂದ ಕಂಡಿಕ್ಕಿದ್ದರು. ಆ ಭೂಮಿಯನ್ನು ಖರ್ಚು ಮಾಡಿದ ಹಣವನ್ನು ತಮಗೆ ಕೊಡಬೇಕಾಗಿ ಅವರ ಸರಕಾರಕ್ಕೆ ವಿನಂತಿ ಮಾಡಿಕೊಂಡಿದ್ದರೆ ಕಾನೂನಿನಂತೆ ಈ ಆಸ್ತಿಯನ್ನು ಕೊಂಡುಕೊಳ್ಳಲು ಸರಕಾರವು ಒಪ್ಪಬೇಕೋ ತಿಳಿಯದು. ಆದರೆ, ಸರಕಾರವು ಈ ಆಸ್ತಿಯನ್ನು ಸಹ ಕೊಂಡುಕೊಳ್ಳುವದು ರೀತಿಯೆಂದ ಯಾರೂ ಹೇಳತಕ್ಕಂಥ ಮಾತು. ಮತ್ತು ಮುಂಬಯಿ ಸರಕಾರವು ಇದಕ್ಕೆ ಒಪ್ಪಿ ಸರದಾರ ಗರಡಾ ದರವರ ಆಸ್ತಿಯನ್ನ ಕೊಂಡುಕೊಳ್ಳುವದಾಗಿನ ವೃತ್ತಿಯು [illegible] ಸರದಾರ ಗರಡಾ ದರವರು ಲಿಲಾಂವಿನಲ್ಲಿ ಆಸ್ತಿ ಕೊಂಡದ್ದ ರೂ ೪೫ ೦ಕ್ಕೆ ಹೊಸ ಕಾನೂನಿನ ಪ್ರಮಾಣದಲ್ಲಿ ಸರಕಾರವು ಈ ಆಸ್ತಿ ಹಿಂತಿರುಗಿ ಬೇಕಾದ ಗರಡ ೩॥ ಲಕ್ಷ ಕ್ರಯ ಕೊಡಬೇಕೆಂದು ಇವರು ಹೇಳಿದ್ದರು. ಈಗ ಜಪ್ತಾದ ಹೊಲಗಳಿಗೂ ಆವಾಗಲೆ ಕೊಂಡ ಆಸ್ತಿಗೂ ಕೂಡಿ ರೂ. ೭-೮ ಸಾವಿರ ಸರಕಾರವು ತೆರಬೇಕಾದೀತು. ರೀತಿಯಂತೆ ಪಕ್ಷಕ್ಕೆ ರಕಮನ್ನು ಕೊಂಡು ಕೊಂಡ ಸರದಾರ ಗರಡಾ ದರವರು ಕಾಯಿದೆಯ ಬತ್ತಾಯ ಕ್ರಮವನ್ನು ನೃಕಾರ್ಯದ ಪ್ರಸಂಗ ತಪ್ಪಿಸಿಕೊಂಡ ಬಗ್ಗೆ ಸರದಾರ ಗರಡಾ ದರವರು ಅಭಿನಂದನಾರ್ಹರು. ನಮ್ಮಲ್ಲಿಯೂ ಪಿ | ಬ ಸಯ್ಯದ ಇದ್ರೂಸರವರೂ, ಖಾ| ಸಾ| ಬಹದ್ದೂರ ಸರವರೂ ಈ ಉದಾಹರಣೆಯಿಂದ ಬೋಧ ಪಡೆದು ತಾವು ಕೊಂಡ ಭೂಮಿಗಳನ್ನ ಸರಕಾರಕ್ಕೆ ತಾವಾಗಿ ಒಪ್ಪಿಸುವದು ಪ್ರಶಸ್ತ, ಸಭ್ಯತೆಯೆಂದು ಹೇಳಿದರೂ ಹೇಳಬಹುದು

---

೨ ಈ ಸಮಯ ನಮ್ಮಲ್ಲಿಯ ಪ್ರಾಂತಸಾಹೇಬರಾದ ರಾ| ವೆಂಕಟಕೃಷ್ಣಯ್ಯನವರಿಗೂ ರಾ|| ಕೊಯಿಮತ್ತೂರರವರಿಗೂ ವರ್ಗವಾದದ್ದು ಕೊಂಚ ಅಸಮಾಧಾನಕರ. ರಾ| ಕೊಯಿಮತ್ತೂರರವರು ಈ ಡಿವ್ಹಿಜನಿಗೆ ಆ| ಕಮಿಶನರರಾಗಿ ನೇಮಿಸಲ್ಪಟ್ಟದ್ದರಿಂದ ರಾ| ಕೊಯಿಮತ್ತೂರರ ಅನುಭವ ನಮ್ಮ ಜಿಲ್ಲೆಗೆ ಕೆಲಮಟ್ಟಿಗೆ ಸಿಗಬಹುದು. ಆದರೆ ರಾ|| ವೆಂಕಟಕೃಷ್ಣಯ್ಯನವರಿಗೆ ನಾಸಿಕಕ್ಕೆ ವರ್ಗಯಿಸಲಾಗಿದೆ. ಕಾರವಾರ ವಿಭಾಗದೊಳಗಿನ ಜಪ್ತಾದ ಹೊಲಗಳ ಮಾಹಿತಿ ಅವರಿಗೆ ತುಂಬಾ ಉಂಟು. ಯಾವತ್ತು ಪ್ರಕರಣಗಳನ್ನು ಅವರೇ ಸ್ವತಃ ಅಭ್ಯಾಸ ಮಾಡಿ ಅವುಗಳ ನಿರ್ಣಯ ಮಾಡಕೊಂಡಿದ್ದುಂಟು. ಇಂಥ ಅಧಿಕಾರಿಗಳು ಈವಾಗ ಆ ವಿಭಾಗದಲ್ಲಿರುವದು ಅತ್ಯವಶ್ಯ. ಅವರಿಂದ ಸತ್ಯಾಗ್ರಹಿಗಳ ಹೊಲಗಳನ್ನು ಹಿಂತಿರುಗಿ ಪಡಕೊಳ್ಳುವ ಕ್ರಮವು ಸುಕರವಾಗ ತಕ್ಕದ್ದು. ಮೇಲಾಗಿ ರಾ|| ವೆಂಕಟಕೃಷ್ಣಯ್ಯನವರು ಸ್ವತಂತ್ರ ಪ್ರವೃತ್ತಿಯವರು. ಇಂಥ ಅಧಿಕಾರಿಗಳನ್ನ ಸರಕಾರವು ಈವಾಗ ವರ್ಗಾಯಿಸಬಾರದಿತ್ತೆಂದು ನಮ್ಮ ಅಭಿಪ್ರಾಯ. ಸಾಧ್ಯವಿದ್ದರೆ ಅವರ ವರ್ಗವನ್ನು ರದ್ದುಪಡಿಸಬಹುದಾಗಿಯೂ ನಮ್ಮ ಸೂಚನೆ. ಹೊಸದಾಗಿ ನೇಮಿಸಲ್ಪಟ್ಟ ರಾ|| ರಾಜವಾಡೆಯವರು ಶೀರ ಹೊಸಬರಿದ್ದದರಿಂದ ನಾವೀ ಸೂಚನೆ ಮಾಡಬೇಕಾಗಿದೆ

ಸಮರ್ಥ ಟೂರಿಂಗ ಟೊಕೀಜ,
ಕುಮಟಾ ಇವರು
ಕುಮಟಾ ಮುಕ್ಕಾಮಿನಲ್ಲಿ—
ತಾ. 8-11-38 ಮಂಗಳವಾರದಿಂದ
ಗಂಗಾವತರಣ,
ಸಂತ ತುಕಾರಾಮ,
ಅಯೋಧ್ಯೇಚಾ ರಾಜಾ
ಮೊದಲಾದ ಪೌರಾಣಿಕ, ಭಕ್ತಿರಸಪ್ರಧಾನ ಹಿಂದೀ, ಮರಾಠಿ ಕನ್ನಡ ಚಿತ್ರಪಟಗಳನ್ನು ಪ್ರದರ್ಶಿಸುವರು! ನಿರೀಕ್ಷಿಸಿರಿ!!
ತಾ 31-10-38 ಮೆನೇಜರ

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲುಪುವಂತೆ ಯೋಗ್ಯ ಏರ್ಪಾಡು ಮಾಡುತ್ತಿರುತ್ತದೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.
UDIPI. S. KANARA.

ರಾ|| ಕಸಬೇಕರ ವಾಸುದೇವರಾಯರ ಯುರೋಪದ ಅನುಭವಗಳು.

ಕುಮಟಾ ತಾಲೂಕ ಶಿಕ್ಷಕರ ಸತ್ಕಾರ-ಸಭೆ.

ಕಳೆದ ತಾ ೨೧ನೇ ಶುಕ್ರವಾರ ಬೆಳಿಗ್ಗೆ ೯॥ ಘಂಟೆಗೆ ಇಲ್ಲಿಯ ಕಸಬಾ ಕನ್ನಡ ಶಾಳೆಯಲ್ಲಿ ನಮ್ಮ ಜಿಲ್ಹಾ ಶಾಲಾ ಬೋರ್ಡಿನ ಹೊಸ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾಗಿ ಬಂದಿರುವ ರಾ| ವಾಸುದೇವರಾವ ಕಸಬೇಕರರವರ ಸನ್ಮಾನ ಮಾಡುವ ದೆಸೆಯಿಂದ ಈ ತಾಲೂಕಿನ ಪ್ರಾಥಮಿಕ ಶಾಲೆಗಳ ಶಿಕ್ಷಕರು ಒಂದು ಸಭೆಯನ್ನು ಏರ್ಪಡಿಸಿದ್ದರು. ಸಭಾಮಂದಿರವು ಬಲು ಅಂದವಾಗಿ ಸಿಂಗರಿಸಿತ್ತು. ತಾಲೂಕಿನ ನೂರಾರು ಶಿಕ್ಷಕ ಶಿಕ್ಷಕಿಯರೂ ಅನೇಕ ನಿಮಂತ್ರಿತ ಸದ್ಗೃಹಸ್ಥರೂ ಸಭೆಗೆ ಬಂದಿದ್ದರು. ೯॥ ಘಂಟೆಗೆ ಸಭೆಗೆ ಪ್ರಾರಂಭವಾಯಿತು. ಶಾಲಾ-ವಿದ್ಯಾರ್ಥಿನಿಯರು ಕನ್ನಡ-ಮರಾಠಿ ಹಾಡುಗಳನ್ನು ಹಾಡಿ ಈಶಸ್ತವನ, ಸಭಿಕರಿಗೆ ಸ್ವಾಗತ, ರಾ|| ಕಸಬೇಕರರವರ ಶುಭ-ಚಿಂತನ ಮಾಡಿದ ಬಳಿಕ, ಕಸಬಾ ಕನ್ನಡ ಶಾಲೆಯ ಮುಖ್ಯಾಧ್ಯಾಪಕರಾದ ರಾ|| ಗ. ಶಿ. ಭಟ್ಟರವರು ಸಮಯೋಚಿತ ಭಾಷಣ ಮಾಡಿ ರಾ| ಕಸಬೇಕರರವರಿಗೆ ಮೊನ್ನೆ ಮೊನ್ನೆ ಅವರು ತಿರುಗಿ ಬಂದಿರುವ ಯುರೋಪ ಖಂಡದ ಪ್ರವಾಸದೊಳಗೆ ಕಂಡು ಬಂದ ಶಿಕ್ಷಣ ವಿಷಯಕ ಅನುಭವಗಳನ್ನು ವಿವರಿಸಲು ಪ್ರಾರ್ಥನೆ ಮಾಡಿದ್ರು. ಶಾಲಾ ಬೋರ್ಡಿನ ಚೆಅರಮನ್ನರಾದ ರಾ| ಆರ. ಬಿ. ನಾಯ್ಕರವರಿಗೆ ಸಭಾಧ್ಯಕ್ಷರವ ಸ್ವೀಕರಿಸಲು ಅರುಹಿಕೊಂಡರು. ಅದರಂತೆ ರಾ|| ನಾಯ್ಕರು ಸಭಾಪತಿಸ್ಥಾನವನ್ನಲಂಕರಿಸಿ, ರಾ|| ಕಸಬೇಕರರವರ ಪರಿಚಯ ಮಾಡಿಕೊಡುತ್ತಾ ಅವರ ಸಾದಾ ಜೀವನಕ್ರಮ ಮತ್ತು ಸರಳ ಸ್ವಭಾವ ಈ ಪ್ರಮುಖ ಗುಣಗಳನ್ನು ಕೊಂಡಾಡಿದರು. ಆ ಮೇಲೆ ಚಪ್ಪಾಳೆಗಳ ಘೋಷದಲ್ಲಿ ಎದ್ದುನಿಂತು ರಾ|| ಕಸಬೇಕರರವರು ಒಂದು ತಾಸಿನ ತನಕ ಭಾಷಣ ಮಾಡಿ ತಮಗೆ ಯುರೋಪದ ಪ್ರವಾಸದಲ್ಲಿ ಕಂಡುಬಂದ ಕೆಲವು ಸಂಗತಿಗಳನ್ನು ಬಹು ಮಾರ್ಮಿಕವಾಗಿ ವಿವರಿಸಿದರು. ಅವರ ಭಾಷಣದ ಸಾರಾಂಶ ಈ ಕೆಳಗಿನಂತಿದೆ —

ಈ ಹೊತ್ತು ಇಲ್ಲಿ ನನ್ನ ಸತ್ಕಾರದ ಸಲುವಾಗಿ ಸಭೆ ಸೇರುವದಿದೆಯೆಂದು ನಾನು ತಿಳಿದಿದ್ದಿಲ್ಲ. ನನ್ನ ಅನುಭವ ಕೇಳಿಕೊಳ್ಳುವದಕ್ಕಾಗಿ ಶಿಕ್ಷಕರನ್ನು ಸೇರುವರೆಂದು ತಿಳಿಕೊಂಡಿದ್ದೆ. ಇರಲಿ. ನಾನು ಇಟಾಲಿಯ ಹಡಗವನ್ನೊಂದು ಏರಿ ಮುಂಬಯಿಯಿಂದ ವಿಲಾಯತಿಗೆ ಹೊರಟೆ. ಇಟಾಲಿಯ ಹಡಗಗಳು ಬಲು ಬೇಗ ಪಯಣ ಮಾಡುತ್ತವೆಂದು ಜಗತ್ತಿನಲ್ಲಿ ಪ್ರಖ್ಯಾತಿಯಿದೆ. ನಾನು ಮುಂಬಯಿ ಬಿಟ್ಟ ೧೨ ದಿನಗಳಲ್ಲಿ ಲಂಡನಿಗೆ ಮುಟ್ಟಿದೆ. ತಿರುಗಿ ಬರುವಾಗ ನನಗೆ ಹತ್ತೇ ದಿನಗಳು ತಗಲಿದವು. ಲಂಡನಿನಲ್ಲಿ ನಾನು ೩ ವಾರ ಇದ್ದೆ. ಕೆಲವು ದಿನ ನಾನು ಇಂಗ್ಲಂಡದ ಉತ್ತರ ಭಾಗದಲ್ಲಿಯೂ ಸ್ಕಾಟಲಂಡದಲ್ಲಿಯೂ ಸಂಚರಿಸಿದೆ. ಆದಾದ ನಂತರ ಫ್ರಾನ್ಸ, ಜರ್ಮನಿ, ಝೆಕೊಸ್ಲೊವಾಕಿಯಾ ಮುಂತಾದ ಮಧ್ಯ ಯುರೋಪದ ದೇಶಗಳಲ್ಲಿ ಪ್ರವಾಸ ಮಾಡಿದೆ. ಇಟಲಿಯನ್ನೂ ನೋಡಿದೆ. ನೊರ್ವೇ, ಸ್ವೀಡನ್ ದೇಶಗಳನ್ನು ನೋಡುವ ಕುತೂಹಲ ನನಗುಂಟಾಗಲಿಲ್ಲ. ಸ್ಪೇನದಲ್ಲಿ ಯುದ್ಧ ನಡೆಯುವದರಿಂದ ಅಲ್ಲಿ ಹೋಗಲಿಕ್ಕೂ ನಾನು ಸಿದ್ಧನಾಗಲಿಲ್ಲ. ರಶಿಯಾ ದೇಶದ ಮೊಸ್ಕೋ ಮತ್ತು ಲೆನಿನಗ್ರೇಡ ಪಟ್ಟಣಗಳೊಳಗಿನ ಶಿಕ್ಷಣ ಸಂಸ್ಥೆಗಳನ್ನು ನೋಡಬೇಕೆಂದು ನನ್ನ ಬಯಕೆಯಿತ್ತು. ಆದರೆ ತಪ್ಪು ತಿಳುವಳಿಕೆಯಿಂದ ಮುಂಬಯಿಯ ಪ್ರವಾಸ-ಪರವಾನೆ (ಪಾಸಪೋರ್ಟ) ಕೊಡುವ ಅಧಿಕಾರಿಯು ಪರವಾನೆಯಲ್ಲಿ ರಶಿಯಾ ದೇಶದ ಉಲ್ಲೇಖ ಮಾಡಿದ್ದಿಲ್ಲ. ಲಂಡನಿನೊಳಗಿನ ಪರವಾನೆ ಕೊಡುವ ಅಧಿಕಾರಿಯನ್ನು ಕಂಡು ನಾನು ರಶಿಯಾ ದೇಶಕ್ಕೆ ಹೋಗಲು ಪರವಾನೆ ಬೇಡಿದೆ. ಅದಕ್ಕೆ ನನಗೆ ಒಂದು ವಚನಕ್ಕಿಂತ ಹೆಚ್ಚು ಖರ್ಚು ಬಂತು. “ ನಾವು “ಬೊಲ್ಶೆವಿಝಮ್” ತತ್ವದ ಅನುಯಾಯಿಯಲ್ಲ, ಇಲ್ಲವೆ ಆ ಬಗ್ಗೆ ನನ್ನಲ್ಲಿ ಆದರವೂ ಇಲ್ಲ. ನಾನು ದೇಶ ಮತ್ತು ಶಿಕ್ಷಣ ಸಂಸ್ಥೆಗಳನ್ನಷ್ಟು ಅಭ್ಯಾಸಿಸಬಯಸಿದ್ದೇನೆ ’ ಎಂದು ಆ ಅಧಿಕಾರಿಗೆ ಮನಗಾಣಿಸಿಕೊಟ್ಟೆ. ಆದರೂ ಆತನು ಪರವಾನೆ ಕೊಡಲಾಗುವದಿಲ್ಲೆಂದು ಖಂಡ-ತುಂಡ ಹೇಳಿಬಿಟ್ಟನು. ಅದ್ದರಿಂದ ನಿರುಪಾಯವಾಗಿ ನಾನು ರಶಿಯಾ ದೇಶವನ್ನು ನನ್ನ ಸಂಚಾರ ಕಾರ್ಯಕ್ರಮದೊಳಗಿಂದ ಬಿಟ್ಟುಬಿಡಬೇಕಾಯಿತು.

ನನಗೆ ಕೆಂಪು ಸಮುದ್ರಕ್ಕೆ ‘ ಕೆಂಪು ಸಮುದ್ರ ’ ಎಂದು ಹೆಸರು ಯಾಕೆ ಬಿತ್ತು ? ಎಂದು ತಿಳಿದುಕೊಳ್ಳುವ ಕುತೂಹಲವಿತ್ತು. ಸಂಜೆಯ ಸೂರ್ಯನ ಕಿರಣಗಳಿಂದ ಸಮುದ್ರದ ನೀರು ಕೆಂಪಾಗಿ ಕಂಗೊಳಿಸುತ್ತದೆ ಎಂದು ಕೆಲವರು ಹೇಳುತ್ತಿದ್ದರು. ಆಳದಲ್ಲಿರುವ ಬಂಡೆಗಳ ಕೆಂಬಣ್ಣದ ಮೂಲಕ ಸಮುದ್ರದ ನೀರು ಕೆಂಪು ಕಾಣುತ್ತದೆ, ಹೀಗೂ ಕೆಲವರು ಹೇಳುತ್ತಿದ್ದರು. ಇವಾವ ಸಿದ್ಧಾಂತಗಳಲ್ಲಿ ನನಗೆ ಹುರುಳು ಕಾಣಲಿಲ್ಲ. ಆ ಸಮುದ್ರದ ನೀರು ಬೇರೆ ಸಮುದ್ರಗಳ ನೀರಿನಂತೆಯೇ ಇದ್ದುದು ತೋರಿತು. ಉಷ್ಣತೆ ಮಾತ್ರ ಆ ಸಮುದ್ರದಲ್ಲಿ ಬಹಳ ಇರುವದೆಂದು ತಿಳಿದುಬಂದಿತು. ಆ ಕಾಲುವೆಯನ್ನು ಎರಡೂ ಬದಿಗೆ ಸಿಮೆಂಟಿನ ಧಕ್ಕೆಗಳನ್ನು ಕಟ್ಟಿ ಭದ್ರವಾಗಿರಿಸಿರುವರೆಂದು ನನ್ನ ಕಲ್ಪನೆಯಿತ್ತು. ಆದರೆ ತಪ್ಪಾಯಿತು. ಎರಡೂ ಬದಿಗೆ ಉಸುಬಿನ ದಂಡೆಗಳೇ ಇದ್ದವು. ಉಸುಬು ನೀರಿನ ಸೆಳೆತಕ್ಕೂ ಗಾಳಿಯ ಹೊಡೆತಕ್ಕೂ ಕಾಲುವೆಯಲ್ಲಿ ಬಂದು ಬೀಳುತ್ತಿತ್ತು. ನಡುಮಧ್ಯದಲ್ಲಿ ೩೦ ಅಡಿ ಆಳವಾದ ಜಲಮಾರ್ಗವಿದೆ. ಅದರೊಳಗಿಂದಲೇ ಹಡಗಗಳು ಹಾದುಹೋಗುತ್ತವೆ. ಅಲ್ಲಿ ಬಿದ್ದ ಉಸುಬು-ಕೆಸರುಗಳನ್ನು ತೆಗೆಯಲು ನೂರಾರು ಹಡಗಗಳು ಕೆಲಸ ಮಾಡುತ್ತಿವೆ.

ಇಟಾಲಿಯಲ್ಲಿ ನನಗೆ ವ್ಹೆನಿಸ ಪಟ್ಟಣ ಬಹಳ ರಮ್ಯ ಕಂಡಿತು. ಊರೆಲ್ಲ ಕಾಲುವೆಗಳಿಂದ ತುಂಬಿದೆ. ಮಾರ್ಗಗಳ ಕಡೆಯ ಮನೆಗಳ ಸಾಲುಗಳಿಗೆ ತಾಗಿಯೇ ಕಾಲುವೆಗಳು ಇವೆ. ಒಂದು ತರದ ದೋಣಿಯಲ್ಲಿ ಕೂತು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಬೇಕು. ರಸ್ತೆಯ ಮೇಲಿನ ಧೂಳಿನ ಉಪದ್ರವ ತಪ್ಪಿಸಲಿಕ್ಕೆ ಮಾರ್ಗಗಳ ಬದಲು ಕಾಲುವೆ ಮಾಡಿದ್ದಿರಬೇಕೆಂದು ಅನಿಸಿತು. ಆದರೆ ಈಗಿನ ಹೊಸ ಮನ್ವಂತರದಲ್ಲಿ, ಡಾಂಬರ-ರಸ್ತೆಗಳ ಕಾಲದಲ್ಲಿ ಈ ವ್ಯವಸ್ಥೆಯ ಅವಶ್ಯಕತೆ ಅಷ್ಟೇನು ತೋರುವದಿಲ್ಲ.

ಲಂಡನಿನಲ್ಲಿ ನನಗೆ ಕಂಡ ಆಕರ್ಷಕ ಸಂಗತಿಗಳೆಂದರೆ ಭೂಗರ್ಭದೊಳಗಿನ ರೇಲ್ವೆಗಳು- ಮತ್ತು ವಿಸ್ತೀರ್ಣವಾದ ಉದ್ಯಾನಗಳು. ಈ ರೇಲ್ವೆ ಮಾರ್ಗಗಳಲ್ಲಿ ಭೂಪೃಷ್ಠದ ಮೇಲೆ ಇರುವಂತೆಯೇ ತುಂಬ ಬೆಳಕು ಮತ್ತು ಗಾಳಿ ಸಿಗುತ್ತದೆ. ಮೇಲಿಂದ ಕೆಳಗೆ ಆ ರೇಲ್ವೆಗಳಿಗೆ ಹೋಗಲಿಕ್ಕೂ, ಅಲ್ಲಿಂದ ಮೇಲೆ ಬರಲಿಕ್ಕೂ ಯಾಂತ್ರಿಕ ಸೌಕರ್ಯಗಳನ್ನು ಕಲ್ಪಿಸಿರುವದರಿಂದ ಏನೂ ಕಷ್ಟವಾಗುವದಿಲ್ಲ. ಆದರೆ ಒಂದೆರಡು ದಿನ ನಕಾಶೆಯ ಅಭ್ಯಾಸ ಮಾಡುತ್ತ ಈ ರೇಲ್ವೆಗಳಲ್ಲಿ ಪ್ರವಾಸ ಮಾಡಿದರೆ ಏನೂ ತೊಂದರೆಯಾಗದೆ ಬೇಕಾದ ಸ್ಥಳದಿಂದ ಬೇಕಾದಲ್ಲಿ ಹೋಗಬರುತ್ತದೆ. ಶಹರದೊಳಗಿನ ಉದ್ಯಾನಗಳು ಬಹಳ ವಿಸ್ತೀರ್ಣ. ಹತ್ತಿಪ್ಪತ್ತು ಚೌರಸ ಮೈಲು ವಿಸ್ತೀರ್ಣವಾದ ಉದ್ಯಾನಗಳೂ ಇವೆ. ಸಂಜೆ-ಮುಂಜಾನೆ ಲಕ್ಷಾವಧಿ ಜನರು ಅಲ್ಲಿ ತಿರುಗಾಡಲಿಕ್ಕೆ ಹೋಗುತ್ತಾರೆ. ಉದ್ಯಾನಗಳ ವ್ಯವಸ್ಥೆ ಬಹಳ ಚನ್ನಾಗಿದೆ. ಪಾಶ್ಚಾತ್ಯರ ಸ್ವಚ್ಛತೆಯ ಶಿಸ್ತು ಬಹಳ ಪ್ರಶಂಸನೀಯವಾದದ್ದು. ಯಾರೂ ಮಾರ್ಗದ ಮೇಲೆ ಕಸ ಚೆಲ್ಲಲಿಕ್ಕಿಲ್ಲ. ಕಾಗದದ ಒಂದು ಚೂರನ್ನಾದರೂ ಮಾರ್ಗದಗುಂಟ ಇಟ್ಟ ಪೆಟ್ಟಿಗೆಯನ್ನು-ಹುಡುಕಿ ಅದರಲ್ಲಿ ಚೆಲ್ಲುವರು. ನಾಯಿಗಳು ಲದ್ದಿ ಹಾಕಿದರೆ ಮಾಲಕರು ಅದನ್ನು ಕೂಡಲೆ ತೆಗೆದೊಗೆಯುವರು ! ನಾವೋ, ಕೇಳಬೇಡಿರಿ ! ಉತ್ತರ ಇಂಗ್ಲಂಡ ಹಾಗು ಸ್ಕಾಟಲಂಡದೊಳಗಿನ ವಸತಿ ನೋಡಲಿಕ್ಕೆ ನಾನು ಹೋಗಿದ್ದೆ. ಅವರ ಸೊಬಗು ನನಗೇನಷ್ಟು ಮರುಳುಗೊಳಿಸಲಿಲ್ಲ. ನಮ್ಮ ಬದಿಗೂ ಅಷ್ಟು ಸುಂದರ ನೋಟಗಳು ದೇಶದಲ್ಲಿವೆ. ಹಿಮಾಚಲದೊಳಗಿನ ವಸತಿಯ ಮುಂದೆ ಇಂಗ್ಲಂಡ-ಸ್ಕಾಟಲಂಡಗಳೊಳಗಿನ ವನಸೌಂದರ್ಯ ಏನೂ ಇಲ್ಲವೆಂದು ನನ್ನ ಸಂಗಡಿಗರೊಬ್ಬರು-ಉದ್ಗರಿಸಿದರು. ವಿಲಾಯತಿಯೊಳಗಿನ ನನ್ನ ಊಟ-ಉಪಚಾರಗಳ ವ್ಯವಸ್ಥೆಯಲ್ಲಿ ಕುಟುಂಬಗಳ ಮನೆಗಳಲ್ಲೇ ಆದದ್ದರಿಂದ ನನಗೆ ಇಂಗ್ಲಿಷ ಕುಟುಂಬ ಜೀವನವನ್ನು ಪರಿಚಯ ಮಾಡಿಕೊಳ್ಳಲಿಕ್ಕೆ ಬಹಳ ಅನುಕೂಲವಾಯಿತು. ಇಂಗ್ಲಂಡದಿಂದ ನಾನು ಫ್ರಾನ್ಸ, ಬೆಲ್ಜಮ್, ಜರ್ಮನಿ ಮುಂತಾದ ದೇಶಗಳಿಗೆ ಹೋದೆ. ಪ್ಯಾರಿಸ ಬಹು ಸುಂದರ ನಗರಿ. ಫ್ರಾನ್ಸದ ಹಿಂದಿನ ಅರಸರೆಲ್ಲರೂ ಶತಮಾನದ ಅರಸರು ದೇಶವನ್ನೆಲ್ಲ ಸುಲಿದು ಅಷ್ಟನ್ನು ರಾಜಧಾನಿಯ ಸೊಬಗು ಬೆಳಸಲಿಕ್ಕೆ ವೆಚ್ಚ ಮಾಡಿರಬೇಕೆಂದು ನನಗೆ ಕಲ್ಪನೆ ಬಂತು. ಫ್ರೆಂಚರ ವಿಲಾಸ ಮಿತಿಮೀರಿದೆ. ಅವರ ಈ ವಿಲಾಸಪ್ರಿಯತೆಯು ಕ್ರಮೇಣ ಅವರ ನಾಶಕ್ಕೆ ಕಾರಣವಾಗಬಹುದೆಂದು ಭೀತಿಯಿದೆ. ಜರ್ಮನಿಯಲ್ಲಿ ಬರ್ಲಿನ ನಗರದ ಪುನರ್ಘಟನೆ ಮಾಡುವ ಕೆಲಸ ಒತ್ತರದಿಂದ ನಡೆದಿದೆ. “ಬರ್ಲಿನ್” ಪಟ್ಟಣದ ಮಧ್ಯದೊಳಗಿಂದ ೮ ಮೈಲು ಉದ್ದವಾದ ಒಂದು ಸರಳ ರಸ್ತೆಯು ವಿಸ್ತೀರ್ಣ ರಸ್ತೆ ಮಾಡುವ ಕೆಲಸ ನಡೆದಿದೆ. ನಗರವನ್ನು ಈ ರಸ್ತೆಯು ಅಡೆ ಅಡೆ ವಿಸ್ತರಿಸುವ ಕಲ್ಪನೆಯಿಂದ ಈ ಕೆಲಸ ನಡಿಸಲಾಗಿದೆ. ಈ ಯೋಜನೆ ಪೂರ್ಣವಾದರೆ ಬರ್ಲಿನ್ ನಗರವು ಜಗತ್ತಿನ ಅತಿದೊಡ್ಡ ಪಟ್ಟಣಗಳಲ್ಲಿ ಪ್ರಥಮ ಸ್ಥಾನ ಪಡೆಯಬಹುದು. ಜರ್ಮನಿಯಲ್ಲಿ ತನ್ನ ಕಣ್ಣಿಗೆ ಎಲ್ಲೆಲ್ಲಿಯೂ ಗೋಚರವಾದದ್ದು ಸರ್ವಾಧಿಕಾರಿ ಹಿಟ್ಲರನ ಪ್ರಭಾವ ! ಹಿಟ್ಲರನನ್ನು ವಿರೋಧಿಸುವದಿರಲಿ, ಆತನ ವಿರುದ್ಧ ಒಂದು ಚಕಾರ ಶಬ್ದ ಎಲ್ಲೂ ಕೇಳಬರುವದಿಲ್ಲ ! ಅಪರಿಚಿತರೂ ಮಿತ್ರರೂ ಪರಸ್ಪರರು ಸಂಧಿಸಿದಾಗ ಮೊದಲು ಹಾಗೆ ಸಹ “ ಹೇಲ್ ಹಿಟ್ಲರ ” ಎಂದು ಉದ್ಗರಿಸಿ ಆತನ ಬಗ್ಗೆ ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ ! ಹಿಟ್ಲರ ನಿತ್ಯಗಳ ಬಗ್ಗೆ ಹೇಳುವ ಜನರು ಎಷ್ಟೇ ತಿರಸ್ಕಾರ ಎಷ್ಟೇ ವಿರೋಧ ಮನಸ್ಸಿನಲ್ಲಿದ್ದಾಗ್ಯೂ ಅವನ್ನು ಬಾಯಿಯಿಂದ ಹೊರಗೆಡಹಲಿಕ್ಕೆ ಯಾರೂ ಧೈರ್ಯ ಮಾಡುವದಿಲ್ಲ. ದೇಶದ ಮೂಲೆ-ಮೂಲೆಗಳಲ್ಲಿ ಮನೆ ಮನೆಗಳಲ್ಲಿ ಹಿಟ್ಲರನ ಗುಪ್ತ ಚಾರರು ತಿರುಗಾಡುತ್ತಿದ್ದಾರೆ. ಹಿಟ್ಲರನು ತನ್ನ ವಿರೋಧಕರನ್ನು ಕನಿಕರವಿಲ್ಲದೆ ಸದೆಬಡಿಯುತ್ತಾನೆ. ಆದ್ದರಿಂದ ಎಲ್ಲರೂ ಆತನಿಗೆ ಹೆದರುತ್ತಾರೆ. ನಮ್ಮ ಹಿಂದಿನ ಪ್ರೊಫೆಸರರೊಬ್ಬರು ಹಿಟ್ಲರನ ಗುಪ್ತ ಚಾರರಾಗಿ ಕೆಲಸ ಮಾಡುತ್ತಿದ್ದರು. ಹಿಂದಿನ ವಿದ್ಯಾರ್ಥಿಗಳು ಕೆಲವರು ಈ ಪ್ರೊಫೆಸರರ ಗುಪ್ತ ವರದಿಗಳ ಮೂಲಕ ಸಂಕಟದಲ್ಲಿ ಸಿಲುಕಿದ್ದರು. ಬಹಳ ತೊಂದರೆಯು ಹಿಟ್ಲರನಲ್ಲೂ ಜಾಸ್ತಿ ಮರುಳು ಮಾಡುವ ಗುಣಗಳಿವೆ. ಆತನು ಶಾಕಾಹಾರಿ, ಬ್ರಹ್ಮಚಾರಿ. ದೇಶಕ್ಕಾಗಿ ಆತನು ದುಡಿಯುತ್ತಾನೆ, ಅತ್ಯಪ್ರಿಯವು ಹೆಂಬಲ ಆತನಿಗೆ ಇಲ್ಲ. ಜರ್ಮನಿಯಲ್ಲೆಲ್ಲಿಯೂ ಆತನ

(೧೧ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರ ಕಾರ್ತಿಕ ಶು. ೮ಮಿ, ಸೋಮವಾರ

ಶಿಕ್ಷಣಕ್ರಮ ಹೇಗಿರಬೇಕು ?

ಈವಾಗ ವಿದ್ಯಾನಿಲಯಗಳಲ್ಲಿ ಕೊಡಲ್ಪಡುವ ಶಿಕ್ಷಣ ನಿರರ್ಥಕವಾದದ್ದೆಂದು ನಾವಾಗಿ ಪ್ರತಿಪಾದಿಸುವದನವಶ್ಯಕ. ವಿದ್ಯಾಸಿಧ್ಧಿಗನೇಕರು ನಮ್ಮಲ್ಲಿಯ ಶಿಕ್ಷಣಕ್ರಮವನ್ನು ಸಾಂಗೋಪಾಂಗ ಪರ್ಯಾಲೋಚಿಸಿ ಈ ಶಿಕ್ಷಣಕ್ರಮದಿಂದ ಮಾನವನು ಸುಸಂಸ್ಕೃತನಾಗುವದಿಲ್ಲವಾಗಿಯೂ ಪ್ರಪಂಚ ನಡಿಸಲು ಅರ್ಹನಾಗುವದಿಲ್ಲವಾಗಿಯೂ ಸಿದ್ಧಗೊಳಿಸಿದ್ದಾರೆ ಈಗಿನ ವಿದ್ಯಾನಿಲಯಗಳು ನೌಕರರನ್ನು ತಯಾರಿಸುವ ದೊಡ್ಡ ಕಾರಖಾನೆಗಳೆಂದು ವಿಚಾರವಂತರು ಅಭಿಪ್ರಾಯಪಟ್ಟದ್ದುಂಟು ನಮ್ಮ ಜಿಲ್ಹೆಯ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ರಾ| ಕನಬೇಕರರು ಸಹ ಇದೇ ಸಂಗತಿಯನ್ನು ಪ್ರತಿಪಾದಿಸಿದ್ದಾರೆ ರಾ| ಕನಬೇಕರರು ಇಲ್ಲಿಯ ವಿದ್ಯಾಧಿಕಾರಿಗಳಾಗಿ ಅನುಭವಪಟ್ಟವರಿದ್ದು ಯುರೋಪ ಖಂಡದೊಳಗೆ ಶಿಕ್ಷಣ ಸಂಸ್ಥೆಗಳನ್ನು ಪರಾಂಬರಿಸಿ ಮರಳಿದವರು ಯುರೋಪ್ಯ ಶಿಕ್ಷಣ-ಪದ್ಧತಿಯ ಕ್ರಮವೇ ಬೇರೆ ಜೀವನಕ್ರಮವನ್ನೇ ಪ್ರಾಮುಖ್ಯವಾಗಿ ಹೆಗ್ಗುರಿಯಾಗಿಟ್ಟುಕೊಂಡು ವಿದ್ಯಾನಿಲಯಗಳು ಶಿಕ್ಷಣವನ್ನು ಕೊಡುತ್ತಿವೆ ಎರಡು ವರುಷಗಳ ಶಿಸುವನ್ನು ಸರಕಾರದ ಶಿಶುಸಂಗೋಪನ ಶಾಲೆಗಳಲ್ಲಿ (Nursery Schools) ಸೇರಿಸಿಕೊಂಡು ಜೋಪಾನ ಮಾಡುತ್ತಿವೆ ಶಾರೀರಿಕ, ಮಾನಸಿಕ ಬೆಳವಣಿಗೆಗೆ ಅವಶ್ಯವಿದ್ದ ಯಾವತ್ತೂ ಸಾಹಿತ್ಯಗಳನ್ನು ಸರಕಾರವೇ ಪೂರೈಸಿ ಬಾಲಕರನ್ನು ಬಾಲ್ಯಾವಸ್ಥೆಯಿಂದಲೇ ಸಭ್ಯ, ಅಭಿಮಾನಿ ನಾಗರಿಕರನ್ನಾಗಿ ಮಾರ್ಪಡಿಸುತ್ತದೆ ಸಮಾಜಗಳಲ್ಲಿ ಸ್ಥಿತಿಭೇದವುಂಟು ಐಶ್ವರ್ಯವಂತರಿದ್ದಾರೆ, ದರಿದ್ರರಿದ್ದಾರೆ ದರಿದ್ರರಿಗೆ ಮಕ್ಕಳನ್ನು ಪಾಲಿಸುವದು ಕಷ್ಟದ ಕೆಲಸ ತಕ್ಕಷ್ಟು ಆಹಾರ ಪೂರೈಸುವದಾಗಲಿ ತಕ್ಕಷ್ಟು ಶಿಕ್ಷಣ ಕೊಡುವದಾಗಲಿ ಕಾಲ-ಕಾಲಕ್ಕೆ ನಿಗಾ ಕೊಳ್ಳುವದಾಗಲಿ ಅಸಾಧ್ಯ ಮಾತು ಆದರಿಂದ ಸರಕಾರವು ಮಕ್ಕಳನ್ನು ಸ್ವಾಧೀನಪಡಿಸಿಕೊಂಡು ಮುಂದಿನ ಜೋಪಾನವನ್ನು ನಡಿಸುತ್ತದೆ ಐದು ವರುಷಗಳ ತರುವಾಯ ಬಾಲ-ಶಾಲೆ (Infant Schools)ಗಳಲ್ಲಿ ಹುಡುಗರಿಗೆ ಬಾಲಶಿಕ್ಷಣ ಕೊಟ್ಟು ಹನ್ನೊಂದು ವರ್ಷಗಳಾದ ಮೇಲೆ ಪ್ರಾಥಮಿಕ ಶಾಲೆಗಳಿಗೆ ಕಳುಹುತ್ತದೆ ವ್ಯವಹಾರಿಕ ಶಿಕ್ಷಣ ಕೆಲ ವಟ್ಟಿಗೆ ಇಲ್ಲಿಂದಲೇ ಕೊಡಲ್ಪಡುತ್ತದೆ ಹದಿನಾರು ವರುಷಗಳಾದ ಬಳಿಕ ಮಕ್ಕಳ ಮಾನಸಿಕ ಒಲವು ನೋಡಿ ಔದ್ಯೋಗಿಕ ಶಿಕ್ಷಣದ ಏರ್ಪಾಟು ಮಾಡಲಾಗುತ್ತದೆ ಆದರಿಂದ ಅಲ್ಲಿಯ ಜನರು ಕೈಗಾರಿಕೆಗಳಿಂದ ಜೀವನೋಪಾಯ ನಡಿಸಿ ಸದಾ ಸುಖಿಗಳಾಗಿದ್ದಾರೆ, ರಾಷ್ಟ್ರಗಳು ಉತ್ತರೋತ್ತರ ಅಭಿವೃದ್ಧಿಗೈಯ್ಯುತ್ತಲಿವೆ ಪ್ರಾಜ್ಞರು ತಮ್ಮ ಸಂಸ್ಕೃತಿಯ, ಬುದ್ಧಿವೈಭವದ ಉಪಯೋಗವನ್ನು ಹಿಂಸಾಚಾರಕ್ಕೆ, ಪರಪೀಡೆಗೆ, ಲೋಕಸಂಕಟಕ್ಕೆ ವಿನಿಯೋಗಿಸಿದ್ದರಿಂದ ಯುರೋಪ್ಯ ಖಂಡದೊಳಗೆ ಶಾಂತಿ ಸಮಾಧಾನ ಸುಖಗಳು ನೆಲಿಸುವ ಬದಲು ಕಲಹಗಳುಂಟಾಗಿ ಅಕ್ಷೇಮವಾಗಿರಬಹುದೇನೋ ಅಹುದು, ಆದರೆ ಯಂತ್ರಶಾಸ್ತ್ರದಲ್ಲಿಯೂ ರಸಾಯನ ಶಾಸ್ತ್ರಗಳಲ್ಲಿಯೂ ಬೇರೆ ಬೇರೆ ವಿಜ್ಞಾನಶಾಸ್ತ್ರಗಳಲ್ಲಿಯೂ ಅವರು ನಡಿಸಿರುವ ಅದ್ಭುತ ಶೋಧಗಳನ್ನು ಕಲ್ಪಿಸಲು ಸಹ ಅಶಕ್ಯವೆನಿಸ್ತಿ ಇಷ್ಟು ಪ್ರಗತಿಯಾಗಲು ಅಲ್ಲಿಯ ಶಿಕ್ಷಣಕ್ರಮವೇ ಕಾರಣ ಯುರೋಪದೊಳಗಿನ ಜನರು ನಮ್ಮಂತೆಯೇ ಸಾಮಾನ್ಯ ಮನುಷ್ಯ ಪ್ರಾಣಿಗಳಿದ್ದು ಅವರಂತೆಯೇ ನಮಗೂ ಶಿಕ್ಷಣ ದೊರೆತಿದ್ದರೆ, ಬ್ರಿಟಿಶರು ಪಕ್ಷಪಾತ ಮಾಡದೆ ಬ್ರಿಟನ್ ದೇಶದೊಳಗಿನ ಶಿಕ್ಷಣಕ್ರಮವನ್ನೇ ಇಲ್ಲಿ ಪ್ರಚುರಗೊಳಿಸಿದ್ದರೆ ಈವಾಗ ಈ ಪರಿ ಹಿಂದವಾಸಿಯರ ದುರ್ದೆಶಯಾಗುತ್ತಿರಲಿಲ್ಲ ಆದರೆ ಆಗಿಹೋದ ಘಟನೆಗಳಿಗಾಗಿ ಪಶ್ಚಾತ್ತಾಪಪಡುವದು ನಮ್ಮ ಕೆಲಸವಲ್ಲ ಹೇಳುವ ತಾತ್ಪರ್ಯವಿಷ್ಟೇ - ಈಗಿನ ಶಿಕ್ಷಣಕ್ರಮದ ಗುರಿ ತಪ್ಪಿಹೋಗಿದೆ, ಆದರಿಂದ ಜನರಿಗೂ ದೇಶಕ್ಕೂ ಅಪಾರವಾದ ಅನರ್ಥವಾಗಿದೆ. ಅದರೊಳಗೆ ತಿದ್ದು-ಪಡಿಯಾಗಬೇಕು, ಕೈಗಾರಿಕೆಗಳ ಅಭ್ಯುದಯವಾಗುವಂತೆ ಮಾರ್ಪಾಟುಗಳಾಗಬೇಕು. ವಿದ್ಯಾರ್ಥಿಗಳ ಪಾಲನವನ್ನು ಸರಕಾರವೇ ಸ್ವಾಧೀನಪಡಿಸಿಕೊಂಡು ಅವರವರ ಮನದೊಲವಿಗೆ ತಕ್ಕುದಾದ ವ್ಯವಹಾರಿಕ ಶಿಕ್ಷಣ ಕೊಟ್ಟು ಅವರ ಉದ್ಧಾರಗೈಯ್ಯಬೇಕು. ಹನ್ರಿ ಫೋರ್ಡರವರನ್ನು ಎಲ್ಲರೂ ಬಲ್ಲರು ಫೋರ್ಡರ ಮೋಟಾರು ಲೋಕಪ್ರಸಿದ್ಧವಾದುದು ಬಹು ದೊಡ್ಡ ಕಾರಖಾನೆಯವರೆಂದು ಲೋಕದಲ್ಲಿ ಅವರ ಖ್ಯಾತಿಯಿದೆ ಸದ್ಯಕ್ಕೆ ' ಫ್ಲೋರಮ್ ' ಪತ್ರಿಕೆಯ ಪರವಾಗಿ ಕ್ರಿಸ್ತಿ ಬೋರ್ಥರವರು ಫೋರ್ಡರವರ ಕಡೆ ಶಿಕ್ಷಣಸೂತ್ರಗಳನ್ನು ಕೇಳಿಕೊಂಡರು ಮಿ| ಬೋರ್ಥರವರ ಕಡೆ ಫೋರ್ಡರವರು ಆಡಿದ ಮಾತುಗಳು ಮುತ್ತಿಗೂ ಮಿಗಿಲಾದವು, ಅಮೂಲ್ಯವಾದವುಗಳು —

"ಶಿಕ್ಷಣವು ಭಾವೀ ಜೀವನಕ್ರಮದ ತಯಾರಿಯೆಂದು ಎಣಿಸಲಾಗದು, ಜೀವನಕ್ರಮದ ಅಂಗವೆಂದೇ ಎಣಿಸಿ ಶಿಕ್ಷಣಕ್ರಮ ನಡಿಸಬೇಕು ಸಂಪಾದನೆ ವಿದ್ಯಾರ್ಜನೆಗಳು ಒಟ್ಟುಗೂಡಿ ನಡೆಯಬೇಕು. (ಗ್ರೀನಫೀಲ್ಡದಲ್ಲಿ ಫೋರ್ಡರವರು ಒಂದು ಶಾಲೆ ನಡಿಸಿ ಪ್ರಯೋಗ ಮಾಡುತ್ತಿದ್ದಾರೆ ಅಲ್ಲಿಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ) ಈ ಚಿಕ್ಕ ಮಕ್ಕಳು ಹಿತ್ತಲಲ್ಲಿ ಕಾಯಿಪಲ್ಲೆ ನಟ್ಟು ಹಣ ಗಳಿಸುತ್ತಾರೆ, ಒಬ್ಬರ ಅನುಭವವನ್ನು ಮತ್ತೊಬ್ಬರಿಗೆ ತಿಳಿಸುತ್ತಾರೆ ಸಹ ಹ್ಯಾಗೆ ನಡಬೇಕು ? ಅದನ್ನು ಹೇಗೆ ಸಾಧಿಸಬೇಕು ? ಎಂಬುದನ್ನು ತಿಳಿಕೊಳ್ಳುತ್ತಾರೆ ಇದೇ ನಿಜವಾದ ಶಿಕ್ಷಣ' ಪ್ರತ್ಯಕ್ಷ ಕಾರ್ಯವನ್ನು ಮಾಡುವದರಿಂದಲೇ ಕಾರ್ಯ ಮಾಡಕಲಿಯುವದು, ನೆರವಾಗುವದೇ ನೆರವಾಗಕಲಿಯುವದು, ಸಂಪಾದನೆ ಮಾಡುವದೇ ಸಂಪಾದನೆ ಮಾಡಕಲಿಯುವದು ಹುಡುಗ-ಹುಡುಗಿಯರೂ ಪ್ರತ್ಯಕ್ಷ ಜೀವನಕ್ರಮವನ್ನೇ ಶಾಲೆಗಳಲ್ಲಿ ಕಲಿತಿದ್ದರೆ ಅವರ ಭಾವೀ ಆಯುಷ್ಯಕ್ರಮ ಹೆಚ್ಚು ಸುಖಕರವಾಗುತ್ತದೆ ಅವರ ಭಾವೀ ಪ್ರಪಂಚಕ್ಕೆ ತೀರ ಭಿನ್ನವಿರುವ ಶಾಲೆಗಳಲ್ಲಿ ಅವರಿಗೆ ಕಲಿಯಹಾಕಲಾಗುತ್ತದೆ ನಾವು ಇಲ್ಲಿ ಶಿಕ್ಷಣವನ್ನೂ ಜೀವನವನ್ನೂ ಒಟ್ಟುಗೂಡಿಸಿ ಪ್ರಯೋಗ ನಡಿಸುತ್ತಿದ್ದೇವೆ ಇದರಿಂದ ಶಿಕ್ಷಣ-ಜೀವನ, ಪ್ರಪಂಚ-ಜೀವನಗಳೊಳಗಿರುವ ಅಭ್ಯಂತರವು ದೂರವಾಗುವದು ವ್ಯವಹಾರಕ್ಕೂ ಗೃಹ ಜೀವನಕ್ಕೂ ಸಮೀಪವಾಗಿಯೇ ವಿದ್ಯಾಭ್ಯಾಸ ನಡೆಯಬೇಕು ಉಚ್ಚ ವಿದ್ಯಾಭ್ಯಾಸದ ಸಮಯ ನೀವು ವಿಶ್ವವಿಚಾರವನ್ನೇ ಮಾಡಬಹುದು ಆದರೆ ಉಚ್ಚ ಶಿಕ್ಷಣದ ಧ್ಯೇಯವನ್ನಿಟ್ಟುಕೊಂಡು ಪ್ರಾಥಮಿಕ ಶಿಕ್ಷಣಕ್ರಮವನ್ನು ಏಕೆ ತಯಾರಿಸಬೇಕು ? ಉಚ್ಚ ಶಿಕ್ಷಣ ಪಡೆಯುವ ಬಾಲ-ಬಾಲಕಿಯರ ಸಂಖ್ಯೆ ತೀರ ಕಡಿಮೆ. ಮಕ್ಕಳಿಗೆ ಸಿಗತಕ್ಕ ಶಿಕ್ಷಣ ಯಾವದೇ ಅವಸ್ಥೆಯಲ್ಲಿ ಸಂಪೂರ್ಣವಾದದ್ದಿರಬೇಕು ಉಚ್ಚ ಶಿಕ್ಷಣ ಪಡೆಯದಿದ್ದರೂ ಅವರಿಗೊಂದು ಪೂರ್ಣ ಯೋಗ್ಯತೆ ಬರಬೇಕು

Education is not something to prepare you for life, but rather a part of life itself Earning should go hand in hand with learning For true education consists in learning to do by doing, learning to help by helping, learning to earn by earning Here we are trying to merge schooling & living into one uninterrupted whole, so that there will be no disconcerting break between learning years & earning years I believe in studying as close to the present as possible and as near to home as possible Let every thing they get at any age be as complete and useful so that even if they do not go on to higher schools, they will have accumulated definite values '

ಹೆನ್ರಿ ಫೋರ್ಡರವರು ಈಗ ೭೫ ವರುಷ ಪ್ರಾಯದ ವಯೋವೃದ್ಧರು, ವ್ಯವಹಾರಜ್ಞರು ಇಂಥವರ ವಿಚಾರಗಳನ್ನು ನಮ್ಮಲ್ಲಿಯ ವಿದ್ಯಾಸಿಧ್ಧಿಗಳೆಲ್ಲರೂ ಪ್ರಶಾಂತಚಿತ್ತದಿಂದ ಪರಾಂಬರಿಸಬೇಕಾಗಿ ನಾವು ಸೂಚಿಸುತ್ತೇವೆ ವರ್ಧಾ ಶಿಕ್ಷಣ-ಯೋಜನೆಯಲ್ಲಿ ವಿದ್ಯಾರ್ಥಿಗಳ ಸಂಪಾದನೆಯ ತತ್ವ ಸೇರ್ಪಡೆಯಾದ್ದರಿಂದ ಆ ಯೋಜನೆಯೇ ತ್ಯಾಜ್ಯವೆಂದೂ ದೋಷಪೂರ್ಣವೆಂದೂ ಆಕ್ಷೇಪಿಸಿದ ಮಹನೀಯರು ಹೆನ್ರಿ ಫೋರ್ಡರವರ ವಿಚಾರಪ್ರದರ್ಶನದಿಂದ ಬೋಧ ಪಡೆಯುವರೆಂದು ನಾವು ಕೋರತ್ತೇವೆ ಸಂದೀಪ-ಶಿಷ್ಯನಾಗಿ ಶ್ರೀಕೃಷ್ಣ ಪರಮಾತ್ಮನು ಉರುವಲ-ಕಟ್ಟಿಗೆಯನ್ನು ಹೊತ್ತು ತಂದು ವಿದ್ಯಾರ್ಜನೆ ಮಾಡಿದ ಉಲ್ಲೇಖವನ್ನು ಸನಾತನಿಗಳೆಲ್ಲರೂ ಬಲ್ಲದ ವಿಷಯ ವಿದ್ಯಾರ್ಜನೆಯನ್ನೂ ಸಂಪಾದನೆಯನ್ನೂ ಒಂದೇ

ಸವನೆ ನಡಿಸಬೇಕೆಂದು ಶ್ರೀಕೃಷ್ಣ ಪರಮಾತ್ಮನು ಸ್ವೋದಾಹರಣೆಯಿಂದ ತೋರ ಹಾಕಿಕೊಟ್ಟಿದ್ದಾನ ವಿದ್ಯಾರ್ಥಿಗಳು ಈ ಉದಾಹರಣೆಯನ್ನು ಉಲಕ್ಷಿಸಿ ವಿತ್ತಸಂಪಾದನೆಯ ಬಲದಿಂದ ವಿದ್ಯಾರ್ಜನೆಯನ್ನು ಮಾಡತೊಡಗಿದುದರಿಂದ ಸನಾತನಿಗಳ ಅವನತಿಗ ಕಾರಣವಾಯಿತು 'ವಿದ್ಯಾರ್ಥೀ ಸುಖಂ ತ್ಯಜೇತ್' ಎಂಬ ಉಕ್ತಿಯಲ್ಲಿದರೂ ತತ್ವಮಟ್ಟಿಗೆ ಇದೇ ತತ್ವ ಅಡಕವಾಗಿದೆ. ವಿದ್ಯಾರ್ಥಿಯು ಸುಖದ ಅಭಿಲಾಷೆ ಹಿಡಿಯದೆ ವಿದ್ಯಾರ್ಜನೆಯನ್ನು ಸಂಪಾದಿಸಬೇಕು ಈಗಿನ ವಿದ್ಯಾರ್ಥಿಗಳ ನಮೂನೆಯೇ ಪ್ರತ್ಯೇಕ. ಅವರಷ್ಟು ಬೇಜಬಾಬದಾರಿಗಳು ಬೇರೊಬ್ಬರಿಲ್ಲ ತಾಯಿ ತಂದೆಯರ ಸ್ಥಿತಿ-ಗತಿಯೇನು? ತಾವು ಹೇಗೆ ನಡಕೊಳ್ಳಬೇಕ? ಮುಂದಿನ ವಿಚಾರ ಹೇಗ? ಎಂಬ ಕಲ್ಪನೆಯೇ ಅವರಿಗೆ ಹೊಂಕದು! ಅವರ ಜೀವನಕ್ರಮವನ್ನು ಪುರಾತನ ವಿದ್ಯಾರ್ಥಿಗಳ ಜೀವನಕ್ರಮಕ್ಕೆ ತುಲನೆ ಮಾಡಿದರೆ ಈಗಿನ ಶಿಕ್ಷಣಕ್ರಮದಿಂದ ಉಂಟಾದ ಅನರ್ಥದ ಕಲ್ಪನೆ ಬಂದೀತು! ಮುಂಬಯಿ ಸರಕಾರವೂ ಹಿಂದುಸ್ಥಾನ ಸರಕಾರವೂ ಶಿಕ್ಷಣ ಕ್ರಮವನ್ನು ಸುಧಾರಿಸುವ ಆಲೋಚನೆಯಲ್ಲಿವೆ. ಇಂಥ ಸಮಯದಲ್ಲಿ ಹೆನ್ರಿ ಫೋರ್ಡರವರ ವಿಚಾರಗಳಿಗನುಸಾರವಾಗಿ ವಿದ್ಯಾನಿಲಯಗಳ ವಿಸ್ತಾರವಾಗಬೇಕೆಂದು ನಾವು ಸೂಚಿಸುತ್ತೇವೆ. ರಾ| ಕಸಬೇಕರವರು ನುಡಿದಂತೆ, ಇದೇನ ಹೊಸಕ್ರಮವಲ್ಲ, ಸುಧಾರಿಸಿದ ಜನಾಂಗಗಳು ಸುಸಂಘಟಿತವಾಗಿ ಪುರಸ್ಕರಿಸುತ್ತಿರುವ ಕ್ರಮವಿದು ಸನಾತನ ಪರಂಪರೆಯಾದರೂ ಹಾಗೆಯೇ ಶಿಲ್ಪಕ್ರಮದ ಅಭ್ಯುದಯದಿಂದಲೇ ರಾಷ್ಟ್ರದ ಅಭ್ಯುದಯವಾಗತಕ್ಕದೆಂದು ಋಷಿ ವಚನ.

ಕೃಷಿಮೂಲಂ ಧನಂ ತತ್ತು
ಜೀಯತೇ ಶಿಲ್ಪಕರ್ಮಣಾ
ಶಿಲ್ಪಜೀವೀ ಚ ತುಷ್ಟಶ್ಚೇತ್ ರಾಷ್ಟ್ರಂ
ಸ್ಯಾತ್ ಸುಖಭಾಗತಃ ॥

ಧನವು ಕೃಷಿ ಮೂಲವಾಗಿದ್ದರೂ ಶಿಲ್ಪಕ್ರಮದಿಂದ ವಿಸ್ತಾರ ಹೊಂದುತ್ತದೆ. ಶಿಲ್ಪಜೀವಿಗಳು ಸಂತಸದಿಂದಿದ್ದರೆ ರಾಷ್ಟ್ರವು ಸುಖಹೊಂದುತ್ತದೆ ಈ ಉಕ್ತಿಯಲ್ಲಿಯೂ ನಾವು ಶಿಲ್ಪಜೀವನದ ಮಹಿಮೆಯನ್ನೇ ಕಾಣಬಹುದು. ಶಿಲ್ಪಜೀವನವು ನಮ್ಮಲ್ಲಿ ಕ್ರಮವಾಗಿ, ಸ್ಥಿರವಾಗಿ ಕಳೆಗುಂದಿತು ರಾಜಕಾರಣವೇನಿದ್ದಾಗ್ಯೂ ಪ್ರಮುಖ್ಯವಾಗಿ ಶಿಕ್ಷಣವೇ ಶಿಲ್ಪಜೀವನದ ನಾಶಕಾರಣವೆಂದು ನಾವು ಧಾರಾಳವಾಗಿ ಎಣಿಸುತ್ತೇವೆ ಈಗಿನ ವಿದ್ಯಾರ್ಥಿಗಳಿಗೆ ಕಾಯಕಷ್ಟದ ಶಿಲ್ಪಜೀವನದ ತಿರಸ್ಕಾರ ಉಂಟಾಗಿದೆ ಬೌದ್ಧಿಕ ವಿದ್ಯಾರ್ಥಿಕ-ವ್ಯಾಪಾರ ಕಾಲೇಜುಗಳಲ್ಲಿ ಉಚ್ಚ ಉಚ್ಚ ಶಿಕ್ಷಣ ಪಡೆದು ಉಚ್ಚ ಉಚ್ಚ ಪದವಿಗಳನ್ನು ಸಂಪಾದಿಸಿದ ಕುಶಾಗ್ರ ಬುದ್ಧಿಯ ಯೋಗ್ಯತಾಸಂಪನ್ನರು ಕಟ್ಟಕಡೆಗೆ ಮಾಡುವ ಪುರುಷಾರ್ಥ ಎಂದರೆ ಸರಕಾರಿ ನೌಕರಿ. ಅದೂ ಒಂದು ಬಾಳ್ವೆ ಎಂದೆಣಿಸಲ್ಪಡುತ್ತದೆ ಈ ವಿಚಾರವನ್ನು ವಿದ್ಯಾರ್ಥಿಗಳು ಸಂಪೂರ್ಣವಾಗಿ ತೂರದು ಶಿಲ್ಪಜೀವನಕ್ಕೆ ಅನುಕೂಲಿಸುವಂತೆ ಶಿಕ್ಷಣಕ್ರಮದಲ್ಲಿ ತಿದ್ದುಪಾಟುಗಳನ್ನು ಮಾಡಬೇಕು [illegible] ಹೊಸ ಶಿಕ್ಷಣಕ್ರಮವನ್ನು ಸಂಘಟಿಸದ ನಮ್ಮ ದೇಶದ ಉದ್ಧಾರವಾಗದು ಹೆನ್ರಿ ಫೋರ್ಡರವರು ಈ ಮಾತನ್ನು ಅಧಿಕಾರದಿಂದ ಹೇಳುತ್ತಾರೆ ಇವರಷ್ಟೇ ಲಕ್ಷಾಧೀಶನಾದವನು ವಿದ್ಯಾದಾನದ ಯೋಜನೆಯನ್ನು ಕೈಕೊಳ್ಳಬೇಕಾಗಿ ನಮ್ಮ ವಿನಂತಿ!

ಮ್ಯುನಿಕ್ ಒಡಂಬಡಿಕೆಯ ರಹಸ್ಯ!

[ನಿರೀಕ್ಷಕನು ಬರೆದುದು]

ಮ್ಯುನಿಕ್ ಒಡಂಬಡಿಕೆಯ ರಹಸ್ಯವೇನೆಂದು ಇನ್ನೂ ಯಾರಿಗೂ ತಿಳಿಯದಾಗಿದೆ ಚಿಕ್ಕ ರಾಷ್ಟ್ರಗಳ ರಕ್ಷಣೆಯ ವೇದಾಂತ ಹೇಳಿ ಆತ್ಮರಕ್ಷಣೆಗಾಗಿ ಝೆಕೋಸ್ಲೋವಾಕಿಯಾ ಜನಾಂಗವನ್ನು ನಿರ್ಭಯದಿಂದ ವರ್ಷಗಳ ತನಕ ಕಾಪಾಡಿದ ಬ್ರಿಟಿಶ ಫ್ರೆಂಚ ಜನಾಂಗಗಳು ಈಗ ಝೆಕ್ ಜನಾಂಗದ ಕೈ ಬಿಟ್ಟ ಬಗೆ ಹೇಗೆ? ಬ್ರಿಟಿಶ ಫ್ರೆಂಚರು ಯುದ್ಧಕ್ಕೆ ತಯಾರಿಲ್ಲವೆಂದು ಹಲವರು ಹೇಳುತ್ತಾರೆ ರಶ್ಯರು ನೆರವಾಗಲು ಮುಂದಾಗಲಿಲ್ಲವಾಗಿ ಇನ್ನೊಂದು ಮಾತು. ಎರಡೂ ಮಾತುಗಳಲ್ಲಿ ಸ್ವಾರಸ್ಯವಿಲ್ಲ. ಇಲ್ಲದಿದ್ದರೆ ಆ ಪ್ರಶ್ನೆಗಳನ್ನು ನಾನು ಇಲ್ಲಿ ಸವಿಸ್ತರ ಚರ್ಚಿಸುತ್ತಿದ್ದೆ ಒಂದಾನೊಂದು [illegible] ಸಾವಕಾರರು ತಮ್ಮ ಹಣವನ್ನು ಸಾಲ ಕೊಟ್ಟು ಒಡ್ಡಿ ಗಳಿಸುವ ದುರಾಶೆಯಿಂದ ಹಿಟ್ಲರನೊಡನೆ ಸಂಧಿ ಮಾಡಿಕೊಂಡರಾಗಿಯೂ, ಸಾಮರ್ರಾಜ್ಯ ದುರಾಶೆಯಿಂದಲೇ ಬ್ರಿಟಿಶ-ಫ್ರೆಂಚರು ಸಂಕಟಕಾಲದಲ್ಲಿ ಝೆಕರ ಕೈಬಿಟ್ಟರಾಗಿಯೂ ಮತ್ತೊಂದು ಆರೋಪವಿದೆ ಇದನ್ನು ನಾನು ಅಲ್ಲಗಳೆಯಲಾರೆ, ಆದರೆ ಒಪ್ಪಲಿಕ್ಕೂ ನನ್ನ ಮನಸ್ಸಾಗದು ಸಾವಕಾರರ ಸ್ವಾರ್ಥ-ಸೂತ್ರಗಳೇ ಬೇರೆ! ಈ ಸಂಗತಿಗೆ ಪೂರ್ವ-ಉತ್ತರ ಪಕ್ಷಗಳಿವೆ ಖಂಡಿಸಲೂ ಬಹುದು, ಮಂಡಿಸಲೂ ಬಹುದು ಅದರಿಂದ ಆ ಗೊಡವೆಯನ್ನೇ ನಾನು ಬಿಡುತ್ತೇನೆ "ಹಾಗಾದರೆ ಮುಖ್ಯ ಕಾರಣವೇನೆಂದು ನೀನ್ನು ಹೇಳುತೆ?" ಎಂಬ ಪ್ರಶ್ನೆ ಯಾರೂ ಎತ್ತಬಹುದು, ಅದಕ್ಕೆ ಉತ್ತರವಿಷ್ಟೇ.-ಬ್ರಿಟಿಶರು ಜಪಾನಕ್ಕೆ ಹೆದರಿದ್ದಾರೆ ಯುರೋಪ ಖಂಡದೊಳಗೆ ಯುದ್ಧವಾದರೆ ಮೊದಲೇ ರಣಸೂಕ್ತಿದ ಜಪಾನ ಜನಾಂಗವು ಆರ್ಭಟಿಸಿ ಪೂರ್ವಪ್ರದೇಶದ ಮೇಲೆ ದಂಡೆತ್ತಿ ಬ್ರಿಟಿಶರ ಸರ್ವನಾಶಮಾಡುವದು ಖಂಡಿತ ಚೀನ, ಹೊಂಗಕೊಂಗ, ಮಲಯಾ ದ್ವೀಪಕಲ್ಪ, ಆಸ್ಟ್ರೇಲಿಯಾ ದೇಶಗಳ ಮೇಲೆ ಜಪಾನಿಯರು ದಾಳಿಯನ್ನೆಬ್ಬಿಸಿ ಬೋರ್ನಿಯೋ, ಜಾವಾ, ಸುಮಾತ್ರಾ, ಸಿಂಗಾಪುರ ಮಾರ್ಗವಾಗಿ ಹಿಂದುಸ್ಥಾನದ ಮೇಲೂ ಸಾಗಿಬರುವ ಭೀತಿಯುಂಟಾಯಿತಾಗಿ ಅಮೇರಿಕೆಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ನನಗ ಈ ಸದ್ದಿಯಲ್ಲಿ ತಥ್ಯಾಂಶ ಕಾಣತಕ್ಕದೆ ಕಾರಣವನ್ನು ತಿಳಿಸಿಬಿಡುತ್ತೇನೆ. ಸದ್ಯಕ್ಕೆ ಆಸ್ಟ್ರೇಲಿಯಾದ ರಾಜಧಾನಿಯಾದ ಸಿಡ್ನಿ ಪಟ್ಟಣದಲ್ಲಿ ಒಂದು ಸಮ್ಮೇಲನ ಜರಗಿತು ಬ್ರಿಟಿಶ ಸಾಮ್ರಾಜ್ಯದೊಳಗಿನ ಕ್ರಮಾಗತ ಸಮ್ಮೇಲನವದು. ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ, ನ್ಯೂಝಿಲಂಡ, ದಕ್ಷಿಣ ಆಫ್ರಿಕಾ, ಹಿಂದುಸ್ಥಾನ ದೇಶಗಳ ಪ್ರತಿನಿಧಿಗಳು ಸಮ್ಮೇಲನಕ್ಕೆ ಬಿಜಯಿಸಿದ್ದರು ಇದು ಸರಕಾರಿ ಸಮ್ಮೇಲನವಲ್ಲ, ಆದರೆ ರಾಷ್ಟ್ರ ಸರಕಾರದ ಸೂತ್ರ [illegible] ಸಮ್ಮೇಲನವು. ಬ್ರಿಟಿಶ ಸಾಮ್ರಾಜ್ಯದೊಳಗಿನ ಸೂತ್ರಚಾಲಕರಂದ ಲೋಯನ್ ದೊರೆಗಳು ಈ ಸಮ್ಮೇಲನಕ್ಕಾಗಿ ಆಕಾಶ ಮಾರ್ಗದಿಂದ ಪಯಣಿಸಿ ಬಂದಿದ್ದರಂತೆ ಬಳಿಕ, ಈ ಸಮ್ಮೇಲನದ ಮಹತ್ವ ನಿಮಗೆ ತಿಳಿಯಬಹುದು ಸಾಮ್ರಾಜ್ಯದೊಳಗಿನ ಯಾವತ್ತೂ ಸಮ್ಮೇಲನದಲ್ಲಿ ಪಕ್ಷ ಪಂಗಡಗಳ ಪ್ರತಿನಿಧಿಗಳು ಮಿಲಿತರಾಗಿ ನಾನಾ ರಾಷ್ಟ್ರಸಮಸ್ಯೆಗಳನ್ನು ಬಗೆಹರಿಸಿ ಚಾಲಿಸಿದರಾಗಿ ಲೋಯನ್ ದೊರೆಗಳು ಸಮ್ಮೇಲನ ಕಾರ್ಯ ಮುಗಿಸಿಕೊಂಡು ಲಗುಬಗೆಯಿಂದ ಸ್ವದೇಶಕ್ಕೆ ಮರಳುವಾಗ ಕರಾಚಿಯ ವೈಮಾನಿಕ ರಾಜ್ಯದಲ್ಲಿ ಪತ್ರಿಕಾ ಪ್ರತಿನಿಧಿಗಳ ಕಡೆ ಉದ್ಗರಿಸಿದರು! ದೊರೆಗಳು ಸಿಂಗಾಪುರಕ್ಕೆ ಹೋಗಿ ಅಲ್ಲಿಯ ಸಿದ್ಧತೆಯನ್ನು ಕಂಡುಕೊಂಡರಾಗಿ ಪ್ರಕಟವಾಗಿದೆ ಇತ್ತ ಹಿಂದುಸ್ಥಾನಕ್ಕೂ ಅತ್ತ ಆಸ್ಟ್ರೇಲಿಯಾ, ಹೊಂಗಕೊಂಗ, ಚೀನ ಮೊದಲಾದ ಬ್ರಿಟಿಶ ಸಾಮ್ರಾಜ್ಯ ಪ್ರದೇಶಕ್ಕೂ ನಡುವ ಮಧ್ಯದಲ್ಲಿ ಸಿಂಗಾಪುರ ರಾಜ್ಯವಿದೆ ಇದು ಸೈನ್ಯ ಕೇಂದ್ರ, ನೌಕಾ ಕೇಂದ್ರ, ವೈಮಾನಿಕ ಕೇಂದ್ರವಾದರೂ ಇದೇ! "ಇನ್ನು ಭದ್ರ ಕೇಂದ್ರವನ್ನು ನಾನೆಲ್ಲಿಯೂ ಕಾಣೆನೆಂ"ದು ಅಮೇರಿಕೆಯ ಜ್ಹಾನ್ ಗುಂಥರರವರು ಸಿಂಗಾಪುರದೊಳಗಿನ ಕೋಟೆ-ಕೊತ್ತಳ, ತೋಫು ಸಬಾಕಿ, ಹಡಗುಪಡೆಗಳನ್ನು ಕಂಡು ಅಚ್ಚರಿಗೊಂಡು ಒರೆಯುತ್ತಾರೆ! ವಿಮಾನುಗಳನ್ನು ಹಾರಿಸುವ-ಇಳಿಸುವ ವಿಸ್ತಾರ ಬಯಲುಗಳನ್ನು ನೋಡಿದರಂತೂ ಮಾನವನು ಕುಂಠಿತಮತಿಯಾಗುತ್ತಾನಂತೆ!

(ಪುರವಣಿ (೨) ಮೇಲೆ ಮುಂದರಿಸಿದೆ.)

ಕಾರವಾರ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಆಯ್ಕೆ.

ರಾ|| ಸಾ|| ಗಣಪತರಾವ ಶೇಲಿಂಗರು ಸರ್ವಾನುಮತಿಯಿಂದ ಅಧ್ಯಕ್ಷರಾದರು!

[ಸುದ್ದಿಗಾರರ ತಂತಿ]

ಕಾರವಾರ, ತಾ ೨೮-೧೦-೩೯.

ಕಲೆಕ್ಟರರು ಅಧ್ಯಕ್ಷರ ಆಯ್ಕೆಗಾಗಿ ಇಂದು ಸಭೆ ಕರೆದ ಮೇರೆಗೆ ಮ್ಯುನಿಸಿಪಾಲಿಟಿಯ ನಿವೃತ್ತ ಅಧ್ಯಕ್ಷರಾದ ರಾ|| ಚಂದಾವರಕರರ ಅಧ್ಯಕ್ಷತೆಯಲ್ಲಿ ಮ್ಯುನಿಸಿಪಾಲಿಟಿಯ ಸಭೆ ನೆರೆಯಿತು ರಾ|| ಮಾವಿನಕುರ್ವೆಯವರು ಸಭಾಪತಿಗಳಾಗಿ ಆರಿಸಲ್ಪಟ್ಟ ಬಳಿಕ ರಾ|| ಸಾ|| ಶೇಲಿಂಗರವರು ಹೊಸ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಬೇಕಾಗಿ ಒಂದು ಸೂಚನೆ, ರಾ|| ಚಂದಾವರಕರರು ಅಧ್ಯಕ್ಷರಿರಬೇಕಾಗಿ ಮತ್ತೊಂದು ಸೂಚನೆ ಹೀಗೆ ಸೂಚನೆಗಳು ಸೂಚಿಸಲ್ಪಟ್ಟನು ರಾ|| ಚಂದಾವರಕರರು ಅಧ್ಯಕ್ಷರಾಗಿ ಆರಿಸಿಬರುವ ಸಂಭವ ಕಾಣದ್ದರಿಂದ ತಮ್ಮ ಉಮೇದ್ವಾರಿಯನ್ನು ಅವರು ಹಿಂತೆಗೆದುಕೊಂಡರು ಹೀಗೆ ರಾ| ಸಾ| ಗಣಪತರಾವ ಶೇಲಿಂಗರವರು ಅಧ್ಯಕ್ಷರಾಗಿ ಸರ್ವಾನುಮತಿಯಿಂದ ಆರಿಸಲ್ಪಟ್ಟರು ರಾ|| ಸಾ| ಶೇಲಿಂಗರವರು ಅಧ್ಯಕ್ಷಸ್ಥಾನವನ್ನಲಂಕರಿಸಿ ಸಕಲ ಸಭಾಸದರು ತಮ್ಮೊಡನೆ ಹಿಂದಿನ ಹಿತುಸ್ಪರ್ಧೆಗಳನ್ನೆಲ್ಲ ಮರೆತು ಬಂಧುಭಾವದಿಂದ ಸಹಕರಿಸಬೇಕಾಗಿ ವಿನಂತಿ ಮಾಡಿಕೊಂಡು ಸಭೆಯನ್ನು ವಿಸರ್ಜಿಸಿದರು

[ಕಾರವಾರ ಮ್ಯುನಿಸಿಪಾಲಿಟಿಯ ಇಲೆಕ್ಷನ್ ಕಾರಣ ಲೇಖದಲ್ಲಿ ಪ್ರಕಟಗೊಂಡ ಕೆಲ ವಿಷಯಗಳು ಸರಿಯಲ್ಲವೆಂದು ಗೆಳೆಯರೊಬ್ಬರೂ ರಾ| ಸಾ| ಶೆಟ್ಟಿ, ರಾ| ಡಿ ಬಿ ನಾಡಕರ್ಣಿ ಇವರೂ ಬರೆದುಕಳಿಸಿರುವ ಪತ್ರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

— ಸಂ]

ಸ್ಥಾನಿಕ ವೃತ್ತಾಂತ.

ಕುಮುಟಾ— [illegible] ಮಳೆ ಬೀಳುವ ಚಿಹ್ನೆಗಳು ತೋರುತ್ತಿವೆ [illegible]

[illegible]

ಕೆಲವು ಪತ್ರಿಕೆಗಳಲ್ಲಿ [illegible] ಪೋಲೀಸರು ತಮ್ಮ ಕರ್ತವ್ಯವನ್ನು [illegible] ಮಾಡುವದಿಲ್ಲವಾಗಿಯೂ [illegible]

[illegible]

ಕಳೆದ ಮಂಗಳವಾರ [illegible]

[illegible]

ಹೊನ್ನಾವರ— ಹೊನ್ನಾವರ ಮ್ಯುನಿಸಿಪಾಲಿಟಿ ಹದಿನೆಂಟನೆ ವಾರ್ಡಗಳ ಮೇಲೆ ಹಚ್ಚುವ ದೀಪಗಳ ವ್ಯವಸ್ಥೆ ಸರಿಯಿಲ್ಲವಾಗಿ ಹೊನ್ನಾವರ ಬಂದರದ ಮೇಲಿನ ನಾಗರಿಕರೆಲ್ಲರು ದೂರುತ್ತಾರೆ. ಎಷ್ಟೋ ದೀಪಗಳಿಗೆ ಚಿಮಣಿಲ್ಲ, ಕೆಲವು ದೀಪಗಳ ಕಾಚು ಒಡೆದು ಹೋಗಿವೆ, ಕೆಲವು ದೀಪಗಳ ಕಾಚು ಕಪ್ಪಾದ್ದರಿಂದ ಒಳಗೆ ದೀಪ ಹಚ್ಚಿದರೂ ಪ್ರಕಾಶ ಹೊರಗೆ ಬೀಳುವದಿಲ್ಲ; ಹೀಗೆ ಅವರು ಹೇಳುತ್ತಾರೆ. ಮ್ಯುನಿಸಿಪಾಲಿಟಿಯಲ್ಲಿ ಎಣ್ಣೆಯ ಖರ್ಚ ಮಾತ್ರ ಕಡಿಮೆಯಾಗಿಲ್ಲವಂತೆ! ನಗರ ಸಭೆಯ ಮಾನ್ಯ ಸದಸ್ಯರು ಊರಲ್ಲಿ ತಿರುಗಾಡಿ ದೀಪಗಳ ಅವ್ಯವಸ್ಥೆಯನ್ನು ಸ್ವತ ಕಂಡುಕೊಳ್ಳಬೇಕಾಗಿಯೂ ಅದನ್ನು ಹೋಗಲಾಡಿಸಬೇಕಾಗಿಯೂ ಅವರು ಸೂಚಿಸುತ್ತಾರೆ. ಅದೇ ಮೇರೆಗೆ ಇತ್ತೀಚೆಗೆ ಕೆಲಸಕ್ಕೆ ನೇಮಿಸಿಕೊಂಡಿದ್ದ ಧಾರವಾಡ ಬದಿಯ ಕಾರಕೂನರೇನೋ ನಗರಸಭೆಯ ಕಚೇರಿಯಲ್ಲಿ ಅವ್ಯವಸ್ಥಿತವಾಗಿ ಬಿದ್ದುಕೊಂಡಿದ್ದ ಕಾಗದ-ಪತ್ರಗಳ ವ್ಯವಸ್ಥೆ ಹಚ್ಚಿದ್ದಾರೆಂತಲೂ ಅವನ್ನು ನಗರ ಸಭೆಯವರು ಸರಿಯಾಗಿ ಕಟ್ಟಿಡುವ ವ್ಯವಸ್ಥೆ ಮಾಡಬೇಕಾಗಿಯೂ ಅವರು ಬಿನ್ನವಿಸುತ್ತಾರೆ.

ಮಂಕಿ— ([illegible] ೧೦-೨೮) ಬಳಕೂರಿನ ಅಂಚೆಕಟ್ಟೆಯಿಂದ ಟಪಾಲ ಬಟವಡೆ ಮಾಡಿದರೆ ತಮಗೆ ಅನುಕೂಲವಾಗುತ್ತದಾಗಿಯೂ ಮಂಕಿಯ ಅಂಚೆಕಟ್ಟೆಯಿಂದಲೇ ಬಟವಡೆಯಾಗುವಂತೆ ವ್ಯವಸ್ಥೆಯಾಗಬೇಕಾಗಿಯೂ ಮಂಕಿ ಬದಿಯ ಹಳ್ಳಿಗಳ ಕೆಲವು ಜನರು ಅರ್ಜಿ ಮಾಡಿದ್ದರ ಫಲವಾಗಿಯೇ ಬಳಕೂರ ಅಂಚೆಕಟ್ಟೆಯಿಂದ ಬಳಕೂರ ವಿನಹ ಬಾಕಿ ಹಳ್ಳಿಗಳ ಟಪಾಲ ಬಟವಡೆಯಾಗುತ್ತಿದ್ದದ್ದನ್ನು ನಿಲ್ಲಿಸಲಾಯಿತಾಗಿ ಮಂಕಿಯ ಸುದ್ದಿಗಾರರು ತಿಳಿಸುತ್ತಾರೆ. ಮತ್ತು ಬಳಕೂರಿನಿಂದ ಮೊದಲು ವಾರದಲ್ಲಿ ಮೂರಾವರ್ತಿ ಟಪಾಲ-ಬಟವಡೆಯಾಗುತ್ತಿದ್ದಂತೆ ಮಂಕಿಯಿಂದ ಈ ಹಳ್ಳಿಗಳಿಗೆ- ಮಂಕಿಯಿಂದ ೫-೬ ಮೈಲು ಅಂತರದಲ್ಲಿರುವ ಹಳ್ಳಿಗಳಿಗಾದರೂ - ವಾರದಲ್ಲಿ

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ



ಲಿವ್ಹರ್ ಕ್ಯೂರ್

ಲಿವ್ಹರ್ ಮತ್ತು ಯಕೃತ್ ವಿಕಾರಗಳ ಮೇಲೆ ಅಮೋಘವಾದ ಉಪಾಯ!

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ,

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ — ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಹೊರಾವರ್ತೀ ಯಾಕೆ ಬಟವಡೆ ಮಾಡಿಕಬಾರದು ? ಎಂದು ಅವರು ಪ್ರಶ್ನೆ ಮಾಡುತ್ತಾರೆ ಅಂಟಿ-ಇಲಾಖೆಯವರು ಈ ಸೂಚನೆ ಸ್ವೀಕರಿಸಬಹುದಲ್ಲವೇ ?

ನೊನ್ನೆ ಸಂಜೆ ರಾ। ತಿ ಶ್ರೀ ನಾಯಕ ಮತ್ತು ರಾ। ಶಾಲಿಕತಗಿ ವಕೀಲ ಇವರು ಈ ಊರಲ್ಲಿ ಕೊಂಗ್ರೆಸ ಸದಸ್ಯರನ್ನು ಮಾಡುವ ವ್ಯವಸ್ಥೆ ಮಾಡಲಿಕ್ಕೂ ಹೋದ ವರ್ಷ ಒಟ್ಟುಗೂಡಿಸಿದ ಹಣದ ವ್ಯವಸ್ಥೆ ಮಾಡಲಿಕ್ಕೂ ಇಲ್ಲಿಗೆ ಬಂದಿದ್ದರು ಹೋದ ವರ್ಷ ಆದ ೪೫೨ ಸದಸ್ಯರಲ್ಲಿ, ೨೦೨ ಸದಸ್ಯರನ್ನು ರಾ। ಶೀಸಗಿರಿ ಬಾಬ ಪ್ರಭು ಇವರು, ೧೦೦ ಸದಸ್ಯರನ್ನು ರಾ। ಮಂಜಪ್ಪ ಬಾಬ ನಾಯ್ಕ ಇವರು ಮತ್ತು ೧೫೦ ಸದಸ್ಯರನ್ನು ರಾ। ಗಣಪತಿ ಗುಮ್ಮಯ್ಯ ನಾಯ್ಕ ಮತ್ತು ಬಾಲಯ್ಯಾ ಡಿಂಗಾ ನಾಯ್ಕ ಇವರು ಕೂಡಿ ಮಾಡಿದ್ದರಾಗಿಯೂ ಅವರವರು ಮಾಡಿದ ಸದಸ್ಯರ ಹಣ ಅವರವರ ಕಡೆಗೇ ಇತ್ತಾಗಿಯೂ ತಿಳಿದುಬಂತು. ಮೂವರೂ ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ಸಲ್ಲತಕ್ಕ ಚತುರ್ಥಾಂಶ ಹಣ ಕಳಿಸಿಕೊಟ್ಟಿದ್ದರು. ರಾ। ಪ್ರಭುರವರೊಬ್ಬರು ಮಾತ್ರ ಜಿಲ್ಹಾ ಕೊಂ। ಕಮಿಟಿಯ ಅಂಶದ ಹಣವನ್ನೂ ಸಲ್ಲಿಸಿದ್ದರಂತೆ ಈ ಲೆಕ್ಕದಂತೆ ರಾ। ಪ್ರಭುರವರ ಬಳಿ ರೂ ೨೫।, ರಾ। ಮಂಜಪ್ಪ ನಾಯ್ಕರ ಬಳಿ ರೂ ೧೮॥ ಮತ್ತು ರಾ। ಗಣಪತಿ ಮತ್ತು ಬಾಲಯ್ಯ ನಾಯ್ಕರ ಬಳಿ ರೂ ೩೮-೬-೦ ಶಿಲ್ಕು ಉಳಿದಿತ್ತು ರಾ। ಮಂಜಪ್ಪ ನಾಯ್ಕ, ಬಾಲಯ್ಯ ನಾಯ್ಕ, ಮತ್ತು ಗಣಪತಿ ನಾಯ್ಕ ಇವರು ರಾ। ತಿಮ್ಮಪ್ಪ ನಾಯಕರಿಗೆ ಸಿಗಲಿಲ್ಲ ರಾ। ಪ್ರಭುರವರು ಮಾತ್ರ ತಮ್ಮ ಬಳಿಯಲ್ಲಿದ್ದ ರೂ ೨೫। ರಾ। ಪ್ರಭುರವರ ಕಡೆ ಕೊಟ್ಟಿದ್ದಾರೆ ಕೊಂಗ್ರೆಸ ಸದಸ್ಯರನ್ನು ನಾಯಕರ ಕಡೆಗೆ ಒಪ್ಪಿಸಿದರು ಈ ವರ್ಷದ ಸದಸ್ಯರನ್ನು ಮಾಡುವ ಬಗ್ಗೆ ಕೆಲವು ಪುಸ್ತಕಗಳನ್ನು ರಾ। ನಾಯಕರು ಮಾಡುವ ಕೆಲಸ ಇಂದಿನಿಂದ ಪ್ರಾರಂಭವಾಗಿದೆ

ಭೂಕಂಪ.—(ತಾ ೨೯ ೧೦ ೩೭) ಶಕೆ ದೀಲುತ್ತಾದೆ ಗದ್ದೆ ಕೊಯಲು ಮಾಗುತ್ತ ಬಂದಿದೆ ನಿನ್ನೆ ಮಧ್ಯಾಹ್ನ ಮೂರು ಘಂಟೆಯ ಸುಮಾರಕ್ಕೆ ಚಿಕ್ಕ ಮಳೆ ಬಿದ್ದಿತು

(ಪುರವಣಿ (೧) ನೋಡಿರಿ)

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಟ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ-ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಕ .- ಕೇ. ರಾಮ ಪಂಡಿತ, ಪೋ ಕುಮಟಾ. ಜಿ ಉ. ಕಾನಡಾ.

ಬನ್ನಿರಿ ! —॥ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ॥— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೇಲ್,

ಮಹಾಶಂಕರೀ, **ಕುಮಟಾ.** (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೇಲ್"ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ಣಾಟಕ

ಎಗ್ಸ್ಯುಮಿಕ್ಶ್ಚರ್ ಉಪಯೋಗಿಸಿರಿ !

ಸಿಕ್ಕ ಸಿಕ್ಕ ಔಷಧ ಸೇವಿಸಿ, ಜ್ವರದಂಥ ಬೇನೆಯನ್ನು ಉದ್ದ ಬೆಳಸಬೇಡಿರಿ ಬೆಲೆ ಆಣೆ ೧೨

ಇಂಡೋಬಾಮ್

ತಲೆಶೂಲಿ, ಮೈನೋವು, ಸಂಧಿವಾತ, ವಿಷಾರಿ ನೋಣಗಳ ಕಡಿತ ಮೊದಲಾದ ವಿಕಾರಗಳು ತಾಸು ಮಲಮದಿಂದ ಬೇಗನೆ ವಾಸಿಯಾಗುತ್ತವೆ ಬೇರೆ ಬಾಮುಗಳಿಂದಾಗುವಂತೆ ಅನಾವಶ್ಯಕ ಉರಿ ಏಳುವದಿಲ್ಲ ಬೆಲೆ ಆ. ೮

ಎಲ್ಲ ಅಂಗಡಿಗಳಲ್ಲಿ ಸಿಗುತ್ತದೆ, ಸಿಗದಿದ್ದರೆ ನಮಗೆ ಬರೆಯಿರಿ

ಕರ್ಣಾಟಕ ಬ್ರದರ್ಸ,

ಗಿರಗಾಂವ, ಮುಂಬಯಿ, ನಂ ೪.

25,000 ವಿವಿಧ ಶಬ್ದಗಳುಳ್ಳ "ಹೊಸ ನಿಘಂಟು"

ಸ್ಟುಡಂಟ್ಸ ಮೊಡರ್ನ ಪ್ರೆಕ್ಟಿಕಲ್ ಡಿಕ್ಷನರಿ.

ಇಂಗ್ಲಿಷ ಕನ್ನಡ

ರಚಕರು - ವೈದ್ಯಭೂಷಣ ದಿ ಶ ಭಾರದ್ವಾಜ ವಿದ್ಯಾಭೂಷಣ ಈ ಮೈಸೂರ ಯುನಿವರ್ಸಿಟಿ ವ್ಹಾಯಿಸ ಚಾನ್ಸಲರರ ಮುನ್ನುಡಿ ಯುಳ್ಳ, ಸರ್ ಎಮ್ ವಿಶ್ವೇಶ್ವರಯ್ಯನವರು ಹೊಗಳಿದ, ಮುಂಬಯಿ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ। ಮು ರಾಮರಾಯರು ಹರಸಿದ ಈ ಡಿಕ್ಷನರಿಯು ಇಡೀ ಕರ್ನಾಟಕದಲ್ಲಿ ಹೊಸ ಸಾಹಸ ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕದ್ದು ಬೆಲೆ ರೂ ೨ ೦ ೦ ಟಪಾಲ ಪ್ರತ್ಯೇಕ ಸಿಗುವಸ್ಥಳ - **ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.**

ಚಿತ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ್) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ !

(ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ ೨) ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ। ಏ ಎನ್ ಶ್ರೀನಿವಾಸರಾವ್, ಲಿವ್ಹರ್ ಸ್ಪೆಶಲಿಸ್ಟ,

ಎಂ ಏ ಪ್ರಾಸಾದಿಕ ಔಷಧಾಲಯ, ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಏಜಂಟ —

ಸುಬ್ರಾಯ ಸೀತಾರಾಮ ಹೆಗಡೆ, ಶಿರ್ಸಿ.

ವಾರ್ತೆಗಳು.

(೩ನೇ ಪಾನದಿಂದ ಮುಂದುವರಿದುದು)

ಷ ಜಾಗ್ರತೆ ಕೊಂಡಿದ್ದಾರೆ ಆವತ್ತಿನ ಪಟ್ಟಣಗಳ ಗದ್ದಲವು ಗದಂತೆ, ಶಾಂತತೆ ಕಾಪಾಡುವಂತೆ ಅಲ್ಲಲ್ಲಿ ಖುದಾಯಿ-ಖಿದಮತಗಾರರು ವ್ಯವಸ್ಥೆ ಮಾಡಿಟ್ಟಿದ್ದರು. ಉತ್ಮಾಂಜಾಯಿ ಗ್ರಾಮದ ಅಬ್ದುಲ್ಲ ಗಫ್ಫಾರಖಾನ (ಗಡಿನಾಡಿನ ಗಾಂಧಿ)ರವರ ನಿವಾಸಸ್ಥಾನ ದಲ್ಲಿ ಮಹಾತ್ಮರಿಗೆ ಸಂಪೂರ್ಣ ವಿಶ್ರಾಂತಿ ದೊರೆಯಿತು. ಕೋಹಾತ, ಬೆಂಗೋ ತಹಶೀಲು, ನಾರವ ಚಿ ಕ್ಕೈ ಮುತ್ತಾಂಗ ಮೊದಲಾದ ಕಡೆಗಳಲ್ಲಿ ಮಹಾತ್ಮರಿಗೆ ವಿಜೃಂಭಣೆಯ ಸ್ವಾಗತವಾಯಿತು. ಒಸ್ಮಿಮೋಳಗ ಆದ ಸ್ವಾಗತ ಮಾತ್ರ ರಾಜವೈಭವಕ್ಕೂ ಮಿಗಿಲಾದದ್ದು! ಮಹಾತ್ಮರು ಸೋಮವಾರ ಅಪರಾಹ್ಣ ಕೋಹಾತದಿಂದ ಅಲ್ಲಿ ತಲ್ಪುವವರಿದ್ದರು. ಆಚೆ ಈಚೆ, ಸುತ್ತಮುತ್ತಿನ ನೆರೆಹೊರೆಯ ಹಳ್ಳಿಗಳಿಂದ ಜನರು ಮೆರವಣಿಗೆ ಮಾಡಿಕೊಂಡು ಕೋಹಾತದಿಂದ ಒಸ್ಮಿ ವರೆಗಿನ ೨೯ ಮೈಲು ಉದ್ದ ಮಾರ್ಗವನ್ನು ಎರಡೂ ಪಕ್ಕಗಳಲ್ಲಿ ತಳಿರು-ತೋರಣಗಳನ್ನು ಸೊಗಸಾಗಿ ಸಿಂಗರಿಸಿ ನಿಂತಿದ್ದರು! ರಾಷ್ಟ್ರಧ್ವಜಗಳು ತೋರಣಗಳಲ್ಲಿ ಹಾರಾಡುತ್ತಿದ್ದವು! ವಾದ್ಯಘೋಷವಂತು ನಡೆದೇ ಇತ್ತು! ಮಹಾತ್ಮರು ಸಂಜೆ ೪|| ಘಂಟೆಗೆ ಬನ್ನು ಪಟ್ಟಣ ಸೇರಿದೊಡನೆ ಜನಸಮೂಹದ ಉತ್ಸಾಹ ಉಕ್ಕೇರಿ ಬಂತು. ಬನ್ನು ಪಟ್ಟಣದಲ್ಲಂತು ವಿಪರೀತವಾದ ಸಡಗರ! ಮೇರೆದಪ್ಪಿ ಉತ್ಸಾಹ!! ಹೆಂಗಸರೂ, ಚಿಕ್ಕ ಮಕ್ಕಳೂ ಮಹಾತ್ಮರು ಹೋಗುವ ಹಾದಿಯ ಮೇಲಿನ ಸಂದಿಗೊಂದಿಗಳಲ್ಲಿ ದರ್ಶನೋತ್ಸುಕರಾಗಿ ತುಂಬಿಕೊಂಡಿದ್ದರು. ಮಹಾತ್ಮರು ಸಕಲರಿಗೂ ದರ್ಶನ ಕೊಟ್ಟು ಹಾಗೆಯೇ ವಿಶ್ರಾಂತಿ ಪಡೆದು ಸಭಾಸ್ಥಾನಕ್ಕೆ ಬಂದರು. ಮಾನಪತ್ರಗಳಿಗೆ ಉತ್ತರ ಕೊಡುವಾಗ ಮಹಾತ್ಮರು ೧| ತಾಸಿನ ತನಕ ಗಾಂಭೀರ್ಯದಿಂದ ಭಾಷಣ ಮಾಡಿ, ಬ್ರಿಟಿಶ ಸರಕಾರವು ಬ್ರಿಟಿಶ ಸೈನಿಕರಿಗೆ ಶಿಕ್ಷಣ ಕೊಡುವದಕ್ಕಾಗಿ ಗಡಿನಾಡಿನೊಳಗೆ ಪಠಾಣರ ಮೇಲೆ ಯಾವಾಗಲೂ ದಾಳಿಯನ್ನೆಬ್ಬಿಸಿ ಹಿಂದೂಸ್ಥಾನ ಸರಕಾರದ ಕೋಶದೊಳಗಿಂದ ಕೋಟ್ಯಾವಧಿ ರೂಪಾಯಿಗಳನ್ನು ಅಪವ್ಯಯ ಮಾಡುತ್ತದೆಂದು ಆರೋಪಿಸಿದರು. " ಪಠಾಣ ಪಾಳೆಯಗಾರರು ನನಗೆ ಕಂಡು ತಮ್ಮ ಸ್ಥಿತಿ-ಗತಿಯನ್ನು ಅರುಹಿಕೊಂಡಿದ್ದಾರೆ, ಅವರು ನಮ್ಮಂತೆ ಮಾನವರೇ! ಅವರಿಗೆ ಸರಿಯಾಗಿ ತಿಳಿಹೇಳಿದರೆ ಜೀವನೋಪಾಯದ, ಉದರನಿರ್ವಾಹದ ಉದ್ದಿಮೆಯನ್ನು ಸರಕಾರವು ತೋರಿಸಿಕೊಟ್ಟರೆ ಅವರು ಸಭ್ಯ ನಾಗರಿಕರಾಗಿ ಸಮಾಧಾನದಿಂದ ಉಳಿಯಬಲ್ಲರು. ಹಿಂದುಸ್ಥಾನ ಸರಕಾರವು ಅವರಿಗೆ ಲಂಚ ಕೊಟ್ಟು ಸ್ವಪಕ್ಷಕ್ಕೆ ಎಳಕೊಳ್ಳಬಯಸುತ್ತದೆ, ಈ ಕ್ರಮವನ್ನು ಬ್ರಿಟಿಶ ಸರಕಾರವು ತ್ಯಜಿಸಬೇಕು " ಹೀಗೆ ಮಹಾತ್ಮರು ಉದ್ಗರಿಸಿದರು. ಇನ್ನೂ ಮಹಾತ್ಮರು ಗಡಿನಾಡಿನಲ್ಲಿಯೇ ಸಂಚರಿಸುತ್ತಿದ್ದಾರೆ.

— ಪಂ|| ಜವಾಹಿರಲಾಲರು ಯುರೋಪ ಖಂಡದ ಪ್ರವಾಸವನ್ನು ಮುಗಿಸಿಕೊಂಡು ನವಂಬರ ತಾ ೧೭ನೇ ಮುಂಬಯಿಯಲ್ಲಿ ಬಂದಿಳಿಯುತ್ತಾರೆ. ಈ ಹೊತ್ತು ಅವರು ದಕ್ಷಿಣ ಫ್ರಾನ್ಸದಲ್ಲಿರುತ್ತಾರೆ. ನಾಳೆ ಮಾರ್ಸೆಲೀಸದಲ್ಲಿ ' ಪಿಂತಿಪ ಇಸ್ಮಾಯಿಲ್ ' ಹಡಗ ಹತ್ತಿ ರವಿವಾರ ತಾ ೬ನೇಗೆ ಇಜಿಪ್ತ ದೇಶದ ಅಲೆಕ್ಝಾಂಡ್ರಿಯಕ್ಕೆ ತಲ್ಪುತ್ತಾರೆ. ಹಾಗೆಯೇ ಕೈರೋ ಪಟ್ಟಣಕ್ಕೆ ಹೋಗಿ ಅಲ್ಲಿ ಮುಸಲ್ಮಾನ ಪರಿಷತ್ತಿನ ಕಾರ್ಯ ಮುಗಿಸಿಕೊಂಡು ಬುಧವಾರ ತಾ ೯ ರಂದು ಅಲ್ಲಿಂದ ಹೊರಟು ಹಡಗ ಹತ್ತಿ ಮುಂಬಯಿಗೆ ಬರುತ್ತಾರೆ. ಪಂ| ಜವಾಹಿರಲಾಲರು ಸಂಸ್ಥಾನಗಳಲ್ಲಿ ನಡೆಯುವ ಲೋಕ-ಕಂಟಕ ಕಾರಭಾರದಿಂದ ಉದ್ವಿಗ್ನಮನಸ್ಕರಾಗಿದ್ದಾರೆ. ಇಲ್ಲಿ ಬಂದೊಡನೆ ಸಂಸ್ಥಾನಿಕ ಪ್ರಜೆಗಳ ಸಮಸ್ಯೆಯನ್ನು ಅಭ್ಯಾಸ ಮಾಡಿ, ಅವರ ತೊಡಕುಗಳನ್ನು ನಿವಾರಿಸಲು ಪ್ರಯತ್ನಪಡುವರು.

— ತಿರುವಾಂಕೂರದೊಳಗೆ ಇನ್ನೂ ದಬ್ಬಾಳಿಕೆ ನಿಲ್ಲಲಿಲ್ಲ. ಮಹಾರಾಜರ ವರ್ಧಂತಿ ಮಹೋತ್ಸವದ ನಿಮಿತ್ತ ಅನೇಕ ರಾಜ-ಕೈದಿಗಳಿಗೆ ಬಿಡುಗಡೆ ಮಾಡಲಾಯಿತಷ್ಟೇ! ಪುನಃ ದಬ್ಬಾಳಿಕೆಯ ಪ್ರಕಾರ ನಡೆದಿದೆ. ಅಲಪ್ಪೆಯಲ್ಲಿ ಕೆತ್ತದ ಕಾರಖಾನೆಯೊಳಗೆ ಕೂಲಿಕಾರರು ಸಂಪು ಮಾಡಿದರು. ಪೋಲೀಸರು ಮಾಲೀಕರ ಪಕ್ಷ ಹಿಡಿದು ಮಧ್ಯರಾತ್ರಿ ಕೂಲಿಕಾರ ಸಂಘದ ಕಚೇರಿಯ ಒಳನುಗ್ಗಿ ಮಲಗಿದ ಕೂಲಿಕಾರ ಪ್ರಮುಖರಿಗೆ ಹೊರಬಂದು ದುರ್ದೆಸೆ ಮಾಡಿದರು, ಕೂಲಿಕಾರರಿಗೆ ದೊಣ್ಣೆಯಿಂದ ಹೊಡೆದರು. ಎರಡು ಬಾರಿ ಕೂಲಿಕಾರ ಜನಸಮುದಾಯದ ಮೇಲೆ ಗುಂಡು ಹಾರಿಸಿದರು. ತಿರುವಾಂಕೂರದೊಳಗಿನ ಕಾಂಗ್ರೆಸ ಕಮಿಟಿಯವರು ತಿರುವಾಂಕೂರ ದರಬಾರದಲ್ಲಿ ನಡೆಯುವ ಅನಾಚಾರ-ದುರಾಚಾರಗಳನ್ನು ಸಂಸ್ಥಾನಿಕರಿಗೆ ಅರುಹಿಕೊಂಡು ಅವನ್ನು ನಿವಾರಿಸಲು ಆರಂಭ ಮಾಡಿಕೊಂಡಿದ್ದಾರೆ. ದಿವಾಣರ ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರ ಮೇಲೆ ಬಹಳ ಆರೋಪಗಳಿವೆ. ಅವನ್ನು ಸಿದ್ಧಮಾಡಿ ಕೊಡುವ ಒಂದು ಪತ್ರ ತಯಾರಿಸ್ತೇವೆಂದು ಕಮಿಟಿಯವರು ತಿಳಿಸಿದಾಗ್ಯೂ ಸಂಸ್ಥಾನಿಕರ ಕಡೆ ಮಾಡಿಕೊಂಡ ಅರಿಕೆ-ಅರ್ಜಿಯಿಂದ ರಾಜದ್ರೋಹದ ಅಪರಾಧವಾಯಿತೆಂದು ದಿವಾಣರು ನಿರ್ಣಯಿಸಿ, ಕಾಂಗ್ರೆಸ ಕಮಿಟಿಯವರ ಮೇಲೆ ಖಟ್ಲೆ ಮಾಡಿ ಕೊಡುವಲಾಗುವದೆಂದು ಹುಕುಮು ಹೊರಡಿಸಿದ್ದಾರೆ. ತಿರುವಾಂಕೋರ ನೆಶನಲ್ ಬೇಂಕಿನ ಡ್ಯಾರೆಕ್ಟರರಿಗೂ ಕಾಂಗ್ರೆಸ ಕಮಿಟಿಯವರಿಗೂ ಸಂಬಂಧವಿರುವದರಿಂದ ಅವರಿಗೂ ಸೆರೆಹಿಡಿದು ತರಬೇಕೆಂದು ತ್ರಿವೇಂದ್ರಮ್‌ದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ವಿದ್ಯಮಾನ ಮದ್ರಾಸಿಗೆ ವಾರಂಟುಗಳು ಕಳಿಸಲಾದವು. ಸಂಸ್ಥಾನದೊಳಗಿನ ಕಾಂಗ್ರೆಸ ಕಮಿಟಿಯವರಿಗೆ ಬೇಂಕಿನವರು ದ್ರವ್ಯಪೂರೈಕೆ ಮಾಡುತ್ತಿದ್ದರೆಂದು ಅವರ ಮೇಲೆ ದಿವಾಣರ ಸಿಟ್ಟು! ಆದರೆ ವಾರಂಟುಗಳಲ್ಲಿ ಈ ಉಲ್ಲೇಖವಿರಲಿಲ್ಲ. ತಿರುವಾಂಕೋರ ನೆಶನಲ್ ಬೇಂಕಿನ ಹಣಗಳನ್ನು ಡ್ಯಾರೆಕ್ಟರರು ಅಪವ್ಯಯ ಮಾಡಿ ನಂಬಿಗಸ್ತ ಲೋಕಕ್ಕೆ ನಷ್ಟಪಡಿಸಿದರೆಂದು ಅಪರಾಧ ಹೊರಿಸಲಾಗಿದೆ. ಈ ಪ್ರಕರಣ ಮದ್ರಾಸ ಪ್ರಾಂತದಲ್ಲಿ ಈಗ ಬಹು ದೊಡ್ಡ ಗಲಭೆಗೆ ಕಾರಣವಾಗಿದೆ.

— ತಿರುವಾಂಕೋರ ನೆಶನಲ್ ಬೇಂಕಿನ ಡ್ಯಾರೆಕ್ಟರರು ಮದ್ರಾಸದಲ್ಲಿರುತ್ತಾರೆ. ಅವರು ತಿರುವಾಂಕೋರ ಸಂಸ್ಥಾನದ ಪ್ರಜೆಗಳೆಂದೂ, ಲೋಕವಂಚನೆಯ ಅಪರಾಧ ಮಾಡಿದ್ದಾರೆಂದೂ ಅಪರಾಧ ವಿಚಾರಕ್ಕಾಗಿ ಅವರನ್ನು ಸೆರೆಹಿಡಿದು ತ್ರಿವೇಂದ್ರಮ್‌ಕ್ಕೆ ರವಾನಿಸಬೇಕಾಗಿಯೂ ತ್ರಿವೇಂದ್ರಮ್‌ದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಮದ್ರಾಸದೊಳಗಿನ ಚೀಫ ಪ್ರೆಸಿಡನ್ಸಿ ಮೆಜಿಸ್ಟ್ರೇಟಗೆ ವಿನಂತಿ ಮಾಡಿಕೊಂಡ ಮೇರೆಗೆ ಬೇಂಕಿನ ಡ್ಯಾರೆಕ್ಟರರಿಗೆ ಅಕ್ಟೋಬರ ೨೦ನೇ ತಾರೀಖಿನ ರಾತ್ರಿ ಸೆರೆಯಾಯಿತು. ಮರುದಿನ ಮಧ್ಯಾಹ್ನ ೧೧ ಘಂಟೆಗೆ ತನ್ನು ಕೋಟ ಉಗಿಬಂಡಿಯಿಂದ ರವಾನಿಸುವ ತಯಾರಿಯಿಟ್ಟಿತ್ತು. ಅಷ್ಟರಲ್ಲಿ ಮದ್ರಾಸ ಹ್ಯಾಕೋರ್ಟಿನ ನ್ಯಾಯಮೂರ್ತಿ ಮಿ|| ಪಾಂಡುರಂಗರಾವ್‌ರವರ ನಿವಾಸಸ್ಥಾನದಲ್ಲಿ ನಾಗರಿಕರಿಗೆ ಅನ್ಯಾಯದಿಂದ ಸೆರೆಹಿಡಿದು ಪೋಲೀಸರು ಹ್ಯಾಕೋರ್ಟಿನ ಕಕ್ಷೆಯೊಳಗಿಂದ ಹೊರ-ಒಯ್ಯುತ್ತಾರಾಗಿಯೂ ಅವರಿಗೆ ಬಿಡುಗಡೆ ಮಾಡಬೇಕಾಗಿಯೂ ವಕೀಲರು ಮೆಂಬಾಪಿಗೆ ಪ್ರಾರ್ಥಿಸಿಕೊಂಡರು. ಕ್ರಮದಂತೆ ಅರ್ಜಿಯ ವಿಚಾರವಾಗುವ ತನಕ ಸೆರೆಹಿಡಿದವರನ್ನು ಮದ್ರಾಸ ಪಟ್ಟಣದ ಹೊರ-ಒಯ್ಯದಂತೆ ಕೂಡಲೆ ಅಪ್ಪಣೆ ಸಿಗಬೇಕಾಗಿ ಮಾಡಿಕೊಂಡ ಅರ್ಜಿಗೆ ನ್ಯಾ| ಮೂ| ಪಾಂಡುರಂಗರಾಯರು ಅನುಕೂಲ ಹುಕುಮು ಕೊಟ್ಟು ಚೀಫ ಪ್ರೆಸಿಡನ್ಸಿ ಮೆಜಿಸ್ಟ್ರೇಟರಿಗೆ ಡ್ಯಾರೆಕ್ಟರರನ್ನು ಹೊರ-ಕಳಿಸಬಾರದಾಗಿ ವಿಧಿಸಿದರು. ಅದರಂತೆ ಡ್ಯಾರೆಕ್ಟರರನ್ನು ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಮದ್ರಾಸದಲ್ಲಿಯೇ ಇಟ್ಟುಕೊಂಡಿದ್ದಾರೆ. ಅದೇ ದಿನ ಕೋರ್ಟಿನಲ್ಲಿ ಮದ್ರಾಸಿನ ಸರಕಾರಿ ವಕೀಲರು ಹಾಜರಾಗಿ ಮೇಲ್ಕಂಡ ಹುಕುಮನ್ನು ರದ್ದುಪಡಿಸಬೇಕಾಗಿ ಪ್ರಾರ್ಥಿಸಿಕೊಂಡರು. ಮರುದಿನ ಶನಿವಾರ ಹ್ಯಾಕೋರ್ಟಿಗೆ ರಜೆ, ಆದಾಗ್ಯೂ ನ್ಯಾ| ಮೂ| ಪಾಂಡುರಂಗರಾಯರು ಕೋರ್ಟು ಸೇರಿಸಿ ಅರ್ಜಿಯ ವಿಚಾರ ಮಾಡಿದರು. " ಇಂಥ ಅರ್ಜಿಗಳನ್ನು ವಿಚಾರ ಮಾಡಲಿಕ್ಕೆ ಒಬ್ಬೊಂಟಿಗ ನ್ಯಾಯಾಧೀಶರಿಗೆ ಅಧಿಕಾರವಿಲ್ಲ, ಹ್ಯಾಕೋರ್ಟಿನ ನಿಯಮಗಳಂತೆ ಇಬ್ಬ ನ್ಯಾಯಾಧೀಶರಾದರೂ ವಿಚಾರ ಮಾಡಬೇಕು, ಮುಖ್ಯ ನ್ಯಾಯಾಧೀಶರು ಕೋರ್ಟ-ನಿಯಮಗಳನ್ನಯ ವಿಚಾರಕ್ಕೆ ಕೊಟ್ಟ ಪ್ರಕರಣಗಳನ್ನಷ್ಟೇ ಇತರ ನ್ಯಾಯಾಧೀಶರು ವಿಚಾರ ಮಾಡಬೇಕು." ಹೀಗೆ ಸರಕಾರಿ ವಕೀಲರು ವಾದಿಸಿದರು. " ನಾಗರಿಕರ ಸ್ವಾತಂತ್ರ್ಯ ರಕ್ಷಣೆ ಮಾಡುವದು ನ್ಯಾಯಾಧೀಶರ ಕರ್ತವ್ಯ, ಮುಖ್ಯ ನ್ಯಾಯಾಧೀಶರು ವಹಿಸಿದ ಪ್ರಕರಣಗಳನ್ನಷ್ಟೇ ವಿಚಾರ ಮಾಡಲು ನಾವು ಬದ್ಧರೆಂದು ಎಣಿಸಲಾಗದು, ನಮಗೆ ನ್ಯಾಯಾಧಿಕಾರ ಕೊಡುವ ವ್ಯಕ್ತಿ ಮುಖ್ಯ ನ್ಯಾಯಾಧೀಶರಲ್ಲ, ಅದು ಪ್ರತಿಯೊಬ್ಬ ನ್ಯಾಯಾಧೀಶನ ಸ್ವಾಧೀನ ಅಧಿಕಾರ, ಪ್ರಧಾನ ಕರ್ತವ್ಯವದು, ಸರ್ವ ಕರ್ತವ್ಯವದು. ಇಂಥ ಅಸಾಮಾನ್ಯ ಪರಿಸ್ಥಿತಿಯಲ್ಲಿ ಹೇಗ ವರ್ತಿಸಬೇಕೆಂಬುದರ ಕುರಿತು ಪ್ರತ್ಯೇಕ ನಿಯಮಗಳಿಲ್ಲ. ನಿಯಮಗಳು ಈಗಿನ ಸಾಮಾನ್ಯ ಪರಿಸ್ಥಿತಿಗೆ ಅನ್ವಯಿಸುವಂತಹವು. ಪ್ರತಿಯೊಬ್ಬ ನ್ಯಾಯಾಧೀಶನೂ ಒಬ್ಬೊಂಟಿಗನೇ ಅನಪೇಕ್ಷಿತವಾಗಿ ಉಂಟಾಗುವ ಅಸಾಮಾನ್ಯ ಪ್ರಕರಣಗಳನ್ನು ವಿಚಾರಿಸಲಿಕ್ಕೆ ಸರ್ವ ನ್ಯಾಯಾಧೀಶರು ಒಮ್ಮೆಲೇ ಒಟ್ಟುಗೂಡಲಾರರು, ಪ್ರತಿಯೊಬ್ಬ ಅದು ನ್ಯಾಯಾಧೀಶರೂ ಅಸಾಮಾನ್ಯ ಪ್ರಕರಣಗಳ ವಿಚಾರ ತಮ್ಮ ಕರ್ತವ್ಯಬಾಹ್ಯವೆಂದು ಹೇಳಿದರೆ ನಾಗರಿಕರು ಅತಂತ್ರರಾಗುವರು !" ಹೀಗೆ ಹೇಳಿ ನ್ಯಾ| ಮೂ| ಪಾಂಡುರಂಗರಾಯರು ಸರಕಾರಿ ವಕೀಲರ ಅರ್ಜಿಯನ್ನು ತಿರಸ್ಕರಿಸಿದರು. ಆ ಮೇಲೆ ರೀತಿಯಂತೆ ಈ ಅರ್ಜಿ ನ್ಯಾ| ಮೂ| ಬರ್ನ ಮತ್ತು ಸ್ಟೋಡರ್ಟರವರ ಕೋರ್ಟಿನಲ್ಲಿ ವಿಚಾರಕ್ಕೆ ಬಂತು. ಅರ್ಜಿದಾರರ ಪರವಾಗಿ

(ಪುರವಣಿ (೧) ನೋಡಿರಿ)

ವಾರ್ತೆಗಳು.

(೧೦ನೇ ಪಾನಿನಿಂದ ಮುಂದುವರಿದದ್ದು)

ರಾ| ಬ| ರಂಗಸ್ವಾಮಿ ಅಯ್ಯಂಗಾರರೂ, ಶ್ರೀವೇಂದ್ರಪೂರ್ವದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಪರವಾಗಿ ರಾ|| ಟಿ ಆರ್. ವೆಂಕಟರಮಣ ಶಾಸ್ತ್ರಿಗಳವರೂ ವಾದಿಸಿದರು. ಆದರೆ ಸರಕಾರಿ ವಕೀಲರ ಅರ್ಜಿಯ ವಿಚಾರ ಮಾಡುವಾಗ ನ್ಯಾ| ಮೂ| ಪಾಂಡುರಂಗರಾಯರು ಸಮುಸ್ತ ಅರ್ಜಿಯ ವಿಚಾರವನ್ನು ಸ್ವಾಧೀನಪಡಿಸಿಕೊಳ್ಳಬೇಕಾದ್ದರಿಂದ ಒಬ್ಬ ನ್ಯಾಯಾಧೀಶರ ಕಡೆ ಒಂದು ಪ್ರಕರಣ ವಿಚಾರಕ್ಕಿರುವಾಗ, ಅದನ್ನು ಪುನಃ ಬೇರೆ ನ್ಯಾಯಾಧೀಶರು ವಿಚಾರ ಮಾಡಬರುವದಿಲ್ಲವೆಂದು ನ್ಯಾಯಮೂರ್ತಿಗಳು ನಿರ್ಣಯಿಸಿ, ಮೂಲ ಅರ್ಜಿಯನ್ನು ನ್ಯಾ|| ಮೂ|| ಪಾಂಡುರಂಗರಾಯರೇ ನಿರ್ಣಯಿಸತಕ್ಕದೆಂದರು. ಯುಕ್ತ ಕಾಲದಲ್ಲಿ ನ್ಯಾ|| ಮೂ|| ಪಾಂಡುರಂಗರಾಯರ ಹುಕುಮಿನ ವಿರುದ್ಧ ರೀತಿಯಂತೆ ಅಪೀಲ ಮಾಡಬಹುದಾಗಿ ನ್ಯಾ|ಮೂ| ಬರ್ನ-ಸ್ಟೊಡಾರವರ ಅಪ್ಪಣೆಯಾಯಿತು. ನ್ಯಾಯಮೂರ್ತಿಗಳಾದ ಪಾಂಡುರಂಗರಾಯರು ಶುಕ್ರವಾರ ಈ ಅರ್ಜಿಯ ವಿಚಾರ ಮಾಡುವವರಿದ್ದರು. ಆದರೆ ಶ್ರೀವೇಂದ್ರಪೂರ್ವದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಪರವಾಗಿ ನ್ಯಾ| ಮೂ| ಬರ್ನ ಮತ್ತು ಸ್ಟೊಡಾರ್ಟರವರ ಕೋರ್ಟಿನಲ್ಲಿ ಗುರುವಾರ ಅಪೀಲು ಅರ್ಜಿ ದಾಖಲಾಯಿತು: ನ್ಯಾ| ಮೂ| ಪಾಂಡುರಂಗರಾಯರು ಕೈದಿಗಳನ್ನು ಮದ್ರಾಸದ ಹೊರಕಳಿಸದಂತೆ ತಮ್ಮ ನಿವಾಸಸ್ಥಾನದಲ್ಲಿ ಮಾಡಿದ ಹುಕುಮು ಅನಧಿಕಾರದ್ದೆಂದು ರಾ|| ಟಿ ಆರ್. ವೆಂಕಟರಮಣ ಶಾಸ್ತ್ರಿಗಳವರು ಇದೇ ದಿನ ವಾದಿಸಿದರು. ನ್ಯಾ| ಮೂ| ಗಳಿಗೆ ಪ್ರತಿ-ಪಕ್ಷದ ಅಂಬೋಣ ಕೇಳಿಕೊಳ್ಳಲು ಸಮಯವಿರಲಿಲ್ಲ, ಮರುದಿನವೇ ನ್ಯಾ| ಮೂ| ಪಾಂಡುರಂಗರಾಯರ ಕೋರ್ಟಿನಲ್ಲಿ ಮೂಲ ಅರ್ಜಿಯ ವಿಚಾರವಿತ್ತು. ಆದ್ದರಿಂದ ನ್ಯಾ| ಮೂ| ಬರ್ನ ಮತ್ತು ಸ್ಟೊಡಾರ್ಟರವರು ಅಪೀಲಿನ ವಿಚಾರದ ತನಕ ಈ ಮೂಲ ಅರ್ಜಿಯ ವಿಚಾರವನ್ನು, ಅದಕ್ಕೆ ಅನುಕೂಲವಾಗಿ ಹೊರಡಿಸಿದ ಅಗತ್ಯದ ಹುಕುಮನ್ನೂ ನಿಲ್ಲಿಸತಕ್ಕದ್ದೆಂದೂ, ಅಪೀಲಿನ ವಿಚಾರದ ತನಕ ಡ್ಯಾರೆಕ್ಟರರಿಗೆ ಮದ್ರಾಸದ ಹೊರಕಳಿಸಬಾರದಾಗಿಯೂ ವಿಧಿಸಿ, ಈ ಹೊತ್ತು ಅಪೀಲಿನ ವಿಚಾರ ಇಟ್ಟಿದ್ದಾರೆ.

ಸ್ಥಾನಿಕ ವೃತ್ತಾಂತ

(೯ನೇ ಪಾನಿನಿಂದ ಮುಂದುವರಿದದ್ದು)

ನೆರೆ-ನಿರಾಶ್ರಿತರಿಗೆ ಅನ್ನಸಾಮುಗ್ರಿ ಕೊಡುವದನ್ನು ತಾ ೧ರಿಂದ ನಿಲ್ಲಿಸಿತು. ಈಗ ಅವರು ಗದ್ದೆ ಕೊಯಿಲು ಮುಂತಾದ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಮನೆ ಕಟ್ಟೋಣ, ಮನೆ ದುರುಸ್ತಿ, ಗೃಹಸಾಹಿತ್ಯ, ಬೀಜಾಯ ಸಾಹಿತ್ಯ ಮುಂತಾದ ಕಾಸ್ತಕಾರರ ಸಹಾಯವನ್ನೇ ಅವರು ಬೇಡುತ್ತಿದ್ದಾರೆ. ಸರಕಾರದ ಕಡೆಗೂ ನಿರಾಶ್ರಿತ ಸಹಾಯಕ ಸಮಿತಿಯ ಕಡೆಗೂ ಅವರು ದೀನ ಮುಖದಿಂದ ನೋಡುತ್ತಿದ್ದಾರೆ.

ತಾ ೨೦ನೇಗೆ ಜಿಲ್ಹಾಧ್ಯಕ್ಷ ರಾ|| ಶಿವರಾವ ಶಾಸ್ತ್ರಿಯವರು ನಿರಾಶ್ರಿತರಿಗೆ ವಸ್ತ್ರದಾನ ಮಾಡಿದರು. ಮುಂಬಯಿಯಿಂದ ಸರ ಚುನಿಲಾಲ ಮೆಹತಾರವರು ನಿರಾಶ್ರಿತ ನಿಧಿಗೆ ರೂ ೫೦ ಕಳಿಸಿದ್ದಾರೆ. ರಾ|| ಕೃಷ್ಣಾ ಶ್ರೀನಿವಾಸ ಶಾನಭಾಗ ಹಾಗೂ ರಾ|| ವೆಂಕಟರಾವ ಶಾನಭಾಗ ದಲಾಲ ಇವರು ಕೆಲವು ಅರವೆಗಳನ್ನು ಕಳಿಸಿಕೊಟ್ಟಿದ್ದಾರೆ. ಇನ್ನೂ ಸಹಾಯ ಮಾಡುತ್ತೇವಾಗಿ ಅಭಿವಚನವನ್ನು ಕೊಟ್ಟಿದ್ದಾರೆ. ರಾ|| ವಿಠೋಬಾ ಅಣ್ಣಪ್ಪ ಕಾಮತರವರು ಮುಂಬಯಿಯಲ್ಲಿ ನಿರಾಶ್ರಿತ ನಿಧಿ ಸಂಗ್ರಹಿಸುತ್ತಿದ್ದಾರಾಗಿ ತಿಳಿಯುತ್ತದೆ. ಮುಂಬಯಿಯೊಳಗಿನ "ಕೆನರಾ ಬ್ರದರಹುಡ್" ಸಂಸ್ಥೆಯವರು ನಿರಾಶ್ರಿತ ನಿಧಿ ಕೂಡಿಸಲಿಕ್ಕೆ ಮಿ|| ಜಾರ್ಜ ಕೊಡಬೋ ಮೊದಲಾದ ೧೪ ಗೃಹಸ್ಥರ ಒಂದು ಮಂಡಳವನ್ನೇ ನೇಮಿಸಿದ್ದಾರೆಂದು ಬರೆದು ಬಂದಿದೆ. ಎಸೆಂಬ್ಲಿಯ ಸದಸ್ಯರಾದ ರಾ|| ಗೋಪಿನಾಥರವರು ಮುಂಬಯಿ ಎಸೆಂಬ್ಲಿಯ ಸದಸ್ಯರಿಂದ ಕೂಡಿಸಿದ ರೂ ೧೩೫ ಕಮಿಟಿಯ ವಶಕ್ಕೆ ಕೊಟ್ಟು ನಿರಾಶ್ರಿತರನ್ನೂ ನೆರೆಯಿಂದ ಹಾಳುಬಿದ್ದ ಸ್ಥಳಗಳನ್ನೂ ನೋಡಿಕೊಂಡು ಹೋಗಿದ್ದಾರೆ. ಇದಲ್ಲದೆ ಸಿದ್ದಾಪುರ ಅರ್ಬನ್ ಸಹಕಾರಿ ಬೇಂಕ, ಶಿರಸಾದ ಬೈಲಪ್ಪ ಹೊಸ್ಕೂಟ, ಹಳದೀಪುರ ಮತ್ತು ಕಾಸರಕೋಡ ಗ್ರಾಮಸುಧಾರಣಾ ಸಂಘ ಮೊದಲಾದ ಸಂಸ್ಥೆಗಳಿಂದಲೂ ಕೆಲಕೆಲವು ಧನಸಹಾಯ ಬಂದಿದೆ. ಆ| ಭಾ| ಚರಖಾ ಸಂಘದ ಕರ್ನಾಟಕ ಶಾಖೆಯ ರಾ|| ಹಣಮಂತರಾವ ಕೌಜಲಗಿಯವರು ನಾಲ್ಕು ದಿನ ಇಲ್ಲಿದ್ದು ಎಲ್ಲ ಪರಿಸ್ಥಿತಿ ತಿಳಕೊಂಡು ಹೋಗಿದ್ದಾರೆ. ಸಹಾಯಕ ಸಮಿತಿಗೆ ಸೂಕ್ತ ಸಲಹೆಗಳನ್ನೂ ಇತ್ತಿದ್ದಾರೆ.

ಮೊನ್ನೆ ಸಹಾಯಕ ಸಮಿತಿಯ ಸಭೆಯಾಗಿ ಅವರಿಗೆ ತಮ್ಮ ಕೆಲಸದ ವರದಿ ತಯಾರಿಸಲಾಯಿತು. ತಾ ೨೬-೧೦ ರವರೆಗೆ ಸಮಿತಿಯ ಕಡೆ ನಗದಿ ರೂ. ೧೫೭೦-೮-೦, ಅಕ್ಕಿ-ಕಾಯಿ ವಗೈರೆ ರೂಪದಿಂದ ರೂ ೧೨೬-೭-೯, ಜಿಲ್ಹಾಧ್ಯಕ್ಷರ ಕಡೆಯಿಂದ ವಸ್ತ್ರಗಳ ರೂಪದಿಂದ ರೂ ೩೪೬-೧೦-೬, ಭಟಕಳ ನಗರ ಸಭೆಯಿಂದ ರೂ ೧೨೫, ಬೇರೆ ಕೆಲವರಿಂದ ಅರವೆಗಳ ರೂಪದಿಂದ ರೂ ೧೦೦, ಹೀಗೆ ಒಟ್ಟು ರೂ ೨೨೬೮-೯-೬ ಜಮೆಯಾದವು. ಅವುಗಳೊಳಗಿಂದ ನಿರಾಶ್ರಿತರಿಗೆ ವಸ್ತ್ರ ಹಂಚುವ ಬಗ್ಗೆ ರೂ ೧೦೬೮ ೧೫-೨, ಅನ್ನಸಾಮಗ್ರಿಯ ಪುರವಣಿ ಬಗ್ಗೆ ರೂ ೭೪೮-೧೪-೩, ಭಟಕಳ ಮ್ಯುನಿಸಿಪಾಲಿಟಿಯವರು ಕೆರೆ ಹೊಲಸು ಕಾಯಿಕೊಡುವ ಕೆಲಸಕ್ಕೆ ಮುಂಗಡ ರೂ ೧೨೪-೧೦-೦, ಅಂಚೆವೆಚ್ಚ, ಮುದ್ರಣ ವೆಚ್ಚ ವಗೈರೆ ಚಿಲ್ಲರೆ ವೆಚ್ಚಕ್ಕೆ ರೂ. ೨೬-೮-೯, ಹೀಗೆ ಒಟ್ಟು ರೂ ೧೯೫೮-೧೫-೦ ವೆಚ್ಚವಾಗಿವೆ. ರೂ. ೩೦೯-೧೦-೬ ಶಿಲ್ಕು ಉಳಿದಿವೆ. ಆ ಪೈಕಿ ರೂ ೩೦೭ ೧೫ ೬ ಇಲ್ಲಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟಿನ ಶಾಖೆಯಲ್ಲಿ ಇಟ್ಟಿದೆ.

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಮಾತ್ರ ಗುಣಕಾರಿ ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದರೆ ಧಾರಾಳ ಕಮಿಶನ್, ವಿಪುಲ ಸಾಹಯ್ಯ, ಹೆಚ್ಚಿನ ವಿವರಗಳಿಗೆ ಬರೆಯಿರಿ

ನಮ್ಮ ಏಜಂಟರ :—

ಬಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ —	ಕಾಮತ ಸ್ಟೋರ್ಸ
ಅಂಕೋಲಾ —	ವೇದಮೂರ್ತಿ ಹನುಮಂತ ಕೇಶವ ಭಟ್ಟ.	ಗೋಕರ್ಣ —	ಎಮ್ ವ್ಹಿ. ಬಸ್ರೀಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ	ಶಿರ್ಸಿ —	ಆರ್ ವ್ಹಿ ಧಾರೇಶ್ವರ ಕೆಮಿಸ್ಟ

ವಿಳಾಸ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರೆಂಚ್ ಆಫೀಸು: ಕುಮಟಾ. ಉ. ಕ. OR BHUVANENDRA PRODUCTS LTD. Head Office. KATAPADI, S. K.

ಮ್ಯೂನಿಕ್ ಒಡಂಬಡಿಕೆಯ ರಹಸ್ಯ!

(೭ನೇ ಪಾನಿನಿಂದ ಮುಂದುವರಿದುದು)

ಇನ್ನು ತಯಾರಿಯಿಲ್ಲದ್ದಾಗ್ಯೂ ಯುದ್ಧದಲ್ಲಿ ಜನನ ಧೀರತ್ವಕ್ಕೆ ಹಿಮ್ಮೆಟ್ಟಿಸುವನು ಸಂಪೂರ್ಣ ಸಿಂಗಾಪುರದಲ್ಲಿಲ್ಲವೆಂದು ಯುದ್ಧ ಕಲಾಕೋವಿದರು ಅಭಿಪ್ರಾಯಪಟ್ಟಿದ್ದರಿಂದ ಚೇಂಬರಲೇನರು ಮ್ಯೂನಿಕ್ ಒಡಂಬಡಿಕೆಯನ್ನು ಮಾಡಿಕೊಂಡರು. ಯುದ್ಧ ಕಾರಣವನ್ನು ಒಗೆದರಿಸಬೇಕಾಯಿತಂತೆ! ಆದಾಗ್ಯೂ ಯುದ್ಧ ತಪ್ಪಿತೆಂದು ಯಾರೂ ಎಣಿಸುವದಿಲ್ಲ. ಶಸ್ತ್ರಾಸ್ತ್ರಗಳನ್ನು ಇನ್ನೂ ಸಜ್ಜುಗೊಳಿಸುತ್ತಿದ್ದಾರೆ. ಬ್ರಿಟಿಶ ಸಚಿವಮಂಡಳ ಹೇಳಿಕೆಗಳು [illegible] ಗರು ಸೇನಾ ಮಂತ್ರಾಲಯದ ಇತಿಹಾಸದಲ್ಲಿ ಮಾಡಿದ ಭಾಷಣದಲ್ಲಿ ಈ ಸಂಗತಿ ಸ್ಪಷ್ಟಗೊಳಿಸಿದ್ದಾರೆ. ಯುದ್ಧಕ್ಕೆ ಸಿದ್ಧನಾಗಿರುವದು ಶಾಂತತೆಯ ಉಪಾಯವೆಂದು ನಮ್ಮ [illegible] ([illegible]) ಪಕ್ಷ ದೊರೆಗಳ ಮನಸ್ಸು [illegible] ಸಿಯಾ ದೇಶದಲ್ಲಿ ಬ್ರಿಟಿಶ ಸರಕಾರವು [illegible] ಲಕ್ಷ ಜನರು ಬೆಲೆಯ [illegible] ಲಕ್ಷ ಟನ್ ಗೋಧಿ ಮುಂತಾದ್ದು ಕ್ಕಾಗಿ ಖರೀದಿ ಮಾಡಿರುವದಾಗಿ ಲಂಡನಿನೊಳಗಿನ 'ಫಿನೆನ್ಶಿಯಲ್ ನ್ಯೂಸ' ಪತ್ರಿಕೆಯು ಪ್ರಕಟಿಸುತ್ತದೆ. ಜರ್ಮನದ ಭೀತಿಯಿಂದಲೇ ಸಕಲ ಯುದ್ಧ ತಯಾರಿ ನಡೆದಿದೆಂದು, ನಡೆಯುತ್ತಿದೆಂದು ನಾನು ತಿಳಿಯುತ್ತೇನೆ. ತಯಾರಿ ಅಪೂರ್ಣವಿದ್ದದರಿಂದ ಮ್ಯೂನಿಕ್ ಒಡಂಬಡಿಕೆಯನ್ನು ಚೇಂಬರಲೇನ ದೊರೆಗಳು ಒದಗಿಸಿ ತಂದರು. ಮ್ಯೂನಿಕ ಒಡಂಬಡಿಕೆಯ ರಹಸ್ಯ ಇದೇ!

THE SATISFACTION THAT ONLY CONFIDENCE CAN BRING.

Complete satisfaction is largely dependent on freedom from anxiety and worry. No man can be in really good spirits if he is always worrying and anxious about his banking problems. That your affairs are absolutely secure with the Syndicate gives you that confidence which promotes true satisfaction. The Syndicate has enjoyed the trust and esteem of thousands of men for the past thirteen years. Entrust your affairs to the Syndicate and be satisfied.

THE CANARA INDUSTRIAL & BANKING SYNDICATE, LTD.,

(INCORPORATED IN BRITISH INDIA)

Estd.] **UDIPI, S. INDIA** [1925.

MEMBER: Reserve Bank of India; Bankers' Clearing House, Bombay.

Authorised Capital	Rs. 10,00,000	Subscribed Capital	Rs. 7,74,500
Issued Capital	Rs. 8,00,000	Paid-up Capital	Rs. 3,87,730

Reserves Rs. 2,16,700

Banking Business of every description transacted.

SERVICE & PROMPTNESS

A Feature and a Fact with the "POPULAR"

M. VENKATESH PAI,
Banker,

Sri Krishna Bhavan,
Mangalore.
25th July, 1938

The Managing Director,
The Popular Insurance Co., Ltd.,
MANGALORE.

Policy No 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father in law Sri Nagar Vasudeva Shenoy who passed away on the 19th instant.

I quite appreciate too the service you rendered the claimant in voluntarily forwarding the Claim Papers and assisting in their completion. Then the cheque for Rs 2[illegible]-7-0 is delivered to the claimant and all within the short period of 6 days.

This spirit of service and promptitude evinced by the 'POPULAR' is highly laudable and it is but proper that the Company should be 'POPULAR'. It should naturally bring home to the public immense advantages of getting insured with a local Life Office and I would certainly recommend the Company to all.

I wish the Company a brilliant career of usefulness and prosperity.

Yours faithfully
(Sd.) M. Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: ***PROSPECT CHAMBERS, Hornby Road, BOMBAY.***

ರಾ|| ಕಸಬೇಕರ ವಾಸುದೇವರಾಯರ ಯುರೋಪದ ಅನುಭವಗಳು.

(೫ನೇ ಅಂಕಿನಿಂದ ಮುಂದರಿಸಿದ್ದು.)

ಶಿಲಾ ಪ್ರತಿಮೆಗಳು ಕಂಡುಬರಲಿಲ್ಲ! ಅವನ ಜೀವನವಾದರೂ ಸಾಧ್ಯಾನಿಷ್ಠ, ಸರಳ ಮತ್ತು ನಿದರ್ಶನವಿರುವಂತೆ ಕಾಣುತ್ತದೆ ತನ್ನ ರಾಷ್ಟ್ರವನ್ನು ತಿರುಗಿ ೧೯೧೪ನೇ ಇಸವಿಯೊಳಗಿನ ವೈಭವಕ್ಕೆ ಮುಟ್ಟಿಸಬೇಕೆಂಬುವದೇ ಅವನ ಸಂಕಲ್ಪ, ಹಂಬಲ ಮತ್ತು ನಿರ್ಧಾರ. "ಅಷ್ಟೊಂದು ಕಾರ್ಯ ನಾನು ನೆರವೇರಿಸುತ್ತೇನೆ, ಆ ಮೇಲೆ ಬೇಕಾದರೆ ಗುಂಡುಹಾಕಿ ನನ್ನನ್ನು ಕೊಲ್ಲಿರಿ!" ಹೀಗೆ ಅವನು ಹೇಳುತ್ತಾನೆ! ಅದ್ದರಿಂದಲೇ ಇಡೀ ಜರ್ಮನ್ ಜನಾಂಗವು ಅವನು ಹೇಳಿದಂತೆ ಕುಣಿಯುತ್ತದೆ ಜರ್ಮನಿಯಿಂದ ನಾನು ಝೆಕೊಸ್ಲೊವಾಕಿಯಾಕ್ಕೆ ಹೋದೆ, ಅಲ್ಲಿಯ ಜನರಿಗೆ ಭಾರತೀಯರ ಬಗ್ಗೆ ಆತ್ಮೀಯ ಭಾವನೆ ಹೆಚ್ಚು. ಬಹಳ ಕಡೆ ನನಗೆ ಅವರು ಮಹಾತ್ಮಾ ಗಾಂಧಿ ಮತ್ತು ಕವಿಸಮ್ರಾಟ್ ರವೀಂದ್ರನಾಥ ಟಾಗೋರರ ಬಗ್ಗೆ ಕೇಳಿದರು ನಮ್ಮತ್ತ ಕಡೆ ಎಂಥ ರಾಜ್ಯಪದ್ಧತಿಯಿದೆ ವಗೈರೆ ಚೌಕಶಿ ಮಾಡಿದರು ಝೆಕರು ಬಹಳ ಉಪಕಾರಿ ಮತ್ತು ಮಮತಾಳು ಜನರು. ಯಾರೊಬ್ಬರಿಗೆ ಮಾರ್ಗ ತೋರಿಸಿಕೊಡಲು ಹೇಳಿದರೆ, ನಿಮಗೆ ನಿಮ್ಮ ಸ್ಥಳಕ್ಕೆ ಮುಟ್ಟಿಸಿಕೊಡುವರು! ಇನಿತಷ್ಟು ಉಪಕಾರಿ ಜನರನ್ನು ಯುರೋಪದಲ್ಲಿ ಇನ್ನೆಲ್ಲೂ ನಾನು ಕಾಣಲಿಲ್ಲ! ನಮ್ಮ ಇಂಗ್ಲಿಶ ಜನರೋ? ಬಾಯಿಯಿಂದ ಬಹು ಸವಿ. ಬಲು ವಿನಯಶೀಲರು! ಕೃತಿ ಮಾತ್ರ ವಿಪರೀತ!" ಲಂಡನ್ನಿನ ಜನತೆಯಲ್ಲಂತೂ ಭಾರತೀಯರಾದ ನಮ್ಮ ಬಗ್ಗೆ ತುಚ್ಛತಾಬುದ್ಧಿ ಕಂಡುಬರುತ್ತದೆ! ತಾವು ಆಳರಸರು, ಭಾರತೀಯರು ಪ್ರಜೆಗಳು ಎಂಬೀ ಭಾವನೆ ಅವರಲ್ಲಿ ಬೇರೂರಿದೆ! ಪ್ರೇಗದಲ್ಲಿ ಒಂದು ದೊಡ್ಡ ವಸ್ತುಸಂಗ್ರಹಾಲಯವಿದೆ. ಒಂದು ಕಡೆ ತರತರದ ೬ ಸಾವಿರ ಕಲ್ಲುಗಳನ್ನು ಸಾಲಾಗಿ ಇಟ್ಟಿರುತ್ತಾರೆ! ಕಲ್ಲುಗಳೊಳಗಿನ ಸೂಕ್ಷ್ಮ ಭೇದ ಗೊತ್ತುಹಿಡಿದು ಸಂಗ್ರಹಿಸಿಟ್ಟಿದ್ದಾರೆ ಪ್ರತಿಯೊಂದು ದೇಶದಲ್ಲಿ, ಪ್ರತಿಯೊಂದು ನಗರದಲ್ಲಿ ಇಂತಹ ವಸ್ತುಸಂಗ್ರಹಾಲಯಗಳೂ ಪ್ರಾಣಿಸಂಗ್ರಹಾಲಯಗಳೂ ಇವೆ. ಲಂಡನಿನೊಳಗಿನ ಒಂದು ಬ್ರಿಟಿಶ ಮ್ಯೂಜಿಯಮ್ ನೋಡಲಿಕ್ಕೆ ತಿಂಗಳೆರಡು ತಿಂಗಳು ಸಾಲಲಿಕ್ಕಿಲ್ಲ. ಏನು ವ್ಯವಸ್ಥೆ! ಏನು ಸಂಗ್ರಹಚಾತುರ್ಯ!

ಇಲ್ಲಿಯ ತನಕ ನಾನು ನೋಡಿದ ಹಲವು ಸ್ಮರಣೀಯ ಸಂಗತಿಗಳನ್ನು ಅರುಹಿದೆನು. ಈಗ ಶಿಕ್ಷಣ-ವ್ಯವಸ್ಥೆಯ ಬಗ್ಗೆ ಕಂಡ ಕೆಲವು ಅನುಭವಗಳನ್ನು ಹೇಳಿ ನನ್ನ ಭಾಷಣ ಮುಗಿಸುವೆನು. ಪಾಶ್ಚಾತ್ಯರು ಶಿಕ್ಷಣದ ಬಗ್ಗೆ ವಿಶೇಷತಃ ಮಕ್ಕಳ ಶಿಕ್ಷಣದ ಬಗ್ಗೆ ನೀರಿನಂತೆ ಹಣ ವೆಚ್ಚಮಾಡುತ್ತಾರೆ. ಭಾವೀ ಕಾಲದ ರಾಷ್ಟ್ರಧುರೀಣರು ಈ ಮಕ್ಕಳೆಂಬ ದೃಢವಾದ ನಂಬಿಗೆಯಿಂದ ಮಕ್ಕಳು ಸ್ವಯಂಪೂರ್ಣರಾಗುವ ಅನುಕೂಲತೆಗಳನ್ನು ಪೂರೈಸುವದು ತಮ್ಮ ಕರ್ತವ್ಯವೆಂದು ಭಾವಿಸುತ್ತಾರೆ ೩ ವರ್ಷಗಳ ಬಾಲಕರನ್ನು ಸ್ವಾಧೀನಪಡಿಸಿಕೊಂಡು ೫ ವರ್ಷಗಳ ತನಕ (ಶಿಶುಸಂಗೋಪನ) ಶಾಲೆಗಳಿಗೆ ಕಳಿಸುತ್ತಾರೆ ಆಮೇಲೆ ೧೧ ವರ್ಷಗಳ ತನಕ ಶಾಲೆಗಳಲ್ಲಿ ಶಿಕ್ಷಣ ಕೊಡೋಣವಾಗುತ್ತದೆ ದಾಯಿಗಳು ಮಕ್ಕಳ ಜೋಪಾಸನೆ ಮಾಡಿ ಅವರಿಗೆ ರೀತಿ-ನೀತಿಗಳನ್ನು ಕಲಿಸುತ್ತಾರೆ. ಅವರ ಶರೀರ ಬೆಳವಣಿಗೆಗೆ ಅವಶ್ಯವುಳ್ಳ ಹಾಲು ಮುಂತಾದ ಆಹಾರದ ವ್ಯವಸ್ಥೆಯಿದೆ. ೧೬ ವರ್ಷಗಳ ವರೆಗಿನ ಹುಡುಗರ ಬಗ್ಗೆ ಎಲಿಮೆಂಟರಿ ಯಾನೆ ಪ್ರಾಥಮಿಕ ಶಾಲೆಗಳಿವೆ ಅಷ್ಟು ಶಿಕ್ಷಣ ಮುಗಿದ ಮೇಲೆ ಚನ್ನಾಗಿ ಪರೀಕ್ಷೆ ಮಾಡಿ ೧೦೦ರಲ್ಲಿ ೧೦ರಷ್ಟು ಕುಶಾಗ್ರಬುದ್ಧಿಯುಳ್ಳವರನ್ನಷ್ಟೇ ಮುಂದಿನ ವಿದ್ಯಾಭ್ಯಾಸಕ್ಕೆ ಕಳಿಸುತ್ತಾರೆ ಅವರೊಳಗಿಂದಲೇ ಶೋಧಕರು, ವೈಜ್ಞಾನಿಕರು, ತರತರದ ವಿದ್ಯಾಪಾರಂಗತರು ನಿಷ್ಪನ್ನರಾಗುವರು, ಉಳಿದ ೯೦ ಜನರಿಗೆ ಉದ್ದಿಮೆಗಳನ್ನು ಕಲಿಯಲಿಕ್ಕೆ ಕಳಿಸುತ್ತಾರೆ ಹೆಚ್ಚಿನ ಉದ್ದಿಮೆಗಳೆಂದರೆ ಕಮ್ಮಾರರವು, ಬಡಿಗರವು, ಮುದ್ರಕರವು, ಇತ್ಯಾದಿ ಈ ಶಾಲೆಗಳಲ್ಲಿ ಕಲಿತವರು ತಮ್ಮ ಕಲೆಯಲ್ಲಿ ಸಂಪೂರ್ಣ ಪ್ರಾವೀಣ್ಯ ದೊರಕಿಸುತ್ತಾರೆ. ಒಂದು ಶಾಲೆಯಲ್ಲಿ ನಾನು ಹುಡುಗರು ತಯಾರಿಸಿರುವ ಆಟದ ಸಾಮಾನುಗಳನ್ನು ನೋಡಿ ಬೆರಗಾದೆನು! ಹುಡುಗರು ಗುಂಗೀ ಹುಳದ ಚಿತ್ರ ತಯಾರಿಸಿದ್ದರು. ಕೀಲಿಯನ್ನು ಕೊಟ್ಟು ಬಿಟ್ಟರೆ ಆ ಹುಳವು ದನಿ ಮಾಡಿ ಹಾರುತ್ತಿತ್ತು. ಆ ಹುಡುಗರಿಗೆ ಸ್ವರ-ಗತಿಶಾಸ್ತ್ರದ ಮರ್ಮ ಚನ್ನಾಗಿ ತಿಳಿದಿತ್ತು. ಹೆಣ್ಣು ಮಕ್ಕಳ ಬಗ್ಗೆ ಗೃಹಶಾಸ್ತ್ರ ಮುಂತಾದ್ದು ಕಲಿಸುವ ಶಾಲೆಗಳಿವೆ ಮನೆಯಲ್ಲಿ ಹೇಗೆ ವ್ಯವಸ್ಥೆ ಇಡಬೇಕು, ಸ್ವಚ್ಛತೆ ಹೇಗೆ ಕಾಪಾಡಬೇಕು, ಹೊಲಿಗೆ, ಪಾಕಶಾಸ್ತ್ರ ಮುಂತಾದ ವಿವಿಧ ಕಲೆಗಳನ್ನು ಕಲಿಸುತ್ತಾರೆ. ಅಲ್ಲಿ ಕಲಿತ ಹುಡುಗಿಯರು ಶ್ರೀಮಂತರ ಮನೆತನಗಳಲ್ಲಿ ನೌಕರರಾಗಿ ಉಳಿಯಲಿಕ್ಕೆ, ಮದುವೆಯಾದರೆ ಒಳ್ಳೇ ಗೃಹಿಣಿಗಳಾಗಲಿಕ್ಕೆ ಪಾತ್ರರಾಗುತ್ತಾರೆ ಇಂತಹ ಏರ್ಪಾಟು ಇರುವದರಿಂದ ಬುದ್ಧಿಯ ಅಪವ್ಯಯ, ಶಕ್ತಿಯ ಅಪವ್ಯಯ ಮುಂತಾದ ಹಾನಿಯಾಗುವದಿಲ್ಲ. ಆದರೆ ನಮ್ಮ ದೇಶದ ಸ್ಥಿತಿ ನೋಡಿರಿ. ಎಲ್ಲ ಹುಡುಗರಿಗೆ ಒಂದೇ ರಾತಿಯ ಶಿಕ್ಷಣ! ನೌಕರಿಯ ಆಶೆಯಿಂದ ಎಲ್ಲ ಹುಡುಗರು-ತಮ್ಮ ಶಕ್ತಿಯ ಇಲ್ಲವೆ ಅಭಿರುಚಿ-ಅನಭಿರುಚಿಗಳ ಇಲ್ಲವೆ ಮುಂದಿನ ಸಾಧ್ಯದ ವಿಚಾರ ಮಾಡದೆ-ಪ್ರಾಥಮಿಕ ಶಾಲೆಗಳಿಂದ ಮಾಧ್ಯಮಿಕ ಶಾಲೆಗಳಿಗೂ, ಮಾಧ್ಯಮಿಕ ಶಾಲೆಗಳಿಂದ ಕೊಲೇಜುಗಳಿಗೂ ಓಡುತ್ತಾರೆ! ಈ ಸ್ಥಿತಿ ಬದಲಿಸಬೇಕು ಮಹಾತ್ಮರ ನೇತೃತ್ವದಲ್ಲಿ ವರ್ಧಾ-ಯೋಜನೆ ಸಿದ್ಧವಾಗುತ್ತಲಿದೆ. ಪಾಶ್ಚಾತ್ಯರ ಶಿಕ್ಷಣ ಪದ್ಧತಿಯ ಗುಣಗಳ ಅಭ್ಯಾಸ ಮಾಡಿಕೊಂಡು, ಅವುಗಳೊಳಗಿನ ಚಲೋ ಅಂಶಗಳನ್ನು ನಮ್ಮ ಪರಿಸ್ಥಿತಿಗೆ ಹೊಂದುವಂತೆ ಮಾರ್ಪಡಿಸಿ ಶಿಕ್ಷಣಪದ್ಧತಿಯ ಸುಧಾರಣೆ ಮಾಡಿ ತರುವದೇ ವರ್ಧಾ-ಯೋಜನೆಯ ಪ್ರಯತ್ನ ಮತ್ತು ಧ್ಯೇಯ. ಅದು ಯಶಸ್ವಿಯಾಗಲೆಂದು ಹಾರೈಸುವಾ" ಈ ಪ್ರಕಾರ ರಾ|| ಕಸಬೇಕರರು ತಮ್ಮ ಅನುಭವಗಳನ್ನು ಹೇಳಿದರು ಹೊತ್ತು ಬಹಳ ಆದ್ದರಿಂದ ಅವರು ಸ್ವಲ್ಪದರಲ್ಲಿಯೇ ಮುಕ್ತಾಯ ಮಾಡಬೇಕಾಯಿತು. ಮುಂದೆ ಆಭಾರಮನ್ನಣೆ, ರಾಷ್ಟ್ರಗೀತ, ಸಭಿಕರಿಗೆ ಅಲ್ಪೋಪಹಾರ ಮೊದಲಾದ ಕಾರ್ಯಕ್ರಮಗಳಾಗಿ ಸಮಾರಂಭದ ಸಮಾಪ್ತಿಯಾಯಿತು

ನಿಮ್ಮ ವ್ಯಾಪಾರಿ ಹೇಳುವನು.

ಬುದ್ಧಿವಂತ ಸ್ತ್ರೀಯರಿಗೆ ಗೊತ್ತೇ ಇದೆ- ಹಮಾಮು ಸಾಬೂನಿನ ಘನತೆಯನ್ನೂ ಮತ್ತು ಯೋಗ್ಯತೆಯನ್ನೂ ಪ್ರತಿಯೊಬ್ಬರು ಹೇಳುತ್ತಲಿರುವರು. ನೀವು ವೆಚ್ಚ ಮಾಡಿದ ಹಣಕ್ಕಾಗಿ ಬರುವ ಹಮಾಮು ನೋಡಲು ಮಹದಾಶ್ಚರ್ಯವನ್ನುಂಟು ಮಾಡುವದು. ಪ್ರತಿಯೊಂದು ಸಾಬೂನ ಗಟ್ಟಿ ½ ಔಂಸು ತೂಕದ್ದಿರುವದು ಆದರೆ ಇತರ ಸಾಬೂನುಗಳಿಗಿಂತ ಪ್ರಿಯವಾದುದಲ್ಲ ಅಂದರೆ ಎಷ್ಟು ಉಳಿತಾಯವಾದುದೋ ನೀವೇ ಆಲೋಚಿಸಿರಿ!

ತಾತಾರವರ ಹಮಾಮು ನಿಮ್ಮ ಸ್ನಾನಕ್ಕೆ ಯೋಗ್ಯವಾದ ಸಾಬೂನು.

ಪ್ರಾಣಿಗಳ ಕೊಬ್ಬು ಇದರಲ್ಲಿಲ್ಲ.

ಟಾಂಕೋ ಸೇಲ್ಸ್ ಡಿಪಾರ್ಟಮೆಂಟು,
೧, ಸೆಂಟ್ರಲ್ ಸ್ಟ್ರೀಟ, ಬೆಂಗಳೂರು
ದಿ ತಾತಾ ಆಯಿಲ್ಲ ಮಿಲ್ಸ ಕಂ., ಲಿ
ತಾತಾಪುರಂ ಮತ್ತು ಬೊಂಬಾಯಿ.

ದಿ ತಾತಾ ಆಯಿಲ್ ಮಿಲ್ಸ್ ಕಂಪನಿ, ಲಿಮಿಟೆಡ್,
ಬಾಂಬೇ ಹೌಸ್ - ಬೊಂಬಾಯಿ.

ದಯಮಾಡಿ ನಿಮ್ಮ ಹಮಾಮು ಸಾಬೂನುಗಳನ್ನು ನನಗೆ ಉಚಿತವಾಗಿ ಕಳುಹಿಸಿ ಟಪಾಲು ಖರ್ಚಿಗಾಗಿ ಒಂದು ಆಣೆಯ ಸ್ಟಾಂಪನ್ನು ಕಳುಹಿಸಿರುವೆನು.

ಹೆಸರು

ವಿಳಾಸ

ತಾತಾರವರ ಉತ್ಪತ್ತಿ — ವಿಳಾಸ ಸ್ಪಷ್ಟವಾಗಿ ಬರೆಯಿರಿ K N I

ಓಂ

'ದಶಮೂಲಾರಿಷ್ಟ.'

ದಶಮೂಲಾರಿಷ್ಟ

[illegible] ಇದರ ಗುಣವು [illegible]

ಈ ಮಿಶ್ರಣದಿಂದ ಹೊಟ್ಟೆಯೊಳಗಿನ [illegible] ಎಂಥ ಅಶಕ್ತತೆ ಇದ್ದರೂ [illegible] ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಉಷ್ಣವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, [illegible] ರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ [illegible] ಮಕ್ಕಳಿಲ್ಲದೇ ಇರುವವರಿಗೆ [illegible] ಹೆಂಗಸರಿಗೆ ಪ್ರಸವ ಆದ ನಂತರ [illegible] ವಿಕಾರಗಳಿಗೆ, [illegible] ವಿಕಾರಗಳಿಗೆ ಹಾಗೂ ಯಾವುದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವ [illegible] ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ ([illegible]) [illegible] ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವುದೇ ತರದ ರೋಗಗಳು [illegible] ಆಗದೆ ಮೊದಲಿನಂತೆ ಸಶಕ್ತರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೬ ಔಂಸ ಬಾಟ್ಲಿಗೆ ರೂ ೧—೪—೦
,, [illegible] ಬಾಟ್ಲಿಗೆ ರೂ [illegible]
,, [illegible] ಬಾಟ್ಲಿಗೆ ರೂ [illegible]

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಾವಲೇಹ, [illegible] ದ್ರಾಕ್ಷಾರಿಷ್ಟ, ಕುಮಾರಿ ಆಸವ, [illegible], ಪುನರ್ನವಾ ಆಸವ, ಅಶೋಕಾರಿಷ್ಟ, [illegible] ಲೋಹಾಸವ, ಮಹಾನಾರಾಯಣ ತೈಲ, [illegible] ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ್— ಕುಮಟಾ. (ಉ. ಕನ್ನಡ)

[illegible] ಔಷಧಿ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

[illegible] ತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ

ABHRALOHA

[illegible] —

ಕಾರವಾರ -ಮೆಸರ್ಸ ಮುಜುಮುದಾರ-ಕಸಬೇಕರ ಬ್ರದರ್ಸ. ಅಂಕೋಲಾ ದಿ ಸ್ಟೋರ್ಸ ಡಿಪೋ ॥ ಕುಮಟಾ ದೇವಪ್ಪ ಅಯ್ಯಪ್ಪ ॥ ಹೊನ್ನಾವರ ಕಲ್ಯಾಣಪುರ ಬ್ರದರ್ಸ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ [illegible] ದರಗಳೂ, ಶರ್ತುಗಳೂ ಬಹಳ [illegible] ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟೀಸ ಆಕ್ಟಿನ ನಿಯಮಗಳಂತ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮ್ಯುಚ್ಯುವಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಕೇಳಿದಲ್ಲಿ ಸಿಗುವದು.

Kumta Agents
D. K. Nayak Bros.
K. N. Nayak.
Honavar Agents
R. V. Prabhu

K. Padmanabha Rao & Sons,
BELGAUM
Chief Agents for
Karnatak Districts & S. M. States

[illegible] ಡಾಕ್ಟರ ಪಿ. ಬೀ. [illegible]ರವರ ಸುಗಂಧಿ ನಸ್ಯದ ಪುಡಿ. [illegible] ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು [illegible] ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಜನರು ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— [illegible], ಒಂಟಿತಲೆನೋವು, ತಲೆಯ [illegible] ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು. ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ [illegible] ವ್ಯಾಧಿಗಳನ್ನೂ [illegible] ಶಕ್ತಿಯನ್ನೂ [illegible] ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು [illegible] ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. [illegible]

(Registered Trade Mark)

ಡಬ್ಬಿ ಒಂದಕ್ಕೆ ಕ್ರಯ ರೂ. [illegible] ಡಜನ್ ೧ಕ್ಕೆ ರೂ. [illegible] ವಿ ಪಿ [illegible]

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ [illegible] ತಿಳಿಸಬೇಕು [illegible]

ಪತ್ತೆ ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ. ಬಾ. [illegible], ಮಾರ್ಕೆಟ್ [illegible], ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 7th November, 1938.

ವರ್ಷ ೨೧

ಸಂಚಿಕೆ ೧೮

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1-0-0 ೮ ನಂತ್ರ ಪ್ರತಿಸಾಲಿಗೆ 0-2-0. ಹೆಚ್ಚಿಂಗದ ಸಾಲು ಎಷ್ಟು ಕೊಟ್ಟಿರುವರೋ ಆ ಮಾಪಿನಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತೀರಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೭ ನೇ ನವಂಬರ ಸನ್ ೧೯೩೮ನೇ ಇಸವಿ.)

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital. In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd· 1906

RESOURCES
OVER A CRORE.

**CANARA BANK,
LIMITED.**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938

The Agricultural & Industrial Bank, Ltd.

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು)

ಕಾರವಾರ— ಕಳೆದ ತಾ ೧೭ರ ಸಂಚಿಕೆಯ ೨-೩ನೇ ಪುಟಗಳಲ್ಲಿ ಪ್ರಸಿದ್ಧವಾದ ಕಾರವಾರ ಸುದಿ ಪತ್ರದಲ್ಲಿ ಕಾರವಾರ ವಕೀಲರ ಸಂಘದ ಸಭೆಯ ಸಂಕ್ಷಿಪ್ತ ವೃತ್ತಾಂತ ಬಂದಿರುತ್ತದಷ್ಟೇ ಆ ವೃತ್ತಾಂತವು ಕೆಲವು ಕಡೆ ತಪ್ಪಿರುತ್ತದಾಗಿ ನಮ್ಮ ಮಿತ್ರರೊಬ್ಬರು ತಿಳಿಸುತ್ತಾರೆ ರಾ॥ ಹಳದೀಪುರ ಕೃಷ್ಣರಾಯರು ತಮ್ಮ ಭಾಷಣದಲ್ಲಿ, ವಕೀಲರಿಗೂ ನ್ಯಾಯಾಧೀಶರಿಗೂ ಅನ್ಯೋನ್ಯ ಸಂಬಂಧವುಂಟೆಂತಲೂ ವಕೀಲ ಮತ್ತು ನ್ಯಾಯಾಧೀಶ ಇವರ ನಡುವೆ ನಡೆವ ವ್ಯವಹಾರಕ್ಕೆ ಮತ್ತು ಸಾರ್ವಜನಿಕರಿಗೆ ಸಂಬಂಧವಿಲ್ಲೆಂತಲೂ ಆ ವ್ಯವಹಾರವನ್ನು ಪತ್ರಿಕೆಗಳಲ್ಲಿ ಪ್ರಕಟಿಸುವದು ಯುಕ್ತವಲ್ಲೆಂತಲೂ ಪ್ರತಿಪಾದಿಸಿದ್ದರಾಗಿಯೂ ಪ ವಾ ತಿಂಕೇಡ ಸಾಹೇಬರ ಮೇಲೆ "ನಾಗರಿಕ"ವು ಟೀಕೆ ಮಾಡಿದಾಗ ವಕೀಲ ಸಂಘದವರು ನಿಷೇಧ ಮಾಡಿದ್ದುಂಟೆಂತ ಪೂರ್ವೋದಾಹರಣೆ ಉಲ್ಲೇಖಿಸಿದ್ದರಾಗಿಯೂ ಮಿತ್ರರ ಅಂಬೋಣ ರಾ ಮಾಧವ ರಾ ಸಭಾಗರ ಹೇಳಿಕೆಯು ಮುಖ್ಯಾರ್ಥ ಈ ಮುಂದೆ ತೋರಿಸಿದಂತೆ ಇತ್ತಂತೆ - "ನಾಗರಿಕ ಪತ್ರದಲ್ಲಿ ಪ್ರಕಟವಾದ ಸಂಗತಿಗಳ ಮೇಲಿಂದ, ಕೆಲವೊಂದು ವಕೀಲರ ವಿರುದ್ಧ ಏನೊಂದೂ ಟೀಕೆ ಮಾಡಬಾರದಾಗಿ ರಾ ಮಾಧವಕುರ್ಡೆಯವರ ಮುಖಾಂತರ "ನಾಗರಿಕ" ಸಂಪಾದಕರಿಗೆ ಮುಂಜಾಗ್ರತೆ ಕೊಟ್ಟತ್ತಾಗಿ ತರ್ಕವಾಗುತ್ತದೆ ಅದ್ದರಿಂದ "ನಾಗರಿಕ"ವು ಆ ಸಂಗತಿಯನ್ನು ಪ್ರಕಟಿಸಿದ್ದು ತಪ್ಪೆಂದು ಹೇಳಬಹುದು ಈಗ ಈ ಪ್ರಕರಣ ಸರಕಾರದ ಮುಂದೂ ನಾ ಹಾಯಕೋರ್ಟಿನ ಮುಂದೂ ಹೋಗಿರುವದರಿಂದ ನಾವು ಏನೊಂದು ಅಭಿಪ್ರಾಯ ವ್ಯಕ್ತ ಮಾಡುವದು ಬೇಡ ಮೃತ ತಿಂಕೇಡ ಸಾಹೇಬರ ವಿಷಯವಲ್ಲಿ ಸೂಚನೆ ತಂದವನು ನಾನೇ ತಮ್ಮ ವಿರುದ್ಧ ಬಂದ ಟೀಕೆಗೆ ಪ್ರತ್ಯುತ್ತರ ಕೊಟ್ಟು ಆತ್ಮರಕ್ಷಣೆ ಮಾಡಿಕೊಳ್ಳಲಾಗದ ದಿವಂಗತ ಮಹನೀಯರ ಬಗ್ಗೆ ಕುತ್ಸಿತ ಟೀಕೆ ಮಾಡುವದು ಯುಕ್ತವಲ್ಲೆಂಬ ಅಭಿಪ್ರಾಯದಿಂದ ನಾನು ಆ ಸೂಚನೆ ತಂದಿದ್ದೆ ಈಗ ಅಂತಹ ಪ್ರಸಂಗವೇನೂ ಇಲ್ಲ, ಇತ್ಯಾದಿ, ಮಿ ಪ್ರೋಟರಫೀಲ್ಡರವರ ನಡತೆ ಅಸಮರ್ಥನೀಯವಿರುತ್ತದೆ, ಹೀಗೆ ರಾ ಶಿಂನಭಾಗರು ನುಡಿಯಲಿಲ್ಲವಂತೆ ರಾ ಗೋಕರ್ಣಕರವರ ಭಾಷಣದ ಸಾರಾಂಶವೂ ತಪ್ಪಿರುತ್ತದಾಗಿ ನಮ್ಮ ಮಿತ್ರರು ಬರೆಯುತ್ತಾರೆ "ವಕೀಲ ಸಂಘದ ಮಾನ ಕಾಯ್ದುಕೊಳ್ಳುವದಷ್ಟೇ ನಮ್ಮ ಕರ್ತವ್ಯ, ಪ ವಾ ತಿಂಕೇಡರವರ ವಕೀಲರ ಟೀಕೆಯ ನಿಷೇಧ ಮಾಡಿದ್ದು ತಿಂಕೇಡ ಸಾಹೇಬರ ಬಗ್ಗಲ್ಲ, ನಮ್ಮ ಸಂಘದ ಸದಸ್ಯರೊಬ್ಬರ ಮಾನ ಕಾಯುವದಕ್ಕಾಗಿ ನ್ಯಾಯಾಧೀಶರ ಪ್ರಶ್ನೆ ನಮ್ಮ ಕಕ್ಷೆಯಲ್ಲಿ ಬರುವದಿಲ್ಲ" ಹೀಗೆ ರಾ ಗೋಕರ್ಣಕರವರು ಪ್ರತಿಪಾದಿಸಿ, ವಕೀಲ ಸಂಘದ ಸಭೆ ಸೇರಿಸಬೇಕೆಂದು ಬರೆದ ಪತ್ರ ತಿರುಗಿ ತೆಗೆದುಕೊಳ್ಳಲು ಡಾ' ಭಟ್ಟರಿಗೆ ಸೂಚಿಸಿದರಂತೆ ನ್ಯಾಯಾಧೀಶರ ನಡತೆಯ ಬಗ್ಗೆ ಅವರು ಮಾತನಾಡಲಿಲ್ಲವಾಗಿಯೂ, ಅವರ ಭಾಷಣವಾದರೂ ಸಾವಧಾನದಿಂದಲೇ ನಡೆದಿತ್ತಾಗಿಯೂ ಮಿತ್ರರು ತಿಳಿಸುತ್ತಾರೆ ಅಧ್ಯಕ್ಷರು ರಾ ಸಾ' ಶೆಟ್ಟಿಯವರ ಕಡೆ ಅಭಿಪ್ರಾಯ ಕೇಳಿದ್ದರಾಗಿಯೂ ಆದರೆ ರಾ' ಶೆಟ್ಟಿಯವರು ಏನೂ ಹೇಳುವದಿಲ್ಲವಾಗಿ ಹೇಳಿದರಾಗಿಯೂ ಮಿತ್ರರ ಅಂಬೋಣ ರಾ' ಚಂದಾವರಕರರು ೮ ೯ ವರ್ಷಗಳಿಂದ ಅಧ್ಯಕ್ಷರಿರಲಿಲ್ಲ ಕಳೆದ ೩ ವರ್ಷಗಳಲ್ಲಿ ಮಾತ್ರ ಅಧ್ಯಕ್ಷರಾಗಿದ್ದರು ಅದಕ್ಕೂ ಮುಂಚೆ ಮ್ಯುನಿಸಿಪಾಲಿಟಿಯಲ್ಲಿ ಮನೆ ಜಂಗ ಕಮಿಟಿಯ ಚೇರಮನ್ ಮೊದಲಾದ ಅಧಿಕಾರಿಗಳಾಗಿದ್ದರು

ಡಾ' ಮಾನಕಾಮೆಯವರು ಸರಕಾರಕ್ಕೆ ಮಾಡಿದ ಅರ್ಜಿ ತಿರಸ್ಕರಿಸಲ್ಪಟ್ಟಿರುತ್ತದೆ ಇತ್ಯಾದಿ

ರಾ॥ ಸಾ॥ ಎಸ್ ಟಿ ಶೆಟ್ಟಿ, ವಕೀಲ, ರಾ॥ ಡಿ ದಿ ನಾಡಕರ್ಣಿ ವಕೀಲ ಇವರೂ ಪತ್ರ ಬರೆದು ವಕೀಲರ ಸಭೆಯಲ್ಲಿ ರಾ॥ ಸಾ॥ ಎಸ್ ಟಿ ಶೆಟ್ಟಿ ವಕೀಲರು ರಾ॥ ಗೋಕರ್ಣಕರಂತೆಯೇ ಅಭಿಪ್ರಾಯಪಟ್ಟರೆಂದು ಬರೆದ ಸಂಗತಿ ಸರಿಯಿಲ್ಲವಾಗಿ ತಿಳಿಸುತ್ತಾರೆ

ಇಲ್ಲಿಯ ಪೋಲೀಸ ಸಾಹೇಬರಾದ ಮಿ॥ ಕ್ಲಿಫರ್ಡರವರು ನಿವೃತ್ತಿ-ಪೂರ್ವ ರಜೆ ಕೊಂಡಿದ್ದಾರೆ ಇವರ ಸ್ಥಳದಲ್ಲಿ ಮಿ॥ ಬರ್ನಾರ್ಡ ಎಂಬವರು ನೇಮಿಸಲ್ಪಟ್ಟಿದ್ದಾರೆ

ಪ್ರಾಂತಾಧಿಪರಾದ ಸರ್ ರೋಜರ ಲುಮ್ಲೀಯವರು ಇದೇ ಬರುವ ೨೭ನೇ ತಾರೀಖಿಗೆ ಇಲ್ಲಿ ಚಿತ್ತೈಸುತ್ತಾರೆ ಅವರಿಗೆ ಇಲ್ಲಿಯ ನಗರ ಸಭೆಯವರು ಮಾನಪತ್ರ ಕೊಡಬೇಕೆಂದೂ ಈ ಬಗೆ ರೂ ೧೦೦ರ ತನಕ ಖರ್ಚು ಮಾಡಬಹುದಾಗಿಯೂ ನಿರ್ಣಯಿಸಿದ್ದಾರೆ

ಟಪಾಲ ಮತ್ತು ತಂತಿ ಇಲಾಖೆಯ ಡ್ಯಾರೆಕ್ಟರ-ಜನರಲ್ ರಾದ ರಾ| ಗುರುಂವ ಬೇವೂರರವರು ಇಲ್ಲಿಯ ಅಂಚೆ-ಕಚೇರಿಯನ್ನು ಸಂದರ್ಶಿಸಿ ಮದ್ರಾಸ ಕಡೆ ತೆರಳಿದರು ಇಲ್ಲಿಯ ಟಪಾಲ ಕಚೇರಿಯ ವ್ಯವಸ್ಥೆ ನೋಡಿ ಸಮಾಧಾನಪಟ್ಟರು ಈಗಿನ ಕಲೆಕ್ಟರರಾದ ರಾ॥ ಬಾಗಲೇಯವರು ರಾ ಬೇವೂರರವರ ಅಳಿಯಂದಿರು

ಕೋಡಿಬಾಗದಲ್ಲೂ ಇಲ್ಲಿಯ ಬ್ರಾಹ್ಮಣ ಗಲ್ಲಿಯಲ್ಲೂ ಪ್ಲೇಗು ಉಂಟು ಬ್ರಾಹ್ಮಣ ಗಲ್ಲಿಯಲ್ಲಿ ೧ ನಿಧನ, ಕೋಡಿಬಾಗದಲ್ಲಿ ೨ ನಿಧನ ಹೀಗೆ ಈ ತನಕ ಒಂಟು ೩ ನಿಧನಗಳಾದವು.

ಪ್ರವಾಸಿ ಜನರಿಗೆ

ಊಟ-ಉಪಚಾರಗಳ

ಉತ್ತಮ ವ್ಯವಸ್ಥೆ !

ಮಾಧವಾಶ್ರಮ,

ಕಾರವಾರ.

ಮಧ್ಯವರ್ತಿ ಸ್ಥಳ,

ಉತ್ಕೃಷ್ಟ ಊಟ;

ಉತ್ತಮ ಹವೆಯ ಕೋಣೆಗಳು,

ಊಟ-ಉಳಕೊಳ್ಳುವ ಅನುಕೂಲತೆ !

ನಮ್ಮ ತಾಯಿಯು ಯಾವಾಗಲೂ 501 ಸಾಬೂನನ್ನು ಉಪಯೋಗಿಸುವಳು.



ಇದು ನಿಧಾನವಾಗಿ

ಕರಗುವದರಿಂದ ಬಹುಕಾಲ ಉಪಯೋಗಿಸಬಹುದೆಂದು ಹೇಳುವಳು.

ಇತರ ಸಾಬೂನುಗಳು ಬೇಗನೆ ಸವೆಯುವವು. ನಿಮಗೆ ದೊರೆಯುವ ಸಾಬೂನುಗಳಲ್ಲೆಲ್ಲಾ "501"ದೇ ಅತ್ಯುತ್ತಮವಾದದ್ದು.

ಪಟ್ಟಿಯಾಗಿದ್ದು ಬಹಳ ನಿಧಾನವಾಗಿ ಸವೆಯುವದಲ್ಲದೆ ಹಣವನ್ನು ಕೂಡಾ ಉಳಿಸುವದು ಇತರ ಸಾಬೂನುಗಳ ಬೇಗನೇ ಸವೆಯುವವು 501 ಬಟ್ಟೆಗಳಿಗೆ ಬಾಳಿಕೆ ಕೊಡುವದು ಇತರ ಸಾಬೂನುಗಳ ಹಾಗೆ ವಸ್ತ್ರಗಳನ್ನು ಕೆಡಿಸುವದಿಲ್ಲ. 501 ನಿಜವಾಗಿ ಸ್ವದೇಶಿ ಸಾಬೂನು. ಈ ದಿನವೇ ಕೊಳ್ಳಿರಿ ನಿಮ್ಮ ಮನೆಗಳಲ್ಲಿ ಸದಾ ಉಪಯೋಗಿಸಿರಿ.

ವಿವೇಕದಿಂದ ಕೊಳ್ಳಿರಿ.



501

501 ವಸ್ತ್ರಗಳನ್ನು ಶುಭ್ರಪಡಿಸುವ ಸಾಬೂನನ್ನು ಕೊಳ್ಳಿರಿ!

ಇದರಲ್ಲಿ ಪಶು ಕೊಬ್ಬು ಇಲ್ಲ

ಟಾಂಕೋ ಸೇಲ್ಸ್ ಡಿಪಾರ್ಟಮೆಂಟು,

೧, ಸೆಂಟ್ರಲ್ ಸ್ಟ್ರೀಟ, ಬೆಂಗಳೂರು

ದಿ ಟಾಟಾ ಆಯಿಲ್ ಮಿಲ್ಸ್ ಕಂ| ಲಿ| ಇವರಿಂದ ತಯಾರಾದದ್ದು

ಟಾಟಾಪುರಂ ಮತ್ತು ಬೊಂಬಾಯಿ.

ಟಾಟಾರವರ ಉತ್ಪತ್ತಿ

ವಾರ್ತೆಗಳು.

— ಮದ್ರಾಸ ಹೈಕೋರ್ಟಿನಲ್ಲಿ, ‘ ತ್ರಾವಣಕೋರ ನೆಶನಲ್ ಮತ್ತು ಕ್ವಿಲೋನ ಬೆಂಕ ’ನ ಡೈರೆಕ್ಟರರನ್ನು ತ್ರಿವೇಂದ್ರಮದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಹುಕುಮಿನ ಮೇರೆಗೆ ಮದ್ರಾಸದೊಳಗಿನ ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಸೆರೆಯಲ್ಲಿಟ್ಟ ಬಗ್ಗೆ ಪ್ರಕರಣ ನಡೆದಿರುವದಷ್ಟೇ ! ನ್ಯಾ|| ಮೂ|| ಪಾಂಡುರಂಗರಾಯರು ಅವರನ್ನು ಮದ್ರಾಸದೊಳಗಿಂದ ಹೊರ-ಒಯ್ಯಬಾರದಾಗಿ ಮಾಡಿದ ಹುಕುಮಿನ ವಿರುದ್ಧ ನ್ಯಾ|| ಮೂ|| ಬರ್ನ ಮತ್ತು ಸ್ಟೊಡಾರ್ಟರವರ ಕೋರ್ಟಿನಲ್ಲಿ ಕಳೆದ ಸೋಮವಾರದಿಂದ ವಿಚಾರ ನಡೆದು ಬುಧವಾರ ನ್ಯಾ|| ಮೂ||ಗಳಾದ ಪಾಂಡುರಂಗರಾಯರು ಅಗತ್ಯದಿಂದ ಹೊರಡಿಸಿದ ಹುಕುಮಿನ ಪ್ರಕರಣ ಸಂಕೀರ್ಣವಾಗಿದ್ದು ಅದನ್ನು ಐವ ನ್ಯಾಯಾಧೀಶರ ಫುಲ್-ಬೆಂಚಿನಿಂದ ನಿರ್ಣಯಿಸಿಕೊಳ್ಳುವದು ಪ್ರಶಸ್ತವೆಂದು ನ್ಯಾಯಮೂರ್ತಿಗಳು ನಿರ್ಣಯಿಸಿ ಅದನ್ನು ಮುಖ್ಯ ನ್ಯಾಯಾಧೀಶರು, ನ್ಯಾ| ಮೂ| ಮಾಧವನ್ ನಾಯರ, ನ್ಯಾ||ಮೂ|| ವೆಡ್ಸವರ್ಥ, ನ್ಯಾ||ಮೂ||ಲಕ್ಷ್ಮಣರಾವ, ಹೀಗೆ ಐವರು ಈ ಪ್ರಕರಣ ನಿರ್ಣಯಿಸಬೇಕಾಗಿ ವಿಧಿಸಿದರು. ಮರುದಿನ ಫುಲ್-ಬೆಂಚಿನ ವಿಚಾರಕ್ಕೆ ಪ್ರಾರಂಭವಾಯಿತು ಇಡೀ ದಿನ ನ್ಯಾ||ಮೂ|| ಗಳು ಪ್ರಕರಣವನ್ನು ಕೇಳಿಕೊಂಡರು ಮರು ದಿನ ತೀರ್ಪು ಕೊಟ್ಟು, ನ್ಯಾ| ಮೂ| ಪಾಂಡುರಂಗರಾಯರು ತಮ್ಮ ನಿವಾಸಸ್ಥಾನದಲ್ಲಿ ಅರ್ಜಿಯನ್ನು ಸ್ವೀಕರಿಸಿ ಹೊರಡಿಸಿದ ಅಗತ್ಯದ ಹುಕುಮು ಅನಧಿಕಾರದ್ದೆಂದು ನಿರ್ಣಯಿಸಿ ಅದನ್ನು ರದ್ದುಪಡಿಸಿದರು ಮತ್ತು ಮೂಲ ಅರ್ಜಿಯನ್ನು ಈಹೊತ್ತು ಸೋಮವಾರ ಕ್ರಿಮಿನಲ್ ಪ್ರಕರಣಗಳನ್ನು ವಿಚಾರ ಮಾಡುವ ನ್ಯಾ| ಮೂ|ಗಳು ವಿಚಾರಿಸತಕ್ಕದ್ದೆಂದು ಮುಖ್ಯ ನ್ಯಾಯಾಧೀಶರು ಫುಲ್-ಬೆಂಚಿನ ಪರವಾಗಿ ತೀರ್ಪು ಕೊಟ್ಟರು ಹೀಗೆ ಈ ಪ್ರಕರಣ ಇನ್ನೂ ಮದ್ರಾಸ ಹೈಕೋರ್ಟಿನ ವಿಚಾರದಲ್ಲಿರುತ್ತದೆ

— ಮುಂಬಯಿ ಎಸೆಂಬ್ಲಿಯಲ್ಲಿ ಅಂತು ಕೂಲಿಕಾರರ ಕಲಹನಿವಾರಣೆಯ ಕಾಯಿದೆಯ ೩ನೇ ವಾಚನ ಶುಕ್ರವಾರ ಬಹುಮತದಿಂದ ಮನ್ನಿಸೋಣಾಯಿತು ಈ ಕಾಯಿದೆಯನ್ನು ಕೊಂಗ್ರೆಸ ಸರಕಾರವು ಒಡೆಯರ ಪಕ್ಷಪಾತಿಯಾಗಿ, ಕೂಲಿಕಾರರ ವಿರೋಧಿಯಾಗಿ ಸಂಘಟಿಸಿರುವದೆಂದು ರಾ|| ಜಮುನಾದಾಸ ಮೇಹ್ತಾ, ರಾ|| ಝಾಬವಾಲಾ, ರಾ|| ಪರೂಳೇಕರ ಮೊದಲಾದವರು ತೀವ್ರವಾಗಿ ವಾದಿಸಿ ಪುನಃ ಪುನಃ ಮತಗಣನೆಯ ಪ್ರಸಂಗ ತಂದು ಎಸೆಂಬ್ಲಿಯ ಸಮಯವನ್ನು ಅಪವ್ಯಯಗೊಳಿಸಿದರು ೩ನೇ ವಾಚನದ ಕಾಲಕ್ಕೆ ಮುಖ್ಯ ಮಂತ್ರಿಗಳಾದ ನಾ|| ಬಾಳಾಸಾಹೇಬ ಖೇರರವರು ೧|| ತಾಸಿನ ತನಕ ಅಖಂಡವಾದ ಭಾಷಣ ಮಾಡಿ ಕೊಂಗ್ರೆಸ ಸರಕಾರದ ಅಂತಃಕರಣ ಪರಿಶುದ್ಧವಿರುವದಾಗಿಯೂ ಸಮಾಜಹಿತ-ಕೂಲಿಕಾರರ ಹಿತ ಬಯಸಿ ಈ ಕಾಯಿದೆಯನ್ನು ಅದು ಸಂಘಟಿಸಲುದ್ಯುಕ್ತವಾಗಿರುವದಾಗಿಯೂ, ಈಕಾಯಿದೆಯಿಂದ ಕೂಲಿಕಾರರ ಅಹಿತವಾಗುತ್ತದಾಗಿ ಸಿದ್ಧವಾದರೆ ಅದರೊಳಗೆ ಬೇಕಾದ ತಿದ್ದುಪಡಿ ಇಲ್ಲವೆ ಅವಶ್ಯ ಕಂಡಲ್ಲಿ ರದ್ದುಪಡಿಸಲಿಕ್ಕೂ ತಾವು ಸಿದ್ಧರಿರುವೆವಾಗಿಯೂ, ಲೋಕಸೇವಕರಾಗಿಯೇ ತಾವು ರಾಜಾಧಿಕಾರವನ್ನು ನಡಿಸುತ್ತೇವಲ್ಲದೆ, ಲೋಕಪ್ರಭುಗಳಾಗಿ ತಾವು ರಾಜಾಧಿಕಾರವನ್ನು ನಡಿಸುವದಿಲ್ಲವಾಗಿಯೂ ನಾ|| ಖೇರರವರು ನಿರ್ಧಾರದಿಂದ ನುಡಿದರು “ ಕೊಂಗ್ರೆಸ ಬಹುಮತಬಲದಿಂದ ನಾವು ನಿರಂಕುಶ ಅಧಿಕಾರವನ್ನು ನಡಿಸಬಯಸುವದಿಲ್ಲ, ಕೊಂಗ್ರೆಸ ಸಭಾಸದರು ಗುಲಾಮರಲ್ಲ, ಅವರು ಮತದಾರರಿಗೆ ಹೊಣೆಗಾರರಿದ್ದಾರೆ,” ಹೀಗೆ ಸಹ ನಾ|| ಖೇರರವರು ಒತ್ತಿ ಹೇಳಿ ಕೊಂಗ್ರೆಸ ಸರಕಾರದ ಹೇತು ವಿಪರ್ಯಾಸ ಮಾಡಬಾರದಾಗಿ ವಿನಂತಿ ಮಾಡಿಕೊಂಡರು. ಈ ಕಾಯಿದೆ ಮೇಲ್ಸಭೆಯಲ್ಲಿ ಚರ್ಚಿಸಲ್ಪಟ್ಟು ಅಲ್ಲಿ ಈ ವಾರದೊಳಗೆ ೩ ವಾಚನಗಳು ಕೈಕೊಳ್ಳಲ್ಪಡುವವು. ಎಸೆಂಬ್ಲಿ-ಕೌನ್ಸಿಲು ಸಭೆಗಳು ಇನ್ನೊಂದು ವಾರದಲ್ಲಿ ವಿಸರ್ಜಿಸಲ್ಪಡುವವಂತೆ ಇಂದಿನಿಂದ ದೇಶೀ ವೈದ್ಯ-ರಕ್ಷಣೆಯ ಕಾನೂನು ಚರ್ಚೆಯಾಗಲಿಕ್ಕಿದೆ ಒಕ್ಕಲಿಗ ರಕ್ಷಣೆಯ ಕಾನೂನು ಬಹುತರವಾಗಿ ಈಗಿನ ಎಸೆಂಬ್ಲಿಯ ಅಧಿವೇಶನದಲ್ಲಿ ಸೂಚಿಸಲ್ಪಡಲಿಕ್ಕಿಲ್ಲ. ಈ ಕುರಿತು ಕೊಂಗ್ರೆಸ ಸಭಾಸದರೊಳಗೆ ಇನ್ನೂ ಐಕ್ಯಮತ್ಯವಾಗಲಿಲ್ಲ ಎಲ್ಲ ಪಕ್ಷಗಳ ಅಭಿಪ್ರಾಯಗಳನ್ನು ಕೇಳಿಕೊಂಡು ಕಾನೂನಿನಲ್ಲಿ ಅವಶ್ಯವುಳ್ಳ ತಿದ್ದುಪಾಟುಗಳನ್ನು ಸೂಚಿಸಿ ಮುಂಬಯಿಯ ಎಸೆಂಬ್ಲಿ-ಅಧಿವೇಶನದಲ್ಲಿ ಈ ಕಾಯಿದೆಯ ಚರ್ಚೆಯಾಗಬಹುದು.

— ಹಿಂದುಸ್ಥಾನ ಸರಕಾರದ ವೈದ್ಯ ಇಲಾಖೆಯ ಡೈರೆಕ್ಟರ-ಜನರಲ್‌ರು ಹಿಂದುಸ್ಥಾನದೊಳಗಿನ ಔಷಧೋಪಚಾರದ ಸಮಾಲೋಚನೆ ಪ್ರಕಟಿಸಿದ್ದಾರೆ. ಹಿಂದುಸ್ಥಾನದೊಳಗೆ ೩೫-೪೦ ಸಾವಿರ ಕಲಿತ ಡಾಕ್ಟರರಿದ್ದಾರೆ. ಅಂದರೆ ಸರಾಸರಿ ೧೦ ಸಾವಿರ ಜನರಿಗೆ ಒಬ್ಬ ಡಾಕ್ಟರರಂತೆ ಪ್ರಮಾಣ ಬೀಳುತ್ತದೆ ಆದರೆ ಈ ಪ್ರಮಾಣ ಹೆಚ್ಚಲ್ಲ, ಕಡಿಮೆಯೇ ಸೈ ! ಆದಾಗ್ಯೂ ಡಾಕ್ಟರರೊಳಗೆ ನಿರುದ್ಯೋಗ ಹಬ್ಬಿಕೊಂಡಿದೆ. ಡಾಕ್ಟರರು ಗ್ರಾಮಗಳಲ್ಲಿ ನೆಲಿಸಲೊಪ್ಪುವದಿಲ್ಲ, ಪಟ್ಟಣಗಳಲ್ಲಿಯೇ ಮುತ್ತುತ್ತಾರೆ. ಆದರಿಂದ ಪಟ್ಟಣಗಳಲ್ಲಿ ಡಾಕ್ಟರರ ಸಂಖ್ಯೆ ಅನಾವಶ್ಯಕವಾಗಿ ಹೆಚ್ಚಿದೆ ಸರಾಸರಿ ೧೦೦೦ ಜನರಿಗೆ ಒಬ್ಬ ಡಾಕ್ಟರರಂತೆ ಪ್ರಮಾಣ ಬೀಳುತ್ತದೆ ಪ್ರಾಂತಿಕ ಸರಕಾರದವರು ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರರಿಗೆ ಗ್ರಾಮಗಳಲ್ಲಿ ನೆಲಿಸಲು ಉತ್ತೇಜನ ಕೊಡುತ್ತಿದ್ದಾರೆ ಸರಾಸರಿ ೩೦ ಲಕ್ಷ ಬಾಣಂತಿಯರು, ಗರ್ಭಿಣಿಯರು ಪ್ರತಿ ವರ್ಷ ಸಾಯುತ್ತಾರೆ ತಕ್ಕ ಉಪಚಾರ ಮಾಡಿದರೆ ಶೇಕಡಾ ೮೦ರಷ್ಟು ಮರಣ ಸಂಖ್ಯೆ ಕಡಿಮೆಯಾಗಬಹುದು ಮದ್ರಾಸ ಇಲಾಖೆಯೊಳಗೆ ಆಯುರ್ವೇದ ಮೊದಲಾದ ಸ್ವದೇಶಿ ಪದ್ಧತಿಯ ಔಷಧೋಪಚಾರಕ್ಕೆ ಮಾನ್ಯತೆ ಸಿಕ್ಕಿದೆ. ಮದ್ರಾಸ ಸರಕಾರವು ಈ ಡಾಕ್ಟರರಿಗೆ ದ್ರವ್ಯಸಹಾಯ ಮಾಡಿ ಗ್ರಾಮಗಳಲ್ಲಿ ನೇಮಿಸತೊಡಗಿದೆ ಪಂಜಾಬದಲ್ಲಿ ಈ ಕುರಿತು ಆಲೋಚನಾ ಮಂಡಳ ನೇಮಿಸಲ್ಪಟ್ಟಿದೆ ಸಂಯುಕ್ತ ಪ್ರಾಂತಿಕ ಸರಕಾರವು, ಹಕೀಮರಿಗೂ ವೈದ್ಯರಿಗೂ ದ್ರವ್ಯ ಸಹಾಯ ಮಾಡಿ ಪ್ರೋತ್ಸಾಹಿಸುವ ಯೋಜನೆಯನ್ನು ತಯಾರಿಸತೊಡಗಿದೆ. ಮುಂಬಯಿ ಸರಕಾರವು ಆಯುರ್ವೇದ-ಯುನಾನಿ ಪದ್ಧತಿಯ ಔಷಧೋಪಚಾರವನ್ನು ಕಲಿಸುವದಕ್ಕಾಗಿ ತಕ್ಕ ಏರ್ಪಾಟು ಮಾಡುವ ಕಾನೂನನ್ನು ತಯಾರಿಸಿದೆ

— ದೇಶೀ ಸಕ್ಕರೆ ತುಟ್ಟಿ, ವಿದೇಶಿ ಸಕ್ಕರೆ ಅಗ್ಗ ! ಹೀಗಾಗಲು ಕಾರಣವಿದೆ ಅದೇನಂದರೆ ವಿದೇಶದಲ್ಲಿ ಸಕ್ಕರೆ ತಯಾರಿಸಿದ ಬಳಿಕ ಉಳಿದ ಕಾಕಂಬಿಯನ್ನು ನಮ್ಮಲ್ಲಿಯಂತೆ ಒಗೆದುಬಿಡುವದಿಲ್ಲ, ಅದರಿಂದ ಮದ್ಯ ತಯಾರಿಸುತ್ತಾರೆ ಹೀಗೆ ಬೆಲ್ಲದ ಎಲ್ಲ ದ್ರವ್ಯಗಳ ಪ್ರಯೋಜನ ಕೊಳ್ಳುವದರಿಂದ ವಿದೇಶಿಯರಿಗೆ ತಮ್ಮ ಸಕ್ಕರೆಯನ್ನು ಅಗ್ಗವಾಗಿ ಮಾರಾಟ ಮಾಡಲು ಪೂರೈಸುತ್ತದೆ. ನಮ್ಮಲ್ಲಿಯ ಸಕ್ಕರೆ ಕಾರಖಾನೆಯವರಿಗೆ ಆ ಅನುಕೂಲತೆ ಇಲ್ಲ, ಆ ಪ್ರಕಾರ ಮದ್ಯ ತಯಾರಿಸುವದು ಹಿಂದುಸ್ಥಾನದೊಳಗೆ ಅಪರಾಧವೆಂದೆಣಿಸಲ್ಪಡುತ್ತದೆ ಮೇಲಾಗಿ ಹಿಂದುಸ್ಥಾನದೊಳಗೆ ಮದ್ಯನಿರೋಧನವಾಗಬೇಕೆಂದು ಲೋಕಮತವಿದೆ ಆದರಿಂದ ಮದ್ಯ ತಯಾರಿಸುವದು ಅಸಾಧ್ಯ ಮಾತು ಮುಂಬಯಿ ಸರಕಾರದ ಇಂಜನಿಯರ ಇಲಾಖೆಯ ಮಂತ್ರಿಗಳಾದ ನಾ|| ನೂರಿಯವರು ಕಳೆದ ಪಕ್ಷದಲ್ಲಿ ನಿಜಾಮ ರಾಜ್ಯದ ಹೈದರಾಬಾದ ಪಟ್ಟಣಕ್ಕೆ ಹೋಗಿ ಅವರು ಮರಳಿಬಂದರು. ನಿಜಾಮ ರಾಜ್ಯಕ್ಕೂ ಮುಂಬಯಿ ಪ್ರಾಂತಕ್ಕೂ ಸಂಬಂಧವಿರುವ ಮಾರ್ಗಗಳ ಖರ್ಚಿನ ವಿಷಯ ನಿಜಾಮ ಸರಕಾರದೊಡನೆ

(೧೦ನೇ ಪಾನಿನ ಮೇಲೆ ಮುಂದರಿಸಿದೆ)

ಜಾಹೀರ ವಿನಂತಿ.

ಕಾನಡಾ ಜಿಲ್ಹೆಯೊಳಗಿನ ಅಖಿಲ ದೈವಜ್ಞ ಬ್ರಾಹ್ಮಣ ಸಮಾಜ ಬಾಂಧವರ ಕಡೆಗೆ ಈ ಮೂಲಕ ವಿನಂತಿ ಮಾಡಿಕೊಳ್ಳುವದೇನಂದರೆ—

ಕಾನಡಾ ಜಿಲ್ಹಾ ದೈವಜ್ಞ ಬ್ರಾಹ್ಮಣ ಸಂಘವು ಅಂಕೋಲಾ ತಾಲೂಕ ಅಡಿಗೋಣ ಗ್ರಾಮದಲ್ಲಿ ಸೇರಿದ ದೈ ಬ್ರಾಹ್ಮಣ ಮಹಾಸಭೆಯಲ್ಲಿ ಸನ್ 1932ನೇ ನವಂಬರ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತ್ತಷ್ಟೇ. ಕೈ| ವಾ| ರಾಮರಾವ ಶಿವಪ್ಪಾ ವೆರ್ಣೇಕರ, ವಕೀಲ B.A.,LL.B., ಮತ್ತು ಶ್ರೀಯುತ ವೆಂಕಟರಮಣ ರಾಮಶೇಟ ಬಾರ್ಡೇಕರ, ವೇ. ಮೂರ್ತಿ ಗಣಪಯ್ಯಾ ಮಹಾಂಕಾಳ ಭಟ್ಟ, ಶ್ರೀಯುತ ವಾಸುದೇವ ಮಹಾಂಕಾಳ ಶೆಜೇಕಾನ ಮೊದಲಾದ ಸಮಾಜ ಹಿತೈಷಿಗಳು ಅವಿಶ್ರಾಂತ ಪರಿಶ್ರಮಪಟ್ಟು ಸಂಘವನ್ನು ಪಾಲಿಸಿ ಪೋಷಿಸಿದರು ಸಮಾಜದೊಳಗೆ ಐಕ್ಯವರ್ಧನವನ್ನೇ ಹೆಗ್ಗುರಿಯಾಗಿಟ್ಟುಕೊಂಡು ಅನ್ಯೋನ್ಯ ಪ್ರೇಮದಿಂದಲೂ ನಿಸ್ಪೃಹದಿಂದಲೂ ನಡೆದದ್ದರಿಂದ ಸಂಘವು ಕ್ರಮವಾಗಿ ಊರ್ಜಿತಾವಸ್ಥೆ ಹೊಂದಿತು ಈಗ ಶ್ರೀಯುತ ವ್ಹಿ ವ್ಹಿ ಭಟ್ಟ, B A , ಇವರು ಅಧ್ಯಕ್ಷರಾಗಿಯೂ, ಡಾಕ್ಟರ ವ್ಹಿ. ಎಸ್. ಅತ್ರೇಕರ M B.B S ಇವರು ಉಪಾಧ್ಯಕ್ಷರಾಗಿಯೂ ಸಂಘದ ಕೆಲಸವನ್ನು ಉತ್ಸಾಹದಿಂದ ನಡಿಸಿ ಸಮಾಜ ಕಲ್ಯಾಣವನ್ನು ಸಾಧಿಸುತ್ತಿದ್ದಾರೆ. ಈಗ ಸಂಘವು ಕಾಯಿದೆಯಂತೆ ರಿಜಿಸ್ಟರ ಆಗಿರುತ್ತದೆ. ಕಾರಣ ಸಂಘಕ್ಕೆ ಸಂಬಂಧಪಟ್ಟ ಯಾವತ್ತೂ ಗ್ರಾಮ-ಕಮಿಟಿಗಳೂ, ಮೆಂಬರ ಜನರೂ ಸಂಘದ ಬಾಬ್ತು ತಮ್ಮ ಹತ್ತರ ಬಾಕಿ ಇರುವ ಹಣವನ್ನು ತ್ವರ್ಯವೇ ಸಂಘದ ಖಜಾನದಾರರಾದ ಶ್ರೀಯುತ ಲಕ್ಷ್ಮಣ ಅನಂತ ಶೇಟ ಸರಾಫ, ಮು ಬಾಡ, ತಾಲೂಕ ಕಾರವಾರ ಇವರ ಕಡೆಗೆ ರವಾನಿಸಿಕೊಡಬೇಕಾಗಿ ವಿನಂತಿ ಅದೆ.

ಕಾರವಾರ, ತಾ. 5—11—1938.

ಯಶವಂತ ಬಾಬು ಬಾಯಕರ.
ಸೆಕ್ರೆಟರಿ, ಕಾ ಜಿ ದೈ ಬ್ರಾ. ಸಂಘ

ಪತ್ರಕರ್ತರ ಮುಡಿಗನ್ನಡಿ.

೧ ಲಖನೌ ಡಿಸ್ಟ್ರಿಕ್ಟ ಜನಸ ಕಮಿಟಿಯವರು ಡಾ॥ ನೆಹರೂರವರ ವಿದ್ಯುತ್‌ಸಂಸ್ಕಾರದ ಪ್ರಯೋಗವನ್ನು ಅಭ್ಯಾಸಮಾಡಿದ ಹಾಗೆ ಅದರಿಂದ ಬೀಜ ಮತ್ತು ಹೆಚ್ಚಿನ ಪ್ರಯೋಜನ ದೊರೆಯುತ್ತದೆಂದು ತಿಳಿಸಲು ನಮಗೆ ತುಂಬಾ ಸಂತೋಷವೆನಿಸುತ್ತದೆ. ಸಂಯುಕ್ತ ಪ್ರಾಂತದೊಳಗಿನ ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರಾದ ಡಾ॥ ಮಿಶ್ರರವರು ಡಾ॥ ನೆಹರೂರವರ ವಿದ್ಯುತ್ ಸಂಸ್ಕಾರದ ಪ್ರಯೋಗಗಳನ್ನು ಸ್ವತಃ ಮಾಡಿ ಪರೀಕ್ಷಿಸಿದರು. ಅದರಿಂದ ಬಹಳ ಪ್ರಯೋಜನವಾಗುವದಾಗಿ ಡಾ॥ ಮಿಶ್ರರವರು ಅಭಿಪ್ರಾಯಪಡುತ್ತಾರೆ. ಉಳ್ಳಿಗಡ್ಡೆಯಲ್ಲಿ ವಿದ್ಯುತ್ತೇಜಸ್ಸು ಇದೆಯೆಂದು ಡಾ॥ ನೆಹರೂರವರ ಸಿದ್ಧಾಂತ ಇದು ನಿಜವೆಂದು ಡಾ॥ ಮಿಶ್ರರವರು ಒಪ್ಪುತ್ತಾರೆ. ಅರ್ಧ ಇಂಚಿನಿಂದ ೧ ಇಂಚು ಸುತ್ತಳತೆಯ ಉಳ್ಳಿಗಡ್ಡೆಗಳಿಗೆ ತುಂಬಾ ವಿದ್ಯುತ್ತಿದೆ. ಹಸಿ ಉಳ್ಳಿಗಡ್ಡೆಯ ಮಣ್ಣು ತೆಗೆದು ತೊಳೆದು ಅದರ ೧-೨ ಪಟ್ಟು ನೀರಿನಲ್ಲಿ ಅದನ್ನು ೨೪ ತಾಸು ನೆನೆಯಿಟ್ಟರೆ ಆ ನೀರಿಗೆ ವಿದ್ಯುತ್‌ಸಂಸ್ಕಾರ ದೊರೆಯುತ್ತದೆ. ಆ ನೀರಿನೊಳಗೆ ಬೀಜವನ್ನು ನೆನಹಾಕಿ ಬಿತ್ತಿದರೆ ಹೆಚ್ಚಿನ ಫಲ ದೊರಕುತ್ತದೆ. ಬೀಜವು ಪ್ರಬಲವಾಗಿ ಸಸಿ ಪ್ರಫುಲ್ಲಿತವಾಗಿ ಬೆಳೆದು ಬೆಳೆಯ ಮಾನ ವಿಶೇಷವಾಗಿ ದೊರೆಯುತ್ತದೆ. ಮೈನಪುರಿಯಲ್ಲಿ ಡಾ॥ ನೆಹರೂರವರು ಇನ್ನೂ ಒಂದು ಪ್ರಯೋಗ ಮಾಡಿ ನೋಡಿದರು. ಎತ್ತು-ನೀರು ಕಾಯಿ ಪಲ್ಲೆಗಳಿಗೆ ಹರಿದುಹೋಗುವ ಕಾಲುವೆಗಳ ಎಡ ಬಲ ಪಕ್ಕಗಳಲ್ಲಿ ಸಾಲಾಗಿ ಉಳ್ಳಿಗಡ್ಡೆ ನೆಟ್ಟಿತ್ತು. ಈ ನೀರಿನಿಂದ ಕಾಯಿಪಲ್ಲೆ ಪುಷ್ಟವಾಯಿತು. ಅದೇ ಹಿತ್ತಲಲ್ಲಿ ಇನ್ನೊಂದೆಡೆ ಈ ಯೋಜನೆಯಿದ್ದಿಲ್ಲ, ಆ ಪಾರ್ಶ್ವದಲ್ಲಿ ಕಾಯಿ-ಪಲ್ಲೆ ಪುಷ್ಟವಾಗಿ ಬೆಳೆಯಲಿಲ್ಲ. ಉಳ್ಳಿಗಡ್ಡೆಯಲ್ಲಿ ವಿದ್ಯುತ್ಜನಕ ಅತಿನೀಲ (ultra-violet rays) ಕಿರಣಗಳಿವೆ. ಇವುಗಳಿಂದ ವನಸ್ಪತಿಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ. ತುಲಸೀಗಿಡ ಪುಷ್ಟವಾಗಿ ಬೆಳೆಯದಿದ್ದರೆ ಅಥವಾ ಬಾಡುತ್ತಿದ್ದರೆ, ಬಳಿಯಲ್ಲಿ ಉಳ್ಳಿಗಡ್ಡೆಯನ್ನು ನೆಡಬೇಕು. ಅಂದರೆ ತುಲಸೀಗಿಡವು ಬಲು ಪುಷ್ಟವಾಗಿ ಬೆಳೆಯುತ್ತದೆ. ಈ ಪ್ರಯೋಗವನ್ನು ಡಾ॥ ಮಿಶ್ರರವರು ಮಾಡಿ ನೋಡಿದ್ದಾರೆ. ೧ ಎಕರೆ ಭೂಮಿಗೆ ವಿದ್ಯುತ್‌ಸಂಸ್ಕಾರದ ನೀರು ಹೆಚ್ಚು ಬೇಕಾಗುವದಿಲ್ಲ, ಸರಾಸರಿ ೧೦೦೦ ಘನಫೂಟು ನೀರಿದ್ದರೆ ಇಷ್ಟು ಭೂಮಿಗೆ ಸಾಲುತ್ತದೆ. ೧೦ ಫೂಟು ಉದ್ದ ೧೦ ಫೂಟು ಎತ್ತರ, ೧೦ ಫೂಟು ಅಗಲವುಳ್ಳ ಪಾತ್ರೆತುಂಬ ನೀರು ೧ ಎಕರೆ ಭೂಮಿಗೆ ಕಸುವು ಕೊಡಸಾಕು. ನಮ್ಮಲ್ಲಿ ಉಳ್ಳಿಗಡ್ಡೆ ಬೆಳೆಸುವ ಪ್ರಘಾತವುಂಟು. ಬೇಸಾಯಗಾರರು ಈ ಪ್ರಯೋಗವನ್ನು ಮಾಡಿ ಪ್ರಯೋಜನ ಹೊಂದಬೇಕಾಗಿ ನಮ್ಮ ವಿನಂತಿ. ಪ್ರಯೋಗವು ಸಾಮಾನ್ಯ ಜನರಿಗೆ ತಿಳಿಯುವಂಥಾದ್ದಿದ್ದು ಹೆಚ್ಚಿನ ಖರ್ಚಿನದಲ್ಲ. ಹಸಿ-ಉಳ್ಳಿಗಡ್ಡೆ ಸಿಗದಿದ್ದರೆ ಪೇಟೆಯೊಳಗೆ ಸಿಗುವ ಉಳ್ಳಿಗಡ್ಡೆಯನ್ನು ಕೊಚ್ಚಿ ೨೪ ತಾಸು ನೀರಿನಲ್ಲಿ ನೆನೆಯಿಟ್ಟು ವಿದ್ಯುತ್‌ನೀರನ್ನು ತಯಾರಿಸಬಹುದಾಗಿಯೂ ಡಾ॥ ಮಿಶ್ರರವರು ಸೂಚಿಸಿದ್ದಾರೆ. ಕಾಯಿ-ಪಲ್ಲೆ ನೆಡುವ ಸಮಯದಲ್ಲಿ ಈ ಪ್ರಯೋಗವನ್ನು ಮಾಡಿ ನೋಡಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ.

---

೨ ವಿದ್ಯುತ್ ನೀರು ರೋಗನಿವಾರಕವೆಂದು ಡಾ॥ ನೆಹರೂರವರು ಲಖನೌದೊಳಗಿನ ಪ್ರಾಣಿಸಂಗ್ರಹಾಲಯದಲ್ಲಿ ಮಾಡಿದ ಪ್ರಯೋಗಗಳಿಂದ ನಾವು ಪ್ರತಿಪಾದಿಸಿದ್ದೇವೆ. ಡಾ॥ ಮಿಶ್ರರವರು ವಿದ್ಯುತ್ ನೀರಿನಿಂದ ಮನುಷ್ಯನ ರೋಗಗಳನ್ನು ನಿವಾರಿಸಬಹುದಾಗಿಯೂ ಅಭಿಪ್ರಾಯಪಡುತ್ತಾರೆ. ಬೇಗ ವಿದ್ಯುತ್-ನೀರಿನ ಸೇವನದಿಂದ ನಿವಾರಣೆಯಾಗಬಲ್ಲದು. ಚರ್ಮವ್ಯಾಧಿಗಳೂ ಈ ನೀರಿನ ಪ್ರಯೋಗದಿಂದ ಕ್ರಮವಾಗಿ ಪರಿಹಾರಹೊಂದಬಲ್ಲವು. ಹೊಟ್ಟೆಶೂಲಿ, ಮಲಬದ್ಧತೆ, ಪ್ಲೇಗು, ಸುಟ್ಟ-ಗಾಯ, ಮೂತ್ರಪಿಂಡದೊಳಗಿನ ಶೂಲಿ ಮೊದಲಾದ ರೋಗಗಳ ಮೇಲೆ ಉಳ್ಳಿಗಡ್ಡೆಯ ನೀರಿನಿಂದ ಇಷ್ಟ ಪರಿಣಾಮವಾಗುತ್ತದಾಗಿ ಡಾ॥ ಮಿಶ್ರರವರ ಅಭಿಪ್ರಾಯ. ಅಲ್ಲಲ್ಲಿಯ ಡಾಕ್ಟರರು ಈ ಉಪಚಾರದ ಗುಣಧರ್ಮಗಳನ್ನು ಗ್ರಹಿಸಿ ಉಪಚರಿಸಬಹುದು. ಡಾ॥ ಮಿಶ್ರರವರು ಈ ಕುರಿತು ಇನ್ನೂ ಪ್ರಯೋಗ ಮಾಡುತ್ತಿದ್ದಾರೆ. ಮದ್ರಾಸ ಸರಕಾರವು ಡಾ॥ ನೆಹರೂರವರ ವಿದ್ಯುತ್‌ಸಂಸ್ಕಾರದ ಪ್ರಯೋಗಗಳನ್ನು ಪ್ರಚುರಗೊಳಿಸುವ ಆಲೋಚನೆಯಲ್ಲಿದೆ. ಹಾಗೆಯೇ ನಮ್ಮ ಮುಂಬಯಿ ಸರಕಾರವೂ ಈ ಪ್ರಯೋಗ ವಿಚಾರವನ್ನು ತ್ವರ್ಯವೇ ಕೈಕೊಳ್ಳಬೇಕಾಗಿ ನಾವು ಸೂಚಿಸುತ್ತೇವೆ.

---

೩ ಮುಂಬಯಿ ಸರಕಾರದ ಅಬಕಾರಿ ಇಲಾಖೆಯವರು ನಮ್ಮಲ್ಲಿಯ ಮದ್ಯನಿರೋಧನ ಪ್ರದೇಶದೊಳಗಿನ ಪ್ರಗತಿಯ ಕುರಿತು ಪ್ರಕಟಿಸಿದ ವರದಿಯನ್ನೋದಿದರೆ ಅಸಮಾಧಾನವಾಗುತ್ತದೆ. ಹೇದೀಪುರ ಮೊದಲಾದ ಮದ್ಯನಿರೋಧನ ಪ್ರದೇಶದ ಹೊರಗಡೆ

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್ ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರ:—

ಭಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ	ಕಾಮತ ಸ್ಟೋರ್ಸ.
ಅಂಕೋಲಾ —	ವೇದಮೂರ್ತಿ ಹನುಮಟ್ಟೆ ಕೇಶವ ಭಟ್ಟ	ಗೋಕರ್ಣ —	ಎಸ್ ವ್ಹಿ. ಬಸ್ತಿಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ	ಶಿರ್ಸಿ —	ಆರ್ ವ್ಹಿ. ಧಾಕಪ್ಪಾ ಕೆಮಿಸ್ಟ

ವಿಳಾಸ -

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರೆಂಚ್ ಆಫೀಸು. ಕುಮಟಾ. ಉ. ಕ. OR BHUVANENDRA PRODUCTS LTD. Head Office· KATAPADI, S K.

ಕುರಿತ ಸೀಮೆಯೊಳಗಿಂದ ನವಿನ್ಯ ತಾಲೂಕುಗಳಲ್ಲಿ ಶೇಂದಿ ಕಳ್ಳು ಆಮದಾಗುತ್ತದೆ, ಗೋವೆಯಿಂದಲೂ ಸರಾಯಿ ಆಮದಾಗುವದುಂಟು ಇಂಥ ಅವಧಿನ ಅಪರಾಧಗಳನ್ನು ಪತ್ತೆಹಚ್ಚುವದು ಕಠಿಣ ಕೆಲಸ ಆದರಿಂದ ಈ ಪ್ರದೇಶದಲ್ಲಿ ಮದ್ಯನಿರೋಧನ ಪ್ರಯೋಗ ಯಶಸ್ವಿಯಾಗಲಿಲ್ಲವಾಗಿ ಅಬಕಾರಿ ಕಮಿಶನರರು ಹೇಳುತ್ತಾರೆ ಈ ರಿಪೋರ್ಟು ಪ್ರಥಮ ೩ ತಿಂಗಳ ಕಾರ್ಯದ್ದು ಹಳಿಪುರದ ಅಂಗಡಿಯು ಕುರಿತು ನಾವು ಆಪಂದೆಯೇ ಮುಂಜಾಗ್ರತೆ ಕೊಟ್ಟಿದ್ದೆವು ಅದನ್ನು ಸರಕಾರವು ಅಲಕ್ಷಿಸಿ ಆದೇ ಅಂಗಡಿಗೆ ಬೆಟ್ಟು ತೋರಿಸಿ ಪ್ರಯೋಗ ಫಲಕಾರಿಯಾಗಲಿಲ್ಲವೆಂದು ದೂರುವದು ಅಪ್ರಶಸ್ತವಾದುದು ಇತ್ತಲಾಗಿ ಅಧಿಕಾರಿಗಳ ಜಾಗ್ರತೆಯಿಂದಲೂ ಕಾಂಗ್ರೆಸಕಮಿಟಿ ಮೊದಲದ ಕಾರ್ಯಕರ್ತರ ಕಾವಲಿನಿಂದಲೂ ಆಮದು ಬಹುಮಟ್ಟಿಗೆ ಕುಗ್ಗಿದೆಂದು ನಾವು ಹೇಳಬಲ್ಲೆವು. ವಿಕಾರಕಾರಣವನ್ನು ಬಳಿಯಲ್ಲಿರಗೊಟ್ಟು ಕುಡುಕರು ವಿಕಾರವಶರಾಗಕೂಡದೆಂದು ಬಯಸುವದೂ, ಬೆಂಕಿಯ ಬಳಿ ಇಟ್ಟ ಬೆಣ್ಣೆ ಕರಗಬಾರದೆಂದು ವಿಧಿಸುವದೂ ಒಂದೇ ಮಾದರಿಯದೆಂದು ಯಾರೂ ಹೇಳುವರು! ಅಬಕಾರಿ ಇಲಾಖೆಯವರು ಇದರಿಂದ ಬೋಧ ಗಲಿತು, ಮುಂದಿನ ವರ್ಷ ವಿಕಾರ-ಕಾರಣಗಳಾದ ಅಂಗಡಿಗಳನ್ನು ಮುಚ್ಚುವ ಏರ್ಪಾಟು ಮಾಡಬೇಕಾಗಿ ಸೂಚಿಸುತ್ತೇವೆ. ಮದ್ಯನಿರೋಧನ ಕ್ರಮದಿಂದ ಜನಸಾಮಾನ್ಯರಿಗೆ ಹಿತವ ಗಿದೆಂದು ವರದಿಯಲ್ಲಿ ಸಿದ್ಧಾಂತ ಹೊರಡಿಸಿದಾಗಂತು ಈ ಜಾಗ್ರತೆ ಅಗತ್ಯವೆಂದು ಪುನಃ ಹೇಳಬೇಕಾಗಿಲ್ಲ

ಪೂರ್ವಪಾರ್ಶ್ವದಲ್ಲಿ ಬ್ರಿಟಿಶರಮೇಲೆ ಸಂಕಟ!

(೬ನೇ ಪಾನಿನಿಂದ ಮುಂದುವರಿದ್ದು)

ಧ್ವಂಸವಾಯಿತೆಂದು ಯಾರೂ ಎಣಿಸಲಾಗದು ಝೆಕೋಸ್ಲೊವಾಕಿಯಾದ ಪ್ರಕರಣ ಇನ್ನೂ ತಣಿಯಲಿಲ್ಲ ಹಂಗೇರಿಯವರು ಹಿಟ್ಲರರ ಪ್ರೇರಣೆಯಿಂದ ಅದನ್ನು ತುಂಡರಿಸುವ ನಿರ್ಧಾರವನ್ನೇ ಮಾಡಿದಂತಾಗಿದೆ ಆ ಪ್ರದೇಶ ತಮಗೆ ಒಪ್ಪಿಸಿಬಿಡಿ, ಈ ಪ್ರದೇಶ ತಮ್ಮದಾಗುತ್ತದೆ, ಹೀಗೆ ಹೇಳಿ ಒಂದೊಂದು ಪ್ರದೇಶದ ಬಗ್ಗೆ ಒಂದೊಂದು ಆಕ್ಷೇಪ ಮುಂದೊಡ್ಡಿ ಮೋರ್ಚೆಗೆ ದಣಿಸುತ್ತಿದ್ದಾರೆ ಪೋಲಂಡ ಸರಕಾರಕ್ಕೂ ಹಿಟ್ಲರರಿಗೂ ವಿವಾದವುಂಟಾಗಿದೆ. ಪೋಲಂಡದ ಯಹೂದಿ ಪ್ರಜೆಗಳನ್ನು ಹಿಟ್ಲರರು ಜರ್ಮನಿಯಿಂದ ಹೊರತಳ್ಳಿದರು ಪ್ರತಿಯಾಗಿ ಪೋಲಂಡ ಸರಕಾರವು ತನ್ನಲ್ಲಿದ್ದ ಯಹೂದಿ ಪ್ರಜೆಗಳನ್ನು ಹೊರಹಾಕತೊಡಗಿದರು ಇದರಿಂದ ಇತ್ತಟ್ಟನಲ್ಲಿ ಮನಸ್ತಾಪವುಂಟಾಗಿದೆ ಅದನ್ನು ಒಡಂಬಡಿಕೆಯಿಂದ ಪರಿಹರಿಸುವ ಆಲೋಚನೆಯೂ ನಡೆದಿದೆ. ಸ್ಪೇನದೊಳಗಿನ ಫ್ರೆಂಕೋರಿಗೆ ಆಶ್ರಯ ಕೊಡುವದಕ್ಕಾಗಿ ಚೆಂಬರಲೇನರೂ ಮುಸೋಲಿನಿಯವರೂ ಗುಪ್ತವಾಗಿ ಕಾರಸ್ಥಾನ ಹೂಡುತ್ತಿದ್ದಾರೆ ಈ ಪ್ರಕರಣದಲ್ಲಿ ಫ್ರೆಂಚರದೂ ಸಹಾನುಭೂತಿಯುಂಟು ಸ್ಪೇನದೊಳಗೆ ಆಂಗ್ಲೋ-ಇಟಾಲಿಯ ಪಥಕವಿದೆ ಇದು ಸ್ಪೇನ ಸರಕಾರಕ್ಕೆ ಅನುಕೂಲವಾಗಿ ಹೋರಾಡುವ ಪಥಕ. ಇದರೊಳಗಿಂದ ೩೦೦ ಗಾಯಗೊಂಡವರು ಫ್ರೆಂಚ ದೇಶಕ್ಕೆ ಹೊರಟಿದ್ದರು ಅವರಿಗೆ ತಮ್ಮ ದೇಶದ ಒಳಸೇರಬಾರದೆಂದು ಫ್ರೆಂಚ ಸರಕಾರವು ಕಟ್ಟಪ್ಪಣೆ ಹೊರಡಿಸಿದೆ ಗಾಯಗೊಂಡ ಫ್ರೆಂಚ ಸೈನಿಕರು ಮಾತ್ರ ಒಳಸೇರಬಹುದೆಂದು ಫ್ರೆಂಚ ಸರಕಾರವು ಆ ಒಳಕೆ ಹುಕುಮಿನಲ್ಲಿ ತಿದ್ದುಪಡಿ ಮಾಡಿತು ಸಹಕಾರಿಗಳ ದ್ರೋಹ ಬಗೆಯಬಾರದೆಂದು ಫ್ರೆಂಚ ಸೈನಿಕರು ನುಡಿದು, ಗಡಿನಾಡಿನ ಕಟ್ಟಾದಲ್ಲಿ ಎಲ್ಲರೂ ಉಳಕೊಂಡಿದ್ದಾರೆ ಹಿಟ್ಲರರು ಸಂಕಲ್ಪಿಸಿದಂತೆ, ಬೃಹತ್ ಜರ್ಮನಿಯನ್ನು ತಾವು ನಿರ್ಮಿಸಿಯೇ ತೀರುವೆವೆಂದೂ ಅದಕ್ಕಾಗಿ ಅವಶ್ಯವಿದ್ದರೆ ಖಡ್ಗವನ್ನೆಸೆಯಲು ಹಿಂಜರಿಯಲಾರೆವೆಂದೂ ಹಿಟ್ಲರರ ಮುಖ್ಯ ಸೇನಾಪತಿಗಳಾದ ಗೋಬೆಲ್ಸರವರು ಸಾರುತ್ತಾರೆ. ಹಿಟ್ಲರರು ಈ ಪ್ರಕರಣಾಸಕ್ತರು ಚೀನ ದೇಶದೊಳಗಿನ ಜಪಾನ ದೇಶದ ವಿಜಯಗಳೇ ಕಾರಣ ಬ್ರಿಟಿಶರು ಈವಾಗ ಚೀನದೊಳಗಿನ ಪ್ರಕರಣದಿಂದ ವ್ಯಗ್ರರಾಗಿದ್ದಾರೆ ಸಕಲ ಬಲವನ್ನು ಅಲ್ಲಿಯ ರಕ್ಷಣೆಗಾಗಿ ಕೇಂದ್ರೀಕರಿಸುವ ಪ್ರಯತ್ನದಲ್ಲಿದ್ದಾರೆ ಚೀನದ ಪ್ರಕರಣವನ್ನು ಅಮೇರಿಕೆಯ ಸರಕಾರವೂ ಎವೆಇಕ್ಕದೆ ಪರಾಂಬರಿಸುತ್ತಿದೆ ಚೀನ ಜಪಾನ ರಾಜಕಾರಣದಲ್ಲಿ ಅಮೇರಿಕೆಯ ಹಿತಸಂಬಂಧಗಳು ಸಿಲುಕಿಕೊಂಡಿವೆ ಚೀನ ಪ್ರದೇಶದೊಳಗಿನ ವ್ಯಾಪಾರ ಸಂಬಂಧಗಳ ಮೂಲಕ ಚೀನ ದೇಶಕ್ಕೂ ಅಮೇರಿಕೆ ದೇಶಕ್ಕೂ ದೀರ್ಘ ಕಾಲದಿಂದ ಮಿತ್ರತ್ವವುಂಟು ಅದರಿಂದ ಅಮೇರಿಕೆ ಸರಕಾರವು ಜಪಾನ ಸರಕಾರದೊಡನೆ ತೀವ್ರ-ತೀಕ್ಷ್ಣ ನಿಷೇಧಪ್ರದರ್ಶನ ಮಾಡುತ್ತಿದೆ ಪಾಶ್ಚಾತ್ಯರಿಗೆ ಚೀನದಲ್ಲಿರುವ ಹಕ್ಕುಗಳನ್ನು ರಕ್ಷಿಸುವ ಕೆಲಸ ನಮ್ಮದು ಎಂದು ಜಪಾನಿಯರು ನಂಬಿಗೆ ಹೇಳುತ್ತಾರೆ, ಆದರೆ ಪಾಶ್ಚಾತ್ಯರಿಗೆ ಸಮಾಧಾನವಾಗಲೊಲ್ಲದು, ಸಮಾಧಾನ ನಾ ಕಾಣೆ

SERVICE & PROMPTNESS

A Feature and a Fact with the "POPULAR"

M VENKATESH PAI
Banker

Sri Krishna Bhavan
Mangalore
25th July 1938

The Managing Director
The Popular Insurance Co Ltd
MANGALORE

Policy No 40

Dear Sir,

I very much appreciate your promptness in settling the claim in less than a week in respect of the above policy on the life of my late lamented Father in law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2553—7—0 is delivered to the claimant and all within the short period of 6 days

This spirit of service and promptitude evinced by the POPULAR is highly laudable and it is but proper that the Company should be POPULAR. It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully
(Sd) M Venkatesha Pai

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: *PROSPECT CHAMBERS, Hornby Road, BOMBAY*

ಪತ್ರಕರ್ತರ ನುಡಿಗನ್ನಡಿ.

೧. ಲಖನೌ ಡಿಸ್ಟ್ರಿಕ್ಟಿನ ಕಮಿಶನರರಾದ ಡಾ॥ ನೆಹರೂರವರ ವಿದ್ಯುತ್‌ಸಂಸ್ಕಾರದ ಪ್ರಯೋಗವನ್ನು ಅಭ್ಯಾಸ ಮಾಡಿದ ಹಾಗೆ ಅದರಿಂದ ಬೇಸಾಯಕ್ಕೆ ಹೆಚ್ಚಿನ ಪ್ರಯೋಜನ ದೊರೆಯುತ್ತದೆಂದು ತಿಳಿಸಲು ನಮಗೆ ತುಂಬಾ ಸಂತೋಷವೆನಿಸುತ್ತದೆ. ಸಂಯುಕ್ತ ಪ್ರಾಂತದೊಳಗಿನ ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರಾದ ಡಾ॥ ಮಿಶ್ರರವರು ಡಾ॥ ನೆಹರೂರವರ ವಿದ್ಯುತ್ ಸಂಸ್ಕಾರದ ಪ್ರಯೋಗಗಳನ್ನು ಸ್ವತಃ ಮಾಡಿ ಪರೀಕ್ಷಿಸಿದರು. ಅದರಿಂದ ಬಹಳ ಪ್ರಯೋಜನವಾಗುವದಾಗಿ ಡಾ॥ ಮಿಶ್ರರವರು ಅಭಿಪ್ರಾಯಪಡುತ್ತಾರೆ. ಉಳ್ಳಿಗಡ್ಡೆಯಲ್ಲಿ ವಿದ್ಯುತ್ತೇಜಸ್ಸುಂಟೆಂದು ಡಾ॥ ನೆಹರೂರವರ ಸಿದ್ಧಾಂತ ಇದು ನಿಜವೆಂದು ಡಾ॥ ಮಿಶ್ರರವರು ಒಪ್ಪುತ್ತಾರೆ. ಅರ್ಧ ಇಂಚಿನಿಂದ ೧ ಇಂಚು ಸುತ್ತಳತೆಯ ಉಳ್ಳಿಗಡ್ಡೆಯಾಗೆ ತುಂಬಾ ವಿದ್ಯುತ್ತಿದೆ. ಹಸಿ-ಉಳ್ಳಿಗಡ್ಡೆಯ ಸಿಪ್ಪೆ ತೆಗೆದು ತೊಳೆದು ಅದರ ೧೦ ಪಟ್ಟು ನೀರಿನಲ್ಲಿ ಅದನ್ನು ೨೪ ತಾಸು ನೆನೆಯಿಟ್ಟರೆ ಆ ನೀರಿಗೆ ವಿದ್ಯುತ್‌ಸಂಸ್ಕಾರ ದೊರೆಯುತ್ತದೆ. ಇಂಥ ನೀರಿನೊಳಗೆ ಬೀಜವನ್ನು ನೆನೆಹಾಕಿ ಬಿತ್ತಿದರೆ ಹೆಚ್ಚಿನ ಫಲ ದೊರಕುತ್ತದೆ. ಬೀಜವು ಪ್ರಬಲವಾಗಿ ಸಸಿಯು ಪ್ರಫುಲ್ಲಿತವಾಗಿ ಬೆಳೆದು ಬೆಳೆಯು ಮಾಸಿಕವಾಗಿ ದೊರೆಯುತ್ತದೆ. ಮೈನಪುರಿಯಲ್ಲಿ ಡಾ॥ ನೆಹರೂರವರು ಇನ್ನೂ ಒಂದು ಪ್ರಯೋಗ ಮಾಡಿ ನೋಡಿದರು. ಎತ್ತು-ನೀರು ಕಾಯಿ ಪಲ್ಲೆಗಳಿಗೆ ಹರಿದು ಹೋಗುವ ಕಾಲುವೆಗಳ ಎಡ-ಬಲ ಪಕ್ಕಗಳಲ್ಲಿ ಸಾಲಾಗಿ ಉಳ್ಳಿಗಡ್ಡೆ ನೆಟ್ಟರು. ಈ ನೀರಿನಿಂದ ಕಾಯಿ-ಪಲ್ಲೆ ಪುಷ್ಟವಾಯಿತು. ಅದೇ ಹೊತ್ತಿನಲ್ಲಿ ಇನ್ನೊಂದೆಡೆ ಈ ಯೋಜನೆಯಿದ್ದಿಲ್ಲ, ಆ ಪಾರ್ಶ್ವದಲ್ಲಿ ಕಾಯಿ-ಪಲ್ಲೆ ಪುಷ್ಟವಾಗಿ ಬೆಳೆಯಲಿಲ್ಲ. ಉಳ್ಳಿಗಡ್ಡೆಯಲ್ಲಿ ವಿದ್ಯುತ್ತೇಜಸ್ಸಿನ ಅತಿನೀಲ (ultra violet rays) ಕಿರಣಗಳಿವೆ. ಇವುಗಳಿಂದ ವನಸ್ಪತಿಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ. ತುಲಸೀಗಿಡ ಪುಷ್ಟವಾಗಿ ಬೆಳೆಯದಿದ್ದರೆ ಅಥವಾ ಬಾಡುತ್ತಿದ್ದರೆ, ಬಳಿಯಲ್ಲಿ ಉಳ್ಳಿಗಡ್ಡೆಯನ್ನು ನೆಡಬೇಕು. ಅಂದರೆ ತುಲಸೀ ಗಿಡವು ಬಲು ಪುಷ್ಟವಾಗಿ ಬೆಳೆಯುತ್ತದೆ. ಈ ಪ್ರಯೋಗವನ್ನು ಡಾ॥ ಮಿಶ್ರರವರು ಮಾಡಿ ನೋಡಿದ್ದಾರೆ. ೧ ಎಕರೆ ಭೂಮಿಗೆ ವಿದ್ಯುತ್‌ಸಂಸ್ಕಾರದ ನೀರು ಹೆಚ್ಚು ಬೇಕಾಗುವದಿಲ್ಲ, ಸರಾಸರಿ ೧೦೦೦ ಘನ ಫೂಟು ನೀರಿದ್ದರೆ ಇಷ್ಟು ಭೂಮಿಗೆ ಸಾಲುತ್ತದೆ. ೧೦ ಫೂಟು ಉದ್ದ ೧೦ ಫೂಟು ಎತ್ತರ, ೧೦ ಫೂಟು ಅಗಲವುಳ್ಳ ಪಾತ್ರೆತುಂಬ ನೀರು ೧ ಎಕರೆ ಭೂಮಿಗೆ ಕಸುವು ಕೊಡಸಾಕು. ನಮ್ಮಲ್ಲಿ ಉಳ್ಳಿಗಡ್ಡೆ ಬೆಳೆಸುವ ಪ್ರಘಾತವುಂಟು. ಬೇಸಾಯಗಾರರು ಈ ಪ್ರಯೋಗವನ್ನು ಮಾಡಿ ಪ್ರಯೋಜನ ಹೊಂದಬೇಕಾಗಿ ನಮ್ಮ ವಿನಂತಿ. ಪ್ರಯೋಗವು ಸಾಮಾನ್ಯ ಜನರಿಗೆ ತಿಳಿಯುವಂಥದ್ದಿದ್ದು ಹೆಚ್ಚಿನ ಖರ್ಚಿನದಲ್ಲ. ಹಸಿ-ಉಳ್ಳಿಗಡ್ಡೆ ಸಿಗದಿದ್ದರೆ ಪೇಟೆಯೊಳಗೆ ಸಿಗುವ ಉಳ್ಳಿಗಡ್ಡೆಯನ್ನು ಕೊಚ್ಚಿ ೨೪ ತಾಸು ನೀರಿನಲ್ಲಿ ನೆನೆಯಿಟ್ಟು ವಿದ್ಯುತ್‌ನೀರನ್ನು ತಯಾರಿಸಬಹುದಾಗಿಯೂ ಡಾ॥ ಮಿಶ್ರರವರು ಸೂಚಿಸಿದ್ದಾರೆ. ಕಾಯಿ-ಪಲ್ಲೆ ನೆಡುವ ಸಮಯದಲ್ಲಿ ಈ ಪ್ರಯೋಗವನ್ನು ಮಾಡಿ ನೋಡಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ.

೨. ವಿದ್ಯುತ್-ನೀರು ರೋಗನಿವಾರಕವೆಂದು ಡಾ॥ ನೆಹರೂರವರು ಲಖನೌದೊಳಗಿನ ಪ್ರಾಣಿಸಂಗ್ರಹಾಲಯದಲ್ಲಿ ಮಾಡಿದ ಪ್ರಯೋಗಗಳಿಂದ ನಾವು ಪ್ರತಿಪಾದಿಸಿದ್ದೇವೆ. ಡಾ॥ ಮಿಶ್ರರವರು ವಿದ್ಯುತ್ ನೀರಿನಿಂದ ಮನುಷ್ಯನ ರೋಗಗಳನ್ನು ನಿವಾರಿಸಬಹುದಾಗಿಯೂ ಅಭಿಪ್ರಾಯಪಡುತ್ತಾರೆ. ಬೇಗ ವಿದ್ಯುತ್-ನೀರಿನ ಸೇವನದಿಂದ ನಿವಾರಣೆಯಾಗಬಲ್ಲದು. ಚರ್ಮವ್ಯಾಧಿಗಳೂ ಈ ನೀರಿನ ಪ್ರಯೋಗದಿಂದ ಕ್ರಮವಾಗಿ ಪರಿಹಾರಹೊಂದಬಲ್ಲವು. ಹೊಟ್ಟೆಶೂಲಿ, ಮಲಬದ್ಧತೆ, ಪ್ಲೇಗು, ಸುಟ್ಟ-ಗಾಯ, ಮೂತ್ರ ಪಿಂಡದೊಳಗಿನ ಶೂಲಿ ಮೊದಲಾದ ರೋಗಗಳ ಮೇಲೆ ಉಳ್ಳಿಗಡ್ಡೆಯ ನೀರಿನಿಂದ ಇಷ್ಟ ಪರಿಣಾಮವಾಗುತ್ತದಾಗಿ ಡಾ॥ ಮಿಶ್ರರವರ ಅಭಿಪ್ರಾಯ. ಅಲ್ಲಲ್ಲಿಯ ಡಾಕ್ಟರರು ಈ ಉಪಚಾರದ ಗುಣಧರ್ಮಗಳನ್ನು ಗ್ರಹಿಸಿ ಉಪಚರಿಸಬಹುದು. ಡಾ॥ ಮಿಶ್ರರವರು ಈ ಕುರಿತು ಇನ್ನೂ ಪ್ರಯೋಗ ಮಾಡುತ್ತಿದ್ದಾರೆ. ಮದ್ರಾಸ ಸರಕಾರವು ಡಾ॥ ನೆಹರೂರವರ ವಿದ್ಯುತ್‌ಸಂಸ್ಕಾರದ ಪ್ರಯೋಗಗಳನ್ನು ಪ್ರಚುರಗೊಳಿಸುವ ಆಲೋಚನೆಯಲ್ಲಿದೆ. ಹಾಗೆಯೇ ನಮ್ಮ ಮುಂಬಯಿ ಸರಕಾರವೂ ಈ ಪ್ರಯೋಗ ವಿಚಾರವನ್ನು ತ್ವರ್ಯವೇ ಕೈಕೊಳ್ಳಬೇಕಾಗಿ ನಾವು ಸೂಚಿಸುತ್ತೇವೆ.

೩. ಮುಂಬಯಿ ಸರಕಾರದ ಅಬಕಾರಿ ಇಲಾಖೆಯವರು ನಮ್ಮಲ್ಲಿಯ ಮದ್ಯನಿರೋಧನ ಪ್ರದೇಶದೊಳಗಿನ ಪ್ರಗತಿಯ ಕುರಿತು ಪ್ರಕಟಿಸಿದ ವರದಿಯನ್ನೋದಿದರೆ ಅಸಮಾಧಾನವಾಗುತ್ತದೆ. ಹೇದೀಪುರ ಮೊದಲಾದ ಮದ್ಯನಿರೋಧನ ಪ್ರದೇಶದ ಹೊರಗಡೆ

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಖಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ.

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್ ವಿಪುಲ ಸೌಕರ್ಯ ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ -	ಕಾಮತ ಸ್ಟೋರ್ಸ.
ಅಂಕೋಲಾ —	ವೇದಮೂರ್ತಿ ಹನುಮಟ್ಟೆ ಕೇಶವ ಭಟ್ಟ.	ಗೋಕರ್ಣ —	ಎಮ್ ವ್ಹಿ. ಬಸ್ತಿಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ.	ಶಿರ್ಸಿ —	ಆರ್. ವ್ಹಿ. ಧಾಕಪ್ಪಾ ಕೆಮಿಸ್ಟ

ವಿಳಾಸ.—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಬ್ರೆಂಚ್ ಆಫೀಸು: ಕುಮಟಾ. ಉ. ಕ.

OR

BHUVANENDRA PRODUCTS LTD.
Head Office: KATAPADI, S. K.

ಇರುವ ಶಿಮೊಗ್ಗೆಯಿಂದ ಸವಿಸ್ತಾ ತಾಲೂಕುಗಳಲ್ಲಿ ಶೇಂದಿ-ಶರಾಬು ಆಮದಾಗುತ್ತದೆ, ಗೋವೆಯಿಂದಲೂ ಸರಾಯಿ ಆಮದಾಗುವದುಂಟು. ಇಂಥ ಆಮದಿನ ಅಪರಾಧಗಳನ್ನು ಪತ್ತೆಹಚ್ಚುವದು ಕಠಿಣ ಕೆಲಸ ಆದರಿಂದ ಈ ಪ್ರದೇಶದಲ್ಲಿ ಮದ್ಯನಿರೋಧನ ಪ್ರಯೋಗ ಯಶಸ್ವಿಯಾಗಲಿಲ್ಲವಾಗಿ ಅಬಕಾರಿ ಕಮಿಶನರರು ಹೇಳುತ್ತಾರೆ ಈ ರಿಪೋರ್ಟು ಪ್ರಥಮ ೩ ತಿಂಗಳ ಕಾರ್ಯದ್ದು ಹಳದೀಪುರದ ಅಂಗಡಿಯ ಕುರಿತು ನಾವು ಆರಂಭದಿಯೇ ಮುಂಜಾಗ್ರತೆ ಕೊಟ್ಟಿದ್ದೆವು. ಅದನ್ನು ಸರಕಾರವು ಅಲಕ್ಷಿಸಿ ಅದೇ ಅಂಗಡಿಗೆ ಬಿಟ್ಟು ತೋರಿಸಿ ಪ್ರಯೋಗ ಫಲಕಾರಿಯಾಗಲಿಲ್ಲವೆಂದು ದೂರುವದು ಅಪ್ರಶಸ್ತವಾದುದು ಇತ್ತಲಾಗಿ ಅಧಿಕಾರಿಗಳ ಜಾಗ್ರತೆಯಿಂದಲೂ ಕಾಂಗ್ರೆಸ ಕಮಿಟಿ ಮೊದಲಾದ ಕಾರ್ಯಕರ್ತರ ಕಾವಲಿನಿಂದಲೂ ಆಮದು ಬಹುಮಟ್ಟಿಗೆ ಕುಗ್ಗಿದೆಂದು ನಾವು ಹೇಳಬಲ್ಲೆವು. ವಿಕಾರಕಾರಣವನ್ನು ಒಳಯಲ್ಲಿರಗೊಟ್ಟು ಕುಡುಕರು ವಿಕಾರವಶರಾಗಕೂಡದೆಂದು ಬಯಸುವದೂ, ಬೆಂಕಿಯ ಬಳಿ ಇಟ್ಟ ಬೆಣ್ಣೆ ಕರಗಬಾರದೆಂದು ವಿಧಿಸುವದೂ ಒಂದೇ ಮಾದರಿಯದೆಂದು ಯಾರೂ ಹೇಳುವರು! ಅಬಕಾರಿ ಇಲಾಖೆಯವರು ಇದರಿಂದ ಬೋಧಗಲಿತು, ಮುಂದಿನ ವರ್ಷ ವಿಕಾರ-ಕಾರಣಗಳಾದ ಅಂಗಡಿಗಳನ್ನು ಮುಚ್ಚುವ ಏರ್ಪಾಟು ಮಾಡಬೇಕಾಗಿ ಸೂಚಿಸುತ್ತೇವೆ. ಮದ್ಯನಿರೋಧನ ಕ್ರಮದಿಂದ ಜನಸಾಮಾನ್ಯರಿಗೆ ಹಿತವಾಗಿದೆಂದು ವರದಿಯಲ್ಲಿ ಸಿದ್ಧಾಂತ ತೋರಿಸಿದಾಗಂತು ಈ ಜಾಗ್ರತೆ ಅಗತ್ಯದ್ದೆಂದು ಪುನಃ ಹೇಳಬೇಕಾಗಿಲ್ಲ

ಪೂರ್ವಪಾರ್ಶ್ವದಲ್ಲಿ ಬ್ರಿಟಿಶರಮೇಲೆ ಸಂಕಟ!

(೭ನೇ ಪಾನಿನಿಂದ ಮುಂದರಿಸಿದ್ದು)

ಧಾನವಾಯಿತೆಂದು ಯಾರೂ ಎಣಿಸಲಾಗದು ಝೆಕೊಸ್ಲೊವಾಕಿಯಾದ ಪ್ರಕರಣ ಇನ್ನೂ ತಣಿಯಲಿಲ್ಲ ಹಂಗೇರಿಯವರು ಹಿಟ್ಲರರ ಪ್ರೇರಣೆಯಿಂದ ಅದನ್ನು ತುಂಡರಿಸುವ ನಿರ್ಧಾರವನ್ನೇ ಮಾಡಿದಂತಾಗಿದೆ ಆ ಪ್ರದೇಶ ತಮಗೆ ಒಪ್ಪಿಸಿಬಿಡಿ; ಈ ಪ್ರದೇಶ ತಮ್ಮದಾಗುತ್ತದೆ, ಹೀಗೆ ಹೇಳಿ ಒಂದೊಂದು ಪ್ರದೇಶದ ಬಗ್ಗೆ ಒಂದೊಂದು ಆಕ್ಷೇಪ ಮುಂದೊಡ್ಡಿ ಝುಕ್‌ರಿಗೆ ದಣಿಸುತ್ತಿದ್ದಾರೆ ಪೋಲಂಡ ಸರಕಾರಕ್ಕೂ ಹಿಟ್ಲರರಿಗೂ ವಿವಾದವುಂಟಾಗಿದೆ. ಪೋಲಂಡದ ಯಹೂದಿ ಪ್ರಜೆಗಳನ್ನು ಹಿಟ್ಲರರು ಜರ್ಮನಿಯಿಂದ ಹೊರತಳ್ಳಿದರು ಪ್ರತಿಯಾಗಿ ಪೋಲಂಡ ಸರಕಾರವು ತಮ್ಮಲ್ಲಿದ್ದ ಯಹೂದಿ ಪ್ರಜೆಗಳನ್ನು ಹೊರಹಾಕತೊಡಗಿದರು. ಇದರಿಂದ ಇತ್ತಟ್ಟಿನಲ್ಲಿ ಮನಸ್ತಾಪವುಂಟಾಗಿದೆ ಅದನ್ನ ಒಡಂಬಡಿಕೆಯಿಂದ ಪರಿಹರಿಸುವ ಆಲೋಚನೆಯೂ ನಡೆದಿದೆ. ಸ್ಪೇನದೊಳಗಿನ ಫ್ರೆಂಕೋರಿಗೆ ಆಶ್ರಯ ಕೊಡುವದಕ್ಕಾಗಿ ಚೆಂಬರಲೇನರೂ ಮುಸೊಲಿನಿಯವರೂ ಗುಪ್ತವಾಗಿ ಕಾರಸ್ಥಾನ ಹೂಡುತ್ತಿದ್ದಾರೆ ಈ ಪ್ರಕರಣದಲ್ಲಿ ಫ್ರೆಂಚರದೂ ಸಹಾನುಭೂತಿಯುಂಟು ಸ್ಪೇನದೊಳಗೆ ಆಂತರ್ರಾಷ್ಟ್ರೀಯ ಪಥಕವಿದೆ ಇದು ಸ್ಪೇನ ಸರಕಾರಕ್ಕೆ ಅನುಕೂಲವಾಗಿ ಹೋರಾಡುವ ಪಥಕ. ಇದರೊಳಗಿಂದ ೩೦೦ ಘಾಯಗೊಂಡವರು ಫ್ರೆಂಚ ದೇಶಕ್ಕೆ ಹೊರಟಿದ್ದರು. ಅವರಿಗೆ ತಮ್ಮ ದೇಶದ ಒಳಸೇರಬಾರದೆಂದು ಫ್ರೆಂಚ ಸರಕಾರವು ಕಟ್ಟಾಜ್ಞೆ ಹೊರಡಿಸಿದೆ ಘಾಯಗೊಂಡ ಫ್ರೆಂಚ ಸೈನಿಕರು ಮಾತ್ರ ಒಳಸೇರಬಹುದೆಂದು ಫ್ರೆಂಚ ಸರಕಾರವು ಆ ಬಳಿಕ ಹುಕುಮಿನಲ್ಲಿ ತಿದ್ದುಪಡಿ ಮಾಡಿತು ಸಹಕಾರಿಗಳ ದ್ರೋಹ ಬಗೆಯಬಾರದೆಂದು ಫ್ರೆಂಚ ಸೈನಿಕರು ನುಡಿದು, ಗಡಿನಾಡಿನ ಪಟ್ಟಣದಲ್ಲಿ ಎಲ್ಲರೂ ಉಳಕೊಂಡಿದ್ದಾರೆ ಹಿಟ್ಲರರು ಸಂಕಲ್ಪಿಸಿದಂತೆ, ಬೃಹತ್ ಜರ್ಮನಿಯನ್ನು ತಾವು ನಿರ್ಮಿಸಿಯೇ ತೀರುವೆವೆಂದೂ ಅದಕ್ಕಾಗಿ ಅವಶ್ಯವಿದ್ದರೆ ಖಡ್ಗವನ್ನೆಸೆಯಲು ಹಿಂಜರಿಯಲಾರೆವೆಂದೂ ಹಿಟ್ಲರರ ಮುಖ್ಯ ಸೇನಾಪತಿಗಳಾದ ಗೋಬೆಲ್ಲರವರು ಸಾರುತ್ತಾರೆ. ಹಿಟ್ಲರರು ಈ ಪ್ರಕಾರ ರಣಸೊಕ್ಕಲು ಚೀನ ದೇಶದೊಳಗಿನ ಜಪಾನ ದೇಶದ ವಿಜಯಗಳೇ ಕಾರಣ ಬ್ರಿಟಿಶರು ಈವಾಗ ಚೀನದೊಳಗಿನ ಪ್ರಕರಣದಿಂದ ವ್ಯಗ್ರರಾಗಿದ್ದಾರೆ ಸಕಲ ಬಲವನ್ನು ಅಲ್ಲಿಯ ರಕ್ಷಣೆಗಾಗಿ ಕೇಂದ್ರೀಕರಿಸುವ ಪ್ರಯತ್ನದಲ್ಲಿದ್ದಾರೆ. ಚೀನದ ಪ್ರಕರಣವನ್ನು ಅಮೇರಿಕೆಯ ಸರಕಾರವೂ ಎವೆಯಿಕ್ಕದೆ ಪರಾಂಬರಿಸುತ್ತಿದೆ ಚೀನ-ಜಪಾನ ರಾಜಕಾರಣದಲ್ಲಿ ಅಮೇರಿಕೆಯ ಹಿತಸಂಬಂಧಗಳು ಸಿಲುಕಿಕೊಂಡಿವೆ. ಚೀನ ಪ್ರದೇಶದೊಳಗಿನ ವ್ಯಾಪಾರ-ಸಂಬಂಧಗಳ ಮೂಲಕ ಚೀನ ದೇಶಕ್ಕೂ ಅಮೇರಿಕೆ ದೇಶಕ್ಕೂ ದೀರ್ಘ ಕಾಲದಿಂದ ಮತ್ಸರವುಂಟು. ಆದರಿಂದ ಅಮೇರಿಕೆ ಸರಕಾರವು ಜಪಾನ ಸರಕಾರದೊಡನೆ ತೀವ್ರ-ತೀಕ್ಷ್ಣ ನಿಷೇದಪ್ರದರ್ಶನ ಮಾಡುತ್ತಿದೆ ಪಾಶ್ಚಾತ್ಯರಿಗೆ ಚೀನದಲ್ಲಿರುವ ಹಕ್ಕುಗಳನ್ನು ರಕ್ಷಿಸುವ ಕೆಲಸ ನಮ್ಮದುಎಂದು ಜಪಾನಿಯರು ನಂಬಿಗೆ ಹೇಳುತ್ತಾರೆ, ಆದರೆ ಪಾಶ್ಚಾತ್ಯರಿಗೆ ಸಮಾಧಾನವಾಗಲೊಲ್ಲದು; ಸಮಾಧಾನ ನಾ ಕಾಣೆ

SERVICE & PROMPTNESS

A Feature and a Fact with the "POPULAR"

M VENKATESH PAI
Banker

Sri Krishna Bhavan,
Mangalore.
25th July, 1938

The Managing Director,
The Popular Insurance Co , Ltd ,
MANGALORE

Policy No 40

Dear Sir,

I very much appreciate your promptness in settling the claim in less than a week in respect of the above policy on the life of my late lamented Father in law Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2 553–7–0 is delivered to the claimant and all within the short period of 6 days

This spirit of service and promptitude evinced by the POPULAR' is highly laudable and it is but proper that the Company should be 'POPULAR It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully
(Sd.) M Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: *PROSPECT CHAMBERS, Hornby Road, BOMBAY*

ಕಾನಡಾವೃತ್ತ.

ಮಿತಿ ಕಾರ್ತಿಕ ಶುದ್ಧ ... ಸೋಮವಾರ

ಹಿಂದುಸ್ಥಾನದ ಪ್ರಧಾನ ಸಮಸ್ಯೆ!

ಹಿಂದುಸ್ಥಾನದ ಪ್ರಧಾನ ಸಮಸ್ಯೆಯ ನಿರ್ಣಯವು ಜನನ ಅತ್ಯವಶ್ಯವಾದವುಗಳು. ಯಾಕಂದರೆ ಪ್ರಧಾನ ಸಮಸ್ಯೆಯ ಸ್ವರೂಪ ನಿರ್ಣಯ ಮಾಡದನಕ ಅದನ್ನು ಬಗೆಹರಿಸುವ ಉಪಾಯವನ್ನು ಹುಡುಕಿದ ಹಾಗಾದೀತು. ಹಿಂದುಸ್ಥಾನದ ಲೋಕಸಂಖ್ಯೆ ಬೆಳೆಯುತ್ತದೆ, ಲೋಕಸಂಖ್ಯೆಯ ಬೆಳವಣಿಗೆಯು ನಮ್ಮ ಹಿಂದುಳಿದ ದಾರಿದ್ರ್ಯಕ್ಕೆ ಕಾರಣ. ಆದರಿಂದ ಅದನ್ನು ನಿಯಮಿಸುವದಕ್ಕಾಗಿ ನಿರ್ಬಂಧಿಸುವದಕ್ಕಾಗಿ ಉಪಾಯ ಹುಡುಕಬೇಕೆಂದು ಸಂತತಿ ನಿಯಮನವಾದಿಗಳ ಪ್ರತಿಪಾದನೆ. ಸಂತತಿ ನಿಯಮನವಾದಿಗಳಿಗೆ ನಿಗ್ರಹಶೀಲದಲ್ಲಿ ನಂಬುಗೆಯಿಲ್ಲ. ಬ್ರಹ್ಮಚರ್ಯವನ್ನು ಅವರು ಹಳಿಯುತ್ತಾರೆ. ಅದೊಂದು ಅಸಾಧ್ಯ, ಅಶಕ್ಯ ಧ್ಯೇಯವೆಂದೂ ಅಸ್ವಾಭಾವಿಕವೆಂದೂ ಅವರ ಆಕ್ಷೇಪ. ಸ್ತ್ರೀ-ಪುರುಷರು ಸ್ವಭಾವತಃ ದಾಂಪತ್ಯಜೀವನಾಸಕ್ತರೆಂದೂ ಅವರಿಗೆ ಆ ಜೀವನ-ವಿಲಾಸದಿಂದ ಪರಾಙ್ಮುಖಗೊಳಿಸುವದು ದುರಾಪಾಸ್ತವೆಂದೂ, ಸುದೀರ್ಘವಾಗಿ ವಿಚಾರ ಮಾಡಿದರೆ, ಅಸ್ವಾಭಾವಿಕ ನಿಗ್ರಹದಿಂದ ಮಾನವನ ಕಲ್ಯಾಣಕ್ಕೆ ಅಪಾಯವಿರುವದೆಂದೂ ದಾಂಪತ್ಯಜೀವನ ವಿಲಾಸವೇ ಮಾನವನ ಸ್ವಾಭಾವಿಕ ಧರ್ಮವೆಂದೂ ಅವರು ನಿಗ್ರಹದಿಂದ ಪ್ರತಿಪಾದಿಸುತ್ತಾರೆ. ಹೀಗೆ ಸ್ವಾಭಾವಿಕ ಮಾಡಿ, ದಾಂಪತ್ಯಜೀವನ ವಿಲಾಸವನ್ನು ಯಥಾಕ್ರಮ ನಡಿಸಿ ದಾಂಪತ್ಯಜೀವನದ ಪರಿಣಾಮಗಳನ್ನು ಕೃತ್ರಿಮ ಸಾಧನಗಳ ಕೃತ್ರಿಮವಾದ ಸಂತತಿ ನಿಯಮನವನ್ನು ಬೋಧಿಸುತ್ತಾರೆ. ಬ್ರಹ್ಮಚರ್ಯವನ್ನು ಮನೋನಿಗ್ರಹದಿಂದ ಪಾಲಿಸದೆ ಜೀವನವನ್ನು ಮನಸ್ವಿ ನಡಿಸಿ ಶಿಲ್ಪ ಪದ ಪರಿಣಾಮಗಳನ್ನಷ್ಟೇ ತಪ್ಪಿಸಿಕೊಳ್ಳುವ ಯೋಜನೆಯಿಂದ ಮಾನವನು ಕೀಳು ಪ್ರಕೃತಿಯ ... ಸಂಗತಿಯನ್ನು ಅವರು ಕಣ್ಣಾರೆ ... ಕೃತ್ರಿಮ ಸಂತತಿ-ನಿಯಮನ ... ಸ್ತ್ರೀ-ಪುರುಷರ ... ಹೆಂಗಳೆಯರ ... ಅವರು ಒಪ್ಪುವದಿಲ್ಲ ... ಸುವ ಸ್ವಾಭಾವಿಕ ವೃತ್ತಿಗಳ ... ವ್ಯಾಧಿಗಳೂ ... ಮಾನವನ ... ಇವರು ಅರಿಯುವದಿಲ್ಲ. ಸಂತತಿ ನಿಯಮನದ ಪ್ರಶ್ನೆ-ಪಕ್ಷ ಉತ್ತರ ಪಕ್ಷಗಳನ್ನು ನಿರೂಪಿಸಲು ಇವಾಗ ನಾವು ಒಯಸುವದಿಲ್ಲ. ಅದೊಂದು ಪ್ರಬಂಧ ವಿಷಯವಾಗಿದ್ದು ಅದನ್ನು ಕುರಿತು ವಿಸ್ತರಿಸಹೋದರೆ ಮಹಾ ದೊಡ್ಡ ಗ್ರಂಥವನ್ನೇ ನಾವು ಬರೆಯಬೇಕಾದೀತು. ಆ ವಿಷಯದ ಸಾಧಕ ಬಾಧಕ ಸೂತ್ರಗಳನ್ನಷ್ಟು ಇಂದಿಗೆ ವಿವರಿಸಿದ್ದೇವೆ. ಅವನ್ನು ಮಹಾಜನರು ಪರಾಂಬರಿಸಿ ವರ್ತಿಸಬೇಕೆಂಬೇ ನಮ್ಮ ಉದ್ದೇಶ.

ನಮ್ಮ ಹಿಂದುಸ್ಥಾನ ದೇಶದ ಮಟ್ಟಿಗೆ ಈ ಪ್ರಶ್ನೆಯು ಉದ್ಭವಿಸುವದಿಲ್ಲವೆಂದು ನಮ್ಮ ಅಂಬೋಣ. ಇನ್ನರಡು ವರ್ಷಗಳಲ್ಲಿ ನಮ್ಮ ಹಿಂದುಸ್ಥಾನದ ಲೋಕಸಂಖ್ಯೆ, ಪ್ರಬುದ್ಧ ಅರ್ಥಶಾಸ್ತ್ರಜ್ಞರ ಅಂಬೋಣದಂತೆ ೪೦ ಕೋಟಿಗೆ ಮುಟ್ಟುತ್ತದಂತೆ! ಇನ್ನೂ ಮಿಕ್ಕಿದರೂ ಹೆದರುವ ಕಾರಣವಿಲ್ಲವಾಗಿ ನಾವು ಎದೆತಟ್ಟಿ ಹೇಳುತ್ತೇವೆ. ದೈವಕೃಪೆ ನಮ್ಮ ಭರತಭೂಮಿಯ ಮೇಲೆ ಸಂಪೂರ್ಣವಾಗಿದೆ. ಹಿಂದವಾಸಿಯರು ಸಾಹಸಿಗರಾಗಿ ಪ್ರಯತ್ನಪಟ್ಟರೆ ಸೃಷ್ಟಿಸಮೃದ್ಧಿಗನುಗುಣವಾಗಿ ವರ್ತಿಸಿದರೆ, ೪೦ ಕೋಟಿ —ಏಕೆ? ೬೦ ಕೋಟಿ – ಲೋಕಸಂಖ್ಯೆಯಾದರೂ ಹೆದರಬೇಕಾದುದಿಲ್ಲ. ನಮ್ಮ ದೇಶ ಅಷ್ಟು ಸಮೃದ್ಧವಾದದ್ದಿದೆ. ಭಾವನವಶರಾಗಿ ನಾವು ಮಾತನ್ನು ಬರೆಯುತ್ತೇವೆಂದು ಯಾರೂ ತಿಳಿಯಬಾರದು. ಹಿಂದುಸ್ಥಾನದಲ್ಲಿ ಈಗ ಪ್ರತಿ ೧೦೦ ಚದರ ಮೈಲು ಪ್ರದೇಶಕ್ಕೆ ೩೭ ಜನವಸತಿಯುಂಟು. ಅದೇ ಫ್ರಾನ್ಸ ದೇಶದಲ್ಲಿ ೩೬, ಇಟಾಲಿಯಲ್ಲಿ ೬೭, ಜರ್ಮನಿಯಲ್ಲಿ ೭೦, ಜಪಾನದಲ್ಲಿ ೬೫, ಬ್ರಿಟನ್‌ದಲ್ಲಿ ೯೭, ಹಾಲಂಡ ದೇಶದಲ್ಲಿ ೧೭೦, ಬೆಲ್ಜಿಯಮ್‌ದಲ್ಲಿ ೧೯೬, ಹೀಗೆ ಜನವಸತಿಯುಂಟು. ಈ ಜನವಸತಿ ಹೆಚ್ಚಾಯಿತೆಂದು ಆ ದೇಶಗಳು ಗೊಣಗುಟ್ಟುವದು ಒತ್ಟಟ್ಟಿಗಿರಲಿ, ಪ್ರಜೆಗಳ ಅಭಿವೃದ್ಧಿ ಮಾಡುವದಕ್ಕಾಗಿ ಅಲ್ಲಿಯ ಸರಕಾರಗಳು ಕೈಕೊಳ್ಳುವ ಉಪಾಯಗಳನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ! ಜರ್ಮನಿಯ ಹಿಟ್ಲರ, ಇಟಾಲಿಯ ಮುಸೊಲಿನಿಯವರಂತೂ ಸಂತತಿಯ ಅಭಿವೃದ್ಧಿಗಾಗಿ ಬಹುದೊಡ್ಡ ಆಂದೋಲನವನ್ನೇ ಎಬ್ಬಿಸಿದ್ದಾರೆ. ಸಂತತಿಯುಳ್ಳ ಹೆಂಗಳೆಯರಿಗೆ ಪ್ರೋತ್ಸಾಹ ಕೊಟ್ಟು ಮನ್ನಿಸುತ್ತಾರೆ. ದೃಢಕಾಯದ ಸಂತತಿಯನ್ನು ನಿರ್ಮಿಸುವದೇ ಸ್ತ್ರೀ ಧರ್ಮವೆಂದೂ ಅದೇ ರಾಷ್ಟ್ರದ ಅಭ್ಯುದಯಕ್ಕೆ ಪರಮ ಶ್ರೇಯಸ್ಕರವಾದ ರಾಷ್ಟ್ರಸಂಪತ್ತಾದರೂ ಸಂತತಿಯೇ ಎಂದೂ ಹಿಟ್ಲರ-ಮುಸೊಲಿನಿಯವರು ದೇಶದುದ್ದಕ್ಕೂ ಆಂದೋಲನವನ್ನೆಬ್ಬಿಸಿ ಹೆಂಗಳೆಯರಿಗೆ ಸಂತತಿನಿರ್ಮಾಣ ಮಾಡಲು ಸಕಲ ಸಾಧನಗಳನ್ನು ಒದಗಿಸುವ ಮನ್ವಂತರದಲ್ಲಿ, ಹಿಂದುಸ್ಥಾನದೊಳಗಿನ ಪ್ರಾಜ್ಞ ಅರ್ಥಶಾಸ್ತ್ರಜ್ಞರು ಇದ್ದ ಲೋಕಸಂಖ್ಯೆಯು ಮಿಗಿಲಾಯಿತೆಂದೂ ಅದನ್ನು ನಿರ್ಬಂಧಿಸಬೇಕೆಂದೂ ಆಕ್ರೋಶ ಮಾಡುತ್ತಿರುವರು. ದೈವದುರ್ವಿಪಾಕವಲ್ಲದೆ ಮತ್ತೇನು? ಲೋಕಸಂಖ್ಯೆ ಬೆಳೆದ ಹಾಗೆ ಆ ಲೋಕಸಂಖ್ಯೆಯನ್ನು ಪಾಲಿಸಿ ಪೋಷಿಸುವದಕ್ಕಾಗಿ 'ಬಹುರತ್ನಾ ವಸುಂಧರಾ' ಎಂಬಂತೆ ಸಮೃದ್ಧವಾದ ನಮ್ಮ ವಿಶಾಲ ಭೂಪ್ರದೇಶವಿರುವಾಗ ಅರ್ಥಶಾಸ್ತ್ರಜ್ಞರು ಅದನ್ನು ಕಣ್ಣಾರೆ ನೋಡಿ ವ್ಯವಸ್ಥಿತರಾಗುವದು ಪ್ರಶಸ್ತವಲ್ಲವೇ? ಸದ್ಯಕ್ಕೆ ಬಂಗಾಳ ಪ್ರಾಂತದ ಗವ್ಹರ್ನರರಾಗಿದ್ದ ಸ್ವದೇಶಕ್ಕೆ ಹಿಂತೆರಳಿದ ಎಂಡರಸನ್‌ರವರು ನುಡಿದಂತೆ, ಹಿಂದುಸ್ಥಾನದೊಳಗಿನ ಸಮಸ್ಯೆಯೆಂದರೆ ದೇಶದೊಳಗಿರುವ ಸ್ವಾಭಾವಿಕ ಸಾಹಿತ್ಯಗಳ ಪ್ರಯೋಜನವಿಚಾರ- (successful solution of the problems of administration) ನಮ್ಮಲ್ಲಿ ವಿಪುಲ ಮನುಷ್ಯಸಂಪತ್ತುಂಟು, ಸೃಷ್ಟಿಸಂಪತ್ತುಂಟು, ಅವನ್ನು ಸಂಘಟಿಸುವ ಯೋಜಕರಿಲ್ಲ, ಅದಕ್ಕೆ ಸ್ವಾತಂತ್ರ್ಯದ ಅಭಾವ ಕಾರಣವಾಗಿರಬಹುದು, ಅಥವಾ ಬುದ್ಧಿಶಾಲಿಗಳ ಅಜಾಗ್ರತೆ ಕಾರಣವಾಗಿರಬಹುದು, ಯಾವದೇ ಕಾರಣವಾಗಿರಲಿ, ಆ ಚರ್ಚೆ ಈಗ ಅನವಶ್ಯಕ. ಮುಖ್ಯ ಮಾತೇನಂದರೆ – ದೈವಾನುಗ್ರಹದಿಂದ ದೇಶದೊಳಗೆ ಹುಟ್ಟಿದ, ಹುಟ್ಟುವ, ಹುಟ್ಟಬಹುದಾದ ಸರಕು ಸಾಹಿತ್ಯಗಳನ್ನು ನಾವು ಹಿಂದವಾಸಿಯರು ಲೋಕಪ್ರಯೋಜನವಾಗುವಂತೆ ರೂಪುಗೊಳಿಸುವ ಹವ್ಯಾಸ ಸಾಹಸಗಳನ್ನು ಹಿಡಿಯದೆ, ದುರ್ಬಲಮನಸ್ಕರಾಗಿ ಜೀವಿತವೇ ಭಾರವೆಂದೆಣಿಸಿ ಆತ್ಮನಾಶದ ಆತ್ಮಘಾತಕ ವಿಚಾರಕ್ಕೆ ತೊಡಗಿದ್ದೇವೆ. ಸನಾತನಪರಂಪರೆ ಹೀಗಿಲ್ಲ. ಸಂತತಿ-ನಿಯಮನ, ಸಂತತಿ-ನಿಯಂತ್ರಣ ವಿಚಾರಗಳನ್ನೇ ನಮ್ಮ ಪೂರ್ವಜರು ಅರಿಯರು. ದಂಪತಿಗಳಿಗೆ ಗುರು-ಹಿರಿಯರು ಸಂತತಿ-ನಿರ್ಮಾಣದ ಆಶೀರ್ವಾದವನ್ನಿತ್ತು ಹರಸುವ ಸಂಪ್ರದಾಯವನ್ನು ಸನಾತನಿಗಳೆಲ್ಲರೂ ಬಲ್ಲಂಥ ವಿಷಯ. ಆ ಪರಂಪರೆಯನ್ನು ಹಿಂದವಾಸಿಯರು ಕಣ್ಣಾರೆ ನೋಡಿ ವಿಷಯವಾಸನಾಪ್ರೇರಿತರಾಗಿ, ಕಾಮುಕರಾಗಿ ಸಂತತಿ ನಿರ್ಬಂಧ ಮಾಡಿಕೊಂಡು ವಿಲಾಸ ಮಾಡಲೆಳಸುವದೂ ಸಂತತಿಯಿಂದ ದಾರಿದ್ರ್ಯ ಒದಗಿಬಂತೆಂದು ಭಾವಿಸುವದೂ ಪೌರುಷವಲ್ಲವೆಂದು ನಾವಾಗಿ ಹೇಳುವದನವಶ್ಯಕ.

ಹಿಂದವಾಸಿಯರ ಬಡತನಕ್ಕೆ, ದಾರಿದ್ರ್ಯಕ್ಕೆ, ವಿಪನ್ನಾವಸ್ಥೆಗೆ ಹಿಂದವಾಸಿಯರ ಸಾಹಸಶೂನ್ಯತೆಯೇ ಪ್ರಧಾನ ಕಾರಣ. ನಮ್ಮ ದೇಶದೊಳಗೆ ೪೩ ಕೋಟಿ ಎಕರೆ ಭೂಮಿಯನ್ನು ನಾವು ಸಾಗುವಳಿ ಮಾಡಬಹುದು. ಈವಾಗ ಪ್ರತ್ಯಕ್ಷ ಸಾಗುವಳಿಯಾಗುವ ಕ್ಷೇತ್ರಫಲ ೩೦ ಕೋಟಿ ಎಕರೆಯಾದರೆ ದೊಡ್ಡದು! ಈ ಅನುಮಾನದ ವಿಚಾರ ಮಾಡಿದರೆ, ಒಂದೊಂದು ವರ್ಷಕ್ಕೆ ಎರಡೆರಡು — ಏಕೆ ಮೂರು ಮೂರು ಬೆಳೆಗಳನ್ನಾದರೂ — ಬೆಳೆಸುವ ಅನುಕೂಲತೆಗಳು ದೈವಕೃಪೆಯಿಂದ ನಮ್ಮ ಭೂಮಿಗಿವೆ. ವ್ಯಾಪಾರ ಮಾಡಿ ಒಂದು ಬೆಳೆ ನಾವು ಬೆಳೆಸುತ್ತೇವೆ. ಎರಡೆರಡು ಬೆಳೆ ಬೆಳೆಸುವವರಂತೂ ಪರಾಕ್ರಮಶಾಲಿಗಳೆಂದು ಗಣಿಸಲ್ಪಡುತ್ತಾರೆ! ಈ ಬೇಸಾಯವನ್ನಾದರೂ ಆಸಕ್ತಿಯಿಂದ ಜನರು ನಡಿಸಿದ್ದರೆ ಅವರ ಸುಖ ಸಂಪತ್ತಿಗೆ ಸೀಮೆಯಿರುತ್ತಿರಲಿಲ್ಲ. ಅನರೆ ವಿದೇಶಗಳಲ್ಲಿ ಬೆಳೆಯುವ ಒಳೆಯ ಪ್ರಮಾಣಕ್ಕೂ ನಮ್ಮಲ್ಲಿ ಬೆಳೆಯುವ ಬೆಳೆಯ ಪ್ರಮಾಣಕ್ಕೂ ಶೇಕಡಾ ೭೦ರಷ್ಟು ಅಭ್ಯಂತರ ಬೀಳುತ್ತದೆ. ನಮ್ಮಲ್ಲಿಯ ಬೇಸಾಯಗಾರರು ವರ್ಷದಲ್ಲಿ ೬ ತಿಂಗಳು ಸಹ ಸರಿಯಾಗಿ ಒಕ್ಕಲತನವ ಹೋರಿ ನಡಿಸುವದಿಲ್ಲ. ಆದರೆ ಸ್ವೀಡನ್, ಹಾಲಂಡ, ಬೆಲ್ಜಿಯಮ್, ಡೆನ್ಮಾರ್ಕ ದೇಶಗಳಲ್ಲಿ ಬೇಸಾಯಗಾರರು ಹಗಲಿರುಳು ಸತತೋದ್ಯೋಗ ನಡಿಸಿ ಸಂಪನ್ನರಾಗಿದ್ದಾರೆ. ಸ್ವೀಡನ್ ದೇಶದೊಳಗೆ ಕಳೆದ ೩೦ ವರ್ಷಗಳಲ್ಲಿ

ಬೇಸಾಯದ ಶಾಸ್ತ್ರಜ್ಞರಾದ ಪಟ್ಟೆಗ ವಿದ್ಯಾರ್ಥಿಗಳು ಬೇಸಾಯಗಾರರು ರಾವಳು, ಒಟ್ಟು ಗಡ್ಡೆ-ಗಣಸು ಮೊದಲಾದ ಬೆಳೆಸ ಮಾಡಿ ವರ್ಷಾಸನ ಹೇರಳ ಪ್ರಾಪ್ತಿ ಮಾಡಿಕೊಳ್ಳುತ್ತಾರೆ ಪ್ರತಿ ವರ್ಷ ಈ ಸಾಮಗ್ರಿಗಳು ವಿದೇಶಗಳಿಗೆ ರವಾನೆಯಾಗುತ್ತಿವೆ ಆದರಿಂದಲೇ ಅಲ್ಲಿಯ ಬೇಸಾಯಗಾರರು ಸುಖದಿಂದ ಪ್ರಪಂಚ ನಡೆಸುತ್ತಿದ್ದಾರೆ ಸಂಕಷ್ಟ-ಚಿಂತೆಗಳಿಂದ ಅವರಿಗೆ ಕಷ್ಟವನಿಸುವದಿಲ್ಲ ಯಾಕೆಂದರೆ ಮಕ್ಕಳು ಆ ಸ್ಥಿತಿಯಲ್ಲಿ ತಾಯಿ ತಂದೆಗಳ ಸಂಪಾದನೆಯ ಆಶ್ರಯದಲ್ಲಿ ನೆರವಾಗುತ್ತಾರೆ ಡೆನ್ಮಾರ್ಕದೊಳಗಿನ ಹೈಸ್ಕೂಲ್ಸ್'ಎಂಬ ಲೋಕಪ್ರಿಯ ಶಾಲೆಗಳಲ್ಲಿ ಬೇಸಾಯದ ಅಭಿವೃದ್ಧಿಗೆ ಅವಶ್ಯವಾದ ಯಾವತ್ತೂ ಶಿಕ್ಷಣ ಕೊಡುವ ಯೋಜನೆಯಾಗಿದೆ 'ರಾಜಾ ಕಾಲಸ್ಯ ಕಾರಣಂ' ಎಂಬಂತೆ ರಾಜಶಕ್ತಿಯ ಬೆಂಬಲದಿಂದ, ಪ್ರೋತ್ಸಾಹದಿಂದ, ಆಶ್ರಯದಿಂದ ಬೇಸಾಯದ ಅಭಿವೃದ್ಧಿಯಾಗಲು, ಬೇಸಾಯಗಾರರು ಸಮೃದ್ಧರಾಗಲು ಕಾರಣವಾಗಿದೆಂಬುದು ಸಹಜವಿದೆ ಅಂತೆಯೇ ನಮ್ಮ ಹಿಂದುಸ್ಥಾನದಲ್ಲಿಯೂ ಏರ್ಪಾಟಾಗಬೇಕು ರಾಷ್ಟ್ರೀಯ ಸಭೆಗೆ ಈ ಮರ್ಮದ ಗ್ರಹಿಕೆಯಾಗಿದೆ ಅದರಿಂದ ರಾಷ್ಟ್ರಪತಿಗಳಾದ ಶ್ರೀ|| ಸುಭಾಷ ಚಂದ್ರ ಬೋಸರವರು ಅಖಿಲ ಭಾರತೀಯ ಔದ್ಯೋಗಿಕ ಮಹಾಮಂಡಳವನ್ನು ನಿರ್ಮಿಸಿ ಅದರ ವಿದ್ಯಮಾನ ಇಡೀ ದೇಶದೊಳಗೆ ಉದ್ಯೋಗಗಳನ್ನು ಹೊರಡಿಸುವ ಸತ್ಸಂಕಲ್ಪ ಮಾಡಿದ್ದಾರೆ ಸುದೈವದಿಂದ ಸಂ|| ಜವಾಹರಲಾಲರಂತಹ ಕರ್ತೃತ್ವಶಾಲಿ ಪುರುಷರು ಈ ಮಹಾಮಂಡಳದ ಅಧ್ಯಕ್ಷರಾಗಿ ನಾಮಿಸಲ್ಪಟ್ಟಿದ್ದಾರೆ ರಾಷ್ಟ್ರಪತಿ ಸುಭಾಷ ಚಂದ್ರ ಬೋಸರು ಕೈಕೊಂಡ ಕಾರ್ಯದಿಂದ ಹಿಂದುಸ್ಥಾನದ ಅಭ್ಯುದಯದ ಶುಭಸೂಚನೆಯಾಗುವದೆಂಬ ನಮ್ಮ ನಿಶ್ಚಿತಾಭಿಪ್ರಾಯ ಸಮಸ್ತ ಗ್ರಾಮ-ನಿವಾಸಿಗಳೂ ನಮ್ಮ ಈಗಿನ ಪ್ರಧಾನ ಸಮಸ್ಯೆಯ ವಿಚಾರ ಹಿಡಿದು ಬೇಸಾಯವನ್ನು ಅಭ್ಯುದಯಗೊಳಿಸಬೇಕೆಂದೂ ಬೆಳೆದ ಬೆಳೆಗಳನ್ನು ಹೆಚ್ಚು ಜನ ಲೋಕಪ್ರಯೋಜನವಾಗುವಂತೆ ಮಾರ್ಪಡಿಸುವ ವಿಚಾರ ಹಿಡಿದು ವರ್ತಿಸಬೇಕೆಂದೂ, ಬೇಸಾಯದ ಉನ್ನತಿಯ ಕುರಿತು ಆಸ್ಥೆಯನ್ನು ತಳೆಯಬೇಕೆಂದೂ ಬೇಸಾಯದಿಂದ ಸ್ವೀಡನ್, ಹೊಲಂಡ, ಬೆಲ್ಜಿಯಮ್, ಡೆನ್ಮಾರ್ಕ ದೇಶಗಳಂತೆ ನಾವಾದರೂ ಸಮೃದ್ಧರಾಗಬಹುದೆಂದೂ ಸೂಚಿಸಬೇಕಾಗುತ್ತದೆ. ಇಂದು ನಮ್ಮ ಪ್ರಧಾನ ಸಮಸ್ಯೆಯ ವಿಚಾರವಾದ ಕಾರಣ ಮಹಾತ್ಮರ ತಪೋಬಲದಿಂದ ಕೊಂಗ್ರೆಸ ಸರಕಾರಗಳು ಸ್ಥಾಪನೆ ಹೊಂದಿವೆ, ಅವು ಈಗ ನಮಗೆ ಅನುಕೂಲವಿವೆ, ಇಂಥ ಶುಭ ಪ್ರಸಂಗದಲ್ಲಿ ಜನರು ದಿಕ್ಕುತಪ್ಪಿ ಹೋಗಬಾರದೆಂದು ನಾವು ಈ ಸಮಸ್ಯೆಯನ್ನು ಕೊಂಚ ವಿಸ್ತಾರದಿಂದ ಇಂದಿನ ವಿವರಿಸಿದುದು.

ಪೂರ್ವ ಪಾರ್ಶ್ವದಲ್ಲಿ ಬ್ರಿಟಿಶರ ಮೇಲೆ ಸಂಕಟ!

[ನಿರೀಕ್ಷಕನು ಬರೆದುದು]

ಮ್ಯುನಿಕ್ ಒಡಂಬಡಿಕೆಯ ರಹಸ್ಯ ವಿಚಾರದಲ್ಲಿ ನಾನು ಸಮರ್ಥಿಸಿದಂತೆ ಈವಾಗ ಜಪಾನದ ಭೀತಿಯಿಂದಲೇ ಬ್ರಿಟಿಶ ಮುತ್ಸದ್ದಿಗಳು ಭಯಗ್ರಸ್ತರಾಗಿದ್ದಾರೆಂದು ನನ್ನ ನಿಶ್ಚಿತಾಭಿಪ್ರಾಯ ದಿನ ಹೋದ ಹಾಗೆ ಆ ಭೀತಿ ಬೆಳೆಯುತ್ತಿದೆ ಜಪಾನಿಯರು ಹೆಂಕೋ ನಗರವನ್ನೂ ಕೆಂಟನ್ ನಗರವನ್ನೂ ಸುತ್ತುಮುತ್ತಲಿನ ಪ್ರದೇಶವನ್ನೂ ಸ್ವಾಧೀನಪಡಿಸಿಕೊಂಡಿದ್ದಾರೆ ಇವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಸ್ವದೇಶಾಭಿಮಾನಿ ಚೀನಿಯರು ಮಾಡಿದ ಸಕಲ ಸಾಹಸ-ಪರಾಕ್ರಮಗಳೆಲ್ಲ ನಿರರ್ಥಕವಾದವು ಅಂತರಿಕ್ಷದೊಳಗೆ ಜಪಾನಿಯರಿಗೆ ಎದುರಾಗುವ ಸಾಮರ್ಥ್ಯ ಚೀನಿಯರಲ್ಲಿರಲಿಲ್ಲ ಜಪಾನಿಯರು ಥಕ್ಕನೆ ವಿಮಾನದಲ್ಲಿ ಹಾರಿ ಹೋಗಿ ಬಾಂಬುಗಳನ್ನೆಸೆದ ಸಾವಿರಾರು ಚೀನಿಯರನ್ನು ನೊಣಗಳಂತೆ ಕೊಂದುಹಾಕಿದರು, ಪ್ರದೇಶವನ್ನು ಉಧ್ವಸ್ತಗೊಳಿಸಿದರು ಹೀಗಾಗಿ ಈವಾಗ ಚೀನ ದೇಶದ ಗೋಣು ಮುರಿದಂತಾಗಿದೆ ಆದಾಗ್ಯೂ ಚೀನಿಯರು ನಿರಾಶರಾಗಿಲ್ಲ, ಆಶಾಭರಿತರಾಗಿ ಜಪಾನಿಯರೊಡನೆ ಹಟ್ಟು-ಹಟ್ಟಿಗೆ ಹೋರಾಡುತ್ತಿದ್ದಾರೆ ಗದ್ದ ಪ್ರದೇಶದೊಳಗೆ ಸುಸೂತ್ರ ರಾಜ್ಯಭಾರ ನಡಿಸುವದು ಜಪಾನಿಯರಿಗೆ ದುರಾಪಾಸ್ತವಾಗುವದೆಂದು ಬಲ್ಲವರ ಎಣಿಕೆ, ಇದು ಮುಂದಿನ ಕಥೆ! ಅದೇನಿದ್ದಾಗ್ಯೂ ಈವಾಗ ಚೀನ ದೇಶದ ಸ್ವಾತಂತ್ರ್ಯಹರಣವಾದಂತೆಯೇ! ಆದರೆ ಇದರಿಂದ ಪೆಟ್ಟು ಬ್ರಿಟಿಶರಿಗೆ, ಅಮೇರಿಕೆಯವರಿಗೆ! ಚೀನದೇಶದೊಳಗೆ ಪಾಶ್ಚಾತ್ಯರಿಗಿರುವ ಯಾವತ್ತೂ ಪ್ರತಿಷ್ಠೆ ಗೌರವಗಳನ್ನು ನಿರ್ನಾಮ ಗೊಳಿಸಿ ಏಶಿಯಾ ಖಂಡದ ಪ್ರದೇಶವನ್ನು ಏಶಿಯನಾದವರಿಗೇ ಕಾದಿಟ್ಟುಕೊಳ್ಳುವ ಹಂಬಲ ತಳೆದ ಜಪಾನಿಯರು ತಮ್ಮ ಪ್ರಭುತ್ವವನ್ನು ಚೀನ ದೇಶದೊಳಗೆ ಪ್ರಸ್ಥಾಪಿಸುವ ಮಹತ್ವಾಕಾಂಕ್ಷೆ ಹಿಡಿದು ಅಲ್ಲಿಯ ರಾಜ್ಯಭಾರಕ್ರಮದಲ್ಲಿ ತಮಗನುಕೂಲವಾದ ಮಾರ್ಪಾಟುಗಳನ್ನು ಒದಗಿಸಿ ತರಲುದ್ಯುಕ್ತರಾಗಿದ್ದಾರೆ, ಚೀನ ದೇಶವನ್ನು ಬೇರೆ ಬೇರೆ ಪ್ರಾಂತಗಳಲ್ಲಿ ವಿಭಾಗಿಸಿ ತೋರಿಕೆಗೆ ಲೋಕಸಭೆಗಳನ್ನು ಸ್ಥಾಪಿಸಿ ಪ್ರತ್ಯಕ್ಷ ಸೂತ್ರಗಳನ್ನು ತಮ್ಮ ಕಡೆಗೇ ಇಟ್ಟುಕೊಳ್ಳುವ ಕಾರಸ್ಥಾನ ನಡಿಸಿದ್ದಾರೆ ಚೀನ ದೇಶಕ್ಕೆ ಈ ತನಕ ಕಳೆದ ೩ ವರ್ಷಗಳಲ್ಲಿ ಯುದ್ಧಸಾಹಿತ್ಯ ಪೂರೈಸಿದವರು ಬ್ರಿಟಿಶ-ಫ್ರೆಂಚರು ಬ್ರಿಟಿಶರ ಹೊಂಗಕೊಂಗ ನಡುಗಡ್ಡೆಯಿಂದಲೂ ಫ್ರೆಂಚರ ಟೋಂಕಿಂಗ, ಕೆಂಬೋಡಿಯಾ ಮೊದಲಾದ ವಸಾಹತುಗಳಿಂದಲೂ ಪದ್ದಾಗೆ ಗಂಟು, ತೋಪು ಶುಬಾಗುಂಡು ಚೀನ ದೇಶಕ್ಕೆ ಗೌಪ್ಯದಿಂದ ಪೂರೈಸಲ್ಪಡುತ್ತಿದ್ದವು ತಾವು ಚೀನಿಯರಿಗೆ ಯುದ್ಧಸಾಹಿತ್ಯ ಪೂರೈಸಲಿಕ್ಕಿಲ್ಲವಾಗಿ ಜಪಾನಿಯರಿಗೆ ಫ್ರೆಂಚರು ವಚನ ಕೊಟ್ಟಿದ್ದರಂತೆ ವಚನ ಪಾಲನೆಯ ಧರ್ಮವನ್ನು ಪಾಶ್ಚಾತ್ಯರು ಪಾಲಿಸಿದ ಇತಿಹಾಸವೇ ಇಲ್ಲ! ಇಂಥ ಸಂದರ್ಭದಲ್ಲಿ ಈ ವಚನಪಾಲನೆಯಾಗದಿದ್ದರೆ ಆಶ್ಚರ್ಯವೇನಿಲ್ಲ ಆದಾಗ್ಯೂ ಜಪಾನಿ ರಾಜ್ಯಭಾರಿಗಳು ವಚನಭಂಗದ ಆರೋಪವನ್ನು ಹೊರಿಸಿ ಫ್ರೆಂಚ ಸರಕಾರದೊಡನೆ ವಿವಾದ ಹೂಡಿದ್ದಾರೆ ವಚನಭಂಗದ ವಿಷಯ ನನಗೆ ಸಂಬಂಧಪಟ್ಟಿದ್ದಲ್ಲ ಫ್ರೆಂಚರು ವಚನ ಪಾಲಿಸಲಿ, ಮುರಿಯಲಿ ಆ ಗೂಢತೆಯನ್ನೇ ನಾನು ಬಿಟ್ಟುಬಿಡುತ್ತೇನೆ ಬ್ರಿಟಿಶ-ಫ್ರೆಂಚರು ಪೂರೈಸುವ ರಣಸಾಹಿತ್ಯ ಕೆಂಟನ್ ಮಾರ್ಗದಿಂದ ಚೀನ ದೇಶ ಸೇರುತ್ತಿತ್ತು ಆದರಿಂದ ಜಪಾನಿಯರು ಹೆಂಕೋ ಮತ್ತು ಕೆಂಟನ್ ಪ್ರದೇಶವನ್ನು ನಿರ್ದಯದಿಂದ ಸೂರೆಗೈದು ಕೈವಶ ಮಾಡಿಕೊಂಡಿದ್ದಾರೆ ಈವಾಗ ಬ್ರಿಟಿಶ-ಫ್ರೆಂಚರ ವಿಚಾರಮಗ್ನವಾಗಿರಬೇಕು ಆಸ್ಟ್ರೇಲಿಯಾ, ನ್ಯೂಝಿಲಂಡ ವಸಾಹತುಗಳು ಜಪಾನದ ಶಂಕೆ ಹೊಂದಿದವಾಗಿವೆ ಈಗ ತಮ್ಮ ಬಾರಿ ಬಂತೆಂದು ಅವು ಹೌಹಾರಿಹೋಗಿವೆ ಜಪಾನ ದೇಶವು ತಮ್ಮ ಮೇಲೆ ಸಾಗಿಬಂದಲ್ಲಿ ಬ್ರಿಟಿಶರು ತಮ್ಮ ಸಹಾಯಕ್ಕೆ ಓಡಿಬರರೆಂದು ಈಗ ಅವಕ್ಕೆ ಖಾತ್ರಿಯಾಗಿದೆ ಆದರಿಂದ ಅವು ಬ್ರಿಟನ್ ದೇಶದ ಸಹವಾಸವನ್ನು ಬಿಟ್ಟು ಅಮೇರಿಕೆಯವರೊಡನೆ ಗೆಳೆತನ ಬೆಳೆಸಲುದ್ಯುಕ್ತವಾಗಿವೆ ವ್ಯಾಪಾರ ವ್ಯವಹಾರಗಳನ್ನೆಲ್ಲ ಅಮೇರಿಕೆಯೊಡನೆ ನಡಿಸಹತ್ತಿವೆ ಇದರಿಂದ ಬ್ರಿಟಿಶ ರಾಜಕಾರಣ ಧುರಂಧರರು ದಿಗಿಲು ಬಿದ್ದಿದ್ದಾರೆ ಪಾಲಿಸ್ತೈನದೊಳಗಿನ ಗೊಂದಲದ ಮೂಲಕ ಬ್ರಿಟಿಶರ ಸ್ಥಿತಿ ತೀರ ಗಡುಚಾಗಿದೆ ಪಾಲಿಸ್ತೈನದೊಳಗಿನ ಅರಬರು ಬ್ರಿಟಿಶ ಸರಕಾರಕ್ಕೆ ಪ್ರತಿಯಾಗಿ ತಮ್ಮ ಪ್ರತಿ ಸರಕಾರವನ್ನು ಸ್ಥಾಪಿಸಿದ್ದಾರೆಂಬ ಜೆರುಸಲೆಮಿನೊಳಗಿನ ಸುದ್ದಿಗಾರರು ತಮ್ಮ ಲಂಡನ್ ಪತ್ರಿಕೆಗೆ ತಿಳಿಸಿದ್ದಾರೆ ಅರಬ ಸರಕಾರದ ರಾಜಶಾಸನ ಪಾಲಿಸ್ತೈನದೊಳಗೆ ನಡೆಯತೊಡಗಿದೆ ಅಲ್ಲೀಗ ಬ್ರಿಟಿಶರ ಸರಕಾರವಿಲ್ಲೆಂದೂ ಅರಬರದೇ ಪಾರುಪತ್ಯ ನಡೆಯುತ್ತದೆಂದೂ ನಾನು ಖಂಡಿತವಾಗಿ ಹೇಳಬಲ್ಲೆ ಅರಬ ದೊಂಬಿಗಾರರನ್ನು ಅಂದರೆ ರಾಷ್ಟ್ರೀಯರನ್ನು ನಿಯಂತ್ರಿಸುವದಕ್ಕಾಗಿ ಪಾಲಿಸ್ತೈನದೊಳಗೆ ೧೫೦೦ ಮಂದಿ ಪೋಲೀಸರನ್ನು ನೇಮಿಸಬೇಕಾಯಿತು ಆದರೆ, ಪೋಲೀಸ ಪೇದೆಯಾಗಲು ಅಲ್ಲಿ ಜನರು ಸಿಗದೆ ಬ್ರಿಟನಿನಿಂದ ಪೋಲೀಸ ಶಿಪಾಯಿಗಳನ್ನು ಆಮದು ಮಾಡಬೇಕಾಯಿತು ಅರಬರ ದೊಂಬಿ ಸುತ್ತುಮುತ್ತಲಿನ ಮುಸಲ್ಮಾನ ದೇಶಗಳಲ್ಲಿಯೂ ಹಬ್ಬಿಕೊಂಡಿದೆ, ಆದರಿಂದ ಆ ಪ್ರದೇಶದ ಒಡೆತನ ಬ್ರಿಟಿಶರ ಕೈಬಿಟ್ಟಿತೆಂದು ನಾನು ತಿಳಿಯುತ್ತೇನೆ ಈ ಪ್ರದೇಶದ ಮಹತ್ವ ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ಎಲ್ಲರಿಗೂ ಗೊತ್ತಿದ್ದ ಮಾತಿದು ಭೂಮಧ್ಯ-ಕೆಂಪು ಸಮುದ್ರಗಳ ವಿದ್ಯಮಾನ ನಮ್ಮ ಹಿಂದೀ ಮಹಾಸಾಗರಕ್ಕೂ ಹಿಂದುಸ್ಥಾನಕ್ಕೂ ವ್ಯವಹರಿಸುವ ದಾರಿಯಲ್ಲಿರುವ ಮರ್ಮಸ್ಥಾನವಿದು! ಇಲ್ಲಿ ಅರಬರ ಗೋಣು ಮುರಿದು ಯಹೂದಿಯರಿಗಿಟ್ಟರೆ ಆ ಭಾಗ ಬ್ರಿಟಿಶರಿಗೆ ಖಂಡಿತವಾಗಿ ಉಳಿಯುವದು ಈ ದಾರಿ ಬ್ರಿಟಿಶರಿಗೆ ಸುರಕ್ಷಿತವಾಗುತ್ತದೆ ಅಮೇರಿಕೆಯವರ ಕಟಾಕ್ಷವೂ ಈ ಪ್ರದೇಶದ ಮೇಲುಂಟು ಅಮೇರಿಕೆಯೊಳಗಿನ ದೊಡ್ಡ ದೊಡ್ಡ ಯಹೂದಿಯರು ಪಾಲಿಸ್ತೈನದೊಳಗೆ ಯಹೂದಿಯರ ರಾಜ್ಯ ಸ್ಥಾಪನೆಯಾಗುವಂತೆ ಬ್ರಿಟಿಶರಿಗೆ ಸಲಹೆ ಆಗ್ರಹ ಮಾಡುತ್ತಿದ್ದಾರೆ ಜಪಾನದ ರಣಸೂಕ್ತಿಗೆ ಇದಿರಾಗಲು ಅಮೇರಿಕೆಯ ಬೆಂಬಲ ಬ್ರಿಟಿಶರಿಗೆ ಬೇಕು, ಆದರಿಂದ ಯಹೂದಿಯರ ಕೈ ಬಿಡಲು ಬ್ರಿಟಿಶರಿಗೆ ಅಶಕ್ಯವಾಗಿದೆ ಅರಬರಿಗೆ ನಿರ್ಬಂಧಿಸಲು ಅಸಾಧ್ಯವಾಗಿದೆ, ಹೀಗೆ ಪೂರ್ವಪಾರ್ಶ್ವದೊಳಗಿನ ಸೂತ್ರಗಳು ಚೀನಿ ರಾಜಕಾರಣದ ಸುತ್ತುಮುತ್ತು ಸುಳಿದಾಡುತ್ತಿವೆ ಮ್ಯುನಿಕ್ ಒಡಂಬಡಿಕೆಯಾದಾಗ್ಯೂ ಯುರೋಪ ಖಂಡದೊಳಗೆ ಸಮಾ

(ಶೇಷ ೫ ನೆಯ ಪುಟದಲ್ಲಿ ನೋಡಬೇಕು)

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲು ೮೫, ಇರುಳಿನಲ್ಲೂ ೮೫. ಒಮ್ಮೊಮ್ಮೆ ಚಳಿಯಾಗುತ್ತದೆ ಆಗಾಗ್ಗೆ ಮೋಡಗಳೂ ಆಗುತ್ತಿವೆ. ಮೊನ್ನೆ ಸಂಜೆಯ ಕಡೆಗೂ ರಾತ್ರಿಗೂ ಸಾಧಾರಣ ಮಳೆ ಹನಿಸಿತು

ಕಳೆದ ಮಂಗಳವಾರ ಮಧ್ಯಾಹ್ನದಲ್ಲಿ ನೆಲ್ಲಿಕೇರಿಯ ಗೌಡರ ಕೇರಿಯಲ್ಲಿ ೭ ಮನೆಗಳೂ ೬ ಗೋಣಿಚೆಗಳೂ ೭ ತೆಂಗಿನ ಮರಗಳೂ ಸುಟ್ಟು ಹೋದವು, ಒಂದು ದೊಡ್ಡ ಮಾವಿನ ಮರಕ್ಕೆ ಬೆಂಕಿ ಬಿದ್ದಿತ್ತು ಆದರೆ ಜನರು ಅದನ್ನು ಕಡಿದು ನೆಲಕ್ಕುರುಳಿಸಿದ್ದರಿಂದ ಅದರ ಬೆಂಕಿ ದೊಡ್ಡದಾಗಲಿಲ್ಲ ಬೆಂಕಿ ಹತ್ತಿದಾಗ ಮೂಡಲದಿಕ್ಕಿನಿಂದ ಭಯಂಕರ ಗಾಳಿ ಬೀಸುತ್ತಿದ್ದದರಿಂದ ಅದು ಹಬ್ಬುತ್ತ ಹೋಗಲಿಕ್ಕೆ ಒಳ್ಳೇ ಸಹಾಯವಾಯಿತು ನಂದಿಸಬೇಕಾದರೆ ಜನರಿಗೆ ಸಾಕುಬೇಕಾಯಿತು ೪೦ ೫೦ ಜನರು ಈ ಅನಾಹುತದಿಂದ ನಿರಾಶ್ರಿತರಾಗಿದ್ದಾರೆ ತೀರ ಬಡ ಜನರವರು ಕೊಂಗ್ರೆಸ ಕಮಿಟಿಯವರು ಅವರಿಗೆ ಕೆಲವು ಧನಸಹಾಯ ಕೊಟ್ಟಿದ್ದಾರೆ ಬೇರೆ ಧರ್ಮದಿಂದ ಸಹಾಯ ಕೂಡಿಸುವ ಪ್ರಯತ್ನ ನಡೆದಿದೆ ಜಿಲ್ಹಾಧಿಪರು ಸಹ ನೆರವಾಗಬೇಕಾಗಿ ಸೂಚನೆಯಿದೆ

ಕೊಂಗ್ರೆಸ ಸದಸ್ಯರನ್ನು ಮಾಡುವ ಅವಧಿ ಕಳೆದ ತಾ ೩೧ಕ್ಕೆ ಮುಗಿಯಿತು. ಈ ವರ್ಷ ಆದ ಸದಸ್ಯರ ಯಾದಿಯನ್ನು ತಾಲೂಕ ಕಮಿಟಿಯವರು ಇದೇ ಬರುವ ತಾ ೧೦ರೊಳಗೆ ಜಿಲ್ಹಾ ಕಮಿಟಿಗೆ ಕಳಿಸಬೇಕು ಅದ್ದರಿಂದ ತಾಲೂಕ ಕಮಿಟಿಯ ಕಡೆಯಿಂದ ಸದಸ್ಯತ್ವದ ಪುಸ್ತಕಗಳನ್ನು ಒಯ್ದ ಎಲ್ಲ ಕಾರ್ಯಕರ್ತರು ಪುಸ್ತಕಗಳನ್ನೂ ಹಣವನ್ನೂ ತಾವು ಮಾಡಿದ ಸದಸ್ಯರ ಯಾದಿಯನ್ನೂ ಕೂಡಲೆ ಕಮಿಟಿಯ ಕಚೇರಿಗೆ ತಂದು ಒಪ್ಪಿಸಬೇಕಾಗಿ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ಬಿನ್ನವಿಸುತ್ತಾರೆ

ಈ ಊರಲ್ಲಿ ಪ್ಲೇಗ ಮತ್ತು ಕೊಲರಾ ರೋಗಗಳು ಹಬ್ಬಿಕೊಂಡಿರುವವಾಗಿ ಒಂದು ವಾರ್ತೆ ಹುಟ್ಟಿದೆ. ಇದು ಸಂಪೂರ್ಣ ಸುಳ್ಳೆಂದು ಇಲ್ಲಿಯ ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷರಾದ ರಾ॥ ಮಿರ್ಜಾನಕರರವರು ಚೌಕಶಿಯಿಂದ ತಿಳಿಸುತ್ತಾರೆ

ನಿನ್ನೆ ಸಂಜೆ ಈ ಜಿಲ್ಹೆಯ ಭೂಭದ್ರ ಬೇಂಕಿನ ಡೈರೆಕ್ಟರರ ಸಭೆ ಸೇರಿ ರಾ॥ ಗಣೇಶ ಕುಪ್ಪ ಹೆಗಡೆಯವರು ಚೇರಮನ್‌ರಾಗಿ ಆರಿಸಲ್ಪಟ್ಟರು.

ಮುಂಬಯಿಯ ಗೌಡಸಾರಸ್ವತ ಬ್ರಾಹ್ಮಣ ಸ್ಕೊಲರಶಿಪ್ ಲೀಗಿನ ೨೨ನೇ ವಾರ್ಷಿಕ ಮಹಾಸಭೆಯು ಗುಜರಾಥಿ ಹೊಲಿನಲ್ಲಿ ತಾ ೧೬-೧೦-೧೯೩೮ನೇ ರವಿವಾರ ನೆರವೇರಿದವಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ ಆ ಕಾಲದಲ್ಲಿ ವ್ಯವಸ್ಥಾಪಕ ಮಂಡಳದ ಚುನಾವಣೆ, ವರದಿಯ ವಾಚನ ಮೊದಲಾದ ಕಾರ್ಯಕ್ರಮ ನಡೆಯಿತು ತಾ ೩೧-೫-೧೯೩೮ನೇದಕ್ಕೆ ಅಂತ್ಯವಾಗುವ ವರ್ಷದಲ್ಲಿ ೨೦೨ ವಿದ್ಯಾರ್ಥಿಗಳಿಗೆ ರೂ ೫೧೩೮ರ ದ್ರವ್ಯಸಹಾಯ ಮಾಡಲಾಯಿತು ಈ ಸಂಸ್ಥೆಯಿಂದ ಸಮಾಜದೊಳಗಿನ ಬಡ ವಿದ್ಯಾರ್ಥಿಗಳಿಗೆ ಒಳ್ಳೇ ಸಹಾಯವಾಗುತ್ತದೆ ಸಮಾಜದವರು ಅಭಿಮಾನದಿಂದ ಲೀಗಿಗೆ ಉದಾರಾಶ್ರಯ ಕೊಡತಕ್ಕದ್ದು

ರಾ॥ ಗಣಪತಿ ಪರಮೇಶ್ವರ ಹೆಗಡೆ ತಲಗೋಡ ಇವರು ತಿಳಿಸುವದೇನಂದರೆ - ಇದೇ ತಾ ೨ನೇಗೆ ಹೊಸಹೆರವಟ್ಟಿ ಗ್ರಾಮದ ಉಂಚಗಿಯಲ್ಲಿ ಗೌಡರಕೇರಿಯ ಸಮಾಜ ವಾಲಗಳ್ಳಿ ಗ್ರಾಮ ಕೊಂಗ್ರೆಸ ಕಮಿಟಿಯವರು ಕನ್ನಡ ಶಾಲೆಯೊಂದನ್ನು ಪ್ರಾರಂಭಿಸಿದ್ದಾರೆ ಈ ಶಾಲೆಯಲ್ಲಿ ಹುಡುಗರು ೨೬, ಹುಡುಗಿಯರು ೬, ಹೀಗೆ ೩೪ ವಿದ್ಯಾರ್ಥಿಗಳು ಸೇರಿದ್ದಾರೆ. ರಾ॥ ಜನಾರ್ದನ ಪರಮಭಟ್ಟಾ ಇವರು ಶಿಕ್ಷಕರಾಗಿ ಕೆಲಸ ನಡಿಸುತ್ತಾರೆ. ಶಿಕ್ಷಕರು ಯೋಗ್ಯರಿದ್ದಾರೆ ಈ ಶಾಲೆ ಈಗ ಗುಡಿಸಲಿನಲ್ಲುಂಟು, ಅದನ್ನು ಕಟ್ಟಿಸುವದಕ್ಕೆ ಸರಕಾರದವರು ಸಹಾಯ ಮಾಡತಕ್ಕದ್ದು ಇತ್ಯಾದಿ.

ಹಳದೀಪುರ— (ತಾ ೧ ೧೧-೩೮) ರಾ॥ ಶಾಮರಾವ ಬಸವಯ್ಯಾ ಇವರ ಕಾನಬೆಟ್ಟದಲ್ಲಿ ಒಂದು ಹುಲಿ ಬಿಡಾರು ಹೂಡಿ ೫ ವರ್ಷಗಳಾದವು ಪ್ರತಿವರ್ಷ ಅದು ೧೫-೨೦ರವರೆಗೆ ಕರುಗಳನ್ನಾದರೂ ಫಲಾಹಾರ ಮಾಡುತ್ತದೆ ರಾತ್ರಿ ಕೆಳಗದ್ದೆ ಕೇರಿಯೊಳಗೆ ಇದರ ಸಂಚಾರ ಕಂಡನಾಯಿಗಳಿಗೆ ಹೊತ್ತುಕೊಂಡು ಹೋಗುತ್ತದೆ ಈಗ ಹಗಲು ಸಂಚಾರ ಶುರುವಾಗಿದೆ ಬೇಟೆಗಾರರು ಉಪಕಾರ ಮಾಡಬೇಕು.

ಗೊಟ್ಟೆಗ್ಗೆ ಸ.ರ. ಮುರಿದು ಬಿದ್ದಿರುವದನ್ನೇ' ಆ ಕಡೆ ಇಂಜಿನಿಯರ ಖಾತೆಯವರ ಲಕ್ಷವೇ ಇಲ್ಲ' ಹೀಗೇಕೆ ?

ತಾ ೨೯-೧೦-೩೮ನೇ ಶನಿವಾರ ಇಲ್ಲಿ ವಿಪರೀತ ಮಳೆ ಬಿತ್ತು ಗದ್ದೆಗಳಲ್ಲಿ ಕೊಯ್ದು ಹಾಕಿದ ಅರಿಗಳೆಲ್ಲ ಹಾಳಾಗಿ ಹೋದವು ಈ ವರ್ಷದ ಮಳೆಯ ವಿಚಿತ್ರ ಚೇಷ್ಟೆಗಳಿಂದ ರೈತರು ಗತಿಗೆಟ್ಟಿದ್ದಾರೆ ಸಮಾಧಾನ ಸಿಕ್ಕಿಗಿಲ್ಲ, ಅಲ್ಲಲ್ಲಿ ಬೇನೆ ಬೇಸರಿಕೆಗಳಿವೆ

ಹೊನ್ನಾವರ— (ತಾ ೬--೧೧--೩೮) ಗದ್ದೆ ಕೊಯಿಲು ಮುಗಿಯುತ್ತ ಬಂತು. ಮೋಡಗಳಾಗುತ್ತಿವೆ, ನಿನ್ನೆ ಮಳೆ ಬಿತ್ತು, ಈ ಹೊತ್ತೂ ಬಿತ್ತು ಈ ವರ್ಷದ ಮಳೆಯಿಂದ ಜನರು ಬೇಸತ್ತಿದ್ದಾರೆ

ಮ್ಯು॥ ನಾಕೇದಾರನ ಮೇಲೆ ಗಾಡಿಕಾರರು ಕೊಟ್ಟ ಫಿರ್ಯಾದಿಯಲ್ಲಿ ನಾಕೇದಾರನಿಗೆ ರೂ ೨೫ ದಂಡ ವಿಧಿಸಲಾಗಿದೆ ಈ ಫಿರ್ಯಾದು ಇಲ್ಲಿಯ ಮಜಿಸ್ಟ್ರೇಟರ ಕಡೆಯಿಂದ ಬೇರೆ ಕಡೆ ವರ್ಗಾಯಿಸಬೇಕಾಗಿ ನಾಕೇದಾರನು ಶಿರಸಿ ಸಬಡಿವಿಜನಲ್ ಮಜಿಸ್ಟ್ರೇಟರ ಕಡೆಗೂ, ಮುಂಬಯಿ ಹೈಕೋರ್ಟಿಗೂ ಮಾಡಿದ ಅರ್ಜಿಗಳು ತಿರಸ್ಕರಿಸಲ್ಪಟ್ಟವು

ಮುಂಕಿ— (ತಾ. ೨೮—೧೦—೩೮) ತೂಕಳತೆ ಇನ್ಸ್ಪೆಕ್ಟರರ ಹಾವಳಿ ಮೇರೆದಪ್ಪಿತು! ನಮ್ಮೂರವರಂತು ವ್ಯಾಪಾರ ಮಾಡುವದೇ ಉಳಿಯಲಿಲ್ಲ! ಎಲ್ಲಾ ವರ್ತಕರು ಒಂದೇ ದಿನ ಎಲ್ಲಾ ತೂಕಳತೆಗಳನ್ನು ಹೊನ್ನಾವರಕ್ಕೆ ತಂದು ಮುದ್ರೆ ಹಾಕಿಕೊಳ್ಳತಕ್ಕದ್ದೆಂದು ತೂಕಳತೆಯ ಇನ್ಸ್ಪೆಕ್ಟರರ ಅಪ್ಪಣೆ! ಅಂಗಡಿಕಾರರು ಒಂದುದಿನ ಹರತಾಳ ಹಾಕುವ ಪ್ರಸಂಗವಿದು. ೨ ವರ್ಷಗಳ ಹಿಂದೆ ಈ ತೂಕಳತೆಗಳಿಗೆ ಮುದ್ರೆ ಹಾಕಿದ್ದುಂಟು ಪುನಃ ತಪಾಸು, ಪುನಃ ಮುದ್ರೆ, ಪುನಃ ಖರ್ಚು! ಈಗ ಹೊಸ ತೂಕಳತೆಗಳನ್ನು ಕೊಳ್ಳಬೇಕಂತೆ ತೂಕಳತೆಗಳ ಖರೀದಿಯಲ್ಲಿಯೇ ವ್ಯಾಪಾರಸ್ಥರ ಭಂಡವಲು ತೀರುತ್ತದೆ, ಮ್ಯಾಲು-ಖರೇದಿಗೆ ಹಣ ಎಲ್ಲಿಂದ ತರುವದು? ತೀರ ಚಿಕ್ಕ ಅಂಗಡಿಕಾರರು, ಅಂದರೆ ಸಾಧಾರಣ ದಿನಾ ೧-೨ ರೂಪಾಯಿಗಳ ಸಹ ವ್ಯಾಪಾರ ಆಗದವರು ೮-೧೦ ರೂಪಾಯಿಗಳನ್ನು ತೂಕಳತೆಗಳ ಬಗ್ಗೆ ಖರ್ಚು ತೆರಬೇಕು. ಎಲ್ಲ ತೂಕಳತೆಗಳ ಖರ್ಚು ತೆರಲಾಗದೆ ಕೆಲವರು ಉಪಯೋಗಕ್ಕೆ ಬೇಕಾಗುವಷ್ಟೇ ತೂಕಳತೆಗಳನ್ನು ತಪಾಸಿಗೆ ಒಯ್ದಿದ್ದರು. ೨ ವರ್ಷಗಳ ಹಿಂದೆ ಮುದ್ರೆ ಹಾಕಿಕೊಂಡ ಎಲ್ಲಾ ತೂಕಳತೆಗಳನ್ನು ತಪಾಸಿಗೆ ತಂದೇ ತೀರಬೇಕಾಗಿ ತೂಕಳತೆಗಳ ಇನ್ಸ್ಪೆಕ್ಟರರು ವಿಧಿಸಿ, ತಂದ ತೂಕಳತೆಗಳಲ್ಲಿ ೧-೨ ತೂಕಳತೆಗಳನ್ನು ಇಟ್ಟುಕೊಂಡು ಬಿಟ್ಟರು. ಅವಕ್ಕೆ ಪಾವತಿ ಕೊಡಹೇಳಿದರೂ ಕೊಡಲಿಲ್ಲ. ಕೊಂಗ್ರೆಸ ರಾಜ್ಯದೊಳಗಿನ ಘಟನೆಯಿದು! ಯಾರಾದರೂ ವಿಚಾರ ಮಾಡುವರೇ? ತೂಕಳತೆಗಳ ಇನ್ಸ್ಪೆಕ್ಟರರು ಆಯಾ ಊರುಗಳಿಗೆ ಹೋಗಿ ತೂಕಳತೆಗಳನ್ನು ತಪಾಸ ಮಾಡಬಾರದೇ?

ಭಟಕಳ— (ತಾ ೫—೧೧—೩೮) ಪುನಃ ನಿನ್ನೆಯಿಂದ ಮಳೆಗೆ ಪ್ರಾರಂಭ! ರೈತರ ಕಷ್ಟ.

ನಿನ್ನೆ ಕಲೆಕ್ಟರರಾದ ಮಿ॥ ರಾ॥ ಬಖಲೇಯವರು ಇಲ್ಲಿ

ಮಕ್ಕಳಿಗೆ ವರಪ್ರದಾನ
ಜಮ್ಮಿ ವೆಂಕಟರಮಣಯ್ಯನವರ



ಲಿವ್ಹರ್ ಕ್ಯೂರ್
ಲಿವ್ಹರ್ ಮತ್ತು ಯಕೃತ್ ವಿಕಾರಗಳ ಮೇಲೆ ಅಮೋಘವಾದ ಉಪಾಯ!
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.
— ಅಥವಾ —
ಜಮ್ಮಿ ವೆಂಕಟರಮಣಯ್ಯ,
ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,
ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.
ಶಾಖೆ:- ಅರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಮುಕ್ಕಾಮು ಮಾಡಿದ್ದಾರೆ ಜಿಲ್ಲಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ರಾ॥ ಶಾಸ್ತ್ರಿಯವರು ಇಂದು ಬರುವರು ಅವರು ಬಂದ ಬಳಿಕ ನೆರೆಸಿಸಾತ್ರಿತ ಸಹಾಯಕ ಮಂಡಳದ ಅಧ್ಯಕ್ಷರಾದ ಡಾ॥ ಕವಲಗುಡ್ಡರವರೊಡನೆ ಆಲೋಚನೆ ಮಾಡಿ ವಿಪತ್ಗ್ರಸ್ತರಿಗೆ ಮನೆ ಕಟ್ಟಿಕೊಡುವ ಮೊದಲಾದ ಪುನರ್ಘಟನೆ-ಯೋಜನೆಯ ವಿಚಾರ ನಡೆಯುವದು. ಸಹಾಯಕ ನಿಧಿಗೆ ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ ಬೇಂಕಿನಿಂದ ರೂ. ೫೦, ರಾ॥ ಬಿ ಎಸ್ ಸ್ಥಳೇಕರರಿಂದ ರೂ. ೨೦, ರಾ॥ ಎಸ್ ಬಿ ಗಾಯತೊಂಡೆಯವರಿಂದ ರೂ. ೧೫, ಹುನಗುಂದ-ಹಳಿಯಾಳ ಮತ್ತು ಭಟಕಳ ಸಹಕಾರಿ ಸಂಘಗಳಿಂದ ರೂ. ೧೨-೫-೫ ಸಹಾಯದ್ರವ್ಯ ಬಂದಿವೆ

ಭಟಕಳ-ಬೈಂದೂರ ಮಾರ್ಗದ ನಡುವೆ ಮುರಿದುಬಿದ್ದ ಸಂಕಗಳ ಜೀರ್ಣೋದ್ಧಾರವಾಗಿ ...

ಜಿಲ್ಲಾ ಕೊಂಗ್ರೆಸ ಸಿದ್ಧಾಂತ ದೀರ್ಘದರ್ಶಿ ಪ್ರಕಟಿಸಿದ ನಂತರ.— ಈ ಬೋರ್ಡಿನ ಸಭೆ ತಾ. ೨೯-೧೦-೩೮ನೇಗೆ ಅಂಕೋಲೆಯಲ್ಲಿ ಸೇರಿತು. ರಾ॥ ರಾಮಕೃಷ್ಣ ಹೊನವೆ ಕರವೆ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು ಚುನಾವಣೆಯ ನಿಯಮಾವಳಿ, ಪ್ರತಿಜ್ಞಾ-ಪತ್ರಿಕೆ, ಅರ್ಜಿಯ ಮಾದರಿ ಮೊದಲಾದವು ನಿಶ್ಚಯಿಸಲ್ಪಟ್ಟವು ಉಮೇದವಾರರು ಅರ್ಜಿಗಳನ್ನು ತಾ ೫-೧೨-೩೮ರೊಳಗೆ ಕಳಿಸಬೇಕು. ಸರಕಾರದಿಂದ ಮತದಾರರ ಯಾದಿ ಪ್ರಕಟವಾದ ಬಳಿಕ, ಅವುಗಳನ್ನು ಅಲ್ಲಲ್ಲಿಯ ಕೊಂಗ್ರೆಸ ಕಮಿಟಿಗಳು ಪರಾಂಬರಿಸಿ ಅವುಗಳನ್ನು ಸಕಾಲದಲ್ಲಿ ಸರಿಪಡಿಸಿಕೊಳ್ಳತಕ್ಕದ್ದು. ಇತ್ಯಾದಿ

ಜಿ. ಕೊಂ ಕಮಿಟಿಯ ಕಾರ್ಯಕಾರಿ ಮಂಡಳದ ಸಭೆ ತಾ ೩೦-೧೦-೩೮ನೇಗೆ ಅಂಕೋಲೆಯಲ್ಲಿ ಸೇರಿ ನಡೆದ ವೃತ್ತಾಂತವನ್ನು ಕಾರ್ಯದರ್ಶಿಗಳು ತಿಳಿಸುತ್ತಾರೆ.— ರಾ॥ ...

... ಅಂಕೋಲೆ; ರಾ ರಾ ವೆಂಕಣ್ಣನಾಯ್ಕ ಭಾವಿಕೇರಿ; ಕುಮಟಾ ತಾಲೂಕಿನಲ್ಲಿ ರಾ॥ ಮಂಜನಾಥ ಪುರಾಣಿಕ, ಡಾಬಿಕಶ್ರೀ, ಮುರ್ಡೇಶ್ವರ; ರಾ॥ ಹೊನ್ನಾವರ ತಾಲೂಕಿನಲ್ಲಿ ರಾ॥ ಮಹಾಬಲೇಶ್ವರ ಬಾಂಡ್ಯಾಂಗ್ ನಾಡಕರ್ಣಿ ಹೈಗುಂದ, ಎಮ್. ಎನ್. ಡಾಬಿಕಶ್ರೀ ಹೊನ್ನಾವರ, ರಾಮಚಂದ್ರ ನಾರಾಯಣ ಶಾಸ್ತ್ರಿ, ಭಟಕಳ, ಶಿರ್ಸಿ ತಾಲೂಕಿನಲ್ಲಿ ಪ್ರಾಥಮಿಕ ಶಿಕ್ಷಣ ಸಮಿತಿ, ಶಿರ್ಸಿ, ಸಿದ್ದಾಪುರ ತಾಲೂಕಿನಲ್ಲಿ ರಾಷ್ಟ್ರಸೇವಾಸಂಘ, ಪ್ರಾಥಮಿಕ ಶಿಕ್ಷಣ ಸಮಿತಿ, ಸಿದ್ದಾಪುರ ಇವರಿಗೆ ನೇಮಿಸಲಾಯಿತು. ಮತ್ತು ಈ ಕೆಲಸವನ್ನು ವ್ಯವಸ್ಥಿತ ರೀತಿಯಿಂದ ನಡಿಸುವ ಬಗ್ಗೆ ರಾ॥ ವಾಮನ ಅನಂತ ಹೊದ್ದೆ ಇವರನ್ನು ಜಿಲ್ಲಾ-ಸಂಘಟಕರನ್ನಾಗಿ ನೇಮಿಸಲಾಯಿತು ಭಟಕಳದಲ್ಲಿ ನೆರೆಯಿಂದ ನಿರಾಶ್ರಿತರ ಸಹಾಯಕ್ಕೆ ತಕ್ಕ ಮಟ್ಟಿಗೆ ರೂ ೩೦ ಸಾವಿರ ತಗಲುವದೆಂದು ಅಂದಾಜು ...

ಇಲ್ಲಿಯ ಪೋಲೀಸರು ಅಬಕಾರಿ ಸುಣ್ಣಗಳ ತನಿಖೆಯ ಕೆಲಸದಲ್ಲಿ ಉತ್ಸಾಹದಿಂದ ನಿರತರಾಗುತ್ತಿದ್ದಾರೆ ನಾಗಪ್ಪಾ ಡಿಂಗರ್ಕ ಎಂಬ ಪೋಲೀಸ ಜವಾನನು ರಾತ್ರಿ ಕಾಲಕ್ಕೆ ಸರಾಯಿಯ ಬಾಟ್ಲಿಗಳನ್ನು ಒಯ್ಯುತ್ತಿದ್ದ ಹನೇಹಳ್ಳಿಯ ಕೃಷ್ಣನೊಬ್ಬನಿಗೆ ಹಿಡಿದ ಪರಾಕ್ರಮ ನಿಜವಾಗಿಯೂ ಪ್ರಶಂಸನೀಯವಾದದು ನಾಗಪ್ಪನು ಎರಡು ಮೈಲು ಕನಕ ಕತ್ತಲೆಯಲ್ಲಿ ಓಡೋಡಿ ಆ ಕೃಷ್ಣನಿಗೆ ಹಿಡಿಯಬೇಕಾಯಿತು ಸದರಿ ಕೃಷ್ಣನ ಮೇಲೆ ರೀತಿಯಂತೆ ಖಟ್ಲೆ ನಡೆದು ರೂ ೩ ದಂಡ ವಿಧಿಸೋಣಾಯಿತು

ಅವ್ರಸರ್ — "ನಿರೀಕ್ಷಕ"ರೊಬ್ಬರು ಬರೆಯುತ್ತಾರೆ ಇಲ್ಲಿಯ 'ನರಸಿಂಹ ಇಂಗ್ಲಿಷ ಸ್ಕೂಲಿನ' ಸಂಸ್ಥಾಪಕರೂ ಚಾಲಕರೂ ರಾ॥ ವಿಠೋಬಾ ನಾಮನ ಶೆಟಿಯಾ ಮತ್ತು ಕೃಷ್ಣರಾವ ವಿಶ್ವನಾಥ ಶೇಣ್ವಿ ಎಂಬಿಬ್ಬ ತರುಣರು. ಈ ಶಾಲೆ ತಾ. ೧೯-೫-೩೮ಕ್ಕೆ ತೆರೆಯಲ್ಪಟ್ಟಿತು. ಈ ತರುಣರೇ ಈ ಶಾಲೆಯನ್ನು ನಡಿಸುತ್ತಾರೆ ಶಾಲೆಯ ನೇತೃತ್ವ ಬೇರೆ ಯಾರ ಕಡೆಗೂ ಇರುವದಿಲ್ಲ ಇತ್ಯಾದಿ.

ಕಾರವಾರ — (ತಾ ೬-೧೧-೩೮) ನಿನ್ನೆ ಶನಿವಾರ ಮ್ಯುನಿಸಿಪಾಲಿಟಿಯ ಸಭೆಸೇರಿ ರಾ॥ ಶೇಣ ವಕೀಲರು ಉಪಾಧ್ಯಕ್ಷರಾಗಿಯೂ, ರಾ॥ ಮಾವಿನಕುರ್ವೆ ವಕೀಲರು ಚೇರಮನ್‌ರಾಗಿಯೂ ಆರಿಸಲ್ಪಟ್ಟರು.

ಡಿಸ್ಟ್ರಿಕ್ಟ ಜಡ್ಜರಾದ ಮಿ॥ ಪ್ರೇಟರಫೀಲ್ಡರವರು ಸರಕಾರಿ ಕೆಲಸದ ಮೇಲೆ ತಾ. ೨೬ನೇಗೆ ಇಲ್ಲಿಂದ ಮುಂಬಯಿಗೆ ಹೋಗಿದ್ದರು ಅವರು ಬುಧವಾರ ಸಂಜೆ ಉಗಿಹಡಗದಿಂದ ಬಂದು ತಲ್ಪಿದರು

ರಾ॥ ಮಾವಿನಕುರ್ವೆಯವರ ವಿರುದ್ಧ ರಾ॥ ದಾಮೋದರ ನಾಗಪ್ಪ ಶ್ಯಾನಭಾಗರು ಇಲ್ಲಿಯ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ದಾಖಲಪಡಿಸಿದ ಇಲೆಕ್ಷನ್ ಅರ್ಜಿಯ ವಿಚಾರ ಮುಂಬಯಿ ಸರಕಾರದ ಹುಕುಮಿನ ಮೇರೆಗೆ ತಹಕೂಬ ಇಡೋಣಾಗಿದೆ.

THE SATISFACTION THAT ONLY CONFIDENCE CAN BRING.

Complete satisfaction is largely dependent on freedom from anxiety and worry No man can be in really good spirits if he is always worrying and anxious about his banking problems That your affairs are absolutely secure with the Syndicate gives you that confidence which promotes true satisfaction. The Syndicate has enjoyed the trust and esteem of thousands of men for the past thirteen years Entrust your affairs to the Syndicate and be satisfied.

THE CANARA INDUSTRIAL & BANKING SYNDICATE, LTD.,

(INCORPORATED IN BRITISH INDIA)

Estd.] **UDIPI, S. INDIA.** [1925.

MEMBER: Reserve Bank of India; Bankers' Clearing House, Bombay.

Authorised Capital	Rs 10,00,000	Subscribed Capital	Rs. 7,74,500
Issued Capital	Rs. 8,00,000	Paid-up Capital	Rs. 3,87,730

Reserves Rs. 2,16,700

Banking Business of every description transacted.

ಯೋಗ್ಯ ಗಮನ ಕೊಡುವೆವು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! = ನಿಶ್ಚಿತ ಸಮಯ!! = ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು ?

THE HANUMAN TRANSPORT CO., LTD.,

UDIPI. S. KANARA.

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲು ಸೆಕೆ, ಇರುಳಿನಲ್ಲೂ ಸೆಕೆ ಒಮ್ಮೊಮ್ಮೆ ಚಳಿಯಾಗುತ್ತದೆ ಆಗಾಗ್ಗೆ ಮೋಡಗಳೂ ಆಗುತ್ತಿವೆ ಮೊನ್ನೆ ಸಂಜೆಯ ಕಡೆಗೂ ರಾತ್ರಿಗೂ ಸಾಧಾರಣ ಮಳೆ ಹನಿಸಿತು

ಕಳೆದ ಮಂಗಳವಾರ ಮಧ್ಯಾಹ್ನದಲ್ಲಿ ನೆಲ್ಲಿಕೇರಿಯ ಗಾಣಿಗರ ಕೇರಿಯಲ್ಲಿ ೬ ಮನೆಗಳೂ ೭ ಗೋಂಬೆಗಳೂ ೭ ತೆಂಗಿನ ಮರಗಳೂ ಸುಟ್ಟುಹೋದವು ಒಂದು ದೊಡ್ಡ ಮಾವಿನ ಮರಕ್ಕೆ ಬೆಂಕಿ ಬಿದ್ದಿತ್ತು ಆದರೆ ಜನರು ಅದನ್ನು ಕಡಿದು ನೆಲಕ್ಕುರುಳಿಸಿದ್ದರಿಂದ ಅದರ ಬೆಂಕಿ ದೊಡ್ಡದಾಗಲಿಲ್ಲ. ಬೆಂಕಿ ಹತ್ತಿದಾಗ ಮೂಡಲದಿಕ್ಕಿನಿಂದ ಭಯಂಕರ ಗಾಳಿ ಬೀಸುತ್ತಿದ್ದದರಿಂದ ಅದು ಹಬ್ಬುತ್ತ ಹೋಗಲಿಕ್ಕೆ ಒಳ್ಳೇ ಸಹಾಯವಾಯಿತು. ನಂದಿಸಬೇಕಾದರೆ ಜನರಿಗೆ ಸಾಕುಬೇಕಾಯಿತು ೪೦ ೫೦ ಜನರು ಈ ಅನಾಹುತದಿಂದ ನಿರಾಶ್ರಿತರಾಗಿದ್ದಾರೆ ತೀರ ಬಡ ಜನರವರು ಕೊಂಗ್ರೆಸ ಕಮಿಟಿಯವರು ಅವರಿಗೆ ಕೆಲವು ಧನಸಹಾಯ ಕೊಟ್ಟಿದ್ದಾರೆ. ಬೇರೆ ಧರ್ಮಿಕರಿಂದ ಸಹಾಯ ಕೊಡಿಸುವ ಪ್ರಯತ್ನ ನಡೆದಿದೆ ಜಿಲ್ಲಾಧಿಪರು ಸಹ ನೆರವಾಗಬೇಕಾಗಿ ಸೂಚನೆಯಿದೆ

ಕೊಂಗ್ರೆಸ ಸದಸ್ಯರನ್ನು ಮಾಡುವ ಅವಧಿ ಕಳೆದ ತಾ ೩೧ಕ್ಕೆ ಮುಗಿಯಿತು. ಈ ವರ್ಷ ಆದ ಸದಸ್ಯರ ಯಾದಿಯನ್ನು ತಾಲೂಕ ಕಮಿಟಿಯವರು ಇದೇ ಬರುವ ತಾ ೧೦ರೊಳಗೆ ಜಿಲ್ಲಾ ಕಮಿಟಿಗೆ ಕಳಿಸಬೇಕು ಅದ್ದರಿಂದ ತಾಲೂಕ ಕಮಿಟಿಯ ಕಡೆಯಿಂದ ಸದಸ್ಯತ್ವದ ಪುಸ್ತಕಗಳನ್ನು ಒಯ್ದ ಎಲ್ಲ ಕಾರ್ಯಕರ್ತರು ಪುಸ್ತಕಗಳನ್ನೂ ಹಣವನ್ನೂ ತಾವು ಮಾಡಿದ ಸದಸ್ಯರ ಯಾದಿಯನ್ನೂ ಕೂಡಲೆ ಕಮಿಟಿಯ ಕಚೇರಿಗೆ ತಂದು ಒಪ್ಪಿಸಬೇಕಾಗಿ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ಬಿನ್ನವಿಸುತ್ತಾರೆ

ಈ ಊರಲ್ಲಿ ಪ್ಲೇಗ ಮತ್ತು ಕೊರೆರಾ ರೋಗಗಳು ಹಬ್ಬಿಕೊಂಡಿರುವವಾಗಿ ಒಂದು ವಾರ್ತೆ ಹುಟ್ಟಿದೆ ಇದು ಸಂಪೂರ್ಣ ಸುಳ್ಳೆಂದು ಇಲ್ಲಿಯ ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷರಾದ ರಾ॥ ಮಿರ್ಜಾನಕರರವರು ಚೌಕಶಿಯಿಂದ ತಿಳಿಸುತ್ತಾರೆ

ನಿನ್ನೆ ಸಂಜೆ ಈ ಜಿಲ್ಲೆಯ ಭೂಪದ್ರ ಬೇಂಕಿನ ಡೈರೆಕ್ಟರರ ಸಭೆ ಸೇರಿ ರಾ॥ ಗಣೇಶ ಅಪ್ಪ ಹೆಗಡೆಯವರು ಚೇರಮನ್‌ರಾಗಿ ಆರಿಸಲ್ಪಟ್ಟರು.

ಮುಂಬಯಿಯ ಗೌಡಸಾರಸ್ವತ ಬ್ರಾಹ್ಮಣ ಸ್ಕೊಲರಶಿಪ್ ಲೀಗಿನ ೨೭ನೇ ವಾರ್ಷಿಕ ಮಹಾಸಭೆಯು ಗುಜರಾಥಿ ಹೊಲಿನಲ್ಲಿ ತಾ ೧೩-೧೧-೧೯೩೮ ನೇ ರವಿವಾರ ಸೇರಲಿರುವದಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ ಆ ಕಾಲದಲ್ಲಿ ವ್ಯವಸ್ಥಾಪಕ ಮಂಡಳದ ಚುನಾವಣೆ, ವರದಿಯ ವಾಚನ ಮೊದಲಾದ ಕಾರ್ಯಕ್ರಮ ನಡೆಯುವದು ತಾ ೩೧-೫-೧೯೩೮ನೇಗೆ ಅಂತ್ಯವಾಗುವ ವರ್ಷದಲ್ಲಿ ೨೦೨ ವಿದ್ಯಾರ್ಥಿಗಳಿಗೆ ರೂ ೫೧೩೮ರ ದ್ರವ್ಯಸಹಾಯ ಮಾಡಲಾಯಿತು ಈ ಸಂಸ್ಥೆಯಿಂದ ಸಮಾಜದೊಳಗಿನ ಬಡ ವಿದ್ಯಾರ್ಥಿಗಳಿಗೆ ಒಳ್ಳೇ ಸಹಾಯವಾಗುತ್ತದೆ ಸಮಾಜದವರು ಅಭಿಮಾನದಿಂದ ಲೀಗಿಗೆ ಉದಾರಾಶ್ರಯ ಕೊಡತಕ್ಕದ್ದು

ರಾ॥ ಗಣಪತಿ ಪರಮೇಶ್ವರ ಹೆಗಡೆ ತಲಗೋಡ ಇವರು ತಿಳಿಸುವದೇನಂದರೆ- ಇದೇ ತಾ ೨ನೇಗೆ ಹೊಸಕೇರವಟ್ಟ ಗ್ರಾಮದ ಉಂಚಗಿಯಲ್ಲಿ ಗೌಡರಕೇರಿಯ ಸಮೀಪ ಪಾಲಗಳ ಗ್ರಾಮ ಕೊಂಗ್ರೆಸ ಕಮಿಟಿಯವರು ಕನ್ನಡ ಶಾಲೆಯೊಂದನ್ನು ಪ್ರಾರಂಭಿಸಿದ್ದಾರೆ ಈ ಶಾಲೆಯಲ್ಲಿ ಹುಡುಗರು ೨೬, ಹುಡುಗಿಯರು ೮, ಹೀಗೆ ೩೪ ವಿದ್ಯಾರ್ಥಿಗಳು ಸೇರಿದ್ದಾರೆ ರಾ॥ ಜನಾರ್ದನ ಪರಮಭಟ್ಟ ಇವರು ಶಿಕ್ಷಕರಾಗಿ ಕೆಲಸ ನಡಿಸುತ್ತಾರೆ ಶಿಕ್ಷಕರು ಯೋಗ್ಯರಿದ್ದಾರೆ ಈ ಶಾಲೆ ಈಗ ಗುಡಿಸಲಿನಲ್ಲುಂಟು, ಅದನ್ನು ಕಟ್ಟಿಸುವದಕ್ಕೆ ಸರಕಾರದವರು ಸಹಾಯ ಮಾಡತಕ್ಕದ್ದು ಇತ್ಯಾದಿ.

ಹಳದೀಪುರ— (ತಾ ೧ ೧೧ ೩೮) ರಾ॥ ಮಂನ ಬಸವಯ್ಯಾ ಇವರ ತೋಟಬೆಟ್ಟದಲ್ಲಿ ಒಂದು ಹುಲಿ ಬಿಡಾರು ಹೂಡಿ ೫ ವರ್ಷಗಳಾದವು ಪ್ರತಿವರ್ಷ ಅದು ೧೫-೨೦ದನ-ಕರುಗಳನ್ನಾದರೂ ಫಲಾಹಾರ ಮಾಡುತ್ತದೆ ರಾತ್ರಿ ಕೆರೆಗದ್ದೆ ಕೇರಿಯೊಳಗೆ ಇವರ ಸಕೀರ್ಟು ಕಂಡನಾಯಿಗಳಿಗೆ ಹೊತ್ತುಕೊಂಡು ಹೋಗುತ್ತದೆ ಈಗ ಹಗಲು ಸಕೀರ್ಟು ಶುರುವಾಗಿದೆ ಬೇಟೆಗಾರರು ಉಪಕಾರ ಮಾಡಬೇಕು

ಗೊಟ್ಟಳ್ಳಿ ಸಾರು ಮುರಿದು ಬಿದ್ದಿರುವದನ್ನೇ! ಆ ಕಡೆ ಇಂಜಿನಿಯರ ಖಾತೆಯವರ ಲಕ್ಷ್ಯವೇ ಇಲ್ಲ! ಹೀಗೇಕೆ?

ತಾ ೨೯ ೧೦ ೩೮ನೇ ಶನಿವಾರ ಇಲ್ಲಿ ವಿಪರೀತ ಮಳೆ ಬಿತ್ತು ಗದ್ದೆಗಳಲ್ಲಿ ಕೊಯ್ದು ಹಾಕಿದ ಅರಿಗಳೆಲ್ಲ ಹಾಳಾಗಿ ಹೋದವು ಈ ವರ್ಷದ ಮಳೆಯ ವಿಚಿತ್ರ ಚೇಷ್ಟೆಗಳಿಂದ ರೈತರು ಗತಿಗೆಟ್ಟಿದ್ದಾರೆ ಸಮಾಧಾನ ಸಿಟ್ಟಿಗಿಲ್ಲ, ಅಲ್ಲಲ್ಲಿ ಬೇನೆ ಬೇಸರಿಕೆಗಳಿವೆ

ಹೊನ್ನಾವರ— (ತಾ ೬--೧೧ ೩೮) ಗದ್ದೆ ಕೊಯಿಲು ಮುಗಿಯುತ್ತ ಬಂತು ಮೋಡಗಳಾಗುತ್ತಿವೆ, ನಿನ್ನೆ ಮಳೆ ಬಿತ್ತು,- ಈ ಹೊತ್ತೂ ಬಿತ್ತು ಈ ವರ್ಷದ ಮಳೆಯಿಂದ ಜನರು ಬೇಸತ್ತಿದ್ದಾರೆ

ಮ್ಯಾ॥ ನಾಕೇದಾರನ ಮೇಲೆ ಗಾಡಿಕಾರನು ಕೊಟ್ಟ ಫಿರ್ಯಾದಿಯಲ್ಲಿ ನಾಕೇದಾರನಿಗೆ ರೂ ೨೫ ದಂಡ ವಿಧಿಸೋಣಾಗಿದೆ ಈ ಫಿರ್ಯಾದು ಇಲ್ಲಿಯ ಮೆಜಿಸ್ಟ್ರೇಟರ ಕಡೆಯಿಂದ ಬೇರೆ ಕಡೆ ವರ್ಗಾಯಿಸಬೇಕಾಗಿ ನಾಕೇದಾರನು ಶಿರ್ಸಿ ಸಬಡಿವ್ಹಿಜನಲ್ ಮೆಜಿಸ್ಟ್ರೇಟರ ಕಡೆಗೂ, ಮುಂಬಯಿ ಹೈಕೋರ್ಟಿಗೂ ಮಾಡಿದ ಅರ್ಜಿಗಳು ತಿರಸ್ಕರಿಸಲ್ಪಟ್ಟವು

ಮಂಕಿ— (ತಾ ೨೮—೧೦—೩೮) ತೂಕಳತೆ ಇನ್‌ಸ್ಪೆಕ್ಟರರ ಹಾವಳಿ ಮೇರೆವಪ್ಪಿತು! ನಮ್ಮೂರವರಂತು ವ್ಯಾಪಾರ ಮಾಡುವದೇ ಉಳಿಯಲಿಲ್ಲ! ಎಲ್ಲಾ ವರ್ತಕರು ಒಂದೇ ದಿನ ಎಲ್ಲಾ ತೂಕಳತೆಗಳನ್ನು ಹೊನ್ನಾವರಕ್ಕೆ ತಂದು ಮುದ್ರೆ ಹಾಕಿಕೊಳ್ಳತಕ್ಕದ್ದೆಂದು ತೂಕಳತೆಯ ಇನ್‌ಸ್ಪೆಕ್ಟರರ ಅಪ್ಪಣೆ! ಅಂಗಡಿಕಾರರು ಒಂದುದಿನ ಹರತಾಳ ಹಾಕುವ ಪ್ರಸಂಗವಿದು ೨ ವರ್ಷಗಳ ಹಿಂದೆ ಈ ತೂಕಳತೆಗಳಿಗೆ ಮುದ್ರೆ ಹಾಕಿದ್ದುಂಟು ಪುನಃ ತಪಾಸು, ಪುನಃ ಮುದ್ರೆ, ಪುನಃ ಖರ್ಚು! ಈಗ ಹೊಸ ತೂಕಳತೆಗಳನ್ನು ಕೊಳ್ಳಬೇಕಂತೆ ತೂಕಳತೆಗಳ ಖರೇದಿಯಲ್ಲಿಯೇ ವ್ಯಾಪಾರಸ್ಥರ ಭಂಡವಲು ತೀರುತ್ತದೆ, ಮತ್ತು-ಖರೇದಿಗೆ ಹಣ ಎಲ್ಲಿಂದ ತರುವದು? ತೀರ ಚಿಕ್ಕ ಅಂಗಡಿಕಾರರು, ಅಂದರೆ ಸಾಧಾರಣ ದಿನಾ ೧ ೨ ರೂಪಾಯಿಗಳ ಸಹ ವ್ಯಾಪಾರ ಆಗದವರು ೮-೧೦ ರೂಪಾಯಿಗಳನ್ನು ತೂಕಳತೆಗಳ ಬಗ್ಗೆ ಖರ್ಚು ತೆರಬೇಕು ಎಲ್ಲ ತೂಕಳತೆಗಳ ಖರ್ಚು ತೆರಲಾಗದೆ ಕೆಲವರು ಉಪಯೋಗಕ್ಕೆ ಬೀಳುವಷ್ಟೇ ತೂಕಳತೆಗಳನ್ನು ತಪಾಸಿಗೆ ಒಯ್ದಿದ್ದರು ೨ ವರ್ಷಗಳ ಹಿಂದೆ ಮುದ್ರೆ ಹಾಕಿಕೊಂಡ ಎಲ್ಲಾ ತೂಕಳತೆಗಳನ್ನು ತಪಾಸಿಗೆ ತಂದೇ ತೀರಬೇಕಾಗಿ ತೂಕಳತೆಗಳ ಇನ್ಸಪೆಕ್ಟರರು ವಿಧಿಸಿ ತಂದ ತೂಕಳತೆಗಳಲ್ಲಿ ೧ ೨ ತೂಕಳತೆಗಳನ್ನು ಇಟ್ಟುಕೊಂಡು ಬಿಟ್ಟರು. ಅವಕ್ಕೆ ಪಾವತಿ ಕೊಡಹೇಳಿದರೂ ಕೊಡಲಿಲ್ಲ. ಕೊಂಗ್ರೆಸ ರಾಜ್ಯದೊಳಗಿನ ಘಟನೆಯಿದು! ಯಾರಾದರೂ ವಿಚಾರ ಮಾಡುವರೇ? ತೂಕಳತೆಗಳ ಇನ್ಸಪೆಕ್ಟರರು ಆಯಾ ಊರುಗಳಿಗೆ ಹೋಗಿ ತೂಕಳತೆಗಳನ್ನು ತಪಾಸ ಮಾಡಬಾರದೇ?

ಭಟಕಳ—(ತಾ ೫—೧೧—೩೮) ಪುನಃ ನಿನ್ನೆಯಿಂದ ಮಳೆಗೆ ಪ್ರಾರಂಭ! ರೈತರ ಕಷ್ಟ.

ನಿನ್ನೆ ಕಲೆಕ್ಟರರಾದ ಮಿ॥ ರಾ॥ ಬಖಲೇಯವರು ಇಲ್ಲಿ

ಮಕ್ಕಳಿಗೆ ವರಪ್ರದಾನ
ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್ ಕ್ಯೂರ್
ಲಿವ್ಹರ್ ಮತ್ತು ಯಕೃತ್ ವಿಕಾರಗಳ ಮೇಲೆ ಅಮೋಘವಾದ ಉಪಾಯ!
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.
— ಅಥವಾ —
ಜಮ್ಮಿ ವೆಂಕಟರಮಣಯ್ಯ,
ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,
ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.
ಶಾಖೆ — ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಮುಕ್ಕಾಮು ಮಾಡಿದ್ದಾರೆ. ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ರಾ॥ ಶಾಸ್ತ್ರಿಯವರು ಇಂದು ಬರುವರು ಅವರು ಬಂದ ಬಳಿಕ ನೆರೆನಿರಾಶ್ರಿತ ಸಹಾಯಕ ಮಂಡಳದ ಅಧ್ಯಕ್ಷರಾದ ಡಾ॥ ಕಮಲಗುಡ್ಡೆರವರೊಡನೆ ಆಲೋಚನೆ ಮಾಡಿ ನಿರಾಶ್ರಿತರಿಗೆ ಮನೆ ಕಟ್ಟಿಕೊಡುವ ಮೊದಲಾದ ಪುನರ್ಘಟನೆ-ಯೋಜನೆಯ ವಿಚಾರ ನಡೆಯುವದು. ಸಹಾಯಕ ನಿಧಿಗೆ ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಸಿಂಡಿಕೇಟ ಬೇಂಕಿನಿಂದ ರೂ ೫೦, ರಾ॥ ಬಿ. ಎನ್ ಸ್ಥಾನೀಕರವರಿಂದ ರೂ ೨೦, ರಾ॥ ಎಮ್ ಬಿ ಗಾಯತೊಂಡೆಯವರಿಂದ ರೂ. ೧೫, ಹುನಗುಂದ-ಹಳದೀಪುರ ಮತ್ತು ಭಟಕಳ ಸಹಕಾರಿ ಸಂಘಗಳಿಂದ ರೂ ೧೦-೮-೫ ಸಹಾಯದ್ರವ್ಯ ಬಂದಿದೆ

ಭಟಕಳ-ಬೈಂದೂರ ಮಾರ್ಗದ ನಡುವೆ ಮುರಿದುಬಿದ್ದ ಸಂಕಗಳ ಜೀರ್ಣೋದ್ಧಾರವಾಗಿ ೬ ವಾರಗಳಾದವು ಮೋಟಾರು ಚಲಾವಣೆಯಾಗಹತ್ತಿ ಅಷ್ಟೇ ಕಾಲವಾಯಿತು. ಆದಾಗ್ಯೂ ಟಪಾಲ ಇಲಾಖೆಗೆ ಇನ್ನೂ ಈ ಸಂಗತಿ ಗೊತ್ತಾಗಲೊಲ್ಲದು ಭಟಕಳದಿಂದ ಬೈಂದೂರು ೧೦ ಮೈಲು, ಅರ್ಧ ತಾಸಿನ ಹಾದಿ ಆದಾಗ್ಯೂ ಟಪಾಲು ಮುಟ್ಟಲು ೬ ದಿನ ಬೇಕು. ಟಪಾಲ ಇಲಾಖೆಯವರು ಸ್ವಲ್ಪ ಕಣ್ತೆರೆದು ನೋಡಬೇಕು.

ಶಿರ್ಸಿ—(ತಾ ೪—೧೧—೩೮) ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ತಿಳಿಸುವದೇನಂದರೆ— ಜಿಲ್ಹಾ ಕೊಂಗ್ರೆಸ ಕಮಿಟಿಯವರು ಜಿಲ್ಹಾ ಲೋಕಲ್ ಬೋರ್ಡ ಚುನಾವಣೆಯಲ್ಲಿ ಕೊಂಗ್ರೆಸ ಪರವಾಗಿ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ನಿಶ್ಚಯಿಸಿದ್ದಾರೆ ಆದರಿಂದ ಚುನಾವಣೆಗೆ ನಿಲ್ಲಬಯಸುವ ಲೋಕಸೇವಕರು ಇದೇ ಬರುವ ಡಿಸೆಂಬರ ೫ನೇ ತಾರೀಖಿನೊಳಗೆ ಪ್ರತಿಜ್ಞಾಪತ್ರ, ಪ್ರಮಾಣಪತ್ರ, ಪ್ರವೇಶ-ಕಾಣಿಕೆಗಳ ಸಹಿತ ಸಿಲೆಕ್ಶನ ಬೋರ್ಡಿನ ಅಧ್ಯಕ್ಷ,ಶಿರ್ಸಿ ಇವರ ಕಡೆಗೆ ಅರ್ಜಿ ಮಾಡತಕ್ಕದ್ದು ಅವಶ್ಯವುಳ್ಳ ಫಾರ್ಮುಗಳು ಕೊಂಗ್ರೆಸ ಕಚೇರಿಯಲ್ಲಿ ದೊರೆಯುತ್ತವೆ.

ಜಿಲ್ಹಾ ಕೊಂಗ್ರೆಸ ಸಿಲೆಕ್ಶನ್ ಬೋರ್ಡಿನ ಪ್ರಕಟಿಕೆಯೇನಂದರೆ- ಈ ಬೋರ್ಡಿನ ಸಭೆ ತಾ ೨೯ ೧೦-೩೮ನೇಗೆ ಅಂಕೋಲೆಯಲ್ಲಿ ಸೇರಿತು. ರಾ॥ ರಾಮಕೃಷ್ಣ ಹೆಗಡೆ ಕಡವೆ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು ಚುನಾವಣೆಯ ನಿಯಮಾವಳಿ, ಪ್ರತಿಜ್ಞಾ-ಪತ್ರಿಕೆ, ಅರ್ಜಿಯ ಮಾದರಿ ಮೊದಲಾದವು ನಿಶ್ಚಯಿಸಲ್ಪಟ್ಟವು ಉಮೇದವಾರರು ಅರ್ಜಿಗಳನ್ನು ತಾ. ೫-೧೨-೩೮ರೊಳಗೆ ಕಳಿಸಬೇಕು ಸರಕಾರದಿಂದ ಮತದಾರರ ಯಾದಿ ಪ್ರಕಟವಾದ ಬಳಿಕ, ಅವುಗಳನ್ನು ಅಲ್ಲಲ್ಲಿಯ ಕೊಂಗ್ರೆಸ ಕಮಿಟಿಗಳು ಪರಾಂಬರಿಸಿ ಅವುಗಳನ್ನು ಸಕಾಲದಲ್ಲಿ ಸರಿಪಡಿಸಿಕೊಳ್ಳತಕ್ಕದ್ದು. ಇತ್ಯಾದಿ

ಜಿ ಕೊಂ ಕಮಿಟಿಯ ಕಾರ್ಯಕಾರಿ ಮಂಡಳದ ಸಭೆ ತಾ. ೩೦-೧೦-೩೮ನೇಗೆ ಅಂಕೋಲೆಯಲ್ಲಿ ಸೇರಿ ನಡೆದ ವೃತ್ತಾಂತವನ್ನು ಕಾರ್ಯದರ್ಶಿಗಳು ತಿಳಿಸುತ್ತಾರೆ - ರಾ॥ ಜಗನ್ನಾಥ ನಾರಾಯಣ ಮಹಾಲೇ ಇವರ ನಿಧನದ ಬಗ್ಗೆ ಶೋಕಪ್ರದರ್ಶನ ಮಾಡಿದ ಬಳಿಕ, ಜಮಾ-ಖರ್ಚು ಓದಿ ಮಂಜೂರ ಮಾಡಲಾಯಿತು ೧೯೩೭ನೇ ಇಸ್ವಿ ಡಿಸೆಂಬರ ದಿಂದ ಸಪ್ಟಂಬರ ೧೯೩೮ನೇ ವರೆಗೆ ಆದ ಜಮಾ ರೂ. ೧೭೧೩-೩-೫. ಅದರೊಳಗೆ ಪ್ರಾಥಮಿಕ ಸಭಾಸದರ ವರ್ಗಣಿಯಿಂದ ರೂ. ೧೩೪೯-೧೨-೦, ಪ್ರಾಂ। ಕೊಂ। ಕಮಿಟಿಯಿಂದ ರೂ ೩೯೭-೪-೦, ಹೀಗೆ ಜಮೆಯಾಗಿದೆ ಈಗ ಶಿರ್ಸಿ ಅರ್ಬನ್ ಬೇಂಕ, ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಕಡೆ ಕೂಡಿ ಸುಮಾರು ರೂ. ೮೦೦ ಶಿಲ್ಕು ಉಂಟು ಬಾಕಿ ರೂಪಾಯಿ ಪ್ರವಾಸ, ಸಂಬಳ, ಮಧ್ಯ-ಮಾದಕ ಪ್ರತಿಬಂಧಕ ಕಾರ್ಯ, ಅಂಚೆವೆಚ್ಚ ಮೊದಲಾದವುಗಳಿಗೆ ಖರ್ಚಾಗಿರುತ್ತದೆ ಪ್ರಾಥಮಿಕ ಶಿಕ್ಷಣ ಪ್ರಸಾರ ಯೋಜನೆಯಂತೆ ಹಳ್ಳಿಗಳಲ್ಲಿ ಶಿಕ್ಷಣ ಪ್ರಸಾರ ಮಾಡುವ ಬಗ್ಗೆ ಕಾರವಾರ ತಾಲೂಕಿನಲ್ಲಿ ರಾ॥ ರಘುಪತಿ ಶೇಣ್ವೆ ಚೆಂಡಿಯೆ, ಅನಂತರಾವ ಪಾಲೇಕರ ಕಾರವಾರ, ಅಂಕೋಲಾ ತಾಲೂಕಿನಲ್ಲಿ ರಾ॥ ವೆಂಕಟರಮಣ ಕಾಂಭಟ್ಟ ಅಂಕೋಲಾ, ರಾಮಾ ವೆಂಕಣ್ಣ ನಾಯ್ಕ ಭಾವಿಕೇರಿ; ಕುಮಟಾ ತಾಲೂಕಿನಲ್ಲಿ ರಾ॥ ಮಂಜುನಾಥ ಪ್ರಭು [illegible], ಮುರಡ್ಡು ವೆಂಕಣ್ಣ ನಾಯ್ಕ ಹನೇಹಳ್ಳಿ. ಹೊನ್ನಾವರ ತಾಲೂಕಿನಲ್ಲಿ ರಾ॥ ಮಹಾಬಲೇಶ್ವರ ಪಾಂಡುರಂಗ ನಾಡಕರ್ಣಿ ಹೈಗುಂದ, ಎಮ್ ಎಮ್ ಡಾಲಿಸತ್ತಿ ಹೊನ್ನಾವರ, ರಾಮಚಂದ್ರ ನಾರಾಯಣ ಶಾಸ್ತ್ರಿ, ಭಟಕಳ, ಶಿರ್ಸಿ ತಾಲೂಕಿನಲ್ಲಿ ಪ್ರಾಥಮಿಕ ಶಿಕ್ಷಣ ಸಮಿತಿ, ಶಿರ್ಸಿ, ಸಿದ್ದಾಪುರ ತಾಲೂಕಿನಲ್ಲಿ ರಾಷ್ಟ್ರಸೇವಾಸಂಘ, ಪ್ರಾಥಮಿಕ ಶಿಕ್ಷಣ ಸಮಿತಿ ಸಿದ್ದಾಪುರ ಇವರಿಗೆ ನೇಮಿಸಲಾಯಿತು ಮತ್ತು ಈ ಕೆಲಸವನ್ನು ವ್ಯವಸ್ಥಿತ ರೀತಿಯಿಂದ ನಡೆಸುವ ಬಗ್ಗೆ ರಾ॥ ವಾಮನ ಅನಂತ ಹೆಗಡೆ ಇವರನ್ನು ಜಿಲ್ಹಾ-ಸಂಘಟಕರನ್ನಾಗಿ ನೇಮಿಸಲಾಯಿತು. ಭಟಕಳದಲ್ಲಿ ನೆರೆಯಿಂದ ನಿರಾಶ್ರಿತರ ಸಹಾಯಕ್ಕೆ ತಕ್ಕಮಟ್ಟಿಗೆ ರೂ. ೩೦ ಸಾವಿರ ತಗಲುವದೆಂದು ಅಂದಾಜು ಮಾಡಲಾಗಿದೆ. ಸರಕಾರದಿಂದಲೂ ಜನರಿಂದಲೂ ಈ ಹಣವನ್ನು ಸಂಗ್ರಹಿಸಿ ಕಾರ್ಯವನು ಮುಂದುವರಿಸಲು ಅಧ್ಯಕ್ಷರಿಗೆ

(ಪುರವಣಿ ನೋಡಿ ಮುಂದರಿಸಿದೆ.)

25,000 ವಿವಿಧ ಶಬ್ದಗಳುಳ್ಳ ' ಹೊಸ ನಿಘಂಟು'!

ಮೊಡರ್ನ ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಸನರಿ.
ಇಂಗ್ಲಿಷ ಕನ್ನಡ

ರಚನಕಾರ.- ವೈದ್ಯಭಾನು ಬಿ ಕೆ ಭಾರದ್ವಾಜ ವಿದ್ಯಾಭೂಷಣ ಮೈಸೂರ ಯುನಿವರ್ಸಿಟಿ ವ್ಯಾಸಚಾನ್ಸಲರ ಮುನ್ನುಡಿಯುಳ್ಳ, ಸರ್ ಎಮ್. ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ। ಯು. ರಾಮರಾಯರು ಹರಸಿದ ಈ ಡಿಕ್ಸನರಿಯು ಇಡೀ ಕರ್ನಾಟಕದಲ್ಲಿ ಹೊಸ ಸಾಹಸ ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕಂಥಾದ್ದು ಬೆ ಕೇವಲ ೨ ರೂ. ಟಿ ಖ. ಪ್ರತ್ಯೇಕ ಸಿಗುವಸ್ಥಳ.- **ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.**

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಗೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಗೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು **ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.**

ಮಿತ ದರ! = ನಿಶ್ಚಿತ ಸಮಯ!! = ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,
UDIPI. S. KANARA.

ವಾರ್ತೆಗಳು.

(೩ನೇ ಪಾನಿನಿಂದ ಮುಂದರಿಸಿದ್ದು)

ವಿಚಾರ ಮಾಡಹೋಗಿದ್ದರು ಅಲ್ಲಿ ಈ ಕಂಬಿಯಿಂದಲೂ, ಮೌಹ್ವಾ ಹೂವುಗಳಿಂದಲೂ ಪೆಟ್ರೋಲನ್ನು ತಯಾರಿಸುವ ಕಾರಖಾನೆಯುಂಟು ನಾ| ಸುರಿಯವರು ಇದನ್ನು ನೋಡಿ, ನಮ್ಮ ಮುಂಬಯಿ ಇಲಾಖೆಯಲ್ಲಿಯೂ ಇದೇ ಪ್ರಕಾರ ಪೆಟ್ರೋಲ ಕಾರಖಾನೆಯನ್ನು ಸ್ಥಾಪಿಸಬಹುದಾಗಿ ಅಭಿಪ್ರಾಯಪಟ್ಟಿದ್ದಾರೆ ಔದ್ಯೋಗಿಕ ಇಲಾಖೆಯ ಮಂತ್ರಿಗಳಾದ ನಾ|| ಪಾಟೀಲರವರಿಗೂ ನಾ|| ಸುರಿಯವರಿಗೂ ವಿಚಾರವಿನಿಮಯವಾಗಿ ಔದ್ಯೋಗಿಕ ಇಲಾಖೆಯ ಡೈರೆಕ್ಟರರಿಗೆ ನಾಸಿಕದೊಳಗಿನ ಸರಕಾರಿ ಮದ್ಯ-ಕಾರಖಾನೆಯಲ್ಲಿ ಈ ಕುರಿತು ಪ್ರಯೋಗ ನಡಿಸುವಂತೆ ಆಜ್ಞೆಯಾಗಿದೆ ಮೌಹ್ವಾ ಹೂವು ಗುಜರಾಥದಲ್ಲಿ ವಿಪುಲವಾಗಿ ಬೆಳೆಯುತ್ತದೆ ಅದರಿಂದ ಮದ್ಯ ತಯಾರಿಸಲ್ಪಡುತ್ತದೆ ಪೆಟ್ರೋಲಿನ ಪ್ರಯೋಗ ಯಶಸ್ವಿಯಾದ್ದಲ್ಲಿ ಹಿಂದುಸ್ಥಾನದೊಳಗೆ ಸಕ್ಕರೆ ಕಾರಖಾನೆಗಳಿಗೆ ಉತ್ತೇಜನ ಸಿಗುವದಲ್ಲದೆ ಪೆಟ್ರೋಲಿನ ಮೂಲಕ ವಿದೇಶಗಳಿಗೆ ಹರಿದುಹೋಗುವ ಕೋಟ್ಯವಧಿ ರೂಪಾಯಿಗಳು ಸ್ವದೇಶದಲ್ಲಿಯೇ ಉಳಿದು ಲಾಭವಾಗುವಂತಿದೆ

— ಮಹಾತ್ಮರಿಗೂ ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳಿಗೂ ಇದೇ ಬರುವ ಗುರುವಾರ ಸಂಭಾಷಣವಾಗುವದಿದೆಯಾಗಿ ಕಲಕತ್ತೆಯ ‘ ಹಿಂದುಸ್ಥಾನ ಸ್ಟೆಂಡರ್ಡ’ ಪತ್ರಿಕೆಯ ಮುಂಬಯಿ ಸುದ್ದಿಗಾರರು ಪ್ರಕಟಿಸುತ್ತಾರೆ ಈ ವಾರದೊಳಗೆ ಸಂಭಾಷಣ ಒದಗಿ ಬರುವದೆಂದು ‘ ಮುಂಬಯಿ ಕ್ರೊನಿಕಲ್ ’ ಪತ್ರಿಕೆಯ ವಿಶೇಷ ಸುದ್ದಿಗಾರರ ಸದ್ದಿ ಸಂಯುಕ್ತ ರಾಜ್ಯಘಟನೆಯನ್ನು ೧೯೪೦ನೇ ಇಸ್ವಿಯೊಳಗೆ ಸಂಘಟಿಸುವ ಆಲೋಚನೆಯನ್ನು ಬ್ರಿಟಿಶ ಪ್ರಧಾನ ಮಂಡಳವು ತಳೆದಿದೆ ಲಂಡನ್‌ದೊಳಗಿನ ‘ ಟೈಮ್ಸ್ ’ ಪತ್ರಿಕೆಯು ಸಂಸ್ಥಾನಿಕರಿಗೆ ಹಿಂದೀ ಲೋಕಮತಕ್ಕೆ ಅನುಕೂಲವಾಗಿ ವರ್ತಿಸಲು ಬುದ್ಧಿ ಹೇಳುತ್ತದೆ ಸಂಸ್ಥಾನಿಕರು ಲೋಕಪ್ರಮುಖರೊಡನೆ ಆಲೋಚನೆ ಮಾಡಿ ಸಂಯುಕ್ತ ರಾಜ್ಯಘಟನೆಗೆ ಅನುಕೂಲವಾಗಿ ವರ್ತಿಸಬೇಕೆಂದು ಲಂಡನ್ ‘ ಟೈಮ್ಸ್ ’ ಪತ್ರಕರ್ತರ ಉಪದೇಶ ವಿಚಾರವಿನಿಮಯವನ್ನು ಅಂತರಂಗದಿಂದ (behind the scene) ನಡಿಸಿ ನಿರ್ಣಯ ಕೈಕೊಳ್ಳಬೇಕಾಗಿಯೂ ಲಂಡನ್ ಟೈಮ್ಸ ಪತ್ರಕರ್ತರು ಸಂಸ್ಥಾನಿಕರಿಗೆ ಚಾತುರ್ಯದಿಂದ ಸೂಚಿಸುತ್ತಾರೆ ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳು ಸಂಸ್ಥಾನಿಕ ಸಮ್ಮೇಲನದ ಪ್ರಮುಖರಾದ ನವಾನಗರದ ಜಾಮಸಾಹೇಬರಿಗೆ ನಿಮಂತ್ರಿಸಿ ಸಂಸ್ಥಾನಿಕರ ಅಭಿಪ್ರಾಯವನ್ನು ತಿಳಕೊಳ್ಳಬಯಸಿದ್ದಾರೆ ಸಂಯುಕ್ತರಾಜ್ಯಘಟನೆಯಂತೆ ನಿರ್ಮಾಣಹೊಂದುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಂಸ್ಥಾನಿಕರ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಹಿಂದುಸ್ಥಾನ ಸರಕಾರದ ಕಾನೂನಿನಲ್ಲಿ ನಮೂದಿಸಲ್ಪಟ್ಟಿದೆ ಈ ಪದ್ಧತಿಯನ್ನು ರಾಷ್ಟ್ರೀಯ ಪ್ರಮುಖರು ನಿಷೇಧಿಸಿದ್ದಾರೆ ಇದರಿಂದ ಸಂಸ್ಥಾನಿಕರ ಬೇಕಂಟಕ ನಿರಂಕುಶ ಪ್ರಭುತ್ವವೇ ಇಡೀ ಹಿಂದುಸ್ಥಾನದೊಳಗೆ ರೂಢಗೊಳಿಸುವ ಹಂಚಿಕೆಯಿದೆಂದು ಲೋಕಪ್ರಮುಖರ ಆಕ್ಷೇಪ ಅದರಿಂದ ಈ ಪದ್ಧತಿಯಲ್ಲಿ ತಿದ್ದುಪಡಿ ಮಾಡುವ ವಿಚಾರವನ್ನು ಲಿನ್‌ಲಿಥ್‌ಗೋ ದೊರೆಗಳು ನಡಿಸಿದ್ದಾರೆ ಸಂಸ್ಥಾನಿಕರಿಗೆ ಹಂಚಿಕೊಟ್ಟ ಪ್ರತಿನಿಧಿಗಳ ಸಂಖ್ಯೆಯಲ್ಲಿ ಕೆಲ ಜಾಗೆಗಳನ್ನು ಸಂಸ್ಥಾನದೊಳಗಿನ ಪ್ರಜೆಗಳಿಗೆ, ಕೆಲ ಜಾಗೆಗಳನ್ನು ಸಂಸ್ಥಾನಿಕರಿಗೆ, ಹೀಗೆ ಪಾಲುಪಟ್ಟಿ ಮಾಡಿಕೊಡುವದೊಂದು ವಿಚಾರ, ಇಲ್ಲವೆ ಸಂಸ್ಥಾನಿ ಪ್ರಜೆಗಳಿಗೆ ಪ್ರತಿನಿಧಿಗಳನ್ನು ಆರಿಸಹೇಳಿ ಅವರೊಳಗಿಂದ ಸಂಸ್ಥಾನಿಕರು ಪ್ರತಿನಿಧಿಗಳನ್ನು ನೇಮಿಸಿ ಕಳುಹುವದು ಈ ಎರಡು ಪದ್ಧತಿಗಳಲ್ಲಿ ಯಾವ ಪದ್ಧತಿಯನ್ನು ಅನುಸರಿಸಬೇಕೆಂದು ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳು ನಿರ್ಣಯಿಸುವವರಿದ್ದಾರಂತೆ। ರಾಜಕಾರಣದಲ್ಲಿ ಪಂ| ಜವಾಹಿರಲಾಲರೇ ತಮ್ಮ ಮಾರ್ಗದರ್ಶಕರೆಂದು ಮಹಾತ್ಮರು ಹೇಳಿಟ್ಟಿದ್ದಾರೆ ಪಂ|| ಜವಾಹಿರಲಾಲರು ಸಂಸ್ಥಾನಿ ಪ್ರಜಾಸಮ್ಮೇಲನದ ಅಧ್ಯಕ್ಷರಾಗಿ ಈ ವರ್ಷ ನೇಮಿಸಲ್ಪಟ್ಟಿದ್ದಾರೆ ಅದರಿಂದ ಪಂ| ಜವಾಹಿರಲಾಲರು ಇತ್ತಕಡೆ ಬಂದನಕ ಮಹಾತ್ಮರು ನಿರ್ಣಾಯಕ ಅಭಿಪ್ರಾಯ ಕೊಡಲಾರರೆಂದೂ ಮಹಾತ್ಮರಿಗೂ ಲಿನ್‌ಲಿಥ್‌ಗೋ ದೊರೆಗೂ ಗುರುವಾರ ನಡೆಯಲಿರುವ ವಿಚಾರವಿನಿಮಯ ಪ್ರಾಸ್ತಾವಿಕವೆಂದೂ ಸುದ್ದಿಗಾರರು ತಿಳಿಯುತ್ತಾರೆ ದಿಲ್ಲಿಯೊಳಗೆ ಸರಕಾರಿ ವರ್ಗದಲ್ಲಿ ಗಾಂಧಿ-ಲಿನ್‌ಲಿಥ್‌ಗೋ ಸಂಭಾಷಣೆಯ ಸುಳಿವೇ ಇಲ್ಲವಾಗಿ ಹೇಳುತ್ತಾರೆ. ಗುಪ್ತ ಕಾರಭಾರ ಏನೇನು ನಡೆದಿದೆಂದು ಯಾರಿಗೂ ತಿಳಿಯುವದಿಲ್ಲ ಮಹಾತ್ಮರ ಗಡಿನಾಡಿನ ಸಂಚಾರವಂತು ತಾ ೯ನೇ ಬುಧವಾರ ಮುಗಿಯುತ್ತದೆ, ಮಹಾತ್ಮರು ನವಂಬರ ೧೬ನೇ ತಾರೀಖಿಗೆ ತ್ರಾವಣಕೋರದೊಳಗಿನ ಕೊಂಗ್ರೆಸ ಶಿಕ್ಷರನ್ನು ವರ್ಧಾದೊಳಗೆ ಭೆಟ್ಟಿಯಾಗುವವರಾಗಿ ತಿಳಿಸಿದ್ದಾರೆ ಇದರ ಮೇಲಿಂದ ವರ್ಧಾಕ್ಕೆ ಬರುವಾಗ ದಿಲ್ಲಿಯಲ್ಲಿ ತಾ ೧೦ನೇ ಗುರುವಾರ ಉಳಿದು ಲಿನ್‌ಲಿಥ್‌ಗೋ ದೊರೆಗಳೊಡನೆ ಮಾತನಾಡಿಬರಬಹುದೆಂದು ಊಹೆ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಇದೇ ನವಂಬರ ತಿಂಗಳ ಕಡೆಯ ವಾರದಲ್ಲಿ ವರ್ಧಾದಲ್ಲಿ ಸೇರಲಿದೆ ಪಂ| ಜವಾಹಿರಲಾಲರು ಅಷ್ಟರೊಳಗೆ ಬಂದು ತಲ್ಪುತ್ತಾರೆ ಮಹಾತ್ಮರು ಸರ್ವಾಧಿಪತಿಗಳೊಡನೆ ವಿಚಾರವಿನಿಮಯ ಮಾಡಿಕೊಂಡು ಬಂದ ಬಳಿಕ ರಾಷ್ಟ್ರೀಯ ಸಭೆಯ ಧೋರಣವನ್ನು ನಿರ್ಣಯಿಸುವ ಆಲೋಚನೆಯಿಂದಲೇ ಈ ಸಭೆ ಸೇರಲಿದೆಯಾಗಿ ಹೇಳುತ್ತಾರೆ

— ಹಿಂದ ಸ್ಥಾನದೊಳಗಿನ ಸೈನ್ಯ ಇಲಾಖೆಯ ಧೋರಣವನ್ನು ಪರಾಂಬರಿಸಿ ನೂತನ ಪರಿಸ್ಥಿತಿ

ಜಾಹೀರ ನೋಟೀಸು.

ಔದ್ಯೋಗಿಕ ಶಾಲೆಗಳು.

ಹೊನ್ನಾವರದಲ್ಲಿ ಈ ಕೆಳಗಿನ ವಿಷಯಗಳನ್ನು ಕಲಿಸುವ ಬಗ್ಗೆ ಶಾಲೆಗಳು ತಾ ೧೫ ೧೧—೧೯೩೮ರಿಂದ ತೆರೆಯಲ್ಪಡುವವು

೧ ಯಂತ್ರಗಳಿಂದ ಕತ್ತದ ಹುರಿಗಳನ್ನು ಮಾಡುವದು
೨ ಯಂತ್ರಗಳಿಂದ ಕತ್ತದ ಹಗ್ಗಗಳನ್ನು ಮಾಡುವದು
೩ ಯಂತ್ರಗಳಿಂದ ಕತ್ತವನ್ನು ಸ್ವಚ್ಛ ಮಾಡುವದು
೪ ಅಂಗೀ ಬಟನ್ಸ್, ಶರ್ಟ ಬಟನ್ಸ್, ಕೈ ಗುಂಡಿಗಳನ್ನು ಮಾಡುವದು
೫ ತೆಂಗಿನ ರಸದಿಂದ ಬೆಲ್ಲವನ್ನು ಮಾಡುವದು

ಇವಲ್ಲದೆ ಕುಮಟೆಯಲ್ಲಿಯೂ ತೆಂಗಿನ ರಸದಿಂದ ಬೆಲ್ಲ ಮಾಡುವದನ್ನು ಕಲಿಸುವ ಶಾಲೆಯು ತೆರೆಯಲ್ಪಡುವದು

ಕತ್ತದ ಹುರಿಗಳನ್ನು ಮಾಡುವದನ್ನು ಕಲಿಯುವ ವಿದ್ಯಾರ್ಥಿಗಳಿಗೆ ದಿನ ಒಂದರ ರೂ ೦—೧—೬ ಯಂತೆಯೂ ಇತರ ವ್ಯವಸಾಯಗಳನ್ನು ಕಲಿಯುವವರಿಗೆ ದಿನ ಒಂದರ ರೂ ೦—೪—೦ ಯಂತೆಯೂ ವೇತನವು ಕೊಡಲಾಗುವದು ಕತ್ತದ ವ್ಯವಸಾಯದ ವರ್ಗಗಳು ಹೊನ್ನಾವರ ತಾಲೂಕಿನ ಹಳ್ಳಿಗಳಿಗೆ ಕ್ರಮೇಣ ವರ್ಗಾಯಿಸಲ್ಪಡುವವು ಸೇರಲಿಚ್ಛಿಸುವವರು ತಾ ೧೩—೧೧—೩೮ರ ಒಳಗಾಗಿ ಕೆಳಗೆ ಸಹಿ ಮಾಡಿದವರಲ್ಲಿ ತಮ್ಮ ಅರ್ಜಿಗಳನ್ನು ಕಳುಹಿಸಬೇಕು ಕುಮಟೆಯಲ್ಲಿ ತೆರೆಯುವ ಶಾಲೆಯ ಬಗ್ಗೆ ಅರ್ಜಿಗಳನ್ನು ಪ್ರೆಸಿಡೆಂಟ, ತಾಲೂಕ ಕೊಂಗ್ರೆಸ ಕಮಿಟಿ, ಕುಮಟಾ ಇವರಲ್ಲಿಯೂ ಕಳಿಸಬಹುದು

ಹೊನ್ನಾವರ,
ತಾ ೧—೧೧—೧೯೩೮

S. K. KALLAPUR.
ಹೊನ್ನಾವರ.

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ ಅಪಸ್ಮಾರ, ಕುಷ್ಟ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೆ ಸಿದ್ಧವಾಗಿರುವವು

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಕ - **ಕೇ. ರಾಮ ಪಂಡಿತ, ಪೋ ಕುಮಟಾ. ಜಿ ಉ ಕಾನಡಾ**

ಗನುಸಾರವಾಗಿ ಅದನ್ನು ಮಾಪ ಡಿಸಲು ಬಿಟ್ಟಿಲ್ಲ ದೊರಗಳ ಅಧ್ಯಕ್ಷತೆಯಲ್ಲಿ ಹಿಂದುಸ್ಥಾನ ಸರಕಾರವು ಒಂದು ಚೌಕಶಿ ಮಂಡಳವನ್ನು ನೇಮಿಸಿದೆ ಈ ಮಂಡಳದ ಸಭಾಸದರೆಲ್ಲರೂ ಯುರೋಪಿಯನ್‌ರೇ। ಆದರಿಂದ ಹಿಂದೀಯರು ಈ ಮಂಡಳವನ್ನು ಬಹಿಷ್ಕರಿಸಬೇಕೆಂದು ನಿರ್ಣಯವಾದಂತೆ ಪರಿಷ್ಕೃತ ಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ|| ಭುಲಾಭಾಯಿ ದೇಸಾಯಿಯವರೂ ಶ್ರೀ|| ಸತ್ಯಮೂರ್ತಿಗಳವರೂ ಸಾಕ್ಷಿ ನೀಡಲು ಮಂಡಳದವರು ಕೊಟ್ಟ ನಿಮಂತ್ರಣೆಯನ್ನು ನಿರಾಕರಿಸಿದ್ದಾರೆ ಕೊಂಗ್ರೆಸ ರಾಷ್ಟ್ರೀಯ ಪಕ್ಷದ ನಾಯಕರಾದ ಶ್ರೀ|| ಮಾಧವರಾವ ಅಣೇಯವರಿಗೂ ಮಂಡಳದಿಂದ ನಿಮಂತ್ರಣೆಯಾಗಿತ್ತು ತಾವು ಈ ನಿಮಂತ್ರಣೆಯನ್ನು ಸ್ವೀಕರಿಸಬೇಕೋ ನಿರಾಕರಿಸಬೇಕೋ? ಎಂಬುದರ ಕುರಿತ ಅಭಿಪ್ರಾಯ ಕೊಡಲು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ|| ಸುಭಾಷಚಂದ್ರ ಬೋಸರವರ ಕಡೆ ಅವರು ಕೇಳಿಕೊಂಡಿಕೊಂಡಿದ್ದಾರೆ ಶ್ರೀ|| ಮಾಧವರಾವ ಅಣೇಯವರು ಬಹುತರವಾಗಿ ಸಾಕ್ಷಿ ಕೊಡ ನಿರಾಕರಿಸುವರೆಂದು ತಿಳಿಯಲಡ್ಡಿಯಿಲ್ಲ

—— ಸಂಸ್ಥಾನಗಳಲ್ಲಿ ಆಂದೋಲನ ನಡೆದಿದೆ ಹೈದರಾಬಾದದೊಳಗೆ ನಿಜಾಮ ಸಾಹೇಬರು ನಾಗರಿಕ ಸ್ವಾತಂತ್ರ್ಯ ಸಂಘವನ್ನೂ ಕೊಂಗ್ರೆಸ ಸಂಸ್ಥೆಯನ್ನೂ ಬೇಕಾಯಿದೇಶೀರ ಸಂಸ್ಥೆಯೆಂದು ಫರ್ಮಾನು ಹೊರಡಿಸಿದ್ದಾರೆ ಫರ್ಮಾನು ಉಲ್ಲಂಘಿಸಿ ಕೊಂಗ್ರೆಸ ಸಂಸ್ಥೆಯವರೂ, ಸ್ವಾತಂತ್ರ್ಯ ಸಂಘದವರೂ ಸತ್ಯಾಗ್ರಹ ಹೂಡಿ ಸೆರೆಮನೆ ಸೇರುತ್ತಿದ್ದಾರೆ ಪುಣೆಯ ಸೇನಾಪತಿ ಬಾಪಟರವರಿಗೆ ಸೆರೆಹಿಡಿದು ನಿಜಾಮ ರಾಜ್ಯದ ಹೊರತಳ್ಳಲಾಯಿತು ಹೈದರಾಬಾದದೊಳಗ ಶ್ರೀ|| ವಾ|| ವಾಮನನಾಯಕರು ನಿತಾಂತ ಲೋಕಸೇವಕರಾಗಿದ್ದರು, ಅವರ ಭಾವಚಿತ್ರದ ಮೆರವಣಿಗೆಯನ್ನು ಅವರ ಪುಣ್ಯತಿಥಿಯ ದಿನ ಹೊರಡಿಸಬಾರದೆಂದು ನಿಜಾಮ ಸರಕಾರದ ಫರ್ಮಾನು ಅದನ್ನು ಮುರಿದು ಮೆರವಣಿಗೆ ಹೊರಟಿತು ಅನೇಕರಿಗೆ ಸರಕಾರವು ಸೆರೆಹಿಡಿಯಿತು, ಪುನಃ ಮೆರವಣಿಗೆಯಾಗಿ ಪುನಃ ಜನರು ಸೆರೆ ಹೋದರು ಆರ್ಯಸಮಾಜದವರೂ ಸತ್ಯಾಗ್ರಹದಲ್ಲಿ ಸೇರಿದ್ದಾರೆ ಹರಿದ್ವಾರದೊಳಗಿನ ಗುರುಕುಲದಿಂದ ವಿದ್ಯಾರ್ಥಿಗಳು ಸತ್ಯಾಗ್ರಹಕ್ಕಾಗಿ ಹೈದರಾಬಾದಕ್ಕಾಗಿ ಹೋಗುವವರಿದ್ದಾರೆ ಸೇ|| ಬಾಪಟರು ನೂರಾರು ಸತ್ಯಾಗ್ರಹಿ ಸ್ವಯಂಸೇವಕರೊಡನೆ ಪುನಃ ಹೈದರಾಬಾದಕ್ಕೆ ಹೋಗುವರು ರಾಜಕೋಟ ಸಂಸ್ಥಾನದಲ್ಲಿಯೂ ಇದೇ ಪ್ರಕಾರ ಲೋಕಪಕ್ಷಕ್ಕೂ ನಿರಂಕುಶ ಠಾಕೂರ ಸಾಹೇಬರಿಗೂ ಹೋರಾಟ ನಡೆದಿದೆ ರಾಜಕೋಟದೊಳಗೆ ಕಳೆದ ೭ ವರ್ಷಗಳಿಂದ ಲೋಕಕಂಟಕ ರಾಜ್ಯಭಾರ ನಡೆದಿದೆ ಇತ್ತಲಾಗಿ ಅದು ವಿಕೋಪಕ್ಕೆ ಮುಟ್ಟಿತು ಇದಕ್ಕೆಲ್ಲ ದರಬಾರ ವೀರವಾಲಾರವರೇ ಕಾರಣರೆಂದು ಲೋಕಪಕ್ಷದ ಆರೋಪ ಹಿಂದುಸ್ಥಾನ ಸರಕಾರವು ಸರ್ ಪೆಟ್ರಿಕ್ ಕೆಡೆಲ್‌ರವರನ್ನು ದಿವಾಣರಾಗಿ ನೇಮಿಸಿತು ಅವರಿಗೆ ದಿವಾಣರಾಗಿ ಮನ್ನಿಸವದಿಲ್ಲವಾಗಿಯೂ ತಮ್ಮ ದಿವಾಣರಾದ ದರಬಾರ ವೀರವಾಲಾರವರಿಗೆ ಪದಚ್ಯುತಿ ಮಾಡುವದಿಲ್ಲವಾಗಿಯೂ ಠಾಕೂರ ಸಾಹೇಬರು ಹೇಳಿ ಸರ್ ಪೆಟ್ರಿಕ್ ಕೆಡೆಲ್‌ರವರು ದಿವಾಣರಲ್ಲವಾಗಿ ಹುಕುಮು ಹೊರಡಿಸಿದರು ಆದರಿಂದ ಹಿಂದುಸ್ಥಾನ ಸರಕಾರವು ದರಬಾರ ವೀರವಾಲಾರವರಿಗೆ ರಾಜಕೋಟ ಸಂಸ್ಥಾನದಿಂದ ಹದ್ದುಪಾರು ಮಾಡಿತು, ಆದಾಗ್ಯೂ ಠಾಕೂರ ಸಾಹೇಬರು ಮೆತ್ತಗಾಗಲಿಲ್ಲ ಠಾಕೂರ ಸಾಹೇಬರಿಗೆ ಪದಚ್ಯುತಿ ಮಾಡಿದರೆ ಲೋಕಪಕ್ಷವು ಪ್ರಬಲವಾಗುವದೆಂದು ಹಿಂದುಸ್ಥಾನ ಸರಕಾರವು ಬೆದರಿತು ಆದರಿಂದ ಠಾಕೂರ ಸಾಹೇಬರೊಡನೆ ಹಿಂದುಸ್ಥಾನ ಸರಕಾರವು ಒಡಂಬಡಿಕೆ ಮಾಡಿಕೊಂಡು ರಾಜಕೋಟ ಸಂಸ್ಥಾನದ ಆಡಳಿತೆಯ ಬಗ್ಗೆ ಒಂದು ಆಡಳಿತ ಮಂಡಳವನ್ನು ನೇಮಿಸಿದೆ ಈ ಮಂಡಳದಲ್ಲಿ ಠಾಕೂರ ಸಾಹೇಬರಿದ್ದಾರೆ ಸರ್ ಪೆಟ್ರಿಕ್ ಕೆಡೆಲ್‌ರವರೂ ಇದ್ದಾರೆ ದರಬಾರ ವೀರವಾಲಾರವರ ತಪ್ಪು ಇಷಮುಗಾ ಇವೆ ಇವರು ಲೋಕಪ್ರಮುಖರನ್ನು ಕರಿಸಿಕೊಂಡು ಅವರ ದೂರುಗಳನ್ನು ಪರಿಹರಿಸುವ ಆಲೋಚನೆ ಮಾಡುತ್ತಿದ್ದಾರೆ ಮೇವಾಡದೊಳಗಿನ ಸಂಧದ್ವಾರದಲ್ಲಿಯೂ ಪ್ರಜಾಮಂಡಳದವರು ಸಂಸ್ಥಾನಿಕರ ಲೋಕಕಂಟಕ ಆಡಳಿತೆಯನ್ನು ಸ್ಥಿರಿಸಲಾರದೆ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ ಇವರ ಮೇಲೆ ಪ್ರತಿಪಕ್ಷ ಮಾಡುವದಕ್ಕಾಗಿ ಉದಯಪುರದ ಮಹಾರಾಜರು ೨೦೦ ಮಂದಿ ಸೈನಿಕರ ಸೈನ್ಯಪಥಕವನ್ನು ಕಳಿಸಿದ್ದರು ಜನಸಂದಣಿಯ ಮೇಲೆ ಗುಂಡು ಹಾರಿಸಬೇಕೆಂದು ಮೆಜಿಸ್ಟ್ರೇಟರ ಅಪ್ಪಣೆಯಾಯಿತು ಸೈನ್ಯಾಧಿಕಾರಿಗಳು ಗುಂಡು ಹಾರಿಸಲೊಪ್ಪಲಿಲ್ಲ, ಆದರಿಂದ ಸೈನ್ಯಾಧಿಕಾರಿಗೆ ಸಪೆಂಡ ಮಾಡಲಾಗಿದೆ ಈ ಪ್ರಕಾರ ಲೋಕಶಾಹಿಗೂ ನಿರಂಕುಶ ಪ್ರಭುತ್ವಕ್ಕೂ ಈಗ ಅಲ್ಲಲ್ಲಿ ಹೋರಾಟ ನಡೆಯುತ್ತದೆ ಸಂಸ್ಥಾನಿಕರು ಬದಲಿದ ಮನ್ವಂತರವನ್ನು ನೆನಿಸಿ ತಮ್ಮ ವರ್ತನದಲ್ಲಿ ತಿದ್ದುಪಾಟ ಮಾಡಿದರೆ ಅವರಿಗೂ ಕ್ಷೇಮ, ಪ್ರಜೆಗಳಿಗೂ ಸುಖ!

ಚಕ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಕೈ-ಕಾಲು ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?



ಅಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಪಿ ಎನ್ ಶ್ರೀನಿವಾಸರಾವ್,
ಲಿವ್ಹರ್ ಸ್ಪೆಶಲಿಸ್ಟ,
ಎಂ ಪಿ ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ಸಿಕ್ಕುವದು

ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ, ಶಿರ್ಸಿ

ಬನ್ನಿರಿ ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಊಟಕ್ಕೂ ಫಳಹಾರಕ್ಕೂ, ಇತರ ಉಪಹಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚಿಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ॐ

'दशमूलारिष्ट.'
'ದಶಮೂಲಾರಿಷ್ಟ'

ಇದು ಒಂದು ತರವಾಗಿ ಎಲ್ಲ ಆಯುರ್ವೇದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡು ಬರುವದಿಲ್ಲ. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲಿಕ್ಕೆ ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ರೋಗ ನಾಶಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ

ಅಜೀರ್ಣ ಅರುಚಿ, ಕೆಮ್ಮು, ದಮ್ಮು ಗುಲ್ಮ, (ವಾತ, ಕ್ಷಯ, ವಾಂತಿ) ಕಾಮಿಲಿ, ಪಾಂಡರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಕಟಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ಸಂಧಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವ ಮುಂತಾದ ರೋಗಗಳಿಗೆ ಉತ್ಕೃಷ್ಟವಾಗಿ ಉಪಯೋಗಿಸುತ್ತದೆ

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೫ ದಿನಗಳವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಸದಾರೋಗ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡತಕ್ಕದ್ದು

೧೬ ಔನ್ಸ ಬಾಟ್ಲಿ ಕಿಮ್ಮತ್ತು ೧—೮—೦
„ ಬಾಟ್ಲಿ ... ೭ ... —೦
„ ಬಾಟ್ಲಿ ... ... —೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕುಷ್ಮಾಂಡಾವಲೇಹ, ಮೃದ್ವೀಕಾದ ದ್ರಾಕ್ಷಾರಿಷ್ಟ, ಕುಮಾರಿ ಆಸವ, ಚಿಂಚಾ...ಸವ, ಲೋಹಾಸವ, ಅಶೋಕಾರಿಷ್ಟ, ಚಂದನಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ. ಕನ್ನಡ)

ಶ್ರೀ ಧೂತಪಾಪೇಶ್ವರ ಔಷಧಿ ಕಾರಖಾನೆ

ಪನವೇಲ — TRADE MARK — ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿಯೂ ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ
ABHRALOHA

ದೊರೆಯುವ ಸ್ಥಳ — ಕಾರವಾರ — ಮೆಸರ್ಸ ... — ಕಸಬೇಕರ ಬ್ರದರ್ಸ ಅಂಕೋಲಾ ದಿ ಸ್ಟೇಶನರಿ ಡಿಪೋ ॥ ಕುಮಟಾ ದೇವಪ್ಪ ಅಯ್ಯನಾಯ್ಕ ॥ ಹೊನ್ನಾವರ ಕಲ್ಯಾಣಪುರ ಬ್ರದರ್ಸ

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಹಂಚಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D K Nayak Bros
K. N Nayak.
Honavar Agent -
R V. Prabhu

K. Padmanabha Rao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಿಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಿಯ



ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳ, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಿಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ತೇಜಸ್ಸನ್ನೂ ಕೊಡುತ್ತದೆ ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಮಾಡಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಜನಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಗಾಗಿ ಪುಕ್ಕಟೆ ಕಳಿಸಲಾರೆವು ಒಟ್ಟಿ ಒಂದಕ್ಕೆ ಕ್ರಯರೂ ೦-೧-೦ ಸ್ಟಾಂಪು ಉಳಿಗ ಡಜನ್ ೧ಕ್ಕೆ ರೂ ೨-೮-೦ ವಿ ಪಿ ೦-೫-೦

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ರೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦, ಪಾರ್ಕಟೌನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ " ಸ್ಟಾರ ಆಫ್ ಕೆನರಾ ಪ್ರೆಸ್ಸಿ "ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. Monday, 14th November, 1938.

ವರ್ಷ ೨೧

ಕಾನಡಾವೃತ್ತ

ಸಂಚಿಕೆ ೧೯

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪೈಕಾ ಟೈಪಿನ (೧೨ ಎಮ್ ರುಂದ)
೮ ಸಾಲುಗಳವರೆಗೆ ರೂ 1-0-0
೮ ನಂತ್ರ ಪ್ರತಿಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ಹಿಡಿದಿರುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೪ ಮಾಹೆ ನವಂಬರ ಸನ್ ೧೯೩೮ನೇ ಇಸವಿ.)-

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital *In order that the depositors' money* should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd: 1906

RESOURCES
OVER A CRORE.

CANARA BANK,
LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:- ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938.

The Agricultural & Industrial Bank, Ltd.

ಜಿಲ್ಲಾ ಸಮಾಚಾರ.

(ಕಳೆದ ವಾರದ್ದು)

ಅಂಕೋಲಾ— ([illegible]) ಕಳೆದ ಮಂಗಳವಾರ ಬುಧವಾರ ಇಲ್ಲಿ [illegible] ಮದ್ಯ ಪ್ರತಿಬಂಧಕ ಸಮಿತಿ, [illegible] ಸಮಿತಿ (ಸಿವಿಲ್ ಬೋರ್ಡ) ಮತ್ತು ಜಿಲ್ಲಾ [illegible] ಕಮಿಟಿಯ ಕಾರ್ಯಕಾರಿ ಮಂಡಳಿ ಇವುಗಳ ಸಭೆಗಳು ಅನೇಕ ಮಹತ್ವದ್ದುಳ್ಳ ಸಂಗತಿಗಳ ವಿಚಾರ ನಡೆಯಿತು. ಸಭೆಗಳಲ್ಲಿ [illegible] — ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶ ಕೊಡದೆ — ನಡೆದಿದ್ದರೂ ಅವರ ವಿಶ್ವಸನೀಯ [illegible] ಮುಖಾಂತರ ದೊರೆತ ಮಾಹಿತಿ ಈ ಕೆಳಗೆ ಕೊಟ್ಟಿರುತ್ತದೆ.

ಮದ್ಯಪಾನ ಪ್ರತಿಬಂಧಕ ಸಮಿತಿಗೆ [illegible] ಮತ್ತು ಗೋಪಾಳ ನಾಯಕ [illegible] ಸದಸ್ಯರು ಬಂದಿದ್ದರು. [illegible] ಇಡೀ ಜಿಲ್ಲೆಯಲ್ಲಿ ಮದ್ಯನಿರೋಧನ ಜಾರಿಯಲ್ಲಿ ಬರುವಂತೆ ಯುಕ್ತಿಸಬೇಕೆಂದು ನಿರ್ಣಯವಾಯಿತು. [illegible] ಸಮಿತಿ (ಸಿವಿಲ್ ಬೋರ್ಡ)ಗೆ ರಾ. ಕಡವೆ ರಾಮಕೃಷ್ಣ ಹೆಗಡೆಯವರು ಅಧ್ಯಕ್ಷರಾಗಿಯೂ ಜಿಲ್ಲಾ ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಸಮಿತಿಯು ತುರ್ತಕ್ಕೆ ಜಿಲ್ಲಾ ಲೋಕಲ ಬೋರ್ಡಿನ ಚುನಾವಣೆಯಲ್ಲಿಷ್ಟೇ ಕೈಹಾಕುವದು. ಚುನಾವಣೆಯ [illegible] ಗಳು ಸಿದ್ಧವಾಗಿವೆ. ಚುನಾವಣೆಗೆ ನಿಲ್ಲುವ ಉಮೇದವಾರರುಗಳು ಪೂರ್ಣ ಖಾದಿ-ಧಾರಿಗಳು ಇರಬೇಕಂತೆ. [illegible] ಯ ಮೆಂಬರ ಉಮೇದವಾರಗಳೇ ನೋಡಿಕೊಳ್ಳಬೇಕು. ಅವರು ಜಿಲ್ಲಾ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳದಲ್ಲಿರಬಾರದು. ಈ [illegible] ಕಾರ್ಯಕಾರಿಗಳು [illegible] ಬೋರ್ಡಿನ ಚುನಾವಣೆಗೆ ನಿಲ್ಲಬಾರದಂತೆ.

ಕಾರ್ಯಕಾರಿ ಮಂಡಳದಲ್ಲಿ ಟಿಸಪ್ಪ ವೀಲು [illegible] ಶಿಕ್ಷಣಪ್ರಸಾರ, ಕಾಂಗ್ರೆಸ ಕಮಿಟಿಗಳಿಲ್ಲದಲ್ಲಿ ಕಮಿಟಿಗಳ ಘಟನೆ ಮುಂತಾದ ವಿಷಯಗಳ ಚರ್ಚೆಯಾಯಿತು. ಜೊತೆಗೆ ಅಂಕೋಲಾ ತಾಲೂಕ ಹೊಸ ಕಮಿಟಿಯ ಲೆಕ್ಕದ ಪ್ರಶ್ನೆ ಬಂತು. ರಾ. ಹೊನ್ನೆಯವರು ರಾ. ರಾಮರಾವ ದೇಶಪಾಂಡೆ ಮತ್ತು ರಾ. [illegible] ರಾಮನಾಯ್ಕ ಇವರಿಬ್ಬರ ಕಮಿಟಿಗಳ ಲೆಕ್ಕಗಳನ್ನೂ ತಪಾಸ ಮಾಡಿ ಕೆಲವು ಆಕ್ಷೇಪಗಳನ್ನೆತ್ತಿದ್ದರು. ರಾ. ದೇಶಪಾಂಡೆಯವರ ಕಮಿಟಿ ರದ್ದಾದ ಮೇಲೆ ರಾ. ದೇಶಪಾಂಡೆಯವರು ಆ ಬಗ್ಗೆ ತಕರಾರು ಮಾಡಿ [illegible] ಕೆಲವು ಪತ್ರವ್ಯವಹಾರ ಮಾಡಿದ್ದರು. ಆ ಕುರಿತು [illegible] ಲೆಕ್ಕದಲ್ಲಿ [illegible] ಇದು [illegible] ರಾ. ದೇಶಪಾಂಡೆಯವರು ಅದನ್ನು [illegible] ತ್ತೇವೆಂದು ಒಪ್ಪಿದರು. [illegible] ಚುನಾವಣೆಯ ಬಗ್ಗೆ [illegible] ರಾ. ಹೊನ್ನೆಯವರು ಅದಕ್ಕೆ ಆಕ್ಷೇಪವೆತ್ತಿದ್ದರು. ಆ ಕಾಲದ ಪರಿಸ್ಥಿತಿಯ ದೃಷ್ಟಿಯಿಂದ [illegible] ಜವಾಬ್ದಾರಿಯ [illegible] ಕೊಟ್ಟರು. ಕಾಂಗ್ರೆಸ ಸುವರ್ಣ ಮಹೋತ್ಸವದ ವೆಚ್ಚವು ಕಮಿಟಿಯ [illegible] ತಕರಾರರು ಅಕ್ಷೇಪಿಸಿದ್ದರು. ಕಾಂಗ್ರೆಸ [illegible] ಔದಾಸೀನ್ಯ ಪಟ್ಟಿದ ಆ ಕಾಲದಲ್ಲಿ [illegible] ಕಮಿಟಿಯು [illegible] ವಾಯಿತು. [illegible] ರಾ. [illegible] ರ ಲೆಕ್ಕದಲ್ಲಿ [illegible] ಖರ್ಚ [illegible] ಇದು [illegible]

[illegible] ಸಭೆಗೆ ಹೋದ ಬಗ್ಗೆ ತಗಲಿದ [illegible] ಖರ್ಚ [illegible] ವಿತ್ತದಿಂದ [illegible] ರು ಕಮಿಟಿ [illegible] ಕಮಿಟಿಯಿಂದ ಈ ಖರ್ಚ ವಸೂಲ ಮಾಡಬಹುದಾಗಿ ನಿರ್ಣಯ [illegible] ರು ರಿಲೀಫ ಕಮಿಟಿಗೆ ಬರುವ [illegible] ಅವರ ಪ್ರವಾಸ-ವೆಚ್ಚ ರಿಲೀಫ [illegible] ಕಮಿಟಿ [illegible] ಅವರು ಕೊಟ್ಟಿದ್ದರೆ [illegible] ಮತ್ತು ಅದೆ [illegible] ಖರ್ಚ ಬರೆದ ರೂ. [illegible] ರೂ. ರಾ. ನಾಯ್ಕರು ತುಂಬಬೇಕೆಂದು ಕಮಿಟಿಯವರ [illegible] ವಾಯಿತು. [illegible] ಖರ್ಚ ಬರೆದ ರೂ. [illegible] [illegible] ತೀರ್ಮಾನವಾಯಿತು. [illegible] "ಜಿಲ್ಲಾ ಕಾಂ[illegible]" ಎಂದು [illegible] ರೂ. ಖರ್ಚ ತೋರಿಸಿದ್ದಾರೆ. [illegible] ರು ಅಕ್ಷೇಪವೆತ್ತಿ, "ಈ ಹಣ ಯಾರ ಕಡೆಗೆ [illegible] ತೋರಿಸಿ" ಎಂದು [illegible] ಪ್ರಶ್ನೆ ಮಾಡಿದರಂತೆ. ಯಾರ ಕಡೆಗೆ ಕೊಟ್ಟಿದ್ದೆಂದು [illegible] ಇಟ್ಟರಿಕೆಯಿಲ್ಲ! [illegible] ಮಾಗಿ ಹೋಗಿದೆ. ಈ ಹಣ ಜಿಲ್ಲಾ ಕಮಿಟಿಯ ಕಾರ್ಯಕರ್ತರಿಗೆ ಸಲ್ಲಿಸಿದ ಬಗ್ಗೆ ಪುರಾವೆ ಮಾಡಬೇಕಾಗಿಯೂ ಇಲ್ಲದಿದ್ದರೆ ಅದನ್ನು ತುಂಬಬೇಕಾಗಿಯೂ [illegible] ನಾಯ್ಕರಿಗೆ ತಿಳಿಸಲಾಯಿತು. ೧೯೩೬ನೇ ಇಸವಿ ನವಂಬರದಿಂದ ಚಾಲೂ ವರ್ಷದ ಮೇ ವರೆಗೆ ರಾ. ನಾಯ್ಕರು ಮಾಡಿದ ವೆಚ್ಚ ರೂ. [illegible] ಬಗ್ಗೂ ಅಕ್ಷೇಪವಿತ್ತು. ಅದರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಅನುಸರಿಸಿದ [illegible] ಸ್ವಸ್ತಿ [illegible] ಸ್ವಸ್ತಿ ನೀತಿಯ ಮೂಲಕ ಉಂಟಾದ ಗೊಂದಲದಲ್ಲಿ ಕೈಹಾಕಲು ಕಮಿಟಿಯವರು ಒಪ್ಪಲಿಲ್ಲ. ಆ ಅಕ್ಷೇಪವನ್ನು ಕಣ್ಮರೆ ಮಾಡಿದರು. ರಾ| ಕೃಷ್ಣಾ ಘಾತಪಡೇಕರರಿಗೂ ರಾ| ರಾಮನಾಯ್ಕರಿಗೂ ತಂಟೆಯುಂಟಾದ ರೂ. [illegible] ಪ್ರಕರಣ ಅಂಕೋಲಾ ತಾಲೂಕ ಕಮಿಟಿಯವರು ಆಲೋಚಿಸುತ್ತಿದ್ದುದರಿಂದ ಅದರ ವಿಚಾರ ಮುಂದೂಡಲ್ಪಟ್ಟಿತು. ಇಷ್ಟೆಲ್ಲ ಕೆಲಸ ತೀರಿಸಿ ಕಮಿಟಿಯ ಸಭೆ ವಿಸರ್ಜನೆಯಾಯಿತು.

ಕಳೆದ ಜನವರಿಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳವು ಈ ತಾಲೂಕಿನೊಳಗಿನ ಎಲ್ಲ ಕಮಿಟಿಗಳನ್ನು ರದ್ದು ಮಾಡಿ, ಹೊಸ ಕಮಿಟಿಗಳ ಘಟನೆ ಮಾಡುವದಕ್ಕೆ ಜಿಲ್ಲಾ ಕಮಿಟಿಯವರಿಗೆ ಅಪ್ಪಣೆ ಮಾಡಿತ್ತಷ್ಟೇ. ಈ ರದ್ದಾಯತಿಯಿಂದ ರಾ| ರಾಮರಾವ ದೇಶಪಾಂಡೆಯವರ ಅಧ್ಯಕ್ಷತೆಯ ಕೆಳಗೆ ಕೆಲಸ ಮಾಡುತ್ತಿದ್ದ ತಾಲೂಕ ಕಾಂಗ್ರೆಸ ಕಮಿಟಿಯು ಕ್ರಮಬದ್ಧವಿದ್ದಿಲ್ಲೆಂದು ಅನ್ಯಾಯ್ಯ ಆಕ್ಷೇಪ ಮಾಡಿದಂತಾಗುತ್ತದೆಂದು ರಾ| ದೇಶಪಾಂಡೆಯವರು ಪ್ರಾಂತಿಕ ಕಮಿಟಿಯ ಕಡೆ ಹೋಗಿದ್ದರು. ರಾ. ದೇಶಪಾಂಡೆಯವರ ಕಮಿಟಿಯು ಕ್ರಮಬದ್ಧವಿದ್ದಿತಾಗಿ ನೊನ್ನೆ ಪ್ರಾಂತಿಕ ಕಮಿಟಿಯ ನಿರ್ಣಯವಾಗಿದೆ.

ಜಾಹೀರ ನೋಟೀಸು.

ಶಿರೂರ ಮುಕುಂದ ನಾರಾಯಣ ಪ್ರಭು ಸಾ| ಶಿರೂರ ತಾಲೂಕ ಅಂಕೋಲಾ ಈತನು ಈ ಮೂಲಕ ಯಾವತ್ತೂ ಜನರಿಗೆ ಜಾಹೀರ ಮಾಡುವದೇನಂದರೆ —

ಉ. ಕನಡಾ ಜಿಲ್ಹಾ ಭಟಕಳ ಪೇಟಾ ಶಿರಾಲಿ ಗ್ರಾಮದ ಸರ್ವೆ ನಂಬರ ೪೪೪ ಹಿಸ್ಸಾ (ಖರಾಬ ಸಹಿತ) ಎಕರೆ ೪—೩೩—೦ ಆಕಾರ ರೂ. ೩—೧೧—೦ ಈ ಸ್ಥಳವು ಗ್ರಾಮರೆಕಾರ್ಡಿನಲ್ಲಿ ಶ್ರೀನಿವಾಸ ನಾರಾಯಣ ಪ್ರಭು ನನಾರ ಸಾ| ಭಟಕಳ ಇವರ ಖಾತೆಯಲ್ಲಿರುತ್ತಿದ್ದಾಗ್ಯೂ ಅದರ ನಿಜವಾದ ಮಾಲ್ಕಿ ಹಕ್ಕು ನಮ್ಮ ಕುಟುಂಬದ್ದಾಗಿರುತ್ತದೆ. ಸದರಿ ಸ್ಥಳದ ಮೂಲಗೇಣಿ ಹಕ್ಕನ್ನ ನಮ್ಮ ಹಿರಿಯರು ಕೊಂಡುಕೊಂಡ ಮೇಲೆ ಅದರ ಮಾಲ್ಕಿ ಹಕ್ಕನ್ನು ಸಹ ನಮ್ಮ ಬಗ್ಗೆ ಕೊಂಡುಕೊಳ್ಳುವರೆ ಸದರಿ ಶ್ರೀನಿವಾಸ ಪ್ರಭುರವರ ಅಣ್ಣ ಹಾಗೂ ಅವಿಭಕ್ತ ಕುಟುಂಬದ ಆ ಕಾಲದ ಮಾನೇಜರಾದ ದಾಸಾ ನಾರಾಯಣ ಪ್ರಭುರವರಿಗೆ ಹೇಳಿ ಆ ಬಗ್ಗೆ ಹಣ ಸಹ ಪೂರೈಸಿದಂತೆ, ಸದರಿ ದಾಸ ಪ್ರಭುರವರು ೧೯೦೨ನೇ ಇಸವಿ ನವಂಬರದಲ್ಲಿ ೩ ಮತ್ತು ೧೯೦೪ರಲ್ಲಿ ೩ ಹೀಗೆ ೬ ಮಾಲ್ಕಿ ಹಕ್ಕನ್ನು ನಮ್ಮ ಬಗ್ಗೆ ನಮ್ಮ ಬಿನಾಮಿದಾರರಾಗಿ ಕ್ರಯಕ್ಕೆ ಪಡಕೊಂಡಿದ್ದಾಗಿರುತ್ತದೆ. ಇನ್ನುಳಿದ ೩ ಮಾಲ್ಕಿ ಹಕ್ಕನ್ನು ಕೊಂಡುಕೊಳ್ಳುವರೆ ನಮ್ಮ ಹಿರಿಯರ ಸದರಿ ದಾಸ ಪ್ರಭುರಿಗೆ ಹಣ ಪೂರೈಸಿದ್ದುಂಟು. ಈ ಹಾಡೀ ಸ್ಥಳ ರೆಕಾರ್ಡಿನಲ್ಲಿ ನವಗೆ ಮೂಲಗೇಣಿಗಿರುತ್ತದೆಂದು ತೋರುತ್ತಿದ್ದಾಗ್ಯೂ ನಾವು ಆ ಸ್ಥಳವನ್ನು ಮಾಲೀಕರಂತೆ ಅನುಭವಿಸುತ್ತಾ ಬಂದಿರುತ್ತೇವೆ. ಹೊರತು ದಾಸಪ್ರಭುರಿಗಾಗಲಿ ಅವರ ತರುವಾಯ ಕುಟುಂಬದಾರರಾದ ಶ್ರೀನಿವಾಸ ನಾರಾಯಣ ಪ್ರಭುರಿಗಾಗಲಿ ಅವರ ಕುಟುಂಬದವರಿಗಾಗಲಿ ನಾವು ಎಂದೂ ಗೇಣಿಯಾ ಉತ್ಪನ್ನ ಕೊಟ್ಟಿದ್ದಿರುವದಿಲ್ಲ. ಅವರಿಗೆ ಈ ಸ್ಥಳದಲ್ಲಿ ಏನೂ ಹಕ್ಕು ಇದ್ದಿಲ್ಲ ಮತ್ತು ಇರುವದಿಲ್ಲ. ಕಾರಣ ಯಾರೂ ಈ ಸ್ಥಳದಲ್ಲಿ ಸದರಿ ಶ್ರೀನಿವಾಸ ಪ್ರಭುರವರ ಮಕ್ಕಳಿಗಾಗಲಿ ಕುಟುಂಬದವರಿಗಾಗಲಿ ಹಕ್ಕುಂಟೆಂದು ಭಾವಿಸಿ, ಅವರ ಕಡೆಯಿಂದ ಇಲ್ಲವೆ ಪರವಾಗಿ ಕ್ರಯ, ಆಡವು, ದಾನ ವಗೈರೆ ರೀತಿಯಿಂದ ಹಕ್ಕು ಮಾಡಿಕೊಂಡಲ್ಲಿ ಅಂಥ ಪರಾಧೀನತೆಯಿಂದ ನಮ್ಮ ಹಕ್ಕಿಗೆ ಯಾವದೇ ತರದಿಂದ ಬಾಧೆ ಬರಲಾರದು. ಇಂಥ ಪರಾಧೀನತೆ ಮಾಡಿಕೊಳ್ಳುವ ಜನರು ನಮ್ಮ ಮೇಲೆ ಗೇಣಿಯ ಬಗ್ಗೆಂತ ಅಥವಾ ಬೇರೆ ಯಾವದೇ ಕಾರಣದಿಂದ ದಾವೆ ವಗೈರೆ ಮಾಡಿದ್ದಲ್ಲಿ ನಮ್ಮ ಖರ್ಚ ಅವರು ತೆರಲಿಕ್ಕೆ ಜಬಾಬದಾರರಾಗಿರುವರು. ಸಾರ್ವಜನಿಕರ ಮಾಹಿತಿ ಬಗ್ಗೆ ಈ ಮುಂಜಾಗ್ರತೆ ಕೊಟ್ಟಿರುತ್ತೇನೆ.

ಕುಮಟಾ, ತಾ. ೧೩—೧೧—೩೭

M. N. Prabhu, Siroorkar

25,000 ವಿವಿಧ ಶಬ್ದಗಳುಳ್ಳ "ಹೊಸ ನಿಘಂಟು"

ಸ್ಟುಡಂಟ್ಸ ಮೊಡರ್ನ ಪ್ರೆಕ್ಟಿಕಲ್ ಡಿಕ್ಸನರಿ.

ಇಂಗ್ಲಿಷ ಕನ್ನಡ

ಬರೆದವರು - ವೈಷ್ಣವ ಭಾನು ದಿ. ಕೆ. ಭಾರದ್ವಾಜ ವಿದ್ಯಾಭೂಷಣ. ಮೈಸೂರ ಯುನಿವರ್ಸಿಟಿ ವ್ಹಾಯಿಸ ಚಾನ್ಸಲರರೆ ಮುನ್ನುಡಿಯುಳ್ಳ, ಸರ್ ಎಮ್. ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ. [illegible] ರಾಮರಾಯರು ಪರಿಸಿದ ಈ ಡಿಕ್ಸನರಿಯು ಇಡೀ ಕರ್ನಾಟಕದಲ್ಲಿ ಹೊಸ [illegible] ಪ್ರತಿಯೊಬ್ಬರು ಅವಶ್ಯ [illegible] ಸತಕ್ಕಂಥಾದ್ದು. ಬೆಲೆ ಕೇವಲ ೩ ರೂ. ಟಪಾಲ ಪ್ರತ್ಯೇಕ. [illegible] ಸ್ಥಳ: ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ವಾರ್ತೆಗಳು.

— ತ್ರಾವಣಕೋರ ನಶನಲ್ ಬೇಂಕಿನ ಡೈರೆಕ್ಟರರನ್ನು ತ್ರಾವಣಕೋರಿಗೆ ಕಳಸಹೋದಾಗ ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಸೆರೆಹಿಡಿದದ್ದರ ವಿರುದ್ಧ ಮದ್ರಾಸ ಹೈಕೋರ್ಟಿನಲ್ಲಿ ದಾಖಲು ಮಾಡಿದ ಅರ್ಜಿಯ ವಿಚಾರವು ಮುಖ್ಯ ನ್ಯಾಯಾಧೀಶರ ಅಪ್ಪಣೆಯ ಮೇರೆಗೆ ನ್ಯಾ| ಮೂ| ಬರ್ನ ಮತ್ತು ಸ್ಟೋಡಾರ್ಟ ರವರ ಕೋರ್ಟಿನಲ್ಲಿ ವಿಚಾರವಾಗಿ ನ್ಯಾ| ಮೂ|ಗಳು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಅರ್ಜಿಯಲ್ಲಿ ಪ್ರತಿಪಾದಿಸಿಕೊಂಡಂತೆ, ತ್ರಾವಣಕೋರ ಸಂಸ್ಥಾನದ ಅಪೇಕ್ಷೆಯ ಮೇರೆಗೆ ಸೆರೆಹಿಡಿದವರನ್ನು ಬಿಡುಗಡೆ ಮಾಡಲಿಕ್ಕೆ ಹೈಕೋರ್ಟಿಗೆ ಅಧಿಕಾರವಿಲ್ಲವಾಗಿ ನ್ಯಾ| ಮೂ|ಗಳು ತೀರ್ಮಾನಿಸಿದ್ದರೆ ಮದ್ರಾಸ ಹೈಕೋರ್ಟಿನ ಫುಲ್ಲ ಬೆಂಚಿನ ನಿರ್ಣಯದ ವಿರುದ್ಧ ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡುವ ದೆಸೆಯಿಂದ ಸೊಲಿಸಿಟರರೊಡನೆ ತಂತಿಯಿಂದ ಪತ್ರವ್ಯವಹಾರ ನಡೆದಿರುವದಾಗಿಯೂ ಸ್ವಲ್ಪ ಅವಧಿ ಕೊಡಬೇಕಾಗಿಯೂ ಅರ್ಜಿದಾರರ ವಕೀಲರು ನ್ಯಾ| ಮೂ| ಬರ್ನ ಮತ್ತು ಸ್ಟೋಡಾರ್ಟರವರ ಕಡೆ ಅಂಕೆ ಮಾಡಿಕೊಂಡರು. ಅವಧಿ ಕೊಡಬರುವದಿಲ್ಲವಾಗಿ ನ್ಯಾ| ಮೂ| ಬರ್ನರವರು ಅಪ್ಪಣೆ ಮಾಡಿದ ಬಳಿಕ, ರೀತಿಯಂತೆ ವಿಚಾರ ನಡೆದು ಅರ್ಜಿ ತಿರಸ್ಕರಿಸಲ್ಪಟ್ಟಿದೆ ಈಗ ಡೈರೆಕ್ಟರರಿಗೆ ತ್ರಾವಣಕೋರಿಗೆ ಒಯ್ಯುವರು

— ತ್ರಾವಣಕೋರಿನೊಳಗೆ ಕೊಂಗ್ರೆಸ ಚಳವಳಿಯನ್ನು ಮುರಿಯುವದಕ್ಕಾಗಿ ದಿವಾಣರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರರವರು ನಡಿಸಿದ ಸಕಲ ಪ್ರಯುಕ್ತಿಗಳು ನಿಷ್ಫಲವಾಗಿ ಸತ್ಯಾಗ್ರಹಕ್ಕೆ ಉಗ್ರ ರೂಪ ಬರುತ್ತಿದೆ, ಆದರಿಂದ ದಿವಾಣರಿಗೆ ಯಾವ ಪ್ರಕಾರ ವಿಲ್ಹೇವಾರಿ ಮಾಡಬೇಕೆಂದು ತಿಳಿಯುವದಿಲ್ಲ. ಮಹಾತ್ಮರು ತ್ರಾವಣಕೋರದೊಳಗಿನ ದಬ್ಬಾಳಿಕೆಯನ್ನು ನಿಷೇಧಿಸಿ ರಾಷ್ಟ್ರೀಯ ಸಭೆಯವರಿಗೆ ಪುರಸ್ಕಾರ ಮಾಡಿದಂದಿನಿಂದ ಸಂಸ್ಥಾನಿಕರಿಗೆ ಸಂಕಟವಾಗಿದೆ ಅವರಿಗಿರುವ ಮಹಾತ್ಮರ ಬೆಂಬಲವನ್ನು ಪರಿಹರಿಸುವದಕ್ಕಾಗಿ ದಿವಾಣರ ಕಾರ್ಯದರ್ಶಿಗಳಾದ ರಾ| ಚಿದಂಬರಂರವರು ಸದ್ಯಕ್ಕೆ ಉತ್ತರ ಹಿಂದುಸ್ಥಾನಕ್ಕೆ ಗೌಪ್ಯದಿಂದ ತೆರಳಿದ್ದಾರೆ. ಅದೇ ಉದ್ದೇಶದಿಂದ ದಿವಾಣರು ಬುಧವಾರ ಬೆಳಗಿನ ೮ ಘಂಟೆಗೆ ತ್ರಿವೇಂದ್ರಮ್‌ದಿಂದ ಹೊರಟು ವಿಮಾನಾರೂಢರಾಗಿ ಅದೇ ದಿನ ಅಪರಾನ್ಹ ೩| ಘಂಟೆಗೆ ಮುಂಬಯಿಗೆ ತಲ್ಪಿದರು. ರಾಷ್ಟ್ರೀಯ ಸಭೆಯವರೊಡನೆ ಗುಪ್ತವಾಗಿ ಸಂಧಾನ ನಡಿಸಿ ಸಂಸ್ಥಾನದೊಳಗಿನ ಕೊಂಗ್ರೆಸ ಕಾರ್ಯಕರ್ತರ ನಿಂದೆ ಮಾಡಿ ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುವ ಆಲೋಚನೆಯ ಕ್ಲಿಷ್ಟರಾಗಿ ತಿಳಿಯುತ್ತದೆ ಆದರೆ, ಸಂಸ್ಥಾನದೊಳಗಿನ ಕೊಂಗ್ರೆಸ ಕಾರ್ಯಕರ್ತರೊಡನೆ ಮಹಾತ್ಮರು ಆಲೋಚನ ಮಾಡಿದನಕ ತಮ್ಮ ಅಭಿಪ್ರಾಯ ಒದಗಿಸಲಿಕ್ಕಿಲ್ಲವಾಗಿ ತಿಳಿಯಲಿಕ್ಕಿಯಿಲ್ಲ ತ್ರಾವಣಕೋರದೊಳಗೆ ಲೋಕಸತ್ತಾತ್ಮಕ ರಾಜ್ಯಪದ್ಧತಿ ಸ್ಥಾಪನೆಯಾಗುವ ಯೋಗ ಸದ್ಯಕ್ಕೆ ಬಂದಿದೆಯೆಂದು ಬಲ್ಲವರ ಅಂಬೋಣ

— ನಿಜಾಮ ರಾಜ್ಯದಲ್ಲಿಯೂ ಸತ್ಯಾಗ್ರಹ ಭರದಿಂದ ನಡೆದಿದೆ. ಈ ತನಕ ೧೦೫ ಜನರು ಸೆರೆಬಿದ್ದರು. ಇನ್ನೂ ಸತ್ಯಾಗ್ರಹ ನಡೆದಿದೆ, ಸೆರೆಬೀಳುತ್ತಿದ್ದಾರೆ ದಿವಾಣರಾದ ಸರ್ ಅಕಬರ ಹೈದರಿಯವರು ಗುರುವಾರ ಮುಂಬಯಿಗೆ ಹೊರಟರು. ಮುಂಬಯಿಯಲ್ಲಿ ಶೇಟ ಜಮನಾಲಾಲ ಬಜಾಜರವರೊಡನೆ ಆಲೋಚನೆ ಮಾಡಿ ತಂಟೆ ತಕರಾರನ್ನು ಬಗೆಹರಿಸುವ ವಿಚಾರದಿಂದ ಹೊರಟಿದ್ದಾರೆ ಕೊಂ| ಕಾರ್ಯಕಾರಿ ಮಂಡಳದ ಸಭಾಸದರಾದ ಡಾ|| ಪಟ್ಟಾಭಿಸೀತಾರಾಮಯ್ಯನವರಿಗೆ ನಿಜಾಮ ರಾಜ್ಯಕ್ಕೆ ಬಂದು ಸ್ಥಳಕ ಪರಿಸ್ಥಿತಿಯನ್ನು ಸಮಕ್ಷ ನೋಡಿಕೊಂಡು ರಾಜ ಪ್ರಜೆಗಳೊಳಗುಂಟಾದ ವಿತುಷ್ಟವನ್ನು ಪರಿಹರಿಸಬೇಕೆಂದು ನಿಜಾಮ ಸರಕಾರವು ಬಿನ್ನೈಸಿಕೊಂಡಿರುವದಾಗಿ ತಿಳಿಯುತ್ತದೆ ಲೋಕಸತ್ತಾತ್ಮಕ ರಾಜ್ಯ ಸ್ಥಾಪನೆಯಾದನಕ ಈ ಚಳವಳಿ ನಿಲ್ಲದು ಆದರಿಂದ ನಿಜಾಮರಾಜ್ಯದಲ್ಲಿಯೂ ರಾಷ್ಟ್ರೀಯ ಸಭೆಯು ಅಂಬೋಣದಂತೆ ರಾಜ್ಯದಾಡಳಿತಯಲ್ಲಿ ಲೋಕವತ್ತನುವರ್ತಿ ಸುಧಾರಣೆಗಳಾಗುವ ಸುಚಿನ್ಹಗಳಾಗುತ್ತಿವೆ

— ಮುಂಬಯಿ ಎಸಂಬ್ಲಿಯಲ್ಲಿ ಕೂಲಿಕಾರರ ಕಲಹ ನಿವಾರಕ ಕಾನೂನು ಮಂಜೂರಾಗಿರುವದಕ್ಕೇ ಅದನ್ನು ಕೂಲಿಕಾರ ಪಕ್ಷದ ನಾಯಕರೆಂದೆಣಿಸಿಕೊಳ್ಳುವರಾ| ಷುಕಾಬವಾಲಾ, ಜಮುನಾದಾಸ ಮೆಹತಾ ಮೊದಲಾದವರು ವಿರೋಧಿಸಿದರು ಆದಾಗ್ಯೂ ಇವರ ವಿರೋಧ ನಿರರ್ಥಕವಿದ್ದದರಿಂದ ಕಾಯಿದೆ ಮನ್ನಿಸಲ್ಪಟ್ಟಿತು ಆದರಿಂದ ಕೂಲಿಕಾರ ಪ್ರಮುಖರೆಂದು ಹೇಳಿಸಿಕೊಳ್ಳುವವರಿಗೆ ಹೊಸ ಕಾಯಿದೆಯಿಂದ ಮುಂಚಿನಂತೆ ಅನಿರ್ಬಂಧವಾಗಿ ಕೂಲಿಕಾರರಿಗೆ ಮೋಸ ಹಾಕಲು ನಿರ್ಬಂಧವುಂಟಾದ್ದರಿಂದ ಅವರು ರೇಗಿಗದ್ದು ಸೋಮವಾರ ನಿಷೇಧಾರ್ಥವಾಗಿ ಒಂದು ದಿನ ಕೂಲಿಕಾರರೆಲ್ಲರೂ ಸಂಪು ಮಾಡಬೇಕೆಂದ ಸ್ವಯಂಭೂ ಕೂಲಿಕಾರ ಮುಖಂಡರು ಫರ್ಮಾನ ಹೊರಡಿಸಿದರು ಆದರೆ ಅಹಮದಾಬಾದ, ಗೋಕಾಕ, ಚಾಳಿಸಗಾಂವ, ಜಳಗಾಂವ, ಧುಳೆಗಳಲ್ಲಿ ಕೂಲಿಕಾರರು ಸಂಪು ಮಾಡಲಿಲ್ಲ ಕೊಂಗ್ರೆಸ ಸರಕಾರಕ್ಕೇ ಬೆಂಬಲವನ್ನಿತ್ತು ಈ ಕಾಯಿದೆಯನ್ನು ಮನ್ನಿಸಿದರು. ಸೊಲಾಪುರದಲ್ಲಿ ೧೭೦೦೦ ಕೂಲಿಕಾರರಿದ್ದಾರೆ. ಅವರಲ್ಲಿ ೩೦೦೦ ಕೂಲಿಕಾರರು ಮಾತ್ರ ಸಂಪು ಮಾಡಿದ್ದರು ಮುಂಬಯಿಯಲ್ಲಿ ಮಾತ್ರ ಬಹಳ ಗಡಿಬಿಡಿಯಾಯಿತು ಮುಂಬಯಿಯೊಳಗೆ ಕೊಂಗ್ರೆಸ ದ್ವೇಷಿ "ಕೂಲಿಕಾರ ಮುಖಂಡ"ರು ಭಯಂಕರ ಪ್ರಚಾರ ನಡಿಸಿದಾಗ್ಯೂ ೭ ಗಿರಣಿಗಳು ಮಾತ್ರ ಪೂರ್ಣವಾಗಿ ಮುಚ್ಚಿಕೊಂಡಿದ್ದವು. ೫೯ ಗಿರಣಿಗಳು ಕೆಲಸ ಮಾಡುತ್ತಿದ್ದವು. ಉಳಿದ ೮ ಗಿರಣಿಗಳಲ್ಲಿ ೫ ಗಿರಣಿಗಳೊಳಗೆ ಮುನ್ನಾಣ ದಿನ ಸಮಯಕ್ಕೆ ಪಾಳಿ ಕೆಲಸ ಮಾಡಿದ್ದರಿಂದ ರಜೆ ಕೊಡಲಾಗಿತ್ತು. ೩ ಗಿರಣಿಗಳಿಗೆ ಬಂದ ಕೂಲಿಕಾರರ ಸಂಖ್ಯೆ ತೀರ ಕಡಿಮೆಯಿದ್ದದರಿಂದ ಅವನ್ನು ಮುಚ್ಚಬೇಕಾಯಿತು ಸರಾಸರಿ ೮೦ ಸಾವಿರ ಕೂಲಿಕಾರರಲ್ಲಿ ೧೦ ಸಾವಿರ ಕೂಲಿಕಾರರು ಸಂಪು ಮಾಡಿದರೆಂದು ಹೇಳಬಹುದು ಈ ನಮೂನೆಯಿಂದ ತಮ್ಮ ಸಂಪಿನ ಉದ್ಯೋಗವು ನಿರರ್ಥಕವಾಯಿತೆಂದೂ ಕೊಂಗ್ರೆಸ ಸರಕಾರಕ್ಕೇ ಬೆಂಬಲ ದೊರೆಯಿತೆಂದೂ ಹೊಸ ಕಾಯಿದೆಗೆ ಕೂಲಿಕಾರರು ಮಾನ್ಯತೆ ಕೊಟ್ಟಂತಾಗತ್ತದೆಂದೂ ಭಾವಿಸಿ ಕೂಲಿಕಾರ ಪ್ರಮುಖರು ಪೋಲೀಸರ ಮೇಲೂ ಸಂಪಿಗೆ ವಿರೋಧ ಮಾಡುವ ಕೂಲಿಕಾರರ ಮೇಲೂ ಕಲ್ಲುಗಳನ್ನೆಸದು ಪುಂಡಾಟಿಕೆ ನಡಿಸಿದರು ಗಿರಣಿ ಪ್ರದೇಶದೊಳಗೆ ಪರಿಸ್ಥಿತಿಯನ್ನು ಸಮಕ್ಷ ನೋಡಲು ಹೋದ ಸರದಾರ ವಲ್ಲಭಭಾಯಿ ಪಟೇಲ, ಗೃಹಮಂತ್ರಿಗಳಾದ ನ|| ಕನ್ಹಯಾಲಾಲ ಮುನಶಿಯವರ ಮೋಟಾರಿನ ಮೇಲೆ ಕಲ್ಲುಗಳನ್ನೆಸದು ಮೋಟಾರಿನ ಕನ್ನಡಿಯನ್ನೊಡೆದರು ಸರದಾರ ಪಟೇಲರಿಗೂ ನಾ|| ಮುನಶಿಯವರಿಗೂ ಅಪಾಯವಾಗುತ್ತಿತ್ತು, ದುದೈವದಿಂದಲೇ ಅದು ತಪ್ಪಿತು. ಆದರಿಂದ ನಿರುಪಾಯರಾಗಿ ಪೋಲೀಸರು ದೊಣ್ಣೆಯಿಂದ ಹೊಡೆದು ಜನರನ್ನು ಚದರಿಸಬೇಕಾಯಿತು ೭ ಬಾರಿ ಗುಂಡು ಹಾರಿಸುವ ಪ್ರಸಂಗ ಬಂತು ಅಂತು ಪೋಲೀಸರೂ ಜನರೂ ಕೂಡಿ ೭೩ ಜನರು ಘಾಯ ಹೊಂದಿದ್ದಾರೆ, ಒಬ್ಬರು ತೀರಿಕೊಂಡರು. ಘಾಯಗೊಂಡವರಲ್ಲಿ ಜನರಿಗಿಂತ ಪೋಲೀಸರೇ ಹೆಚ್ಚು. ಕೂಲಿಕಾರ-ಪ್ರಮುಖರ ದುಷ್ಟ ಚೇತನೆಯ ಮೇರೆಗೆ ಅಜ್ಞ ಕೂಲಿಕಾರರು ಭಯಂಕರ ಅನಾಚಾರವನ್ನಾಚರಿಸಿದರು, ಹೆಂಗಸರಿಗ ಒತ್ತಲೆ ಮಾಡಿದರು, ಸಾಯಂಕಾಲ ಕೂಲಿಕಾರರ ಮೇಲೆ ಕಲ್ಲೆಸೆಯುವಂತೆ ದುಸ್ಪ್ರೇರಣೆ ಕೊಟ್ಟರು ಮುಂಬಯಿಯಲ್ಲಿ ಬೇರೆ ಬೇರೆ ಪಕ್ಷಗಳ ಬೇರೆ ಬೇರೆ ಪತ್ರಿಕೆಗಳವೆ ಎಲ್ಲವೂ ಕೂಲಿಕಾರ-ಪ್ರಮುಖರ ದುರಾಚಾರಗಳನ್ನು ಹೊರಗೆಡವಿದವು ಡಾ|| ಅಂಬೇಡಕರರು ಕೊಂಕಣಪಟ್ಟಿಯೊಳಗಿಂದ ೩-೪ ಸಾವಿರ ಜನರನ್ನು ಮುಂಬಯಿಗೆ ಒಯ್ದು ಕೂಲಿಕಾರರಿಗೆ ಹೆದರಿಸಿ ಅವರಿಗೆ ಕೆಲಸದ ಮೇಲೆ ಹೋಗದಂತೆ ಅಡ್ಡಗಟ್ಟಿಸಿದರು ಎಲ್ಲಾ ಪತ್ರಿಕೆಗಳು ಕೊಂಗ್ರೆಸ ಸರಕಾರದ ಒಳಸಂಚಿಗೆ ಸೇರಿದವಾಗಿ ಡಾ| ಅಂಬೇಡಕರರ ಆರೋಪ ಮುಂಬಯಿ ಸರಕಾರವು ಸತ್ಯಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಒಂದು ವಿಚಾರ ಮಂಡಳವನ್ನು ನೇಮಿಸಿದೆ ಹೈಕೋರ್ಟ ಜಜ್ಜರಾದ ನ್ಯಾ| ಮೂ| ಕನಿಯಾರವರು ಈ ಮಂಡಳದ ಅಧ್ಯಕ್ಷರು ಬೆರಿಸ್ಟರ ತಾರಾಪುರವಾಲಾ, ಎಮ್ ಸಿ ಛಗ್ಲಾರವರು ಮಂಡಳದ ಸಭಾಸದರು ರಾ|| ಜೈನಾಸಿಯವರು ಕಾರ್ಯದರ್ಶಿಗಳು ಸೋಮವಾರ ತಾ. ೭ನೇಗೆ ಮುಂಬಯಿ

(೧೦ನೇ ಪಾನಿನ ಮೇಲೆ ಮುಂದರಿಸಿದೆ)

ಜಾಹೀರ ನೋಟೀಸು.

ಕಾಮಾಕ್ಷಿ ಕೋಂ ಕೃಷ್ಣ ಭಟ್ಟ ಧೀರನ ಸಾ|| ಕಡೇಕೋಡಿ ತಾಲೂಕ ಕುಮಟಾ ಇವಳು ಈ ಮೂಲಕ ಎಲ್ಲಾ ಜನರಿಗೆ ಜಾಹೀರಪಡಿಸುವದೇನಂದರ — ನನ್ನ ಒಬ್ಬನೇ ಮಗನಾದ ಗಣಪತಿ ಯಾನೆ ಗಣೇಶ ಕೃಷ್ಣ ಭಟ್ಟ ಈತನು ಇತ್ತ ೨ ವರ್ಷಗಳ ಕೆಳಗೆ ಒಮ್ಮೆ ತಲೆ ಕೆಟ್ಟು ಗುಣ ಹೊಂದಿದವನು ಈಗ ಪುನಃ ತಲೆ ಕೆಟ್ಟು ವ್ಯಸನಿ ಜನರ ಸಹವಾಸಕ್ಕೆ ಬಿದ್ದು ಇದ್ದ ಬೆಲೆ ಬಾಳುವ ಆಸ್ತಿಯನ್ನು ಹೀನ ಕ್ರಯಕ್ಕೆ ಪರಾಧೀನಪಡಿಸುವ ವಿಚಾರದಲ್ಲಿದ್ದಾನೆ, ಅಲ್ಲದೆ ನಿತ್ಯೋಪಯೋಗಿ ಕಂಚು ತಾಮ್ರದ ಮನೆಯ ಸಾಮಾನು ಸಹ ಕಂಡಕಂಡಂತೆ ಮಾರತೊಡಗಿದ್ದಾನೆ. ಈ ಆಸ್ತಿಯನ್ನಾಗಲೀ ಮನೆಯ ಸಾಮಾನನ್ನಾಗಲೀ ಯಾವದೇ ಕಾರಣದಿಂದ ಮಾರುವ ಅವಶ್ಯಕತೆ ಇವನಿಗ ಇಲ್ಲ ಕಾರಣ ಯಾರೂ ಆತನಿಂದ ಆಸ್ತಿ ಖರೀದಿ ಯಾ ಸಾಮಾನು ಪಡಕೊಂಡರೆ ಅದು ಸಿಂಧ ಆಗಲಿಕ್ಕಿಲ್ಲ ತಿಳಿಯುವದು. ತಾರೀಖು ೧೦—೧೧—೧೯೩೮.

✠ ಈ ಎಡಗೈ ಹೆಬ್ಬೊಟ್ಟಿನ ಗುರ್ತು ಕಾಮಾಕ್ಷಿ ಕೋಂ ಕೃಷ್ಣ ಭಟ್ಟ ಧೀರನ ಇವಳದು.

ಪತ್ರಕರ್ತರ ಮತಿಗಸ್ತಿ.

೧. ತುರ್ಕಸ್ಥಾನವನ್ನು ಸಂಘಟಿಸಿ ಅದನ್ನು ಪ್ರಬಲ ಜನಾಂಗಗಳ ಪಂಕ್ತಿಯಲ್ಲಿ ಸೇರಿಸಲು ಕಾರಣರಾದ ಮುಸ್ತಾಫಾ ಕೆಮಾಲ ಪಾಶಾರವರು ಬುಧವಾರ ಬೆಳಿಗ್ಗೆ ಇಸ್ತಂಬೂಲದಲ್ಲಿ ತೀರಿಕೊಂಡದೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ. ರಾಷ್ಟ್ರಪತಿಗಳು ನುಡಿದಂತೆ, ಮುಸ್ತಾಫಾ ಕೆಮಾಲ ಪಾಶಾರವರು ರಣಶೂರರು, ರಾಜಕಾರಣಕುಶಲರು, ರಾಷ್ಟ್ರವನ್ನು ಪುನರ್ಘಟಿಸಬಲ್ಲ ಪುರುಷರೂ ಅವರೇ. ತುರ್ಕಸ್ಥಾನದಲ್ಲಿ ಲೋಕಶಾಹಿಯನ್ನು ಸ್ಥಾಪಿಸಿ ತುರ್ಕಜನಾಂಗವನ್ನು ಆಧುನಿಕ ಮನ್ವಂತರಕ್ಕನುಚಿತವಾಗಿ ರೂಪಿಸಿ ಅವರು ನೆರವೇರಿಸಿದ ಕಾರ್ಯ ಪರಂಪರೆಯು ವಿದಿತ. ಕೆಮಾಲ ಪಾಶಾರವರು ತೀರ ಬಡವರು, ಇವರ ತಂದೆಯವರು ಅಪ್ರಸಿದ್ಧ ಕಸ್ಟಮ್ಸ ಕಾರಕೂನರು. ಇಷ್ಟು ಅಪ್ರಸಿದ್ಧವಾಗಿ ಅವರು ಹುಟ್ಟಿದಾಗ್ಯೂ ದೈವಬಲದಿಂದಲೂ ಸಾಹಸದಿಂದಲೂ ಕಾರ್ಯಕೌಶಲ್ಯದಿಂದಲೂ ಉಚ್ಚ-ಉಚ್ಚ ಸೈನ್ಯಾಧಿಕಾರಗಳನ್ನು ಪಡೆದು ತುರ್ಕ ಜನಾಂಗವು ಗ್ರೀಕ ಜನಾಂಗದ ಬಾಯೊಳಗೆ ಬಿದ್ದು ಸರ್ವನಾಶವಾಗುವ ಸಮಯದಲ್ಲಿ ಎದೆ ಗಟ್ಟಿಮಾಡಿಕೊಂಡು ಎನಟೋಲಿಯಾದಲ್ಲಿ ಗ್ರೀಕ ಸೈನ್ಯ ಪಥಕಗಳಿಗೆ ಇದಿರಾಗಿ ಸೋಲಿಸಿ ಸ್ವದೇಶದ ಮೇಲಿನ ಪರಚಕ್ರವನ್ನು ಪರಿಹರಿಸಿದ ಕೀರ್ತಿವಂತ ಪುರುಷರವರು! ಆ ಕಾಲದಲ್ಲಿ ತುರ್ಕ ಜನಾಂಗವು ತೀರ ನಿರಾಧಾರಿಯಾಗಿ, ಸಬಲರ ಕೈಯ ಸೂತ್ರಗೊಂಬೆಯಾಗಿದ್ದರು. ಇಂಥ ಪ್ರಸಂಗವನ್ನು ಸ್ವಪರಾಕ್ರಮದಿಂದ ತಪ್ಪಿಸಿ ಸ್ವದೇಶ ಸ್ವಾತಂತ್ರ್ಯವನ್ನು ಕಾಪಾಡಿದ ಕೆಮಾಲ ಪಾಶಾರವರ ಗುಣವರ್ಣನೆ ಮಾಡಿದಷ್ಟು ಕಡಿಮೆಯೇ. ಸ್ವಾತಂತ್ರ್ಯಯುದ್ಧೋತ್ತರ ಲೋಕಸಭೆಯನ್ನೇರ್ಪಡಿಸಿ ತಾವು ಅಧ್ಯಕ್ಷರಾಗಿ ಅವರು ಮಾಡಿದ ಲೋಕಸುಧಾರಣೆಗಳನ್ನು ನಾವು ಈಗ ತುರ್ಕಸ್ಥಾನದಲ್ಲಿ ಪ್ರತ್ಯಕ್ಷ ಕಾಣಬಹುದು. ತುರ್ಕಸ್ಥಾನಕ್ಕೆ (Sick man of Europe) ಯುರೋಪ ಖಂಡದ ರೋಗಿಯೆಂಬ ಅಪವಾದವಿತ್ತು. ಆ ಅಪವಾದವನ್ನು ಬಡಗೂಡಿ ಅಳಿಸಿ ತೆಗೆದು ಬಲಾಢ್ಯ ರಾಷ್ಟ್ರಗಳ ಪಂಕ್ತಿಯಲ್ಲಿ ತುರ್ಕಸ್ಥಾನವನ್ನು ಸೇರಿಸಿದ ಪರಾಕ್ರಮಶಾಲಿ, ಕರ್ತೃತ್ವಶಾಲಿ ಪುರುಷರು ಕೆಮಾಲ ಪಾಶಾರವರೇ. "ಕೆಮಾಲ ಪಾಶಾರವರ ನಿಧನದಿಂದ ತುರ್ಕಸ್ಥಾನಕ್ಕೆ ಮಹಾನಷ್ಟವಾಗಿದೆ" ಹೀಗೆ ಮಹಾತ್ಮರು ಉದ್ಗರಿಸಿ, ಈ ಸಂಕಟದೊಳಗಿಂದ ತುರ್ಕಸ್ಥಾನವು ಸುರಕ್ಷಿತ ಪಾರಾಗಲೆಂದು ಪರಮಾತ್ಮನೆಡೆ ಪ್ರಾರ್ಥಿಸಿಕೊಳ್ಳುತ್ತಾರೆ. ಕೆಮಾಲ ಪಾಶಾರವರು ಸ್ವಾತಂತ್ರ್ಯಪ್ರೇಮಿಗಳೆಂದೂ ಮಾನವಕೋಟಿಯ ಕಲ್ಯಾಣಕರ್ತರೆಂದೂ ರಾಷ್ಟ್ರಪತಿ ಸುಭಾಷಚಂದ್ರ ಬೋಸರು ಹೊಗಳಿ, ಅವರ ಪ್ರೀತ್ಯರ್ಥ ಶನಿವಾರ ತಾ. ೧೯ನೇಗೆ ಹಿಂದವಾಸಿಯರೆಲ್ಲರೂ ಸಭೆಸೇರಿ ಶೋಕಪ್ರದರ್ಶನ ಮಾಡಬೇಕೆಂದೂ ಸಂಕಟಗ್ರಸ್ತ ತುರ್ಕ ಬಾಂಧವರೊಡನೆ ಸಹಾನುಭೂತಿ ವ್ಯಕ್ತಗೊಳಿಸಬೇಕೆಂದೂ ಆಜ್ಞೆ ಮಾಡಿದ್ದಾರೆ. ಆ ಪ್ರಕಾರ ದೇಶಬಾಂಧವರೆಲ್ಲರೂ ವರ್ತಿಸುವರೆಂದು ನಾವು ನೆರೆನಂಬಿದ್ದೇವೆ. ಮುಸ್ತಾಫಾ ಕೆಮಾಲ ಪಾಶಾರವರಿಗೆ ಪರಮಾತ್ಮನು ಸದ್ಗತಿಯನ್ನೀಯಲೆಂದ ನಾವು ಪ್ರಾರ್ಥಿಸಿ ತುರ್ಕ ಜನಾಂಗವು ಈ ಆಪತ್ತಿನೊಳಗಿಂದ ಸುರಕ್ಷಿತ ಪಾರಾಗಲೆಂದು ಬಯಸುತ್ತೇವೆ.

---

೨. ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ನಾ|| ಖೇರರವರು ಪುಣೆಯ ಡೆಕ್ಕನ್ ಎಗ್ರಿಕಲ್ಚರಲ್ ಎಸೋಸಿಯೇಶನ್ ಊರ್ಫ ದಕ್ಷಿಣ ಶೇತಕಿ ಸಂಘದವರು ಪೇಡ-ಶಿವಪುರದಲ್ಲಿ ನಡೆಸುವ ಗ್ರಾಮೋದ್ಧಾರ ಕೇಂದ್ರವನ್ನು ಕಳೆದ ಸೋಮವಾರ ನೋಡಹೋಗಿದ್ದರು. ಬೇರೆ ಬೇರೆ ವಿಭಾಗಗಳನ್ನು ನೋಡಿ ಅವರಿಗೆ ಸಂತೋಷವಾಯಿತು. ನೂತನವಾಗಿ ಗ್ರಾಮೋದ್ಧಾರ ಇಲಾಖೆಯನ್ನು ತಾವು ತೊರಡಿಸುವೆವಾಗಿಯೂ ಅದಕ್ಕೆ ವಿಶೇಷಾಧಿಕಾರಿಯನ್ನು ತಾವು ನೇಮಿಸುವೆವಾಗಿಯೂ ನಾ|| ಖೇರರು ನುಡಿದರು. ಗ್ರಾಮೋದ್ಧಾರಕ್ಕೆ ಸಂಬಂಧಪಟ್ಟ ಯಾವತ್ತೂ ಚಟುವಟಿಕೆಗಳನ್ನು ಒಕ್ಕಟ್ಟಿಗೆ ವಿಚಾರ ಮಾಡುವ ದೆಸೆಯಿಂದ ಈ ಇಲಾಖೆ ನಿರ್ಮಿಸಲ್ಪಡುತ್ತಿದೆ. ಈ ಯೋಜನೆ ತೀರ ಸಮಯೋಚಿತವೆಂದು ನಮ್ಮ ಅಭಿಪ್ರಾಯ. ಗ್ರಾಮೋದ್ಧಾರದ ಪಾರ್ಶ್ವಭೂಮಿಯಲ್ಲಿ ಯಾವತ್ತೂ ಇಲಾಖೆಗಳ ಚಟುವಟಿಕೆ ನಡೆದರೆ ಮಾತ್ರ ಗ್ರಾಮೋದ್ಧಾರವು ಸುಸೂತ್ರವಾಗಿ ಸಾಗಬಲ್ಲದು. ಸರಕಾರದ ಬೇರೆ ಬೇರೆ ಇಲಾಖೆಗಳು ಕೇವಲ ತಮ್ಮ ಇಲಾಖೆಗಳ ಮಟ್ಟಿಗೆ ದೃಷ್ಟಿ ಹಿಡಿದು ನಡೆಯುವ ಈಗಿನ ಧೋರಣ ಗ್ರಾಮೋದ್ಧಾರಕ್ಕೆ ಪೋಷಕವಲ್ಲ. ಪ್ರತಿಯೊಂದು ಇಲಾಖೆಯು ತನ್ನ ಆತಳತೆಯಿಂದ ಗ್ರಾಮೋದ್ಧಾರ ಸಾಧಿಸುವದೋ ಹೇಗೆ? ಎಂಬ ವಿಚಾರ ಮಾಡಿ ಮುಂದರಿಯುವಂತೆ ಹೊಸ ಇಲಾಖೆಯವರು ಏರ್ಪಾಟು ಮಾಡುವರು. ನಾ||

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು. ಮಹಾಜನರು **ಪ್ರೋತ್ಸಾಹಿಸಬೇಕಾಗಿ ವಿನಂತಿ**

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,
UDIPI. S. KANARA.

ಪಾರದ ಹೊಸ ಯೋಜನೆ ನಿಜವಾಗಿಯೂ ಉಪಕಾರಿಯಾಗಿದ್ದು ಅದನ್ನು ಶೀಘ್ರವೇ ಸಾವುಕಾರರು ಪ್ರಚುರಗೊಳಿಸಬೇಕೆಂದು ನಾವು ಬಿನ್ನೈಸಿಕೊಳ್ಳುತ್ತೇವೆ

೩. ಗೇರಸಪ್ಪೆಯ ತಡಸಲಿನಿಂದ ವಿದ್ಯುತ್ ನಿರ್ಮಾಣ ಮಾಡುವ ವ್ಯವಸ್ಥೆ ಕುರಿತು ಮುಂಬಯಿ ಸರಕಾರ ಮತ್ತು ಮೈಸೂರು ದರಬಾರುಗಳೊಳಗೆ ಕರಾರು ಪೂರ್ಣವಾಗಿಯಾಗಿರುವದಾಗಿ ಎಣಿಸಬಹುದು. ಮೈಸೂರಿನ ಮಹಾರಾಜರು ನಾತಾಳ ಹಬ್ಬದಲ್ಲಿ ವಿದ್ಯುತ್-ನಿರ್ಮಾಣ ಕಾರಖಾನೆಯ ಉದ್ಘಾಟನ ಸಮಾರಂಭವನ್ನು ನೆರವೇರಿಸುವವರಿದ್ದಾರೆಂದು ತಿಳಿಯುತ್ತದೆ ಈ ತಡಸಲು ಪ್ರೇಕ್ಷಣೀಯವಿದ್ದು ಕಾರಖಾನೆಯ ವ್ಯವಸ್ಥೆಯಿಂದ ದೃಶ್ಯ ಸೌಂದರ್ಯಕ್ಕೆ ಕುಂದು ಬರದಂತೆ ಜಾಗ್ರತಿ ಕೊಳ್ಳಲಾಗುವದು. ಲೋಕದೊಳಗೆ ಇಷ್ಟು ಸೊಬಗಿನ ತಡಸಲು ಬೇರೊಂದಿಲ್ಲವಾಗಿ ಖ್ಯಾತಿಯುಂಟು. ತಡಸಲಿನ ಸೊಬಗು ನೋಡಿ ಅದನ್ನು ನಿರ್ಮಿಸಿದ ಪರಮಾತ್ಮನ ಅಗಾಧ ಲೀಲೆಯನ್ನು ಹೊಗಳುವವರನೇಕರಿದ್ದಾರೆ ವರ್ಷಾಂತದ ನೂರಾರು ಮಂದಿ ದೇಶ-ವಿದೇಶಗಳೊಳಗಿನ ಮಹಾನುಭಾವರು ಬಂದು ಸಂತೋಷಪಡುತ್ತಾರೆ ಇಂಥ ಸೃಷ್ಟಿವೈಭವವನ್ನು ಕುಂದುಗೊಳಿಸುವದು ಅಪ್ರಶಸ್ತವಾದುದು ಆದರಿಂದ ಮುಂಬಯಿ ಸರಕಾರವೂ ಮೈಸೂರ ದರಬಾರವೂ ತಡಸಲಿನಿಂದ ಹುಟ್ಟುವ ವಿದ್ಯುತ್ತನ್ನು ಸಂಗ್ರಹಿಸಿ ಹಳ್ಳಿ-ಹಳ್ಳಿಗಳಲ್ಲಿ ಅದನ್ನು ಪೂರೈಸಬೇಕೆಂದು ಸಂಕಲ್ಪಿಸಿವೆ ತಡಸಲಿನಲ್ಲಿ ಇಡೀ ವರ್ಷ ಸಾಲುವಷ್ಟು ಜಲಸಂಚಯವಿದ್ದು ತೀರ ಬಡವರಿಗೆ ಸಹ ಇದನ್ನು ಉಪಯೋಗಿಸಲು ಅನುಕೂಲವಾಗುವದಾಗಿ ತಡಸಲಿನ ಪರೀಕ್ಷೆ ಮಾಡಿದ ವಿಜ್ಞಾನಿಗಳು ಬರೆಯುತ್ತಾರೆ ಇದನ್ನು ಕೇಳಿ ನಮಗೆ ಸಂತೋಷವಾಗಿದೆ. ಶೀಘ್ರವೇ ಈ ಕಾರ್ಯ ನೆರವೇರಲೆಂದೂ ವಿದ್ಯುತ್ ಕಾರಖಾನೆಯ ಮೂಲಕ ತಡಸಲಿನ ನೆರೆಯಲ್ಲಿರುವ ನಮ್ಮ ಸಿದ್ದಾಪುರ ತಾಲೂಕಿನ ಅಭ್ಯುದಯವಾಗಲೆಂದೂ ನಾವು ಕೋರುತ್ತೇವೆ. ಕಾರಖಾನೆಯವರ ವಿದ್ಯುತ್ತನ್ನು ನಮ್ಮ ಜಿಲ್ಹೆಯೊಳಗೆ ಕೇಂದ್ರಗಳನ್ನಿಟ್ಟು ಪ್ರಸಾರ ಮಾಡಿದರೆ ಇನ್ನೂ ಉತ್ತಮವೇ ಸೈ! ನಮ್ಮ ಜಿಲ್ಹೆ ತಡಸಲಿನಿಂದ ೫೦-೬೦ ಹೆಚ್ಚೆಂದರೆ ೧೦೦ ಮೈಲು ವ್ಯಾಪದಲ್ಲಿದ್ದು, ಸ್ಥಳಿಕ ಕೇಂದ್ರಗಳ ಮೂಲಕ ವಿದ್ಯುತ್ತನ್ನು ಪೂರೈಸುವದು ಅಷ್ಟೇನು ಕಷ್ಟಸಾಧ್ಯವಾಗಲಾರದೆಂದು ಗ್ರಹಿಕೆ.

ದಿ ಕುಮಟಾ ಅರ್ಬನ್ ಕೋ-ಆಪರೇಟಿವ್ ಬೇಂಕ, ಲಿ., ಕುಮಟಾ.

ಜಾಹೀರ ವಿನಂತಿ.

ಬಿಟ್ಟಬಾಕಿ ಇರದಂಥಾ ಬೇಂಕಿನ ಯಾವತ್ತೂ ಮೆಂಬರರು ಬೇಂಕಿನಲ್ಲಿ ಶಿಲ್ಕು ಉಳಿದ ತಮ್ಮ ತಮ್ಮ ಡಿವಿಡೆಂಡ ರಕಮುಗಳನ್ನು ಕೂಡಲೇ ಬೇಂಕ ಆಫೀಸಿನಲ್ಲಿ ಆಫೀಸ ವೇಳ್ಯಾ ಬಂದು ಒಯ್ಯತಕ್ಕದ್ದಾಗಿಯೂ ಅಥವಾ ಆಫೀಸಿಗೆ ಬರುವರೇ ಅನಾನುಕೂಲತೆಯಿದ್ದವರು ಯಾ ಪರವೂರಲ್ಲಿದ್ದವರು ತಮ್ಮ ಪತ್ತೆಯನ್ನು ಬೇಂಕಿಗೆ ತಿಳಿಸಬೇಕಾಗಿಯೂ ಈ ಮೂಲಕ ವಿನಂತಿ ಮಾಡಿರುತ್ತದೆ ಮೇಲಿನಂತೆ ತಾ ೧೫—೧೨—೩೯ ರೊಳಗಾಗಿ ಆಫೀಸಿಗೆ ಬಂದು ಒಯ್ಯದಿದ್ದಲ್ಲಿ ಅವರವರ ಡಿವಿಡೆಂಡನ್ನು ಅವರವರ ಖರ್ಚಿನಿಂದ ಮನಿಯಾರ್ಡರದ್ವಾರಾ ಕಳಿಸುವದರಲ್ಲಿ ಬರುವದು

ಕುಮಟಾ,
ತಾ. ೧೧—೧೧—೩೯ } ಚೇಅರಮನ್.

ಹಿಟ್ಲರನಿಗೀಗ ವಸಾಹತುಗಳು ಬೇಕು!

(೨ನೇ ಪಾನಿನಿಂದ ಮುಂದರಿಸಿದ್ದು)

ಸ್ಥಾನ ನಡಿಸಿದ್ದಾರೆಂದು ನನಗೂ ಅನಿಸುತ್ತದೆ. ಸ್ಪೇನ ದೇಶದೊಳಗಿನ ಲೋಕಪಕ್ಷದ ಸರಕಾರಕ್ಕೆ ಬ್ರಿಟಿಶ-ಫ್ರೆಂಚರಿಂದ ಇನ್ನು ಬೆಂಬಲ ಸಿಗುವ ಆಶೆ ನನಗಿಲ್ಲ ಆ ಸರಕಾರವು ಈಗ ಸೋತುಹೋದಂತೆಯೇ ಎಂದು ನನಗನಿಸುತ್ತಿದೆ. ಸೇನಾಪತಿ ಫ್ರೆಂಕೋರವರು ಜರ್ಮನ್-ಇಟಾಲಿಯ ಬೆಂಬಲದಿಂದ ಹೆಚ್ಚು ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಲೋಕಪಕ್ಷದ ಸೈನಿಕರು ಸ್ವಾತಂತ್ರ್ಯಾಭಿಮಾನದಿಂದ ಹೋರಾಡುತ್ತಿರುವರೇನೋ ಅಹುದು ವೀರತ್ವದಲ್ಲಿ ಅವರು ಹಿಮ್ಮೆಟ್ಟಲಾರರು. ಆದರೆ ತಿನ್ನಲು ದೇಶದೊಳಗೆ ಕಾಳು-ಕಡಿಯಿಲ್ಲ. ನಿಶ್ಚಿತ ಹೊತ್ತಿನ ಮೇಲೆ ಹೊಟ್ಟೆ ತುಂಬಬೇಕಲ್ಲವೇ? ಬ್ರಿಟಿಶ-ಫ್ರೆಂಚರ ಸಹಾನುಭೂತಿಯ ಅಭಾವದಲ್ಲಿ ಹೊರಪ್ರದೇಶದಿಂದ ಕಾಳು ಕಡಿಯನ್ನು ಸುರಕ್ಷಿತವಾಗಿ ತರಿಸುವದು ತೀರ ಅಶಕ್ಯ ಮಾತು. ಈ ಮೂಲಕ ಲೋಕಪಕ್ಷವು ದೀರ್ಘ ಕಾಲದ ತನಕ ಸೇನಾಪತಿ ಫ್ರೆಂಕೋರವರನ್ನು ಹಿಡಿದಿಡುವದೆಂದು ನಾನು ಹೇಳಲಾರೆ ಸ್ಪೇನ ದೇಶವು ಫ್ರೆಂಕೋನ ವಶವಾದರೆ— ಆ ಪ್ರಕಾರ ವಶವಾಗುವದೆಂದು ನಾನು ಹೇಳಬಲ್ಲೆ– ಯುರೋಪ ಖಂಡದ ಮಟ್ಟಿಗೆ ಹಿಟ್ಲರನ ಕಾರಸ್ಥಾನವೇ ವಿಜಯವಾಯಿತೆಂದೂ ಬ್ರಿಟಿಶ-ಫ್ರೆಂಚರು ಸೋತರೆಂದೂ ತಿಳಿಯುವನು ಇದರಿಂದ ರುಮಾನಿಯಾ, ಯುಗೊಸ್ಲಾವಿಯಾ, ಹಂಗೇರಿ, ಬಲ್ಗೇರಿಯಾ ಮೊದಲಾದ ಪೂರ್ವ ಯುರೋಪ ಖಂಡದೊಳಗಿನ ರಾಷ್ಟ್ರಗಳು ಹಿಟ್ಲರನ ಅಧೀನವಾಗುತ್ತವೆ ಈ ರಾಷ್ಟ್ರಗಳಿಗೆ ಹಿಟ್ಲರನ ವಿರುದ್ಧ ಬ್ರಿಟಿಶ-ಫ್ರೆಂಚರ ಬೆಂಬಲವಿಸ್ತು, ಅದೀಗ ಪರಿಹಾರಹೊಂದುತ್ತಿದೆ ರುಮಾನಿಯಾ ದೇಶದೊಳಗಿನ ಕಾಳು-ಕಡಿಗಳೂ ಎಣ್ಣೆ-ಕಣಿಗಳೂ ಹಿಟ್ಲರನ ವಾರುಪತ್ಯಕ್ಕೆ ಒಳಗಾಗುತ್ತವೆ ಅಂದ ಮೇಲೆ ಹಿಟ್ಲರನು ಯುರೋಪ ಖಂಡದ ಭೂಪನಾಗಿ ಲೋಕದಲ್ಲಿ ಮೆರೆಯಲಡ್ಡಿಯಿಲ್ಲ!! ಈ ಪ್ರಕಾರ ಯುರೋಪ ಖಂಡ ತಮ್ಮ ಕೈಬಿಟ್ಟುಹೋಗುತ್ತದೆಂದು ಬ್ರಿಟಿಶ ರಾಜಕಾರಣಿಗಳು ಯುದ್ಧಸಾಹಿತ್ಯಗಳನ್ನು ಅನಿರ್ಬಂಧವಾಗಿ ಪೂರೈಸಿಕೊಳ್ಳುವ ದೆಸೆಯಿಂದ ಹಿಂದುಸ್ಥಾನವನ್ನು ಸಂತಸಗೊಳಿಸಲೆತ್ನಿಸುತ್ತಿದ್ದಾರೆ. ಹಿಂದುಸ್ಥಾನದೊಳಗಿನ ಸಾರ್ವಭೌಮತ್ವಕ್ಕೆ ಕುಂದು ಬರದಂತೆ ಹಿಂದೀ ಪ್ರಜೆಗಳನ್ನು ಸಂತೈಸುವ ಹಂಚಿಕೆ ಹುಡುಕುವ ಹವಣಿಕೆಯಲ್ಲಿದ್ದಾರೆ. ಪಾಲಿಸ್ತಾನದೊಳಗಿನ ಅರಬರಿಗೆ ಸಂತೋಷಗೊಳಿಸಲು ಪಾಲಿಸ್ತಾನದ ಪಾಲು ಪಟ್ಟಿಯನ್ನು ರದ್ದುಗೊಳಿಸಿದ ಬಾಹಿರ ನಾಮೆಯನ್ನು ಹೊರಡಿಸಲಿಕ್ಕೆ ಪೌರ್ವಾತ್ಯರನ್ನು ಸಂತೋಷಗೊಳಿಸುವ ಧೋರಣವೇ ಕಾರಣ. ಅರಬರ ಹೋರಾಟ ಪಾಲಿಸ್ತಾನದ ಮಟ್ಟಿಗೆ ನಿಯಂತ್ರಿತವಾಗಿದ್ದರೆ ಬ್ರಿಟಿಶರು ಹೆದರುತ್ತಿರಲಿಲ್ಲ ಅರಬರ ಸಂಗ್ರಾಮ ಇಡೀ ಮುಸಲ್ಮಾನ ಲೋಕದೊಳಗೆ ಹಬ್ಬಿದ್ದರಿಂದ ಬ್ರಿಟಿಶರು ಲಗುಬಗೆಯಿಂದ ಪಾಲಿಸ್ತಾನದ ಪಾಲುಪಟ್ಟಿಯನ್ನು ರದ್ದುಪಡಿಸಿ ವಿಚಾರ ವಿನಿಮಯದಿಂದ ಪಾಲಿಸ್ತಾನದ ಪ್ರಶ್ನೆಯನ್ನು ಬಗೆಹರಿಸಲೋಸುಗ ಲಂಡನನಗರದಲ್ಲಿ ಅರಬ ಯಹೂದಿ ಪ್ರತಿನಿಧಿಗಳ ಸಮ್ಮೇಲನವನ್ನು ಸದ್ಯಕ್ಕೆ ನಿಮಂತ್ರಿಸಿದ್ದಾರೆ ಚೀನ ದೇಶದೊಳಗಿನ ಜಪಾನಿಯರ ಅನಿರೀಕ್ಷಿತ ಆಕ್ರಮಣದ ಮೂಲಕ ಬ್ರಿಟಿಶರಿಗೆ ಯುರೋಪ ಖಂಡದ ರಾಜಕಾರಣವನ್ನೂ ಪಾಲಿಸ್ತಾನ-ಹಿಂದುಸ್ಥಾನಗಳೊಳಗಿನ ರಾಜಕಾರಣವನ್ನೂ ಸ್ವಲ್ಪವೇ ಬಗೆಹರಿಸುವ ಪ್ರಸಂಗ ಬಂದೊದಗಿದೆ! ಇದರಿಂದಲೇ ಹಿಟ್ಲರನ ಮೇಲೆ ಮಿ|| ಚೆಂಬರಲೇನರ ಮುಷ್ಟು!

ವಾರ್ತೆಗಳು.

— ಇದೇ ಬರುವ ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಪ್ರಧಾನ ಮಂತ್ರಿ ನಾ| ಖೇರರವರೂ ಅರ್ಥ ಸಚಿವರಾದ ನಾ| ಲಟ್ಠೆಯವರೂ ಕರ್ನಾಟಕ ಸಂಚಾರಕ್ಕೆ ಬರುವವರಿದ್ದಾರೆಂದು ಪ್ರಕಟವಾಗಿದೆ. ನಾ| ಲಟ್ಠೆಯವರು ಕನ್ನಡಿಗರು ನಾ| ಖೇರರವರಾದರೂ ಕರ್ನಾಟಕದಲ್ಲಿ (ಕುಂದಗೋಳ ಗ್ರಾಮದಲ್ಲಿ) ಜನ್ಮವೆತ್ತವರು ಆದ್ದರಿಂದ ಕನ್ನಡಿಗರೆಲ್ಲರೂ ಪುಢ್ಯಾದಿಧಾರಿಗಳಾಗಿ ಮಂತ್ರಿಗಳೀರ್ವರಿಗೂ ಸಾಭಿಮಾನ ಸ್ವಾಗತವೀಯಬೇಕೆಂದು ಅ| ಭಾ| ಚರಖಾ ಸಂಘದ ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾದ ರಾ| ಹಣಮಂತರಾವ ಕೌಜಲಗಿಯವರು ಬಿನ್ನವಿಸುತ್ತಾರೆ.

— ತಾಲೂಕ, ಜಿಲ್ಹಾ, ಪ್ರಾಂತಿಕ ಮತ್ತು ಅಖಿಲ ಭಾರತ ಕೊಂಗ್ರೆಸ ಕಮಿಟಿಗಳ ಸದಸ್ಯರು ಸತತ ಸಂಪೂರ್ಣ ಖಾದಿಧಾರಿಗಳಿರಬೇಕಾಗಿ ಕೊಂಗ್ರೆಸ ಘಟನೆಯಲ್ಲಿ ನೇಮವಿದೆ. ಈ ನೇಮದಂತೆ ನಡೆಯದ ಸದಸ್ಯರ ಸದಸ್ಯತ್ವ ರದ್ದುಪಡಿಸಬೇಕೆಂದು ಕರ್ನಾಟಕ ಪ್ರಾಂ| ಕೊಂ| ಕಮಿಟಿಯ ಕಾರ್ಯದರ್ಶಿಗಳು ಪ್ರಕಟಣೆ ಹೊರಡಿಸಿದ್ದಾರೆ ಅ| ಭಾ| ಚರಖಾಸಂಘದ ಮನ್ನಣೆ ಪಡೆದ ಖಾದಿಯೇ ಶುದ್ಧ ಖಾದಿಯೆಂತಲೂ ಅವರು ತಿಳಿಸುತ್ತಾರೆ.

— ಯುದ್ಧಪ್ರಸಂಗದಲ್ಲಿ ಮುಂಬಯಿ ಸರಕಾರವು ಬ್ರಿಟಿಶ ಸಾಮ್ರಾಜ್ಯದ ವಿಭಾಗವೆಂದು ನಡಿಸತಕ್ಕ ತಯಾರಿಯ ಕುರಿತು ಮುಂಬಯಿ ಸರಕಾರಕ್ಕೂ ಹಿಂದುಸ್ಥಾನ ಸರಕಾರದ ಸೈನ್ಯ ಇಲಾಖೆಯವರಿಗೂ ಪತ್ರವ್ಯವಹಾರ ನಡೆದಿರುವದೇನೆಂದು ಮುಂಬಯಿ ಎಸೆಂಬ್ಲಿಯಲ್ಲಿ ರಾ| ರೂಪವಾಲಾರವರು ಕೇಳಿದ ಪ್ರಶ್ನೆಗೆ ಈ ಮಾಹಿತಿ ಪೂರೈಸುವದು ಸಾರ್ವಜನಿಕ ಹಿತಕ್ಕೆ ಬಾಧಕವಾಗುವದೆಂದು ಮುಖ್ಯ ಮಂತ್ರಿಗಳಾದ ನಾ| ಖೇರರವರು ಉತ್ತರ ಕೊಟ್ಟರು ಯುದ್ಧಕಾಲದಲ್ಲಿ ವಿಮಾನ-ಹಲ್ಲೆಗಳಿಂದ ಪ್ರಜೆಗಳನ್ನು ರಕ್ಷಿಸುವದಕ್ಕಾಗಿ ಹಿಂದುಸ್ಥಾನ ಸರಕಾರದ ಅಪೇಕ್ಷೆಯ ಮೇರೆಗೆ ಮುಂಬಯಿ ಸರಕಾರವು ಒಂದು ಯೋಜನೆ ತಯಾರಿಸಿದೆ ಆ ಕುರಿತು ಮುಂಬಯಿ ಸರಕಾರಕ್ಕೂ ಹಿಂದುಸ್ಥಾನ ಸರಕಾರಕ್ಕೂ ಚರ್ಚೆ ನಡೆದಿದೆಯೆಂದು ಮುಂಬಯಿ ಎಸೆಂಬ್ಲಿಯಲ್ಲಿ ಮಿ| ಅಲಿಬಹಾದ್ದೂರಖಾನರವರ ಪ್ರಶ್ನೆಯೊಂದಕ್ಕೆ ನಾ| ಖೇರರವರು ಉತ್ತರ ಕೊಟ್ಟರು.

— ಮೈಸೂರಿನ ವಿದುರಾಶ್ವತ್ಥದಲ್ಲಿ ಪೋಲೀಸರು ಗುಂಡು ಹಾರಿಸಿದ ಪ್ರಕರಣದ ಕುರಿತು ಮದ್ರಾಸ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ರಮೇಶಂರವರ ಅಧ್ಯಕ್ಷತೆಯಲ್ಲಿ ನೇಮಿಸಿದ ವಿಚಾರಣೆ ಮಂಡಳಕ್ಕೆ ರೂ ೪೦ ಸಾವಿರ ಖರ್ಚು ಬಂತು ಈ ರಕಮಿನಲ್ಲಿ ಅಧ್ಯಕ್ಷರಿಗೆ ಸಂದ ರಕಮು ರೂ ೧೪,೭೦೦ ಇನ್ನೂ ವರದಿ ಪ್ರಕಟವಾಗಲಿಲ್ಲ.

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರದ ಕಾರ್ತಿಕ ಬ [illegible], ಸೋಮವಾರ

ಸರಕಾರವೂ ಹಿಂದದೇಶದಾರಿದ್ರ್ಯವೂ.

ಹಿಂದುಸ್ಥಾನದ ಪ್ರಧಾನ ಸಮಸ್ಯೆಯನ್ನು ನಿರೂಪಿಸುವಾಗ, ಬೇಸಾಯಗಾರರಿಗೆ ಸೋಮಾರಿಗಳಾಗಬಾರದೆಂದೂ ಸತತೋದ್ಯೋಗಿಗಳಾಗಬೇಕೆಂದೂ ನಾವು ಒಮ್ಮೆ ಹೇಳಿದ್ದೇವೆ. ಡೆನ್ಮಾರ್ಕ, ಹೊಲಂಡ ಮೊದಲಾದ ವಿದೇಶಗಳೊಳಗಿನ ಸಂಸ್ಥಿತಿಯ ವಿಚಾರ ಮಾಡಿ ಅಲ್ಲಿಯಂತೆ ಇಲ್ಲಿಯೂ ಬೇಸಾಯಗಾರರು ಮನಸ್ಸುಮಾಡಿ ಧಾವತಿ ಮಾಡಿದರೆ, ಅವರಂತೆಯೇ ನಾವು ಹಿಂದವಾಸಿಯರು ಸುಖಸಮೃದ್ಧಿ ಹೊಂದಬಹುದೆಂದೂ ನಮೂದಿಸಿರುವೆವಷ್ಟೇ. ಆದರೆ ಅದೇ ವೇಳೆಂದ ಸರಕಾರವು ಕರ್ತವ್ಯಶೂನ್ಯವೆಂದ ಸಿದ್ಧವಾಗದಲ್ಲಿ ರಾಜಶಕ್ತಿಯು ಬೆಂಬಲಿಸದ್ದರೆ, ಪ್ರತಿಸ್ಪರ್ಧಿಸಿದ್ದರೆ, ಆಶ್ರಯ ಸಿಕ್ಕದಿದ್ದರೆ ದೇಶವು ಸಮೃದ್ಧಿ ಹೊಂದುತ್ತದೆಂಬ ಮಾತು ಸ್ವಯಂಸಿದ್ಧವಾದುದು, ತ್ರಿಕಾಲಾಬಾಧಿತ ತತ್ವವದು, ಲೋಕಾನುಭವವೂ ಅದೇ ಹಾಗೆಯೇ. ಪಾಶ್ಚಾತ್ಯ ಜನಾಂಗಗಳು ಕ್ರಮವಾಗಿ, ಸ್ಥಿರವಾಗಿ ಅಭಿವೃದ್ಧಿ ಹೊಂದಲಿಕ್ಕಾದರೂ ಸಮರ್ಥ ರಾಜಶಕ್ತಿಯೇ ಪ್ರಮುಖ ಕಾರಣ ಸರ್ವ ಕಾರಣವೆಂದು ಹೇಳಿದರೂ ಹೇಳಬಹುದು ಇಟಾಲಿ ಜರ್ಮನಿ ದೇಶಗಳು ಅಲ್ಪವೇಳೆಯಲ್ಲಿ ಪ್ರಚಂಡ ರಾಷ್ಟ್ರಗಳೆಂದು ಲೋಕದಿಂದ ಖ್ಯಾತಿ ಪಡೆಯಲಿಕ್ಕಾದರೂ ಮುಸೋಲಿನಿ ಹಿಟ್ಲರ ಪ್ರಮುಖ ರಾಜದಂಡವೇ ಕಾರಣವೆಂದು ಧಾರಾಳವಾಗಿ ಹೇಳಬಹುದು. ಹಿಂದುಸ್ಥಾನ ಸರಕಾರವು ಬೇಸಾಯಗಾರರ ಹಿತವನ್ನೇ ಲಕ್ಷಿಸಿ ರಾಜ್ಯಾಧಿಕಾರದ ಸೂತ್ರಗಳನ್ನು ನಡಿಸುತ್ತಿದ್ದರೆ, ಈವಾಗ ಹಿಂದವಾಸಿಯರು ಈಪರಿ ದುರ್ದಶೆಗೀಡಾಗುತ್ತಿರಲಿಲ್ಲ. ಬೇಸಾಯಗಾರರು ದರಿದ್ರರಾಗಲು ಮುಖ್ಯವಾಗಿ ಹಿಂದುಸ್ಥಾನ ಸರಕಾರದ ವಿನಿಮಯ ಧೋರಣವೇ ಕಾರಣ ಈ ಧೋರಣದ ಮೂಲಕವಾಗಿಯೇ ಬೇಸಾಯಗಾರರು ಗತಿಗೆಟ್ಟು ಹೋಗಿದ್ದಾರೆ. ಸ್ವತಂತ್ರ ಜನಾಂಗಗಳಲ್ಲಿ ಇಲ್ಲಿಯಂತೆ ಕ್ರಮವಿರುವದಿಲ್ಲ. ಪ್ರತ್ಯಕ್ಷವಾಗಿ ಉದಾಹರಣೆಯನ್ನೇ ಕೊಟ್ಟು ಈ ವಿಷಯವನ್ನು ನಾವು ನಿರೂಪಿಸುತ್ತೇವೆ. ಪೇಟೆಯಲ್ಲಿ ರೂಪಾಯಿಗೆ ಹತ್ತು ಕಾಳು ತೂಕ ಬೆಳ್ಳಿ ದೊರೆಯುತ್ತದೆ. ಆದರೆ ರೂಪಾಯಿಯೊಳಗೆ ಪ್ರತ್ಯಕ್ಷವಾಗಿ ಇರುವ ತೂಕ [illegible] ಅಂದರೆ ರೂಪಾಯಿಯ ಧಾತು ಬೆಲೆ ೮ ಆಣೆಗಿಂತ ಕಡಿಮೆ ಸರಕಾರಿ ಟಂಕಸಾಲೆಯ ಅಭಾವದಲ್ಲಿ ಪೇಟೆಯೊಳಗೆ ಸಿಗುವ ಬೆಲೆ ೮ ಆಣೆಯಷ್ಟೇ, ಇದಕ್ಕೂ ಕಡಿಮೆಯೇ ದೊರಕು ತಪ್ಪಲ್ಲ. ಕಾಯಿದೆಯಿಂದ ರೂಪಾಯಿಯ ಬೆಲೆಯನ್ನು ಹಿಂದುಸ್ಥಾನ ಸರಕಾರವು ಏರಿಸಿಟ್ಟಿದ್ದರಿಂದ ರೂಪಾಯಿಯ ನಾಣ್ಯದಲ್ಲಿ ನಿಶ್ಚಿತವಾದ ಸೊಬಗಿಲ್ಲ ಸಾಕು. ಭೂಕಂದಾಯವನ್ನು ನಾವು ರೂಪಾಯಿಯಲ್ಲಿ ತೆರಬೇಕು ಸಾಲ, ಬಡ್ಡಿ, ಸಂಬಳಗಳನ್ನು ರೂಪಾಯಿಯಿಂದ ತೆರಬೇಕು. ರೂಪಾಯಿಯ ಸಂಬಂಧ ಇಂಗ್ಲಂಡ ದೇಶದೊಳಗಿನ ಪವನಿಗೆ, ಅಲ್ಲದೆ, ಹಿಂದುಸ್ಥಾನದೊಳಗ ರಾಜಶಾಸನದಂತೆ ನಡೆಯುವ ರೂಪಾಯಿ ನಾಣ್ಯಕ್ಕಿಲ್ಲ! ಇಂಗ್ಲಂಡ, ಪ್ರಾನ್ಸ, ಜರ್ಮನಿ, ಇಟಾಲಿ ಜಪಾನ ಮೊದಲಾದ ಪಾಶ್ಚಾತ್ಯ--ಪೌರ್ವಾತ್ಯ ಸ್ವತಂತ್ರ ಜನಾಂಗಗಳಲ್ಲಿ ರೂಢವಾಗಿರುವ ಪವನು, ಫ್ರೆಂಕು, ಮಾರ್ಕ, ಲಿರಾ, ಯೇನ ನಾಣ್ಯಗಳು ಆಯಾ ಕಾಲದೊಳಗೆ ಆಯಾ ದೇಶದಲ್ಲಿರುವ ಪರಿಸ್ಥಿತಿಗನುರೂಪವಾಗಿ ವ್ಯವಹಾರದಲ್ಲಿ ನಡೆಯುತ್ತವೆ ಪವನಿನ ಬೆಲೆ ಹೆಚ್ಚು-ಕಡಿಮೆಯಾಗಲು ಇಂಗ್ಲಂಡದೊಳಗಿನ ಪರಿಸ್ಥಿತಿಯೇ ಕಾರಣ ಇಂಗ್ಲಂಡ ದೇಶದೊಳಗೆ ಸರಕು ಸಾಹಿತ್ಯ ಹೆಚ್ಚುಹೆಚ್ಚಾಗಿ ತಯಾರಾದರೆ ಪವನಿಗೆ ಹೆಚ್ಚು ಸರಕು-ಸಾಹಿತ್ಯಗಳು ದೊರೆಯುತ್ತವೆ, ಅಂದರೆ ಪವನಿನ ಬೆಲೆ ಏರುತ್ತದೆ. ಅದೇ ವಿಪರೀತವಾದರೆ ಪವನಿನ ಬೆಲೆ ಕುಗ್ಗುತ್ತದೆ. ಆದರೆ ನಮ್ಮ ದೇಶದೊಳಗಿನ ರೂಪಾಯಿಯ ಸ್ಥಿತಿ ಹಾಗಲ್ಲ. ಕಾಳ ಕಡಿ ಹುಟ್ಟಲಿ ಇಲ್ಲವೆ ಹುಟ್ಟದಿರಲಿ, ಪವನಿಗೂ ರೂಪಾಯಿಗೂ ಕಾಯಿದೆಯಂತೆ ನಿರ್ಣಯಿಸಿದ ಪ್ರಮಾಣದ ಮೇರೆಗೆ ರೂಪಾಯಿಯ ಬೆಲೆ ಸ್ಥಿರ ಇರುತ್ತದೆ ಬೆಳೆ ಹುಟ್ಟಲಿಲ್ಲವೆಂದು ನಮ್ಮ ಸರಕ್ಕು ತುಟ್ಟಿಯಲ್ಲ, ಬೆಳೆ ಹುಟ್ಟಿತೆಂದು ನಮ್ಮ ಸರಕು ಅಗ್ಗವಲ್ಲ ಇಂಗ್ಲಂಡದೊಳಗಿನ ಅನುಕೂಲ--ಪ್ರತಿಕೂಲ ಪರಿಸ್ಥಿತಿಯೇ ನಮ್ಮ ಹಿಂದುಸ್ಥಾನ ದೇಶದ್ದು ಹಿಂದದೇಶದೊಳಗಿನ ಪರಿಸ್ಥಿತಿ ಬ್ರಿಟಿಶರಿಗೆ ಅನುಕೂಲವೋ ಪ್ರತಿಕೂಲವೋ? ಎಂಬುದರ ಮೇಲೆಯೇ ನಮ್ಮ ರೂಪಾಯಿಯ ವ್ಯವಹಾರ ಅವಲಂಬಿಸಿಕೊಂಡಿದೆ ಬ್ರಿಟನ್‌ದೇಶ ಉದ್ಯೋಗಪ್ರಧಾನ ದೇಶ, ಮುಖ್ಯವಾಗಿ ಕಾರಖಾನೆಯವರೂ ಸಾವಕಾರರೂ ಅಲ್ಲಿಯ ರಾಜ್ಯಕಾರಭಾರದ ಧೋರಣವನ್ನು ನಿರ್ಧರಿಸುತ್ತಾರೆ ಬ್ರಿಟಿಶರಿಗೆ ತಮ್ಮಲ್ಲಿಯ ಸರಕು ಸಾಹಿತ್ಯ ನಮ್ಮ ಹಿಂದುಸ್ಥಾನದಲ್ಲಿ ಅಗ್ಗವಾಗಿ ಮಾರಲನುವಾಗಬೇಕು, ಮತ್ತು ನಮ್ಮಲ್ಲಿಯ ಕಾಳು-ಕಡಿಯಾದರೂ ಅಗ್ಗವಾಗಿ ಪೂರೈಕೆಯಾಗಬೇಕು ಪವನಿನ ಬೆಲೆ ತಮ್ಮ ಸರಕುಗಳ ಮಟ್ಟಿಗೆ ಏರಿಸಿಟ್ಟರೆ, ರೂಪಾಯಿಯ ಮಟ್ಟಿಗೆ ತಗ್ಗಿಸಿಟ್ಟರೆ, ತಾನಾಗಿಯೇ ಅವರ ಸ್ವಾರ್ಥಸಾಧನೆಯಾಗುತ್ತದೆ ಪವನಿಗೆ ಮೊದಲು ೧೫ ರೂಪಾಯಿಗಳಿದ್ದವು, ಆ ಪ್ರಮಾಣವನ್ನು ತಗ್ಗಿಸಿ ೧೩ ರೂಪಾಯಿಗೆ ಇಳಿಸಿದ್ದರಿಂದ ೧೫ ರೂಪಾಯಿಗೆ ಹಿಂದುಸ್ಥಾನದೊಳಗ ಮಾರಾಟವಾಗುವ ಸಾಹಿತ್ಯ ಈಗ ೧೩ ರೂಪಾಯಿಗಳಿಗೆ ಮಾರಬೇಕಾಗುತ್ತದೆ ಅದೇ ೧೫ ರೂ. ಬೀಳುವ ಬ್ರಿಟಿಶ ಸರಕು ಹಿಂದುಸ್ಥಾನದಲ್ಲಿ ೧೩ ರೂಗಳಿಕ್ಕೆ ಸಿಗುತ್ತದೆ ಪವನು ಬೇರೆ ಬೇರೆ ಜನಾಂಗಗಳ ಲೋಕವ್ಯವಹಾರದ ನಾಣ್ಯ. ಪವನ-ನಾಣ್ಯದ ಮಧ್ಯಸ್ಥಿಕೆಯಿಂದಲೇ ನಾವು ಬ್ರಿಟಿಶೇತರ ಜನಾಂಗಗಳೊಡನೆ ವ್ಯವಹಾರ ನಡಿಸಬೇಕಾದ್ದರಿಂದ ಬ್ರಿಟಿಶರಂತೆಯೇ ಇತರ ಸ್ವತಂತ್ರ ರಾಷ್ಟ್ರಗಳಿಂದಲೂ ನಾವು ಬ್ರಿಟಿಶ-ತಂತ್ರದ ಸುಲಿಯಲ್ಪಡುತ್ತಿದ್ದೇವೆ ನಮ್ಮ ಹಿಂದುಸ್ಥಾನ ದೇಶ ಬೇಸಾಯಪ್ರಧಾನ ದೇಶ. ಬೇಸಾಯ ಸಾಹಿತ್ಯಗಳಿಗೆ ದರ ಸಿಕ್ಕಲ್ಲಿ ಮಾತ್ರ ನಮ್ಮ ಹಿಂದವಾಸಿಯರ ಬಾಳ್ವೆ ಬೆಳಸು ಬೆಳೆದಂತಾಗಲಿಲ್ಲ, ಅದಕ್ಕೆ ತಕ್ಕ ಧಾರಣೆ ಸಿಗಬೇಕು, ತಕ್ಕ ಪೇಟೆಯೂ ಇರಬೇಕು ಅಂದರೆ ಮಾತ್ರ ಬೇಸಾಯಗಾರರು ಬದುಕಿ ಬಾಳ್ವೆ ಮಾಡಿಕೊಂಡು ಉಳಿಯಬಲ್ಲರು ಹಗಲಿರುಳು ಮೈಮುರಿದು ದುಡಿಯಬಹುದು, ಮೂರು-ಮೂರು ಬೆಳೆ ಬೆಳಸಬಹುದು, ಸೃಷ್ಟಿಸಂಪತ್ತಿಯನ್ನು ಮಾನವ ಪ್ರಯೋಜನಕ್ಕಾಗಿ ರೂಪುಗೊಳಿಸಲು ಪರಮಾವಧಿಯ ಪುರುಷಪ್ರಯತ್ನ ಮಾಡಬಹುದು. ಆದರೆ ಅದಕ್ಕೆ ತಕ್ಕ ಪ್ರತಿಫಲ ದೊರೆಯದಿದ್ದರೆ, ಸ್ಥಿತಿ ಸುಧಾರಿಸದಿದ್ದರೆ ಇಂಥ ಕಾರ್ಯ ಮಾಡಲು ಉತ್ತೇಜನ ದೊರೆಯುವ ಬಗೆಯೆಂತು? ಬೆಳಸಿನ ಹುಟ್ಟುವಳಿಯ ಖರ್ಚು ಹುಟ್ಟದಷ್ಟು ಅವಸ್ಥೆಯಲ್ಲಿ ಬೇಸಾಯಗಾರರಿಗೆ ದುಡಿಯಲು ಪ್ರೇರಣೆಯಾಗುವ ಬಗೆಯೆಂತು? ಪ್ರಾಂತಿಕ ಸರಕಾರಗಳು ಗ್ರಾಮ-ಗ್ರಾಮಾಂತರಗಳಲ್ಲಿ ಮಾರ್ಗಗಳನ್ನು ಕಟ್ಟಿಸಿ, ವಾಹನ ಸೌಕರ್ಯಗಳನ್ನು ನಿರ್ಮಿಸಿ ಬೆಳಸಿಗೆ ಪೇಟೆಯ ಅನುಕೂಲತೆಗಳನ್ನು ನಿರ್ಮಿಸಿಕೊಡುತ್ತಿವೆ ಆದರೆ ಇದೇನು ದೊಡ್ಡ ಪ್ರಯೋಜನವಾಗುವ ಕ್ರಮವೆಂದು ನಾವು ತಿಳಿಯುವದಿಲ್ಲ. ಮಾರ್ಗಗಳ ಅಭಾವದಲ್ಲಿ ಗ್ರಾಮಗಳೊಳಗಿನ ಕಾಳು-ಕಡಿಗಳ ದರ ಕೆಲ ಮಟ್ಟಿಗೆ ಕಡಿಮೆಯಾಗುತ್ತಿತ್ತೇನೋ ಅಹುದು ಆದರೆ, ಇವರಿಂದ ಬೇಸಾಯಗಾರರಿಗೆ ಅಪೇಕ್ಷಿಸಿದಷ್ಟು ಪ್ರಯೋಜನ ದೊರೆಯಲಿಲ್ಲ, ದೊರೆಯುವ ಸುಚಿಹ್ನಗಳನ್ನೂ ನಾವು ಕಾಣೆವು ಮಾರ್ಗಗಳ ಅಭಾವದಲ್ಲಿ ಬೇಸಾಯಗಾರರು ಈ ಹಿಂದೆ ಈ ಪರಿ ಕಂಗೆಟ್ಟಿರಲಿಲ್ಲ. ಈಗಿನ ಪರಿಣಾಮಕ್ಕೆ ಪ್ರತ್ಯೇಕ ಕಾರಣವುಂಟು. ಪವನಿಗೂ ರೂಪಾಯಿಗೂ ಇರುವ ಪ್ರಮಾಣವನ್ನು ೧೩ ರೂಪಾಯಿಗೆ ಇಳಿಸಿದಂದಿನಿಂದ ಬೇಸಾಯಗಾರರ ಬರುವರಿ ಕಡಿಮೆಯಾಗಿ, ಕೊಡುವರಿ ಮಿಗಿಲಾಗಿ ಅವರು ದುರ್ದೆಸೆಗೀಡಾಗಕಾರಣ, ಅಧೋಗತಿಗೆ ಇಳಿಯಲಿಕ್ಕೂ ಇದೇ ಕಾರಣ; ಸಾಲದ ಹೊರೆ ಏರಲಿಕ್ಕೂ ದಾರಿದ್ರ್ಯ ಮಿಗಿಲಾಗಲಿಕ್ಕೂ ಇದೊಂದೇ ಕಾರಣ! ಕಳೆದ ೧೦ ೧೫ ವರ್ಷಗಳೊಳಗಿನ ಸಮಗ್ರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದರೆ, ಹಿಂದವಾಸಿಯರ ದಾರಿದ್ರ್ಯಕ್ಕೂ ಹಿಂದುಸ್ಥಾನ ಸರಕಾರದ ವಿನಿಮಯ ಧೋರಣಕ್ಕೂ ಪವನು ರೂಪಾಯಿಗಳ ಸಂಬಂಧಕ್ಕೂ ಒಂದೇ ಸಲ ಪ್ರಾರಂಭವಾಯಿತೆಂದು ಸ್ಪಷ್ಟವಾಗಿ ತಿಳಿಯಬಹುದು ಈ ಧೋರಣವಲ್ಲ ತಿದ್ದುಪಾಟವಾದನಕ ರೂಪಾಯಿಯನ್ನು ನಮ್ಮಲ್ಲಿಯ ಪರಿಸ್ಥಿತಿಗನುರೂಪವಾಗಿ ಏರಿಳಿಯುವಂತೆ ಏರ್ಪಾಟಾದನಕ ಬೇಸಾಯಗಾರರ ಬಾಳ್ವೆ ಸುಧಾರಿಸದು ಋಣವಿಮೋಚನ ಮಾಡಿರಿ, ಮಾರ್ಗಗಳನ್ನು ಕಟ್ಟಿಸಿರಿ, ಗ್ರಾಮೋದ್ಧಾರ ಮಾಡಿರಿ, ಒಡೆಯರಿಗೆ ಮೀಸಲಿಟ್ಟ ಹಕ್ಕುಗಳನ್ನು ಒಕ್ಕಲಿಗರಿಗೆ ನಿರ್ಮಿಸಿಕೊಡಿರಿ, ಭೂಕಂದಾಯವನ್ನು ಸೂಟ ಬಿಡಿರಿ, ಬೇಕು-ಬೇಕಾದದ್ದನ್ನು ಮಾಡಿದಾಗ್ಯೂ ವಿನಿಮಯ ಧೋರಣದಲ್ಲಿ ಅಂದರೆ ರೂಪಾಯಿಯ ಬೆಲೆಯನ್ನು

ನಿಶ್ಚಯಿಸುವ ಧೋರಣದಲ್ಲಿ ತಿದ್ದುಪಾಟಾದ ಹೊರತು ಬೇಸಾಯಗಾರರು ಭಾಗ್ಯಸಂಪನ್ನರಾಗಲಾರರು. ಇಲಿಯನ್ನು ಗುದ್ದಿನಿಂದ ಹೊರತೆಗೆಯದೆ ಅದನ್ನು ಒಳಗೇ ಇರಗೊಟ್ಟು ಮೇಲೆ ಮಣ್ಣು ಮುಚ್ಚುವ ಕ್ರಮ ನಿರರ್ಥಕವೆಂಬುದು ಲೋಕಾನುಭವದ ಸಂಗತಿ. ಹಿಂದುಸ್ಥಾನದ ದಾರಿದ್ರ್ಯಕ್ಕೆ, ಮರ್ದನೆಗೆ, ಅಧಃಪಾತಕ್ಕೆ ಸರಕಾರದ ವಿನಿಮಯ ಧೋರಣವೇ ಕಾರಣವೆಂದು ಅರ್ಥಶಾಸ್ತ್ರಜ್ಞರು ಸಪ್ರಮಾಣ ಪ್ರತಿಪಾದಿಸುತ್ತಾರೆ. ಮದ್ರಾಸದೊಳಗಿನ ಪ್ರಸಿದ್ಧ ಯುರೋಪಿಯನ್ ಅರ್ಥಶಾಸ್ತ್ರಜ್ಞರಾದ ಡಾ|| ಪಿ ಜೆ ಥೊಮಸ್‌ರವರು ಯುರೋಪಿಯನ್ ಪಕ್ಷಪಾತಿಗಳು ಈಗಿನ ವಿನಿಮಯದ ಧೋರಣದಲ್ಲಿ ಹೆಚ್ಚು-ಕಡಿಮೆ ಮಾಡಿದರೆ ಹಿಂದುಸ್ಥಾನವು ಉದ್ಧಾರ ಹೊಂದಲಿಕ್ಕಿಲ್ಲವಾಗಿ ಅವರು ಅಭಿಪ್ರಾಯಪಡುತ್ತಿರುವಾಗ, ಈ ಧೋರಣದ ಮೂಲಕ ಬ್ರಿಟಿಶರಿಗೆ ಸಂಕಟಕಾಲದಲ್ಲಿ ಲಾಭವಾಯಿತೆಂದು ಒಪ್ಪಿಗೆ ಕೊಡುತ್ತಾರೆ. ಇವರ ಮೇಲಿಂದಲೂ ನಮ್ಮ ಸಿದ್ಧಾಂತವೇ ಸಿದ್ಧವಾಗುತ್ತದೆ. ವಿನಿಮಯ ಧೋರಣ ಬ್ರಿಟಿಶರಿಗೆ ಅನುಕೂಲವಾಗಿ ನಿರ್ಣಯಿಸಲ್ಪಟ್ಟಿರುವದೆಂದು ಹೇಳಲು ಬೇರೆ ಸಾಕ್ಷಿ ಈವಾಗ ಅನವಶ್ಯಕ. ಮುಂಬಯಿ 'ಟೈಮ್ಸ್' ಕರ್ತರು ಡಾ|| ಥೊಮಸ್‌ರವರ ಅಭಿಪ್ರಾಯವನ್ನು ಸಮಾಲೋಚಿಸುವಾಗ ಹಿಂದೀಯರು ಕಾಳು-ಕಡಿಗಳನ್ನು ಹೆಚ್ಚಾಗಿ ಬೆಳಸಿ ಆತ್ಮೋದ್ಧಾರ ಸಾಧಿಸಿಕೊಳ್ಳಬೇಕೆಂದು ಬೋಧಿಸುತ್ತಾರೆ. ಬೆಳೆದ ಬೆಳಸಿಗೆ ತಕ್ಕ ದರ ಸಿಗದೆ ಬೆಳಸಿದ ಬೇಸಾಯಗಾರರು ಕಷ್ಟದಲ್ಲಿ ಸಿಲುಕಿಕೊಂಡಿರುವಾಗ, ಅದೇ ಬೆಳಸು ಇನ್ನೂ ಹೆಚ್ಚೆಚ್ಚು ಅಗ್ಗವಾಗಿ ದೊರೆಯಬೇಕೆಂದು ಮುಂಬಯಿ 'ಟೈಮ್ಸ್' ಕರ್ತರು ಬೋಧಿಸುವದು ಸುಲಭ. ಆದರೆ ಅದಕ್ಕೆ ತಕ್ಕದ್ದಾಗಿ ವರ್ತಿಸುವಂತೆ ಪರಿಸ್ಥಿತಿಯಲ್ಲಿ ಅಭ್ಯಂತರವಾಗಬೇಕಲ್ಲವೇ? ಬೆಳೆದ ಬೆಳಸಿಗೆ ತಕ್ಕಷ್ಟು ಪ್ರತಿಫಲ ದೊರೆಯದಿದ್ದರೆ ಅದರ ಕಾರಣವನ್ನು ಪರಿಶೋಧಿಸಿ ಅದನ್ನು ಬಗೆಹರಿಸುವದು ಮುಂಬಯಿ 'ಟೈಮ್ಸ್' ದಂಥ ವಿಚಾರವಂತ ಪತ್ರಕರ್ತರ ಕರ್ತವ್ಯ. ಆ ಗೊಡವೆಯನ್ನೇ ಬಿಟ್ಟು, ಇನ್ನಷ್ಟು ಬೆಳಸುಗಳನ್ನು ಬೆಳಸಿ ಆತ್ಮೋದ್ಧಾರ ಮಾಡಿಕೊಳ್ಳಿ ಹೇಳುವದು ವಿಚಾರವಂತರ ಧರ್ಮವಲ್ಲ. ರಾಷ್ಟ್ರೀಯ ಸಭೆಯವರು ಒಳಮರ್ಮವನ್ನು ಗ್ರಹಿಸಿದ್ದಾರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ರಾಷ್ಟ್ರಪತಿಗಳಾದ ಶ್ರೀ|| ಸುಭಾಸಚಂದ್ರ ಬೋಸರವರು ವಿನಿಮಯ ಕಾನೂನಿನೊಳಗೆ ತಕ್ಕ ತಿದ್ದುಪಾಟು ಮಾಡಲು ರಾಷ್ಟ್ರೀಯಸಭೆಯವರು ಕರ್ತವ್ಯಬದ್ಧರಿದ್ದಾರೆಂದು ಪ್ರಕಟಣೆ ಹೊರಡಿಸಿದ್ದಾರೆ. ಕೊಂಗ್ರೆಸ ಪ್ರಾಂತಿಕ ಸರಕಾರಗಳೂ ಇದನ್ನೇ ಧ್ಯೇಯವಾಗಿಟ್ಟುಕೊಂಡು ಹಿಂದುಸ್ಥಾನ ಸರಕಾರದೊಡನೆ ಪತ್ರವ್ಯವಹಾರ ನಡಿಸುತ್ತಿವೆ. ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳು ಬೇಸಾಯಗಾರರ ಉದ್ಧಾರಕ್ಕಾಗಿ ಸಮ್ರಾಟರಿಂದ ಹಿಂದುಸ್ಥಾನಕ್ಕೆ ಕಳುಹಲ್ಪಟ್ಟ ಪ್ರಭುಗಳು. ದೊರೆಗಳು ದೀರ್ಘವಿಚಾರ ಮಾಡಿ ಹಿಂದೀ ಬೇಸಾಯಗಾರರ ಕಲ್ಯಾಣವನ್ನೇ ಕಾಂಕ್ಷಿಸಿ ಕೃತ್ರಿಮವಾಗಿ ಬ್ರಿಟಿಶ ಕಾರಖಾನೆಯವರಿಗೆ, ಸಾವಕಾರರಿಗೆ ಅನುಕೂಲವಾಗಿ ನಿರ್ಣಯಿಸಿದ ವಿನಿಮಯ-ಧೋರಣವನ್ನು ಸಂಪೂರ್ಣವಾಗಿ ಅಲ್ಲಗಳೆದು ಹಿಂದುಸ್ಥಾನದ ಪರಿಸ್ಥಿತಿಗನುರೂಪವಾಗಿ ನಿರ್ಣಯಿಸುವ ಸದ್ಬುದ್ಧಿ ತಳೆಯಲೆಂದು ನಾವು ಪ್ರಾರ್ಥಿಸಿಕೊಳ್ಳುತ್ತೇವೆ. ರಾಷ್ಟ್ರಸಭೆಯವರ ಸಹಕಾರದಿಂದ ದೊರೆಗಳು ಇಷ್ಟು ತಿದ್ದುಪಾಟುಗಳನ್ನು ಕೈಕೊಂಡರೆ ಬೇಸಾಯಗಾರರ ಉದ್ಧಾರಕರ್ತರೆಂದು ಲೋಕದಲ್ಲಿ ಶಾಶ್ವತವಾಗಿ ಕೀರ್ತಿಪಡೆಯುವರು. ಬೇಸಾಯಗಾರರ ಉದ್ಧಾರವು ಬೇಸಾಯಗಾರರ ಮೇಲೆ ಅವಲಂಬಿಸಿಕೊಂಡಿರುವಂತೆಯೇ ಬೇಸಾಯಗಾರರ ಮೇಲೆ ರಾಜ್ಯಾಡಳಿತ ನಡಿಸುವ ರಾಜ್ಯಕರ್ತರ ಮೇಲೆಯೂ ಅವಲಂಬಿಸಿರುವದೆಂದು ನಾವು ಈವಾಗ ಹೇಳುವದನವಶ್ಯಕ.

ಹಿಟ್ಲರನಿಗೀಗ ವಸಾಹತುಗಳು ಬೇಕು!

[ನಿರೀಕ್ಷಕನು ಬರೆದುದು]

ಮಹಾಯುದ್ಧದಲ್ಲಿ ಜರ್ಮನಿಯ ವಸಾಹತುಗಳನ್ನು ಬೇರೆ ಬೇರೆ ಜನಾಂಗಗಳು ಹಂಚಿಕೊಂಡಿದ್ದವಷ್ಟೇ! ಆಗ ಜರ್ಮನಿಯು ಸೋತುಹೋಗಿತ್ತು, ಗೆದ್ದ ರಾಷ್ಟ್ರಗಳು ಸುಲಿಗೆಯ ಪಾಲುಪಟ್ಟಿ ಮಾಡಿಕೊಳ್ಳುತ್ತಿದ್ದವು. ಆ ಕಾಲದಲ್ಲಿ ಬೆಲ್ಜಿಯಮ್, ಫ್ರಾನ್ಸ್, ಬ್ರಿಟನ್, ಪೋರ್ತುಗಾಲ ಮೊದಲಾದ ದೇಶಗಳು ಆಫ್ರಿಕದೊಳಗಿನ ವಸಾಹತುಗಳನ್ನು ಒಳ್ಳೇ ಕಾರಭಾರ ಮಾಡುವ ವೇದಾಂತ ಹೇಳಿ ತಮ್ಮ-ತಮ್ಮೊಳಗೆ ಹಂಚಿಕೊಂಡವು. ವಸಾಹತುಗಳನ್ನು ಜರ್ಮನಿಯಿಂದ ಅಪಹರಿಸಬೇಕೆಂದು ಮೊದಲು ಮಿತ್ರ-ಜನಾಂಗಗಳ ವಿಚಾರವಿರಲಿಲ್ಲ. ಆದರೆ ವಸಾಹತುಗಳನ್ನು ಜರ್ಮನ್ನರ ಕೈಯಲ್ಲಿ ಇರಗೊಟ್ಟಲ್ಲಿ ಜರ್ಮನಿಯು ಪ್ರಬಲವಾಗಿ ಮುಂದೆ ಯುದ್ಧ ಹೂಡಬಹುದಾಗಿಯೂ ಆ ಪ್ರಕಾರ ಯುದ್ಧವಾದಲ್ಲಿ ವಸಾಹತುಗಳಿಂದ ಮಿತ್ರರಾಷ್ಟ್ರಗಳಿಗೆ ಆತಂಕವಾಗಬಹುದಾಗಿಯೂ ರಾಜಕಾರಣ ಧುರಂಧರರ ಅಭಿಪ್ರಾಯವಾಯಿತು. ಮತ್ತು ಅದಕ್ಕನುಸಾರವಾಗಿ ವಸಾಹತುಗಳು ಸುರಾಜ್ಯ ಪ್ರಸ್ಥಾಪನೆಗಾಗಿ ಬೇರೆ ಬೇರೆ ಜನಾಂಗಗಳೊಳಗ ಹಂಚಿಕೊಳ್ಳಲಾದವು. "ಆ ವಸಾಹತುಗಳು ನನ್ನವು, ನನ್ನ ಜರ್ಮನಿಯವು, ಅವನ್ನು ನನಗೆ ಹಿಂತಿರುಗಿ ಕೊಡಬೇಕು; ಅದಕ್ಕಾಗಿ ನಿಮ್ಮೆಲ್ಲರೊಡನೆ ವಿನಂತಿ ಮಾಡುತ್ತೇನೆ, ಮಧ್ಯಸ್ಥಿಕೆ ನಡಿಸುತ್ತೇನೆ. ಅದಕ್ಕೆ ನೀವು ಎಲ್ಲರೂ ಒಪ್ಪಬೇಕು. ಒಪ್ಪದಿದ್ದರೆ ನಾನು ಬೇರೆ ಉಪಾಯವನ್ನು ಕೈಕೊಳ್ಳುವೆನು." ಹೀಗ ಮ್ಯುನಿಕ್‌ದಲ್ಲಿ ಘೋಷಣೆ ಮಾಡಿ ಬ್ರಿಟಿಶ-ಫ್ರೆಂಚರಿಗೆ ಹಿಟ್ಲರರು ಎಚ್ಚರಿಕೆ ಕೊಟ್ಟಿದ್ದಾರೆ. ವಸಾಹತುಗಳನ್ನು ಹಿಟ್ಲರರಿಗೆ ಒಪ್ಪಿಸಲು ಬೆಲ್ಜಿಯಮ್-ಪೋರ್ತುಗಾಲ ದೇಶಗಳ ಒಪ್ಪಿಗೆಯಿಲ್ಲ; ಫ್ರೆಂಚ ಸರಕಾರವು ಒಡಂಬಡುವದಿಲ್ಲ. ಆದರಿಂದ ಮುಖ್ಯ ಪ್ರಧಾನರಾದ ಚೆಂಬರಲೇನರವರು ಚಿಂತಾಮಗ್ನರಾಗಿದ್ದಾರೆ. ಫ್ರೆಂಚ ಸರಕಾರದೊಡನೆ ಪ್ರತ್ಯಕ್ಷ ವಿಚಾರ-ವಿನಿಮಯ ಮಾಡುವದಕ್ಕಾಗಿ ಮುಖ್ಯ ಪ್ರಧಾನರಾದ ಚೆಂಬರಲೇನರವರೂ ವಿದೇಶ ಪ್ರಧಾನರಾದ ಹೆಲಿಫೆಕ್ಸ ದೊರೆಗಳೂ ಪಾರೀಸ ಪಟ್ಟಣಕ್ಕೆ ತೆರಳಿದ್ದಾರೆ. ಚೆಂಬರಲೇನರಿಗೆ ಯುದ್ಧಭೀತಿ ತೋರಿಸಿದೊಡನೆ ಅವರು ಹೆದರುತ್ತಾರೆಂದು ಹಿಟ್ಲರನಿಗೆ ಗೊತ್ತಾಗಿದೆ! ಹಿಟ್ಲರನು ವಿಮಾನುಗಳ ಮೇಲಿಂದ ಗರುಡಶಕ್ತಿಯಂತೆ ಒಮ್ಮೆಲೇ ಉಡ್ಡಾಣ ಮಾಡಿ ಲಂಡನ್ ಪಟ್ಟಣವನ್ನು ಉಧ್ವಸ್ತ ಮಾಡುವನೆಂದು ಮುಖ್ಯ ಪ್ರಧಾನರು ಹೆದರುತ್ತಾರೆ. ಇಂಗ್ಲಂಡದೊಳಗೆ ವಿಮಾನು ನಾಶಕ ತೋಪುಗಳಿಲ್ಲ, ಇದ್ದ ಸಾಹಿತ್ಯ ಪುರಾತನ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿಡುವಂತಹದೆಂದು ಮೊನ್ನೆ ನಡೆದ ಪಾರ್ಲಿಮೆಂಟಿನ ಸಭೆಯಲ್ಲಿ ಮೊರಿಸನ್ ಎಂಬ ಕೂಲಿಕಾರ ಪಕ್ಷದ ಸಭಾಸದರು ವಿಮಾನು ಇಲಾಖೆಗೆ ಹೀಯಾಳಿಸಿದರು. ಆದರೆ ವಿಮಾನು ಹಾರಿ ಬಂದೊಡನೆ ಕಂದಕಗಳಲ್ಲಿ ಅಡಗಿಕೂತುಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುವ ಏರ್ಪಾಟಾಗಿದೆ. ಆದರೆ, ಈ ತಯಾರಿ ಸಾಲದು. ಆದಕ್ಕಾಗಿ ಪ್ರಚಂಡ ಸ್ವಯಂಸೇವಕ ಸೈನ್ಯಪಥಕಗಳನ್ನು ತಾವು ಸಂಘಟಿಸುತ್ತಿದ್ದೇವಾಗಿ ವೈಮಾನಿಕ ಇಲಾಖೆಯ ಪ್ರಧಾನರು ಪಾರ್ಲಿಮೆಂಟಿನ ಸಭಿಕರಿಗೆ ಸಮಾಧಾನ ಹೇಳಿದರು. ವಿಮಾನ-ವಿದ್ಯೆಯಲ್ಲಿ ಜರ್ಮನಿಗೆ ಸರಿಗಟ್ಟಿದರೆ ರುಶ್ಯಾವೇ ಸರಿಗಟ್ಟಬೇಕು, ಬೇರೊಬ್ಬರಿಲ್ಲ. ಹಿಟ್ಲರನ ಕಡೆ ಪ್ರಚಂಡ ವಿಮಾನುಗಳಿವೆ, ವೇಗವುಳ್ಳ ವಿಮಾನುಗಳಿವೆ. ವಾಯುವೇಗದಿಂದ ಒಮ್ಮೆಲೇ ಹಾರಿಹೋಗಿ ತುಂಬ ಅನರ್ಥವನ್ನು ಅವು ಮಾಡಬಲ್ಲವು. ಸ್ಪೇನ ದೇಶದ ರಣಭೂಮಿಯಲ್ಲಿ ಪ್ರತ್ಯಕ್ಷವಾಗಿ ಜರ್ಮನ್ ವಿಮಾನುಗಳು ಫ್ರೆಂಕೋ ಪಕ್ಷಪಾತಿಯಾಗಿ ಅಗ್ನಿವೃಷ್ಟಿಯನ್ನು ಸುರಿಸಿ ನಡಿಸುವ ಅನರ್ಥದ ವರ್ಣನೆ ಕೇಳಿ ಬ್ರಿಟಿಶರು ಬೆದರಿಹೋಗಿದ್ದಾರೆಂದು ನಾನು ತಿಳಿಯುತ್ತೇನೆ. ಜರ್ಮನಿಯ ಮೇಲೆ ವಿಮಾನುಗಳನ್ನು ಹಾರಿಸಿ ಹಿಟ್ಲರನನ್ನು ಹಣ್ಣಿಗೆ ತರುವದಾದರೂ ಕಠಿಣವೇ. ಯಾಕಂದರೆ ಆಕಾಶ ಮಾರ್ಗದಲ್ಲಿ ಸಂಚರಿಸುವ ವಿಮಾನನ್ನು ಥಟ್ಟನೆ ನೆಲಕ್ಕುರುಳಿಸುವ ಹೊಸ ತುಪಾಕಿಗಳನ್ನು ಜರ್ಮನ್ನರು ಪರಿಶೋಧಿಸಿದ್ದಾರೆ. ಮೊನ್ನೆ ಮೊನ್ನೆ ಸ್ಪೇನದೊಳಗಿನ ಇಬ್ರೋ ರಣಭೂಮಿಯಲ್ಲಿ ಈ ತುಪಾಕಿಗಳಿಂದ ಲೋಕಪಕ್ಷದ ವಿಮಾನುಗಳನ್ನು ಜರ್ಮನ್ ಸೈನಿಕರು ನೆಲಕ್ಕುರುಳಿಸಿದ ವರ್ಣನೆ ಬಂದಿದೆ. ಈ ತುಪಾಕಿಗಳ ರಹಸ್ಯವನ್ನು ಜರ್ಮನ್ನರು ಬೇರೆ ಯಾರಿಗೂ ಹೇಳುವದಿಲ್ಲ. ಈ ತುಪಾಕಿಗಳನ್ನು ಜರ್ಮನರೇ ಉಪಯೋಗಿಸಬೇಕು, ಗುಟ್ಟು ತಿಳಿದವರೇ ಹಾರಿಸಬೇಕು. ವಿಮಾನು ಎಲ್ಲಿಯೂ ಇರಲಿ, ಎಷ್ಟು ವೇಗದಿಂದ ಹಾರುತ್ತಿರಲಿ, ಯಾವದೇ ದಿಕ್ಕಿಗೆ ಹೇಗೂ ಹಾರುತ್ತಿರಲಿ, ಈ ತುಪಾಕಿಗಳಿಂದ ಗುರಿಹಿಡಿದು ಹೊಡೆದು ಅವನ್ನು ನೆಲಕ್ಕುರುಳಿಸಬಹುದಂತೆ! ಹುಲಿಯು ಮೃಗವನ್ನೇ ಗುರಿಯಾಗಿಟ್ಟುಕೊಂಡು ಬೆನ್ನಿಗೆ ಓಡುತ್ತಿರುವಂತೆ ಈ ತುಪಾಕಿಯೊಳಗಿನ ಗುಂಡು ವಿಮಾನುಗಳ ಬೆನ್ನಿಗೆ ಹಾರುತ್ತಿರಬೇಕೆಂದು ನನಗನಿಸುತ್ತದೆ. ಲೋಹಚುಂಬಕದಂತೆ ಆಕರ್ಷಣ ಶಕ್ತಿ ಈ ಗುಂಡಿನಲ್ಲಿರಬಹುದು. ಈ ಪರಿ ಜರ್ಮನಿಯೊಳಗೆ ಸಿದ್ಧತೆಗಳಿರುವದರಿಂದ ಚೆಂಬರಲೇನರು ಹಿಟ್ಲರರೊಡನೆ ಸಂಧಾನ ಮಾಡಿಕೊಳ್ಳಲು ಆತುರಪಡುತ್ತಾರೆ. ಹಿಟ್ಲರರಿಗಿದಿರಾಗುವಲ್ಲಿ ಬ್ರಿಟಿಶ ಫ್ರೆಂಚರಿಗೆ ನೆರವಾಗಲು ರುಶ್ಯರು ಸಿದ್ಧರು. ಆದರೆ ಅವರ ಸಹಾಯವನ್ನು ಬ್ರಿಟಿಶರು ನಿರಾಕರಿಸುತ್ತಾರೆ, ಫ್ರೆಂಚರ ನಿರುಪಾಯ! ಹೀಗಾಗಿ ಪಾರಿಸದೊಳಗಿನ 'ಸೊಯಿರ' ಪತ್ರಿಕೆಯು ಒರೆದಂತೆ, ಯುರೋಪ ಖಂಡವನ್ನು ಚೆಂಬರಲೇನ ಹಿಟ್ಲರರು ಪಾಲುಪಟ್ಟಿ ಮಾಡಿ ಹಂಚಿಕೊಳ್ಳುವ ಕಾಲ

(ಹಿಂದಿನ ಪಾನದ ಮೇಲೆ ಮುಂದುವರಿಸಿದೆ)

ಸ್ಥಾನಿಕ ವೃತ್ತಾಂತ.

ಕುಂದಗೋಳ— ಕಳೆದ [illegible] ಮೇಲಿನ [illegible] ಲು ತೋರುತ್ತಿದ್ದವು [illegible] ತ್ತು ಇನ್ನು ಮುಂದೆಯಾಗುವ [illegible] ಶಕ್ಯವಾಗುತ್ತದೆ [illegible] ಮುಂದಣ [illegible]

ಇಲ್ಲಿ ಶ್ರೀ [illegible] ಅಂದು [illegible] ಯಂತೆ ವೈಭವದಿಂದಲೂ ಉತ್ಸಾಹದಿಂದಲೂ ನೆರವೇರಿತು. ಉತ್ಸವವು [illegible] ಮೇಲೆ [illegible] ಕಂಡುಬಂದ [illegible] ನಾಗದ ಭಾಗದಲ್ಲಿ [illegible] ಕೆಂಗೆಳೆಯರ [illegible] ಸರು ಈ ಅತ್ಯಾಚಾರ [illegible] ಟ್ಟ ಬಿಟ್ಟು ಅವರನ್ನು [illegible] ಯಾಚಿಸಬೇಕೆಂದು ವಿನಂತಿ [illegible]

ಕುಂದಗೋಳ ನಗರ ಸಭೆಯು [illegible] ಕಾರ್ಯಕ್ರಮಕ್ಕೆ [illegible] ಯಾವಿಗಳು ಕಳೆದ ವಾರ ಪ್ರಸಿದ್ಧವಾಗಿದೆ [illegible] ನ್ನಲ್ಲಿಯುವ [illegible] ದ ಮಾಡಲು ಪ್ರಯತ್ನ [illegible] ಕೆಂಗ್ರೆಸ ಕವಿಾಟಿಯವರು ಈ ಚುನಾವಣೆಯಲ್ಲಿ ಪ್ರವೇಶ ಮಾಡ ಬೇಕೆಂದು ಕೆಲವರು [illegible] ಷಗಳ ಪರಿಸ್ಥಿತಿಯಲ್ಲಿ ಕೊಂಗ್ರೆಸ್ಸಿನವರು ಈ ಚುನಾವ [illegible] ಪ್ರವಾಹವರು [illegible] ಕೆಲವರ ಅಂಬೋಣ. ಅಂತು ಬರುವ ಚುನಾವಣೆಯಲ್ಲಿ ಹೊಸ ಹೊಸ ಜನರೂ [illegible] ಮುಂದೆ ಬರುವರೆಂದು ತೋರುತ್ತದೆ.

ಮೆರವಣಿಗೆಯಲ್ಲೊಂದು ಧರ್ಮದ ಚಿಹ್ನೆಂದು [illegible] ಕಟ್ಟಬೇಕೆಂದು ಇಲ್ಲಿಯ ನಗರ ಸಭೆಯಲ್ಲಿ ಬಹು ಮತದಿಂದ [illegible] ಇಂಥ ಅನಾವಶ್ಯಕ ಧರ್ಮದಾಟ [illegible] ನಗರ ಸಭೆಯು [illegible] ನಗರ ಸಭೆಯು [illegible] ಅಧ್ಯಕ್ಷರ [illegible] ಜಿಲ್ಲಾ [illegible] ಕಟ್ಟುವ [illegible] ದೆಂದು [illegible] ಅಧ್ಯಕ್ಷರು [illegible] ಕಳೆದ [illegible] ನಗರ ಸಭೆಯ [illegible] ಅವರು ಅಧ್ಯಕ್ಷರ [illegible] ಯ [illegible] ([illegible]) [illegible] ಸರಕಾರದ [illegible] ಮತದಿಂದ ಮಂಜೂರ ಮಾಡಿ, ಸಭೆಯವರಿಗಿಂದ [illegible] ಬಿದ್ದು ಹೋದರು! [illegible] ಈಗ ಈ ಧರ್ಮದಾಟಿಯು [illegible] ಬರುತ್ತದೆ.

ಧಾರವಾಡದ ಹಿಂದೀ ವಿದ್ಯಾಲಯದ ಪ್ರಾಧ್ಯಾಪಕ ರಾ॥ ನಾಗರಾಜ [illegible] ರವರು ಕಳೆದ [illegible] ಗೋಕರ್ಣದೊಳಗಿನ ಹಿಂದೀ ಕೇಂದ್ರಕ್ಕೆ ಸಂದರ್ಶಿಸಿತ್ತರು [illegible] ಕೇಂದ್ರದ [illegible] ನಿಯಾಮಕರಾದ [illegible] ಅವರ [illegible] ಹಿಂದೀ [illegible] ಕೇಂದ್ರದಿಂದ [illegible] ವಿದ್ಯಾರ್ಥಿಗಳು [illegible] ಪರೀಕ್ಷೆಯಲ್ಲಿ [illegible] ಮತ್ತು ಪ್ರಥಮಾ ಪರೀಕ್ಷೆ [illegible] ವಿದ್ಯಾರ್ಥಿಗಳು [illegible] ಮುಂದಿ ವಿದ್ಯಾರ್ಥಿಯು [illegible]

[illegible] ಹಿಂದೀ ಕೇಂದ್ರದಿಂದ ಪ್ರಥಮಾ [illegible] ಪರೀಕ್ಷೆಗೆ ಅನುಕ್ರಮ [illegible] ಜನರು ಕೂತಿದ್ದರು. ಅವರಲ್ಲಿ ಅನುಕ್ರಮ [illegible] ವಿದ್ಯಾರ್ಥಿಗಳು ಉತ್ತೀರ್ಣರಾ [illegible] ಪರೀಕ್ಷೆಗೆ [illegible] ವಿದ್ಯಾರ್ಥಿಗಳ ಬಗ್ಗೆ ಈಗಾಗಲೇ ವರ್ಗ [illegible] ಶಿಕ್ಷಣ ಪ್ರಕಟ ಕೊಡಲಾಗುತ್ತದೆ [illegible] ವಿದ್ಯಾರ್ಥಿಗಳು ಅಧ್ಯಾಪಕ ರಾ [illegible] ಬಹುತ ಪಟ್ಟಿಯನ್ನು [illegible] ಯಾಗಬಹುದು.

ಹೊನ್ನಾವರ— [illegible] ಹಳ್ಳಿಗ [illegible] ಬರೆಯುತ್ತಾರೆ — " [illegible] ಬೋರ್ಡಿನ [illegible] ಬಂದಿವೆ. ಹಳ್ಳಿಗರ ಹಿತ [illegible] ಹಳ್ಳಿಗರಿಗೆ ಮುಖ್ಯವಾಗಿ [illegible] ಅನುಕೂಲತೆ ಬಗ್ಗೆ ರಸ್ತೆಗಳು, [illegible] ವ್ಯವಸ್ಥೆ [illegible] ಅವಶ್ಯ [illegible] ಚುನಾವಣೆಗಳು [illegible] ಬಂದಾಗ ಉಮೇದವಾರರು ನಮ್ಮಲ್ಲಿ ಬಂದು, [illegible] ಮಾಡುತ್ತೇನೆ, ಹಾಗೆ ಮಾಡುತ್ತೇನೆ, ನಮ [illegible] ನಮಗೆ [illegible] ಎಂದು ಹೇಳುತ್ತಾರೆ. ಚುನಾವಣೆ ಮುಗಿದ ಮೇಲೆ ಈ ಮಹಾಶಯರ ದರ್ಶನ ಸಿಗುವದು ಅಪರೂಪ! ಇಂಥವರಿಂದ ನಮಗೇನು ಪ್ರಯೋಜನ? ಕಾರಣ ಜಿಲ್ಲಾ ಕೊಂಗ್ರೆಸ ಡಿಸ್ಟ್ರಿಕ್ಟ್ ಬೋರ್ಡಿನವರು ಆಯಾ ಕೇಂದ್ರಕ್ಕೆ ಆಯಾಯ ಕೇಂದ್ರದ ಸುಬುದ್ಧ ಹಳ್ಳಿಗರಿಗೆ ಮುಖಂಡರಾಗಿ ಆರಿಸಬೇಕಾಗಿ ನನ್ನ ಸೂಚನೆ. ಹಳ್ಳಿಗರಿಗೇ ಹಳ್ಳಿಗರ ಸುಖ ದುಃಖಗಳ ಅರಿವಿದೆ. ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆ ನಿಯಮಗಳು ನೋಡುವದಕ್ಕೆ ಸಿಗುತ್ತವೋ ಹೇಗೆ? ಮತದಾರರುಗಳಾಗುವ ಬಗ್ಗೆ ಬೋರ್ಡಿನ ಕಡೆ ಅರ್ಜಿದಾರರು ರೇವಿನ್ಯೂ, ಆ ಅರ್ಜಿದಾರರು ಮತದಾರರುಗಳಾಗಿ ಆರಿಸಲ್ಪಡದಿದ್ದಲ್ಲಿ ಅವರಿಟ್ಟ ರೇವು ತಿರುಗಿ ಸಿಗುತ್ತದೋ ಹೇಗೆ? ಈ ಸಂಗತಿಗಳ ಖುಲಾಸೆ ಡಿಸ್ಟ್ರಿಕ್ಟ್ ಬೋರ್ಡಿನವರು ಜಾಹೀರಪಡಿಸಬೇಕಾಗಿ ವಿನಂತಿಯಿದೆ" ಇತ್ಯಾದಿ ನಿಯಮಾವಳಿ ನೋಡಲಿಕ್ಕೆ ಸಿಗುತ್ತದೆ ಬೆಲೆ ೧ ಆ.

ಬಳಕೂರಿನಿಂದ ಸಣ್ಣನ್ನ ಗೃಹಸ್ಥರೊಬ್ಬರು ಬರೆಯುತ್ತಾರೆ — « ಮಂಕಿ ಅಂಚೆ-ಕಟ್ಟೆಯಿಂದಲೇ ತಮ್ಮ ಟಪಾಲು ಬಟವಡೆಯಾಗಬೇಕೆಂದು ಮಂಕಿ-ಬಳಕೂರುಗಳ ನಡುವಿನ ಕೆಲವು ಹಳ್ಳಿಯವರು ಟಪಾಲ ಇಲಾಖೆಯ ಮೇಲಧಿಕಾರಿಗಳಿಗೆ ಅರ್ಜಿ ಮಾಡಿರುತ್ತಾರೆಂತಲೂ, ಮಂಕಿಯಿಂದ ೫-೬ ಮೈಲು ಅಂತರದಲ್ಲಿರುವ ಹಳ್ಳಿಗಳ ಟಪಾಲು ವಾಡದಲ್ಲಿ ಮೂರಾವರ್ತಿ ಬಟವಡೆಯಾಗುವಂತೆ ಇಲಾಖೆಯವರು ವ್ಯವಸ್ಥೆ ಮಾಡಬೇಕಾಗಿಯೂ ತಮ್ಮ ಮಂಕಿಯ ಸುದ್ದಿಗಾರರು ಬರೆದದ್ದು ಓದಿ ಆಶ್ಚರ್ಯವಾಯಿತು. ಸದರಿ ಸುದ್ದಿಗಾರರು ನಿಜವಾಗಿಯೂ ವಸ್ತುಸ್ಥಿತಿಯ ಜ್ಞಾನವಿಲ್ಲದವರೋ ಅಥವಾ ಮೇಲೆ ಹೇಳಿದ ಹಳ್ಳಿಗಳ ಜನರಿಂದ ಅರ್ಜಿ ಮಾಡಿಸಿದ ಕಾರಸ್ಥಾನಿಗಳ ಮಿತ್ರರೋ ತಿಳಿಯದು. ತಮ್ಮ ಮಂಕಿ ಸುದ್ದಿಗಾರರು ಹೇಳುವ ಅರ್ಜಿಯು ಕೆಲವು ಧೂರ್ತ ಕಾರಸ್ಥಾನಿಗಳು ಮಾಡಿಸಿದ ಅರ್ಜಿಯಾಗಿರುತ್ತದೆಂದು ನಮ್ಮಿತ್ತ ಬರೆಯು

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ



ಲಿವ್ಹರ್

ಕ್ಯೂರ್

ಲಿವ್ಹರ್ ಮತ್ತು ಯಕ್ರತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ!

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ

ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ,

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ್,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ — ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಅವರಿಗೆ ಚನ್ನಾಗಿ ಗೊತ್ತಿದೆ ತಮ್ಮ ಸುದ್ದಿಗಾರರ ಸೂಚನೆಯನ್ನು ತಾವು ಪಾಲಿಸಬೇಕು, ಮಂಕಿಯಿಂದ ೫ ೬ ಮೈಲುಗಳ ಅಂತರದಲ್ಲಿದ್ದ ಹಳ್ಳಿಗಳೆಂದರೆ ಚಿತ್ತಾರ, ಹಬ್ಬೂರ, ಅಡುಕಳ, ಕೋಟೆ, ತಲಗೋಡ, ಕಡಗುಟ್ಟ, ಮೇಲಿನ ಇಡಗುಂಜ ಮತ್ತು ಮೇಲಿನ ಮಂಗನೆ ಇವಾಗಿರುತ್ತವೆ ಈ ಪೈಕಿ ಚಿತ್ತಾರ ಗ್ರಾಮದ ಬಂದರದು ಮನೆಯವರ ಟಪಾಲು ಮಾತ್ರ ಯಾವಾಗಲೂ ಇರುತ್ತದೆ ಇವರಿಗೆ ಮಂಕಿಯು ಬರೇ ಮೂರು ಮೈಲು ದಿನಾಲೂ ಆ ಊರ ಜನರು ಮಂಕಿಗೆ ಹೋಗಿ ಬರುತ್ತಾರೆ ಆದ್ದರಿಂದ ಆ ಮನೆಗಳ ಜನರು ತಮ್ಮ ಟಪಾಲು ಮಂಕಿಯಿಂದಲೇ ತರಿಸುತ್ತಾರೆ ಆವಾಗ ಟಪಾಲ ಬಟವಡೆ ವಾರದಲ್ಲಿ ಮೂರಾವರ್ತಿಯೂ ಬೇಡ' ಉಳಿದ ಹಳ್ಳಿಗಳಲ್ಲಿ ಹಳ್ಳಿಯೊಂದಕ್ಕೆ ವರ್ಷದಲ್ಲಿ ೮-೧೦ ಪತ್ರಗಳು ಬಂದರೆ ಹೆಚ್ಚಾಯಿತು' ಆ ಹಳ್ಳಿಗಳಿಗೆ ವಾರದಲ್ಲಿ ಮೂರಾವರ್ತಿ ಟಪಾಲ ಬಟವಡೆ

ರೂಪಾಂತರಿಸೋಣ, ತಾಳಮಕ್ಕಿಯಿಂದ ಇಂಜಿನಿಯರಬೀತೆಯ ರಸ್ತೆಯ ತನಕ ಹೊಸ ರಸ್ತೆ, ಕೊಪ್ಪದಮಕ್ಕಿಯನ್ನು ಪೈಲೂರವರು ತಯಾರಿಸಿದ ರಸ್ತೆಗೆ ಜೋಡಿಸುವ ರಸ್ತೆ ಈ ಪ್ರಕಾರ ಜನರ ಸಹಾಯದಿಂದ ಹಲವು ಉಪಯುಕ್ತ ಕಾಮಗಾರಿಗಳನ್ನು ಮಾಡಿದ್ದಾರಾಗಿ ತಿಳಿಯುತ್ತದೆ

ಭಟಕಳ— ಹುರ್ಕಸ್ತಾನದ ಜಗತ್ಪ್ರಸಿದ್ಧ ಸರ್ವಾಧಿಕಾರಿ ಗಾಝಿ ಮುಸ್ತಾಫಾ ಕೆಮಾಲ ಪಾಶಾರವರು ನಿಧನ ಹೊಂದಿದ ವಾರ್ತೆ ಗುರುವಾರ ರಾತ್ರಿಯೇ ಇಲ್ಲಿ ತಿಳಿಯಿತು ಮರುದಿನ ಮುಸಲ್ಮಾನ ಬಾಂಧವರು ಹರತಾಳ ಆಚರಿಸಿದರು ಮಸ್ಜೀದಲ್ಲಿ ನಮಾಜ ಕಿಂದ ಮೇಲೆ ಗಾಝಿಯವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಸಾರ್ವಜನಿಕ ಪ್ರಾರ್ಥನೆಯಾಯಿತು, ಸಂಜೆಯಲ್ಲಿ ಮೆರವಣಿಗೆಯೂ ಜರುಗಿತು ... ಎನ್. ಸೈದ

ಮಾಡುವದ ನಿಶ್ಚಿತ ಯೋಜನೆ ಇನ್ನೂ ಸಿದ್ಧವಾಗಿಲ್ಲ, ಜಿಲ್ಲಾಧಿಕಾರಿಗಳು ಕಳೆದ ವಾರ ಈ ಜಾಗೆಗೆ ಮುಕ್ಕಾಮು ಮಾಡಿದ್ದರು ಹೊಳೆಯ ದಂಡೆಗುಂಟ ತಗ್ಗು ಪ್ರದೇಶಗಳಲ್ಲಿರುವ ಜನರಿಗೆ ಮನೆಕಟ್ಟಿಕೊಂಡು ಉಳಿಯುವ ಬಗ್ಗೆ ಮೇಲು ಪ್ರದೇಶದೊಳಗಿನ ಕೆಲವು ಸ್ಥಳಗಳನ್ನು ಕೊಡಲೊಪ್ಪಿದ್ದಾರೆ ಅವುಗಳಲ್ಲಿ ಕೆಲವು ಸ್ಥಳಗಳನ್ನು ಸಪಾಟ ಮಾಡಿಕೊಳ್ಳಬೇಕಾದರೆ ವಿಪರೀತ ಖರ್ಚು ತಗಲುವದಂತೆ' ಜಿಲ್ಲಾಧಿಕಾರಿಗಳು ಪುನರಾಲೋಚನೆ ಮಾಡಬೇಕು

ಈ ವಾರ ನಿರಾಶ್ರಿತ ನಿಧಿಗೆ ಬೆಳಗಾಂವಿಯ ರಾ। ಎಸ್ ಎಸ್ ಶಿರಾಲಿಯವರು ಕೊಡಿಸಿದ ರೂ ೭೬॥, ಮಂಕಿ ಸಹಕಾರಿ ಸಂಘದಿಂದ ರೂ ೨೫, ಹಡಿನಬಾಳ ಸ। ಸಂಘದಿಂದ ರೂ ೫, ಕೇಡಬಾಡ ಸ। ಸಂಘದಿಂದ ರೂ ೫,

(ಪುರವಣಿ ಮೇಲೆ ಮುಂದರಿಸಿದೆ.)

ಕೊಳ್ಳದೆ ಒಮ್ಮಿಗಲೇ ೧೧ ಘಂಟೆಗೆ ಸಭೆಯನ್ನು ೩ ೧೧—೧೧—೩೮ರ ತನಕ ತಹಕೂಬ ಮಾಡಿದ ಯಾಗಿ ಹೇಳಿ, ಸಭೆಯ ವೃತ್ತಾಂತವನ್ನು ಬರೆಯುವ ಪುಸ್ತಕವನ್ನು ಬಗಲೊಳಗೆ ಹಾಕಿ ಒಮ್ಮಿಗಲೇ ಹೊರಟು ಹೋದರು' ಕಾರ್ಯಕ್ರಮದಲ್ಲಿ ಸಬ್-ಕಮಿಟಿಗಳ ಚುನಾವಣೆಯೂ ಒಂದು ವಿಷಯವಿತ್ತು, ಅದು ಕಾರ್ಯಕ್ರಮದ ಕೊನೆಗಿತ್ತು. ಕಮಿಟಿಗಳ ಚುನಾವಣೆ ಅಂದೇ

ಮಾಡಬೇಕೆಂದು ಉಳಿದ ಸದಸ್ಯರ ಇಚ್ಛೆಯಿತ್ತು ಅಧ್ಯಕ್ಷರಿಗೆ ಚುನಾವಣೆ ಅಂದು ಆಗುವದು ಬೇಡವಾಗಿತ್ತೆಂದು ಕೆಲವರ ತರ್ಕ' ಅಂದೇ ಚುನಾವಣೆಯಾದಲ್ಲಿ ತಮ್ಮ ಬೇಳೆ ಬೇಯಲಿಕ್ಕಿಲ್ಲೆಂದು ಅವರಿಗೆ ಅನಿಸಿತಂತೆ' ಆದ್ದರಿಂದಲೇ ಅವರು ಸ್ವಂತಬುದ್ಧಿಯಿಂದ ಸಭೆ ಮುಂದರಿಸಿದರಾಗಿಯೂ ವೃತ್ತಾಂತ-ಪುಸ್ತಕವನ್ನೂ ಮನೆಗೆ ಒಯ್ದಿಟ್ಟರೆಂತಾಗಿಯೂ ಸಭಿಕರು ಪ್ರತಿಪಾದಿಸುತ್ತಾರೆ ಇಂಥ ಹಿಟ್ಲರರ

ಹಾಗೆ ಕೆಲಸ ಮಾಡುವ ಬಗೆಯೇನೆಂದು ಉಳಿದ ನಗರ-ಪಿತರು ವಿವಂಚನೆಯಲ್ಲಿ ಬಿದ್ದಿದ್ದಾರೆ' ಅವರ ಹಿಟ್ಲರ ಶಾಹಿಗೆ ಕಡಿವಾಣವಿದ್ದರೆ ತಾವು ಒಂದು ದಿನ ಹುಬ್ಬಳ್ಳಿಯ ನಗರ ಸಭೆಯ ಚಾಲು ಹಿಡಿಯಲು ಹೋಗಬೇಕಾದೀತೆಂದು ಅವರಿಗೆ ಭಯವುಂಟಾಗಿದೆ' ಕೆಲವು ಸದಸ್ಯರು ಅಧ್ಯಕ್ಷರ ನಡತೆಯ ವಿರುದ್ಧ ಮೇಲಧಿಕಾರಿಗಳ ಕಡೆ ದೂರಿಕೊಂಡಿದ್ದಾರೆಂದು ತಿಳಿಯುತ್ತದೆ ಹಿಟ್ಲರರು ಮಣಿಯುತ್ತಾರೋ ಹಣಿಯುತ್ತಾರೋ ನೋಡಬೇಕು'

THE SATISFACTION THAT ONLY CONFIDENCE CAN BRING.

Complete satisfaction is largely dependent on freedom from anxiety and worry No man can be in really good spirits if he is always worrying and anxious about his banking problems That your affairs are absolutely secure with the Syndicate gives you that confidence which promotes true satisfaction The Syndicate has enjoyed the trust and esteem of thousands of men for the past thirteen years Entrust your affairs to the Syndicate and be satisfied

THE CANARA INDUSTRIAL & BANKING SYNDICATE, LTD.,

(INCORPORATED IN BRITISH INDIA)

Estd] **UDIPI, S. INDIA** [1925.

MEMBER: Reserve Bank of India; Bankers' Clearing House, Bombay.

Authorised Capital	Rs 10 00,000	Subscribed Capital	Rs. 7,74,500
Issued Capital	Rs 8 00,000	Paid-up Capital	Rs 3,87,730

Reserves Rs 2,16,700

Banking Business of every description transacted.

ಭಟ್ಕಳ —	ನಾರಾಯಣ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ —	ಕಾಮತ ಸ್ಟೋರ್ಸ್.
ಅಂಕೋಲಾ —	ವೇದಮೂರ್ತಿ ಹನುಮಂತ ಕೇಶವ ಭಟ್ಟ.	ಗೋಕರ್ಣ —	ಎಮ್. ಪ್ಹಿ. ಬಸ್ತಿಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ	ಶಿರಸಿ —	ಆರ್. ಪ್ಹಿ. ಧಾಕಪ್ಪಾ, ಕೆಮಿಸ್ಟ.

ವಿಳಾಸ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಬ್ರಾಂಚ್ ಆಫೀಸು: ಕುಮಟಾ. ಉ. ಕ. } OR { **BHUVANENDRA PRODUCTS LTD.** Head Office: **KATAPADI, S. K.**

ಸ್ಥಾನಿಕ ವೃತ್ತಾಂತ.

ಕುಂದಾಪುರ— ಕಳೆದ [illegible] ಮೊಳೆ ಬರುವ [illegible] ತೋರುತ್ತಿದ್ದೆ [illegible] ಇನ್ನೂ [illegible] ಮೂದಗಾಳಿಯೂ [illegible]

ಇಲ್ಲಿ ಶ್ರೀ [illegible] ಉದ್ದ ವವು [illegible] ಅದನ್ನು [illegible] ಅದರಂತೆ ಆ ಮಹೋತ್ಸವವು [illegible]

ಕೇಂದ್ರದ ಅದ [illegible] ವಿನಾಯಕರಾವ ಟಿಕ್ಕರವರ ಯವರ ಅಧ್ಯಕ್ಷತೆಯಲ್ಲಿ ಆದವದೊಂದು ಸುಶ್ರಾವ್ಯ ಹಿಂದೀ [illegible] ಕೇಂದ್ರದಿಂದ ಸಪ್ಟಂಬರ [illegible] ಹಿಂದೀ ಪರೀಕ್ಷೆಗಳಿಗೆ ೪೬ ವಿದ್ಯಾರ್ಥಿಗಳು ಕೂತಿದ್ದರು ಅವರಲ್ಲಿ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ೪, ಮಧ್ಯಮಾ ಪರೀಕ್ಷೆಯಲ್ಲಿ ೨೦ ಮತ್ತು ಪ್ರಥಮಾ ಪರೀಕ್ಷೆಯಲ್ಲಿ [illegible] ವಿದ್ಯಾರ್ಥಿಗಳು ತೇರ್ಗಡೆ ಹೊಂದಿ [illegible] ಮಂದಿ ವಿದ್ಯಾರ್ಥಿನಿಯ [illegible]

[illegible] ಹಿಂದೀ ಕೇಂದ್ರದಿಂದ ಪ್ರಥಮಾ, ಮಧ್ಯಮಾ ಮತ್ತು [illegible] ಪರೀಕ್ಷೆಗಳಿಗೆ ಅನುಕ್ರಮ [illegible] ಜನರು ಕೂತಿದ್ದರು ಅವರಲ್ಲಿ ಅನುಕ್ರಮವಾಗಿ ೫, ೩, ೧ ವಿದ್ಯಾರ್ಥಿಗಳು ಉತ್ತೀರ್ಣರಾ [illegible]

ಚುನಾವಣೆ ಮುಗಿದ ಮೇಲೆ ಈ ಮಹಾಶಯರ ದರ್ಶನ [illegible] ಇಂಥವರಿಂದ ನಮಗೇನು ಪ್ರಯೋಜನ? ಕಾರಣ ಜಿಲ್ಲಾ ಕಾಂಗ್ರೆಸ ಡಿಸ್ಟ್ರಿಕ್ಟ್ ಬೋರ್ಡಿನವರು ಅಯಾ ಕೇಂದ್ರಕ್ಕೆ ಆಯಾಯ ಕೇಂದ್ರದ ಸುಬುದ್ಧ ಹಳ್ಳಿಗರಿಗೆ ಹುರಿಯಾಳುಗಳಾಗಿ ಆರಿಸಬೇಕಾಗಿ ನನ್ನ ಸೂಚನೆ. ಹಳ್ಳಿಗರಿಗೇ ಹಳ್ಳಿಗರ ಸುಖ ದುಃಖಗಳ ಅರಿವಿದೆ. ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆ ನಿಯಮಗಳು ಮಾರಾಟಕ್ಕೆ ಸಿಗುತ್ತವೋ ಹೇಗೆ? ಹುರಿಯಾಳುಗಳಾಗುವ ಬಗ್ಗೆ ಬೋರ್ಡಿನ ಕಡೆ ಅರ್ಜಿದಾರರು [illegible] ಆ ಅರ್ಜಿದಾರರು ಹುರಿಯಾಳುಗಳಾಗಿ ಆರಿಸಲ್ಪಡದಿದ್ದಲ್ಲಿ ಅವರಿಟ್ಟ ಠೇವು ತಿರುಗಿ ಸಿಗುತ್ತದೋ ಹೇಗೆ? ಈ ಸಂಗತಿಗಳ ಖುಲಾಸೆ ಡಿಸ್ಟ್ರಿಕ್ಟ್ ಬೋರ್ಡಿನವರು ಜಾಹೀರಪಡಿಸಬೇಕಾಗಿ ವಿನಂತಿಯಿದೆ" ಇತ್ಯಾದಿ ನಿಯಮಾವಳಿ ಮಾರಾಟಕ್ಕೆ ಸಿಗುತ್ತವೆ ಬೆಲೆ ೧ ಆ [illegible] ಬರೆಯು

ಸ್ಥಾನಿಕ ವೃತ್ತಾಂತ

(೯ನೇ ಪಾನಿನಿಂದ ಮುಂದರಿಸಿದ್ದು)

ಕೆನರಾ ಕೆಥೊಲಿಕ್ ಸೊಸೈಟಿಯಿಂದ ರೂ ೧೦, ಕುಮಟೆಯ ಕಚೇರಿಯಿಂದ ರೂ [illegible], ಡಾ ಪಿ ಕೆ ಕಿಣಿ [illegible]ರಿಂದ ರೂ ೫, ರಾ ಬಾ ಬು ಮಾಣು ನಾಯ್ಕರಿಂದ ರೂ ೫, ಡಾ ಎಚ್ ಬಿ ಉಪಾಧ್ಯಾಯ ಇವರಿಂದ ರೂ ೫ ೬ ೦ ಮತ್ತು ಫೋರೆಸ್ಟ ಸಾಹೇಬ ಮಿ ನಾಸ ಇವರಿಂದ ರೂ ೧೦ ದೊರೆತವೆ

ಡಾ॥ ಆರ್ ಎಸ್ ರಕ್ಷಿ ಇವರು ತಿಳಿಸುತ್ತಾರೆ— "ಮುಂಬಯಿ ಸರಕಾರದ ಹೊಸ ಪ್ರಾಥಮಿಕ ಶಿಕ್ಷಣ ಪ್ರಸಾರದ ಯೋಜನೆಯಂತೆ ಹೊನ್ನಾವರ ತಾಲೂಕಿನ ಮತ್ತು ಭಟಕಳ ಪೇಟೆಯ ಹಳ್ಳಿಗಳಲ್ಲಿ ಶಿಕ್ಷಣ ಪ್ರಚಾರ ಸಂಘಟನೆಗಳನ್ನು ಮಾಡುವ ಬಗ್ಗೆ ಜಿಲ್ಲಾ ಕಾಂಗ್ರೆಸ ಕಮಿಟಿಯವರು ಡಾ॥ ಎನ್ ಪಿ ನಾಡಕರ್ಣಿ ಎಮ್ ಎಸ್ ಜಾಲಿಸಕ್ರಿ ವಕೀಲ ಮತ್ತು ನಾನು ಈ ಮೂವರನ್ನು ನೇಮಿಸಿದ್ದಾರೆ ಕಾರಣ ಸರಕಾರ ಧನಸಹಾಯ ಸ್ವೀಕರಿಸಿ ಆ ಕ್ಷೇತ್ರದ ಪೇಟೆಯಲ್ಲಿ ಹೊಸದಾಗಿ ತೆರೆಯಲ್ಪಟ್ಟ ಶಾಲೆಯ ಬಾಲಕರಿಗೂ, ಕನ್ನಡ ಮುಲ್ಕಿ ಇಲ್ಲವೆ ಹೆಚ್ಚಿನ ಶಿಕ್ಷಣ ಪಡೆದವರಿದ್ದು ಶಾಲೆಗಳನ್ನು ತೆರೆಯಬೇಕೆಂದು ಬಯಸುವ ತರುಣರೂ ಈ ತಿಂಗಳ ಕೊನೆಯೊಳಗಾಗಿ ನನಗೆ ಭೆಟ್ಟಿಯಾಗಬೇಕು ಇಲ್ಲವೆ ಬರೆದುಕೊಳ್ಳಬೇಕು ಶಾಲೆಯ ಶಾಲಕರು ತಮ್ಮ ಶಾಲೆಗಳ ಸವಿಸ್ತರ ಮಾಹಿತಿ ತಿಳಿಸಬೇಕು

ಶಿರಸಿ— ಕಳೆದ ವಾರ ಶ್ರೀಮನ್ನಿರಂಜನ ಶ್ರೀಗುರು ಸಿದ್ಧ ಸ್ವಾಮಿಗಳವರೂ ಶ್ರೀ॥ ಶೇಷಗಿರಿರಾವ ಕೇಶವೈನವರ ರೂ ರಾ॥ ರಮಾನಂದ ಕಾಮತರ ವ್ಯಾಯಾಮ ಶಾಲೆಗೆ ಭೆಟ್ಟಿಯನ್ನಿತ್ತು ಆಶೀರ್ವಚನವನ್ನಿತ್ತರು ದೇಶದಲ್ಲಿ ವ್ಯಾಯಾಮ ಶಿಕ್ಷಣದ ವ್ಯವಸ್ಥೆಯಿಲ್ಲದ್ದರಿಂದಲೇ ರಾಷ್ಟ್ರ ವು ಪರವಶ್ಯದಲ್ಲಿ ಬಳಲಬೇಕಾದ ಪ್ರಸಂಗ ಬಂತೆಂದು ಶ್ರೀ ಸ್ವಾಮಿಗಳ [illegible] ರಾ॥ ಕಾಮತರ ವ್ಯಾಯಾಮ ಪದ್ಧತಿ ನೋಡಿ ಸಂದರ್ಶಕರಿಗೆ ಅತ್ಯಾನಂದವಾಯಿತು

(ತಾ ೧೩-೧೧-೩೮) ಇಲ್ಲಿಯ ಸಬಜಜ್ಜ ಕೋರ್ಟಿನ ತಪಾಸಿಗಾಗಿ ಡಿ॥ ಜಜ್ಜರಾದ ಮಿ॥ ಫೊಟೆರಫೀಲ್ಡರವರು ನಾಳೆ ರವಿವಾರ ಬರುತ್ತಾರೆ ನಾಡದು ಸೋಮವಾರದಿಂದ ತಪಾಸಿಗೆ ಪ್ರಾರಂಭ

ಹಳಿಯಾಳ— ಹಳಿಯಾಳ ನಗರ ಸಭೆಯಲ್ಲಿ ಹಿಟ್ಲರಶಾಹಿಗೆ ಪ್ರಾರಂಭವಾಗಿದೆ! ಹಿಟ್ಲರರು ಬೇರೆ ಆರೂ ಅಲ್ಲ, ನಗರ ಸಭೆಯ ಅಧ್ಯಕ್ಷರಾದ ರಾ॥ ಮಾಯಪ್ಪಾ ದೇಸಾಯಿಯವರೇ ಸರಿ! ನಗರ ಸಭೆಯ ಕಾರಭಾರವೆಲ್ಲ ತಮ್ಮ ಇಚ್ಛೆಯಂತೆಯೇ ನಡೆಯಬೇಕೆಂದು ದೇಸಾಯಿಯವರ ಹಟ! ನಗರ ಸಭೆಯ ಟಪಾಲು ತಕ್ಕೊಳ್ಳುವವರೂ ಒಡೆಯುವವರೂ ದೇಸಾಯಿಯವರು! ಅಧ್ಯಕ್ಷರು ಊರಲ್ಲಿ ಇಲ್ಲದಿದ್ದಾಗಲೂ ಸಹ ಉಪಾಧ್ಯಕ್ಷರಿಗೆ ಇಲ್ಲವೆ ಕಚೇರಿಯವರಿಗೆ ಟಪಾಲು ಸಿಗಬಾರದು ನಗರದ ಪುನರ್ವಿಭಜನೆಯಂಥ ಮಹತ್ವದ ಸಮಸ್ಯೆಯ ಮೇಲೆ ಅಧ್ಯಕ್ಷರು ತಮ್ಮ ಸದಸ್ಯ ಬಂಧುಗಳ ಅಭಿಪ್ರಾಯ ಕೇಳಬಯಸುವದಿಲ್ಲ ಬೇರೆ ಬೇರೆ ಕಮಿಟಿಗಳ ಕಾರ್ಯದಲ್ಲಿ- ಇತರೆ ಸಂಗತಿಗಳಲ್ಲಿ ಸಹ ತಮ್ಮ ಕೈಹಾಕುತ್ತಾರೆ! ನೌಕರ ಜನರ ಪಾರುಪತ್ಯ ತಮ್ಮ ಕಡೆಗೇ ಇಟ್ಟುಕೊಂಡಿದ್ದಾರೆ! ಮುಂಬಯಿಯಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋದ ಈ ಅಧ್ಯಕ್ಷರು ರೇಲ್ವೆಯಲ್ಲಿ ಇಂಟರ ಕ್ಲಾಸಿನಲ್ಲಿ ಪ್ರಯಾಣ ಮಾಡಿದ್ದರೂ ೨ನೇ ವರ್ಗದಲ್ಲಿ ಪ್ರವಾಸ ಮಾಡಿದ್ದೇವೆಂದು ಬಿಲು ಕೊಟ್ಟರು ಈ ಕುರಿತು ಮಹಾಸಭೆಯಲ್ಲಿ ತಕ್ರಾರು ಬರಲಾಗಿ ಆ ತಕ್ರಾರು "ರೂಲ ಔಟ" (ನಿಯಮಬಾಹ್ಯ) ರಾಯಿಸಿದರು! ಸದಸ್ಯರಿಂದಾದರೂ ಬಾಯಿಂದ ಸೂಚನೆ ಮಾಡಿದರೆ ಅಧ್ಯಕ್ಷರು ಕಿವಿಗೊಡುವದಿಲ್ಲ! ಲೇಖಿನೂಚನೆ ಕೊಟ್ಟರೆ ಕತ್ತಲೆಯಲ್ಲಿ ಒಗೆಯುತ್ತಾರೆ! ಸಭೆಯಲ್ಲಿ ತಮ್ಮ ವಿರುದ್ಧ ಇಲ್ಲವೆ ತಮ್ಮ ಅಭಿಪ್ರಾಯದ ಬಾಹ್ಯವೆಂದು ಸೂಚನೆ ಯಾ ಉಪಸೂಚನೆ ಬಂದರೆ ಅವುಗಳನ್ನು "ರೂಲ್ ಔಟ್" ಮಾಡುತ್ತಾರೆ! "ರೂಲ ಔಟ" ಮಾಡುವ ನಿಯಮಗಳನ್ನು ಅವರು ಅರಿತಿರುವರೆಂದು ತಿಳಿಯಲಾಗದು ಅಷ್ಟೇ ಅಲ್ಲ! "ರೂಲ್ ಔಟ್" ಶಬ್ದ ಸಮುಚ್ಚಯದ ಅರ್ಥವಾದರೂ ಅವರಿಗೆ ಗೊತ್ತುಂಟೋ ಇಲ್ಲವೋ ದೇವರೇ ಬಲ್ಲ! ರಾ॥ ದೇಸಾಯರ ಉಪದ್ವ್ಯಾಪಗಳಿಗೆ ಬೇಸತ್ತು ಸಬ್-ಕಮಿಟಿಗಳ ಚೆಯರಮನ್ನರು ತಮ್ಮ ಸ್ಥಳಗಳಿಗೆ ರಾಜಿನಾಮೆಯಿತ್ತು ೩-೪ ತಿಂಗಳಾದವು ಅವರ ಸ್ಥಳಗಳಲ್ಲಿ ಬೇರೆಯವರ ನೇಮಣೂಕಿಯಿಲ್ಲ! ಅಧ್ಯಕ್ಷರೇ ಅವರ ಕೆಲಸ ಸಾಗಿಸುತ್ತಾರೆ! ಸಬ್‌ಕಮಿಟಿಗಳ ಅವಧಿ ಕಳೆದ ಸಪ್ಟಂಬರ ತಿಂಗಳ ಕೊನೆಗೆ ಮುಗಿಯಿತು ಅಷ್ಟರಲ್ಲೇ ಹೊಸ ಕಮಿಟಿಗಳ ಆಯ್ಕೆಯಾಗಬೇಕಿತ್ತು. ಅಧ್ಯಕ್ಷರು ಅದರ ಗೊಡವೆ ಮಾಡಲಿಲ್ಲ! ಕಳೆದ ತಾ. ೭ನೇಗೆ ನಗರ ಸಭೆಯ ಮಹಾಸಭೆಯಾಯಿತು. ಬೆಳಿಗ್ಗೆ ೯ ಘಂಟೆಗೆ ಸಭೆಗೆ ಆರಂಭವಾಯಿತು ೧೪ ಸದಸ್ಯರು ಹಾಜರ ಇದ್ದರು ಕಾರ್ಯಕ್ರಮ ಪತ್ರಿಕೆಯಲ್ಲಿ ೮ ವಿಷಯಗಳಿದ್ದವು. ೫ ವಿಷಯಗಳ ವಿಚಾರ ಮುಗಿಯಿತು ೬ನೇ ವಿಷಯವೆಂದರೆ ನೌಕರ ಜನರ ಸಂಬಳ, ಬಡತಿ ಮುಂತಾದವುಗಳಲ್ಲಿ ವ್ಯತ್ಯಾಸ ಮಾಡುವದರ ಕುರಿತು ಮಿ॥ ಕಮಿಶನರ ಸಾಹೇಬರಿಂದ ಬರೆದು ಬಂದ ಪತ್ರದ ವಿಚಾರ. ಈ ವಿಷಯ ಮಹತ್ವದ್ದಿರುವದರಿಂದ ಅದನ್ನು ಮುಂದಿನ ಸಭೆಯ ತನಕ ತಹಕೂಬ ಇಡಬೇಕೆಂತಲೂ, ಅಷ್ಟು ಅವಸರವಿದ್ದರೆ ಆ ಬಗ್ಗೆ ವಿಶೇಷ ಸಭೆ ಕರೆಯಬಹುದೆಂದೂ ರಾ॥ ರಾಮಸಿಂಗರು ಸೂಚನೆ ಮಾಡಿದರು ರೀತಿಯಂತೆ ಆ ಸೂಚನೆ ಅನುಮೋದಿಸಲ್ಪಟ್ಟಿತು ಅಧ್ಯಕ್ಷ ರಾ॥ ದೇಸಾಯಿಯವರ ತಲೆಯಲ್ಲಿ ಏನಿತ್ತೋ ಏನೋ! ಅವರು ರಾ ರಾಮಸಿಂಗರ ಸೂಚನೆ "ರೂಲ್ ಔಟ" ಮಾಡಿ, ಸಭಿಕರಿಗೆ ಹೇಳದೆ ಕೇಳದೆ, ಅವರ ಅಭಿಪ್ರಾಯ ಸಹ ತಿಳಿಯದೆ ವಿಚಾರ (ನಿಷೇಧ?) ಮಾಡುವದಕ್ಕೆ [illegible] ಸಭಾ ತಹಕೂಬಿಯ ಸೂಚನೆ ತಂದು, ಸೂಚನೆಯನ್ನು ಬಹುಮತದಿಂದ ಮಂಜೂರ ಮಾಡಿ, ಸಭೆಯೊಳಗಿಂದ ಒಮ್ಮೆಲೇ ಎದ್ದು ನಡೆದರು [illegible] ಜಿಲ್ಲಾಧಿಪರು ಈಗ ಈ ಧರ್ಮಶಾಲೆಯ ಗೆತ್ತುವಳಿಗೆ ತನಿಖೆಮಾಡಿರೆಂದು ತಿಳಿದು ಬರುತ್ತಿದೆ

ಧಾರವಾಡದ ಹಿಂದೀ ವಿದ್ಯಾಲಯದ ಪ್ರಾಧ್ಯಾಪಕ ರಾ॥ ನಾಗರಾಜ ಅಯ್ಯಂಗಾರರವರು ಕಳೆದ [illegible] ವಕ್ಕೆ ಗೋಕರ್ಣದೊಳಗಿನ ಹಿಂದೀ ಕೇಂದ್ರಕ್ಕೆ ಸಂದರ್ಶನವಿತ್ತರು

Head office Mylapore MADRAS

ಸಿಗುತ್ತ.

— ಅಥವಾ —

ಜಮ್ಮಿ ವೆಂಕಟರಮಣಯ್ಯ,

ಲಿವ್ಹರ ಮತ್ತು ಪ್ಲೀಹ ಸ್ಪೆಶಲಿಸ್ಟ್

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ.– ಅರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಜನರಿಗೆ ಚನ್ನಾಗಿ ಗೊತ್ತಿದೆ. ತಮ್ಮ ಸುದ್ದಿಗಾರರ ಸೂಚನೆಯನ್ನು ತಾವು ಪ್ರಾರಂಭಿಸುವಾ. ಮಂಕಿಯಿಂದ ೩-೬ ಮೈಲುಗಳ ಅಂತರದಲ್ಲಿದ್ದ ಹಳ್ಳಿಗಳೆಂದರೆ ಬಿತ್ತಾರ, ಪಟ್ಟೋಡ, ಆಡುಕಳ, ಕೋಟೆ, ತಲಗೋಡ, ಕಡಗುಟ್ಟ, ಮೇಲಿನ ಇಡಗುಂಜಿ ಮತ್ತು ಮೇಲಿನ ಮುಣಗೆ ಇವಾಗಿರುತ್ತವೆ. ಈ ಪೈಕಿ ಬಿತ್ತಾರ ಗ್ರಾಮದ ಒಂದೆರಡು ಮನೆಯವರ ಟಪಾಲು ಮಾತ್ರ ಯಾವಾಗಲೂ ಇರುತ್ತದೆ. ಇವರಿಗೆ ಮಂಕಿಯು ಬರೇ ಮೂರು ಮೈಲು. ದಿನಾಲೂ ಆ ಊರ ಜನರು ಮಂಕಿಗೆ ಹೋಗಿ ಬರುತ್ತಾರೆ. ಆದ್ದರಿಂದ ಈ ಮನೆಗಳ ಜನರು ತಮ್ಮ ಟಪಾಲು ಮಂಕಿಯಿಂದಲೇ ತರಿಸುತ್ತಾರೆ. ಅವರಿಗೆ ಟಪಾಲ ಬಟವಡೆ ವಾರದಲ್ಲಿ ಮೂರಾವರ್ತಿಯೂ ಬೇಡ! ಇನ್ನುಳಿದ ಹಳ್ಳಿಗಳಲ್ಲಿ ಹಳ್ಳಿಯೊಂದಕ್ಕೆ ವರ್ಷದಲ್ಲಿ ೬-೧೦ ಪತ್ರಗಳು ಬಂದರೆ ಹೆಚ್ಚಾಯಿತು! ಆ ಹಳ್ಳಿಗಳಿಗೆ ವಾರದಲ್ಲಿ ಮೂರಾವರ್ತಿ ಟಪಾಲ ಬಟವಡೆ ಯಾಕೆ? ಬಳಕೂರ ಕೇಂದ್ರದ ಟಪಾಲು ಹೆಚ್ಚಾಗಿ ಬಳಕೂರು ಅಟೆ-ಈಚೆ ಇರುವ ಶರಾವತಿ ನದಿಯ ದಂಡೆಯ ಮೇಲಿನ ಹಳ್ಳಿಗರ ಟಪಾಲು. ಅವರ ಬಗ್ಗೆ ತಮ್ಮ ಮಂಕಿಯ ಸುದ್ದಿಗಾರರಿಗೆ ಕಳಕಳಿಯಿಲ್ಲ! ಇರಲಿ. ಮಂಕಿ ಬದಿಯ ಹಳ್ಳಿಗರ ಅರ್ಜಿಯಿಂದ ಟಪಾಲ ಇಲಾಖೆಯವರು ಮೋಸ ಹೋಗಬಾರದಾಗಿಯೂ ೩ ತಿಂಗಳ ಹಿಂದೆ ಬಳಕೂರ ಅಂಚೆಕಟ್ಟೆಯಲ್ಲಿ ಇದ್ದ ವ್ಯವಸ್ಥೆಯೇ ಸರಿಯಾದ ವ್ಯವಸ್ಥೆಯೆಂದು ತಿಳಿಯಬೇಕಾಗಿಯೂ ಬಳಕೂರಿನ ಪ್ರಯೋಗಾತ್ಮಕ ಅಂಚೆ-ಕಟ್ಟೆಯನ್ನು ಕಾಯಂ ಮಾಡಬೇಕಾಗಿಯೂ ತಮ್ಮನ್ನು ವಿನಯಪೂರ್ವಕ ಪ್ರಾರ್ಥಿಸುತ್ತೇವೆ" ಇತ್ಯಾದಿ.

ಮಂಕಿ— ಮಂಕಿ ಗ್ರಾಮ ಸುಧಾರಣಾ ಸಂಘದವರು ಈ ವರ್ಷ ಧನಸಾರ ಪೇಟೆಯಲ್ಲಿ ೨ ಫರ್ಲಾಂಗ ಗಾಡಿ-ರಸ್ತೆ, ಗುಳದಕೇರಿ ಮಜರೆಯಲ್ಲಿ ಕೆಲವು ರಸ್ತೆಗಳ ದುರುಸ್ತಿ, ಕುಂಬಾರಕೇರಿಯಲ್ಲಿ ೩-೪ ಫರ್ಲಾಂಗ ಉದ್ದ ಕಾಲುದಾರಿಯಿದ್ದ ಗಾಡಿ-ರಸ್ತೆಯಲ್ಲಿ ರೂಪಾಂತರಿಸಿರುವ, ತಾಳಮಕ್ಕಿಯಿಂದ ಇಂಜಿನಿಯರನಾಕೆಯ ರಸ್ತೆಯ ತನಕ ಹೊಸ ರಸ್ತೆ, ಕೊಪ್ಪದಮಕ್ಕಿಯನ್ನು ಪೈಲೂರವರು ತಯಾರಿಸಿದ ರಸ್ತೆಗೆ ಜೋಡಿಸುವ ರಸ್ತೆ ಈ ಪ್ರಕಾರ ಜನರ ಸಹಾಯದಿಂದ ಹಲವು ಉಪಯುಕ್ತ ಕಾಮಗಾರಿಗಳನ್ನು ಮಾಡಿದ್ದಾರಾಗಿ ತಿಳಿಯುತ್ತದೆ.

ಭಟಕಳ— ತುರ್ಕಸ್ಥಾನದ ಜಗತ್ಪ್ರಸಿದ್ಧ ಸರ್ವಾಧಿಕಾರಿ ಗಾಝಿ ಮುಸ್ತಫಾ ಕೆಮಾಲ ಪಾಶಾರವರು ನಿಧನ ಹೊಂದಿದ ವಾರ್ತೆ ಗುರುವಾರ ರಾತ್ರಿಯೇ ಇಲ್ಲಿ ತಿಳಿಯಿತು. ಮರುದಿನ ಮಹಮ್ಮದೀ ಬಾಂಧವರು ಹರತಾಳ ಆಚರಿಸಿದರು. ಮಧ್ಯಾಹ್ನದಲ್ಲಿ ನಮಾಜ ತೀರಿದ ಮೇಲೆ ಗಾಝಿಯವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಸಾರ್ವಜನಿಕ ಪ್ರಾರ್ಥನೆಯಾಯಿತು. ಸಂಜೆಯಲ್ಲಿ ಮೆರವಣಿಗೆಯಾಗಿ ಮಿ॥ ಎಸ್. ಎಮ್. ಸೈದ ಮೊಹದ್ದೀನ ಇವರ ಅಧ್ಯಕ್ಷತೆಯಲ್ಲಿ ಮೌಲಾನಾ ಸಭಾಮಂದಿರದಲ್ಲಿ ದುಃಖಪ್ರದರ್ಶಕ ಸಭೆಯೂ ಆದವು. ಅಧ್ಯಕ್ಷರು ಕೆಮಾಲ ಪಾಶಾರವರ ಅಪ್ರತಿಮ ಸ್ವಾರ್ಥತ್ಯಾಗ, ದೇಶಪ್ರೇಮ ಮೊದಲಾದ ಗುಣಗಳನ್ನು ತುಂಬಾ ಹೊಗಳಿದರು. ಮುಸಲ್ಮಾನ ಭಗಿನಿಗಳು ಕುರಾಣ ಪಾರಾಯಣ ಮಾಡಿದರಂತೆ.

ಇಲ್ಲಿಯ ಪ್ರಮುಖ ವರ್ತಕರಾದ ರಾ॥ ಶಾಂತಪ್ಪ ಶಾನಭಾಗ ಇವರು ಪೊರಟಾಪೂರ ಹೊಳೆಯ ದಂಡೆಯ ಮೇಲೆ ಒಂದು ವಿಶಾಲ ಸ್ಥಳದಲ್ಲಿ ದೊಡ್ಡ ಪ್ರಮಾಣದ ಮೇಲೆ ಕೈಯ್ಯಿಂದ ಮರೆದ ಅಕ್ಕಿ ತಯಾರಿಸುವ ಕಾರಖಾನೆಯನ್ನು ತೆರೆದಿದ್ದಾರೆ. ಸ್ತುತ್ಯ!

ಕಳೆದ ವಾರ ಒಂದು ದಿನ ಚೆಲೋ ಮಳೆ ಬಿತ್ತು. ಅದರಿಂದ ಚಪ್ಪರ ಕಟ್ಟಿಕೊಂಡು ಉಳಿದ ನಿರಾಶ್ರಿತರಿಗಾದ ಕಷ್ಟ ಹೇಳ ತೀರದು! ನಿರಾಶ್ರಿತರ ಶಾಶ್ವತ ವಸ್ ಸರಿಯಾದ ನಿಶ್ಚಿತ ಯೋಜನೆ ಇನ್ನೂ ಸಿದ್ಧವಾಗಿಲ್ಲ. ಜಿಲ್ಲಾಧಿಕಾರಿಗಳು ಕಳೆದ ವಾರ ಈ ಊರಲ್ಲಿ ಮುಕ್ಕಾಮು ಮಾಡಿದ್ದರು. ಹೊಳೆಯ ದಂಡೆಗುಂಟ ತಗ್ಗು ಪ್ರದೇಶಗಳಲ್ಲಿರುವ ಜನರಿಗೆ ಮನೆಕಟ್ಟಿಕೊಂಡು ಉಳಿಯುವ ಬಗ್ಗೆ ಮೇಲು ಪ್ರದೇಶದೊಳಗಿನ ಕೆಲವು ಸ್ಥಳಗಳನ್ನು ಕೊಡಲೊಪ್ಪಿದ್ದಾರೆ. ಅವುಗಳಲ್ಲಿ ಕೆಲವು ಸ್ಥಳಗಳನ್ನು ಸಪಾಟ ಮಾಡಿಕೊಳ್ಳಬೇಕಾದರೆ ವಿಪರೀತ ಖರ್ಚು ತಗಲುವದಂತೆ! ಜಿಲ್ಲಾಧಿಕಾರಿಗಳು ಪುನರಾಲೋಚನೆ ಮಾಡಬೇಕು.

ಈ ವಾರ ನಿರಾಶ್ರಿತ ನಿಧಿಗೆ ಬೆಳಗಾಂವಿಯ ರಾ। ಎಸ್. ಎಸ್. ಶಿರಾಲಿಯವರು ಕಳಿಸಿದ ರೂ ೭೬॥।, ಮಂಕಿ ಸಹಕಾರಿ ಸಂಘದಿಂದ ರೂ ೨೫, ಹಡಿನಬಾಳ ಸ॥ ಸಂಘದಿಂದ ರೂ ೫, ಕೇಡವಾಡ ಸ॥ ಸಂಘದಿಂದ ರೂ ೫,

(ಪುರವಣಿ ಮೇಲೆ ಮುಂದರಿಸಿದೆ)

SALE OF KANARA TIMBER

Will be held at Kodibag (Near Karwar) on the 28th November, 1938 and subsequent days.

Teak logs 250 tons.

E. T. C. VAS,
Divisional Forest Officer,
W. D. Kanara.

Karwar,
5th October, 1938

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ :— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ. ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಿಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ.

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ. ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ — ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ
ಹೊನ್ನಾವರ — ಕಾಮತ ಸ್ಟೋರ್ಸ್.
ಅಂಕೋಲಾ — ವೇದಮೂರ್ತಿ ಹನುಮಟ್ಟಿ ಕೇಶವ ಭಟ್ಟ.
ಗೋಕರ್ಣ — ಎನ್. ವ್ಹಿ. ಬಸ್ತಿಕರ, ಮರ್ಚಂಟ
ಕಾರವಾರ — ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ
ಶಿರ್ಶಿ — ಆರ್. ವ್ಹಿ. ಧಾರಪ್ಪಾ ಕೆಮಿಸ್ಟ.

ವಿಳಾಸ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಬ್ರೆಂಚ್ ಆಫೀಸು: ಕುಮಟಾ. ಉ. ಕ.

OR

BHUVANENDRA PRODUCTS LTD.
Head Office: **KATAPADI, S. K.**

ವಾರ್ತೆಗಳು

(ಅನೇಕ ಮೂಲಗಳಿಂದ ಸಂಪಾದಿಸಿದ್ದು)

ನಗರದಲ್ಲಿ ನಡೆದ ಗಡಿಪ್ರಾಂತ ಕಾಂಗ್ರೆಸ ಪರಿ ವರ್ಗಗಳ ಕಾರ್ಯಮಾಡಿಕೆ ಕುರಿತ ಸಂಶೋಧನ ಕೈಕೊಂಡ ಕ್ರಿಯೆಯ ಉಪಾಯಗಳನ್ನು ... ಸರಕಾರ ... ಆವಶ್ಯಕತ್ವ ... ದಿಯನ್ನು ಸಭೆ ಕೇಳಿದ ಸರಕಾರವು ಪ್ರಕಟಿಸಿ ಹೊರಡಿಸಿದೆ ಮುಂಬಯಿ ಎಸೆಂಬ್ಲಿ ಸಭೆಯು ಸರಕಾರದ ಪ್ರಯತ್ನದ ಪ್ರದರ್ಶನ ಮಾಡುವದಕ್ಕಾಗಿ ... ಮೇದ ... ಡಾ ಅಂಬೇಡಕರ, ರಾ ... ರಾ ಪರೂಳೇಕರ ಪ್ರಭೃತಿ ಕೂಲಿಕಾರರ ಪ್ರತಿನಿಧಿಗಳು ಸಭಾವಿಸರ್ಜನೆಯ ಠರಾವನ್ನು ಸೂಚಿಸಲಿಕ್ಕಿದ್ದರು. ಆದರೆ ಅದಕ್ಕೆ ತಕ್ಕಷ್ಟು ಸಹಕಾರ ಬೆಂಬಲ ದೊರೆಯದ್ದರಿಂದ ಠರಾವು ಚರ್ಚೆಗೆ ಬರಲಿಲ್ಲ ... ಡಾ| ಅಂಬೇಡಕರ ಮೊದಲಾದವರು ಬೇರೆ ಬೇರೆ ತತ್ವಗಳ ಬೇರೆ ಬೇರೆ ಪಕ್ಷಗಳ ಪ್ರವರ್ತಕರಿದ್ದರೂ ಕಾಂಗ್ರೆಸ ದ್ವೇಷ ಹಿಡಿದು ... ವಿಜಯವಿಲ್ಲದ ... ಕೂಲಿಕಾರರ ಆತ್ಮಸ್ತುತಿ ... ಪ್ರೇರಣ ಮಾಡಿದ್ದ ಪತ್ರ ಆದಕ್ಕಾಗಿ ಹಿಂಸಾಚಾರದ ಪ್ರಚಾರ ಮಾಡಿದ್ದು ಅವರ ಲಜ್ಜಾಸ್ಪದವೆಂದೂ ನಿಂದ್ಯವೆಂದೂ ಪತ್ರಿಕೆಗಳು ಟೀಕಿಸುತ್ತವೆ

—ಮುಂಬಯಿಯೊಳಗೆ ಬಡೋದೆಯ ಮಹಾರಾಜರ ದ ಸಯಾಜಿರಾವ ಗಾಯಕವಾಡರವರು ಅಸ್ವಸ್ಥರಿದ್ದಾರೆ ಮಹಾರಾಜರು ... ಯುರೋಪಖಂಡದಿಂದ ಮುಂಬಯಿಗೆ ಬಂದರು ಇಲ್ಲಿ ಬಂದ ಬಳಿಕ, ಅವರ ಪ್ರಕೃತಿ ಒಮ್ಮಿಂದೊಮ್ಮೆ ಕೆಟ್ಟಿತು ಅವರು ತೀರ ಅಸ್ವಸ್ಥರಾದರು ಮಹಾರಾಣಿಯವರು ಲಂಡನದಲ್ಲಿ ಇದ್ದರು ಬುಧವಾರ ದವರಿಗೆ ... ಟೆಲಿಫೋನಿನ ಮೂಲಕ ಮಹಾರಾಜರ ಪ್ರಕೃತಿಮಾನ ತಿಳಿಸಲಾಯಿತು ಕೂಡಲೇ ಮಹಾರಾಣಿಯವರು ಸ್ಪೆಶಲ್ ವಿಮಾನದ ಭಾಡಿಗೆ ಹಿಡಿದ ಶುಕ್ರವಾರ ಬೆಳಗಿನ ೮ ಘಂಟೆಗೆ ಲಂಡನಿನಿಂದ ಹೊರಟು ನೇಪಲ್ಸ ಬಸರಾ ಕರಾಚಿಗಳಲ್ಲಿ ವಿಶ್ರಮವು ಮಾಡಿ ರವಿವಾರ ಸಂಜೆ ೪| ಘಂಟೆಗೆ ಮುಂಬಯಿಗೆ ಬಂದಿಳಿದರು ಹೀಗೆ ಮುಂಬಯಿ ಲಂಡನಗಳೊಳಗಿನ ೫೦೦೦ ಮೈಲ ಪ್ರವಾಸ ... ಮೂರ್ದಿನದಲ್ಲಿ ಮುಗಿಯಿತು! ಮಹಾರಾಣಿಯವರೊಡನೆ ಸಮುದ್ರದ ... ಮಹಾರಾಣಿಯವರೂ, ರಾಜಪುತ್ರ ಧೈರ್ಯಶೀಲರಾಯರೂ, ... ವಿಲ್ಲಿಯವರೂ, ರಾಜಪುತ್ರಿ ಉಷೆರಾಜೆಯವರೂ ವಿಮಾನದಿಂದ ಬಂದಿದ್ದಾರೆ ಲಂಡನಿನಲ್ಲಿ ಮಹಾರಾಜರ ಉಪಚಾರ ಮಾಡುತ್ತಿದ್ದ ಪ್ರಸಿದ್ಧ ವೈದ್ಯವಿಶಾರದರಾದ ಡಾ| ಜೋಫ್ರಿ ಇವ್ಹಾನ್ಸರವರು ಮತ್ತೊಂದು ವಿಮಾನ ಮಾಡಿಕೊಂಡು ಶನಿವಾರ ಬೆಳಗ್ಗೆ ಹೊರಟು ಬುಧವಾರ ಬೆಳಗಿನ ೭ ಘಂಟೆ ತಲ್ಪಿದ್ದಾರೆ ಮಹಾರಾಜರಿಗೆ ಆಯುರಾರೋಗ್ಯ ಪ್ರಾಪ್ತಿಯಾಗಲೆಂದು ಬಡೋದೆಯೊಳಗಿನ ... ಮಹಾಯಜ್ಞ ಮಂಡಳದಲ್ಲಿಯೂ ರಣಛೋಡಜಿ ದೇವಾಲಯದಲ್ಲಿಯೂ ಹಿಂದುಗಳು ಪ್ರಾರ್ಥಿಸಿಕೊಂಡರು ಮುಸಲ್ಮಾನರು ಮಸೀದಿಗಳಲ್ಲಿಯೂ, ಪಾರಸಿಗಳು ಅಗಿ ದೇವಾಲಯಗಳಲ್ಲಿಯೂ ಪ್ರಾರ್ಥಿಸಿಕೊಂಡರು ಮಹಾರಾಜರ ಪ್ರಕೃತಿ ಈಗ ಸುಧಾರಿಸುತ್ತಿದೆ

— ಮಹಾತ್ಮರ ಗಡಿನಾಡಿನ ಸಂಚಾರ ಬುಧವಾರ ಮುಗಿಯಿತು ಅಂದು ಮುಂಜಾನೆ ಮಹಾತ್ಮರು ಅಬಟಾಬದದಿಂದ ತಕ್ಷಶಿಲಕ್ಕೆ ಬಂದರು ಅಲ್ಲಿ ಬುದ್ಧಕಾಲದ ಸ್ತೂಪ ವಿಹಾರಗಳನ್ನು ನೋಡಿಕೊಂಡು ಗಡಿನಾಡಿನವರ ಅಪ್ಪಣೆ ಪಡಕೊಂಡು ಫ್ರಂಟಿಯರ ಮೇಲ ಬಂಡಿ ಹತ್ತಿ ರಾವಳಪಿಂಡಿ, ಲಾಹೋರ ಮಾರ್ಗವಾಗಿ ದಿಲ್ಲಿಗೆ ಗುರುವಾರ ಮುಂಜಾವಿಗೆ ತಲ್ಪಿದರು ಡಾ| ಅನ್ಸಾರಿಯವರ ಪತ್ನಿಯಾದ ಬೇಗಮ್ ಅನ್ಸಾರಿಯವರು ಅಸ್ವಸ್ಥರಿದ್ದಾರೆ ಮಹಾತ್ಮರು ಅವರಲ್ಲಿ ಹೋಗಿ ಕ್ಷೇಮಸಮಾಚಾರ ತಿಳಕೊಂಡರು ಹರಿಜನ ಮಂದಿರದಲ್ಲಿ ಶ್ರೀ| ಭುಲಾಭಾಯಿ ದೇಸಾಯಿಯವರೊಡನೆ ಮಾತನಾಡಿ ಸಾಯಂಕಾಲ ವರ್ಧಾಕ್ಕೆ ತೆರಳಿದರು ಮಹಾತ್ಮರ ಪ್ರಕೃತಿ ಸುಧಾರಿಸಿದೆ ಮಹಾತ್ಮರು ಪ್ರಸನ್ನರಿದ್ದಾರೆ ಗಡಿನಾಡಿನ ಪ್ರವಾಸವು ಮಹಾತ್ಮರ ಪ್ರಕೃತಿಮಾನಕ್ಕೆ ಪ್ರತಿಕೂಲವಿಲ್ಲವೆಂದು ಕಾರ್ಯದರ್ಶಿಗಳಾದ ಶ್ರೀ| ಪ್ಯಾರೇಲಾಲರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಮಹಾತ್ಮರ ತೂಕ ಹೆಚ್ಚಿದೆ ಸುದ್ದಿಗಾರರು ಅಪೇಕ್ಷಿಸಿದಂತೆ, ಮಹಾತ್ಮರಿಗೂ ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳಿಗೂ ಸಮಕ್ಷ ಸಂಭಾಷಣ ಒದಗಿ ಬರಲಿಲ್ಲ

— ದಮ್ಮಿನ ವಿಕಾರಕ್ಕೆ ಡಾ|| ಷಣ್ಮುಖಸಿಂಗ ಯೋಗಿ ಇವರು ಒಂದು ವಿಶೇಷ ಉಪಚಾರ ಮಾಡುತ್ತಾರೆ ಭೋಜನದಿಂದ ಅವರು ಈ ರೋಗವನ್ನು ಶಾಶ್ವತವಾಗಿ ನಿವಾರಿಸುತ್ತಾರೆ ಕಾಣಲಿಕ್ಕೆ ಸಾಮಾನ್ಯವಾದ ಭೋಜನ, ಅದರೊಳಗೆ ಯಾವ ಶಕ್ತಿಯನ್ನು ಯೋಗಿಗಳು ತುಂಬುತ್ತಾರೆಂದು ಹೇಳಬರುವದಿಲ್ಲ ತಾ ೨೧ ೧೦ ೩೮ನೇಗೆ ಡಾ|| ಷಣ್ಮುಖಸಿಂಗ ಯೋಗಿ ಇವರು ಕರಾಚಿಯಲ್ಲಿ ೧೦ ಮಂದಿ ದಮ್ಮಿನ ರೋಗಿಗಳಿಗೆ ಒಂದು ಊಟ ಹಾಕಿದರು ಅವರಿಗೆ ನಿತ್ಯವೂ

SERVICE & PROMPTNESS

A Feature and a Fact with the "POPULAR"

M VENKATESH PAI
Banker

Sri Krishna Bhavan
Mangalore
25th July 1938

The Managing Director
The Popular Insurance Co Ltd
MANGALORE

Policy No 40

Dear Sir

I very much appreciate your promptness in settling the claim in less than a week in respect of the above policy on the life of my late lamented Father-in-law Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2003–7–0 is delivered to the claimant and all within the short period of 6 days

This spirit of service and promptitude evinced by the POPULAR is highly laudable and it is but proper that the Company should be POPULAR It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully
(Sd) M Venkatesha Pai

The Company requires influential Ladies and Gentlemen to work as Agents on most remunerative terms including hereditary renewals.

Apply to -

THE POPULAR INSURANCE CO. LIMITED,
Head Office: MANGALORE.
Branch *PROSPECT CHAMBERS, Hornby Road, BOMBAY*

ದಮ್ಮಿನ ಪಿಡಿಂರವ ಗತ್ತಿತ್ತು, ಊಟ ಮಾಡಿದ ಗಿ೫ ದಿನಗಳ ತನಕ ಅವರಿಗೆ ದಮ್ಮು ಆಗಲಿಲ್ಲವಾಗಿ ೧೫ ದಿನಗಳ ಪ್ರಕೃತಿಮಾನ ನೋಡಿ ಸುದ್ದಿಗಾರರು ಬರೆಯುತ್ತಾರೆ ಈ ಔಷಣ ಸಮಾರಂಭಕ್ಕೆ ಕಂಟೆಮ್ಯುನಿಸಿಪ ಲಿಟಿಯ ಅಧ್ಯಕ್ಷರಿಂದ ಡಾ|| ಹಾತಿವಾಳಪಿಯವರೂ, ಡಾ|| ಲ ಲಜ ಮರೋಳಿ, ಡಾ|| ಮುಕೇಟ ನಸರವಾನಜಿ ಮೋದಿ ಪ್ರಭೃತಿ ಪ್ರಮುಖರೂ ಹಾಜರಿದ್ದರು ಇದೇ ಪ್ರಕಾರ ಮೂಲವ್ಯಾಧಿಯನ್ನೂ ಮಧುಮೇಹವನ್ನೂ ಡಾ|| ಯೋಗಿಯವರು ಗುಣಪಡಿಸುತ್ತಾರೆ ಇದರಿಂದ ಚಮತ್ಕಾರವೆಂದು ತಿಳಿಯುವದಿಲ್ಲ ಡಾ|| ಯೋಗಿಯವರು ಪ್ರತಿಫಲವನ್ನು ಅಪೇಕ್ಷಿಸುವದಿಲ್ಲ ಕೊಟ್ಟರೆ ನಿರಾಕರಿಸುವದಿಲ್ಲ

— ಚಂದ್ರಗ್ರಹಣದ ಸಮಯ ಶ್ರೀ ಕಾಶಿ ಕ್ಷೇತ್ರದಲ್ಲಿ ೩ ಲಕ್ಷ ಯಾತ್ರಿಕರು ಗಂಗಾಸ್ನಾನ ಮಾಡಿ ಪುನೀತರಾದರು ಕಲಕತ್ತೆಯಲ್ಲಿಯೂ ಇದೇ ಪ್ರಕಾರ ಯಾತ್ರಿಕರ ಜನಸಂದಣಿ ಗಂಗಾನದಿಯ ಎರಡೂ ತಟ್ಟಗಳಲ್ಲಿ ಜನರು ತಂಡಗಟ್ಟಿ ಸೇರಿದ್ದರು ಮುಂಬಯಿಯಲ್ಲಿ ಗ್ರಹಣ ಕಾಣಲಿಲ್ಲ ಯಾಕಂದರೆ ಆ ದಿನ ಮುಗಿಲು ಮೋಡಗಳಿಂದ ಕವಿದಿತ್ತು

— ಬದರಿನಾಥ ದೇವಾಲಯದ ವರ್ಷಾಸನ ಉತ್ಪನ್ನ ೩೦ ಲಕ್ಷ ರೂಪಾಯಿ ದೇವಸ್ಥಾನವು ಇದೀಗ ಮುಖಂತರ ಸ್ವಾಧೀನವಿದೆ ಮುಖಂಡರಿಗೆ ರಾವಳ ಎನ್ನುತ್ತಾರೆ ಈ ದೇವಾಲಯದ ಆಡಳಿತೆಯನ್ನು ಸರಿಯಾಗಿ ನಡಿಸುವದಕ್ಕಾಗಿ ಸಂಯುಕ್ತ ಪ್ರಾಂತಿಕ ಸರಕಾರವು ಒಂದು ಆಡಳಿತೆಯ ಯೋಜನೆಯನ್ನು ತಯಾರಿಸಿದೆ

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಟ, ಪ್ರಮೇಹ ಮಹಾವಾತ ಇತ್ಯಾದಿ ಸಣ್ಣ ದೊಡ್ಡ ರಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು ಇವಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಅಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಿಕ - ಕೇ ರಾಮ ಪಂಡಿತ, ಪೋ ಕುಮಟಾ ಜಿ ಉ ಕಾನಡಾ

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋಮರೋಗ, ಮೈ-ಕೈ ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಪಿ ಎನ್ ಶ್ರೀನಿವಾಸರಾವ್,
ಲಿವ್ಹರ್ ಸ್ಪೆಶಲಿಸ್ಟ,
ಎಂ ಪಿ ಪ್ರಾಕೃತಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ,ಶಿರ್ಸಿ

ಪ್ರವಾಸಿ ಜನರಿಗೆ

ಊಟ-ಉಪಚಾರಗಳ ಉತ್ತಮ ವ್ಯವಸ್ಥೆ !

ಮಾಧವಾಶ್ರಮ,

ಕಾರವಾರ.

ಮಧ್ಯವರ್ತಿ ಸ್ಥಳ,
ಉತ್ಕೃಷ್ಟ ಊಟ,
ಉತ್ತಮ ಹವೆಯ ಕೋಣೆಗಳು
ಊಟ ಉಳಕೊಳ್ಳುವ ಅನುಕೂಲತೆ!

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ

ಕರ್ಣಿಕ

ಎಗ್ಯುಮಿಕ್ಶ್ಚರ್ ಉಪಯೋಗಿಸಿರಿ !

ತಿಕ್ಕ ಸಿಕ್ಕ ಔಷಧ ಸೇವಿಸಿ ಜ್ವರದಂಥ ಬೇನೆಯನ್ನು ಉದಬೆಳಸಬೇಡಿರಿ ಬೆಲೆ ಆಣೆ ೧೨

ಇಂಡೋಬಾಮ್

ತಲೆಶೂಲಿ ಮೈನೋವು, ಸಂಧಿವಾತ, ವಿಷಾರಿ ನೆಗಡಿ ಮೊದಲಾದ ವಿಕಾರಗಳು ತುಸು ಸುಲಭದಿಂದ ವಾಸಿಯಾಗುತ್ತವೆ ಬೇರೆ ಬಾಮುಗಳಿಂದ ಗುಣಕಾರಿ ಎಲ್ಲ ಅಂಗಡಿಗಳಲ್ಲಿ ಸಿಗುತ್ತವೆ ಸಿಗದಿದ್ದರೆ ನಮಗೆ ಬರೆಯಿರಿ ಬೆಲೆ ೬ ೮

ಕರ್ಣಿಕ ಬ್ರದರ್ಸ,
ಗಿರಗಾಂವ, ಮುಂಬಯಿ, ನಂ ೪

ಬನ್ನಿರಿ ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್.

ಮಹಾಶಯರೇ, **ಕುಮಟಾ.** (ಉ ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ ಧಾರವಾಡ ಬೆಳಗಾಂವ ಕಡೆಗೆ ಹೋಗುವ ಪ್ರವಾಸಿಗರಿಗೂ ಉಳಕೊಳ್ಳಲಿಕ್ಕೂ ಇತರ ಊಟೋಪಚಾರಕ್ಕೂ ಒಳಳ ಸೌಕರ್ಯವುಳ್ಳದ್ದಾಗಿ ಇತ್ತೀಚಿಗೆ ಹೊಸದಾಗಿ ತೆರೆದಿರುವ ನಮ್ಮ "ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ — ವ್ಯವಸ್ಥೆ ಒಗ್ಗೆ ಪರಊರಿನವರು ಪತ್ರ ಮೂಲಕ ಕೇಳುವದುತ್ತಮ

ಬಿ ರಾಮಕೃಷ್ಣಯ್ಯಾ, ಮಾಲಕ

ವಾರ್ತೆಗಳು

(೩ನೇ ಪುಟದಿಂದ ಮುಂದುವರಿದದ್ದು)

ನಗರದೊಳಗೆ ನಡೆದ ಗಡಿಬಿಡಿ [illegible] ವ ಗಲಭೆ [illegible] ಮಾಡಿದ [illegible] ಸಂಬಂಧ [illegible] ಉಗ್ರತೆಯ ಉಪಾಯಗಳನ್ನು [illegible] ಆದಷ್ಟು ತಯಾರ [illegible] ಸರಕಾರ ಪತ್ರ ಪ್ರಕಟ [illegible] ಅಸೆಂಬ್ಲಿ ಸಭೆಯಲ್ಲಿ [illegible] ಮಾಡಬೇಕಾಗಿ [illegible] ಶಂಕರ ಪ್ರಭು [illegible] ವಿಸರ್ಜನೆಯ [illegible] ಆದರೆ ಅದಕ್ಕೆ ತಪ್ಪಿಸ್ಟು [illegible] ದ್ದರಿಂದ [illegible] ಅಂಬೇಡಕರ ಮೊದಲಾದವರು [illegible] ತತ್ವಗಳ [illegible] ಕಾಂಗ್ರೆಸ [illegible] ಆಜ್ಞಾ [illegible] ಪ್ರಯತ್ನ ಮಾಡಿದ್ದ ಮತ್ತು ಅದರ [illegible] ಪ್ರಚಾರ ಮಾಡಿದ್ದು [illegible] ನಿಂದ್ಯನೆಂದೂ ಪತ್ರಿಕೆಗಳು ಟೀಕಿಸುತ್ತವೆ

— ಮುಂಬಯಿಯೊಳಗೆ [illegible] ಸಯಾಜಿರಾವ [illegible] ರೆ ಮಹಾರಾಜರು [illegible] ಯುರೋಪದಿಂದ ಮುಂಬಯಿಗೆ ಬಂದರು ಇಲ್ಲಿ ಬಂದ ಬಳಿಕ, ಅವರ ಪ್ರಕೃತಿ ಒಮ್ಮೆಂದೊಮ್ಮೆ ಕೆಟ್ಟಿತು ಅವರು ತೀರ ಅಸ್ವಸ್ಥರಾದರು [illegible]

[illegible] ಬುಧವಾರ [illegible] ಮಹಾರಾಜ [illegible] ಕೂಡಲೇ [illegible] ಪಂಟಿಗ [illegible] ಮಹಾರಾಜ [illegible] ಮಹಾರಾಣಿಯವರೂ [illegible] ಯುವರಾಜ [illegible] ಬಂದಿದ್ದಾರೆ [illegible] ಉಪಚಾರ ಮಾಡ [illegible] ಡಾ| ಜೋಶಿ [illegible] ಬುಧವಾರ ಬೆಳಗಿನ [illegible] ಮಹಾರಾಜರ [illegible] ಮಂಡಳದಲ್ಲಿ [illegible] ದೇವಾಲಯದಲ್ಲಿಯೂ [illegible] ಮಹಾರಾಜರ ಪ್ರಕೃತಿ [illegible]

— ಮಹಾತ್ಮರ ಗಡಿನಾಡಿನ ಸಂಚಾರ ಬುಧವಾರ ಮುಗಿಯಿತು [illegible] ಮಹಾತ್ಮರು [illegible] ದದಿಂದ ಟೆಕ್ಸಿಲಕ್ಕೆ ಬಂದರು ಅಲ್ಲಿ ಬುದ್ಧ ಕಾಲದ [illegible] ನೋಡಿಕೊಂಡು ಗಡಿನಾಡಿನವರ ಅಪ್ಪಣೆ ಕೊಂಡು [illegible] ಬಂದಿ [illegible] ವಾರ ದಿಲ್ಲಿಗೆ [illegible] ಬುಧವಾರ [illegible] ಅನ್ಸಾರಿಯವರ ಪತ್ನಿಯರಾದ ಬೇಗಮ್ ಅನ್ಸಾರಿಯವರು ಅಸ್ವಸ್ಥರಿದ್ದಾರೆ [illegible] ಹರಿಜನ ಮಂದಿರದಲ್ಲಿ ಶ್ರೀ| [illegible] ಮಹಾತ್ಮರ ಪ್ರಕೃತಿ [illegible] ಮಹಾತ್ಮರು ಪ್ರಸನ್ನರಿದ್ದಾರೆ ಗಡಿನಾಡಿನ [illegible] ಮಹಾತ್ಮರ ಪ್ರಕೃತಿಮಾನಕ್ಕೆ [illegible] ಕಾರ್ಯದರ್ಶಿಗಳಾದ ಶ್ರೀ| ಪ್ಯಾರೀಲಾಲರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರ• ಮಹಾತ್ಮರ ತೂಕ ಹೆಚ್ಚಿದೆ [illegible] ಮಹಾತ್ಮರಿಗೂ ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳಿಗೂ ಸಮಕ್ಷ ಸಂಭಾಷಣ ಒದಗಿ ಬರಲಿಲ್ಲ

— ದಕ್ಷಿಣ [illegible] ಡಾ|| ಪಣ್ಣಾಬಸಿಂಗ ಯೋಗಿ ಇವರು ಒಂದು ವಿಶೇಷ ಉಪಚಾರ ಮಾಡುತ್ತಾರೆ [illegible] ಅವರು ಈ ರೋಗವನ್ನು [illegible] ಸಾಮಾನ್ಯವಾದ ಭೋಜನ, ಅದರೊಳಗೆ ಯಾವ ಶಕ್ತಿಯನ್ನು ಯೋಗಿ [illegible] ಹೇಳಬರುವದಿಲ್ಲ [illegible] ಡಾ|| ಪಣ್ಣಾಬಸಿಂಗ ಯೋಗಿ ಇವರು ಕರಾಚಿಯಲ್ಲಿ ೧೦ ಮಂದಿ [illegible] ರೋಗಿಗಳಿಗೆ ಒಂದು ಊಟ ಹಾಕಿದರು ಅವರಿಗೆ [illegible]

SERVICE & PROMPTNESS
A Feature and a Fact with the "POPULAR"

M Venkatesh Pai
Banker

Sri Krishna Bhavan
Mangalore
26th July 1938

The Managing Director
The Popular Insurance Co Ltd
MANGALORE

Policy No 40

Dear Sir

I very much appreciate your promptness in settling the claim in less than a week in respect of the above policy on the life of my late lamented Father in law Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2,008-7-0 is delivered to the claimant and all within the short period of 6 days

This spirit of service and promptitude evinced by the POPULAR is highly laudable and it is but proper that the Company should be POPULAR It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully
(Sd) M Venkatesha Pai

The Company requires influential Ladies and Gentlemen to work as Agents on most remunerative terms including hereditary renewals.

Apply to

THE POPULAR INSURANCE CO. LIMITED,
Head Office: MANGALORE.
Branch *PROSPECT CHAMBERS, Hornby Road, BOMBAY*

ದಪ್ಪನ ಹಿಂದವಾಗುತ್ತಿತ್ತು, ಊಟ ಮಾಡಿದ ೧೫ ದಿನಗಳ ತನಕ ಅವರಿಗೆ ದಮ್ಮು ಆಗಲಿಲ್ಲವಾಗಿ ೨೫ ದಿನಗಳ ಪ್ರತ್ಯಕ್ಷವಾನ ನೋಡಿ ಸುದ್ದಿಗಾರರು ಬರೆಯುತ್ತಾರೆ. ಈ ಔಷಧ ಸಮಾರಂಭಕ್ಕೆ ಕಂಟಿ ಮ್ಯುನಿಸಿಪಲ್ ಟಿಯ ಅಧ್ಯಕ್ಷರಾದ ರಾ|| ಹಾಶಿಮ ಅಳವಿಯವರೂ, ಡಾ|| ಲಲಜ ಮುಡೋತ್ರಾ, ರಾ|| ಜಿಮುತೀಟ ನಸರವಾನಜಿ ಮೋದಿ ಪ್ರಭೃತಿ ಪ್ರಮುಖರೂ ಹಾಜರಿದ್ದರು. ಇದೇ ಪ್ರಕಾರ ಮೂಲವ್ಯಾಧಿಯನ್ನೂ ಮಧುಮೇಹವನ್ನೂ ಡಾ|| ಯೋಗಿಯವರು ಗುಣಪಡಿಸುತ್ತಾರೆ. ಇದೆಂಥ ಚಮತ್ಕಾರವೆಂದು ತಿಳಿಯುವದಿಲ್ಲ. ಡಾ|| ಯೋಗಿಯವರು ಪ್ರತಿಫಲವನ್ನು ಅಪೇಕ್ಷಿಸುವದಿಲ್ಲ. ಕೊಟ್ಟರೆ ನಿರಾಕರಿಸುವದಿಲ್ಲ.

— ಚಂದ್ರಗ್ರಹಣದ ಸಮಯ ಶ್ರೀ ಕಾಶಿ ಕ್ಷೇತ್ರದಲ್ಲಿ ೩ ಲಕ್ಷ ಯಾತ್ರಿಕರು ಗಂಗಾಸ್ನಾನ ಮಾಡಿ ಪುನೀತರಾದರು. ಕಲಕತ್ತೆಯಲ್ಲಿಯೂ ಇದೇ ಪ್ರಕಾರ ಯಾತ್ರಿಕರ ಜನಸಂದಣಿ. ಗಂಗಾನದಿಯ ಎರಡೂ ಪಕ್ಕಗಳಲ್ಲಿ ಜನರು ತಂಡಗಟ್ಟಿ ಸೇರಿದ್ದರು. ಮುಂಬಯಿಯಲ್ಲಿ ಗ್ರಹಣ ಕಾಣಲಿಲ್ಲ. ಯಾಕಂದರೆ, ಆ ದಿನ ಮುಗಿಲು ಮೋಡಗಳಿಂದ ಕವಿದಿತ್ತು.

— ಬದರಿನಾಥ ದೇವಾಲಯದ ವರ್ಷಾಸನ ಉತ್ತನ್ನ ೩೦ ಲಕ್ಷ ರೂಪಾಯಿ. ದೇವಸ್ಥಾನವು ಇದೀಗ ಮಹಂತರ ಸ್ವಾಧೀನವಿದೆ. ಮಹಂತರಿಗೆ ರಾವಳ ಎನ್ನುತ್ತಾರೆ. ಈ ದೇವಾಲಯದ ಆಡಳಿತೆಯನ್ನು ಸರಿಯಾಗಿ ನಡಿಸುವದಕ್ಕಾಗಿ ಸಂಯುಕ್ತ ಪ್ರಾಂತಿಕ ಸರಕಾರದವು ಒಂದು ಆಡಳಿತೆಯ ಯೋಜನೆಯನ್ನು ತಯಾರಿಸಿದೆ.

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಠ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು. ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು.

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು.

ಮಾಲಕ - ಕೇ. ರಾಮ ಪಂಡಿತ, ಪೋ. ಕುಮಟಾ ಜಿ. ಉ. ಕಾನಡಾ

ಚಿತ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋನೆರೋಗ, ಮೈ ಕೈ ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜೌಷಧವಾಗಿದೆ

ಡಾ| ವಿ. ಎನ್. ಶ್ರೀನಿವಾಸರಾವ್,
ಲಿವ್ಹರ್ ಸ್ಪೇಲಿಸ್ಟ,
ಎಂ. ವಿ. ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ, ಶಿರ್ಶಿ

ಪ್ರವಾಸಿ ಜನರಿಗೆ

ಊಟ–ಉಪಚಾರಗಳ
ಉತ್ತಮ ವ್ಯವಸ್ಥೆ !

ಮಾಧವಾಶ್ರಮ,

ಕಾರವಾರ.

ಮಧ್ಯವರ್ತಿ ಸ್ಥಳ,
ಉತ್ಕೃಷ್ಟ ಊಟ,
ಉತ್ತಮ ಹವೆಯ ಕೋಣೆಗಳು,
ಊಟ-ಉಳಕೊಳ್ಳುವ ಅನುಕೂಲತೆ !

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ಣಿಕ

ಎಗ್ಯುಮಿಕ್ಸ್ಚರ್ ಉಪಯೋಗಿಸಿರಿ !
ತಿಕ್ಕ ತಿಕ್ಕ ಔಷಧ ಸೇವಿಸಿ, ಜ್ವರದಂಥ ಪೀಡೆಯನ್ನು ಉದ
ಬೆಳಸಬೇಡಿರಿ. ಬೆಲೆ ಆಣೆ ೧೨

ಇಂಡೋಬಾಮ್

ತಲೆಶೂಲಿ, ಮೈನೋವು, ಸಂಧಿವಾತ, ಎಷ್ಟರ ನೋವುಗಳ
ಕಡಿತ ಮೊದಲಾದ ವಿಕಾರಗಳು ತುಸು ಮುಲಾಮದಿಂದ
ಒಳ್ಳೆತಾಗಿ ವಾಸಿಯಾಗುತ್ತವೆ. ಬೇರೆ ಮುಲಾಮುಗಳಿಂದಾಗುವಂತೆ
ಅನ ವಸ್ತ್ರಕ ಉರಿ ಏಳುವದಿಲ್ಲ. ಬೆಲೆ ಆ ೮
ಎಲ್ಲ ಅಂಗಡಿಗಳಲ್ಲಿ ಸಿಗುತ್ತವೆ, ಸಿಗದಿದ್ದರೆ ನಮಗೆ ಬರೆಯಿರಿ

ಕರ್ಣಿಕ ಬ್ರದರ್ಸ,
ಗಿರಗಾಂವ, ಮುಂಬಯಿ, ನಂ ೪

ಬನ್ನಿರಿ ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ !

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, ಕುಮಟಾ. (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ ಧಾರವಾಡ ಬೆಳಗಾಂವ ಕಡೆಗೆ ಹೋಗುವ ಟ್ರೈವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ "ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ಕೇಳಬಹುದು.

ಬಿ. ರಾಮಕೃಷ್ಣಯ್ಯಾ, ಮಾಲಕ

ॐ

'दशमूलारिष्ट.'
ದಶಮೂಲಾರಿಷ್ಟ

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡು ಬರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ ಅದರ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನು ಶಕ್ತಿಯನ್ನು ಹುಟ್ಟುಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ ಮ ೦೫) ಕಾಮಿಲೆ, ಪಾಂಡರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಮರಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಾಶಯ ಶುದ್ಧಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಬರುವ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಂಡ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಿರುತ್ತದೆ

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಎರಡೆರಡು ಔಂಸ ಮಾತ್ರೆ ೧೨ ದಿನಗಳ ವರೆಗೆ ಕೊಟ್ಟರೆ ಪ್ರಸೂತಿ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಆರೋಗ್ಯವಂತರಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡಬೇಕು

೧೬ ಔಂಸ ಬಾಟ್ಲಿ ಕ್ಕೆ ರೂ ೧—೪—
,, ಬಾಟ್ಲಿ ೬ಕ್ಕೆ ರೂ ೭—೨—೦
,, ಬಾಟ್ಲಿ ೧೨ಕ್ಕೆ ರೂ ೧೩—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯ ಪ್ರಕಾರ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ ಅಶ್ವಗಂಧಿಮಿಶ್ರ ಕೂಷ್ಮಾಂಡಾವಲೇಹ, ಪ್ರಮೇಹಾಂತಕ ದ್ರಾಕ್ಷಾರಿಷ್ಟ, ಕುಮಾರಿ ಆಸವ, ದಿವ್ಯಾಮೃತ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ ಮಹಾನಾರಾಯಣ ತೈಲ, ಹಿಮಸಾಗರ ತೈಲ ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ. ಕನ್ನಡ)

ಶ್ರೀ ಧೂತಪಾಪೇಶ್ವರ ರಸಾಯನೌಷಧಿ ಕಾರಖಾನೆ

TRADE MARK

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ
ABHRALOHA

ದೊರೆಯುವ ಸ್ಥಳ—

ಕಾರವಾರ—ಮೆಸರ್ಸ ಮುಕುಂದರಾವ ಕೇಸರೀಕರ ಬ್ರದರ್ಸ
ಅಂಕೋಲಾ ದಿ ಸ್ವದೇಶೀ ಡಿಪೋ ॥ ಕುಮಟಾ ವೇದವ್ಯಾಸ ತಯ್ಯುನಾಯ್ಕ ॥ ಹೊನ್ನಾವರ ಕಲ್ಯಾಣಪುರ ಬ್ರದರ್ಸ

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಹಂಚಿನ ದಾರರೂ, ಕಾರ್ಯಕರ್ತರೂ ಬಹಳ ಜೋಖಿಮಿನವರು. ಇವರ ಕಂಪನಿಯ ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ್ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು

Karwar Agents
D K Nayak Bros
K N Nayak
Honavar Agent
R V, Prabhu

K. Padmanabha Rao & Sons.
BELGAUM
Chief Agents for
Karnatak Districts & S M States

ಸುಲಭ ಕ್ರಯ! ಡಾಕ್ಟರ ಜೆ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಬಂದು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಇದರಿಂದ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ತಂಬಾಕು ಸೇದುವವರ ವ್ಯಾಧಿಗಳನ್ನು ನಿವಾರಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಚಿಟಿಕೆ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಉಚಿತವಾಗಿ ಕಳಿಸಲಾಗುವದಿಲ್ಲ ಒಂದು ಡಬ್ಬಿ ಒಂದಕ್ಕೆ ಕ್ರಯ ರೂ ೦—೪—೦ ಡಬ್ಬಿ ೬ ರ ಒಂದು ಡಜನ್ ೧ಕ್ಕೆ ರೂ ೨—೮—೦ ವಿ ಪಿ ಖರ್ಚು ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೋರ್ಕಟೌನ್, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 21st November, 1938.

ವರ್ಷ ೨೧ — ಸಂಚಿಕೆ ೨೦

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು ರೂಪಾಯಿ 2-4-0
ಮನಿಯಾರ್ಡರಿನಿಂದ ರೂ 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಪ್ರತಿ ಕಾಲಮಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ.1-0-0
೮ ನಂತ್ರ ಪ್ರತಿಸಾಲಿಗೆ 0-2-0
ಹತ್ತಿಂಗಳ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೧ ಮಾಹೆ ನವಂಬರ ಸನ್ ೧೯೩೮ನೇ ಇಸವಿ.)*

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital In order that the depositors' money should be safe and always available it is necessary that only safe loans should be granted The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans Subject to this condition the large resources of this bank and the expert services of its staff are always available to businessmen and trading concerns

Estd 1906

RESOURCES OVER A CRORE.

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:- ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938

The Agricultural & Industrial Bank, Ltd.

ವಿವಿಧ ಸಂಗ್ರಹ.

ಬೇಸಾಯ ಕಾಲೇಜಿನಲ್ಲಿ ನಾ|| ದೇಸಾಯಿಯವರ ಭಾಷಣ.

ಪುಣೆಯ ಬೇಸಾಯ ಕಾಲೇಜಿನೊಳಗೆ ಸಪ್ಟಂಬರ ತಿಂಗಳಲ್ಲಿ ವಿದ್ಯಾರ್ಥಿಗಳ ಸಮ್ಮೇಲನ ಜರುಗಿತು. ಆ ಕಾಲದಲ್ಲಿ ಭೂಕಂದಾಯ ಮಂತ್ರಿಗಳಾದ ನಾ|| ಮೊರಾರಜಿ ದೇಸಾಯಿಯವರು ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಅವರು ಮಾಡಿದ ಭಾಷಣ ಮನನೀಯವಿದೆ. ನಾ|| ರು ಹಿಂದಿಯಲ್ಲಿ ಭಾಷಣ ಮಾಡಿ ನುಡಿದದ್ದೇನಂದರೆ — "ಈ ಕಾಲೇಜು ಬೇಸಾಯಗಾರರಿಗೇ ಸಂಬಂಧಪಟ್ಟದ್ದು, ಆದರಿಂದ ಬೇಸಾಯಗಾರರಿಗೆ ತಿಳಿಯುವಂಥ ಭಾಷೆಯಲ್ಲಿಯೇ ನಾವು ಮಾತಾಡಬೇಕು. ಬೇಸಾಯಗಾರರಿಗೆ ಹಿಂದೀ ಭಾಷೆ ತಿಳಿಯಬಲ್ಲದು, ಇಂಗ್ಲಿಷು ತಿಳಿಯಲಾರದು. ಈ ಕಾಲೇಜು ನಿರರ್ಥಕವೆಂದು ಅನೇಕರು ಹೇಳುತ್ತಾರೆ, ಇದನ್ನು ಮುಚ್ಚಬೇಕಾಗಿಯೂ ಅವರ ಅಂಬೋಣವಿದೆ. ಆದರೆ ಬೇಸಾಯ ಸುಧಾರಣೆಗಳನ್ನು ಮಾಡಬಲ್ಲ ಜನರನ್ನು ತಯಾರಿಸುವ ಸಂಸ್ಥೆ ನಮ್ಮ ಪ್ರಾಂತದಲ್ಲಿ ಇದೊಂದೇ. ಆದರಿಂದ ಈ ವಿದ್ಯಾಲಯವನ್ನು ಮುಚ್ಚಲು ನನ್ನ ಒಪ್ಪಿಗೆಯಿಲ್ಲ. ಬೇಸಾಯವು ಲಾಭದಾಯಕ ಉದ್ದಿಮೆಯಲ್ಲವಾದ್ದರಿಂದ ಬೇಸಾಯ ಪದವೀಧರರು ಬೇಸಾಯ ಉದ್ದಿಮೆಯನ್ನು ಪುರಸ್ಕರಿಸುವದಿಲ್ಲವಾಗಿ ಕಾಲೇಜಿನ ಮುಖ್ಯಾಧಿಕಾರಿಗಳು ಇದೀಗ ತಮ್ಮ ಭಾಷಣದಲ್ಲಿ ನುಡಿದರಷ್ಟೇ! ನನಗಿವರ ಅರ್ಥವೇ ತಿಳಿಯದು. ಈ ಕಾಲೇಜಿನ ಪದವೀಧರರು ಬೇಸಾಯ ಉದ್ದಿಮೆಯನ್ನು ಲಾಭದಾಯಕವಾಗಿ ಪರಿಣಮಿಸದಿದ್ದರೆ ಲೋಕದೊಳಗೆ ಬೇಸಾಯ ಉದ್ದಿಮೆಯೆಂಬ ಹೆಸರೇ ಉಳಿಯದು, ಈ ವರೆಗೆ ಕಾಲೇಜು ನಡಿಸಿದ ಕಾರ್ಯ ನಿರರ್ಥಕವಾದಂತೆಯೇ. ಬೇರೆ ಸ್ವತಂತ್ರ ದೇಶಗಳಲ್ಲಿ ಬೇಸಾಯವು ಲಾಭದಾಯಕ ಉದ್ದಿಮೆಯಾಗಿರುತ್ತದೆಂಬದನ್ನು ಲಕ್ಷದಲ್ಲಿಡಬೇಕು. ಅಜ್ಞಾನ, ಅನುಕೂಲತೆಗಳ ಅಭಾವ ಮೊದಲಾದವುಗಳ ಮೂಲಕ ನಮ್ಮಾ ದೇಶದೊಳಗೆ ಬೇಸಾಯವು ಲಾಭದಾಯಕವಾಗುವದಿಲ್ಲವೆಂದು ಜನರು ಹೇಳಬಹುದು. ಆದರೆ ಬೇಸಾಯ ಉದ್ದಿಮೆಯ ಅಭಿವೃದ್ಧಿಗೆ ಈ ದೇಶದಲ್ಲಿ ಒದಗುವ ತೊಡಕುಗಳನ್ನು ಪರಿಹರಿಸಲು ತಕ್ಕ ಪ್ರಯತ್ನಗಳನ್ನು ಈ ತನಕ ಯಾರೂ ಮಾಡಿಲ್ಲ. ಈ ಕೆಲಸ ನಾವು ಕೂಡಲೆ ಪ್ರಯತ್ನ ಮಾಡಬೇಕು. ಯಾಕೆಂದರೆ, ಬೇಸಾಯಗಾರರ ಸ್ಥಿತಿ-ಗತಿಯನ್ನು ಸುಧಾರಿಸಿದ ಹೊರತು ನಮ್ಮ ದೇಶದ ಸುಧಾರಣೆಯಾಗದು. ಈ ಕಾಲೇಜಿಗೂ ಬೇಸಾಯಗಾರರಿಗೂ ಈವಾಗ ಏನೂ ಸಂಬಂಧವಿರುವದಿಲ್ಲ. ಆದರಿಂದ ಈ ಕಾಲೇಜಿನ ವಿದ್ಯಾರ್ಥಿಗಳಿಗೆ ಬೇಸಾಯವು ಲಾಭದಾಯಕವಾಗಿಲ್ಲ. ವಾಙ್ಮಯಾತ್ಮಕ ಕಾಲೇಜುಗಳಿಗೂ ಈ ಕಾಲೇಜಿಗೂ ಏನೂ ಅಭ್ಯಂತರ ಕಾಣುವದಿಲ್ಲ. ಇಲ್ಲಿಯ ವಿದ್ಯಾರ್ಥಿಗಳು ಬೇಸಾಯದ ಒಂದು ಅಂಶವನ್ನು ಕಲಿಯುತ್ತಾರೆಂಬದೇ ಈ ಕಾಲೇಜಿನೊಳಗಿನ ಒಂದು ಭೇದ. ಇದು ನಿಮ್ಮ ತಪ್ಪಲ್ಲ. ನಮ್ಮ ಸರಕಾರವು ವಿದೇಶೀಯರ ಅಧೀನವಿತ್ತು. ಅವರಿಂದ ಈ ಕಾರ್ಯವನ್ನು ನಾವು ಅಪೇಕ್ಷಿಸಕೂಡದು. ಬೇಸಾಯ ಉದ್ದಿಮೆಯನ್ನು ಲಾಭದಾಯಕವಾಗಿ ಪರಿಣಮಿಸುವಂತೆ ವಿದ್ಯಾರ್ಥಿಗಳಿಗೆ ತಕ್ಕ ಶಿಕ್ಷಣ ಕೊಡಲು ಕಾಂಗ್ರೆಸ ಸರಕಾರವು ಯಾವತ್ತೂ ಪ್ರಯತ್ನಗಳನ್ನು ಮಾಡುವದು. ಈಗ ಈ ಸಭೆಯಲ್ಲಿ ವಿದ್ಯಾರ್ಥಿಗಳು ತೊಟ್ಟುಕೊಂಡ ಉಡಿಗೆ ತೊಡಿಗೆಗಳು ವಿಲಾಸಿ ಸಮಾಜಕ್ಕೆ ಯೋಗ್ಯವಾದವುಗಳು, ಬೇಸಾಯಗಾರರಿಗೆ ಇಂಥ ಉಡಿಗೆ-ತೊಡಿಗೆಗಳು ಹೇಳಿದ್ದಲ್ಲ. ನಮ್ಮ ಚೈತನ್ಯವನ್ನು ನಾವು ಅಪವ್ಯಯ ಮಾಡುತ್ತೇವೆ. ಕೆಲ ದಿನಗಳ ಹಿಂದೆ ಈ ಕಾಲೇಜನ್ನು ನಾನು ನೋಡಬಂದಿದ್ದೆ. ಕೆಲ ವಿದ್ಯಾರ್ಥಿಗಳು ಟೆನಿಸ್-ಮೊಜ್ಜೆಗಳನ್ನು ಹಾಕಿಕೊಂಡು ಗದ್ದೆ ಹೂಡುವದನ್ನು ನಾನು ನೋಡಿದೆ. ಈ ನಮೂನೆ ಅಭಿಮಾನಾಸ್ಪದವೆಂದು ನೀವು ತಿಳಿಯುತ್ತೀರೆಂದು ನನಗನಿಸುವದಿಲ್ಲ. ಈ ಪ್ರಕಾರಗಳು ನೀವು ವಿದ್ಯಾರ್ಥಿಗಳು ಇಲ್ಲಿ ಸೇರುವ ಮುಂಚೆ ರೂಢವಾಗಿದ್ದವು; ಅವನ್ನೇ ನೀವು ಅನುಸರಿಸಿದ್ದೀರಿ. ಅಧ್ಯಾಪಕರು ಈ ಕಡೆ ಲಕ್ಷ ಕೊಡುವದಿಲ್ಲ, ಯಾಕೆಂದರೆ ಅವರಾದರೂ ಇದೇ ಪರಂಪರೆಯಲ್ಲಿ ಬೆಳೆದವರು. ನಿಮ್ಮ ವಸತಿಗೃಹಕ್ಕೆ ನಾನು ಹೋಗಿದ್ದೆ "ತಿಂಗಳಿಗೆ ನಿನ್ನ ಖರ್ಚೇನು?" ಎಂದು ನಾನೊಬ್ಬ ವಿದ್ಯಾರ್ಥಿಗೆ ಕೇಳಲು, "ಊಟದ ಖರ್ಚು ರೂ ೩೦, ಕೋಣೆ ಗುಡಿಸುವ ಆಳಿಗೆ ರೂ. ೪," ಎಂದು ಆ ವಿದ್ಯಾರ್ಥಿಯು ನುಡಿದನು! ಇಂಥ ಜೀವನಕ್ರಮದಿಂದ ಬೇಸಾಯಗಾರರಾಗಲು ನೀವು ಅಪಾತ್ರರಾಗುತ್ತೀರಿ. ಹೀಗೆ ನಿಮ್ಮಿಂದ ನಮ್ಮ ಸಂಕಲ್ಪಿತ ಧ್ಯೇಯ ಸಾಧ್ಯವಾಗುವದಿಲ್ಲ. ನೀವು ಈ ವಿಷಯವನ್ನು ಆಳವಾಗಿ ಪರಾಂಬರಿಸಬೇಕು. ಬೇಕಾದ ಆಟ-ಪಾಟಗಳನ್ನು ನೀವು ಆಡಬಹುದು, ಪಾರಿತೋಷಕಗಳನ್ನೂ ಸಂಪಾದಿಸಬಹುದು. ಅವು ಕೆಲ ಮಟ್ಟಿಗೆ ಅವಶ್ಯವಿವೆ. ಆದರೆ ವಿದ್ಯಾಭ್ಯಾಸದ ಮುಖ್ಯ ಧ್ಯೇಯವನ್ನು ಸಾಧಿಸಲು ನೀವು ಯಾವತ್ತೂ ಪ್ರಯತ್ನಗಳನ್ನು ನಡಿಸಬೇಕು. ಈಗಿನ ಸ್ಥಿತಿಯಿಂದ ಯಾರಿಗೂ ಸಮಾಧಾನವಿಲ್ಲ. ವಿದ್ಯಾರ್ಥಿಗಳು ತಮ್ಮ ಧ್ಯೇಯಕ್ಕುಚಿತವಾಗಿ ವರ್ತನವನ್ನಿಡುತ್ತಾರೇನೆಂದು ಯಾಕೆ ವಿಚಾರ ಮಾಡಬಾರದು? ಬೇಸಾಯಗಾರನು ಉಡು-ತೊಡುವ ಬಗೆಯನ್ನು ಇವರು ವಿಚಾರಿಸುವದಿಲ್ಲ, ವಿದೇಶಿ-ಸ್ವದೇಶಿ ಸರಕುಗಳೆಂಬ ಪರಿವೆಯನ್ನು ಹಿಡಿಯುವದಿಲ್ಲ. ಭಾವೀ ಆಯುಷ್ಯದ ಮೇಲೆ ಇವರ ಪರಿಣಾಮವಾಗುವದರಿಂದ ಇವನ್ನು ನೀವು ಲಕ್ಷಿಸಬೇಕಾಗಿ ನನ್ನ ಹೇಳಿಕೆಯಿದೆ. ನಿಮಗೂ ಬೇಸಾಯಗಾರರಿಗೂ ವಿಶೇಷ ಸಂಬಂಧ ಬರುವದರಿಂದ ನಿಮ್ಮಿಂದಲೇ ಗ್ರಾಮೋದ್ಧಾರ ಕಾರ್ಯ ನೆರವೇರಬಲ್ಲದು. ನನ್ನ ಮಾತುಗಳಂತೆ ನೀವು ವರ್ತಿಸಿದರೆ ಬೇಸಾಯವು ಅಪ್ರಯೋಜಕವೆಂಬ ನಿಮ್ಮ ಕಲ್ಪನೆ ಅಳಿದೀತು. ಹಿಂದೆ ಬೇಸಾಯವು ಉತ್ತಮ ಉದ್ದಿಮೆಯೆಂದು ಹೇಳಲ್ಪಡುತ್ತಿತ್ತು. ಈಗ ವಿಪರೀತ ಕಲ್ಪನೆ ರೂಢವಾಗಿದೆ. ದುರ್ದೈವದಿಂದ ನೌಕರಿಯು ಬಹಳ ಲಾಭದಾಯಕವೆಂದು ಎಣಿಸಲ್ಪಡುತ್ತದೆ. ಮತ್ತು ಪ್ರತಿಯೊಬ್ಬರೂ ಅದನ್ನು ಪಡೆಯುವದಕ್ಕಾಗಿ ಹಾತೊರೆಯುತ್ತಾರೆ. ಬೇರೆ ಕಾಲೇಜುಗಳ ವಿದ್ಯಾರ್ಥಿಗಳು ನೌಕರಿ ಮಾಡುತ್ತಿದ್ದರೆ ತಾವೂ ಯಾಕೆ ಮಾಡಬಾರದೆಂದ ನೀವು ವಾದಿಸಬಹುದು. ಆದರೆ ನಿಮ್ಮ ಜೀವನಕ್ರಮವು ಬೇಸಾಯಗಾರರೊಡನೆ ಸಂಬಂಧ ಬರುವಂತೆ ರೂಪಾಂತರಿಸಬೇಕೆಂಬ ಮಾತನ್ನು ನೀವು ಮರೆಯಲಾಗದು. ಬೇಸಾಯವನ್ನು ಲಾಭದಾಯಕವಾಗಿ ಪರಿಣಮಿಸುವದಕ್ಕಾಗಿಯೇ ಸರಕಾರವು ಈ ಕಾಲೇಜನ್ನು ನಡಿಸುತ್ತದೆ. ಈ ಕಾಲೇಜಿನೊಳಗೆ ಬೇರೆ ಬೇರೆ ಶೋಧಗಳು ನಡೆಯುತ್ತವೆ. ಈ ಶೋಧಗಳ ಪರೀಕ್ಷೆಯನ್ನು ನಾನು ಹೊಲಗಳಲ್ಲಿ ಮಾಡಬಯಸಿ ನಿಮಗೆ ಕೇಳುವದೇನಂದರೆ.— "ನಿಮ್ಮ ಶೋಧಗಳಿಂದ ಬೇಸಾಯಗಾರನಿಗೇನು ಪ್ರಯೋಜನ ದೊರೆಯಿತು? ನೀವು ನಡಿಸಿದ ಶೋಧಗಳ ಕುರಿತು ಹಸ್ತಪತ್ರಿಕೆಗಳನ್ನೂ ಪ್ರಸಿದ್ಧಿಪತ್ರಿಕೆಗಳನ್ನೂ ನೀವು ಪ್ರಕಟಿಸುತ್ತೀರಿ; ಆದರೆ ಅವುಗಳಿಂದ ಬೇಸಾಯಗಾರರಿಗೆ ಎಷ್ಟು ಪ್ರಯೋಜನ ದೊರೆಯಿತೆಂದು ನೀವು ಹೇಳಬಲ್ಲಿರಾ?" ಪ್ರಯೋಗಶಾಲೆಯೊಳಗಿನ ಪದ್ಧತಿಗಳನ್ನು ನೀವು ಅವರ ಕಡೆ ಪ್ರದರ್ಶಿಸುತ್ತೀರಿ. ನನಗೆ ಇದರಿಂದ ಸಮಾಧಾನವಿಲ್ಲ. ಹಸ್ತಪತ್ರಿಕೆಗಳಲ್ಲಿ, ಪ್ರಸಿದ್ಧಿಪತ್ರಿಕೆಗಳಲ್ಲಿ ಪ್ರಕಟವಾದ ವೃತ್ತಾಂತದಿಂದ ನಾನು ನಿಮ್ಮ ಕೆಲಸದ ಫಲವನ್ನು ನಿರ್ಣಯಿಸುವವನಲ್ಲ. ಪ್ರತ್ಯಕ್ಷ ಹೊಲದಲ್ಲಿಯೇ ನಿಮ್ಮ ಕೆಲಸದ ಪರೀಕ್ಷೆ ಮಾಡುವೆ. ಆ ಪರೀಕ್ಷೆಯ ಮೇಲೆಯೇ ನಿಮ್ಮ ಶೋಧ-ಕಾರ್ಯವನ್ನು ಮುಂದೆ ನಡೆಯಗೊಡಬೇಕೋ ಇಲ್ಲವೋ ಎಂಬುದನ್ನು ನಾನು ನಿರ್ಣಯಿಸುವೆನು. ವಿದ್ವತ್ತೆಯ ಪ್ರದರ್ಶನಕ್ಕಾಗಿ ಅನೇಕರು ಶೋಧ ಕಾರ್ಯವನ್ನು ಪುರಸ್ಕರಿಸುತ್ತಿರುತ್ತಾರೆ. ಆದರೆ ವ್ಯವಹಾರದೊಳಗೆ ಪ್ರಯೋಜನ ದೊರೆಯುವ ಶೋಧಗಳೇ ಯೋಗ್ಯ ಶೋಧಗಳೆಂದು ನನ್ನ ಅಭಿಪ್ರಾಯ. ತಕ್ಕಷ್ಟು ಐಶ್ವರ್ಯವಂತರಾದ ಮೇಲೆ ನಾವು ವಿದ್ವತ್ತೆಯ ಪ್ರದರ್ಶನಕ್ಕಾಗಿ ಶೋಧಗಳನ್ನು ನಡಿಸಬಹುದು. ಸುಖವಿಲಾಸಕ್ಕಾಗಿ ಖರ್ಚು ಮಾಡಲು ನಮ್ಮ ಕಡೆ ಹಣವಿಲ್ಲ. ಆದರಿಂದ ಬೇಸಾಯಗಾರರಿಗೆ ಪ್ರಯೋಜನ ದೊರೆಯಬಲ್ಲ ಶೋಧಗಳನ್ನಷ್ಟೇ ನೀವು ಮಾಡಬೇಕು. ಈ ಕಾಲೇಜಿನಲ್ಲಿ ಮೊದಲನೇ ವರ್ಷದ ವಿದ್ಯಾರ್ಥಿಗಳು ೩–೪ ತಾಸು ದಿನಾಲು ಹೊಲಗಳಲ್ಲಿ ಕೆಲಸ ಮಾಡಬೇಕೆಂದಿದೆ. ಮೇಲ್ವರ್ಗಕ್ಕೆ ಹೋದ ಹಾಗೆ ಈ ಅವಧಿ ಕಡಿಮೆಯಾಗುತ್ತ ಹೋಗುತ್ತದೆ! ನೀವು ಸ್ವತಃ ಮೈಮುರಿದು ದುಡಿದನಕ ಬೇಸಾಯವು ಲಾಭದಾಯಕವಾಗಲಾರದು. ಈ ಕಲ್ಪನೆಯನ್ನು ವಿದ್ಯಾರ್ಥಿಗಳು ದೃಢಪಡಿಸಿಕೊಂಡಂತೆ ಅವರು ತಾವಾಗಿಯೇ ಉಡಿಗೆ-ತೊಡಿಗೆಗಳನ್ನು ಬದಲಿಸುವರು, ಜೀವನಖರ್ಚನ್ನು ತಗ್ಗಿಸುವರು. ಪ್ರತಿ ದಿನ ೫ ಸಲ ಪೋಷಾಕನ್ನು ನೀವು ಬದಲಿಸಬೇಕಾಗಿದ್ದರೆ, ಬೇಸಾಯವು ಖರ್ಚಿನ ಉದ್ದಿಮೆಯಾಗದೆ ಮತ್ತೇನು? ವಿದೇಶದವರಂತೆಯೇ ನಾವು ನಡಕೊಳ್ಳಬೇಕೆಂದು ಕೆಲವರು ಪ್ರತಿಪಾದಿಸುತ್ತಾರೆ. ದೊಡ್ಡ ದೊಡ್ಡ ರಿಂಟೆ ಮೊದಲಾದವುಗಳನ್ನು ಬೇಸಾಯಗಾರರಿಗೆ ಕೊಡುವ ಹೊಸ ಹೊಸ ಕ್ರಮಗಳನ್ನು ಬೋಧಿಸುತ್ತಾರೆ. ಬೇಸಾಯಗಾರರಿಗೆ ಬೇಕಾದುದೇನೆಂದು ವಿಚಾರಿಸುವದಿಲ್ಲ. ನಮ್ಮದೆಲ್ಲ ಕೆಡಕು, ಪರರದೆಲ್ಲ ಒಳಿತು, ಎಂಬ ಭಾವನೆ ಶೀರ ತಪ್ಪು. ಹೀಗೆ ನಾವು ತಿಳಕೊಂಡರೆ ಯಾವಾಗಲೂ ನಾವು ಗುಲಾಮರಾಗಿ ಉಳಿಯಬೇಕಾದೀತು. ವಿದೇಶದವರಿಂದ ನಾವು ಕಲಿಯಬೇಕಾದುದೇನೋ ಬಹಳವುಂಟು. ಅದೇ ಪ್ರಕಾರ ನಮ್ಮ ಪೂರ್ವಪರಂಪರೆಯ ಮೂಲ ತತ್ವಗಳನ್ನು ನಾವು ತೊರೆಯಲಾಗದು. ಇಂಗ್ಲಿಷಿನಿಂದ ಶಿಕ್ಷಣ ಕೊಟ್ಟರೆ ವಿದ್ಯಾರ್ಥಿಗಳ ಪ್ರಗತಿ ಸರಿಯಾಗಿ ಸಾಗುವದಿಲ್ಲವೆಂದು ಲೋಕಾನುಭವವುಂಟು. ವರ್ಗದ ಹೊರಗೆ ಸಹ ವಿದ್ಯಾರ್ಥಿಗಳೂ

ಶಿಕ್ಷಕರೂ ಇಂಗ್ಲಿಷಿನಿಂದ ಮಾತಾಡುವದನ್ನು ನಾವು ಕಾಣುತ್ತೇವೆ. ನಮ್ಮ ಹುಡುಗರ ಬುದ್ಧಿವಿಕಾಸ ಪೂರ್ಣವಾಗದಿರಲಿಕ್ಕೆ ಇದೊಂದು ಕಾರಣ. ನಾವು ಇಂಗ್ಲಿಷ ಕಲಿಯಬೇಕು; ಆದರೆ ನಮ್ಮ ಸ್ವಂತ ಭಾಷೆಯ ಸಂಪೂರ್ಣ ವ್ಯಾಸಂಗ ನಮಗಿರಬೇಕು, ವಿದೇಶಗಳಿಂದ ಈ ಕುರಿತು ತಕ್ಕ ಬೋಧ ಪಡೆಯಿರಿ. ಅವು ವಿದೇಶ ಭಾಷೆಗಳಿಗಾಗಿ ಸ್ವಭಾಷೆಯನ್ನು ತೊರೆಯಲಿಲ್ಲ. ಯಾಕಂದರೆ ಸ್ವಂತ ಭಾಷೆಯಿಂದ ವಿಚಾರ ಮಾಡುವದು ಸುಲಭಸಾಧ್ಯವೆಂದು ಅವರ ಮನದಟ್ಟಾಗಿದೆ. ಅದೇ ಕಾರಣದಿಂದ ನಾನು ಇಂದು ಹಿಂದಿಯಿಂದ ಭಾಷಣಮಾಡಿರುತ್ತೇನೆ. ಬೇಸಾಯ ಇಲಾಖೆಯವರು ಬೇಸಾಯಗಾರರಿಗೆ ಪ್ರಯೋಜನ ದೊರೆಯುವಂತೆ ದುಡಿಯಬೇಕು. ನಿಮ್ಮ ಮುಖ್ಯಾಧ್ಯಾಪಕರು ನೇಮಾನಿಷ್ಠರಾದ ಬಳಿಕ, ಬೇಸಾಯಗಾರರಾಗಬಯಸುತ್ತಾರೆಂದು ತಿಳಿದು ನನಗೆ ಸಂತೋಷವಾಗಿದೆ. ಆಗ ಅವರಿಗೆ ಬೇಸಾಯಗಾರರ ಅವಶ್ಯಕತೆಗಳು ತಿಳಿದು ಅವುಗಳನ್ನು ಪೂರೈಸುವ ಉಪಾಯಗಳನ್ನು ಅವರು ತಿಳಕೊಳ್ಳುವರು. ಬೇಸಾಯವು ಲಾಭದಾಯಕ ಉದ್ದಿಮೆಯೆಂದು ಅವರ ಮನವರಿಕೆಯಾಗುವದು. ತಮ್ಮ ಹೊಲದೊಳಗಿನ ಪ್ರಯೋಗಗಳನ್ನು ಅವರು ಈ ಇಲಾಖೆಯೊಳಗಿನ ಬೇಸಾಯಗಾರರಿಗೆ ಪ್ರಯೋಜನವಾಗುವಂತೆ ನಡಿಸಲೆಂದು ನನ್ನ ವಿನಂತಿ. ಸಂಶೋಧಕರು ಬೇಸಾಯಗಾರರೊಳಗೆ ತಮ್ಮ ಕಾರ್ಯದ ಬಗ್ಗೆ ನಂಬಿಗೆಯನ್ನು ಹುಟ್ಟಿಸಬೇಕು. ನೀವು ಪ್ರಯೋಗಗಳಿಗಾಗಿ ಬಹಳ ಹಣ ಖರ್ಚು ಮಾಡಬಹುದು, ಆದರೆ ಅಷ್ಟು ಹಣವನ್ನು ಬೇಸಾಯಗಾರರು ಖರ್ಚು ಮಾಡಲಾರರು. ಈ ಸಂಗತಿಯನ್ನು ಲಕ್ಷದಲ್ಲಿಟ್ಟು ವರ್ತಿಸಬೇಕು. ಬೇಸಾಯಗಾರರಲ್ಲಿ ಅಂಥ ಶಕ್ತಿಯೂ ಸಾಧನಗಳೂ ಇರುವವೇನೆಂದು ನೀವು ವಿಚಾರ ಮಾಡಬೇಕು. ಬೇಸಾಯಗಾರರು ಸಾಧನಗಳನ್ನು ವಿದೇಶಗಳಿಂದ ತರಿಸಿಕೊಳ್ಳಬಹುದೆಂದು ನೀವು ಹೇಳಬಹುದು. ಆದರೆ ನಮ್ಮ ಕಡೆಗಿರುವ ಸಾಧನಗಳಿಂದಲೇ ನಾವು ನಮ್ಮ ಉದ್ದಿಮೆಯನ್ನು ಅಭಿವೃದ್ಧಿಗೈಯ್ಯಬೇಕು. ವಿದೇಶಗಳೊಳಗಿನ ಬೇಸಾಯಗಾರರು ನಮಗಿಂತ ಹೆಚ್ಚಿಗೆ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಇಟಾಲಿಯಲ್ಲಿ ಎಕರೆಯ ಉತ್ಪತ್ತಿ ಇಲ್ಲಿಗಿಂತ ಹೆಚ್ಚು ಉಂಟು. ನಿಮಗೆ ಗೊತ್ತಿಲ್ಲದ ಮಾತಿದು, ಈ ಸಂಗತಿಗಳನ್ನು ನೀವು ಗಾಂಭೀರ್ಯದಿಂದ ವಿಚಾರಿಸಬೇಕು. ಈ ವರೆಗೆ (ಬೇಸಾಯ) ಪ್ರದರ್ಶನಗಳಿಂದ ಹೆಚ್ಚಿನ ಲಾಭವಾಗಲಿಲ್ಲ. ಇದರ ಮೇಲಿಂದ ಪ್ರದರ್ಶಗಳನ್ನು ಸೇರಿಸಬಾರದಾಗಿ ನನ್ನ ಅಭಿಪ್ರಾಯವಿರುವದಾಗಿ ನೀವು ಎಣಿಸಕೂಡದು. ಬೇಸಾಯಗಾರರಿಗೆ ಕಲಿಸುವದಕ್ಕಾಗಿ, ಪ್ರಯೋಜನ ಮಾಡಿಕೊಡುವದಕ್ಕಾಗಿ ಪ್ರದರ್ಶನಗಳನ್ನು ಸೇರಿಸಬೇಕು. ವರ್ತಮಾನಪತ್ರಗಳಲ್ಲಿ ಜಾಹಿರಾತು ಕೊಡುವ ದೆಸೆಯಿಂದ ಪ್ರದರ್ಶನಗಳನ್ನು ಸೇರಿಸಕೂಡದು. ಪ್ರತ್ಯಕ್ಷ ಬೇಸಾಯಗಾರರಿಗೆ ಲಾಭ ಮಾಡಿಕೊಡುವ ಉದ್ದೇಶದಿಂದಲೇ ಎಲ್ಲೆಲ್ಲಿಯೂ ಪ್ರದರ್ಶನಗಳ ಏರ್ಪಾಟಾಗಬೇಕು. ಬಂಧುಭಾವದಿಂದ ನನ್ನ ವಿಚಾರಗಳನ್ನು ಮರೆಮಾಚದೆ ನಿಮ್ಮೊಡನೆ ನಾನು ಹೇಳಿದ್ದೇನೆ. ಯಾರದೇ ಮನಸ್ಸನ್ನು ನೋಯಿಸಬೇಕೆಂದು ನನ್ನ ವಿಚಾರವಿರಲಿಲ್ಲ, ಯಾರದಾದರೂ ಮನಸ್ಸು ನೊಂದಿದ್ದರೆ ನನಗೆ ಕ್ಷಮೆ ಇರಬೇಕು. ಇಂಥ ಸಮಾರಂಭಗಳ ವ್ಯತಿರಿಕ್ತ ನೀವು ಇನ್ನ್ಯಾವಾಗಲಾದರೂ ನನ್ನನ್ನು ನಿಮಂತ್ರಿಸಿದರೆ ನಾನು ಸಂತೋಷದಿಂದ ನಿಮ್ಮಲ್ಲಿ ಬರುವೆನು" ಇತ್ಯಾದಿ

* * *

ಬೇಸಾಯ ಕಾಲೇಜಿನ ಮುಖ್ಯಾಧ್ಯಾಪಕರಾದ ಶ್ರೀ|| ಗೋಖಲೇಯವರು ನಾಮದಾರರಿಗೆ ಸ್ವಾಗತ ಮಾಡುವಾಗ ಕೊಟ್ಟ ಭಾಷಣದೊಳಗಿನ ಕೆಲವಂಶಗಳೇನಂದರೆ— "ಬೇಸಾಯ ವಿಷಯದಲ್ಲಿ ಉಚ್ಚ ಶಿಕ್ಷಣ ಕೊಡುವ ಸಂಸ್ಥೆ ಮುಂಬಯಿ ಇಲಾಖೆಯಲ್ಲಿ ಇದೊಂದೇ. ಈ ಕಾಲೇಜಿನಲ್ಲಿ ಈ ತನಕ ೧೨೦೦ ಜನರು ಪದವೀಧರರಾಗಿ ಹೊರಬಿದ್ದಿದ್ದಾರೆ. ಇವರಲ್ಲಿ [illegible] ಜನರು ಸರಕಾರಿ ಇಲ್ಲವೆ ಖಾಸಗಿ ಜನರು ನಡಿಸುವ ಬೇಸಾಯ ವ್ಯವಹಾರಗಳಲ್ಲಿ ನೌಕರರಾಗಿದ್ದಾರೆ. ೧೦೦ರಲ್ಲಿ ೧೫ ಜನರು ಬೇಸಾಯೇತರ ನೌಕರಿಯಲ್ಲಿದ್ದಾರೆ ಮೊದಲಿನ ೨೦ ವರ್ಷಗಳಲ್ಲಿ ತೇರ್ಗಡೆಯಾದ ಪದವೀಧರರೊಳಗೆ ಶೇಕಡಾ ೧೦ರಷ್ಟು, ಆ ಮೇಲಿನ ೫ ವರ್ಷಗಳ ಪದವೀಧರರೊಳಗೆ ಶೇಕಡಾ ೪ರಷ್ಟು ಜನರು ಸ್ವಂತ ಬೇಸಾಯವನ್ನು ನಡಿಸುತ್ತಾರೆ. ಶೇಕಡಾ ೪ರಷ್ಟು ಜನರು ನಿರುದ್ಯೋಗಿಗಳಿದ್ದಾರೆ. ಶೇಕಡಾ ೧೨ರಷ್ಟು ಜನರ ಕಡೆಯಿಂದ ಅವರು ನಡಿಸುವ ಉದ್ಯೋಗದ ಕುರಿತು ಉತ್ತರ ಬರಲಿಲ್ಲ. ಈ ಕಾಲೇಜಿನಲ್ಲಿ ತಕ್ಕಷ್ಟು ವ್ಯವಹಾರಿಕ ಶಿಕ್ಷಣವಿಲ್ಲದ್ದರಿಂದ ಬೇಸಾಯ ಪದವೀಧರರು ಸ್ವತಃ ಬೇಸಾಯ ನಡಿಸುವದಿಲ್ಲವೆಂದು ಕೆಲವರು ಹೇಳುತ್ತಾರೆ. ಈ ಕಲ್ಪನೆ ಸರಿಯಾದುದಲ್ಲ. ಬೇಸಾಯದ ಅಭಿವೃದ್ಧಿಯಾಗದಿರಲು ಬೇಸಾಯ ನಡಿಸುವ ವ್ಯಕ್ತಿಯ ಆಧೀನವಿಲ್ಲದ ಕಾರಣಗಳುಂಟು. ಬೇಸಾಯದಲ್ಲಿ ಪ್ರತಿಫಲ ದೊರೆಯುವ ಪ್ರಮಾಣ ತೀರ ಕಡಿಮೆ. ಪದವೀಧರರು ಎಷ್ಟು ನಿರ್ಧಾರದಿಂದಲೂ ಉತ್ಸಾಹದಿಂದಲೂ ದುಡಿದಾಗ್ಯೂ ಅವಶ್ಯನುರೂಪವಾಗಿ ಪ್ರತಿಫಲ ದೊರೆಯುವದಿಲ್ಲವೆಂದು ೩೦ ವರ್ಷಗಳ ಅನುಭವದ ಮೇಲಿಂದ ನಾನೀಗ ಹೇಳಬಲ್ಲೆ, ಈ ಕುರಿತು ನಾನು ವಿಚಾರ ಮಾಡಿಟ್ಟಿದ್ದೇನೆ, ಅವನ್ನು ಪರಿಹರಿಸುವ ಉಪಾಯಗಳನ್ನೂ ನಾನು ಯೋಚಿಸಿಟ್ಟಿದ್ದೇನೆ. ಈ ಕುರಿತು ಚರ್ಚೆ ಇಲ್ಲಿ ಅನವಶ್ಯಕ. ಆದಾಗ್ಯೂ ಒಂದು ಮಾತನ್ನು ನಾನು ಹೇಳಬಲ್ಲೆ. ವ್ಯಕ್ತಿಪ್ರಯತ್ನಕ್ಕೆ ಅಧೀನವಿಲ್ಲದ ಸರಕಾರಿ ಧೋರಣವೇ ಇದಕ್ಕೆ ಕಾರಣ. ಬೇಸಾಯ ಶಿಕ್ಷಣ ಪಡೆದವರು ಅಶಿಕ್ಷಿತ ಬೇಸಾಯಗಾರರಿಗಿಂತ ಹೆಚ್ಚಿನ ಪ್ರಾಪ್ತಿ ಮಾಡಿಕೊಳ್ಳಬಲ್ಲರು. ಆದರೆ ಈಗಿನ ಪರಿಸ್ಥಿತಿಯಲ್ಲಿ ಉಚ್ಚ ಶಿಕ್ಷಣದಿಂದ ಸಿಗುವ ಪ್ರಾಪ್ತಿ ತೀರ ಕಡಿಮೆಯಿದ್ದವರಿಂದ ಬೇಸಾಯ-ಪದವೀಧರರು ಬೇಸಾಯವನ್ನು ಪುರಸ್ಕರಿಸುವದಿಲ್ಲ. ಇದೇ ಮುಖ್ಯ ಕಾರಣ. ಆದಾಗ್ಯೂ ಬೇಸಾಯ-ಪದವೀಧರರು ಬೇಸಾಯಕ್ಕೆ ಸಂಬಂಧಪಟ್ಟ ವ್ಯಾಪಾರಗಳಲ್ಲಿ ಸೇರುತ್ತಿದ್ದಾರೆ. ಇದರ ಮೇಲಿಂದ ಈ ಸಂಸ್ಥೆಯಿಂದ ಪ್ರಯೋಜನವುಂಟೆಂದು ಸಿದ್ಧವಾಗುತ್ತದೆ. ಮುಂಬಯಿ ಇಲಾಖೆಯೊಳಗೆ ೧ ಕೋಟಿಗೆ ಮಿಕ್ಕಿ ಬೇಸಾಯಗಾರರಿದ್ದಾರೆ. ವರ್ಷಕ್ಕೆ ೫೦ ಮಂದಿ ಬೇಸಾಯ ಪದವೀಧರರು ತಯಾರಾಗುತ್ತಾರೆ. ಇದೇನು ಹೆಚ್ಚಿನ ಸಂಖ್ಯೆಯಲ್ಲ ಇತ್ಯಾದಿ.

[ಪುಣೆಯೊಳಗಿನ ಬೇಸಾಯ ಕಾಲೇಜಿನಿಂದ ಪ್ರಕಟವಾದ ಸಪ್ಟಂಬರ ತಿಂಗಳ ತ್ರೈಮಾಸಿಕದೊಳಗಿಂದ]

* * *

(೧೦ನೇ ಪಾನಿನ ಮೇಲೆ ಮುಂದರಿಸಿದೆ.)

ಮಕ್ಕಳಿಗೆ ವರಪ್ರದಾನ
ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್ ಕ್ಯೂರ್
ಲಿವ್ಹರ್-ಮತ್ತು ಯಕೃತ್
ವಿಕಾರಗಳ ಮೇಲೆ
ಅಮೋಘವಾದ ಉಪಾಯ!
ಎಲ್ಲಾ ಔಷಧ ವ್ಯಾಪಾರಿಗಳಲ್ಲಿ
ಸಿಗುತ್ತೆ.
— ಅಥವಾ —
ಜಮ್ಮಿ ವೆಂಕಟರಮಣಯ್ಯ,
ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟು
ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ,
ಶಾಖೆ:— ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಪತ್ರಕರ್ತರ ನುಡಿಗನ್ನಡಿ.

೧ ಅಬಕಾರಿ ಕಮಿಶನರರು ನಮ್ಮಲ್ಲಿಯ ಕುಮಟಾ-ಅಂಕೋಲಾ ತಾಲೂಕುಗಳೊಳಗೆ ಮದ್ಯ ನಿರೋಧನ ಕಾರ್ಯದ ಕುರಿತು ಪ್ರಕಟಿಸಿದ ವರದಿಯನ್ನೋದಿ ನಮಗೆ ಸಮಾಧಾನವಾಗಿದೆ. ಈ ಕಾರ್ಯದಲ್ಲಿ ಸರಕಾರಿ ಅಧಿಕಾರಿಗಳೂ ಲೋಕಪ್ರಮುಖರೂ ಸಹಕಾರದಿಂದ ದುಡಿದಿರುತ್ತಾರೆಂದು ತಿಳಿದು ನಾವು ಸಂತೋಷಪಡುತ್ತೇವೆ. ಮದ್ಯ ನಿರೋಧನವು ಸರಿಯಲ್ಲಿಟ್ಟ ಶೇಂದಿ ಶರಾಬು ಅಂಗಡಿಗಳ ಮೂಲಕ ತಕ್ಕಷ್ಟು ಪ್ರಗತಿ ಹೊಂದಿರುವದಿಲ್ಲ. ಒಕ-ಪ್ರದೇಶದಲ್ಲಿ ಕುಡಿಯುವ ಚಟದವರಿದ್ದರೆ, ಆದರೆ ಸೋಕಸ್ಥಾನದ ಅಭಾವದಲ್ಲಿ ಅವರ ಕುಡಿತವು ನಿಂತುಹೋಗಿದೆ. ಇದೇ ಪ್ರಕಾರ ಹಳದೀಪುರದಲ್ಲಿ ಅಂಗಡಿ ಇಲ್ಲದಿದ್ದರೆ, ಅಥವಾ ಅದನ್ನು ದೂರ ಒಯ್ದಿದ್ದರೆ ಶರಾಬಿನ ವಿಕ್ರಿ ೨೦೦ ಗಲನಿಗೆ ಇಳಿಯುತ್ತಿದ್ದಿತೆಂದು ನಾವು ಹೇಳಬಲ್ಲೆವು. ಹಳದೀಪುರ ಅಂಗಡಿಯೇ ಅನಾವಶ್ಯಕವೆಂದು ನಾವು ಹಿಂದಿನಿಂದಲೇ ಪ್ರತಿಪಾದಿಸಿದ್ದೇವೆ. ಅಬಕಾರಿ ಇಲಾಖೆಯವರು ಆಗ ದುರ್ಲಕ್ಷ್ಯ ಮಾಡಿದರು, ತಕ್ಕಷ್ಟು ದೀರ್ಘ ವಿಚಾರ ತಳೆಯಲಿಲ್ಲ. ಮದ್ಯಪಿ ಜನರು ಮದ್ಯ-ನಿರೋಧನಕ್ಕೆ ಅನುಕೂಲರಾಗರು, ನಿರೋಧನವನ್ನು ಪ್ರತಿಭಟಿಸುವರು, ಮದ್ಯ-ನಿರೋಧನ ನ್ಯಾಯ ವ್ಯವಹಾರಿಕವಾದುದಲ್ಲ, ಕುಡುಕರಿಗೆ ಕುಡಿತದ ಸ್ಥಳವೊಂದನ್ನಿಡದಿದ್ದರೆ ಎಲ್ಲೆಲ್ಲಿಯೂ ಕಳ್ಳತನದಿಂದ ಮದ್ಯ ವ್ಯಾಪಾರ ನಡೆದು ಅನರ್ಥವಾಗುವದು, ಎಂಬ ಭಾವನೆಯನ್ನು ಅಬಕಾರಿ ಇಲಾಖೆಯವರು ತಳೆದು ಗಡಿಸೀಮೆಯಲ್ಲಿ ನಿರೋಧನ-ಕ್ಷೇತ್ರಕ್ಕೆ ಹೊಂದಿಕೆಯಾಗಿ ಶರಾಬ ಅಂಗಡಿಯನ್ನಿಟ್ಟಿದ್ದರಿಂದ ನಿರೋಧನ ಕಾರ್ಯ ಸಾರ್ಥಕವಾಗಲು ತೊಂದರೆಯಾಯಿತು. ಆದರೆ ಆಗಿಹೋದ ಘಟನೆಗೆ ಯಾರದೂ ಉಪಾಯವಿಲ್ಲವಷ್ಟೇ! ಅಬಕಾರಿ ಕಮಿಶನರರಿಗೆ ಈ ತಪ್ಪು ಈಗ ಹೊಳೆದಿದ್ದೇ ಒಂದು ತುಷ್ಟ ಸಂಗತಿ. ಈ ಅಂಗಡಿಯನ್ನು ಕಮಿಶನರರು ದೂರ ಒಯ್ಯುವ ಆಲೋಚನೆ ಮಾಡಿದ್ದಾರೆಂದು ತಿಳಿದು ನಾವು ಸಂತೋಷಪಡುತ್ತೇವೆ. ಇನ್ನು ೩-೪ ತಿಂಗಳುಗಳಲ್ಲಿ ಹಳದೀಪುರದ ಅಂಗಡಿ ಸ್ಥಳಾಂತರವಾಗುವ ಇಲ್ಲವೆ ಮುಚ್ಚಲ್ಪಡುವ ಸಂಗತಿ ನಿಜವಾಗಿಯೂ ಅಭಿನಂದನೀಯವಿದೆ.

---

೨ ಆದರೆ, ಇಷ್ಟರಿಂದ ಕಾರ್ಯಭಾಗ ಮುಗಿಯಲಿಲ್ಲ. ಸರಕಾರದಂತೆಯೇ ಜನರಾದರೂ ನಿರೋಧನ ಪ್ರವೃತ್ತಿಯವರಾಗಬೇಕು. ಬಾಂಧವರಿಗೆ ಕುಡಿತದ ಅನರ್ಥಗಳನ್ನು ಬೋಧಿಸಿ ಅವರನ್ನು ಕುಡಿತದ ದುಶ್ಚಟದಿಂದ ಪರಾವೃತ್ತಗೊಳಿಸಲು ಪ್ರಮುಖರು ಪರಮಾವಧಿಯ ಪ್ರಯತ್ನ ಮಾಡಬೇಕು. ಕುಡಿತದಿಂದ ಮನುಷ್ಯನು ಕಷ್ಟ ಸಹಿಸಲು ಪಾತ್ರನಾಗುತ್ತಾನೆಂಬ ಭಾವನೆಯನ್ನು ಬುಡಗೂಡಿ ಕಿತ್ತು ಹಾಕಬೇಕು. ಅದೊಂದು ಭಾವನೆ. ಕುಡಿಯುವ ವ್ಯಸನದಿಂದ ಮನೋಭೂಮಿಯಲ್ಲಿ ಉಂಟಾಗುವ ಕಲ್ಪನೆಯದು! ವ್ಯವಹಾರದಲ್ಲಿ ಈ ಪ್ರಕಾರ ಘಟಿಸುವದು ಅಶಕ್ಯ. ಕುಡುಕರು ದೀರ್ಘ ವಿಚಾರ ಮಾಡಬೇಕು. ಶೇಂದಿ-ಶರಾಬು ಹೇಗೂ, ಎಷ್ಟಕ್ಕೂ ಕುಡಿಯಸಿಗುವದಿಲ್ಲವೆಂದು ಮನೋನಿರ್ಧಾರ ಮಾಡಿ ತಮ್ಮ ಪ್ರಪಂಚವನ್ನು ಅದರ ಅಭಾವದಲ್ಲಿಯೇ ನಡಿಸುವ ಉಪಾಯವನ್ನು ತಮ್ಮಷ್ಟಕ್ಕೆ ಹುಡುಕಿ ತೆಗೆಯಬೇಕು; ಅಲ್ಲದೆ ಶೇಂದಿ-ಶರಾಬನ್ನೇ ಚಿಂತಿಸುತ್ತಿರಬಾರದು. ಶೇಂದಿ-ಶರಾಬು ಬಿಟ್ಟಿದ್ದರಿಂದ ಸಮಾಜದ ಸಾಂಪತ್ತಿಕ ಸ್ಥಿತಿ ಬೆಳೆಯುತ್ತದೆ. ಅರಿವೆ-ಅಂಚಡಿ, ಕಾಳು-ಕಡಿಗಳ ಖರೀದಿ ಹೆಚ್ಚಾಗಿ ಜನರ ಸಂಸಾರ ಸುಖದಿಂದ ಸಾಗುತ್ತದೆ. ಇದು ಕಲ್ಪನೆಯ ಮಾತಲ್ಲ, ಕುಡಿತವನ್ನು ಬಿಟ್ಟ ಜನರು ಈವಾಗ ಅನುಭವಿಸುವ ಸುಖವಿದು! ಹೆಂಡರು-ಮಕ್ಕಳಿಗೆ ತುತ್ತು ಕೂಳು ಈವಾಗ ಸುಖದಿಂದ ಸಿಗುತ್ತದೆ. ಕುಡುಕರು ವಿಚಾರ ಮಾಡಬೇಕು. ಕಾಯಿದೆಯಿಂದ ಶೇಂದಿ-ಶರಾಬು ಅಮದು ಮಾಡಬರುತ್ತದೆಂದು ತಿಳುವದು ಶ್ರೇಯಸ್ಕರವಲ್ಲ. ಕುಡಿಯುವ ಚಟ ಇಂದಲ್ಲ ನಾಳೆ ಬಿಡಲೇ ಬೇಕು. ಅಬಕಾರಿ ಕಮಿಶನರರು ಬರೆದಂತೆ, ಸಂಪೂರ್ಣ ಮದ್ಯಪಾನೋಚ್ಚಾಟಣದ ಪೂರ್ವತಯಾರಿಯನ್ನೇ ಮದ್ಯ ನಿರೋಧನ ಪ್ರಯೋಗದಿಂದ ಸರಕಾರವು ನಡಿಸುತ್ತಿದೆ. ಕಾಲಕ್ರಮಕ್ಕನುಕೂಲವಾಗಿ ಜನರು ವರ್ತಿಸಿದರೆ ಅವರಿಗೆ ಸುಖವುಂಟು. ಲೋಕಪ್ರಮುಖರು ತಿಳಿ ಸಮಾಜದವರ ಮೇಲೆ ಈ ಸಂಗತಿಯನ್ನು ಬಿಂಬಿಸಿ ಅವರನ್ನು ವ್ಯಸನಪರಾಙ್ಮುಖಗೊಳಿಸಬೇಕು. ಅಧಿಕಾರಿಗಳೂ ಲೋಕಪ್ರಮುಖರೂ ಕುಡುಕರೂ ಐಕ್ಯಮತ್ಯದಿಂದ ದುಡಿದರೆ ಸರಕಾರದ ಸತ್ಸಂಕಲ್ಪವು ಶೀಘ್ರವೇ ನೆರವೇರಿ ಲೋಕಸುಖವಾಗುವದೆಂದು ನಾವು ನಮೂದಿಸುವದನವಶ್ಯಕ.

---

೩ ನಮ್ಮ ಪ್ರಾಂತಿಕ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಸಭೆ ಕಳೆದ ಗುರುವಾರ ಸಮಾಪ್ತವಾಯಿತು. ಕೂಲಿಕಾರರ ಕಲಹ-ನಿವಾರಣಾ ಕಾಯಿದೆಯೋ

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ತ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ. ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ —	ಕಾಮತ ಸ್ಟೋರ್ಸ
ಅಂಕೋಲಾ —	ವೇದಮೂರ್ತಿ ಹನುಮಟ್ಟೆ ಕೇಶವ ಭಟ್ಟ.	ಗೋಕರ್ಣ —	ಎಮ್. ವ್ಹಿ. ಬಸ್ತಿಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ.	ಶಿರ್ಶಿ —	ಆರ್. ವ್ಹಿ. ಧಾಕಪ್ಪಾ ಕೆಮಿಸ್ಟ.

ವಿಳಾಸ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರೆಂಚ್ ಆಫೀಸು ಕುಮಟಾ. ಉ. ಕ.

OR

BHUVANENDRA PRODUCTS LTD. Head Office. KATAPADI, S. K.

ಪ್ರಾಮುಖ್ಯವಾಗಿ ಚರ್ಚಿಸಲ್ಪಟ್ಟಿತು. ಈ ಕಾಯಿದೆಯಿಂದ ಕೂಲಿಕಾರರ ಸಂಘಗಳಿಗೆ ಸರಕಾರಿ ಮನ್ನಣೆ ದೊರಕಿ ಅವರಿಗೆ ಸುಖವಾಗುವದೆಂದು ನಾವು ನಂಬುತ್ತೇವೆ. ಆಯುರ್ವೇದ ಮತ್ತು ಯುನಾನಿ ಪದ್ಧತಿಯಿಂದ ಉಪಚಾರ ನಡಿಸುವ ವೈದ್ಯರಿಗೆ ಸರಕಾರಿ ಮನ್ನಣೆ ಕೊಡುವ ಕಾಯಿದೆಯಾಗಿದೆ. ಇದರಂತೆ ಸರಕಾರಮಾನ್ಯ ವಿದ್ಯಾಸಿಲಯಗಳಲ್ಲಿ ಶಿಕ್ಷಣ ಪಡೆಯದ ವೈದ್ಯ-ಹಕೀಮರಿಗೆ ಕಾಯಿದೆಯಂತೆ ಶಾಸನವಾಗಬೇಕೆಂದು ವಿಧಿಸೋಣಾಗಿದೆ. ಈ ಕಾಯಿದೆಯಿಂದ ಪರಂಪರಾಗತ ಉಪಚಾರಕರಿಗೆ ಕಷ್ಟವಾಗುವದು. ನಮ್ಮ ಜಿಲ್ಲೆಯೊಳಗೆ ವಿಶಿಷ್ಟ ವ್ಯಾಧಿಗಳ ಮೇಲೆ ವಿಶಿಷ್ಟ ಪದ್ಧತಿಯಿಂದ ಉಪಚಾರ ಮಾಡುವ ಪರಂಪರಾಗತ ಜನರನೇಕರಿದ್ದಾರೆ. ಇವರು ಯಾವದೇ ಶಾಲೆಗಳಲ್ಲಿ ಕಲಿತುಬಂದವರಲ್ಲ. ಯಾವದೇ ಪ್ರತಿಫಲವನ್ನು ಅಪೇಕ್ಷಿಸುವವರೂ ಅಲ್ಲ. ಬೇರು, ಸೊಪ್ಪು, ಚಕ್ಕೆ ಮೊದಲಾದ ವನಸ್ಪತಿಗಳಿಂದಲೇ ಉಪಚಾರ ನಡಿಸಿದೊಡ್ಡದೊಡ್ಡ ತಜ್ಞರಿಗೆ ಅಸಾಧ್ಯ-ಅಶಕ್ಯವಿರುವ ರೋಗಗಳನ್ನು ಗುಣಪಡಿಸಿದ್ದಾರೆ. ಎಲುಬು ಮುರಿದದ್ದಕ್ಕೆ ತೋಡೂರ ಬರ್ಗಿ ಗೌಡರ ಔಷಧ, ವಾತಕ್ಕೆ ಬೆಳಂಬಾರ ಗೌಡನ ಔಷಧ-ತೈಲ, ವ್ರಣಕ್ಕೆ ಅಂಕೋಲೆಯ ಗೌಡನ ಔಷಧ, ಹಾವಿನ ಮೇಲೆ ದುಗ್ಗೂರ ಗೌಡನ ಔಷಧ, ಇವೇ ಮೊದಲಾದ ಮದ್ದುಗಳೂ, ಮಂತ್ರೋಪಚಾರಗಳೂ ನಮ್ಮಲ್ಲಿ ರೂಢಿಯಲ್ಲಿವೆ. ಇವುಗಳಿಂದ ಅನೇಕರಿಗೆ ಪ್ರಯೋಜನ ದೊರೆತದ್ದೂ ಉಂಟು. ಇಂಥವರು ಸರಕಾರಿ ಕೊಲೇಜುಗಳಲ್ಲಿ ಶಿಕ್ಷಣ ಪಡೆಯಹೋಗುವವರಲ್ಲ. ತಮ್ಮ ಸಂಸಾರವನ್ನು ಸಾಗಿಸಿಕೊಂಡು ಪರಂಪರೆಯಿಂದು, ಪರೋಪಕಾರವೆಂದು ಧರ್ಮಬುದ್ಧಿಯಿಂದ ಅವರು ಈ ಸೇವೆಗೈಯ್ಯುತ್ತಾರೆ. ಇಂಥವರನ್ನು ಕಾಯಿದೆಯ ಕಕ್ಷೆಯಲ್ಲಿ ಸೇರಿಸಿ ಶಾಸನ ಮಾಡುವದು ಅಪ್ರಶಸ್ತವಾದುದು, ಅಳವಾಗಿ ಪರಾಂಬರಿಸಿದರೆ ಸಮಾಜಘಾತಕವಾದುದು. ಈ ಜನರಿಗೆ ಉಪಚಾರ ನಡಿಸಲು ಯಾವದೇ ಪ್ರತಿಬಂಧವಿರಬಾರದೆಂದು ನಮ್ಮ ಅಭಿಪ್ರಾಯ. ಅರ್ಧ-ಕಸಬಿನ ಹಕೀಮ-ವೈದ್ಯರು ಸಮಾಜಕ್ಕೆ ಅಪಕಾರ ಮಾಡುವದನ್ನು ನಾವು ಬಲ್ಲೆವು. ಆದರೆ ಅಪಕಾರಿಗಳನ್ನು ನಿರ್ಬಂಧಿಸುವಾಗ ಉಪಕಾರಿಗಳಿಗೂ ಅವರಂತೆಯೇ ಶಾಸನ ಮಾಡುವದು ರಾಜ್ಯಕರ್ತರಿಗೆ ವಿಹಿತವಾಗಲಾರದು. ವೈದ್ಯ ಇಲಾಖೆಯ ಪ್ರಧಾನರಾದ ನಾ|| ಗಿಲ್ಡರರವರು ಈ ಪರಿಸ್ಥಿತಿಯನ್ನು ಪರಾಂಬರಿಸಿ ಹೊಸ ಕಾಯಿದೆಯಲ್ಲಿ ತಕ್ಕ ತಿದ್ದುಪಾಟುಗಳನ್ನು ಕಲ್ಪಿಸಬೇಕಾಗಿ ನಮ್ಮ ಸೂಚನೆಯಿದೆ. ಕಾಯಿದೆಯನ್ನು ರೂಢಗೊಳಿಸಲಿಕ್ಕೆ ನಿಯಮಾವಳಿ ತಯಾರಿಸುವಾಗ ಈ ದೃಷ್ಟಿಯನ್ನು ವೈದ್ಯ-ಇಲಾಖೆಯವರು ತಳೆದು ವರ್ತಿಸುವರೆಂದು ನಾವು ನೆರೆ ನಂಬಿದ್ದೇವೆ.

---

೪ ಸತ್ಯಾಗ್ರಹ ಕಾಲದಲ್ಲಿ ಪತ್ರಿಕೆಗಳಿಂದ ಕೊಂಡ ಜಾಮೀನು-ಹಣವನ್ನು ಹಿಂತಿರುಗಿ ಕೊಡಬೇಕೆಂದು ಎಸೆಂಬ್ಲಿಯ ಸಭಾಸದರಾದ ರಾ|| ಕರಂದೀಕರರವರು ಎಸೆಂಬ್ಲಿಯಲ್ಲಿ ಸೂಚಿಸಿದ ದರಾವು ಸರಕಾರದ ವಿರೋಧದಿಂದ ಬಿದ್ದುಹೋಯಿತೆಂದು ತಿಳಿಸಲು ನಮಗೆ ವ್ಯಸನವಾಗುತ್ತದೆ. ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್', ಪುಣೆಯ 'ಲೋಕಸಂಗ್ರಹ' ಮೊದಲಾದ ಪತ್ರಿಕೆಗಳು ಸರಕಾರದ ದಬ್ಬಾಳಿಕೆಯನ್ನು ವಿರೋಧಿಸಿ ಸಾಹಸದಿಂದ ನಡಿಸಿದ ಲೋಕಸೇವೆ ಚಿರಸ್ಮರಣೀಯವಾದುದು. ಲೋಕಪಕ್ಷಪಾತಿಗಳಾಗಿ, ಸ್ವಾತಂತ್ರ್ಯದ ಅಭಿಮಾನಿಗಳಾಗಿ ಪತ್ರಿಕೆಗಳು ನಡಿಸಿದ ಸಾಹಸದಿಂದಲೇ ಲೋಕಜಾಗೃತಿ ಮಿಗಿಲಾಗಕಾರಣವಾಯಿತೆಂದು ಯಾರೂ ಒಪ್ಪಲೇಬೇಕು. ದಬ್ಬಾಳಿಕೆಯ ಮನ್ವಂತರದಲ್ಲಿ ನಷ್ಟಪಟ್ಟವರಿಗಲ್ಲ ನಷ್ಟ ತುಂಬಿಕೊಡಲು ಸರಕಾರಕ್ಕೆ ಅಸಾಧ್ಯವೆಂಬ ಮಾತನ್ನು ನಾವು ಒಪ್ಪುತ್ತೇವೆ. ಆದರೆ, ಸತ್ಯಾಗ್ರಹ ಕಾಲದಲ್ಲಿ ಭೂಮಿ ಕಳಕೊಂಡ ತ್ಯಾಗಿಗಳೂ ಜಾಮೀನು ಕೊಟ್ಟು ಸೋತ ಪತ್ರಿಕೆಗಳೂ ಒಂದೇ ಪಂಕ್ತಿಯೊಳಗಿನವೆಂದು ನಮ್ಮ ಭಾವನೆ. ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯು ೪೬ ಸಾವಿರ ರೂಪಾಯಿಗಳನ್ನು ಸರಕಾರವು ನುಂಗಿದೆ. ಆ ಪತ್ರಿಕೆ ಶ್ರೀಮಂತ ಪತ್ರಿಕೆಯಲ್ಲ. ಇಂಥವರ ತ್ಯಾಗವನ್ನು ಸರಕಾರವು ಮನ್ನಿಸಲೇಬೇಕೆಂದು ನಮ್ಮ ಆಗ್ರಹದ ವಿನಂತಿ. ಸಂಪೂರ್ಣ ಹಣ ಕೊಡುವದು ಸರಕಾರಕ್ಕೆ ಪರಿಸ್ಥಿತಿಯಿಲ್ಲದಿದ್ದರೆ ಕೆಲ ಅಂಶವನ್ನಾದರೂ ಕೊಡಬಹುದೆಂದು ನಮ್ಮ ಅಂಬೋಣ. ಪತ್ರಿಕೆಗಳ ತ್ಯಾಗವನ್ನು ಸರಕಾರವು ಮನ್ನಿಸಿದಂತಾಯಿತು.

—ಮುಂಬಯಿ ಎಸೆಂಬ್ಲಿಯ ೭ನೇ ತಾರೀಖಿನ ಸಭೆಯಲ್ಲಿ ರಾ|| ಝಾಬವಾಲಾರವರ ಪ್ರಶ್ನೆಗೆ ಉತ್ತರ ಕೊಡುವಾಗ ಸ್ಥಾನಿಕ ಸ್ವರಾಜ್ಯ ಇಲಾಖೆಯ ಪ್ರಧಾನರಾದ ನಾ|| ಪಾಟೀಲರವರು ನುಡಿದದ್ದೇನಂದರೆ— "ಸರಕಾರಿ ಇಲಾಖೆಗಳಲ್ಲಿ ಸಾಧ್ಯವಿದ್ದಷ್ಟರ ಮಟ್ಟಿಗೆ ಗಿರಣಿ ಮತ್ತು ಇತರ ಬಟ್ಟೆಗಳ ಬದಲಿಗೆ ಕೈನೂಲಿನ, ಕೈನೆಯ್ಗೆಯ ಖಾದಿಯನ್ನೇ ಪ್ರಚುರಗೊಳಿಸುವದು ಸರಕಾರದ ಸಂಕಲ್ಪವಾಗಿದೆ. ಅದಕ್ಕಾಗಿ ಮುಂಬಯಿ ಸರಕಾರವು ಅಖಿಲ ಭಾರತೀಯ ನೂಲುಗಾರ ಸಂಘಕ್ಕೆ ಕಳೆದ ಸಾಲಿನಲ್ಲಿ ರೂ ೫೦,೦೦೦ರ ದ್ರವ್ಯಸಹಾಯವಿತ್ತಿದೆ. ಈ ಸಾಲಿನಲ್ಲಿ ರೂ ೩೨,೦೦೦ ಕೊಡಮಾಡಿದೆ. ಇವಲ್ಲದೆ ನಿಬ್ಬಡ್ಡಿಯಿಂದ ಆ ಸಂಘಕ್ಕೆ ರೂ ೩೪ ಸಾವಿರ ಕೊಟ್ಟಿದೆ. ಇದರಿಂದ ನಿರುದ್ಯೋಗಿಗಳಿಗೂ ಬೇಸಾಯಗಾರರಿಗೂ ಉದ್ಯೋಗ ದೊರೆಯುವದೆಂದು ಸರಕಾರದ ಅಭಿಪ್ರಾಯವಾಗಿದೆ. ಸರಕಾರವು ಖಾದಿ ತಯಾರಿಸುವ ಕಾರಖಾನೆ ಇಟ್ಟಿಲ್ಲ

ವಿವಿಧ ಸಂಗ್ರಹ.

(೧೧ನೇ ಪಾನಿನಿಂದ ಮುಂದರಿಸಿದ್ದು)

ಪಂಚಲಿಂಗ ದರ್ಶನಯೋಗದ ಸಮಯ ಈ ತೀರ್ಥದಲ್ಲಿ ಪವಿತ್ರ ಗಂಗೋದಕ ಹರಿದು ಬರುತ್ತದೆಂದು ಭಾವನೆ. ಮೊಟ್ಟಮೊದಲು ಇಲ್ಲಿ ಸ್ನಾನ ಮಾಡಿ ಒದ್ದೆ ಒಟ್ಟೆಯಿಂದಲೇ ಶ್ರೀ ಗೋಕರ್ಣೇಶ್ವರನ ದರ್ಶನ ತೆಗೆದುಕೊಳ್ಳಬೇಕು. ಹಾಗೆಯೇ ಶ್ರೀ ವೇದೇಶ್ವರ ದೇವಾಲಯಕ್ಕೆ ಹೋಗಿ ತಾನು ಶ್ರೀ ಗೋಕರ್ಣತೀರ್ಥದಲ್ಲಿ ಸ್ನಾನ ಮಾಡಿದ್ದೇನಾಗಿಯೂ ಶ್ರೀ ಗೋಕರ್ಣೇಶ್ವರನ ದರ್ಶನ ಕೊಂಡಿದ್ದೇನಾಗಿಯೂ ವರದಿ ಕೊಡಬೇಕು. ಆ ಮೇಲೆ ಶ್ರೀ ವೇದೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕಾವೇರಿನದಿಯಲ್ಲಿ ಸ್ನಾನ ಮಾಡಿ ಪುನಃ ವೇದೇಶ್ವರನ ದರ್ಶನ ಪಡಕೊಂಡು ಹಾಗೆಯೇ ಪಾತಾಳೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕಾವೇರಿಯಲ್ಲಿ ಸ್ನಾನ ಮಾಡಿ ಪಾತಾಳೇಶ್ವರನ ದರ್ಶನ ಪಡಕೊಂಡು ಪುನಃ ವೇದೇಶ್ವರ ದೇವಾಲಯಕ್ಕೆ ಹೋಗಿ ವರದಿ ಕೊಟ್ಟು ಹುಗಿದ ಇನ್ನೆರಡು ದೇವಾಲಯಗಳ ಮುಂಭಾಗದಲ್ಲಿ ಸ್ನಾನ ಮಾಡಿ ದರ್ಶನ ಕೊಂಡು ಯಾತ್ರೆ ಮುಗಿಸಬೇಕು. ಈ ೨ ಹುಗಿದ ದೇವಾಲಯಗಳು ವಿಜಯಪುರ ಮತ್ತು ಮುದುಕುತೊರೆ ಈ ಗ್ರಾಮಗಳಲ್ಲಿವೆ. ಈ ಗ್ರಾಮಗಳು ೩-೩ ಮೈಲು ದೂರವಿವೆ. ಒಂದೇ ದಿನದ ಯೋಗವಿದು! ಈ ಯೋಗ ಕಾಲದಲ್ಲಿ ಭಾವಿಕ ಹಿಂಡುಗಳ ದಟ್ಟ ಸಂದಣಿ ಸೇರುತ್ತದೆ. ೧೦೦ ವರ್ಷ ಬಳಿಕ ಮೂರಾವರ್ತಿ ಇಂಥ ಯೋಗ ಕೂಡಿ ಬರುವದರಿಂದ ಭಾವಿಕರು ಯೋಗಕಾಲದಲ್ಲಿ ತಂಡಗಟ್ಟಿ ಸೇರುವದು ಸಹಜ. ಆದರೆ ತಲಕಾಡ ಗ್ರಾಮದ ಈಗಿನ ಅವಸ್ಥೆ ನೋಡಿದರೆ, ಪುರಾತನ ಕಾಲದ ವೈಭವ ನೆನೆದರೆ ನಿಜವಾಗಿಯೂ ಮತಿ ಕುಂಠಿತವಾಗುತ್ತದೆ. ಗಂಗ, ಚೋಳ, ಹೊಯ್ಸಳ, ವಿಜಯನಗರ ರಾಜ್ಯದೊಳಗಿನ ತಲಕಾಡಗ್ರಾಮದ ಮೇಲೆ ಉಸುಬಿನ ದಾಳಿ ಘಟಿಸದೆ, ಮೈಸೂರು ರಾಜ್ಯವಾದ ಮೇಲೆ ಉಸುಬು ಸೃಷ್ಟಿಕ್ರಮದಿಂದ ತಲಕಾಡ ಗ್ರಾಮವನ್ನು ವ್ಯಾಪಿಸಿ ಇಡೀ ಪಟ್ಟಣವನ್ನು ಹುಗಿದು ಮರುಭೂಮಿಯನ್ನಾಗಿ ಮಾರ್ಪಡಿಸಿದ್ದೂ ಹಾಳುಗೆಡಹಿದ್ದೂ ಕಾಲಮಹಿಮೆಯಲ್ಲವೇ?

ಬನ್ನಿರಿ! —|| ಶ್ರೀ ಚಂದ್ರಮೌಳೇಶ್ವರ ಪ್ರಸನ್ನ ||— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಪವಿತ್ರ ಬ್ರಾಹ್ಮಣರೇ ಮೊದಲಾಗಿ
ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ ಧಾರವಾಡ, ಬೆಳಗಾಂವ
ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ
ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ.— ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರ ಕಾರ್ತಿಕ ಬ ೧೪, ಸೋಮವಾರ.

ಬೇಸಾಯ ವಿದ್ಯಾರ್ಥಿಗಳ ನಡಾವಳಿ.

ಪುಣೆಯೊಳಗಿನ ಬೇಸಾಯ ಕೊಲೇಜಿನಲ್ಲಿ ಬೇಸಾಯ ಇಲಾಖೆಯ ಮಂತ್ರಿಗಳಾದ ನಾ|| ಮುರಾರಜಿ ದೇಸಾಯಿಯವರು ಮಾಡಿದ ಭಾಷಣವನ್ನು ಸಕಲರೂ, ಪ್ರಾಮುಖ್ಯವಾಗಿ ವಿದ್ಯಾರ್ಥಿಗಳೂ, ವಿಶೇಷವಾಗಿ ಬೇಸಾಯ-ವಿದ್ಯಾರ್ಥಿಗಳೂ ಪರಿಲೋಕಿಸಬೇಕಾಗಿ ನಮ್ಮ ವಿನಂತಿ ಇರುವದರಿಂದಲೇ ನಾವದನ್ನು ಕೊಂಚ ವಿಸ್ತಾರವಾಗಿ ಬೇರೊಂದೆಡೆ ಪ್ರಕಟಿಸಿದ್ದೇವೆ. ನಾ|| ದೇಸಾಯಿಯವರು ಬೇಸಾಯ ಕೊಲೇಜಿನ ವಿದ್ಯಾರ್ಥಿಗಳ ನಿಮಿತ್ತ ವಿದ್ಯಮಾನ ಸಕಲರಿಗೂ ತಮ್ಮ ವಿಚಾರಗಳನ್ನು ನಿವೇದಿಸಿದ್ದಾರೆಂದು ನಾವು ಗ್ರಹಿಸುತ್ತೇವೆ. ವಿದ್ಯಾರ್ಥಿಗಳು ಭಾವೀರಾಷ್ಟ್ರದ ಆಧಾರಸ್ತಂಭರಾಗಿರುವದರಿಂದ ಅವರ ಜೀವನಕ್ರಮವೇ ಭಾವೀ ರಾಷ್ಟ್ರದ ಜೀವನಕ್ರಮವಾದ್ದರಿಂದ ಜೀವನಕ್ರಮದಲ್ಲಿ ತಿದ್ದುಪಾಟಗಳನ್ನು ನಾವು ಪ್ರಾರಂಭದಲ್ಲಿಯೇ ಕೈಕೊಳ್ಳುವದು ಹಿತ, ಕಾಲೋಚಿತ. "ಗಿಡವಾಗಿ ಒಗ್ಗುತ್ತದೆ ಮರವಾಗಿ ಬಗ್ಗುವದಿಲ್ಲ" ಎಂಬ ನಾಣ್ಣುಡಿಯೇ ಉಂಟು. ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲಿ ತಾವು ಯಾರು, ತಮ್ಮ ಹಿತವೇನು, ತಮ್ಮ ಧ್ಯೇಯವೇನು, ತಮ್ಮ ನಡವಳಿ ಹೇಗಿರಬೇಕು? ಎಂಬ ವಿಚಾರವನ್ನು ಸಂಪೂರ್ಣವಾಗಿ ಮರೆತುಬಿಡುತ್ತಾರೆ. ತಮ್ಮ ಸ್ಥಿತಿಗೂ ಧ್ಯೇಯಕ್ಕೂ ಉಚಿತವಾಗಿ ತಾವು ನಡಕೊಳ್ಳುತ್ತೇವೇನೆಂದು ವಿಚಾರಿಸುವದೇ ಇಲ್ಲ. ಅಜ್ಞಾನಿ ಕುರಿಮರಿಗಳಂತೆ ಒಬ್ಬರ ಹಿಂದೆ ಮತ್ತೊಬ್ಬರಾಗಿ ಕೊಲೇಜಿನ ಪರಂಪರೆಯೆಂದು ಕೆಲವರು, ಶಿಸ್ತುಮಹಿಮೆಯೆಂದು ಕೆಲವರು ಸ್ವೇಚ್ಛಾಚಾರಿಗಳಾಗಿ ನಡೆಯುತ್ತಾರೆ. ವಿಲಾಸವೇ ಇವರ ಜೀವನಕ್ರಮದ ಮುಖ್ಯ ಧ್ಯೇಯ. ಭವಿಷ್ಯದ ವಿಚಾರವನ್ನೇ ಇವರು ಮಾಡರು. ನಿತ್ಯಾನಂದಿಗಳಾಗಿ ಮೆರೆಯುತ್ತಾರೆ. ಇಲ್ಲದಿದ್ದರೆ ಟೆನಿಸ್ ಪೋಷಾಕುಗಳನ್ನು ಹಾಕಿಕೊಂಡು ಬೇಸಾಯ ಕೊಲೇಜಿನ ವಿದ್ಯಾರ್ಥಿಗಳು ಹೊಲ ಹೂಡಹೋಗುವರೇ? ತಾವು ಒಕ್ಕಲಿಗರಾಗತಕ್ಕವರು, ಒಕ್ಕಲತನದ ಹೋರಿಯಿಂದ ಸಂಸಾರ ನಡಿಸಬೇಕಾದವರು, ಒಕ್ಕಲಿಗರೊಡನೆ ಕಲೆತು ಬೆರೆತು ಒಕ್ಕಲತನವನ್ನು ಒಕ್ಕಲಿಗ ಬಾಂಧವರಿಗೆ ಕಲಿಸಿ, ಸ್ವತಃ ನಡಿಸಿ ಒಕ್ಕಲತನದ ಹೋರಿಯನ್ನು ಉದ್ಧಾರಗೈಯ್ಯುವ ಪರೋಪಕಾರಿ ಧ್ಯೇಯದ ಧನಿಗಳಾಗಿ ಕಲಿಯುವವರು, ಎಂಬ ಭಾವನೆ ಅಲ್ಪಾಂಶದಿಂದಾದರೂ ಈ ವಿದ್ಯಾರ್ಥಿಗಳಿಗೆ ತೋರಿದ್ದರೆ, ಟೆನಿಸ್-ಬೊಟ್ಟಿಗೆಗಳನ್ನು ಧರಿಸಿ ಅವರು ಹೂಡಹೋಗುತ್ತಿರಲಿಲ್ಲ. ದೊಡ್ಡ ದೊಡ್ಡ ಸರಕಾರಿ ನೌಕರಿ ಸಂಪಾದಿಸಲೋಸುಗ ತಾವು ಇಲ್ಲಿ ಕಲಿಯುತ್ತಿದ್ದೇವೆ, ಆ ಜೀವನಸುಖ ವಿಲಾಸದ್ದು, ದಿನಕ್ಕೆ ಎಷ್ಟೋ ನೊಟ್ಟ-ಜೋಡಿಗಳು ಹರಿದರೂ ಪರಿವೆಯಿಲ್ಲ, ಎಂಬ ಭಾವನೆ ಈ ವಿದ್ಯಾರ್ಥಿಗಳಲ್ಲಿ ಒಡಮೂಡಿರುವದೇ ಈ ವಿಲಾಸಕಾರಣ. ವರ್ಗವೇರಿದ ಹಾಗೆ ಹೊಲಗೆಲಸದ ಅವಧಿ ಕಡಿಮೆಯಾಗುವದರಿಂದ ಅವರು ಮನಸ್ಸಿನಲ್ಲಿ ಮಾಡಿಕೊಂಡ ಸಿದ್ಧಾಂತ ದಿಟವಾಗುತ್ತದೆಂದು ನಾವು ಧಾರಾಳ ಸೂಚಿಸಿ ಈ ಪದ್ಧತಿ ದೋಷಪೂರ್ಣವಾದುದೆಂದು ಧ್ವನಿಸಿದರು. ಒಕ್ಕಲತನದ ಹೋರಿ ಲಾಭದಾಯಕವಾಗಬೇಕಾದರೆ, ಒಕ್ಕಲತನದ ನಡಾವಳಿಯನ್ನು ವಿದ್ಯಾರ್ಥಿಗಳು ವಿದ್ಯಾರ್ಥಿದೆಸೆಯಲ್ಲಿಯೇ ಕಲಿಯಬೇಕು. ಬೇಸಾಯ ಇಲಾಖೆಯ ಅಧಿಕಾರಿಗಳು ಮೊಟ್ಟಮೊದಲು ತಮ್ಮ ನಡಾವಳಿಯನ್ನು ಸರಿಪಡಿಸಬೇಕು. ಸಾಹೇಬರಿಗೆ ಹೋಲುವ ಚಡ್ಡಿ, ಕೋಟು, ಹೇಟು-ಬೂಟುಗಳನ್ನು ಧರಿಸಿ, ಒಕ್ಕಲಿಗ ಸಮಾಜದೊಡನೆ ಬಂಧುಭಾವ ಬೆಳೆಸಲೆಳಸುವದು ಅಸಾಧ್ಯ ಮಾತು. ಆದರಿಂದಲೇ ಬೇಸಾಯ ಇಲಾಖೆಯವರಿಗೂ ಒಕ್ಕಲಿಗರಿಗೂ ಈ ತನಕ ಆಪ್ತತ್ವ ಬೆಳೆಯದಿರಕಾರಣ. ಉಡಿಗೆ ತೊಡಿಗೆ ಹೇಗಿದ್ದರೇನು? ನಡಾವಳಿ ಬೇಕಾದುದಿರಲೊಲ್ಲದೇಕೆ? ಎಂಬುದಾಗಿ ವಿತಾಲ-ವಿಚಾರಿಗಳು ವಾದಿಸಬಹುದು. ಆದರೆ ಬಹಿರಂಗವು ಸ್ವತಂತ್ರ ಚೇಷ್ಟೆಯಲ್ಲ, ಅಂತರಂಗದೊಳಗಿನ ಕಲ್ಪನೆ-ಭಾವನೆಗಳು ಬಹಿರಂಗದೊಳಗೆ ಸ್ಫುಟವಾಗುತ್ತವೆ. ಅಂತರಂಗ ಬಹಿರಂಗಗಳು ಅನ್ಯೋನ್ಯ ಸಂಬಂಧಪಟ್ಟವುಗಳು. ಅಂತರಂಗದ ಪ್ರತಿಬಿಂಬ ಬಹಿರಂಗದಲ್ಲಿ, ಬಹಿರಂಗದ ಪ್ರತಿಕ್ರಿಯೆ ಅಂತರಂಗದ ಮೇಲೆ, ಮನೋವ್ಯಾಪಾರಗಳ ಲೀಲೆ! ಬೇಸಾಯ ವಿದ್ಯಾರ್ಥಿಗಳು ಚಿಕ್ಕದೊಂದು ಕೋಣೆಯನ್ನು ಗುಡಿಸಲು ತಿಂಗಳಿಗೆ ೪ ರೂಪಾಯಿ ಕೊಡುವಷ್ಟು ದೊಡ್ಡಸ್ತಿಕೆಯವರೆಂದು ನಾವು ಎಣಿಸುವದಿಲ್ಲ, ಯಾರೂ ಎಣಿಸಲಾರರು. ಆ ಪ್ರಕಾರ ಭಾವೀ ಪ್ರಪಂಚದಲ್ಲಿ ಅವರಿಂದ ನಡೆಯಲಿಕ್ಕೂ ಸಾಧ್ಯವಿಲ್ಲ. ಚಿಕ್ಕ ಕೋಣೆಯನ್ನು ಗುಡಿಸುವಷ್ಟು ಸಮಯ ವಿದ್ಯಾರ್ಥಿಗಳಿಗಿಲ್ಲವಾಗಿಯೂ ನಾವು ಎಣಿಸುವದಿಲ್ಲ. ಕಸ ಗುಡಿಸುವದೊಂದು ತುಚ್ಛವಾದ ಕೆಲಸ, ಆದರಿಂದ ತಮ್ಮ ದೊಡ್ಡಸ್ತಿಕೆಗೆ ಕುಂದು ಬರುತ್ತದೆ, ಎಂಬ ಭಾವನೆಯಿಂದಲೇ ವಿದ್ಯಾರ್ಥಿಗಳು ಈ ಪ್ರಕಾರ ನಡೆಯುತ್ತಾರೆಂದು ನಾ|| ದೇಸಾಯಿಯವರು ಸೂಚಿಸುತ್ತಾರೆ, ನಾವೂ ಹಾಗೆಯೇ ಗ್ರಹಿಸುತ್ತೇವೆ. ವಿದ್ಯಾರ್ಥಿಗಳು ದರೂ ಕೊಂಚ ಆತ್ಮನಿರೀಕ್ಷಣೆ ಮಾಡಿದರೆ ಅವರಾದರೂ ಇದನ್ನು ಒಪ್ಪಲೇಬೇಕು. ಈ ಉಲ್ಲೇಖ ಬೇಸಾಯ-ವಿದ್ಯಾರ್ಥಿಗಳಿಗಷ್ಟೇ ಅನ್ವಯಿಸತಕ್ಕದ್ದು ತಿಳಿಯಲಾಗದು, ಯಾವತ್ತೂ ಕೊಲೇಜು ಏಕೆ, ಹೈಸ್ಕೂಲುಗಳ- ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ ಈ ಸಂಗತಿ ಅನ್ವಯಿಸುತ್ತದೆ. ಇಂಗ್ಲಿಷ ಶಾಲೆಗಳಲ್ಲಿ ಮೂಲಾಕ್ಷರ ಕಲಿಯುವ ಪೂರ್ವದಲ್ಲಿಯೇ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹೊಸ ಜೀವನಕ್ರಮವನ್ನು ಪ್ರಾರಂಭಿಸುತ್ತಾರೆಂದು ಎಲ್ಲರೂ ಕಣ್ಣಾರೆ ಕಾಣುವ ಮಾತು. ನಾ|| ದೇಸಾಯಿಯವರು ನುಡಿದಂತೆ, ವರ್ಗಗಳ ಒಳಗೂ ಹೊರಗೂ ಇಂಗ್ಲಿಷ ಭಾಷೆಯಿಂದ- ಆ ಭಾಷೆ ಬರಲಿ ಬರದಿರಲಿ - ಮಾತಾಡುವದೊಂದು ಸಂಪ್ರದಾಯ ಬಿದ್ದಿದೆ; ಸ್ವಭಾಷೆ, ಸ್ವದೇಶ, ಸ್ವತ್ವಗಳ ವಿಸ್ಮೃತಿಯೇ ಸುಧಾರಣೆಯೆಂಬ ಕಲ್ಪನೆ ರೂಢವಾಗಿದೆ! ನಾ|| ಮುರಾರಜಿ ದೇಸಾಯಿಯವರು ಈ ಲಕ್ಷಣಗಳನ್ನು ಸ್ಫುಟಗೊಳಿಸಿ ವಿದ್ಯಾರ್ಥಿಗಳಿಗೆ ಅವರ ಪ್ರತಿಬಿಂಬವನ್ನು ತೋರಿಸಿ ಇಷ್ಟಾನಿಷ್ಟತೆಯ ವಿಚಾರ ಮಾಡಬೋಧಿಸಿದ್ದಾರೆ. ನಾವಾದರೂ ಇದನ್ನೇ ಆಗ್ರಹದಿಂದ ಹೇಳಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ನಡಾವಳಿಯನ್ನು ತಮ್ಮ ದೇಶ-ಕಾಲ-ಗ್ರಾಮ-ಮನೆತನಗಳ ಪರಿಸ್ಥಿತಿಗೆ ಉಚಿತವಾಗಿಯೂ ಭಾವೀ ಜೀವನಕ್ರಮಕ್ಕೆ ಸರಿಹೋಗುವ ವಿಚಾರದಿಂದಲೂ ನಡಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇವೆ. ಸ್ವೈರವರ್ತನದಿಂದ ಯಾರಿಗೂ ಈ ತನಕ ಹಿತವಾದ ಉದಾಹರಣೆ ಇಲ್ಲ.

ಬೇಸಾಯ ಪ್ರಯೋಗಗಳ ಕುರಿತು ನಾ|| ದೇಸಾಯಿಯವರು ಮುತ್ತಿನಂತಹ ಮಾತುಗಳನ್ನಾಡಿದರು. ಒಕ್ಕಲತನವೆಂದರೆ ಪ್ರಯೋಗ ಶಾಲೆಯಲ್ಲ, ಸಂಶೋಧನ ಮಂದಿರವಲ್ಲ, ವ್ಯವಹಾರವದು, ಉದ್ದಿಮೆಯದು, ಜೀವನೋಪಾಯವದು! ಇದನ್ನು ನೆನಿಸಿ ಪ್ರಯೋಗಗಳು ನಡೆಯಬೇಕು. ಪ್ರಯೋಗ ಮಾಡುವವರ ಬುದ್ಧಿವಿಕಾಸಕ್ಕೆ, ಜ್ಞಾನಪೂರ್ಣತೆಗೆ ಪ್ರಯೋಗಗಳನ್ನು ನಡಿಸುವ ಐಪತ್ತು ಈವಾಗ ನಮ್ಮ ದೇಶಕ್ಕಿಲ್ಲ. ಪ್ರಯೋಗ ಹೊಲದಲ್ಲಿ ನಡೆಯುವ ಪ್ರಯೋಗಗಳು ಒಕ್ಕಲಿಗರಿಗೆ ವ್ಯವಹಾರದಲ್ಲಿ ಪ್ರಯೋಜನಕ್ಕೆ ಬೀಳಬೇಕು, ಅಂದರೆ ಮಾತ್ರ ಕೈಕೊಂಡ ಪ್ರಯೋಗಗಳು ಸಾರ್ಥಕವಾಗಬಲ್ಲವು, ಪ್ರಯೋಗಗಳಿಗಾಗಿ ನಡೆಯುವ ವೆಚ್ಚ, ಪರಿಶ್ರಮ ಸದ್ವ್ಯಯವಾಗಬಲ್ಲದು. ಈ ಮಾತನ್ನು ನಾ|| ದೇಸಾಯಿಯವರು ಒತ್ತಿಹೇಳಿದ್ದಾರೆ. ಪ್ರಯೋಗಶಾಲೆಯಲ್ಲಿ ವ್ಯಷ್ಟಿವ್ಯವಹಾರದೊಳಗಿನ ತೊಡಕುಗಳ ವಿಚಾರವಾಗುವದಿಲ್ಲ. ಪ್ರತ್ಯಕ್ಷ ಹೊಲಗಳಲ್ಲಿ ಒಕ್ಕಲತನ ನಡಿಸುವಾಗ ವ್ಯಷ್ಟಿವ್ಯವಹಾರದೊಳಗಿನ ಯಾವತ್ತೂ ಪ್ರಸಂಗಗಳ ವಿಚಾರವಾಗಬೇಕಾಗುತ್ತದೆ. ಅದರಿಂದ ಬೇಸಾಯ-ವಿದ್ಯಾರ್ಥಿಗಳು ತಮ್ಮ ಪ್ರಯೋಗಗಳನ್ನು ವ್ಯವಹಾರ-ದೃಷ್ಟಿಯಿಟ್ಟು ನಡಿಸಿದರೆ ಮಾತ್ರ ಅವರ ಜ್ಞಾನ, ವಿದ್ಯಾರ್ಜನೆ ಸಾರ್ಥಕವಾಗಬಲ್ಲದು. ನಾ|| ದೇಸಾಯಿಯವರು ವ್ಯವಹಾರದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಮಾಡಿದ ಸದುಪದೇಶವನ್ನು ಓದಿ ನಾವು ಸಂತೋಷಭರಿತರಾಗಿದ್ದೇವೆ. ಬೇಸಾಯ ಪದವೀಧರರು ಬೇಸಾಯೋದ್ಯೋಗದ ವಿಚಾರ ಹಿಡಿಯದೆ, ಸರಕಾರಿ ನೌಕರಿಯ ಆಶೆ ಹಿಡಿದು ಈ ತನಕ ನಡಕೊಂಡಿದ್ದರಿಂದ ಬೇಸಾಯ ಇಲಾಖೆಯು ಒಕ್ಕಲತನದ ಸುಧಾರಣೆಯ ಪುಷ್ಟಿಗೆ ನಿರರ್ಥಕವಾಗಿದೆಂದು ನಮೂದಿಸಲು ನಮಗೆ ವಿಷಾದವೆನಿಸುತ್ತದೆ. ಕೊಲೇಜಿನ ಮುಖ್ಯಾಧ್ಯಾಪಕರಾದ ಪ್ರಿಂ|| ಗೋಖಲೇಯವರೂ ಇದೇ ಮಾತನ್ನು ಬೇರೆ ಶಬ್ದಗಳಿಂದ ವ್ಯಕ್ತಗೊಳಿಸಿದ್ದಾರೆ. ಬೇಸಾಯ ಉದ್ದಿಮೆ ಲಾಭದಾಯಕವಲ್ಲ, ಬೇಸಾಯ ಕೊಲೇಜಿನ ಪದವೀಧರರ ವಿದ್ಯಾಸಂಪನ್ನತೆಯಿಂದಲೂ ಈ ಉದ್ದಿಮೆ ಲಾಭದಾಯಕವಾಗಲೊಲ್ಲದು, ಎಂಬುದಾಗಿ ಉದ್ಗರಿಸಿ, ಬೇಸಾಯ-ವಿದ್ಯಾರ್ಥಿಗಳಿಂದ ಸಂಕಲ್ಪಿತ ಕಾರ್ಯಭಾಗ ಜರುಗಲಿಲ್ಲವೆಂದು ಸ್ಥಾನ ಭವದಿಂದ ನಿರ್ಣಯ ಕೊಟ್ಟಿದ್ದಾರೆ. ಪ್ರಿಂ|| ಗೋಖಲೆಯವರ ನುಡಿದಂತೆ, ನಿಜಕಾರಣಕ್ಕೆ ಆದಿನವಾದ ಕೆಲವು ಕಾರಣ

ಗಳುಂಟೆಂದು ನಾವು ಒಪ್ಪುತ್ತೇವೆ ಮುಖ್ಯತ್ವಾಗಿರುತ್ತು ನಾವು ಈ ಹಿಂದೆ ಚರ್ಚೆ ಮಾಡಿದ್ದೇವೆ, ಆದರೆ ಇದರಿಂದ ಬೇಸಾಯ ವಿದ್ಯಾರ್ಥಿಗಳು ಕರ್ತವ್ಯಪರಾಯಣರೆಂದೂ ನಿರೋದ್ಯೋಗಿಗಳೆಂದೂ ಸಿದ್ಧವಾಗುವದಿಲ್ಲ ಕಾಲೇಜಿನೊಳಗಿನ ವಿದ್ಯಾರ್ಥಿಗಳು ಬೇಸಾಯವನ್ನು ಜೀವನೋಪಾಯವೆಂದು ಕೈಕೊಂಡು ನಮ್ಮ ಪ್ರಾಂತದೊಳಗೆ ಪುರಸ್ಕರಿಸಿ ಸರಕಾರದ ಧೋರಣದ ಮೂಲಕವಾಗಿಯೇ ಬೇಸಾಯದ ಉದ್ದಿಮೆ ಅಭ್ಯುದಯಕ್ಕೆ ಯೋಗ್ಯವಿಲ್ಲವೆಂದು ಪ್ರತ್ಯಕ್ಷ ಸಿದ್ಧಮಾಡಿಕೊಟ್ಟದ್ದರೆ ಸರಕಾರ ಧೋರಣವನ್ನು ತಿದ್ದುಪಡಿ ಮಾಡಿಕೊಳ್ಳಲು ಲೋಕನಾಯಕರಿಗೆ ತುಂಬಾ ಪ್ರೋತ್ಸಾಹ ದೊರೆಯುತ್ತಿತ್ತು. ಮೂಕ ಒಕ್ಕಲಿಗರಿಗೆ ಬಾಯೊಡೆಯುತ್ತಿತ್ತು. ಬೇಸಾಯದಲ್ಲಿ ಸಾರವಿಲ್ಲವೆಂದು ತಾವಾಗಿ ಎಣಿಸಿ ಸರಕಾರಿ ನೌಕರಿಯು ಒಂದು ಮೆಟ್ಟಲೆಂದು ಬೇಸಾಯ ವಿದ್ಯಾರ್ಥಿಗಳು ಬೇಸಾಯ ಕಾಲೇಜಿನಲ್ಲಿ ನಡೆಕೊಂಡಿದ್ದರಿಂದ ಇಂದಿಗೆ ಈ ಅವಸ್ಥೆಯಾಗಿದೆ ಸರಕಾರವು ಈ ಕ್ರಮವನ್ನು ತಿದ್ದುಪಡಿ ಮಾಡಬಯಸುತ್ತದೆಂದು ನಾ|| ದೇಸಾಯಿಯವರು ನಿರ್ಧಾರದಿಂದ ಹೇಳುತ್ತಾರೆ ಬೇಸಾಯ-ವಿದ್ಯಾರ್ಥಿಗಳಾದರೂ ತಮ್ಮ ಧ್ಯೇಯವನ್ನು ಗ್ರಹಿಸಿ ಅದಕ್ಕುಚಿತವಾಗಿ ತಮ್ಮ ನಡಾವಳಿಯನ್ನಿಟ್ಟು ಸ್ವಕಲ್ಯಾಣವನ್ನೂ ಒಕ್ಕಲಿಗ ಸಮಾಜದ ಕಲ್ಯಾಣವನ್ನೂ ಸಾಧಿಸಿಕೊಳ್ಳಬೇಕೆಂದು ನಾವು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇವೆ

ವಸಾಹತುಗಳ ರಾಜಕಾರಣ.

[ನಿರೀಕ್ಷಕನು ಬರೆದುದು]

ಮೊನ್ನೆ ಶುಕ್ರವಾರ ಭಾರತ ಮಂತ್ರಿಗಳಾದ ಝೆಟ್ಲಂಡ ದೊರೆಗಳು ಟಾಕ್ವೇದೊಳಗಿನ ನಗರಭವನದಲ್ಲಿ ಪ್ರಚಲಿತ ಪರಿಸ್ಥಿತಿಯ ಮೇಲೆ ಭಾಷಣ ಕೊಡುವಾಗ ಮ್ಯೂನಿಕ್ ಒಡಂಬಡಿಕೆಯಿಂದ ಮಾನವ ಲೋಕದೊಳಗೆ ನೂತನ ಮನ್ವಂತರಕ್ಕೆ ಪ್ರಾರಂಭವಾಗುವದೆಂದು ತಾವೆಣಿಸಿದ್ದವಾಗಿಯೂ, ಆ ಎಣಿಕೆ, ಗ್ರಹಿಕೆ, ಭಾವನೆ ನಿರರ್ಥಕವಾಯಿತಾಗಿಯೂ ಉದ್ಗರಿಸಿದ್ದಾರೆ ! ಮ್ಯೂನಿಕ್ ಒಡಂಬಡಿಕೆಯ ಕಾಲಕ್ಕೇ ದೀರ್ಘ ವಿಚಾರಿಗಳು ಈ ಪ್ರಕಾರ ಅಭಿಪ್ರಾಯಪಟ್ಟಿದ್ದರು ಹಿಟ್ಲರನು ಝೆಕ್ ಆಹುತಿಯಿಂದ ಸಮಾಧಾನ ಹೊಂದಲಿಕ್ಕಿಲ್ಲವಾಗಿಯೂ ಇನ್ನೂ ಹೆಚ್ಚೆಚ್ಚು ಆಕ್ರಮಣಶೀಲನಾಗುವನಾಗಿಯೂ ಅಭಿಪ್ರಾಯಪಟ್ಟಿದ್ದರು, ಈ ಅನುಮಾನ ಈಗ ದೃಢವಾಗಿದೆ ಮಹಾಯುದ್ಧದ ಒಡಂಬಡಿಕೆಯ ಕಾಲದಲ್ಲಿ ಬ್ರಿಟಿಶ ಸರಕಾರಕ್ಕೆ ಒಪ್ಪಿಸಿದ ದಕ್ಷಿಣ-ಪಶ್ಚಿಮ ಆಫ್ರಿಕೆಯ ವಸಾಹತನ್ನು ತನಗೊಪ್ಪಿಸಬೇಕೆಂದು ಹಿಟ್ಲರನು ಹಟ ತೊಟ್ಟಿದ್ದಾನೆ. ಇದನ್ನು ಒಪ್ಪಿಸಲಿಕ್ಕೆ ದಕ್ಷಿಣ ಆಫ್ರಿಕೆಯ ಮುಖ್ಯ ಪ್ರಧಾನರಾದ ಸೇನಾಪತಿ ಸ್ಮಟ್ಸರವರ ಒಪ್ಪಿಗೆಯಿಲ್ಲ ತಾವದನ್ನು ಎಷ್ಟಕ್ಕೂ ಜರ್ಮನಿಗೆ ಒಪ್ಪಿಸಗೊಡಲಿಕ್ಕಿಲ್ಲವಾಗಿಯೂ ಅವರು ನಿರ್ಧಾರ ಮಾಡಿದ್ದಾರೆ ಅವಶ್ಯವಿದ್ದರೆ ಅದಕ್ಕಾಗಿ ಯುದ್ಧ ಹೂಡುವ ತಯಾರಿಯನ್ನಿಟ್ಟಿರುವೆವಾಗಿಯೂ ಅವರು ಪ್ರಕಟಿಸುತ್ತಾರೆ ಸೈನ್ಯ ಇಲಾಖೆಯ ಪ್ರಧಾನರಾದ ಮಿ|| ಪೀರೋರವರು ವಿದೇಶ ಯಾತ್ರೆಯನ್ನು ಕೈಕೊಂಡಿದ್ದಾರೆ ವಸಾಹತಿಗಾಗಿ ಯುದ್ಧ ಹೂಡುವ ಪ್ರಸಂಗದಲ್ಲಿ ಯುದ್ಧ ಸಾಹಿತ್ಯವನ್ನು ಪೂರೈಸಿಕೊಳ್ಳುವದಕ್ಕಾಗಿಯೂ ಬೇರೆ ಬೇರೆ ಜನಾಂಗಗಳ ಗೆಳೆತನವನ್ನು ಸಂಪಾದಿಸುವದಕ್ಕಾಗಿಯೂ ಪೀರೋರವರು ಯುರೋಪ ಖಂಡದೊಳಗೆ ಸಂಚರಿಸುತ್ತಿದ್ದಾರೆ ದಕ್ಷಿಣ ಪಶ್ಚಿಮ ಆಫ್ರಿಕೆಯ ಉತ್ತರ ಪಾರ್ಶ್ವದಲ್ಲಿ ಪೋರ್ತುಗೀಜರ ಪೂರ್ವ-ಆಫ್ರಿಕೆಯ ವಸಾಹತುಂಟು, ಇದು ಜರ್ಮನ್ ವಸಾಹತಲ್ಲ, ಹಿಟ್ಲರನು ಇದನ್ನು ಬೇಡುವದಿಲ್ಲ ಆದಾಗ್ಯೂ ದಕ್ಷಿಣ-ಪಶ್ಚಿಮ ಆಫ್ರಿಕೆಯಲ್ಲಿ ಹಿಟ್ಲರನು ರಾಜ್ಯ ಹೂಡಿದರೆ, ಆತನು ಪೋರ್ತುಗಾಲ ವಸಾಹತಿಗೆ ಕಂಟಕನಾಗಬಹುದೆಂದು ಪೋರ್ತುಗಾಲ ಸರಕಾರದವ ಭೀತಿ ಹಿಟ್ಲರನ ನೆರೆಹೊರೆಯಲ್ಲಿರಲು ಐರೋಪ್ಯ ಖಂಡದ ರಾಷ್ಟ್ರಗಳು ಒಪ್ಪುವದಿಲ್ಲ, ಫ್ರೆಂಚರೂ ಡಚ್ಚರೂ ತಮತಮಗೊಪ್ಪಿಸಿದ ವಸಾಹತುಗಳನ್ನು ಜರ್ಮನಿಗೆ ಒಪ್ಪಿಸಲಾರೆವಾಗಿ ನಿರ್ಧಾರದಿಂದ ತಿಳಿಸಿದ್ದಾರೆ ಆಫ್ರಿಕಾ ಖಂಡದಲ್ಲಿ ವಸಾಹತುಗಳಿರುವ ಜನಾಂಗಗಳ ಸಮ್ಮೇಲನವನ್ನು ಶೀಘ್ರವೇ ಸೇರಿಸುವ ವಿಚಾರವನ್ನು ಸೇನಾಪತಿ ಸ್ಮಟ್ಸರವರು ನಡೆಸತೊಡಗಿದ್ದಾರೆ. ಎಲ್ಲರೂ ಐಕ್ಯಮತ್ಯದಿಂದ ಹಿಟ್ಲರನಿಗೆದುರಾಗಬೇಕೆಂದೇ ಸೇನಾಪತಿ ಸ್ಮಟ್ಸರವರ ಆಲೋಚನೆ ಹಿಟ್ಲರನಂತು ತನ್ನ ವಸಾಹತುಗಳು ತನಗೆ ಸಿಗುತ್ತವೆಂಬ, ಸಿಕ್ಕಿದವೆಂಬ ಭಾವನೆಯಿಂದ ನಡಕೊಳ್ಳುತ್ತಿದ್ದಾನೆ. ವಸಾಹತುಗಳು ಕೈಸೇರಿದೊಡನೆ ಅವನ್ನು ಯಾವ ಯಾವ ರೀತಿಯಿಂದ ವ್ಯವಸ್ಥೆ ಮಾಡಿ ಪ್ರಯೋಜನ ಪಡೆಯಬೇಕೆಂಬದರ ಕುರಿತು ನಮ್ಮಲ್ಲಿಯ ವನಸ್ಪತಿಶಾಸ್ತ್ರ ವಿಶಾರದರಾದ ಮಿ|| ಅಬ್ದುಲ್ಲ ವಹೀದರವರಿಗೆ ಕರಕೊಂಡು ಆಲೋಚನೆ ಮಾಡಿರುವನಾಗಿ ಪ್ರಕಟವಾಗಿದೆ ಜರ್ಮನ್ ದೇಶ ಶೀತ ಪ್ರದೇಶ, ಉಷ್ಣ ಕಟಿಬಂಧದೊಳಗಿನ ವನಸ್ಪತಿಗಳ ಜ್ಞಾನ ಜರ್ಮನರಿಗಿಲ್ಲ, ಆದರಿಂದ ಮಿ|| ಅಬ್ದುಲ್ ವಹೀದ, ಆಯ್ ಎಫ್ ಎಸ್ ರವರಿಗೆ ಕರಕೊಂಡು ಆಲೋಚನೆ ಮಾಡಕಾರಣ ಇದರ ಮೇಲಿಂದ ವಸಾಹತುಗಳ ಬಗ್ಗೆ ಹಿಟ್ಲರನ ಆಗ್ರಹ ಗೊತ್ತಾಗಬೇಕು

ವಸಾಹತುಗಳ ಸಮಸ್ಯೆ ನಡೆಯುತ್ತಿರುವಾಗಲೇ ಹೊಸದೊಂದು ಪ್ರಕರಣವೆದ್ದಿದೆ ಇದರ ಪರಿಣಾಮವೇನಾಗುತ್ತದೆಂದು ನಾ ಹೇಳಲಾರೆ ಸೋಮವಾರ ತಾ ೭ನೇಗೆ ೧೭ ವರ್ಷದ ಎಳೆ ಯಹೂದಿ ಹುಡುಗನೊಬ್ಬನು ಪಾರೀಸದೊಳಗಿನ ಜರ್ಮನ್ ರಾಯಭಾರಿ ಕಚೇರಿಯಲ್ಲಿ ಯುಕ್ತಿಯಿಂದ ಒಳಸುಗ್ಗಿ ಜರ್ಮನ ರಾಯಭಾರಿಗಳ ಕಾರ್ಯದರ್ಶಿಗಳಾದ ಹೆರ್ ಫೊನ್ ರಾಥ್‌ರಿಗೆ ಧಕ್ಕನೆ ಗುಂಡು ಹಾರಿಸಿ ಕೊಂದನು ! "ಜರ್ಮನಿಯೊಳಗೆ ಯಹೂದಿಯರ ಮೇಲೆ ನಡಿಸಿದ ಅನಾಚಾರ-ದುರಾಚಾರ-ಅತ್ಯಾಚಾರಗಳಿಗಾಗಿ ನಾನೀ ಸೇಡು ತೀರಿಸಿಕೊಳ್ಳುತ್ತೇನೆ" ಎಂದಾತನು ಉದ್ಗರಿಸಿ, ತುಬಾಕಿಯೊಳಗಿಂದ ೩ ಗುಂಡುಗಳನ್ನು ಹಾರಿಸಿಬಿಟ್ಟನು !! ಈ ಸುದ್ದಿ ಜರ್ಮನಿಗೆ ತಲ್ಪಿದೊಡನೆ ಇಡೀ ದೇಶತುಂಬ ಯಹೂದಿಯರ ಮೇಲೆ ಪ್ರಚಂಡ ದಾಳಿ ಆರಂಭವಾಯಿತು. ರಾಥ್‌ರವರ ಕೊಲೆಯ ಸೇಡು ತೀರಿಸಿಕೊಳ್ಳುವದಕ್ಕಾಗಿ ಜರ್ಮನಿಯೊಳಗಿನ ಯಹೂದಿಯರಿಗೆ ಸರಕಾರವು ಪರಿಪರಿಯಿಂದ ದಣಿಸಹತ್ತಿದೆ. ಜರ್ಮನ್‌ರು ಆರ್ಯರು, ಯಹೂದಿಯರು ಅನಾರ್ಯರು, ಅವರಿಂದ ಮೊದಲೇ ಯಹೂದಿಯರ ಮೇಲೆ ಹಿಟ್ಲರನ ಕಟಾಕ್ಷ ಈಗಂತು ಒಂದು ನೆವ ಸಿಕ್ಕಿತು ಯಹೂದಿಯರ ದೇವಾಲಯಗಳಿಗೆ ಜರ್ಮನ್‌ರು ಬೆಂಕಿ ಹಚ್ಚಿ ಸುಟ್ಟರು, ಸಾವಿರಾರು ಜನರಿಗೆ ಸೆರೆ ಹಿಡಿದಿಟ್ಟಿದ್ದಾರೆ ಅನೇಕರಿಗೆ ಕೊಂದುಹಾಕಿದ್ದಾರೆ ಇನ್ನೂ ಅನೇಕರ ಮನೆಸುಗ್ಗಿ ಲೂಟಮಾಡಿದ್ದಾರೆ. ಸೆರೆಯಲ್ಲಿಟ್ಟ ಯಹೂದಿಯರಿಗೆ ಜರ್ಮನ್ ಸರಕಾರವು ಹೊಟ್ಟೆಗೆ ಹಾಕುವದಿಲ್ಲ. ಊಟವನ್ನು ತಾವರೇ ಕೊಂಡು ಉಣ್ಣಬೇಕು ಊಟ ತರಲಾಗದ ಯಹೂದಿಯರಿಗೆ ಊಟ ತರಿಸಿಕೊಳ್ಳುವವರು ಊಟ ಕೊಡಬೇಕು, ಯಾವದೇ ಪ್ರಕಾರದಿಂದ ಇವರ ಊಟದ ಖರ್ಚನ್ನು ಜರ್ಮನ್ ಸರಕಾರವು ಸಹಿಸದು. ಈ ರಕ್ಕಸತನದಿಂದ ಬ್ರಿಟಿಶ-ಅಮೇರಿಕೆಯೊಳಗಿರುವ ಯಹೂದಿಯರು ವ್ಯಾಕುಲಗೊಂಡಿದ್ದಾರೆ. ಬ್ರಿಟಿಶ—ಅಮೇರಿಕೆ—ಫ್ರೆಂಚ ಸರಕಾರಗಳೂ ಉದ್ವಿಗ್ನವಾಗಿವೆ "ಪಾಲಿಸ್ತಾನದಲ್ಲಿ ಬ್ರಿಟಿಶರು ಅರಬರ ಕೊಲೆ ಮಾಡಲಿಲ್ಲವೇ ? ಹಿಂದುಸ್ಥಾನದಲ್ಲಿ ಹಿಂದೀಯರಿಗೆ ದಣಿಸಲಿಲ್ಲವೇ ? ಅಮೇರಿಕೆಯವರು ನಿಗ್ರೋ ಜನರಿಗೆ ರಾಕ್ಷಸರಾಗಿ ಪೀಡಿಸಲಿಲ್ಲವೇ ? ನೀವು ನಮಗೆ ಬುದ್ಧಿ ಹೇಳುವದು ಬೇಡ ನಾವೆಲ್ಲ ಈ ಚೇಷ್ಟೆಗಳನ್ನು ಬಲ್ಲೆವು" ಎಂದು ಜರ್ಮನ್ ಸರಕಾರವು ಆಕ್ಷೇಪಕರಿಗೆ, ನಿಷೇಧಕರಿಗೆ ಹೀಯಾಳಿಸಿ ನಾಚಿಕೆಬಿಟ್ಟ ಆತ್ಮಸಮರ್ಥನೆ ಮಾಡಿಕೊಳ್ಳುತ್ತದೆ. ಇದರಿಂದ ಅಮೇರಿಕೆಯ ಅಧ್ಯಕ್ಷರಾದ ರೂಝುವೆಲ್ಟರವರು ಮುನಿದು ಜರ್ಮನಿಯೊಳಗಿರುವ ತಮ್ಮ ರಾಯಭಾರಿಯನ್ನು ಹಿಂಗರೆದುಕೊಂಡರು, ಅಮೇರಿಕೆಯಲ್ಲಿರುವ ಜರ್ಮನ್ ರಾಯಭಾರಿಯನ್ನು ಜರ್ಮನಿಗೆ ಹೊರಡಿಸುವ ಪ್ರಸಂಗ ತಂದೊಡ್ಡಿದ್ದಾರೆ. ವಿದೇಶಗಳಲ್ಲಿರುವ ರಾಯಭಾರಿ-ಕಚೇರಿಗಳ ಪೋಲೀಸ ಬಂದೋಬಸ್ತು ಇಡುವ ಕೆಲಸ ಆಯಾ ಸರಕಾರಗಳದು. ಈ ತನಕ ಅಮೇರಿಕೆಯೊಳಗಿದ್ದ ಜರ್ಮನ್ ರಾಯಭಾರಿ-ಕಚೇರಿಯ ಕಾವಲಿಗಿದ್ದ ಪೋಲೀಸ ದಲವನ್ನು ರೂಝುವೆಲ್ಟರವರು ತೆಗೆದು ರೂಝುವೆಲ್ಟರವರು ಯಹೂದಿ ಪೋಲೀಸರನ್ನಿಟ್ಟಿದ್ದಾರೆ ಇದರಿಂದ ಜರ್ಮನ್ ರಾಯಭಾರಿಗಳು ಮುನಿದು ತಾವಾಗಿಯೇ ಅಮೇರಿಕೆಯನ್ನು ಬಿಟ್ಟು ಹೋಗುವರು ಜರ್ಮನಿಯೊಳಗಿನ ಯಹೂದಿ-ಪ್ರಜೆಗಳೆಲ್ಲರೂ ಜರ್ಮನಿಯನ್ನು ಬಿಟ್ಟು ಹೊರಹೋಗತಕ್ಕದ್ದೆಂದು ಹಿಟ್ಲರನ ಕಟ್ಟಾಜ್ಞೆ ಹೊರಟಿದೆ ರಾಥ್‌ರವರ ಕೊಲೆಪಾತಕದ ನಷ್ಟಭರಪಾಯಿಯೆಂದು ಜರ್ಮನಿಯೊಳಗಿನ ಸಮಸ್ತ ಯಹೂದಿ ಪ್ರಜೆಗಳು ೧ ಬಿಲ್ಯನ ಮಾರ್ಕ ಅಂದರೆ ೫೦ ಕೋಟಿ ಹಣವನ್ನು ದಂಡ ಕೊಟ್ಟು ಜರ್ಮನ್ ದೇಶದ ಗಡಿ ದಾಟಬೇಕು ಎಲ್ಲ ದಂಡದ ರಕಮು ಜರ್ಮನ್ ಸರಕಾರಿ ಕೋಶದಲ್ಲಿ ತುಂಬಿದವಿನಾ ಒಬ್ಬರೂ ಹೊರಹೋಗಕೂಡದೆಂದು ಮೇಲಪ್ಪಣೆ ಇವರಿಗೆ ವಸಾಹತುಗಳಲ್ಲಿ ವಾಸ್ತವ್ಯ ಮಾಡುವಂತೆ ಏರ್ಪಾಟು ಮಾಡಬೇಕಾಗಿ ಬ್ರಿಟಿಶ-ಅಮೇರಿಕೆಯವರ ಆಲೋಚನೆ "ಜಾಗ್ರತೆ ! ನಮಗೊಪ್ಪಿಸುವ ವಸಾಹತುಗಳಲ್ಲಿ ಯಹೂದಿಯರಿಗೆ ಸ್ಥಳ ಕೊಡಬೇಡಿ ! ಕೆಲಸ ಕೆಟ್ಟೀತು !!" ಎಂದು ಜರ್ಮನ್ ಸರಕಾರದ ಎಚ್ಚರಿಕೆ ! ಹೀಗೆಲ್ಲ ಅನಪೇಕ್ಷಿತ ಘಟನೆಗಳು ಸಂಭವಿಸತೊಡಗಿದಾಗ ಮ್ಯೂನಿಕ್ ಒಡಂಬಡಿಕೆಯಿಂದ ಸಮಾಧಾನವಾಗಲಿಲ್ಲವಾಗಿ ಭಾರತ ಮಂತ್ರಿಗಳು ಹೇಳುವ ಪ್ರಸಂಗವೇ ಇಲ್ಲ !

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವರೆಯಾ ಇಲ್ಲಿ [illegible] ರಾತ್ರಿ [illegible] ಬೀಳುತ್ತದೆ, ಮುಂಜಾವಿನಲ್ಲಿ [illegible] ಬೀಳುತ್ತದೆ [illegible] ದ ಬೇನೆ-ಬೇಸರಿಕೆಗಳು ಕಂಡುಬರುತ್ತವೆ

ಮೊನ್ನೆ ಶನಿವಾರ ರಾಷ್ಟ್ರಪತಿಗಳ ಆಜ್ಞೆಯಂತೆ ಇಲ್ಲಿಯೂ ದಿವಂಗತ [illegible] ಮುಸ್ತಫಾ ಕಮಾಲ [illegible] ಅತಾತುರ್ಕ ರವರ ದಿನದ [illegible] ಕಮಿಟಿಯವರಾಗಲಿ ಅಂದು ಹರತಾಳ ಮಾಡಬೇಕೆಂದು [illegible] ಆದರೂ ಇಲ್ಲಿಯ ಕೆಲ [illegible] ದಿನ [illegible] ಅಂಗಡಿಗಳನ್ನು ಮುಚ್ಚಿ [illegible] ಆಚರಿಸಲು ಎಲ್ಲ ಅಂಗಡಿಕಾರರಿಗೆ [illegible] ಅದರಂತೆ ಶನಿವಾರ ಮುಂಜಾವಿನಿಂದ [illegible] ತನಕ ಎಲ್ಲ ಸಣ್ಣ-ದೊಡ್ಡ ಅಂಗಡಿಕಾರರು [illegible] ಒಂದೆರಡು [illegible] (ತಕರಾರು [illegible]) [illegible] ನ್ನು ನೋಡಿ ಕೆಲವು ಕೊಂಗ್ರೆಸ ಸ್ವಯಂಸೇವಕರು (?) ಅವರಿಗೆ [illegible] ಬಂದಂತೆ [illegible], [illegible] ಸ್ವಯಂಸೇವಕರು [illegible] ತಂದು ತಿನ [illegible] ತಂದು [illegible] ಹಣ ಕೊಡದೆ [illegible] ತಿಳಿಯುತ್ತದೆ! ಈ ನಡತೆ [illegible] ಸ್ವಯಂಸೇವಕರಿಗೂ ಉಚಿತವಲ್ಲ ಅಹಿಂಸಾ ಮಾರ್ಗದ ಅನುಯಾಯಿಗಳಾದ ಕೊಂಗ್ರೆಸ ಸಂಸ್ಥೆಗಳ ಸ್ವಯಂಸೇವಕ ರೆಂದು [illegible] ಘೋಷಣವಲ್ಲ [illegible] ಶ್ರೀ [illegible] ದೇವಾಲಯ ದಲ್ಲಿ ಕೂಗಿದ ದುಃಖಪ್ರದರ್ಶನದ ಸಭೆಯಲ್ಲಿ ಸ್ಥಾನಿಕ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷ ರಾ|| ಲಕ್ಷ್ಮಣ [illegible] ಸ್ವಯಂಸೇವಕರು ಹೀಗೆ [illegible], [illegible] ದುರಾಚಾರ ಮಾಡಿದ ಸ್ವಯಂಸೇವಕರು [illegible] ಮಾಡಿ, ಆವನ [illegible] [illegible] ತಿಳಿಯಬರುತ್ತದೆ

ಮುರೂರಿನಲ್ಲಿ [illegible] ಕಳೆದ ಫೆಬ್ರುವರಿ [illegible] ಒಂದು [illegible] ನಡಿಸುತ್ತಿದ್ದರೆ [illegible] ಮಾಡಿಕೊಳ್ಳುವ ಬಗ್ಗೆ [illegible] ಬರೆಕೊಂಡಿದ್ದರಂತೆ ಅವರ ಅದಕ್ಕೆ ಉತ್ತರವೇ ಇಲ್ಲವಂತೆ! [illegible] ಪ್ರಸ್ತಕ, [illegible] ಪ್ರಸ್ತಕ, [illegible] ಬಗ್ಗೆ ಬರೆದಂತೆ [illegible] ಇಲ್ಲವಂ ತೆ ಕೊಂಗ್ರೆಸ ಮಂತ್ರಿಮಂಡಳವು ವಿದ್ಯಾಪ್ರಸಾರಕ್ಕಾಗಿ ಪ್ರಯತ್ನ [illegible] ಈ ಕಾಲದಲ್ಲಿ ಹೀಗಾಗುವದು ಆಶ್ಚರ್ಯವಲ್ಲವೇ? ಎಂದು ಮುರೂರ ಗೌಡನೊಬ್ಬನು ಕೇಳುತ್ತಾನೆ

ಧಾರೇಶ್ವರದಲ್ಲಿ ತೆಂಗಿನ ಕಸದಿಂದ ಚೆಲ್ಲ ಮಾಡಲು ಕಲಿಸುವ ವರ್ಗವೊಂದು ತೆರೆಯುವ ತಯಾರಿ ನಡೆದಿದೆ

ಹೊನ್ನಾವರ— (ತಾ ೧೯—೧೧—೩೮) ಈ ಹೊತ್ತು ಇಲ್ಲಿಯ [illegible] ಹೊಲಿನಲ್ಲಿ ನಾಗರಿಕರ ಸಭೆ ಸೇರಿ ತುರ್ಕಸ್ಥಾನದ ಮುಸ್ತಫಾ ಕಮಾಲ ಅತಾತುರ್ಕರವರ ನಿಧನದ ಬಗ್ಗೆ ಶೋಕಪ್ರದರ್ಶನ ಮಾಡಲಾಯಿತು.

ಗ್ರಾಮೋದ್ಯೋಗ ಸಂಘದವರ ಉದ್ಯೋಗ ವರ್ಗ ತಾ ೧೫ನೇ ಮಂಗಳವಾರದಿಂದ ಇಲ್ಲಿ ಪ್ರಾರಂಭವಾಗಿದೆ ೧೨ ಜನ ಹುಡುಗ ಹುಡುಗಿಯರು ಹಗ್ಗ ಮತ್ತು ಹುರಿ ಹೊಸೆಯುವ ಕೆಲಸ ಕಲಿಯುತ್ತಿದ್ದಾರೆ ಸರಾಸರಿ ದಿನ ೧ಕ್ಕೆ ೨ ಮಾರು ಹಗ್ಗ ತಯಾರಾಗುತ್ತದೆ ಇಷ್ಟರಲ್ಲಿಗೆ ೬ ಜನರು ಹಗ್ಗ ಮಾಡುವದನ್ನು ಕಲಿತಿದ್ದಾರೆ ಹುರಿ ತಂದು ಹಗ್ಗ ಮಾಡಿ ಒಯ್ಯುವವರಿಗೆ ಪ್ರತ್ಯೇಕವಾಗಿ ಯಂತ್ರಸಾಹಿತ್ಯ ಪೂರೈಸಲಾಗುವದು ಅಂಗಿ ಬಟ್ಟನ್ ಯಾನೆ ಗುಂಡಿಗಳನ್ನು ಮಾಡಕಲಿಸಲು ಒಬ್ಬ ಶಿಕ್ಷಕರು ಬಂದಿದ್ದಾರೆ ಈ ವಾರಕ್ಕೆ ನಾಳೆಯಿಂದ ಪ್ರಾರಂಭವಾಗುತ್ತದೆ ಇಲ್ಲಿಯ ಸಮುದ್ರದಲ್ಲಿ ಹೇರಳ ಶಿಂಪಿಗಳು ದೊರೆಯುತ್ತವೆ ಈ ಶಿಂಪಿಗಳಿಂದ ಜಪಾನದಲ್ಲಿ ಅಂಗಿ-ಗುಂಡಿಗಳನ್ನು ತಯಾರಿಸುತ್ತಾರೆ. ಹಿಂದುಸ್ಥಾನದೊಳಗಿಂದಲೇ ಈ ಶಿಂಪಿಗಳು ಆ ಕಡೆ ರಫ್ತಾಗುತ್ತವೆ ಶಿಕ್ಷಕರು ಈ ಪ್ರಯೋಗವನ್ನು ಮಾಡಿತೋರಿಸಿ ಹುಡುಗರಿಗೆ ಕಲಿಸಬಹುದು

ಮಂಕಿ— ಮಂಕಿಯ ನಮ್ಮ ಸುದ್ದಿಗಾರರು ಬರೆಯುತ್ತಾರೆ "ಬಳಕೂರಿನ [illegible] ನನ್ನ ಮೇಲೆ [illegible] ನೋಡಿ [illegible]! ಮಂಕಿಯಿಂದ [illegible] ಮೈಲು ಅಂತರದಲ್ಲಿದ್ದ ಹಳ್ಳಿಗಳಿಗಷ್ಟೇ ವಾರದಲ್ಲಿ ಮೂರಾವರ್ತಿ ಟಪಾಲ ಬಟವಡೆಯಾಗಬೇಕೆಂಬ ನನ್ನ ಬರೆವಣಿಗೆಯ ಅರ್ಥವಲ್ಲ ಬಳಕೂರಿನಲ್ಲಿ ಅಂಚೆಕಟ್ಟೆ ಯಾಗಬಾರದೆಂದು ನನ್ನ ಪ್ರಯತ್ನವಿಲ್ಲ ಅಲ್ಲಿ ಅಂಚೆಕಟ್ಟೆ ಯಾಗಲಿಕ್ಕೆ ನನ್ನ ಪೂರ್ಣ ಒಪ್ಪಿಗೆಯಿದೆ ಬಳಕೂರ ಅಂಚೆಕಟ್ಟೆಗೆ ಜೋಡಿಸಿದ ಕೆಲವು ಹಳ್ಳಿಗಳು ಮಂಕಿಗೆ ಸಮೀಪವಿರುವದರಿಂದ ಅವನ್ನು ಮಂಕಿಯ ಅಂಚೆಕಟ್ಟೆಗೆ ಜೋಡಿಸಬೇಕೆಂದಿಷ್ಟೇ ನನ್ನ ಸೂಚನೆಯಿದೆ." ಇತ್ಯಾದಿ

ಭಟಕಳ— (ತಾ. ೧೯ ೧೧-೩೮) ಈ ವಾರ ನಿರಾಶ್ರಿತ ನಿಧಿಗೆ ಕಾರವಾರ ಜಿಲ್ಲಾ ಸಹಕಾರ ಇನ್ಸ್ಟಿಟ್ಯೂಟನಿಂದ ರೂ ೩೩, ಮತ್ತು ಹಳೆಯಾಳ ತಾಲೂಕ ಕಚೇರಿಯಿಂದ [illegible] ಬಂದಿವೆ

[illegible] ದಿನ [illegible] ಗಳಲ್ಲಿ ನಾ|| ಬೇರ ಮತ್ತು ನಾ|| ಲಕ್ಷ್ಮೀಯವರು ನಮ್ಮ ಜಿಲ್ಲೆಯಲ್ಲಿ ಸಂಚಾರಕ್ಕೆ ಬರುವವರಿದ್ದಾರೆಂದು ಕೇಳಿ ಇಲ್ಲಿಯ ಜನರಿಗೆ ಆನಂದವಾಗಿದೆ ಅವರಿಬ್ಬರಿಗೂ ಇಲ್ಲಿಯ [illegible] ಅವಸ್ಥೆ ತೋರಿಸುವ ದೆಸೆಯಿಂದ ಭಟಕಳ ನಗರದ ದರ್ಶನವನ್ನೂ ಅವರ ಸಂಚಾರದ ಕಾರ್ಯಕ್ರಮದಲ್ಲಿ ಸೇರಿಸುವಂತೆ ಜಿಲ್ಲಾಧಿಕಾರಿಗಳಿಗೂ ಜಿಲ್ಲಾಧ್ಯಕ್ಷರಿಗೂ ಆಗ್ರಹದಿಂದ ಬಿನ್ನವಿಸಿದ್ದಾರೆ ಎಸೆಂಬ್ಲಿ-ಕೌನ್ಸಿಲುಗಳೊಳಗಿನ ನಮ್ಮ ಪ್ರತಿನಿಧಿಗಳಾದವರೂ [illegible] ಸ್ಥಿತಿ ನೋಡಿ ಹೋಗಬೇಕಾಗಿ ವಿನಂತಿಯುಂಟು

[illegible] ಇನ್ಸ್‌ಪೆಕ್ಟರ [illegible] ಈಗ ಈ ಪೇಟೆಯಲ್ಲಿದೆ ಅವರು [illegible] ಶಾಲೆಗಳನ್ನೂ ನ್ಯೂ ಇಂಗ್ಲಿಷ ಶಾಲೆಯನ್ನೂ ತಪಾಸ ಮಾಡುವರು ಇಲ್ಲಿಯ ಹಿಂದೀ ಶಿಕ್ಷಣ ವರ್ಗಕ್ಕೂ ಭೆಟ್ಟಿಯನ್ನಿತ್ತು ಹಿಂದೀ ಶಿಕ್ಷಣದ ಬಗ್ಗೆ ತಮ್ಮ ಆದರ ವ್ಯಕ್ತಗೊಳಿಸುತ್ತಾರೆ

ಶನಿವಾರ ತಾ. ೧೯ನೇಗೆ ರಾಷ್ಟ್ರಪತಿಗಳ ಆಜ್ಞೆಯಂತೆ ಇಲ್ಲಿ ಕಮಾಲ ಪಾಶಾ ದಿನ ಆಚರಿಸಲ್ಪಟ್ಟಿತು ರಾ| ನಾರಾಯಣ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನ್ಯೂ ಇಂಗ್ಲಿಷ ಶಾಲೆಯೊಳಗೆ ಸಭೆಯಾಗಿ, ದಿವಂಗತ ಕಮಾಲ ಪಾಶಾರವರ ಅಕಾಲಿಕ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲಾಯಿತು. ಮುಸಲ್ಮಾನ ಬಾಂಧವರು ಶುಕ್ರವಾರ ಮಸೀದೆಯಲ್ಲಿ ಸೇರಿ ದಿವಂಗತರ ಆತ್ಮಕ್ಕೆ ಶಾಂತಿಯಾಗಲೆಂದು ಪ್ರಾರ್ಥನೆ ಮಾಡಿದರು

ಶಿರಸಿ— ಜಿಲ್ಲಾ ಕೊಂಗ್ರೆಸ ಕಮಿಟಿಯ ಉಪಾಧ್ಯಕ್ಷ ರಾ|| ತಿ ಶ್ರೀ [illegible] ಕಳೆದ ವಾರದ "ವೃತ್ತ"ದಲ್ಲಿ ಪ್ರಕಟವಾದ ಅಂಕೋಲಾ ಸುದ್ದಿಯಲ್ಲಿ - ಅಂಕೋಲಾ ತಾಲೂಕ ಕೊಂಗ್ರೆಸ ಕಮಿಟಿಯ ಲೆಕ್ಕದ ಬಗ್ಗೆ ಜಿಲ್ಲಾ ಕೊಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳದವರು ಕೊಟ್ಟ ನಿರ್ಣಯಗಳ ವೃತ್ತಾಂತದಲ್ಲಿ- "ಕೆಲವು ವ್ಯತ್ಯಾಸಗಳು, ಕೆಲವು ಲೋಪಗಳು ಮತ್ತು ಕೆಲವು ತಪ್ಪುಗಳು ಇರುತ್ತವೆ" ಎಂದು ತಿಳಿಸುತ್ತಾರೆ ಮತ್ತು ಸದರಿ ತಾಲೂಕ ಕಮಿಟಿಯ ಲೆಕ್ಕ ತಪಾಸಣೆಯ ವರದಿಯ ಕುರಿತು ಕಾರ್ಯಕಾರಿ ಮಂಡಳದಲ್ಲಿ ನಡೆದ ವೃತ್ತಾಂತವನ್ನು ವಿಸ್ತಾರವಾಗಿ ಬರೆದು ಕಳಿಸಿದ್ದಾರೆ ಅದರ ಸಾರಾಂಶ ಈ ಕೆಳಗೆ ಕೊಟ್ಟಿದೆ - ರಾ [illegible] ಯವರು ಅಂಕೋಲಾ ತಾ| ಕೊಂ| ಕಮಿಟಿಯ ೧೯೩೬ರಿಂದ ೧೯೩೮ರ ವರೆಗಿನ ಲೆಕ್ಕವನ್ನು ತಪಾಸಿಸಿ ಜಿಲ್ಲಾ ಕಮಿಟಿಗೆ ಒಪ್ಪಿಸಿದ ತಮ್ಮ ವರದಿಯಲ್ಲಿ, ಕೆಲವು ವಿಶಿಷ್ಟ ಸಂಗತಿಗಳನ್ನು ಕಮಿಟಿಯವರು ವಿಚಾರಿಸ

THE CANARA INDUSTRIAL & BANKING SYNDICATE LTD.,

(INCORPORATED IN BRITISH INDIA)

[Estd : 1925]

Head Office: "MUKUND NIVAS", UDIPI, S. INDIA

MEMBER

RESERVE BANK OF INDIA, BANKERS' CLEARING HOUSE BOMBAY

DEPOSIT RATES.

3 to 5 months	2½% p a
6 to 11 months	3% p a
12 to 23 months	3½% p a
24 months	4% p a
SHORT-TERM	2% p a

Banking Business of every description transacted

SERVICE & PROMPTNESS

A Feature and a Fact with the "POPULAR"

M VENKATESH PAI,
Banker.

Sri Krishna Bhavan
Mangalore.
25th July, 1938

The Managing Director,
The Popular Insurance Co , Ltd ,
MANGALORE

Policy No 40.

Dear Sir,

I very much appreciate your promptness in settling the claim in less than a week in respect of the above policy on–the life of my late lamented Father in law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2 553–7–0 is delivered to the claimant and all within the short period of 6 days

This spirit of service and promptitude evinced by the 'POPULAR' is highly laudable and it is but proper that the *Company should be* 'POPULAR' It should naturally bring home to the public immense advantages of getting insured with a local Life Office and I would certainly *recommend the Company to all*

I wish the Company a brilliant career of usefulness and prosperity

Yours faithfully,
(Sd) ***M. Venkatesha Pai***

The Company requires influential Ladies and Gentlemen to work as Agents on most remunerative terms including hereditary renewals.

Apply to :-

THE POPULAR INSURANCE CO. LIMITED,

Head Office: MANGALORE.

Branch: ***PROSPECT CHAMBERS, Hornby Road, BOMBAY.***

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,

ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು !	ಮಿತವಾದ ದರಗಳು!	ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು ದಕ್ಷಿಣ ಕನ್ನಡ ಜಿಲ್ಹೆಯಿಂದ ಬೆಳಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು **ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ**

ಮಿತ ದರ! == ನಿಶ್ಚಿತ ಸಮಯ!! == ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು ?

THE HANUMAN TRANSPORT CO., LTD.,

UDIPI. S. KANARA.

ಸ್ಥಾನಿಕ ವೃತ್ತಾಂತ

(ಗತ ವಾರದಿಂದ ಮುಂದುವರಿದದ್ದು)

ತಂಡಿಪ್ಪಾರಿ ಕಾರವಾರ ಜಿಲ್ಲೆ ಮತ್ತು ಇನ್ನುಳಿದ ಕನ ಡ ಕಲ ಭಾಗಗಳ ನಡುವಿನ ಒಪ್ಪಿ ರಹದಾರಿಯು ಮುಖ್ಯ ಮೋಟಾರ ಬಂಡಿಗಳಿಂದಲೇ ಸಾಗುತ್ತಿದೆ. ಒಂದುವಷ್ಟು ಸರಿ ಕಾರೆವು ಆರಿಸಿದುದು ಕಳೆದ ಮುನ್ನೂ ತಿಂಗಳಲ್ಲಿ ಒಂದು ಸಂಕವು ಮುರಿದುಹೋಗಿ, ರಹದಾರಿಗೆ ಬಹಳ ಅಡಚಣೆಯಾದ ಸಂಗತಿ ಸರ್ವರಿಗೆ ತಿಳಿದಿದೆ. ಸ ಕ ಮುರಿದು ಹೋದ ಕೂಡಲೇ ಸರಕಾರದವರು ಅಲ್ಲಿ ಗಳ್ಳ ದಾಟಲು ಒಂದು ದೋಣಿಯನ್ನಿಟ್ಟು ದಾರಿಯ ಮುಂದಿನಂತೆ ನಡೆಯಲಿಕ್ಕೆ ಅನುಕೂಲ ಮಾಡಿಕೊಟ್ಟಿರುವರು. ಆ ಸ್ಥಳದಲ್ಲಿ "ಅಡ್ಡದಾರಿ" (deviation road) ಆದಾದ ತಯಾರಾಗುವ ತನಕ ಈವ್ಯವಸ್ಥೆ ನಡೆಯುವದು. ಅಡ್ಡದಾರಿ ಈಗ ಬಹು ತಯಾರಾಗಿದೆ. ಸಂಕವನ್ನು ಪುನಃ ಕಟ್ಟುವ ವ್ಯವಸ್ಥೆ ಸಹ ಈಗಾಗಲೇ ಮಾಡಲ್ಪಟ್ಟಿದೆ. ಆ ಸಂಕದ ಜೀರ್ಣೋದ್ಧಾರ ಮಾಡಲು ರೂ ಹಲವಾರು ತಗಲುವವೆಂದು ಅಂದಾಜು. ಕೆಲಸಕ್ಕೆ ಕೂಡಲೇ ಆರಂಭವಾಗುವದು. ಮೇಲೆ ಹೇಳಿದ ಆರು ಸಂಕಗಳ ದುರುಸ್ತಿ ಮಾಡಲಿಕ್ಕೆ ರೂ ಲಕ್ಷಗಟ್ಟಲೆ ತಗಲುವವು. ಹಿಂದುಸ್ಥಾನ ಸರಕಾರದ ಮಂಜೂರಿ ತಕ್ಕೊಂಡು ಅವುಗಳ ದುರುಸ್ತಿಯನ್ನು ಸಹ ಈ ವರ್ಷವೇ ಮಾಡಬೇಕೆಂದು ಮಾಡಿರುತ್ತೇವೆ. ಈ ರಸ್ತೆಯ ಮೇಲಿನ ಭಾಗಗಳನ್ನು ೩-೪ ವರ್ಷಗಳ ಹಿಂದೆ ದುರುಸ್ತ ಮಾಡಿದ್ದೇವೆ. ರಸ್ತೆ-ದುರುಸ್ತಿಯ ಬಗ್ಗೆ ಪ್ರತಿ ವರ್ಷ ಸಿಗುವ ಹಣದೊಳಗಿಂದ ಆಗುವಷ್ಟು ದುರುಸ್ತಿ ಮಾಡಿ ರಸ್ತೆಯನ್ನು ಉತ್ತಮವಾಗಿಡುವ ಕುರಿತು ಅಧಿಕಾರಿಗಳು ದಕ್ಷತೆ ಕೊಳ್ಳುತ್ತಿದ್ದಾರೆ.

ನಾಮದಾರ ಮಂತ್ರಿಗಳು ಹೇಳುವ ಅಡ್ಡ ಮಾರ್ಗ ಇನ್ನೂ ತಯಾರಾಗಿಲ್ಲ. ಮುರಿದು ಹೋದ ಸಂಕಕ್ಕೆ ೨ ೧ ಒಂದು ಸಣ್ಣ ಇಕ್ಕಟ್ಟಿನ ಸಂಕ ತಯಾರಿಸಲಾಗಿದೆ. ಅದಕ್ಕೆ ಕಟ್ಟಿಲ್ಲ! ಪ್ರವಾಸಿಕರನ್ನೊಯ್ಯುವ ಮೋಟಾರ ಬಂಡಿಗಳಿಗಷ್ಟೇ ಅದರ ಮೇಲಿಂದ ಹಾದು ಹೋಗಗೊಡುತ್ತಾರೆ. ಸರಕು ತುಂಬಿದ ಮೋಟಾರ ಬಂಡಿಗಳೂ ಎತ್ತುಗಳನ್ನು ಹೇರಿಕೊಂಡು ಬಂದ ಚಕ್ಕಡಿಗಳೂ ಅದರ ಮೇಲಿಂದ ಹೋಗಕೂಡದು! ಇವುಗಳ ಬಗ್ಗೆ ರಹದಾರಿಯ ವ್ಯವಸ್ಥೆ ಮಾಡಲು ಸರಕಾರದವು ಲಕ್ಷ್ಯವಿಲ್ಲೇನು? ಸರಕು ಒಯ್ಯುವ ಮೋಟಾರ ಗಾಡಿಗಳು ಸರ್ವರಿಗೂ ತೊಂದರೆ ಕೊಡುವದಿಲ್ಲವೇ?

ಪ್ರವಾಸಿಕರ ಬಂಡಿಗಳಿಗಿಂತಲೂ ಈ ಬಂಡಿಗಳೇ ಹೆಚ್ಚು ... ಕೊಡುತ್ತಿವೆ. ಹೇಳುತ್ತಾರಲ್ಲ! ಇಂಜನಿಯರರ ... ಲಕ್ಷ್ಯಕ್ಕೆ ಈ ಸಂಗತಿ ಯಾರೂ ತರಲಿಲ್ಲವೇ?

... ೩೧) ಕಳೆದ ಸೋಮವಾರ ಹೆಬ್ಬಾಳ ಗ್ರಾಮದಲ್ಲಿ ಕಡತ ಜಾತಿಯುವನೊಬ್ಬನ ಕೊಲೆಯಾದ ವರ್ತಮಾನ ಬಂದಿದೆ. ಮೃತಾತ್ಮನು ರವಿವಾರ ರಾತ್ರಿ ಗದ್ದೆಯೊಳಗಿನ ಮಾಳದಲ್ಲಿ ಮಲಗಲು ಹೋಗಿದ್ದನಂತೆ. ಅವನು ತಿರುಗಿ ಮನೆಗೆ ಬರಲಿಲ್ಲ. ಈ ಬಗ್ಗೆ ಪೋಲೀಸರಿಗೆ ವರದಿ ಕೊಡಲಾಯಿತು. ಮಂಗಳವಾರ ಶೋಧ ಮಾಡುತ್ತಿರಲಾಗಿ ಹಳ್ಳದೊಳಗೊಂದು ಚೀಲ ಸಿಕ್ಕಿತು! ಅದರಲ್ಲಿ ಮೃತಾತ್ಮನ ಶವವಿತ್ತು! ಕೊಲೆಯ ವಿವರಗಳು ಇನ್ನೂ ತಿಳಿಯಲಿಲ್ಲ. ಪೋಲೀಸರು ತಪಾಸ ನಡಿಸಿದ್ದಾರೆ. ಇಲ್ಲಿಯ ಹೊಸ ಫೌಜದಾರರಾದ ರಾ| ಗಡಕರಿಯವರು ಗುನ್ಹೆಗಳ ತಪಾಸಣೆ ಮಾಡಲು ನಿಷ್ಣಾತರೆಂದು ಪ್ರಖ್ಯಾತಿಯಿದೆ. ಅದರ ಪ್ರತೀತಿ ಬೇಗನೇ ಸಿಗುವದೆಂದು ನಂಬಿಗೆಯಿದೆ.

ಕಾರವಾರ— ಜಿಲ್ಹಾ ಜಜ್ಜರಾದ ಮಿ| ವ್ರೊಟರ ಫೀಲ್ಡರವರಿಗೆ ಅಹಮ್ಮದನಗರಕ್ಕೆ ವರ್ಗವಾಗಿರುತ್ತದೆಂತ ಊ ಮಿ| ನಾಹೆರ, ಆಯ್ ... ರವರು ಎಂಬವರು ಈ ವಾರದಲ್ಲಿ ಜಜ್ಜರಾಗಿ ಬರುತ್ತಾರೆಂತಲೂ ತಿಳಿಯುತ್ತದೆ.

ಕೋಡಿಬಾಗ ಬದಿಗೆ ಬಹಳ ಇಲಿಗಳು ಸಾಯುತ್ತವಂತೆ. ನಗರ ಸಭೆಯವರು ಪ್ಲೇಗ-ಪ್ರತಿಬಂಧಕ ಉಪಾಯಗಳನ್ನು ಯೋಜಿಸುತ್ತಿದ್ದಾರೆ.

ಪ್ರವಾಸಿ ಜನರಿಗೆ

ಊಟ-ಉಪಚಾರಗಳ ಉತ್ತಮ ವ್ಯವಸ್ಥೆ!

ಮಾಧವಾಶ್ರಮ,

ಕಾರವಾರ.

ಮಧ್ಯವರ್ತಿ ಸ್ಥಳ;

ಉತ್ಕೃಷ್ಟ ಊಟ;

ಉತ್ತಮ ಹನೆಯ ಕೋಣೆಗಳು,

ಊಟ ಉಳಕೊಳ್ಳುವ ಅನುಕೂಲತೆ!

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಟ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ-ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು. ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು.

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು.

ಮಾಲಕ :- ಕೇ. ರಾಮ ಪಂಡಿತ, ಪೋ: ಕುಮಟಾ. ಜಿ. ಉ ಕಾನಡಾ.

ಲೇತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ಣಿಕ

ಎಗ್ಸೆಕುಟಿಸ್ಚರ್ ಉಪಯೋಗಿಸಿರಿ!

ಸಿಕ್ಕ ಸಿಕ್ಕ ಔಷಧ ಸೇವಿಸಿ, ಜ್ವರವನ್ನು ಬೇಗನೆ ಬಿಡಿಸಿರಿ. ಬೆಲೆ ಆಣೆ ೧೨

ಇಂಡೋಬಾಮ್

ತಲೆಶೂಲಿ, ಮೈನೋವು, ಸಂಧಿವಾತ, ವಿಷಾರಿ ಹುಳುಗಳ ಕಡಿದ ನೋವು ಮುಂತಾದ ವಿಕಾರಗಳು ಇದರಿಂದ ಒಳ್ಳೆ ಶಾಂತವಾಗುತ್ತವೆ. ಬೇರೆ ಬಾಮುಗಳಂತೆ ಅನಾವಶ್ಯಕ ಉರಿ ಹಿಡಿಯುವದಿಲ್ಲ. ಬೆಲೆ ಆ ೬

ಎಲ್ಲ ಅಂಗಡಿಗಳಲ್ಲಿ ಸಿಗುತ್ತವೆ, ಸಿಗದಿದ್ದರೆ ನಮಗೆ ಬರೆಯಿರಿ.

ಕರ್ಣಿಕ ಬ್ರದರ್ಸ್,

ಗಿರಗಾಂವ, ಮುಂಬಯಿ, ನಂ ೪

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) **(ಲಿವರ ಕ್ಯೂರ್)**

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಮೈ ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸ್ಪತ್ರೆಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಹಿಡಿದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ವಿ ಎನ್ ಶ್ರೀನಿವಾಸರಾವ್, ಲಿವ್ಹರ್ ಸ್ಪೆಶಲಿಸ್ಟ,

ಎಂ ವಿ ಪ್ರಾಸಾದಿಕ ಔಷಧಾಲಯ, ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಏಜಂಟ—

ಸುಬ್ರಾಯ ಸೀತಾರಾಮ ಹೆಗಡೆ, ಶಿರ್ಶಿ

ಬೇಕೆಂದು ಸೂಚಿಸಿ ಅವನ್ನು ಪ್ರತ್ಯೇಕವಾಗಿ ಮುಂದಿಸಿದ್ದರು. ಜಿಲ್ಲಾ ಕಾಂ। ಕಮಿಟಿಯವರು ಅವುಗಳ ನಿಕಾಲಿ ಈ ಕೆಳಗಿನಂತೆ ಮಾಡಿದರು (೧) ೧೯೩೪ ೩೫ರಲ್ಲಿ ಡಾ। ರಾಮರಾವ ಶೆಣವಿಯವರು ಚುನಾವಣೆಯ ಖಾತೆಗೆ ರೂ ೫೫-೯-೦ ಖರ್ಚು ಹಾಕಿದ್ದರು ಮತ್ತು ಎಸೆಂಬ್ಲಿಗೆ ಕಾಂಗ್ರೆಸ ಪರವಾಗಿ ಹುರಿಯಾಳುಗಳಾಗಿ ನಿಂತ ಶ್ರೀ। ಜೋಶಿಯವರ ಚುನಾವಣೆಯ ಖರ್ಚನ್ನು ಆ ಆ ತಾಲೂಕಿನ ಕಾಂಗ್ರೆಸ ಕಮಿಟಿಯವರೇ ಸಹಿಸುವ ಪರಿಸ್ಥಿತಿಯಿತ್ತಾದ್ದರಿಂದ ಸದರಿ ಖರ್ಚು ಮಂಜೂರ ಮಾಡಲಾಯಿತು (೨) ೧೯೩೬—೩೭ನೇ ವರ್ಷದ ಜಿಲ್ಲಾ ಕಮಿಟಿಯ ಚತುರ್ಥಾಂಶದ ಬಾಬತು ಡಾ। ಶಾಮರಾಯರ ಕಮಿಟಿಯವರು ರೂ ೩೭-೩-೦ ಕೊಟ್ಟಿದ್ದಿಲ್ಲ ಈ ಬಗ್ಗೆ ವಿಚಾರವಾಗಿ, ೧೯೩೫-೩೬ರಲ್ಲಿ ಜಿಲ್ಲಾ ಕಮಿಟಿಯ ಉಪಾಧ್ಯಕ್ಷ ನಾತೆಯಿಂದ ಡಾ। ಶೆಣ್ವಿಯವರು ಸದಸ್ಯಪುಸ್ತಕ ಮುಂತಾದವುಗಳ ಮುದ್ರಣದ ಬಗ್ಗೆ ಖರ್ಚು ಮಾಡಿದ ಹಣವನ್ನು ಅಂಕೋಲಾ ತಾ। ಕಮಿಟಿಯವರು ಕೊಡತಕ್ಕವರಿದ್ದರಿಂದಲೂ ಜಿಲ್ಲಾ ಕಮಿಟಿಯವರು ಆ ಹಣ ತಾಲೂಕ ಕಮಿಟಿಯವರಿಗೆ ಮುಟ್ಟಿಸಿದ್ದಿಲ್ಲವಾದ್ದರಿಂದಲೂ ಮೇಲೆ ಹೇಳಿದ ಚತುರ್ಥಾಂಶದ ರೂ ೩೭-೩-೦ ತಾಲೂಕ ಕಮಿಟಿಗೆ ಸೂಟ ಬಿಡಲಾಯಿತು (೩) ೧೯೩೮ನೇ ಇಸವಿಯ ಮೇ ತಿಂಗಳಲ್ಲಿ ಹೊಸ ತಾಲೂಕ ಕಮಿಟಿಯ ಘಟನೆಯಾದ ಮೇಲೆ ಸಹ ಡಾ। ಶಾಮರಾಯರು ೧೦ ಆಣೆ ಟಪಾಲು ಖರ್ಚು ಕಾಂಗ್ರೆಸ ಹಣದೊಳಗಿಂದ ಮಾಡಿದ್ದರು ಅದು ಶಾಮರಾಯರ ಕಮಿಟಿಯ ವಿಷಯದಲ್ಲುಂಟಾದ ತಕರಾರಿನ ನಿಕಾಲೆಯ ಬಗ್ಗೆ ಮಾಡಿದ್ದು ಇರುತ್ತಿದ್ದಾಗ್ಯೂ, ಹೊಸ ಕಮಿಟಿಯ ಮೇಳಕಳೇ ಅಧ್ಯಕ್ಷರಿಗೆ ಕಾಂಗ್ರೆಸ ಖರ್ಚು ಮಾಡಬರಲಾರದೆಂತಲೂ, ಶಾಮರಾಯರೇ ಅದನ್ನು ಸಹಿಸಬೇಕೆಂತಲೂ ನಿರ್ಣಯವಾಯಿತು (೪) ೧೯೩೬-೩೭ರಲ್ಲಿ ಜಿಲ್ಲಾ ಕಮಿಟಿಗೆ ಕೊಟ್ಟ ಚತುರ್ಥಾಂಶವೆಂದು ಡಾ। ಬಾಸಗೋಡ ರಾಮನಾಯ್ಕರ ಲೆಕ್ಕದಲ್ಲಿ ೯॥ ರೂ ಖರ್ಚು ಬಿದ್ದಿದೆ ಆ ಬಗ್ಗೆ ರಾಮನಾಯ್ಕರ ಹತ್ತರ ಪಾವತಿಯಿಲ್ಲ ಕಾರಣ ಸದರಿ ವರ್ಷದ ಜಿಲ್ಲಾ ಕಮಿಟಿಯ ಲೆಕ್ಕ-ಪತ್ರ ನೋಡಿಕೊಂಡು ಹಿಂದಿನಂತೆ ಈ ರಕಮಿನ ಬಗ್ಗೆ ನಿರ್ಣಯಿಸಬೇಕೆಂದು ಗೊತ್ತಾಯಿತು (೫) ಡಾ। ರಾಮನಾಯ್ಕರ ಲೆಕ್ಕದಲ್ಲಿ ರಿಲೀಫ ಕೆಲಸದ ಬಗ್ಗೆ ಹಾವೇರಿಗೆ ಹೋಗಿ ಬಂದ ಖರ್ಚೆಂದು ರೂ ೭ ಖರ್ಚು ಬಿದ್ದಿದೆ ಆದರೆ ರಿಲೀಫ ಕಾರ್ಯದ ಬಗ್ಗೆ ಪ್ರತ್ಯೇಕ ಕಮಿಟಿ, ಪ್ರತ್ಯೇಕ ನಿಧಿಗಳಿರುವದರಿಂದ ಈ ಖರ್ಚು ಅವರು ಆ ನಿಧಿಯಿಂದ ಪಡೆಯಬಹುದಾಗಿ ನಿಕಾಲೆಯಾಯಿತು (೬) ರಾಮನಾಯ್ಕರು ಕಳೆದ ಮುಂಬಯಿ ಎಸೆಂಬ್ಲಿಯ ಚುನಾವಣೆಯ ಬಗ್ಗೆಂತ ರೂ ೯॥ ಖರ್ಚು ಬರೆದಿದ್ದಾರೆ ಆದರೆ ಈ ಚುನಾವಣೆಯ ವೆಚ್ಚವನ್ನು ಕಾಂಗ್ರೆಸ ಹುರಿಯಾಳುಗಳು ಪೂರ್ಣ ಜುಕ್ತಾ ಮಾಡಿದ್ದಾರೆ, ಅದು ಡಾ। ಶಾಮರಾಯರ ಹತ್ತರ ಮುಟ್ಟಿದೆ, ಡಾ। ರಾಮನಾಯ್ಕರು ಅದನ್ನು ಶಾಮರಾಯರಿಂದ ಪಡೆಕೊಳ್ಳಬೇಕು; ಕಾಂಗ್ರೆಸ ಕಮಿಟಿಯ ಲೆಕ್ಕಕ್ಕೆ ಖರ್ಚು ಬರೆಯಲಾಗದು, ಶಾಮರಾವ ರಾಮನಾಯ್ಕರ ಖಾಸಗಿ ಲೇವಾ-ದೇವಿ ಏನೇ ಇದ್ದರೂ, ಸಾರ್ವಜನಿಕ ಕಾರ್ಯಕರ್ತರೆಂಬ ನಾತೆಯಿ ತಮ್ಮ ಕಡೆ ಬಂದ ಹಣವನ್ನು ಶಾಮರಾಯರು ಖಾಸಗಿ ಲೇವಾದೇವಿಯ ಬಗ್ಗೆ ಮುರಕೊಳ್ಳದೆ ಬೇಖು ಕೊಟ್ಟ ಅಧಿಕಾರಿಗೆ ಮುಟ್ಟಿಸುವದು ಅವರ ಕರ್ತವ್ಯವೆಂದು ತೀರ್ಮಾನಿಸಲಾಯಿತು (೭) ೧೯೩೭ರಲ್ಲಿ ಡಾ। ಶಾಮರಾಯರ ಕ್ರಮಬದ್ಧ ಕಮಿಟಿ ಇದ್ದಾಗಲೂ ಡಾ। ರಾಮನಾಯ್ಕರು ಕಮಿಟಿಯ ಅನುಮತಿಯಿಲ್ಲದೆ ತಮ್ಮ ಸ್ವಂತ ಜವಾಬದಾರಿಯ ಮೇಲೆ ಕಾಂಗ್ರೆಸ ಕೆಲಸಕ್ಕೆ ತಮ್ಮ ಕೈಯಲ್ಲಿದ್ದ ಹಣದೊಳಗಿಂದ ರೂ ೬೭ ಖರ್ಚು ಮಾಡಿದ್ದು ಅನಧಿಕೃತವೆಂದು ಕಮಿಟಿಯ ಅಭಿಪ್ರಾಯವಾಯಿತು ಆದರೆ ಆ ಕಾಲದ ಅನವಸ್ಥೆಗೆ ಪ್ರಾಂ। ಕಾಂ। ಕಮಿಟಿಯವರ ಅನಿಶ್ಚಿತ ಧೋರಣವು ಕೆಲಮಟ್ಟಿಗೆ ಕಾರಣವೆಂದು ಕಂಡು ಬಂದದ್ದರಿಂದ ರಾಮನಾಯ್ಕರ ಖರ್ಚು ಆಕ್ಷೇಪಿಸುವ ಅಗ್ರಹ ಕಮಿಟಿಯವರು ಮಾಡಲಿಲ್ಲ (೮) ಡಾ। ರಾಮನಾಯ್ಕರಿಗೂ ಕೋಶಾಧ್ಯಕ್ಷ ಡಾ। ಘಾತವಾಡೇಕರರಿಗೂ ಕಾಂಗ್ರೆಸ ಹಣದ ಬಾಬತ್ತು ರೂ. ೩೫ರ ಲೇವಾ-ದೇವಿಯ ಬಗ್ಗೆ ಉಂಟಾದ ಮತಭೇದದ ವಿಷಯ ವಿಚಾರ ಮಾಡಲು ಅಂಕೋಲಾ ತಾಲೂಕ ಕಮಿಟಿಯವರು ಪ್ರತ್ಯೇಕ ಕಮಿಟಿ ನೇಮಿಸಿರುವದರಿಂದ ಆ ಸಮಿತಿಯ ನಿಕಾಲೆ ತಿಳಿಯುವ ವರೆಗೆ ಈ ವಿಷಯದ ವಿಚಾರ ತಹಕೂಬ ಇಡಬೇಕೆಂದು ತೀರ್ಮಾನವಾಯಿತು

ಸಿದ್ದಾಪುರ— ಕಳೆದ ಸಪ್ಟಂಬರ ತಿಂಗಳಲ್ಲಾದ ಹಿಂದೀ ಪರೀಕ್ಷೆಗಳಿಗೆ ಇಲ್ಲಿಯ ರಾಷ್ಟ್ರಸೇವಾ ಸಂಘದ ಶಾಲೆಯೊಳಗಿಂದ ೧೩ ವಿದ್ಯಾರ್ಥಿಗಳು ಕುಳಿತಿದ್ದರು ಅವರಲ್ಲಿ ಮೂವರು ೧ನೇ ವರ್ಗದಲ್ಲೂ ೮ ಜನರು ೨ನೇ ವರ್ಗದಲ್ಲೂ ಉತ್ತೀರ್ಣರಾಗಿರುತ್ತಾರೆ ಉತ್ತೀರ್ಣರಾದವರಲ್ಲಿ ಒಬ್ಬಳು ಹೆಣ್ಣುಮಗಳಿರುತ್ತಾಳೆ ಮುಂದಿನ ಪರೀಕ್ಷೆಗೆ ೩೦-೩೫ ವಿದ್ಯಾರ್ಥಿಗಳಿಗೆ ತಯಾರಿಸಬೇಕೆಂದು ಶಾಲೆಯವರ ಪ್ರಯತ್ನಗಳು ನಡೆದಿವೆ

ಅಂಕೋಲಾ— ಕಳೆದ ತಾ ೬ನೇಗೆ ಶ್ರೀ ವೆಂಕಟರಮಣ ದೇವರ ಗುಡಿಯಲ್ಲಿ ಮದ್ಯಪಾನ ಪ್ರತಿಬಂಧಕ ಸಮಿತಿಯ ಸಾಧಾರಣ ಸಭೆಯಾಗಿ ಹೊಸ ಕಾರ್ಯಕಾರಿ ಮಂಡಳದ ಚುನಾವಣೆಯಾಯಿತು. ಡಾ। ರಾಮರಾವ ಶೆಣವಿಯವರು ಅಧ್ಯಕ್ಷರು, ಡಾ। ಗಣಪತಿ ಕಾಮತರವರು ಕೋಶಪಾಲಕರು, ಡಾ। ಹರಿ ಜೈ ಮತ್ತು ಸುಬ್ರಾಯ ನಾಡಕರ್ಣಿ ಇವರು ಜತೆ-ಕಾರ್ಯದರ್ಶಿಗಳು. ಇವರಲ್ಲದೆ ಬೇರೆ ಬೇರೆ ಸಮಾಜದ ೫ ಸಾಮಾನ್ಯ ಸದಸ್ಯರೂ ಆರಿಸಲ್ಪಟ್ಟಿದ್ದಾರೆ

ಕಳೆದ ಸಪ್ಟಂಬರ ತಿಂಗಳಲ್ಲಾದ ಹಿಂದೀ ಪ್ರಥಮಾ ಪರೀಕ್ಷೆಗೆ ಇಲ್ಲಿಂದ ೨೬ ವಿದ್ಯಾರ್ಥಿಗಳು ಕೂತಿದ್ದರು, ಅವರಲ್ಲಿ ೮ ಜನರು ೧ನೇ ವರ್ಗದಲ್ಲೂ, ೧೫ ಜನರು ೨ನೇ ವರ್ಗದಲ್ಲೂ ತೇರ್ಗಡೆಯಾಗಿದ್ದಾರೆ ಮಧ್ಯಮಾ ಪರೀಕ್ಷೆಗೆ ಕೂತ ೧೧ ವಿದ್ಯಾರ್ಥಿಗಳಲ್ಲಿ ೮ ಮಂದಿ ಉತ್ತೀರ್ಣರಾಗಿರುವರು

ಕಾರವಾರ ಹುಬ್ಬಳ್ಳಿ ಮಾರ್ಗದೊಳಗಿನ ಸಂಕಗಳ ಬಗ್ಗೆ, ರಸ್ತೆಯ ನಾದುರುಸ್ತಿಯ ಬಗ್ಗೆ ಶ್ರೀ। ಗೋಪಿಯವರು ಕಳೆದ ಸಾರೆ ಮುಂಬಯಿ ಎಸೆಂಬ್ಲಿಯಲ್ಲಿ ಪ್ರಶ್ನೆ ಕೇಳಿದ್ದರು ಅದಕ್ಕೆ ಸರಕಾರದಿಂದ ಈ ಕೆಳಗಿನಂತೆ ಉತ್ತರ ದೊರೆಯಿತು.— 'ಸಂಕ ಸುರಕ್ಷಿತವಿಲ್ಲ' ಬಂಡಿಗಳನ್ನು ತೀರ ಮೆಲ್ಲಗೆ ನಡಿಸಿರಿ" ಎಂದು ಪಾಟಿ ಹಚ್ಚಿದ ಸಂಕಗಳು ೬ ಇವೆ. ಇವು ಕಾರವಾರದಿಂದ ಅನುಕ್ರಮವಾಗಿ ೩೬, ೩೯, ೪೪, ೬೧, ೭೩, ೭೪ ಮೈಲುಗಳ ಮೇಲಿವೆ. ೧೯೩೫-೧೯೩೬ನೇ ಸಾಲಿನಿಂದ ಈ ಪಾಟಿಗಳಿವೆ. ಕಾರವಾರ ಮತ್ತು ಹುಬ್ಬಳ್ಳಿ-ಬೆಳಗಾಂವಿಗಳನ್ನು ಕೂಡಿಸಿ ತರುವ ಮಹತ್ವದ ಮಾರ್ಗ ಇದೊಂದೇ ಎಂದು ಸರಕಾರಕ್ಕೆ ಗೊತ್ತಿದೆ ಈ ರಸ್ತೆಯ ಮೇಲಿನ ಸಂಕ ಮುಂತಾದವುಗಳು ಕೆಟ್ಟುಹೋದ ಸಂಗತಿಯನ್ನು ಪತ್ರಿಕೆಗಳೂ ಎಸೆಂಬ್ಲಿಯ ಸದಸ್ಯರೂ ಸಂಬಂಧಪಟ್ಟ ಇಲಾಖೆಯವರ ಲಕ್ಷಕ್ಕೆ

[ಪುರವಣಿ ನೋಡಿರಿ]

ಜಾಹೀರ ನೋಟೀಸು.

ಶಿರೂರ ಮುಕುಂದ ನಾರಾಯಣ ಪ್ರಭು ಸಾ। ಶಿರೂರ ತಾಲೂಕ ಅಂಕೋಲಾ ಈತನು ಈ ಮೂಲಕ ಯಾವತ್ತು ಜನರಿಗೆ ಜಾಹೀರ ಮಾಡುವದೇನೆಂದರೆ :—

ಕಾನಡಾ ಜಿಲ್ಲಾ ಭಟಕಳ ಪೇಟಾ ಶಿರಾಲಿ ಗ್ರಾಮದ ಸರ್ವೇ ನಂಬರ ೪೪೪ ಕ್ಷೇತ್ರ (ಖರಾಬ ಸಹಿತ) ಎಕರೆ ೪—೩೩—೦ ಆಕಾರ ರೂ. ೩೧—೧೧—೦ ಈ ಸ್ಥಳವು ಗ್ರಾಮರೆಕಾರ್ಡನಲ್ಲಿ ಶ್ರೀನಿವಾಸ ನಾರಾಯಣ ಪ್ರಭು ನವಾರಿ ಸಾ॥ ಭಟಕಳ ಇವರ ಖಾತೆಯಲ್ಲಿರುತ್ತಿದ್ದಾಗ್ಯೂ ಅದರ ನಿಜವಾದ ಮಾಲ್ಕಿ ಹಕ್ಕು ನಮ್ಮ ಕುಟುಂಬದ್ದಾಗಿರುತ್ತದೆ ಸದರಿ ಸ್ಥಳದ ಮೂಲಗೇಣಿ ಹಕ್ಕನ್ನು ನಮ್ಮ ಹಿರಿಯರು ಕೊಂಡುಕೊಂಡ ಮೇಲೆ ಅದರ ಮಾಲ್ಕಿ ಹಕ್ಕನ್ನು ಸಹ ನಮ್ಮ ಬಗ್ಗೆ ಕೊಂಡುಕೊಳ್ಳುವರೆ ಸದರಿ ಶ್ರೀನಿವಾಸ ಪ್ರಭುರವರ ಅಣ್ಣ ಹಾಗೂ ಅವಿಭಕ್ತ ಕುಟುಂಬದ ಆ ಕಾಲದ ಮ್ಯಾನೇಜರರಿದ್ದ ದಾಸಾ ನಾರಾಯಣ ಪ್ರಭುರವರಿಗೆ ಹೇಳಿ ಆ ಬಗ್ಗೆ ಹಣ ಸಹ ಪೂರೈಸಿದಂತೆ, ಸದರಿ ದಾಸ ಪ್ರಭುರವರು ೧೯೦೨ನೇ ಇಸವಿ ನವಂಬರದಲ್ಲಿ ೩ ಮತ್ತು ೧೯೦೪ರಲ್ಲಿ ೩ ಹೀಗೆ ೩ ಮಾಲ್ಕಿ ಹಕ್ಕನ್ನು ನಮ್ಮ ಬಗ್ಗ ನಮ್ಮ ಬಿನಾಮಿದಾರರಾಗಿ ಕ್ರಯಕ್ಕೆ ಪಡಕೊಂಡಿದ್ದಾಗಿರುತ್ತದೆ. ಇನ್ನುಳಿದ ೩ ಮಾಲ್ಕಿ ಹಕ್ಕನ್ನು ಕೊಂಡುಕೊಳ್ಳುವರೆ ನಮ್ಮ ಹಿರಿಯರು ಸದರಿ ದಾಸ ಪ್ರಭುರಿಗೆ ಹಣ ಪೂರೈಸಿದ್ದುಂಟು ಈ ಕಡೀ ಸ್ಥಳ ರೆಕಾರ್ಡಿನಲ್ಲಿ ನಮಗೆ ಮೂಲಗೇಣಿಗಿರುತ್ತದೆಂದು ತೋರುತ್ತಿದ್ದಾಗ್ಯೂ ನಾವು ಆ ಸ್ಥಳವನ್ನು ಮಾಲೀಕರಂತೆ ಅನುಭವಿಸುತ್ತಾ ಬಂದಿರುತ್ತೇವೆ ಹೊರತು ದಾಸಪ್ರಭುರಿಗಾಗಲಿ ಅವರ ತರುವಾಯ ಕಬಜೇದಾರರಾದ ಶ್ರೀನಿವಾಸ ನಾರಾಯಣ ಪ್ರಭುರಿಗಾಗಲಿ ಅವರ ಕುಟುಂಬದವರಿಗಾಗಲಿ ನಾವು ಎಂದೂ ಗೇಣಿ ಯಾ ಉತ್ಪನ್ನ ಕೊಟ್ಟಿದ್ದಿರುವದಿಲ್ಲ. ಅವರಿಗೆ ಈ ಸ್ಥಳದಲ್ಲಿ ಏನೂ ಹಕ್ಕು ಇದ್ದಿಲ್ಲ ಮತ್ತು ಇರುವದಿಲ್ಲ. ಕಾರಣ ಯಾರೂ ಈ ಸ್ಥಳದಲ್ಲಿ ಸದರಿ ಶ್ರೀನಿವಾಸ ಪ್ರಭುರವರ ಮಕ್ಕಳಿಗಾಗಲಿ ಕುಟುಂಬದವರಿಗಾಗಲಿ ಹಕ್ಕುಂಟೆಂದು ಭಾವಿಸಿ, ಅವರ ಕಡೆಯಿಂದ ಇಲ್ಲವೆ ಪರವಾಗಿ ಕ್ರಯ, ಅಡವು, ದಾನ ವಗೈರೆ ರೀತಿಯಿಂದ ಹಕ್ಕು ಮಾಡಿಕೊಂಡಲ್ಲಿ ಅಂಥ ಪರಾಧೀನತೆಯಿಂದ ನಮ್ಮ ಹಕ್ಕಿಗೆ ಯಾವದೇ ತರದಿಂದ ಬಾಧೆ ಬರಲಾರದು. ಇಂಥ ಪರಾಧೀನತೆ ಮಾಡಿಕೊಳ್ಳುವ ಜನರು ನಮ್ಮ ಮೇಲೆ ಗೇಣಿಯ ಬಗ್ಗೆಂತ ಅಥವಾ ಬೇರೆ ಯಾವದೇ ಕಾರಣದಿಂದ ದಾವೆ ವಗೈರೆ ಮಾಡಿದ್ದಲ್ಲಿ ನಮ್ಮ ಖರ್ಚು ಅವರು ತೆರಲಿಕ್ಕೆ ಜಬಾಬದಾರರಾದಾರು ಸಾರ್ವಜನಿಕರ ಮಾಹಿತಿ ಬಗ್ಗೆ ಈ ಮುಂಜಾಗ್ರತೆ ಕೊಟ್ಟಿರುತ್ತೇನೆ.

ಕುಮಟಾ, ತಾ ೧೭—೧೧—೩೮.

M. N. Prabhu, Siroorkar.

25,000 ವಿವಿಧ ಶಬ್ದಗಳುಳ್ಳ ' ಹೊಸ ನಿಘಂಟು!!

ಹೊಡನ
ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಷನರಿ.
ಇಂಗ್ಲಿಷ ಕನ್ನಡ

ಬರೆದವರು - ವೈದ್ಯ ಭಾಸ್ಕರ, ಕೆ ಭಾರದ್ವಾಜ ವಿದ್ಯಾಭೂಷಣ. ಮೈಸೂರ ಯುನಿವರ್ಸಿಟಿ ವ್ಹಾಯಿಸ ಚಾನ್ಸಲರರ ಮುನ್ನುಡಿಯುಳ್ಳ, ಸರ್ ಎಮ್ ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ। ಯು ರಾಮರಾಯರು ಹರಸಿದ ಈ ಡಿಕ್ಷನರಿಯು ಇಡೀ ಕರ್ನಾಟಕದಲ್ಲಿ ಹೊಸ ಸಾಹಸ ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕಂಥದ್ದು. ಬೆಲೆ ಕೇವಲ ೨ ರೂ ಟಪಾಲು ಪ್ರತ್ಯೇಕ ಸಿಗುವಸ್ಥಳ - ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ವಿವಿಧ ಸಂಗ್ರಹ.

(೩ನೇ ಪಾನದಿಂದ ಮುಂದುವರಿದುದು)

ಅಂಕೋಲಾ-ಕುಮಟಾ ತಾಲೂಕುಗಳಲ್ಲಿ ನಡೆದ ಮದ್ಯನಿರೋಧನ ಕಾರ್ಯದ ವರದಿ

ಮುಂಬಯಿ ಸರಕಾರವು ಸಪ್ಟಂಬರ ತಿಂಗಳಲ್ಲಿ ಅಂತ್ಯವಾಗುವ ೩ ತಿಂಗಳ ವರದಿಯನ್ನು ಪ್ರಕಟಿಸಿದೆ ಈ ವರದಿಯಲ್ಲಿ ಅಬಕಾರಿ ಇಲಾಖೆಯ ಕಮಿಶನರ ರಾದ ಮಿ| ಎಚ್ ಎಫ್ ನೈಟನವರು ಈ ಪ್ರದೇಶದ ಕುರಿತು ಬರೆಯುವದೇನಂದರೆ — ಉತ್ತರ ಕನ್ನಡ ಜಿಲ್ಲೆಯೊಳಗಿನ ಮದ್ಯನಿರೋಧನ ಪ್ರದೇಶದ ಪರಿಸ್ಥಿತಿ ಭಿನ್ನವಿದೆ ಈ ಪ್ರದೇಶದಲ್ಲಿ ಸರಹದ್ದಿನ ಆಚೆಯ ... ಕುಡಿಯುತ್ತಾರೆ, ಶೇಂದಿ ಕುಡಿಯುವದೇ ಹೆಚ್ಚು ಇವರಿಗ ಗೋವೆ ಸರಹದ್ದಿಯನ್ನು ... ಕಡಿಮೆ ತಕ್ಕಷ್ಟು ಅನುಕೂಲತೆಗಳಿವೆ ಮದ್ಯ ನಿರೋಧನ ಜಾರಿ ಪ್ರದೇಶದ ಜನರು ... ಮೆಯನ್ನು ಉಲ್ಲಂಘಿಸದ ಇವರು ಶೇಂದಿ ಸರಾಬನ್ನು ಅನುನು ಮಾಡುತ್ತಾರೆ ಆ ಬಗ್ಗೆ ತಗಲುವ ಕಷ್ಟಗಳನ್ನು ಇವರು ಸಹಿಸುತ್ತಾರೆ. ಶೇಂದಿ ಸಿಗಲಿಕ್ಕೆ ಅವರಿಗೆ ಈಗ ತೊಂದರೆಯಾದ್ದರಿಂದ ಕೆಲವು ಶೇಂದಿ ... ಗಳು ... ಮದ್ಯನಿರೋಧನ ಪ್ರದೇಶದ ಹೊರಪಾರ್ಶ್ವದಲ್ಲಿರುವ ಅಂಗಡಿಯ ನೆರೆಹೊರೆಯಲ್ಲಿದ್ದವರು ಅಂಗಡಿಗಳಿಗೆ ಹೋಗಿ ಬೇಕಷ್ಟು ಕುಡಿದು, ಬರುವಾಗ ... ಬಾಟ್ಲಿಯನ್ನು ತರುತ್ತಾರೆ. ಬೈಸಿಕಲ್ಲುಗಳ ಮೇಲೆ ಇಟ್ಟು ... ಮದ್ಯದ ಬಾಟ್ಲಿಗಳನ್ನು ತರುವ ಪ್ರಕಾರ ನಡೆದಿತ್ತು ಇದರಿಂದ ... ಸ್ಟೇಬಲರು ಬೈಸಿಕಲ್ಲಿನ ಮೇಲೆ ಒಬ್ಬರಿಗಿಂತ ಹೆಚ್ಚು ಜನರು ಹತ್ತಬಾರದೆಂದು ವಿಧಿಸಿದ್ದರೆ ... ೨೦ ಮೈಲು ದೂರವಿರುವ ಅಂಗಡಿಗೆ ಹೋಗಿ-ಬರುವ ಸಲುವಾಗಿ ಒಂದು ಬೈಸಿಕಲ್ಲು ಕೊಂಡುಕೊಂಡಿದ್ದಾನೆಂದು ತಿಳಿಯುತ್ತದೆ ಆದರೆ ಇಷ್ಟು ಕಷ್ಟಪಡುವ ಜನರು ... ಒಡಗಿದೆ ... ಹಳದೀಪುರದಲ್ಲಿ ... ಅಂಗಡಿಯು ಇದು ಕುಮಟಾ ಪಟ್ಟಣದಿಂದ ... ಈ ಅಂಗಡಿಯಲ್ಲಿ ... ಇತ್ತು ಜುಲೈ ಸಪ್ಟಂಬರ ಕೊನೆ ತನಕ ೩ ತಿಂಗಳಲ್ಲಿ ... ಗೆಲನು ಸರಾಬು ವಿಕ್ರಿಯಾಗಿತ್ತು ಇದೇ ಅವಧಿಯಲ್ಲಿ ಈ ವರ್ಷ ... ಗೆಲನು ಸರಾಬು ವಿಕ್ರಿಯಾಗಿದೆ ! ಇದಕ್ಕೂ ಮೊದಲಿನ ೩ ತಿಂಗಳುಗಳಲ್ಲಿ, ... ಏಪ್ರಿಲ್‌ದಿಂದ ಜೂನ ವರೆಗಿನ ೩ ತಿಂಗಳುಗಳಲ್ಲಿ ... ಗೆಲನು ಸರಾಬು ವಿಕ್ರಿಯಾಗಿತ್ತು ಕುಮಟಾ ಪಟ್ಟಣ ಮತ್ತು ದಂಡಗುಂಟ ಗ್ರಾಮಗಳೊಳಗಿನ ... ಹಳದೀಪುರ ಅಂಗಡಿಗೆ ಸಿಕ್ಕಿದ್ದರಿಂದ ಇಷ್ಟು ... ಕಾಣ-ಕಾರಣ ಆದವು, ಇದರಿಂದ ಚಿಂತೆಪಡುವ ಕಾರಣವಿಲ್ಲ ಈ ಅಂಗಡಿಯನ್ನು ಮುಂದಿನ ವರ್ಷ ... ಇಲ್ಲವೆ ದೂರ ಒಯ್ಯಬಹುದು ಅನಕ ವರ್ಗ ಕಳ್ಳತನದಿಂದ ಸರಾಯಿ ತರದಂತೆ ಇದರಿಂದು ಪ್ರತಿಬಂಧವಾಗಿದೆ ಈ ೩ ತಿಂಗಳ ಅವಧಿಯಲ್ಲಿ ಅಂದರೆ ಜುಲೈ-ಸಪ್ಟಂಬರ ತಿಂಗಳುಗಳಲ್ಲಿ ಮಳೆಗಾಲವಿದ್ದದರಿಂದ ಗೋವ ಸರಾಯಿ ಆಮದಾಗಲಿಲ್ಲ ಹಿಂದಿನ ದ ... ತೀರಿತ್ತು ಆದರಿಂದ ಹೊರಪ್ರದೇಶದ ಅಂಗಡಿಗಳಲ್ಲಿ ಹೆಚ್ಚಿನ ವಿಕ್ರಿಯಾಯಿತು ದಂಡೆಗುಂಟ ಇರುವ ಕೆಲ ಹಿಂಡಗುಡುಕರು ತಿಯ್ಯವರು ಶೇಂದಿ ಕುಡಿದನಕ ಕಷ್ಟದ ಕೆಲಸ ಮಾಡಲಾಗುವದಿಲ್ಲವಾಗಿ ಮಾಡುತ್ತಾರೆ ಶರಾಬಿನ ಬಗ್ಗೆ ತಹದ ಪ್ರಯೋಗ ನಡೆದಿದೆ ಆದರೆ ಆದರಿಂದ ಸಕ್ಕಷ್ಟು ಅನುಕೂಲ ವದಿಲ್ಲವಂತೆ ! ಶೇಂದಿ-ಖರ್ಜೂರ ಕಡಿಮೆಯಾದ್ದರಿಂದ ಕೆಲಮಟ್ಟಿಗೆ ಜನರ ಸ್ಥಿತಿ ಸುಧಾರಿಸಿದ ಬೇಕ ಅಂಬಿಗರೂ ಇತರ ಜಾತಿಯವರೂ ಇನ್ನು ಕೆಲಕಾಲದಲ್ಲಿ ಹೊಸ ಪರಿಸ್ಥಿತಿಗೆ ಸರಿಪಡಿಸಿಕೊಳ್ಳುವರು ಆದಾಗ್ಯೂ ಇನ್ನು ಕೆಲವು ಕಾಲದ ತನಕ ಅಬಕಾರಿ ಇಲಾಖೆಯವರು ಬಹಳ ಜಾಗ್ರತೆ ವಹಿಸಬೇಕು ಈ ಪ್ರದೇಶದಲ್ಲಿ ಮಾತ್ರ ಶೇಂದಿ-ಶರಾಬನ್ನು ಕುಡಿಯುವದು ನಿಂತಿದೆ ಕಳ್ಳತನದಿಂದ ಸರಾಯಿ ಮಾಡುವ ಕ್ರಮ ಇಲ್ಲ ಅಫೀಮು ಮತ್ತು ಗಾಂಜಾ ಪರವಾನಿಗಿಗಳು ಅಂತು ೨೬ ಜನರಿಗೆ ಕೊಡಲ್ಪಟ್ಟವೆ ಪರವಾನಿಗೆಗಳಂತೆ ಗಾಂಜಾ-ಅಫೀಮು ಪಡೆಯುವವರ ಸಂಖ್ಯೆ ತೀರ ಕಡಿಮೆ. ಗೋಕರ್ಣ ಮೊದಲಾದ ಸ್ಥಳಗಳಿಗೆ ಬರುವ ಬಾವಾ ಜನರು ತಮಗೆ ಬೇಕಾದಷ್ಟು ಗಾಂಜಾ-ಅಫೀಮನ್ನು ತಮ್ಮೊಡನೆ ತರುತ್ತಿರಬೇಕು ಗಾಂಜಾ-ಗಿಡ ತಯಾರಿಸಿದ್ದೊಂದು ಸಂಗತಿ ಪತ್ತೆಹಚ್ಚಲಾಗಿದೆ. ಜುಲೈ-ಸಪ್ಟಂಬರ ತಿಂಗಳಲ್ಲಿ ಅಬಕಾರಿ ಗುನ್ಹೆಗಳ ಸಂಖ್ಯೆ ಅಂತು ೬. ಅದಕ್ಕೂ ಹಿಂದಿನ ೩ ತಿಂಗಳಲ್ಲಿ ೧೩. ಅಂಕೋಲಾ-ಕುಮಟಾ ಕೊಂಗ್ರೆಸ ಕಮಿಟಿಗಳು ಅಬಕಾರಿ ಇಲಾಖೆಯವರಿಗೆ

ಬುದ್ಧಿವಂತ ಸ್ತ್ರೀಯರಿಗೆ
ಗೊತ್ತೇ ಇದೆ

ಹಮಾಮು ನಿಂಚಿತವಾಗಿಯೂ ಸ್ವದೇಶಿ ಸಾಬೂನು ಇದು ಇಡೀ ಕುಟುಂಬಕ್ಕೆ ಮಿತವ್ಯಯವಾದುದು ಪ್ರತಿಯೊಂದು ಸಾಬೂನು ಗಟ್ಟಿ ... ತೂಗುವದಾದರೂ ಇತರ ಸಾಬೂನುಗಳಿಗಿಂತಲೂ ಪ್ರಿಯವಾದುದಲ್ಲ ಆದ್ದರಿಂದಲೇ ಪ್ರತಿಯೊಬ್ಬರೂ ಈ ಸಾಬೂನನ್ನೇ ಉಪಯೋಗಿಸುವರು ನಾವು ಖರ್ಚು ಮಾಡಿದ ಹಣಕ್ಕಿಂತಲೂ ಹೆಚ್ಚಾಗಿ ತೃಪ್ತಿಯು ಸ್ಥಿರಪಡಿಸುವದು.

ಉಪಯೋಗಿಸಿ ನೋಡಿರಿ !

ನಿಮ್ಮ ಸ್ನಾನಕ್ಕೆ ಅನುಕೂಲವಾದ ಸಾಬೂನು

ದಿ ತಾತಾ ಆಯಿಲ್ ಮಿಲ್ಸ್ ಕಂಪನಿ, ಲಿಮಿಟೆಡ್,
ಬಾಂಬೇ ಹೌಸ್ - ಬೊಂಬಾಯಿ
ದಯವಿಟ್ಟು ನಿಮ್ಮ ಸಾಬೂನುಗಳನ್ನು ನನಗೆ ಉಚಿತವಾಗಿ ಕಳುಹಿಸಿರಿ ಟಪಾಲು ಖರ್ಚಿಗಾಗಿ ಒಂದು ಆಣೆಯ ಸ್ಟಾಂಪನ್ನು ಕಳುಹಿಸುವೆನು
ಹೆಸರು
ವಿಳಾಸ
(ವಿಳಾಸ ಸ್ಪಷ್ಟವಾಗಿ ಬರೆಯಿರಿ K N 3)

ಪ್ರಾಣಿಗಳ ಕೊಬ್ಬು ಇದರಲ್ಲಿಲ್ಲ.
ಟಾಂಕೋ ಸೇಲ್ಸ್ ಡಿಪಾರ್ಟಮೆಂಟು,
೧, ಸೆಂಟ್ರಲ್ ಸ್ಟ್ರೀಟ, ಬೆಂಗಳೂರು.
ದಿ ತಾತಾ ಆಯಿಲ್ ಮಿಲ್ಸ್ ಕಂ. ಲಿ
ಇವರಿಂದ ತಯಾರಾದುದು
ತಾತಾಪುರಮ್ ಮತ್ತು ಬೊಂಬಾಯಿ
ಜಿ.ಜೆ.ರವರ ತಯಾರಿಕೆ

ಒಳ್ಳೇ ಸಹಾಯ ಮಾಡುತ್ತಿವೆ. ಸುದ್ದಿ ಕೊಡುತ್ತಿವೆ, ಅಪರಾಧಗಳನ್ನು ಪತ್ತೆ ಹಚ್ಚಿಕೊಡುತ್ತಿವೆ, ಗ್ರಾಮಗಳಲ್ಲಿ ಪ್ರಚಾರಕಾರ್ಯವನ್ನು ನಡಿಸುತ್ತಿವೆ. ಆದಾಗ್ಯೂ ಮೀನು ಹಿಡಿಯುವ ಜಾತಿಯವರಿಗೂ ದಂಡೆಗಳ ಮೇಲೆ ವಾಸ ಮಾಡುವ ಇತರರಿಗೂ ಸ್ಥಿರವಾಗಿ ಶಿಕ್ಷಣ ಕೊಡುವ ಪ್ರಯತ್ನ ನಡೆಯಬೇಕು. ಅಂದರೆ ಭರದಿಂದ ಪ್ರಗತಿಯಾಗುವದು. ಜನರ ಏದತ್ತು ಸುಧಾರಣೆಯ ಕುರಿತು ಇದೀಗ ವರದಿ ಕೊಡಲು ಸಾಧ್ಯವಿಲ್ಲ. ಆದರೆ, ಮುಂದಿನ ೩ ತಿಂಗಳುಗಳಲ್ಲಿ ಈ ಕುರಿತು ಉಲ್ಲೇಖ ಮಾಡಬಹುದು. ಅಬಕಾರಿ ಅಧಿಕಾರಿಗಳು ಜನರೊಡನೆ ಸಹಕಾರದಿಂದ ನಡೆದಿದ್ದಾರೆ. ಮದ್ಯ-ನಿರೋಧನ ಪ್ರದೇಶದಲ್ಲಿ ನಾಮಿಸಿದ ಸಿಬಂದಿ ತೀರ ಚಿಕ್ಕದು. ಆದಾಗ್ಯೂ ಅವರು ಪತ್ತೆ ಹಚ್ಚಿದ ಅಪರಾಧಗಳ ಮೇಲಿಂದ ಅವರು ದಕ್ಷತೆಯಿಂದ ತಮ್ಮ ಕೆಲಸ ನಡಿಸುತ್ತಾರೆಂದು ತಿಳಿಯುವಂತಿದೆ. ಇನ್ನೂ ನಿರ್ಬಂಧವಿಡಬೇಕಾದರೆ ಸಿಬಂದಿಯನ್ನು ಹೆಚ್ಚಿಸಬೇಕಾದೀತು. ಕಾಯಿದೆಯನ್ನು ಉಲ್ಲಂಘಿಸುವ ಉದಾಹರಣೆಗಳು ಪ್ರಯೋಗದ ವಿಶಾಲಸ್ವರೂಪದ ವಿಚಾರ ಮಾಡಿದರೆ ತೀರ ಅಲ್ಪವೇ ಸೈ! ಈ ಪ್ರಯೋಗದಿಂದ ಸಂಪೂರ್ಣವಾಗಿ ಮದ್ಯಪಾನೋಚ್ಚಾಟಣ ಮಾಡಲು ತಕ್ಕ ಪೂರ್ವಸಿದ್ಧತೆ ತಯಾರಾಗುತ್ತದೆಂದು ಹೇಳಬಹುದು ಇತ್ಯಾದಿ ಈ ವರದಿಯ ತಾರೀಖು ೧೭—೧೦—೧೯೩೯.

* * *

ಗೇರಸಪ್ಪೆ ಜೋಗಿನ ವಿದ್ಯುತ್-ಕಾರಖಾನೆ

ಶರಾವತಿ ನದಿಯ ಉಗಮ ಮೈಸೂರು ಸಂಸ್ಥಾನಕ್ಕೆ ಸೇರಿದ ಶಿವಮೊಗ್ಗಾ ಜಿಲ್ಲೆಯ ಅಂಬುತೀರ್ಥದಲ್ಲಿ. ಶ್ರೀ ರಾಮದೇವರ ಬಾಣದಿಂದ ಈ ತೀರ್ಥದ ಉತ್ಪತ್ತಿಯಾಯಿತೆಂದು ಹೇಳುತ್ತಾರೆ. ಎಡ ಪಾರ್ಶ್ವದಿಂದ ಹರಿದ್ರಾವತಿ, ಬಲ ಪಾರ್ಶ್ವದಿಂದ ಎಣ್ಣೆಹೊಳೆ ಹೀಗೆ ಎರಡು ಹೊಳೆಗಳ ಸಂಗಮದಿಂದ ಶರಾವತಿ ಹೊಳೆ ನಮ್ಮ ಜಿಲ್ಲೆ ಮತ್ತು ಮೈಸೂರು ಪ್ರಾಂತದ ಗಡಿಸೀಮೆಯಲ್ಲಿ ಬಂದು ಹರಿಯುತ್ತದೆ ಮತ್ತು ಅಲ್ಲಿಂದ ೧೦೦೦ ಅಡಿ ತಗ್ಗಿನಲ್ಲಿ ಹಾರುತ್ತದೆ. ನದಿಯ ಪಾತ್ರ ಸರಾಸರಿ || ಮೈಲು ವ್ಯಾಪಿಸಿಕೊಂಡಿದ್ದು ೪ ಭಾಗಗಳಿಂದ ನೀರು ಕೆಳಗೆ ತಗ್ಗಿನಲ್ಲಿ ಧುಮುಕುತ್ತದೆ. ಇದೇ ಗೇರಸಪ್ಪೆಯ ತಡಸಲು. ನಾಲ್ಕು ವಿಭಾಗಗಳಿಂದುಂಟಾಗುವ ನಾಲ್ಕು ತಡಸಲುಗಳಿಗೆ ಬೇರೆ ಬೇರೆ ಹೆಸರುಗಳಿವೆ. ಅವುಗಳ ಲಕ್ಷಣಗಳ ಮೇಲಿಂದ ಆ ಹೆಸರು ಬಿದ್ದಿವೆ. ಒಂದು ತಡಸಲಿನಲ್ಲಿ ಅರಸರ ಗೌರವ ಕಾಣುತ್ತದಂತೆ, ಆದರಿಂದ ಅದಕ್ಕೆ 'ರಾಜಾ ತಡಸಲು' ಎಂದು ಹೆಸರು, ಇನ್ನೊಂದು ತಡಸಲು ಗರ್ಜಿಸುತ್ತದೆ, ಆದರಿಂದ ಅದಕ್ಕೆ 'ಅಬ್ಬರದ ತಡಸಲು' ಎಂದು ಹೆಸರು, ೩ನೇದು ಬಾಣದಂತೆ ವೇಗದಿಂದ ಹಾರಿಕೊಳ್ಳುತ್ತದೆ, ಆದರಿಂದ ಅದಕ್ಕೆ 'ಬಾಣದ ತಡಸಲು' ಎಂದು ಹೆಸರು, ಇನ್ನೊಂದಕ್ಕೆ 'ರಾಣಿ ತಡಸಲು' ಎಂದು ಹೆಸರು. ಈ ತಡಸಲಿನ ನೀರು ಅರಸಿಯ ವೈಭವದಿಂದ, ಸೊಬಗಿನಿಂದ ಕೆಳಹಾರಿಕೊಳ್ಳುತ್ತದಂತೆ. ಈ ತಡಸಲುಗಳ ವರ್ಣನೆಯನ್ನು ಈ ತನಕ ಅನೇಕರು ಅನೇಕ ಪರಿಯಿಂದ ಮಾಡಿದ್ದಾರೆ, ಇನ್ನೂ ತನಕ ಮಾಡುತ್ತಿದ್ದಾರೆ. ಆದಾಗ್ಯೂ ಅವುಗಳ ವರ್ಣನೆ ತೀರಲಿಲ್ಲ. ಇಮ್ಮ ಸೃಷ್ಟಿವೈಭವದ ತಡಸಲಿಗೆ ಕುಂದು ಬರದಂತೆ ವಿದ್ಯುತ್-ಕಾರಖಾನೆಯನ್ನು ಕಟ್ಟಿಸಬೇಕೆಂದು ಯಂತ್ರಶಾಸ್ತ್ರಜ್ಞರು ವಿಚಾರ ಮಾಡಿದ್ದಾರೆ. ಈ ಯೋಜನೆಗೆ ರೂ ೧ ಕೋಟಿ, ೬೦ ಲಕ್ಷ ಈಗ ಖರ್ಚಿಗೆ ಬೇಕು. ಇದು ಹೇರಳ ಖರ್ಚಾದರೂ ಮೈಸೂರು ಸರಕಾರವು ಈ ಖರ್ಚು ಸಹಿಸಲು ಒಡಂಬಡುತ್ತದೆ. ಮೈಸೂರು ಸಂಸ್ಥಾನದೊಳಗಿನ ಯಾವತ್ತು ಗ್ರಾಮಗಳಿಗೆ ವಿದ್ಯುತ್ತನ್ನು ಪೂರೈಸಬೇಕೆಂದು ಮೈಸೂರು ಸರಕಾರದ ಹಿರಿಯಾಸೆ. ಆದದರಿಂದ ಮೈಸೂರು ಸರಕಾರವು ೧೯೧೬ನೇ ಇಸ್ವಿಯಿಂದ ಈ ಯೋಜನೆಯ ಪುರಸ್ಕಾರ ಮಾಡುತ್ತಿದೆ. ಮಳೆ ಕಡಿಮೆಯಾದರೂ ಕಾರಖಾನೆಗೆ ತಕ್ಕಷ್ಟು ನೀರಿನ ಪೂರೈಕೆಯಾಗುವಂತೆ ಸ್ಥಳ ಶೋಧಿಸಿ ತೆಗೆದಿದೆ. ಎಷ್ಟು ಕಡಿಮೆ ಮಳೆ ಬಿದ್ದಾಗ್ಯೂ ೧ ಲಕ್ಷ, ೨೫ ಸಾವಿರ ಅಶ್ವಬಲದ ವಿದ್ಯುತ್ ತಯಾರಿಸಲಿಕ್ಕೆ ಆವಶ್ಯವುಳ್ಳ ನೀರಿನ ನಾಲ್ಮಡಿ ನೀರು ಸಹಜ ದೊರೆಯುವ ಅನುಕೂಲತೆಯಿದೆ. ನೀರಿಗಾಗಿ ಬಹಳ ಪೇಚಾಡುವ ಪ್ರಸಂಗವಿಲ್ಲ. ಮೊಟ್ಟಮೊದಲು ೨೪ ಸಾವಿರ ಅಶ್ವಬಲದ ವಿದ್ಯುತ್ತನ್ನು ತಯಾರಿಸುವ ಯೋಜನೆಯಾಗಿದೆ. ಆ ಮೇಲೆ ಅದನ್ನು ಇಮ್ಮಡಿ, ಮುಮ್ಮಡಿ, ನಾಲ್ಮಡಿ ತನಕ ಏರಿಸಬೇಕೆಂದು ಗೊತ್ತಾಗಿದೆ. ಸುತ್ತುಮುತ್ತಲಿನ ಸರಾಸರಿ ೭೦೦ ಮೈಲು ಪ್ರದೇಶದ ಮೇಲೆ ಬೀಳುವ ಮಳೆ-ನೀರು ಈ ನದಿಗೆ ದೊರಕುತ್ತದೆ. ಮಳೆಯ ಮಾನ ಪ್ರತಿವರ್ಷಕ್ಕೆ ೧೪೯|| ಇಂಚು. ಈ ನದಿಯ ವೇಗ ಮಳೆಗಾಲದಲ್ಲಿ ೧ ಲಕ್ಷ ೪೦ ಸಾವಿರ ಕುಸೆಕು. ಅಬಂಡ ಬೇಸಿಗೆಯಲ್ಲಿ ೪ ಕುಸೆಕು. ಆದಾಗ್ಯೂ ನೀರಿಗೆ ಕೊರತೆಯಿಲ್ಲ. ಸರಾಸರಿ ೨| ಖರ್ವ ಘನಫೂಟು ನೀರನ್ನು ಸಂಗ್ರಹ ಮಾಡಿಟ್ಟುಕೊಂಡು ವಿದ್ಯುತ್-ಕಾರಖಾನೆ ನಡಿಸಬಹುದು. ಮೊಟ್ಟಮೊದಲು ತಡಸಲಿನ ಭಾಗದಿಂದ ೩ ಮೈಲು ಒಳಪ್ರದೇಶದಲ್ಲಿ ೪| ಅಬ್ಜ ಘನಫೂಟು ನೀರನ್ನು ಒಟ್ಟು ಮಾಡಿ ವಿದ್ಯುತ್ತು ನಿರ್ಮಿಸಲ್ಪಡುವದು. ಇದಕ್ಕಾಗಿ ನದಿಗೆ ಒಡ್ಡು ಹಾಕಿ, ಆ ಒಡ್ಡಿಗೆ ೨೦ ಫೂಟು ಎತ್ತರವಾದ ಬಾಗಿಲುಗಳು ಕಟ್ಟಿಸಲ್ಪಡುವವು. ಇದರಿಂದ ಕ್ರಮವಾಗಿ ೨೪ ಸಾವಿರ ಅಶ್ವಬಲದ ವಿದ್ಯುತ್ತನ್ನು ನಿರ್ಮಿಸಬಹುದು. ಇದೇ ಕಟ್ಟೋಣದಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿದರೆ ನೀರಿನ ಸಂಚಯವನ್ನು ಇಮ್ಮಡಿ ಮಾಡಿ ವಿದ್ಯುತ್ತನ್ನು ಇಮ್ಮಡಿ ಮಾಡಬರುತ್ತದೆ. ಇದಲ್ಲದೆ ತಡಸಲಿನ ಕೆಳಗೆ ೨ ಮೈಲು ದೂರ ಒಂದು ಕಾರಖಾನೆ ಕಟ್ಟಲ್ಪಡುವದು, ಮತ್ತು ಈ ಕಾರಖಾನೆಗೂ ಮೈಸೂರಿನೊಳಗಿನ ಶಿವಸಮುದ್ರ ಮತ್ತು ಶಿಂಸಪುರಗಳೊಳಗಿನ ಕಾರಖಾನೆಗಳಿಗೆ ಜೋಡಿಸಿ ಸರಾಸರಿ ೫೦೦ ಪಟ್ಟಣ ಗ್ರಾಮಗಳಿಗೆ ವಿದ್ಯುತ್ ಪೂರೈಸುವ ಏರ್ಪಾಟಾಗುವದು. ೧೯೪೦ನೇ ಇಸ್ವಿಯೊಳಗೆ ಈ ಏರ್ಪಾಟಾಗಬೇಕೆಂದು ಮೈಸೂರು ಸರಕಾರದ ಸಂಕಲ್ಪವಾಗಿದೆ. ೨೬೦ ಮೈಲು ದೂರವಿರುವ ಪ್ರದೇಶಗಳಿಗೆ ಸರಾಸರಿ ೧ ಲಕ್ಷ ಅಶ್ವಬಲದ ವಿದ್ಯುತ್ತನ್ನು ಮೈಸೂರು ಸರಕಾರವು ಈ ಮೂರೂ ಯೋಜನೆಗಳಿಂದ ಪೂರೈಸುವದು. ಗ್ರಾಮ ಎಷ್ಟೇ ಅಂತರದಲ್ಲಿರಲಿ, ಎಲ್ಲರಿಗೂ ಒಂದೇ ದರದಿಂದ, ಅದೂ ಸಹ ಅಗ್ಗವಾಗಿ ವಿದ್ಯುತ್ತನ್ನು ಪೂರೈಸಬೇಕೆಂದು ಮೈಸೂರು ಸರಕಾರವು ಅಟ್ಟಹಾಸ ಹಿಡಿದು ಈ ಯೋಜನೆಯನ್ನು ಕೈಕೊಂಡಿದೆ. ಮುಂಬಯಿ ಸರಕಾರವೂ ಸಹಕಾರ ಮಾಡುತ್ತಿದ್ದದರಿಂದ ಅಲ್ಲಿಯ ವಿದ್ಯುತ್ ಕಾರಖಾನೆಯವರಿಂದ ನಮ್ಮ ಜಿಲ್ಲೆಯವರಿಗೂ ಬಹುಮಟ್ಟಿಗೆ ಪ್ರಯೋಜನ ದೊರೆಯಬಹುದೆಂದು ಒಂದು ಆಶೆ.

* * *

ಮೈಸೂರ ಸಂಸ್ಥಾನದ ತಲಕಾಡಿನಲ್ಲಿ ಅಪೂರ್ವ ಪಂಚಲಿಂಗ ದರ್ಶನ ಯೋಗ.

ಈ ಹೊತ್ತು ಮೈಸೂರು ಸಂಸ್ಥಾನದ ತಲಕಾಡದಲ್ಲಿ ಅಪೂರ್ವ ಜಾತ್ರೆ! ಪಂಚಲಿಂಗ ದರ್ಶನ ಯೋಗ! ಈ ಯೋಗ ಒಂದು ಶತಮಾನದಲ್ಲಿ ೩ ಬಾರಿ ಬರುತ್ತದಂತೆ. ಕಾರ್ತಿಕ ವದ್ಯ ಅಮಾವಾಸ್ಯೆ ಸೋಮವಾರ, ವೃಶ್ಚಿಕ ಮಾಸ, ಕುಂಭ ಗುರು, ಹೀಗೆ ಯೋಗ ಕೂಡಿ ಬಂದಾಗ ೨೪ ತಾಸು ಅವಧಿಯಲ್ಲಿ ಇಲ್ಲಿಯ ಪಂಚಲಿಂಗ ದರ್ಶನ ಮಾಡಿದರೆ ಮಾನವನು ಉದ್ಧಾರ ಹೊಂದುತ್ತಾನೆಂದು ಆಖ್ಯಾಯಿಕೆಯಿದೆ. ತಲಕಾಡ ಇದು ಪುರಾತನ ಕಾಲದಲ್ಲಿ ಹಿಂದು ಅರಸರ ರಾಜಧಾನಿಯಾಗಿತ್ತು. ಕ್ರಿಸ್ತಶಕಪೂರ್ವ ೨ನೇ ಶತಮಾನದಲ್ಲಿ ಗಂಗ ಮನೆತನದ ಹರಿವರ್ಮರವರು ಇಲ್ಲಿ ರಾಜ್ಯವಾಳುತ್ತಿದ್ದರು. ಕ್ರಿಸ್ತಶಕದ ೧೧ನೇ ಶತಮಾನದ ತನಕ ಇವರದೇ ರಾಜ್ಯ. ಆ ಮೇಲೆ ಚೋಳ ಮನೆತನದ ರಾಜರಾಜರು ಹರಿವರ್ಮರವರ ವಂಶಜರಿಗೆ ಸೋಲಿಸಿ ಈ ಪಟ್ಟಣವನ್ನು ಕೈವಶ ಮಾಡಿಕೊಂಡರು ಮತ್ತು ರಾಜರಾಜಪುರವೆಂಬ ಗೌರವಾರ್ಹ ಹೆಸರು ಕೊಟ್ಟು ತಲಕಾಡ ಗ್ರಾಮದಲ್ಲಿ ರಾಜಧಾನಿಯನ್ನಿಟ್ಟರು. ಚೋಳ ರಾಜ್ಯ ೧೦೦ ವರ್ಷ ನಡೆಯಿತು. ಆ ಮೇಲೆ ಹೊಯ್ಸಳ ಮನೆತನದ ವಿಷ್ಣುವರ್ಧನರವರು ಈ ರಾಜ್ಯವನ್ನು ಆಕ್ರಮಿಸಿಕೊಂಡರು. ಇವರ ಕಾರಕೀರ್ದಿಯಲ್ಲಿ ತಲಕಾಡಿನ ಅಭಿವೃದ್ಧಿ ಮೇರೆದಪ್ಪಿತು. ಸುತ್ತುಮುತ್ತಲಿನ ಸುಮಾರು ೭ ಪಟ್ಟಣಗಳು ಈ ರಾಜಧಾನಿಯಲ್ಲಿ ಸೇರ್ಪಡೆಯಾಗಿದ್ದವು. ಹೊಯ್ಸಳರ ತರುವಾಯ ವಿಜಯನಗರದವರು ಈ ರಾಜ್ಯವನ್ನು ಕೈವಶಮಾಡಿಕೊಂಡರು. ಆ ಮೇಲೆ ಇದನ್ನು ಮೈಸೂರಿನ ಒಡೆಯರ್ ರಾಜರು ಇದನ್ನು ಸ್ವಾಧೀನಪಡಿಸಿಕೊಂಡರು. ಇದೇ ತಲಕಾಡಿನ ಆಗಿನ ಕಾಲದ ಮೂಲ ಕಾಲವೇ ತಿರುಗಿತು. ತಲಕಾಡ ಗ್ರಾಮ ಕಾವೇರಿ ನದಿಯ ದಡದ ಮೇಲುಂಟು. ನದಿಗೆ ನೆರೆ ಕಟ್ಟಿದಾಗ ಉಸುಬು ರಾಶಿಯಾಗಿ ದಡದ ಮೇಲೆ ಬೀಳುವದೂ ಗಾಳಿಗೆ ಹಾರಿ ಸುತ್ತುಮುತ್ತು ಅದು ಪಸರಿಸುವದೂ ಆದರಿಂದ ಪಟ್ಟಣ ಹೂಳುವದೂ ಮೊದಲಾಗಿ ನಡೆಯಿತು. ಒಂದೊಂದು ವರ್ಷ ೨೦ ೩೦ ಅಡಿ ಉಸುಬು ಕೂಡ್ರತೊಡಗಿತು. ಈ ಉಸುಬಿನ ಉಪದ್ರವ ಸಹಿಸಲಾರದೆ ನಿವಾಸಿಗಳು ದೇಶಾಂತರ ಮಾಡಿದರು. ಅರಮನೆಗಳು, ರಾಜಮಾರ್ಗಗಳು, ದೇವಸ್ಥಾನಗಳು ಎಲ್ಲವೂ ಮಳಲಲ್ಲಿ ಹುಗಿಯತೊಡಗಿದವು. ಈಗ ತಲಕಾಡ ಇದು ಕುಗ್ರಾಮವಾಗಿದೆ. ಜಾತ್ರೆಯ ಕಾಲಕ್ಕೆ ಮಾತ್ರ ಸರಾಸರಿ ೩ ಲಕ್ಷ ಜನರು ಸೇರುತ್ತಾರೆ. ಮೈಸೂರು ಸರಕಾರದವರು ಗ್ರಾಮವನ್ನು ರಕ್ಷಿಸುವದಕ್ಕಾಗಿ ದಂಡೆಯ ಮೇಲೆ ಗಿಡಗಳನ್ನು ನೆಟ್ಟಿದ್ದಾರೆ. ಆದರಿಂದ ಉಸುಬು ಹಾರಿಹೋಗುವದು ಬಹುಮಟ್ಟಿಗೆ ನಿಂತಿದೆ. ಈ ಗ್ರಾಮದಲ್ಲಿ ೩೦ ದೇವಾಲಯಗಳಿದ್ದವು, ಅವೆಲ್ಲವೂ ಹುಗಿದುಹೋಗಿವೆ. ಪಂಚಲಿಂಗದರ್ಶನಕ್ಕೊಪ್ಪಿದ ೫ ದೇವಾಲಯಗಳು ಹುಗಿದುಹೋಗಿದ್ದವು. ಅವುಗಳಲ್ಲಿ ೩ ದೇವಾಲಯಗಳ ಮೇಲಿನ ಉಸುಬು ತೆಗೆದು ಅವು ಪರಿಮಾಡಲ್ಪಟ್ಟಿವೆ. ಇಲ್ಲಿ ಗೋಕರ್ಣ ತೀರ್ಥವಿದೆ. ಇದೇ ಪುಣ್ಯತೀರ್ಥ, ಮುಖ್ಯ ತೀರ್ಥವೂ ಇದೇ.

[೫ನೇ ಪಾನು ನೋಡಿರಿ]

ॐ

'दशमूलारिष्ट.'
ದಶಮೂಲಾರಿಷ್ಟ

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವಾಗಿರುತ್ತದೆ ಆದರೆ ಇವರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕಾಣದಿರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ಯಾವುದೊಂದು ವನಸ್ಪತಿಗಳನ್ನೂ ನಿಕೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಯಾಗಿ ಎಂಥ ಅಶಕ್ತತೆ ಇದ್ದರೂ ರೋಗ ನಾಶಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ ಮೂತ್ರಕೃಚ್ಛ, ಧಾತುಕ್ಷೀಣತೆ, ಗರ್ಭಾಶಯ ತಟ ಇಲ್ಲದೆ ಮಕ್ಕಳಿಲ್ಲದೇ ಇರ ಎವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ ... ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿದ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗುತ್ತದೆ

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು

೧೬ ಔನ್ಸ ಬಾಟ್ಲಿಗೆ ರೂ ೧—೪—೦
,, ೩ ಬಾಟ್ಲಿಗೆ ರೂ ೩—೧೨—೦
,, ಬಾಟ್ಲಿ ೬ಕ್ಕೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ... ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ ಚಿಂಚಾಸವ, ಪುನರ್ನವಾ ಆಸವ, ಅಶೋಕಾರಿಷ್ಟ ... ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ— ಕುಮಟಾ. (ಉ. ಕನ್ನಡ.)

ಶ್ರೀ ಧೂತಪಾಪೇಶ್ವರ ಆಯುರ್ವೇದ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಮತ್ತು ಅಶಕ್ತತೆಯಮೇಲ್ ಉಪಯುಕ್ತ ಔಷಧವು

ಅಭ್ರಲೋಹ
ABHRALOHA

ಔಷಧಿಯ ವ್ಯಾಪಾರಿ — ... ಕಸಬೇ ಶಾಬ್ರದರ್ಸ ಅಂಕೋಲಾ. ದಿ ಸ್ಟೋರ್ಸ ದಿಶ್ಯಾ (ಕುಮಟಾ. ಕೇವಸ್ಟ್ರ ಅಯ್ಯ ಹೊನ್ನಾವರ - ಕಲ್ಯಾಣಪುರ ಬ್ರದರ್ಸ

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇದೆ ಕಂಪನಿಯ ಹಣವು ಸರಕಾರಿ ಪ್ರಾಮಿಸರಿ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಶಿಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D K Nayak Bros
K N Nayak
Honavar Agent
R V, Prabhu

K. PadmanabhaRao & Sons.
BELGAUM
Chief Agents for
Karnatak Districts & S M States

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ... ವರುಷಗಳಿಂದ ಸಾವಿರದ ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳ, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ

ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ್ ಕಳಿಸಲಾಗದು ಬುದ್ಧಿ ಒಂದಕ್ಕೆ ಕ್ರಯ ರೂ ೦-೪-೦ ವ್ಹಿ ಪಿ ಆಳಿ ಡಜನ್‌ಗೆ ರೂ ೨-೮-೦ ವಿ ಪಿ ೦ ೮ ೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦, ಪಾರ್ಕಟೌನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. Monday, 28th November, 1938.

ವರ್ಷ ೨೧

ಸಂಚಿಕೆ ೨೧

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ. 3-1-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಮ್ಯಾಟ್ರಿಕ ಟ್ಯಾಪಿನ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ 1-0-0
ಆ ನಂತರ ಪ್ರತಿಸಾಲಿಗೆ 0-2-0
ಹೆಚ್ಚಿಗೆ ಸಾಲು ಎಷ್ಟು ಕೊಟ್ಟಿರುವವರೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೨೮ ಮಾಹೆ ನವಂಬರ ಸನ್ ೧೯೩೮ನೇ ಇಸವಿ)

PROBABLY WE CAN HELP.

Banks render special services of many kinds but two chief *functions of a bank are to receive money on deposit from the investing* public and to grant loans to businessmen and enterprises as temporary additions to their working capital In order that the depositors' money should be safe and always available it is necessary that only safe loans should be granted The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value

We grant only secured loans Subject to this condition the large resources of this bank and the expert services of its staff are always available to businessmen and trading concerns

Estd 1906

RESOURCES
OVER A CRORE.

**CANARA BANK,
LIMITED.**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ

ಬ್ರಾಂಚುಗಳ :— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮುಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡೆಸಲ್ಪಡುವವು
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸ, ಮಂಗಳೂರು, ಮೈಸೂರು, ಕೊಚ್ಚಿ, ಕನ್ನಾನೂರು ವಗೈರೆ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಪ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938

The Agricultural & Industrial Bank, Ltd.

ವಾರ್ತೆಗಳು.

— ಪಂ|| ಜವಾಹಿರಲಾಲರು ಗುರುವಾರ ತಾ ೧೭ನೇ ಮಧ್ಯಾಹ್ನ ಯುರೋಪ ಖಂಡದ ಪ್ರವಾಸ ಮುಗಿಸಿಕೊಂಡು ಮಗಳಾದ ಇಂದಿರೆಯೊಡನೆ ಮುಂಬಯಿಯಲ್ಲಿ ಬಂದಿಳಿದರು ಧಕ್ಕೆಯ ಮೇಲೆ ಪಂಡಿತಜಿಯವರಿಗೆ ಪ್ರಚಂಡ ಸ್ವಾಗತವಾಯಿತು. ಸುಮಾರು ೨೦೦ಕ್ಕೆ ಮಿಕ್ಕಿ ಸಂಸ್ಥೆಗಳು ಜವಾಹಿರಲಾಲರಿಗೆ ಪುಷ್ಪಮಾಲೆಗಳನ್ನರ್ಪಿಸಿ ಸತ್ಕರಿಸಿದವು. ಈ ಪುಷ್ಪಮಾಲೆಗಳು ತಿಂಡಿ ತಿನಸುಗಳಾಗಿದ್ದರೆ ಅವನ್ನು ಸ್ಪೇನ ದೇಶಕ್ಕೆ ಕಳುಹಿಕೊಡುತ್ತಿದ್ದೆನೆಂದು ಪಂಡಿತಜಿಯವರು ಉದ್ಗರಿಸಿದರು! ವರ್ತಕರು ಒಂದು ಹಡಗ ತುಂಬ ಧಾನ್ಯವನ್ನು ಸ್ಪೇನದೊಳಗೆ ಲೋಕಶಾಹಿ ಸರಕಾರದ ಪರವಾಗಿ ಹೋರಾಡುವ ಜನರಿಗೂ ಅವರ ಹೆಂಡರು ಮಕ್ಕಳಿಗೂ ಕಳುಹಿಕೊಡಬೇಕಾಗಿ ವಿನಂತಿ ಮಾಡಿಕೊಂಡರು! ವಿದೇಶ ರಾಜಕಾರಣದಲ್ಲಿ ಹಿಂದುಸ್ಥಾನಕ್ಕೊಂದು ಸ್ಥಾನ ಪ್ರಾಪ್ತವಾಗಿರುವದಾಗಿಯೂ ಪಂಡಿತಜಿಯವರು ನುಡಿದರು. ಶನಿವಾರ ಗಾಝಿ ಮುಸ್ತಾಫಾ ಕೆಮಾಲ ಪಾಶಾ ಅತಾತುರ್ಕರವರ ನಿಧನದ ಕುರಿತು ಸೇರಿದ ಸಭೆಯಲ್ಲಿ, ಪಂ|| ಜವಾಹಿರಲಾಲರು ಪಾಶಾರವರ ಗುಣವರ್ಣನೆ ಮಾಡಿ ಅವರಂತೆಯೇ ಹಿಂದುಸ್ಥಾನದೊಳಗಿನ ಲೋಕನಾಯಕರು ರಾಷ್ಟ್ರವನ್ನು ಸಂಘಟಿಸಬೇಕೆಂದು ಉದ್ಗರಿಸಿದರು. ಮುಂಬಯಿಯೊಳಗೆ ಸರದಾರ ವಲ್ಲಭಭಾಯಿ ಪಟೇಲ, ಡಾ|| ಪಟ್ಟಾಬಿಸೀತಾರಾಮಯ್ಯರವರೊಡನೆ ವಿಚಾರವಿನಿಮಯ ಮಾಡಿ ಸಂಸ್ಥಾನಗಳೊಳಗಿನ ಪರಿಸ್ಥಿತಿಯನ್ನೂ ಹಿಂದುಸ್ಥಾನದೊಳಗಿನ ಪರಿಸ್ಥಿತಿಯನ್ನೂ ಪಂಡಿತಜಿಯವರು ತಿಳಕೊಂಡರು. ಹಾಗೆಯೇ ಜವಾಹಿರಲಾಲರು ರವಿವಾರ ವರ್ಧಾಕ್ಕೆ ಹೋಗಿ ಮಹಾತ್ಮರೊಡನೆ ವಿಚಾರವಿನಿಮಯ ಮಾಡಿದರು. ಯುರೋಪ ಖಂಡದ ಪರಿಸ್ಥಿತಿಯನ್ನು ಪಂ|| ಜವಾಹಿರಲಾಲರು ಮಹಾತ್ಮರಿಗೆ ತಿಳಿಸಿದರು ಮತ್ತು ಹಾಗೆಯೇ ಅಲಹಾಬಾದಕ್ಕೆ ತೆರಳಿದರು.

— ಸಂಯುಕ್ತ ರಾಜ್ಯಘಟನೆಯನ್ನು ಸಂಸ್ಥಾನಿಕರ ಬೆಂಬಲದಿಂದ ಬ್ರಿಟಿಶ ಸಾಮ್ರಾಜ್ಯ ಸರಕಾರವು ಹಿಂದುಸ್ಥಾನದಲ್ಲಿ ಪ್ರಚುರಗೊಳಿಸುವ ತಯಾರಿ ಮಾಡಿರುವದಾಗಿ ಸುದ್ದಿಗಾರರು ತಿಳಿಯುತ್ತಾರೆ. ಹೀಗೆ ಹಿಂದೀ ರಾಷ್ಟ್ರೀಯ ಸಭೆಯವರನ್ನು ಸಮಾಧಾನಪಡಿಸದೆ ಸಂಯುಕ್ತ ರಾಜ್ಯಘಟನೆಯನ್ನು ಬಲಾತ್ಕಾರದಿಂದ ಹೊರಿಸುವಲ್ಲಿ ರಾಷ್ಟ್ರೀಯ ಸಭೆಯವರು ಸತ್ಯಾಗ್ರಹವನ್ನು ಹೂಡಿ ಸರಕಾರಕ್ಕೆ ದಿಗಿಲುಗೊಳಿಸುವದು ಖಂಡಿತವೆಂದು ರಾಷ್ಟ್ರಪತಿಗಳಾದ ಶ್ರೀ|| ಸುಭಾಷಚಂದ್ರ ಬೋಸರವರು ಪ್ರಕಟಿಸುತ್ತಾರೆ. ಇದೇ ಬರುವ ಡಿಶಂಬರ ೮ನೇ ತಾರೀಖಿಗೆ ವರ್ಧಾದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸೇರಲಿದೆ. ಆ ಕಾಲದಲ್ಲಿ ಹಿಂದುಸ್ಥಾನದೊಳಗಿನ ಪ್ರಚಲಿತ ಪ್ರಶ್ನೆಗಳ ವಿಚಾರ ನಡೆದು ನಿರ್ಧಾರಗಳು ಕೈಕೊಳ್ಳಲ್ಪಡುವವು. ಮುಖ್ಯವಾಗಿ ಸಂಸ್ಥಾನರಾಜಕಾರಣದ ವಿಚಾರ ದೀರ್ಘವಾಗಿ ನಡೆಯುವದೆಂದು ಹೇಳಬಹುದು. ಕಾಠೇವಾಡ ಸಂಸ್ಥಾನದೊಳಗಿನ ರಾಜಕೋಟದಲ್ಲಿ ಈಗ ಪ್ರಚಂಡ ಸತ್ಯಾಗ್ರಹ ನಡೆಯುತ್ತಿದೆ. ಮುಂಬಯಿಯಿಂದ ಸಹ ಸ್ವಯಂಸೇವಕ-ಪಥಕಗಳು ರವಾನೆಯಾಗುತ್ತಿವೆ. ೧೦ ಪಥಕಗಳಿಗೆ ಸೆರೆಹಿಡಿಯಲಾಯಿತು. ಇನ್ನೂ ಹೆಚ್ಚೆಚ್ಚು ಪಥಕಗಳು ರವಾನೆಯಾಗುತ್ತಿವೆ. ರಾಜಕೋಟದೊಳಗಿನ ಸಮಸ್ಯೆಯನ್ನು ವಿಚಾರವಿನಿಮಯದಿಂದ ಬಗೆಹರಿಸುವದಕ್ಕಾಗಿ ದಿವಾಣರೂ ಕೊಂಗ್ರೆಸ ಪ್ರಮುಖರೂ ಆಗಿಂದಾಗ ಚರ್ಚೆ ಮಾಡುತ್ತಿದ್ದಾರೆ. ಆದರೆ ಇನ್ನೂ ಮಧ್ಯಸ್ಥಿಕೆ ಒದಗಿಬರಲಿಲ್ಲ! ಹಿಂದೆ ಸ್ಥಾನ ಸರಕಾರವು ರಾಜಕೋಟ ಸಂಸ್ಥಾನಿಕರ ಪಕ್ಷಪಾತಿಯಾಗಿ ಕಾರಸ್ಥಾನ ನಡೆಸುತ್ತಿರುವದಾಗಿಯೂ ಅದರಿಂದ ಲೋಕಪಕ್ಷದೊಡನೆ ಒಡಂಬಡಿಕೆಯಾಗುವ ಸಂಭವ ಕಡಿಮೆಯಾಗುತ್ತದಾಗಿಯೂ ಹೇಳುತ್ತಾರೆ. ಭಾವನಗರ ಸಂಸ್ಥಾನದ ದಿವಾಣರಾದ ರಾ|| ಅನಂತರಾಯ ಪಟ್ಟಣಿಯವರು ರಾಜಕೋಟ ದಿವಾಣರಾದ ಸರ್ ಪಿ ಕೆಡೆಲ್‌ರವರಿಗೆ ಮಧ್ಯಸ್ಥಿಕೆಯ ಸಲಹೆ ಕೊಡುತ್ತಿದ್ದಾರೆ. ಸರದಾರ ವಲ್ಲಭಭಾಯಿ ಪಟೇಲರವರಿಗೆ ಕರೆ ವಿಚಾರ ಮಾಡಿದರೆ ವಿವಾದ-ವಿಷಯಗಳು ಬಗೆಹರಿಯುವವೆಂದು ರಾ|| ಪಟ್ಟಣಿಯವರು ಸರ್ ಕೆಡೆಲ್‌ರಿಗೆ ತಿಳಿಸಿದರೆಂದೂ ಪ್ರಕಟವಾಗಿದೆ. ಗುರುವಾರ ರಾ|| ಪಟ್ಟಣಿಯವರು ರಾಜಕೋಟದ ಸಂಸ್ಥಾನಿಕರಾದ ಠಾಕೂರ ಸಾಹೇಬರೊಡನೆ ರಾತ್ರಿ-ಊಟಕ್ಕಿದ್ದರು. ೨ ತಾಸುಗಳ ತನಕ ಒಡಂಬಡಿಕೆ ಮಾಡಿಕೊಳ್ಳಲು ಅವರು ಬುದ್ಧಿ ಹೇಳಿದರಂತೆ. ಇನ್ನು ೧-೨ ದಿನಗಳಲ್ಲಿ ಸಂಧಿಯಾಗಬಹುದಾಗಿ ಹೇಳುತ್ತಾರೆ.

— ಮಾದಕ ಪದಾರ್ಥಗಳ ಜಾಹೀರಾತುಗಳನ್ನು ಪ್ರಕಟಿಸಬಾರದಾಗಿ ಮುಂಬಯಿ ಸರಕಾರವು ವಿಶೇಷ ಗೆಝೀಟನ್ನು ಹೊರಡಿಸಿ ನಿರ್ಬಂಧಿಸಿದೆ. ಹಡಗ ಮತ್ತು ವಾಹನಗಳನ್ನು ನಿಲ್ಲಿಸಿ ಮದ್ಯ-ಮಾದಕ ಸಾಮಾನುಗಳನ್ನು ತಪಾಸ ಮಾಡುವ ಅಧಿಕಾರ ಅಬಕಾರಿ ಅಧಿಕಾರಿಗಳಿಗೆ ಕೊಡಲಾಗಿದೆ. ಮದ್ಯಗಳನ್ನು ಹೊಗಳುವ ಇಲ್ಲವೆ ಅವುಗಳ ಪ್ರಚಾರಕ್ಕೆ ಉತ್ತೇಜನ ಕೊಡುವ ಹಸ್ತಪತ್ರಿಕೆ, ಪುಸ್ತಕ ಮೊದಲಾದವುಗಳನ್ನು ಯಾರೂ ಮುದ್ರಿಸಬಾರದು, ಪ್ರಸಿದ್ಧಿಪಡಿಸಬಾರದು. ಇವನ್ನುಲ್ಲಂಘಿಸಿದವರಿಗೆ ರೂ. ೧೦೦೦ ಗಳ ತನಕ ದಂಡ ವಿಧಿಸಲ್ಪಡುವದು.

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ! ಅವುಗಳಿಗೆ ಯೋಗ್ಯ ಗಮನ ಕೊಡುವೆವು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು ?

THE HANUMAN TRANSPORT CO., LTD.
UDIPI. S KANARA.

ಹಿಟ್ಲರನು ಸುಖ ಕೊಡುವದಿಲ್ಲ!
(೭ನೇ ಪಾನದಿಂದ ಮುಂದುವರಿದದ್ದು)

ನಿಂತುಕೊಂಡಿದ್ದಾರೆ. ನಿನ್ನೆ ರವಿವಾರ ಅನರ್ಥ ಒದಗುವದಿತ್ತು. ಏನಾಯಿತೆಂದು ನಮಗೇನೂ ತಿಳಿಯಲಿಲ್ಲ. ಬ್ರಿಟಿಶ-ಫ್ರೆಂಚರು ಈ ಪ್ರಕರಣದಲ್ಲಿ ಝೆಕೊ-ರುಮಾನಿಯಾ ಪಕ್ಷಪಾತಿಯಾಗಿ ಪೋಲಂಡ-ಹಂಗೇರಿಯವರೊಡನೆ ಹೋರಾಡದಿದ್ದರೆ ಅನರ್ಥವೊದಗುವದಾಗಿ ರುಮಾನಿಯಾದ ಕೆರೋಲ ಅರಸರು ತಿಳಿಸಿದ್ದಾರೆ. ಪೂರ್ವ-ಯುರೋಪ ಖಂಡದ ಗೊಡವೆಯನ್ನೇ ಹಿಟ್ಲರನಿಗೆ ಸಂಪೂರ್ಣವಾಗಿ ವಹಿಸಿ ಪಶ್ಚಿಮ ಖಂಡವನ್ನಷ್ಟು ಕಾದುಕೊಳ್ಳಬೇಕೆಂದು ಬ್ರಿಟಿಶ-ಫ್ರೆಂಚರು ಮೊನ್ನೆ ಪ್ಯಾರೀಸ ಪಟ್ಟಣದಲ್ಲಿ ಸೇರಿದ ಕೂಟದೊಳಗೆ ನಿರ್ಧರಿಸಿದ್ದಾರಾಗಿ ಸುದ್ದಿಗಾರರು ಎಣಿಸುತ್ತಾರೆ. ಆದರಿಂದ ಮುಂದಿನ ಘಟನ ಏನಾಯಿತೆಂದು ತಿಳಿಯಲು ನಾನು ಕುತೂಹಲಪಡುತ್ತೇನೆ. ಚೆಂಬರಲೇನ ಮುದುಕರು ಹಿಟ್ಲರ ಹುಡುಗನಿಗೆ ಸಮಾಧಾನ ಮಾಡುವ ಯಾವತ್ತೂ ಪ್ರಯತ್ನಗಳು ನಿಷ್ಫಲವಾಗುವವೆಂದೇ ನನ್ನ ಊಹೆ. ಯಹೂದಿಯರ ಪೀಡೆಯಿಂದ ಸರ್ವರೂ ಉದ್ವಿಗ್ನರಾಗಿದ್ದಾರೆ. ಅದೊಂದು ಲೋಕಸಮಸ್ಯೆಯಾಗಿ ಪರಿಣಮಿಸಿದೆ. ಮಹಾತ್ಮರಂಥ ನಿಷ್ಠೇಸಿಗಳು ಸಮಾಧಾನಿಗಳು ಹಿಟ್ಲರನಿಗೆ ರಾಕ್ಷಸನೆಂದು ಸಂಬೋಧಿಸಿ ಯಹೂದಿಯರ ಮೇಲೆ ಒದಗುವ ಸಂಕಟಗಳನ್ನು ಪರಿಹರಿಸಲು ಸತ್ಯಾಗ್ರಹ ಹೂಡಬೇಕೆಂದು ಸಂತಪ್ತರಾಗಿ, ಉದ್ವಿಗ್ನರಾಗಿ 'ಹರಿಜನ' ಪತ್ರಿಕೆಯಲ್ಲಿ ಬರೆದ ಲೇಖವನ್ನೋದಿದರೆ ಹಿಟ್ಲರ-ರಾಕ್ಷಸನ ಹಾವಳಿ ಹೊಳೆದೀತು. ಆದರಿಂದ ಹಿಟ್ಲನನ್ನು ಪುರಸ್ಕರಿಸಲು ಬ್ರಿಟಿಶರು ಎಷ್ಟಕ್ಕೂ ಒಡಂಬಡುವದಿಲ್ಲ. ರುಮಾನಿಯಾದ ಕೆರೋಲ ಅರಸರು ಅಪೇಕ್ಷಿಸಿದಂತೆ, ಬ್ರಿಟಿಶ ಫ್ರೆಂಚರು ಝೆಕ್ ಜನಾಂಗದ ರಕ್ಷಕರಾಗಿ ನಿಂತರೆ ಹಿಟ್ಲರನ ಪ್ರಭುತ್ವ ಇನ್ನಿಷ್ಟು ಹೆಚ್ಚಾಗಿ ಆತನ ಪುಂಡಾಟಿಕೆ ಇನ್ನೂ ಮೇರೆದಪ್ಪುವದೆಂದು ಬ್ರಿಟಿಶ-ಫ್ರೆಂಚರು ಹೆದರುತ್ತಾರೆ. ಅನಿಷ್ಟರ ಮಟ್ಟಿಗೆ ಹಿಟ್ಲರನ ಕಸುವನ್ನು ಕುಗ್ಗಿಸುವದೇ ಈಗಿನ ಬ್ರಿಟಿಶ-ಫ್ರೆಂಚರ ಧೋರಣ. ವಸಾಹತುಗಳನ್ನು ಜರ್ಮನಿಗೆ ಒಪ್ಪಿಸದಂತೆ ತಕ್ಕ ವಿಚಾರ ಮಾಡಲು ಪಾರೀಸದಲ್ಲಿ ಆ ಮುಸ್ಸದ್ದಿಗಳ ಸಂಬಂಧಪಟ್ಟವರ ಸಮ್ಮೇಲನವನ್ನೊಂದು ಕೂಡಿಸುವ ನಿರ್ಧಾರವಾಗಿದೆ. ನಮ್ಮ ರಾಷ್ಟ್ರೀಯ ಸಭೆಗೂ ನಿಮಂತ್ರಣೆಯಾಗುವದೆಂದು 'ಮುಂಬಯಿ ಕ್ರೋನಿಕಲ್' ಪತ್ರಿಕೆಯ ಸ್ವಂತ ಸುದ್ದಿಗಾರರ ಸುದ್ದಿ. ಮೊನ್ನೆ ಗುರುವಾರ ದಕ್ಷಿಣ ಆಫ್ರಿಕೆಯ ಸೈನ್ಯ ಇಲಾಖೆಯ ಮಂತ್ರಿಗಳಾದ ಪಿರೋವರು ಹಿಟ್ಲರರಿಗೆ ಕಂಡು ವಸಾಹತುಗಳ ಸಮಸ್ಯೆಯನ್ನು ಆಲೋಚಿಸಿದರು. ಆದರೆ ಬಹುತರವಾಗಿ ವಸಾಹತುಗಳ ಪ್ರಶ್ನೆ ಹಿಟ್ಲರನಿಗೆ ಸಮಾಧಾನಪಡಿಸುವಂತ ನಿರ್ಣಯಿಸಲ್ಪಡುವದೆಂದು ನಾನು ಎಣಿಸಲಾರೆ. ವಸಾಹತಿನ ಪ್ರಶ್ನೆ ಬಿಗಿಯಾಗಿದೆಂದೇ ನನ್ನ ಭಾವನೆ. ಬ್ರಿಟಿಶರು ಪ್ರಾಂತಗಳನ್ನು ತಮ್ಮ ಕಡೆ ಎಳಕೊಳ್ಳಲು ಟಾಂಗನ್ಯಿಕಾ ಹೂಡುವವರ ಮರ್ಮ ನಾ ಬಲ್ಲೆ. ಟಾಂಗನ್ಯಿಕಾದ ಸರಕಾರ ಹಿಟ್ಲರ-ಪಕ್ಷಪಾತಿಯಾದರೆ ಅತ್ತ ಆಫ್ರಿಕೆಯೊಳಗಿನ ಪೂರ್ವ ಭಾಗದ ವಸಾಹತೂ, ಇತ್ತ ನಮ್ಮ ಹಿಂದುಸ್ಥಾನದೊಳಗಿನ ಗೋವಮಾಂತಕ ಪ್ರದೇಶವೂ ಹಿಟ್ಲರನ ಸ್ವಾಧೀನಕ್ಕೊಳಪಟ್ಟು ಬ್ರಿಟಿಶರಿಗೆ ಹಿಂದುಸ್ಥಾನದಲ್ಲಿಯೂ ಆಫ್ರಿಕೆಯಲ್ಲಿಯೂ ಕಷ್ಟವಾಗುವಂತಿದೆ. ಮೊನ್ನೆ ಮುಂಬಯಿ ಗವ್ಹರ್ನರರಾದ ನೇಕನಾಮದಾರ ಸರ್ ರೋಜರ್ ಲುಮ್ಲೇಯವರು ಗೋವಮಾಂತಕಕ್ಕೆ ಭೆಟ್ಟಿಕೊಟ್ಟದ್ದೂ ನಮ್ಮ ಕಾರವಾರದ ತನಕ ಸಂಚರಿಸಿದ್ದೂ ವಸಾಹತು-ಸಮಸ್ಯೆಯ ಒಂದು ಅಂಗವಾಗಿರಬೇಕೆಂದು ನನ್ನ ಊಹೆ. ರಾಜಕಾರ್ಯದ ಅಭಾವದಲ್ಲಿ ನಾ|| ಗವ್ಹರ್ನರರು ಈ ಸಂಚಾರವನ್ನು ಕೈಕೊಳ್ಳುತ್ತಿದ್ದರೆಂದು ವ್ಯವಹಾರಿಕರು ಒಪ್ಪರು. ವಸಾಹತು-ರಾಜಕಾರಣ ಬಿಗಿಯಾದ ಒಂದು ಲಕ್ಷಣವಿದೆಂದು ನಾನು ತಿಳಿಯುತ್ತೇನೆ. ಸ್ಥೂಲಮಾನದಿಂದ ವಿಚಾರ ಮಾಡುವವರಾದರೂ ಹೀಗೆಯೇ ತಿಳಿಯುವರೆಂದು ನನ್ನ ನಂಬಿಗೆ. ಪೂರ್ವ ಯುರೋಪ ಖಂಡವನ್ನು ಹಿಟ್ಲರನಿಗೊಪ್ಪಿಸಿದರೂ ರಷಿಯಾ ಕೊಸ್ಲೋವಾಕಿಯಾ ಜನಾಂಗದ ಆಹುತಿ ಕೊಟ್ಟರೂ ಹಿಟ್ಲರನು ಬ್ರಿಟಿಶರ ಬೆನ್ನು ಬಿಡುವನೆಂದು ನನಗೆ ತೋರುವದಿಲ್ಲ. ಈ ಪ್ರಶ್ನೆಯ ಮೇಲೆ ಆತನು ಬ್ರಿಟಿಶರೊಡನೆ ಹೋರಾಡುವದು ಖಂಡಿತ, ಇಟಾಲಿಯ ಮುಸೊಲಿನಿಯವರು ಹಿಟ್ಲರ-ಪಕ್ಷಪಾತಿಯಾಗಿ ಹೋರಾಡುವದೂ ಖಂಡಿತ! ಕಳೆದ ವಾರ ಇಟಾಲಿ--ಜರ್ಮನರೊಳಗೆ ಮತ್ತೊಂದು ಕರಾರನಾಮೆಯಾಗಿದೆ. ಜರ್ಮನಿಯೊಳಗೆ ಇಟಾಲಿಯ ಲ್ಯಾಟಿನ್ ಭಾಷೆಯನ್ನೂ, ಇಟಾಲಿಯೊಳಗೆ ಜರ್ಮನ್ ಭಾಷೆಯನ್ನೂ ಪ್ರಚಾರಗೊಳಿಸಿ ಇತ್ತಿಟ್ಟರೊಳಗೂ ಆಪ್ತತ್ವವನ್ನುಂಟು ಮಾಡಬೇಕೆಂದು ಗೊತ್ತಾಗಿದೆ. ಪಾಲಿಸ್ಥಾನದೊಳಗಿನ ಆರಬರನ್ನು ಕ್ಷಯರ್ನವೇ ಸಮಾಧಾನಗೊಳಿಸಲು ಬ್ರಿಟಿಶ ಪ್ರಧಾನ ಮಂಡಳಗಳು ಹಾತೊರೆಯುವ ರಹಸ್ಯವಾದರೂ ಹಿಟ್ಲರ-ಮುಸೊಲಿನಿಯವರೊಳಗೆ ಬೆಳೆಯುತ್ತಿರುವ ಸ್ನೇಹಭಾವವೇ ಸೈ! ಗುರುವಾರದ ಪಾರ್ಲಿಮೆಂಟಿನ ಸಭೆಯಲ್ಲಿ ವಸಾಹತು-ಪ್ರಧಾನರಾದ ಮಿ| ಮೆಕಡೋನಲ್ಡರು ಆರಬರ ದೃಷ್ಟಿಯಿಂದ ಪಾಲಿಸ್ಥಾನದ ಸಮಸ್ಯೆಯನ್ನು ನಾವು ಬಿಡಿಸಬಯಸುತ್ತೇವೆಂದು ದೊಡ್ಡಿಸ್ತನದ ಮಾತುಗಳನ್ನಾಡಿ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಂಡರು. ಹಿಟ್ಲರ-ಮುಸೊಲಿನಿಯವರ ತಾಪವಿಲ್ಲದಿದ್ದರೆ ಆರಬರ ದೃಷ್ಟಿಯನ್ನು ಬ್ರಿಟಿಶ ಪ್ರಧಾನ ಮಂಡಳವು ತಳೆಯುತ್ತಿರಲಿಲ್ಲ. ಹಿಟ್ಲರನು ಯುರೋಪ ಖಂಡದೊಳಗೆ ಬ್ರಿಟಿಶ-ಫ್ರೆಂಚರಿಗೆ ಸುಖ ಕೊಡದ್ದರಿಂದಲೇ ಬ್ರಿಟಿಶ ಪ್ರಧಾನ ಮಂಡಳವು ಪಾಲಿಸ್ಥಾನದೊಳಗೆ ಆರಬರ ಕನ್ನಡಕವನ್ನೂ, ಹಿಂದುಸ್ಥಾನದೊಳಗೆ ರಾಷ್ಟ್ರೀಯ ಸಭೆಯವರ ಕನ್ನಡಕವನ್ನೂ ಧರಿಸಿ ಅಲ್ಲಲ್ಲಿಯ ಪ್ರಜೆಗಳನ್ನು ಸಂತೈಸುವ ಪ್ರಯತ್ನ ನಡಿಸಿದೆ. ಇದರ ಫಲಿತಾಂಶವೇನಾದೀತೆಂದು ನಾನರಿಯೆ. ಯಾಕೆಂದರೆ ಪ್ರಜೆಗಳಿಗೆ ಸಮಾಧಾನ ಮಾಡುವಾಗ ರಾಜ್ಯಾಧಿಕಾರಗಳನ್ನು ಬ್ರಿಟಿಶರು ತೊರೆಯಬಯಸುವದಿಲ್ಲ, ರಾಜ್ಯಾಧಿಕಾರಗಳನ್ನು ಪ್ರಜಾಧೀನಗೊಳಿಸಲು ಸಿದ್ಧರಾದನಕ ದೇಶದಲ್ಲೆಲ್ಲೂ ಸಮಾಧಾನ ನೆಲಿಸದಿರುವದು ಸ್ವಾಭಾವಿಕ. ಆದರೆ, ಇದೆಲ್ಲ ಭವಿಷ್ಯದ ಮಾತು. ಅ ಗೊಡವೆ ನನಗೇಕೆ? ಈಗಿನ ಸ್ಥಿತಿ ನಮೂದಿಸುವದಿಷ್ಟೇ ನನ್ನ ಕೆಲಸ! ಈಗಿನ ಸ್ಥಿತಿ ಹಿಟ್ಲರನು ಯಾರಿಗೂ ಸುಖ ಕೊಡದಿದ್ದದ್ದು! ಅದರಿಂದ ಅದನ್ನಷ್ಟು ಇಂದಿಗೆ ಮೊಟ್ಟಮೊದಲು ನಮೂದಿಸಿಟ್ಟಿದ್ದೇನೆ.

ಕಾರವಾರಕ್ಕೆ ನಾ|| ಗವ್ಹರ್ನರರ ಆಗಮನ!

ಕಾರವಾರದ ಸೃಷ್ಟಿಸೌಂದರ್ಯಕ್ಕೆ ಗವ್ಹರ್ನರರು ಮನಸೋತರು !!

ಉಗಿಬಂಡಿಯ ರಹದಾರಿಯನ್ನು ಈ ಬಂದರ ತಪ್ಪಿಸಿ ಒಯ್ದದ್ದೇ ಈಗಿನ ದುಸ್ಥಿತಿಗೆ ಕಾರಣ!

[ಸುದ್ದಿಗಾರರ ತಂತಿಯ ಮೇಲಿಂದ] ಕಾರವಾರ, ತಾ ೨೭.

ನಾ|| ಗವ್ಹರ್ನರರ ಸಂಚಾರ ಕಾರ್ಯಕ್ರಮದೊಳಗಿನ ಕಡೆಯ ಮುಕ್ಕಾಮಾದ ಈ ನಮ್ಮ ಕಾರವಾರ ಪಟ್ಟಣದಲ್ಲಿ ಗವ್ಹರ್ನರರು ದೊರೆಸಾನಿಗಳೊಡನೆ ಶನಿವಾರ ತಾ. ೨೬ನೇ ರಾತ್ರಿ ೮|| ಘಂಟೆಗೆ ಗೋವಮಾಂತಕದಿಂದ ಈ ಬಂದರ ತಲ್ಪಿದರು. ರಾತ್ರಿ ಹಡಗದ ಮೇಲೆ ಕಳೆದು ರವಿವಾರ ಬೆಳಗಿನ ೧೧ ಘಂಟೆಗೆ ಹಡಗದಿಂದ ಇಳಿದರು. ಕೂಡಲೆ ಅಧಿಕಾರಿಗಳೂ ಪ್ರಮುಖ ನಾಗರಿಕರೂ ದಡದ ಮೇಲೆ ದೊರೆಗಳಿಗೆ ಸ್ವಾಗತ ಮಾಡಿ ಬರಮಾಡಿಕೊಂಡರು. ಹಾಗೆಯೇ ದೊರೆಗಳು ಸಿವ್ಹಿಲ್ ಆಸ್ಪತ್ರೆಗೆ ಚಿತ್ತೈಸಿದರು. ಅಲ್ಲಿ ಶ್ರೀ ಶಾಂತಾದುರ್ಗಾ ಪ್ರಸೂತಿಗೃಹದ ಹೆಬ್ಬಾಗಿಲಿನಲ್ಲಿ ಪೈ|| ವಾ|| ಶಾಂತಾರಾಮ ಮಂಗೇಶ ಕುಳಕರ್ಣಿಯವರ ಮಗಂದಿರಾದ ರಾ|| ಪ್ರಭಾಕರ ಕುಳಕರ್ಣಿಯವರು ನಾ|| ರಿಗೆ ಪುಷ್ಪಮಾಲೆಗಳನ್ನು ಹಾಕಿ ಸತ್ಕರಿಸಿದಬಳಿಕ, ನಾಮದಾರರು ಪ್ರಸೂತಿಗೃಹವನ್ನು ನೋಡಿಕೊಂಡು ಕೋಡಿಭಾಗಕ್ಕೆ ಹೋದರು. ಅಲ್ಲಿಂದ ೧೧-೪೫ ಘಂಟೆಗೆ ಮಿಶ್ರಸಮಾಜಸಭಾಮಂದಿರಕ್ಕೆ ಬಂದು ತಲ್ಪಿದರು. ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ರಾವಸಾಹೇಬ ಕೆಲಂಗರವರು ಮ್ಯು|ಯ ಮಾನಪತ್ರವನ್ನೋದಿ ನಾಮದಾರರಿಗೆ ಸ್ವಾಗತ ಬಯಸಿದ ತರುವಾಯ ಗವ್ಹರ್ನರರು ಉತ್ತರ ಕೊಟ್ಟದ್ದಾನಂತರ:— "ಇಲ್ಲಿಯ ನಿಸರ್ಗ ಸೌಂದರ್ಯ ಕಂಡು ನಾನು ಮನಸೋತಿದ್ದೇನೆ. ಲೋಕನಿಯುಕ್ತ ಸಭಾಸದರ ಆಡಳಿತೆಯಲ್ಲಿ ನಡೆಯುತ್ತಿರುವ ಮ್ಯು||ಯ ಆಡಳಿತೆಯನ್ನು ನೋಡಿ ನನಗೆ ಸಂತೋಷವಾಗುತ್ತದೆ. ಸ್ತ್ರೀ-ಸಭಾಸದರೂ ಹಿಂದುಳಿದ ಸಮಾಜಗಳ ಸಭಾಸದರೂ ಮ್ಯು|ಯ ಕಾರಭಾರದಲ್ಲಿ ಸೇರಿಕೊಂಡಿದ್ದಾರೆಂದು ತಿಳಿದು ನನಗೆ ಹರುಷವಾಗಿದೆ. ಎಲ್ಲರೂ ಸಹಕಾರದಿಂದ ದುಡಿದು ಈ ಪ್ರದೇಶವನ್ನು ಆರೋಗ್ಯಧಾಮವನ್ನಾಗಿ ಮಾರ್ಪಡಿಸುವರೆಂದು ನಾನು ಕೋರುತ್ತೇನೆ. ೧೮೭೫ನೇ ಇಸ್ವಿಯಲ್ಲಿ ಉಗಿಬಂಡಿಯ ರಹದಾರಿಯನ್ನು ಬೇರೆ ಬಂದರಕ್ಕೆ ಒಯ್ದದ್ದರಿಂದ ಈ ಬಂದರದ ಸ್ಥಿತಿ ಈ ಪರಿ ಒದಗಿರುವದೆಂದು ತಿಳಿದು ನನಗೆ ವ್ಯಸನವಾಗುತ್ತದೆ" ಹೀಗೆ ನಾಮದಾರರು ಭಾಷಣ ಮಾಡಿ, ಕಲೆಕ್ಟರರ ಬಂಗ್ಲೆಗೆ ತೆರಳಿದರು. ೨ ಘಂಟೆಗೆ ಭೋಜನ ತೀರಿಸಿಕೊಂಡು ೪ ಘಂಟೆಯ ತನಕ ಪ್ರಮುಖರೊಡನೆ ಮಾತನಾಡಿ ಸರಿಯಾಗಿ ೪|| ಘಂಟೆಗೆ ಪೋಲೀಸ ಠಾಣ್ಯಕ್ಕೆ ಹೋಗಿ ಪೋಲೀಸರ ಕವಾಯತನ್ನೂ, ಹುಡುಗರ ಕವಾಯತನ್ನೂ ನೋಡಿಕೊಂಡು ಅಲ್ಲಿಂದ ನೇರವಾಗಿ ಅಮದಳ್ಳಿಗೆ ಹೋಗಿ ಗ್ರಾಮೋದ್ಧಾರ ಸಂಘವನ್ನು ಸಂದರ್ಶಿಸಿ ಹಿಂತಿರುಗಿ ಬಂದು, ಮುಂಬಯಿಗೆ ಹೋಗಲು ಹಾಗೆಯೇ ಸಂಜೆ ೬ ಘಂಟೆಗೆ 'ಇಂಡಸ್' ಹಡಗ ಹತ್ತಿದರು!

ಪತ್ರಕರ್ತರ ನುಡಿಗನ್ನಡಿ.

೧ ಸಬಿಪ್ರಾಂತ್ಯಮಂಡಳದ ಸಾ|| ಬ ೬೬ಸ ಹೇಬ ಸೀರರವರೂ ಅಧ್ಯಕ್ಷರಾಗಿರುವ ತಿಣ್ಣಸಾಹೇಬ ಲಕ್ಷ್ಮೀಯವರೂ ಕರ್ನಾಟಕ ಸಂಚಾರ ಕಾರ್ಯಕ್ರಮ ದಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯನ್ನು ಸೇರಿಸಿ ದವರಾಗಿ ತಿಳಿದು ನಾವು ಸಂತೋಷಭರಿತರಾಗಿದ್ದೆವು. ಸಬಿಪ್ರಾಂತ್ಯಮಂಡಳಿಗೆ ಸ್ವಾಗತ ಮಾಡಲು ಜನಸಾಮಾನ್ಯರು ಉತ್ಸುಕರಾಗಿದ್ದರು. ಆದರೆ ಸಂಚಾರದ ಅವಧಿ ತೀರ ಕಡಿಮೆಯಿದ್ದುದರಿಂದ ಎರಡೇ ಜಿಲ್ಲೆಗಳನ್ನು ತಮ್ಮ ಕಾರ್ಯಕ್ರಮದಲ್ಲಿ ಸೇರಿಸಬೇಕಾಗಿ ನಾವು ದಾರರು ಅಪೇಕ್ಷಿಸಿದ ಮೇರೆಗೆ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸಂಚಾರ ಕಾರ್ಯಕ್ರಮದೊಳಗಿಂದ ನಮ್ಮ ಜಿಲ್ಲೆಯನ್ನು ಕಡಿಮೆ ಮಾಡಿದ್ದಾರೆಂದು ತಿಳಿಸಲು ವ್ಯಸನವಾಗುತ್ತದೆ. ಬೆಳಗಾವಿ-ಧಾರವಾಡ ಜಿಲ್ಲೆಗಳಲ್ಲಿ ಉಗಿಬಂಡಿಯ ರಹದಾರಿಯಿರುವುದರಿಂದ ಲೋಕನಾಯಕರಾಗಲಿ ನಾವು ದಾರರಾಗಲಿ ಆಗಿಂದಾಗ ಒಂದು-ಹೋಗಲನುಕೂಲವಿದೆ. ನಮ್ಮ ಮಾನಪತಿಯವರು ಸದ್ಯಕ್ಕೇ ಬೆಳಗಾವಿ-ವಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿದ್ದುಂಟು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆ ಉಗಿಬಂಡಿ-ರಹದಾರಿಯ ಹೊರಪ್ರದೇಶದಲ್ಲಿದ್ದು ಲೋಕನಾಯಕರಿಗೆ ಆಗಿಂದಾಗ ಸಂಚರಿಸಲು ಅನಾನುಕೂಲವಿರುವಾಗ, ಎರಡು ಜಿಲ್ಲೆಗಳನ್ನು ನಾವುದಾರರು ಸಂಚರಿಸಲಪೇಕ್ಷಿಸಿದಾಗ, ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಬೆಳಗಾವಿ-ಧಾರವಾಡ ಜಿಲ್ಲೆಗಳನ್ನಷ್ಟೇ ಸಂಚಾರ ಕಾರ್ಯಕ್ರಮದಲ್ಲಿ ಸೇರಿಸಿದ್ದು ಬರೇ ಸ್ವಾರ್ಥವೆಂದು ಆಕ್ಷೇಪಿಸಿದರೆ ಇಪ್ಪಸ್ಥಿತಿ ಇದ್ದಕ್ಕಿದ್ದ ಹಾಗೆ ನಮೂದಿಸಿದಂತಾಗದೇ? ಬೆಳಗಾವಿ-ಧಾರವಾಡ ಜಿಲ್ಲೆಗಳು ನಮ್ಮ ಕರ್ನಾಟಕದೊಳಗೆ ಮುಂದುವರಿದ ಜಿಲ್ಲೆಗಳು, ನಮ್ಮಾ ಕನ್ನಡ ಜಿಲ್ಲೆ ಹಿಂದುಳಿದ ಒಡಜಿಲ್ಲೆ! ಪ್ರಾಂತಿಕ ಕಾಂಗ್ರೆಸ ಕಮಿಟಿಯ ಪ್ರಭುಗಳಲ್ಲಿಯೂ ಧಾರವಾಡ-ಬೆಳಗಾವಿ ಜಿಲ್ಲೆಯವರು. ಆದಿಂದ ನಮ್ಮ ಕನ್ನಡ ಜಿಲ್ಲೆಯ ಪಟ್ಟಿಗೆ ತಾತ್ಸಾರವಾಗುತ್ತದಾಗಿ ನಾವು ಎಣಿಸಬೇಕಾಗಿದೆ. ಸತ್ಯಾಗ್ರಹ ಸಂಗ್ರಾಮದಲ್ಲಾಗಲಿ, ಕರನಿರಾಕರಣೆಯ ಹೋರಾಟದಲ್ಲಾಗಲಿ ಬೆಳಗಾವಿ-ಧಾರವಾಡ ಜಿಲ್ಲೆಗಳಿಗಿಂತ ನಮ್ಮಾ ಜಿಲ್ಲೆಯವರು ಮುಂದುವರಿದು ರಾಷ್ಟ್ರಕಾರ್ಯ ಮಾಡಿರುವರೆಂದು ಪ್ರಾಂತಿಕ ಕಾಂ ಕಮಿಟಿಯವರೂ ಬೆಳಗಾವಿ-ಧಾರವಾಡದವರೂ ನಮ್ಮನ್ನು ಹೊಗಳುತ್ತಾರೆ. ಆದರೆ ಪ್ರತ್ಯಕ್ಷ ಲಾಭ-ವಿಚಾರ ಬಂದೊದಗಿದಾಗ ನಮ್ಮ ಜಿಲ್ಲೆ ಕಣ್ಮರೆಯಾಗುತ್ತದಾಗಿ ಲೋಕಭಾವನೆ ಆಗಲು ಈ ಉದಾಹರಣೆಯೇ ಸಾಕು. ಕರ್ನಾಟಕ ಪ್ರಾಂ ಕಾಂ ಕಮಿಟಿಯು ಆಳವಾಗಿ ವಿಚಾರಿಸಿ ಬೆಳಗಾವಿ-ಧಾರವಾಡ ಜಿಲ್ಲೆಗಳಗಿಂತ ನಮ್ಮಾ ಉತ್ತರ ಕನ್ನಡ ಜಿಲ್ಲೆಯ ಒಗ್ಗೆ ಹೆಚ್ಚಿನ ಲಕ್ಷ್ಯಗೊಟ್ಟು ವರ್ತಿಸಬೇಕಾಗಿ ನಾವು ಸೂಚಿಸುತ್ತೇವೆ. ಕಂಡ ಮಾತನ್ನು ಕಂಡಂತೆ ಒರೆದ ಒಗ್ಗೆ ಬೇಸರಾಗಬಾರದಾಗಿ ವಿನಂತಿ.

———

೨ ಮೈಸೂರಿನ ವಿದುರಾಶ್ವತ್ಥಂ ಪುಣ್ಯಕ್ಷೇತ್ರದಲ್ಲಿ ಚೈತ್ರ ಮಾಸದೊಳಗೆ ಶ್ರೀ ವಿದುರನಾರಾಯಣ ದೇವರ ಜಾತ್ರೆಯ ಸಮಯ ಅಲ್ಲಿಯ ಪೋಲೀಸರು ನಿರಪರಾಧಿ, ನಿಷ್ಪಾಪ ಜನರ ಮೇಲೆ ನಿಷ್ಕಾರಣ ಗುಂಡು ಹಾರಿಸಿ ಕೊಂದ ಬಗ್ಗೆ ಆಗ ಪತ್ರಿಕೆಗಳಲ್ಲಿ ಉಗ್ರವಾದ ಟೀಕೆಯು ಎದ್ದಿತ್ತು! ರಾಮರಾಜ್ಯದೊಳಗೆ ರಾವಣನೇ ಅವತೀರ್ಣ ಹೊಂದಿದನೆಂದು ಎಲ್ಲೆಲ್ಲಿಯೂ ಆಕ್ಷೇಪ ಮಾಡೋಣಾಗಿತ್ತು. ಮಹಾತ್ಮರ ತನಕ ಈ ದೂರು ತಲ್ಪಿತ್ತು. ಮೈಸೂರ ಸರಕಾರವು ಈ ಕುರಿತು ಚೌಕಶಿ ಮಂಡಳವನ್ನು ನೇಮಿಸಿ ತಯಾರಿಸಿದ ವರದಿಯ ತಾತ್ಪರ್ಯ ಕಳೆದ ಶನಿವಾರ ತಾ. ೧೯ನೇಗೆ ಬೆಂಗಳೂರಿನಲ್ಲಿ ಪ್ರಕಟವಾಗಿದೆ. ಮದ್ರಾಸ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಸರ್ ವೇಪಾ ರಮೇಶಂ ಮೊದಲಾದ ಮೂವರು ಬರೆದ ವರದಿಯ ತಾತ್ಪರ್ಯವನ್ನೋದಿದರೆ ಸರ್ ರಮೇಶಂ ರವರಂಥ ನಿರ್ಮಲ ಚಿತ್ತದವರು ಸಹ ಕಾಂಗ್ರೆಸ-ದ್ವೇಷದಿಂದ ಮಲಿನರಾದರೆಂದು ಹೇಳಬೇಕಾಗುತ್ತದೆ. ವಿದುರಾಶ್ವತ್ಥಂದಲ್ಲಿ ಸೋಮವಾರ ಪೋಲೀಸರು ಗುಂಡು ಹಾರಿಸಿದ್ದು ಯೋಗ್ಯವೋ ಹೇಗೆ? ಅದು ಮೀರಿದಪ್ಪಿದ್ದೋ ಹೇಗೆ? ಎಂಬ ಎರಡೂ ಪ್ರಶ್ನೆಗಳ ಮೇಲೆ ರಮೇಶಂ-ಚೌಕಶಿ ಮಂಡಳದವರು ಸರಕಾರದ ಪರವಾಗಿ ಉತ್ತರ ಕೊಟ್ಟಿದ್ದಾರೆ; ಗುಂಡಿನಿಂದ ಮಡಿದವರ ಸಂಖ್ಯೆ ೧೦ ಎಂತಲೂ ೩೩ ಎಲ್ಲೆಂದು ಪ್ರಕಟವಾದದ್ದು ತಪ್ಪೆಂತಲೂ ರಮೇಶಂರವರು ಅಭಿಪ್ರಾಯಪಟ್ಟಿದ್ದಾರೆ. ಇಷ್ಟಕ್ಕೇ ರಮೇಶಂ-ಮಂಡಳದವರು ತಮ್ಮ ವಿಚಾರವನ್ನು ಮುಗಿಸಿದ್ದರೆ ಭಿನ್ನಾಭಿಪ್ರಾಯ ವೆಂದು ಎಣಿಸಿ ನಾವು ಸುಮ್ಮಗುಳಿಯುತ್ತಿದ್ದೆವು. ಆದರೆ ರಮೇಶಂ-ಮಂಡಳದ ವಿಚಾರಸರಣಿಯನ್ನು ಪರಾಂಬರಿಸಿದರೆ ಡಾ|| ಪಟ್ಟಾಭಿಯವರು ನುಡಿದಂತೆ, ಮೈಸೂರು ಸರಕಾರದ ವಕೀಲಿಯನ್ನೇ ರಮೇಶಂ ಮಂಡಳದವರು ನಡಿಸಿದ್ದಾರೆಂದು ಸ್ಫುಟವಾಗುತ್ತದೆ. ವಿದುರಾಶ್ವತ್ಥಂದೊಳಗಿನ ಜನಸಂದಣಿ ಶಾಂತವಾಗಿತ್ತೆಂದೂ ಪೋಲೀಸರು ವಿವೇಕಹೀನರಾಗಿ ದೊಣ್ಣೆ ಹೊಡೆಯತೊಡಗಿದ ಬಳಿಕ ಪ್ರಕ್ಷೋಭೆಯುಂಟಾಯಿತೆಂತಲೂ ನಮೂದಿಸಿ ಡಿ| ಮೆಜಿಸ್ಟ್ರೇಟರಾದ ರಾ| ಅಪ್ಪಾಜಿ ಗೌಡರು ತಮ್ಮ ಅಧಿಕಾರಕ್ಕಾ ಹೊಣೆಗಾರಿಕೆಗೂ ಉಚಿತವಾಗಿ ನಡೆಯಲಿಲ್ಲವೆಂದು ರಮೇಶಂ-ಮಂಡಳದವರು ನಮೂದಿಸುತ್ತಾರೆ. ಹೀಗೆ ಮಂಡಳದ ಅಭಿಪ್ರಾಯವಿದ್ದಾಗ್ಯೂ, "ಜನರೇ ತಪ್ಪುಗಾರರು; ಜನಸಂದಣಿ ಯಾತ್ರಿಕರದಲ್ಲ, ರಾಜಕಾರಣಿಗಳದು," ಎಂಬದಾಗಿ ರಮೇಶಂ-ಮಂಡಳದವರು ದೂರುತ್ತಾರೆ. ರಾಜಕಾರಣಿಗಳು ಮೈಸೂರು ಸರಕಾರಕ್ಕೆ ವಿರೋಧಿಸುವ ದುರುದ್ದೇಶದಿಂದ ವಿದುರಾಶ್ವತ್ಥಂದೊಳಗೆ ಸೇರಿದ್ದಿದ್ದರೆ ಪೋಲೀಸರು ದೊಣ್ಣೆ ಹೊಡೆಯುವ ವರೆಗೆ ಅವರು ಶಾಂತಚಿತ್ತದಿಂದಿರುತ್ತಿರಲಿಲ್ಲ. ರಾ| ಅಪ್ಪಾಜಿ ಗೌಡರು ವಿವೇಕಶೀಲರಾಗಿದ್ದರೆ ಗುಂಡು ಹಾರಿಸುವ ಪ್ರಸಂಗ ಬರುತ್ತಿರಲಿಲ್ಲವಾಗಿ ರಮೇಶಂ-ಮಂಡಳವು ನಮೂದಿಸುತ್ತಿರಲಿಲ್ಲ. ಡಿ|| ಮೆಜಿಸ್ಟ್ರೇಟರು ಹೇಳಿದಂತೆ, ಜನರು ಕಲ್ಲೊಗೆದರೆಂಬ ವಿಧಾನವನ್ನೂ ರಮೇಶಂ-ಮಂಡಳದವರು ಅಲ್ಲಗಳೆದಿದ್ದಾರೆ, ಅಧಿಕಾರಿಗಳ ಮೇಲೆ ಜನರು ಸಾಗಿಬರಲುದ್ಯುಕ್ತರಾಗಿದ್ದರೆಂಬ ಭಾವನೆಯನ್ನುಂಟು ಮಾಡುವ ಪರಿಸ್ಥಿತಿಯೂ ಆ ಕಾಲದಲ್ಲಿರಲಿಲ್ಲ. ಹೀಗಿದ್ದು ಡಿ|| ಮೆಜಿಸ್ಟ್ರೇಟರ ಅಪ್ಪಣೆಯ ಮೇರೆಗೆ ಪೋಲೀಸರು ಗುಂಡು ಹಾರಿಸಿದ್ದು ಯೋಗ್ಯವೆಂತ ರಮೇಶಂ-ಮಂಡಳದವರು ಹೇಗೆ ನಿರ್ಣಯ ಕೊಡುತ್ತಾರೆಂದು ನಮಗೆ ತಿಳಿಯದ ಮಾತು. ಅಧಿಕಾರಿಗಳು ವಿಕಾರವಶರಾಗಿ, ಕಾಂಗ್ರೆಸ-ದ್ವೇಷಪ್ರೇರಿತರಾಗಿ ಜನಸಂದಣಿಯ ಮೇಲೆ ಅಕಸ್ಮಾತ್ ಹಲ್ಲೆ ಮಾಡಿರುವಾಗ, ಆ ಪ್ರಕಾರ ನಮೂದಿಸಲು ಮಂಡಳದವರು ಅಧೈರ್ಯಪಟ್ಟದ್ದು ಯಾತರ ದ್ಯೋತಕ? ಈ ಮಂಡಳದ ಬಗ್ಗೆ ಮೈಸೂರಿನ ಕಾಂಗ್ರೆಸ ಪ್ರಮುಖರು ಅಪನಂಬಿಗೆ

THE CANARA INDUSTRIAL & BANKING SYNDICATE LTD.,

(INCORPORATTD IN BRITISH INDIA)

[Estd.. 1925.]

Head Office: "MUKUND NIVAS", UDIPI, S. INDIA

MEMBER·

RESERVE BANK OF INDIA, BANKERS' CLEARING HOUSE BOMBAY

DEPOSIT RATES.

3 to 5 months	.	2½% p a.
6 to 11 months	..	3% p a
12 to 23 months	. . .	3½% p a
24 months	. . . .	4/ p a
SHORT-TERM	.	2% p a

Banking Business of every description transacted.

ಯನ್ನು ಆಗಲೇ ಪ್ರದರ್ಶಿಸಿದ್ದು ತೀರ ಯೋಗ್ಯವಾಯಿವಾಯಿತೆಂದು ಈಗ ನಮಗೆ ಸಮಾಧಾನವಾಗಿದೆ. ಮದ್ರಾಸ ಹೈಕೋರ್ಟಿನ ನ್ಯಾಯಸ್ಥಾನದಲ್ಲಿ ದುಡಿದ ಸರ್ ಪೇಟಾ ರಮೇಶಂರವರಂಥವರು ಕೊಂಗ್ರೆಸ ದ್ವೇಷಕ್ಕೆ ಬಲಿಬಿದ್ದದ್ದು ಶ್ರೀ ವಿದುರನಾರಾಯಣ ದೇವರ ಲೀಲೆಯಿರಬಹುದೇ? ಕೊಂಗ್ರೆಸ ಕಾರ್ಯಕರ್ತರು ಹಳ್ಳಿ-ಹಳ್ಳಿಗಳಲ್ಲಿ ನಡೆಸಿದ ಪ್ರಚಾರದಿಂದ ಮೈಸೂರು ಸಂಸ್ಥಾನದಲ್ಲಿ ಅಧಿಕಾರಿಗಳೊಳಗೂ ಪ್ರಜೆಗಳೊಳಗೂ ಮಹಾದೊಡ್ಡ ದ್ವೇಷಭಾಂಡಾರವೇ ನಿರ್ಮಾಣಹೊಂದಿತೆಂತಲೂ ಅದರ ಪರಿಣಾಮದ ಮೂಲಕವಾಗಿಯೇ ಜನರು ಹಿಂಸಾಚಾರಪ್ರವೃತ್ತರಾದರೆಂತಲೂ ರಮೇಶಂ ಮಂಡಳದವರು ವರದಿಯ ಸಮಾಲೋಚ ವಿಭಾಗದಲ್ಲಿ ನಮೂದಿಸಿ, ತಮ್ಮ ಕೊಂಗ್ರೆಸ-ದ್ವೇಷವನ್ನು ವ್ಯಕ್ತಪಡಿಸಿದ್ದಾರೆಂದು ಯಾರಿಗೂ ಹೊಳೆಯುವಂತಿದೆ. ಕೊಂಗ್ರೆಸ ಕಮಿಟಿಯ ಚಟುವಟಿಕೆಗಳ ವಿಚಾರ ಮಂಡಳದ ವಿಚಾರ-ಕಕ್ಷೆಯಲ್ಲಿ ಸೇರಿರಲಿಲ್ಲ. ಕೊಂಗ್ರೆಸ ಕಮಿಟಿಯವರು ಈ ವಿಚಾರಣೆಯಲ್ಲಿ ಪಕ್ಷಗಾರರಿರಲಿಲ್ಲ. ಪೋಲೀಸರ ಕಡೆಯಿಂದ ಹಾಜರಾದ ಕಾರ್ಯಕರ್ತರ ಭಾಷಣಗಳ ಉಲ್ಲೇಖಗಳಿಂದ ರಮೇಶಂ-ಮಂಡಳದವರು ಈ ಪ್ರಕಾರ ಅಭಿಪ್ರಾಯಪಟ್ಟದ್ದು ಅನುಚಿತವೆಂದೇ ನಮ್ಮ ಅಂಬೋಣ.

೩. ಸಂಸ್ಥಾನೇತರ ಹಿಂದುಸ್ಥಾನದಲ್ಲಿ ರೂಢವಾಗಿರುವ ದಬ್ಬಾಳಿಕೆ ಕಾನೂನಿನ ಮೇರೆಗೆ ಮೈಸೂರಿನಲ್ಲಿ ಒಂದು ದಬ್ಬಾಳಿಕೆ-ಕಾನೂನನ್ನು ಸಂಘಟಿಸಬೇಕಾಗಿ ಮೈಸೂರು ಸರಕಾರಕ್ಕೆ ರಮೇಶಂ-ಮಂಡಳದವರು ಮಾಡಿದ ಶಿಫಾರಸನ್ನೋದಿ ನಮಗೆ ಪರಮಾಶ್ಚರ್ಯವಾಗಿದೆ. ದಬ್ಬಾಳಿಕೆಯ ಕಾನೂನುಗಳು ಪ್ರಜೆಗಳನ್ನು ದಬ್ಬಲು ಅಸಮರ್ಥವಿರುವವೆಂಬ ಮಾತನ್ನು ಸರ್ ಪೇಟಾರವರು ಅರಿಯರೇನು? ಲೋಕಶಾಹಿಯ ಗಂಗೋದಕ ಭೋರ್ಗರೆದು ದೇಶ-ವಿದೇಶಗಳಲ್ಲಿ ಹರಿಯುತ್ತಿರುವಾಗ, ಅದನ್ನು ಅಡ್ಡಗಟ್ಟಿ ನಿಲ್ಲಿಸಲು ದಬ್ಬಾಳಿಕೆಯ ಕಾನೂನುಗಳಂಥ ಒಡ್ಡುಗಳು ತೀರ ನಿರರ್ಥಕವಾದವುಗಳು. ರಾಷ್ಟ್ರೀಯ ಸಭೆಯ ಚಟುವಟಿಕೆಗಳನ್ನಷ್ಟೇ ನಿರ್ಬಂಧಿಸಲು ಈ ಕಾನೂನನ್ನು ನಿರ್ಮಿಸಬೇಕೆಂದು ಸರ್ ಪೇಟಾರವರು ಸೂಚಿಸಿದ್ದರೆ ಸಂಸ್ಥಾನೇತರ ಹಿಂದುಸ್ಥಾನದಲ್ಲಿ ನಡೆದ ಆಂದೋಲನದಿಂದ ಅವರು ಬುದ್ಧಿಗಲಿಯಲಿಲ್ಲವೆಂದು ನಾವು ಹೇಳಬೇಕಾಗಿದೆ. ಲೋಕಶಾಹಿಯ ಪುರಸ್ಕಾರ ಮಾಡುವವರನ್ನು ಇಂಥ ನಿರ್ಬಂಧಕ ಕಾನೂನುಗಳಿಂದ ನಾಶಪಡಿಸಲು ಇಲ್ಲವೆ ನಿರ್ಮೂಲಿಸಲು ಅಸಾಧ್ಯ, ಅಶಕ್ಯ! ಸಂಸ್ಥಾನದೊಳಗಿನ ಕೊಂಗ್ರೆಸ ಪ್ರಮುಖರನ್ನು ಕರೆಕೊಂಡು ಪ್ರಜೆಗಳ ಪರವಾಗಿ ಸರಕಾರವು ಕೈಕೊಳ್ಳಬೇಕಾದ ಯೋಜನೆಗಳ ಸ್ವರೂಪವನ್ನು ಗ್ರಹಿಸಿ ಕಾಲಮಾನಕ್ಕನುಚಿತವಾಗಿ ಅವನ್ನು ಕೈಕೊಳ್ಳುವದೇ ವಿಹಿತ. ಈಗಿನ ಯುಗಧರ್ಮವೇ ಹಾಗೆ. ಬಲಾಢ್ಯ ಬ್ರಿಟಿಶ ಸಾಮ್ರಾಜ್ಯಕರ್ತರು ಸಹ ಕಾಲಧರ್ಮವನ್ನು ನೆನಸಿ ಲೋಕಶಾಹಿ ಪ್ರವರ್ತಕರ, ಪುರಸ್ಕಾರ್ತರ ಆಲೋಚನೆ ಪಡೆಯಲುದ್ಯುಕ್ತವಾದಾಗ, ರಮೇಶಂ-ಮಂಡಳದವರು ಕಣ್ಮುಚ್ಚಿ ಕಾಣದವರಂತೆ ಮೈಸೂರು ಸರಕಾರಕ್ಕೆ ದಬ್ಬಾಳಿಕೆಯ ಕಾನೂನನ್ನು ಘಟಿಸಲು ಸೂಚನೆ ಮಾಡಿದ್ದು ಅಪ್ರಸಂಗವೆಂದೇ ನಮ್ಮ ಭಾವನೆ. ಮೈಸೂರು ಸರಕಾರಕ್ಕೆ ಈ ಸೂಚನೆ ಸವಿಯಾಗಿ ಕಾಣಬಹುದು, ಆದರೆ ಇದರಿಂದ ಕ್ಷೇಮವಿಲ್ಲ, ಕ್ಷೇಮವಾಗಲಿಕ್ಕಿಲ್ಲ; ಕ್ಷೇಮವಾಗಲಾರದೆಂದು ಸಂಸ್ಥಾನೇತರ ಹಿಂದುಸ್ಥಾನದೊಳಗಿನ ಸತ್ಯಾಗ್ರಹಕರ ನಿರಂಕಣೆಗಳ ಇತಿಹಾಸವೇ ಸಾಕ್ಷಿ. ದಿವಾಣರಾದ ಸರ್ ಮಿರ್ಝಾ ಇಸ್ಮಾಯಿಲ್‌ರವರು ತಾವು ಮಹಾತ್ಮರ ಗೆಳೆಯರೆಂದು ಹೇಳಿಸಿಕೊಳ್ಳುತ್ತಾರೆ, ಮಹಾತ್ಮರಿಗೂ ಅವರ ಮೇಲೆ ಅಷ್ಟೇ ಪ್ರೇಮವಾದರ ಗಳಿವೆ. ಸರ್ ಮಿರ್ಝಾ ಇಸ್ಮಾಯಿಲ್‌ರವರು ಮಹಾತ್ಮರ ಸಲಹೆ ಪಡೆದು ಸಂ| ಕೊಂ| ಕಾರ್ಯಕರ್ತರಿಗೂ ಮೈಸೂರು ಸರಕಾರಕ್ಕೂ ಇರುವ ಕಲಹ ಕಾರಣವನ್ನು ಇತ್ತಟ್ಟಿನ ವಿಚಾರವಿನಿಮಯದಿಂದ ಪರಿಹರಿಸಿಕೊಂಡರೆ ರಾಜ-ಪ್ರಜೆಗಳೊಳಗೆ ಸಂತೋಷಸಾಮ್ರಾಜ್ಯ ನೆಲೆಗೊಂಡು, ಇಂಥ ಅನಾಚಾರಗಳು ಘಟಿಸಲಾರವು. ರಮೇಶಂ ಮಂಡಳದವರು ದೀರ್ಘವಿಚಾರಿಗಳಾಗಿ, ನಿಸ್ಪೃಹರಾಗಿ, ನಿರ್ಭೀಡೆಯಿಂದ ವರದಿಯನ್ನು ತಯಾರಿಸಿದ್ದರೆ, ಅವರಾದರೂ ಇದೇ ಪ್ರಕಾರ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರೆಂದು ನಾವು ಎಣಿಸುತ್ತೇವೆ. ಅಂಥ ಪ್ರಸಂಗವನ್ನು ಸರ್ ರಮೇಶಂರವರು ಕಳೆದುಕೊಂಡದ್ದು ನಮಗೆ ವ್ಯಸನಕಾರಣ.

25,000 ವಿವಿಧ ಶಬ್ದಗಳುಳ್ಳ 'ಹೊಸ ನಿಘಂಟು'!

ಮೊಡರ್ನ

ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಸನರಿ.

ಇಂಗ್ಲಿಷ ಕನ್ನಡ

ಬರೆದವರು - ವೈದ್ಯಭಾನು ಡಿ. ಕೆ. ಭಾರದ್ವಾಜ ವಿದ್ಯಾಭೂಷಣ. ಮೈಸೂರ ಯುನಿವರ್ಸಿಟಿ ವ್ಹಾಯಸ ಚಾನ್ಸಲರರ ಮುನ್ನುಡಿಯುಳ್ಳ, ಸರ್ ಎಮ್. ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ। ಯು ರಾಮರಾಯರು ಹರಸಿದ ಈ ಡಿಕ್ಸನರಿಯು ಇದೀ ಕರ್ನಾಟಕದಲ್ಲಿ ಹೊಸ ಸಾಹಸ ಕೃತಿಯೊಳ್ಪದು ಅವಶ್ಯ ಸಂಗ್ರಹಿಸತಕ್ಕಂಥದ್ದು. ಬೆಲೆ ಕೇವಲ ೨ ರೂ. ಟ ಖ. ಪ್ರತ್ಯೇಕ. ಸಿಗುವಸ್ಥಳ.- ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

BHUVANENDRA PRODUCTS, LTD.

KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ರಕ್ತವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು.

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರ:—

ಭಟ್ಕಳ.—	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ.—	ಕಾಮತ ಸ್ಟೋರ್ಸ.
ಅಂಕೋಲಾ —	ವೇದಮೂರ್ತಿ ಹನುಮಟ್ಟ ಕೇಶವ ಭಟ್ಟ.	ಗೋಕರ್ಣ —	ಎಮ್ ಪ್ಹಿ. ಬಸ್ತಿಕರ, ಮರ್ಚಂಟ.
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ	ಶಿರ್ಶಿ —	ಆರ್. ಪ್ಹಿ. ಧಾಕಪ್ಪಾ, ಕೆಮಿಸ್ಟ.

ವಿಳಾಸ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರೆಂಚ್ ಆಫೀಸು: ಕುಮಟಾ. ಉ. ಕ.

OR

BHUVANENDRA PRODUCTS LTD, Head Office: KATAPADI, S. K.

ಪತ್ರಕರ್ತರ ನುಡಿಗನ್ನಡಿ.

೧ ಸಭಾಪ್ರೋತ್ಸವದಿಂದ ನ॥ ... ಹೇ... ರವರೂ ... ಸಾಹೇಬ ... ಯವರೂ ಕರ್ನಾಟಕ ಸಂಚಾರ ಕಾರ್ಯಕ್ರಮದಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯನ್ನು ಸೇರಿಸಿದ್ದಾಗಿ ತಿಳಿದು ನಾವು ಸಂತೋಷಪಟ್ಟಿದ್ದೆವು. ಸಭಾಪ್ರೋತ್ಸವರಿಗೆ ಸ್ವಾಗತ ಮಾಡಲು ಜನಸಾಮಾನ್ಯರು ಉತ್ಸುಕರಾಗಿದ್ದರು. ಆದರೆ ಸಂಚಾರದ ಅವಧಿ ತೀರ ಕಡಿಮೆಯಿದ್ದುದರಿಂದ ಎರಡೇ ಜಿಲ್ಲೆಗಳನ್ನು ಸಂಚಾರ ಕಾರ್ಯಕ್ರಮದಲ್ಲಿ ಸೇರಿಸಬೇಕಾಗಿ ... ದರು ತಪ್ಪಿಸಿದ ಮೇಲೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಸಂಚಾರ ಕಾರ್ಯಕ್ರಮದೊಳಗಿಂದ ನಮ್ಮ ಜಿಲ್ಲೆಯನ್ನು ಕಡಿಮೆ ಮಾಡಿದ್ದಾರೆಂದು ತಿಳಿಸಲು ವ್ಯಸನವಾಗುತ್ತದೆ. ಬೆಳಗಾವಿ ಧಾರವಾಡ ಜಿಲ್ಲೆಗಳಲ್ಲಿ ಉಗಿಬಂಡಿಯ ರಹದಾರಿಯಿರುವುದರಿಂದ ಲೋಕನಾಯಕರಿಗೆ ಸಂಚಾರ ... ಆಗಿಂದಾಗ ಒಂದು ತೊಂದರೆಯಾಗಲಿಲ್ಲ ... ನ ... ವ ಸತಿಯವರು ಸದ್ಯಕ್ಕೇ ಬೆಳಗಾವಿ ಧಾರವಾಡ ಜಿಲ್ಲೆಗಳಲ್ಲಿ ಸಂಚರಿಸಿದ್ದುಂಟು. ಇಂಥ ಪ್ರಸಂಗದಲ್ಲಿ ನಮ್ಮ ಜಿಲ್ಲೆ ಉಗಿಬಂಡಿ ರಹದಾರಿಯ ಹೊರಪ್ರದೇಶದಲ್ಲಿದ್ದು ಲೋಕನಾಯಕರಿಗೆ ಆಗಿಂದಾಗ ಸಂಚರಿಸಲು ಅನನುಕೂಲವಿರುವಾಗ ಎರಡು ಜಿಲ್ಲೆಗಳನ್ನು ನಾಮಧಾರಕರು ಸಂಚರಿಸಲಪೇಕ್ಷಿಸಿದಾಗ, ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಬೆಳಗಾವಿ ಧಾರವಾಡ ಜಿಲ್ಲೆಗಳನ್ನಷ್ಟೇ ಸಂಚಾರ ಕಾರ್ಯಕ್ರಮದಲ್ಲಿ ಸೇರಿಸಿದ್ದು ಬರೀ ಸ್ವಾರ್ಥವೆಂದು ಆಕ್ಷೇಪಿಸಿದರೆ ಇದ್ದಸ್ಥಿತಿ ಇದ್ದಕ್ಕಿದ್ದ ಹಾಗೆ ನಮೂದಿಸಿದಂತಾಗದೇ? ಬೆಳಗಾವಿ ಧಾರವಾಡ ಜಿಲ್ಲೆಗಳು ನಮ್ಮ ಕರ್ನಾಟಕದೊಳಗೆ ಮುಂದುವರಿದ ಜಿಲ್ಲೆಗಳು. ನಮ್ಮ ಕನ್ನಡ ಜಿಲ್ಲೆ ಹಿಂದುಳಿದ ಜಿಲ್ಲೆ. ಪ್ರಾಂತಿಕ ಕಾಂಗ್ರೆಸ ಕಮಿಟಿಯ ಪ್ರಮುಖರೆಲ್ಲರೂ ಧಾರವಾಡ-ಬೆಳಗಾವಿ ಜಿಲ್ಲೆಯವರು. ಆದುದರಿಂದ ನಮ್ಮ ಕನ್ನಡ ಜಿಲ್ಲೆಯ ವಿಷಯಕ ತಾತ್ಸಾರವಾಗುತ್ತದೆಂದು ನಾವು ಎಣಿಸಬೇಕಾಗಿದೆ. ಸತ್ಯಾಗ್ರಹ ಸಂಗ್ರಾಮದಲ್ಲಾಗಲಿ, ಕರನಿರಾಕರಣೆಯ ಹೋರಾಟದಲ್ಲಾಗಲಿ ಬೆಳಗಾವಿ ಧಾರವಾಡ ಜಿಲ್ಲೆಗಳಿಗಿಂತ ನಮ್ಮ ಜಿಲ್ಲೆಯವರು ಮುಂದುವರಿದು ತ್ಯಾಗಕಾರ್ಯ ಮಾಡಿರುವರೆಂದು ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಬೆಳಗಾವಿ ಧಾರವಾಡದವರೂ ನಮ್ಮನ್ನು ಹೊಗಳುತ್ತಾರೆ. ಆದರೆ ಪ್ರತ್ಯಕ್ಷ ಲಾಭ-ವಿಚಾರ ಬಂದೊದಗಿದಾಗ ನಮ್ಮ ಜಿಲ್ಲೆ ಕಣ್ಮರೆಯಾಗುತ್ತದಾಗಿ ಲೋಕಭಾವನೆ ಆಗಲು ಈ ಉದಾಹರಣೆಯೇ ಸಾಕು. ಕರ್ನಾಟಕ ಪ್ರಾಂತಿಕ ಕಮಿಟಿಯು ಆಳವಾಗಿ ವಿಚಾರಿಸಿ ಬೆಳಗಾವಿ ಧಾರವಾಡ ಜಿಲ್ಲೆಗಳಿಗಿಂತ ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಹೆಚ್ಚಿನ ಲಕ್ಷ್ಯಗೊಟ್ಟು ವರ್ತಿಸಬೇಕಾಗಿ ನಾವು ಸೂಚಿಸುತ್ತೇವೆ. ಕಂಡ ಮಾತನ್ನು ಕಂಡಂತೆ ಬರೆದ ಬಗ್ಗೆ ಬೇಸರಗೊಳ್ಳಬಾರದಾಗಿ ವಿನಂತಿ.

---

೨ ಮೈಸೂರಿನ ವಿದುರಾಶ್ವತ್ಥ ಪುಣ್ಯಕ್ಷೇತ್ರದಲ್ಲಿ ಚೈತ್ರ ಮಾಸದೊಳಗೆ ಶ್ರೀ ವಿದುರನಾರಾಯಣ ದೇವರ ಜಾತ್ರೆಯ ಸಮಯ ಅಲ್ಲಿಯ ಪೋಲೀಸರು ನಿರಪರಾಧಿ, ನಿಷ್ಪಾಪ ಜನರ ಮೇಲೆ ನಿಷ್ಕಾರಣ ಗುಂಡು ಹಾರಿಸಿ ಕೊಂದ ಬಗ್ಗೆ ಆಗ ಪತ್ರಿಕೆಗಳಲ್ಲಿ ಉಗ್ರವಾದ ಟೀಕೆಯು ಪ್ರಸಿದ್ಧ! ರಾಮರಾಜ್ಯದೊಳಗೆ ರಾವಣನೇ ಅವತೀರ್ಣ ಹೊಂದಿದನೆಂದು ಎಲ್ಲೆಲ್ಲಿಯೂ ಆಕ್ಷೇಪ ಮಾಡಲಾಗಿತ್ತು. ಮಹಾತ್ಮರ ತನಕ ಈ ದೂರು ತಲ್ಪಿತ್ತು. ಮೈಸೂರ ಸರಕಾರವು ಈ ಕುರಿತು ಚೌಕಶಿ ಮಂಡಳವನ್ನು ನೇಮಿಸಿ ತಯಾರಿಸಿದ ವರದಿಯ ತಾತ್ಪರ್ಯ ಕಳೆದ ಶನಿವಾರ ತಾ ೧೯ನೇಗೆ ಬೆಂಗಳೂರಿನಲ್ಲಿ ಪ್ರಕಟವಾಗಿದೆ. ಮದ್ರಾಸ ಹ್ಯಾಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಸರ್ ವೇಪಾ ರಮೇಶಂ ಮೊದಲಾದ ಮೂವರು ಬರೆದ ವರದಿಯ ತಾತ್ಪರ್ಯವನ್ನೋದಿದರೆ ಸರ್ ರಮೇಶಂ ರವರಂಥ ನಿರ್ಮಲ ಚಿತ್ತದವರು ಸಹ ಕಾಂಗ್ರೆಸ ದ್ವೇಷದಿಂದ ಮಲಿನರಾದರೆಂದು ಹೇಳಬೇಕಾಗುತ್ತದೆ. ವಿದುರಾಶ್ವತ್ಥದಲ್ಲಿ ಸೋಮವಾರ ಪೋಲೀಸರು ಗುಂಡು ಹಾರಿಸಿದ್ದು ಯೋಗ್ಯವೋ ಹೇಗೆ? ತಮ್ಮ ಮೇರೆದಪ್ಪಿದ್ದರೋ ಹೇಗೆ? ಎಂಬ ಎರಡೂ ಪ್ರಶ್ನೆಗಳ ಮೇಲೆ ರಮೇಶಂ ಚೌಕಶಿ ಮಂಡಳದವರು ಸರಕಾರದ ಪರವಾಗಿ ಉತ್ತರ ಕೊಟ್ಟಿದ್ದಾರೆ. ಗುಂಡಿನಿಂದ ಮಡಿದವರ ಸಂಖ್ಯೆ ೧೦ ಎಂತಲೂ ೩೨ ಅಲ್ಲೆಂದು ಪ್ರಕಟವಾದದ್ದು ತಪ್ಪೆಂತಲೂ ರಮೇಶಂರವರು ಅಭಿಪ್ರಾಯಪಟ್ಟಿದ್ದಾರೆ. ಇಷ್ಟಕ್ಕೇ ರಮೇಶಂ-ಮಂಡಳದವರು ತಮ್ಮ ವಿಚಾರವನ್ನು ಮುಗಿಸಿದ್ದರೆ ಭಿನ್ನಾಭಿಪ್ರಾಯವೆಂದು ಎಣಿಸಿ ನಾವು ಸುಮ್ಮಗುಳಿಯುತ್ತಿದ್ದೆವು. ಆದರೆ ರಮೇಶಂ-ಮಂಡಳದ ವಿಚಾರಸರಣಿಯನ್ನು ಪರಾಮರಿಸಿದರೆ ಡಾ॥ ಪಟ್ಟಾಭಿಯವರು ನುಡಿದಂತೆ ಮೈಸೂರು ಸರಕಾರದ ವಕೀಲಿಯನ್ನೇ ರಮೇಶಂ ಮಂಡಳದವರು ನಡಿಸಿದ್ದಾರೆಂದು ಸ್ಫುಟವಾಗುತ್ತದೆ. ವಿದುರಾಶ್ವತ್ಥದೊಳಗಿನ ಜನಸಂದಣಿ ಶಾಂತವಾಗಿತ್ತೆಂದೂ ಪೋಲೀಸರು ವಿವೇಕಹೀನರಾಗಿ ದೊಣ್ಣೆ ಹೊಡೆಯತೊಡಗಿದ ಬಳಿಕ ಪ್ರಕ್ಷೋಭೆಯುಂಟಾಯಿತೆಂತಲೂ ನಮೂದಿಸಿ ಡಿ॥ ಮೆಜಿಸ್ಟ್ರೇಟರಾದ ರಾ| ಅಪ್ಪಾಜಿ ಗೌಡರು ತಮ್ಮ ಅಧಿಕಾರಕ್ಕೂ ಹೊಣೆಗಾರಿಕೆಗೂ ಉಚಿತವಾಗಿ ನಡೆಯಲಿಲ್ಲವೆಂದು ರಮೇಶಂ-ಮಂಡಳದವರು ನಮೂದಿಸುತ್ತಾರೆ. ಹೀಗೆ ಮಂಡಳದ ಅಭಿಪ್ರಾಯವಿದ್ದಾಗ್ಯೂ, "ಜನರೇ ತಪ್ಪುಗಾರರು, ಜನಸಂದಣಿ ಯಾತ್ರಿಕರದಲ್ಲ ರಾಜಕಾರಣಿಗಳದು" ಎಂಬದಾಗಿ ರಮೇಶಂ-ಮಂಡಳದವರು ದೂರುತ್ತಾರೆ. ರಾಜಕಾರಣಿಗಳು ಮೈಸೂರು ಸರಕಾರಕ್ಕೆ ವಿರೋಧಿಸುವ ದುರುದ್ದೇಶದಿಂದ ವಿದುರಾಶ್ವತ್ಥದೊಳಗೆ ಸೇರಿದ್ದಿದ್ದರೆ ಪೋಲೀಸರು ದೊಣ್ಣೆ ಹೊಡೆಯುವ ವರೆಗೆ ಅವರು ಶಾಂತಚಿತ್ತದಿಂದಿರುತ್ತಿರಲಿಲ್ಲ. ರಾ| ಅಪ್ಪಾಜಿ ಗೌಡರು ವಿವೇಕಶೀಲರಾಗಿದ್ದರೆ ಗುಂಡು ಹಾರಿಸುವ ಪ್ರಸಂಗ ಒದಗುತ್ತಿರಲಿಲ್ಲವಾಗಿ ರಮೇಶಂ ಮಂಡಳವು ನಮೂದಿಸುತ್ತಿರಲಿಲ್ಲ. ಡಿ॥ ಮೆಜಿಸ್ಟ್ರೇಟರು ಹೇಳಿದಂತೆ ಜನರು ಕಲ್ಲೊಗೆದರೆಂಬ ವಿಧಾನವನ್ನೂ ರಮೇಶಂ ಮಂಡಳದವರು ಅಲ್ಲಗಳೆದಿದ್ದಾರೆ. ಅಧಿಕಾರಿಗಳ ಮೇಲೆ ಜನರು ಸಾಗಿ ಎರಗಲುದ್ಯುಕ್ತರಾಗಿದ್ದರೆಂಬ ಭಾವನೆಯನ್ನುಂಟು ಮಾಡುವ ಪರಿಸ್ಥಿತಿಯೂ ಆ ಕಾಲದಲ್ಲಿರಲಿಲ್ಲ. ಹೀಗಿದ್ದು ಡಿ॥ ಮೆಜಿಸ್ಟ್ರೇಟರ ಅಪ್ಪಣೆಯ ಮೇರೆಗೆ ಪೋಲೀಸರು ಗುಂಡು ಹಾರಿಸಿದ್ದು ಯೋಗ್ಯವೆಂತ ರಮೇಶಂ ಮಂಡಳದವರು ಹೇಗೆ ನಿರ್ಣಯ ಕೊಡುತ್ತಾರೆಂದು ನಮಗೆ ತಿಳಿಯದ ಮಾತು. ಅಧಿಕಾರಿಗಳು ವಿಕಾರವಶರಾಗಿ, ಕಾಂಗ್ರೆಸ ದ್ವೇಷಪ್ರೇರಿತರಾಗಿ ಜನಸಂದಣಿಯ ಮೇಲೆ ಅಕಸ್ಮಾತ್ ಹಲ್ಲೆ ಮಾಡಿರುವಾಗ, ಆ ಪ್ರಕಾರ ನಮೂದಿಸಲು ಮಂಡಳದವರು ಅಧೈರ್ಯಪಟ್ಟಿದ್ದು ಯಾತರ ದ್ಯೋತಕ? ಈ ಮಂಡಳದ ಬಗ್ಗೆ ಮೈಸೂರಿನ ಕಾಂಗ್ರೆಸ ಪ್ರಮುಖರು ಅಪನಂಬಿಗೆ

THE CANARA INDUSTRIAL & BANKING SYNDICATE LTD.,

(INCORPORATED IN BRITISH INDIA)

[Estd 1925]

Head Office: "MUKUND NIVAS", UDIPI, S. INDIA

MEMBER

RESERVE BANK OF INDIA, BANKERS CLEARING HOUSE BOMBAY

DEPOSIT RATES.

3 to 5 months	2½% p a
6 to 11 months	3/ p a
12 to 23 months	3½ p a
24 months	4/ p a
SHORT-TERM	2/ p a

Banking Business of every description transacted

ಯನ್ನು ಆಗಲೇ ಪ್ರದರ್ಶಿಸಿದ್ದು ತೀರ ಯೋಗ್ಯವಾಯಿತೆಂದು ಈಗ ನಮಗೆ ಸಮಾಧಾನವಾಗಿದೆ. ಮದ್ರಾಸ ಹೈಕೋರ್ಟಿನ ನ್ಯಾಯಸ್ಥಾನದಲ್ಲಿ ದುಡಿದ ಸರ್ ಪೇವಾ ರಮೇಶಂರವರಂಥವರು ಕೊಂಗ್ರೆಸದ್ವೇಷಕ್ಕೆ ಬಲಿಬಿದ್ದದ್ದು ಶ್ರೀ ವಿದುರನಾರಾಯಣದೇವರ ಲೀಲೆಯಿರಬಹುದೇ? ಕೊಂಗ್ರೆಸ ಕಾರ್ಯಕರ್ತರು ಹಳ್ಳಿ ಹಳ್ಳಿಗಳಲ್ಲಿ ನಡಿಸಿದ ಪ್ರಚಾರದಿಂದ ಮೈಸೂರು ಸಂಸ್ಥಾನದಲ್ಲಿ ಅಧಿಕಾರಿಗಳೊಳಗೂ ಪ್ರಜೆಗಳೊಳಗೂ ಮಹಾದೊಡ್ಡ ದ್ವೇಷಭಾಂಡಾರವೇ ನಿರ್ಮಾಣಹೊಂದಿತೆಂತಲೂ ಅದರ ಪರಿಣಾಮದ ಮೂಲಕವಾಗಿಯೇ ಜನರು ಹಿಂಸಾಚಾರಪ್ರವೃತ್ತರಾದರೆಂತಲೂ ರಮೇಶಂ ಮಂಡಳದವರು ವರದಿಯ ಸಮಾರೋಪ ವಿಭಾಗದಲ್ಲಿ ನಮೂದಿಸಿ, ತಮ್ಮ ಕೊಂಗ್ರೆಸ-ದ್ವೇಷವನ್ನು ವ್ಯಕ್ತಪಡಿಸಿದ್ದಾರೆಂದು ಯಾರಿಗೂ ಹೊಳೆಯುವಂತಿದೆ. ಕೊಂಗ್ರೆಸ ಕಮಿಟಿಯ ಚಟುವಟಿಕೆಗಳ ವಿಚಾರ ಮಂಡಳದ ವಿಚಾರ ಕಕ್ಷೆಯಲ್ಲಿ ಸೇರಲಿಲ್ಲ. ಕೊಂಗ್ರೆಸ ಕಮಿಟಿಯವರು ಈ ವಿಚಾರಣೆಯಲ್ಲಿ ಪಕ್ಷಗಾರರಿರಲಿಲ್ಲ. ಪೋಲೀಸರ ಕಡೆಯಿಂದ ಹಾಜರಾದ ಕಾರ್ಯಕರ್ತರ ಭಾಷಣಗಳ ಉಲ್ಲೇಖಗಳಿಂದ ರಮೇಶಂ ಮಂಡಳದವರು ಈ ಪ್ರಕಾರ ಅಭಿಪ್ರಾಯಪಟ್ಟದ್ದು ಅನುಚಿತವೆಂದೇ ನಮ್ಮ ಅಂಬೋಣ.

೩. ಸಂಸ್ಥಾನೇತರ ಹಿಂದುಸ್ಥಾನದಲ್ಲಿ ರೂಢವಾಗಿರುವ ದಬ್ಬಾಳಿಕೆ ಕಾನೂನಿನ ಮೇರೆಗ ಮೈಸೂರಿನಲ್ಲಿ ಒಂದು ದಬ್ಬಾಳಿಕೆ-ಕಾನೂನನ್ನು ಸಂಘಟಿಸಬೇಕಾಗಿ ಮೈಸೂರು ಸರಕಾರಕ್ಕೆ ರಮೇಶಂ-ಮಂಡಳದವರು ಮಾಡಿದ ಶಿಫಾರಸನ್ನೋದಿ ನಮಗೆ ಪರಮಾಶ್ಚರ್ಯವಾಗಿದೆ. ದಬ್ಬಾಳಿಕೆಯ ಕಾನೂನುಗಳು ಪ್ರಜೆಗಳನ್ನು ದಬ್ಬಲು ಅಸಮರ್ಥವಿರುವವೆಂಬ ಮಾತನ್ನು ಸರ್ ಪೇವಾರವರು ಅರಿಯರೇನು? ಲೋಕಶಾಹಿಯ ಗಂಗೋದಕ ಜೋರಾಗಿ ದೇಶ ವಿದೇಶಗಳಲ್ಲಿ ಹರಿಯುತ್ತಿರುವಾಗ, ಅದನ್ನು ಅಡ್ಡಗಟ್ಟಿ ನಿಲ್ಲಿಸಲು ದಬ್ಬಾಳಿಕೆಯ ಕಾನೂನುಗಳಂಥ ಒಡ್ಡುಗಳು ತೀರ ನಿರರ್ಥಕವಾದವುಗಳು. ರಾಷ್ಟ್ರೀಯ ಸಭೆಯ ಚಟುವಟಿಕೆಗಳನ್ನಷ್ಟೇ ನಿರ್ಬಂಧಿಸಲು ಈ ಕಾನೂನನ್ನು ಏರ್ಪಡಿಸಬೇಕೆಂದು ಸರ್ ಪೇವಾರವರು ಸೂಚಿಸಿದ್ದರೆ ಸಂಸ್ಥಾನೇತರ ಹಿಂದುಸ್ಥಾನದಲ್ಲಿ ನಡೆದ ಆಂದೋಲನದಿಂದ ಅವರು ಬುದ್ಧಿಗಲಿಯಲಿಲ್ಲವೆಂದು ನಾವು ಹೇಳಬೇಕಾಗಿದೆ. ಲೋಕಶಾಹಿಯ ಪುರಸ್ಕಾರ ಮಾಡುವವರನ್ನು ಇಂದ ನಿರ್ಬಂಧಕ ಕಾನೂನುಗಳಿಂದ ನಾಶಪಡಿಸಲು ಇಲ್ಲವೆ ನಿರ್ಮೂಲಿಸಲು ಅಸಾಧ್ಯ, ಅಶಕ್ಯ! ಸಂಸ್ಥಾನದೊಳಗಿನ ಕೊಂಗ್ರೆಸ ಪ್ರಮುಖರನ್ನು ಕರೆಕೊಂಡು ಪ್ರಜೆಗಳ ಪರವಾಗಿ ಸರಕಾರವು ಕೈಕೊಳ್ಳಬೇಕಾದ ಯೋಜನೆಗಳ ಸ್ವರೂಪವನ್ನು ಗ್ರಹಿಸಿ ಕಾಲಮಾನಕ್ಕನುಚಿತವಾಗಿ ಅವನ್ನು ಕೈಕೊಳ್ಳುವದೇ ವಿಹಿತ. ಈಗಿನ ಯುಗಧರ್ಮವೇ ಹಾಗೆ. ಬಲಾಢ್ಯ ಬ್ರಿಟಿಶ ಸಾಮ್ರಾಜ್ಯಕರ್ತರು ಸಹ ಕಾಲಧರ್ಮವನ್ನು ನೆನಸಿ ಲೋಕಶಾಹಿ ಪ್ರವರ್ತಕರ, ಪುರಸ್ಕರ್ತರ ಆಲೋಚನೆ ಪಡೆಯಲುದ್ಯುಕ್ತವಾದಾಗ, ರಮೇಶಂ ಮಂಡಳದವರ ಕಣ್ಣಿದ್ದು ಕಾಣದವರಂತೆ ಮೈಸೂರು ಸರಕಾರಕ್ಕೆ ದಬ್ಬಾಳಿಕೆಯ ಕಾನೂನನ್ನು ಘಟಿಸಲು ಸೂಚನೆ ಮಾಡಿದ್ದು ಅಪ್ರಸಂಗವೆಂದೇ ನಮ್ಮ ಭಾವನೆ. ಮೈಸೂರು ಸರಕಾರಕ್ಕೆ ಈ ಸೂಚನೆ ಸವಿಯಾಗಿ ಕಾಣಬಹುದು, ಆದರೆ ಇದರಿಂದ ಕ್ಷೇಮವಿಲ್ಲ ಕ್ಷೇಮವ ಗಳಿಸಲ್ಲ, ಕ್ಷೇಮವನಾಗಲಾರದೆಂದು ಸಂಸ್ಥಾನೇತರ ಹಿಂದುಸ್ಥಾನದೊಳಗಿನ ಸತ್ಯಾಗ್ರಹಕರ ನೀರ ಕಂಡೆಗಳ ಇತಿಹಾಸವೇ ಸಾಕ್ಷಿ. ದಿವಾನರಾದ ಸರ್ ಮಿರ್ಝಾ ಇಸ್ಮಾಯಿಲ್‌ರವರು ತಾವು ಮಹಾತ್ಮರ ಗೆಳೆಯರೆಂದು ಹೇಳಿಸಿಕೊಳ್ಳುತ್ತಾರೆ, ಮಹಾತ್ಮರಿಗೂ ಅವರ ಮೇಲೆ ಅಷ್ಟೇ ಪ್ರೇಮಾದರಗಳಿವೆ. ಸರ್ ಮಿರ್ಝಾ ಇಸ್ಮಾಯಿಲ್‌ರವರು ಮಹಾತ್ಮರ ಸಲಹೆ ಪಡೆದು ಸಂ। ಕೊಂ। ಕಾರ್ಯಕರ್ತರಿಗೂ ಮೈಸೂರು ಸರಕಾರಕ್ಕೂ ಇರುವ ಕಲಹ ಕಾರಣವನ್ನು ಇತ್ತಟ್ಟಿನ ವಿಚಾರವಿನಿಮಯದಿಂದ ಪರಿಹರಿಸಿಕೊಂಡರೆ ರಾಜ ಪ್ರಜೆಗಳೊಳಗೆ ಸಂತೋಷಸಾಮ್ರಾಜ್ಯ ನೆಲೆಗೊಂಡು, ಇಂಥ ಅನಾಚಾರಗಳು ಘಟಿಸಲಾರವು. ರಮೇಶಂ ಮಂಡಳದವರು ದೀರ್ಘವಿಚಾರಿಗಳಾಗಿ, ನಿಸ್ಪೃಹರಾಗಿ ನಿರ್ಭೀಡೆಯಿಂದ ವರದಿಯನ್ನು ತಯಾರಿಸಿದ್ದರೆ, ಅವರಾದರೂ ಇದೇ ಪ್ರಕಾರ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರೆಂದು ನಾವು ಎಣಿಸುತ್ತೇವೆ. ಅಂಥ ಪ್ರಸಂಗವನ್ನು ಸರ್ ರಮೇಶಂರವರು ಹೋಗಲಾಡಿಸಿಕೊಂಡದ್ದು ನಮಗೆ ವ್ಯಸನಕಾರಣ

25,000 ವಿವಿಧ ಶಬ್ದಗಳುಳ್ಳ 'ಹೊಸ ನಿಘಂಟು'

ಮೋಡರ್ನ ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಷನರಿ.
ಇಂಗ್ಲಿಷ ಕನ್ನಡ

ಓದಿದವರು - ವೈದ್ಯಭೂಷಣ ಕೆ. ಭಾರದ್ವಾಜ ವಿದ್ಯಾಭೂಷಣ ಮೈಸೂರ ಯೂನಿವರ್ಸಿಟಿ ವ್ಯಾಸ ಚಾನ್ಸಲರರ ಮುನ್ನುಡಿಯುಳ್ಳ ಸರ್ ಎಮ್ ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ| ಯು ರಾಮರಾಯರು ಹರಸಿದ ಈ ಡಿಕ್ಷನರಿಯು ಇದೀಗ ಕರ್ನಾಟಕದಲ್ಲಿ ಹೊಸ ಸಾಹಸ ಕೃತಿಯೊಳ್ಪದು ಅವಶ್ಯ ಸಂಗ್ರಹಿಸತಕ್ಕಂಥದ್ದು. ಬೆಲೆ ಕೇವಲ ೨ ರೂ. ಟ. ಖ. ಪ್ರತ್ಯೇಕ. ಸಿಗುವಸ್ಥಳ ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

BHUVANENDRA PRODUCTS, LTD.
KATAPADI, S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ರಕ್ತವರ್ಧಕ ತ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್ ವಿಪುಲ ಸೌಕರ್ಯ ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರ:—

ಭಟ್ಕಳ — ವಾಮನ ಗಣಪಯ್ಯ ಶ್ಯಾನಭಾಗ ಮರ್ಚಂಟ
ಹೊನ್ನಾವರ — ಕಾಮತ ಸ್ಟೋರ್ಸ್.
ಅಂಕೋಲಾ — ವೇದಮೂರ್ತಿ ಹನುಮಟ್ಟಿ ಕೇಶವ ಭಟ್ಟ
ಗೋಕರ್ಣ — ಎಚ್ ವ್ಹಿ ಬಸ್ತಿಕರ, ಮರ್ಚಂಟ
ಕಾರವಾರ — ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ
ಶಿರ್ಶಿ — ಆರ್ ವ್ಹಿ ಧಾಕಪ್ಪಾ ಕೆಮಿಸ್ಟ

ವಿಳಾಸ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಬ್ರೆಂಚ್ ಆಫೀಸು ಕುಮಟಾ. ಉ. ಕ.

OR

BHUVANENDRA PRODUCTS LTD.
Head Office KATAPADI, S. K.

ಕಾಸಮಾವೃತ್ತ.

ಶ್ರೀ ಯುವನಾಮ ಸಂವತ್ಸರದ [illegible] ಸೋಮವಾರ

ಬೇಸಾಯವೂ ಋಣವಿಮೋಚನೆಯೂ.

ಬೇಸಾಯವನ್ನು [illegible] ಹಿಂದ ದೇಶದ ಉದ್ಧಾರವಾಗದೆಂಬ ಮಾತು ಸ್ವಯಂಸಿದ್ಧವಾದುದು. ಬೇಸಾಯವೇ ನಮ್ಮ ಮುಖ್ಯ [illegible] ಪ್ರತಿ ವರ್ಷ ಬೇಸಾಯದ ಮೇಲೆ ಜೀವನೋಪಾಯ ನಡಿಸುವ, ಬೇಸಾಯದ ಮೇಲೇ [illegible] ಕೊಂಡಿರುವ ಜನರ ಸಂಖ್ಯೆ ಬೆಳೆಯುತ್ತಲಿದೆ ಎಂದೇ [illegible] ಇದಕ್ಕೆ ಕಾರಣವಾಗಿರಲಿ ಇಲ್ಲವೆ ಜನರ ಸ್ವಾಭಾವಿಕ [illegible] ಕಾರಣವಾಗಿರಲಿ ಸೋಮಾರಿತನವೇ ಕಾರಣವಾಗಿರಲಿ ದೇಶದ ಸ್ವಾಭಿಮಾನ-ದೇಶಾಭಿಮಾನಶೂನ್ಯತೆಗಳೇ ಕಾರಣವಾಗಿರಲಿ ಯಾವದೇ ಕಾರಣಗಳಿದ್ದರೂ ಪರಿಣಾಮ ಒಂದೇ. ಬೇಸಾಯೇತರ ಉದ್ಯೋಗಗಳು ವಿನಾಶ ಹೊಂದಿ ಕ್ರಮವಾಗಿ ಸ್ಥಿರವಾಗಿ ನಮ್ಮ ಹಿಂದೀ ಪ್ರಜೆಗಳು ಹೆಚ್ಚೆಚ್ಚಾಗಿ ಬೇಸಾಯದ ಮೇಲೆ ಜೀವನೋಪಾಯವನ್ನು ಸಾಗಿಸಿಕೊಳ್ಳುವ ಪ್ರಸಂಗ ಒದಗಿತು. ೧೮೯೧ನೇ ಇಸ್ವಿಯಲ್ಲಿ ೧೦೦ರಲ್ಲಿ ೬೧ರಷ್ಟು ಜನರ ಜೀವನೋಪಾಯ ಒಕ್ಕಲತನವಾಗಿದ್ದಿತು. ಆಮೇಲೆ ೧೦ ವರ್ಷಗಳಲ್ಲಿ ಅಂದರೆ ೧೯೦೧ನೇ ಇಸ್ವಿಯಲ್ಲಿ ಈ ಪ್ರಮಾಣ ೬೬ಕ್ಕೆ ಏರಿತು. ಇನ್ನು ೩೦ ವರ್ಷಗಳಲ್ಲಿ ಅಂದರೆ ೧೯೩೧ನೇ ಇಸ್ವಿಯಲ್ಲಿ ಆ ಪ್ರಮಾಣ ೭೩ಕ್ಕೆ ಏರಿತು. ಇನ್ನೂ ಅದು ಏರುತ್ತಲಿದೆ. ೧೦೦ಕ್ಕೆ [illegible] ಮಿಕ್ಕ ಜನರು ಈಗ ಒಕ್ಕಲತನದಿಂದ ಹೊಟ್ಟೆ ಹೊರೆಕೊಳ್ಳುತ್ತಿದ್ದಾರೆ. ಈ ಅವಸ್ಥೆಯ ಪೂರ್ವಾಪರವನ್ನು ನಾವು ಇಂದಿಗೆ ವಿಚಾರಿಸಬಯಸುವದಿಲ್ಲ. ಇಂದಿನ ಚರ್ಚೆಯ ಮಟ್ಟಿಗೆ ಆ ವಿಚಾರ ಅಪ್ರಸ್ತುತ. ಒಕ್ಕಲತನದಿಂದ ಚರಿತಾರ್ಥ ಸಾಗಿಸಬೇಕಾದ ಲೋಕಸಂಖ್ಯೆ ಹೆಚ್ಚಿತು. ಮತ್ತು ಈ ಬೇಸಾಯದ ಸ್ಥಿತಿಗತಿಯನ್ನು ಸುಧಾರಿಸಿದನಕ ದೇಶದ ಜನಾಂಗದ, ಸಮಾಜದ, ರಾಷ್ಟ್ರದ ಉದ್ಧಾರವಾಗುವಂತಿಲ್ಲ. ಈ ವಿಷಯಗಳನ್ನು ನಾವಿಂದಿಗೆ ಮುಟ್ಟಿ ನೋಡಬಯಸುತ್ತೇವೆ.

ಬೇಸಾಯದ [illegible] ಅವನತಿಗೆ ಕಾರಣವಾಗಿವೆ ವ್ಯಕ್ತಿ ಸಮಸ್ಯೆಗಳನ್ನು, ಸರಕಾರ ಸಮಸ್ಯೆಗಳನ್ನು ವ್ಯಕ್ತಿ ಸಮಸ್ಯೆಗಳನ್ನು ನಾವು ಈ ಹಿಂದೆ ವಿವರಿಸಿದ್ದೇವೆ. ಬೇಸಾಯಗಾರರು ಸೋಮಾರಿಗಳಾಗಿದ್ದರೆ ವಿಲಾಸಿಗಳಾಗಿದ್ದರೆ, ವ್ಯಸನಿಗಳು, ದುಡಿಯದವರು, ಆಸಕ್ತಿಯಿಂದ ಬೇಸಾಯವನ್ನು ನಡೆಸುವದಿಲ್ಲ. ಇವಲ್ಲದೆ ಇವರಲ್ಲಿ ಹಿಗ್ಗಿನಿಂದ ತಿರುಗುವವರನ್ನು ನಾವು ಒಕ್ಕಲಿಗರ ಮೇಲೆ ಹಾಕಿರುತ್ತೇವೆ. ಸರಕಾರದ ಸಾಂಪತ್ತಿಕ ಧೋರಣದ ಮೇಲೂ ಬೇಸಾಯ ಇಲಾಖೆಯ ಅಧಿಕಾರಿಗಳ ಕಾರ್ಯಪ್ರವೃತ್ತಿಯ ಮೇಲೂ ನಾವು ಆಕ್ಷೇಪಗಳನ್ನೆತ್ತಿದ್ದೇವೆ. ಒಕ್ಕಲತನಕ್ಕೆ ದೋಷವಾಗಿ ಒಕ್ಕಲತನದ ಉದ್ಧಾರಕ್ಕಾಗಿ, ಒಕ್ಕಲತನದ ಏಳ್ಗೆಗಾಗಿ ಆಪ್ತರಲ್ಲಿ ಆಗಬೇಕಾದ ತಿದ್ದುಪಾಟಗಳನ್ನೂ ನಾವು ಸೂಚಿಸಿದ್ದೇವೆ. ಇಂದಿಗೆ ಈ ಪಾರ್ಶ್ವಭೂಮಿಗೆ ಸಂಬಂಧಪಟ್ಟ ಮತ್ತೊಂದು ವಿಷಯವನ್ನು ನಾವು ವಿಚಾರಿಸಬಯಸಿದ್ದೇವೆ.

ಒಕ್ಕಲಿಗರ ಈಗಿನ ದೈನ್ಯಾವಸ್ಥೆಗೆ ಮುಖ್ಯ ಕಾರಣ ಸಾಲ ಋಣಭಾರ, ಋಣಸೂತ್ರಕ ಸಾಲವೇ ಹೊರತು ಏಕೆ, ಶಾಲಿಕ್ಕೂ ಮಿಗಿಲಾದ [illegible] ಆಯಧರ್ಮ ಅದೂ ಸಹ [illegible] ವೇ! ಸಾಲವಾಗಲು ಕಾರಣವೇನು? ಸಾಲಕ್ಕೆ ಹೊಣೆಗಾರರ್ಯಾರು? ಸಾವಕಾರರೋ ಸರಕಾರವೋ, ಒಕ್ಕಲಿಗರೋ? ಎಂಬ ವಿಚಾರವನ್ನು ನಾವು ಈಗ ಮಾಡಬಯಸುವದಿಲ್ಲ. ವಿಚಾರ ಮಾಡಿದ ಹಾಗೆ ಮೂವರೂ ಕಾರಣರಾಗಿ, ವ್ಯಾಪಾರ ವಿರೋಧವಾಗಿ ಸಂಪಾದಕ ಬಾಧಕ ಚರ್ಚೆ ಮಾಡಬಹುದು. ಪೂರ್ವಪಕ್ಷವನ್ನು ಮಂಡಿಸಿ, ಹಾಗೆಯೇ ಉತ್ತರ ಪಕ್ಷದಲ್ಲಿ ಖಂಡಿಸಿ, ವಿಷಯವನ್ನು ಸಿದ್ಧಾಂತ ನಿರೂಪಿಸಬಹುದು. ಆದರೆ, ಆ ಚರ್ಚೆಯು ಈವಾಗ ಅನವಶ್ಯಕ. ಒಕ್ಕಲಿಗರ ಋಣಭಾರಕ್ಕೆ ಹೊಣೆಗಾರರು ಯಾರೇ ಇರಲೊಲ್ಲರೇಕೆ? ಅವನ್ನು ಚರ್ಚಿಸಿ ಋಣಭಾರವನ್ನು ಹೊಣೆಗಾರರೊಳಗೆ ಹಂಚಿಹಾಕಿ ನಷ್ಟಪಟ್ಟವರಿಗೆ ನಷ್ಟಪಡಿಸಿದವರಿಂದ ನಷ್ಟ ತುಂಬಿ ಕೊಡಲು ಸಾಧ್ಯವಿಲ್ಲವಷ್ಟೇ! ಋಣಭಾರವನ್ನು ಗೃಹಿತ ಹಿಡಿದು ಅದನ್ನು ಪರಿಹರಿಸುವ ಬಗೆ ಹೇಗೆಂಬುದು ಮಾತ್ರ ವಿಚಾರವಂತರು ವಿಚಾರ ಮಾಡಬೇಕಾದ ವಿಷಯ, ವ್ಯವಹಾರಿಕ ಸಮಸ್ಯೆಯಿದು! ಬೇಸಾಯಗಾರರಿಗೆ ಅನುಗಾಲವೂ ತ್ರಾಸ ಕೊಡುವ ಉದ್ವಿಗ್ನತೆ, ವ್ಯಗ್ರತೆ, ವ್ಯಾಕುಲತೆ, ವಿಷಣ್ಣತೆಗಳನ್ನುಂಟು ಮಾಡುವ ಋಣಭಾರವನ್ನು ಇಳಿಸಿ, ಒಕ್ಕಲಿಗರಿಗೆ ಸುಖಜೀವನೋಪಾಯವನ್ನು ತೋರಿಸಿಕೊಟ್ಟನಕ ಬೇಸಾಯದ ಉದ್ಧಾರವಾಗದು. ಬೇಸಾಯ ಅದೊಂದು ವ್ಯವಸಾಯ. ಅದರಿಂದ ಸ್ವಪ್ರಯೋಜನ-ಸುಖ ಸಿಗುವದಾಗಿ ಬೇಸಾಯಗಾರರಿಗೆ ಅರಿತೊಂದನಕ, ಬೇಸಾಯದ ಹೊರೆಯನ್ನು ಆಸ್ಥೆಯಿಂದ ಅವರು ನಡಿಸರು, ನಡಿಸುವರೆಂದು ಎಣಿಸುವದು ದಡ್ಡತನವಲ್ಲದರೂ ಅಪ್ರಯೋಜಕವೇ ಸೈ! ಹಗಲಿರುಳು ಊಟವೆನ್ನದೆ, [illegible]ನನ್ನದೆ, ಬಿಸಿಲೆನ್ನದೆ ಮಳೆಯೆನ್ನದೆ ಗಳಿಕೆಯೆನ್ನದೆ ಬೇಸಾಯಗಾರರು ಹೊಲಗಳಲ್ಲಿ ಕಷ್ಟಪಟ್ಟು ಬೆಳಿಸಿದ ಬೆಳೆ ಋಣಭಾರಕ್ಕೆ ಋಣಭಾರದ ಬಡ್ಡಿಗಾಗಿ ಸಲ್ಲುತ್ತಿದ್ದರೆ ಬೇಸಾಯದ ಮೇಲೆ ಬೇಸಾಯಗಾರರಿಗೆ ಪ್ರೀತಿ, ಆಸಕ್ತಿ, ಮಮತೆಗಳು ಹುಟ್ಟಬಲ್ಲವೇ? ತಕ್ಕ ಮನೋವೃತ್ತಿಯ ಅಭಾವದಲ್ಲಿ ಉದ್ದಿಮೆ [illegible]ಕ್ಕೆ ಬರಬಲ್ಲದೇನು? "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬಂತೆ ಮಾನವನ ಬಂಧನಕ್ಕೆ ಮನಸ್ಸೇ ಕಾರಣ, ಮಾನವನ ಮೋಕ್ಷಕ್ಕೂ ಮನಸ್ಸೇ ಕಾರಣ. ಬಂಧ ಮೋಕ್ಷ ಇವೆರಡೂ ಅವಸ್ಥೆಗಳಿಗೆ ಮನಸ್ಸೇ ಸರ್ವ ಕಾರಣವೆಂದು ಶಾಸ್ತ್ರವಚನವಿರುವಾಗ ಮನಸ್ಸನ್ನು ಸರಿಪಡಿಸಲು, ಪ್ರಸನ್ನಗೊಳಿಸಲು ವ್ಯವಹಾರಿಕ ಸುಧಾರಣೆಗಳು ವಿಚಾರಪ್ರವೃತ್ತರಾಗಿ ದುಡಿದರೆ ಮಾತ್ರ ಬೇಸಾಯದ ಉದ್ಧಾರವಾಗಬಲ್ಲದು. ಬೇಸಾಯದ ಉದ್ಧಾರವು ಬೇಸಾಯಗಾರ ವ್ಯಕ್ತಿಯ ಮನಃಪ್ರವೃತ್ತಿಯ ಪ್ರಸನ್ನತೆಯನ್ನೇ ಸರ್ವಥಾ ಅವಲಂಬಿಸಿರುವದು ಹೊಂದಿಕೊಂಡಿದೆಂದು ಹೇಳಬೇಕಾಗಿಲ್ಲ. ಬೇಸಾಯಗಾರರ ಮೇಲಿರುವ ಋಣಭಾರ ಪರಿಹಾರ ಹೊಂದಿದರೆ ಬೇಸಾಯಗಾರರ ಮನಸ್ಸು ಪ್ರಸನ್ನವಾಗಿ, ಹುರುಪಗೊಂಡು ಪ್ರಪಂಚದಲ್ಲಿ ಆಸಕ್ತಿ ಹಿಡಿಯುವದು, ವಿಷಣ್ಣತೆ, ಉದಾಸೀನತೆ ದೂರವಾಗಬಲ್ಲವು. ಋಣಭಾರವನ್ನು ಇಳಿಸುವಾಗ ಬೇಸಾಯಗಾರರು ಶೀಲಭ್ರಷ್ಟರಾಗದಂತೆ ಯೋಜಕರು ಜಾಗ್ರತೆ ಕೊಳ್ಳತಕ್ಕದ್ದು ಮಾತ್ರ ಅಗತ್ಯ-ಅತ್ಯಗತ್ಯ!

ಬೇಸಾಯಗಾರರಿಂದ ಸಲ್ಲತಕ್ಕ ಸಾಲವನ್ನು ಸಾವಕಾರರ ಸಂತೋಷದಿಂದ ತೀರಿಸಬೇಕೆಂದು ನಾವು ಹಿಂದಿನಿಂದ ಪ್ರತಿಪಾದಿಸುತ್ತ ಬಂದಿದ್ದೇವೆ. ಆ ಅಭಿಪ್ರಾಯವನ್ನು ನಾವು ಈಗಲೂ ಒತ್ತಿಹೇಳುತ್ತೇವೆ. ಬೇಸಾಯಗಾರರ ಸಾಲವನ್ನು ಅಳಿಸುವಾಗ ಬೇಸಾಯಗಾರರು ಎಷ್ಟರಲ್ಲೂ ಮತ್ತೆ ಗೇಡಾಗದಂತೆಯೂ ಅವರಿಗೆ ಪುನಃ ಸಾಲ ಹುಟ್ಟುವಂತೆಯೂ ಕಲ್ಪಕರು ಯೋಜಕರಾಗತಕ್ಕದ್ದು. ಅಂದರೆ ಮಾತ್ರ ಆ ಯೋಜನೆಯಿಂದ ಶಾಶ್ವತವಾದ ಸಮಾಜಕಲ್ಯಾಣವಾಗಬಲ್ಲದು. ಸಾಲ ಮುಳುಗಿಸುವದೇನೋ ಸುಲಭ ಮಾತು. ಆದರೆ ಸಾವಕಾರರ ನಂಬಿಗೆ, ಸಾಲಗಾರರ ಪತ್ತು ಇವು ಸಮಾಜದ ಅಮೂಲ್ಯವಾದ ಐಶ್ವರ್ಯ ಭಾಂಡಾರ. ಇವುಗಳಿಗೆ ಯಾವದೇ ಪ್ರಕಾರದಿಂದ ಬಾಧೆ ತಟ್ಟಿದರೆ ಸಾಲ ಪರಿಹಾರ ಹೊಂದಿದರೂ ಬೇಸಾಯಗಾರರು ಉದ್ಧಾರ ಹೊಂದರು. ಶಾಶ್ವತವಾದ ಸುಖಸಾಧನೆಗೆ ಅವಶ್ಯವುಳ್ಳ ಹೊಣೆಗಾರಿಕೆ ತಪ್ಪಿ ಬೇಸಾಯಗಾರರು ಪತಿತರಾಗುವರು, ಪ್ರಪಂಚದ ಗಾಂಭೀರ್ಯ ನಷ್ಟವಾಗಿ ಸಮಾಜವು ಸ್ವೇಚ್ಛಾಚಾರಿಯಾಗುವ ಭೀತಿಯುಂಟು. ಆದರಿಂದ ಸಾವಕಾರರ ಸಾಲ ತೀರುವಂತೆಯೂ, ಸಾಲಗಾರರು ಸಾಲ ತೀರಿಸುವಂತೆಯೂ ಯೋಜಕರು ಯೋಜಿಸಬೇಕು. ಭೂಭದ್ರ ಬೇಂಕುಗಳಿಂದ ಸರಕಾರವು ಸಾಲಗಳನ್ನು ಪರಿಹರಿಸುವ ಯೋಜನೆಯನ್ನೇನೋ ಮಾಡಿರುವದು ನಿಜ, ಆದರೆ ಅದರಿಂದ ಜನಸಾಮಾನ್ಯರಿಗೆ ಪ್ರಯೋಜನವಿಲ್ಲವೆಂದು ನಾವು ಈ ಮುಂಚೆ ಹೇಳುತ್ತೇವೆ, ಮತ್ತು ಅನುಭವದಿಂದ ಈಗಲೂ ಅದೇ ಸಂಗತಿಯನ್ನು ದೃಢವಾಗಿ ಹೇಳಬಲ್ಲೆವು. ಬೇಂಕಿನಿಂದ ಸಿಗುವ ಸಾಲದ ಮೊಬಲಗು, ಅದಕ್ಕಿರುವ ಬಡ್ಡಿಯ ದರ, ಸಾಲ ತೀರಿಸುವ ಅವಧಿ ಬದ್ಧತೆ ಮಾಡಿಕೊಡಬೇಕಾದ ಆಸ್ತಿ ಇವುಗಳ ವಿಚಾರ ಮಾಡಿದರೆ ಸಾಮಾನ್ಯ ಬೇಸಾಯಗಾರನಿಗೆ ಈ ಬೇಂಕಿನಿಂದ ಸಾಲ ಕೊಳ್ಳುವದಿರಲಿ, ಆ ಬೇಂಕಿನ ಗೊಡವೆಯನ್ನೇ ಬಿಟ್ಟು ಒತ್ತಟ್ಟಿಗೆ ಕುಳಿತುಕೊಳ್ಳುವದು ಸಹಜ. ಸರಕಾರವು ಕೊಡುವ ತಗಾವಿ ಸಾಲಗಳ ಸ್ಥಿತಿ ಇದಕ್ಕೂ ಕೆಟ್ಟದ್ದು. ಹಿಂದುಸ್ಥಾನ ಸರಕಾರದವರು ನೇಮಿಸಿದ ಸೆಂಟ್ರಲ್ ಬೇಂಕಿಂಗ ಕಮಿಟಿಯವರೇ ಈ ಸಾಲಗಳಿಂದ ಬೇಸಾಯಗಾರರಿಗೆ ಹಿತವಾಗಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಸಾಲದ ಅರ್ಜಿ ಮನ್ನಣೆಯಾಗ

ಲಕ್ಕೆ ವಿಳಂಬವಾಗುತ್ತಿವೆ. ಒಂದುವೇಳೆ ಮನ್ನಣೆ ದೊರೆತರೆ ಮನ್ನಣೆಯಾದ ಸಂಘಗಾರರ ಕಡೆಯಿಂದ ಲಂಚ ತಿನ್ನುವ ಪ್ರಸಂಗ, ವಸೂಲಿಯ ಕಠೋರ ಕ್ರಮ, ಇವೇ ಮೊದಲಾದ ದೋಷಗಳ ಮೂಲಕ ಸಾಲಗಾರರಿಗೆ ಉಪಕಾರಕ್ಕಿಂತ ಅಪಕಾರವೇ ಮಿಗಿಲಾಗುವ ಅನುಭವ. ಸಹಕಾರ ಸಂಘಗಳು ಬೇಸಾಯಗಾರರಿಗೆ ಅವಶ್ಯವುಳ್ಳ ದೀರ್ಘಾವಧಿಯ ಸಾಲಗಳನ್ನು ಕೊಡುವದಿಲ್ಲ, ಕೊಡಮಾಡಿದರೂ ಆ ಕಠೋರ ಕ್ರಮಕ್ಕೊಳಪಟ್ಟು ಸಾಲ ಕೊಳ್ಳುವದು ದುರಾವಸ್ಥೆ ಮಾತ್ರ, ಒಂದಾವರ್ತಿ ಕೊಂಡರೂ ಅವನ್ನು ತೀರಿಸಲಾಗದೆ ಸಂಕಟಪಡಬೇಕಾಗುತ್ತದೆ. ಆದರಿಂದ ಈಗಿನ ಯಾವದೇ ಕ್ರಮ ಋಣಭಾರದಿಂದ ತಲ್ಲಣಿಸುವ ಬೇಸಾಯಗಾರನಿಗೆ ನಿಷ್ಪ್ರಯೋಜಕ.

ಸರಕಾರವೇ ಸಾಲದ ಹೊರೆಯನ್ನು ಹೊತ್ತುಕೊಳ್ಳಬೇಕು, ಅಂದರೆ ಮಾತ್ರ ಬೇಸಾಯಗಾರರು ಋಣಮುಕ್ತರಾಗಬಲ್ಲರು. ವಿದೇಶಗಳ ವಿಚಾರ ಮಾಡಿದರೂ ಇದೇ ಸಿದ್ಧಾಂತ ಸೂಚಿಸುವ ಹಾಗಿದೆ. ಜರ್ಮನಿ, ಫ್ರಾನ್ಸ್, ಡೆನ್ಮಾರ್ಕ, ಹಂಗೇರಿ ಮೊದಲಾದ ಯಾವತ್ತೂ ದೇಶಗಳಲ್ಲಿ ಸರಕಾರವು ಬೇಸಾಯಗಾರರ ಸಾಲ-ನಿವಾರಣೆಗಾಗಿ, ದ್ರವ್ಯ-ಸಹಾಯಕ್ಕಾಗಿ ಪ್ರತ್ಯೇಕ ಬೇಂಕುಗಳನ್ನು ಏರ್ಪಡಿಸಿ, ಅವರ ಉನ್ನತಿಗಾಗಿ ಪ್ರಯತ್ನಪಡುತ್ತಿರುವದನ್ನೂ ಸಾಲವನ್ನು ಸಣ್ಣ ಸಣ್ಣ ಕಂತುಗಳಿಂದ ತೀರಿಸಿಕೊಳ್ಳುವದನ್ನೂ ನಾವು ಕಾಣಬಹುದು. ಕಂತುಗಳನ್ನು ನಿಶ್ಚಯಿಸುವಾಗ ಅಲ್ಲಿಯ ಸರಕಾರಗಳು ಸಾಲಗಾರನ ಐಪತ್ತನ್ನು ವಿಚಾರಿಸುತ್ತವೆ, ಸಾಲಗಾರನ ಹುಟ್ಟುವಳಿ ಆತನ ಪ್ರಪಂಚ ಖರ್ಚು ಇವುಗಳ ಆಲೋಚನೆಯಿಂದ ಕಂತುಗಳ ಪ್ರಮಾಣವನ್ನು ಬೇಂಕುಗಳು ನಿರ್ಧರಿಸುತ್ತವೆ. ಫಿನ್‌ಲೆಂಡಿನಲ್ಲಿ ಸಾಲ ತೀರಿಸಲು ೩೦ ವರ್ಷಗಳ ಅವಧಿ, ಚಿಲಿ, ಜರ್ಮನಿ ದೇಶಗಳಲ್ಲಿ ೩೩ ವರ್ಷ, ನ್ಯೂಝಿಲೆಂಡದಲ್ಲಿ ೩೬½ ವರ್ಷ, ಆಸ್ಟ್ರೇಲಿಯಾದಲ್ಲಿ ೪೨ ವರ್ಷ, ಇಟಾಲಿ ಜಪಾನ ದೇಶಗಳಲ್ಲಿ ೫೦ ವರ್ಷ, ಆಸ್ಟ್ರಿಯಾದಲ್ಲಿ ೫೪½ ವರ್ಷ, ಸ್ವಿಟ್ಝರ್ಲೆಂಡದಲ್ಲಿ ೫೭ ವರ್ಷ, ಡನ್ಮಾರ್ಕದಲ್ಲಿ ೬೦ ವರ್ಷ ಹಂಗೇರಿಯಲ್ಲಿ ೬೩ ವರ್ಷ, ಆಯರ್ಲೆಂಡದಲ್ಲಿ ೬೮ ವರ್ಷ, ಫ್ರಾನ್ಸದಲ್ಲಿ ೭೫ ವರ್ಷ, ಹೀಗೆ ದೀರ್ಘಾವಧಿ ಕೊಟ್ಟು ಬೇಸಾಯಗಾರರಿಂದ ನಿಯಮಿತವಾಗಿ ಸಾಲ ತೀರಿಸಿಕೊಳ್ಳುವ ಕ್ರಮ ರೂಢವಾಗಿರುತ್ತದೆ. ಬೇಸಾಯಗಾರರಿಗೆ ಅವಶ್ಯವುಳ್ಳ ದ್ರವ್ಯಸಹಾಯವು ಇದೇ ಕ್ರಮದಿಂದ ಪೂರೈಸಲ್ಪಡುತ್ತದೆ. ಜರ್ಮನಿಯೊಳಗೆ Landschaften ಎಂಬ ಭೂಪತ್ರ ಬೇಂಕುಗಳಿವೆ. ಸರಕಾರವು ಸಾಲಪತ್ರಗಳಿಂದ (debentures) ಬಂಡವಲವನ್ನು ಎತ್ತುವದು ಮಾಡಿ ಅದನ್ನು ಬೇಸಾಯಗಾರರಿಗೆ ಸಾಲ ಕೊಟ್ಟು ನಡಿಸುವ ವ್ಯವಹಾರದಲ್ಲಿ ಉಳಿಯುವ ಲಾಭಾಂಶವನ್ನು (amortization) ಸಾಲಪರಿಹಾರ ನಿಧಿಯೆಂದು ಸಂಗ್ರಹಿಸಿಟ್ಟು ಆ ನಿಧಿಯೊಳಗಿಂದ ಪರಸ್ಪರ ಸಾಲವನ್ನು ೩೩ ವರ್ಷಗಳಲ್ಲಿ ತೀರಿಸಿಕೊಳ್ಳುತ್ತದೆ. ಪ್ರತ್ಯಕ್ಷವಾಗಿ ಸಾಲ ಒಪ್ಪಿಸುವ ಹೊಣೆ ಬೇಸಾಯಗಾರನಿಗಿಲ್ಲ. ಈ ಏರ್ಪಾಟಿನಿಂದ ಜರ್ಮನಿಯಲ್ಲಿ ಸಾಲಗಾರರು ನಿಶ್ಚಿಂತರಾಗಿ, ಆಸಕ್ತಿಯಿಂದ ದುಡಿದು ಬೇಸಾಯದ ಉದ್ಧಾರವನ್ನು ಸಾಧಿಸಿ ಸುಖಿಗಳಾಗಿದ್ದಾರೆ. ಈ ಬೇಂಕುಗಳು ಯುರೋಪ ಖಂಡದಲ್ಲಿ ಮಾದರಿ ಬೇಂಕುಗಳೆಂದೆಣಿಸಲ್ಪಟ್ಟು ಎಲ್ಲೆಲ್ಲಿಯೂ ಈ ಮಾದರಿಯ ಮೇಲೆ ಬೇಂಕುಗಳು ಸ್ಥಾಪನೆ ಹೊಂದುತ್ತಲಿವೆ. ಸಾಮಾನ್ಯ ಬೇಸಾಯಗಾರರಿಗೆ, ಋಣಭಾರದಿಂದ ಗೋಣು ಮುರಕೊಂಡು ನಿರಾಧಾರದ ಜನರಿಗೆ ಇದೊಂದು ಮಹಾ ದೊಡ್ಡ ಆಧಾರವಾಗಿ ಪರಿಣಮಿಸಿದರೆ ಆಶ್ಚರ್ಯವಿಲ್ಲ! ಈ ಯೋಜನೆಯಿಂದ ಸಾಮಾನ್ಯ ಲೋಕಕ್ಕೂ ಸರಕಾರಕ್ಕೂ ಸ್ನೇಹ-ಸೌಹಾರ್ದ-ಸಹಕಾರಗಳುಂಟಾಗಿ ಈರ್ವರೂ ಅನ್ಯೋನ್ಯ ಉಪಕಾರಿಗಳಾಗಿ ದುಡಿಯುತ್ತಾರೆ. ಪ್ರಜೆಗಳ ತೊಡಕುಗಳನ್ನು ನಿವಾರಿಸಲು ಅಲ್ಲಿ ಸರಕಾರವೇ ತತ್ಪರತೆಯಿಂದ ದುಡಿಯುತ್ತಿದೆ. ಈ ಕ್ರಮವನ್ನು ನಮ್ಮ ಹಿಂದುಸ್ಥಾನ ಸರಕಾರವೂ ಪ್ರಾಂತಿಕ ಸರಕಾರಗಳೂ ಅಭ್ಯಾಸ ಮಾಡಿ ಇಲ್ಲಿಯ ಪರಿಸ್ಥಿತಿಗುಚಿತನಾಗಿ ತಕ್ಕ ತಿದ್ದುಪಾಟುಗಳೊಡನೆ ಒಂದು ಯೋಜನೆಯನ್ನು ತಯಾರಿಸಿ ಪ್ರಚಾರಗೊಳಿಸಬೇಕಾಗಿ ನಮ್ಮ ವಿಜ್ಞಾಪನೆ. ಮುಂಬಯಿ ಸರಕಾರವು ಋಣವಿಮೋಚನ-ಬಿಲ್ಲನ್ನು ತಯಾರಿಸುತ್ತಿರುವದಾಗಿ ತಿಳಿಯುತ್ತದೆ. ಇಂಥ ಸಂದರ್ಭದಲ್ಲಿ ವಿದೇಶದೊಳಗಿನ ಪದ್ಧತಿಗಳನ್ನು ಸ್ವದೇಶ-ಪರಿಸ್ಥಿತಿಗುಚಿತವಾಗಿ ಕೈಕೊಂಡು ಪುರಸ್ಕರಿಸಬೇಕೆಂದು ನಾವಾಗಿ ಹೇಳುವದವಶ್ಯಕ. ಬೇಸಾಯಗಾರರಿಗೆ, ಅಷ್ಟೇಕೆ, ನಮ್ಮ ಇಡೀ ಹಿಂದೀ ಜನಾಂಗಕ್ಕೇ ಬಾಧಿಸುವ ಮಹಾ ಸಮಸ್ಯೆಯೆಂದರೆ ಋಣಭಾರವೇ! ಅದನ್ನು ವಿದೇಶೀಯರು ಚಾತುರ್ಯದಿಂದ ಪರಿಹರಿಸಿಕೊಂಡು ಬೇಸಾಯವನ್ನು ಅಭ್ಯುದಯಗೊಳಿಸಿದ್ದಾರೆ. ಡೆನ್ಮಾರ್ಕ, ಹೊಲಂಡ, ಇಟಾಲಿ, ಸ್ವಿಝರ್ಲಂಡ, ಜಪಾನ ಮೊದಲಾದ ದೇಶಗಳೊಳಗಿನ ಊರ್ಜಿತಾವಸ್ಥೆಗೆ, ಉನ್ನತಿಗೆ, ಉತ್ಕರ್ಷಕ್ಕೆ ಬೇಸಾಯಗಾರರಿಗಿರುವ ರಾಜಾಶ್ರಯವೂ ಆ ರಾಜಾಶ್ರಯದಿಂದ ದೊರೆತ ಋಣವಿಮೋಚನೆಯೂ ಪ್ರಧಾನ ಕಾರಣ! ಅದನ್ನೇ ಮಾದರಿಯಾಗಿಟ್ಟುಕೊಂಡು ನಮ್ಮಲ್ಲಿಯ ಕಾಂಗ್ರೆಸ ಪ್ರಧಾನ ಮಂಡಳಗಳು ಶೀಘ್ರವೇ ಈ ಸಮಸ್ಯೆಯನ್ನು ಬಿಡಿಸುವವಾಗಿ ನಾವು ಹಾರೈಸುತ್ತೇವೆ.

ಹಿಟ್ಲರನು ಸುಖ ಕೊಡುವದಿಲ್ಲ!

[ನಿರೀಕ್ಷಕನು ಬರೆದುದು]

ಮಹಾಪೇಕ್ಷೆಯೇ ಆತನಿಗಿಲ್ಲ, ಒಂದು ಪರಿಯಿಂದ ಆತನಿಗೆ ಸಮಾಧಾನ ಮಾಡಗೊಳಿಸಿದರೆ ಇನ್ನೊಂದು ಪರಿಯಿಂದ ಆತನು ವಿವಾದ-ಕಾರಣಗಳನ್ನು ನಿರ್ಮಿಸುತ್ತಾನೆ. ಮಹಾಹತು-ರಾಜಕಾರಣವನ್ನು ನಾನು ಈ ಹಿಂದೆಯೇ ವಿವರಿಸಿದ್ದೇನೆ. ಸ್ಪೇನದೊಳಗೆ ಆತನು ಮುಸೋಲಿನಿಯವರ ಸಹಕಾರದಿಂದ ನಡಿಸುವ ಕಾರಸ್ಥಾನವನ್ನು ನಾನು ಈ ಹಿಂದೆ ವಿವರಿಸಿ ಸ್ಪೇನದೊಳಗಿನ ಗಣಿಗಳ ಮೇಲೆ ಆತನು ಕಣ್ಣಿಟ್ಟಿದ್ದಾನೆಂದು ಹೇಳಿದ್ದೆ! ಹಿಟ್ಲರ-ಮುಸೋಲಿನಿಯವರಿಗೂ ಸೇನಾಪತಿ ಫ್ರೆಂಕೋರವರಿಗೂ ಸೌಖ್ಯದಿಂದ ನಡೆದ ಪತ್ರವ್ಯವಹಾರವನ್ನು ಸ್ಪೇನದೊಳಗಿನ ವಿದೇಶ ಕಚೇರಿಯವರು ಗುಪ್ತಚಾರರ ಮುಖಾಂತರ ಸಂಪಾದಿಸಿ ಹಿಟ್ಲರ-ಮುಸೋಲಿನಿಯವರ ಕಾರಸ್ಥಾನದ ಫಲಿತಾಂಶವನ್ನು ಕಂಡುಹಿಡಿದಿದ್ದಾರೆ. ಸ್ಪೇನದೊಳಗಿನ ರಿಯೋ ಟಿಂಟೋದಲ್ಲಿ ಅಪಾರ ಖನಿಜ ಸಂಪತ್ತುಳ್ಳ ಗಣಿಗಳಿವೆ. ಬ್ರಿಟಿಶ ಸಾವಕಾರರು ೪ ಕೋಟಿ ಪವನು ಖರ್ಚು ಮಾಡಿ ಅಲ್ಲಿ ಖನಿಜ ಸಂಪತ್ತನ್ನು ಪಡೆಯುತ್ತಿದ್ದಾರೆ. ಅವನ್ನು ಸೇನಾಪತಿ ಫ್ರೆಂಕೋರವರು ಹಿಟ್ಲರ ಮುಸೋಲಿನಿಯವರಿಗೆ ಒಪ್ಪಿಸಿ ಸಾಲ ತೀರಿಸಿಕೊಳ್ಳಲು ಹವಣಿಸಿದ್ದಾರೆ. "ನಮಗೆ ಇದಿರಾಗುವ ಸಾಮರ್ಥ್ಯ ಬ್ರಿಟಿಶ ಸಾಮ್ರಾಜ್ಯಕ್ಕಿರುವದಿಲ್ಲವೆಂಬ ಜರ್ಮನ್ ದೇಶದೊಳಗಿನ ಅಭಿಪ್ರಾಯವನ್ನು ನಾಮಾಂಕಿತ ಜರ್ಮನ್ ಲೇಖಕರಾದ ಹರ್ ಪ್ರೊಫೆಸರ್ ಸ್ಪಿನರ್‌ರವರು ಕಳೆದ ವರ್ಷ ಪ್ರಕಟಿಸಿದ 'Danger Zones of British Empire' ಬ್ರಿಟಿಶ ಸಾಮ್ರಾಜ್ಯದ ಅಪಾಯ ಸ್ಥಳಗಳೆಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಹಿಂದುಸ್ಥಾನದ ಗಡಿಪ್ರದೇಶದಲ್ಲಿ ಬ್ರಿಟಿಶರ ಸೈನ್ಯ-ಶಾಲೆಯುಂಟು, ಪ್ಯಾಲೆಸ್ಟೈನದಲ್ಲಿ ಬ್ರಿಟಿಶ ಸೈನಿಕರು ಶೌರ್ಯಪ್ರದರ್ಶನ ಮಾಡುತ್ತಿದ್ದಾರೆ, ಈ ಬಲದ ಮೇಲೆಯೇ ಈಗ ಬ್ರಿಟಿಶ ಸಾಮ್ರಾಜ್ಯಕರ್ತರು ತಮ್ಮ ವಿಶಾಲ ಸಾಮ್ರಾಜ್ಯದ ಕಾರಭಾರವನ್ನು ನಡಿಸುವ ಪ್ರಸಂಗವಿದೆ, ಸ್ವತಃ ಬ್ರಿಟಿಶ ರಾಜಕಾರಣಿಗಳಿಗೆ ಕಸುವಿಲ್ಲ, ಹೀಗೆ ಹರ್ ಪ್ರೊಫೆಸರ್ ಸ್ಪಿನರ್‌ರವರು ಅಭಿಪ್ರಾಯಪಡುತ್ತಾರೆ. ಇದರ ಮೇಲಿಂದ ಜರ್ಮನಿಗೆ ಬ್ರಿಟಿಶರ ಒಳಗುಟ್ಟು ಹೊಳೆದಿದೆಯೆಂದು ನನ್ನ ಅಂಬೋಣ. ಆದರಿಂದಲೇ ಹಿಟ್ಲರನು ಬ್ರಿಟಿಶ-ಫ್ರೆಂಚರಿಗೆ ಒತ್ತುತ್ತಿದ್ದಾನೆಂದು ನನ್ನ ಮನವರಿಕೆಯಾಗಿದೆ. ಹಿಟ್ಲರನ ಉಪಟಳವನ್ನು ಹೇಗೆ ಬಾಹರಿಸಬೇಕೆಂದೇ ಬ್ರಿಟಿಶ-ಫ್ರೆಂಚರಿಗೆ ತಿಳಿಯದಾಗಿದೆ. ಆಲೋಚನೆ ಮಾಡಲೋಸುಗ ಸಪರಿವಾರ ಮುಖ್ಯ ಮಂತ್ರಿಗಳೂ ವಿದೇಶ ಸಚಿವರೂ ಪಾರೀಸಿಗೆ ಹೋಗಿ ಅಲ್ಲಿಯ ಪ್ರಧಾನಮಂಡಳದೊಡನೆ ಗುರುವಾರ ವಿಚಾರ ವಿನಿಮಯ ಮಾಡಿ ಹಾಗೆಯೇ ಹಿಂತೆರಳಿದರು. ಝೆಕೊಸ್ಲೊವಾಕಿಯಾದ ಉತ್ತರ ಕ್ರಿಯೆ ಇನ್ನೂ ಮುಗಿದಿಲ್ಲ. ಪೋಲಂಡದವರೂ ಹಂಗೇರಿಯವರೂ ತಮ್ಮ ತಮ್ಮ ಸಮಾಜಗಳ ಪ್ರಾಧಾನ್ಯವುಳ್ಳ ವಿಭಾಗಗಳನ್ನು ತಮಗೊಪ್ಪಿಸಬೇಕಾಗಿ ಝೆಕ್ ಸರಕಾರಕ್ಕೆ ತಿಳಿಸಿದ್ದಾರೆ. ಈ ಪ್ರದೇಶಗಳನ್ನು ಅವಕ್ಕೊಪ್ಪಿಸಲು ತಾವು ಕೊಡಲಿಕ್ಕಿಲ್ಲವೆಂದು ರುಮಾನಿಯಾ ಸರಕಾರದ ಹಟ. ರುಮಾನಿಯಾ ಸರಕಾರವು ಹಿಟ್ಲರನ ಬೆಂಬಲದಿಂದ ಈ ಪ್ರಕಾರ ನಿಗ್ರಹ ಹೂಡಲು ಸಿದ್ಧವಾಗಿದೆಯೆಂದು ರಾಜಕಾರಣಿಗಳ ಅಂಬೋಣ. ಪೋಲಂಡ-ಹಂಗೇರಿ ಸರಕಾರಗಳ ದಂಡುಗಳು ಝೆಕ್ ಜನಾಂಗವನ್ನು ಸೇರಿದರೆ ರುಮಾನಿಯಾ ಸರಕಾರವು ಝೆಕ್ ಪಕ್ಷಪಾತಿಯಾಗಿ ಹೋರಾಡಲು ಒಗ್ಗಟ್ಟಿನ ಮೇಲೆ ಸಿದ್ಧವಾಗಿರುವದೆಂದು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಸ್ವಂತ ಸುದ್ದಿಗಾರರು ಲಂಡನಿನಿಂದ ತಂತಿಯ ಮೂಲಕವಾಗಿ ತಿಳಿಸುತ್ತಾರೆ. ಝೆಕ್ ಸರಕಾರಕ್ಕೆ ನೆರವಾಗುವ ರುಮಾನಿಯಾ ಸೈನ್ಯ ಪಥವನ್ನು ಅಡ್ಡಗಟ್ಟಲು ಪೋಲಂಡದ ೪೦ ಸಾವಿರ ಸೈನಿಕರು ಗಡಿನಾಡಿನ ಮೇಲೆ ಸಜ್ಜಾಗಿ

(೩ನೇ ಪಾನದ ಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಹಗಲು ತಕ್ಕಮಟ್ಟಿಗೆ ಶಕೆಯಾಗುತ್ತ ದ ರಾತ್ರಿ ಚಳಿ ಬೀಳುತ್ತದೆ ಮಳೆಗಾಲದ ಸ್ವಭಾವ ಇನ್ನೂ ತೋರಿಬರುವದಿಲ್ಲ ಊರಲ್ಲಿ ಚಿಕ್ಕ ಪ್ರಪ್ಪ ಬೇನೆ ಬೇಸಾರಿಗಳ ಇದ್ದೇ ಇವೆ

ಶ್ರೀ ಶಂಕರನಾರಾಯಣ ಮೇದಾರ ಮಹೋಜನರಿಂದ್ರ ಪಪ್ರ ಕಳೆದ ಸೋಮವಾರ ಸಾರ್ವಜನಿಕ ನಡೆಸಲಾಯಿತು

ಕರ್ನಾಟಕ ಪ್ರಾಂತಿಕ ಹರಿಜನ ಸೇವಕ ಸಂಘದ ಕಾರ್ಯಕರ್ತರಾದ ರಾ ಶಿರಹಟ್ಟಿಮಠರವರು ಇದೀಗ ಜಿಲ್ಲೆಯ ಹರಿಜನ ಸಂಘಗಳನ್ನು ಸೇವಾ ಸಂಘಗಳನ್ನೂ ಸಂಘಟಿತಮಾಡುವದಕ್ಕಾಗಿಯೂ ಹರಿಜನರ ಸಮಸ್ಯೆಗಳನ್ನು ತಿಳಿದುಕೊಳ್ಳುವದಕ್ಕಾಗಿಯೂ ಜಿಲ್ಹಾ ಹರಿಜನ ಸಂಘದ ಕಾರ್ಯದರ್ಶಿಗಳಾದ ರಾ ಶ್ರೀಧರ ತಿರುಮಲರೊಡನೆ ನಮ್ಮ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದಾರೆ ಮೊನ್ನೆ ಆದಿತ್ಯವಾರ ದಿವಸ ಇಲ್ಲಿಗೆ ಬಂದಿದ್ದರು ಸಂಜೆಯ ಕಡೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಾಲಯದಲ್ಲಿ ಸೇವಾ ಕಾರ್ಯಕರ್ತರ ಸಭೆ ಸೇರಿಸಿ ಕುಮಟಾ ತಾಲೂಕಿನ ಬಗ್ಗೆ ತಾಲೂಕ ಹರಿಜನ ಸಂಘವನ್ನೊಂದು ಸ್ಥಾಪಿಸಿದ್ದಾರೆ ಹಳ್ಳಿ-ಭಾಗಗಳ ಸ್ಥಾನಿಕ ಪ್ರತಿನಿಧಿಗಳನ್ನು ತಮ್ಮೊಳಗೆ ಸೇರಿಸಿಕೊಳ್ಳಲು ಸಂಘದ ಕಾರ್ಯಕಾರಿ ಮಂಡಳಕ್ಕೆ ಅಧಿಕಾರ ಕೊಡಲಾಗಿದೆ ರಾ| ಶಿರಹಟ್ಟಿಮಠರವರು ಇಲ್ಲಿಂದ ಮುಂದೆ ಕಾರವಾರಕ್ಕೆ ಹೋಗಿದ್ದಾರೆ ಕಾರವಾರ ಅಂಕೋಲೆ, ಯಲ್ಲಾಪುರ ಮತ್ತು ಹಳಿಯಾಳ ತಾಲೂಕುಗಳಲ್ಲಿ ಸಂಘಟನೆ ಮಾಡಿ ಮುಂದೆ ಹುಬ್ಬಳ್ಳಿಗೆ ಮರಳುವರು ಅಲ್ಲಲ್ಲಿಯ ನಗರ ಸಭೆಗಳ ನೌಕರರಾಗಿರುವ ಭಂಗೀ ಜನರಿಗೆ ತಕ್ಕ ಸವಲತ್ತುಗಳನ್ನು ಪ್ರಾಪ್ತಿಸಿ ಕೊಡಲಿಕ್ಕೆ ರಾ| ಶಿರಹಟ್ಟಿಮಠರವರು ನಗರ ಸಭೆಗಳ ಅಧ್ಯಕ್ಷರಿಗೂ ಕಾರ್ಯಕರ್ತರಿಗೂ ಹಲವು ಉಪಯುಕ್ತ ಸೂಚನೆಗಳನ್ನು ಮಾಡಿರುತ್ತಾರೆಂದು ತಿಳಿಯುತ್ತದೆ ಅವರ ಮುಖ್ಯ ಸೂಚನೆಗಳೆಂದರೆ— ಭಂಗೀ ಜನರಿಗೆ ಕಾಯಂ ನೌಕರರೆಂದೆಣಿಸಿ ಅವರಿಗೆ ಹಕ್ಕಿನ ರಜೆ, ಪಿರ್ಯಾದಿ ರಜೆ, ಅಸ್ವಸ್ಥತೆಯ ರಜೆ ವಗೈರೆ ಸವಲತ್ತುಗಳನ್ನು ಕೊಡಬೇಕು, ಹೆಂಗಳೆಯರಿಗೆ ಪ್ರಸೂತಿಕಾಲದ ರಜೆ ಕೊಡಬೇಕು ಅವರ ನಿಧಿಯ (ಪ್ರಾವಿಡಂಟ ಫಂಡ) ಏರ್ಪಾಟು ಮಾಡಬೇಕು ವಾಸ್ತವ್ಯಕ್ಕೆ ಮನೆಗಳನ್ನು ಕಟ್ಟಿಸಿ ಕೊಡಬೇಕು ವರ್ಷಕ್ಕೊಮ್ಮೆ ಸಮವಸ್ತ್ರಗಳನ್ನು ಒದಗಿಸುವ ಏರ್ಪಾಟನ್ನು ಮಾಡಬೇಕು, ಅವರ ಆರ್ಥಿಕ ಉನ್ನತಿ ಮಾಡಿಕೊಳ್ಳುವ ಬಗೆ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಕೊಡಬೇಕು ಇವೇ ಮೊದಲಾದವಿರುತ್ತವೆ ಇಲ್ಲಿ ನಗರ ಸಭೆಯವರು ಈ ಸೂಚನೆಗಳ ಕಡೆ ಅವಶ್ಯ ಗಮನ ಕೊಡುವರೆಂದು ನಂಬಿರುವೆ

ಇಲ್ಲಿಯ ನಗರ ಸಭೆಯವರು ಪ್ರಕಟಿಸಿದ ಕಟ್ಟು ಮತ ದಾರರ ಯಾದಿಯಲ್ಲಿ ತಮ್ಮ ಹೆಸರ ಸೇರಿಸಬೇಕೆಂದು ಇಲ್ಲವೆ ಸೇರಿಸಿದ ಹೆಸರುಗಳನ್ನು ಕಡಿದು ಹಾಕಬೇಕೆಂದು ತಕ್ರಾರ ಅರ್ಜಿಗಳನ್ನು ಮಾಡುವ ಮುದ್ದತ್ತು ಕಳೆದ ತಾ ೨೧ನೇ ಸೋಮವಾರ ಮುಗಿಯಿತು ಈ ಅವಧಿಯೊಳಗೆ ಸುಮಾರು ೩೦೧ ಅರ್ಜಿಗಳು ದಾಖಲಾಗಿವೆಯೆಂದು ತಿಳಿಯುತ್ತದೆ ಈ ಮೊದಲು ಜಿಲ್ಹಾಧಿಪರು ನಿಶ್ಚಯಿಸಿದ ನಗರ ಸಭೆ ಚುನಾವಣೆ ಕಾರ್ಯಕ್ರಮದಂತೆ ಮತದಾರ ಯಾದಿಯ ಬಗ್ಗೆ ಬರಬಹುದಾದ ತಕ್ರಾರ ಅರ್ಜಿಗಳ ವಿಚಾರ ಮಾಡುವ ಅಧಿಕಾರ ನಗರ ಸಭೆಯ ಮುನಸಿಪಲ್ ಕಮೀಟಿಗೆ ಕೊಡಲಾಗಿತ್ತು ಅದಕ್ಕೆ ಕೆಲವು ನಾಗರಿಕರು ಜಿಲ್ಹಾಧಿಕಾರಿಗಳಿಗೆ ಮನವಿ ಮಾಡಿದಂತೆ ಜಿಲ್ಹಾಧಿಪರು ತಕ್ರಾರ-ಅರ್ಜಿಗಳ ನಿಕಾಲಿ ಮಾಡುವ ಅಧಿಕಾರವನ್ನು ಈ ಶಿರಸಿ ವಿಭಾಗದ ಪ್ರಾಂತ ಸಾಹೇಬರಾದ ರಾ| ತೇಲಂಗರವರಿಗೆ ಕೊಟ್ಟಿರುತ್ತಾರೆ ಪ್ರಾಂತ ಸಾಹೇಬರ ಕಚೇರಿಯಿಂದ ಮೊನ್ನೆಯೇ ಇಲ್ಲಿ ಬಂದಿದೆ

ಕುಮಟಾ ತಾಲೂಕ ಕೊಂಗ್ರೆಸ ಕಮಿಟಿಯ ಕಾರ್ಯದರ್ಶಿಗಳು ತಿಳಿಸುವದೇನಂದರೆ — ಮದ್ಯಪಾನ ನಿಷೇಧ ಪ್ರಚಾರಕ್ಕಾಗಿ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ಗಂಗಾಧರರಾಯರ ಸಂಚಾರ ಕಾರ್ಯಕ್ರಮ — ತಾ ೩೦ ೧ ೩೮ನೇಗೆ ಗಂಗಾವಳಿ ಮಾರ್ಗವಾಗಿ ೧೦ ಘಂಟೆಗೆ ಹನೇಹಳ್ಳಿಗೆ ಬಂದು ಅಲ್ಲಿಂದ ಮಧ್ಯಾನ್ಹ ೧೨ ಘಂಟೆಗೆ ಗೋಕರ್ಣಕ್ಕೆ ತಲ್ಪುತ್ತಾರೆ ಗೋಕರ್ಣದಲ್ಲಿ ೩ ತಾಸು ಉಳಿದು ಮಧ್ಯಾನ್ಹ ೩ ಘಂಟೆಗೆ ತೊರ್ಕೆ, ಮಾದನಗೇರಿ ಹಿರೇಗುತ್ತಿ ಮಾರ್ಗವಾಗಿ ಅಪರಾಹ್ನ ೪ ಘಂಟೆಗೆ ಮಿರ್ಜಾನಕ್ಕೆ ತಲ್ಪುತ್ತಾರೆ ತೊರ್ಕೆ, ಮಾದನಗೇರಿ ಹಿರೇಗುತ್ತಿಗಳಲ್ಲಿ ೧೫ ೧೫ ಮಿನಿಟು ಮುಕ್ಕಾಮು, ಸಭೆಗಳಿವೆ ಮಿರ್ಜಾನದಲ್ಲಿ ಅರ್ಧ ತಾಸು ಮುಕ್ಕಾಮು, ಸಭೆ ಹಗಲು ೫ ಘಂಟೆಗೆ ಹೆಗಡೆಗೆ ಬಂದು ಅಲ್ಲಿ ೧ ತಾಸು ಮುಕ್ಕಾಮು ಮಾಡಿ ಕುಮಟೆಗೆ ಸಂಜೆ ೬॥ ಘಂಟೆಗೆ ಬರುತ್ತಾರೆ ರಾತ್ರಿ ಮುಕ್ಕಾಮು ಕುಮಟೆಯಲ್ಲಿಯೇ ಮರುದಿನ ತಾ ೧-೧೨ ೩೮ನೇಗೆ ಬೆಳಗಿನ ೬ ಘಂಟೆಗೆ ಕಾಗಾಲದೊಳಗೆ ಸಭೆ ಅಪರಾಹ್ನ ೪ ಘಂಟೆಗೆ ಧಾರೇಶ್ವರದಲ್ಲಿ ಸಭೆ ಹಾಗೆಯೇ ಸಾಯಂಕಾಲ ೬ ಘಂಟೆಗೆ ಹಳದೀಪುರದೊಳಗೆ ಸಭೆ ಹಳದೀಪುರದಿಂದ ಮರಳಿ ಕುಮಟೆಗೆ ಬಂದು ರಾತ್ರಿ ೮ ಘಂಟೆಗ ಮದ್ಯಪ್ರತಿಬಂಧಕ ಕಾರ್ಯಕರ್ತರ ಸಭೆ ಸೇರುವದು ಇದೀ ಜಿಲ್ಹೆಯ ಬಗ್ಗೆ ಒಂದು ವ್ಯಾಪಕವಾದ ಮದ್ಯ ಪ್ರತಿಬಂಧಕ ಸಮಿತಿ ಸ್ಥಾಪಿಸಲ್ಪಡುವದು ಈ ಸಭೆಗೆ ಜಿಲ್ಹೆಯೊಳಗಿನ ಎಲ್ಲ ಮದ್ಯ-ನಿರೋಧನದ ಅಭಿಮಾನಿಗಳು ಬಂದು ಸೂಕ್ತ ಸಲಹೆ ಕೊಡಬೇಕು

ಹೊನ್ನಾವರ— ರಾ ಶಿರಹಟ್ಟಿಮಠರವರ ಪ್ರಯತ್ನದಿಂದ ತಾ ೨೮ನೇಗೆ ಇಲ್ಲೊಂದು ತಾಲೂಕ ಹರಿಜನ ಸೇವಾ ಸಂಘ ಸ್ಥಾಪನೆಯಾಗಿದೆ ರಾ ತಿಮ್ಮಾಜಪ್ಪ ಕರ್ಕಿಯವರು ಅಧ್ಯಕ್ಷರು, ರಾ ಜಾಲಿಸತ್ಗಿ ವಕೀಲರು ಉಪಾಧ್ಯಕ್ಷರು, ರಾ ಕೂಡ್ಲ ವಾಸುದೇವ ಶಾನಭಾಗರು ಕಾರ್ಯದರ್ಶಿಗಳು ಘಟಕಗಳಲ್ಲಿ ರಾ| ಶಾಂತಪ್ಪ ಶಾನಭಾಗರ ಅಧ್ಯಕ್ಷತೆಯಲ್ಲಿ ಘಟಕಳ ಸೇರಾ ಹರಿಜನ ಸೇವಾ ಸಂಘ ಸ್ಥಾಪಿಸಲ್ಪಟ್ಟಿದೆಯೆಂದು ತಿಳಿಯುತ್ತದೆ ರಾ| ದೇವೋತ್ತಮ ಭಟ್ಟರವರು ಆ ಸಂಘದ ಕಾರ್ಯದರ್ಶಿಗಳಾಗಿದ್ದಾರೆ

(ತಾ ೨೬-೧೧-೩೮) ಇಲ್ಲಿಯ ಪಟ್ಟಿಕೇರಿಯಲ್ಲಿ ಒಬ್ಬ ಮರಾಠಿ ಜಾತಿಯ ಹೆಂಗಸು ಯಾರಿ ಆತ್ಮಹತ್ಯ ಮಾಡಿಕೊಂಡಳು. ಕಾರಣವೇನೆಂದು ತಿಳಿಯಲಿಲ್ಲ

ಇಲ್ಲಿಯ ಸೇಂಟ ಥೊಮಸ ಹ್ಯಾಸ್ಕೂಲಿನಲ್ಲಿ ಇಂದು ಕಾನಡಾ ಡಿಲ್ಹಾ ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ರಾ|| ಕಸಬೇಕರರು ಯುರೋಪ ಖಂಡದೊಳಗಿನ ಶಿಕ್ಷಣಕ್ರಮದ ಬಗ್ಗೆ ಸವಿಸ್ತರವಾದ ಭಾಷಣ ಮಾಡಿದರು ಹ್ಯಾಸ್ಕೂಲಿನ ಮುಖ್ಯಾಧ್ಯಾಪಕರಾದ ರಾ|| ಫಿಲಿಪ್ರೋಸರವರು ಸಭಾಪತಿಗಳಾಗಿದ್ದರು ಯುರೋಪ ಖಂಡದೊಳಗಿನ ಶಿಕ್ಷಣ ಕ್ರಮದ ನಮೂನೆ ಕೇಳಿ ಸಭಿಕರಿಗೆ ಸಂತೋಷವಾಯಿತು ಇದೇ ಮಾದರಿಯ ಮೇಲೆ ನಮ್ಮಲ್ಲಿಯೂ ಶಾಲೆಗಳಾಗಬೇಕೆಂದು ಜನರ ಅಭಿಪ್ರಾಯವಾಯಿತು

ಇಲ್ಲಿಯ ಮ್ಯುನಿಸಿಪಾಲಿಟಿಯಲ್ಲಿ ಉಪ-ಮಂಡಳಗಳನ್ನು ನೇಮಿಸುವಾಗ ಸೇರಿದ ಸಭೆಯ ನೋಟೀಸು ಒಬ್ಬ ಸಭಾಸದರಿಗೆ ಪ್ರತ್ಯಕ್ಷ ಸಿಗಲಿಲ್ಲವೆಂಬ ಕಾರಣದ ಮೇಲೆ ಆ ಸಭೆಯೊಳಗಿನ ಯಾವತ್ತೂ ಕಾರ್ಯ-ಗಳನ್ನು ರದ್ದುಪಡಿಸಬೇಕಾಗಿ ಮತದಾರರೊಬ್ಬರು ಇಲ್ಲಿಯ ಸಬಜಜ್ಜ ಕೋರ್ಟಿನಲ್ಲಿ ದಾಖಲಪಡಿಸಿದ ದಾವೆಯನ್ನು ಸಬಜಜ್ಜರು ವಿಚಾರದಿಂದ ಕಿತ್ತುಹಾಕಿದ್ದಾರೆ ವಿಶಿಷ್ಟ ಸಭಾಸದರು ಆ ಕಾಲದಲ್ಲಿ ಊರಲ್ಲಿರಲಿಲ್ಲವಾಗಿಯೂ ಅವರಿಗೆ ಸಭೆಯ ನೋಟೀಸನ್ನು ಕೊಡಲು ಪ್ರಯತ್ನ ಮಾಡಿ ನಿರರ್ಥಕವಾಯಿತಾಗಿಯೂ ಆದರಿಂದ ನೋಟೀಸಿನ ನ್ಯೂನತೆಯಿಂದ ಸಭೆಯ ಕಾರ್ಯಕಲಾಪಗಳಿಗೆ ಬಾಧೆ ತಟ್ಟುವದಿಲ್ಲವಾಗಿಯೂ ಸಬಜಜ್ಜರು ಅಭಿಪ್ರಾಯಪಟ್ಟು ದಾವೆಯನ್ನು ಕಿತ್ತೊಗೆದಿದ್ದಾರೆ

ಮಕ್ಕಳಿಗೆ ವರಪ್ರದಾನ

ಜನ್ನಿ ವೆಂಕಟರಮಣಯ್ಯನವರ

ಲಿವ್ಹರ್‌ಕ್ಯೂರ್



ಲಿವ್ಹರ್ ಮತ್ತು ಯಕೃತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ!

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.

— ಅಥವಾ —

ಜನ್ನಿ ವೆಂಕಟರಮಣಯ್ಯ

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ್,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ – ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಗೇರಸೊಪ್ಪೆ— ಬೇಗನೇ ಇಲ್ಲೊಂದು ದವಾಖಾನೆಯಾಗುವದೆಂದು ತಿಳಿಯಬರುತ್ತದೆ ದವಾಖಾನೆಯ ಬಗ್ಗೆ ಸ್ವತಂತ್ರ ಇಮಾರತು ತಯಾರಾಗುವ ತನಕ ಊರವರೇ ಬಾಡಿಗೆ ಕೊಟ್ಟು ಬಾಡಿಗೆ ಮನೆಯೊಂದನ್ನು ಸಂಪಾದಿಸಿ ಕೊಡಬೇಕೆಂದು ಅಧಿಕಾರಿಗಳ ಸೂಚನೆ ಬಂದಿದೆ ಸದರಿ ದವಾಖಾನೆಯಲ್ಲಿ ಯಾರು ಡಾಕ್ಟರರಾಗುವರೆಂದು ಇನ್ನೂ ತಿಳಿದುಬಂದಿಲ್ಲ ತನ್ಮಧ್ಯೆ ಹೈಗುಂದದವರೊಬ್ಬರು ತಮಗೆ ಡಾಕ್ಟರರಾಗಿ ನೇಮಿಸಬೇಕೆಂದು ಪ್ರಯತ್ನ ನಡಿಸಿದ್ದಾರೆ ತಮ್ಮ ನೇಮಣೂಕಿಯ ಬಗ್ಗೆ ಅರ್ಜಿಯೊಂದನ್ನು ತಯಾರಿಸಿ, ಮನೆ ಮನೆ ತಿರುಗಾಡಿ, ಏನೇನೋ ಹೇಳುತ್ತ, ಕಂಡ-ಕಂಡವರ ಸಹಿಗಳನ್ನು ತಕ್ಕೊಳ್ಳುತ್ತಿರುವದು ಕಂಡು ಬರುತ್ತದೆ ! ಸದರಿಯವರಿಗೆ ರೋಗ ಪರೀಕ್ಷೆ ಮಾಡಬರುವದಿಲ್ಲವೆಂತಲೂ ವೈದ್ಯಕೀ ವ್ಯವಸಾಯ ಮಾಡಲು ಅವರು ಅಯೋಗ್ಯರೆಂತಲೂ ಬಲ್ಲವರ ಅಭಿಪ್ರಾಯವಿದೆ ಹೀಗೆ ಗೇರಸೊಪ್ಪೆಯವರೊಬ್ಬರು ಸೂಚಿಸುತ್ತಾರೆ

ಭಟಕಳ — (ತಾ ೨೬-೧೧ ೩೮) ಕಾಸೂಪ್ಪಿಬಾಯಿಯ ಪ್ರಕರಣದಲ್ಲಿ ಕಾರವಾರ ಸೆಶನ್ಸ ಜಜ್ಜರವರು ಕೊಟ್ಟ ಶಿಕ್ಷೆಯ ವಿರುದ್ಧ ಆರೋಪಿಗಳು ಮುಂಬಯಿಯ ನಾ॥ ಹೈಕೋರ್ಟಿಗೆ ಅಪೀಲು ಮಾಡಿದ್ದರಷ್ಟೇ ಆ ಅಪೀಲು ಕಳೆದ ತಾ ೧೪ನೇ ಸೋಮವಾರ ಮುಖ್ಯ ನ್ಯಾಯಾಧೀಶ ಸರ್ ಜೊನ ಬೋಮಂಟ ಮತ್ತು ನ್ಯಾಯಮೂರ್ತಿ ಮೆಕ್ಲೀನ ಇವರ ಕೋರ್ಟಿನಲ್ಲಿ ವಿಚಾರವಾಗಿ ಆರೋಪಿ ಡಿಸೋಜಾ ಮತ್ತು ಗೋಪಾಳ ಇವರಿಬ್ಬರೂ ಬಿಡುಗಡೆಯಾಗಿದ್ದಾರೆ

ರಾ। ಆರ್ ಎಸ್ ಶಾಸ್ತ್ರಿಯವರು ಇಲ್ಲೊಂದು "ಹಿಂದು ತರುಣ ಸಂಘ" ಸ್ಥಾಪಿಸುವ ಬಗ್ಗೆ ಕಳೆದ ತಾ ೧೬ನೇ ಶ್ರೀ ಹನುಮಂತ ದೇವರ ಗುಡಿಯಲ್ಲಿ ತರುಣರದೊಂದು ಸಭೆ ಕರೆದಿದ್ದರು ರಾ। ಶಾಸ್ತ್ರಿಯವರ ಸಂಘದಿಂದ ಜಾತೀಯತೆಯ ಅನಿಷ್ಟ ಭಾವನೆ ಹಬ್ಬುವದೆಂತಲೂ, ಇದ್ದ ಕೊಂಗ್ರೆಸ್ ಸಂಸ್ಥೆಯನ್ನೇ ಬಲಪಡಿಸಿ ಕಾರ್ಯಸಾಧನೆ ಮಾಡಿಕೊಳ್ಳಬಹುದೆಂತಲೂ ಸಭೆಗೆ ಬಂದ ತರುಣರು ತೀರ್ಮಾನಿಸಿದರು ಶಾಸ್ತ್ರಿಯವರ ಸಂಘ ಸ್ಥಾಪನೆಗೆ ಯಾರೂ ಬೆಂಬಲ ಕೊಡಲಿಲ್ಲ

ಶಿರ್ಸಿ— ತಾ ೧೯ನೇ ಶನಿವಾರ ಇಲ್ಲಿ ದಿವಂಗತ ಗಾಝಿ ಮುಸ್ತಾಫಾ ಕೆಮಾಲ ಪಾಶಾ ಅತಾತುರ್ಕರವರ ದಿನದ ಆಚರಣೆಯಾಯಿತು ಊರಲ್ಲಿ ಹರತಾಳವಾಯಿತು ಸಂಜೆ ರಾ॥ ಅಕ್ಕದಾಸ ಗಣಪತಿ ಭಟ್ಟರ ಮನೆಯ ಅಟ್ಟದ ಮೇಲೆ ದುಃಖಪ್ರದರ್ಶಕ ಸಭೆಯಾಯಿತು

ಕಳೆದ ವಾರ ಇಲ್ಲೊಬ್ಬರು ಗಾಳೀ ಕೋಪಿಯ ಜುಗಾರಿ ಆಟ ತಕ್ಕೊಂಡು ಬಂದಿದ್ದರು ಬಿಡ್ಕಿ ಮೈದಾನಿನಲ್ಲಿ ತಮ್ಮ ಆಟ ಪ್ರಾರಂಭಿಸಿದ್ದರು ಆದರೆ ಸಾರ್ವಜನಿಕ ಸ್ಥಳದಲ್ಲಿ ಹೀಗೆ ಜುಗಾರು ಆಡಲು ಪರವಾನಗಿ ಕೊಡಲಿಕ್ಕಿಲ್ಲೆಂದು ನಗರ ಸಭೆಯವರು ನಿರ್ಧಾರವಾಗಿ ಹೇಳಿದ್ದರಿಂದ ಅವರು ಆಟ ನಿಲ್ಲಿಸಬೇಕಾಯಿತು ಮುಂದೆ ಇಲ್ಲಿಯ ವರ್ತಕರೊಬ್ಬರು ತಮ್ಮ ಖಾಸಗಿ ಜಾಗೆಯಲ್ಲಿ ಆಟ ಹೂಡಲು ಅವರಿಗೆ ಅನುಕೂಲ ಮಾಡಿಕೊಟ್ಟರು ! ಬಡ ಹಳ್ಳಿಗರನೇಕರು ಈ ಆಟಕ್ಕೆ ಮರುಳಾಗಿ ಸುಲಿಗೆ ಮಾಡಿಕೊಳ್ಳುತ್ತಿದ್ದಾರೆ ಜಿಲ್ಹಾಧಿಕಾರಿಗಳು ಇಂಥ ಜುಗಾರಕ್ಕೆ ಅಪ್ಪಣೆ ಕೊಡಬಹುದೇ ?

ಇದೇ ಬರುವ ಡಿಸೆಂಬರ ತಾ ೩ನೇ ಶನಿವಾರ ಶಿರ್ಸಿಯಲ್ಲಿ ಶಿರ್ಸಿ ವ್ಯಾಪಾರಿ ಸಂಘದ ಧರ್ಮಶಾಲೆಯ ಅಟ್ಟದ ಮೇಲೆ ಮಧ್ಯಾಹ್ನ ೨॥ ಘಂಟೆಗೆ ಜಿಲ್ಹಾ ಕೊಂ। ಕಮಿಟಿಯ ಕಾರ್ಯಕಾರಿ ಮಂಡಳದ ಸಭೆಯು, ಸಾಯಂಕಾಲ ೪ ಘಂಟೆಗೆ ಜಿಲ್ಹಾ ಕೊಂ ಕಮಿಟಿಯ ಮಹ ಸಭೆಯೂ ಕೂಡುವವೆಂದು ಜಿಲ್ಹಾ ಕಮಿಟಿಯ ಕಚೇರಿಯಿಂದ ಪ್ರಕಟಣೆ ಹೊರಟಿದೆ

ಈ ತಾಲೂಕಿನಲ್ಲಿ ಮದ್ಯ-ಪ್ರತಿಬಂಧ ಕಾರ್ಯದ ಪ್ರಚಾರ ಮಾಡುವ ಬಗ್ಗೆ ಒಂದು ಮದ್ಯ-ಮಾದಕ ಪ್ರತಿಬಂಧಕ ಸಮಿತಿಯು ಸ್ಥಾಪನೆಯಾಗಿದೆ ರಾ॥ ವಿಶ್ವಾಮಿತ್ರ ವಕೀಲರು ಸಮಿತಿಯ ಅಧ್ಯಕ್ಷರು, ರಾ। ವಿಟ್ಠಲ ಹೊನ್ನೆಯವರು ಕಾರ್ಯದರ್ಶಿಗಳು ರಾ॥ ಸುಂದರಂ ನ ಪಂಡಿತ, ತಿಮ್ಮಪ್ಪ ಶ್ರೀನಿವಾಸ ನಾಯಕ ವಗೈರೆ ೧೫ ಜನ ಸಾಧಾರಣ ಸದಸ್ಯರೂ ಆರಿಸಲ್ಪಟ್ಟಿರುತ್ತಾರೆ

ಅಂಕೋಲೆ— (ತಾ ೨೬ ೧೧ ೩೮) ಇಲ್ಲಿಯ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನವನ್ನು ಶ್ರೀ ಲಕ್ಷ್ಮೀನಾರಾಯಣನೇ ಕಾಪಾಡಬೇಕಲ್ಲದೆ ಅನ್ಯರಿಂದಾಗದ ಮಾತು ಗೋಪುರದ ಮೇಲ್ಮಾಡು ತೀರ ಜೀರ್ಣವಾಗಿದೆ ಒಂದಿಲ್ಲೊಂದು ದಿನ ಥಕ್ಕನೆ ಕಡಕೊಂಡು ಬೀಳುವದು ಖಚಿತ ಶ್ರೀ ದೇವರ ಮೂರ್ತಿ ಅಗಲಾಡುತ್ತಿದೆ ಹಳೇ ಮೊಕ್ತೇಸರರು ಶ್ರೀ ದೇವರ ಭಂಡಾರದ ಲೆಕ್ಕ-ಪತ್ರಗಳನ್ನು ಸರಿಯಾಗಿ ಇಡುವದಿಲ್ಲವೆಂತಲೂ, ಆಡಳಿತ ಸರಿಯಾಗಿ ನಡಿಸುವದಿಲ್ಲವೆಂತಲೂ ದೇವಾಲಯ ಕಮಿಟಿಯವರು ಅಭಿಪ್ರಾಯಪಟ್ಟು ಹೊಸ ಮೊಕ್ತೇಸರರನ್ನು ನೇಮಿಸಿ ೩ ವರ್ಷಗಳಾದವು ಇವರ ಕಾಲದಲ್ಲಿಯೂ ದೇವಸ್ಥಾನದ ಯಾ ದೇವ ವಿಗ್ರಹದ ಸ್ಥಿತಿ ಸುಧಾರಣೆಯಾಗಲಿಲ್ಲ ಇವರಿಗೂ ಲೆಕ್ಕ ಕೇಳಿದರೆ ಹಿಂದಿನ ಲೆಕ್ಕ ಬೇಕೆಂದು ಹೇಳುತ್ತಾರೆ ಇದೆಂಥ ನಮೂನೆಯೆಂದು ಜನರಿಗೆ ತಿಳಿಯದು ಛಿದಕರು ಉದ್ವಿಗ್ನರಾಗಿದ್ದಾರೆ ದೇವಲ ಕಮಿಟಿಯವರು ಲಕ್ಷ ಕೊಡಬೇಕು

ಕಳೆದುಹೋದ ಪೋಲಿಸಿಯ ಬಗ್ಗೆ

ನೋಟೀಸು.

ನೇಶನಲ್ ಇನ್‌ಶೂರನ್ಸ ಕಂಪನಿ ಲಿಮಿಟೆಡ್‌ದಲ್ಲಿ, ಶ್ರೀ। ಮಹಾದೇವ ತಿಮ್ಮಣ ಭಟ್ಟ ಮಡಗುಣಿ ಇವರ ವಿಮಾ ಪಾಲಿಸಿ ನಂ ೯೦೬೮೪ನೇದು ಕಳೆದು ಹೋಗಿರುತ್ತದೆ ಈ ನೋಟೀಸಿನ ಮೂಲಕ ಜಾಹೀರಪಡಿಸುವದೇನಂದರೆ — ಈ ತಾರೀಕಿನಿಂದ ಒಂದು ತಿಂಗಳೊಳಗ, ಸಂಬಂಧಪಟ್ಟ ಯಾವನೊಬ್ಬನು ಸದರ ಪಾಲಿಸಿಯನ್ನು ಹಾಜರಪಡಿಸಿ ಯಾವದೇ ತಕರಾರು ಮಾಡದಿದ್ದಲ್ಲಿ, ಕಂಪನಿಯು ಸದರ ಪಾಲಿಸಿಯ ಬಗ್ಗೆ ಅವಶ್ಯವಿರುವ ಮುಂದಿನ ಕಾರ್ಯವನ್ನು ಕೈಕೊಳ್ಳುವದು

7 ಕೌನ್ಸಿಲ್‌ಹೌಸ್ ಸ್ಟ್ರೀಟ್, ಕಲಕತ್ತಾ

ಕೇ. ಎಮ್ ನಾಯಕ,
ಮೆನೆಜರ
ನೆಶನಲ್ ಇನ್‌ಶೂರನ್ಸ
ಕಂಪನಿ ಲಿಮಿಟೆಡ್.

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಟ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ-ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಕ :- ಕೇ. ರಾಮು ಪಂಡಿತ, ಪೋ॥ ಕುಮಟಾ ಜಿ ಉ ಕಾನಡಾ

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವರೋಗ, ಕೈ-ಕಾಲು ಬಾವುಗಳಿಗೆ ದಿವ್ಯೌಷದ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ ?



ಆಸ್ಪತ್ರೆ ಪ್ರಾರಂಭದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷದವಾಗಿದೆ

ಡಾ। ವಿ ಎಸ್ ಶ್ರೀನಿವಾಸರಾವ್, ಲಿವ್ಹರ್ ಸ್ಪೆಶಲಿಸ್ಟ,
ಎಂ ವಿ ಪ್ರಾಸಾದಿಕ ಔಷದಾಲಯ, ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಏಜಂಟ —
ಸುಬ್ರಾಯ ಸೀತಾರಾಮ ಬೆಗಡೆ, ಶಿರ್ಸಿ

ಇಲ್ಲಿಯ ನರಸಿಂಹ ಇಂಗ್ಲಿಷ ಸ್ಕೂಲಿನಿಂದ ಕಳೆದ ಸಪ್ಟಂಬರ ತಿಂಗಳಲ್ಲಿ ಆದ ಪ್ರಥಮಾ ಹಿಂದೀ ಪರೀಕ್ಷೆಗೆ ೧೨ ವಿದ್ಯಾರ್ಥಿಗಳು ಕೂತಿದ್ದರು ೬ ವಿದ್ಯಾರ್ಥಿಗಳು ೧ನೇ ವರ್ಗದಲ್ಲಿಯೂ ೫ ವಿದ್ಯಾರ್ಥಿಗಳು ೨ನೇ ವರ್ಗದಲ್ಲಿಯೂ ತೇರ್ಗಡೆಯಾಗಿದ್ದಾರೆ ಈ ಸಂಗತಿ ನರಸಿಂಹ ಶಾಲೆಯ ಅಧ್ಯಾಪಕರಿಗೆ ಭೂಷಣಾವಹ

ಅಂಕೋಲಾ— (ತಾ. ೨೬-೧೧-೩೮) ಶ್ರೀ ಗಂಗಾಧರರಾವ ದೇಶಪಾಂಡೆಯವರ ಸಂಚಾರದ ಕಾರ್ಯಕ್ರಮು ಹೀಗೆ — ತಾ. ೨೭ನೇ ಸೋಮವಾರ ಅಪರಾಹ್ನ ೪ ಘಂಟೆಗೆ [illegible] ಸಂಜೆ ೬ ಘಂಟೆಗೆ ಅಂಕೋಲಾ, ರಾತ್ರಿ ಮುಕ್ಕಾಮು ಅಂಕೋಲೆಯಲ್ಲಿಯೇ ತಾ ೨೮ನೇ ಮಂಗಳವಾರ ೮ ಘಂಟೆಗೆ ಬೆಳಂಬರ, ೧೧ ಘಂಟೆಗೆ ಹಿಚಕಡ, ಅಪರಾಹ್ನ ೩ ಘಂಟೆಗೆ [illegible] ಸಂಜೆ ೫ ಘಂಟೆಗೆ ಬೇಲೆಕೇರಿ, ರಾತ್ರಿ ಮುಕ್ಕಾಮು ಅಂಕೋಲೆಯಲ್ಲಿ ತಾ ೩೦ನೇ ಬುಧವಾರ ೬ ಘಂಟೆಗೆ ಮಂಜಗುಣಿಯ ಕಾರ್ಯಕ್ರಮವನ್ನು ಮುಗಿಸಿ ಗಂಗಾವಳಿ ಮಾರ್ಗವಾಗಿ [illegible] ಕುಮಟೆಗೆ ಹೋಗುತ್ತಾರೆ

ತಾ ೨೫ನೇ ರವಿವಾರ ಪ್ರತಿ-ಸಾತಾರಾ ಕಡೆಯ ಕಾಗದ [illegible] ಪ್ರವರ್ತಕರಾದ ರಾ॥ ಮೋಡಕ ಮೊದಲಾದವರು ಗುಂಡಬಾಳೆಗೆ ಹೋಗಿ ಅಲ್ಲಿಯ ಅಡವಿ, ನೀರಿನ [illegible] ನೋಡಿಕೊಂಡು ಹಿಂತೆರಳಿದರು ಗುಂಡಬಾಳಾ [illegible] ಜೊತೆಗೆ ರಾಮನಗುಳಿ ಮತ್ತು ಅಂಕೋಲೆಯ ಪೇಂಟರರೂ ಬಂದಿದ್ದರು

ಗುಂಡಬಾಳೆಯಲ್ಲಿ ಕಾಡ ಹಂದಿಗಳ ಉಪದ್ರವಕ್ಕೆ ಪ್ರಾರಂಭವಾಗಿದೆ

ಕಾರವಾರ— (ತಾ. ೨೬-೧೧-೩೮) ಡಿಸ್ಟ್ರಿಕ್ಟ ಜಡ್ಜರಾದ ಮಿ॥ ಫಾಟರಫೀಲ್ಡರವರು ತಾ ೨೨ನೇ ಮಂಗಳವಾರ ಇಲ್ಲಿಯ ೧ನೇ ವರ್ಗದ ಸಬಜಡ್ಜರಾದ ರಾ ನಾಡಗೀರರವರ ಕಡೆ ಚಾರ್ಜು ಕೊಟ್ಟು ನಿನ್ನೆ ರಾತ್ರಿ ಉಗಿಹಡಗ ಹತ್ತಿ ಮುಂಬಯಿಗೆ ತೆರಳಿದರು ಇವರಿಗೆ ಅಹಮ್ಮದನಗರಕ್ಕೆ ವರ್ಗವಾದ ಸುದ್ದಿ ಸರಿಯಲ್ಲ, ಮುಂಬಯಿ ಹೈಕೋರ್ಟಿನ ರಜಿಸ್ಟ್ರಾರರಾಗಿ ಇವರಿಗೆ ನೇಮಿಸೋಣಾಗಿರುವದೆಂತಲೂ, ಹೈಕೋರ್ಟ ರಜಿಸ್ಟ್ರಾರರಾದ ಮಿ॥ ಕೊನ್‌ಸ್ಟಂಟೈನವರು ಇಲ್ಲಿ ಡಿಸ್ಟ್ರಿಕ್ಟ ಜಡ್ಜರಾಗಿ ಬರುತ್ತಾರೆಂತಲೂ ಹೇಳುತ್ತಾರೆ ಡಿ॥ ಜಡ್ಜರಾದ ಮಿ॥ ಫಾಟರಫೀಲ್ಡರವರಿಗೆ ವರ್ಗವಾದ ಪರಿಸ್ಥಿತಿ ನೋಡಿ ಬಹಳ ಜನರಿಗೆ ವಿಷಾದವಾಗಿದೆ

ಮುಂಬಯಿ ಗವರ್ನರರಾದ ನೇಕನಾಮದಾರ ಸರ್ ಲಾರೆನ್ಸ ರೋಜರ ಲುಮ್ಲೀ, ಜಿ ಸಿ ಆಯ್. ಈ, ಡಿ ಆಯ್. ರವರು ಗೋವೆಯ ಪ್ರವಾಸವನ್ನು ಮುಗಿಸಿ ಇಲ್ಲಿ 'ಇಂಡಸ್' ಹಡಗದಿಂದ ಬರುತ್ತಾರೆ ನಾಳೆ ಬೆಳಿಗ್ಗೆ ಮ್ಯು॥ಯವರು ಇಲ್ಲಿಯ ಮಿತ್ರಸಮಾಜ ಸಭಾಮಂದಿರದಲ್ಲಿ ನಾಮದಾರರಿಗೆ ಮಾನಪತ್ರ ಸಮರ್ಪಿಸುವರು ಅದರ ಸಾರಾಂಶವೇನೆಂದರೆ ಹೊಸ ರಾಜ್ಯಘಟನೆಯಾದಂದಿನಿಂದ ನಮ್ಮಲ್ಲಿ ಗವರ್ನರರು ಆಗಮಿಸಿದುದು ಇದೇ ಮೊದಲನೇ ಸಲ ಇಲ್ಲಿ ಮಹಾನುಭಾವರು ಸೃಷ್ಟಿಸೌಂದರ್ಯವನ್ನು ನೋಡಿ ಸಂತೋಷಪಡಬೇಕು, ಇಷ್ಟು ಆರೋಗ್ಯದಾಯಕ, ಮನಮೋಹಕ ಸ್ವಾಭಾವಿಕ ಸೌಂದರ್ಯದ ಪ್ರದೇಶ ಬೇರೊಂದಿಲ್ಲ ಹೊಸ ಕಾರಭಾರದಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಲೋಕಸುಖವನ್ನು ಪ್ರಾಪ್ತಮಾಡಿಕೊಡಲು ಸನ್ನಿಧಿಯಲ್ಲಿ ಪ್ರಧಾನರು ಪರಮಾವಧಿಯ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ನಮೂದಿಸಲು ನಮಗೆ ಸಂತೋಷವಾಗಿದೆ ಸ್ತ್ರೀಯರಿಗೂ ಹರಿಜನರಿಗೂ ಕ್ರಿಶ್ಚನ್‌ರಿಗೂ ಪ್ರತ್ಯೇಕಪ್ರತ್ಯೇಕನಾಗಿ ಮ್ಯುನಿಸಿಪಾಲಿಟಿಗಳಲ್ಲಿ ಸಭಾಸದರನ್ನಾರಿಸಿ ಕಳುಹುವ ಕ್ರಮದಿಂದ ಪ್ರತಿ ಸಮಾಜಕ್ಕೆ ಸರಕಾರದ ಮಾನ್ಯತೆ ಕೊಟ್ಟಂತಾಗಿದೆ ಈ ಸುಧಾರಣೆ ಇಷ್ಟವಾದದ್ದೇ ಈ ಬಗ್ಗೆ ನಾವು ಸರಕಾರಕ್ಕೆ ಉಪಕೃತರಾಗಿದ್ದೇವೆ ಕಾರವಾರದ ನಾಗರಿಕರು ಈ ಮೂಲಕ ರಾಜನಿಷ್ಠೆಯನ್ನು ಸನ್ನಿಧಿಯಲ್ಲಿ ಪ್ರದರ್ಶಿಸಿ ಹೃತ್ಪೂರ್ವಕ ಸ್ವಾಗತ ಬಯಸುತ್ತಾರೆ ಇತ್ಯಾದಿ ಗವರ್ನರರು ಅದೇ ದಿನ ಸಂಜೆ ತಮ್ಮ ಹಡಗಕ್ಕೆ ಮರಳಿ ಸೋಮವಾರ ವೆಂಗುರ್ಲೆ ಮಾರ್ಗವಾಗಿ ಮುಂಬಯಿಗೆ ಹಿಂತೆರಳುತ್ತಾರೆ

ಜಿಲ್ಹಾ ಲೋಕಲ್ ಬೋರ್ಡಿನವರು ಬಹುಮತದಿಂದ ನಾ॥ ಗವರ್ನರರಿಗೆ ರೂ. ೧೦೦ರ ತನಕ ಖರ್ಚು ಮಾಡಿ ಮಾನಪತ್ರವನ್ನರ್ಪಿಸಬೇಕೆಂದು ನಿಶ್ಚಯಿಸಿದ್ದರು ಆದರೆ ನಾ॥ ಗವರ್ನರರು ಬೋರ್ಡಿನ ಮಾನಪತ್ರವನ್ನಂಗೀಕರಿಸಲೊಪ್ಪದಿಲ್ಲವಾಗಿ ಕಲೆಕ್ಟರರು ತಿಳಿಸಿದ ಮೇರೆಗೆ ಈ ಮಾನಪತ್ರ-ಸಮರ್ಪಣೆಯ ಕಾರ್ಯಕ್ರಮ ರದ್ದಾಗಿದೆ

ಜಿಲ್ಹಾ ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರು ಒಂದು ಸರ್ಕ್ಯುಲರನ್ನು ಹೊರಡಿಸಿ ಹೆಡ್ ಮಾಸ್ತರ ಮತ್ತು ೧ನೇ ಅ॥ ಮಾಸ್ತರರಿಗೆ ಪೂರ್ವಸೂಚನೆ ಕೊಟ್ಟಿದ್ದಾರೆ ಹಾಜರಿ ಭತ್ತೆ ತಾ. ೧-೪-೧೯೩೯ನೇ ಇಸ್ವಿಯಿಂದ ನಿಲ್ಲಿಸಲ್ಪಡುವದು, ಈ ರಕಮಿನ ಮೇಲೆ ಪೆನ್ಶನ್-ಫಂಡು ತುಂಬಲ್ಪಡಲಿಕ್ಕಿಲ್ಲ. ಹಾಜರಿ-ಭತ್ತೆಯ ಲಾಭ ತಾ ೧-೪-೪೧ನೇಗೆ ಸೇವಾನಿವೃತ್ತರಾಗುವವರಿಗೆ ಮಾತ್ರ ಸಿಗುವದು ಆದರೆ ಅವರು ಒಂದೇ ಸವನೆ ೩ ವರ್ಷಗಳ ತನಕ ಈ ಭತ್ತೆ ಸಿಗುವ ಹುದ್ದೆಯ ಮೇಲೆ ಕೆಲಸ ಮಾಡಿದವರಿರಬೇಕು ಅವರ ಅಂತು ಸರ್ವಿಸು ೨೫ ವರ್ಷವಾಗಿರಬೇಕು ಇವರಿಗೆ ಪೆನ್ಶನಿನಲ್ಲಿ ಹಾಜರಿ ಭತ್ತೆಯ ಅರ್ಧಾಂಶ ಕೂಡಿಸಿ ಕೊಡಲಾಗುವದು ಈ ಪ್ರಕಾರ ಸರ್ವಿಸು ಪೂರ್ಣವಾಗದ ಶಿಕ್ಷಕರಿಗೆ ಈಗಲೇ ಪೆನ್ಶನು ಕೊಂಡರೆ ಲಾಭದಾಯಕವೋ, ರೀತಿಯಂತೆ ಪೂರ್ಣ ಸರ್ವಿಸು ಆದ ಬಳಿಕ ಪೆನ್ಶನು ಪಡೆದರೆ ಲಾಭದಾಯಕವೋ ? ಎಂಬ ಸಂಗತಿಯನ್ನು ಅವರೇ ವಿಚಾರಿಸಿ, ತಾ ೧-೪-೧೯೩೯ನೇಯಿಂದ ಪೆನ್ಶನು ಪಡೆಯಬಯಸುವಲ್ಲಿ ಆ ರೀತಿ ಸರಕಾರಕ್ಕೆ ಅರ್ಜಿ ಮಾಡಿಕೊಳ್ಳಬೇಕು ಈ ಸರ್ಕ್ಯುಲರಿನಿಂದ ಪ್ರಾಥಮಿಕ ಶಿಕ್ಷಕ ವರ್ಗದಲ್ಲಿ ತುಂಬಾ ಅಸಂತೋಷವುಂಟಾಗಿದೆ ಪ್ರಾ॥ ಶಿ॥ ಸಂಘದವರು ಈ ಸರ್ಕ್ಯುಲರನ್ನು ಸಾಂಗೋಪಾಂಗ ವಿಚಾರಿಸಿ ತಮ್ಮ ಅಂಬೋಣವನ್ನು ತ್ವರ್ಯವೇ ಅರಿಕೆ ಮಾಡಿಕೊಳ್ಳುವದು ವಿಹಿತ

ಈ ವಿಭಾಗದ ಪ್ರಾಂತ ಸಾಹೇಬರಾದ ರಾ॥ ವೆಂಕಟಪ್ಪಯ್ಯನವರಿಗೆ ನಾಸಿಕ ಜಿಲ್ಹೆಗೆ ಆದ ವರ್ಗ ರದ್ದುಪಡಿಸೋಣಾಗಿದೆ ಹುಬ್ಬಳ್ಳಿ ಮ್ಯುನಿಸಿಪಾಲಿಟಿಯನ್ನು ಸರಕಾರವು ರದ್ದುಪಡಿಸಿ ರಾ॥ ವೆಂಕಟಪ್ಪಯ್ಯನವರಿಗೆ ಅಲ್ಲಿಯ ಮ್ಯು॥ ಅಡಳಿತಗಾರರಾಗಿ ನೇಮಿಸಲಿರುವದಾಗಿಯೂ ತಿಳಿಯುತ್ತದೆ ಈ ವಿಭಾಗಕ್ಕೆ ಶಿರ್ಸಿ ವಿಭಾಗದ ಪ್ರಾಂತ ಸಾಹೇಬರಾದ ರಾ॥ ಕೊಯಿಮತ್ತೂರರವರು ನೇಮಿಸಲ್ಪಡುವರಂತೆ ! ರಾ॥ ಕೊಯಿಮತ್ತೂರರವರು ಈಗ ಸದ್ಯಕ್ಕೆ ರಜೆ ಕೊಂಡಿದ್ದಾರೆ

ಹಳಿಯಾಳ— (ತಾ ೨೪-೧೧-೩೮) ತಾ ೧೧-೧೧ ೩೮ನೇಗೆ ಮುಂದರಿಸಿದ ಮ್ಯುನಿಸಿಪಾಲಿಟಿಯ ಮಹಾಸಭೆ ಅಧ್ಯಕ್ಷರಾದ ರಾ॥ ಅಪ್ಪಾಜಿ ಶಾಯಪ್ಪಾ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸೇರಿ ಮನೇಜಿಂಗ ಕಮಿಟಿ, ಸ್ಯಾನಿಟರಿ ಕಮಿಟಿ, ಡಿಸ್ಪೆನ್ಸರಿ ಕಮಿಟಿಗಳು ನೇಮಿಸಲ್ಪಟ್ಟವು ಈ ಸಭೆಯಲ್ಲಿ ನಡೆದ ಒಂದು ಸಂಗತಿ ನಮೂದಿಸತಕ್ಕಂತಹದು. ೮ ಮಂದಿ ಸಭಾಸದರು ಅಧ್ಯಕ್ಷರ ವಿರುದ್ಧ ಅಪನಂಬಿಗೆಯ ಠರಾವನ್ನು ಸೂಚಿಸಿ ಚರ್ಚೆ ಮಾಡಬಯಸಿದರು ಮುಂದರಿಸಿದ ಸಭೆಯಲ್ಲಿ ಕಾರ್ಯಕ್ರಮ ಪತ್ರಿಕೆಯೊಳಗಿಲ್ಲದ ಠರಾವು ಸೂಚಿಸಲಿಕ್ಕೆ ಬರುವದಿಲ್ಲವೆಂದು ಅಧ್ಯಕ್ಷರಾದ ರಾ॥ ಅಪ್ಪಾಜಿ ದೇಸಾಯಿಯವರು "ರೂಲಿಂಗ" ಕೊಟ್ಟು ವಿರೋಧಕರಿಗೆ ಸುಮ್ಮಗುಳಿಸಿದರು.

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ನಿರ

ಎಗ್ಯುಮಿಕ್ಸ್ಚರ್ ಉಪಯೋಗಿಸಿರಿ !

ಸಿಕ್ಕ ಸಿಕ್ಕ ಔಷಧ ಸೇವಿಸಿ, ಜ್ವರದಂಥ ಬೇನೆಯನ್ನು ಉದ್ದ ಬೆಳಸಬೇಡಿರಿ. ಬೆಲೆ ಆಣೆ ೧೨

ಇಂಡೋಬಾಮ್

ತಲೆಶೂಲಿ, ಮೈನೋವು ಸಂಧಿವಾತ, ವಿಷಾರಿ ನೊಣಗಳ ಕಡಿತ ಮೊದಲಾದ ವಿಕಾರಗಳು ತುಸು ಮಾಲಿಶದಿಂದ ಒಳಿತಾಗಿ ನಾಶವಾಗುತ್ತವೆ ಚರ್ಮರೋಗಗಳಿಂದಾಗುವಂತೆ ಅನಾವಶ್ಯಕ ಉರಿ ಕಳುವದಿಲ್ಲ ಬೆಲೆ ಆ ೬

ಎಲ್ಲ ಅಂಗಡಿಗಳಲ್ಲಿ ಸಿಗುತ್ತದೆ, ಸಿಗದಿದ್ದರೆ ನಮಗೆ ಬರೆಯಿರಿ

ಕರ್ನಿರ ಬ್ರದರ್ಸ,
ಗಿರಗಾಂವ, ಮುಂಬಯಿ, ನಂ ೪

ಬನ್ನಿರಿ ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ
ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ
ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ
ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ಆದರೆ ಈ ಸಭಾಸದರು ಈ ರೆವಿನ ಚಹಾ, ಗಾಗಿ ಸ್ವಲ್ಪ ಜನರೆಲ್ಲಾ ಮಾಟಿಂಗನ್ನು ಸೇರಿಸುವ ಬಗ್ಗೆ ಅಧ್ಯಕ್ಷರಿಗೆ ನಿಯಮದಂತೆ "ರಿಕ್ವಿಝಿಶನ" ಕೊಡುವ ವಿಚಾರದಲ್ಲಿರುವರಾಗಿ ತಿಳಿಯುತ್ತದೆ

ಜಿಲ್ಲಾ ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ರಾ॥ ಕಸಬೇಕರರವರು ಇಲ್ಲಿಯ ಶಾಲೆಗಳ ತಪಾಸಣೆ ಮಾಡಿ ಹಿಂತಿರುಗಿದರು ತಾ ೧೮ನೇ ದಿವಸ ಜಾಹೀರ ಸಭೆ ಸೇರಿಸಿ ಯುರೋಪ ಖಂಡದೊಳಗಿನ ತಮ್ಮ ಅನುಭವಗಳನ್ನು ವಿವರಿಸಿದರು

ರಾಷ್ಟ್ರಪತಿಗಳ ಆಜ್ಞೆಯಂತೆ ಇಲ್ಲಿ ತಾ ೧೯ನೇಗೆ ದಿವಂಗತ ಗಾಝಿ ಮುಸ್ತಾಫಾ ಕೆಮಾಲ ಪಾಶಾ ಅತಾತುರ್ಕರವರ ದಿನಾಚರಣೆಯಾಯಿತು ಇಲ್ಲಿಯ ಮಾರ್ಕೆಟಿನಲ್ಲಿ ಜನರು ಸಭೆಸೇರಿದ್ದರು. ಕೊಂಗ್ರೆಸ ಕಮಿಟಿಯವರ ನಿಮಂತ್ರಣೆಯ ಮೇರೆಗೆ ಯಲ್ಲಾಪುರದಿಂದ ಬಂದ ರಾ॥ ಶಿರಸಿಕರರಾದ ಕಾರ್ಯಕೋಟಿಯವರು ಗಾಝಿ ಮುಸ್ತಾಫಾ ಕೆಮಾಲ ಪಾಶಾರವರ ಗುಣವರ್ಣನೆ ಮಾಡಿ ಅವರಿಂದಲೇ ತುರ್ಕಸ್ತಾನವು ಈಗಿನ ಘನತೆಗೇರಿತೆಂದು ನಿರೂಪಿಸಿ ಇಂಥ ರಾಷ್ಟ್ರಸಂಘಟಕರ ನಿಧನದಿಂದ ತುರ್ಕಸ್ತಾನಕ್ಕೆ ಅಪಾರವಾದ ಹಾನಿಯೊದಗಿರುವದೆಂದು ಹೇಳಿ ದುಃಖಪ್ರದರ್ಶನ ಮಾಡಿದರು

ಕಳೆದ ವರ್ಷ ಇಲ್ಲಿಯ ಕಾಂಗ್ರೆಸ ಕಮಿಟಿಯವರು ೬೦೦ ಕೊಂಗ್ರೆಸ ಸಭಾಸದರನ್ನು ನೋಂದಿಸಿದ್ದರು ಈ ವರ್ಷ ಬರೇ ೩೦೦ ಸಭಾಸದರಾಗಿದ್ದಾರೆ! ಕಾರ್ಯಕರ್ತರ ಉತ್ಸಾಹದ ಅಭಾವದಲ್ಲಿ ಈ ಸಂಖ್ಯೆಯೇ ದೊಡ್ಡದು

ಯಲ್ಲಾಪುರ— (ತಾ ೨೪-೧೧-೩೮) ದಿನಾ ಜಳಿ ಬೀಳುತ್ತಿದೆ ರೈತರು ಪೈರು ಕೊಯ್ಯಲಾರಂಭಿಸಿದ್ದಾರೆ ಊರಲ್ಲಿ ಬಟ್ಟೆ ಕೊರತೆ, ಪೈಲಿ ಮುಂತಾದ ಬೇನೆಗಳು ಹಬ್ಬಿವೆ ಕೊರತೆ ಉಪದ್ರವದಿಂದ ಮೂರು ಮುದುಗರು ತೀರಿಕೊಂಡರು ಜನರು ಚುಚ್ಚಿಸಿಕೊಳ್ಳುತ್ತಿದ್ದಾರೆ

ಒಬ್ಬ ಗೌಡನಿಗೆ ಮೋಸ ಮಾಡಿ ಅವನ ಹೊಲ ಭೂಮಿಯನ್ನು ಎತ್ತಿಹಾಕಿದನೆಂದು ನಂದೊಳ್ಳಿ-ಗ್ರಾಮದ ಪಟೇಲರ ಮೇಲೆ ಆರೋಪ ಬಂದದ್ದರಿಂದ, ಅವರಿಗೆ ಸಸ್ಪೆಂಡ ಮಾಡಿಟ್ಟಿರುತ್ತಾರೆಂದು ತಿಳಿಯುತ್ತದೆ

ಅಂಕೋಲೆಯ ಮೋಟರ ಬಂಡಿಯವನೊಬ್ಬನು ಹುಬ್ಬಳ್ಳಿಯಿಂದ ಸರಕುಗಳನ್ನು ಹೇರಿಕೊಂಡು ಬಂದಬಗ್ಗೆ ಇಲ್ಲಿಯ ಮೆಜಿಸ್ಟ್ರೇಟರ ಮುಂದೆ ಒಂದು ಫಿರ್ಯಾದಿಯಾಗಿತ್ತು ಫಿರ್ಯಾದಿಯ ವಿಚಾರದ ಕಾಲಕ್ಕೆ ಪೋಲೀಸರು ಮೊದಲ ಮಾಡಿದ ಪಂಚನಾಮೆಯನ್ನು ಅದಲಿಸಿ ಹೊಸ ಪಂಚನಾಮೆ ತಯಾರಿಸಿದ್ದಾರೆಂದು ಬೆಳಕಿಗೆ ಬಂದದ್ದರಿಂದ ಮೆಜಿಸ್ಟ್ರೇಟರು ಆರೋಪಿಗೆ ಬಿಟ್ಟುಕೊಟ್ಟರು ಪೋಲೀಸರು ಹೊಸ ಪಂಚನಾಮೆ ತಯಾರಿಸಿದ್ದು ಗುನ್ಹೆಯಾಗುವದಿಲ್ಲವೇ? ಆ ಬಗ್ಗೆ ಅಧಿಕಾರಿಗಳು ಯೋಗ್ಯ ಕ್ರಮ ಕೈಕೊಳ್ಳುವರೇ?

ಕೆಲವು ದಿನಗಳಿಂದ ಇಲ್ಲಿಂದ ಶಿರ್ಸಿಗೆ ಮೋಟಾರ ಸರ್ವಿಸು ಪ್ರಾರಂಭವಾಗಿದೆ ಶಿರ್ಸಿ ಬದಿಯ ಟಪಾಲು ಈ ಸರ್ವಿಸಿನ ಮೇಲೆ ಕಳಿಸಿಕೊಡುವ ವ್ಯವಸ್ಥೆಯಾದರೆ ಅನುಕೂಲವಾಗುವಂತಿದೆ ಟಪಾಲ ಇಲಾಖೆಯವರು ಇತ್ತ ಗಮನಿಸಬೇಕು

ಮಂಚಿಕೇರಿ— (ತಾ ೧೭-೧೧-೩೮) ಬಹಳ ಕಾಲದಿಂದ ಇಲ್ಲಿ ಶಾಖಾ ಅಂಚೆ-ಕಚೇರಿಯೊಂದಿದೆ ದೈನಿಕ ಟಪಾಲು ಸಹ ಇಲ್ಲಿ ಸಾಗಿಸ್ಸಿದೆ ಜನರು ಈ ದೈನಿಕ ಟಪಾಲಿನ ಸೌಕರ್ಯವನ್ನು ಚನ್ನಾಗಿ ಅನುಭವಿಸಿದ್ದಾರೆ ಆದರೆ ಟಪಾಲ ಇಲಾಖೆಯವರು ಈ ಸೌಕರ್ಯ ಕಸಿದುಕೊಂಡಿದ್ದಾರೆ ದಿನಾಲು ಬರುವ ಟಪಾಲು ದಿನ ಬಿಟ್ಟು ದಿನ ಬರುವಂತೆ ಹೊಸ ವ್ಯವಸ್ಥೆ ಮಾಡಿದ್ದಾರೆ! ಈ ವ್ಯವಸ್ಥೆಯಿಂದ ಒಬ್ಬ ಟಪಾಲು ಒಯ್ಯುವ ಪೇದೆಯ (ರನ್ನರನ) ಸಂಬಳ ಉಳಿತಾಯವಾಗುತ್ತದಂತೆ! ಬರೇ ಉಳಿತಾಯ ನೋಡತಕ್ಕದ್ದೇ, ಉಳಿತಾಯ-ಮಿತವ್ಯಯಗಳೊಂದಿಗೆ ಪ್ರಜೆಗಳ ಸೌಕರ್ಯ ಸವಲತ್ತುಗಳನ್ನೂ ನೋಡಬೇಕೋ ಎಂಬುದರ ವಿಚಾರ ಅಂಚೆ ಖಾತೆಯ ಮೇಲಧಿಕಾರಿಗಳು ಮಾಡುವರೇ? ಗ್ರಾಮೋದ್ಧಾರದ ಹೊಸ ಮನ್ವಂತರದಲ್ಲಿ ಗ್ರಾಮವಾಸಿಗಳ ಸುಖಸವಲತ್ತುಗಳನ್ನು ಹೀಗೆ ಸಂಪೂರ್ಣದಲ್ಲಿ ತರಬಹುದೇ ಎಂಬುದರ ಆಲೋಚನೆಯನ್ನೂ ಮಾಡಬೇಕಾಗಿ ವಿನಂತಿಯಿದೆ

ಗೌಡ ಸಾರಸ್ವತ ಬ್ರಾ। ಸ್ಟೂ। ಲೀಗ, ಮುಂಬಯಿ

ಮೇಲಿನ ಸಂಸ್ಥೆಯ ೨೨ನೇ ವಾರ್ಷಿಕ ಮಹಾಸಭೆಯು ಕಳೆದ ರವಿವಾರ ತಾ ೧೩ನೇಗೆ ಮುಂಬಯಿಯೊಳಗೆ ಗಿರಗಾಂವದಲ್ಲಿರುವ ಪೋರ್ಚುಗೀಸ ಸಭಾಗೃಹದೊಳಗೆ ಡಾ॥ ಎ ವ್ಹಿ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಕೂಡಿತು ಸಭೆಗೆ ೪೨ ಸಭಾಸದರೂ ಹಲವು ಅಭ್ಯಾಗತರೂ ಬಂದಿದ್ದರು. ೧೯೩೭-೩೮ನೇ ಸಾಲಿನ ಸಂಸ್ಥೆಯ ಲೆಕ್ಕವೂ ವರದಿಯೂ ಓದಲ್ಪಟ್ಟು, ಮಂಜೂರಾದವು ಆ ಮೇಲೆ ಸಂಸ್ಥೆಯ ಸಹಾಯವನ್ನು ಬೇಡುವ ವಿದ್ಯಾರ್ಥಿಗಳ ಸಂಖ್ಯೆ ಈಗ ಬೆಳೆಯುತ್ತ ನಡೆದಿರುವದರಿಂದ ೧೯೩೯–೪೦, ೧೯೪೦–೪೧ ಮತ್ತು ೧೯೪೧–೪೨ನೇ ವರುಷಗಳಲ್ಲಿ ದೀಪಾವಳಿಯ ಪಂಚಿಕೆಗಳ ಸಹಿತ ಎಲ್ಲ ವಾರ್ಷಿಕ ಉತ್ಪನ್ನವನ್ನು ಚಾಲೂ ಖರ್ಚಿಗೆ ವಿನಿಯೋಗಿಸಬಹುದೆಂತಲೂ, ಔದ್ಯೋಗಿಕ ಶಿಕ್ಷಣಕ್ಕೆ ಸಹಾಯ ಮಾಡಲು ಮೀಸಲಿರುವ ನಿಧಿಯ ಬಡ್ಡಿಯೊಳಗಿಂದ ಉದ್ಯೋಗ-ಶಿಕ್ಷಣ ಪಡೆಯುವ ಒಂದು ಯಾ ಹೆಚ್ಚು ಬಡ ಸ್ವಜಾತೀಯ ವಿದ್ಯಾರ್ಥಿಗಳಿಗೆ ಇದೇ ಬರುವ ಜೂನ ತಿಂಗಳಿನಿಂದ ಶಿಷ್ಯವೃತ್ತಿಗಳನ್ನು ಕೊಡತಕ್ಕದ್ದೆಂತಲೂ ಎರಡು ಠರಾವುಗಳಾದವು ಆ ನಂತರ ಹೊಸ ಕಾರ್ಯಕರ್ತರು, ಲೆಕ್ಕ-ತಪಾಸಕರು, ಸ್ಥಾನಿಕ ಪ್ರತಿನಿಧಿಗಳು, ಸಲಹೆಗಾರರು ಮುಂತಾದ ಅಧಿಕಾರಿಗಳ ಚುನಾವಣೆಯಾಯಿತು ಡಾ॥ ಬಾಳಿಗಾರವರೇ ತಿರುಗಿ ಚಾಲೂ ವರ್ಷದ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಅಧ್ಯಕ್ಷರು ತಮ್ಮ ಸಮಾರೋಪದ ಭಾಷಣದಲ್ಲಿ ಸಂಸ್ಥೆಯು ಈ ವರೆಗೆ ಮಾಡಿದ ಕಾರ್ಯವನ್ನೂ ಮುಂದೆ ಭರದಿಂದ ಪ್ರಗತಿಯಾಗಬೇಕಾದರೆ ಆಗಬೇಕಾದ ಮಾರ್ಪಾಟುಗಳನ್ನೂ ವಿವರಿಸಿದರು ತರುವಾಯ ರೀತಿಯಂತೆ ಅಧ್ಯಕ್ಷರ, ಗೌರವ-ಕಾರ್ಯಕರ್ತರ, ಬೇರೆ ಬೇರೆ ಸಂಸ್ಥೆಗಳ ಮತ್ತು ಪತ್ರಿಕೆಗಳ ಅಭಿನಂದನೆಯಾಗಿ ಸಭೆಯು ಮುಕ್ತಾಯವಾಯಿತು ಸಭೆಗೆ ಬಂದ ಮಹಾಜನರಿಗೆಲ್ಲರಿಗೂ 'ವಸಂತ ಭುವನ'ದ ಮಾಲಕರಾದ ರಾ॥ ಮಂಜನಾಥ ಗಾಯತೊಂಡೆಯವರು ಅಲ್ಪೋಪಹಾರವಿತ್ತು ಸತ್ಕರಿಸಿದರು

SERVICE & PROMPTNESS

A Feature and a Fact with the "POPULAR"

M VENKATESH PAI
Banker,

Sri Krishna Bhavan,
Mangalore.
25th July, 1938

The Managing Director
The Popular Insurance Co , Ltd ,
MANGALORE

Policy No 40.

Dear Sir

I very much appreciate your promptness in settling the claim in less than a week in respect of the above policy on the life of my late lamented Father in law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2 558–7–0 is delivered to the claimant and all within the short period of 6 days

This spirit of service and promptitude evinced by the 'POPULAR' is highly laudable and it is but proper that the Company should be POPULAR It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity.

Yours faithfully
(Sd) M. Venkatesha Pai

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: *PROSPECT CHAMBERS, Hornby Road, BOMBAY.*

ಶ್ರೀ

'दशमूलारिष्ट.'
ದಶಮೂಲಾರಿಷ್ಟ

ಇದು ಎಲ್ಲ ತರದ ರೋಗಿಗಳಿಗೂ, ಹೆಂಗಸರಿಗೂ, ಗಂಡಸರಿಗೂ ಎಲ್ಲ ವಯಸ್ಸಿನವರಿಗೂ ಉಪಯೋಗವಾಗುವ ಔಷಧವಾಗಿರುತ್ತದೆ. ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಾಡಿನಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವನ್ನು ... ತರಿಸಿದ ... ವನಸ್ಪತಿಗಳ ... ರೀತಿಯಿಂದ ತಯಾರಿಸಿದ್ದರಿಂದ ... ಇದರ ಗುಣವು ... ಕಂಡುಬಂದಿರುತ್ತದೆ.

ಈ ... ಔಷಧವು ... ಶಕ್ತಿಯನ್ನು ಕೊಡುತ್ತದೆ.

... ಅಜೀರ್ಣ, ಕೆಮ್ಮು, ದಮ್ಮು, ಗುಲ್ಮ, (ವಾತ, ಪಿತ್ತ, ಕಫ,) ... ರೋಗ, ... ಶ್ವಾಸವ್ಯಾಧಿ, ... ವ್ಯಾಧಿ, ... ಅಗ್ನಿಮಾಂದ್ಯ, ಉದರರೋಗ, ... ರೋಗ, ಮೂತ್ರಕೃಚ್ಛ್ರ, ... ಬಹಳ ದಿವಸ ... ಇದ್ದವರಿಗೆ ... ಹೆಂಗಸರಿಗೆ ಪ್ರಸವ ಆದ ನಂತರ ... ವಿಕಾರಗಳಿಗೆ ... ವಿಕಾರದಿಂದ ... ರೋಗಗಳಿಗೆ ಅತ್ಯುತ್ತಮ ... ರುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (...) ... ದಿವಸಗಳ ... ಕೊಟ್ಟರೆ ... ರೋಗಗಳು ಮುಂದೆ ... ತಿಯಾಗುತ್ತದೆ.

... ಬೆಲೆ ... ಪತ್ರ ವ್ಯವಹಾರ ...

... ರೂ ೧—೪—೦
... ರೂ ೬—೧೨—೦
... ರೂ ೧೨—೦—೦

ಇದಲ್ಲದೆ, ... ದೇಶದ ... ದಿಂದ ... ತಯಾರಿಸಿದ ... ಚ್ಯವನಪ್ರಾಶ, ... ದ್ರಾಕ್ಷಾರಿಷ್ಟ, ಕುಮಾರಿ ಆಸವ, ... ಆಸವ, ಅಶೋಕಾರಿಷ್ಟ, ... ಲೋಹಾಸವ, ಮಹಾನಾರಾಯಣ ತೈಲ, ... ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ... ದೊರೆಯುತ್ತವೆ. ... ತರಿಸಿಕೊಂಡು ... ಪಡೆಯಿರಿ.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ. ಕನ್ನಡ)

ಶ್ರೀ ಗಣಪತಿ ಮಹೇಶ್ವರ ಆಯುರ್ವೇದ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಬರುವ ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ
ABHRALOHA

ದೊರೆಯುವ ಸ್ಥಳ —

ಕಾರವಾರ – ಮೆಸರ್ಸ ಮುಜುಮದಾರ – ಕಸಬೇಕರ ಬ್ರದರ್ಸ
ಅಂಕೋಲಾ ದಿ ಸ್ಟೇಶನರಿ ಡಿಪೋ ॥ ಕುಮಟಾ ದೇವಪ್ಪ ಅಯ್ಯಾನ ಪ್ಯೆ ॥ ಹೊನ್ನಾವರ ಕಲ್ಯಾಣಪುರ ಬ್ರದರ್ಸ

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳ ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D K Nayak Bros
K. N Nayak
Honavar Agent
R V. Prabhu

K. PadmanabhaRao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟಿಕೆ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ



ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦, ... ಡಜನ್ ೧ಕ್ಕೆ ರೂ ೨-೮-೦ ವಿ. ಪಿ. ... ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಸಿ. ಮಂತೆ ಬರೆಯುವ ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೧, ಮಾರ್ಕೆಟ್ಸ್, ಮದರಾಸ

ಇದನ್ನು ಸ ... ಡುರಂಗ ಕೃಷ್ಣ ರಾಯ್ಕರ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 5th December, 1938.

ವರ್ಷ ೨೧

ಸಂಚಿಕೆ ೨೨

ಕಾನಡಾವೃತ್ತ

THE KANARA NEWS

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಯಿಂದವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ರಾಕಾಪ್ರ್ಯಾಪಿನ (೧೫ ಏಮ್ ಉದ್ದ) ೫ ಸಾಲುಗಳವರೆಗೆ ರೂ 1-0-0
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೫ ನೇದೆ ಡಿಸೆಂಬರ ಸನ್ ೧೯೩೮ನೇ ಇಸವಿ.)*-

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital In order that the depositors' money should be safe and always available it is necessary that only safe loans should be granted The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns

Estd. 1906

RESOURCES OVER A CRORE.

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4 - 10—1938

The Agricultural & Industrial Bank, Ltd.

ಏನೇನೋ ಆಗಲಿಕ್ಕಿದೆ!

(೭ನೇ ಪಾನಿನಿಂದ ಮುಂದರಿಸಿದ್ದು)

ಯೊಳಗಿಂದ ಇಸ್ಮೆತ್ ಇನುನುರವರ ಮುಂತ್ರರ ತಮ್ಮ ಕಡೆ ಎಳಕೊಳ್ಳುವ ಆಲೋಚನೆಯನ್ನು ನಡಿಸಿದರಂತೆ! ರುಮಾನಿಯಾ ದೇಶದಲ್ಲಿ ತುಂಬ ಎಣ್ಣೆ-ಗಣಿಗಳಿವೆ. ಈ ಸಂಗತಿಯನ್ನು ನಾನು ಮೊದಲೇ ಹೇಳಿಟ್ಟಿದ್ದೇನೆ ಹಾಗಯೇ ರುಮಾನಿಯಾದಲ್ಲಿ ಗೋದಿ ವಿಪುಲ ಬೆಳೆಯುತ್ತದೆ. ಈಗಿನ ರಾಜಕಾರಣದಲ್ಲಿ ಎಣ್ಣೆ ಗೋದಿಗಳ ಸುತ್ತುಮುತ್ತು ಸುಳಿಯುತ್ತಿವೆ ರುಮಾನಿಯಾ ದೇಶವನ್ನು ಆಕ್ರಮಿಸಲಿಕ್ಕೆ ಹಿಟ್ಲರನು ಹೊಂಚುಹಾಕಲು ಇದೇ ಕಾರಣ ಬ್ರಿಟಿಶರು ರಶ್ಯ ರುಮಾನಿಯಾಗಳಿಗೆ ಹಿಟ್ಲರನ ತಂತ್ರದಲ್ಲಿ ಸೇರದಂತೆ ಕಾರಸ್ಥಾನ ಹೂಡುವ ಕಾರಣವಾದರೂ ಇದೇ ರುಮಾನಿಯಾದ ಅರಸರಾದ ಕರೋಲರು ಸದ್ಯಕ್ಕೆ ಬ್ರಿಟನ್ ದೇಶದಲ್ಲಿ ಸಂಚರಿಸಿ ಮರಳಿದರು ಉಪಚಾರಕ್ಕಾಗಿ, ಶಿಷ್ಟಾಚಾರಕ್ಕಾಗಿ, ವಿಲಾಸಕ್ಕಾಗಿ, ವಿಹಾರಕ್ಕಾಗಿ ಕೆರೋಲ ಅರಸರು ಲಂಡನಿಗೆ ಹೋಗಿದ್ದರೆಂದು ಪ್ರಕಟಿಸಿ ಆದರೆ, ಅದೇನು ನಾನು ನಂಬುವದಿಲ್ಲ, ವ್ಯವಹಾರಿಕರ್‍ಯಾರೂ ನಂಬಲಿಕ್ಕಿಲ್ಲ ಎಣ್ಣೆ-ಗೋದಿಗಳ ರಾಜಕಾರಣದ ಸಲುವಾಗಿಯೇ ಕರೋಲ ಅರಸರು ಲಂಡನಿನ ಯಾತ್ರೆಯನ್ನು ಕೈಕೊಂಡಿದ್ದರೆಂದು ನಾನು ಖಂಡಿತ ಹೇಳಬಲ್ಲೆ ಕಳೆದ ವಾರದಲ್ಲಿ ರುಮಾನಿಯಾದೊಳಗೆ ಅಪಟಿತ ಘಟನೆಗಳಾದವು! ಸೋಮವಾರ ಇಬ್ಬ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಮುಖ್ಯಸ್ಥರಿಗೆ ಗುಂಡುಹಾಕಿ ಕೊಂದರ! ಸೆರೆಹಿಡಿಯಬಂದ ಪೋಲೀಸಪೇದೆಗಳಿಗೂ ಗುಂಡು ಹಾಕಿ ಕೊಂದರು! ಹಿಟ್ಲರ-ಪಕ್ಷಪಾತಿಯಾಗಿ ಈ ಅತ್ಯಾಚಾರ ನಡೆಯಿತು ರುಮಾನಿಯಾದೊಳಗೆ "Iron Guard" ಎಂಬ ಸ್ವಯಂಸೇವಕ ಪಥಕವಿದೆ ಈ ದಲವು ಹಿಂಸಾಪ್ರವೃತ್ತಿಯದು ಆದನ್ನು ಅರಸರು ಕಾಯಿದೆಬಾಹ್ಯ ಸಂಸ್ಥೆಯೆಂದು ಜಾಹೀರಪಡಿಸಿದಾಗ್ಯೂ ಗೌಪ್ಯದಿಂದ ಈ ಸಂಸ್ಥೆಯ ಚಟುವಟಿಕೆಗಳು ನಡೆದಿವೆ ಈ ಸಂಸ್ಥೆಯ ಮುಖಂಡನ ಪತ್ರಿಗಳ ದ ಕೆಪ್ಟನ್ ಕೊಂಡ್ರ್ಯಾನೋರವರಿಗೆ ಸೆರೆಯಲ್ಲಿಟ್ಟಿತ್ತು ಅವರಿಗೆ ಒಂದು ಸೆರೆವಸೆಗೂಯ್ಯುವಾಗ ಆ ಪಥಕದವರು ಅಡ್ಡ ನಿಂತು ಪೋಲೀಸಪೇದೆಗಳ ಮೇಲೆ ಗುಂಡು ಹಾರಿಸಿ ಕೆಪ್ಟನ್ ಕೊಂಡ್ರ್ಯಾನೋರವರಿಗೆ ಬಿಡಿಸಿಕೊಳ್ಳುವ ಹವಣಿಕೆ ನಡಿಸಿದರು ಪೋಲೀಸರು ಸರಿಯಾಗಿಗಿದ್ದ ಕೊಂಡ್ರ್ಯಾನೋರವರಿಗೂ ಇತರರಿಗೂ ಗುಂಡು ಹಾರಿಸಿ ಕೊಂದರು ಹಿಟ್ಲರ-ಪಕ್ಷಪಾತಿ ಜನರಿಗೆಲ್ಲ ಕಠೋರವಾಗಿ ಶಾಸನ ಮಾಡಬೇಕೆಂದು ರಾಜಾಜ್ಞೆ ಹೊರಟಿದೆ! ಹಿಂಸಾಚಾರ ಮಾಡುವವರ ಮೇಲೆ ಯಾವದೇ ವಿಧದ, ಎಷ್ಟುಮಾತ್ರವೂ ದಯೆದೋರಬಾರದೆಂದೂ ನಿರ್ದಯವಾಗಿ, ನಿಷ್ಠುರವಾಗಿ, ದುಷ್ಟರಾಗಿ ಪೂರ್ವಸೂಚನೆ ಸಹಕೊಡದೆ ಒಮ್ಮೆಲೇ ಗುಂಡುಹಾರಿಸಬೇಕಾಗಿಯೂ ರುಮಾನಿಯಾದ ಇನ್ಸಪೆಕ್ಟರ ಜನರಲ್‌ರು ಕಟ್ಟಾಜ್ಞೆ ಹೊರಡಿಸಿದ್ದಾರೆ. ಹಿಂಸಾಚಾರಿಗಳಿಗೆ ಶಾಸನಮಾಡುವಲ್ಲಿ ಹಿಂಜರಿಯುವವರಿಗೆ ಕಠೋರ ಶಾಸನವಾಗುವದಾಗಿಯೂ ವೇಲಪ್ಹಣೆ ಹೊರಡಿಸಲಾಗಿದೆ ಅನೇಕರಿಗೆ ಸೆರೆಹಿಡಿದಿಟ್ಟಿದ್ದಾರೆ ಜರ್ಮನ್-ಪಕ್ಷಪಾತಿ ಆಯರ್ನಗಾರ್ಡ ಸಂಘದವರು ಮುನಿದು ಕಂಡಕಂಡಲ್ಲಿ ಕೊಳ್ಳಿ ಹಚ್ಚಲಾರಂಭಿಸಿದ್ದಾರೆ ರ್ಷ ನೋವಿಥ್ ಗ್ರಾಮದಲ್ಲಿ— ಈ ಗ್ರಾಮ ಪ್ರೋಲಂಡದ ಗಡಿನಾಡಿನ ನೆರೆಹೊರೆಯಲ್ಲಿದೆ— ೧೦ ಮನೆಗಳಿಗೆ ಬೆಂಕಿ ಹಚ್ಚಲ್ಪಟ್ಟಿತು! ಕಾರಖಾನೆಗಳಿಗೂ ಬೆಂಕಿ ಹಚ್ಚಲ್ಪಟ್ಟಿತು! ಇದರಿಂದ ಹಿಟ್ಲರನು ರೇಗಿದ್ದಾನೆ! ಆತನು ರುಮಾನಿಯಾ ದೇಶದ ಪಾರುಪತ್ಯ ಮಾಡಬಿರನೆಂದೂ, ಹಾಗೆ ಆತನು ಪಾರುಪತ್ಯ ಮಾಡಹೋದಲ್ಲಿ ಮಧ್ಯ ಯುರೋಪ ಖಂಡದಲ್ಲಿ ಯುದ್ಧದ ಬೇಗೆ ಒಮ್ಮೆಲೇ ಸ್ಫೋಟವಾಗದಿರದೆಂದೂ ಹೇಳುತ್ತಾರೆ ಫ್ರೆಂಚರು ಜರ್ಮನ್‌ರ ವಿರೋಧಿಗಳೆಂದು ನಾನು ಹೇಳಿದ್ದೇನೆ, ನೀವೂ ಕೇಳಿದ್ದೀರಿ ಆದರೆ ಈಗಿನ ರೂಪವೇ ಬೇರೆ. ಹಿಟ್ಲರನು ಫ್ರೆಂಚರೊಡನೆ ಸಂಧಿ ಪ್ರಸ್ತಾಪವನ್ನು ಬೆಳೆಸಿರುವನಾಗಿಯೂ ಈರ್ವರೊಳಗೂ ರಶ್ಯರಿಗೆ ವಿರೋಧವಾಗಿ ಸಂಧಿ ಪ್ರಸ್ತಾಪವು ನಡೆಯಲಿರುವದೆಂದೂ ನಾನು ಕೇಳುತ್ತೇನೆ ಫ್ರೆಂಚ ವಿದೇಶ ಸಚಿವರಾದ ಬೊನೆಟ್‌ರವರೂ ಮುಖ್ಯ ಪ್ರಧಾನರಾದ ಡೆಲಿಡೆರ್‌ರವರೂ ಹಿಟ್ಲರನ ಗೆಳೆಯರು ಹಿಟ್ಲರನ ಗೆಳೆತನ ಫ್ರೆಂಚ ಜನಾಂಗಕ್ಕೆ ಒಪ್ಪಿಗೆಯಿಲ್ಲ ನಿಷೇಧಾರ್ಥವಾಗಿ ಒಮ್ಮೆ ಕಾ ಒಂಸೇ ಬಾಧವ ರದಿಂದ ಅಲ್ಲಿ ಕೂಲಿಕಾರರು ಹೂಡಿದಸಂಪು ನಿರರ್ಥಕವಾಗಿದೆಯೆಂದು ಹೇಳುತ್ತಾರೆ, ಕಳೆ ಏರುತ್ತದಾಗಿಯೂ ಹೇಳುತ್ತಾರೆ. ಅದೇನೋ ಶನಿವಾರ ೩ ಲಕ್ಷ ಜನರು ಸಂಪಿನ ಜಾಹೀರನಾಮೆಯ ಮೂಲಕ ಕೆಲಸಕ್ಕೆ ಹೋಗಲಿಲ್ಲ ಫ್ರಾನ್ಸ ದೇಶದಲ್ಲಿ ಗಂಭೀರ ಪರಿಸ್ಥಿತಿಯುಂಟಾಗಿರುವದೆಂದೂ ಆಕಡೆಯ ವ್ಯಾಪಾರಕ್ಕೆ ಬಹು ತೊಡಕುಗಳುಂಟಾಗಿವೆಯೆಂದೂ ಮುಂಬಯಿಯಲ್ಲಿ ಸುದ್ದಿ! 'ಮುಂಬಯಿ ಕ್ರೊನಿಕಲ್' ಮತ್ತು ಕಲಕತ್ತೆಯ 'ಅಮೃತ ಬಝಾರ ಪತ್ರಿಕೆ'ಯ ಸ್ವಂತ ಸುದ್ದಿಗಾರರಾದ ೦ || ಸುಂದರ ಕಭಾಡಿ

BHUVANENDRA PRODUCTS, LTD.

KATAPADI. S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಖಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೈಷ್ಣಾದಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರ:—

ಭಟ್ಕಳ — ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ — ಹೊನ್ನಾವರ — ಕಾಮತ ಸ್ಟೋರ್ಸ.

ಅಂಕೋಲಾ — ವೇದಮೂರ್ತಿ ಹನುಮಟ್ಟಿ ಕೇಶವ ಭಟ್ಟ — ಗೋಕರ್ಣ — ಎಮ್ ವ್ಹಿ ಬಸ್ತಿಕರ, ಮರ್ಚಂಟ

ಕಾರವಾರ — ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ — ಶಿರ್ಸಿ — ಆರ್. ವ್ಹಿ ಧಾಕಪ್ಪಾ, ಕೆಮಿಸ್ಟ.

ವಿಳಾಸ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರೆಂಚ್ ಆಫೀಸು ಕುಮಟಾ. ಉ. ಕ } OR { BHUVANENDRA PRODUCTS LTD. Head Office. KATAPADI, S K.

ಯವರಾ ಲಖನೌದ 'ನೆಶನಲ್ ಹೆರಲ್ಡ ಪತ್ರಿಕೆಯ ಪ್ರತಿನಿಧಿಗಳಾದ ರಾ|| ಪಿರೋಜ ಗಾಂಧಿಯವರೂ ಪಾರೀಸ ಪಟ್ಟಣಕ್ಕೆ ಹೋಗಿದ್ದರು ಅವರಿಗೆ ಕಾರಣ ಸಹ ಕೊಡದೆ ಫ್ರೆಂಚ ಸರಕಾರವು ಒಮ್ಮೆಲೇ ಸೆರೆಹಿಡಿದಿಟ್ಟಿವೆ ! ಮೊನ್ನೆ ಶನಿವಾರ ಅವರ ಮೇಲೆ ಹದ್ದುಪಾರಿಯು ಹುಕುಮಾಗಿದೆ; ಅವರು ಕೂಲಿಕಾರ ಪಕ್ಷದ ಪ್ರಮುಖರಲ್ಲ ತಮ್ಮ ತಮ್ಮ ಪತ್ರಿಕೆಗಳಿಗೆ ನಿಜ ಸ್ಥಿತಿಯನ್ನು ಸ್ಥಳದ ಮೇಲೆ ತಿಳಕೊಂಡು ತಿಳಿಸಹೋಗಿದ್ದರು ಅವರಿಗೆ ಫ್ರೆಂಚ ಸರಕಾರವು ತ್ರಾಸ ಕೊಡುವದೇಕೆ? ಸತ್ಯಸ್ಥಿತಿ ಹೊರಬಿದ್ದಲ್ಲಿ ಇದ್ದ ಲೋಕಕ್ಕೆ ಕಾರಸ್ಥಾನ ಜಾಹೀರಾಗಿ ಫ್ರೆಂಚ ಸರಕಾರದ ಬೆಂಡು ಹೊರಬಿದ್ದೀತೆಂದು ಸರಕಾರವು ಎಣಿಸಿತೆಂದು ನಾವು ತಿಳಿಯುತ್ತೇವೆ. ನಂಪಾಗಲು ಫ್ರೆಂಚ ಸರಕಾರದ ವಿಚಿತ್ರಧೋರಣವೇ ಕಾರಣವೆಂದು ನೀವು ತಿಳಕೊಂಡಿಟ್ಟಿರಾಯಿತು ಹಿಟ್ಲರನ ಪುನಃಪ್ರೋತ್ಸಾಹನೆಯ ಈಗಿನ ಫ್ರೆಂಚ ಸರಕಾರದ ಧೋರಣ ಫ್ರೆಂಚ ಜನಾಂಗಕ್ಕೆ ಮಾನ್ಯವಿಲ್ಲ ಈ ಧೋರಣಕ್ಕೆ ಅನಪೇಕ್ಷಿತವಾಗಿ ಒಂದು ಪುಷ್ಟಿ ದೊರೆತಿದೆ. ಫ್ರಾನ್ಸದೇಶದ ಟ್ಯುನಿಸಿಯಾ, ಕೊರ್ಸಿಕಾ, ನೈಯ್ಸ ದ್ವೀಪಗಳನ್ನು ತಮಗೊಪ್ಪಿಸಬೇಕಾಗಿಯೂ ಅವನ್ನು ಪಡೆಯಲು ತಾವೇ ಹಕ್ಕದಾರರೆಂದೂ ಇಟಾಲಿಯ ವಿದೇಶ ಪ್ರಧಾನರಾದ ಕೌಂಟ ಶಿಯಾನೋರವರು ಗುರುವಾರ ಲೋಕಪ್ರತಿನಿಧಿ ಸಭೆಯಲ್ಲಿ ಉಚ್ಚರಿಸಿದೊಡನೆ ಸಭಿಕರೆಲ್ಲರೂ ಎದ್ದೆದ್ದು ಘೋಷ ಮಾಡಿ ಫ್ರೆಂಚರ ಅಧಿಕ್ಷೇಪ ಮಾಡಿ ಅವನ್ನು ಪಡೆಯುವ ನಿರ್ಧಾರವನ್ನು ಉತ್ಸಾಹಭರಿತರಾಗಿ ದೃಢಪಡಿಸಿದರು ಇದರಿಂದ ಬೊನೆಟ್‌ರವರೂ ಡಿಲೆಡರ್‌ರವರೂ ಚಿಂತಾಕ್ರಾಂತರಾಗಿದ್ದಾರೆ ಜರ್ಮನಿ-ಇಟಾಲಿಗಳೊಡನೆ ಇಂಥ ಪ್ರಸಕ್ತಿಯಲ್ಲಿ ಗೆಳೆತನ ಬೆಳಸುವ ಬಗೆ ಹೇಗೆಂದು ತಿಳಿಯದೆ ಅವರ ಮತಿ ಕುಂಠಿತವಾಗಿರುವದಂತೆ! ಚೆಂಬರಲೇನ ಮುದುಕರು ಒಂದು ಪತ್ರವನ್ನು ಮುಸೊಲಿನಿಯವರಿಗೆ ಬರೆದಿದ್ದಾರಂತೆ! ಇನ್ನೊಂದು ತಿಂಗಳಲ್ಲಿ ಚೆಂಬರಲೇನರೂ ಹೆಲಿಫೆಕ್ಸ ದೊರೆಗಳೂ ಮುಸೊಲಿನಿಯವರ ಆದರಾತಿಥ್ಯವನ್ನು ಸ್ವೀಕರಿಸಲು ಅತ್ತ ಹೋಗುವವರಿದ್ದಾರೆ ಇದರಿಂದ ಕ್ಷೇಮವಿಲ್ಲವಾಗಿ ನಿವೃತ್ತ ವಿದೇಶ ಸಚಿವರಾದ ಮಿ|| ಎಂಥನಿ ಈಡನ್‌ರವರು ಬ್ರಿಟಿಶ ಸರಕಾರಕ್ಕೆ ಎಚ್ಚರಿಕೆ ಕೊಟ್ಟು ಈಗಿನ ಧೋರಣವನ್ನೇ ಸ್ಥಿರಪಡಿಸಿದರೆ ಅಪಾಯವಿರುವದೆಂದೂ ಅಭಿಪ್ರಾಯಪಡುತ್ತಾರೆ ಟ್ಯುನಿಸಿಯಾ, ಕೊರ್ಸಿಕಾ, ನಾಯ್ಸ ದ್ವೀಪಗಳನ್ನು ಒಪ್ಪಿಸಿಕೊಳ್ಳಬೇಕೆಂಬ ಮುಸೊಲಿನಿಯವರ ಧೋರಣದಿಂದ ಫ್ರೆಂಚ ಪ್ರಧಾನ ಮಂಡಳವು ಗೊಂದಲದಲ್ಲಿ ಬಿದ್ದಿವೆ ಜರ್ಮನಿ-ಇಟಾಲಿಗಳ ಸಹವಾಸ ಮಾಡಲೆಳಸಿದ್ದೇ ತಪ್ಪಾಯಿತೆಂದು ಈವಾಗ ಬೊನೆಟ್-ಡಿಲೆಡೇರರವರಿಗೆ ಮನವರಿಕೆಯಾಗಹತ್ತಿದೆ. ಸ್ಪೇನದ ದೊಂಬಿಗಾರರಾದ ಫ್ರೆಂಕೋರವರಿಗೆ ಬ್ರಿಟಿಶರು ಅವರಿಗೆ ಬೇಕಾಗುವ ಯುದ್ಧ ಸಾಹಿತ್ಯಗಳನ್ನು ಪೂರೈಸುವಲ್ಲಿ ಚೆಂಬರಲೇನರು ಅನುಕೂಲರಾದರೆ, ಜರ್ಮನ್ ಬ್ರಿಟಿಶರ ಹಿತಸಂಬಂಧಗಳಿಗೆ ವಿರೋಧವಾಗಿ ತಾವು ಹೋರಾಡುವದಿಲ್ಲವೆಂದು ಮುಸೊಲಿನಿಯವರು ಅಭಿವಚನ ಕೊಡುತ್ತಾರಂತೆ ಬಲ್ಗೇರಿಯಾದಲ್ಲಿ ಈಗ ಬಿಸ್ಸರಿ ಕಾಯಿದೆ ಹಿಟ್ಲರ-ಪಕ್ಷಪಾತಿ ಜನರು ಬಹಳೇ ಗದ್ದಲವನ್ನೆಬ್ಬಿಸಿದ್ದಾರೆ ಬ್ರಿಟಿಶರು ಮನೆ ಮನೆಗೆ ಕೈಪಟ್ಟಿ (Hand book) ಗ-

ನ್ನು ಹಂಚಿ, ಅವುಗಳಲ್ಲಿ ಯುದ್ಧವಾದರೆ ಯಾರ್‍ಯಾರು ಯಾವ್ಯಾವ ವಿಧದಿಂದ ಸೈನ್ಯ ತಲಾಪೆಯಲ್ಲಿ ಸೇರಿ ಸೇರಬಹುದೆಂದು ಮಾಹಿತಿ ಸಂಗ್ರಹಿಸುತ್ತಿದ್ದಾರೆ ಇತ್ತ ಮುಸೊಲಿನಿಯವರು ಲಿಬಿಯಾ ವಸಾಹತಿನಲ್ಲಿ ವಾಸಿಸುವ ಮುಸಲ್ಮಾನರಿಗೆ ಸೈನ್ಯ ತಲಾಪೆಯಲ್ಲಿ ಹೆಚ್ಚಿಚ್ಚಾಗಿ ಸೇರಿ ಹೋರಾಡಪ್ರೇರಣೆಯಾಗುವಂತೆ ಅವರಿಗೆ ಕೆಲ ಹಕ್ಕುಗಳನ್ನು ಕೊಡಮಾಡಿದ್ದಾರೆ ಅಮೇರಿಕೆಯವರಂತು ಹಿಟ್ಲರನೊಡನೆ ಯಾವದೇ ಪ್ರಕಾರದಿಂದ ವ್ಯವಹಾರಪಡಬಾರದೆಂದು ನಿರ್ಧರಿಸಿದ್ದಾರೆ ಅಮೇರಿಕೆಯ ರಾಯಭಾರಿಗಳಿಗೆ ಅತ್ತ ಜರ್ಮನಿಗೆ ಕಳಿಸಬಾರದೆಂದೂ ನಿರ್ಧಾರವಾಗಿದೆ ಇದರಿಂದ ಹಿಟ್ಲರನು ಮೆತ್ತಗಾದನೆಂದು ಯಾರೂ ತಿಳಿಯಬಾರದು ಯಹೂದಿಯರ ದ್ವೇಷದಿಂದ ಅತನು ಇನ್ನೂ ಉಗ್ರನಾಗಿದ್ದಾನೆ. ಮೊನ್ನೆ ಶನಿವಾರ ಮಧ್ಯಾಹ್ನದಿಂದ ರಾತ್ರಿ ಎಂಟು ಘಂಟೆಯವರೆಗೆ ಯಹೂದಿ ಯಾರ್‍ಯಾರೂ ಜನರಿಗೆ ಮೋರೆ ತೋರಿಸಬಾರದೆಂದು ವಿಧಿಸಿದ್ದಾನೆ ಮೊನ್ನೆ ಶನಿವಾರ ಬೃಹತ್-ಜರ್ಮನ್ ದಿನ (Day of Solidarity)! ಜರ್ಮನ್‌ರೆಲ್ಲರೂ ಒಕ್ಕಟ್ಟಾಗಿ ತಮ್ಮ ನಿರ್ಧಾರವನ್ನು ಲೋಕಕ್ಕೆ ಸಾರುವ ದಿನ! ಅಂದು ಯಹೂದಿಯರು ಜರ್ಮನ್ ಜನಾಂಗದಲ್ಲಿ ಸೇರಿರಲಾರರು, ಅದರಿಂದ ಈ ಅಪ್ಪಣೆ ಹೊರಟಿರುವದಾಗಿ ಅಪ್ಪಣೆಯಲ್ಲಿ ನಮೂದಿಸಲಾಗಿದೆ ಮಂಗಳವಾರ ಗ್ರೀಸ್, ತುರ್ಕಸ್ತಾನ, ಯುಗೊಸ್ಲಾವಿಯಾಗಳೊಳಗಿನ ಸೇನಾಪತಿಗಳು ಅಪ್ತಾಲೋಚನೆ ಮಾಡಿದರು, "ಲೋಕಶಾಂತಿಗಾಗಿ ಕೈಕೊಳ್ಳಬೇಕಾದ ಉಪಾಯಗಳ ಕುರಿತು ಚರ್ಚಿಸಿದರು ಸೋಮವಾರ ಪೋರ್ತುಗಾಲದಲ್ಲಿ ಹೊಸ ಲೋಕಸಭೆಯ ಅನಾವರಣ ಸಭೆಯಾಯಿತು, ಪೋರ್ತುಗೀಜ ಸರಕಾರವು ವಸಾಹತುಗಳನ್ನು ಎಷ್ಟಕ್ಕೂ ಬೇರೊಬ್ಬರಿಗೆ ಒಪ್ಪಿಸಲು ಒಡಂಬಡುವದಿಲ್ಲವಾಗಿಯೂ ಮಾತೃಭೂಮಿ-ಪೋರ್ತುಗಾಲ ದೇಶದಂತೆಯೇ ಅವನ್ನು ರಕ್ಷಿಸುವದಾಗಿಯೂ ಅಧ್ಯಕ್ಷರಾದ ಚಾಮೋರ್‌ನಾರವರು ಸಾರುತ್ತಾರೆ ಮಧ್ಯ ಮತ್ತು ದಕ್ಷಿಣ ಯುರೋಪ ಖಂಡದೊಳಗಿನ ವ್ಯಾಪಾರವನ್ನು ಜರ್ಮನಿಯು ಮುಳುಗಿಸಿತೆಂದು ಬುಧವಾರ ಪಾರ್ಲಮೆಂಟಿನ ಸಭೆಯಲ್ಲಿ ವರ್ತಕ ಇಲಾಖೆಯ ಪ್ರಧಾನರಾದ ಮಿ|| ಹಡ್ಸನ್‌ರವರು ನುಡಿದು, ಹಿಟ್ಲರರು ಶಿಷ್ಟಸಮ್ಮತ ಉಪಾಯಗಳನ್ನು ಕೈಕೊಳ್ಳದಿದ್ದರೆ ಜರ್ಮನಿಯೊಡನೆ ಹೋರಾಡುವ

(ಪುರವಣಿ ಮೇಲೆ ಮುಂದರಿಸಿದೆ)

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಠ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ-ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವವು ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು ☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಕ :- ಕೇ. ರಾಮ ಪಂಡಿತ, ಪೋ ಕುಮಟಾ, ಜಿ ಉ ಕಾನಡಾ.

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋಮೆರೋಗ, ನ್ಯುಮೋನಿಯಾ ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ?

ಆಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ಪಿ ಎನ್ ಶ್ರೀನಿವಾಸರಾವ್, ಲಿವ್ಹರ್ ಸ್ಪೆಶಲಿಸ್ಟ, ಎಂ ಪಿ ಪ್ರಾಸಾದಿಕ ಔಷಧಾಲಯ, ಶಿವಮೊಗ್ಗಾ

☞ ಇವರಲ್ಲಿ ವಿಚಾರಿಸಿರಿ

ಏಜಂಟ —

ಸುಬ್ರಾಯ ಸೀತಾರಾಮ ಹೆಗಡೆ ಶಿರ್ಸಿ

ಪತ್ರಕರ್ತರ ನುಡಿಗನ್ನಡಿ.

೧ ಮುಖ್ಯ ಮಂತ್ರಿಗಳಾದ ನಾ॥ ಖೇರ ಸಾಹೇಬ ಖೇರರವರಿಗೆ ನಾವು ಅಂತಃಕರಣಪೂರ್ವಕವಾಗಿ ಅಭಿನಂದಿಸುತ್ತೇವೆ. ನಾಶಿಕ ನಗರದಲ್ಲಿ ಗವರ್ನರರು ರತ್ನಾಗಿರಿಯೊಳಗಿನ ಜಿಲ್ಲಾ ಬೋರ್ಡಿನ ಮಾನಪತ್ರಕ್ಕೆ ಉತ್ತರ ಕೊಡುವಾಗ, ಕೊಂಗ್ರೆಸ ಪ್ರಧಾನ ಮಂಡಳದವರು ಈ ವರೆಗೆ ನಡಿಸಿದ ಲೋಕಕಾರ್ಯದ ಶ್ರೇಯಸ್ಸು ಸಂಪೂರ್ಣವಾಗಿ ನಾ॥ ಖೇರರವರಿಗೆ ಸಲ್ಲತಕ್ಕದ್ದೆಂದು ಹೊಗಳಿದ್ದಾರೆ ನಾ॥ ಖೇರರ ಉಚ್ಚ ಧ್ಯೇಯ, ಸಮದೃಷ್ಟಿ, ಕಾರ್ಯಶಕ್ತಿ ಇವೇ ಪ್ರಧಾನ ಮಂಡಳದ ಲೋಕಸೇವೆಯ ಪ್ರಧಾನ ಅಡಿಗಲ್ಲೆಂದು ದೊರೆಗಳು ವರ್ಣಿಸಿದ್ದಾರೆ ನಾ॥ ಗವರ್ನರರೂ ಮುಖ್ಯ ಮಂತ್ರಿಗಳೂ ಬೇರೆ ಬೇರೆ ಪರಂಪರೆಯವರು, ಬೇರೆ ಬೇರೆ ಧ್ಯೇಯದವರು, ಬೇರೆ ಬೇರೆ ದೃಷ್ಟಿಯವರು. ಸಾಮ್ರಾಜ್ಯ ಭದ್ರತೆಯ ವಿಚಾರ ನಾ॥ ಗವರ್ನರರದು, ಸ್ವಾತಂತ್ರ್ಯ-ಸ್ವರಾಜ್ಯಭದ್ರತೆಯ ವಿಚಾರ ನಾ॥ ಖೇರರದು. ಹೀಗೆ ಭಿನ್ನ ಪ್ರಕೃತಿಯ ನಾ॥ ಗವರ್ನರರು, ನಾ॥ ಖೇರರ ಹೊಗಳಿಕೆ ಮಾಡುವಷ್ಟು ಸ್ಥಿತ್ಯಂತರವನ್ನುಂಟು ಮಾಡಿದ್ದು ನಾ॥ ಖೇರರ ನಿರ್ಮಲ-ನಿಷ್ಕಪಟ ಶೀಲದ ಸಾಕ್ಷಿಯಾಗಿದೆ ಇಂಥ ಮಹಾಪುರುಷರು ಮುಖ್ಯ ಮಂತ್ರಿಗಳಾದ ಬಗ್ಗೆ ಜನ್ಮಭೂಮಿಯಾದ ರತ್ನಾಗಿರಿಯವರು ಅಭಿಮಾನ ತಾಳಬೇಕೆಂದು ನಾ॥ ಗವರ್ನರರು ಉದ್ಗರಿಸುತ್ತಾರೆ, ರತ್ನಾಗಿರಿಯವರೇಕೆ, ನಾವು ಕನ್ನಡಿಗರೂ ಅಭಿಮಾನಪಡಬೇಕಾದ ವಿಷಯ ನಾ॥ ಖೇರರು ರತ್ನಾಗಿರಿಯಲ್ಲಿ ಜನ್ಮ ತಾಳಿದರೂ ನಮ್ಮ ಕರ್ನಾಟಕದ ಕುಂದಗೋಳ ನಿವಾಸಿಕರು, ಕನ್ನಡಿಗರು, ಕನ್ನಡ ಬಲ್ಲವರು. ಇಂಥ ಮಹನೀಯರು, ಗುಣಸಂಪನ್ನರು, ಶೀಲವಂತರು. ಲೋಕಶಾಹಿರಾಜ್ಯದ ಹೊಣೆಯ ಮನ್ವಂತರದಲ್ಲಿ ಮುಖ್ಯ ಪ್ರಧಾನರಾಗಿ ಲಭಿಸಿದ್ದು ನಿಜವಾಗಿಯೂ ನಮ್ಮೆಲ್ಲರ ಭಾಗ್ಯವೇ ಸರಿ! ಮತ್ತು ಈ ಪುರುಷನಿಗೆ ನಮ್ಮ ಪ್ರಾಂತದ ರಾಜ್ಯದಾಡಳಿತೆಯ ಸರ್ವಸೂತ್ರಗಳನ್ನು ಒಪ್ಪಿಸಲಿಕ್ಕೆ ಕರಕೊಂಡ ಸರದಾರ ವಲ್ಲಭಭಾಯಿ ಪಟೇಲರಿಗೂ ಅಭಿನಂದಿಸಬೇಕು ಯಾಕೆಂದರೆ ಸರದಾರ ವಲ್ಲಭಭಾಯಿಯವರಿಗೆ ಈ ಪುರುಷರತ್ನವನ್ನು ಕಂಡುಹಿಡಿದು ಅವರ ಮುತ್ಸದ್ದಿತನದ ಮೇಲೆ ಒಲುಮೆಯಿಂದ ಆರೋಪ ಗೊಳಿಸುವ ಪ್ರಸಂಗವಾದದ್ದು ನಮ್ಮೆಲ್ಲರ ಪೂರ್ವಪುಣ್ಯವೇ ಸರಿ!

---

೨ ಕಾರವಾರ ಮ್ಯುನಿಸಿಪಾಲಿಟಿಯ ಮಾನಪತ್ರಕ್ಕೆ ನಾ॥ ಗವರ್ನರರು ಉತ್ತರ ಕೊಡುವಾಗ ಉಗಿಬಂಡಿಯ ಮಾರ್ಗವನ್ನು ಕಾರವಾರಕ್ಕೆ ತರುವ ಬದಲು ಮಾರ್ಮಗೋವಕ್ಕೆ ಒಯ್ದದ್ದರಿಂದ ಕಾರವಾರ ಪಟ್ಟಣಕ್ಕೂ, ಪರ್ಯಾಯದಿಂದ ನಮ್ಮ ಜಿಲ್ಲೆಗೂ ಉಂಟಾದ ನಷ್ಟವನ್ನು ಉಲ್ಲೇಖಿಸಿದ್ದರಷ್ಟೇ! ಗಾರ್ಜನೇ ಇಸ್ವಿಯಲ್ಲಿ ಕೈಕೊಂಡ ನಿರ್ಣಯದಿಂದ ಈ ಪರಿ ನಷ್ಟವೊದಗಿದರೂ ಮ್ಯುನಿಸಿಪಾಲಿಟಿಯವರು ಮಾನಪತ್ರದಲ್ಲಿ ವ್ಯಸನಪ್ರದರ್ಶನ ಮಾಡದಿದ್ದದ್ದು ಸಮಾಧಾನಕರವೆಂದು ನಾ॥ ಗವರ್ನರರು ಉದ್ಗರಿಸುತ್ತಾರೆ! ಈ ಪಶ್ಚಾತ್ತಾಪದ ಉದ್ಗಾರ ಕೇಳಿ ನಮಗೊಂದು ವಿನೋದವಾಗಿದೆ. ಈ ನಿರ್ಣಯದಿಂದ ನಮ್ಮಲ್ಲಿಯ ಜನರಿಗೆ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಹೇರಳ ನಷ್ಟವಾಗಿದೆ ನಮ್ಮತ್ತ ಕಡೆಯ ವ್ಯಾಪಾರ ಪರಸ್ಪರ ಸ್ಥಳಾಂತರವಾಗಿ ಉಂಟಾದದ್ದು ಪ್ರತ್ಯಕ್ಷ ನಷ್ಟ, ಆಗಿನ-ಈಗಿನ ವ್ಯಾಪಾರದ ಅಂಕಿಗಳನ್ನು ಪರಿಶೀಲಿಸಿದರೆ ಈ ಜಿಲ್ಲೆಯವರಿಗೊದಗಿದ ನಷ್ಟ ಸಹಜ ಕಾಣುತ್ತದೆಂದು ನಾ॥ ಗವರ್ನರರು ಹೇಳುತ್ತಾರೆ, ನಾವು ಒಪ್ಪುತ್ತೇವೆ ಆದರೆ ಅದೇ ಸಮಯ ಉಗಿಬಂಡಿಯ ಆಗಮನವನ್ನು ಹಾರೈಸಿ, ಭೂಮಿಯ ದರ ಹೇರಿದಷ್ಟು ಏರುವದೆಂದು ಮುಲ್ಕಿ ಅಧಿಕಾರಿಗಳು ಮುಂದಾಗಿಯೇ ಎಣಿಸಿ ತೀರ್ವೆಯನ್ನು ಏರಿಸಿದ್ದರು ಉಗಿಬಂಡಿಯ ಯೋಜನೆಗೆ ಅಸ್ತಕ್ಕೆ ತಡಬಿದ್ದಾಗ್ಯೂ, ತೀರ್ವೆ ... ಕಾಲ ಕಾಲಕ್ಕೆ ವಸೂಲಿಗೆ ಜನರಿಗಾದ ಅಪಾರ ನಷ್ಟ ಈಗ ನಮ್ಮಲ್ಲಿ ಪ್ರತ್ಯಕ್ಷ ಕಾಣದೊಡನೆ ಈ ನಷ್ಟ ಸಮಾಧಾನಕರವೆಂದು ನಾ॥ ಗವರ್ನರರು ಎಣಿಸುವದಿಲ್ಲವಷ್ಟೇ ಮ್ಯುನಿಸಿಪಾಲಿಟಿಯವರು ವ್ಯಸನಪ್ರದರ್ಶನ ಮಾಡದಿರಲು ಕಾರಣವಿದೆ ನಿಷೇಧ, ವ್ಯಸನ, ಸಂತಾಪಗಳೆಲ್ಲ ನಿಷ್ಪ್ರಯೋಜಕವಾದ ಬಳಿಕ, ಪುನಃ ಪುನಃ ವ್ಯಸನಪ್ರದರ್ಶನದಿಂದೇನು ಪ್ರಯೋಜನ? ನಾ॥ ಗವರ್ನರರೂ ಹಿಂದುಸ್ಥಾನ ಸರಕಾರವೂ ಭಾರತ ಮಂತ್ರಿಗಳೂ ಆಲೋಚಿಸಬೇಕಾದ ವಿಷಯವಿದು! ಯಾಕೆಂದರೆ ಯುರೋಪಖಂಡದೊಳಗಿನ ರಾಜಕಾರಣದಲ್ಲಿ ಬ್ರಿಟಿಶ ಸಾಮ್ರಾಜ್ಯ ಸರಕಾರವು ಕೈಕೊಂಡ ಧೋರಣದ ಮೂಲಕವೇ ಕಾರವಾರಕ್ಕೆ ಬರಲಿಕ್ಕಿದ್ದ ಉಗಿಬಂಡಿಯು ಪೋರ್ತುಗೀಜ ಸರಕಾರದ ಸಮಾಧಾನಕ್ಕಾಗಿ ಮಾರ್ಮಗೋವಾಕ್ಕೆ ವರ್ಗಾಯಿಸಲ್ಪಟ್ಟಿತು. ಆವಾಗ ಮಾರ್ಮಗೋವಾದ ಅಭ್ಯುದಯವೇ ಸಾಮ್ರಾಜ್ಯ ಸರಕಾರಕ್ಕೆ ಕಂಟಕ ಕಾರಣವಾಗಿದೆ. ಗಾರ್ಜನೇ ಇಸ್ವಿಯಲ್ಲಿ ಪೂರ್ವಸಂಕಲ್ಪದಂತೆ ಉಗಿಬಂಡಿಯನ್ನು ಕಾರವಾರ ಮಾರ್ಗವಾಗಿ ತಂದಿದ್ದರೆ ಇಂದಿಗೆ ಗೋಮಾಂತಕವು ಈಗಿನಷ್ಟು ಪ್ರಸಿದ್ಧಿಗೆ ಬರುತ್ತಿರಲಿಲ್ಲ ನಾ॥ ಗವರ್ನರರು ಗೋಮಾಂತಕ ಸರಕಾರದ ಗಳತನಕ್ಕಾಗಿ ಕೊಂಕಣ ದೇಶದ ಸಂಚಾರವನ್ನು ಕೈಕೊಳ್ಳುವ ಪ್ರಸಂಗ ಬರುತ್ತಿರಲಿಲ್ಲ ಬ್ರಿಟಿಶ ಸರಕಾರಕ್ಕೆ ಗಾರ್ಜನೇ ಇಸ್ವಿಯಲ್ಲಿ ಕೈಕೊಂಡ ನಿರ್ಣಯದಿಂದ ಈವಾಗ ಅನುತಾಪವಾಗಹತ್ತಿದೆಂದು ನಾವು ದಾರ ಗವರ್ನರರ ಉದ್ಗಾರದಿಂದ ನಾವು ತಿಳಿಯುತ್ತೇವೆ ಈಗಿನ ದಿನಮಾನವನ್ನು ನಿರೀಕ್ಷಿಸಿ ನಮ್ಮಲ್ಲಿಯ ಬಂದರಗಳನ್ನು ಅಭ್ಯುದಯಗೊಳಿಸಲು ಈಗಲಾದರೂ ಸರಕಾರವು ಮನವಿಟ್ಟು ಪ್ರಯತ್ನಿಸಿದರೆ ಗೋಮಾಂತಕ ಸರಕಾರಕ್ಕೆ ಆಪತ್ಕಾಲ ಸಹಾಯಾರ್ಥವಾಗಿ ಮನಪೂರಿಸುವ ಕಷ್ಟ ತಪ್ಪಿ ತು ನಮ್ಮ ಜಿಲ್ಲೆ ಅಭಿವೃದ್ಧಿಗೊಂಡು ಬಡತನ ದೂರವಾದೀತು

---

೩ ಮದ್ರಾಸ ಮ್ಯುನಿಸಿಪಾಲಿಟಿಯ ಕಮಿಶನರರು, ಭಿಕ್ಷೆ ಬೇಡುವವರ ಉಪದ್ರವವನ್ನು ಪರಿಹರಿಸುವದಕ್ಕಾಗಿ ತಯಾರಿಸಿದ ಯೋಜನೆ ವಿಚಾರಾರ್ಹವಿದೆ ಪಟ್ಟಣದೊಳಗೆ ಭಿಕ್ಷ ಬೇಡುವವರ ಮೇಲೆ ಖಟ್ಲೆ ಮಾಡಿ ರೂ ೨೦ರ ತನಕ ದಂಡ ವಿಧಿಸಲಿಕ್ಕೆ ಅಲ್ಲಿಕ ಯಿದೆಯ ಒಟ್ಟ ದಂಡ ಕೊಡದಿದ್ದರೆ ೧ ತಿಂಗಳ ಕಾರಾಗೃಹವಾಸವನ್ನು ವಿಧಿಸಲಿಕ್ಕೂ ಕಾಯಿದೆಯಲ್ಲಿ ಏರ್ಪಟ್ಟಿದೆ ಆದರೆ ಈ ಶಾಸನ-ಉಪಾಯದಿಂದ ಭಿಕ್ಷೆ ಬೇಡುವವರ ಉಪದ್ರವ ತಪ್ಪುವಂತಿಲ್ಲ ಕಾರಾಗೃಹವಾಸವಾದಾಗಿಂದ ಬಿಡುಗಡೆ ಹೊಂದಿದವರಿಗೆ ಬೇರೆ ಜೀವನೋಪಾಯವಿಲ್ಲದಿದ್ದರೆ ಅವರೇನು ಮಾಡತಕ್ಕದ್ದು? ಅವರಿಂದ ಇಂತಹ ಬಡವರಿಗೆ ಉದ್ಯೋಗವನ್ನು ಪುರೈಸುವ ಏರ್ಪಾಟಾದನಕ ಇಂದ ಶಾಸನ-ಕಾಯಿದೆಯಿಂದ ಪ್ರಯೋಜನವಿಲ್ಲ

THE CANARA INDUSTRIAL & BANKING SYNDICATE LTD.,

(INCORPORATED IN BRITISH INDIA)

[Estd.: 1925]

Head Office: "MUKUND NIVAS", UDIPI, S. INDIA

MEMBER

RESERVE BANK OF INDIA, BANKERS' CLEARING HOUSE BOMBAY

DEPOSIT RATES.

3 to 5 months	2½% p a
6 to 11 months	3% p a
12 to 23 months	3½% p a
24 months	4% p a
SHORT TERM	2% p a

Banking Business of every description transacted.

ವಾಗಿ ಕಮಿಶನರರ ಅಭಿಪ್ರಾಯವಾಗಿದೆ ಮುದುಕರಿಗೆ, ಊನರಿಗೆ ಉದರಪೋಷಣವಾಗುವಂತೆ ಮ್ಯುನಿಸಿಪಾಲಿಟಿಯವರು ಏರ್ಪಾಟು ಮಾಡಿದ್ದಾರೆ ಆ ಯೋಜನೆಯನ್ನೇ ವಿಸ್ತಾರಗೊಳಿಸಿ ಬಿಕ್ಷೆ ಬೇಡುವವರಿಗೆಲ್ಲ ಉದ್ದಿಮೆ ಕಲಿಸುವಂತೆ ಕ್ರಮ ಕೈಕೊಳ್ಳತಕ್ಕದ್ದೆಂದು ಕಮಿಶನರರು ಸೂಚಿಸಿದ್ದಾರೆ ಬಿಕ್ಷೆ ಬೇಡುವವರಿಗೆ ಈ ಸಂಸ್ಥೆಯಲ್ಲಿ ಸೇರಿಸಿಕೊಂಡು, ಚಾಪೆ, ಬುಟ್ಟಿ ಮೊದಲಾದ ಕೈಗಾರಿಕೆಗಳನ್ನೂ, ನೂಲುವ-ನೇಯುವ ಮೊದಲಾದ ಉದ್ದಿಮೆಗಳನ್ನೂ ಕಲಿಸಬೇಕಾಗಿಯೂ ಬಿಕ್ಷೆ ಬೇಡುವ ಉದ್ದಿಮೆಯಿಂದ ಅವರನ್ನು ತಪ್ಪಿಸಬೇಕಾಗಿಯೂ ಕಮಿಶನರರು ಸೂಚಿಸಿದ್ದಾರೆ "ಉದ್ಯೋಗದ ಅಭಾವದಲ್ಲಿ ಹೊಟ್ಟೆ ಹೊರಕೊಳ್ಳುವದಕ್ಕಾಗಿ ಜನರು ಬಿಕ್ಷೆ ಬೇಡುವದುಂಟು, ಸೋಮಾರಿತನದಿಂದ ಅವರು ಬಿಕ್ಷೆ ಬೇಡುತ್ತಿದ್ದರೆ ಕೆಲಸ ಹಚ್ಚುವ ಹೊಸ ಏರ್ಪಾಟಿನ ಮೂಲಕ ಅವರು ತಾವಾಗಿಯೇ ಹೆದರಿ ಪಟ್ಟಣದ ತ್ಯಾಗ ಮಾಡುವರು. ಹೀಗೆ ಯಾಚಕರ ಉಪದ್ರವ ತಪ್ಪುವದು" ಎಂಬದಾಗಿ ಕಮಿಶನರರು ಮದ್ರಾಸ ಮ್ಯುನಿಸಿಪಾಲಿಟಿಗೆ ಸೂಚಿಸಿದ್ದಾರೆ ಸಾವಿರ ಸುತ್ತು ಹಾಕಿದರೂ ಗಂಟು ಒಂದೇ! ಉದ್ದಿಮೆಗಳನ್ನು ಕಲ್ಪಿಸಿ ಜೀವನೋಪಾಯದ ವ್ಯವಸ್ಥೆ ಮಾಡಿಕೊಟ್ಟನಕ ಜನರಿಗೆ ಸುಖವಾಗದು ಶಾಸನದ ಕಾನೂನನ್ನು ನಿರ್ಮಿಸುವದು ಕಠಿಣ ಮಾತಲ್ಲ ಆದರೆ ಅದನ್ನು ಪಾಲಿಸಿಕೊಳ್ಳಬೇಕಾದರೆ ಜನರಿಗೆ ಸನ್ಮಾರ್ಗ ತೋರಿಸಿಕೊಡುವ, ಆ ಕಾಯಿದೆಯನ್ನು ಪಾಲಿಸುವ, ಉಲ್ಲಂಘಿಸದಿರುವ ಉಪಾಯವನ್ನು ರಾಜ್ಯಕರ್ತರು ಯೋಜಿಸತಕ್ಕದ್ದು ಅಂದರೆ ಮಾತ್ರ ಕಾಯಿದೆಯ ಪ್ರಯೋಜನ. ಬಿಕ್ಷೆ ಬೇಡಬಾರದು, ಉದ್ಯೋಗ ಮಾಡಲನುವಿಲ್ಲ, ಇಂಥ ಪ್ರಸಕ್ತಿಯಲ್ಲಿ ಜನರು ಜೀವನ ನಡಿಸಬೇಕಾದ ಬಗೆಯೆಂತು? ನಮ್ಮ ಪ್ರಾಂತಿಕ ಸರಕಾರದವರು ಈ ವಿಷಯವನ್ನು ಸಮಾಲೋಚಿಸಿ ಉದ್ದಿಮೆಯಿಲ್ಲದೆ ಅಲೆದಾಡುವವರಿಗೆ ಉದ್ಯೋಗ ಹಚ್ಚಿ ಕೊಡುವಂತೆ ಎಲ್ಲೆಲ್ಲಿಯೂ ಏರ್ಪಾಟು ಮಾಡಬೇಕಾಗಿ ನಾವು ಸೂಚಿಸುತ್ತೇವೆ ಗ್ರಾಮ-ಪಂಚಾಯತು, ಬೋರ್ಡ, ಮ್ಯುನಿಸಿಪಾಲಿಟಿಗಳೂ ಅಲ್ಲಲ್ಲಿಯ ಕಲೆಕ್ಟರರೂ ಈ ಸಮಸ್ಯೆಯನ್ನು ಅವಲಂಬಿಸಿ ಮದ್ರಾಸ ಕಮಿಶನರರ ಯೋಜನೆಯ ಮೇರೆಗೆ ಇಲ್ಲೊಂದು ಯೋಜನೆಯನ್ನು ತಯಾರಿಸಬೇಕಾಗಿ ನಮ್ಮ ಅಂಬೋಣ ಗ್ರಾಮ-ಪಂಚಾಯತುಗಳ ಮೇಲೆಯೇ ನಮ್ಮ ಹೆಚ್ಚಿನ ಲಕ್ಷವಿರಬೇಕು. ಗ್ರಾಮ-ಪಂಚಾಯತುಗಳು ತಮ್ಮಲ್ಲಿರುವ ನಿರುದ್ಯೋಗಿ ಜನರ ಲೆಕ್ಕ ಮಾಡಿ ಅವರವರ ಪರಿಸ್ಥಿತಿಗುಚಿತವಾದ ಕೈಗಾರಿಕೆಯನ್ನು ಕಲ್ಪಿಸಿಕೊಡಲು ಯೋಜನೆ ಮಾಡಬೇಕು, ಕೈಸಾಗದ ಮಾತಿದ್ದರೆ ಸರಕಾರಕ್ಕೆ ಬರಕೊಳ್ಳಬೇಕು ಮುಖ್ಯ ಮಂತ್ರಿಗಳಾದ ನಾ| ಖೇರರವರು ಮುಂಬಯಿಯಲ್ಲಿ ಸೇರಿದ ಇಂಜನಿಯರ ಪರಿಷತ್ತಿನಲ್ಲಿ ಗ್ರಾಮ-ನಿವಾಸಿಗಳಿಗೆ ಹೊಟ್ಟೆತುಂಬ ಕೂಳು, ತಕ್ಕಷ್ಟು ಶಿಕ್ಷಣ ಕೊಟ್ಟು ಉದ್ಧರಿಸುವದೇ ತಮ್ಮ ಸರಕಾರದ ಮುಖ್ಯ ಕಾರ್ಯವೆಂದೂ, ಉಳಿದ ಎಲ್ಲ ಚಟುವಟಿಕೆಗಳು ಗೌಣವೆಂದೂ, ಈ ಕಾರ್ಯಕ್ಕಾಗಿ ಸರಕಾರವು ಸಕಲ ಸಾಮರ್ಥ್ಯವನ್ನು ಉಪಯೋಗಿಸಲು ಬದ್ಧವಿರುವದಾಗಿಯೂ ಹೇಳಿದ್ದಾರೆ ಸರಕಾರವು ಗ್ರಾಮನಿವಾಸಿಗಳ ಸಂಪದಭ್ಯುದಯಕ್ಕೋಸ್ಕರ ಈ ಪರಿ ತಲ್ಲಣಿಸುತ್ತಿರುವಾಗ, ಗ್ರಾಮ-ಪಂಚರು ಗ್ರಾಮ-ನಿವಾಸಿಗಳ ಸಂಕಟಗಳ ಕುರಿತು ನಿರ್ಭಯದಿಂದ ಅರಿಕೆ ಮಾಡಿಕೊಳ್ಳಬಹುದೆಂದು ನಮ್ಮ ಅಭಿಪ್ರಾಯ. ಗಾಳಿ ಬಂದಾಗಲೇ ತೂರಿಕೊಳ್ಳಬೇಕೆಂಬ ಮಾತನ್ನು ನಾವಿಲ್ಲಿ ಸಮೂದಿಸುವದವಶ್ಯಕ.

---

೪. ಮುಂಬರುವ ಜಿಲ್ಲಾ ಬೋರ್ಡಿನ ಇಲೆಕ್ಶನ್ನು ಜಿಲ್ಹಾ ಕೊಂಗ್ರೆಸ ಕಮಿಟಿಯವರು ರಾಷ್ಟ್ರೀಯ ಸಭೆಯ ಪರವಾಗಿ ನಡಿಸಿ ಲೋಕಹಿತ ಸಾಧಿಸಲೆಳಸಿದ್ದಾರಷ್ಟೇ! ಈ ಕುರಿತು ಸಿವ್ಹಿಲ್ ಬೋರ್ಡ ಯಾನೆ ಚುನಾವಣಿ-ಮಂಡಳ ನೇಮಿಸಲಾಗಿದೆ ಜಿಲ್ಹಾ ಬೋರ್ಡಿಗೆ ಅಂತು ಆರಿಸಿಕೊಡಬೇಕಾದ ಸಭಾಸದರ ಸಂಖ್ಯೆ ೩೦ ಆದರೆ, ಈಗಾಗಲೇ ಒಂದೆರಡು ತಾಲೂಕುಗಳಿಂದ ಬೋರ್ಡಿನ ಕಡೆ ಸಾದರಾದ ಉಮೇದ್ವಾರರ ಅರ್ಜಿ ಇಂಥಿಷ್ಟು ಮಿಕ್ಕಿರುವವೆಂದು ತಿಳಿಯುತ್ತದೆ ಪ್ರತ್ಯಕ್ಷ ರಾಷ್ಟ್ರೀಯ ಸಭೆಯ ವಿಧಾಯಕ ಕಾರ್ಯಕ್ರಮದಲ್ಲಾಗಲಿ ಇತರೇ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಾಗಲಿ ಕಾರ್ಯಕರ್ತರ ಕೊರತೆಯಿದ್ದಾಗ್ಯೂ, ಇಲೆಕ್ಶನಿನ ಮಟ್ಟಿಗೆ ಪರೋಪಕಾರಿಗಳ ಸಂಖ್ಯೆ ಯಾವಾಗಲೂ ಕಡಿಮೆಯಿಲ್ಲ ಮತದಾರರು ತಮಗೆ ಆರಿಸಿಕೊಡಬಹುದೋ ಹೇಗೆ? ಸ್ವತಂತ್ರವಾಗಿ ಇಲೆಕ್ಶನಿನಲ್ಲಿ ಹುರಿಯಾಳಾಗಿ ನಿಂತು ಆರಿಸಿಬರುವ ಸಂಭವವುಂಟೋ ಹೇಗೆ, ತಮ್ಮ ಸ್ವಂತ ಯೋಗ್ಯತೆಯೇನು? ಮತದಾರರು ಕಲ್ಪಿಸುವ ಯೋಗ್ಯತೆಯೆಷ್ಟು? ಆರಿಸಿಕಳುಹಬೇಕಾದ ಸಭಾಸದರ ಸಂಖ್ಯೆಯ ಮಾನದಿಂದ ತಮ್ಮಂಥವರು ಆರಿಸಿ ಹೋಗಬಹುದೇ-ಹೇಗೆ? ತಮಗೆ ಲೋಕಮತದ ಬೆಂಬಲವೆಷ್ಟು ಸಿಕ್ಕೀತು? ಎಂಬ ಯಾವದೇ ಆಲೋಚನೆಯನ್ನು ಅರ್ಜಿ ಕೊಡುವವರು ಮಾಡಿರುತ್ತಾರಾಗಿ ನಾವೆಣಿಸುವದಿಲ್ಲ ಸಿವ್ಹಿಲ್ ಬೋರ್ಡಿನವರು ಪಂಚಖಾದ್ಯ ಹಂಚುತ್ತಾರೆ, ತಾವೂ ಕೈಮುಂದೆ ಮಾಡಿದರೆ ತಮಗೂ ಇಷ್ಟು ಸಿಕ್ಕೀತು ಎಂದು ಉಡಾಳ ಹುಡುಗರಂತೆ ಅವರು ಹುಡುಗಾಟಿಕೆಯ ಕಲ್ಪನೆ ಮಾಡಿಕೊಂಡು ಅವರು ಅರ್ಜಿ ಕೊಟ್ಟಿರಬೇಕೆಂದು ನಮ್ಮ ಭಾವನೆ ಆಸನಗಳಿಗಿಂತ ಅರ್ಜಿಗಳ ಸಂಖ್ಯೆ ಮಿಗಿಲಾಗುವ ಸಂದರ್ಭದಲ್ಲಿ ಅನೇಕ ಅರ್ಜಿಗಳನ್ನು ಸಿವ್ಹಿಲ್ ಬೋರ್ಡಿನವರು ನಿರುಪಾಯವಾಗಿ ತಿರಸ್ಕರಿಸಬೇಕಾದೀತು ಅರ್ಜಿ ತಿರಸ್ಕರಿಸಲ್ಪಟ್ಟವರು ಸಿವ್ಹಿಲ್ ಬೋರ್ಡಿನವರಿಗೆ ಕಂಡಕಂಡಂತೆ ದೂರಲೇನು ಕಡಿಮೆ ಮಾಡರು. ಅದರಿಂದ ನಾವೊಂದು ಸೂಚನೆ ಮಾಡಬಯಸುತ್ತೇವೆ ಸಿವ್ಹಿಲ್ ಬೋರ್ಡಿನವರು ಆಯಾ ತಾಲೂಕಿನೊಳಗಿನ ಎಲ್ಲ ಉಮೇದ್ವಾರರಿಗೆ ಕರಿಸಿಕೊಂಡು ಅವರೊಳಗೆ ಯಾರು ಉಮೇದ್ವಾರರಾಗಿ ನಿಲ್ಲಬೇಕೆಂದು ಅವರಿಗೇ ನಿರ್ಣಯಿಸಹಚ್ಚಬೇಕು ಆರಿಸಲ್ಪಡಬೇಕಾದ ಸಭಾಸದರ ಸಂಖ್ಯೆಗಿಂತ ಮಿಗಿಲಾಗಿ ಕಾಂಗ್ರೆಸ ಅಂಕಿತಗಳನ್ನು ಉಮೇದ್ವಾರರಿಗೆ ಕೊಡಲು ಸಿವ್ಹಿಲ್ ಬೋರ್ಡಿಗೆ ಸಾಧ್ಯವಿಲ್ಲ! ಎಲ್ಲರೂ ಹುರುಪಿನ ಹುರಿಯಾಳುಗಳು! ಲೋಕಸೇವೆಗಾಗಿ ತಲ್ಲಣಿಸುವವರೇ! ಆತ್ಮಪ್ರತಿಷ್ಠೆಗಾಗಿ, ಸ್ವಂತ ಗೌರವಕ್ಕಾಗಿ ಒಬ್ಬರೂ ಪ್ರಯತ್ನಿಸುವವರಲ್ಲ! ಎಂದು ನಾವು ಗೃಹೀತ ಹಿಡಿಯುತ್ತೇವೆ ಅಂತರಂಗ ಏನೇ ಇರಲಿ, ಬಹಿರಂಗದಲ್ಲಾದರೂ ಈ ಸಂಗತಿಯನ್ನು ನಾವು ಗೃಹೀತ ಹಿಡಿಯಲೇಬೇಕಲ್ಲವೇ! ಎಲ್ಲರೂ ಲೋಕಸೇವೆಗಾಗಿಯೇ ಟೊಂಕಕಟ್ಟಿ ಮುಂದಾಗಿರುವಾಗ, ಮನ್ನಣೆ ಸಿಗಬೇಕಾದವರ ಸಂಖ್ಯೆ ನಿಯಮಿತವಿರುವಾಗ, ವಿಶಾಲ ದೃಷ್ಟಿಯಿಂದ ಉಮೇದ್ವಾರರೆಲ್ಲರಿಗೆ ನಾವು ಆಲೋಚನೆ ಮಾಡಹೇಳಿದ ಬಗ್ಗೆ ಅವರು ವಿಕಲ್ಪ ಎಣಿಸಲಾಗದು ಉಮೇದ್ವಾರರೆಲ್ಲರೂ ಯೋಗ್ಯತಾವಂತರೆಂದೆಣಿಸಿದಾಗ್ಯೂ ಜಿಲ್ಹಾ ಬೋರ್ಡಿನಲ್ಲಿ ಜಿಲ್ಹೆಯೊಳಗಿನ ಯಾವತ್ತೂ ಯೋಗ್ಯತಾವಂತರಿಗೆ ಸಭಾಸದರಾಗಿ ಕಾಯಿದೆಯಂತೆ ನೇಮಿಸಬರುವದಿಲ್ಲವಾದುದರಿಂದ ನಿರುಪಾಯವೆಂದು ನಾವು ಈ ಸೂಚನೆ ಮಾಡಬೇಕಾಗಿದೆ ಜಿಲ್ಹೆಯೊಳಗೆ ನಿಷ್ಕಾರಣವಾಗಿ ಅಸಮಾಧಾನ ಹುಟ್ಟಬಾರದೆಂದೂ ರಾಷ್ಟ್ರೀಯ ಸಭೆಯ ಕಾರ್ಯಕರ್ತರ ವಿರುದ್ಧ ಅಪಪ್ರಚಾರವಾಗಬಾರದೆಂದೂ ನಾವೀ ಮುಂಜಾಗ್ರತೆ ಕೊಡಕಾರಣ. ಉಮೇದ್ವಾರರ ಅರ್ಜಿಗಳನ್ನು ತಿರಸ್ಕರಿಸುವ ಪ್ರಸಕ್ತಿಯಲ್ಲಿ ವಿಶಿಷ್ಟ ಜಾತಿಯ ಮೇಲಿನ ಮತ್ಸರಬುದ್ಧಿಯಿಂದ, ವಿಶಿಷ್ಟ ಪ್ರಮುಖರ ದಾಕ್ಷಿಣ್ಯದಿಂದ ಅರ್ಜಿಗಳು ತಿರಸ್ಕರಿಸಲ್ಪಟ್ಟಿರುವವಾಗಿ ಮಿಥ್ಯಾರೋಪ ಬರುವ ಭೀತಿಯುಂಟು ಇಂಥ ಭಾವನೆಗಳು ಸಾಮಾಜಿಕ ಐಕ್ಯಮತ್ಯಕ್ಕೆ, ರಾಷ್ಟ್ರೀಯ ಸಭೆಯು ಕೈಕೊಂಡ ಲೋಕಕಾರ್ಯ ಸಾಧನೆಗೆ ಘಾತಕವಿರುವವೆಂದು ಯಾರೂ ಒಪ್ಪಬಹುದಷ್ಟೇ!

ಬನ್ನಿರಿ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರ ಮಾರ್ಗಶೀರ್ಷ ಶು ೧೪ರಿ, ಸೋಮವಾರ

ಋಣವಿಮೋಚನ ಕಾಯಿದೆಯ ಸ್ಥೂಲ ಸ್ವರೂಪ.

ಸರಕಾರವು ಏರ್ಪಡಿಸಿದ ಭೂಭದ್ರ ಬೇಂಕು, ಸಹಕಾರಿ ಸಂಘ, ತಗಾವಿ ಸಾಲ ಮೊದಲಾದ ಋಣವಿಮೋಚನೆಯ ಕ್ರಮಗಳು ನಿಷ್ಪ್ರಯೋಜಕವೆಂದು ನಿರ್ದೇಶಿಸಿ ಜರ್ಮನಿಯ Landschaften ಸಾಲ-ಪರಿಹಾರ ಬೇಂಕುಗಳ ಉದಾಹರಣೆಯನ್ನು ನಾವು ಉಲ್ಲೇಖಿಸಿದ್ದೇವಷ್ಟೇ! ನಮ್ಮಲ್ಲಿಯ ಪರಿಸ್ಥಿತಿಯ ಮಟ್ಟಿಗೆ ಸರಕಾರವು ಕೈಕೊಳ್ಳಬಹುದಾದ ಋಣ-ವಿಮೋಚನೆಯ ಯೋಜನೆಯನ್ನು ನಾವು ಇಂದಿಗೆ ಸೂಚಿಸಬಯಸುತ್ತೇವೆ ಸರಕಾರವು ಜರ್ಮನಿಯ ಸಾಲಪರಿಹಾರ ಬೇಂಕುಗಳನ್ನೇ ಮಾದರಿಯಾಗಿಟ್ಟುಕೊಳ್ಳಬಹುದು, ಇಲ್ಲವೆ ಫ್ರಾನ್ಸ, ಹೋಲಂಡ ಡೆನ್ಮಾರ್ಕ, ಇಟಾಲಿ, ಜಪಾನ ಮೊದಲಾದ ದೇಶಗಳೊಳಗಿನ ಸಾಲಪರಿಹಾರದ ಕ್ರಮವನ್ನೇ ಅನುಸರಿಸಬಹುದು, ಅಥವಾ ಎಲ್ಲ ದೇಶಗಳೊಳಗಿನ ಸಾಲ-ಪರಿಹಾರ-ಕ್ರಮಗಳನ್ನು ಅಭ್ಯಾಸಮಾಡಿ ನಮ್ಮಲ್ಲಿಯ ಸ್ಥಿತಿ-ಗತಿಗೆ ಉಚಿತವಾದ ಒಂದು ಯೋಜನೆಯನ್ನ ತಯಾರಿಸಬಹುದು. ಆ ಯೋಜನೆಯೊಳಗೆ ಒಳಗೊಂಡಿರಬೇಕಾದ ವಿಷಯಗಳ ಕುರಿತು ನಾವು ಇಂದಿನ ನಾಲ್ಕು ಮಾತು ಬರೆಯಲಿಚ್ಛಿಸಿದ್ದೇವೆ

ಸರಕಾರವು ಈ ಸಾಲಪರಿಹಾರ ಯೋಜನೆಯನ್ನು ವ್ಯಾಪಾರಿ ದೃಷ್ಟಿಯಿಂದ ಕಲ್ಪಿಸಲಾಗದು ಬುದ್ಧಿಪೂರ್ವಕವಾಗಿಯೇ ನಾವೀ ಮಾತನ್ನು ಮೊಟ್ಟಮೊದಲು ನಮೂದಿಸಬೇಕಾಗಿದೆ ಇಂಥ ಬೇಂಕಿಗೆ ತಗಲುವ ಖರ್ಚು, ಬೇಂಕಿನಿಂದ ಹುಟ್ಟುವ ಉತ್ಪನ್ನ, ಉತ್ಪನ್ನಕ್ಕಿಂತ ಕಡಿಮೆಯಾಗದಿದ್ದರೂ ಆಯ-ವ್ಯಯ ಸರಿಯಾಗಿರಬೇಕೆಂಬ ಧೋರಣ ಸಹ ಋಣ-ವಿಮೋಚನೆಯ ಸಂಕಲ್ಪದಲ್ಲಿ ಇಡಲಾಗದು. ಪೋಲೀಸ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ವೈದ್ಯ-ಇಲಾಖೆ, ಈಗಾಗ ಮದ್ಯನಿರೋಧದ ಇಲಾಖೆಗಳಂತೆಯೇ ಋಣ ವಿಮೋಚನ ಇಲಾಖೆಯಾದರೂ ಖರ್ಚಿನ ಇಲಾಖೆಯೆಂದೆಣಿಸಿ ಋಣವಿಮೋಚನ ಯೋಜನೆಯಲ್ಲಿ ಬರಬಹುದಾದ ಖರ್ಚಿನ ಅಂಶವನ್ನು ಸರಕಾರವು ಸಹಿಸಸಿದ್ಧವಿರಬೇಕು. ಶಿಬಂದಿಯ ಖರ್ಚನ್ನಂತು ಸರಕಾರವು ಸಂಪೂರ್ಣವಾಗಿ ಸಹಿಸಲೇಬೇಕು ಮೇಲಾಗಿ, ಹೊರ ಸಾಲಕ್ಕೆ ಬಡ್ಡಿಯ ಅಂಶ ಕೆಲಮಟ್ಟಿಗೆ ಮೈಮೇಲೆ ಬಂದರೂ ಅದನ್ನೂ ಸಹ ಸಹಿಸಲೊಪ್ಪಬೇಕು ಮುಖ್ಯ ಏಕೆ, ಸರ್ಕಾರದ ಲಕ್ಷವನ್ನು ಋಣವಿಮೋಚನೆಯ ಗಾಲಿಟ್ಟು ಸರಿ ರಕ್ಕಾದಗುವ ಲಾಭಾಲಾಭಗಳ ಪರಿವೆ ಹಿಡಿಯದ ಋಣವಿಮೋಚನೆಯ ಯೋಜನೆಯನ್ನು ತಯಾರಿಸಬೇಕು ನಮ್ಮ ಮುಂಬಯಿ ಸರಕಾರವು ನೂತನವಾಗಿ ಗ್ರಾಮೋದ್ಧಾರ ಇಲಾಖೆಯನ್ನು ನಿರ್ಮಿಸಬಯಸುತ್ತದೆಂಗಿಯೂ ಅದನ್ನ ಒಬ್ಬ ಕಮಿಶನರರ ಸ್ವಾಧೀನಪಡಿಸಿ ಗ್ರಾಮೋದ್ಧಾರಕ್ಕೆ ಸಂಬಂಧಪಟ್ಟ ಇಲಾಖೆಗಳನ್ನು ಈ ಕಮಿಶನರರ ಕಡೆಗೆ ಒಪ್ಪಿಸಿ ಗ್ರಾಮೋದ್ಧಾರವನ್ನು ಆಸಕ್ತಿಯಿಂದಲೂ ಉತ್ಸಾಹದಿಂದಲೂ ಪುರಸ್ಕರಿಸಬಯಸುತ್ತದ ಗಿರ್ಯ ಸದ್ಯಕ್ಕೆ ಪ್ರಕಟವಾಗಿದೆ ಋಣವಿಮೋಚನೆಯಾದರೂ ಗ್ರಾಮೋದ್ಧಾರದ ಒಂದು ಅಂಗವೇ ಸೈ! ಋಣವಿಮೋಚನೆಯ ಅಭಾವದಲ್ಲಿ ಗ್ರಾಮೋದ್ಧಾರವಾಗುವದು ಅಸಂಭವ, ದುರ್ಘಟ! ಮುಂಬಯಿ ಗವ್ಹರ್ನರರಾದ ನಾ|| ಸರ್ ರೋಜರ ಲುಮ್ಲೆಯವರು ಈ ಮಾತನ್ನು ಅಪ್ರತ್ಯಕ್ಷವಾಗಿ ರತ್ನಾಗಿರಿ ಜಿಲ್ಲಾ ಬೋರ್ಡಿನ ಮಾನಪತ್ರಕ್ಕೆ ಉತ್ತರ ಕೊಡುವಾಗ ಒಪ್ಪಿದ್ದರೆಂದು ನಮ್ಮ ಅಭಿಪ್ರಾಯ "ನೀವು ನಿಮ್ಮ ಬುದ್ಧಿ ಶಕ್ತಿಗಳ ಮಟ್ಟಿಗೆ, ಹೇರಳ ಕಷ್ಟಪಟ್ಟು ಭೂಮಿಯಿಂದ ಉತ್ಪನ್ನವನ್ನು ಪಡೆದಿದ್ದೀರಿ, ಬೆಳೆಯಾಗದ ಭೂಮಿಗಳನ್ನು ಆಕ್ರಮಿಸಿ ನೀವು ಬೆಳೆ ಬೆಳೆಕೊಂಡಿದ್ದೀರಿ, ಇನ್ನು ಕಷ್ಟ ಮಾಡ ಮದುಳಿಯಲಿಲ್ಲ (ಆದರೂ ಚರಿತಾರ್ಥ ಸಾಗದ), ನೀವು ನಿಮ್ಮ ಮಕ್ಕಳನ್ನು ಮುಂಬಯಿ-ಆಫ್ರಿಕೆ ಮೊದಲಾದ ಕಡೆಗಳಲ್ಲಿ ಜೀವನಕ್ಕಾಗಿ ಕಳಿಸಿದ್ದೀರಿ! (You h[illegible] extricted the utmost within [illegible]r own limits by extending [illegible]ltivation to seemingly uncultivable land, and when this process could go no further, you have sent you sons to Bombay, Africa and elsewhere to seek a livelihood '

ನಾ|| ಗವ್ಹರ್ನರರು ಬೇಸಾಯಗಾರರ ಪರವಾಗಿ ಈ ಪ್ರಕಾರ ಸಾಕ್ಷಿ ಕೊಡುತ್ತಿರುವಾಗ, ಬೇಸಾಯಗಾರರು ಕಷ್ಟಗಾರರೆಂದು ಯಾರೂ ಹೇಳಲಾರರು ಬೇಸಾಯಗಾರರಿಗಾಗಲಿ, ಯಾರಿಗೇ ಆಗಲಿ ದೇಶಾಂತರ ಮಾಡುವ ಪ್ರಸಂಗ ಸಹಜಸಾಧ್ಯ ಮಾತಲ್ಲ, ಕಠಿಣ ಪ್ರಸಂಗವದು! ಘೋರ, ಅಘೋರ ಆಪತ್ತದು!! ಸ್ವಗ್ರಾಮಗಳಲ್ಲಿ, ಸ್ವಜನರಲ್ಲಿ ವಾಸ ಮಾಡಿ ಪ್ರಪಂಚ ನಡಿಸುವ ಪ್ರೀತಿ ಮಾನವ ಪ್ರಾಣಿಗೆ ಹೆಚ್ಚು! ಆ ಭಾವನೆಗಾಗಿ ಮಾನವನು ಪರಮಾವಧಿಯ ಪ್ರಯತ್ನವನ್ನು ಸಂತೋಷದಿಂದ ನಡಿಸಲಿಕ್ಕೆ ಸಿದ್ಧನಾಗುತ್ತಾನೆ ಹೀಗೂ ಮಾಡಿದರೂ ಹೊಟ್ಟೆ, ಗೇಣುದ್ದ ಹೊಟ್ಟೆ ತುಂಬಲಾಗದ ಬಳಿಕ, ಆತನು ನಿರುಪಾಯವೆಂದು ಸ್ವಜನ ಸ್ವಗ್ರಾಮ ಸ್ವದೇಶವನ್ನು ಸಹ ತ್ಯಜಿಸಿ ಜೀವನಕ್ಕಾಗಿ ಅಲ್ಲಲ್ಲಿ ಎಲ್ಲೆಲ್ಲಿಯೂ ಸಂಚರಿಸುತ್ತಾನೆ ಈ ದುರವಸ್ಥೆಯನ್ನು ಹೋಗಲಾಡಿಸುವದು ಪ್ರಜಾರಕ್ಷಣೆಯ ಭಾರವನ್ನು ಹೊತ್ತುಕೊಂಡ ಸರಕಾರದ ಕರ್ತವ್ಯ ಗ್ರಾಮೋದ್ಧಾರ ಮಾಡಲೆಳಸುವ ಸರಕಾರವಂತು ಗ್ರಾಮದವರು ದೇಶಾಂತರ ಮಾಡದಂತೆ ಮುಂಜಾಗ್ರತೆ ಕೊಳ್ಳಬೇಕೆಂದು ನಾವಾಗಿ ಹೇಳುವದನವಶ್ಯಕ ಇದಕ್ಕಾಗಿ ಎಷ್ಟು ಖರ್ಚು ಬಂದರೂ ಅದನ್ನು ಸರಕಾರವು ಸಹಿಸುವದು ರಾಜಧರ್ಮವಿದೆ ಅದಕ್ಕಾಗಿಯೇ ಗ್ರಾಮೋದ್ಧಾರದ ಅಂಗವೆಂದು ಋಣವಿಮೋಚನೆಯ ಸಮಸ್ಯೆಯನ್ನು ಸರಕಾರವು ಪರ್ಯಾಲೋಚಿಸಬೇಕಾಗಿ ನಾವು ಒತ್ತಿ ಹೇಳುತ್ತೇವೆ

ಬೇಸಾಯದ ಉತ್ಪತ್ತಿ ಬೇಸಾಯಗಾರರ ಸಂಸಾರಕ್ಕೆ ಸಾಲದಿರುವಾಗ ಋಣವಿಮೋಚನೆಯ ಯಾವತ್ತೂ ಖರ್ಚನ್ನು ಬೇಸಾಯಗಾರರಿಂದ ಪಡೆಯಬಯಸುವದು ರಾಜಧರ್ಮವಲ್ಲ. ಬೇಸಾಯದ ಸುಧಾರಣೆ ಮಾಡಿ, ಬೇಸಾಯಗಾರರ ಪ್ರಾಪ್ತಿ ಬೆಳಸಿ, ಆ ಮೇಲೆ ಅವರಿಂದ ಋಣವಿಮೋಚನೆಯಾಗುವಂತೆ ಸರಕಾರವು ಉಪಾಯಯೋಜನೆ ಮಾಡುವದು ಹಿತ, ವ್ಯವಹಾರಿಕ ನಮ್ಮ ಬೇಸಾಯಗಾರರು ಕಷ್ಟಪಡಲು ಹಿಂಜರಿಯುವದಿಲ್ಲ ನಾ|| ಗವ್ಹರ್ನರರು ನುಡಿದಂತೆ, ಪರಮಾವಧಿಯ ಕಷ್ಟ ಸಹಿಸಲು ಅವರು ಯಾವಾಗಲೂ ಸಿದ್ಧರೇ ಕಷ್ಟಕ್ಕೆ ತಕ್ಕ ಪ್ರತಿಫಲ ಸಿಗುವಂತೆ ಅವರಿಗೆ ಸರಕಾರವು ಅನುಮ ಮಾಡಿಕೊಟ್ಟು, ಅವರ ಪ್ರಾಪ್ತಿಯನ್ನು ಬೆಳಸಿಕೊಟ್ಟು ಅವರಿಂದಲೇ ಋಣವಿಮೋಚನೆಯನ್ನು ಸಾಧಿಸಿಕೊಳ್ಳಬೇಕು, ಪ್ರಾಪ್ತಿಗ ತಕ್ಕದ್ದಾಗಿ ಸಾಲಪರಿಹಾರದ ಕಂತುಗಳನ್ನು ನಿರ್ಧರಿಸಬೇಕು ಬೇಸಾಯದಿಂದ ಶೇಕಡಾ ಇಕ್ಕ ಮಿಕ್ಕಿಲ ಜ ಉಳಿದೀತೆಂದು ನಮಗೇನು ಅನಿಸುವದಿಲ್ಲ ಈಗಿನ ಉತ್ಪತ್ತಿ-ದಾರಣೆಗಳ ವಿಚಾರ ಮಾಡಿದರೆ ಇದಕ್ಕೂ ಕೊಂಚ ಕಡಿಮೆಯೇ ಆದೀತು, ಹೊರತು ಹೆಚ್ಚಾಗಲಿಕ್ಕಿಲ್ಲವೆಂದು ನಮ್ಮ ಅಭಿಪ್ರಾಯ ಮಾರ್ಗಗಳ ಅನುಕೂಲತೆಗಳಿಲ್ಲದ ಹಳ್ಳಿಗಳಲ್ಲಂತು ಶೇಕಡಾ ೧ರಷ್ಟು ಸಹ ಪ್ರತಿಫಲ ದೊರೆಯುವದು ದುರಾಸಾಪ್ಪ ಮಾತು ಸರಕಾರವು ಬೇಸಾಯದ ಪರಿಯಿಂದ ಚಾಕರಿ ಮಾಡಬಹುದು ಇಂಥ ಪ್ರಸಕ್ತಿಯಲ್ಲಿ ಸಾಲಗಾರ-ಬೇಸಾಯಗಾರರಿಂದ ಶೇಕಡಾ ಇಕ್ಕೆ ಮಿಕ್ಕೆ ಬಡ್ಡಿಯನ್ನ ಪಡೆಯಲೆಳಸಕೂಡದು ಸರಕಾರವು ಜರ್ಮನ್ ಬೇಂಕುಗಳ ಮೇರೆಗ ಸಾಲ ಪತ್ರಗಳನ್ನು ಹೊರಡಿಸಿದರೆ ಈಗ ಶೇಕಡಾ ೩ ॥ಯಂತೆ ಬೇಕಾದಷ್ಟು ಹಣ ದೊರೆದೀತು, ದೊರೆಯುವದು ಖಂಡಿತ ಯಾಕಂದರೆ ಸಾವಕಾರರು ಈಗಾಗ ಬೇಸಾಯಗಾರರಿಗಾಗಲಿ, ಯಾರಿಗೇ ಆಗಲಿ ಸಾಲ ಕೊಡಲು ಒಹು ಅಂಜುತ್ತಾರೆ ಬಡ್ಡಿ ದುಡಿದುಕೊಂಡು ಭಂಡವಲು ತಿರುಗಿ ಕೈಸೇರುವದೊತ್ತಟ್ಟಿಗಿರಲಿ, ಮೂಲಧನವಾದರೂ ಸುರಕ್ಷಿತ ಕೈಸೇರೀತೇ ಎಂಬ ಸಂದೇಹ ಅವರಿಗ! ಬೇಂಕುಗಳಲ್ಲಿ ದುಡ್ಡು ರಾಶಿಯಾಗಿ ಬಿದ್ದಿವೆ, ಜನರು ದುಡ್ಡಿಲ್ಲದೆ ಗೋಳಿಡುತ್ತಿರುವಾಗ, ಬೇಂಕುಗಳಿಗೆ ದುಡ್ಡು ಹೇಗೆ ವಿನಿಯೋಗಿಸಬೇಕೆಂಬ ಚಿಂತೆಯುಂಟಾಗಿದೆ! ಬಡ್ಡಿಯ ದರವನ್ನು ಬೇಂಕುಗಳು ಇಳಿ ಇಳಿಸಿದಾಗ್ಯೂ ಠೇವುದಾರರು ಠೇವುಗಳನ್ನು ಹಿಂತಿರುಗಿ ಕೊಳ್ಳಲು ಒಡಂಬಡುವದಿಲ್ಲ ಇದೊಂದು ವಿಚಿತ್ರ ಪರಿಸ್ಥಿತಿಯುಂಟಾಗಿದೆ ಈಗಾಗ ಸರಕಾರವು ಸಾಲ ಪಡೆಯಲೆಳಸಿದರೆ ಸರಕಾರಕ್ಕೆ ತೀರ ಕಡಿಮೆ ಬಡ್ಡಿ ದರದಿಂದ ಕೋಟ್ಯಾವಧಿ ಸಾಲ ಹುಟ್ಟುವಂತಿದೆ ಸದ್ಯಕ್ಕೆ ಸರಕಾರವು ೩೦ ವರ್ಷ ಅವಧಿಯ ಸಾಲ-ಪತ್ರಗಳನ್ನು ಹೊರಡಿಸಿ ಆ ರಕಮನ್ನ ಸಂಪೂರ್ಣವಾಗಿ ಗ್ರಾಮೋದ್ಧಾರ ಇಲಾಖೆಯವರ ಸ್ವಾಧೀನ ಕೊಟ್ಟು ಋಣವಿಮೋಚನವನ್ನು ಸಾಧಿಸಲೆಳಸಬೇಕು ಬೇಸಾಯಗಾರರಿಂದ ಮೊಟ್ಟಮೊದಲು ಮೊದಲಿನ ೨ ವರ್ಷಗಳಲ್ಲಿ ಶೇಕಡಾ ೩ ಸಲೆ ಬಡ್ಡಿಯನ್ನು

ಸರಕಾರವು ಪಡೆಯಬೇಕು, ಮತ್ತು ಆ ಮೇಲೆ ೨೦ ವರ್ಷಗಳಲ್ಲಿ ಅಸಲು-ಬಡ್ಡಿಯನ್ನು ಕಂತಿನಿಂದ ವಸೂಲ ಕೊಳ್ಳುವಂತೆ ಏರ್ಪಡಿಸಬೇಕು ಈ ಪ್ರಕಾರ ದೊರೆತ ಹಣವನ್ನು ಬೇಸಾಯಗಾರರು ಸಾವಕಾರರಿಗೆ ರೋಖ ವಸೂಲ ಕೊಡುವದರಿಂದ ಪತ್ತುಗೇಡಾದ ಬೇಸಾಯಗಾರರು ಪಾರಾಗುವರು ರೋಖ ಹಣ ಸಿಗುವ ಆದಗೆ ಸಾವಕಾರರು ಬಡ್ಡಿಯ ಮಾನವನ್ನು ಇಳಿಸಿ ಋಣವಿಮೋಚನೆಯ ಕಾರ್ಯದಲ್ಲಿ ನೆರವಾಗಬಹುದು ಮೇಲಾಗಿ ಸರಕಾರವು ಸ್ವಂತ ಬೊಕ್ಕಸದೊಳಗಿಂದ ಹಣ ಕೊಡುವ ಪ್ರಸಂಗವಿಲ್ಲ ಬೇಂಕುಗಳಲ್ಲಿ ಬಿದ್ದುಕೊಂಡ ಸಾವಕಾರರ ಹಣವನ್ನು ಹಿಂತಿರುಗಿ ಸಾವಕಾರರಿಗೇ ಸಲ್ಲಿಸುವದಿದ ಮಧ್ಯಸ್ಥಿಕೆಯನ್ನೊಂದು ಸರಕಾರವು ಕೈಕೊಂಡಂತಾಯಿತು

ಋಣವಿಮೋಚನೆಯ ಯೋಜನೆಯ ಮುಖ್ಯ ಧೋರಣವನ್ನು ಮಾತ್ರ ನಾವು ಇಂದಿಗೆ ನಮೂದಿಸಿದ್ದೇವೆ ಈಗಿನ ಸರಕಾರಿ ಧೋರಣಕ್ಕೂ ನಾವು ಇಂದು ವಿವರಿಸಿದ ಧೋರಣಕ್ಕೂ ತೀರ ವ್ಯತ್ಯಾಸವುಂಟೆಂದು ಯಾರಿಗೂ ತಿಳಿಯುವಂತಿದೆ ಪರಸ್ಪರ ಸಹಕಾರಿ ಸಂಘದಿಂದ ಕೊಡುವ ಸಾಲವಾಗಲಿ ತಗಾವಿ ಸಾಲವಾಗಲಿ ಸರಕಾರವು ವ್ಯಾಪಾರಿ ದೃಷ್ಟಿಯಿಂದ ಬೇಸಾಯಗಾರರಿಗೆ ಕೊಡುವ ಕ್ರಮವು ಬಿದ್ದಿದೆ ಬೇಸಾಯಗಾರರ ಸ್ಥಿತಿ ಹೇಗೇ ಇರಲಿ, ಆ ವಿಚಾರವನ್ನು ಸರಕಾರವು ಪರ್ಯಾಲೋಚಿಸುವದಿಲ್ಲ. ಸಾಲ ಹಿಂತಿರುಗಿ ಸುರಕ್ಷಿತ ಸಿಗುವ ದೃಷ್ಟಿಯನ್ನೇ ತಳೆಯುತ್ತದೆ ಆ ಆ ಜಾತಿಯೊಳಗೆ ಖರ್ಚಾಗುವ ಹಣ ಆ ಆ ಖಾತೆಯಿಂದಲೇ ಹುಟ್ಟಬೇಕೆಂದು ಸರಕಾರವು ನಿಗ್ರಹ ಹಿಡಿದು ಅದಕ್ಕಾಗಿ ಯಾವತ್ತೂ ಜಾಗ್ರತೆ ಕೊಳ್ಳುತ್ತದೆ ಈ ಧೋರಣದ ಮೂಲಕವಾಗಿಯೇ ಈ ಯೋಜನೆಗಳು ಸಾರ್ಥಕವಾಗಲಿಲ್ಲ ಪ್ರಜಾರಕ್ಷಣೆ ಮಾಡುವ ಸರಕಾರವೇ ವ್ಯಾಪಾರಿ ದೃಷ್ಟಿ ಹಿಡಿದು ಬೇಸಾಯಗಾರರೊಡನೆ ನಡೆಕೊಳ್ಳಹತ್ತಿದ ಬಳಿಕ, ಸಾವಕಾರರು ಧರ್ಮಾತ್ಮರಾಗದಿದ್ದದ್ದು ಆಶ್ಚರ್ಯವಲ್ಲ! ಈ ದೃಷ್ಟಿ ದೋಷಪೂರ್ಣವಿದೆ, ವಿಪರೀತವಿದೆ, ಅವ್ಯವಹಾರಿಕವಿದೆ, ತಾಯಿ-ತಂದೆಗಳು ಮಕ್ಕಳ ಜೋಪಾನ ಮಾಡುವಾಗ ಲಾಭ-ಪ್ರತಿಫಲ-ಪ್ರಯೋಜನಗಳನ್ನು ವಿಚಾರಿಸುವದುಂಟೇ! ಸಮರ್ಥ ಮಕ್ಕಳಿಗಿಂತ ಅಸಮರ್ಥ, ಅಸಹಾಯ, ಊನ ಮಕ್ಕಳ ಮೇಲೆಯೇ ತಾಯಿ-ತಂದೆಗಳು ಹೆಚ್ಚಿನ ಅಕ್ಕರತೆ ಮಾಡುವದನ್ನೂ ಅವರ ಸುಖಕ್ಕಾಗಿ ಹೆಣಗಾಡುವದನ್ನೂ ನಾವು ನೋಡುತ್ತೇವೆ ಮಕ್ಕಳ ರಕ್ಷಣೆಯೇ ಅವರ ಧ್ಯೇಯ ಸರಕಾರವಾದರೂ ಅದೇ ದೃಷ್ಟಿ ಹಿಡಿದು ಬೇಸಾಯಗಾರರ ಉದ್ಧಾರ ಮಾರ್ಗವನ್ನು ಕಲ್ಪಿಸಿ ಪುರಸ್ಕರಿಸಬೇಕೆಂದು ನಾವು ಅಂತಃಕರಣಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇವೆ ಋಣವಿಮೋಚನ ಸಮಸ್ಯೆಯ ಮುಖ್ಯ ಮರ್ಮವೇ ಇದು

ಏನೇನೋ ಆಗಲಿಕ್ಕಿದೆ!

[ನಿರೀಕ್ಷಕನು ಬರೆದುದು]

ಏನೇನೋ ಆಗಲಿಕ್ಕಿದೆ! ಏನಾಗಲಿಕ್ಕಿದೆಯೆಂದು ನನಗೆ ಕೇಳಬಾರದು! ಯಾಕಂದರೆ ಯಾವುದರದೇ ಪತ್ತೆಯೇ ಹತ್ತಲೊಲ್ಲದು !! ಝೆಕೊಸ್ಲೊವಾಕಿಯಾ ದೇಶಕ್ಕೊಪ್ಪಿದ ರುಥೆನಿಯಾ ಪ್ರಾಂತವನ್ನು ತಮಗೊಪ್ಪಿಸಬೇಕಾಗಿ ಪೋಲಂಡ ದೇಶದವರು ಝೆಕ್ ಸರಕಾರಕ್ಕೆ ಕೊನೆಯ ಅಪ್ಪಣೆ ಮಾಡಿದ್ದರಷ್ಟೇ! ಅವನ್ನು ತಾವು ನಿಗ್ರಹಿಸುವವರಾಗಿ ರುಮಾನಿಯಾ ಸರಕಾರವು ಮುಂದಾಗಿತ್ತಷ್ಟೇ! ಪೋಲಂಡ-ರುಮಾನಿಯಾ ಸರಕಾರಗಳ ಚಪಲ ಚೇಷ್ಟೆಗಳ ಮರ್ಮವೇನೆಂದು ನನಗೆ ಹೊಳೆಯಲಿಲ್ಲ ಝೆಕ್ ಜನಾಂಗವನ್ನು ರಕ್ಷಿಸಲು ಬ್ರಿಟಿಶ ಫ್ರೆಂಚರಂಥ ಅತಿರಥಿ-ಮಹಾರಥಿಗಳು ಅಸಮರ್ಥರಾದಾಗ ರುಮಾನಿಯಾದಂಥ ಚಿಕ್ಕ ಜನಾಂಗವು ಎದೆಗಟ್ಟಿ ಮಾಡಿ ಮುಂದಾಗುವ ಬಗೆಯೆಂತು? ಸುಡೆಟನ್ ಪ್ರದೇಶವನ್ನು ಹಿಟ್ಲರನಿಗೊಪ್ಪಿಸಿ ಉಳಿದ ಜನಾಂಗವನ್ನು ರಕ್ಷಿಸುವ ಹೊಣೆಯನ್ನು ಹಿಟ್ಲರನ ಮನಃಪೂರ್ತಿಕೆಯಿಂದ ಬ್ರಿಟಿಶ-ಫ್ರೆಂಚರು ಹೊತ್ತುಕೊಂಡಾಗ, ಪೋಲಂಡದಂಥ ಚಿಕ್ಕ ಜನಾಂಗವು ಪ್ರತಿಭಟಿಸುವ ಬಗೆ ಹೇಗೆ? ಆದರೆ, 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಲಂಡನಿನ ಸ್ವಂತ ಸುದ್ದಿಗಾರರು ಒಳಮರ್ಮವನ್ನು ಹೊರಗೆಡವಿದ್ದಾರೆ ಬರ್ಲಿನ್, ಪ್ರೇಗ, ವ್ಹಿಯೆನ್ನಾ ನಗರಗಳೊಳಗಿನ ಉಗಿಬಂಡಿಗಳಿಗೆ ಆರಾಮಿಗೆ ಅವಕಾಶವಿಲ್ಲ, ಹಗಲಿರುಳು ಎಡಬಿಡದೆ ಜರ್ಮನ್ ಸೈನ್ಯ-ಪಥಕಗಳನ್ನು ತುಂಬಿಕೊಂಡು ಅವು ವಾಯುವೇಗದಿಂದ ಓಡುತ್ತಿವೆ! ರುಮಾನಿಯಾ ಪಕ್ಷಪಾತಿಯಾಗಿ ಪೋಲಂಡದವರಿಗಿದಿರಾಗಲು ಜರ್ಮನ್ ಸೈನಿಕರೇ ಮುಂದಾಗುವ ಸಿದ್ಧತೆ! ತೋರಗೊಡಿಕೆಗೆ ಝೆಕ್ ಜನಾಂಗದ ರಕ್ಷಣೆ, ಪ್ರತ್ಯಕ್ಷ ಝೆಕ್ ಜನಾಂಗವನ್ನು ಪಾದಾಕ್ರಾಂತ ಮಾಡುವದಕ್ಕಾಗಿ ಹಿಟ್ಲರನು ಹೊಂಚುಹಾಕಿದ್ದಾನೆ! ಪೋಲಂಡದ ದಾಳಿಯನ್ನು ತಪ್ಪಿಸುವ ನೆವ ಮಾಡಿ ಒಮ್ಮೆಲೇ ಪ್ರೇಗ ಪಟ್ಟಣವನ್ನು ನುಗ್ಗಿ ಇಡೀ ಝೆಕ್ ಜನಾಂಗವನ್ನು ಆಕ್ರಮಿಸುವ ಮಹಾ ದೊಡ್ಡ ವ್ಯೂಹವನ್ನೇ ಆತ ರಚಿಸಿಟ್ಟಿದ್ದಾನೆ! ಇಷ್ಟರಿಂದಲೇ ಆತನ ಸಮಾಧಾನವಿಲ್ಲ ಇದೇನೋ ಮುಂದಿನ ಪ್ರಚಂಡ ವ್ಯೂಹದ ಪೂರ್ವ ತಯಾರಿ! ಯುಕ್ರೇನಿಯಾ ಪ್ರದೇಶವನ್ನು ಕೈವಶ ಮಾಡಿಕೊಳ್ಳುವದಕ್ಕಾಗಿಯೇ ಹಿಟ್ಲರನು ಕಾರಸ್ಥಾನ ನಡಿಸುತ್ತಿದ್ದಾನೆ ಯುಕ್ರೇನಿಯಾ ಪ್ರದೇಶ ಪೋಲಂಡದಲ್ಲಿಷ್ಟು, ರುಶ್ಯ ದೇಶದಲ್ಲಿಷ್ಟು ಹಂಚಿಹೋಗಿದೆ ಅದರಿಂದ ಪೋಲಂಡ ರುಶ್ಯ ಸರಕಾರಗಳು ಹಿಟ್ಲರನಿಗೆ ಝೆಕ್ ಜನಾಂಗದ ಮೇಲೆ ಪಾರುಪತ್ಯ ಮಾಡಗೊಡದಂತೆಯೂ ಆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವಂತೆ ಪ್ರಯತ್ನ ಮಾಡುತ್ತಿವೆ ಪೋಲಂಡ ರುಶ್ಯ ದೇಶಗಳೊಳಗೆ ಸಖ್ಯಕ್ಕೆ ತಹನಾಮೆಯಾಗುವದಿತ್ತು ರುಶ್ಯ ದೇಶದ ವಿದೇಶ ಪ್ರಧಾನರಾದ ಲಿಟ್ವಿನೊಫ್‌ರವರು, ಪೋಲಂಡದ ರಾಜಧಾನಿಯಾದ ವಾರ್ಸಾಕ್ಕೆ ತಮ್ಮ ನ್ಯಾಯಭಾರಿಗಳಾಗಿ ಪೊಟೆಂಕಿನ್‌ರವರಿಗೆ ಸದ್ಯಕ್ಕೇ ಕಳುಹುವವರಿದ್ದಾರೆ ಈ ಘಟನೆ ನೋಡಿ ಬ್ರಿಟಿಶ ಫ್ರೆಂಚರು ದಿಗಿಲು ಬಿದ್ದಿದ್ದಾರೆ ಮಧ್ಯ ಯುರೋಪ ಖಂಡದಲ್ಲಿ ಹಿಟ್ಲರನು ಸಾರ್ವಭೌಮನಾದರೆ ತಮಗೆ ಸಂಕಟ ಒಂತೆಂದು ಬ್ರಿಟಿಶರಿಗೆ ಚಿಂತೆ! ಹಿಟ್ಲರನು ಬ್ರಿಟಿಶರ ಮೇಲೆ ಒಳ್ಳೇ ಕಣ್ಣಿಟ್ಟಿದ್ದಾನೆ! ಜರ್ಮನಿಯ 'ಕೇಡ ಬ್ಲೆಟ್' 'ಝಿಟುಂಗ' 'ಬೊರೆಕ್ಸರ' ಪತ್ರಿಕೆಗಳನ್ನೋದಿದರೆ ಬ್ರಿಟಿಶರು ಪರೋಪದೇಶ ಮಾಡುವವರೆಂದೂ, ಪ್ರಸಂಗ ಬಂದಾಗ ತಮಗಿಂತಲೂ ಮಿಗಿಲಾಗಿ ಅನಾಚಾರ-ದುರಾಚಾರ-ಅತ್ಯಾಚಾರಗಳನ್ನಾಚರಿಸಲು ಹಿಂಜರಿಯುವವರಲ್ಲೆಂತಲೂ ಜರ್ಮನಿಯೊಳಗೆ ಪ್ರಚಾರ ನಡೆದಿದೆಂದು ತಿಳಿಯುವಂತಿದೆ ಪಾಲಿಸ್ತಾನದೊಳಗೆ ಅರಬರನ್ನು ತರತರದಿಂದ ದಣಿಸುತ್ತಾರೆಂತಲೂ ನಿರಪರಾಧಿ ನಾಗರಿಕರಿಗೆ ಉಪವಾಸ ಹಾಕಿ ಪೀಡಿಸುತ್ತಾರೆಂತಲೂ ಇದೊಂದು ಸುಧಾರಣೆಯ ಮೇಲಿನ ಕಲಂಕವೆಂದೂ ಜರ್ಮನ್ ಪತ್ರಿಕೆಗಳು ನೇರವಾಗಿ ಸಾಮ್ರಾಜ್ಯವಾದಿಗಳ ಮೇಲೆ ಆರೋಪ ಹೂಡುತ್ತಿವೆ 'ಇದೆಲ್ಲ ಸಟೆ! ಅರಬರಿಗೆ ಮೋಟಾರುಗಳಿಂದ ಸೈನ್ಯ ಇಲಾಖೆಯವರು ಆಹಾರ ಸಾಮುಗ್ರಿಗಳನ್ನು ಪೂರೈಸುತ್ತಾರೆ, ಕೆಲ ಹಳ್ಳಿಗಳಲ್ಲಿ ಆಹಾರ-ಸಾಮಗ್ರಿ ಮುಟ್ಟುವದಿಲ್ಲ, ಅದಕ್ಕೆ ಬ್ರಿಟಿಶ ಸೈನ್ಯ ಇಲಾಖೆಯವರು ಹೊಣೆಗಾರರಲ್ಲ, ಜನರು ಅಸಹಕಾರ ಮಾಡುವದರಿಂದ ಡ್ರೈವ್ಹರರು ಆ ಕಡೆ ಮೋಟಾರು ಒಯ್ಯಲು ಧೈರ್ಯಪಡುವದಿಲ್ಲ" ಹೀಗೆ ಲಂಡನಿನೊಳಗಿನ ವಸಾಹತು-ಇಲಾಖೆಯವರು ಪ್ರಕಟಿಸಿ ಬ್ರಿಟಿಶರು ಸಜ್ಜನರೆಂದೂ ಹಿಟ್ಲರನು ರಾಕ್ಷಸನೆಂದೂ ತಮ್ಮ ರಾಜನೀತಿಗೂ ಹಿಟ್ಲರನ ರಾಜನೀತಿಗೂ ಅಭ್ಯಂತರವುಂಟೆಂದೂ ಪ್ರತಿಪಾದಿಸುತ್ತಾರೆ ಹಿಂದವಾಸಿಯರಿಗೆ ಅಸಹಕಾರದ ಮನ್ವಂತರದಲ್ಲಿ ಸಾಮ್ರಾಜ್ಯಕರ್ತರು ಕೈಕೊಂಡ ನಡಾವಳಿ ಗೊತ್ತುಂಟು. ಪಾಲಿಸ್ತಾನದೊಳಗಿನ ಅಸಹಕಾರದ ಹಳ್ಳಿಗಳಲ್ಲಿ ಆಹಾರ ಸಾಮುಗ್ರಿಯ ಪೂರೈಕೆಯಾಗುವದಿಲ್ಲವೆಂದು ವಸಾಹತು-ಇಲಾಖೆಯವರು ಒಪ್ಪುತ್ತಿರುವಾಗ, ಜರ್ಮನರ ಆರೋಪ ಯಥಾರ್ಥವೆಂದು ಯಾರಿಗೂ ತಿಳಿಯುವ ಮಾತು ಸಾಮ್ರಾಜ್ಯವಾದಿಗಳ ನಡಾವಳಿ ಎಲ್ಲೆಲ್ಲಿಯೂ ಒಂದೇ ಅವರ ಸ್ವಭಾವವೇ ಹಾಗೆ. ಒಬ್ಬರಿಗೆ ಯಹೂದಿಯರ ಅಭಿಮಾನ, ಒಬ್ಬರಿಗೆ ಅರಬರ ಅಭಿಮಾನ! ಅದೂ ಸಹ ಯಹೂದಿ-ಅರಬರ ಕಲ್ಯಾಣಕ್ಕಲ್ಲ, ಅಭ್ಯುದಯಕ್ಕಲ್ಲ, ಉದ್ಧಾರಕ್ಕಲ್ಲ, ತಮ್ಮ ತಮ್ಮ ಸಾಮ್ರಾಜ್ಯ ಕಾರಸ್ಥಾನದ ಸಾರ್ಥಕತೆಗಾಗಿ!! ಸಾಮ್ರಾಜ್ಯ ಸುರಕ್ಷಿತತೆಗಾಗಿ, ಸಾಮ್ರಾಜ್ಯ ವಿಸ್ತಾರಕ್ಕಾಗಿ! ಇಬ್ಬರೂ ಒಂದೇ ಧೋರಣದಿಂದ ರಾಜಕಾರಣಸೂತ್ರಗಳನ್ನು ನಡಿಸುವದರಿಂದ, ಒಬ್ಬರಿಗೆ ಮತ್ತೊಬ್ಬರು ಆತಂಕಪಡಿಸುವದರಿಂದ ತಮ್ಮ ತಮ್ಮ ಸೌಜನ್ಯವನ್ನು ಲೋಕಲಜ್ಜೆಗಾಗಿ ಪ್ರದರ್ಶಿಸುವ ಪ್ರಸ್ತಾಪ ಬಿದ್ದಿದೆ ಆ ಗೊಡವೆ ನನಗೇಕೆ? ಉಭಯರೂ ಸಾಮ್ರಾಜ್ಯಕಾಂಕ್ಷಿಗಳು, ಉಭಯರೊಳಗೂ ವಿತುಷ್ಟ ಬೆಳೆದು ಅದು ವಿಕೋಪಕ್ಕೆ ಮುಟ್ಟಿ ಪ್ರಕೋಪಗೊಳ್ಳಬಹುದೆಂದಿಷ್ಟೇ ನಾನು ಹೇಳಬಲ್ಲೆ. ಇದೀಗ ರಶ್ಯರು ಪ್ರತ್ಯಕ್ಷವಾಗಿ ಹಿಟ್ಲರನಿಗಿದಿರಾಗಹೊರಟಿದ್ದಾರೆ ಪೊಟೆಂಕಿನ್‌ರವರು ಈಗ ತುರ್ಕಸ್ಥಾನದ ಅಂಗೋರಾದಲ್ಲಿದ್ದಾರೆ ಮುಸ್ತಾಫಾ ಕೆಮಾಲ ಪಾಶಾ ಅತಾತುರ್ಕರವರ ಅಂತ್ಯಸಂಸ್ಕಾರದ ಸಮಾರಂಭಕ್ಕೆ ಹಾಜರಾಗುವ ನೆವದಿಂದ ಈ ಮಹನೀಯರು ಆ ಕಡೆ ಹೋಗಿದ್ದರು. ಅಂತ್ಯಸಂಸ್ಕಾರದ ವಿಧಿ ಮುಗಿದ ಬಳಿಕ, ಪಾಶಾರವರ ಉತ್ತರಾಧಿಕಾರಿಯಾಗಿ ತುರ್ಕಸ್ಥಾನದ ಇಸ್ಮತ್ ಇನುನುರವರೊಡನೆ ಪೊಟೆಂಕಿನ್‌ರವರು ಗೌಪ್ಯದಿಂದ ಸಂಭಾಷಣೆ ನಡಿಸಿದರಂತೆ! ರುಮಾನಿಯಾ ದೇಶವನ್ನು ಹಿಟ್ಲರನ ಬಲೆ

(೭ನೇ ಪಾನದ ಮೇಲೆ ಮುಂದುವರಿಸಿದೆ)

ಇಡೀ ಜಿಲ್ಲೆ ನಿರ್ಮಾದಕವಾಗಿ ಸಾರಲು ನಾ॥ ಖೇರರಿಗೆ ಬರಮಾಡಿಕೊಳ್ಳಿರಿ!

ಆತ್ಮಶುದ್ಧಿಯೇ ಸ್ವರಾಜ್ಯ ಪ್ರಾಪ್ತಿಯ ಕೀಲಿಕೈ.

ಮದ್ಯನಿರೋಧನವು ಆತ್ಮಶುದ್ಧಿಯ ತಳಹದಿ.

ಪ್ರಾಂತಾಧ್ಯಕ್ಷ ಗಂಗಾಧರರಾಯರ ಬೋಧಾಮೃತ.

ಈ ಹಿಂದೆ ಪ್ರಕಟವಾದಂತೆ, ಕರ್ನಾಟಕ ಪ್ರಾಂ॥ ಕಾಂ॥ ಕಮಿಟಿಯ ಅಧ್ಯಕ್ಷ ದೇ॥ ಭ॥ ಗಂಗಾಧರರಾವ ದೇಶಪಾಂಡೇಯವರು ಕಳೆದ ಬುಧವಾರ ಸಾಯಂಕಾಲ ೭ ಘಂಟೆಗೆ ಈ ಊರಿಗೆ ಬಂದು ತಲ್ಪಿದರು ಅವರ ಜೊತೆಗೆ ಬೆಳಗಾಂವಿಯ ಸುಪ್ರಸಿದ್ಧ ಕಾರ್ಯಕರ್ತರಾದ ಡಾ॥ ಪುಂಡಲೀಕಜಿ, ಕಾರವಾರ ಜಿಲ್ಲಾ ಮದ್ಯ-ಮಾದಕ ಪ್ರತಿಬಂಧಕ ಸಮಿತಿಯ ಕಾರ್ಯದರ್ಶಿಗಳಾದ ರಾ॥ ತಿ ಶ್ರೀ ನಾಯಕ ಮೊದಲಾದವರೂ ಬಂದಿದ್ದರು ತಾಲೂಕ ಕಾಂ॥ ಕಮಿಟಿಯ ಅಧ್ಯಕ್ಷ ರಾ॥ ಲಕ್ಷ್ಮಣ ಕಾಮತರೂ ಬೇರೆ ಕಾಂಗ್ರೆಸ ಕಾರ್ಯಕರ್ತರೂ ಅಭ್ಯಾಗತ ಮಹನೀಯರನ್ನು ಮೋಟಾರ ನಿಲ್ದಾಣದ ಬಳಿ ಎದುರುಗೊಂಡು, ಅವರಿಗೆ ಬೇಂಡುವಾದ್ಯದೊಡನೆ ಮೆರವಣಿಗೆಯಿಂದ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಮುಂದಿನ ಪಟಾಂಗಣಕ್ಕೆ ಕರೆತಂದರು ಅಲ್ಲಿ ಸಾರ್ವಜನಿಕ ಸಭೆಯ ವ್ಯವಸ್ಥೆ ಮಾಡಿತ್ತು ಸಭೆಗೆ ೫-೬ ನೂರು ಜನರು ಕೂಡಿದ್ದರು ೫೦-೬೦ ಹೆಂಗಸರೂ ಬಂದಿದ್ದರು ಅಭ್ಯಾಗತರು ಬಂದು ಮುಟ್ಟುತ್ತಲೇ ಸಭೆಗೆ ಪ್ರಾರಂಭವಾಯಿತು ಪ್ರಾಂತಾಧ್ಯಕ್ಷರೇ ಸಭಾಧ್ಯಕ್ಷಸ್ಥಾನವನ್ನು ವಹಿಸಿದರು ಮೊಟ್ಟಮೊದಲು ರಾ॥ ತಿಮ್ಮಪ್ಪ ನಾಯಕರು ಎದ್ದು ಸಭೆಗೆ ಡಾ॥ ಪುಂಡಲೀಕಜಿಯವರ ಪರಿಚಯ ಮಾಡಿಕೊಡುತ್ತ ಹೇಳಿದ್ದೇನಂದರೆ, ಡಾ॥ ಪುಂಡಲೀಕಜಿಯವರು ಬೆಳಗಾವಿಯ ಪ್ರಸಿದ್ಧ ಕಾಂಗ್ರೆಸ ಕಾರ್ಯಕರ್ತರಿರುತ್ತಾರೆ ಬಸ್ತ ಪುಂಡಲೀಕರು ಪಂಢರೀನಾಥ ಶ್ರೀ ವಿಠೋಬನ ಸೇವೆ ಮಾಡಿದಂತೆ ಇವರು ದೇಶಭಕ್ತ ಗಂಗಾಧರರಾಯರ ಸೇವೆ ಮಾಡುವವರಿದ್ದಾರೆ ಗಂಗಾಧರರಾಯರ ಏಕನಿಷ್ಠ ಶಿಷ್ಯರಿದ್ದಾರೆ ಗಂಗಾಧರರಾಯರು ಅಲ್ಲಲ್ಲಿ ವ್ಯಾಖ್ಯಾನಗಳನ್ನು ಕೊಟ್ಟದ್ದರಿಂದಲೂ ಪ್ರವಾಸದ ಕಷ್ಟದಿಂದಲೂ ದಣಿದಿದ್ದಾರೆ ಕಾರಣ ತಾವು ಈಗ ಡಾ॥ ಪುಂಡಲೀಕಜಿಯವರ ಬಾಯಿಯಿಂದ ನಾಲ್ಕು ಉಪದೇಶದ ಮಾತುಗಳನ್ನು ಕೇಳಿಕೊಳ್ಳಬೇಕೆಂದು ಬಿನ್ನೈಸುತ್ತೇನೆ ಅದರಂತೆ ಡಾ॥ ಪುಂಡಲೀಕಜಿಯವರು ಎದ್ದು ಸರಳ ಕನ್ನಡ ಭಾಷೆಯಲ್ಲಿ ಮದ್ಯನಿರೋಧನ ಕಾರ್ಯದ ಇತಿಹಾಸವನ್ನೂ ಮಹಾತ್ವವನ್ನೂ ತಿಳಿಯಾಗಿ ತಿಳಿಸಿ ಹೇಳಿದರು ಇನ್ನೂರು ವರ್ಷಗಳ ಹಿಂದೆ ಒಂದು ಹನಿ ಸರಾಯಿ ಸಿಗದ ಈ ನಮ್ಮ ದೇಶದಲ್ಲಿ ಈಗಿನ ರಾಜ್ಯಕರ್ತರ ರಾಜನೀತಿಯ ಮೂಲಕ ಹಳ್ಳಿ-ಹಳ್ಳಿಗಳಲ್ಲಿ, ಬೀದಿ ಬೀದಿಗಳಲ್ಲಿ ಹೇಗೆ ಸರಾಯಿ ಪ್ರಸಾರವಾಗಿದೆ, ಈ ಸರಾಯಿಯ ನಿರ್ಮೂಲನ ಮಾಡುವದು ಎಷ್ಟು ಅವಶ್ಯವಿದೆ, ಮೂರು ವರ್ಷಗಳಲ್ಲಿ ದೇಶವನ್ನು ನಿರ್ಮಾದಕ ಮಾಡಬೇಕೆಂಬ ಸಂಕಲ್ಪವನ್ನು ಮಹಾತ್ಮಾಜಿಯವರು ಘೋಷಿಸಿದ್ದಾರೆ, ಕಾಂಗ್ರೆಸ ಮಂತ್ರಿಮಂಡಳಗಳು ತಮ್ಮ ಪ್ರಾಂತಿಕ ಸರಕಾರಗಳ ಉತ್ಪನ್ನದ ಒಂದು ಅತಿ ದೊಡ್ಡ ಭಾಗ ಮುಳುಗಿದರೂ ಮುಳುಗಿ ಹೋಗಲಿ ಪ್ರಜೆಗಳಲ್ಲಿ ಹಬ್ಬಿಕೊಂಡಿರುವ ಸೆರೆ ಕುಡುಕತನದ ದುಶ್ಚಟವನ್ನು ನಿಲ್ಲಿಸಿಯೇ ಬಿಡುವೆವೆಂದು ಹೇಗೆ ಪ್ರಯತ್ನ ಮಾಡುತ್ತಿದ್ದಾರೆ, ಜನರು ಸರಕಾರದವರೊಡನೆ ಸಹಕಾರ ಮಾಡಿ ಈ ಮಹಾ ಕಾರ್ಯವನ್ನು ಯಶಸ್ವಿ ಮಾಡಲು ಸಹಾಯ ಮಾಡುವದು ಎಷ್ಟು ಅವಶ್ಯವಿದೆ ಕುಡುಕ ಬಾಂಧವರೊಡ ಬಂಧುತ್ವವನ್ನು ಬೆಳಿಸಿ, ಅವರ ಮನವೊಲಿಸಿ, ಅವರನ್ನು ಸುರಾಪಾನದ ದುಷ್ಟ ವ್ಯಸನದಿಂದ ಪರಾವರ್ತಿಸುವದು ಹೇಗೆ, ಇವೇ ಮೊದಲಾದ ವಿಷಯಗಳನ್ನು ಚೆನ್ನಾಗಿ ತಿಳಿಸಿ ಹೇಳಿದರು "ನಿಮ್ಮ ಕಾರವಾರ ಜಿಲ್ಲೆಯು ಉಪ್ಪಿನ ಸತ್ಯಾಗ್ರಹದಲ್ಲಿ ಮಾಡಿದ ಯಶಸ್ವೀ ಕಾರ್ಯವನ್ನು ಅನುಲಕ್ಷಿಸಿ, ಮದ್ಯನಿರೋಧನದ ಅಡಿಗಲ್ಲು ಇಡಲಿಕ್ಕೂ ಈ ಜಿಲ್ಲೆಯೇ ಯೋಗ್ಯವೆಂದು ಭಾವಿಸಿ, ಮುಂಬಯಿ ಸರಕಾರದ ಸಲಹೆಯಿಂದ ಕಾಂಗ್ರೆಸ ಸರಕಾರವು ಕರ್ನಾಟಕದಲ್ಲಿ ಈ ಜಿಲ್ಲೆಯನ್ನು ಆರಿಸಿತು ಈ ಕಾರ್ಯವನ್ನು ಯಶಸ್ವಿ ಮಾಡಿ ತೋರಿಸುವ ಭಾರವು ತಮಗೆ ಒಪ್ಪಿದೆ ನೀವು ತತ್ಪರತೆಯಿಂದಲೂ ವಿಶ್ವಾಸದಿಂದಲೂ ಕೆಲಸ ಮಾಡಿ, ಬರುವ ವರ್ಷದಲ್ಲಿ ಇಡೀ ಜಿಲ್ಲೆಯು ನಿರ್ಮಾದಕ ಸಾರಲ್ಪಡುವಂತಹ ಅನುಕೂಲ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಆದರಂತೆ ಬರುವ ವರ್ಷದ ಆಯವ್ಯಯಗಳ ಅಂದಾಜ ಪತ್ರಿಕೆಯಲ್ಲಿ ವ್ಯವಸ್ಥೆ ಮಾಡಲು ಸರಕಾರಕ್ಕೆ ಒತ್ತಾಯಪಡಿಸಬೇಕಾಗಿ ನಾನು ವಿನಂತಿ ಮಾಡುತ್ತೇನೆ" ಹೀಗೆ ಹೇಳಿ ಅವರು ತಮ್ಮ ಭಾಷಣ ಮುಗಿಸಿದರು

ಆ ಮೇಲೆ ಅಧ್ಯಕ್ಷ ಗಂಗಾಧರರಾಯರ ಭಾಷಣವಾಯಿತು ಅದರ ಸಂಕ್ಷಿಪ್ತ ಸಾರಾಂಶ ಇಂತಿದೆ - ನಾನು ಈಗ ನಿಮ್ಮಲ್ಲಿ ಮದ್ಯ-ಮಾದಕ ಪ್ರತಿಬಂಧದ ಕಾರ್ಯ ಹೇಗೆ ನಡೆದಿದೆ, ನಿಮ್ಮ ಅಡಚಣಗಳೇನಿವೆ, ಅವುಗಳನ್ನು ಪರಿಹರಿಸಲು ಏನು ಯೋಜನೆ ಮಾಡಬೇಕು ಎಂಬದನ್ನು ನಿರೀಕ್ಷಿಸಲು ಬಂದಿದ್ದೇನೆ ಮುಖ್ಯ ಪ್ರಧಾನರಾದ ನಾ॥ ಖೇರರವರು ಮುಂದಿನ ವಾರದಲ್ಲಿ ನಮ್ಮ ಪ್ರಾಂತಕ್ಕೆ ಬರುವವರಿದ್ದಾರೆಂದು ನೀವು ಬಲ್ಲಿರಿ ಆ ಕಾಲಕ್ಕೆ ಕುಮಟಾ ಅಂಕೋಲಾ ತಾಲೂಕುಗಳಲ್ಲಿ ನಡೆದ ಕಾರ್ಯವನ್ನು ಅವರಿಗೆ ಅರುಹಿ ಬರುವ ಏಪ್ರಿಲ್ ತಿಂಗಳಲ್ಲಿ ನಿಮ್ಮ ಜಿಲ್ಲೆಯೊಳಗೆ ಮದ್ಯನಿರೋಧನ ಜಾರಿಯಲ್ಲಿ ತರಲು ಅವರಿಗೆ ಬಿನ್ನವಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ ಎರಡೂ ತಾಲೂಕುಗಳಲ್ಲಿ ಕೆಲಸ ಯಶಸ್ವಿಯಾಗಿದೆ,ಮತ್ತು ಇಡೀ ಜಿಲ್ಲೆಯಲ್ಲಿ ಅದು ಯಶಸ್ವಿಯಾದೀತು ಎಂದು ಅವರಿಗೆ ಆಶ್ವಾಸನೆ ಕೊಡಲು ನನಗೆ ಧೈರ್ಯ ಬೇಕಾಗಿದೆ, ನನಗೆ ತಮ್ಮೆಲ್ಲರ ಬೆಂಬಲ ಬೇಕು, ಅದಕ್ಕಾಗಿಯೇ ನಾನು ತಮ್ಮಲ್ಲಿ ಬಂದಿದ್ದೇನೆ ಮದ್ಯನಿರೋಧನಕ್ಕಾಗಿ ಈ ಹಿಂದೆ ಸಹ ಅನೇಕ ಪ್ರಯತ್ನಗಳು ನಡೆದಿದ್ದವು ಅವುಗಳ ರೂಪವೇ ಬೇರೆ, ಈಗಿನ ಪ್ರಯತ್ನದ ರೂಪವೇ ಬೇರೆ ವಂಗಭಂಗವಾದ ಕಾಲಕ್ಕೆ ನಾವು ಬೆಳಗಾಂವಿಯಲ್ಲಿ ಮದ್ಯನಿರೋಧನ ಕಾರ್ಯ ಆರಂಭಿಸಿದ್ದೆವು ಎರಡೂ ಕೈಯಲ್ಲಿ ಎರಡು ಸರಾಯಿಯ ಬಾಟ್ಲಿಗಳನ್ನು ತಕ್ಕೊಂಡು ಹಿಂದೀ ಜನರಿಗೆ ಯಥೇಚ್ಛ ಸರಾಯಿ ಕುಡಿಯಿರಿ ಎಂದು ಹೇಳುತ್ತಿರುವಂತೆ ಕಾಣುವ ಕರ್ಝನ್ ದೊರೆಗಳ ಪ್ರತಿಮೆಯೊಂದನ್ನು ತಯಾರಿಸಿ ಊರಲ್ಲೆಲ್ಲ ಮೆರಿಸಿ ಊರ ಹೊರಗೆ ಒಯ್ದು ಅದನ್ನು ಸುಟ್ಟೆವು, ಕೆಲವು ಸರಾಯಿ ಅಂಗಡಿಗಳ ಮುಂದೆ ನಿಂತು ಸರ್ಪಗಾವಲು ಇಟ್ಟೆವು ಒಂದು ವರ್ಷ

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್‌ಕ್ಯೂರ್



ಲಿವ್ಹರ್ ಮತ್ತು ಯಕೃತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ – ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ತನಕ ನಮ್ಮ ಚಳವಳಿ ನಡೆಯಿತು. ಸರಾಯಿಯ ವ್ಯಾಪಾರದಿಂದ ಬ್ರಿಟಿಶರು ಹಣ ಸುಲಿಯುತ್ತಾರೆ, ಆ ವ್ಯಾಪಾರಕ್ಕೆ ಕಡೆಯಾಕಿ ಬ್ರಿಟಿಶರಿಗೆ ಹಾನಿ ಮಾಡಬೇಕು, ಇದೇ ಆಗಿನ ನಮ್ಮ ಉದ್ದೇಶವಿತ್ತು ಬ್ರಿಟಿಶರ ವ್ಯಾಪಾರ ಕುಗ್ಗಿಸಲಿಕ್ಕೆ ನಾವು ಸ್ವದೇಶಿ ಚಳವಳಿ ಹೂಡಿದೆವು, ಬಹಿಷ್ಕಾರವನ್ನು ಪುರಸ್ಕರಿಸಿದೆವು, ಬ್ರಿಟಿಶರಿಗೆ ಹಾನಿ ಮಾಡುವದೇ ನಮ್ಮ ಧ್ಯೇಯವಾಗಿತ್ತು, ಮಹಾತ್ಮರು ಹೇಳುವಂತೆ ಆತ್ಮಶುದ್ಧಿಯ ಮಾರ್ಗವಿದೆಂದು ನಾವು ಆಗ ಗ್ರಹಿಸಿದ್ದಿಲ್ಲ ಆಗ ನಾವು ರಾಜಸಪ್ರವೃತ್ತಿಯಿಂದ ಪ್ರವೃತ್ತರಾಗಿದ್ದೆವು ಕುಡುಕರಿಗೆ ಕುಡಿತವು ಯೋಗ್ಯವಲ್ಲ, ಹಾನಿಕಾರಕವದು, ಎಂದು ಪ್ರೇಮದಿಂದ ಅವರ ಮನವೊಲಿಸುವದರ ಬದಲು ನಾವು ಕುಡಿಯಲಿಕ್ಕೆ ಬರುವ ಜನರಿಗೆ ದೊಣ್ಣೆಯನ್ನು ತೋರಿಸಿ ಓಡಿಸುತ್ತಿದ್ದೆವು ನಮ್ಮ ದೊಣ್ಣೆ ನೋಡಿ ಅವರು ಓಡುತ್ತಿದ್ದರು! ಕುಡಿತ ಇದೊಂದು ಹಾಳು ವ್ಯಸನವಿರುತ್ತದೆಂದು ಭಾವಿಸಿ ಅವರು ಓಡುತ್ತಿರಲಿಲ್ಲ ಹೀಗಾದ್ದರಿಂದಲೇ ನಮ್ಮ ಚಳವಳಿ ಕೆಲಕಾಲದಲ್ಲಿ ತಣ್ಣಗಾಯಿತು ಮದ್ಯನಿರೋಧನ ಕಾರ್ಯಕರ್ತರೇ ಕೆಲವರು ಸರಾಯಿ-ವ್ಯಾಪಾರಿಗಳಿಂದ ಲಂಚ ತಕ್ಕೊಂಡು ಅವರಿಗೆ ಸಹಾಯಕರಾದರು! ಮಹಾತ್ಮಾಜಿಯವರ ಮಾರ್ಗವೇ ಬೇರೆ ಕೇವಲ ಸಾತ್ವಿಕ ವೃತ್ತಿಯಿಂದ, ಪ್ರೇಮದಿಂದ, ಕುಡುಕ ಬಂಧುಗಳ ಮನವೊಲಿಸಿ ಅವರನ್ನು ಕುಡುಕತನದಿಂದ ಪರಾವರ್ತಿಸಬೇಕೆಂದು ಅವರು ಹೇಳುತ್ತಾರೆ ಆತ್ಮಶುದ್ಧಿಯಾದೊಡನೆ ಸ್ವರಾಜ್ಯ ತಾನಾಗಿ ಬರುವದೆಂದು ಅವರು ನಂಬುತ್ತಾರೆ, ನಾವು ಪಾರತಂತ್ರ್ಯದಲ್ಲಿ ಕೊಳೆಯುತ್ತಿರಲಿಕ್ಕೆ ನಮ್ಮೊಳಗಿನ ದೋಷಗಳೇ ಕಾರಣವೆಂದು ಅವರ ಪ್ರತಿಪಾದನೆ ಆದ್ದರಿಂದ ಮದ್ಯಪಾನೋಚ್ಚಾಟನದ ಕಾರ್ಯಕ್ಕೆ ಅವರು ಕೈಹಾಕಿದ್ದಾರೆ ಅವರ ಈ ಯೋಜನೆಯನ್ನು ಕೈಗೂಡಿಸಿ ತರುವದು ನಮ್ಮೆಲ್ಲರ ಕರ್ತವ್ಯ ಮಹಾತ್ಮರಿಗೆ ಕರ್ನಾಟಕ ಪ್ರಾಂತದ ಬಗ್ಗೆ ಮಮತೆ ಬಹಳ ನಾವೂ ನಮ್ಮ ಪ್ರಾಂತವು ಗಾಂಧಿಪ್ರಾಂತವೆಂದು ಹೆಮ್ಮೆ ಪಡುತ್ತೇವೆ ಆದ್ದರಿಂದ ಮಹಾತ್ಮರ ಕಾರ್ಯವನ್ನು ಯಶಸ್ವಿ ಮಾಡುವದು ನಮ್ಮ ಕರ್ತವ್ಯ ನನಗೆ ಕಾರವಾರ ಜಿಲ್ಹೆಯ ಅಭಿಮಾನ ಹೆಚ್ಚು ಮಹಾತ್ಮರ ಕಾರ್ಯ ಯಶಸ್ವಿಯಾಗಬೇಕಾದರೆ ಈ ಜಿಲ್ಹೆಯಲ್ಲೇ ಆಗಬೇಕೆಂದು ನನ್ನ ವಿಶ್ವಾಸ ನನಗೆಷ್ಟು ಪ್ರೇಮ ಈ ಜಿಲ್ಹೆಯ ಮೇಲಿದೆ ಮದ್ಯಪಾನ ಪ್ರತಿಬಂಧದ ಕಾರ್ಯ ಅಯಶಸ್ವಿಯಾದರೆ ನೀವು ನಗಿಗೀಡಾಗುವಿರಿ ಅಮೇರಿಕೆಯವರು ಮದ್ಯಪಾನೋಚ್ಚಾಟನದ ಪ್ರಯತ್ನ ಮಾಡಿದ್ದರು ಅಮೇರಿಕೆಯು ಸ್ವತಂತ್ರ ಮತ್ತು ಪ್ರಬಲ ರಾಷ್ಟ್ರ ಅಲ್ಲಿ ಈ ಪ್ರಯತ್ನ ಯಶಸ್ವಿಯಾಗಲಿಲ್ಲ ಸತ್ತೆಯ ಬಲದಿಂದ ಮದ್ಯಪಾನೋಚ್ಚಾಟನ ಕಾರ್ಯ ಆಗುವಂತಿಲ್ಲ ಪ್ರತಿಬಂಧ ಇಲ್ಲವೆ ನಿಷೇಧ ಎಂದ ಕೂಡಲೇ ಕುತೂಹಲ ಹುಟ್ಟುಗುತ್ತದೆ ಇಲ್ಲೊಂದು "ಬರಬೇಡಿರಿ" ಎಂದು ನೀವು ಪಾಟಿ ಹಚ್ಚಿ ನೋಡಿರಿ ನೂರಾರು ಜನರು ಇದೇನೆಂದು ನೋಡಲು ಕುತೂಹಲಪಟ್ಟು ಒಳನುಗ್ಗುವರು ಆದ್ದರಿಂದ ಮನವೊಲಿಸಿ, ಮದ್ಯಪಾನದ ದುಷ್ಪರಿಣಾಮಗಳನ್ನು ತಿಳಿಸಿಯೇ ನಾವು ನಮ್ಮ ಬಂಧುಗಳ ಮದ್ಯಪಾನ ಪ್ರವೃತ್ತಿ ಬಿಡಿಸಬೇಕು ಅವರಿಗೆ ಉಪದೇಶ ಮಾಡಬೇಕು, ಕೈ ಜೋಡಿಸಿ ಹೇಳಿಕೊಳ್ಳಬೇಕು, ಕಾಲುಹಿಡಿದು ಬಿನ್ನವಿಸಬೇಕು. ನಾನು ಮುದುಕನಿದ್ದೇನೆ ನಿಜ ಆದರೆ ಈ ಕಾರ್ಯದ ಬಗ್ಗೆ ನಾನು ಹಳ್ಳಿ-ಹಳ್ಳಿಗಳಲ್ಲಿ ತಿರುಗಾಡಿ ಪ್ರಚಾರ ಮಾಡಲು ಸಿದ್ಧನಿದ್ದೇನೆ ತರುಣರಷ್ಟೇ ಉತ್ಸಾಹ ನನ್ನಲಿದೆಯೆಂದು ತೋರಿಸಲು ನಾನು ಸಿದ್ಧನಿದ್ದೇನೆ ಮದ್ಯನಿರೋಧನ ಕಾರ್ಯ ಮಾಡುವಾಗಲೇ ನನ್ನ ದೇಹಪತನವಾಗಲೆಂದು ನನ್ನ ಬಯಕೆ ಮುಂದಿನ ವಾರ ಮುಖ್ಯ ಪ್ರಧಾನರು ನಮ್ಮ ಪ್ರಾಂತಕ್ಕೆ ಬರುವರು ಅವರಿಗೆ ನಾನು ಹೇಳಲಿ? ಮದ್ಯಪ್ರತಿಬಂಧ ಕಾರ್ಯ ಯಶಸ್ವಿಯಾಗಿದೆ, ಇಡೀ ಜಿಲ್ಹೆ ನಿರ್ಮಾದಕ ಮಾಡಬಹುದು, ಮಾಡಬೇಕೆಂದು ಜನರ ಆಗ್ರಹವಿದೆ ಎಂದು ಹೇಳಲೋ ಹೇಗೆ? ಆ ಬಗ್ಗೆ ನಿಮ್ಮ ಆಶ್ವಾಸನೆ ನನಗೆ ಬೇಕು ನಾಮದಾರ ಮಂತ್ರಿಗಳು ಈಗ ನಿಮ್ಮ ಜಿಲ್ಹೆಗೆ ಬರುವದಿಲ್ಲ ಅವರು ಬರಲಿಕ್ಕೆ ಇದು ಸಮಯವಲ್ಲ ಇಡೀ ಜಿಲ್ಹೆ ನಿರ್ಮಾದಕ ಸಾರಲು ಅವರಿಗೆ ಕರೆತರಬೇಕಾಗಿ ನನ್ನ ಮನೀಷೆಯದುದೆ ನೀವು ಮನಸ್ಸು ಮಾಡಿದರೆ ಒಂದು ಹನಿ ಸರಾಯಿ ಈ ಜಿಲ್ಹೆಯಲ್ಲಿ ಸಿಗದಂತೆ ನೀವು ಮಾಡಬಹುದು ಈ ಕಾರ್ಯ ಯಶಸ್ವಿ ಮಾಡಿ ತೋರಿಸುತ್ತೇವೆಂದು ನೀವು ಆಶ್ವಾಸನೆಕೊಡುತ್ತೀರಾ? ಹಾಗಾದರೆ ಕೈಗಳನ್ನು ಮೇಲಕ್ಕೆತ್ತಿ (ಸಭೆಯಲ್ಲಿ ಕೂತವರು ಕೈಗಳನ್ನು ಎತ್ತುತ್ತಾರೆ) ಈ ನಿಮ್ಮ ಎತ್ತಿದ ಕೈಗಳನ್ನು ಕಂಡು ನನಗೆ ಸಂತೋಷವಾಯಿತು! ನಿಮ್ಮಂಥ ತರುಣರ ಬೆಂಬಲ ಸಿಕ್ಕರೆ ನನ್ನ ಕಾರ್ಯವು ಸಫಲವಾದಂತೆಯೇ" ಈ ರೀತಿ ಗಂಗಾಧರರಾಯರು ಅರ್ಧ ಘಂಟೆಯ ತನಕ ಬಹಳೇ ಉದ್ಬೋಧಕ ಭಾಷಣ ಮಾಡಿದರು ಕೊನೆಗೆ ತಾ॥ ಕಾ॥ ಕಮಿಟಿಯ ಅಧ್ಯಕ್ಷ ರಾ॥ ಲಕ್ಷ್ಮಣ ಕಾಮತರು ಪ್ರಾಂತಾಧ್ಯಕ್ಷರ ಹಾಗೂ ಇನ್ನಿತರ ಅಭ್ಯಾಗತರ ಆಭಾರಮನ್ನಣೆ ಮಾಡಿದ ಮೇಲೆ "ವಂದೇ ಮಾತರಂ" ಮತ್ತಿತರ ಜಯಘೋಷಗಳೊಂದಿಗೆ ಸಭೆಯ ಮುಕ್ತಾಯವಾಯಿತು

ಮರುದಿನ ಬೆಳಿಗ್ಗೆ ಪ್ರಾಂತಾಧ್ಯಕ್ಷರೂ ಅವರ ಪರಿವಾರವೂ ಕಾಗಾಲ, ಧಾರೇಶ್ವರ, ಹಳದೀಪುರ ಗ್ರಾಮಗಳಿಗೆ ಭೆಟ್ಟಿ ಕೊಟ್ಟು, ಸಭೆಗಳಲ್ಲಿ ಭಾಷಣ ಮಾಡಿ ರಾತ್ರಿ ೮ ಘಂಟೆಗೆ ಮರಳಿ ಇಲ್ಲಿ ಬಂದರು ಧಾರೇಶ್ವರದಲ್ಲಿ ಶ್ರೀ ಧಾರಾನಾಥ ದೇವರ ಮುಂದುಗಡೆ ರಥಬೀದಿಯಲ್ಲಿ ಸಭೆಯಾಗಿತ್ತು ಅಧ್ಯಕ್ಷರ ಭಾಷಣವಾದ ಮೇಲೆ ಒಬ್ಬ ಹರಿಕಂತ್ರ ಜಾತಿಯವನೆದ್ದು "ಸ್ವಾಮಿ, ಸರೆಕುಡಿಯುವದು ಹಾಳೆಂದು ನಾನು ಒಪ್ಪುತ್ತೇನೆ ಬಹಳ ಜನರು ಚಹ ಕುಡಿದು ಸಂಸಾರವೆಲ್ಲ ಕೆಡಿಸಿಕೊಳ್ಳುತ್ತಾರಲ್ಲ! ಅವರಿಗೆ ತಮ್ಮ ಮಾತು ಅನ್ವಯಿಸುವದಿಲ್ಲವೇ?" ಎಂದು ಕೇಳಿದನು ಆ ಮಾತಿಗೆ ಗಂಗಾಧರರಾಯರು, "ನಿಜವಿದೆ, ಆ ಬಗ್ಗೆ ನಾನು ಉಪದೇಶ ಮಾಡುತ್ತಿದ್ದೇನೆ ಚಹಾ ಪ್ರತಿಬಂಧದ ಬಗ್ಗೆ ಹಿಂದಿನಿಂದ ಆಲೋಚನೆ ಮಾಡಲಾದೀತು' ಎಂದು ಉತ್ತರ ಕೊಟ್ಟರು ರಾತ್ರಿ ೯ ಘಂಟೆಗೆ ಪೇಟೆಯಲ್ಲಿ "ಜಾನನ ಹಾರ್ಮೋನಿಯಮ್ ಕ್ಲಾಸಿ"ನ ಮಾಳಿಗೆಯ ಮೇಲೆ ಸ್ಥಾನಿಕ ಕಾರ್ಯಕರ್ತರ ಕೂಡ ಚರ್ಚೆ ನಡೆಯಿತು ಮತ್ತು ಮದ್ಯಪ್ರತಿಬಂಧದ ಕಾರ್ಯವನ್ನು ಭದ್ರ ತಳಹದಿಯ ಮೇಲೆ ನಡಿಸುವ ಬಗ್ಗೆ ಒಂದು ಸಮಿತಿ ನೇಮಿಸಲ್ಪಟ್ಟಿ

॥ ಶ್ರೀ ಭುವನೇಶ್ವರಿ ಪ್ರಸನ್ನ ॥

ಶ್ರೀ ಭುವನೇಶ್ವರೀ ವೀವಿಂಗ ಲೂಮ್ಸ, ಗೋಕರ್ಣ.

(ಉತ್ತರ ಕನ್ನಡ)

ಬನ್ನಿರಿ! ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ!! ಬನ್ನಿರಿ!!!

ಇಲ್ಲಿಯ ಕೈಮಗ್ಗದಲ್ಲಿ ತಯಾರಾದ ಮಾಲುಗಳನ್ನು ಒಮ್ಮೆ ನೋಡಿರಿ

ಪಕ್ಕಾ ಬಣ್ಣ! ಖಾತ್ರಿ ಮಾಲು!! ಬೆಲೆ ಕಡಿಮೆ!!!

ನಮ್ಮ ಮಗ್ಗದಲ್ಲಿ

ತರತರದ ಧೋತರಗಳು, ನಮೂನೆವಾರ ಸೀರೆಗಳು, ಕಿಂಗೆಗಳು, ಪಂಜಿಗಳು ಇವಲ್ಲದೆ ಇನ್ನೂ ಅನೇಕ ಹೊಸ ಹೊಸ ನಮೂನೆಯ ಜವಳಿಗಳು ರೊಕ್ಕಾಗಿಯೂ ಚಿಲ್ಲರೆಯಾಗಿಯೂ ಯೋಗ್ಯ ಬೆಲೆಗೆ ಸಿಗುತ್ತವೆ

ಮಾಲಿನ ಬಣ್ಣದ ಬಗ್ಗೆ ಗ್ಯಾರಂಟಿ.

ಆರ್ಡರಿನ ಜೊತೆಗೆ ಅರ್ಧ ಹಣ ಮುಂಗಡ ಕೊಟ್ಟಲ್ಲಿ ಒಂದು ತಿಂಗಳಲ್ಲಿ ಆರ್ಡರಿನಂತೆ ಮಾಲು ಪೂರೈಸಲಾದೀತು.

☞ ನಾವು ಕೈಯಿಂದ ತೆಗೆದ ನೂಲು ಕೊಂಡುಕೊಳ್ಳುತ್ತೇವೆ, ಇಷ್ಟಪಟ್ಟವರಿಗೆ ಆ ನೂಲಿನಿಂದ ಬೇಕಾದ ಬಟ್ಟೆಗಳನ್ನು ತಯಾರಿಸಿ ಕೊಡುತ್ತೇವೆ.

ನಮ್ಮಲ್ಲಿ ಮಾಲು ಖರೇದಿಸಿದಲ್ಲಿ ತಾನೇ ಎಲ್ಲವೂ ಖಾತ್ರಿಯಾಗುವದು.

ಡಿ. ಎನ್. ಗೋಪಿಭಟ್ಟ,
ಪ್ರೊಪ್ರೈಟರ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ **ಬಿ. ವಿ. ಪಂಡಿತರ**

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ.

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0-1-0

ಸುವಾಸನಯುಕ್ತ ಈ ಮಾತ್ರೆಗಳು ಮಕ್ಕಳ ಮತ್ತು ದೊಡ್ಡವರ ನೆಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದ್ದಕ್ಕೆ ಸಿದ್ಧೌಷಧವಾಗಿವೆ ಬೆಲೆ 0—4—0, 0—2—0

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—4—0.

ದೊರೆಯುವ ಸ್ಥಳ **ಹೊನ್ನಾವರ - ಕಲ್ಯಾಣಪೂರ ಬ್ರದರ್ಸ. ಕುಮಟಾ - ದೇವಪ್ಪಾ ಆಯ್ಯ ನಾಯ್ಕ, ದಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ವಸ್ತಿಕ ಫಾರ್ಮಸಿ**

ಪತ್ತೆ **ನಂಜನಗೂಡು ಸದ್ವೈದ್ಯಶಾಲಾ, ಬ್ರಾಂಚ್. ರಥಬೀದಿ, ಮಂಗಳೂರು.**

ತು ರಾ। ಶ್ರೀನಾಥರಾವ ಕಲ್ಯಾಣಪುರಕರರವರು ಸಮಿತಿಯ ಅಧ್ಯಕ್ಷರಾಗಿಯೂ, ರಾ। ಅಲ್ಲಿಸಾಹೇಬ ಬಸ್ತಿಹಿತ್ತಲ ಮತ್ತು ಅಣ್ಣಪ್ಪಾ ರಾಮಚಂದ್ರ ಪೈ ಇವರು ಉಪಾಧ್ಯಕ್ಷರಾಗಿಯೂ ರಾ। ಲಕ್ಷ್ಮಣ ಸುಬ್ರಾಯ ಕಾಮತ, ಗೋಪಾಳ ಪದ್ಮನಾಭ ನಾಯಕ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರು. ಇಷ್ಟು ಕೆಲಸ ಮುಗಿಸಿಕೊಂಡು ಪ್ರಾಂತಾಧ್ಯಕ್ಷರೂ ಅವರ ಸಂಗಡಿಗರೂ ಅದೇ ರಾತ್ರಿ ಮಲ್ಲಾಪುರಕ್ಕೆ ಹೋದರು ಅಲ್ಲಿಂದ ಅವರು ಜಿಲ್ಲಾ ಫಿಸರಿಗೆ ಭೆಟ್ಟಿಯಾಗಲು ಶುಕ್ರವಾರ ಮುಂಜಾನೆ ಬೇಲೆಕೇರಿಗೆ ಹೋದರಾಗಿ ತಿಳಿಯುತ್ತದೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ತೀರ ಕೆಟ್ಟಿದೆ. ಚಳಿಯಂತೂ ಇಲ್ಲೇ ಇಲ್ಲ. ಹಗಲಿರುಳು ಸೆಕೆಯಾಗುತ್ತಿದೆ. ರಾತ್ರಿಯಲ್ಲಿ ಒಮ್ಮೊಮ್ಮೆ ಮುಗಿಲೆಲ್ಲ ಮೋಡಗಳಿಂದ ಕವಿದು ಹೋಗುತ್ತಿದೆ. ಗುರುವಾರ ರಾತ್ರಿ ದಕ್ಷಿಣಕ್ಕೆ ಹಳದೀಪುರ-ಬಡಗಣಿ ಬದಿಗೂ ಉತ್ತರಕ್ಕೆ ಗೋಕರ್ಣ ಬದಿಗೂ ಚಲೋ ಮಳೆ ಸುರಿಯಿತೆಂದು ತಿಳಿಯುತ್ತದೆ. ಕೆಟ್ಟ ಹವೆಯ ಪರಿಣಾಮದಿಂದ ಊರಲ್ಲೆಲ್ಲ ವಿಷಮಜ್ವರ, ಚಳಿಜ್ವರ ಮುಂತಾದ ಬೇನೆಗಳು ಹಬ್ಬಿವೆ.

ಗುರುವಾರ ಸಂಜೆ ಶ್ರೀ ವೆಂಕಟರಮಣ ದೇವರ ದೀಪೋತ್ಸವವು ವಾಡಿಕೆಯಂತೆ ವಿಜೃಂಭಣೆಯಿಂದ ನಡೆಯಿತು

ಪ್ರಾಂತ ಸಾಹೇಬರು ಮ್ಯುನಿಸಿಪಲ್ ಮತದಾರ ಯಾದಿಯ ಬಗ್ಗೆ ಸಾದರಾದ ೩-೪ ತಕರಾರ ಅರ್ಜಿಗಳನ್ನು ಮೊನ್ನೆ ಶುಕ್ರವಾರವೇ ನಿಕಾಲೆಯಲ್ಲಿ ತಂದಿರುತ್ತಾರೆಂದು ತಿಳಿಯುತ್ತದೆ. ಸಾಕ್ಷರತೆಯ ಮೂಲಕ ತಮಗೆ ಮತಾಧಿಕಾರವುಂಟೆಂದು ಅರ್ಜಿ ಮಾಡಿದ ಹೆಂಗಳೆಯರ ಅರ್ಜಿಗಳು ರೀತಿಯಂತೆ ಶಿಫಾರಸುಪತ್ರಗಳಿಲ್ಲದ ಮೂಲಕ ತಿರಸ್ಕರಿಸಲ್ಪಟ್ಟವೆಯೆಂದು ತಿಳಿಯುತ್ತದೆ.

ಹೆಗಡೆ ತಾರಿಯ ಸನಿಹಾಸ ಶಿವಯ್ಯಾ ಪುಟ್ಟ ನಾಯ್ಕನೆಂಬವನ ಮನೆಯಲ್ಲಿ ಯಾರದೋ ೩-೪ ಕರುಗಳಾದ ಎಮ್ಮೆಯೊಂದು ಬಂದು ಸುಮಾರು ಒಂದು ತಿಂಗಳಾಯಿತು. ಮಾಲೀಕರು ಬಂದು ತಪಾಸ ಮಾಡಿ ಒಯ್ಯಬಹುದು ಎಂದು ಹೆಗಡೆಯ ರಾ। ಭದ್ರಯ್ಯಾ ವೆಂಕಟರಮಣ ಗಾಂವಗಾ ಎಂಬವರು ತಿಳಿಸುತ್ತಾರೆ.

ಹರೀಜನ ಸೇವೆಯ ಕೊಂಗ್ರೆಸ ಕಮಿಟಿಯ ವಾರ್ಷಿಕ ಸಭೆ ಇದೇ ಬರುವ ತಾ। ೧೫-೧೬-೧೭ನೇಗೆ ಕೂಡುವದೆಂದು ಕಮಿಟಿಯವರು ತಿಳಿಸುತ್ತಾರೆ

ರಾ। ಬೀರಣ್ಣಾ ಗಾಂವಕಾರ ನಾಮಧಾರಿ ಮಾಸ್ಕೇರಿ ಇವರು ಬರೆಯುತ್ತಾರೆ-"ನಮ್ಮ ನಾಮಧಾರಿ ಮಾಸ್ಕೇರಿ ಗ್ರಾಮದೇವಸ್ಥಾನದಲ್ಲಿ ವರ್ಷಾಸನ ನಡೆದುಬರುವ ಹಬ್ಬ, ಆವಾರಿ, ಕಟ್ಟಿನ ಬುಗದಿ, ಆಳಿಹಬ್ಬ, ಮಾಸ್ತಿ ಪೂಜೆ ಮುಂತಾದ ವಿನಿಯೋಗಗಳೂ ಸೇವೆಗಳೂ ನಿಂತುಹೋಗಿ ಹಲವು ವರ್ಷಗಳಾದವು. ದೇವಸ್ಥಾನದ ಮೊಕ್ತೇಸರರಿಗೂ ಗಾಂವಕಾರ-ಮಿರಾಸದಾರರಿಗೂ ಭಜಕರಿಗೂ ಪರಸ್ಪರ ಹಕ್ಕು-ಬಾಧ್ಯತೆಗಳ ಕುರಿತು ತಂಟೆ-ತಕ್ರಾರುಗಳು ನಡೆಯುತ್ತಾ ಇವೆ. ಈ ಬಗ್ಗೆ ದೇವಳ ಕಮಿಟಿಗೆ ಕೆಲವು ಭಜಕರು ಅರ್ಜಿ ಮಾಡಿದ್ದರು ಆದರೆ ಕಮಿಟಿಯವರು ಈ ತನಕ ಏನೂ ನಿಕಾಲಿ ಮಾಡಿರುವದಿಲ್ಲ. ಇನ್ನಾದರೂ ದೇವಳ ಕಮಿಟಿಯವರು ಈ ತಂಟೆ-ತಕ್ರಾರುಗಳನ್ನು ನಿಕಾಲಿ ಮಾಡಿ ದೇವತಾಕಾರ್ಯಗಳು ಸುರಳಿತ ನಡೆಯುವಂತೆ ವ್ಯವಸ್ಥೆ ಮಾಡಿಕೊಡಬೇಕಾಗಿ ವಿನಂತಿಯಿದೆ" ಇತ್ಯಾದಿ

ಗೋಕರ್ಣದಲ್ಲಿ ಹಂಗಾಮಿಯಾಗಿ ಇರುವ ಮ್ಯುನಿಸಿಪಾಲಿಟಿಯನ್ನು ಕಾಯಂ ಮ್ಯುನಿಸಿಪಾಲಿಟಿಯಾಗಿ ಮಾಡಬೇಕಾಗಿ ಸರಕಾರದಿಂದ ಪ್ರಕಟಣೆ ಹೊರಟಿದೆ. ಆಕ್ಷೇಪ ಮಾಡಬಿಚ್ಛಿಸುವವರು ಇದೇ ಬರುವ ತಾ। ೨೯ರೊಳಗೆ ಸರಕಾರಕ್ಕೆ ತಮ್ಮ ಆಕ್ಷೇಪ ತಿಳಿಸತಕ್ಕದ್ದು.

ಹೊನ್ನಾವರ— ಗುರುವಾರ ರಾತ್ರಿ ಇಲ್ಲಿ ಬಹಳ ಮಳೆಯಾಯಿತು

ಗೌಡಸಾರಸ್ವತ ಬ್ರಾಹ್ಮಣರ ಮಠದಲ್ಲಿ ಭಜನೆ-ಸಪ್ತಾಹಕ್ಕೆ ಆರಂಭವಾಗಿದೆ

ಗುಪ್ತ-ಮತದಾನ ಪದ್ಧತಿಯಿಂದಲೇ ಕಾರ್ಯಕಾರಿ ಮಂಡಳದ ಆಯ್ಕೆಯಾಗತಕ್ಕದ್ದೆಂದು ಸಹಕಾರಿ ಸಂಘಗಳ ರಜಿಸ್ಟ್ರಾರರ ಕಡೆಯಿಂದ ಅಪ್ಪಣೆ ಬಂದ ಮೇರೆಗೆ ಹೊಸ ವರ್ಷದ ಕಾರ್ಯಕಾರಿ ಮಂಡಳದ ಚುನಾವಣೆ ಮಾಡದೆ ಮುಂದರಿಸಿಟ್ಟ ಅರ್ಬನ್ ಸಹಕಾರಿ ಬೇಂಕಿನ ಮಹಾಸಭೆ ಇನ್ನೂ ಕೂಡಿರುವದಿಲ್ಲ. ಹಳೇ ಕಾರ್ಯಕಾರಿ ಮಂಡಳವೇ ಅಧಿಕಾರಾರೂಢವಿದೆ. ಕೆಲವರು ರಜಿಸ್ಟ್ರಾರರಿಗೆ ಅರ್ಜಿ ಮಾಡಿ ಗುಪ್ತ ಮತದಾನ-ಪದ್ಧತಿಯಿಂದ ಬೇಗನೇ ಹೊಸ ಕಾರ್ಯಕಾರಿ ಮಂಡಳದ ಆಯ್ಕೆಯಾಗುವಂತೆ ವ್ಯವಸ್ಥೆ ಮಾಡಬೇಕೆಂದು ಬಿನ್ನವಿಸಿರುತ್ತಾರಂತೆ.

ಕಳೆದ ತಾ. ೨೭ನೇ ರವಿವಾರ ರಾಮತೀರ್ಥಕ್ಕೆ ಹೋಗುತ್ತಿದ್ದ ಒಂದು ಮೋಟಾರ ಬಂಡಿಯು ರಸ್ತೆಯಿಂದ ಕೆಳಗೆ ಜಾರಿಬಿದ್ದು, ಡ್ರ್ಯಾವ್ಹರನಿಗೂ ಇನ್ನೊಬ್ಬನಿಗೂ ಚಲೋ ಪೆಟ್ಟಾಗಿದೆ.

ಮಂಕಿ— (ತಾ. ೩-೧೨-೩೮) ಮೊನ್ನೆ ರಾತ್ರಿ ಬಹಳ ಮಳೆ ಸುರಿಯಿತು. ಇನ್ನೂ ಮೋಡಗಳಾಗುತ್ತಿವೆ. ಹವೆ ಕೆಟ್ಟ ಕಾರಣ ಊರಲ್ಲಿ ಜ್ವರಾದಿ ಬೇನೆಗಳು ಹಬ್ಬಿವೆ

ಈ ಊರಲ್ಲಿ ಮೀನು ಹಿಡಿದು ಉಪಜೀವಿಸುವ ಜನರ ವಸತಿ ಬಹಳ. ಈ ವರ್ಷ ಏನು ಕಾರಣದಿಂದಲೋ ಏನೋ ಮೀನು ಸಿಗುವದು ದುರ್ಲಭವಾಗಿದೆಯರಿ. ಮೀನುಗಾರರಿಗೆ ಹೊಟ್ಟೆಯ ಚಿಂತೆ ಉಂಟಾಗಿದೆ

ಇತ್ತಲಾಗಿ ತಿರುಗಿ ಹುಲಿ-ಕಾಟ ಪ್ರಾರಂಭವಾಗಿದೆ. ಕಳೆದ ೧ ತಿಂಗಳಲ್ಲಿ ಕನಿಷ್ಠ ೧೦-೧೫ ದನಗಳು ಹುಲಿ ಪಾಲಾಗಿವೆ. ಜಿಲ್ಲಾಧಿಕಾರಿಗಳು ಹುಲಿಬೇಟೆಯ ವ್ಯವಸ್ಥೆ ಮಾಡಬೇಕು.

ನಮಗೆ "501" ಸಾಬೂನು ವಿನಹ ಮತ್ತಾವ ಸಾಬೂನು ಬೇಡನೇ ಬೇಡ

ಇದು ನಿಧಾನವಾಗಿ ಕರಗುವದಲ್ಲದೆ ಬಹು ಕಾಲ ಬಾಳುತ್ತದೆ.

ಇತರ ಸಾಬೂನುಗಳು ಶೀಘ್ರವಾಗಿ ಸವೆಯುವವು.

501 ಸಾಬೂನನ್ನು ಉಪಯೋಗಿಸಿದ ಜನರು ಇತರ ಸಾಬೂನುಗಳನ್ನು ಉಪಯೋಗಿಸುವದೇ ಇಲ್ಲ. ಏಕೆಂದರೇ ಈ ಸಾಬೂನು ನೀವು ಕೊಡುವ ಹಣಕ್ಕೆ ತಕ್ಕ ಪ್ರತಿಫಲವನ್ನು ಕೊಡುವದು. ಇತರ ಸಾಬೂನುಗಳು ಬೇಗನೇ ಕರಗುವವು. 501 ದೃಢವಾಗಿದ್ದು ಉಪಯೋಗಿಸಲು ಮಿತವಾಗಿ ಕರಗುವದು. 501 ಬೇರೊಂದು ವಿಧದಿಂದ ಕೂಡ ಹಣವನ್ನು ಉಳಿಸುವದು. ಬಟ್ಟೆಗಳನ್ನು ಬಹು ಕಾಲ ಬಾಳಿಸುವದಲ್ಲದೆ ಹೊಸ ವಸ್ತ್ರಗಳಂತೆ ಮಾಡುವದು. 501 ಈ ದಿನವೇ ಕೊಳ್ಳಿರಿ. ಇದು ನಿಜವಾಗಿ ಸ್ವದೇಶಿ.

ವಿವೇಕದಿಂದ ಕೊಳ್ಳಿರಿ.

501 ವಸ್ತ್ರಗಳನ್ನು ಶುಭ್ರಪಡಿಸುವ ಸಾಬೂನನ್ನು ಕೊಳ್ಳಿರಿ

ಇದರಲ್ಲಿ ಪಶು ಕೊಬ್ಬು ಇಲ್ಲ.

ಟಾಂಕೋ ಸೇಲ್ಸ ಡಿಪಾರ್ಟಮೆಂಟು,
೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು.

ದಿ ಟಾಟಾ ಆಯಿಲ್ ಮಿಲ್ಸ್ ಕಂ. ಲಿ
ಇವರಿಂದ ತಯಾರಾದುದು
ಟಾಟಾಪುರಮ್ ಮತ್ತು ಬೊಂಬಾಯಿ

TATA TOMCO



ಟಾಟಾರವರ ಉತ್ಪತ್ತಿ

ವಾರ್ತೆಗಳು.

— ಮುಂಬಯಿಯಲ್ಲಿನ ಕ್ರಿಕೆಟ್-ಪಂದ್ಯಾಟಗಳ ಗದ್ದಲಲ್ಲಿ ಐದು ಪಕ್ಷಗಳು ವಿಜಯ ಪಡೆಯಲುತ್ಸುಕರಾಗಿದ್ದಾರೆ. ಮೊಟ್ಟಮೊದಲು ಪಾರ್ಸಿಗಳಿಗೂ ಯುರೋಪಿಯನ್‌ರಿಗೂ ಪಂದ್ಯಾಟವಾಗಿ ಯುರೋಪಿಯನ್‌ರು ಗೆದ್ದರು. ಪಾರ್ಸಿಗಳು ಸೋಲಬಾರದೆಂದು ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾದವು. ಆ ಮೇಲೆ ಹಿಂದುಗಳಿಗೂ ಇತರರಿಗೂ ಪಂದ್ಯಾಟ ನಡೆಯಿತು. ಈ ಪಂದ್ಯಾಟದಲ್ಲಿ ಹಿಂದುಗಳು ಪ್ರಚಂಡ ಆರ್ಭಟಮಾಡಿ ಗೆದ್ದರು. ೭ ಜನರು ೫೬೦ ಓಟಗಳನ್ನು ಓಡಿ ಕ್ರಿಕೆಟ್-ಇತಿಹಾಸದಲ್ಲಿ ಚಿರಸ್ಮರಣೀಯ ದಾಖಲೆಯನ್ನುಂಟುಮಾಡಿದರು. ಲಾಹೋರಿನ ಲಾಲಾ ಅಮರನಾಥರವರು ೨೪೧ ಓಟ ಓಡಿದ್ದು ಕ್ರಿಕೆಟ್ ಇತಿಹಾಸದಲ್ಲಿ ಇದೇ ಮೊದಲನೇದು. ಹಿಂದುಗಳು ಸಹಜ ವಿಜಯಹೊಂದಿದರು ಮಂಗಳವಾರ ೩೦-೨೯ನೇಯಿಂದ ಯುರೋಪಿಯನ್‌ರಿಗೂ ಮುಸಲ್ಮಾನರಿಗೂ ಪಂದ್ಯಾಟ ನಡೆಯಿತು. ಇದರೊಳಗೆ ಮುಸಲ್ಮಾನರು ಗೆದ್ದರು; ಯುರೋಪಿಯನ್‌ರು ಸೋತರು! ಮುಸಲ್ಮಾನ ಪಥಕದ ಮುಖ್ಯಸ್ಥರಾದ ನವಾಬ ವಜೀರ ಅಲಿಯವರ ಆಟ ತೀರ ಪ್ರೇಕ್ಷಣೀಯವಾಯಿತು. ಇವರೇ ಮುಸಲ್ಮಾನರ ದಿಗ್ವಿಜಯಕ್ಕೆ ಮುಖ್ಯ ಕಾರಣ. ಶನಿವಾರದಿಂದ ಹಿಂದು-ಮುಸಲ್ಮಾನರೊಳಗೆ ಪಂದ್ಯಾಟ ನಡೆದಿದೆ. ಹಿಂದುಗಳು ೬೯ ಓಟಗಳಲ್ಲಿ ತಮ್ಮ ಮೊದಲನೇ ಪಂದ್ಯಾಟವನ್ನು ಮುಗಿಸಿಬಿಟ್ಟರು! ಮುಸಲ್ಮಾನರು ೨೦೦ಕ್ಕೆ ಮಿಕ್ಕಿ ಓಟಗಳನ್ನು ತೆಗೆದಿದ್ದಾರೆ. ಇನ್ನೂ ಪೂರ್ಣವಾಗಿ ಆಟ ಮುಗಿದ ವಾರ್ತೆ ಬರಲಿಲ್ಲ. ಬಹುತರವಾಗಿ ಮುಸಲ್ಮಾನರೇ ಗೆಲ್ಲುವರೆಂದು ಎಣಿಕೆ

— ಮೌ॥ ಶೌಕತ ಅಲಿಯವರು ರವಿವಾರ ತಾ ೨೬ನೇಗೆ ದಿಲ್ಲಿಯಲ್ಲಿ ಕಫಜ್ವರದಿಂದ ತೀರಿಕೊಂಡರು. ಮೌ॥ ಶೌಕತ ಅಲಿಯವರು ಮುಸಲ್ಮಾನ ಸಮಾಜದ ಸೇವೆಯನ್ನೂ ರಾಷ್ಟ್ರಸೇವೆಯನ್ನೂ ಮಾಡಿ ದೇಶಕ್ಕೆ ಉಪಕಾರ ಮಾಡಿದ್ದಾರೆ. ಖಿಲಾಫತ ಉದ್ಧಾರಕ್ಕಾಗಿ ಇವರು ಮಾಡಿದ ಸೇವೆ ಎಂದಿಗೂ ಮರೆಯುವಂಥಾದ್ದಲ್ಲ. ಪಂ॥ ಜವಾಹಿರಲಾಲ ನೆಹರೂ, ಮೌ॥ ಅಬುಲ ಕಲಮ ಅಝಾದ, ಜನಾಬ ಮಹಮ್ಮದ ಅಲಿ ಜಿನ್ನಾ ಮೊದಲಾದ ಹಿಂದು-ಮುಸಲ್ಮಾನ ಪ್ರಮುಖರು ಮೌ॥ ಶೌಕತ ಅಲಿಯವರ ನಿಧನದಿಂದುಂಟಾದ ದೇಶನಷ್ಟವನ್ನು ವರ್ಣಿಸಿ ಶೋಕ-ಪ್ರದರ್ಶನ ಮಾಡುತ್ತಿದ್ದಾರೆ.

— ಹೈದರಾಬಾದದ ಉಸ್ಮಾನಿಯಾ ವಿಶ್ವವಿದ್ಯಾಲಯದ ಹಿಂದು ವಿದ್ಯಾರ್ಥಿಗಳು ಕ್ಷುಬ್ಧರಾಗಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕ ವಸತಿಗೃಹಗಳಿದ್ದು, ಅವುಗಳೊಳಗಿನ ಒಂದು ವಸತಿಗೃಹ ಹಿಂದು ವಿದ್ಯಾರ್ಥಿಗಳದು. ಅಲ್ಲಿ ೪ ವರ್ಷಗಳಿಂದ 'ವಂದೇ ಮಾತರಂ' ಪದ್ಯ ಹಾಡಲ್ಪಡುತ್ತದೆ. ಇದರಿಂದ ಹಿಂದ್ವೇತರ ವಿದ್ಯಾರ್ಥಿಗಳ ಧಾರ್ಮಿಕ ಭಾವನೆಗೆ ಬಾಧೆ ತಟ್ಟುತ್ತದೆಂದು ವಿದ್ಯಾಧಿಕಾರಿಗಳ ಅಭಿಪ್ರಾಯವಾಗಿ ಅದನ್ನು ವಿಶ್ವವಿದ್ಯಾಲಯದಲ್ಲಿ ಹಾಡಕೂಡದೆಂದು ಇದೇ ಕಳೆದ ೨೬ನೇ ತಾರೀಖಿಗೆ ಹುಕುಮುಗಳು ಹೊರಟವು. ಈ ಹುಕುಮನ್ನು ಮುರಿದು ವಿದ್ಯಾರ್ಥಿಗಳು ಈ ಪದ್ಯವನ್ನು ತಮ್ಮ ಪ್ರತ್ಯೇಕ ಪ್ರಾರ್ಥನಾ ಮಂದಿರದಲ್ಲಿ ಹಾಡಿದರು. ಆದರಿಂದ ೧೩೦ ಹಿಂದು ವಿದ್ಯಾರ್ಥಿಗಳಿಗೆ ವಿದ್ಯಾಲಯದಿಂದ ಹೊರತಳ್ಳಲಾಗಿದೆ. ೧೦೦ ವಿದ್ಯಾರ್ಥಿಗಳು ಉಪವಾಸ ತೆಗೆಯುತ್ತಿದ್ದಾರೆ 'ವಂದೇ ಮಾತರಮ್'ಗೀತ ಹಾಡಲು ತಮ್ಮ ಮೇಲೆ ಹೊರಡಿಸಿದ ನಿರ್ಬಂಧವನ್ನು ದೂರಪಡಿಸಿ ಅಪ್ಪಣೆ ದೊರೆತ ನಂತರವು ಅನ್ನಗ್ರಹಣ ಮಾಡತಕ್ಕವರಾಗಿ ಅವರು ಪ್ರತಿಜ್ಞೆ ಕೊಂಡಿದ್ದಾರೆ. ವಿಶ್ವವಿದ್ಯಾಲಯದವರು ಈಗ ಮೆತ್ತಗಾಗಿದ್ದಾರೆ. ಈ ಗೀತ ಧಾರ್ಮಿಕವೋ ರಾಜಕೀಯವೋ ? ಎಂಬುದನ್ನು ಪರೀಕ್ಷಿಸಿ ತಿಳಿಸಲಿಕ್ಕೆ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಅಪ್ಪಣೆ ಮಾಡಿದ್ದಾರೆ. ಹೈದರಾಬಾದದೊಳಗೆ ರಾಷ್ಟ್ರೀಯ ಸಭೆಯನ್ನು ಬೇಕಾಯಿದೇಶೀರ ಸಂಸ್ಥೆಯೆಂದು ಪ್ರಕಟಣೆ ಹೊರಡಿಸಿದ ಬಗ್ಗೆ ಸತ್ಯಾಗ್ರಹ ಮಾಡಲು ಸೇನಾಪತಿ ಬಾಪಟ ಮೊದಲಾದ ಸಂಸ್ಥಾನೇತರ ಹಿಂದುಸ್ಥಾನದೊಳಗಿನ ಪ್ರಜೆಗಳು ಸತ್ಯಾಗ್ರಹ ಮಾಡಹೋಗಿದ್ದರು. ಅವರಿಗೀಗ ಹಿಂದುಸ್ಥಾನ ಸರಕಾರವು ಸಂಸ್ಥಾನ-ರಕ್ಷಣೆ ಕಾನೂನಿನ್ವಯ ಸೆರೆ ಹಿಡಿಯಬೇಕೆಂದು ವಿಧಿಸಿದಂತೆ, ಅವರಿಗೆ ಗುಲಬುರ್ಗೆಯಲ್ಲಿ ಸೆರೆಹಿಡಿಯಲಾಗಿದೆ. ರಾಯಚೂರ, ದ್ರೋಣಾಚಲಂ, ಖಮಾಮ, ಆಸಿಫಾಬಾದ ಸ್ಟೇಶನುಗಳಲ್ಲಿ ಕಠೋರ ಕಾವಲಿಟ್ಟು ಹೊರಗಿನಿಂದ ಬರುವ ಸತ್ಯಾಗ್ರಹಿಗಳಿಗೆ ಸೆರೆಹಿಡಿಯುವ ರಭಸ ನಡೆದಿದೆ. ರಾಜಕೋಟದಲ್ಲಿಯೂ ಇದೇ ಪರಿಸ್ಥಿತಿ. ಘೋರ ದಬ್ಬಾಳಿಕೆ ನಡೆದಿದೆ. ದಿವಾಣರಾದ ಸರ್ ಪೆಟ್ರಿಕ್ ಕೆಡೆಲ್‌ರವರು ಇತ್ತೀಚಿನಲ್ಲಿ ಸಂಧಿ ಮಾತಲು ಪ್ರಯತ್ನಪಡುತ್ತಿದ್ದಾರೆ. ಅತ್ತ ಹಿಂದುಸ್ಥಾನ ಸರಕಾರದೊಡನೆ, ಇತ್ತ ಸರದಾರ ವಲ್ಲಭಭಾಯಿ ಪಟೇಲರೊಡನೆ ಒಡಂಬಡಿಕೆಯ ಪ್ರಸ್ತಾಪವನ್ನು ನಡಿಸುತ್ತಿದ್ದಾರೆ. ಅದಿನ್ನೂ ಸಾಧ್ಯವಾಗಲಿಲ್ಲ. ಲೋಕಪಕ್ಷದ ಪರವಾಗಿ ಸತ್ಯಾಗ್ರಹವೂ ಸರಕಾರ-ಪಕ್ಷದ ಪರವಾಗಿ ದಬ್ಬಾಳಿಕೆಯೂ ರಾಜಕೋಟದಲ್ಲಿ ತೀವ್ರತರವಾಗಿ ನಡೆದಿದೆ. ಸಂಸ್ಥಾನಗಳೊಳಗಿನ ರಾಜಕಾರಣದ ಕುರಿತು ರಾಷ್ಟ್ರೀಯ ಸಭೆಯು ಯಾವ ಪ್ರಕಾರದ ಧೋರಣವನ್ನಿಡಬೇಕೆಂಬದರ ಬಗ್ಗೆ ಕೊಂಗ್ರೆಸ ಕಾರ್ಯಕಾರಿ ಮಂಡಳವು ಈ ವಾರದಲ್ಲಿ ವಿಚಾರ ಮಾಡಲಿದೆ.

— ಹಿಂದುಸ್ಥಾನದಲ್ಲಿ ಬ್ರಿಟಿಶರ ವಿದೇಶ ವ್ಯಾಪಾರ ಕುಗ್ಗಿದ್ದರಿಂದ ಪವನು-ನೋಟಿನ ಬೆಲೆ ಮತ್ತೂ ಇಳಿಯಿತು; ಅದರಿಂದ ಚಿನ್ನದ ದರ ಏರಿದೆ. ಸೋಮವಾರ ಚಿನ್ನದ ತೊಲೆಗೆ ರೂ ೩೭-೧೦-೬ ತನಕ ಏರಿತ್ತು. ಈಗ ರೂ ೩೭-೬-೬ಕ್ಕೆ ಇಳಿದಿದೆ. ಇನ್ನೂ ಏರಿಕೆಯ ಲಕ್ಷಣಗಳೇ ಕಾಣುತ್ತಿವೆ ಮುಂಬಯಿ ಪೇಟೆಯಲ್ಲಿ ಈಗ ೧॥ ಲಕ್ಷ ತೊಲೆ ಚಿನ್ನವಿದೆ. ಪರಸ್ಥಳದಿಂದ ದಿನಾಲು ೧೦೦೦೦ದಿಂದ ೧೫೦೦೦ ತೊಲೆಗಳ ತನಕ ಚಿನ್ನ ಬರುತ್ತಿದೆ. ಸರಾಸರಿ ದಿನಾಲು ೧॥ ಸಾವಿರ ತೊಲೆ ಚಿನ್ನದ ವ್ಯಾಪಾರವಾಗುತ್ತಿದೆ. ಪವನು-ನಾಣ್ಯಕ್ಕೆ ಗಿರಾಕಿ ಕಡಿಮೆ. ಪವನಿನ ದರ ರೂ. ೨೫-೧೩-೦. ಬೆಳ್ಳಿಯ ಧಾರಣೆ ಏರಲಿಲ್ಲ, ಇಳಿಯಲಿಲ್ಲ ೧೦೦ ರೂ ತೊಲೆಗೆ ೫೧॥ಯ ಆಜೆ-ಈಜೆ ಇದೆ! ಮುಂಬಯಿ ಪೇಟೆಯಲ್ಲಿ ೩೩೦೦ ಬೆಳ್ಳಿಯ ಘಟ್ಟಿಗಳಿವೆ ದಿನಾ ೧೫ ಘಟ್ಟಿಗಳ ವ್ಯಾಪಾರವಾದರೆ ಹೆಚ್ಚು! ಬೇಂಕುಗಳಲ್ಲಿ ಹೇರಳ ಹಣ ರಾಶಿಯಾಗಿ ಬಿದ್ದಿದೆ. ಶೇಕಡಾ ೧ರಂತೆ ಬಡ್ಡಿ ದರ್ಶನ ಮೇಲೆ, ತಕ್ಕ ಭದ್ರತೆ ಕೊಟ್ಟಲ್ಲಿ, ಬೇಕನ್ನು ಹಣ ಸಿಗುತ್ತದೆ. ಬ್ರಿಟಿಶ ಸರಕಾರವು ಸ್ವದೇಶದೊಳಗಿಂದ ಚಿನ್ನ ಹೊರ ರಫ್ತಾಗಬಾರದೆಂದು ವಿಧಿಸಿದಂದಿನಿಂದ ಹಿಂದುಸ್ಥಾನದೊಳಗಿಂದ ೩ ಅಬ್ಜ ೨೨ ಕೋಟಿ ರೂಪಾಯಿಗಳ ಚಿನ್ನ ವಿದೇಶಗಳಿಗೆ ರಫ್ತಾಯಿತು.

— ಮುಂಬಯಿಯ ಧರ್ಮಾತ್ಮರೊಬ್ಬರು ಬೆಳಗಾವಿಯೊಳಗೆ ಆಯುರ್ವೇದ ವಿದ್ಯಾಲಯವನ್ನು ಸ್ಥಾಪಿಸುವದಕ್ಕಾಗಿ ೩ ಲಕ್ಷ ರೂಪಾಯಿಗಳನ್ನು ಮುಂಬಯಿ ಸರಕಾರದ ಕಡೆ ಅರ್ಪಿಸಿದ್ದಾರೆ ಇನ್ನೊಬ್ಬ ಪಿಶ್ವರ್ಯವಂತ ಧರ್ಮಾತ್ಮರೂ ದ್ರವ್ಯಸಹಾಯ ಮಾಡುವ ಅಭಿವಚನವನ್ನಿತ್ತಿದ್ದಾರೆ.

ಏನೇನೋ ಆಗಲಿಕ್ಕಿದೆ!

(೩ನೇ ಪಾನಿನಿಂದ ಮುಂದರಿಸಿದ್ದು.)

ಪ್ರಸಂಗ ಬರಬಹುದೆಂದು ಸೂಚಿಸಿದರು. ಕ್ಷಣ ಸಹ ವಿಳಂಬ ಮಾಡದೆ ಜರ್ಮನಿಗದಿರಾಗಬೇಕೆಂದು ಲಂಡನಿನ 'ಡೇಲಿ ಮೇಲ', 'ಡೇಲಿ ಎಕ್ಸಪ್ರೆಸ್', 'ನ್ಯೂಸ ಕ್ರೊನಿಕಲ್', 'ಡೇಲಿ ಟೆಲಿಗ್ರಾಫ್', 'ಮೊರ್ನಿಂಗ ಪೋಸ್ಟ' ಮೊದಲಾದ ಪತ್ರಿಕೆಗಳು ಜರ್ಮನಿಯ ಮೇಲೆ ವಿಷ ಕಾರುತ್ತಿವೆ. ಮಂಗಳವಾರ ರುಮಾನಿಯಾದ ಕೆರೋಲ ಅರಸರು ಸೇನಾಪತಿ ಎಂಟೋನಿಸ್ಕುರವರಿಗೆ ಯಹೂದಿಯರ ದ್ವೇಷ ಬಗೆದ ದ್ದಕ್ಕಾಗಿ, ಪದಚ್ಯುತ ಮಾಡಿದರು. ಜರ್ಮನಿ ಇಟಾಲಿ, ಜಪಾನ ದೇಶಗಳು ಒಕ್ಕಟ್ಟಾಗಿ ಬ್ರಿಟಿಶ ಫ್ರಾಂಚ - ರುಶ್ಯ - ಅಮೇರಿಕಾದವರ ಮೇಲೆ ಸಾಗಿ ಹೋಗುವಂಥ ಕರಾರುಗಳನ್ನು ಸಿದ್ಧಗೊಳಿಸಿಟ್ಟಿದ್ದಾರೆಂದು ಲಂಡನಿನ 'ನ್ಯೂಸ ಕ್ರೊನಿಕಲ್' ಪತ್ರಿಕೆಯ ವಾರ್ತೆ. ಭೂಮಧ್ಯ ಸಮುದ್ರದೊಳಗೆ ತಮಗೆ ಬೇಕಾದ ಹಕ್ಕುಗಳನ್ನು ಫ್ರೆಂಚರ ಆತಂಕವಿಲ್ಲದೆ ಬ್ರಿಟಿಶರು ತಮಗೆ ಪೂರೈಸಿದ್ದಲ್ಲಿ, ಈ ಕರಾರಿನಿಂದ ಬ್ರಿಟಿಶರ ಹಿತಸಂಬಂಧಗಳಿಗೆ ಎಷ್ಟಕ್ಕೂ ಬಾಧೆತಟ್ಟದಂತೆ ತಾವು ಜಾಗ್ರತೆಕೊಳ್ಳುವೆವಾಗಿ ಮುಸೋಲಿನಿಯವರು ಚೆಂಬರಲೇನ-ಹೆಲಿಫೆಕ್ಸ ದೊರೆಗಳಿಗೆ ಬೆಲ್ಲದ ಬೊಟ್ಟು ಹಚ್ಚುತ್ತಿದ್ದಾರೆ ಹೀಗೆ ಸೂತ್ರಗಳು ಸಂಕೀರ್ಣವಾಗಿ ಅಚೆ-ಈಚೆ ಪರಸ್ಪರ ವಿರುದ್ಧವಾಗಿ ಸಹ ಎಳೆಯಲ್ಪಡುತ್ತಿರುವಾಗ, ಈ ಘಟನೆಗಳ ಪರಿಣಾಮ ಏನೇನಾದೀತೆಂದು ನನ್ನಿಂದ ಹೇಳಲಸಾಧ್ಯ! ಈವರೆಗಿನ ರಾಜಕಾರಣವೇ ಬುಡ ಮೇಲಾಗಿದೆ. ಅದರಿಂದ ಏನೇನೋ ಆಗಲಿಕ್ಕಿದೆ ಎಂದು ನಾನು ಮೊದಲೇ ಹೇಳಿಬಿಟ್ಟೆ.

ಪ್ರವಾಸಿ ಜನರಿಗೆ

ಊಟ-ಉಪಚಾರಗಳ

ಉತ್ತಮ ವ್ಯವಸ್ಥೆ.

ಮಾಧವಾಶ್ರಮ,

ಕಾರವಾರ.

ಮಧ್ಯವರ್ತಿ ಸ್ಥಳ,

ಉತ್ಕೃಷ್ಟ ಊಟ;

ಉತ್ತಮ ಹವೆಯ ಕೋಣೆಗಳು;

ಊಟ-ಉಳಕೊಳ್ಳುವ ಅನುಕೂಲತೆ!

ಸ್ಥಾನಿಕ ವೃತ್ತಾಂತ

(೧೧ನೇ ಪಾನದಿಂದ ಮುಂದುವರಿದುದು)

ಜಿಲ್ಲಾ ಬೋರ್ಡಿನ ಸಭೆ ಕಳೆದ ಸೋಮವಾರ ಜರುಗಿ [illegible] ಕೆಲವು ಮಹತ್ವದ ತೀರ್ಮಾನಗಳಾದವು. [illegible] ಕಾಲೋಚಿತವಲ್ಲ ವಾದ ಬೋಳಿಗೆ ಈ ವರ್ಷದ [illegible] ಕೆಲಸ ಪೂರ್ಣತೆಯಾಗುವಂತೆ [illegible] ಬೇಕಾಗಿದೆ ಈ ಬಗ್ಗೆ ಹಾದ ಕೊಡಬೇಕೆಂದು [illegible] ಸಿದ್ದಾಪುರದಲ್ಲಿ ಧರ್ಮದ ಅಂಗಡಿ (Cheap Grain Shop) ಯು ವ್ಯವಹಾರದಲ್ಲಿ ಸಿಕ್ಕಿದ ರೂ ೧೦೦೦ಗಳ ಲಾಭವನ್ನು ಈ ಕೆಲಸಕ್ಕೆ ಉಪಯೋಗಿಸಬೇಕಾಗಿ [illegible] ಹಳೆಯಾಗ [illegible] ಇನ್ನೂ ಕೆಲವರ ಅಕ್ಷೇಪಗಳ [illegible] ವಿದ್ಯಾಲಯದಲ್ಲಿ [illegible] ಇಂಗ್ಲಿಷ [illegible] ಶಿಕ್ಷಕರನ್ನು ಈಗ [illegible] ಸಂಬಳದ [illegible] ಹಳೆಯಾಳ [illegible] ಜಿಲ್ಲಾ ಬೋರ್ಡಿನ [illegible] ಇಂಗ್ಲಿಷ [illegible] ಹೊಸ ಶಾಲೆಗಳ [illegible] ಹೊಸ ಶಿಕ್ಷಕರ ನೇಮಣೂಕಿಗಾಗಿಯೂ [illegible] ಶಾಲೆಗಳಲ್ಲಿ [illegible] ಶಿಕ್ಷಕರನ್ನು ನೇಮಿಸಿಕೊಳ್ಳಬೇಕೆಂದು ಗೊತ್ತಾಯಿತು [illegible] ಹೊಸ ಶಾಲೆಗಳನ್ನು [illegible] ಗೊತ್ತಾಯಿತು ಕಾರವಾರ—ಅಂಕೋಲಾ ಕುಮಟಾ— ಹೊನ್ನಾವರ-ಭಟಕಳ ತಾಲೂಕುಗಳಲ್ಲಿ [illegible] ಶಿಕ್ಷಣ ಕೊಡುವ ವರ್ಗಗಳನ್ನು ತೆರೆಯಬೇಕೆಂದು ಗೊತ್ತಾಯಿತು. ಇತರ ಕೆಲಸಗಳಾಗಿ [illegible] ಸಭೆಯು ಮುಕ್ತಾಯವಾಯಿತು

ಹಳಗೆ— (ತಾ ೧–೧೨–೩೮) ಇಲ್ಲಿಯ ಕನ್ನಡ ಶಾಲೆಯ ಮುಖ್ಯಾಧ್ಯಾಪಕರಾಗಿದ್ದ ರಾ ವೈಕುಂಠ [illegible] ಪ್ರಭುರವರಿಗೆ [illegible] ಶಾಲೆಗೆ ವರ್ಗವಾಗಿದೆ ರಾ ಪ್ರಭುಗಳು ಇಲ್ಲಿ ಬಂದು ೫॥ ವರ್ಷಗಳಾದವು ಇವರು ತಮ್ಮ ಕಾರಕಿರ್ದಿಯಲ್ಲಿ ಶಾಲೆಯನ್ನು ಬಹಳ ಸುಧಾರಿಸಿ [illegible]ದ್ದರು. ಹುಡುಗರ ಸಂಖ್ಯೆಯೂ ಶಿಕ್ಷಕರ ಸಂಖ್ಯೆಯೂ ಹೆಚ್ಚಿತ್ತು. ಜನರಲ್ಲೂ ವಿದ್ಯಾರ್ಥಿ ವರ್ಗದಲ್ಲೂ ಇವರು ಬಹಳ ಲೋಕಪ್ರಿಯರಾಗಿದ್ದರು ಅದ್ದರಿಂದ ಅವರಿಗೆ ಊರಲ್ಲಿ ಅಲ್ಲಲ್ಲಿ ಸತ್ಕಾರಗಳಾಗುತ್ತಿವೆ. ಹೊನ್ನೆ ಬುಧವಾರ ಸಾರ್ವಜನಿಕ ತಾಂಬೂಲ ಸಮರ್ಪಣೆಯೂ ಜರುಗಿತು

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ಣಿಕ

ಎಗ್ಯೂಮಿಕ್ಸ್ಚರ್ ಉಪಯೋಗಿಸಿರಿ !

ಸಿಕ್ಕ ಸಿಕ್ಕ ಔಷಧ ಸೇವಿಸಿ, ಜ್ವರವಂಥ ಬೇನೆಯನ್ನು ಉದ್ದ ಬೆಳಸಬೇಡಿರಿ. ಬೆಲೆ ಆಣೆ ೧೨.

ಇಂಡೋಬಾಮ್

ತಲೆಶೂಲಿ, ಸ್ನಾಯೂಶೂಲಿ, ಸಂಧಿವಾತ, ವಿಷಾರಿ ನೊಣಗಳ ಕಡಿತ ಮೊದಲಾದ ವಿಕಾರಗಳು ತುಸು ಮಾಲೀಸದಿಂದ ಒಳಿತಾಗಿ ವಾಸಿಯಾಗುತ್ತವೆ. ಬೇರೆ ಬಾಮುಗಳಿಂದಾಗುವಂತೆ ಅನಾವಶ್ಯಕ ಉರಿ ಹತ್ತುವದಿಲ್ಲ ಬೆಲೆ ಆ ೮.

ಎಲ್ಲ ಅಂಗಡಿಗಳಲ್ಲಿ ಸಿಗುತ್ತವೆ, ಸಿಗದಿದ್ದರೆ ನಮಗೆ ಬರೆಯಿರಿ.

ಕರ್ಣಿಕ ಬ್ರದರ್ಸ,

ಗಿರಗಾಂವ, ಮುಂಬಯಿ, ನಂ ೪.

NOTICE

RE: LOST POLICY.

Policy No.95644 in the National Insurance Company, Ltd. on the life of Mr. Mahadev Timmanna Bhat . Madguni having been lost, notice is hereby given that failing any objection to reach the Company within one month of this date from any intereste] party with production of the Policy, the Company will proceed in matters pending concerning the policy.

K. M. NAIK,
Manager,
The National Insurance Co., Ltd.
7, Council House, St , Calcutta.

25,000 ವಿವಿಧ ಶಬ್ದಗಳುಳ್ಳ ' ಹೊಸ ನಿಘಂಟು!

ಸ್ಟುಡಂಟ್ಸ ಮೊಡರ್ನ ಪ್ರೆಕ್ಟಿಕಲ್ ಡಿಕ್ಷನರಿ.

ಇಂಗ್ಲಿಷ ಕನ್ನಡ

ಬರೆದವರು.— ವೈದ್ಯಭೂಷಣ ಕೆ ಭಾರದ್ವಾಜ ವಿದ್ಯಾಭೂಷಣ ಮೈಸೂರ ಯುನಿವರ್ಸಿಟಿ ವ್ಹಾಯಿಸ ಚಾನ್ಸಲರರ ಮುನ್ನುಡಿ ಯುಳ್ಳ, ಸರ್ ಎಮ್. ವಿಶ್ವೇಶ್ವರಯ್ಯನವರು ಹೊಗಳಿದ, ಮುದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ। ಯು ರಾಮರಾಯರು ಹರಸಿದ ಈ ಡಿಕ್ಷನರಿಯು ಇದೀಗ ಕರ್ನಾಟಕದಲ್ಲಿ ಹೊಸ ಸಾಹಸ ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕಂಥದ್ದು. ಬೆಲೆ ಕೇವಲ ೨ ರೂ ಟ.ಖ. ಪ್ರತ್ಯೇಕ. ಸಿಗುವಸ್ಥಳ.— ದಿ ನ್ಯೂ ಸಪ್ಲೈ ಏಜನ್ಸಿ, ಕುಮಟಾ.

SERVIC~ & PROMPTNESS

A Feature and a Fact with the "POPULAR"

M. VENKATESH PAI,
Banker.

Sri Krishna Bhavan,
Mangalore.
25th July, 1938.

The Managing Director,
The Popular Insurance Co , Ltd ,
MANGALORE

Policy No 40.

Dear Sir

I very much appreciate your promptness in settling the claim in less than a week in respect of the above policy on the life of my late lamented Father in law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs. 2553-7-0 is delivered to the claimant and all within the short period of 6 days

This spirit of service and promptitude evinced by the 'POPULAR' is highly laudable and it is but proper that the Company should be 'POPULAR.' It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully,
(Sd.) M. Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: *PROSPECT CHAMBERS, Hornby Road, BOMBAY.*

ಇತ್ಲ್ಲೊಂದು ಸರಕಾರಿ ಆಯುರ್ವೇದ ಪದ್ಧತಿಯ ಚಿಕಿತ್ಸಾಲಯ ಸ್ಥಾಪನೆಯಾಗುವದೆಂದು ಸುದ್ದಿ ಬಂದಿತ್ತು. ತಾಲೂಕ ಅಧಿಕಾರಿಗಳೂ ಕೂಡ ಇಲ್ಲಿ ಚಿಕಿತ್ಸಾಲಯ ಅವಶ್ಯವಿರುತ್ತದೆಂದು ಶಿಫಾರಸು ಮಾಡಿದ್ದರಾಗಿ ತಿಳಿಯುತ್ತದೆ. ಗ್ರಾಮ ಸುಧಾರಣಾ ಕಮಿಟಿಯವರು ಸಹ "ಇಲ್ಲೊಂದು ದವಾಖಾನೆ ಬೇಕು, ೩ ವರ್ಷಗಳ ವರೆಗೆ ಭಾಡಿಗೆ ಮನೆ ತೆಗೆಸಿ ಕೊಡುತ್ತೇವೆ; ಒಂದೇ ಗಂಟಿನಿಂದ ಹಣ ಕೊಡಲು ಸಾಧ್ಯವಿಲ್ಲ, ರೋಗಿಗಳಿಂದ ದಿನ ೧ಕ್ಕೆ ಒಂದಾಣೆಯಂತೆ ಎತ್ತುವಳಿ ಮಾಡುತ್ತೇವೆ; ೩ ವರ್ಷಗಳ ನಂತರ ಹೊಸ ಇಮಾರತು ಕಟ್ಟಿಸಿಕೊಡುತ್ತೇವೆ" ಎಂದು ಅರ್ಜಿ ಮಾಡಿದ್ದರು. ಆದರೆ ಈಗ ಮಂಕಿಯಲ್ಲಿ ದವಾಖಾನೆ ತೆರೆಯಲ್ಪಡುವದೆಂದು ತಿಳಿಯುತ್ತದೆ. ಮಂಕಿ ಊರು ಹಲವು ಹಳ್ಳಿಗಳ ನಡುವೆ ಇರುವ ಕೇಂದ್ರ ಸ್ಥಳ. ಈ ಊರಲ್ಲಿ ೭೦೦೦ ಜನ ವಸ್ತಿಯಿದೆ. ಇಂಥ ಕೇಂದ್ರವರ್ತಿ ಸ್ಥಳದಲ್ಲಿ ದವಾಖಾನೆ ಇರುವದು ಎಷ್ಟು ಅವಶ್ಯವಿರುತ್ತದೆಂಬದನ್ನು ಜಿಲ್ಲಾಧಿಕಾರಿಗಳು ಆಲೋಚಿಸಬೇಕಾಗಿ ನಮ್ಮ ಸೂಚನೆಯಿದೆ.

ಭಟಕಳ— ತಾ. ೧೭-೧೧-೩೮ಕ್ಕೆ ಶ್ರೀ ಹನುಮಂತ ದೇವರ ಗುಡಿಯಲ್ಲಿ ತರುಣರ ಸಭೆಕರೆದವರು ತಾವು ಒಬ್ಬರೇ ಅಲ್ಲವೆಂತಲೂ, ಸಭೆ ಕರೆದವರಲ್ಲಿ ನ್ಯೂ ಇಂಗ್ಲಿಷ ಶಾಲೆಯ ಮುಖ್ಯಾಧ್ಯಾಪಕ ರಾ। ಕಾಮತರೂ ಇದ್ದರೆಂತಲೂ, ಕೊಂಗ್ರೆಸ್ಸಿನ ರಾಜಕಾರಣದಲ್ಲಿ ಸೇರಲೊಪ್ಪದ ಉತ್ಸಾಹೀ ತರುಣರಿಗೆ ಸಾಮಾಜಿಕ ಮುಂತಾದ ಕ್ಷೇತ್ರಗಳಲ್ಲಿ ಕಾರ್ಯ ಮಾಡಲು ಇಂಬು ಮಾಡಿಕೊಡುವ ಬಗ್ಗೇನೇ "ಹಿಂದುತರುಣಸಂಘ"ದ ಸ್ಥಾಪನೆಯ ಕಲ್ಪನೆಹೊರಟಿತ್ತೆಂತಲೂ, ಸಂಘಸ್ಥಾಪನೆಯಿಂದ ಜಾತೀಯತೆಯುಳಿಸಿಪ್ಪ ಭಾವನೆ ಉತ್ಪನ್ನವಾಗುವದೆಂಬದು ನಿಜವಲ್ಲೆಂತಲೂ, ಸಭೆಯಲ್ಲಿ ಇಬ್ಬ ತರುಣರು ಗೊಂದಲ ಉಂಟುಮಾಡಿದ್ದರಿಂದ ಮತ್ತು ಬೇರೆಯವರಿಗೆ ಮಾತಾಡಲಿಕ್ಕೆ ಆಸ್ಪದ ಕೊಡದ್ದರಿಂದ ಸಭೆಯು ಅಪೂರ್ಣಾವಸ್ಥೆಯಲ್ಲೇ ವಿಸರ್ಜನೆ ಹೊಂದಿತೆಂತಲೂ ರಾ॥ ಆರ್ ಎಸ್. ಶಾಸ್ತ್ರಿಯವರು ತಿಳಿಸುತ್ತಾರೆ.

["ಹಿಂದು ತರುಣ ಸಂಘ" ಎಂಬ ಹೆಸರೇ ಜಾತೀಯತೆಯನ್ನು ಸೂಚಿಸುತ್ತದಲ್ಲವೇ ? ಸಭೆಯ ನಿಮಂತ್ರಣ ಪತ್ರಿಕೆಯಲ್ಲಿ ಸಹ ಹಿರಿಯರ ಮೇಲೆ ದೋಷಾರೋಪಣೆ ಮಾಡಲಾಗಿತ್ತೆಂದೂ ನಮ್ಮ ಸುದ್ದಿಗಾರರು ತಿಳಿಸುತ್ತಾರೆ. ಈ ಕುರಿತು ರಾ। ಶಾಸ್ತ್ರಿಯವರ ಅಂಬೋಣವೇನು ?

— ಸಂ. ಕಾ. ವೃ]

ಶಿರಸಿ— (ತಾ. ೪-೧೨-೩೮) ಕಳೆದ ಸೋಮವಾರ ನಿಲೇಕಣಿಯ ಶ್ರೀ ಸುಬ್ರಹ್ಮಣ್ಯ ದೇವರ ರಥೋತ್ಸವವು ಸಾಂಗವಾಗಿ ನೆರವೇರಿತು. ಮಂಗಳವಾರ ರಾತ್ರಿ ಕೆಲ ತರುಣರು "ವಿದ್ಯಾಹರಣ" (ಕನ್ನಡ) ನಾಟಕವನ್ನು ಆಡಿ ತೋರಿಸಿದರು.

ನಿಲೇಕಣಿ ರಥೋತ್ಸವದ ಕಾಲಕ್ಕೆ ಈ ಊರ ಅಗಸೇ ಬಾಗಿಲದ ಸಮೀಪ ಚಿಕ್ಕದೊಂದು ಅಪಘಾತವಾಯಿತು. ಆಳು ಮಗನೊಬ್ಬನು ೨-೩ ಹುಡುಗರಿಗೆ ಕರಕೊಂಡು ತೇರು ನೋಡಲಿಕ್ಕೆ ಹೋಗುತ್ತಿದ್ದನು. ಅಗಸೇ ದಾಗಿಲದ ಬಳಿ ಬರುವಷ್ಟರಲ್ಲಿ ಎದುರಿನಿಂದ ಮಾನು ತುಂಬಿದ ಮೋಟಾರ ಬಂಡಿಯೊಂದು ವೇಗದಿಂದ ಬಂತು. ಒಬ್ಬ ಹುಡುಗನು ಬಂಡಿಯನ್ನು ತಪ್ಪಿಸಲಿಕ್ಕೆ ಅತ್ತಿತ್ತ ಓಡಾಡ ಹತ್ತಿದನು. ಡ್ರಾಯವರನೂ ಅತನಿಗೆ ತಪ್ಪಿಸಲು ಗಾಡಿಯನ್ನು ಎಡಕ್ಕೆ ತಕ್ಕೊಂಡು ಅಲ್ಲಿರುವ ಒಂದು ಅಂಗಡಿಯ ಮೆಟ್ಟಿಗಳ ಮೇಲೆ ಬಂಡಿಯನ್ನು ಏರಿಸಿದನು. ಇಷ್ಟಾದರೂ ಹುಡುಗನು ಬಂಡಿಯ ಗಾಳಿ-ಪೆಟ್ಟು ತಗಲಿ ಸ್ಮೃತಿ ತಪ್ಪಿ ನೆಲಕ್ಕೆ ಬಿದ್ದನು. ನೆರೆದ ಜನರು ಉಪಚಾರ ಮಾಡಿ ಅವನಿಗೆ ಮನೆಗೆ ಮುಟ್ಟಿಸಿದರು. ಮಾನು ಮಾರಾಟಕ್ಕಾಗಿ ಸಿದ್ದಾಪುರಕ್ಕೆ ಹೊರಟ ಬಂಡಿಯು ಈ ಅಪಘಾತದ ಮೂಲಕ ಅಂದು ಸಿರ್ಸಿಯಲ್ಲೇ ಉಳಿಯಬೇಕಾಯಿತು.

ಶ್ರೀ ವಿಷ್ಣು ಮಠದ ಜೀರ್ಣೋದ್ಧಾರಕ್ಕೆ ಧನಸಹಾಯ ಮಾಡುವ ನೆಸೆಯಿಂದ ಶ್ರೀವಿಷ್ಣು ವೆಂಕಟೇಶ ಸಭೆಯವರು "ಅಜನ್ಮ ಕುಮಾರ" ಎಂಬ ನಾಟಕ ಆಡಿತೋರಿಸುವವರಿದ್ದಾರೆ.

ತಾ. ೨೫-೧೧-೩೮ನೇಗೆ ಸೀನಿಯರ್ ಅಸಿಸ್ಟಂಟ ಡೆಪ್ಯುಟಿ ಇನ್ಸಪೆಕ್ಟರ ರಾ॥ ಮನಗೋಳಿಯವರು ರಾ॥ ರಾಮಾನಂದ ಕಾಮತರ ವ್ಯಾಯಾಮ ಶಾಲೆಗೆ ಭೆಟ್ಟಿ ಕೊಟ್ಟು ಶಾಲೆಯ ಕಾರ್ಯವನ್ನು ತುಂಬಾ ಹೊಗಳಿದರು.

ಸಿದ್ದಾಪುರ— ಸಿದ್ದಾಪುರ ಕನ್ನಡ ಶಾಲೆಗೆ ರಾ॥ ಭಕ್ತಪ್ಪಾ ಕೃಷ್ಣಪ್ಪಾ ಶಾಮ್ಭಯ್ಯನ, ಡಿ. ಬಿ. ನಗಳೆ ವಗೈರೆ ಕೆಲವು ಗೃಹಸ್ಥರು ೧ ಕಟ್ಟಿಗೆ ಸ್ಟೂಲ, ೧ ಗಡಿಯಾರ, ೧ ಬಾಕ್ಸು ಮತ್ತು ಮೇಜಿನವಸ್ತ್ರ ಕೊಟ್ಟಿರುತ್ತಾರೆಂತಲೂ, ಸಬ್ ರಜಿಸ್ಟ್ರಾರರಾದ ರಾ॥ ದೇಸಾಯಿಯವರು ೧೧ ವರ್ಷದಿಂದ ಕೆಲವು ಬಡ ಹುಡುಗರಿಗೆ ಫೀ ಹಣವನ್ನೂ ವಸ್ತ್ರಗಳನ್ನೂ ಪೂರೈಸುತ್ತಿದ್ದರೆಂತಲೂ ಶಾಲೆಯ ಮುಖ್ಯಾಧ್ಯಾಪಕರು ತಿಳಿಸುತ್ತಾರೆ.

ಕಾರವಾರ— (ತಾ. ೨-೧೨-೩೮) ಈ ಡಿಸ್ಟ್ರಿಕ್ಟಿನ ಆ॥ ಕಲೆಕ್ಟರರಾದ ರಾ॥ ವೆಂಕಟಪ್ಪಯ್ಯನವರು ಬಹು ಅಸ್ವಸ್ಥರಿದ್ದರು; ಕಫಜ್ವರ-ವಿಷಮಜ್ವರಗಳಿಂದ ಬಳಲುತ್ತಿದ್ದರು, ಅವರ ಪ್ರಕೃತಿ ಚಿಂತಾಜನಕವಾಗಿತ್ತು. ಗಾಬರಿಯಿಂದ ಆಪ್ತೇಷ್ಟರು ಸಹ ಬಂದಿದ್ದರು. ಆದರೆ ದೈವಕೃಪೆಯಿಂದಲೂ ನಿಷ್ಣಾತ ವೈದ್ಯರ ಚಿಕಿತ್ಸೆಯಿಂದಲೂ ಅವರ ಪ್ರಕೃತಿ ಈಗ ಬಹುಮಟ್ಟಿಗೆ ಸುಧಾರಿಸಿದೆ. ಶೀಘ್ರವೇ ಅವರ ಪ್ರಕೃತಿ ಸುಧಾರಿಸಿ ಮುಂಚಿನಂತೆ ಕಾರ್ಯಾಸಕ್ತರಾಗಲೆಂದು ಎಲ್ಲರೂ ಹಾರೈಸುತ್ತಾರೆ. (ಪುರವಣಿ ನೋಡಿರಿ)

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು !	ಮಿತವಾದ ದರಗಳು!	ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲುಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! = ನಿಶ್ಚಿತ ಸಮಯ!! = ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು ?

THE HANUMAN TRANSPORT CO., LTD.,
UDIPI. S. KANARA.

ಶ್ರೀ

'ದಶಮೂಲಾರಿಷ್ಟ.'

ದಶಮೂಲಾರಿಷ್ಟ

ಇದು ಬಹು ಹಳೆಯದಾಗಿ ಎಲ್ಲ ಆಯುರ್ವೇದ್ಯ ಶಾಸ್ತ್ರಗಳಲ್ಲಿ ಹಾಗೂ ಎಲ್ಲಾ ಧಾರ್ಮಸಿಗರಲ್ಲೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕೊಡದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಕಡಿಮೆ ಮಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು ಗುಲ್ಮ, (ವಾತ, ಕ್ಷಯ, ವಾಂತಿ) ಕಾಮಿಲೆ ಮೊಂಡುರೋಗ ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಾಶಯ ಕಟಿ ಇದ್ದದೆ ಮಕ್ಕಳಿಲ್ಲದೇ ಇರುವವರಿಗೆ, ಬ್ಯಾಕಿ ಹೆಂಗಸರಿಗೆ ಪ್ರಸವ ಆದ ನಂತರ ಅಗು ವಿಕಾರಗಳಿಗೆ, ನಂತರ ವಿಕಾರಗಳಿಗೆ ಹಾಗೂ ಯಾವ ತರದ ವಾಯು ವಿಕಾರದಿಂದ ಕೊಟ್ಟೆ ... ರೋಗಗಳಿಗೆ ಅತ್ಯಂತವಾಗಿ ಉಪಕಾರಿಯಾದುದು

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿನಗಳವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಸದಾರೋಗ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡಬೇಕು

೧೨ ಔನ್ಸ ಬಾಟ್ಲಿ ಒಂದಕ್ಕೆ ರೂ ೧—೪—೦

,, ಬಾಟ್ಲಿ ಆರಕ್ಕೆ ರೂ ೬ ೧೨—೦

,, ಬಾಟ್ಲಿ ಹನ್ನೆರಡಕ್ಕೆ ರೂ. ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ವೃದ್ಧಿಸಂಜೀವನ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ. ಕನ್ನಡ)

ಶ್ರೀ ಮಹೇಶ್ವರ ಆಯೌಷಧಿ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಳಂತಿತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ

ABHRALOHA

ದೊರೆಯುವ ಸ್ಥಳ —

ಸಿಂದವಾರ – ಮೆಸರ್ಸ ಮುಜುಮದಾರ–ತಹಬೀಲದಾರ ಬ್ರದರ್ಸ

ಅಂಕೋಲಾ ಡಿಸ್ಪೆನ್ಸರಿ ಡಿಪೋ । ಕುಮಟಾ ದೇವಪ್ಪ ಅಯ್ಯನಾಯ್ಕ ॥ ಹೊನ್ನಾವರ – ಕಲ್ಯಾಣಪುರ ಬ್ರದರ್ಸ

ದಿ ಬೊಂಬೆ ಮ್ಯೂಚ್ಯುಅಲ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ... ಇದ್ದು, ಇದರ ಕಾರ್ಯದ ದರಗಳೂ, ... ಬಹಳ ... ಹಣವು ಸರಕಾರಿ ಪ್ರೊ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟಿ ... ಡಿಬೆಂಚರ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

... ಬೆನಿಫಿಟ್ ಎಂಬ ಸ್ಕೀಮು ವಿಮಾದಾರರಿಗೆ ಅತಿಶಯ ಲಾಭಕರವಾಗಿದೆ.

ಹೆಚ್ಚಿನ ಮಾಹಿತಿ ... ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents

D. K. Nayak Bros

K. N. Nayak

Honavar Agent

R. V. Prabhu

K. Padmanabha Rao & Sons.

BELGAUM

Chief Agents for

Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದು ೨೫ ವರ್ಷಗಳಿಂದ ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು, ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಹೋಲ್ಪಟ್ಟವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂಲರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦ ... ಡಜನ್ ಒಂದಕ್ಕೆ ರೂ ೨-೮-೦ ... ೦-೮-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋಸ್ಟ ಬಾ ೧೧೦, ಪಾರ್ಕಟೌನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 12th December, 1938.

ವರ್ಷ ೨೧

ಪತ್ರದ ವರ್ಗಣಿ.,
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रै ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೨೩

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ರತಿ
ಸಾಲಿನ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ 1-0-0
೮ ನಂತರ ಪ್ರತಿಸಾಲಿಗೆ 0-2 0
ತಿಂಗಳ ಸಾಲು ಎಷ್ಟು
ಕೊಡುತ್ತಿರುವರೋ ಆ ಮೂರ
ರಿಂದ ಅಷ್ಟು ಸಾಲುಗಳು ಬಿಡ
ಯಲ್ಪಡುವವು
ಬಾಕಿ ಜಾಹಿರಾತುಗಳ ಬಗೆ
ಪತ್ರದ್ವಾರ ಯಾ ಸಮಕ್ಷ ತಿಳಿ
ಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೨ ಮಾಹೆ ಡಿಶಂಬರ ಸನ್ ೧೯೩೮ನೇ ಇಸವಿ)

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns

Estd. 1906

RESOURCES
OVER A CRORE.

CANARA BANK,
LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ
ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938

The Agricultural & Industrial Bank, Ltd.

ಕೊಳೆ ರೋಗವೂ ಅದರ ನಿವಾರಣೋಪಾಯವೂ.

[ಲೇಖಕ ವಿಠ್ಠಲ ಅನಂತ ಹೊದ್ಕೆ, ಶಿರ್ಶಿ.]

ನಾನೇನು ತೋಟಿಗನಲ್ಲ ತೋಟದ ಬೇಸಾಯದ ಅನುಭವವೂ ನನಗಿಲ್ಲ ಆದರೆ ಒಮ್ಮೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಸುಖ-ಸಂಪತ್ತುಗಳಿಂದ ಮೆರೆಯುತ್ತಲಿದ್ದ ಎಷ್ಟೋ ತೋಟಿಗರು ಇಂದು ತೀರ ದೀನಾವಸ್ಥೆಯಲ್ಲಿ ದೇಶತ್ಯಾಗ, ಬಳಲಿ, ಬೆಂಡಾಗಿ, ದಿಕ್ಕು ತೋರದೆ ಕಂಗೆಟ್ಟು ಕಣ್ಣೀರಿಡುತ್ತಿರುವವನ್ನು ಕಂಡು ಕರುಳು ಕರಗದವರಿಲ್ಲ ನಾನೊಬ್ಬನೆನ್ನಬಹುದು ಇಂಥ ಅವರ ದುಃಸ್ಥಿತಿಗೆ ಕಾರಣವಾದ ಎಷ್ಟೋ ಸಂಗತಿಗಳಲ್ಲಿ ಕೊಳೆ ರೋಗಕ್ಕೆ ಅಗ್ರಸ್ಥಾನವನ್ನು ಕೊಡಬಹುದು ಯಾಕೆಂದರೆ ತೋಟಿಗರ ಧನೋತ್ಪಾದನದ ಏಕಮೇವ ಕಾರ್ಯಕ್ಷೇತ್ರವಾಗಿ, ಹಿಂದಕ್ಕೆ ಕಾಮಧೇನುವಿನಂತೆ ಎಣಿಸಲ್ಪಡುತ್ತಲಿದ್ದ ತೋಟಿಗಳು ಬಚ್ಚಂಭಟ್ಟರ ಬರಡಾಕಳಿನಂತೆ ತಲೆಭಾರವೆನಿಸುತ್ತಿವೆ ಆಕಳು ಹಿಂಡುವದಿಲ್ಲವೆಂತ ಉಪವಾಸ ಹಾಕಿ ಅದನ್ನು ಕೊಲ್ಲುವದುಂಟೇ? ಅದರಂತೆಯೇ ಹಿರಿಯರು ನಾಶ ಮಾಡುತ್ತ ಬಂದಿರುವ ತೋಟಗಳನ್ನು ಹಾಳುಗೆಡಹುವದೆಂದರೆ ತೋಟಿಗರಿಂದ ಆಗದ ಮಾತು ಒಂದು ವೇಳೆ ಹಾಗೆ ಯಾರಾದರೂ ಮಾಡಲು ಬಯಸಿದರೆ ಮುಂದೆ ಅನ್ಯ ಉದ್ಯೋಗವೇನೆ ಬಡೇ ಪ್ರಶ್ನೆ! ಆದ್ದರಿಂದ "ಗತಾನುಗತಿಕೋ ಲೋಕಃ" ಎಂಬಂತೆ ಫಲದ ಕಡೆಗೆ ಲಕ್ಷ ಕೊಡದೆ, ಹಿರಿಯರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತ ನಡೆದಿರುವ ಎಷ್ಟೋ ತೋಟಿಗರ ಕರ್ಮನಿಷ್ಠೆಯು ಪ್ರಶಂಸನೀಯವಾಗಿದೆ ಇದು ಅವರ ದೋಷವಲ್ಲ ಪರಿಸ್ಥಿತಿಯು ದಾಸರಂತಿಪ್ಪ ಮೂಲಕ ಅವರು ಹಾಗೆ ಮಾಡಲೇಬೇಕಾಗಿದೆ ಹಿಂದಕ್ಕೆ ನಂದನವನದಂತೆ ಶೋಭಿಸುತ್ತಲಿದ್ದ ಎಷ್ಟೋ ತೋಟಿಗಳು ಈಗ ಹಾಳುಸುರಿಯುತ್ತಿವೆ ತೋಟಗಳ ಅಡಿಕೆಯೇ ಪ್ರಧಾನ ಬೆಳೆಯಾಗಿದ್ದು, ಫಲಭರಿತವಾಗಿ ತೋರುತ್ತಿದ್ದ ಅಡಿಕೆಯ ಗಿಡದ ಬುಡದಲ್ಲಿ ದಿನ ದಿನಕ್ಕೂ ಮಳೆಗಾಲದಲ್ಲಿ ಕೊಳೆ ರೋಗದ ಮೂಲಕ ರಾಶಿ ರಾಶಿಯಾಗಿ ಉದುರಿಬಿದ್ದ ಅಡಿಕೆಯನ್ನು ಕಂಡು "ಕೈಗೆ ಬಂದದ್ದು ಬಾಯಿಗೆ ಬರಲಿಲ್ಲವಲ್ಲಾ" ಎಂತ ಬಡ ದುರ್ದೈವಿ ತೋಟಿಗನು ಮರಮರನೆ ಮರಗುವದು ಸ್ವಾಭಾವಿಕವೇ ಈ ರೀತಿಯಲ್ಲಿ ತೋಟಿಗರ ಹೀನಾವಸ್ಥೆಗೆ ಕಾರಣವಾದ ಈ ಭಯಂಕರ ರೋಗದ ಕುರಿತು ಮುಂಬಯಿ ಸರಕಾರದವರು ಶಿರ್ಶಿಯಲ್ಲಿ "ಕೊಳೆ ರೋಗದ ಸಂಶೋಧನಾಲಯ"ವನ್ನು ತೆರೆದಿದ್ದು ಅಲ್ಲಿಯ ತಜ್ಞರಿಗೆ ಬೆಟ್ಟಿಯಾಗಿ, ಅವರಿಂದ ಸಂಗ್ರಹಿಸಿದ ಮಾಹಿತಿಗಳಿಂದಲೇ ಈ ಲೇಖನವನ್ನು ಬರೆದದ್ದಾಗಿದೆ ಮತ್ತು ತೋಟಿಗ ಬಾಂಧವರು ಈ ರೋಗದ ಕುರಿತು ತಮ್ಮಲ್ಲಿ ರೂಢವಾಗಿರುವ ಹಳೇ ವಿಚಾರಗಳನ್ನು ಈ ಹೊಸ ವಿಚಾರಗಳನ್ನು ಚಿಕಿತ್ಸಕಬುದ್ಧಿಯಿಂದ ಅಂದರೆ ನಿಷ್ಪಕ್ಷಪಾತ ದೃಷ್ಟಿಯಿಂದಲೂ ಪರಿಶೀಲಿಸಿ, ವಿಚಾರ ವಿನಿಮಯದ ಮೂಲಕ ಲಾಭ ಪಡೆಯಲೆಂಬದೇ ಈ ಲೇಖದ ಮೂಲ ಉದ್ದೇಶವಾಗಿದೆ

ರೋಗದಿಂದ ಉದುರಿದ ಅಡಿಕೆಯು ಸ್ವಾಭಾವಿಕವಾಗಿ ಮುಂದೆ ನಾನಾ ತರದ ಬಾಹ್ಯ ಆಘಾತಗಳಿಗೆ ಒಳ್ಪಟ್ಟು ಕೊಳೆಯಲಾರಂಭಿಸುತ್ತದ್ದು, ರೋಗದಿಂದಲೇ ಅಡಿಕೆ ಕೊಳೆಯುತ್ತದೆಂಬ ಭಾವನೆಯಿಂದ ತೋಟಿಗರು ಈ ರೋಗಕ್ಕೆ ಕೊಳೆ ರೋಗವೆಂತ ಹೆಸರು ಕೊಟ್ಟಂತೆ ಕಾಣುತ್ತದೆ ಕೆಲ ತೋಟಿಗರು ಈ ರೋಗದ ೩ ಭೇದಗಳನ್ನು ಕಲ್ಪಿಸಿದ್ದಾರೆ (೧) ನೀರು ಕೊಳೆ— ಇದು ಮಳೆಯ ಹೊಡತದಿಂದ ಬರುತ್ತದೆಂತಲೂ ಇದಕ್ಕೆ ಕೊಟ್ಟೆ ಕಟ್ಟುವದೇ ರಕ್ಷಣೋಪಾಯವೆಂತಲೂ ಇವರ ಹೇಳಿಕೆ (೨) ಭೂಕೊಳೆ ಕೊಳೆ— ಇದು ಭೂಮಿಯಿಂದ ನಂಜಿನ ರೂಪದಲ್ಲಿ ಅಡಿಕೆಯ ಗಿಡವನ್ನು ಬೇರುಗಳ ಮೂಲಕ ಪ್ರವೇಶಿಸಿ, ತಿರುಳನ್ನು ಕೆಡಿಸಿ, ಮರದ ತಲೆಗೆ ಮುಟ್ಟಿ, ಕೊನೆಯನ್ನು ಸೇರಿ ಹಾನಿ ತರುತ್ತದೆಂತಲೂ, ಇದಕ್ಕೆ ಬೇಸಾಯದ ಸುಧಾರಣೆಯೇ ನಿವಾರಣೋಪಾಯದ ಮಾರ್ಗವೆಂತಲೂ ಇವರ ಅಭಿಪ್ರಾಯ

ನಿಜವಾಗಿ ನೋಡಿದರೆ ಕೊಳೆ ರೋಗವು ಅಡಿಕೆ-ಕಾಯಿಗಳ ಹೊರಗೂ ಒಳಗೂ ಬೆಳೆದು ಜೀವಿಸುವ ಒಂದು ಪರೋಪಜೀವಿಯಾದ ಸಸ್ಯಾಣುವಿಂದ (Fungus) ಆಗುತ್ತದೆ ಎಷ್ಟೋ ಸಾರೆ ಇದು ಕೊನೆಯ ಮೂಲಕವಾಗಲಿ, ಹಾಳೆಗಳ ಮೂಲಕವಾಗಲಿ, ಮರದ ಸುಳಿಯನ್ನು ಸೇರಿ, ಚಂಡೆಯನ್ನು ಒಣಗಿಸಿ ಬಿಡುವದು. ಆಹಾರವನ್ನು ಸ್ವತಃ ನಿರ್ಮಿಸಿಕೊಳ್ಳಲು ಶಕ್ತಿಯಿಲ್ಲದೆ, ತಮ್ಮ ಜೀವನ ಪಥವನ್ನು ಬೇರೆ ಜೀವಿಗಳ ಮೂಲಕ ನಡಿಸುವ ಜೀವಿಗಳಿಗೆ ಶಾಸ್ತ್ರಜ್ಞರು ಪೂರ್ಣ ಪರೋಪಜೀವಿಗಳೆಂದು (Parasites) ಯೆನ್ನುತ್ತಾರೆ ಕೊಳೆ ರೋಗಕ್ಕೆ ಕಾರಣವಾದ ಸಸ್ಯಾಣುವು ಪೂರ್ಣ ಪರೋಪಜೀವಿಗಳ ವರ್ಗಕ್ಕೆ ಸೇರಿದ್ದಿರುತ್ತದೆ ಸಜೀವ ಅಥವಾ ನಿರ್ಜೀವ ವಸ್ತುಗಳೆರಡರ ಮೇಲೂ ಜೀವಿಸಬಲ್ಲ ಸಸ್ಯಾಣುಗಳಿಗೆ ಸ್ಯಾಪ್ರೊಫ್ಯಾಟ್ಸ (Saporphytes) ಅನ್ನುತ್ತಾರೆ ಇದಕ್ಕೆ ಹಸಿ ಕೊಟ್ಟಿಗೆ, ರೊಟ್ಟಿ, ತಂಪಾದ ಗೋಡೆ, ಚರ್ಮ, ಕೊಳೆಯುತ್ತಿರುವ ಕಟ್ಟಿಗೆಯ ತುಂಡು ಮೊದಲಾದವುಗಳ ಮೇಲೆ ಬೆಳೆಯುವ ಬುರುಸಿನಂತೆ ಕಾಣುವ ಸಸ್ಯಾಣುಗಳನ್ನು ಉದಹರಿಸಬಹುದು ಅಲ್ಲದೆ ತಿಪ್ಪೆಯ ಮೇಲೆ ಬೆಳೆಯುವ ಅಣಬೆಗಳೂ, ಮಾವಿನ ಮರದ ಮೇಲೆ ಬೆಳೆಯುವ ಬದನಿಕೆಯೂ ಕೊಳೆ ರೋಗದ ಸಸ್ಯಾಣುಯಂತೆ ಶಿಲೀಂಧ್ರ ಜಾತಿಗೆ (Mycology) ಸೇರಿರುವವು ಈ ತರದ ಜೀವಿಗೆ ಸೆಮಿಪ್ಯಾರಾಸ್ಯಾಟ (Semi parasite) ಅನ್ನುವರು ಬದನಿಕೆಯು ಮಾವಿನ ಮರದ ಮೇಲೆ ಬೇರೂರಿ, ತನಗೆ ಬೇಕಾಗಿರುವ ಆಹಾರಾಂಶಗಳನ್ನು ಹೀರಿ, ತಾನು ಆಶ್ರಯಿಸಿರುವ ಮಾವಿನ ಮರವನ್ನು ನಿಃಸತ್ವಗೊಳಿಸಿ ಅದರ ಬೆಳವಣಿಗೆ ಮತ್ತು ಫಲಕ್ಕೆ ಧಕ್ಕೆಯನ್ನುಂಟು ಮಾಡುವಂತೆ, ಕೊಳೆ ರೋಗದ ಸಸ್ಯಾಣುವು ಅಡಿಕೆ ಕಾಯಿಗಳನ್ನು ಹೊಕ್ಕು, ಆಹಾರವನ್ನು ಸವಿದು, ಅಲ್ಲಿಯೆ ತಾನಾಗಿ ಬೆಳೆದು ರೋಗಾವಸ್ಥೆಯನ್ನು ಉಂಟುಮಾಡುವದು ಪರಾಶ್ರಿತ ಜೀವಿಗಳು ಪ್ರಕೃತಿಯಲ್ಲಿ ತಮಗೆ ಬೇಕಾದ ಜೀವಿಗಳ ಮೇಲೆ ಬೆಳೆಯುವದೇ ಹೊರತು ಎಲ್ಲ ಜೀವಿಗಳ ಮೇಲೆ ಬೆಳೆಯುವದಿಲ್ಲ ಒಂದುವೇಳೆ ತಮಗೆ ಬೇಕಾದ ಜೀವಿಯು ಸಿಗದಿದ್ದಲ್ಲಿ ಸತ್ತುಹೋಗುವದೇ ಹೊರತು ಬೇರೆ ಆಹಾರದ ಮೇಲೆ ಜೀವಿಸಲಾರವು ಮತ್ತು ಕೊಳೆ ರೋಗದ ಸಸ್ಯಾಣುವು ಇಂತಹ ಜೀವಿಗಳಲ್ಲೊಂದಾಗಿದೆ

ಯಾವ ರೋಗವೇ ಆಗಲಿ, ಅದಕ್ಕೆ ಅನುಕೂಲವಾದ ವಾತಾವರಣದಲ್ಲಿ ಪ್ರಬಲವಾಗುವದು ಸಹಜವು ಹವಾಮಾನದ ಶೀತಾಂಶವು ಮಳೆಗಾಲದಲ್ಲಿ ಹೆಚ್ಚಾಗುವದರಿಂದ ರೋಗದ ಉತ್ಪತ್ತಿಗೂ, ಬೆಳವಣಿಗೆಗೂ, ಪ್ರಸಾರಕ್ಕೂ ಅನುಕೂಲವಾಗುತ್ತದೆ ಆದ್ದರಿಂದ ಮಳೆಗಾಲವು ಪ್ರಾರಂಭವಾದ ಕೆಲ ದಿನಗಳ ನಂತರ ಸಾಮಾನ್ಯವಾಗಿ ಕೊಳೆ ರೋಗವು ತೋಟದ ಕೆಲವೆಡೆಗಳಲ್ಲಿ ಕಾಣಿಸಿಕೊಳ್ಳುವದು. ಅಡಿಕೆಯ ಕಾಯಿಗಳು ಉದುರುವದೇ ರೋಗದ ಪೂರ್ವ ಲಕ್ಷಣವು ಮೊದಮೊದಲು ಉದುರಿದ ಅಡಿಕೆಗಳು ತೊಟ್ಟಿನ ಹತ್ತಿರ ನೀರು ಸೋಂಕಿದಂತಾಗಿ ಸ್ವಾಭಾವಿಕವಾದ ಹಸುರು ಬಣ್ಣದ ಬದಲು ಮಾಸಿದ ಹಸುರು ಬಣ್ಣದಿಂದ ಕೂಡಿರುತ್ತವೆ ಈ ಕಾಯಿಗಳನ್ನು ತಂಪಾದ ಸ್ಥಳದಲ್ಲಿಟ್ಟರೆ, ಅವುಗಳ ಮೇಲೆಯೂ ಬುರುಸು ಬರುವದು ಕಂಡು ಬರುವದು ಈ ತರದ ಮೊದಲನೇ ಸ್ಥಿತಿಗೆ ನೀರುಗೊಳೆ ಎಂಬ ವಾಡಿಕೆ ಇದೆ ನಿಜವಾಗಿ ನೋಡಿದರೆ ಇದಕ್ಕೆ ಕಾರಣವಾದ ಸಸ್ಯಾಣುಯು ಅಡಿಕೆ ಕಾಯಿಗಳಲ್ಲಿ ಹೊರಗಿಂದ ಹೊಕ್ಕು ಒಳಗೆ ಬೆಳೆಯುತ್ತಿರುವ ಗುರುತು ಇದು ಮುಂದೆ ರೋಗಾಧಿಕ್ಯವಾದ ಪರಿಸ್ಥಿತಿಗನುಸರಿಸಿ, ಅಡಿಕೆ-ಕಾಯಿಗಳ ಮೇಲ್ಭಾಗದಲ್ಲಿ ಬುರುಸು ಕಾಣಿಸುವದಲ್ಲದೆ ಇಂತಹ ಕಾಯಿಗಳು ಹೇರಳವಾಗಿ ಉದುರಲಾರಂಭಿಸುತ್ತವೆ. ಇದಕ್ಕೆ ಬುರುಸುಗೊಳೆ ಎನ್ನುವರು

ಈ ಸಸ್ಯಾಣುಯು ನೋಡಲಿಕ್ಕೆ ಬರಿಯ ಕಣ್ಣಿಗೆ ಬುರುಸಿನಂತೆ ಕಂಡರೂ, ಇದರ ಸ್ವಲ್ಪ ಅಂಶವನ್ನು ಸೂಜಿಯಿಂದ ಕೆದರಿ, ಸೂಕ್ಷ್ಮದರ್ಶಕ ಯಂತ್ರದಿಂದ ನೋಡಿದರೆ, ನೂರಾರು ಸೂಕ್ಷ್ಮವಾದ ಎಳೆಗಳು ಬೇರೆ ಬೇರೆ ದಿಕ್ಕಿನಲ್ಲಿ ಒಂದರ ಮೇಲೊಂದು ಗುಂಪಾಗಿರುವದನ್ನು ಕಾಣಬಹುದು ಈ ಎಳೆಗಳೇ ಪರೋಪಜೀವಿಯಾದ ಈ ಸಸ್ಯಾಣುವಿನ ಶರೀರಗಳು ಇವು ಅಡಿಕೆ-ಕಾಯಿಗಳ ಹೊರಗೂ ಒಳಗೂ ಬೆಳೆದು, ಆಹಾರವನ್ನು ಹೀರಿ, ನಿಃಸತ್ವ ಮಾಡಿ, ಉದುರುವಂತೆ ಮಾಡುವವು ಇಂತಹ ಶರೀರದ ಕೆಲ ಭಾಗವನ್ನು ಯಂತ್ರದಿಂದ ನೋಡಿದರೆ, ಅಲ್ಲಲ್ಲಿ ಅಸಂಖ್ಯಾತವಾದ ಸಣ್ಣ, ಗೋಲಾಕಾರದ ಅಥವಾ ತತ್ತಿಯ ಆಕಾರದ ವಸ್ತುಗಳು ಕಾಣುವವು ಇವು ಸಸ್ಯಾಣುಯ ಸಂತಾನೋತ್ಪಾದಕ ಪಿಂಡಗಳು ಈ ಪಿಂಡಗಳು ಬಲಿತ ನಂತರ ಒಡೆದು, ಬೀಜಗಳಿಗೆ ಹೋಲಿಸಬಹುದಾದ, ನೀರಿನಲ್ಲಿ ಈಸಬಲ್ಲ, ಒಳಗೇ ಉತ್ಪತ್ತಿಯಾದ ಕೆಲ ಅಣುರೂಪ ವಸ್ತುಗಳನ್ನು ಹೊರಗೆ ಬಿಡುವವು ಈ ವಸ್ತುಗಳಿಗೆ ಸ್ಪೋರ್ಸ (Spores) ಎಂತಲೂ, ಪಿಂಡಗಳಿಗೆ ಸ್ಪೋರ್ಯಾಂಜಿಯಂ (Sporangium) ಕರೆಯುವರು ಒಂದು ಸಣ್ಣ ಪಿಂಡದಿಂದ ಇಂಥ ೨೦ ೪೦ ವಸ್ತುಗಳು ಉದ್ಭವಿಸುವವು ಈ ಅಣುರೂಪದ ವಸ್ತುಗಳಿಗೆ ಫ್ಲೆಜೆಲ್ಲಾ (Flagella) ಎಂತ ೨ ಎಳೆಗಳಿರುತ್ತದ್ದು, ಇವುಗಳ ಸಹಾಯದಿಂದ ಅವು ಈಸಲಾರಂಭಿಸುತ್ತವೆ ಒಂದು ಹನಿ ನೀರಿನಲ್ಲಿ ಇಂಥ ಸಾವಿರಾರು ಅಣುರೂಪ ವಸ್ತುಗಳಿರತಕ್ಕವೆ ಇವು ೧ ಘಂಟೆಯಿಂದ ೨೪ ಘಂಟೆಗಳ ವರೆಗೆ ಈಸಬಲ್ಲವು ಗಾಳಿಯು ಬೀಸುವ ದಿಕ್ಕಿನಲ್ಲಿಯೇ ಈ ರೋಗವು ಹೆಚ್ಚಾಗಿ ಹಬ್ಬಲು ಕಾರಣವೆಂದರೆ ಈ ವಸ್ತುಗಳು ಗಾಳಿಯಿಂದ ಮಳೆಯ ನೀರಿನ ಸಂಗಡ ಹಾರಿಯಾಗಲಿ, ಮರಗಳು ಒಂದಕ್ಕೊಂದು ತಾಗಿಯಾಗಲಿ ಕೊನೆಗಳನ್ನು ಸೇರಿ, ಅಡಿಕೆ ಕಾಯಿಗಳ ಮೇಲೆ ಇರುವ ಸಣ್ಣ ರಂಧ್ರಗಳ ಮೂಲಕ ಒಳಗೆ ಹೋಗಿ ಅಥವಾ ಮೇಲೆಯೇ ಇದ್ದು ಕೊಳೆಯಲಿಕ್ಕಾರಂಭಿಸುತ್ತವೆ ನಂತರ ಯಥಾಪ್ರಕಾರವಾಗಿ ಬುರುಸಿನ ಎಳೆಗಳಂತೆ ಕಾಣುವ ಶರೀರಗಳನ್ನು ಬೆಳೆಸಲಿಕ್ಕೆ ಹತ್ತುತ್ತವೆ ಇದೆ ಪ್ರಕ್ರಿಯೆ ೪ ಘಂಟೆಗಳ ಅವಧಿ ಸಿಕ್ಕರೆ ಸಾಕು ಅಡಿಕೆ ಕಾಯಿಗಳ ಮೇಲೆ ಇರುವ ರಂಧ್ರಗಳಿಗೆ "ಸ್ಟೊಮೆಟಾ" (Stomata) ಎಂಬ ಹೆಸರು ಅಣುರೂಪ ವಸ್ತುಗಳಿಗೆ ಬಹಳ ಹೊತ್ತು ಆಹಾರವಾದ ಅಡಿಕೆಯು ಸಿಗದಿದ್ದಲ್ಲಿ ಅಥವಾ ಹವಾಮಾನವು ಅನುಕೂಲವಿಲ್ಲದಿದ್ದಲ್ಲಿ ಅವು ಕೂಡಲೆ ಸಾಯುವವು.

(೧) ಈ ರೋಗಕ್ಕೆ ತೋಟಿಗರ ವಾಡಿಕೆಯ ನಿವಾರಣೋಪಾಯವೆಂದರೆ— ಕೊನೆಗೆ ಕೊಟ್ಟೆ ಕಟ್ಟುವದು ಮಳೆಯಿಂದಲೇ ಈ ರೋಗವು ಹುಟ್ಟುತ್ತದೆಂಬ ಭಾವನೆಯಿಂದಲೇ ಈ ಪದ್ಧತಿಯು ಜಾರಿಗೆ ಬಂದಂತೆ ಕಾಣುತ್ತದೆ ಕೊಟ್ಟೆಯು ಯೋಗ್ಯ ರೀತಿಯಿಂದ ಕೊನೆಯನ್ನು ತುಂಬಾ ಮುಚ್ಚಿದ್ದಲ್ಲಿ, ರೋಗದ ಪ್ರಸಾರವನ್ನು ಕೆಲಮಟ್ಟಿಗೆ ಕಡಿಮೆ ಮಾಡಬಲ್ಲದೇ ಹೊರತು ಕೊಳೆರೋಗದ ಸಸ್ಯಾಣುವನ್ನು ಕೊಲ್ಲುವ ಶಕ್ತಿಯಾಗಲಿ ಅಥವಾ ಅದು ಬಂದು ಕೊನೆಯನ್ನು ಸೇರಿದ್ದಲ್ಲಿ ಅದರ ಬೆಳವಣಿಗೆಯನ್ನು ತಡೆಯುವ ಶಕ್ತಿಯಾಗಲಿ ಅದಕ್ಕೆ ಇರುವದಿಲ್ಲ ನಿಜವಾಗಿ ನೋಡಿದರೆ ಕಟ್ಟಿದ ಕೊಟ್ಟೆಗಳು ಮಳೆಯಿಂದಲೂ, ಬಿರುಗಾಳಿಯಿಂದಲೂ ಕಟ್ಟಿದಂತೆಯೇ ಇರುವ ಸಂಭವ ತೀರ ಕಡಿಮೆ ಇದಲ್ಲದೆ ಕೊನೆಯನ್ನು ಪೂರ್ಣವಾಗಿ ಮುಚ್ಚುವಂತೆ ಕಟ್ಟುವದಾದರೂ ಸುಲಭಸಾಧ್ಯವಾದ ಮಾತಲ್ಲ ಹೀಗಾಗಿ ಎಷ್ಟೋ ವರ್ಷಗಳಿಂದ ನಡೆದು ಬಂದ ಈ ಉಪಾಯದಿಂದ ರೋಗದ ಪ್ರತಿಬಂಧವಾಗಲಿ, ನಿವಾರಣೆಯಾಗಲಿ ಆಗುವದಿಲ್ಲ

(೩) ಔಷಧಿ ಹಾಕಿಸುವದು ಕೊಳೆ ರೋಗಕ್ಕೆ ಕಾರಣವಾದ ಸಸ್ಯಾಣುವನ್ನು ಕೊಲ್ಲುವ-ರೋಗನಾಶಕ ಉಪಾಯವು. ಈ ಉದ್ದೇಶದಿಂದಲೇ ಈ ಸಾಮರ್ಥ್ಯವುಳ್ಳ ಮೈಲುತುತ್ತ (Copper sulphate) ಸುಣ್ಣ (lime) ಗಳ ಮಿಶ್ರಣವನ್ನು ನೀರಿನಲ್ಲಿ ತಯಾರಿಸಿ ಕೇಸಿನ್ (Casein) ರಾಳ ಸೋಡಾ (Resin Soda) ಅಥವಾ ಅಗ್ರಾಲ್ (Agral) ಮುಂತಾದ ಯಾವದೊಂದು ಅಂಟು ವಸ್ತುವನ್ನು ಬೆರಸಿ, ಅಡಿಕೆಯ ಕೊನೆಗಳಿಗೆ ಪಂಪಿನ ಮೂಲಕ ಸಿಂಪಡಿಸುವದು. ಈ ಮಿಶ್ರಣಕ್ಕೆ "ಬೋರ್ಡೋ ಮಿಕ್ಶ್ಚರ್" (Bordeaux Mixture) ಎಂದು ಕರೆಯುತ್ತಾರೆ. ಇದು ಸುಮಾರು ೪೫ ದಿನಗಳ ವರೆಗೆ ತೊಳೆದು ಹೋಗುವದಿಲ್ಲವೆಂತ ಕಂಡುಬರುತ್ತದೆ. ಇದಕ್ಕೆ ಸಂಘಾತಣವಾಗಿ ಕೊಟ್ಟೆ ಕಟ್ಟುವ ಖರ್ಚಿನಷ್ಟೇ ಖರ್ಚು ಬರಬಹುದು. ಔಷಧಿ ಹಾಕಿದ ೪೫ ದಿನಗಳಲ್ಲಿ ಅದು ತೊಳೆದು ಹೋಗಿ ಪುನಃ ರೋಗವು ಬರುವ ಸಂಭವವು ಕಂಡು ಬಂದಲ್ಲಿ ೨ನೇ ಸಾರೆ ಔಷಧಿ ಹಾಕಿಸಬೇಕಾಗುವದು. ಈ ರೀತಿ ಬರಬಹುದಾದ ಹೆಚ್ಚಿನ ಖರ್ಚನ್ನು ತಪ್ಪಿಸುವ ಉಪಾಯದ ವಿಚಾರವನ್ನಾದರೂ ಸಂಶೋಧಕರು ಮಾಡತೊಡಗಿದ್ದಾರೆ. ಪೂರ್ಣ ಉಪಯೋಗವನ್ನು ಪಡೆಯಬೇಕಾದರೆ ರೋಗ ಬರುವ ವರೆಗೆ ಕಾಯದೆ ಮುಂಚಿತವಾಗಿಯೇ ಮಳೆ ಪ್ರಾರಂಭವಾಗುವದರೊಳಗಾಗಿ ಅಡಿಕೆಯ ಕೊನೆಗಳಿಗೆ ಔಷಧಿಯನ್ನು ಹಾಕಿಸಬೇಕು.

ರೋಗದಿಂದ ಒಣಗಿದ ಮರದ ಚಂಡೆಗಳನ್ನು ಕತ್ತರಿಸಿ, ರೋಗಕ್ಕೆ ತುತ್ತಾಗಿ ಕಾಯಿಗಳು ಉದುರಿ, ನೇತಾಡುತ್ತಿರುವ ಗೊಂಚಲುಗಳನ್ನು, ರೋಗದಿಂದ ಕೊಳೆತ ಬೀಜಗಳೆಲ್ಲವನ್ನೂ ತೋಟದಿಂದ ತೆಗೆದು ಸುಡಬೇಕು. ಒಟ್ಟಿನಲ್ಲಿ ಆ ಕಾಲಕ್ಕೆ ವರ್ಷದಲ್ಲಿ ಒಮ್ಮೆ ಅಥವಾ ಅವಶ್ಯಕಂಡರೆ ಎರಡು ಸರ್ತಿ ಔಷಧವನ್ನು ಹಾಕಿಸಿ ಮೇಲೆ ಹೇಳಿದಂತೆ ಮಾಡಿದಲ್ಲಿ ರೋಗದ ಅಂಶವು ಕಡಿಮೆಯಾಗುತ್ತ ಹೋಗಿ ಅದು ಇಲ್ಲದಂತೆ ಆಗುವದು.

ಈ ರೀತಿಯಲ್ಲಿ ರೋಗದ ಬೆಳವಣಿಗೆ ಮತ್ತು ಪ್ರಸಾರವು ಮಳೆಗಾಲದಲ್ಲಿಯೇ ಆಗುತ್ತಿದ್ದು ಉಳಿದ ಕಾಲದಲ್ಲಿ ಈ ರೋಗದ ಸಸ್ಯಾಣುವು ಎಲ್ಲಿ ಮತ್ತು ಯಾವ ರೂಪದಲ್ಲಿರುತ್ತದೆಂಬುದನ್ನು ತಿಳಿಯಬೇಕಾಗಿದೆ. ಯಾವದೇ ರೋಗಕ್ಕೆ ಉತ್ಪತ್ತಿಯಾಗುವ ನಿವಾರಣೋಪಾಯಗಳನ್ನು ಕೈಕೊಳ್ಳುವದಾದರೆ, ಆ ರೋಗದ ಕಾರಣ ಮತ್ತು ಜೀವನಚರಿತ್ರೆಯನ್ನು (Life History) ಆಮೂಲಾಗ್ರ ತಿಳಿಯಬೇಕಾಗುವದು. ಈ ತರದ ಜೀವನ ಚರಿತ್ರೆಯಿಂದ ರೋಗದ ಎಳಕಿನ ಅಂಶಗಳೇನಾದರೂ (weak points) ಇದ್ದಲ್ಲಿ ಅವು ಬೆಳಕಿಗೆ ಬರುತ್ತವೆ. ಆಗ ಯಶಸ್ವಿಯಾದ ನಿವಾರಣೋಪಾಯಗಳನ್ನು ರಚಿಸಲು ಅನುಕೂಲವಾಗುವದು. ಆದ್ದರಿಂದ ಇದನ್ನೆಲ್ಲ ಪರೀಕ್ಷಿಸಿ, ಸಿದ್ಧಾಂತಪಡಿಸಲೋಸುಗ ಮುಂಬಯಿ ಸರಕಾರದವರು ಶಿರ್ಶಿಯಲ್ಲಿ ಕೊಳೆ ರೋಗದ ಸಂಶೋಧನಾಲಯವನ್ನು ಏರ್ಪಡಿಸಿ, ಅದರಲ್ಲಿ ತಜ್ಞರೋರ್ವರನ್ನು ನಿಯಮಿಸಿದ್ದಾರೆ. ಈ ಕೆಲಸವು ಪ್ರಾರಂಭವಾಗಿ ಈಗ ೧ ವರ್ಷವಾಗಿದ್ದು, ಮುಂದ ೪ ವರ್ಷಗಳ ವರೆಗೆ ಅದು ನಡೆಯಬಹುದು. ಹೆಚ್ಚಿನ ಮಾಹಿತಿ ಬೇಕಾದವರು ಅಲ್ಲಿಯ ತಜ್ಞರಿಂದ ಅದನ್ನು ಪ್ರತ್ಯಕ್ಷ ಪಡೆಯಬಹುದು.

25,000 ವಿವಿಧ ಶಬ್ದಗಳುಳ್ಳ 'ಹೊಸ ನಿಘಂಟು'

ಮೋಡರ್ನ

ಸ್ಟುಡಂಟ್ಸ ಪ್ರೆಕ್ಟಿಕಲ್ ಡಿಕ್ಷನರಿ.

ಇಂಗ್ಲಿಷ ಕನ್ನಡ

ಬರೆದವರು ವೈದ್ಯಭಾನು ಡಿ. ಕೆ. ಭಾರದ್ವಾಜ ವಿದ್ಯಾಭೂಷಣ. ಮೈಸೂರ ಯುನಿವರ್ಸಿಟಿ ವ್ಹೈಸ ಚಾನ್ಸಲರರ ಮನ್ನಣೆಯುಳ್ಳ, ಸರ್ ಎಮ್. ವಿಶ್ವೇಶ್ವರಯ್ಯನವರು ಹೊಗಳಿದ, ಮದ್ರಾಸ ನ್ಯಾಯವಿಧಾಯಕ ಸಭೆಯ ಅಧ್ಯಕ್ಷ ಡಾ. ಸುಬ್ಬರಾಯರು ಹರಸಿದ ಈ ಡಿಕ್ಷನರಿಯು ಇದೇ ಕರ್ನಾಟಕದಲ್ಲಿ ಹೊಸ ಸಾಹಸ. ಪ್ರತಿಯೊಬ್ಬರು ಅವಶ್ಯ ಸಂಗ್ರಹಿಸತಕ್ಕಂಥದ್ದು. ಬೆಲೆ ಕೇವಲ ೩ ರೂ. ಟಪಾಲ ಪ್ರತ್ಯೇಕ.

ಸಿಗುವಸ್ಥಳ - ದಿ ನ್ಯೂ ಸಪ್ಲೈ ಏಜನ್ಸಿ, ಕುಮಟಾ

ಕೊಂಕಣಿ ಭಾಷೆಯ ಲಿಪಿ-ವಿಚಾರ.

ಮಂಗಳೂರಿನ ಸೇಂಟ್ ಆಗ್ನೆಸ್ ಕ್ಯಾಲೇಜಿನ ಶಾಲಾ ಮಹೋತ್ಸವದ ಅಧ್ಯಕ್ಷರಿಂದ ಮದರಾಸಿನ ಶಿಕ್ಷಣ ಮಂತ್ರಿಗಳಾದ ಮಾನ್ಯ ಡಾ| ಸುಬ್ಬರಾಯನ್ ಮಹಾಶಯರು, 'ಮಂಗಳೂರ ಜಿಲ್ಲೆಯ ಮಾತೃಭಾಷೆಯು ಕನ್ನಡ'ವೆಂದು ಸಾರಿದಾಗ "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಭಾಷೆಗಳ ವ್ಯಾಪ್ತಿಯಿದೆ, ತುಳು, ಕೊಂಕಣಿ ಭಾಷೆಗಳಿಗೆ ಲಿಪಿ-ಸಾಹಿತ್ಯಗಳು ಇಲ್ಲ' ಎಂದು ಅಪ್ಪಣೆ ಕೊಡಿಸಿದರು, ಎಂಬುದು ಸದ್ಯವೇ ಪ್ರಕಟವಾಗಿದೆ. ಮಂಗಳೂರ ಜಿಲ್ಲೆಯ ಮಾತೃಭಾಷೆ ಕನ್ನಡವೇ ಎಂಬುದನ್ನು ಆ ಜಿಲ್ಲೆಯ ಜನಪದವೆಲ್ಲ ಅಂಗೀಕರಿಸುತ್ತಿದ್ದರೆ ಅಂಗೀಕರಿಸಲಿ, ನಮಗೆ ಅದರಿಂದ ಸಂತೋಷವೇ. ಆದರೆ ಇವರ ಈ ಭಾಷಣದ 'ಕೊಂಕಣಿ ಭಾಷೆಗೆ ಲಿಪಿ-ಸಾಹಿತ್ಯಗಳಿಲ್ಲ' ಎಂಬ ಅಂಶವೊಂದು ಸತ್ಯವೆಂದು ಒಪ್ಪಿಕೊಳ್ಳುವದು ನಮ್ಮಿಂದಾಗದು. ಡಾ|| ಮಹಾಶಯರು ಕೊಂಕಣಿ ಮಾತು ಅರಿತವರೋ ಅಲ್ಲವೋ ನಾವು ತಿಳಿಯೆವು, ಅರಿತವರಾಗಿದ್ದರೆ ಕೊಂಕಣಿ ಮಾತಿಗೆ ಲಿಪಿ-ಸಾಹಿತ್ಯಗಳಿಲ್ಲ ಎಂಬಂಶವನ್ನು ಘೋಷಿಸುತ್ತಿರಲಿಲ್ಲ ಎಂದು ನಮಗೆ ವಿಶ್ವಾಸವಿದೆ. ಕೊಂಕಣಿ ಮಾತಿನ ವಿದ್ಯಮಾನವನ್ನು ಅರಿಯದವರು ಈ ಮಾತಿಗೆ ಬರಹವಿಲ್ಲೆಂದು ಬೋಳವದಂತಿಯಿದೆ ಎಂಬುದಾಗಿ ಹೇಳುವದುಂಟು. ಕೊಂಕಣಿ ಮಾತನ್ನು ಅರಿತವರಾದರೂ ದೇಶಕಾಲಯೋಗದಿಂದ ಅದರ ಬಳಕೆಗೆ ಅಗಲಿದ ಕೆಲವರು ಕೊಂಕಣಿ ಮಾತಿಗೆ ಬರಹವಿಲ್ಲವಷ್ಟೇ ಎಂದು ಗತಾನುಗತಿಕವಾಗಿ ಹೇಳುವದೂ ಉಂಟು. ಆದುದರಿಂದ ಇದರ ನಿಜಸ್ಥಿತಿಯೇನು ಎಂಬುದನ್ನು ಸಮಯೋಚಿತವಾಗಿ ಹೇಳದೆ ಬಿಟ್ಟರೆ ಸತ್ಯಾಸತ್ಯತೆಯು ನೆಲೆ ತಪ್ಪಿಹೋದೀತೆಂದು ಇಲ್ಲಿ ಅದನ್ನು ಚರ್ಚಿಸಲಾಗಿದೆ.

ಕೊಂಕಣಿ ಭಾಷೆ ಬಾಯಿಮಾತಿನಲ್ಲಿಯೇ ಇರುವದು, ಬರಹದಲ್ಲಿಲ್ಲ ಎಂಬ ಕುರುಡ ನಂಬಿಕೆಯೇ ಈ ಭಾಷೆಗೆ ಲಿಪಿಯಿಲ್ಲ ಎಂದು ಹೇಳುತ್ತಿರುವದಕ್ಕೆ ಕಾರಣವಾಗಿದ್ದರೂ ಇರಬಹುದು. ಆದರೆ ಕೊಂಕಣಿಯು ಬರಿಯ ಬಾಯಿಮಾತಿನಲ್ಲಿರುವದಲ್ಲ, ಇದು ಲೇಖನ ರಂಗದಲ್ಲಿಯೂ ವ್ಯವಹರಿಸುತ್ತಿದೆ. ಗೋವೆ ಮುಂಬಯಿ-ಕಾರವಾರ ಮಂಗಳೂರುಗಳಲ್ಲಿ ಈ ಭಾಷೆಯ ಪ್ರಾತ್ಯಹಿಕ ಸಾಪ್ತಾಹಿಕ ಮಾಸಿಕ ಪತ್ರಿಕೆಗಳು ರೋಮನ್ ಕನ್ನಡ ಲಿಪಿಗಳಲ್ಲಿ ಪ್ರಕಟವಾಗುತ್ತಿವೆ. ಈ ಭಾಷೆಯ ವ್ಯಾಕರಣ ಗ್ರಂಥಗಳು ಇಂಗ್ಲಿಷ ಪೋರ್ತುಗೀಜ ಭಾಷೆಗಳಲ್ಲಿ ಬಹು ಕಾಲದ ಹಿಂದೆಯೇ ಆಗಿವೆ, ಕೋಶಗಳೂ ಇಂಗ್ಲಿಷ ಪೋರ್ತುಗೀಜ ಭಾಷೆಗಳಲ್ಲಿವೆ. ಮುಂಬಯಿ ಮದ್ರಾಸ ಪ್ರಾಂತಗಳಲ್ಲಿಯೂ ಸಿಲೋನದಲ್ಲಿಯೂ ನೆಲೆಯಾದ ಕೊಂಕಣಿ ನವಾಯತ ಸಮಾಜದವರು ತಮ್ಮ ಅನ್ಯೋನ್ಯ ಪತ್ರವ್ಯವಹಾರವನ್ನೂ ವ್ಯಾಪಾರೋದ್ಯಮದ ಲೆಕ್ಕ ಪತ್ರವನ್ನೂ ಕೊಂಕಣಿ ಮಾತಿನಲ್ಲಿಯೇ ಉರ್ದು ಬರಹದಲ್ಲಿ ನಡೆಯಿಸುತ್ತಿದ್ದಾರೆ. ಮುಂಬಯಿ ನಗರದಲ್ಲಿ ಬಹುಕಾಲದಿಂದ ನೆಲೆಯಾದ ಗೋಮಂತಕ(ಗೋವೆ)ದ ವಿದ್ವಾಂಸರೊಬ್ಬರು ಕೊಂಕಣಿ ಮಾತಿನಲ್ಲಿ ಹಲವು ನಾಟಕ-ಕಥೆ ನೀತಿಪರ ಲೇಖನಗಳನ್ನು ಪುಸ್ತಕರೂಪದಿಂದ ಪ್ರಕಟಿಸಿದ್ದಾರೆ. ಇವರು ರೋಮನ್ ನಾಗರಿ ಎಂಬ ಎರಡು ಬಗೆಯ ಲಿಪಿಗಳನ್ನೂ ತಮ್ಮ ಪುಸ್ತಕಗಳಲ್ಲಿ ಬಳಸಿಕೊಂಡಿದ್ದಾರೆ. ಮಂಗಳೂರು ಉಡುಪಿಗಳಲ್ಲಿಯೂ ಹಲಕೆಲವು ಚಿಕ್ಕ ಚಿಕ್ಕ ಪುಸ್ತಕಗಳು ಕೊಂಕಣಿ ಮಾತಿನಲ್ಲಿ ಕನ್ನಡ ಲಿಪಿಯಲ್ಲಿ ಪ್ರಕಟವಾಗಿರುತ್ತವೆ. ಈ ಪ್ರಕಾರ ಬಹುಜನೋಪಯುಕ್ತವಾದ ವಿವಿಧ ವಾಙ್ಮಯವು ಕೊಂಕಣಿಯಲ್ಲಿರುವಾಗ ಇದಕ್ಕೆ ಲಿಪಿ ಸಾಹಿತ್ಯಗಳಿಲ್ಲವೆನ್ನುವದು ಸರಿಹೋದೀತೇ?

ಈ ಭಾಷೆಯಲ್ಲಿ ಕೆಲವು ಗ್ರಂಥಗಳು ಪ್ರಕಟವಾಗಿದ್ದರೂ ಅವೆಲ್ಲ ರೋಮನ್-ಕನ್ನಡ ನಾಗರಿ ಎಂಬ ಬೇರೆ ಬೇರೆ ಲಿಪಿಗಳಲ್ಲಿರುವದರಿಂದ ಈ ಭಾಷೆಗೆ ಸ್ವಂತವಾದ ಒಂದು ಲಿಪಿಯುಲ್ಲವಷ್ಟೇ ಎಂದು ಆಕ್ಷೇಪವನ್ನು ಎತ್ತುತ್ತಿದ್ದರೆ ಈ ವಿಷಯದಲ್ಲಿ ಹೀಗೆನ್ನಬಹುದು — ಸಂಸ್ಕೃತ ಭಾಷೆ ಭರತಖಂಡದಲ್ಲಿ ಬಹು ಪ್ರಾಚೀನ ಕಾಲದಿಂದ ನೆಲೆಯಾದ ಭಾಷೆಯು. ಇದನ್ನು ಬಂಗಾಲಿ ಗುಜರಾಥಿ-ನಾಗರಿ ಆಂಧ್ರ-ಕನ್ನಡ ತಮಿಳು-ಮಲೆಯಾಳ ಲಿಪಿಯಲ್ಲಿಯೂ ಕೊನೆಗೆ ರೋಮನ ಲಿಪಿಯಲ್ಲಿಯೂ ಬರೆಯುವದುಂಟು. ಇವಕ್ಕೋಸ್ಕರ ಸಂಸ್ಕೃತಕ್ಕೆ ಸ್ವಂತ ಲಿಪಿಯಿಲ್ಲ ಎನ್ನಲಾಗುವದೇ? ಮರಾಠಿಯನ್ನು ಬಾಲಬೋಧವೆಂದು ಕರೆಯುವ ನಾಗರ ಲಿಪಿಯಲ್ಲಿ ಬರೆಯುತ್ತಾರೆ. ಇದರಿಂದ ಮರಾಠಿಗೆ ಸ್ವಂತ ಲಿಪಿಯಿಲ್ಲವೆನ್ನುವರೇ? ಕನ್ನಡ ನಾಡಿನಲ್ಲಿ ಹಿಂದೆ ಹಿಂದೆ ಆಳಿದ ಅರಸರು ಕನ್ನಡ ಮಾತಿನ ತಮ್ಮ ಶಾಸನಗಳನ್ನು ಅಶೋಕ ಮಹಾರಾಜನಿಂದ ಪ್ರಚಾರಿತವಾದ ಬ್ರಾಹ್ಮೀ ಎಂಬ ಲಿಪಿಯಲ್ಲಿ ಕೊರೆಯಿಸಿದರು. ಮೊದಮೊದಲು ಕನ್ನಡ ಮಾತಿನ ಪುಸ್ತಕಗಳು ತೆಲುಗು ಲಿಪಿಯಲ್ಲಿ ಪ್ರಕಟವಾಗುತ್ತಿದ್ದವು. ಮಾಧ್ವ ಮತದ ಹಲವು ಗ್ರಂಥಗಳ ಕನ್ನಡ ಟೀಕೆಗಳು ನಾಗರ ಲಿಪಿಯಲ್ಲಿಯೇ ಪ್ರಕಟವಾಗುತ್ತಿವೆ. ಈಗಲೂ ವೈದಿಕರನೇಕರು ಕನ್ನಡ ಮಾತಿನ ಸಮಾಚಾರ ಪತ್ರಗಳನ್ನು ನಾಗರ ಲಿಪಿಯಲ್ಲಿಯೇ ಬರೆಯುವದುಂಟು. ಇಷ್ಟರಿಂದ ಕನ್ನಡಕ್ಕೆ ಸ್ವಂತ ಲಿಪಿಯಿಲ್ಲೆಂಟು ಎಂದು ಹೇಳಲಾಗುವದೇ? ಭಾಷೆಗೆ ಅದರ ಪದೋಚ್ಚಾರ- ಕೇಳಿದೊಡನೆ ಅರ್ಥಬೋಧವಾಗುವ ಯೋಗ್ಯತೆ ಇರುವದೇ ಮುಖ್ಯವಾದದ್ದು. ಬರೆಯುವಾಗ ಅದನ್ನು ಯಾವ ಲಿಪಿಗೆ ಒಯ್ದರೂ ಸರಿಯೇ. ಆದರೂ ಆಯಾ ಭಾಷೆಗೆ ನಿಯತವಾದ ಲಿಪಿ ಇರುವದು ಯುಕ್ತ.

ಕೊಂಕಣಿ ಭಾಷೆಗೆ ಇದರ ಹಕ್ಕಿನ ಲಿಪಿಯುಂಟೇ ಎಂದರೆ ಇದೆ ಎಂದು ಹೇಳಬೇಕು. ಆರ್ಯವರ್ಗದ ಎಲ್ಲ ಭಾಷೆಗಳಿಗೆ ನಾಗರ ಲಿಪಿಯೇ ಅವುಗಳ ಹಕ್ಕಿನ ಲಿಪಿಯು. ಗುಜರಾಥಿ-ಬಂಗಾಲಿ ಭಾಷೆಗಳಿಗೆ ನಾಗರ ಲಿಪಿಯಿಂದಲೇ ಉಂಟಾದ ಒಂದು ಬಗೆಯ ಲಿಪಿ ಇರುತ್ತದೆ. ಆದರೂ ಅವುಗಳನ್ನು ನಾಗರಿಯಲ್ಲಿ ಬರೆಯುವದೇ ಸಹಜವಾದದ್ದು. ಬರವಣಿಗೆಯ ಸೌಲಭ್ಯಕ್ಕೋಸ್ಕರ ಲಿಪಿಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಇವುಗಳ ವರ್ಣಮಾಲೆ ನಾಗರ ಲಿಪಿಯದೇ. ಬೇರೆಯಲ್ಲ ಆರ್ಯವರ್ಗದ ಎಲ್ಲ ಭಾಷೆಗಳಿಗೆ ನಾಗರ ಲಿಪಿಯೇ ಆದಿ ಲಿಪಿ. ಕೊಂಕಣಿ ಭಾಷೆಯು ಆರ್ಯವರ್ಗಕ್ಕೆ ಸೇರಿದ್ದು ಮಾತ್ರವಲ್ಲ, ಇದು ಸಂಸ್ಕೃತಕ್ಕೆ ಬಹು ಸಮೀಪದ ಸಂಬಂಧವುಳ್ಳದು. ಆದುದರಿಂದ ಇದಕ್ಕೆ ಲಿಪಿಯುಂಟೇ ಎಂದು ಕನಸಿನಲ್ಲಿಯೂ ಶಂಕಿಸುವದು ಬೇಡ. ಇದಕ್ಕೆ ಇವರ ಮಾಮೂಲಪಕ್ಕದ ನಾಗರಲಿಪಿ ಇದ್ದೇ ಇದೆ. ಈ ಲಿಪಿಯು ಪರಿಚಯವಿಲ್ಲದವರು ಇದನ್ನು ಬೇರೆ ಲಿಪಿಗಳಲ್ಲಿ ಬರೆಯುತ್ತಿದ್ದರೆ ಇಲ್ಲವೆ ಈ ಲಿಪಿಯ ಪರಿಚಯವಿಲ್ಲದವರಿಗೋಸ್ಕರ ಇದನ್ನು ಬೇರೆ ಲಿಪಿಯಲ್ಲಿ ಬರೆಯುತ್ತಿದ್ದರೆ ಸಂಸ್ಕೃತದಂತೆ ಇದಕ್ಕೆ ಅದೊಂದು ಹೀನಾಗಿ ಬಂದ ಪ್ರಶಸ್ತಿಯೆಂದು ಹೊಗಳಬೇಕೇ ಹೊರತು ಇದಕ್ಕೆ ಲಿಪಿಯಿಲ್ಲ ಎಂಬ ತೀರ್ಮಾನಕ್ಕೆ ಬರುವದು ಸಾಹಸವೇ ಸರಿ.

ಇದು ಕೊಂಕಣಿಯ ಲಿಪಿಯ ವಿಚಾರವಾಯಿತು. ಸಾಹಿತ್ಯದ ವಿಷಯದಲ್ಲಿ— ಸ್ವಪ್ರಭಾವಶಾಲಿಯಾದ ಸಾರಸ್ವತವು ಸಂಸ್ಕೃತ ಭಾಷೆಯೊಂದರಲ್ಲಿ ತೋರಿಸಲಿಕ್ಕೆ ಬರುವಂತೆ ನಮ್ಮಲ್ಲಿಯ ಈಗಿನ ವ್ಯವಹಾರಿಕ ಭಾಷೆಗಳಲ್ಲಿ ಇರುತ್ತಿವೆ ಎಂದು ತೋರಿಸಿಕೊಡಲಾಗದಿರುವಾಗ ಕೊಂಕಣಿಯಲ್ಲಿ ಅದು ಎಲ್ಲಿದೆ ಎಂದು ಕೇಳುವದರಿಂದ ಈ ಭಾಷೆಗೆ ಕುಂದು ಬಾರದು. ಕೊಂಕಣಿ ಭಾಷೆಯು ತನ್ನ ಅಭಿಜಾತತೆಯನ್ನು ಪ್ರದರ್ಶಿಸುವಷ್ಟು ವಾಙ್ಮಯ ಪ್ರಪಂಚವನ್ನು ರೂಪಿಸಿದೆ, ಶೋಭಿಸಿದೆ, ಶೋಭಿಸುತ್ತಿದೆ ಎಂದಿಷ್ಟೇ ಸಂಕ್ಷೇಪವಾಗಿ ಇಲ್ಲಿ ಹೇಳುವ ಮಾತು.

ಕಾರವಾರ, ತಾ ೧ ೧೦-೩೪ **ವೆಂಕಟೇಶ ಪ್ರಭು**

ಸ್ಥಳಿಕ ವಿಷಯಗಳು.

[ನಮ್ಮ ಪ್ರತಿನಿಧಿಗಳಿಂದ]

ಜಿಲ್ಲಾ ಕೊಂಗ್ರೆಸ ಕಮಿಟಿ

ಶಿರಸಿಯಲ್ಲಿ ತಾ. ೩ನೇ ಶನಿವಾರ ಮುಕ್ತ ೪ಸಾರಸದ ಜಿಲ್ಲಾ ಕೊಂಗ್ರೆಸ ಕಮಿಟಿಯ ಮಾಸ ಸಭೆಯಾಯಿತು. ಹೊನ್ನಾವರದ ರಾ| ಶಿವರಾಮ ಶಾಸ್ತ್ರಿಗಳವರು ಅಧ್ಯಕ್ಷರಾಗಿದ್ದರು. ಬೇರೆಬೇರೆ ತಾಲೂಕುಗಳಿಂದ ಕೂಡಿ ೪೩ ಮಂದಿ ಸಭಾಸದರು ಬಂದಿದ್ದರು (೧) ಹೈದರಾಬಾದ ಸಂಸ್ಥಾನದ ಪ್ರಜೆಗಳು ನಡಸಿದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಹಾನುಭೂತಿಯನ್ನು ತೋರಿಸಲಾಯಿತು (೨) ಮದ್ಯಪಾನ ನಿಷೇಧವನ್ನು ನಮ್ಮ ಇಡೀ ಜಿಲ್ಲೆಯೊಳಗೆ ಪ್ರಚಾರಗೊಳಿಸಬೇಕೆಂದು ನಿರ್ಣಯವಾಯಿತು (೩) ಕರ್ನಾಟಕ ಏಕೀಕರಣ ಪ್ರಚಾರಕ್ಕಾಗಿ ರಾ| ದಿವಾಕರ ರಂಗರಾಯರು ನಮ್ಮಲ್ಲಿ ಪ್ರವಾಸ ಮಾಡಬರಬೇಕೆಂದು ವಿನಂತಿ ಮಾಡಿಕೊಳ್ಳಲಾಯಿತು (೪) ಮುಂಬಯಿ ಸರಕಾರವು ಕೈಕೊಂಡ ಪ್ರೌಢ ಶಿಕ್ಷಣ-ಯೋಜನೆಯಂತೆ ಕಾರವಾರ ತಾಲೂಕಿನ ಬಿಣಗ ಅಮದಳ್ಳಿ ಅಂಕೋಲಾ ತಾಲೂಕಿನ ಬೆಲೇಕೇರಿ-ಕಣಗಿಲ ಕುಮಟಾ ತಾಲೂಕಿನ ಬಂಕಿಕೊಡ್ಲ, ಸಿದ್ದಾಪುರ, ಹೊನ್ನಾವರ ತಾಲೂಕಿನ ಹಳದೀಪುರ, ಕರ್ಕಿ, ಬಟ್ಕಳ ಪೇಟೆಯ ಶಿರಾಲಿ ಈ ಗ್ರಾಮಗಳಲ್ಲಿ ಹೊಸ ಶಾಲೆಗಳನ್ನು ತೆರೆಯುವಂತೆ ಸರಕಾರಕ್ಕೆ ಶಿಫಾರಸು ಮಾಡಲಾಯಿತು ಇಷ್ಟು ಕೆಲಸವಾಗಲಿಕ್ಕೆ ಶನಿವಾರ ರಾತ್ರಿ ೧೦|| ಘಂಟೆಯಾಯಿತು ಪುನಃ ಮಾರನೆಯ ರವಿವಾರ ಬೆಳಗಿನ ೯ ಘಂಟೆಗೆ ಸೇರಿತು (೫) ಜಿಲ್ಲಾ ಕೊಂ ಕಮಿಟಿಯ ಪರವಾಗಿ ಈ ವರೆಗೆ ಸಂಗ್ರಹಿಸಿದ ಭಟಕಳ ನಿರಾಶ್ರಿತ ನಿಧಿಯ ಲೆಕ್ಕ ಮತ್ತು ಖರ್ಚು ಮಾಡಿದ ವಿವರಗಳನ್ನು ಛಾಪಿಸಿ ಪ್ರಕಟಿಸಬೇಕೆಂದು ನಿರ್ಣಯವಾಯಿತು ಆ ನಿರಾಶ್ರಿತರಾದ ಬೇಸಾಯಗಾರರಿಗೆ ಬೀಜ, ಎತ್ತು, ನೇಗಿಲು ಮೊದಲಾದ ಬೇಸಾಯ ಸಾಹಿತ್ಯಗಳನ್ನು ಪೂರೈಸುವಂತೆ ಏರ್ಪಾಟು ಮಾಡಲಿಕ್ಕೆ ರಾ|| ಶಿವರಾಮ ಶಾಸ್ತ್ರಿ, ಮಂಜನಾಥ ಭಟ್ಟ ಕರ್ಕಿ, ತಿಮ್ಮಪ್ಪ ಮಂಜಣ್ಣಾ ಶ್ಯಾನಭಾಗ ಶಿರಾಲಿ ಇವರದೊಂದು ಮಂಡಳ ನೇಮಿಸಲಾಯಿತು ಸಿಂಕ್ರಿತರಿಗೆ ಸಹಾಯ ಮಾಡುವ ಕುರಿತು ಇವರು ಒಂದು ಯೋಜನೆ ತಯಾರಿಸತಕ್ಕದ್ದಾಗಿಯೂ ನಿರ್ಣಯವಾಯಿತು (೬) ವನದುಃಖನಿವಾರಣೆಯ ಕುರಿತು ನಾ| ಮಂಜಜ ದೇಸಾಯಿಯವರು ಸೂಚಿಸಿದ ಕ್ಷೇತ್ರಗಳಿಂದ ನಿರ್ಣಯಗಳಂತೆ ಇನ್ನು ಸರಕಾರಿ ಪ್ರಗಟಣ ಹೊರಟಲ್ಲಿ ಅದರಿಂದ ಕಡಲು ಅದನ್ನು ಹೊರಡಿಸುವಂತೆ ಮುಂಬಯಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಲಾಯಿತು (೭) ಸ್ಕೂಲ್ ಬೋರ್ಡಿನ ಸಭಾಸದರಾದ ರಾ|| ದೇವಣ್ಣಾ ಕೂಸ್ಪಿಕರ ಮತ್ತು ರಾಮನಾಯ್ಕ ಭಾಸಿಕೇರಿ ಇವರೀರ್ವರೂ ಕೊಟ್ಟ ರಾಜೀನಾಮೆಗಳು ಸ್ವೀಕೃತವಾದವು ಮತ್ತು ತೆರವಾದ ಒಂದು ಸ್ಥಳದಲ್ಲಿ ರಾ|| ತಿಮ್ಮಪ್ಪ ನಾಯಕರನ್ನು ನೇಮಿಸಲಾಯಿತು ಇನ್ನೊಂದು ಸ್ಥಳದಲ್ಲಿ ಸಭಾಸದರನ್ನು ನೇಮಿಸುವ ಅಧಿಕಾರ ಜಿಲ್ಲಾ ಕೊಂ ಕ. ಅಧ್ಯಕ್ಷರಿಗೆ ಕೊಡಲಾಯಿತು (೮) ಕುಮಟಾ—ಅಂಕೋಲಾ ತಾಲೂಕುಗಳೊಳಗಿನ ಗೇಣಿಯ ಪ್ರಮಾಣವನ್ನು ಚೌಕಶಿ ಮಾಡಿ ವರದಿ ಒಪ್ಪಿಸುವ ಬಗ್ಗೆ ಒಂದು ವಿಚಾರಣಾ ಮಂಡಳವನ್ನು ಜಿಲ್ಲಾ ಕೊಂಗ್ರೆಸ ಕಮಿಟಿಯು ಕಾರ್ಯಕಾರಿ ಮಂಡಳದವರು ನೇಮಿಸಬೇಕೆಂದು ಗೊತ್ತಾಯಿತು ಗೇಣಿಯ ಪ್ರಮಾಣ ಅದರ ವಿಷ ಸಂದರ್ಭಗಳನ್ನು ತಿಳಕೊಳ್ಳುವ ದೃಷ್ಟಿಯಿಂದ ಈ ಮಂಡಳ ನೇಮಿಸೋಣಾಗಿದೆ. (೯) ಆಗೇರ, ಮುಕ್ರಿ, ಹಳ್ಳೇರ ಮೊದಲಾದ ಹಿಂದುಳಿದ ಸಮಾಜದವರು ಅಜ್ಞಾನಿಗಳು, ಬಡವರು ಇರುವರೆಂದು ಅವರಿಗೆ ಹಣ ಕೊಟ್ಟು ಗಂಡ-ಹೆಂಡರ ಇಡೀ ಜನ್ಮವನ್ನು ದಾಸ್ಯದಲ್ಲಿಟ್ಟುಕೊಳ್ಳುವದೊಂದು ಪದ್ಧತಿಯುಂಟು ಇದು ಕಾಯದೆಗೂ ನೀತಿಗೂ ಅಸಮ್ಮತ, ಆದ್ದರಿಂದ ಕೊಂಗ್ರೆಸ ಕಮಿಟಿಗಳೂ ಕಾರ್ಯಕರ್ತರೂ ಈ ಪದ್ಧತಿಯನ್ನು ನಿಷೇಧಿಸತಕ್ಕದ್ದೆಂದೂ ನಿಲ್ಲಿಸತಕ್ಕದ್ದೆಂದೂ ನಿರ್ಣಯವಾಯಿತು. (೧೦) ವ್ಯಾಪಾರೋದ್ಯೋಗಕ್ಕೆ ಮೋಟಾರ-ವಾಹನಗಳು ಅಗತ್ಯವಿರುವ ನಮ್ಮ ಜಿಲ್ಲೆಯಂಥ ಸ್ಥಳದಲ್ಲಿಯೇ ನಮ್ಮ ಜಿಲ್ಲೆಯೊಳಗಿನ ಮೋಟಾರ-ವಾಹನಗಳ ಪ್ರಮಾಣ ಕಡಿಮೆಯಿದೆ, ಆದ್ದರಿಂದ ಆ ಉದ್ದಿಮೆ ಮಾಡುವ ನಮ್ಮ ಜಿಲ್ಲೆಯವರಿಗೆ ಪುರಸ್ಕಾರ ದೊರೆಯುವಂತೆಯೂ ಅವರ ತೆರಿಗೆ ಕಡಿಮೆಯಾಗುವಂತೆಯೂ ಪ್ರಯಾಣಿಕರಿಗೆ ಅನುಕೂಲವಾಗುವಂತೆಯೂ ಏರ್ಪಾಟು ಮಾಡುವದಕ್ಕಾಗಿ ರಾ|| ಶಿವರಾಮ ಶಾಸ್ತ್ರಿ ಇವರು ಅಧ್ಯಕ್ಷರಾಗಿಯೂ ರಾ|| ಶಂಕರರಾವ ಗುಜ್ಜರನಕರ ಇವರು ಕಾರ್ಯದರ್ಶಿಗಳಾಗಿಯೂ ಎಸಂಬ್ಲಿ ಸಭಾಸದರಾದ ರಾ|| ಗೋಪಿ, ಕೇಶವೈನ, ಸಿದ್ದಿಕ ಮತ್ತು ಗಣಪತಿ ಯಾದವ ಕಾಮತ, ಶಿವರಾಮ ಹೆಗಡೆ ಮೋಟಿನಸರ, ಮಂಜನಾಥ ಭಟ್ಟ ಕರ್ಕಿ ಇವರದೊಂದು ಮಂಡಳ ನೇಮಿಸಲಾಯಿತು. (೧೧) ಕೊಂಗ್ರೆಸ ಕಮಿಟಿಗಳಲ್ಲಿ ಸ್ತ್ರೀ ಸಮಾಜಕ್ಕೆ ತಕ್ಕ ಪ್ರತಿನಿಧಿತ್ವ ಸಿಗುವಂತೆ ಏರ್ಪಾಟು ಮಾಡಬೇಕಾಗಿ ನಿರ್ಣಯಿಸಲ್ಪಟ್ಟಿತು (೧೨) ಅಡಿಕೆ ಬೆಳೆಸುವ ಮತ್ತು ತಯಾರಿಸುವ ಪ್ರದೇಶಗಳೊಳಗಿನ ಕ್ರಮಗಳನ್ನು ಅಭ್ಯಾಸ ಮಾಡಿಕೊಂಡು ಅವನ್ನು ಇಲ್ಲಿಯ ತೋಟಿಗರಿಗೆ ಕಲಿಸುವದಕ್ಕಾಗಿ ಒಬ್ಬ ಇಸಮನ್ನು ವಿದೇಶಕ್ಕೆ ಕಳಿಸುವಂತೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಲಾಯಿತು (೧೩) ಚಳಿಜ್ವರ ನಿವಾರಣೆಗಾಗಿ ಸಂಚಾರಕ ಡಾಕ್ಟರರನ್ನು ನೇಮಿಸಿ ಕ್ವಿನೀನು ಹಂಚುತ್ತಾರೆ. ಇದರಿಂದ ಹಣದ ಅಪವ್ಯಯವಾಗುತ್ತದೆ; ಇದರ ಬದಲು ಕ್ವಿನೀನ ಗುಳಿಗೆಗಳನ್ನು ಶಾಲೆಯ ಶಿಕ್ಷಕರಲ್ಲಿಗೂ, ಕೊಂಗ್ರೆಸ ಕಮಿಟಿ, ಗ್ರಾಮ ಸುಧಾರಣಾ ಕಮಿಟಿ ಇವುಗಳ ಕಡೆಗೂ ಒಪ್ಪಿಸಿ ಹಂಚಿಸುವದು ಉಚಿತಯುಕ್ತವೆಂದು ಅಭಿಪ್ರಾಯವಾಯಿತು ಹೀಗೆ ಉಳಿತಾಯವಾದ ಹಣವನ್ನು ಗ್ರಾಮಗಳೊಳಗಿನ ಔಷಧಾಲಯಗಳಿಗೆ ವಿನಿಯೋಗಿಸುವದು ಹಿತವೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಲಾಯಿತು (೧೪) ಬೇಸಾಯದ ಪ್ರಯೋಗ ಹೊಲವನ್ನು ಹೆಗಡೆ ಗ್ರಾಮದಲ್ಲಿ ತೆರೆಯುವದಕ್ಕಿಂತ ಯಲ್ಲಾಪುರ ಇಲ್ಲವೆ ಅಂಕೋಲಾ ತಾಲೂಕಿನಲ್ಲಿ ತೆರೆಯುವದು ಯೋಗ್ಯವೆಂದು ಶಿಫಾರಸು ಮಾಡೋಣಾಯಿತು, ಆ ಮೇಲೆ ಜಿಲ್ಲಾ ಕೊಂಗ್ರೆಸ ಕಮಿಟಿಯು ನವಂಬರ ತಿಂಗಳ ಅಂತ್ಯದ ವರೆಗಿನ ಜಮಾ-ಖರ್ಚಿನ ಪತ್ರಿಕೆ ಓದಿ ಮನ್ನಿಸಲಾಯಿತು. ಪ್ರಾಥಮಿಕ ಸಭಾಸದರ ವರ್ಗಣಿ ಖಾತೆಯಲ್ಲಿ ರೂ ೨,೧೬೦ ಜಮೆಯಾಗಿದೆ. ಬಟಕಳ ನಿರಾಶ್ರಿತ ನಿಧಿಗೆ ರೂ ೬೩೯-೧೧-೦ ಜಮೆಯಾಗಿದೆ ಕಾರ್ಯದರ್ಶಿಗಳ ಕಡೆಗೆ ಬೇಂಕಿನಲ್ಲಿ ಮತ್ತು ಕೈಯಲ್ಲಿ ಕೂಡಿ ರೂ ೨,೦೩೮ ಶಿಲ್ಕು ಉಂಟು ಉಳಿದ ಹಣ ಛಾವಣಾವಳಿ, ಮದ್ಯಪ್ರತಿಬಂಧಕ ಸಮಿತಿ, ಪ್ರಚಾರ ಮೊದಲಾದ್ದಕ್ಕೆ ಖರ್ಚಾಗಿದೆ

***

THE CANARA INDUSTRIAL & BANKING SYNDICATE LTD.,

(INCORPORATED IN BRITISH INDIA)

[Estd : 1925]

Head Office: "MUKUND NIVAS", UDIPI, S. INDIA

MEMBER

RESERVE BANK OF INDIA, BANKERS' CLEARING HOUSE BOMBAY

DEPOSIT RATES

3 to 5 months	2 % p a
6 to 11 months	½% p a
12 to 23 months	3 % p a
24 months	4% p a
SHORT-TERM	2% p a

Banking Business of every description transacted.

ಮಹತ್ವದ ವಾರ್ತೆ

— ಕಲಕತ್ತೆಯಲ್ಲಿ ಸಹಾಯಕ ಭಾರತ ಮಂತ್ರಿಗಳಾದ ಕರ್ನಲ್ ಮ್ಯೂರಹೆಡ್‌ರವರೂ, ಬಂಗಾಲದ ಗವ್ಹರ್ನರರಾದ ಬ್ರೈಬರ್ನ ದೊರೆಗಳೂ ರಾಷ್ಟ್ರೀಯ ಸಭಾಧ್ಯಕ್ಷರಾದ ಶ್ರೀ|| ಸುಭಾಸಚಂದ್ರ ಬೋಸರವರು ಶುಕ್ರವಾರ ಅರಮನೆಯಲ್ಲಿ ಒಟ್ಟುಗೂಡಿ ವಿಚಾರವಿನಿಮಯ ಮಾಡಿದರು. ಸಾಮಾನ್ಯ ವಿಷಯಗಳ ಮೇಲೆ ಸ್ನೇಹಭಾವದ ಚರ್ಚೆಯಾಯಿತೆಂದು ತಿಳಿಯುತ್ತದೆ ಈ ಚರ್ಚೆ ಮುಗಿಸಿಕೊಂಡು ಶ್ರೀ|| ಸುಭಾಷಚಂದ್ರ ಬೋಸರು ಅದೇ ದಿನ ಸಂಜೆ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆಗಾಗಿ ವಧಾರ್ಕ್ಕೆ ಹೊರಟರು! ಯಾವ ಘಟನೆಯ ಪೂರ್ವಸೂಚಿಕೆಯಿದು?

ಯುರೋಪ ಖಂಡದ ಭ್ರಮಣವೆತ್ತ?

(೭ನೇ ಪಾನಿನಿಂದ ಮುಂದರಿಸಿದ್ದು)

...ರ ಮಂಚರೊಳಗಿನ ಒಡಂಬಡಿಕೆಯಿಂದ ಹಿಟ್ಲರನಿಗೆ ಪ್ರಾಂತ ಪಾರ್ಶ್ವದೊಳಗಿನ ಚಿಂತೆ ತಪ್ಪಿದೆ ಪೂರ್ವ ಪಾರ್ಶ್ವದಲ್ಲಿಯೇ ಅಂದರೆ ಪೋಲಂಡ, ರಶಿಯಾ, ...ಪಾರ್ಶ್ವದಲ್ಲಿಯೇ ಹಿಟ್ಲರನು ಏಕಾಗ್ರಚಿತ್ತದಿಂದ ಮಾಡಿದಾಯಿತು ರುಮೆನಿಯಾ ಪ್ರಕರಣ ಇನ್ನೂ ತಣಿದಿಲ್ಲ ರುಮಾನಿಯಾದ ಕರೋಲ ಅರಸರಿಗೂ ಜರ್ಮನ್‌ರಿಗೂ ಒಡಂಬಡಿಕೆಯಾಗುವ ಲಕ್ಷಣಗಳಿಲ್ಲ. ಆ ಪ್ರಾಂತವನ್ನೂ ಅದರ ಜೊತೆಗೆ ರಶಿಯಾ ದೇಶದಲ್ಲಿ ಸೇರಿದ ಯುಕ್ರೇನಿಯಾ ಪ್ರದೇಶವನ್ನೂ ಜರ್ಮನಿಯೊಳಗೆ ಸೇರಿಸಿ ಜರ್ಮನ್ ಸಾಮ್ರಾಜ್ಯದ ವ್ಯಾಪ್ತಿಯನ್ನು ಬೆಳೆಸುವದಕ್ಕಾಗಿ ಹಿಟ್ಲರನು ಹೊಂಚು ಹಾಕಿದ್ದಾನೆ ಈ ಪ್ರದೇಶ ಮತ್ತು ರುಮೆನಿಯಾ ಪ್ರದೇಶ ಜರ್ಮನಿಯ ವಶವಾದರೆ ರುಮಾನಿಯಾ ದೇಶವ ಕೆಡವುಂಗೆ ಕಟ್ಟಿದಂತೆಯೇ! ಅದರಿಂದ ಕರೋಲ ಅರಸರು ರುಮೆನಿಯಾ ದೇಶವನ್ನು ಕಾಪಾಡುವ ನಿರ್ಧಾರ ಮಾಡಿದ್ದಾರೆ. ಹೀಗೆಲ್ಲ ಸೂತ್ರಗಳು ಓಡಾಡುತ್ತಿದ್ದಾಗ್ಯೂ ದ್ವೇಷಭಾಂಡಾರ ಹಬ್ಬುತ್ತಿದ್ದಾಗ್ಯೂ ಯುದ್ಧವಾಗುವ ಸಂಭವವಿಲ್ಲವಾಗಿ ಸೈನ್ಯ ಇಲಾಖೆಯ ಸರ್ ಥೊಮಸ್ ಇನ್ಸ್‌ಕಿಪ್‌ರವರು ಅಭಿಪ್ರಾಯ ಪಡುತ್ತಾರೆ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳನ್ನು ಕೇಳಲು, ಬ್ರಿಟಿಶ ಪ್ರಧಾನ ಮಂಡಳಕ್ಕೆ ಯುದ್ಧವಾಗುವದೆಂದು ತೋರುವದಿಲ್ಲವಾಗಿಯೂ ಜರ್ಮನಿಗೆ ಸಮಾಧಾನ ಮಾಡಬಹುದಾಗಿಯೂ ಮಿ || ಚಂಬರಲೇನರವರು ಉತ್ತರ ಕೊಟ್ಟರು. "ಶಿಕ್ಷಣ ಇಲಾಖೆಯ ಮಂತ್ರಿಗಳಾದ ಅರ್ಲ್-ಡಿ ಲಾ-ವ್ಹಾರ್‌ರವರು ಒಡಂಬಡಿಕೆಯ ಧೋರಣ ನಿರರ್ಥಕವಾಯಿತೆಂದು ವಿಧಾನ ಮಾಡುತ್ತಾರೆ. ಇದು ನಿಜವೇನು?" ಎಂಬದಾಗಿ ಕೂಲಿಕಾರ ಪಕ್ಷದ ಸಭಾಸದರಾದ ಮಿ|| ಫ್ಲೆಚರರವರು ಪಾರ್ಲಿಮೆಂಟಿನಲ್ಲಿ ಕೇಳಿದ ಪ್ರಶ್ನೆಗೆ ಚೆಂಬರಲೇನರವರು ಉತ್ತರ ಕೊಡಲಿಲ್ಲ, ಸುಮ್ಮನೆ ಕೂತುಕೊಂಡರು! ಇದರ ಅರ್ಥವೇನೆಂದು ನನಗೆ ತಿಳಿಯುವದಿಲ್ಲ ಸಾರ್ಥಕವಾಯಿತೆಂದು ಹೇಳಲೇ? ನಿರರ್ಥಕವಯಿತೆಂದು ತಿಳಿಯಲೇ? ಯುರೋಪ ಖಂಡದೊಳಗೆ ಶಾಂತಿಸ್ಥಾಪನೆ ಮಾಡಿ ಲೋಕಸುಖ ಕಲ್ಪಿಸಹೊರಟ ಮಿ|| ಚೆಂಬರಲೇನರವರಿಗೇ ಮನೋನಿಶ್ಚಯವಿಲ್ಲದ ಮೇಲೆ, ನಾನು ಭವಿಷ್ಯ ವರ್ತಿಸುವ ಬಗೆ ಹೇಗೆ? ೨ ತಿಂಗಳುಗಳಲ್ಲಿಯೇ ಪರಿಸ್ಥಿತಿ ಬಿಗಿಯಾಗಿದೆಯೆಂದು ಮಿ|| ಪಿರೋರವರು ಹೇಳುತ್ತಾರೆ ಅಲ್ಲಿಯವರೆಗೆ ಘಟಿಸುತ್ತಿರುವ ಸಂಗತಿಗಳನ್ನಷ್ಟೆ ನಿರೀಕ್ಷಿಸುತ್ತಿದ್ದರಾಯಿತು!

॥ ಶ್ರೀ ಭುವನೇಶ್ವರಿ ಪ್ರಸನ್ನ ॥

ಶ್ರೀ ಭುವನೇಶ್ವರೀ ಸ್ಪಿನಿಂಗ ಲೂಮ್ಸ್, ಗೋಕರ್ಣ.

(ಉತ್ತರ ಕನ್ನಡ)

ಬನ್ನಿರಿ! ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ!! ಬನ್ನಿರಿ!!!

ಇಲ್ಲಿಯ ಕೈಮಗ್ಗದಲ್ಲಿ ತಯಾರಾದ ಮಾಲುಗಳನ್ನು ಒಮ್ಮೆ ನೋಡಿರಿ!

ಪಕ್ಕಾ ಬಣ್ಣ! ಖಾತ್ರಿ ಮಾಲು!! ಬೆಲೆ ಕಡಿಮೆ!!!

ನಮ್ಮ ಮಗ್ಗದಲ್ಲಿ

ತರತರದ ಧೋತರಗಳು, ನಮೂನೆವಾರ ಸೀರೆಗಳು, ಕಿರಿಗೆಗಳು, ಪಂಜೆಗಳು ಇವಲ್ಲದೆ ಇನ್ನೂ ಅನೇಕ ಹೊಸ ಹೊಸ ನಮೂನೆಯ ಜವಳಿಗಳು ಸೋಕಾಗಿಯೂ ಚಿಲ್ಲರೆಯಾಗಿಯೂ ಯೋಗ್ಯ ಬೆಲೆಗೆ ಸಿಗುತ್ತವೆ.

ಮಾಲಿನ ಬಣ್ಣದ ಬಗ್ಗೆ ಗ್ಯಾರಂಟಿ.

ಆರ್ಡರಿನ ಜೊತೆಗೆ ಅರ್ಧ ಹಣ ಮುಂಗಡ ಕೊಟ್ಟಲ್ಲಿ ಒಂದು ತಿಂಗಳಲ್ಲಿ ಆರ್ಡರಿನಂತೆ ಮಾಲು ಪೂರೈಸಲಾದೀತು

☞ ನಾವು ಕೈಯಿಂದ ತೆಗೆದ ನೂಲು ಕೊಂಡುಕೊಳ್ಳುತ್ತೇವೆ, ಇಷ್ಟಪಟ್ಟವರಿಗೆ ಆ ನೂಲಿನಿಂದ ಬೇಕಾದ ಬಟ್ಟೆಗಳನ್ನು ತಯಾರಿಸಿ ಕೊಡುತ್ತೇವೆ

ನಮ್ಮಲ್ಲಿ ಮಾಲು ಖರೀದಿಸಿದಲ್ಲಿ ತಾನೇ ಎಲ್ಲರೂ ಖಾತ್ರಿಯಾಗುವದು

ಡಿ. ಎನ್ ಗೋಪಿಭಟ್ಟ,
ಪ್ರೊಪ್ರೈಟರ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ್)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ [ಪೊಟ್ಟಣಕ್ಕೆ 0-1-0

ಶ್ರೀಕರ ಕಸ್ತೂರೀ ಮಾತ್ರೆ.

ಮನಾಸನೆಯುಳ್ಳ ಈ ಮಾತ್ರೆಗಳು ಮಕ್ಕಳ ಮತ್ತು ದೊಡ್ಡವರ ನೆಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದ್ದಕ್ಕೆ ಸಿದ್ಧೌಷಧವಾಗಿದೆ ಬೆಲೆ 0—4—0, 0—2—0

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—4—0

ದೊರೆಯುವ ಸ್ಥಳ - ಹೊನ್ನಾವರ ಕಲ್ಯಾಣಪೂರ ಬ್ರದರ್ಸ ಕುಮಟಾ ದೇವಪ್ಪಾ ಆಯ್ಯು ನಾಯ್ಕ, ದಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ವಸ್ತಿಕ ಫಾರ್ಮಸಿ

ಪತ್ರ ನಂಜನಗೂಡು ಸದ್ವೈದ್ಯಶಾಲಾ, ಫ್ರೆಂಚ್ ರಥಬೀದಿ, ಮಂಗಳೂರು.

ಬನ್ನಿರಿ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಒಳ್ಳೆ ಸೌಕರ್ಯವುಳ್ಳದ್ದಾಗಿ ಇತ್ತೀಚಿಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಒಂದು ಅನುಭವ ಪಡೆಯಿರಿ!

ಸೂಚನೆ— ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸಬಹುದು

ಬಿ. ರಾಮಕೃಷ್ಣಯ್ಯಾ, ಮಾಲಕ

ಸ್ಥಳಿಕ ವಿಷಯಗಳು

(೧ನೇ ಪುಟದಿಂದ ಮುಂದರಿಸಿದ್ದು)

ಯೆಂದು ನನ್ನ ಊಹೆ. ಕಾರವಾರವನ್ನು ಸೈನ್ಯಾಂಗ್ಯದಲ್ಲಿ ರೂಪಾಂತರಿಸಿ ಮುಖ್ಯ ಸ್ಥಳವನ್ನು ಕುಮಟೆಗೆ ಬದಲಿಸಲಾಗಲಿ ಒಯ್ಯುವ ಕುರಿತು ಸಮ್ರಾಜ್ಯ ಸರಕಾರವು ಆಲೋಚಿಸುತ್ತಿರಬೇಕು. ಕಾರವಾರದಲ್ಲಿ ಸೈನ್ಯ ರಾಜ್ಯವಾಗುತ್ತಿದ್ದರೆ, ಇಲ್ಲವಾದರಲ್ಲಿ ಸ್ವತಂತ್ರ ವಿದ್ಯುತ್-ಕಾರಖಾನೆಯಾದರೆ ಅದೊಂದು ಅನರ್ಥ ಒತ್ತಿಯೇ ಸ್ರ ಪ್ರಸಂಗದಲ್ಲಿ ಮೈಸೂರು ಸರಕಾರದ ಮರ್ಜಿ ಕಾಯುವ ಉಪದ್ರವ ತಪ್ಪುವಂತಿದೆ

***

ನಮ್ಮ ಜಿಲ್ಲೆಯ ವನಸಂಪತ್ತಿ.

ನಮ್ಮ ಜಿಲ್ಲೆಯೊಳಗಿನ ೮೯ ಸಾವಿರ ಎಕರ ಪ್ರದೇಶದಲ್ಲಿ ಬಿದುರು ಬೆಳೆಯುತ್ತಿದೆ ಎಲ್ಲ ಪ್ರದೇಶ ಗಂಗಾವಳಿ-ಕಾಳಿ ನದಿ ಹೀಗೆ ಎರಡು ನದಿಗಳ ಸಂಧಿ ಇರುತ್ತದೆ ಈಗ ಇರುವ ಬಿದುರು ಸರಾಸರಿ ೫೦ ವರ್ಷ ಸಾಕು ಪ್ರತಿ ವರ್ಷಕ್ಕೆ ೧೨ ೦೦೦ ಟನ್ನಿನಂತೆ ಬಿದುರಿನ ಪೂರೈಕೆಯಾಗಬಹುದು. ಇದರಿಂದ ಬಾಳೆಮನೆ, ಕದ್ರಾ, ಕಡವಾಡ ಈ ಮೂರು ಗ್ರಾಮಗಳಲ್ಲಿ ಕಾಗದದ ಕಾರಖಾನೆಗಳನ್ನು ತೆರೆಯ ಬಹುದಾಗಿ ಕಾಗದ-ಕಾರಖಾನೆಯವರ ಅಭಿಪ್ರಾಯ ವಾಗಿದೆ ಕಾಳಿ ನದಿಯಿಂದ ಬಿದುರುಗಳನ್ನು ತೀರ ಕಡಿಮೆ ಖರ್ಚಿನಿಂದ ಕಡವಾಡ ತನಕ ಒಯ್ಯಬಹುದು ತ್ತದೆ ಕಡವಾಡ-ಕಾರವಾರದ ಅಂತರ ಒಂದೇ ಮೈಲು, ಪರಊರ ರಫ್ತಿಗೆ ತೀರ ಅನುಕೂಲ ಅದರಿಂದ ಕಡವಾಡದಲ್ಲಿಯೇ ಕಾರಖಾನೆಯನ್ನು ಸ್ಥಾಪಿಸಬೇಕೆಂದು ಗೊತ್ತಾಗಿರುವದಂತೆ ಸರಾಸರಿ ೧ ಟನ್ ಕಾಗದ ಮಾಡಬೇಕಾದರೆ ೭-೮ ಟನ್ ಬಿದುರು ಬೇಕು ಕಾರಖಾನೆಯ ಸ್ಥಾಪನೆಗೆ ಇಮಾರತ್ತು, ಯಂತ್ರಸಾಹಿತ್ಯ ಮೊದಲಾದವುಗಳಿಗೆಲ್ಲ ರೂ ೨೦ ಲಕ್ಷ ಬಂಡವಲು ಬೇಕು ಇದಲ್ಲದೆ ಕೃತ್ರಿಮ ರೇಶಿಮೆ ತಯಾರಿಸುವಂಥ ಹುಲ್ಲು ಸಹ ಇಲ್ಲಿಯ ಅಡವಿಗಳಲ್ಲಿ ಬೆಳೆಯುತ್ತದೆ ಡೆಹರಾಡೂನ್‌ದಲ್ಲಿಯೂ ಜರ್ಮನಿಯಲ್ಲಿಯೂ ಈ ಕುರಿತು ಪ್ರಯೋಗಗಳು ನಡೆದಿವೆ. ಬಿದುರುಗಳಿಂದಲೂ ಕೃತ್ರಿಮ ರೇಶಿಮೆ ತಯಾರಿಸಬಹುದಂತೆ ಪ್ರಯೋಗಗಳು ಯಶಸ್ವಿಯಾದರೆ ಒಳ್ಳೇ ಲಾಭವಿದೆ ಇದಲ್ಲದೆ, ಯಲ್ಲಾಪುರ ತಾಲೂಕಿನ ತಳಕೆಬೈಲದಲ್ಲಿ ಮೆಂಗನೀಸ ಧಾತುವಿನ ಗಣಿಗಳು ದೊರೆತಿವೆ ಮುಂಬಯಿಯ ಮೆಸರ್ಸ ಒಕಲೀ ಬ್ರಾಡೀಸ್ ಎಂಡ್ ಕಂಪನಿ, ಲಿ, ಇವರು ಈ ಧಾತುವನ್ನು ತೆಗೆದು ಮೋಟಾರಿನಿಂದ ಕಪ್ಪೆಗೆ ತಂದು ಅಲ್ಲಿಂದ ಮಚ್ವೆಯಲ್ಲಿ ಹಾಕಿ ಮಾರ್ಮಗೋವಾಕ್ಕೆ ಒಯ್ಯುತ್ತಾರೆ ಈ ಧಾತುವನ್ನು ಶುದ್ಧಗೊಳಿಸುವ ಕಾರಖಾನೆಯನ್ನು ಇಲ್ಲಿಯೇ ಸ್ಥಾಪಿಸುವಂತೆ ಏರ್ಪಾಟು ಮಾಡಿದರೆ ಜನರಿಗೆ ಬಹಳ ಪ್ರಯೋಜನ ದೊರೆಯುವಂತಿದೆ. ಈ ಧಾತು ೬೦೦ ಎಕರೆ ಪ್ರದೇಶದಲ್ಲಿ ದೊರೆಯಬಹುದು ತಳಕೆಬೈಲ ಇದು ಕಳಚೆ ಊರಿಗೆ ಸಮೀಪ. ಕಳಚೆ ಊರು ಬೇರೆ ಬೇರೆ ಕಾರಣಗಳ ಮೂಲಕ ಕುಗ್ರಾಮವಾಗಿತ್ತು, ಜನವಸತಿ ತೀರ ಕುಗ್ಗಿಹೋಗಿತ್ತು, ತೋಟಗಳನ್ನು ಸಾಗುವಳಿ ಮಾಡಲಿಕ್ಕಾಗದೆ ರೈತರು ಸೋತುಹೋಗಿದ್ದರು, ಹಲವರು ದೇಶಾಂತರ ಮಾಡಿದ್ದರು, ಕೆಲವರು ಚಳಿಜ್ವರ ಮೊದಲಾದ ರಾಹಿನಿಗಳಿಂದ ತೀರಿಕೊಂಡಿದ್ದರು ಗಣಿಗಳ ಶೋಧದ ಮೂಲಕ ಈ ಪ್ರದೇಶಕ್ಕೆ ಈಗ ಊರ್ಜಿತಾವಸ್ಥೆ ಬರಬಹುದು., ಜನರು ನೆಲಿಸಲು ಅನುಕೂಲ.

***

ತಂಬಾಕಿ ಮಂಡಳಗಳು.

ತಂಬಾಕಿ ಮಂಡಳಗಳಿಂದ ಖಾನದೇಶ ಜಿಲ್ಲೆಯಲ್ಲಿ ಹಂದಿಗಳ ಕಾಟ ಬಹುಮಟ್ಟಿಗೆ ನಿವಾರಣೆಯಾಯಿ ತೆಂದು ತಿಳಿಯುತ್ತದೆ ರೂ ೬೦೦ ಖರ್ಚಿನಿಂದ ರೂ ೩೦ ಸಾವಿರ ಬೆಲೆ ಬರುವ ಬೆಳೆ ರಕ್ಷಣೆ ಹೊಂದಿತು ಅದೇ ಜಿಲ್ಲೆಯ ಶೌಜಾರಿಯಲ್ಲಿ ರೂ. ೩೦೪ ಖರ್ಚಿನಿಂದ ೨೯ ಸಾವಿರ ಎಕರೆ ಭೂಮಿ ಬೆಳೆಯ ಕಾಟದಿಂದ ತಪ್ಪಿತು. ನಮ್ಮ ಜಿಲ್ಲೆಯೊಳಗೆ ಹಂದಿಯ ಕಾಟ ವಿಪರೀತ. ಅಡವಿ-ಹೊಲಗಳು ಹೊಂದಿಕೆಯಾಗಿರುವದರಿಂದ ಹಂದಿಗಳು ಹೊಲಗಳನ್ನು ನುಗ್ಗಿ ಬಹಳ ನಷ್ಟಪಡಿಸುತ್ತವೆ, ಬೆಳೆ ತಿಂದು ನಷ್ಟಪಡಿಸುವದಕ್ಕಿಂತ ತುಳಿದು ನಷ್ಟಪಡಿಸುವದು ಹೆಚ್ಚು. ಹಂದಿಗಳ ಕಾಟದಿಂದ ಬೆಳೆ ರಕ್ಷಣೆ ಮಾಡುವದಕ್ಕಾಗಿ ನಿದ್ದೆಗೆಟ್ಟು ಇಡೀ ರಾತ್ರಿ ಕಾವಲಿಡಬೇಕಾಗುತ್ತದೆ. ಅದರಿಂದ ಆರೋಗ್ಯ ಕೆಟ್ಟು ಜನರು ಅಸ್ವಸ್ಥ ಬಿದ್ದು ಬಹಳ ನಷ್ಟವಾಗುತ್ತದೆ. ಬದುಕಿಸಿಕೊಂಡ ಬೆಳೆ ಖರ್ಚು ಮಾಡಿದರೂ ಆರೋಗ್ಯ ನೆಟ್ಟಗಾಗುವದಿಲ್ಲ ! ನಮ್ಮಲ್ಲಿಯ ಗ್ರಾಮಗಳು ನಿರ್ಜನವಾಗಲಿಕ್ಕೂ ಹೊಲಗಳು ಕ್ರಮವಾಗಿ ಹಾಳುಬೀಳಲಿಕ್ಕೂ ಇದೂ ಒಂದು ಕಾರಣ ಚಳಿಜ್ವರದ ಉಪಹತಿಗೂ ಪ್ರಧಾನ ಕಾರಣ ವೆಂದು ನಿಃಸಂಶಯವಾಗಿ ಹೇಳಬಹುದು. ತಂಬಾಕಿ ಮಂಡಳಗಳಿಂದ ಹಂದಿಗಳ ಉಪಟಳ ತಪ್ಪಿ ಬೆಳೆ ಉಳಿಯುತ್ತದೆ, ಜನರಿಗೆ ನಿದ್ದೆಗೆಡುವದು ತಪ್ಪುತ್ತದೆ. ಬೇಸಾಯ ಇಲಾಖೆಯವರೂ ಜಿಲ್ಲಾಧಿಕಾರಿಗಳೂ ಖಾನದೇಶದೊಳಗಿನ ತಂಬಾಕಿ ಮಂಡಳಗಳ ಕ್ರಮಗಳನ್ನು ಅಭ್ಯಾಸ ಮಾಡಿ ಅವನ್ನು ನಮ್ಮಲ್ಲಿ ಹೊರಡಿಸಿದರೆ ಉಪಕಾರವಾಗುವದು.

BHUVANENDRA PRODUCTS, LTD.

KATAPADI. S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ.

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಿಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ. ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ— ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ
ಅಂಕೋಲಾ — ವೇದಮೂರ್ತಿ ಹನುಮಂತ ಕೇಶವ ಭಟ್ಟ.
ಕಾರವಾರ — ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ
ಹೊನ್ನಾವರ — ಕಾಮತ ಸ್ಟೋರ್ಸ
ಗೋಕರ್ಣ — ಎಮ್ ವ್ಹಿ. ಬಸ್ತಿಕರ, ಮರ್ಚಂಟ.
ಶಿರ್ಸಿ — ಆರ್ ವ್ಹಿ. ಧಾಕಪ್ಪಾ, ಕೆಮಿಸ್ಟ

ವಿಳಾಸ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಬ್ರಾಂಚ್ ಆಫೀಸು: ಕುಮಟಾ. ಉ. ಕ

OR

BHUVANENDRA PRODUCTS LTD.
Head Office: KATAPADI, S. K.

ಸಭೆಯಲ್ಲಿ ನಡೆದ ಕೆಲವು ಚರ್ಚೆ ನಮೂದಿಸ ತಕ್ಕಂಥ ದ್ದಿವೆ. ಅಂಕೋಲಾ ತಾಲೂಕಿನಲ್ಲಿ ಸಭಾಸದರಾಗಿ ಸೇರಿಸಿದವರ ಸಹಿಗಳೇ ಸಭಾಸದರ ಅರ್ಜಿಗಳ ಮೇಲೆ ಇರಲಿಲ್ಲ ಆದಂದ ಅವರ ಮೆಂಬರಿ ರದ್ದುಮಾಡಲಾಯಿತು. ಅವರಿಂದ ವಸೂಲಾದ ಹಣ ಪ್ಯಾಗ ಜಮಾ-ಖರ್ಚಿನಲ್ಲಿ ತೋರಿಸಬೇಕೆಂದು ಗೊತ್ತಾಗಲಿಲ್ಲ. ಈ ತಾಲೂಕಿನಲ್ಲಿ ಹಳೇ ಪುಸ್ತಕಗಳ ಮೇಲೆ ಹೀಗೆ ಸಭಾಸದರಾಗಿ ಸೇರ್ಪಡೆಯಾದ ಉದಾಹರಣಗಳಿವೆ ಇದೇನು ಗೊಂದಲವೆಂದು ತಿಳಿಯಲಿಲ್ಲ ಪ್ರಾಂತಿಕ ಕೊಂಗ್ರೆಸ ಕಮಿಟಿಯಿಂದ ಈ ಹಿಂದೆ ತರಿಸಿದ ಪುಸ್ತಕಗಳನ್ನು ಅಂಕೋಲೆಯವರು ಹಿಂತಿರುಗಿ ಕಳಿಸಿರಲಿಲ್ಲ ಹೀಗೆ ಪುಸ್ತಕಗಳನ್ನು ಹಿಂತಿರುಗಿ ಕೊಳ್ಳದೆ ಪ್ರಾಂ|| ಕೊಂ|| ಕಮಿಟಿಯ ಲೆಕ್ಕ ಹೇಗೆ ಬಾಯಗೂಡಿತೆಂದು ತಿಳಿಯಲಿಲ್ಲ ಪ್ರಾಂ|| ಕೊಂ|| ಕಮಿಟಿಯವರು ಈ ಪ್ರಕಾರ ಅಂಕೋಲೆಯವರಿಗೆ ಸರ್ವಸ್ವಾತಂತ್ರ್ಯ ಕೊಡುವದು ಆಸಿಪ್ಪ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ವಿಚಾರಿಸಿ ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ತಕ್ಕ ಬುದ್ಧಿ ಹೇಳುವದುಚಿತ ೯ ನಾ- ಅಂಕೋಲಾ ಮೊದಲಾದ ಕಮಿಟಿಯವರು ತಮ್ಮಿಂದ ಕೂಡಿಸಿದ ಸಭಾಸದರ ವರ್ಗಣಿಯ ಬಾಬತು ಜಿಲ್ಹಾ ಕೊಂಗ್ರೆಸ ಕಮಿಟಿಗೂ ಪ್ರಾಂತಿಕ ಕೊಂಗ್ರೆಸ ಕಮಿಟಿಗೂ ಸಲ್ಲತಕ್ಕ ಪಾಲಿನ ಹಣವನ್ನು ಸಲ್ಲಿಸಲಿಲ್ಲ ಜಿಲ್ಹಾ ಕೊಂಗ್ರೆಸ ಕಮಿಟಿಯವರು ಎಲ್ಲ ಸಭಾಸದರ ಬಾಬತು ಪ್ರಾಂತಿಕ ಕೊಂಗ್ರೆಸ ಕಮಿಟಿಗೆ ಸಲ್ಲತಕ್ಕ ಹಣವನ್ನು ಈ ಮೊದಲೇ ಸಲ್ಲಿಸಿದ್ದಾರೆ. ಸಭಾಸದ-ಅರ್ಜಿಯ ಮೇಲೆ ಸಹಿಯಿಲ್ಲದ ಅರ್ಜಿಗಳ ಬಗ್ಗೂ ಪ್ರಾಂ| ಕೊಂ| ಕಮಿಟಿಗೆ ಹಣ ಸಂದಿದೆ ಈಗ ಆ ಸಭಾಸದರ ಹೆಸರು ರದ್ದಾದ ಬಳಿಕ, ಈ ಹಣದ ಅವಸ್ಥೆಯೇನು? ಹೀಗೆ ಅಕ್ರಮದಿಂದ ಸಭಾಸದರಾಗಿ ಸೇರಿಸಿದ ಕಾರ್ಯ-ಕರ್ತರಿಗೆ ಶಾಸನವೇನು? ಈ ಬಗ್ಗೆ ಜಿಲ್ಹಾ ಕೊಂಗ್ರೆಸ ಕಮಿಟಿಯಲ್ಲಿ ಚರ್ಚೆ ಆದದ್ದು ತೋರಲಿಲ್ಲ. ಹಲವು ಅರ್ಜಿಗಳ ಮೇಲೆ ವರ್ಗಣಿ-ಹಣ ವಸೂಲ ಮಾಡಿದವರ ಸಹಿ ಸಹ ಇರಲಿಲ್ಲವಾಗಿ ತಿಳಿಯುತ್ತದೆ. ಕುಮಟೆಯ ಕೆಲ ಹುಡುಗರು ಅಲ್ಲಿಯ ಮ್ಯು|| ಯ ಇಲೆಕ್ಶನನ್ನು ಕೊಂಗ್ರೆಸ ಪರವಾಗಿ ನಡಿಸಬೇಕೆಂದು ೧೫-೨೦ ಸಹಿಗಳ ಒಂದು ಅರ್ಜಿಯನ್ನು ಕೊಂಡೊಯ್ದಿದ್ದರು ಅಲ್ಲಿಯ ನಗರ ಇಲ್ಲವೆ ತಾಲೂಕ ಕೊಂಗ್ರೆಸ ಕಮಿಟಿಯು ವಿದ್ಯಮಾನ ಈ ಅರ್ಜಿ ಏಕೆ ಸಾದರವಾಗಲಿಲ್ಲೆಂದು ಕೆಲವರು ಆಕ್ಷೇಪ ಮಾಡಿದರು. ಕೊನೆಗೆ ಕುಮಟೆಯ ನಗರ ಕೊಂಗ್ರೆಸ ಕಮಿಟಿಯವರು ಸ್ಥಳಿಕ ಪರಿಸ್ಥಿತಿ ವಿಚಾರಿಸಿ ವರದಿಯನ್ನೊಪ್ಪಿಸಬೇಕಾಗಿಯೂ ಈ ಕುರಿತು ಯುಕ್ತಕಂಡ ನಿರ್ಣಯ ಕೈಕೊಳ್ಳುವ ಬಗ್ಗೆ ಜಿಲ್ಹಾ ಕೊಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳದ ಸಭೆ ಕುಮಟೆಯೊಳಗೆ ಇದೇ ಡಿಶಂಬರ ತಿಂಗಳಿನ ಒನೇ ವಾರದಲ್ಲಿ ಸೇರಿಸಬೇಕಾಗಿಯೂ ನಿರ್ಣಯವಾಯಿತು

***

ಗೇರಸಪ್ಪೆಯೊಳಗಿನ ವಿದ್ಯುತ್-ಕಾರಖಾನೆ

ಜಿಲ್ಹಾ ಕೊಂಗ್ರೆಸ ಕಮಿಟಿಯ ಕೆಲಸವನ್ನು ತೀರಿಸಿಕೊಂಡು, ಜೋಗನ್ನು ನೋಡುವ ಬೆಸಯಿಂದ ನಾನು ಜೋಗಿಗೆ ಹೋದೆ ಮಾರ್ಗಕ್ರಮ ಮಾಡದಲ್ಲಿ ಈ ಜೋಗಿನ ವೈಭವ ವಿಶೇಷ ಆ ಕಾಲದ ತಡಸಲುಗಳ ಅಬ್ಬರದಮಾಯಕ ನೋಟ ನೋಡಿ ನನಗೆ ಅತ್ಯಾನಂದವಾಯಿತು ಆ ಸೊಬಗನ್ನು ವರ್ಣಿಸಲಸದಳ. ಅದನ್ನು ಅನುಭವಿಸಿಯೇ ತೀರಬೇಕು. ವಿದ್ಯುತ್-ಕಾರಖಾನೆಯ ತಯಾರಿ ನೋಡಬೇಕೆಂದು ನಾನು ಮೈಸೂರು ಸೀಮೆಯ ಕಡೆಗೆ ಹೋದೆ ಅಲ್ಲಿ ದೊಡ್ಡ ದೊಡ್ಡ ಸಾಹೇಬರು (ಕರೇ ಸಾಹೇಬರು) ಗುಡಾರು ಹೂಡಿಕೊಂಡು ವಿಲಾಸಮಗ್ನರಾಗಿದ್ದಾರೆ. ನಾಲ್ಕು ದಿಕ್ಕಿಗೆ, ಗುಡಾರಗಳ ಅಚ್ಚೆ-ಈಚೆ, ಸುತ್ತು-ಮುತ್ತು ವಿದ್ಯುದ್ದೀಪಗಳ ಬೆಳಕು ! ಜಗದ್ವಿಖ್ಯಾತ ಶಿಲ್ಪಶಾಸ್ತ್ರಜ್ಞರಾದ ಶ್ರೀ| ವಿಶ್ವೇಶ್ವರಯ್ಯನವರು ವಿದ್ಯುತ್-ಕಾರಖಾನೆಯ ಬಗ್ಗೆ ಒಡ್ಡು ಕಟ್ಟಲು ನಿರ್ದೇಶಿಸಿದ ಸ್ಥಳ ಈ ಸಾಹೇಬರಿಗೆ ಮಾನ್ಯವಾಗಲಿಲ್ಲ; ಬೇರೊಂದೆಡೆ ಒಡ್ಡು ಕಟ್ಟಿಸಿದರು. ಅದು ಮುರಿದು ಹೋಯಿತು ಅದಕ್ಕೆ ತಗಲಿದ ವೆಚ್ಚ ರೂಪಾಯಿ ೩—೪ ಲಕ್ಷ ಶರಾವತಿ ಹೊಳೆಯ ಪಾಲಾಯಿತು! ಪ್ರಯೋಗಕ್ಕೆಂದು ತಾವು ಈ ಒಡ್ಡು ಕಟ್ಟಿಸಿದ್ದವಾಗಿ ಸಾಹೇಬರು ಹೇಳಿ, ತಮ್ಮ ದಕ್ಷತನವನ್ನು ಮುಚ್ಚಿಕೊಳ್ಳುತ್ತಾರೆ ನಾನು ಅಲ್ಲಿ ಹೋದದ್ದು ಬುಧವಾರ ಇದೇ ಶನಿವಾರ ತಾ|| ೧೧ನೇಗೆ ಶ್ರೀ|| ವಿಶ್ವೇಶ್ವರಯ್ಯನವರು ಸ್ವತಃ ಒಂದು ಎಲ್ಲ ಪರಿಸ್ಥಿತಿ ತಿಳಕೊಂಡು ಸಲಹೆ ಕೊಡುವವರಿದ್ದಾರೆಂಗಿ ಹೇಳುತ್ತಿದ್ದರು. ಇಲ್ಲೊಂದು ಭೋಜನಾಲಯವಿದೆ ಊಟಕ್ಕೆ ೬ ಆಣೆ ದರ! ೨ ಆಣೆಗೂ ಈ ಊಟ ತುಟ್ಟಿ! ಬೇರೆ ಕಡೆ ಉಣ್ಣಲಿಕ್ಕೆ ಉಪಾಯವಿಲ್ಲ. ಯಾಕೆಂದರೆ ಇದ್ದದ್ದೇ ಒಂದು ಭೋಜನಾಲಯ! ಇನ್ನು ಭೋಜನಾಲಯ ತೆರೆಯಲಿಕ್ಕೆ ಮೈಸೂರು ಸರಕಾರವು ಅಪ್ಪಣೆ ಯಾನೆ ಲೈಸೆನ್ಸ ಕೊಡುವದಿಲ್ಲ! ೨ ಕಿರಾಣಿ ಅಂಗಡಿಗಳಿವೆ, ಎರಡೇ ಅಂಗಡಿಗಳು! ಇಲ್ಲಿ ದುಡ್ಡಿಗೆ ಎರಡು ದುಡು ಕೊಟ್ಟರೂ ಚೊಕ್ಕ ಸರಕು ಸಿಗುವದಿಲ್ಲ. ಮೂರನೇ ಅಂಗಡಿ ತೆರೆಯಲಿಕ್ಕೆ ಸರಕಾರಿ ಅಪ್ಪಣೆಯಿಲ್ಲ ಸುಮಾರು ೩-೪ ಸಾವಿರ ಕೂಲಿಕಾರರು ಅಲ್ಲಿ ದುಡಿಯುತ್ತಿದ್ದಾರೆ. ಬಹುತರವಾಗಿ ನಮ್ಮ ಜಿಲ್ಹೆಯ ಮತ್ತು ದಕ್ಷಿಣ ಕನ್ನಡ ಜಿಲ್ಹೆಯ ಕೂಲಿಕಾರರೇ ಹೆಚ್ಚು. ಯೋಜನೆಯಂತೆ ಈಪಾಗ ಇದ್ದಷ್ಟು ಕೂಲಿಕಾರರು ಕಡಿಮೆಯೇ ಆಗಿತ್ತು! ಆದರೆ ಶ್ರೀ|| ವಿಶ್ವೇಶ್ವರಯ್ಯನವರಿಗೂ ಮಿಗಿಲಾಗಿ ಬುದ್ಧಿಶಾಲಿಗಳಾದ ಕರೇ ಸಾಹೇಬರು ಸ್ಥಳಾಂತರಮಾಡಿ ಕಟ್ಟಿಸಿದ ಒಡ್ಡು ಮುರಿದುಹೋದದ್ದರಿಂದ ಕೂಲಿಕಾರರು ಕೆಲಸವಿಲ್ಲದೆ ಗೋಳಿಡುವ ಪ್ರಸಂಗ ಬಂದಿದೆ. ನಮ್ಮಿತ್ತ ಕಡೆಯ ಮೈಸೂರೇತರರಿಗೆ ಇಲ್ಲಿ ಖಾನಾವಳಿಯಿಡಲಿಕ್ಕಾಗಲಿ ಅಂಗಡಿಯಿಡಲಿಕ್ಕಾಗಲಿ ಅಪ್ಪಣೆ ದೊರೆಯುವದಿಲ್ಲ. ಇಷ್ಟು ಸಂಕುಚಿತ ಪ್ರವೃತ್ತಿಯವರೊಡನೆ ಮುಂಬಯಿ ಸರಕಾರವು ಪಾಲುಗಾರಿಕೆಗೆ ಹೋಗುವದು ಇಷ್ಟವಲ್ಲ. ನಾ|| ಸುಂಬಯವರು ಈ ವಿಷಯವನ್ನು ಸಾಂಗೋಪಾಂಗ ವಿಚಾರಿಸಿ ಆ ಗೊಡವೆಯನ್ನು ಬಿಟ್ಟುಬಿಡುವದು ಲೇಸು. ಮೈಸೂರೇತರರಿಗೆ ಸುಲಿಯಲು ಮೈಸೂರಿನವರಿಗೆ ಮುಂಬಯಿ ಸರಕಾರವು ಎಡೆ ಮಾಡಿಕೊಡಲಾಗದು

***

ಇದರ ಮೇಲಿಂದ ವಿದ್ಯುತ್-ಕಾರಖಾನೆಯ ವಿಚಾರವನ್ನು ತೊರೆಯಬೇಕೆಂದು ನನ್ನ ಅಭಿಪ್ರಾಯವಿಲ್ಲ. ನಮ್ಮ ಜಿಲ್ಹೆಯೊಳಗೆ ಸ್ವತಂತ್ರವಾಗಿ ವಿದ್ಯುತ್-ಕಾರಖಾನೆಯನ್ನು ಹೊರಡಿಸಲು ಸ್ಥಳಾನುಕೂಲತೆಯುಂಟು. ಗುಂಡಬಾಳೆ ಸಮೀಪ ಪಟ್ಟದ ಪಾರ ಸ್ಥಳ ತೀರ ಅನುಕೂಲವಾದದ್ದು ಇದು ಗಂಗಾವಳಿ ಹೊಳೆಯ ಮೇಲ್ಭಾಗ. ೧೦-೧೫ ವರ್ಷಗಳ ಹಿಂದೆ ಜಿಲ್ಹೆಯ ಮುಖ್ಯ ಸ್ಥಳವನ್ನು ಕಾರವಾರದಿಂದ ಸ್ಥಳಾಂತರ ಮಾಡಿ ಶಿರ್ಶಿಗೆ ಒಯ್ಯಬೇಕೆಂಬದೊಂದು ಆಲೋಚನೆ ನಡೆದಿತ್ತು ಕಾರವಾರದಲ್ಲಿ ಸೈನ್ಯ ರಾಜ್ಯ ವನ್ನಿಡಬೇಕೆಂಬದೊಂದು ಚರ್ಚೆ ನಡೆದಿತ್ತು ಆ ಕಾಲದಲ್ಲಿ ಪಟ್ಟದಪಾರ ಭಾಗದ ಸರ್ವೆ ಆಗಿತ್ತಾಗಿಯೂ ಅಲ್ಲಿಂದು ವಿದ್ಯುತ್-ಕಾರಖಾನೆಯನ್ನು ಸ್ಥಾಪಿಸಬಹುದೆಂಬ ವಿಚಾರ ನಡೆದಿತ್ತಾಗಿಯೂ ಕೆಲವರು ಹೇಳುತ್ತಾರೆ. ಪಟ್ಟದಪಾರದಲ್ಲಿ ವಿಪುಲ ನೀರುಂಟು. ಬೇಕಾದಾಗ ಬೇಕಷ್ಟು ನೀರು ಸಿಗುತ್ತದೆ. ಇದು ಮಧ್ಯಸ್ಥಳ. ಘಟ್ಟದ ಮೇಲಿನ ಶಿರ್ಶಿ, ಯಲ್ಲಾಪುರ, ಘಟ್ಟದ ಕೆಳಗಿನ ಕಾರವಾರ, ಅಂಕೋಲಾ, ಕುಮಟಾ ಇವು ಇಲ್ಲಿಂದ ೨೦-೨೫ ಮೈಲು ಅಂತರದೊಳಗಿವೆ. ಇಲ್ಲಿ ಮುಂಬಯಿ ಸರಕಾರವು ೭೫ ಸಾವಿರ ರೂಪಾಯಿ ಖರ್ಚು ಮಾಡಿ ಸಂಕ ಕಟ್ಟಿಸಬೇಕೆಂದು ಗೊತ್ತುಮಾಡಿರುವದಾಗಿ ತಿಳಿಯುತ್ತದೆ. ಸಂಕದ ಬದಲಿಗೆ ಒಡ್ಡು ಕಟ್ಟಿಸಿದರೆ ಕೆಲ ಮಟ್ಟಿಗೆ ಹೆಚ್ಚಿನ ಖರ್ಚು ತಗಲಬಹುದು. ಆದರೆ ಅದರಿಂದ ನೀರಿನ ಸಂಗ್ರಹವಾಗಿ ಕಾಲುವೆಗಳಿಂದ ನೀರನ್ನು ಒಯ್ದು ಸುತ್ತಲಿನ ಗ್ರಾಮಗಳಲ್ಲಿ ಹೊಲಗಳನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವುಂಟು ಮೇಲಾಗಿ ವಿದ್ಯುತ್-ಕಾರಖಾನೆಯ ಸ್ಥಾಪನೆಗೆ ಅನುಕೂಲವಾಗುವಂತಿದೆ. ಗೇರಸಪ್ಪೆಯ ಕಾರಖಾನೆ ಎಷ್ಟೆಂದರೂ ಒಂದು ಮೂಲೆಗಾಯಿತು; ಮೇಲೆ ಸ್ವಾರ್ಥಪರಾಯಣರೊಡನೆ ಪಾಲುಗಾರಿಕೆ. ಪಾಲುಗಾರಿಕೆಯೆಂದರೆ ಮೈಸೂರು ಸರಕಾರದ ಪಾರುಪತ್ಯ. ಪಟ್ಟದಪಾರು ಸ್ವತಂತ್ರ ಸ್ಥಳ, ಮಧ್ಯಸ್ಥಳ ಇಲ್ಲಿ ಖರ್ಚಾಗುವ ಹಣದ ಸಕಲ ಪ್ರಯೋಜನ ಇಲ್ಲಿಯವರಿಗೇ ದೊರೆಯುವಂತಿದೆ ನಾ|| ಸುಂಬಯವರು ಮುಂಚಿನ ಪತ್ರವ್ಯವಹಾರವನ್ನು ಹಿಂದುಸ್ಥಾನ ಸರಕಾರದಿಂದ ತರಿಸಿಕೊಂಡು ಈಗಿನ ಪರಿಸ್ಥಿತಿಯನ್ನು ಸಮಾಲೋಚಿಸಿ ವಿದ್ಯುತ್-ಕಾರಖಾನೆ ಇಲ್ಲಿ ಸ್ಥಾಪನೆಯಾಗುವಂತೆ ಏರ್ಪಾಟು ಮಾಡುವದುತ್ತಮ

***

ಜಿಲ್ಹೆಯ ಮುಖ್ಯ ಸ್ಥಳದ ಸ್ಥಳಾಂತರ ?

ಜಿಲ್ಹೆಯ ಮುಖ್ಯ ಪಟ್ಟಣದ ಸ್ಥಳಾಂತರ ವಿಚಾರ ಇನ್ನೂ ನಡೆದಿದೆ ಗೋವಾ ಪ್ರಾಂತವೂ ನಮ್ಮ ಜಿಲ್ಹೆಯೂ ಹೊಂದಿಕೆಯಾದ್ದರಿಂದ ಈ ಜಿಲ್ಹೆಯ ಸುರಕ್ಷಿತತೆಗಾಗಿ ಅಂದರೆ ಬ್ರಿಟಿಶ ಸಾಮ್ರಾಜ್ಯದ ರಕ್ಷಣೆಗಾಗಿ ಕಾರವಾರದೊಳಗ ಸೈನ್ಯ ಇಲ್ಲವೆ ನೌಕಾ ರಾಜ್ಯವನ್ನಿಡಬೇಕಾಗಿಯೂ ಇಲ್ಲಿಯ ಮುಖ್ಯ ಪಟ್ಟಣವನ್ನು ಕುಮಟೆಗೆ ಇಲ್ಲವೆ ಶಿರ್ಶಿಗೆ ಒಯ್ಯಬೇಕಾಗಿಯೂ ಒಂದು ವಿಚಾರ ನಡೆದಿರುವದಾಗಿ ಹೇಳುತ್ತಾರೆ ಸಟಿಯೋ ದಿಟವೋ ಹೇಳುವದು ಕಠಿಣ. ನಾ|| ಗವ್ಹರ್ನರರು ಈ ಕಡೆ ಸಂಚರಿಸಲು ಇದೇ ಕಾರಣವೆಂದು ಹಲವರ ಅಂಬೋಣ. ಯುರೋಪ ಖಂಡದ ರಾಜಕಾರಣದ ಮೂಲಕ ಗೋವಾ ಪ್ರಾಂತ ಶತ್ರು-ರಾಜ್ಯವಾಗಿ ಪರಿಣಮಿಸುವ ಭೀತಿ ಯಾವಾಗಲೂ ಉಂಟು. ಇಂದಿನ ಮ್ಯು| ಯವರ ಮಾನಪತ್ರದಲ್ಲಿ, ಉಗಿಬಂದಿಯನ್ನು ಕಾರವಾರದಿಂದ ಮಾರ್ಮಗೋವಾಕ್ಕೆ ವರ್ಗಾಯಿಸಿದ ಕುರಿತು ಆಕ್ಷೇಪವಿಲ್ಲವೆಂಬ ಆಕ್ಷೇಪವನ್ನು ನಾ|| ಗವ್ಹರ್ನರರು ಮಾನಪತ್ರಕ್ಕೆ ಉತ್ತರ ಕೊಡುವಾಗ ಎತ್ತಿದ್ದರ ಮರ್ಮವೇನೆಂದು ತಿಳಿಯದಿದ್ದರೂ ಕಾರವಾರದ ಭದ್ರತೆಯ ಕುರಿತು ಸಾಮ್ರಾಜ್ಯ ಸರಕಾರವು ಗಾಂಭೀರ್ಯದಿಂದ ವಿಚಾರಿಸುತ್ತಿದೆ

[ಪುರವಣಿ ನೋಡಿರಿ]

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರದ ಮಾರ್ಗಶೀರ್ಷ ಬ ೬ ಸೋಮವಾರ

ಕುಡುಕರು ಜಾಗ್ರತೆ ಪಡೆಯಬೇಕು.

ಕುಡುಕರು ಇದೀಗಲೇ ಜಾಗ್ರತೆ ಪಡೆಯಬೇಕೆಂದು ನಾವು ಮುಂಜಾಗ್ರತೆ ಕೊಡಬಯಸುತ್ತೇವೆ. ಕುಡುಕರಿಗೆ ಇಷ್ಟವಿರಲಿ ಅನಿಷ್ಟವಿರಲಿ, ಮದ್ಯನಿರೋಧನವಾಗುವದು ಈವಾಗ ಖಂಡಿತ ಮಾತು. ಜೀವಿ ಯಾವದೇ ವ್ಯಸನ ರೂಪವಿದ್ದಾಗ್ಯೂ ಆ ವ್ಯಸನದ ಆಧಾರ ಹೇಳಿ ಕುಡುಕತನವನ್ನು ಸ್ಥಿರಪಡಿಸಲಿಕ್ಕಾಗುವದು ಈವಾಗ ಅಸಾಧ್ಯ ಮಾತು. ಚಹ ಕಾಫಿ ಮೊದಲಾದ ಚಟಗಳಿಗೆ ಬೊಟ್ಟುತೋರಿಸಿ ಕುಡುಕರು ಕುಡಿತದ ವ್ಯಸನವನ್ನು ಸಮರ್ಥಿಸಲೆಳಸಕೂಡದು. ಒಂದು ವ್ಯಸನದ ರೂಢಿಯಿಂದ ಇನ್ನೊಂದು ವ್ಯಸನ ರೂಢವಾಗಿರಬೇಕೆಂದು ಸಿದ್ಧಪಡಿಸಬಹುದೇ? ವ್ಯಸನ ಬೇರಿ, ಚಟ ಹಾರಿ ಅದು ತ್ಯಾಜ್ಯ ಮಾಡಬೇಕೆಂದ ವಿಷಯ ವಿಚಾರದಿಂದ ಅವುಗಳಿಂದುಂಟಾಗುವ ಪರಿಣಾಮಗಳನ್ನು ಗ್ರಹಿಸಿ ಆತ್ಮೋದ್ಧಾರದ ದೀರ್ಘ ವಿಚಾರ ಹಿಡಿದು, ನಿಗ್ರಹದಿಂದ ಅವನ್ನು ವ್ಯಸನಿಗಳು ತೊರೆಯತಕ್ಕದ್ದು. ಆತ್ಮೋದ್ಧಾರ ಮಾರ್ಗದ ಒಂದು ಸೋಪಾನವಿದು! ಪರರ ದೋಷಗಳನ್ನು ಉಲ್ಲೇಖಿಸಿ ಸ್ವಂತ ದೋಷಗಳನ್ನು ಮರೆಮಾಡಿಕೊಳ್ಳಲೆಳಸುವದು ಒಳೇ ಹುಡುಗಾಟಿಕೆ, ದಡ್ಡತನ, ಆತ್ಮವಂಚನೆ. ಕುಡುಕರು ಈ ವಿಚಾರವನ್ನು ಎಷ್ಟಕ್ಕೂ ಹಿಡಿಯಬೇಕು. ಈಗದು ಲೋಕೋದ್ಧಾರಕ ಜಗದ್ವಂದ್ಯ ಲೋಕವಿಭೂತಿ ಮಹಾತ್ಮರ ಆಶೀರ್ವಾದದಿಂದ ಆತ್ಮೋದ್ಧಾರ ಹೊಂದಲು ಅನುಕೂಲವಾದ ಪರಿಸ್ಥಿತಿ ನಿರ್ಮಾಣ ಹೊಂದಿದ ಬಗ್ಗೆ ಆ ಜಗದ್ವಂದ್ಯ ವಿಭೂತಿಯ ಉಪಕಾರವನ್ನು ಮನ್ನಿಸಿ ಆತ್ಮೋದ್ಧಾರವನ್ನು ಸಾಧಿಸಿಕೊಳ್ಳಲೆತ್ನಿಸಬೇಕು. ಕುಡುಕರು ವ್ಯಸನಮುಕ್ತರಾದರೆ ಕುಡುಕರಿಗೂ ಕುಡುಕರ ಹೆಂಡರು-ಮಕ್ಕಳಿಗೂ ಪಾರಮಾರ್ಥಿಕ-ಪಾರಮಾರ್ಥಿಕ ಸೌಖ್ಯ ದೊರಕಿ ಕಲ್ಯಾಣವಾಗುವದೆಂದು ಸಮರ್ಥಿಸುವದನವಶ್ಯಕ. ಮೇಲಾಗಿ ಅವರ ಉದಾಹರಣೆಯಿಂದ ಸಮಾಜದೊಳಗೆ ವ್ಯಸನ ಪರಾಙ್ಮುಖತೆಯ ವಾತಾವರಣ ಹಬ್ಬಿ ಸಕಲರಿಗೂ ನಿರ್ವ್ಯಸನಿಗಳಾಗಲು ಪ್ರೇರಣೆಯಾಗುವದು. ಮದ್ಯಪಾನದಂಥ ಕಷ್ಟಸಾಧ್ಯ ದುಸ್ಸಾಧ್ಯ ವ್ಯಸನವು ಮನೋನಿಗ್ರಹದಿಂದ ನಿವಾರಣೆಯಾಗುತ್ತದೆಂದು ತಿಳಿದ ಬಳಿಕ ಅದಕ್ಕೂ ಕಡಿಮೆ ತರಗತಿಯ ವ್ಯಸನಗಳನ್ನು ನಿವಾರಿಸಿಕೊಳ್ಳುವ ಇಚ್ಛೆ ಸಾಗಿಯೇ ಅಪೇಕ್ಷೆಯಾಗುವದು ಸಹಜ.

ಇಗಲ್ಲಿಂದ ನೂತನವಾಗಿ ಪ್ರಾರಂಭವಾಗುವ ಮದ್ಯಪಾನೋಚ್ಚಾಟನ ಕಾರ್ಯಕ್ರಮದಲ್ಲಿ ಕುಡುಕರಿಗೆ ಕುಡಿಯಲು ಸರ್ವಸ್ವಾತಂತ್ರ್ಯವಿಲ್ಲ. ನಿರ್ಬಂಧವುಂಟು. ಈಗಿನ ಯೋಜನ ಮದ್ಯನಿರೋಧನದ್ದು ಅಂದರೆ ಮದ್ಯ ಸಿಗಲು ತೊಂದರೆಯನ್ನುಂಟು ಮಾಡುವಂತಹದು, ಮದ್ಯದಂಗಡಿಗಳನ್ನು ಮದ್ಯಪಿಗಳ ಕಣ್ಮರೆ ಮಾಡಿ ಮದ್ಯಪಾನದ ವಿಸ್ಮರಣೆಯಿಂದ ಮದ್ಯಪಾನವನ್ನು ನಿಲ್ಲಿಸುವ ಪ್ರಯೋಗ ಈಗ ಸವಿನ್ಮಾ ಕುಮಟಾ-ಅಂಕೋಲಾ ತಾಲೂಕುಗಳಲ್ಲಿ ನಡೆದಿದೆ. ಇದು "Dry scheme" ಅಂದರೆ ಒಣ-ಯೋಜನೆ. ಇಂಗ್ಲಿಷ ಭಾಷೆಯಲ್ಲಿ ಮದ್ಯ ಪ್ರದೇಶಕ್ಕೆ wet ಅಂದರೆ ಒದ್ದೆ ಶಬ್ದ ಹಚ್ಚುತ್ತಾರೆ. ಆದದರಿಂದ ಈ ಪ್ರಯೋಗಕ್ಕೆ ಒಣ ಯೋಜನೆಯೆಂದು ಸಂಬೋಧಿಸಲಾಗಿದೆ. ಒಣ-ಯೋಜನೆಯಲ್ಲಿ ಮದ್ಯಪಿಗಳಿಗೆ ಮದ್ಯ ಕುಡಿಯಲಿಕ್ಕೆ ಪ್ರತಿಬಂಧವಿಲ್ಲ, ಅನುಕೂಲತೆಯುಂಟು. ಆದರೆ ಮದ್ಯಪಾನೋಚ್ಚಾಟಣ ಅಂದರೆ 'Prohibition" ಯೋಜನೆಯಲ್ಲಿ ಮದ್ಯಪಾನಕ್ಕೆ ಕಠೋರ ನಿರ್ಬಂಧವುಂಟು. ಮದ್ಯಪಿಗಳು ಎಷ್ಟಕ್ಕೂ ಏನನ್ನೂ ಮದ್ಯ ಕುಡಿಯಬಾರದೆಂದೂ ಕುಡಿಯುವದು ಶಾಸನಾರ್ಹವೆಂದೂ ಎಣಿಸಲಾಗುತ್ತದೆ. ಆದರಿಂದ ಕುಡುಕರು ಈಗಿನಿಂದಲೇ ನಿರ್ವ್ಯಸನಿಗಳಾಗಲು ಯತ್ನಿಸಬೇಕು. ಒಮ್ಮೆಲೇ ಮದ್ಯಪಾನ ತ್ಯಜಿಸುವದು ಸಂಕಟವಾಗಬಹುದು. ಪೂರ್ವ ತಯಾರಿಗಾಗಿ ಈ ಎಚ್ಚರಿಕೆ ಕೊಡೋಣ. ಇತ್ತೀಚೆ ಬರುವ ಏಪ್ರಿಲ್ ತಾರೀಖಿನಿಂದ ನಮ್ಮ ಇದೀ ಜಿಲ್ಲೆಯಲ್ಲಿ ಕುಡುಕತನ ಶಾಸನಾರ್ಹವಾಗುವ ಸಂಭವವಿದೆ. ಶ್ರೀ ದೇಶಪಾಂಡೆ ಗಂಗಾಧರರಾಯರೂ ಜಿಲ್ಲಾ ಕೊಂಗ್ರೆಸ ಕಮಿಟಿಯವರೂ ಮದ್ಯಪಾನೋಚ್ಚಾಟಣವನ್ನು ಈ ನಮ್ಮ ಜಿಲ್ಲೆಯೊಳಗೆ ಪ್ರಾರಂಭಿಸಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಿದ್ದಾರೆ. ಅಬಕಾರಿ ಇಲಾಖೆಯವರೂ ಈ ಯೋಜನೆಯನ್ನು ಪುರಸ್ಕರಿಸುವರೆಂದು ನಾವು ನಂಬುತ್ತೇವೆ. ನಮ್ಮಲ್ಲಿ ಪ್ರಾರಂಭಿಸಿದ ಒಣಯೋಜನೆಯ ಕುರಿತು ಅಬಕಾರಿ ಕಮಿಶನರರು ಪ್ರಕಟಿಸಿದ ವರದಿಯನ್ನೋದಿದರೆ ಮದ್ಯಪಾನವನ್ನು ನಿರ್ಮೂಲಿಸುವದು ಸುಲಭಸಾಧ್ಯ ಮಾತೆಂದು ಅವರ ಅಭಿಪ್ರಾಯವಾಗಿರಬೇಕೆಂದು ನಮಗನಿಸುತ್ತದೆ. ಮದ್ಯದಂಗಡಿಗಳು ಸಮೀಪದಲ್ಲಿದ್ದದರಿಂದ ಕುಡುಕರು ಮೋಹಪರವಶರಾಗುತ್ತಾರಾಗಿ ಅವರು ಬರೆಯುತ್ತಾರೆ. ಅವನ್ನು ದೂರ ಒಯ್ಯಬೇಕಾಗಿಯೂ ಅವರು ಅಭಿಪ್ರಾಯಪಡುತ್ತಾರೆ. ಅಂಗಡಿಗಳ ಅಭಾವದಲ್ಲಿ ಕುಡುಕರು ಕುಡಿತವನ್ನು ಸಹಜ ತೊರೆಯುತ್ತಿದ್ದರೆಂದು ಅವರ ಮನವರಿಕೆಯಾಗಿರುವದಾಗಿ ನಮ್ಮ ನಂಬಿಗೆ. ಹೀಗೆಲ್ಲ ಲಕ್ಷಣಗಳು ಮದ್ಯಪಾನಕ್ಕೆ ವಿರೋಧವಾಗಿರುವಾಗ, ಕುಡುಕರು ಇಂದಿನಿಂದಲೇ ಜಾಗ್ರತೆಪಡೆಯುವದು ಹಿತವಲ್ಲವೇ?

ಮದ್ಯಪಾನೋಚ್ಚಾಟಣ ಯೋಜನೆಯಲ್ಲಿ ಕಳ್ಳತನದಿಂದ ಮದ್ಯಪಾನ ಮಾಡಲಿಕ್ಕೆ ಸಹ ಸಾಧ್ಯವಿಲ್ಲ. ಯಾಕಂದರೆ ಕೆಂದಿ-ಶರಾಬನ್ನು ಕಳ್ಳತನದಿಂದ ತರಬಹುದು, ಕಳ್ಳತನದಿಂದ ಕುಡಿಯಬಹುದು, ಆದರೆ ಕುಡಿತದ ಪರಿಣಾಮವನ್ನು ಅಡಗಿಸಿಡಲಿಕ್ಕೆ ಅಸಾಧ್ಯ. ಒಂದಿಲ್ಲೊಂದು ಪ್ರಕಾರದಿಂದ ಅದು ಹೊರಬೀಳಲೇಬೇಕು. ಯಾಕಂದರೆ ಕುಡುಕನು ಕುಡಿದ ಬಳಿಕ ಸ್ವತಂತ್ರನಿರುವದಿಲ್ಲ, ಪರತಂತ್ರನಾಗುತ್ತಾನೆ, ಭ್ರಮಿಷ್ಟನಾಗುತ್ತಾನೆ! ಕಳ್ಳತನ ಕೂಡಲೆ ಬೈಲಿಗೆ ಬಂದೇ ಬರುತ್ತದೆ! ಹೀಗೆ ಮದ್ಯಪಾನೋಚ್ಚಾಟಣ-ಯೋಜನೆಯಲ್ಲಿ ಕಳ್ಳತನದಿಂದ ಮದ್ಯ-ವ್ಯಾಪಾರವನ್ನಾಗಲಿ, ಮದ್ಯಪಾನವನ್ನಾಗಲಿ ನಡಿಸಲು ತೀರ ಕಷ್ಟವಾಗುತ್ತದೆ. ಕುಡುಕರೂ ಕುಡುಕರ ಅಸಹಾಯ ಸ್ಥಿತಿಯಿಂದ ಲಾಭಪಡೆಯಬಯಸುವ ಮದ್ಯ ವ್ಯಾಪಾರಿಗಳೂ ಇದರಿಂದ ಬೋಧ ಪಡೆದು ಈಗಿನಿಂದಲೇ ಮದ್ಯ ವ್ಯಾಪಾರದಿಂದ ಪರಾವೃತ್ತರಾಗಬೇಕಾಗಿ ನಾವು ಸೂಚಿಸುತ್ತೇವೆ. ಈವಾಗ ಮದ್ಯ-ವ್ಯಾಪಾರ ಯಾವದೇ ಪ್ರಕಾರದಿಂದ ಉದ್ಧಾರ ಹೊಂದದು. ಅದನ್ನು ಕಳ್ಳತನದಿಂದ, ಸುಳ್ಳತನದಿಂದ ನಡಿಸಲು ಕುಹಕ ನಡಿಸುವದೆಂದರೂ ಕಷ್ಟವೇ. ಈ ದುರಾಶೆಯನ್ನು ಯಾರೂ ಎಷ್ಟಕ್ಕೂ ಹಿಡಿಯಲಾಗದು. ಬಾಂಧವರಿಗೆ ಪಶುಗಳಾಗಿ ಪರಿಣಮಿಸುವ ಆತ್ಮಘಾತಕ-ಪರನಾಶಕ ವ್ಯಾಪಾರವನ್ನು ಇನ್ನಾದರೂ ಸದ್ಬುದ್ಧಿ ತಳೆದು ಮದ್ಯ-ವ್ಯಾಪಾರಿಗಳು ತೊರೆದರೆ ಅವರಿಗೆ ಹಿತವಿದೆ, ಜನಸಾಮಾನ್ಯರ ಕಲ್ಯಾಣವಿದೆ. ಈ ಹಿಂದೆ ನಾವಿದನ್ನು ಹೇಳಿದ್ದೇವೆ, ಈಗಲೂ ಒತ್ತಿಹೇಳುತ್ತೇವೆ. ಮದ್ಯ-ವ್ಯಾಪಾರದ ಸರ್ವನಾಶವಾಯಿತೆಂದು ಮದ್ಯವ್ಯಾಪಾರಿಗಳು ಇದೀಗಲೇ ಎಣಿಸಿ ಬೇರೊಂದು ಉದ್ದಿಮೆಯನ್ನು ಕೈಕೊಳ್ಳಬೇಕು. ಕಳ್ಳತನ-ಸುಳ್ಳತನಗಳಿಗಾಗಿ ವಿನಿಯೋಗಿಸುವ ಬುದ್ಧಿಶಕ್ತಿಯನ್ನು ಬೇರೊಂದು ಪ್ರಾಮಾಣಿಕ, ಶಿಷ್ಟಸಮ್ಮತ ಉದ್ದಿಮೆಗಾಗಿ ಉಪಯೋಗಿಸಿದರೆ ಅದರಿಂದ ಅವರ ಮತ್ತು ಸಮಾಜದ ಕಲ್ಯಾಣವಾಗವಂತಿದೆ.

ಲೋಕಪ್ರಮುಖರೆಂದರೂ ಈಗಿನಿಂದಲೇ ಪ್ರಚಾರ ಕಾರ್ಯವನ್ನು ನಡಿಸಬೇಕು. ಬಹುತರವಾಗಿ ಕುಡುಕ ಸಮಾಜ ಅಜ್ಞಾನಿ, ಅಸಹಾಯ ಸ್ಥಿತಿಯದು, ಮೇಲಾಗಿ ಮೂಢ ಬುದ್ಧಿಯದು, ಕುಡಿದನಕ ದೇಹದ ದಣಿವು ಪರಿಹಾರವಾಗದೆಂಬ ಭಾವನೆಯೊಂದು ಅವರಲ್ಲಿ ರೂಢವಾಗಿದೆ. ಅದೊಂದು ವ್ಯಸನವಾದನೆಯ ಪರಿಣಾಮವೇನೋ ಅಹುದು. ಆದರೆ ಅಂಥ ಭಾವನೆಯನ್ನು ಹೋಗಲಾಡಿಸಲು ಜ್ಞಾನಸಂಪನ್ನ ಪ್ರಮುಖರು ಪ್ರಯತ್ನಪಡಲೇಬೇಕು. ಇಡೀ ದಿನ ಕೂಲಿ-ಕಷ್ಟ ಮಾಡಿ ಮೂರುಸಂಜೆಗೆ ನಿಶ್ರಾಂತರಾಗುವ ಜನರಿಗೆ ದಣುವಾರಿಸಿಕೊಳ್ಳಲು ತಕ್ಕ ಮನೋರಂಜನ ವ್ಯವಸ್ಥೆಯಾಗಬೇಕು. ಆಟ ಓಟಗಳಾಗಲಿ, ಚಲಚ್ಚಿತ್ರಪಟಗಳನ್ನಾಗಲಿ ಕಲ್ಪಿಸಬೇಕು. ಪ್ರಶಾಂತವಾದ ಉಪವನಗಳನ್ನು ಗ್ರಾಮಗಳಲ್ಲಿ ನಿರ್ಮಿಸಿಟ್ಟರೆ ಅದರಿಂದ ಗ್ರಾಮ ನಿವಾಸಿಗಳಿಗೆ ಒಂದೆಡೆ ಕಲೆಯಲು ಅನುಕೂಲವಾಗುವದಲ್ಲದೆ ಕುಡುಕರಿಗೂ ಅಲ್ಲಿ ಹೋಗಿ ಮನೋರಂಜನ ಮಾಡಿಕೊಳ್ಳಬರುವಂತಿದೆ. ಊರ ಜನರ ಸಹವಾಸದಿಂದ, ಶಿಷ್ಟರ ಸದ್ಬೋಧೆಯಿಂದ ಅವರ ಮನಸ್ಸು ಸುಸಂಸ್ಕೃತವಾಗಿ ಕುಡುಕರ ಅಭ್ಯುದಯವಾಗುವಂತಿದೆ. ಮನಸ್ಸೇ ಉನ್ನತಿ ಅವನತಿಗಳ ಮೂಲ, ಮನಸ್ಸನ್ನು ಸುಸಂಸ್ಕೃತಗೊಳಿಸಿದರೆ ಮಾನವನು ತನ್ನಾರೆ ಉದ್ಧಾರಹೊಂದುತ್ತಾನೆ. ಕಾಯ ಕಷ್ಟದಿಂದ ಉಂಟಾಗುವ ಮನೋವ್ಯಾಕುಲತೆಯೇ ಕುಡಿಯಲು ದುಷ್ಪ್ರೇರಣೆಯನ್ನುಂಟು ಮಾಡುತ್ತದೆ. ಕಾಯಕಷ್ಟವನ್ನು ಮರೆತು ಸುಖಪಡುವದಕ್ಕಾಗಿ ಆತನು ಕುಡಿಯುತ್ತಾನೆ. ವಿಸ್ಮರಣೆಯೇ ಕಾಯ

ಕಷ್ಟದ ನಿವಾರಣೆಯೆಂದು ಆತನು ಭಾವಿಸುತ್ತಾನೆ ನಿಜವಾಗಿ ನೋಡಿದರೆ ಕಾಯ ಕಷ್ಟದ ಸಂಕಟ ಆತನಿಗೆ ತಪ್ಪುವದಿಲ್ಲ, ಅದನ್ನಾತನು ಅನುಭವಿಸಿ ತೀರಬೇಕು ಕುಡಿತದಿಂದ ಆ ಸಂಕಟ ತಪ್ಪುವದಿಲ್ಲ ಇದನ್ನು ಕುಡ ಕರಿಗೆ ತಿಳಿಸೀ ಕುಡುಕರನ್ನು ಕುಡಿತದಿಂದ ವಿಚಾರವಂತ ಪ್ರಮುಖರು ಪರಾವೃತ್ತಗೊಳಿಸಲೆತ್ನಿಸಬೇಕು ಜಿಲ್ಹಾ ಕೊಂಗ್ರೆಸ ಕಮಿಟಿಯವರು ಇಡೀ ಜಿಲ್ಹೆಯೊಳಗೆ ಮದ್ಯಪಾನೋಚ್ಚಾಟನ ಮಾಡುವ ಕಾರ್ಯಕ್ರಮದ ಪೂರ್ವ ತಯಾರಿಗಾಗಿ ಜಿಲ್ಹೆ ತುಂಬ ಸತತ ದುಡಿಯಲು ಪ್ರತ್ಯೇಕ ಮದ್ಯಪ್ರತಿಬಂಧಕ ಸಮಿತಿಯನ್ನು ನೇಮಿಸಿದ್ದು ಸಮಯೋಚಿತವಾಯಿತು ಈ ಪ್ರಮುಖರು ಪ್ರತಿ ತಾಲೂಕಿನ ಪರಿಸ್ಥಿತಿಯನ್ನು ತಿಳಕೊಂಡು ಅಲ್ಲಲ್ಲಿ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕಾಗಿ ನಮ್ಮ ಸೂಚನೆಯಿದೆ ಗ್ರಾಮ-ಪಂಚಾಯತಿಗಳೂ ಗ್ರಾಮ-ಸುಧಾರಣಾ ಮಂಡಳದವರೂ ಗ್ರಾಮೋದ್ಧಾರ ಮಂಡಳದವರೂ ಈ ಕಾರ್ಯ ತಮ್ಮದೇ ಎಂದೆಣಿಸಿ ಇದರ ಪ್ರಚಾರಕ್ಕಾಗಿ, ಪುರಸ್ಕಾರಕ್ಕಾಗಿ ಸತತೋದ್ಯೋಗ ನಡಿಸಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ ಮದ್ಯಪಾನದಿಂದುಂಟಾಗುವ ನಷ್ಟ ಬಹುಸಮಾಜಕ್ಕೆ ಉಳಿತಾಯವಾದರೆ ಅಷ್ಟರ ಮಟ್ಟಿಗೆ ಗ್ರಾಮದ ಸಂಪದಭ್ಯುದಯವಾಯಿತೆಂದೇ ಎಣಿಸಬೇಕು ಗ್ರಾಮೋದ್ಧಾರಗ್ರಾಮ-ಸುಧಾರಣೆಯೆಂದರೆ ಮತ್ತೇನು ?

ಯುರೋಪ ಖಂಡದ ಭ್ರಮಣವೆತ್ತ?

[ನಿರೀಕ್ಷಕನು ಬರೆದುದು]

ಯುರೋಪ ಖಂಡವು ಎತ್ತ ಭ್ರಮಣ ಮಾಡುತ್ತದೆಂದು ನನಗೆ ನೀವು ಕೇಳುವದು ಸಹಜ ಯುದ್ಧದ ಕಡೆಗೇ ಭ್ರಮಣ ಮಾಡುತ್ತದೆಂದು ನಾನು ನಿಮಗೆ ಹೇಳಿದರೆ ನೀವು ನನ್ನ ಪರಿಹಾಸ್ಯ ಮಾಡುವಿರಿ! ಆದರೆ, ದಕ್ಷಿಣ-ಆಫ್ರಿಕೆಯ ಸರಕಾರದ ಪರವಾಗಿ ಯುರೋಪ ಖಂಡದ ಭ್ರಮಣ ಮಾಡಿ ಕಳೆದ ಶುಕ್ರವಾರವೇ ಲಂಡನಿನಿಂದ ಆಫ್ರಿಕೆಗೆ ಹೊರಟ ಪಿರೋ ಪ್ರಧಾನರ ಅಭಿಪ್ರಾಯವನ್ನು ನಾನು ತಿಳಕೊಂಡೆ ಯುರೋಪ ಖಂಡವು ಯುದ್ಧದ ಕಡೆಗೆ ಭ್ರಮಣ ಮಾಡುತ್ತದಾಗಿ ಪಿರೋರವರು ಅಭಿಪ್ರಾಯಪಡುತ್ತಾರೆ “ಸ್ವೇಚ್ಛೆಯಿಂದ ಅಂದರೆ ಬುದ್ಧಿಪೂರ್ವಕವಾಗಿ ಯುದ್ಧವನ್ನೇ ಗುರಿಯಾಗಿಟ್ಟುಕೊಂಡು ಯುರೋಪಖಂಡದ ಜನಾಂಗಗಳು ಕಾರಸ್ಥಾನ ನಡಿಸುವದಿಲ್ಲ ” ಯುದ್ಧಪರಿಹಾರ, ಲೋಕಶಾಂತಿಗಳ ಹೆಸರ ಹೇಳಿ ನಡಿಸುವ ಕಾರಸ್ಥಾನ ಅನಿಚ್ಛೆಯಿಂದ ಯುದ್ಧದ ಕಡೆಗೇ ಭ್ರಮಿಸುತ್ತದಾಗಿ (drifting into war) ಪಿರೋರವರು ಸೋಮವಾರ ಲಂಡನಿನೊಳಗೆ ತಮ್ಮ ಅಭಿಪ್ರಾಯ ಪ್ರಕಟಿಸಿದ್ದಾರೆ ಪಿರೋರವರು ಜರ್ಮನಿ, ಇಟಲಿ, ಬೆಲ್ಜಿಯಮ್, ಹೊಲಂಡ, ಪೋರ್ಚುಗಾಲ ದೇಶಗಳನ್ನು ಸಂಚರಿಸಿ ದೊಡ್ಡ ದೊಡ್ಡ ರಾಜಕಾರಣಿಗಳೊಡನೆ ವಿಚಾರವಿನಿಮಯ ಮಾಡಿ ಹೊರಡಿಸಿದ ಸಿದ್ಧಾಂತವಿದು ! “ಯುದ್ಧ ಯಾರಿಗೂ ಬೇಡ, ಆದರೆ ಪ್ರತಿಯೊಬ್ಬರೂ ಯುದ್ಧಕ್ಕೆ ಇದಿರಾಗುವ ಸಿದ್ಧತೆಯನ್ನೇ ನಡಿಸಿದ್ದಾರೆ ಶಾಂತಿ ಸ್ಥಾಪನೆಗಾಗಿ ಒಬ್ಬರೂ ಸ್ವಾರ್ಥತ್ಯಾಗ ಮಾಡಲು ಸಿದ್ಧರಿಲ್ಲ ಒಂದೆರಡು ತಿಂಗಳು ಇದೇ ಮನಸ್ಥಿತಿ ನಡೆದರೆ, ವಸಂತ ಮಾಸದಲ್ಲಿ ಸ್ಫೋಟವಾಗುವದು ಖಂಡಿತ ” ಹೀಗೆ ಪಿರೋರವರು ಸೋಮವಾರ ಹೇಳಿ ಸರ್ವರಿಗೂ ಶಾಂತಿದೇವಿಯ ಆರಾಧನೆಗಾಗಿ ಸ್ವಾರ್ಥತ್ಯಾಗ ಮಾಡಲು ಬೋಧಿಸುತ್ತಾರೆ ಪರೋಪದೇಶ ಮಾಡುವದು ಸುಲಭ ಮಾತು, ಸ್ವತಃ ಪಿರೋರವರು ಏನೊಂದೂ ಸ್ವಾರ್ಥತ್ಯಾಗ ಮಾಡಲು ಸಿದ್ಧರಿಲ್ಲ ಮಹಾಯುದ್ಧಕಾಲದಲ್ಲಿ ಪಾಲುಪಟ್ಟು ಮಾಡಿಕೊಂಡ ಆಫ್ರಿಕೆಯೊಳಗಿನ ಜರ್ಮನ್ ವಸಾಹತುಗಳನ್ನು ಹಿಟ್ಲರನಿಗೊಪ್ಪಿಸಲು ಅವರು ಒಡಂಬಡುವದಿಲ್ಲ ಅವುಗಳ ವಾಪಸ್ಸು ತಮ್ಮ ಕಡೆಗೇ ನಡೆದು ಬರಬೇಕಾಗಿ ಪಿರೋರವರ ನಿಗ್ರಹ “ವಸಾಹತುಗಳ ಒಡೆಯರು ನಾವು, ಅವನ್ನು ಬ್ರಿಟಿಶರು ನಮಗೆ ಸುಸೂತ್ರ ಒಪ್ಪಿಸಬೇಕು ವಸಾಹತು-ನಿವಾಸಿಗಳ ಮತ ಕೇಳುವದು ಸಭ್ಯತನವಲ್ಲ ಆಡಳಿತೆ ಕೊಳ್ಳುವಾಗ ಅವರ ಮತ ನೀವು ಕೇಳಿದ್ದುಂಟೇ ? ” ಹೀಗೆ ಜರ್ಮನಿಯ ಪತ್ರಿಕೆಗಳು ನೇರವಾಗಿ ಕೇಳಿ ಬ್ರಿಟಿಶರ ವಾದಾಂಶವನ್ನೆಲ್ಲ ಖಂಡಿಸಿಬಿಟ್ಟಿವೆ ವಸಾಹತು ರಾಜಕಾರಣದಲ್ಲಿ ಬ್ರಿಟಿಶರಿಗೂ ಹಿಟ್ಲರನಿಗೂ ಸಂಗ್ರಾಮವಾಗುವದೆಂದು ನಾನು ಎಣಿಸುತ್ತೇನೆ. ಈಗಿನ ರಾಜಕಾರಣದ ಸೂತ್ರಗಳನ್ನು ಪರಾಂಬರಿಸಿದರೆ ಅದೇ ಅನುಮಾನ ಹೊರಡುತ್ತದೆ ಜರ್ಮನರಿಗೂ ಫ್ರೆಂಚರಿಗೂ ಮಂಗಳವಾರ ಅಪರಾಸ್ತ ಪರಸ್ಪರ ಯುದ್ಧ ನಡಿಸಬಾರದೆಂಬ ಕರಾರನಾಮೆಯಾಯಿತು ಬ್ರಿಟಿಶರಿಗೂ ಮುಸೊಲಿನಿಯವರಿಗೂ ಇನ್ನೊಂದು ತಿಂಗಳಲ್ಲಿ ಕರಾರನಾಮೆಯಾಗಲಿಕ್ಕಿದೆ ಫ್ರೆಂಚರಿಗೂ ಮುಸೊಲಿನಿಯವರಿಗೂ ಟ್ಯೂನಿಸ ಕೊರ್ಸಿಕಾ, ನೈಸ ಪ್ರದೇಶಗಳ ಕುರಿತು ಭಯಂಕರ ದ್ವೇಷವುಂಟಾಗಿದೆ ವಸಾಹತುಗಳ ಕುರಿತು ಬ್ರಿಟಿಶರಿಗೂ ಜರ್ಮನರಿಗೂ ಕಲಹವುಂಟಾಗುತ್ತಿದೆ ಅತ್ತ ಬ್ರಿಟಿಶ-ಫ್ರೆಂಚರು ಜೀವದ ಗೆಳೆಯರು, ಇತ್ತ ಹಿಟ್ಲರ-ಮುಸೊಲಿನಿಯವರು ಜೀವಕ್ಕೂ ಮಿಗಿಲಾದ ಸ್ನೇಹಿತರು ಕಳೆದ ಶುಕ್ರವಾರ ಶನಿವಾರ ಜರ್ಮನಿ ಇಟಾಲಿ ದೇಶಗಳ ಸೇನಾಪತಿಗಳೂ ರಾಯಭಾರಿಗಳೂ ಸೈನ್ಯ ಇಲಾಖೆಯ ಪ್ರಾಜ್ಞರೂ ಮ್ಯೂನಿಕ್‌ದಲ್ಲಿ ಗೌಪ್ಯದಿಂದ ಸಭೆ ಸೇರಲಿದ್ದರೆಂದು ಪ್ಯಾರಿಸದೊಳಗಿನ ‘ಒವರೆ’ ಪತ್ರಿಕೆಯಲ್ಲಿ ಶ್ರೀಮತೀ ಟಿಬೊಯಿರವರು ಬರೆಯುತ್ತಾರೆ ವ್ಹಿಯೆನ್ನಾದಲ್ಲಿ ಹಿಟ್ಲರ ಮುಸೊಲಿನಿಯವರ ಗುಪ್ತ ಕೂಟ ಇನ್ನು ಕೆಲ ದಿನಗಳಲ್ಲಿ ಒದಗಲಿದೆಯೆಂದು ಅವರೇ ಬರೆಯುತ್ತಾರೆ ರೋಮದೊಳಗಿನ ಜರ್ಮನ್ ರಾಯಭಾರಿಯಾದ ಮೆಕೆನ್ಸನ್‌ರವರೂ ಇಟಾಲಿಯ ವಿದೇಶ ಸಚಿವರಾದ ಕೌಂಟ ಸಿಯಾನೋರವರೂ ರೋಮದೊಳಗೆ ಕಳೆದ ವಾರ ಗುಪ್ತವಾಗಿ ಸಂಭಾಷಣ ನಡಿಸಿ ಫ್ರಾನ್ಸ ದೇಶದಿಂದ ಟ್ಯೂನಿಸ, ಕೊರ್ಸಿಕಾ ನೈಸ ಪ್ರದೇಶಗಳನ್ನು ಮುಸೊಲಿನಿಯವರು ಸೆಳಕೊಳ್ಳುವ ವಿಷಯದಲ್ಲಿ ಇಟಾಲಿಗೆ ಜರ್ಮನ್ ಸರಕಾರದ ನೈತಿಕ ಬೆಂಬಲ ಸಿಗುವದಾಗಿ ಒಂದು ಸುದ್ದಿ ಪ್ರಕಟವಾಗಿದೆ ಜರ್ಮನ್-ಫ್ರೆಂಚರೊಳಗೆ ಕಳೆದ ಮಂಗಳವಾರ ಆದ ಒಡಂಬಡಿಕೆ ಬ್ರಿಟಿಶರಿಗೆ ಘಾತಕವಾದುದು ವಸಾಹತುಗಳನ್ನು ಬ್ರಿಟಿಶರಿಂದ ಪಡಕೊಳ್ಳುವ ರಾಜಕಾರಣದಲ್ಲಿ ಫ್ರೆಂಚರು ಹಿಟ್ಲರರ ಗೊಡವೆಗೆ ಹೋಗದಂತೆ ಈ ಕರಾರನಾಮೆಯಾಗಿರುವದೆಂದು ಹೇಳುತ್ತಾರೆ. ಸ್ಪೇನದೊಳಗೆ ಸೇನಾಪತಿ ಫ್ರೆಂಕೋರವರು ವಿಜಯ ಹೊಂದುವಲ್ಲಿ ಫ್ರೆಂಚರಿಗೆ ಭೂಮಧ್ಯ ಸಮುದ್ರದೊಳಗೆ ಬಾಧೆಯುಂಟು ಆ ಬಾಧೆಯಿಂದ ಕಾಪಾಡುವ ಅಭಿವಚನವನ್ನು ಜರ್ಮನರು ಫ್ರೆಂಚ ಸರಕಾರಕ್ಕೆ ಕೊಟ್ಟು ಫ್ರೆಂಚರನ್ನು ಬ್ರಿಟಿಶರಿಂದ ಪೃಥಕ್ಕರಿಸುವ ವ್ಯೂಹರಚನೆಯಾಗಿದೆ ಹೀಗಾಗಿ ಫ್ರೆಂಚರು ಹಿಟ್ಲರನಿಗೆ ಒಲಿದರೆ ಸ್ಪೇನದೊಳಗೆ ಲೋಕಶಾಹಿ ಸರಕಾರಕ್ಕೆ ಫ್ರೆಂಚರಿಂದ ಸಿಗುವ ಸಹಾಯ ನಿಂತುಹೋಗಿ ಸ್ಪೇನದ ರಾಜಕಾರಣವು ಹಿಟ್ಲರ ಮುಸೊಲಿನಿಯವರಿಗೆ ಅನುಕೂಲವಾಗಿ ಪರಿಣಮಿಸುವ ಅಶೆಯುಂಟು. ಫ್ರೆಂಚರಿಗೆ ಸ್ಪೇನದ ರಾಜಕಾರಣದೊಳಗಿಂದ ಪರಾಙ್ಮುಖಗೊಳಿಸುವದಕ್ಕಾಗಿಯೇ ಮುಸೊಲಿನಿಯವರು ಟ್ಯೂನಿಸಿಸ್, ಕೊರ್ಸಿಕಾ, ನಾಯ್ಸ ಪ್ರಕರಣವನ್ನು ಎಬ್ಬಿಸಿದ್ದಾರಾಗಿ ಹೇಳುತ್ತಾರೆ ಇದು ದಿಟವೆಂದು ನಾನಾದರೂ ಹೇಳಬಲ್ಲೆ ಬ್ರಿಟಿಶರಿಗೂ ಇಟಾಲಿಯರಿಗೂ ಆಗಲಿದ್ದ ಒಡಂಬಡಿಕೆಯಂತೆ ಭೂಮಧ್ಯಸಮುದ್ರದೊಳಗೆ ಯಾವದೇ ಪ್ರಕಾರದಿಂದ ಸ್ಥಿತ್ಯಂತರವಾಗಕೂಡದು. ಅಂದ ಬಳಿಕ, ಫ್ರೆಂಚರ ಪ್ರದೇಶ ಇಟಾಲಿಗೆ ಒಪ್ಪಿಸುವ ಪ್ರಶ್ನೆಯೇ ಉದ್ಭವಿಸುವದಿಲ್ಲ ಆದಾಗ್ಯೂ ಮುಸೊಲಿನಿಯವರ ಮನಸ್ಸಿನಲ್ಲೇನಿದೆ ? ಹಿಟ್ಲರನ ಮನಸ್ಸಿನಲ್ಲೇನಿದೆ ? ಚೆಂಬರಲೇನರ ಕಾರಸ್ಥಾನದ ಫಲಿತಾಂಶವೇನು ? ನಾನೇನೂ ಹೇಳಲಾರೆ ಚೆಂಬರಲೇನರ ಒಡಂಬಡಿಕೆಯ ಪ್ರಯತ್ನ ಸಫಲವಾಗುವದೆಂದು ಹೇಳುವದು ಕಠಿಣ ಪಿರೋರವರು ನುಡಿದಂತೆ, ಮಿ॥ ಚೆಂಬರಲೇನರವರು ಶಾಶ್ವತವಾದ ಶಾಂತಿಸ್ಥಾಪನೆಗಾಗಿ ಪರಮಾವಧಿಯ ಪ್ರಯತ್ನ ಮಾಡುವರೆಂದು ನಾನು ಒಪ್ಪುತ್ತೇನೆ ಜರ್ಮನಿ, ಫ್ರಾನ್ಸ, ಇಟಾಲಿ, ಬ್ರಿಟನ್ ದೇಶಗಳೊಳಗೆ ಐಕ್ಯಮತ್ಯವಾಗುವಂತೆ ಒಡಂಬಡಿಕೆಯನ್ನು ಒದಗಿಸಿ ತರಲು ಚೆಂಬರಲೇನ ಸಾಹೇಬರು ಸಕಲ ಸಾಹಸ ಮಾಡುವರೆಂದು ನಾನು ಒಪ್ಪುತ್ತೇನೆ ಆದರೆ, ಬ್ರಿಟಿಶ ಪ್ರಧಾನ ಮಂಡಳದಲ್ಲಿ ಚೆಂಬರಲೇನರ ಧೋರಣ ಸಾರ್ಥಕವಾಗುವದೆಂದು ಎಣಿಸುವವರು ಈಗ ಕಡಿಮೆಯಾಗಿದ್ದಾರೆ ವಿದ್ಯಾ ಇಲಾಖೆಯ ಮಂತ್ರಿಗಳಾದ ಅರ್ಲ-ಡಿ-ಲಾ-ವೊರ್‌ರವರು ಒಡಂಬಡಿಕೆಯ ಧೋರಣ ನಿರರ್ಥಕವೆಂದು ಕಳೆದ ವಾರ ಮಾಡಿದ ಒಂದು ಭಾಷಣದಲ್ಲಿ ಹೇಳಿದರು ಸೈನ್ಯ ಇಲಾಖೆಯಲ್ಲಿದ್ದ ಮಿ॥ ಡಫ್ ಕೂಪರರವರು ಬುಧವಾರ ಪಾರ್ಲಮೆಂಟದಲ್ಲಿ ಒಳ್ಳೇ ಆವೇಶದಿಂದ ಭಾಷಣ ಮಾಡಿ ಹಿಟ್ಲರನಿಗೆ ಅಧಿಕ್ಷೇಪಿಸಿದರು “ ಹಿಟ್ಲರನು ವಚನಭ್ರಷ್ಟನ, ಅತಗೆ ನಂಬಬೇಡಿರಿ, ನಿನ್ನಿನ ಒಡಂಬಡಿಕೆಯನ್ನು ಆತನು ಮುರಿಯದಿರನು ಫ್ರಾನ್ಸ ದೇಶದ ನಾಶವನ್ನೇ ಆತನು ಬಗೆಯುತ್ತಿದ್ದಾನೆ ಬ್ರಿಟಿಶರೂ ಫ್ರೆಂಚರೂ ಸ್ನೇಹಿತರಾಗಿದ್ದರೆ ಅವರಿಗೆ ಇದಿರಾಗುವವರು ಈ ಲೋಕದಲ್ಲಿ ಇನ್ನಾರಿಲ್ಲ ಆದ್ದರಿಂದಲೇ ಇಷ್ಟರಿಂತ ಜರ್ಮನರು ಈಗ ರಣಸೂಕ್ತಿದ್ದಾರೆ ” ಹೀಗೆ ಮಿ॥ ಡಫ್ ಕೂಪರರವರು ಫ್ರೆಂಚರಿಗೆ ಹುರಿದುಂಬಿಸುತ್ತಾರೆ ಇದರ ರಹಸ್ಯವೇನೆಂದು ಬಲ್ಲಿರಾ ? ಬ್ರಿಟಿಶ ಫ್ರೆಂಚರ ಗೆಳೆತನಕ್ಕೆ ಭಂಗ ಬಂತೆಂದು ಬ್ರಿಟಿಶರು ಚಿಂತಾಮಗ್ನರಾಗಿದ್ದಾರೆ ಜರ್ಮನ್-

[ಪುರವಣಿ ನೋಡಿರಿ]

ಸ್ಥಾನಿಕ ವೃತ್ತಾಂತ.

ಕುಮಟಾ— ಈಗ ಕೆಲವು ದಿನಗಳಿಂದ ಚಳಿ ಬೀಳುತ್ತಿದೆ. ಮುಂಜಾನೆಯಿಂದ ಮಧ್ಯಾಹ್ನದ ವರೆಗೆ ಬಿರುಸು ಮೂಡಣಗಾಳಿ ಬೀಸುತ್ತಿದೆ. ಮಾರ್ಗಗಳ ಮೇಲೆ ಧೂಳು ಬಹಳ ಹಾರುತ್ತದೆ. ಊರಲ್ಲಿ ತರತರದ ಜೇನೆ ಬೇಸರಿಕೆಗಳು ಇವೆ.

ಪ್ರಾಂತ ಸಾಹೇಬರು ಈ ಬದಿಯ ಜಮಾಬಂದಿಯನ್ನು ಮುಗಿಸಿ ನಿನ್ನೆ ಹೊನ್ನಾವರಕ್ಕೆ ತೆರಳಿದರು. ಇದೇ ಬರುವ ತಾ ೧೭ರಿಂದ ೨೦ರ ವರೆಗೆ ಜಿಲ್ಲಾಧಿಪತಿಗಳು ಇಲ್ಲಿ ಮುಕ್ಕಾಮು ಮಾಡುವವರಿದ್ದಾರೆ.

ಇದೇ ಬರುವ ತಾ ೨೪ನೇ ಶನಿವಾರ ಸಂಜೆ ೫ ಘಂಟೆಗೆ, ಹೊಸ ಕಾರ್ಯಕಾರಿ ಮಂಡಳದ ಚುನಾವಣೆ ಮುಂತಾದ ಕಾರ್ಯಗಳನ್ನು ಜರುಗಿಸಲು ಕುಮಟೆಯಲ್ಲಿ ಕುಮಟಾ ತಾಲೂಕ ಕೊಂಗ್ರೆಸ ಕಮಿಟಿಯ ಸಾಧಾರಣ ಸಭೆ ಕೂಡಲಿಕ್ಕಿದೆಯೆಂತಲೂ ಎಲ್ಲ ಸಭಾಸದರು ಸಕಾಲದಲ್ಲಿ ಸಭೆಗೆ ಬರಬೇಕೆಂತಲೂ ತಾಲೂಕ ಕೊಂಗ್ರೆಸ ಕಮಿಟಿಯವರು ವಿನ್ನವಿಸುತ್ತಾರೆ. ಅಂದೇ ಮಧ್ಯಾಹ್ನ ೩ ಘಂಟೆಗೆ ಕಾರ್ಯಕಾರಿ ಮಂಡಳದ ಸಭೆಯೂ ಕೂಡಲಿಕ್ಕಿದೆ.

ಈ ವರ್ಷ ಇಡೀ ಕರ್ನಾಟಕದಲ್ಲಿ ೧,೭೩,೧೧೩ ಕೊಂಗ್ರೆಸ ಸದಸ್ಯರಾಗಿದ್ದಾರೆ. ಆದರೆ ಹೋದ ವರ್ಷಕ್ಕಿಂತಲೂ ೫೩,೮೫೫ ಸದಸ್ಯರು ಹೆಚ್ಚಾಗಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ವರ್ಷದ ಸದಸ್ಯರ ಸಂಖ್ಯೆ ೧೫,೧೮೯.

ಹೈದರಾಬಾದ (ನಿಜಾಮು) ಕಡೆಯ ಆರ್ಯ ಸಮಾಜದ ಕಾರ್ಯಕರ್ತರಾದ ಶ್ರೀ ಜ್ಞಾನೇಂದ್ರರೂ ಕರ್ಮವೀರರೆಂಬವರೂ ನಿನ್ನೆ ಶನಿವಾರ ಈ ಊರಿಗೆ ಬಂದಿದ್ದರು. ಸಾಯಂಕಾಲ ೭ ಘಂಟೆಗೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಅವರ ಭಾಷಣಗಳಾದವು. ಇಬ್ಬರೂ ಹಿಂದೂ ಸಮಾಜದ ಅವನತಿಯ ಕಾರಣಗಳನ್ನು ವಿವರಿಸಿ, ಸಂಘಟನೆಯ ಮಹತ್ವವನ್ನು ತಿಳಿಸಿ ಹೇಳಿದರು. ಶ್ರೀ ಜ್ಞಾನೇಂದ್ರರು ಇದೇ ಬರುವ ತಾ ೨೫ರಿಂದ ತಾ ೩೭ರ ವರೆಗೆ ಸೊಲ್ಲಾಪುರದಲ್ಲಿ ಡೇ ಛ ಸಾಧವರಾವ ಅಣೇಯವರ ಅಧ್ಯಕ್ಷತೆಯಲ್ಲಿ ಆರ್ಯರ ಮಹತ್ವಪೂರ್ಣ ಸಮ್ಮೇಲನವಾಗಲಿಕ್ಕಿದೆಯೆಂತಲೂ ಆ ಸಮ್ಮೇಲನಕ್ಕೆ ಹೆಚ್ಚಿಚ್ಚು ಜನರು ಬಂದು ಆರ್ಯಾವರ್ತದ ಉದ್ಧಾರ ಕಾರ್ಯಕ್ಕೆ ಸಹಾಯ ಮಾಡಬೇಕೆಂತಲೂ ವಿನ್ನವಿಸಿದರು.

ಬೆಳೆ-ರಕ್ಷಣೆಯ ಸಲುವಾಗಿ ಕೋವಿ ಪರವಾನಿಗಳನ್ನು ಬೇಡುವವರಿಗೆ ಜಿಲ್ಲಾಧಿಕಾರಿಗಳು ಒಂಟಿ ನಳಿಗೆಯ ಕೋವಿಗಳ ಪರವಾನೆಯನ್ನಷ್ಟೇ ಕೊಡುತ್ತಿದ್ದರು. ಜೋಡು ನಳಿಗೆಯ ಕೋವಿಗಳ ಪರವಾನಗಿ ಕೊಡಲು ರೈತರು ಬೇಡುತ್ತಿದ್ದರು. ಈ ವಿಷಯವನ್ನು ಎಸೆಂಬ್ಲಿಯ ಸದಸ್ಯರು ಮಂತ್ರಿಗಳ ಲಕ್ಷ್ಯಕ್ಕೆ ತಂದುಕೊಟ್ಟಲಾಗಿ, ಕಾಡುಹಂದಿಗಳನ್ನು ಕೊಲ್ಲುವದಕ್ಕಾಗಿ ಜೋಡ-ನಳಿಗೆಯ ಕೋವಿ ಬೇಕೆಂದು ಬಂದ ಅರ್ಜಿಗಳ ವಿಚಾರ ಆದಷ್ಟು ತ್ವರೆಯ ಸಹಾನುಭೂತಿಯಿಂದ ಮಾಡತಕ್ಕದ್ದೆಂದು ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ, ಎಂದು ಜಿ ಕೊಂ ಕಮಿಟಿಯ ಕಾರ್ಯದರ್ಶಿಗಳು ಬರೆಯುತ್ತಾರೆ.

ಪುಣೆಯೊಳಗೆ ಇದೇ ಬರುವ ಡಿಸೆಂಬರ ೨೯ ೩೦ನೇ ತಾರೀಖುಗಳಲ್ಲಿ ನೆರೆಲಿದ್ದ ಅಖಿಲಭಾರತ ಬೀಡೀಧರ ಮಹಾಸಭೆಯ ಸ್ವಾಗತ ಸಮಿತಿಯಿಂದ ಒದಗಿಬಂದ ಕೋರಿಕೆ ಇಲ್ಲಿ ಈ ಜಿಲ್ಲೆಯೊಳಗಿನ ಬೀಡೀಧರು ನಿನ್ನೆ ಸಭೆ ಸೇರಿ ಕನ್ನಡ ಜಿಲ್ಲಾ ಬೀಡೀಧರ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ ಮತ್ತು ಈ ಜಿಲ್ಲೆಯೊಳಗಿನ ಬೀಡೀಧರ ದೂರುಗಳನ್ನು ಅಖಿಲಭಾರತ ಪರಿಷತ್ತಿನ ಕಡೆ ಅರುಹಿಕೊಳ್ಳುವದಕ್ಕಾಗಿ ಇಬ್ಬ ಪ್ರತಿನಿಧಿಗಳಿಗೆ ನೇಮಿಸಿಕೊಂಡಿದ್ದಾರೆ. ಸಭೆಯಲ್ಲಿ ಬೀಡೀಧರು ತಮ್ಮ ಅಡಚಣೆಗಳ ಚರ್ಚೆ ಮಾಡಿ ಒಂದು ಮನವಿಯನ್ನು ತಯಾರಿಸಿದ್ದಾರೆ.

ಮುಂಬಯಿ ಸರಕಾರವು ನಮ್ಮ ಜಿಲ್ಲೆಯೊಳಗೆ ೧೪ ಹೊಸ ದವಾಖಾನೆಗಳನ್ನು ತೆರೆಯಬೇಕೆಂದು ನಿರ್ಧಾರ ಮಾಡಿದ ಪ್ರಕಟಣೆ ಹೊರಟಿದೆ. ಇವುಗಳಲ್ಲಿ ೯ ಎಲೋಪಥಿಕ್ ಮತ್ತು ೫ ಆಯುರ್ವೇದ ಪದ್ಧತಿಯವು. ಈ ದವಾಖಾನೆಯಲ್ಲಿ ಕೆಲಸ ಮಾಡುವ ಡಾಕ್ಟರರಿಗೆ ತಿಂಗಳಿಗೆ ರೂ ೩೦ ಸಹಾಯ ಮತ್ತು ಬೇರೆ ಗ್ರಾಮಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ರೂ ೨ರಂತೆ ಮಾಸಿಕ ಭತ್ತೆ ಕೊಡಲಾಗುವದು. ಇದಲ್ಲದೆ ಔಷಧಗಳ ಬಗೆ ವರ್ಷದ ರೂ ೩೦೦ ದ್ರವ್ಯಸಹಾಯ ಸಿಗುವದು. ಬೇಕಾದ ಸಾಹಿತ್ಯಗಳನ್ನು ಈ ರಕಮಿನೊಳಗಿಂದಲೇ ಪೂರೈಸಿಕೊಳ್ಳಬೇಕು. ಆಯುರ್ವೇದ ಡಾಕ್ಟರರಿಗೆ ತಿಂಗಳಿಗೆ ರೂ ೩೦, ಭತ್ತೆ ರೂ ೧೫, ಔಷಧಗಳ ಬಗೆ ವರ್ಷಕ್ಕೆ ರೂ ೧೫೦ ಹೀಗೆ ಸಹಾಯ ಸಿಗುವದು. ಪ್ರತಿಯೊಬ್ಬ ಡಾಕ್ಟರರು ೩೪ ಗ್ರಾಮಗಳಲ್ಲಿ ಕೆಲಸ ಮಾಡಬೇಕು. ½ ರಕಮನ್ನು ಸರಕಾರವು ಕೊಡುತ್ತದೆ, ½ ರಕಮನ್ನು ಜಿಲ್ಲಾ ಲೋಕಲ್ ಬೋರ್ಡುಗಳು ತೆರಬೇಕು.

ಪ್ರಾಂತಾಧ್ಯಕ್ಷ ದೇ ಛ ದೇಶಪಾಂಡೇಯವರು ತಾ ೩೦ ೧೧ ೨೮ನೇಗೆ ಹನೇಹಳ್ಳಿಗೆ ಹೋದಾಗ ಅಲ್ಲಿಯ ಕರ್ನಾಟಕ ಸಾಹಿತ್ಯ ವಾಚನಾಲಯವನ್ನು ಸಂದರ್ಶಿಸಿ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದರೆಂತಲೂ, ಶ್ರೀ ಅಮ್ಮದೇವರ ಗುಡಿಯ ಹತ್ತರ ಇರುವ ಬೈಲಲ್ಲಿ ಜಿ ಕೊಂ ಕಮಿಟಿಯ ಉಪಾಧ್ಯಕ್ಷರಾದ ರಾ ಮುದ್ದು ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಯಿತೆಂತಲೂ ಪ್ರಾಂತಾಧ್ಯಕ್ಷರಿಗೆ ಕನ್ನಡಿಗರ ಕಡೆಯಿಂದ ಸರವಾಗಿ ಮಾನಪತ್ರ ಸಮರ್ಪಿಸಲ್ಪಟ್ಟಿತೆಂತಲೂ ಪ್ರಾಂತಾಧ್ಯಕ್ಷರು ಮದ್ಯಪಾನ ಪ್ರತಿಬಂಧ ಹರಿಜನೋದ್ಧಾರ, ಒಡೆಯ-ಒಕ್ಕಲಿಗರ ಒಕ್ಕಟ್ಟು ಮುಂತಾದ ವಿಷಯಗಳ ಮೇಲೆ ಸ್ಫೂರ್ತಿದಾಯಕ ಭಾಷಣವಿತ್ತು ಮುಂದೆ ಗೋಕರ್ಣಕ್ಕೆ ತೆರಳಿದರೆಂತಲೂ ಹನೇಹಳ್ಳಿಯ ಕನ್ನಡಿಗರ ಕೂಟದ ಅಧ್ಯಕ್ಷರು ತಿಳಿಸುತ್ತಾರೆ.

ಹೊನ್ನಾವರ— (ತಾ ೧೧-೧೨-೩೮) ಇವ ಕವರ್ ಟಿಕ್ಸ ಆಫೀಸರರು ಇಲ್ಲಿಯ ವರ್ತಕರ ಲೆಕ್ಕ ತಪಾಸಣ ಮುಗಿಸಿ ಈ ಹೊತ್ತು ಅಂಕೋಲೆಗೆ ತೆರಳುತ್ತಾರೆ. ವ್ಯಾಪಾರ-ಉದ್ಯೋಗಗಳು ಕುಗ್ಗಿದರೂ ಆದಾಯ-ತೆರಿಗೆ ಕಡಿಮೆಯಾಗಲಿಲ್ಲೆಂದು ವರ್ತಕರ ದೂರು.

ನಾಡದು ಮಂಗಳವಾರ ಸಹಕಾರಿ ಸಂಘಗಳ ಅ| ರಜಿಸ್ಟ್ರಾರರು ಇಲ್ಲಿಯ ಅರ್ಬನ್ ಮತ್ತು ರಯ್ಯತ ಸಹಕಾರಿ ಬೇಂಕುಗಳ ತಪಾಸಣೆಗಾಗಿ ಬರುವವರಿದ್ದಾರೆ. ಅರ್ಬನ್ ಬೇಂಕಿನಲ್ಲಿ ಈಗ ಏಕತಂತ್ರಿ ಕಾರಭಾರ ನಡೆದಿದೆಯೆಂದು ಬಹಳ ಸದಸ್ಯರ ದೂರಿದೆ. ರಜಿಸ್ಟ್ರಾರರು ಈ ಕುರಿತು ಆಳವಾಗಿ ಚೌಕಶಿ ಮಾಡಿ ಬೇಂಕಿನ ಕಾರಭಾರವು ಸಂಪೂರ್ಣ ಲೋಕಮತಾನುವರ್ತಿ ಸಂಸ್ಥೆಯ ಕಾರಭಾರದಂತೆ ನಡೆಯುವ ಹಾಗೆ ವ್ಯವಸ್ಥೆ ಮಾಡಿ ಕೊಡಬೇಕಾಗಿ ಬೇಂಕಿನ ಸದಸ್ಯರು ಹಾರೈಸುತ್ತಾರೆ.

ಗ್ರಾಮೋದ್ಯೋಗ ಸಂಘದ ನೇಯ್ಗೆಯ ಶಾಲೆಯಲ್ಲಿ ಕಲಿಯುತ್ತಿದ್ದ ೧೦ ಜನರು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆಂತಲೂ, ಇದೇ ಬರುವ ಜನವರಿ ತಿಂಗಳ ೧ನೇ ತಾರೀಖಿನಿಂದ ೧೦ ಹೊಸ ಹುಡುಗರಿಗೆ ಶಾಲೆಯಲ್ಲಿ ದಾಖಲು ಪಡಿಸಿಕೊಳ್ಳಲಾಗುವದೆಂತಲೂ ಶಾಲೆಯ ಚಾಲಕರು ತಿಳಿಸುತ್ತಾರೆ. ಈ ಶಾಲೆಯಲ್ಲಿ ರಾಟೆಯಿಂದ ಕತ್ತದ ಹುರಿ ಮಾಡುವ ಕಲೆಯೂ ಕಲಿಸಲ್ಪಡುತ್ತಿದೆ. ಈಗಾಗಲೇ ೩೦ಕ್ಕೆ ಹೆಚ್ಚು ಹುಡುಗರೂ ಹೆಂಗಳೆಯರೂ ಈ ಕಲೆಯಲ್ಲಿ ಪ್ರಾವೀಣ್ಯ ಪಡೆದಿದ್ದಾರೆ. ರಾಟೆಯಿಂದ ನೂತ ಕತ್ತದ ಹುರಿಗಳು ಬಹಳ ನೊಸಗಾಗಿಯೂ ಗಟ್ಟಿಯಾಗಿಯೂ ಹೊರಡುತ್ತಿವೆ. ಅವುಗಳಲ್ಲಿ ಕಸ ಕಡ್ಡಿಗಳಿರುವದಿಲ್ಲ. ದಿನಾ ೬ ತಾಸು ದುಡಿದು ಕೈಯಿಂದ ದಿನ ೧ಕ್ಕೆ ೫೦೦

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್ ಕ್ಯೂರ್



ಲಿವ್ಹರ್ ಮತ್ತು ಯಕೃತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ

ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ್,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ – ಅರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಹೂರಿ ತಯಾರಿಸಬಹುದು. ಆದರೆ ರಾಟೆಯಿಂದ ಹೆಚ್ಚು ಕಿರು ಪಿನ ಮತ್ತು ಅತ್ಯುತ್ಕೃಷ್ಟ ಜಾತಿಯ ೯೦೦ ನೊಳ ಹುರಿ ತಯಾರಿಸಬಹುದು. ೧ ರತ್ತಲ ಹತ್ತಿಯಿಂದ ಕೈಗಳಿಂದ ೯೦೦ ನೊಳ ಹುರಿ ಮಾಡಬಹುದು; ಆದೇ ರಾಟೆಯಿಂದ ನೂತರೆ ಅಷ್ಟೇ ಕಸುವುಳ್ಳ ೩೦೦ ನೊಳ ಹುರಿ ತಯಾರಿಸಬಹುದು. ಕೈಯಿಂದ ತಯಾರಿಸಿದ ಹುರಿಗಳ ಮಣ ೧ಕ್ಕೆ ರೂ ೧ ಬೆಲೆ ಬರುವದಾದರೆ, ರಾಟೆಯಿಂದ ನೂತ ಹುರಿಯ ಮಣ ೧ಕ್ಕೆ ರೂ. ೩ ಬೆಲೆ ಸಿಗಲಿಕ್ಕಿಲ್ಲ. ಈ ರಾಟೆಗಳನ್ನು ಹಳ್ಳಿಯಲ್ಲಿ ಸಹ ತಯಾರಿಸಬಹುದು. ರಾಟೆಗಳು ಸಹ ಬಹಳ ಅಗ್ಗವಿವೆ. ಚಿಕ್ಕ ಹುಡುಗರು ಸಹ ಈ ಕಲೆಯನ್ನು ೧೫ ದಿನಗಳಲ್ಲಿ ಕಲಿಯಬಹುದು ಮತ್ತು ರಾಟೆಯಿಂದ ನೂತ ಹುರಿಗಳೇ ಹೆಚ್ಚಾಗಿ ವಿಲೇವಾರಿಗೆ ಹೋಗುವದರಿಂದ ಗಿರಾಕಿಗಳಿಲ್ಲವೆಂದು ಹೇಳುವ ಪ್ರಸಂಗವು ಬರುವಂತಿಲ್ಲ. ಹಳ್ಳಿಗರು ಈ ಕಲೆಯನ್ನು ಕಲಿತುಕೊಂಡರೆ ಅನೇಕ ನಿರುದ್ಯೋಗಿಗಳಿಗೆ ಉದ್ಯೋಗ ಸಿಗಲಿಕ್ಕುಂಟು.

ಹಳದೀಪುರದ ರಾ॥ ನಾರಾಯಣ ಕೃಷ್ಣ ಶೇಲ್ವರ್‌ರವರು ಈ ವರ್ಷದ ಎಲ್. ಸಿ. ಪಿ. ಎಚ್. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದಾರೆ.

ಗೇರಸಪ್ಪ— (ತಾ ೯-೧೨-೩೮) ರಾ॥ ವಿಟ್ಠಲ ಬಾಬ ಶೈ ಎಂಬವರು ದೊಡ್ಡ ಪ್ರಮಾಣದ ಮೇಲೆ ಅಕ್ಕಿ ತಯಾರಿಸುವ ಮಿಳ ತೆರೆಯುವವರಿದ್ದಾರೆಂದು ತಿಳಿಯುತ್ತದೆ. ಈ ಮಿಳದಿಂದ ಬಡವರನೇಕರಿಗೆ ಉದ್ಯೋಗ ಸಿಗುವದಾದರಿಂದ ಕೊಂಗ್ರೆಸ ಕಾರ್ಯಕರ್ತರೂ ಗ್ರಾಮಸುಧಾರಕ ಸಂಘದವರೂ ರಾ ಶೈರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ.

ಇಲ್ಲಿಯ ಲೋಕಲ್ ಬೋರ್ಡ ರಸ್ತೆ ಒಟ್ಟು ೩ ಫರ್ಲಾಂಗು ಉದ್ದವಿದೆ. ಆದರಲ್ಲಿ ೧ ಫರ್ಲಾಂಗು ರಸ್ತೆ ಪೇಟೆಯಲ್ಲಿದ್ದು ತಮ್ಮ ತಮ್ಮ ಅಂಗಡಿ ಇದ್ದಿವ ವ್ಯಾಪಾರ ಮುಂದಿನ ರಸ್ತೆಯ ಭಾಗವನ್ನು ಅಲ್ಲಿಯ ಅಂಗಡಿ ಇದ್ದಿವ ವ್ಯಾಪಾರಿಗಳ ಪಾಲಿಗೆ ಬರು ಸಂಪಾದಿಸಿಕೊಳ್ಳುತ್ತಾರೆ. ಇನ್ನುಳಿದ ೧ ಫರ್ಲಾಂಗ ರಸ್ತೆಯ ಸ್ಥಿತಿ ಹೇಳ ತೀರದು! ನಡೆಯುವಾಗ ಅಪ್ಪಿ ತಪ್ಪಿ ಕಾಲು ಜಾರಿದರೆ ನಮಸ್ಕಾರ ಹಾಕುವದೇ! ೩ ೪ ದಿನಗಳ ಹಿಂದೆ ಬೋರ್ಡಿನ ಓವ್ಹರಸೀಯರರು ರಸ್ತೆ ತಪಾಸಣೆಗೆ ಬಂದಿದ್ದರು. ಒಬ್ಬರು ಅವರಿಗೆ ರಸ್ತೆಯ ದುರ್ದಶೆಯನ್ನು ಹೇಳಿದರು. "ನಮ್ಮ ಮೇಲೆ ಏಕೆ ಸಿಟ್ಟು ಮಾಡಿರಿ" ಎಂದು ಅದಕ್ಕೆ ಉತ್ತರ ಸಿಕ್ಕಿತು! ಕೂಲಿಯೊಬ್ಬನು ಮುಂದೆ ಬಂದು "ಅಗೋ ನೋಡಿರಿ, ಆ ಗುಡ್ಡದಿಂದ ಮಣ್ಣು ತಂದು ರಸ್ತೆ ದುರುಸ್ತಿ ಮಾಡಿದೆ" ಎಂದು ತೋರಿಸಿದನು! ಗುಡ್ಡದ ಮೇಲೆ ಮಣ್ಣು ತೆಗೆದ ಸ್ಥಳಗಳು ಬಹಳ ಇವೆ. ಅಲ್ಲಿಯ ಮಣ್ಣೆಲ್ಲ ರಸ್ತೆಗೇ ಬಂದು ಬಿತ್ತೋ ಮತ್ತೆಲ್ಲಿ ಹೋಯಿತೋ ಎಂದು ಓವ್ಹರಸೀಯರರು ಆ ಕೂಲಿಯಾಳಿಗೆ ಕೇಳಲಿಲ್ಲ! ಬೋರ್ಡಿನ ಕಾಮಗಾರರು ಮಾಡುವ ಕೆಲಸದ ಮಾದರಿಯಿದು! ಲೋಕಲ್ ಬೋರ್ಡಿನವರು ಇತ್ತ ಗಮನಿಸುವರೇ?

ನಿಲೆಕಿ— ಈ ವರ್ಷ ಈ ಊರಲ್ಲಿ ಬರೇ ೧೦ ಜನರು ಮಂದಿ ಕೊಂಗ್ರೆಸ ಸದಸ್ಯರಾಗಿದ್ದಾರೆ. ಹೋದ ವರ್ಷದ ಹಣದ ವ್ಯವಸ್ಥೆಯಾಗದ್ದರಿಂದಲೇ ಈ ಸ್ಥಿತಿಯಾಗಿದೆ ಎಂದು ಹೇಳುತ್ತಾರೆ. ಜಿಲ್ಲಾಧ್ಯಕ್ಷರು ಹಣದ ವ್ಯವಸ್ಥೆ ಸರಿಯಾಗಿ ಮಾಡಿ ಕೊಂಗ್ರೆಸ ಸಂಸ್ಥೆಗಳ ಬಗ್ಗೆ ಜನರಲ್ಲಿ ನಂಬಿಗೆಯುಂಟುಮಾಡಬೇಕು.

ಇಲ್ಲಿಯ ಸಣ್ಣಗುಂಪ ಹೊಳೆಗೊಂದು ಸಂಕ ಮತ್ತು ಒಂದು ಸರಕಾರಿ ಚಿಕಿತ್ಸಾಲಯ ಅತ್ಯಗತ್ಯವೆಂದು ತಾಲೂಕ ಅಧಿಕಾರಿಗಳು ಇನ್ನೊಮ್ಮೆ ಬರೆದು ಹಾಕಿದ್ದಾರಂತೆ.

ಶಿರಾಲಿ— ಈ ಗ್ರಾಮದ ಪಟ್ಟೇಗಾರ್ ಮನೆಯಲ್ಲಿ ರಾ॥ ನಾರಾಯಣ ಮಂಜಣ್ಣ ಶಾನಭಾಗರ ಪ್ರಯತ್ನದಿಂದಾಗಿ ಕಳೆದ ಮೂರು ತಿಂಗಳಿಂದ ಒಂದು ಗಾಂವಠೀ ಶಾಲೆ ನಡೆಯುತ್ತಿದೆ. ಈಗ ವಿದ್ಯಾರ್ಥಿಗಳ ಸಂಖ್ಯೆ ೩೦ಕ್ಕೆ ಮುಟ್ಟುತ್ತದೆ. ಶಾಲಾ ತಪಾಸಣೆ ಅಧಿಕಾರಿಗಳು ಶಾಲೆ ತಪಾಸಣೆ ಮಾಡಿ ಹೋಗಿದ್ದಾರೆ. ಬೇಗನೇ ಸರಕಾರಿ ಧನಸಹಾಯ ಸಿಕ್ಕೀತೆಂದು ಆಶೆ ತೋರುತ್ತದೆ.

ಬೆಂಗ್ರೆ ಗ್ರಾಮದ ಮಾವಿನಕಟ್ಟೆ ಹತ್ತರ ಇತ್ತೀಚೆಗೆ ಎರಡು ಗಾಂವಠೀ ಶಾಲೆಗಳು ತೆರೆಯಲ್ಪಟ್ಟಿದ್ದವು. ಶಾಲಾ ತಪಾಸಣೆ ಅಧಿಕಾರಿಗಳು ಎರಡೂ ಶಾಲೆಗಳನ್ನು ಒಂದು ಮಾಡಬೇಕೆಂದು ಉಪದೇಶ ಮಾಡಿದ ಪ್ರಕಾರ ಅವು ಈಗ ಒಂದಾಗಿವೆ. ಸಂಯುಕ್ತ ಶಾಲೆಯಲ್ಲಿ ಈಗ ೬೦ರಷ್ಟು ವಿದ್ಯಾರ್ಥಿಗಳಿದ್ದಾರೆ, ಇಬ್ಬ ಶಿಕ್ಷಕರಿದ್ದಾರೆ. ಶಾಲೆಯ ಮೇಲ್ವಿಚಾರಣ ಮಾಡುವ ಬಗ್ಗೆ ರಾ॥ ಶಾಂತಪ್ಪ ಶ್ಯಾನಭಾಗರ ಅಧ್ಯಕ್ಷತೆಯಲ್ಲಿ ೫ ಜನ ಪಂಚರ ನೇಮಣೂಕಿಯಾಗಿದೆ.

ಅಂಕೋಲಾ— ಹೈದರಾಬಾದ ಸತ್ಯಾಗ್ರಹಕ್ಕೆ ಜನ-ಧನಸಹಾಯ ಸಂಗ್ರಹಿಸುವ ಬಗ್ಗೆ ಈ ವಾರದಲ್ಲಿ ಇಲ್ಲಿಬ್ಬ ಆರ್ಯ-ಸಮಾಜದ ಕಾರ್ಯಕರ್ತರು ಬಂದಿದ್ದರು. ನಿಜಾಮ ರಾಜ್ಯದಲ್ಲಿ ಹಿಂದೂಗಳಿಗಾಗುವ ಕಷ್ಟ-ನಷ್ಟಗಳ ಮಾಹಿತಿ ಅವರು ಕೊಡುತ್ತಾರೆ. ಅವರ ಪ್ರಚಾರದಿಂದ ಜಾತೀಯತೆಯ ವೈಷಮ್ಯದ ಬೀಜಗಳನ್ನು ಇಲ್ಲಿ ಬಿತ್ತಿದಂತಾಗುವದೆಂಬ ಭೀತಿಯಿಂದ ಸಾರ್ವಜನಿಕ ಕಾರ್ಯಕರ್ತರ್‍ಯಾರೂ ಅವರಿಗೆ ಇಂಬು ಕೊಡಲಿಲ್ಲ. ಕೊನೆಗೆ ಎಜ್ಯುಕೇಶನ ಶಾಲೆಯಲ್ಲಿ ಅವರ ಭಾಷಣಗಳಾದವು.

ಕಾರವಾರ— (ತಾ ೯-೧೨-೩೮) ಹೊಸ ಡಿಸ್ಟ್ರಿಕ್ಟ ಜಡ್ಜರಾದ ಮಿ॥ ಕೊನಸ್ಟ್ಯಾಂಟೈನರವರು ಮೊನ್ನೆ ಇಲ್ಲಿ ಬಂದು ತಲ್ಪಿದರು. ನಿನ್ನೆ ಚಾರ್ಜು ಕೊಂಡಿದ್ದಾರೆ.

— ಇದೇ ತಿಂಗಳ ಕೊನೆಯೊಳಗಾಗಿ ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ವ್ಯಾಪಾರ ಮತ್ತು ಔದ್ಯೋಗಿಕ ಪರಿಷತ್ತೊಂದು ಸೇರಿಸಬೇಕೆಂದು ಬಾಗಲಕೋಟೆಯ ಕರ್ನಾಟಕ ಚೇಂಬರ್ ಸಂಘದವರು ನಿಶ್ಚಯಿಸಿದ್ದಾರೆ. ಪರಿಷತ್ತಿನ ಅಧ್ಯಕ್ಷಸ್ಥಾನ ಸ್ವೀಕರಿಸಲು ಅಹಮದಾಬಾದ ಆರ್ಟ್ಸ್ ಕೊಲೇಜಿನ ಪ್ರಧಾನಾಧ್ಯಾಪಕರಾದ ಡಾ॥ ವಿಜಯೇಂದ್ರರಾವ, ಎಮ್. ಏ. ಪಿಎಚ್‌ಡಿ ಇವರಿಗೆ ಬಿನ್ನವಿಸಲಾಗಿದೆ.

SERVICE & PROMPTNESS

A Feature and a Fact with the "POPULAR"

M VENKATESH PAI,
Banker.

Sri Krishna Bhavan
Mangalore
25th July, 1938

The Managing Director
The Popular Insurance Co Ltd,
MANGALORE

Policy No 40

Dear Sir

I very much appreciate your promptness in settling the claim in less than a week in respect of the above policy on the life of my late lamented Father in law, Sri Nagar Vasudeva Shenoy who passed away on the 19th instant.

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2 558-7-0 is delivered to the claimant and all within the short period of 6 days

This spirit of service and promptitude evinced by the 'POPULAR' is highly laudable and it is but proper that the Company should be 'POPULAR' It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity

Yours faithfully,
(Sd.) M Venkatesha Pai

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,

Head Office: MANGALORE.

Branch· *PROSPECT CHAMBERS, Hornby Road, BOMBAY*

ಮುಂಬಯಿ ಮಹಾಮಂತ್ರಿಗಳ ಕರ್ನಾಟಕ ಸಂಚಾರ.

ಕರ್ನಾಟಕ ಪ್ರಾಂತೀಕರಣಕ್ಕೆ ಸಂಪೂರ್ಣ ಬೆಂಬಲ.

"ದೀರ್ಘ ಕಾಲದ ನಂತರ ತಾಯಿಯನ್ನು ಕಂಡ ಸುಖ ಸಿಕ್ಕಿತು!"

ಹೋದಹೋದಲ್ಲಿ ವೈಭವದ ಸ್ವಾಗತ

ಮುಂಬಯಿಯ ಮುಖ್ಯ ಪ್ರಧಾನರಾದ ನಾ॥ ಬಾಳ ಗಂಗಾಧರ ಖೇರರವರು ಅರ್ಥ ಸಚಿವರಾದ ನಾ॥ ಲಠ್ಠೇಯವರನ್ನು ಕೂಡಿಕೊಂಡು ಕಳೆದ ರವಿವಾರ ತಾ॥ ೪ನೆಯ ಗುರುವಾರ ತಾ॥ ೮ರ ತನಕ ನಾಲ್ಕು ದಿನ ಉತ್ತರ ಕರ್ನಾಟಕದ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಸಂಚರಿಸಿ ನಮ್ಮ ಪ್ರಾಂತದ ಜನರ ಆಶೆ ಆಕಾಂಕ್ಷೆಗಳನ್ನೂ ಸುಖ ದುಃಖಗಳನ್ನೂ, ಜನತೆಯ ಜೀವನದ ಕಷ್ಟಗಳನ್ನೂ ಪ್ರತ್ಯಕ್ಷ ತಿಳಕೊಂಡು ಹಿಂತಿರುಗಿದರು. ಕಾರವಾರ ಮತ್ತು ವಿಜಾಪುರ ಜಿಲ್ಲೆಗಳಿಗೆ ಸಂದರ್ಶನವೀಯಲು ಸಚಿವ ಮಂತ್ರಿಗಳಿಗೆ ಸಮಯ ಸಿಕ್ಕಲಿಲ್ಲ ಆ ಬಗ್ಗೆ ಅಸಮಾಧಾನವಾಗುತ್ತದೆ. ಮುಂದೆ ಬೇಗನೇ ಆ ಸಂಧಿ ಒದಗಿಬರಲೆಂದು ಹಾರೈಸುವಾ.

ತಾ॥ ೪ನೇ ರವಿವಾರ ಮುಂಜಾನೆ ನಾ॥ ಖೇರ ಮತ್ತು ನಾ॥ ಲಠ್ಠೇಯವರು ತಮ್ಮ ಪರಿವಾರದವರೊಂದಿಗೆ ಮಿರಜಿಗೆ ಬಂದು ತಪ್ಪಿದರು. ನಮ್ಮ ಪ್ರಾಂತಾಧ್ಯಕ್ಷರಾದ ... ಗಂಗಾಧರರಾವ ದೇಶಪಾಂಡೆಯವರೂ ಬೆಳಗಾವಿಯ ಇನ್ನಿತರ ಮುಂದಾಳುಗಳೂ ಅಲ್ಲೇ ಅವರಿಗೆ ಭೆಟ್ಟಿಯಾಗಿ ಸ್ವಾಗತ ಬಯಸಿದರು. ಅಲ್ಲಿಂದ ನಾ॥ ಖೇರರವರು ಸಾಂಗಲಿಯೊಳಗಿನ ವಿಲಿಂಗ್ಡನ್ ಕಾಲೇಜಿಗೆ ಹೋಗಿ ಅಲ್ಲಿಯ ಸಮ್ಮೇಲನದ ಕಾರ್ಯವನ್ನು ಮುಗಿಸಿ, ತಿರುಗಿ ಮಿರಜಿಗೆ ಮರಳಿಬಂದು ಬೇಗನೆ ೧೦॥ ಘಂಟೆಗೆ ಕರ್ನಾಟಕ ಪ್ರಾಂತದ ಉತ್ತರ ದಿಕ್ಕಿನ ಬಾಗಿಲೆನಿಸುವ ... ಸ್ಟೇಶನಿಗೆ ಬಂದು ಮುಟ್ಟಿದರು. ಅಲ್ಲಿಂದ ಕರ್ನಾಟಕ ಸಂಚಾರಕ್ಕೆ ಪ್ರಾರಂಭವಾಯಿತು. ಅಲ್ಲಿಂದ ಮುಂದೆ ಮಂತ್ರಿಗಳು ಬೇರೆ ಬೇರೆ ಗಾಂವಗಳ ... ನಿಪ್ಪಾಣಿ ... ಮುಂತಾದ ಊರುಗಳಿಗೆ ಭೆಟ್ಟಿಕೊಟ್ಟು ಅಲ್ಲಲ್ಲಿ ಮಾನಪತ್ರಗಳನ್ನು ಸ್ವೀಕರಿಸುತ್ತ ಮಧ್ಯಾಹ್ನ ೩ರ ಸುಮಾರಕ್ಕೆ ... ಸ್ಟೇಶನಿಗೆ ಒಂದು ರಾತ್ರಿ ಅಲ್ಲಿಯ ಆರೋಗ್ಯಧಾಮದಲ್ಲಿ ವಿಶ್ರಾಂತಿಯನ್ನು ತಕೊಂಡರು. ಎಲ್ಲೆಲ್ಲಿಯೂ ಕರ್ನಾಟಕ ಪ್ರಾಂತೀಕರಣ ಬೇಡಿಕೆಯು ಪ್ರಮುಖವಾಗಿ ಮಂತ್ರಿಗಳ ಮುಂದೆ ಮಂಡಿಸಲ್ಪಟ್ಟಿತು. ನಾ॥ ಖೇರರವರು ಆ ಬೇಡಿಕೆಗೆ ಸಂಪೂರ್ಣ ಬೆಂಬಲ ಕೊಟ್ಟು ತಮ್ಮಿಂದಾದಷ್ಟು ಸಹಾಯ ಮಾಡುವದಾಗಿ ಆಶ್ವಾಸನೆಯನ್ನಿತ್ತರು. ... ಪ್ರಾಂತೀಕರಣದ ಹೊರತಾದ ಬೇರೆ ಸಮಸ್ಯೆಗಳಿಗೆ ಕರ್ನಾಟಕ ... ಬಗೆ ಹರಿಸುವದಾಗಿ ಇದ್ದಂತೆ ... ಜನರು ... ಸಹಾಯ ಮಾಡಬೇಕು ಎಂದು ... ಅವರು ಕೊಟ್ಟಿದ್ದಾರೆ.

ತಾ॥ ೫ನೇ ಸೋಮವಾರ ... ನಾ॥ ಖೇರರವರು ೧೧॥ ಘಂಟೆ ಬೆಳಗಾವಿಗೆ ಬಂದರು. ಬೆಳಗಾವಿಯ ... ಸಭೆಯವರು ಅವರಿಗೆ ... ಸ್ವಾಗತಿಸಿದರು. ಮಾನಪತ್ರಕ್ಕೆ ಉತ್ತರ ಕೊಡುತ್ತ ನಾ॥ ಖೇರರವರು ಕರ್ನಾಟಕ ಪ್ರಾಂತೀಕರಣ ಮಾಡಬೇಕೆಂಬ ತತ್ವಕ್ಕೆ ತಮ್ಮ ... ಒಪ್ಪಿಗೆಯಿದೆ. ... ಆ ಬಗ್ಗೆ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಯ ಬಗ್ಗೆ ಸಾಧ್ಯವಿದ್ದುದನ್ನೆಲ್ಲ ತಾವು ಮಾಡುವದಾಗಿ ... ಕನ್ನಡಿಗರು ವಿಶಾಲ ದೃಷ್ಟಿಯನ್ನಿಟ್ಟು ಭಾರತವರ್ಷದ ಮುಂದೆ ಇರುವ ಸಂಸ್ಕೃತಿಯ ಅತಿ ಮಹತ್ವದ ಸಮಸ್ಯೆ ಬಿಡಿಸಲು ಸೇವೆ ಸಲ್ಲಿಸಲು ಸಿದ್ಧರಾಗಬೇಕೆಂತಲೂ ಬೋಧಿಸಿದರು. ಕರ್ನಾಟಕವು ಹಿಂದುಸ್ಥಾನದ ಇಟಲಿ (ಕೆಂಪು) ... ಅದರ ಕನ್ನಡ ಮಾತೆಯು ಮುಕ್ಕೋಟಿ ... ಕೊಡಲಾರಂಭಿಸುತ್ತಿದೆ ... ವರ್ಷಗಳ ಹಿಂದೆ ... ಕನ್ನಡ ಹಳ್ಳಿಯಲ್ಲಿದ್ದು ಕನ್ನಡ ಜನತೆಯ ಸಂಬಂಧವಿರುವೆನು ... ಕನ್ನಡ ಮಾತಿನ ... ಕೇಳಿದ್ದೇನೆ ... ಆದರೆ ಅದು ... ಕಾರಣ ... ಹೊಂದಿಯಿಲ್ಲ ... ಬೇಕಾದವು ... ದಂಡಿನ ವಿಭಾಗವನ್ನು ಕಡಿಮೆಯ ಬಲದಿಂದ ಸಂಪಾದಿಸಿಕೊಡಬೇಕೆಂದರೆ ಎರಡು ಕೋಟಿ ರೂಪಾಯಿಗಳು ತಗಲುವವೆಂತಲೂ ಅದು ತಮ್ಮ ಅಧಿಕಾರದಲ್ಲಿಲ್ಲವೆಂತಲೂ ಉತ್ತರ ಕೊಟ್ಟರು. ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಅವಶ್ಯಕತೆಯ ಬಗ್ಗೆ ಉಪದೇಶ ಮಾಡಿದರು. ನಗರ ಸಭೆಯ ಮಾನಪತ್ರ ಸ್ವೀಕರಿಸಿ ಮಂತ್ರಿವರ್ಯರು ಲಿಂಗರಾಜ ಕಾಲೇಜಿಗೆ ಸಂದರ್ಶನ ಕೊಟ್ಟರು. ಮಧ್ಯಾಹ್ನದಲ್ಲಿ ಪ್ರಮುಖ ಅಧಿಕಾರಿಗಳಿಗೆ ಭೆಟ್ಟಿ ಕೊಟ್ಟರು.

ಸಂಜೆಯಲ್ಲಿ ಮಂತ್ರಿವರ್ಯರು ಶಿಕ್ಷಣ ಸಮಿತಿಯ ಪರಿಷತ್ತಿಗೆ ಹೋದರು. ನಾ॥ ಲಠ್ಠೇಯವರ ಭಾಷಣ ಬೋಧಪ್ರದವಾಯಿತು. "ಸರಕಾರವು ಎಲ್ಲ ಅನುಕೂಲತೆಗಳನ್ನು ಒದಗಿಸಿ ಕೊಡಲಿದೆ. ಸಾರ್ವಜನಿಕರೇ ಇಂಥ ಕೆಲಸಕ್ಕೆ ಸಹಾಯ ಮಾಡಬೇಕು. ಮದ್ಯಪಾನ ಪ್ರತಿಬಂಧದಿಂದ ನಮಗೆ ೪॥ ಕೋಟಿ ರೂ. ನಷ್ಟ ಬರುವದೆಂದು ಮರೆಯಬೇಡಿರಿ" ಎಂದು ನುಡಿದರು. ಅವರ ಹಿಂದಿನಿಂದ ಭಾಷಣ ಮಾಡುತ್ತ ಮುಖ್ಯ ಪ್ರಧಾನರೂ ಅದೇ ಮಾತಿಗೆ ಬೆಂಬಲ ಕೊಟ್ಟರು. ಮನುಷ್ಯನಿಗೆ ಬರೇ ಓದು ಬರಹ ಸಾಲದು. ಅವನು

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ ... ಕುಷ್ಟ ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ ದೊಡ್ಡ ಯಾವತ್ತೂ ರೋಗಗಳಿಗೆ ಔಷಧ ... ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು. ಇದಲ್ಲದೆ ಆಯುರ್ವೇದೋಕ್ತ ... ಘೃತ, ... ಮೊದಲಾದವು ಸಿದ್ಧವಾಗಿರುವವು.

☞ ಪ್ರತ್ಯೇಕವಾಗಿ ... ಮಾಡಿದರೆ ... ಔಷಧಗಳನ್ನು ತಯಾರ ಮಾಡಿ ಕೊಡುವೆವು.

ವೈ॥ ಕೆಂ. ರಾಮ ಪಂಡಿತ, ಪ್ರೋ॥ ಕುಮಟಾ ಜಿ॥ ಉ॥ ಕಾನಡಾ

ಚಿತ್ರಬಿಂದು

ಮಕ್ಕಳ ಮರಣವನ್ನು ತಪ್ಪಿಸುವುದು.

(ರಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ, ಪ್ಲೀಹ ಹೊಟ್ಟೆ ದೊಡ್ಡದಾಗುವಿಕೆ ಹಸುರು ನರಗಳು, ಕಾಮಿಲೆ ಗಡ್ಡೆರೋಗ ಕ್ಷೀಣರೋಗ, ಪ್ಲೀಹ ಕೈ ಬಾವುಗಳಿಗೆ ದಿವ್ಯೌಷಧ!

[ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ]

ಏತಕ್ಕೆ ಚಿಂತಿಸುವಿರಿ?



ಆಸ್ಪತ್ರೆ ಮಾಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜೌಷಧವಾಗಿದೆ

ಡಾ॥ ವಿ ಎನ್ ಶ್ರೀನಿವಾಸರಾವ್ ಲಿವ್ಹರ್ ಸ್ಪೆಶಲಿಸ್ಟ,

ಎಂ ವಿ ಪ್ರಾಸಾದಿಕ ಔಷಧಾಲಯ ಶಿವಮೊಗ್ಗಾ.

☞ ಇವರಲ್ಲಿ ... ಏಜಂಟ —

ಸುಬ್ರಾಯ ಸೀತಾರಾಮ ಹೆಗಡೆ ಶಿರ್ಶಿ

ಸುಸಂಸ್ಕೃತನಾಗಬೇಕು ಕುಡುಕತನದ ಪ್ರತಿಬಂಧ ಮಾಡು ವದು ಶಿಕ್ಷಣ ಪ್ರಸಾರದಷ್ಟೇ ಮಹತ್ವದ್ದಿದೆ" ಎಂದು ಸಂದೇಶ ಕೊಟ್ಟರು ಆ ಎಲ್ಲ ಜಿಲ್ಲಾ ಲೋಕಲ್ ಬೋರ್ಡಿನ ಸೂಸಪತ್ರ ಸಮರ್ಪಣೆಯಾಯಿತು ಅದಕ್ಕೆ ಉತ್ತರ ವೆಂದ ತುಂಡ ಹೇಳಿದರು

ರಾತ್ರಿಯ ಊಟ ತೀರಿಸಿ ಮಂತ್ರಿವರ್ಯರಿಬ್ಬರೂ ಗೋಕಾಕಕ್ಕೆ ಹೋದರು ಹಾದಿಯಲ್ಲಿ ಸಾವಿರಾರು ಕಂಬಿ ಸಿಂದೆಗೆ ಮಂತ್ರಿಗಳ ಮಾರ್ಗದ ಮೇಲೆ ಅಡ್ಡಬಿದ್ದು ದಾರಿ ನವರಿಗೆ ಪತ್ರ ಧಿಕಾರವಿದೆ ಅವರೇ ಪ್ರತಿನಿಧಿಕ ರಾಜ್ಯ ಸಂಸ್ಥೆಯ ಆಧಾರಭೂತರು ಈಗ ನಮ್ಮ ಭಗಿನಿಯರು ರಾಜಕಾರಣದಲ್ಲಿ ಭಾಗ ವಹಿಸುತ್ತಿದ್ದುದು ಸಮಾಧಾನದ ಸಂಗತಿ ಸ್ತ್ರೀ ಪುರುಷರು ಕೂಡಿ ರಾಜ್ಯಶಕಟ ಸಾಗಿಸುವದು

ಸಟಿಕ ಸಂಸ್ಕರಣದ ಕಡೆ ನಾವು ದಾರಿ ಣದು ನಮ್ಮ ಮೇಲೆ ಅರಿ ಪವಿದೆ ನಮ ಕೈಕೊಳ್ಳುವದಷ್ಟೇ ಕೆಲಸವಲ್ಲ ನಮ್ಮ ಮುಂದೆ ಹೀಗೆ ಮಹತ್ವದ ಕಾರ್ಯಗಳಿವೆ ಆದರೂ ನಮ್ಮ ಮರೆತಿಲ್ಲ ಆಂಧ್ರ ಪ್ರಾಂತದ ಬಗ್ಗೆ ದಾಖಲೆ ಮಾಡಿಯುವಷ್ಟು ಕೆಲಸ ಪ್ರಾಂತದ ಬಗ್ಗೆ ಮಾಡಿರುವೆನು ಕೂಲಿಕಾರ ರ ಈ ಹೊತ್ತು ನನಗೆ ಮಾರ್ಗದಲ್ಲಿ ಅಡ್ಡ ಬೀಳು ಬಂದೇನಿಣ ಕೇಳಿಕೊಳ್ಳುತ್ತೇನೆಂದು ಹಾಗೇ ಬಿಡಲಿಲ್ಲ! ನಾನು ಸ್ಪಷ್ಟ ಕಾಂಗ್ರೆಸ ತತ್ವಗಳಂತೆ ಗಿರಣಿ ಕಂಟೋಳನ್ನು ತ್ತ ಸರ್ವದಾ ಸಿದ್ಧರಿದ್ದೇವೆ ಕೊಂಗ್ರೆಸ್ಸು ವಾಣದು ಜನರ ಸ್ವಾತಂತ್ರ್ಯ ರಕ್ಷಣೆ ವು ಜನರ ಸಲುವಾಗಿ ಅವರು ಸಾವಿರಾರು ಸ ಹಾಕುತ್ತಾರೆ ಇದು ನ್ಯಾಯವೇ? ಅವರ ಮುಖಂಡರುಗಳು ತೋರಿಸುವ ಹಾತಿಯದಲ್ಲವೇ? ಕೂಲಿಕಾರರ ಹಿತದ ಸಂಸುದ್ಧಿಯವರಿಗೇ ಕೊಡಲಲ್ಲ ಮಾತ್ರ ಬಗೆಹರಿಸಲು ನಾ|| ನಂದಾರವರಿಗೆ ಕಳ ಕೇಳುಸಿದೆವು ಎಲ್ಲ ಯೋಗ್ಯ ಉಪಾಯ ದ ಸಂಸುದ್ಧಿಯವರಿಗೆ ಸಮಾಧಾನವಿಲ್ಲ ಹೀದವಾಕ್ಯವೆಂದು ಅವರ ಹಟ! ಕೆಲವರ ವೇಕರಿಗೆ ಗೋಳಾಡಿಸುವದು ಎಂದೂ (ಪುರವಣಿ ನೋಡಿರಿ)

ಕುಮಟೆಗೆ ನಾ|| ನುರಿಯವರ ಆಗಮನ

ಇಂಜನಿಯರ ಇಲಾಖೆಯ ಮಂತ್ರಿಗಳಾದ ನಾ|| ನುರಿಯವರು ಇದೇ ತಾ ೩ನೇಗೆ ಕುಮಟೆಗೆ ಬರುವವರಿದ್ದಾರೆಂದು ತಿಳಿಯುತ್ತದೆ ಗೇರಸಪ್ಪೆಯ ಜೋಗವನ್ನು ನೋಡಿಕೊಂಡು ಇತ್ತ ಕಡೆ ಬರುವ ಕಾರ್ಯಕ್ರಮವಿರುತ್ತದಂತೆ

ಜಾಹೀರ ನೋಟೀಸು.

ಪಾರ್ವತಿ ಕೋಂ ನಾರಾಯಣ ನಾಯ್ಕ ಇವಳು ನಾರಾಯಣ ಕೃಷ್ಣನಾಯ್ಕ ಸಾಕಿನ ಹಿರೇಗುತ್ತಿ ಪೈಕಿ ಬಸ್ತಿಕೇರಿ ಇವರಿಗೂ ಬೇರೆ ಸಮ್ಮಂಧಪಟ್ಟ ಜನರಿಗೂ ಈ ಮೂಲಕ ಜಾಹೀರಪಡಿಸುವದೇನಂದರೆ —

ನಾನು ನಾರಾಯಣ ಕೃಷ್ಣ ನಾಯ್ಕ ಇವರ ಮದುವೆಯ ಹೆಂಡತಿಯಾಗಿದ್ದು ಸದರ ನಾರಾಯಣ ನಾಯ್ಕ ಇವರು ನಿಷ್ಕಾರಣವಾಗಿ ನನಗೆ ಹೊಡೆದು ಬಡಿದು ಪೈವೇಲಿನ ಚಿನ್ನದ ದಾಗಿನೆಗಳನ್ನು ಕಸಕೊಂಡು ಗರ್ಭಿಣಿಯಾದ ನನಗೆ ಹೊರಗೆ ಹಾಕಿದ್ದಾರೆ ಸದ್ರಿಯ ಪರ ಮೇಲೆ ನನ್ನ ವ ಮುಂದೆ ಹುಟ್ಟುವ ಶಿಶುವಿನ ಜೀವನದ ಜವಾಬದಾರಿ ಇದ್ದು ನನ್ನ ಜೀವನದ ಬಗ್ಗೆ ನ ಸು ಇಲ ಜ ನಡಿಸುವ ತಯಾರಿಯಲ್ಲಿದ್ದ ಸಂಗ್ತಿ ತಿಳಿದು ನನಗೆ ಜೀವನಾಂಶ ಸಿಗಬಾರದೆಂಬ ಹೇತುವಿನಿಂದ ಸದರ ನಾರಾಯಣ ನಾಯ್ಕ ಇವರು ಹೊರಗಿನಿಂದ ಹಣ ಒರತಕ್ಕದ್ದಿದ್ದು ತಮ್ಮ ಬಾಬತು ಆಸ್ತಿಯನ್ನು ಸ್ವಾಧೀನಮಾಡುವ ಗರಜು ಇಲ್ಲದಿದ್ದಾಗ್ಯೂ ನನಗ ವಂಚಿಸುವ ಇರಾದೆಯಿಂದ ಸ್ವಾಧೀನ ಮಾಡುವ ಆಲೋಚನೆಯನ್ನು ಮಾಡುತ್ತಾರೆಂದು ತಿಳಿದು ಬಂದಿದೆ ಕಾರಣ ಅಂಥ ಪರಾಧೀನತೆಗಳಿಂದ ನನ್ನ ಹಕ್ಕಿಗೆ ಬಾಧಕ ಬರುವಂತೆ ಇಲ್ಲ ಸ್ವಾಧೀನ ಮಾಡಿಕೊಳ್ಳುವವರಿಗೆ ನನ್ನ ಹಕ್ಕಿನ ತಿಳುವಳಿಕೆ ಇರಬೇಕೆಂಬದರಿಂದ ಈ ನೋಟೀಸು ಕೊಟ್ಟಿದೆ ತಿಳಿಯುವದು ತಾರೀಕ ೧೦—೧೨—೧೯೩೮

ಪಾರ್ವತಿ ಕೋಂ ನಾರಾಯಣ ನಾಯ್ಕ
ಇವಳ ರುಜು

ವಾರ್ತೆಗಳು

— ಇದೇ ಬರುವ ಜನವರಿ ತಿಂಗಳಲ್ಲಿ ಮುಂಬಯಿ ಲೆಜಿಸ್ಲೇಟಿವ್ಹ ಎಸೆಂಬ್ಲಿಯ ಸಭೆ ಮುಂಬಯಿಯಲ್ಲಿ ಸೇರುವದಿದೆ ಆ ಕಾಲದಲ್ಲಿ ಮುಂಬಯಿ ಸರಕಾರವು ಋಣವಿಮೋಚನ ಸಮಸ್ಯೆ, ಒಕ್ಕಲತನದ ಕಾನೂನು ಗ್ರಾಮೋದ್ಧಾರ, ಮದ್ಯಪಾನ ನಿಷೇಧ ಮೊದಲಾದವುಗಳ ಕುರಿತು ತಯಾರಿಸಿದ ಕಾನೂನುಗಳ ಚರ್ಚೆ ನಡೆಯುವದು

— ಯಹೂದಿಯರಿಗ ಸತ್ಯಾಗ್ರಹವನ್ನು ಪ್ರಾರಂಭಿಸಿ ಹಿಟ್ಲರನ ಶಾಸನವನ್ನು ಮುರಿಯಬೇಕೆಂಬ ಗಾಂಧೀಜಿಯವರ 'ಹರಿಜನ' ದಲ್ಲಿ ಬರೆದ ಲೇಖದಿಂದ ಬರ್ಲಿನ್‌ದಲ್ಲಿ ಬಳ್ಳೆ ಗಡಿಬಿಡಿಯಾಗಿದೆ ಗೊತ್ತಿಲ್ಲದ ವಿಷಯಗಳಲ್ಲಿ ಮಹಾತ್ಮರು ಕೈಹಾಕುವದು ಅಪ್ರಶಸ್ತವೆಂದು ಪತ್ರಿಕೆಗಳ ಟೀಕೆ ಇಂದ ಟೀಕೆಗೆ ಮಹಾತ್ಮರು ಸೊಪ್ಪು ಹಾಕಲಿಕ್ಕಿಲ್ಲವಾಗಿ ಮುಂಬಯಿ ಟೈಮ್ಸ' ಪತ್ರಿಕೆಯ ಅನಪೇಕ್ಷಿತ ವಕೀಲಿ!

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ಣಿಕ

ಎಗ್ಯುಮಿಕ್ಶ್ಚರ್ ಉಪಯೋಗಿಸಿರಿ!

ಸಿಕ್ಕ ಸಿಕ್ಕ ಔಷಧ ಸೇವಿಸಿ, ಜ್ವರವೆಂಥ ಬೇನೆಯನ್ನು ಉದ್ದ ಬೆಳಸಬೇಡಿರಿ ಬೆಲೆ ಆಣೆ ೧೨

ಇಂಡೋಬಾಮ್

ತಲೆಶೂಲಿ, ಮೈನೋವು ಸಂಧಿವಾತ, ಪಿತ್ತಾದಿ ನೋವುಗಳ ಕಡಿತ ಮೊದಲಾದ ವಿಕಾರಗಳು ಇದರ ಮಾಲೀಸಿನಿಂದ ಒಳಿತಾಗಿ ವಾಸಿಯಾಗುತ್ತವೆ ಬೇರೆ ಬಾಮುಗಳಿಂದಾಗುವಂತೆ ಅನಾವಶ್ಯಕ ಉರಿ ಏಳುವದಿಲ್ಲ ಬೆಲೆ ಆ ೮

ಎಲ್ಲ ಅಂಗಡಿಗಳಲ್ಲಿ ಸಿಗುತ್ತದೆ ಸಿಗದಿದ್ದರೆ ನಮಗೆ ಬರೆಯಿರಿ

ಕರ್ಣಿಕ ಬ್ರದರ್ಸ,
ಗಿರಗಾಂವ, ಮುಂಬಯಿ, ನಂ ೪

ಲಿಮಿಟೆಡ್,

ಹೊಸ ಪ್ಲ್ಯಾನು!!

ಲಕ್ಷ್ಯ
ಪ್ರವಾಸಿಗಳು

ತಾ 28—4—1938ರಿಂದ
ಗೆ ಜಾರಿಯಾಗುವಂತೆ
ರಿಮೊಳಗೆ ನಿರಾಯಾಸವಾಗಿ
ಯಗೆ ತಿಳಿಸಿದ್ದಲ್ಲಿ ಉಪ್ಪುಗಳಿಗೆ

ಸಮ್ಮತಿ!!!

THE HANUMAN TRANSPORT CO., LTD.,
UDIPI. S KANARA.

ಮುಂಬಯಿ ಮಹಾಮಂತ್ರಿಗಳ ಕರ್ನಾಟಕ ಸಂಚಾರ.

ಕರ್ನಾಟಕ ಪ್ರಾಂತಿ:

"ದೀರ್ಘ ಕಾಲದ ನಂತ:

ಹೋದರ

ಮುಂಬಯಿಯ ಮುಖ್ಯ ಪ್ರಧಾನರಾದ ಗಂಗಾಧರ ಖೇರರವರು ಆರ್ಥಸಚಿವರಾದ ಯವರನ್ನು ಕೂಡಿಕೊಂಡು ಕಳೆದ ರವಿವಾರ ಗುರುವಾರ ತಾ ೮ರ ತನಕ ನಾಲ್ಕು ದಿನ ಕ... ಟಕದ ಬೆಳಗಾವಿ ಮತ್ತು ಧಾರವಾಡ ಜಿಲ್ಹೆ... ದಿ ನಮ್ಮ ಪ್ರಾಂತದ ಜನರ ಆಶೆ ಆಕಾಂ... ಕ್ಷೆಗಳನ್ನೂ, ಜನತೆಯ ಜೀವನ... ನ್ನೂ ಪ್ರತ್ಯಕ್ಷ ತಿಳಕೊಂಡು ಹಿಂತಿರುಗಿದರು ಮತ್ತು ವಿಜಾಪುರ ಜಿಲ್ಲೆಗಳಿಗೆ ಸಂದರ್ಶ... ಸನ್ಮಾನ್ಯ ಮಂತ್ರಿಗಳಿಗೆ ಸಮಯವಿರಲಿಲ್ಲ ಆ... ವ್ಯಸನವಾಗುತ್ತದೆ ಮುಂದೆ ಬೇಗನೇ ಆ ಸ... ಬರಲೆಂದು ಹಾರೈಸುವಾ

ತಾ ೪ನೇ ರವಿವಾರ ಮುಂಜಾನೆ ನಾ ... ನಾ ಲಠ್ಠೆಯವರು ತಮ್ಮ ಪರಿವಾರದೊಂದಿಗೆ ಬಂದು ತಲ್ಪಿದರು ನಮ್ಮ ಪ್ರಾಂತಾಧ್ಯಕ್ಷ ದೇ... ವರಾದ ದೇಶಪಾಂಡೆಯವರೂ ಬೆಳಗಾವಿಯ ಮುಂದಾಳುಗಳೂ ಅಲ್ಲೇ ಅವರಿಗೆ ಭೆಟ್ಟಿಯಾ... ಬರಮಾಡಿದರು ಅಲ್ಲಿಂದ ನಾ ಖೇರರವರು ಸಾಂ... ಸ ವಿಲಿಂಗ್ಡನ್ ಕಾಲೇಜಿಗೆ ಹೋಗಿ ಅಲ್ಲಿಯ ಕಾರ್ಯವನ್ನು ಮುಗಿಸಿ, ತಿರುಗಿ ಮಿರಜಿಗೆ ... ಬೆಳಗಿನ ೧೦॥ ಘಂಟೆಗೆ ಕರ್ನಾಟಕ ಪ್ರಾಂ... ಟಿನ್ನ ಆಗಸೇ ಬಾಗಿಲದಂತಿರುವ ಸ್ಟೇ ಶ ನಿ ಗೆ ಮುಟ್ಟಿ ದ ರು ... ಕರ್ನಾಟಕ ಸಂಚಾರಕ್ಕೆ ಪ್ರಾರಂಭವಾಯಿತು ಮುಂದೆ ಮಂತ್ರಿಗಳು ಶೇಡಬಾಳ, ಕಾಗವಾಡ, ಚಿಕ್ಕೋಡಿ, ಹುಕ್ಕೇರಿ ಮುಂತಾದ ಊರುಗಳಿಗೆ ಅಲ್ಲಲ್ಲಿ ಮಾನಪತ್ರಗಳನ್ನು ಸ್ವೀಕರಿಸುತ್ತ ಸ... ಸುಮಾರಕ್ಕೆ ಹುಕ್ಕೇರಿ ರೋಡ ಸ್ಟೇಶನ್ನಿಗೆ ... ಅಲ್ಲಿಯ ಆರೋಗ್ಯಧಾಮದಲ್ಲಿ ವಿಶ್ರಾಂತಿಯ... ರು ಎಲ್ಲೆಲ್ಲಿಯೂ ಕರ್ನಾಟಕ ಪ್ರಾಂತೀಕರಣ ಪ್ರಾಮುಖ್ಯವಾಗಿ ಮಂತ್ರಿಗಳ ಮುಂದೆ ಮಂ... ನಾ॥ ಖೇರರವರಾದರೂ ಆ ಬೇಡಿಕೆಗೆ ಸಂಪೂ... ಕೊಟ್ಟು ತಮ್ಮಿಂದಾದಷ್ಟು ಸಹಾಯ ಮಾಡುವ ಸನೆಯನ್ನಿತ್ತರು "ಆದರೆ ಪ್ರಾಂತೀಕರಣಕ್ಕಾಂ... ಬಾದ ಬೇರೆ ಸಮಸ್ಯೆಗಳ ಕರ್ನಾಟಕ ಬಗೆ ಪ್ರಯತ್ನಿಸುವವರು ಇದನ್ನರಿತು ಈ ಸ... ಬಿಡಿಸಲು ಸಹಾಯ ಮಾಡಬೇಕು" ಎಂದು ... ಯನ್ನೂ ಅವರು ಕೊಟ್ಟಿರುತ್ತಾರೆ

ತಾ ೫ನೇ ಮುಂಜಾನೆ ಹುಕ್ಕೇರಿ ರೋಡಿ... ಟು ನಾ ಖೇರರವರು ೧೦॥ ಘಂಟೆಗೆ ಬೆಳ... ರು ಬೆಳಗಾವಿಯ ನಗರ ಸಮಿಯವರು ಅವರಿ... ವಿತ್ತು ಸತ್ಕರಿಸಿದರು ಮಾನಪ...ಕ್ಕೆ ಉತ್ತ... ನಾ॥ ಖೇರರವರು ಕರ್ನಾಟಕದ ಏಕೀಕರಣ ತತ್ವಕ್ಕೆ ತಮ್ಮ ಪೂರ್ಣ ಒಪ್ಪಿಯುಂಟೆಂತಲೂ, ಆ ಬಗ್ಗೆ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಯ ಬ... ಸಾಧ್ಯವಿದ್ದುದನ್ನೆಲ್ಲ ತಾವು ಮಾಡುವೆನೆಂದೂ, ಆದರೆ ಕನ್ನಡಿಗರು ವಿಶಾಲ ದೃಷ್ಟಿಯನ್ನಿಟ್ಟು ಭಾರತವರ್ಷದ

ಕಾನಡಾವೃತ್ತ— ಸೋಮವಾರ, ತಾ ೧೨—೧೨—೧೯೩೮ನೇ ಇಸವಿ. (ಚಿಕ್ಕಪುರವಣಿ)

ಮುಂಬಯಿ ಮಹಾಮಂತ್ರಿಗಳ ಕರ್ನಾಟಕ ಸಂಚಾರ

(೧೧ನೇ ಪುಟದಿಂದ ಮುಂದರಿಸಿದ್ದು)

ಟೊಕ್ಕವಲ್ಲ ಗಿರಣಿಯೊಡೆಯರಿಗೂ ಕೂಲಿಯಾಳುಗಳಿಗೂ ತೋಳ ಕುರಿಗಳನ್ನು ಸಂಬಂಧವಂತೆ! ಹಿಂದ ಭೂಮಿಯಲ್ಲಿ ಇಂತಹ ಸ್ಥಿತಿ ಎಂದೂ ಉತ್ಪನ್ನವಾಗದು ಸಂಪು ಇದು ಕೂಲಿಕಾರರು ಪ್ರಯೋಗಿಸಬೇಕಾದ ಕೊನೆಯ ಅಸ್ತ್ರ ಶಿಕ್ಕ ಹಾಗೆ ಅದನ್ನು ಪ್ರಯೋಗಿಸಕೂಡದು ಸಂಪು ಮಾಡುವ ಹಕ್ಕು ನಾವು ಕಸಿದುಕೊಂಡಿಲ್ಲ ಕೂಲಿಕಾರರ ಹಿತಕ್ಕಾಗಿ ಸಂಪು ಮಾಡಬಹುದು ಆದರೆ ಇಲ್ಲಿಯ ಸ್ಥಿತಿ ಬೇರೆ ದುಂಗ್ರಹವೇ ಸಂಪಿಗೆ ಮೂಲ ಕಾರಣವಾಗಿದೆ ನಮಗೆ ನಾಲ್ಕೂ ಎದಿಯಿಂದ ವಿರೋಧವಾಗುತ್ತಿದೆ ರಾಷ್ಟ್ರೀಯ ಸಭೆಯು ಹಿಂದುಗಳ ಸಂಸ್ಥೆಯೆಂದು ಮುಸ್ಲಿಮ್ ಲೀಗಿನವರೂ, ಬ್ರಾಹ್ಮಣರ ಕೈಗೊಂಬೆಯೆಂದು ಅಸ್ಪೃಶ್ಯರೂ, ಮತಸಂಪ್ರದಾಯದ ಸಲುವಾಗಿ ಟಿನನ್ಸಿ ಬಿಲ್ಲು ತರುವವರೆಂದು ಇನಾಮುದಾರರೂ ನಮಗೆ ಹಳಿಯುತ್ತಾರೆ! ಧರ್ಮ ಪಾಠಶಾಲನೆಕ ಸ್ವಾತಂತ್ರ್ಯ ಸಿಗದೆಂದು ಕೆಲವರು ಆಕ್ಷೇಪಿಸುತ್ತಾರೆ! ಹಸ್ತಪತ್ರಿಕೆಗಳನ್ನು ಹಂಚಿ, ಮೆರವಣಿಗೆಗಳನ್ನು ತೆಗೆದು ಒಕ್ಕಲಿಗರೂ, ... ಗಾರರೂ, ವೈಶ್ಯರೂ ನಮ್ಮನ್ನು ನಿಷೇಧಿಸುತ್ತಾರೆ! ... ತಿಂಗಳು ತನಕ ನಡೆದ ಕಳೆದ ಅಸೆಂಬ್ಲಿಯ ಅಧಿವೇಶನದಲ್ಲಿ ಏನೇನು ನಡೆಯಿತೆಂದು ನಿಮಗೆ ಗೊತ್ತಿಲ್ಲವೇ? ಎಲ್ಲ ಕಡೆಯಿಂದ ನಮ್ಮ ಮೇಲೆ ಆಘಾತಗಳಾಗುತ್ತಿವೆ! ಆದರೆ ರಾಷ್ಟ್ರೀಯ ಸಭೆಯವರು ಇದಕ್ಕೆಲ್ಲ ಸೊಪ್ಪುಹಾಕುವವರಲ್ಲ ಸಾಧ್ಯವಿದ್ದಮಟ್ಟಿಗೆ ದೇಶಹಿತ, ದೇಶಸೇವೆ ಮಾಡಲು ಅವರು ಪ್ರಯತ್ನ ಮಾಡಿಯೇ ತೀರುವರು ಮಂತ್ರಿಮಂಡಳದ ಮೇಲೆ ನೀವು ವಿಶ್ವಾಸವಿಟ್ಟಿರೇನೇ ನಿಮ್ಮ ಕಾರ್ಯವಾಗುವದು ನೀವು ಬೇದೆಂದು ಹೇಳಿದರೆ ನಾವು ಹೊರಟೆವು ನಾ॥ ಲಠ್ಠೆಯವರು ಬೆಳಗಾವಿಗೆ ಬಂದು ಆರಾಮದಿಂದ ಉಳಿಯುವದು ನಾನು ದೇವರು ಕೊಟ್ಟ ಮನೆಯಲ್ಲಿ ತುತ್ತು ರೊಟ್ಟಿ ತಿಂದು "ವಿಠ್ಠಲ, ವಿಠ್ಠಲ" ಎನ್ನುತ್ತ ಕಾಲಕ್ಷೇಪ ಮಾಡುವೆನು. ಇತ್ಯಾದಿ ಈ ಸಭೆ ತೀರಿದ ಮಂತ್ರಿಗಳ ಪರಿವಾರವು ಬೆಳಗಾವಿಗೆ ಮರಳಿತು ಮರಳುವಾಗಲೂ ಕೂಲಿಕಾರರು ಹಾದಿ ತಡೆದರು ಅಧಿಕಾರಿಗಳು ಮಾರ್ಗ ಮಾಡಿಕೊಡಬೇಕಾಯಿತು! ಭಾಯಿ ಸಂಕುದ್ದಿಯವರ ಉಪದೇಶದ ಗಲಿಬಿಲೆ'

ಮಂಗಳವಾರ ತಾ ೬ನೇ ಮುಂಜಾನೆ ನಾ॥ ಖೇರರವರು ಬೆಳಗಾವಿಯ ಕೊಂಗ್ರೆಸ ಕಚೇರಿಯಲ್ಲಿ ಹಲವು ಶಿಷ್ಟಮಂಡಳಗಳಿಗೆ ಸಂದರ್ಶನ ಕೊಟ್ಟು, "ರಿದ್ಧಿ" ನಾಟಕಸ್ಥಳದಲ್ಲಿ ಕೂಡಲಿಕ್ಕಿದ್ದ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನ ಮಾಡಲು ಹೋದರು, ಮಂತ್ರಿಗಳು ಅಲ್ಲಿ ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ ಪಡೆಯಿರೆಂತಲೂ, ಜೀವನದಲ್ಲಿ ಯಾವುದೊಂದು ಉನ್ನತ ಧ್ಯೇಯ ಮುಂದಿಟ್ಟುಕೊಂಡು ಅದನ್ನು ಸಾಧಿಸಲು ಪ್ರಯತ್ನ ಮಾಡಿರೆಂತಲೂ, ತಮ್ಮೊಳಗಿನ ಮತಭೇದಗಳನ್ನು ಮರೆತು ಒಮ್ಮನಸ್ಸಿನಿಂದ ದುಡಿಯಿರೆಂತಲೂ, ಶ್ರೇಷ್ಠ ಪುರುಷರ ಆದರ್ಶ ಮುಂದಿಟ್ಟುಕೊಳ್ಳಿರೆಂತಲೂ ಉಪದೇಶಾತ್ಮಕ ನಾಲ್ಕು ಸವಿ ಮಾತುಗಳನ್ನು ಹೇಳಿ ಹಾಗೆಯೇ ಮುಂದೆ ಬೈಲಹೊಂಗಲಕ್ಕೆ ಹೊರಟರು ಬೈಲಹೊಂಗಲದಲ್ಲಿ ಬೇಸಾಯ ಪ್ರಯೋಗ ಹೊಲದ ಬದಿಯಿಂದಲೇ ಮಂತ್ರಿಗಳ ಮೋಟಾರ ಸಾಗಿತ್ತು. ರಾ॥ ಬ॥ ಪಾಲಿಮರರವರು ಒಳ್ಳೇ ಬೆಳೆ ಬಂದ ಒಂದು ಹೊಲವನ್ನು ತೋರಿಸಿದರು. "ಇದೆಲ್ಲ ರೈತನು ಬೆಳಸಿದ್ದೋ, ಬೇಸಾಯ ಖಾತೆಯವರು ಮಾಡಿಸಿದ್ದೋ?" ಎಂದು ನಾ॥ ಖೇರರವರು ಪ್ರಶ್ನೆ ಮಾಡಿದರು. "ಬೇಸಾಯ ಇಲಾಖೆಯ ಕಾಮಗಾರರ ನೇತೃತ್ವದಲ್ಲಿ ಒಕ್ಕಲಿಗನೇ ಬೆಳೆಸಿದ್ದು" ಎಂದು ರಾವಬಹಾದ್ದೂರರು ಉತ್ತರ ಕೊಟ್ಟರು. ನಾ॥ ಖೇರರವರಿಗೆ ಆಗ ಸಂತೋಷವಾಯಿತು ಇಲ್ಲಿಂದ ಮುಂದೆ ಮುಖ್ಯ ಸಚಿವರು ಧಾರವಾಡಕ್ಕೆ ಹೊರಟರು (ಅಪೂರ್ಣ)

ಪ್ರವಾಸಿ ಜನರಿಗೆ

ಊಟ-ಉಪಚಾರಗಳ ಉತ್ತಮ ವ್ಯವಸ್ಥೆ.

ಮಾಧವಾಶ್ರಮ,

ಕಾರವಾರ.

ಮಧ್ಯವರ್ತಿ ಸ್ಥಳ,

ಉತ್ಕೃಷ್ಟ ಊಟ,

ಉತ್ತಮ ಹವೆಯ ಕೋಣೆಗಳು,

ಊಟ-ಉಳಕೊಳ್ಳುವ ಅನುಕೂಲತೆ'



...

ಏಜಂಟ —

ಸುಬ್ರಾಯ ಸೀತಾರಾಮ ಹೆಗಡೆ, ಶಿರ್ಶಿ

ಸುಸಂಸ್ಕೃತನಾಗಬೇಕು. ಕುರುಕತನದ ಪ್ರತಿಬಂಧ ಮಾಡುವದು ಶಿಕ್ಷಣ ಪ್ರಸಾರದಷ್ಟೇ ಮಹತ್ವದ್ದಿದೆ" ಎಂದು ಸೂಚನೆ ಕೊಟ್ಟರು. ಆ ಮೇಲೆ ಜಿಲ್ಲಾ ಲೋಕಲ್ ಬೋರ್ಡಿನ ಮಾನಪತ್ರ ಸಮರ್ಪಣೆಯಾಯಿತು. ಅದಕ್ಕೆ ಉತ್ತರ ಕೊಡುತ್ತ ನಾ॥ ಖೇರರವರು ಅಂದದ್ದೇನಂದರೆ, "ಪ್ರಾಥಮಿಕ ಶಿಕ್ಷಣ ಕಾನೂನಿನ ತಿದ್ದುಪಡಿಯಿಂದ ನಿಮ್ಮ ಅಧಿಕಾರ ನಾವು ಕಸಿದುಕೊಳ್ಳಲಿಲ್ಲ. ಶಿಕ್ಷಕರ ವರ್ಗಾವರ್ಗೀ ಮೊದಲಾದವನ್ನು ಮಾತ್ರ ತೆಗೆದುಕೊಂಡಿದ್ದೇವೆ. ಹಿಂದಿನ ಸರಕಾರದವರು ನಿಮಗೆ ಸಲ್ಲತಕ್ಕ ಧನಸಹಾಯದಲ್ಲಿ ೪॥ ಲಕ್ಷ ರೂ. ಕೊಂಡರೆಂದು ನೀವು ದೂರುತ್ತೀರಿ. ಆ ತಪ್ಪಿಗೆ ನಾವು ಹೊಣೆಗಾರರಲ್ಲ. ನಿಮ್ಮವರೇ ಒಬ್ಬರು ಆಗ ಮಂತ್ರಿಮಂಡಳದಲ್ಲಿದ್ದರು. ಆವರು ನಿಮಗೆ ಸಹಾಯ ಮಾಡಬಹುದಿತ್ತು. ಆ ಹಣ ನಿಮಗೆ ಕೊಡಲು ಈಗ ನಮಗೆ ಸಾಧ್ಯವಿಲ್ಲ" ಎಂದು ಹೇಳಿದರು. ಅಲ್ಲಿಂದ ಮಂತ್ರಿಗಳು ಸಾರ್ವಜನಿಕ ಸಭೆಗೆ ಬಂದರು. ಸಭೆಯು ಪ್ರಾರಂಭವಾಗುತ್ತ ಪ್ರಾಂತಾಧ್ಯಕ್ಷ ದೇ. ಭ. ದೇಶಪಾಂಡೆಯವರು ಕನ್ನಡದಲ್ಲಿ ಮಾತಾಡಪ್ರಾರಂಭಿಸಿದರು. ಮರಾಠಿ ಜನರು ಗೊಂದಲ ಮಾಡಹತ್ತಿದರು. ಆಗ ದೇಶಭಕ್ತರು "ಬೆಳಗಾವಿಯು ಕರ್ನಾಟಕದ ಭಾಗವಿದೆ. ಇಲ್ಲಿ ಕನ್ನಡಕ್ಕೆ ಪ್ರಾಧಾನ್ಯವಿರಬೇಕು. ಕನ್ನಡ ನುಡಿಯ ಗೌರವ ಕಾಯುವದು ನನ್ನ ಕ[illegible]ವಿದೆ" ಎಂದು ಮರಾಠಿಗರಿಗೆ ತಿವಿ ಹಿಂದಿದರು. ಮುಖ್ಯ ಮಂತ್ರಿಗಳೂ ಕನ್ನಡದಲ್ಲೇ ಮಾತಾಡಲಾರಂಭಿಸಿದರು. ಆಗಲೂ ಪುನಃ ಗೊಂದಲವಾಗಹತ್ತಿತು. ಆಗ ನಾ॥ ಖೇರರು, "ಕನ್ನಡ ಜನರಲ್ಲಿ ಕೆಲಸ ಮಾಡುವ ಇಚ್ಛೆಯಿದ್ದರೆ ನೀವು ಕನ್ನಡ ಕಲಿಯಬೇಕು. ಜನತೆಯ ಭಾಷೆ ಕಲಿಯದವನು ನಿಜವಾದ ಕೆಲಸಗಾರನಾಗಲಾರನು. ಎಷ್ಟೋ ಕಾಲದಿಂದ ನೀವು ಕರ್ನಾಟಕದಲ್ಲಿದ್ದೀರಿ. ಮುಂದೆಯೂ ಇರುವಿರಿ. ನೀವು ಕನ್ನಡ ಕಲಿಯಲೇಬೇಕು" ಎಂದು ಮರಾಠಿಗರಿಗೆ ಹಿಂಡ್ರುತುಂಡ ಹೇಳಿದರು.

ರಾತ್ರಿಯ ಊಟ ತೀರಿಸಿ ಮಂತ್ರಿವರ್ಯರಿಬ್ಬರೂ ಗೋಕಾಕಕ್ಕೆ ಹೋದರು. ಹಾದಿಯಲ್ಲಿ ಸಾವಿರಾರು ಕೂಲಿಕಾರರು ಮಂತ್ರಿಗಳ ಮಾರ್ಗದ ಮೇಲೆ ಅಡ್ಡ ಬಿದ್ದು ದಾರಿ ಕಟ್ಟು ಮಾಡಿದರು. ದಾರಿಯನ್ನು ಮಾಡಿಕೊಳ್ಳಬೇಕಾದರೆ ಮಂತ್ರಿಗಳಿಗೆ ಕಷ್ಟವಾಯಿತು. ಗೋಕಾಕದ ನಗರ ಸಭೆಯ ಮಂದಿರದಲ್ಲಿ ಮಹಾತ್ಮರ ಛಾಯಾಚಿತ್ರದ ಅನಾವರಣವಾಯಿತು. ಅಲ್ಲಿಯ ಶಾಲೆಯ ಮುಖ್ಯಾಧ್ಯಾಪಕ ರಾ। ಜೋಶಿಯವರು ೮ ಕದರುಗಳುಳ್ಳ ಒಂದು ಕೈರಾಟೆಯನ್ನು ತಯಾರಿಸಿದ್ದಾರೆ. ಅದನ್ನು ಕಂಡು ನಾ। ಖೇರರವರಿಗೆ ಬಹಳ ಆನಂದವಾಯಿತು. ಆ ಕೈರಾಟೆಯ ಪೂರ್ಣ ವಿವರಗಳನ್ನು ತಮಗೆ ಕಳಿಸಲು ರಾ। ಜೋಶಿಯವರಿಗೆ ಹೇಳಿದ್ದಾರೆ. ಅಲ್ಲಿಂದ ಮುಂದೆ ಸಾರ್ವಜನಿಕ ಸಭೆಗೆ ಹೋದರು. ಬೇರೆ ಬೇರೆ ಸಂಸ್ಥೆಗಳು ಸನ್ಮಾನ್ಯ ಸಚಿವರಿಗೆ ಮಾನಪತ್ರಗಳನ್ನೂ ಪುಷ್ಪಮಾಲೆಗಳನ್ನೂ ಅರ್ಪಿಸಿದರು. ಗೋಕಾಕದ ಕೂಲಿಕಾರರ ದೂರುಗಳನ್ನು ಕೇಳಿಕೊಳ್ಳುವ ಇಚ್ಛೆಯಿಂದ ಅವನ್ನು ನಿವೇದಿಸಲು ಮಂತ್ರಿಗಳು ಕೂಲಿಕಾರರ ಮುಂದಾಳುಗಳಾದ ರಾ। ಸಂಸುದ್ದಿಯವರಿಗೆ ಕೇಳಿಕೊಂಡರು. ಅದರಂತೆ ಸಂಸುದ್ದಿಯವರು ನಿವೇದಿಸಿದರು. ಆ ಬಳಿಕ ಮುಖ್ಯ ಪ್ರಧಾನರು ಎದ್ದು ಎಲ್ಲ ಬೇಡಿಕೆಗಳಿಗೆ ಸಂಕ್ಷೇಪದಿಂದ ಉತ್ತರ ಕೊಟ್ಟರು. ಅದರ ಸಾರಾಂಶ ಈ ಮುಂದಿನಂತಿದೆ:-

ನನಗೆ ಕನ್ನಡ ಚನ್ನಾಗಿ ಬರುವದಿಲ್ಲ. ನನ್ನ ಆಯುಷ್ಯವೆಲ್ಲ ಮುಂಬಯಿಯಲ್ಲಿ ಕಳೆದದ್ದರಿಂದ ಕನ್ನಡ ಮರೆತಂತಾಗಿದೆ. ಹಿಂದೀ ಭಾಷೆ ನಿಮಗೆ ಚನ್ನಾಗಿ ತಿಳಿಯಲೊಲ್ಲದು. ನನ್ನ ವಿಚಾರಗಳನ್ನು ನಿಮಗೆ ಚನ್ನಾಗಿ ತಿಳಿಸಬಯಸುತ್ತೇನೆ. ಅದ್ದರಿಂದ ನಾನು ಮರಾಠಿಯಲ್ಲಿ ಮಾತಾಡುವೆನು. ಮತದಾನವೇ ರಾಜ್ಯಾಧಿಕಾರದ ಸೂತ್ರ. ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಮತದಾನವೇ ಮುಖ್ಯ ವಸ್ತು. ಕರಭಾರ ತೆರುವವರಿಗೆ ಮತಾಧಿಕಾರವಿದೆ. ಅವರೇ ಪ್ರಾತಿನಿಧಿಕ ರಾಜ್ಯಸಂಸ್ಥೆಯ ಆಧಾರಭೂತರು. ಈಗ ನಮ್ಮ ಭಗಿನಿಯರು ರಾಜಕಾರಣದಲ್ಲಿ ಭಾಗ ವಹಿಸುತ್ತಿದ್ದುದು ಸಮಾಧಾನದ ಸಂಗತಿ. ಸ್ತ್ರೀ ಪುರುಷರು ಕೂಡಿ ರಾಜ್ಯಶಕಟ ಸಾಗಿಸುವದು ಅವಶ್ಯವಿದೆ. ಕರ್ನಾಟಕ ಏಕೀಕರಣದ ಕಡೆ ನಾವು ದುರ್ಲಕ್ಷ ಮಾಡುತ್ತೇವೆಂದು ನಮ್ಮ ಮೇಲೆ ಆರೋಪವಿದೆ. ನಮಗೆ ಕರ್ನಾಟಕವನ್ನಾಳುವದಷ್ಟೇ ಕೆಲಸವಲ್ಲ, ನಮ್ಮ ಮುಂದೆ ಗುಡ್ಡದಂತಹ ಬೇರೆ ಮಹತ್ವದ ಕಾರ್ಯಗಳಿವೆ. ಆದರೂ ನಾವು ಕರ್ನಾಟಕವನ್ನು ಮರೆತಿಲ್ಲ. ಆಂಧ್ರ ಪ್ರಾಂತದ ಬಗ್ಗೆ ನಾ॥ ರಾಜಗೋಪಾಲಾಚಾರ್ಯರು ಮಾಡಿರುವಷ್ಟು ಕೆಲಸ ನಾನು ನಿಮ್ಮ ಪ್ರಾಂತದ ಬಗ್ಗೆ ಮಾಡಿರುವೆನು. ಕೂಲಿಕಾರರ ವಿಷಯ ಅವರು ಈ ಹೊತ್ತು ನನಗೆ ಮಾರ್ಗದಲ್ಲಿ ಅಡ್ಡಗಟ್ಟಿದರು. ನಿಮ್ಮ ಅಂಬೋಣ ಕೇಳಿಕೊಳ್ಳುತ್ತೇನೆಂದು ಹೇಳಿದರೂ ಮಾರ್ಗ ಬಿಡಲಿಲ್ಲ! ನಾನು ಸ್ಪಷ್ಟ ಹೇಳುತ್ತೇನೆ. ಕಾಂಗ್ರೆಸ ತತ್ವಗಳಂತೆ ಗಿರಣಿ-ತಂಟೆಗಳನ್ನು ಬಗೆಹರಿಸಲು ನಾವು ಸರ್ವದಾ ಸಿದ್ಧರಿದ್ದೇವೆ. ಕಾಂಗ್ರೆಸ್ಸು ಯಾರಿಗೂ ಅಹಿತ ಮಾಡದು. ಆದರೆ ಕೂಲಿಕಾರರ ಕಾರ್ಯಪದ್ಧತಿ ಬೇರೆ. ಕೆಲವು ಜನರ ಸಲುವಾಗಿ ಅವರು ಸಾವಿರಾರು ಜನರಿಗೆ ಉಪವಾಸ ಹಾಕುತ್ತಾರೆ. ಇದು ನ್ಯಾಯವೇ? ಕೂಲಿಕಾರರ ಬಗ್ಗೆ ಅವರ ಮುಂದಾಳುಗಳು ತೋರಿಸುವ ಕಳಕಳಿ ಇದೇ ಜಾತಿಯದಲ್ಲವೇ? ಕೂಲಿಕಾರರ ಹಿತದ ಮಕ್ತೆ ಭಾಯಿ ಸಂಸುದ್ದಿಯವರಿಗೇ ಕೊಡಲಿಲ್ಲ. ನಾವು ಕೂಲಿಕಾರರ ತಂಟೆ ಬಗೆಹರಿಸಲು ನಾ॥ ನಂದಾರವರಿಗೆ ಕಳಿಸಿದೆವು, ಕಮಿಟಿ ನೇಮಿಸಿದೆವು, ಎಲ್ಲ ಯೋಗ್ಯ ಉಪಾಯ ಕೈಕೊಂಡೆವು. ಆದರೆ ಸಂಸುದ್ದಿಯವರಿಗೆ ಸಮಾಧಾನವಿಲ್ಲ. ತಮ್ಮ ವಾಕ್ಯವೇ ವೇದವಾಕ್ಯವೆಂದು ಅವರ ಹಟ. ಕೆಲವರ ದುರಾಗ್ರಹಕ್ಕೆ ಅನೇಕರಿಗೆ ಗೋಳಾಡಿಸುವದು ಎಂದೂ

(ಚಿಕ್ಕ ಪುರವಣಿ ನೋಡಿರಿ)

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,
ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ. — ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಹೆಯಿಂದ ಬೆಳಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! == ನಿಶ್ಚಿತ ಸಮಯ!! == ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,
UDIPI. S. KANARA.

ಓಂ

'दशमूलारिष्ट.'

ದಶಮೂಲಾರಿಷ್ಟ

ಇದು ಬಹು ತರದ ಗಿಡ ಮೂಲಿಕೆಗಳಿಂದ ಆಯುರ್ವೇದ ಶಾಸ್ತ್ರದ ರೀತಿಯಿಂದ ತಯಾರಿಸಿದ ಔಷಧವು. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಇವರ ಗುಣಗಳು ಸರಿಯಾಗಿ ಕೊಡದಿರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಮಾಡಿ ಎಂಥ ಅಶಕ್ತರಿದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ (ವಾತ, ಕ್ಷಯ, ವಾಂತಿ) ಕೂಪಿನ ಪಾಂಡರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ, ಧಾತುಕ್ಷೀಣತೆ, ಗರ್ಭಾಶಯದ ರೋಗ ಇದ್ದರೆ ಮಕ್ಕಳಿಲ್ಲದೇ ಇರುವವರಿಗೆ ಮತ್ತು ಹೆಂಗಸರಿಗೆ ಪ್ರಸವವಾದ ನಂತರ ಆಗುವ ಸಂನಿಪಾತ, ನರಗಳ ವಿಕಾರಗಳಿಂದ ಆಗುವ ರೋಗ ಮುಂತಾದ ವಾಯು ವಿಕಾರದಿಂದ ಉತ್ಪನ್ನವಾಗುವ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔಂಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಬರದಂತೆ ಮೊದಲಿನಂತೆ ಆರೋಗ್ಯ ದೊರೆಯುತ್ತದೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡತಕ್ಕದ್ದು.

೧೨ ಔಂಸ ಬಾಟ್ಲಿ ೧ಕ್ಕೆ ರೂ ೧—೪—೦.

,, ಬಾಟ್ಲಿ ೬ಕ್ಕೆ ರೂ ೬—೧೨—೦

,, ಬಾಟ್ಲಿ ೧೨ಕ್ಕೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಲಕ್ಷ್ಮೀಗಂಧಿಮಿಶ್ರ ಕೂಷ್ಮಾಂಡಾವಲೇಹ, ವೃದ್ಧಿಬಾಧನ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ವೇದಧನ್ವಂತರಿ ಔಷಧಾಲಯ,

ಪೋಸ್ಟ — ಕುಮಟಾ. (ಉ. ಕನ್ನಡ)

ಶ್ರೀ ಧೂತಪಾಪೇಶ್ವರ ಆಯುರ್ವೇದೌಷಧಿ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಮತ್ತು ಅಶಕ್ತತೆಯ ಮೇಲೆ ಉಪಯುಕ್ತ ಔಷಧವು

ಅಭ್ರಲೋಹ

ABHRALOHA

ದೊರೆಯುವ ಸ್ಥಳ—

ಕಾರವಾರ – ಮೆಸರ್ಸ ಮುಜುಮುದಾರ-ಕಸಬೇಕರ ಬ್ರದರ್ಸ

ಅಂಕೋಲಾ ದಿ ಸ್ಟೇಶನರಿ ಡಿಪೋ ॥ ಕುಮಟಾ ದೇವಪ್ಪಾ

ಅಯ್ಯಪ್ಪಯ್ಯ ॥ ಹೊನ್ನಾವರ – ಕಲ್ಯಾಣಪುರ ಬ್ರದರ್ಸ

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಹೋಲಿಯುವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಬಿವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-

D. K. Nayak Bros

K. N Nayak.

Honavar Agent -

R V. Prabhu

K. Padmanabha Rao & Sons.

BELGAUM

Chief Agents for

Karnatak Districts & S M. States

ಸುಲಭ ಕ್ರಯ! ಡಾಕ್ಟರ ಜೇ ಬೀ ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿದ ಬಳಿಕ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಬೆರಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪೊಟ್ಟಣ ಕಳಿಸಲಾರೆವು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೨-೮-೦ ವಿ ಪಿ. ೦ ೮ ೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ವಾಲ್ಟಾಕ್ಸನ, ಮದರಾಸ

ಈದನ್ನು ಪಾಂಡುರಂಗ ಕಪ ಶಾನಭಾಗ (ಸಂಪಾದಕ) ಇವರು ತಮ್ಮ " ಸ್ಟಾರ ಆಫ್ ಕೆನರಾ ಪ್ರೆಸ್ಸಿ "ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270.

Monday, 19th December, 1938.

ವರ್ಷ ೨೧

ಕಾನಡಾವೃತ್ತ

THE KANARA NEWS

ಸಂಚಿಕೆ ೨೪

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮುಫಯಸಾರ್ದಾರರಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ವ್ಯಾಪ್ತಿನ (೧೫ ಎಮ್ ಅಗಲ)
೫ ಸಾಲುಗಳವರೆಗೆ ರೂ.1-0-0
ಆ ನಂತ್ರ ಪ್ರತಿಸಾಲಿಗೆ 0-2-0
ಹನ್ನೊಂದರ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಖಾಸ ಜಾಹಿರಾತುಗಳ ಬಗೆ ಪತ್ರವ್ಯವಹಾರ ಮಾಡುವದ ಕರಾರು ಹಾಕಲ್ಪಡುವದು.

-※(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೯ ನೇ ಮಾಹೆ ಡಿಶಂಬರ ಸನ್ ೧೯೩೮ನೇ ಇಸವಿ.)※-

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital In order that the depositors' money should be safe and always available it is necessary that only safe loans should be granted The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans Subject to this condition the large resources of this bank and the expert services of its staff are always available to businessmen and trading concerns.

Estd. 1906

RESOURCES OVER A CRORE.

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳ :— ಶಿವಮೊಗ್ಗಾ, ಕುಂದಾಪುರ, ತರಿಕೆರೆ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.
ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು
ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ
ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಏಜಂಟರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು

ಕುಂದಾಪುರ,
4—10—1938

The Agricultural & Industrial Bank, Ltd.

ಜಾಹೀರ ನೋಟೀಸು.

ದಿ ಸಾಣಿಕಟ್ಟಾ ಕೊಪರೇಟಿವ್ ಸೊಲ್ಟ ಸೇಲ ಸೊಸ್ಸಾಯಟಿ ಲಿಮಿಟೆಡ್, ಸಾಣಿಕಟ್ಟಾದ ಈ ಕೆಳಗಿನ ಮಾಲ್ಕಿಯ ಆಸ್ತಿಗಳನ್ನು ಮಾರತಕ್ಕದ್ದ ಕಾರಣ ಈ ಆಸ್ತಿಗಳನ್ನು ಕ್ರಯಕ್ಕೆ ಕೊಳ್ಳುವರೇ ಇಚ್ಛಿಸುವವರು ಸೊಸ್ಸಾಯಟಿಯ ಹತ್ತರ ಪತ್ರವ್ಯವಹಾರ ಮಾಡುವರೇ ವಿನಂತಿ. ಯೋಗ್ಯ ಧಾರಣೆ ಬಾರದಿದ್ದಲ್ಲಿ ಈ ಆಸ್ತಿಗಳನ್ನು ಇದೇ 2 4-1939ನೇ ದಿವಸ ಸೊಸ್ಸಾಯಟಿಯ ಆಫೀಸಿನಲ್ಲಿ (ಕುಮಟಾ ತಾಲೂಕ ಪೈಕಿ ಸಾಣಿಕಟ್ಟೆಯಲ್ಲಿ) ಜಾಹೀರ ಲಿಲಾಂ ಮಾಡಿ ಮಾರಲ್ಪಡುವವು. ಹೆಚ್ಚಿನ ಸವಾಲು ದಾರರ ಸವಾಲು ಸೊಸ್ಸಾಯಟಿಯ ಮೆನೇಜಿಂಗ ಕಮಿಟಿಯಲ್ಲಿ 10—4—1939ನೇದರ ಒಳಗೆ ಕಾಯಂ ಮಾಡುವದರಲ್ಲಿ ಬರುವದು. ಆಸ್ತಿಯ ವರ್ಣನೆ —

(1) ಹೊನ್ನಾವರ ತಾಲೂಕ ಹೇರಂಗಡಿ ಗ್ರಾಮದ ಆಸ್ತಿ —

ಸ ನಂಬ್ರ	ಕ್ಷೇತ್ರ	ಆಕಾರ	ಇದರಲ್ಲಿಯ ಸವ್ವಾಕ
279	6—33—0	37—9—0	6/7 ಅಂಶ ಮಾಲ್ಕಿ ಹಕ್ಕು.

(2) ಹೊನ್ನಾವರ ತಾಲೂಕ ಸರಳಗಿ ಗ್ರಾಮದ ಆಸ್ತಿ —

ಸ ನಂಬ್ರ	ಕ್ಷೇತ್ರ	ಆಕಾರ					
19	1—24—0	7—6—0	ಪೈಕಿ	ಸವ್ವಾಕ	4/8	ಅಂಶ ಮಾಲ್ಕಿ	ಹಕ್ಕು
25	1—23—0	7—14—0	ಡಿ	ಡಿ	12/24	ಡಿ	ಡಿ
27	0—31—0	3—12—0	ಡಿ	ಡಿ	4 8	ಡಿ	ಡಿ
40	2—38—0	7—13—0	ಡಿ	ಡಿ	2/4	ಡಿ	ಡಿ
45	1—13—0	6—1—0	ಡಿ	ಡಿ	2/4	ಡಿ	ಡಿ
48	3—0—0	13—9—0	ಡಿ	ಡಿ	12/24	ಡಿ	ಡಿ
49	2—23—0	10—8—0	ಡಿ	ಡಿ	1 24	ಡಿ	ಡಿ
50	0—27—0	2—8—0	ಡಿ	ಡಿ	1 8	ಡಿ	ಡಿ
52-2	1—35—0	2—1—1	ಡಿ	ಡಿ	4/24	ಡಿ	ಡಿ
53	1—15—0	4—15—4	ಡಿ	ಡಿ	12/24	ಡಿ	ಡಿ
54	6—21—0	6—5—0	ಡಿ	ಪೂರಾ ಮಾಲ್ಕಿ ಹಕ್ಕು			
57	6—8—0	11—4—0	ಡಿ	12/24 ಮಾಲ್ಕಿ ಹಕ್ಕು			
58	4—13—0	18—2—0	ಡಿ	1[illegible]4	ಡಿ	ಡಿ	
61 1	0—1—0	0—11—0	ಡಿ	1	ಡಿ	ಡಿ	
61-3	4—5—0	14—13—15	ಡಿ	12 [illegible]	ಡಿ	ಡಿ	

(3) ಅಂಕೋಲಾ ತಾಲೂಕ ಪೈಕಿ ಅಗರಗೋಣ ಗ್ರಾಮದ ಆಸ್ತಿಯ ವಿವರ —

ಸ ನಂಬ್ರ.	ಕ್ಷೇತ್ರ	ಆಕಾರ	
46 ಪೈಕಿ	0—6—0	0—11—6	
168 ಪೈಕಿ	0—33—0	4—15—0	
171	1—3—0	6—4—0	ಇವುಗಳಲ್ಲಿಯ ಸಂಪೂರ್ಣ ಮಾಲ್ಕಿ ಹಕ್ಕು
239 ಪೈಕಿ	0—8—14	1—4—0	
230 ಪೈಕಿ	0—23—0	3—1—0	
263	0—21—0	3—4—0	

ಈ ರೀತಿ ಸ್ಥಳಗಳಾಗಿರುತ್ತವೆ. ಹೆಚ್ಚಿಗೆ ಮಾಹಿತಿ ಬೇಕಾದವರು ಸೊಸ್ಸಾಯಟಿಯ ಆಫೀಸಿಗೆ ಪತ್ರ ವ್ಯವಹಾರ ಮಾಡಬಹುದು ಯಾ ಪ್ರತ್ಯಕ್ಷ ಬಂದು ಮಾಹಿತಿಕೊಳ್ಳಬಹುದು.

V. G. NADKARNY,
Secretary,
The Sanikatta Co-operative Salt Sale Society, Ltd
Post SANIKATTA

Sanikatta
14—12—1938

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಠ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ-ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು. ಇದಲ್ಲದೆ ಆಯುರ್ವೇದೋಕ್ತ ಅನೇಕ ತೈಲ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು.

☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು.

ಮಾಲಕ :- ಕೇ. ರಾಮ ಪಂಡಿತ, ಪೋ ಕುಮಟಾ ಜಿ ಉ ಕಾನಡಾ.

ವಾರ್ತೆಗಳು.

— ಕಾನಪುರದಲ್ಲಿ ಮಹಿಳಾ ಪರಿಷತ್ತು ಸೇರಿ ೩೫ ವರ್ಷಕ್ಕೆ ಮಿಕ್ಕಿದ ಗಂಡಸರಿಗೆ ಹುಡುಗಿಯರನ್ನು ಕೊಟ್ಟು ಮದುವೆ ಮಾಡಬಾರದಾಗಿ ತೀರ್ಮಾನವಾಗಿದೆ.

— ಇದೇ ಡಿಸೆಂಬರ ತಿಂಗಳ ೨೮ನೇ ತಾರೀಖಿಗೆ ದಿಲ್ಲಿಯಲ್ಲಿ ಗ್ವಾಲ್ಹೇರದ ರಾಣಿ ಲಕ್ಷ್ಮೀಬಾಯಿ ರಾಜವಾಡೆ ಇವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತೀಯ ಮಹಿಲಾ ಪರಿಷತ್ತು ಸೇರಲಿಕ್ಕಿದೆ. ರಾಣಿ ಲಕ್ಷ್ಮೀಬಾಯಿ ರಾಜವಾಡೆಯವರು ಗ್ವಾಲ್ಹೇರ ಸಂಸ್ಥಾನದ ಸೈನ್ಯ ಇಲಾಖೆಯ ಮಂತ್ರಿಗಳ ಪತ್ನಿಯರು. ಸ್ವತಃ ಡಾಕ್ಟರ ಪರೀಕ್ಷೆಯಲ್ಲಿ ತೇರ್ಗಡೆಯಾದವರು.

— ಮುಂಬಯಿಯ ಪ್ರಭಾಶಂಕರ ರಾಮಚಂದ್ರ ಭಟ್ಟ ಇವರು ಗ್ರಾಂಟ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ವಸತಿಗೃಹಕ್ಕಾಗಿ ೨|| ಲಕ್ಷ ರೂಪಾಯಿಗಳನ್ನರ್ಪಿಸಿದ್ದಾರೆ. ಈ ವಸತಿಗೃಹದ ಉದ್ಘಾಟನ ಸಮಾರಂಭವು ಮುಂಬಯಿಯ ಮುಖ್ಯಮಂತ್ರಿಗಳಾದ ನಾ|| ಖೇರರವರ ಅಧ್ಯಕ್ಷತೆಯಲ್ಲಿ ಸದ್ಯಕ್ಕೆ ನೆರವೇರಿತು.

— ವಂದೇ ಮಾತರಮ್ ಗೀತವನ್ನು ಹಾಡಿದ ಬಗ್ಗೆ ಪಶ್ಚಾತ್ತಾಪವನ್ನು ಪ್ರದರ್ಶಿಸಿ, ಇನ್ನು ಮುಂದೆ ಆ ಗೀತವನ್ನು ಹಾಡಲಿಕ್ಕಿಲ್ಲವೆಂದು ಕ್ಷಮಾಯಾಚನೆಯನ್ನು ಮಾಡಬೇಕಾಗಿ ಹೈದರಾಬಾದ ಉಸ್ಮಾನಿಯಾ ವಿದ್ಯಾಲಯದವರು ಸಂಪು ಹೂಡಿದ ವಿದ್ಯಾರ್ಥಿಗಳಿಗೆ ಆಜ್ಞೆ ಕೊಟ್ಟಿದ್ದರು. ಆ ಪ್ರಕಾರ ವಿದ್ಯಾರ್ಥಿಗಳು ನಡಕೊಳ್ಳಲೊಪ್ಪಲಿಲ್ಲ. ಆದರಿಂದ ಸಂಪು ಹೂಡಿದ ೩೫೦ ಮಂದಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದವರು ಹೊರತಳ್ಳಿದ್ದಾರೆ. ಗುಲಬುರ್ಗಿಯೊಳಗಿನ ಇಂಟರ ಮೀಡಿಯೆಟ ಕಾಲೇಜಿನಲ್ಲಿಯೂ ೨೧೦ ವಿದ್ಯಾರ್ಥಿಗಳು ಸಂಪು ಹೂಡಿದ್ದಾರೆ. ಸಾಕಷ್ಟು ಧೈರ್ಯವಿಲ್ಲದ ವಿದ್ಯಾರ್ಥಿಗಳು ವಿದ್ಯಾಧಿಕಾರಿಗಳಿಗೆ ರಜೆಯ ಬಗ್ಗೆ ಒಂದಿಲ್ಲೊಂದು ನೆವ ಹೇಳಿ ಅರ್ಜಿ ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾಧಿಕಾರಿಗಳು ಇನ್ನೂ ಈ ಪ್ರಕರಣವನ್ನು ತಣಿಸುವ ಆಲೋಚನೆಯಲ್ಲಿಲ್ಲ.

— ತ್ರಾವಣಕೋರಿನಲ್ಲಿ ಸಂಸ್ಥಾನ ಕಾಂಗ್ರೆಸ ಸಂಸ್ಥೆಯ ಚಳವಳಿ ಬಿರುಸಿನಿಂದ ನಡೆದದೆ. ಈ ತಿಂಗಳಲ್ಲಿ ತ್ರಾವಣಕೋರ ಸಂಸ್ಥಾನದ ಪರಿಷತ್ತು ಸೇರಲಿದೆ. ಅದನ್ನು ಸೇರಿಸಬಾರದಾಗಿ ತ್ರಿವೇಂದ್ರಮ್‌ದ ಡಿ| ಮೆಜಿಸ್ಟ್ರೇಟರು ಪ್ರತಿಬಂಧಕ ಹುಕುಮು ಹೊರಡಿಸಿದ್ದಾರೆ. ಜನವರಿ ತಿಂಗಳಲ್ಲಿ ಸರ್ವಾಧಿಪತಿ ಲಿನ್‌ಲಿಥ್‌ಗೋ ದೊರೆಗಳು ಆ ಕಡೆ ಸಂಚರಿಸುವವರಿದ್ದಾರೆ. ಸಂಸ್ಥಾನ ಕಾಂಗ್ರೆಸ ಸಂಸ್ಥೆಯ ಸಮ್ಮೇಲನದಿಂದ ಸಂಸ್ಥಾನದೊಳಗಿನ ಪ್ರಶಾಂತಿಯ ಭಂಗವಾಗುವದೆಂದು ಡಿ|| ಮೆಜಿಸ್ಟ್ರೇಟರಿಗೆ ಭೀತಿಯಾಗಿ ಈ ಹುಕುಮು ಹೊರಡಿಸಲಾಗಿದೆ. ಈಗಲೇ ಅನೇಕರಿಗೆ ರಾಜದ್ರೋಹದ ಆರೋಪದ ಮೇಲೆ ಸೆರೆಹಿಡಿಯುವ ಕ್ರಮ ನಡೆದದೆ. ಸಂಸ್ಥಾನ ಕಾಂಗ್ರೆಸ ಸಂಸ್ಥೆಯವರು ಈ ಪ್ರತಿಬಂಧವನ್ನು ಮೀರಿ ಸತ್ಯಾಗ್ರಹ ಹೂಡುವ ತಯಾರಿ ನಡಿಸಿದ್ದಾರೆ. ವಾತಾವರಣವು ಕ್ಷುಬ್ಧವಾಗುವದೆಂದು ಎಣಿಸಬೇಕಾಗಿದೆ.

— ರಾಜಕೋಟ ಸಂಸ್ಥಾನದಲ್ಲಿಯೂ ಇನ್ನೂ ಪ್ರಕರಣ ಶಾಂತವಾಗಲಿಲ್ಲ. ಸತ್ಯಾಗ್ರಹ-ದಬ್ಬಾಳಿಕೆಗಳು ಒಂದೇ ಸವನೆ ನಡೆದಿದೆ. ಈ ತನಕ [illegible] ಜನರು

ಸರೆಹಿಡಿಯಲ್ಪಟ್ಟರು ಪುನಃ ಪುನಃ ಮಧ್ಯಸ್ಥಿಕೆಯ ಯತ್ನಗಳು ನಡೆಯುತ್ತಿವೆ ರಾಜಕೋಟದೊಳಗಿನ ಪ್ರಜಾಪರಿಷತ್ತಿನವರು ಕರನಿರಾಕರಣೆಯನ್ನು ಮಾಡುವ ಆಲೋಚನೆ ನಡಿಸಿದ್ದಾರೆ ಮಹಾತ್ಮರೂ ಮಧ್ಯಸ್ಥಿಕೆಯ ವಿಚಾರಮಾಡುತ್ತಿದ್ದಾರೆ ಫಲಿತಾಂಶವೇನಾಗುತ್ತದೆಂದು ನೋಡಬೇಕು.

— ಔಂಧ ಸಂಸ್ಥಾನಾಧಿಪರಾದ ಬಾಳಾಸಾಹೇಬ ಪಂತ ಪ್ರತಿನಿಧಿಗಳು ಉದಾರಧೀಗಳಾಗಿ ತಮ್ಮ ಪ್ರಜೆಗಳಿಗೆ ಸ್ವಯಂಸ್ಫೂರ್ತಿಯಿಂದ ರಾಜ್ಯಾಧಿಕಾರ ಕೊಡಲೊಪ್ಪಿದ್ದಾರೆ. ಪ್ರಜಾಪ್ರತಿನಿಧಿ ಸಭೆಯನ್ನು ಸಂಘಟಿಸಿ, ಅದರ ವಿದ್ಯಮಾನ ಸಂಸ್ಥಾನದೊಳಗೆ ಉದ್ಯೋಗಾಭಿವೃದ್ಧಿ ಮಾಡಲು ಯೋಜನೆಯನ್ನು ತಯಾರಿಸಿದ್ದಾರೆ ಸಂಸ್ಥಾನಿಕರು ವರ್ಧಾಕ್ಕೆ ಹೋಗಿ ಮಹಾತ್ಮರ ಸಲಹೆ ಪಡೆದು ತಮ್ಮ ಯೋಜನೆಯಲ್ಲಿ ತಿದ್ದುಪಾಟಗಳನ್ನು ಮಾಡಿಕೊಂಡಿದ್ದಾರೆ ವರ್ಧಾ ಮ್ಯುನಿಸಿಪಾಲಿಟಿಯವರು ಬಾಳಾಸಾಹೇಬರಿಗೆ ಮಾನಪತ್ರವನ್ನಿತ್ತು ಸತ್ಕರಿಸಿದ್ದಾರೆ ತಮ್ಮಂತೆಯೇ ಇತರ ಸಂಸ್ಥಾನಿಕರೂ ಲೋಕಸಭೆಗಳನ್ನು ಸ್ಥಾಪಿಸಿಕೊಂಡು ಸಂಸ್ಥಾನಗಳ ಅಭ್ಯುದಯವನ್ನು ಸಾಧಿಸಬೇಕೆಂದು ಬಾಳಾಸಾಹೇಬರು ಉದ್ಗರಿಸುತ್ತಾರೆ

— ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಹೊಸ ಇನ್‌ಕಮ್ ಟೆಕ್ಸ ಕಾನೂನಿನ ಚರ್ಚೆಯು ಮುಗಿಯಿತು ಹಿಂದುಸ್ಥಾನ ಸರಕಾರದ ಅರ್ಥಸಚಿವರಾದ ಸರ್ ಜೇಮ್ಸ ಗ್ರಿಗ್‌ರವರು ವಿವಾದ ವಿಷಯಗಳನ್ನು ಪ್ರತಿಪಕ್ಷಗಳ ಪ್ರಮುಖರಾದ ಶ್ರೀ| ಭುಲಾಭಾಯಿ ದೇಸಾಯಿ ಮೊದಲಾದವರೊಡನೆ ಆಲೋಚನೆ ಮಾಡಿ ಯುಕ್ತ ಕಂಡ ತಿದ್ದುಪಾಟಗಳನ್ನು ಕೈಕೊಂಡಿದ್ದರಿಂದ ಕಾನೂನಿನ ಮೂರೂ ವಾಚನಗಳು ಹೆಚ್ಚಿನ ಚರ್ಚೆಯಿಲ್ಲದೆ ಮಂಜೂರಾದವು. ಇದಲ್ಲದೆ ವಿದೇಶದಿಂದ ಹಿಂದುಸ್ಥಾನಕ್ಕೆ ಆಮದ ಆಗುವ ಗೋಧಿಯ ಮೇಲೆ ಆಮದ ತೆರಿಗೆಯನ್ನು ಹೇರಬೇಕಾಗಿ ಕಾನೂನ ಗಿದೆ ಹಿಂದುಸ್ಥಾನದೊಳಗಿನ ಗೋದಿಯೊಡನೆ ವಿದೇಶ ಗೋದಿ ಮೇಲಾಟ ಮಾಡದಂತೆ ಈ ಕಾನೂನು ಕೈಕೊಳ್ಳೋಣಾಗಿದೆ. ವರಿಷ್ಠ ಕಾಯಿದೆ ಕೌನ್ಸಿಲಿನ ಕೆಲಸ ಸೋಮವಾರ ತಾರೀಖು ೧೩ನೇಗೆ ಮುಗಿಯಿತು. ಈ ಅಧಿವೇಶನ ನವಂಬರ ೧೨ನೇ ತಾರೀಖಿಗೆ ಪ್ರಾರಂಭವಾಗಿತ್ತು. ಜವಾಖರ್ಚು ಪತ್ರಿಕೆಯನ್ನು ಚರ್ಚಿಸುವದಕ್ಕಾಗಿ ಎಸೆಂಬ್ಲಿ ಸಭೆ ತಾ ೬-೨ ೩೮ ನೇಯಿಂದ ಸೇರುವದು ಇನ್‌ಕಮ್ ಟೆಕ್ಸ ಮತ್ತು ಗೋದಿ ತೆರಿಗೆಗಳಿಂದ ಹಿಂದುಸ್ಥಾನ ಸರಕಾರಕ್ಕೆ ಒಳ್ಳೇ ಪ್ರಾಪ್ತಿಯಾಗುವದಾಗಿ ಎಣಿಸೋಣಾಗಿದೆ

— ವಿವಾಹಬದ್ಧ ಸ್ತ್ರೀಯರಿಗೆ ವಿವಾಹಬಂಧನದಿಂದ ಬಿಡುಗಡೆ ಮಾಡುವ ಕಾನೂನನ್ನು ಮುಂಬಯಿಯ ಡಾ|| ದೇಶಮುಖರವರು ಸೂಚಿಸಿದ್ದಾರೆ ಅದರ ಪ್ರಥಮ ವಾಚನವು ಶಿಷ್ಟಾಚಾರದಂತೆ ಸೋಮವಾರ ನಡೆದು ಲೋಕಾಭಿಪ್ರಾಯಗಳನ್ನು ಪರಿಕಾರವು ತರಿಸಿ ಕಾನೂನನ್ನು ವಿಚಾರಕ್ಕೆಡಬೇಕಾಗಿ ತೀರ್ಮಾನವಾಗಿದೆ.

— ಧಾರವಾಡ ಮ್ಯುನಿಸಿಪಾಲಿಟಿಯ ಇಲೆಕ್ಶನು ಮುಗಿಯಿತು. ಅಂತು ಮ್ಯುನಿಸಿಪಾಲಿಟಿಯ ಸಭಾಸದರ ಸಂಖ್ಯೆ ೩೬ ಕೊಂಗ್ರೆಸ ಪಕ್ಷದವರು ೧೬, ಸ್ವತಂತ್ರರು ೯, ವಿರೋಧಿಗಳು ೧೧ ಸ್ವತಂತ್ರರೂ, ಕೊಂಗ್ರೆಸ ಪಕ್ಷದವರೂ ಒಕ್ಕಟ್ಟಾದರು ಮಂಗಳವಾರ ತಾ ೧೧ನೇಗೆ ಸೇರಿದ ಸಭೆಯಲ್ಲಿ ಸ್ವತಂತ್ರ ಪಕ್ಷದ ರಾ| ನಲವಡಿಯವರಿಗೆ ಅಧ್ಯಕ್ಷರಾಗಿಯೂ ಕೊಂಗ್ರೆಸ ಪಕ್ಷದ ರಾ| ಖಾನೂರರವರಿಗೆ ಉಪಾಧ್ಯಕ್ಷರಾಗಿಯೂ ನೇಮಿಸಿಕೊಂಡಿದ್ದಾರೆ ವಿರೋಧಿ ಪಕ್ಷದ ೧೧ ಮಂದಿ ಸಭಾಸದರ ಇತರ ಗುಂಪು ಸಭೆಗೆ ಹಾಜರ ಇರಲಿಲ್ಲ ಇದರಿಂದ ಸಭೆಯ ಕೆಲಸ ಸುಸೂತ್ರ ಅಲ್ಪಾವಕಾಶದಲ್ಲಿ ಮುಗಿದುಹೋಯಿತು

— ಬೆಂಗಳೂರ ಮ್ಯುನಿಸಿಪಾಲಿಟಿಯವರು ಮೈಸೂರ ಸಂಸ್ಥಾನ ಕೊಂಗ್ರೆಸ ಭವನವನ್ನು ಕಟ್ಟಿಸುವದಕ್ಕಾಗಿ ಗಾಂಧಿನಗರದಲ್ಲಿ ೨೦೦೦ ಚಚ್ಚೌಕು ಗಜ ಭೂಮಿಯನ್ನು ಕ್ರಯಕ್ಕೆ ಕೊಟ್ಟಿದ್ದಾರೆ ಮ್ಯುನಿಸಿಪಾಲಿಟಿಯ ಈ ನಿರ್ಣಯದಿಂದ ಮೈಸೂರಿನ ಕೊಂಗ್ರೆಸ ಸಂಸ್ಥೆಗೆ ಒಳ್ಳೇ ಅನುಕೂಲವಾಗಿದೆ

— ಫ್ರಾನ್ಸ ದೇಶದ ಪಾರೀಸ ಪಟ್ಟಣದಲ್ಲಿ ಫ್ರೆಂಚರ ಈಗಿನ ವಿದೇಶ ಮಂತ್ರಿಗಳ ಧೋರಣವನ್ನು ಟೀಕಿಸುವ ಪತ್ರಿಕಾ ಪ್ರತಿನಿಧಿಗಳಿಗೆ ಹೊರತಳ್ಳುತ್ತಿದ್ದಾರೆ. ಲಂಡನಿನ 'ಟೈಮ್ಸ', 'ನ್ಯೂಸಕ್ರೋನಿಕಲ್', 'ಮೆಂಚೆಸ್ಟರ ಗಾರ್ಡಿಯನ್' ಮೊದಲಾದ ಪತ್ರಿಕೆಗಳ ಪ್ರತಿನಿಧಿಗಳಿಗೂ ಹೊರತಳ್ಳಬೇಕೆಂಬ ಆಲೋಚನೆ ಇದೆ ಮೊಟ್ಟಮೊದಲು 'ಮುಂಬಯಿಕ್ರೋನಿಕಲ್' ಮತ್ತು 'ಅಮೃತಬಝಾರ' ಪತ್ರಿಕೆಯ ಪ್ರತಿನಿಧಿಗಳಾದ ರಾ| ವಾಮನ ಕಟಾಡಿ ಮತ್ತು ಲಖನೌದ 'ನೆಶನಲ್ ಹೆರಲ್ಡ' ಪತ್ರಿಕೆಯ ರಾ| ಫಿರೋಜ ಗಾಂಧಿಯವರಿಗೂ ಹೊರತಳ್ಳೋಣಾಯಿತು ಇವರೀರ್ವರಿಗೆ ಸೆರೆ ಹಿಡಿದು ಸೆರೆಮನೆಯಲ್ಲಿಟ್ಟಾಗ ಸಹಾಯ ಮಾಡಿದ ಬಗ್ಗೂ ಊಟ ಒಯ್ದು ಕೊಟ್ಟ ಬಗ್ಗ ಹಿಂದೀ ವಿದ್ಯಾರ್ಥಿಗಳಾದ ರಾ| ಇನುತಿಯಾರಾಖು ಅಲಿಖಾನರವರಿಗೆ ಫ್ರೆಂಚ ಸರ

(೧೦ನೇ ಪಾನಿನ ಮೇಲೆ ಮುಂದರಿಸಿದೆ

BHUVANENDRA PRODUCTS, LTD.

KATAPADI. S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಖಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅಮೃತಸಮಾನ ಇದು ಕಸ್ತೂರಿ ಮಿಶ್ರಿತ

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಿಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್, ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ —	ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ	ಹೊನ್ನಾವರ —	ಕಾಮತ ಸ್ಟೋರ್ಸ.
ಅಂಕೋಲಾ —	ವೇದಮೂರ್ತಿ ಹನುಮಟ್ಟೆ ಕೇಶವ ಭಟ್ಟ.	ಗೋಕರ್ಣ —	ಎಮ್. ವ್ಹಿ. ಬಸ್ತಿಕರ, ಮರ್ಚಂಟ
ಕಾರವಾರ —	ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ	ಶಿರ್ಸಿ —	ಆರ್. ವ್ಹಿ. ಧಾಕಪ್ಪಾ, ಕೆಮಿಸ್ಟ

ವಿಳಾಸ.—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಬ್ರೆಂಚ್ ಆಫೀಸು. ಕುಮಟಾ. ಉ. ಕ.

OR

BHUVANENDRA PRODUCTS LTD. Head Office: KATAPADI, S. K.

ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ.

ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಗೆ ವಾರ್ಧಾದಲ್ಲಿ ರವಿವಾರ ತಾ|| ೧೧ನೇ ಪ್ರಾರಂಭವಾಯಿತು. ಈ ಸಭೆಗೆ [illegible] ಸದಸ್ಯರು ಹಾಜರಿದ್ದರು. ಮೌ|| ಅಬುಲ್ ಕಲಮ್ ಆಝಾದ್‌ರವರು ಜ್ವರ ಬರುತ್ತಿದ್ದರೂ ಸಭಾಕಾರ್ಯದಲ್ಲಿ ಸೇರಿದ್ದರು. ಬಾಬು ರಾಜೇಂದ್ರ ಪ್ರಸಾದ ಶೇಟ ಜಮನಾಲಾಲ ಬಜಾಜರವರಿಗೆ ಅಸ್ವಸ್ಥ್ಯದ ಮೂಲಕ ಬರಕೂಡಲಿಲ್ಲ. ಗಡಿನಾಡಿನ ಗಾಂಧಿಗಳು ಕಾರ್ಯಬಾಹುಲ್ಯದ ಮೂಲಕ ಬರಲಿಲ್ಲ. ಆ ದಿನ [illegible] ತಮ್ಮ ಸಭಾಸದರೊಳಗೆ ಬೇರೆ ಬೇರೆ ವಿಷಯಗಳ ಬಗ್ಗೆ ವಿಚಾರವಿನಿಮಯವಾಯಿತು. ಪಂಡಿತ ಜವಾಹಿರಲಾಲ ನೆಹರೂರವರಿಂದ ಯುರೋಪ ಖಂಡದ ಅನುಭವಗಳನ್ನು ಸಭಾಸದರು ಕೇಳಿಕೊಂಡರು. ಪಂಡಿತ ಜವಾಹಿರಲಾಲರು ಸ್ಪೇನ್ ಪರಿಸ್ಥಿತಿಯನ್ನು ಸಹಕಾರಿಗಳ ಕಡೆಯಿಂದ ತಿಳಕೊಂಡರು. ಅಧ್ಯಕ್ಷರಾದ ಶ್ರೀ|| ಸುಭಾಸಚಂದ್ರ ಬೋಸರವರು ಕಳೆದ ಸಭೆಯಾದ ಬಳಿಕ ನಡೆದ ಘಟನೆಗಳನ್ನು ಸಮಾಲೋಚಿಸಿದರು. ಅನಂತರ ಫಿನಸಾಂಸಲ, ಹೈದರಾಬಾದ, ಜಯಪುರ ಮೊದಲಾದ ಸಂಸ್ಥಾನಗಳಿಂದ ಬಂದ ತಂತಿಗಳನ್ನು ಓದಿಕೊಂಡು ಅಲ್ಲಿಯ ಪರಿಸ್ಥಿತಿಯನ್ನು ಕಾರ್ಯಕಾರಿ ಮಂಡಳವು ಕೇಳಿಕೊಂಡಿತು. ಆ ಮೇಲೆ ಲೆಕ್ಕ ಪತ್ರಿಕೆಗಳು ಮನ್ನಿಸಲ್ಪಟ್ಟವು. ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ಸಭಾಕಾರ್ಯ ಮುಗಿದ ಬಳಿಕ ಸೇವಾಗ್ರಾಮಕ್ಕೆ ಹೋಗಿ ಮಹಾತ್ಮರೊಡನೆ ಗಡಿನಾಡಿನ ಪರಿಸ್ಥಿತಿಯನ್ನು ಚರ್ಚಿಸಿದರು. ಗಡಿನಾಡಿನಲ್ಲಿ ಹಿಂದುಸ್ಥಾನ ಸರಕಾರವು ದಾಳಿಯವರನ್ನು ನಿರ್ಬಂಧಿಸುವದಕ್ಕಾಗಿ ಕೋಟ್ಯಾವಧಿ ರೂಪಾಯಿಗಳನ್ನು ಹಾಳು ಮಾಡುತ್ತಿದೆ, ನೂರಾರು ಮಂದಿಗಳ ಆಹುತಿ ಕೊಡುತ್ತಿದೆ. ಇಷ್ಟಾಗಿ ನೆರೆಹೊರೆಯಲ್ಲಿರುವ ಜನರ ಕಷ್ಟ ತಪ್ಪುವದಿಲ್ಲ. ಆದರಿಂದ ಕೊಂಗ್ರೆಸ ಕಾರ್ಯಕಾರಿ ಮಂಡಳವು ದಿಲ್ಲಿಯ ಡಾ|| ಆಸಫ ಅಲಿಯವರಿಗೆ ಅಲ್ಲಿಯ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ವರದಿಯನ್ನೊಪ್ಪಿಸುವದಕ್ಕಾಗಿ ನೇಮಿಸಿತ್ತು. ಆ ವರದಿಯನ್ನು ಮಹಾತ್ಮರ ಕಡೆಗೆ ಒಪ್ಪಿಸಿ ಕೃಪಾಲಾನಿಯವರ ಚರ್ಚಿಸಿದರು. ಸೋಮವಾರ ಪುನಃ ಸಭೆ ಸೇರಿ [illegible] ಬಂಗಾಲಿ-ಬಿಹಾರಿ ವಿವಾದದ ಚರ್ಚೆ ಪ್ರಾಮುಖ್ಯವಾಗಿ ನಡೆಯಿತು. ಬಿಹಾರ ಪ್ರಾಂತದಲ್ಲಿ ವಾಸಿಸುವ ಬಂಗಾಲಿಗಳಿಗೆ ಬಿಹಾರ ಸರಕಾರವು ಸರಿಯಾಗಿ ನಡಿಸಿಕೊಳ್ಳುವದಿಲ್ಲವಾಗಿ ಬಿಹಾರನಿವಾಸಿ ಬಂಗಾಲಿಗಳ ಆರೋಪ. ಬಂಗಾಲ ಬಿಹಾರ ಪ್ರಾಂತಗಳಲ್ಲಿ ಇದೊಂದು ದಾಯಾದಿ ಮತ್ಸರ ದೀರ್ಘಕಾಲದಿಂದ ನಡೆದಿದೆ. ಈ ಕುರಿತು ನಿರ್ಮಲ ದೃಷ್ಟಿಯಿಂದ ಆಲೋಚನೆ ಮಾಡಿ ವರದಿಯನ್ನೊಪ್ಪಿಸಲು ಬಾಬು ರಾಜೇಂದ್ರ ಪ್ರಸಾದರಿಗೆ ನೇಮಿಸಲಾಗಿತ್ತು. ಬಾಬು ರಾಜೇಂದ್ರ ಪ್ರಸಾದರು ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿ ವರದಿ ಒಪ್ಪಿಸಿದ್ದರು. ಈ ವಿವಾದ ಅಖಿಲ ಭಾರತೀಯ ಸ್ವರೂಪದ್ದು. ಒಂದು ಪ್ರಾಂತದಲ್ಲಿ ವಾಸಿಸುವ ಪರ ಪ್ರಾಂತದವರಿಗೆ ಎಷ್ಟರ ಮಟ್ಟಿಗೆ ರಾಜಮನ್ನಣೆ ಸಿಗಬೇಕೆಂಬುದೇ ಈ ವಿವಾದದಲ್ಲಿ ನಿರ್ಣಾಯಕ ವಿಷಯ. ಬಾಬು ರಾಜೇಂದ್ರ ಪ್ರಸಾದರು ಅಸ್ವಸ್ಥ್ಯದ ಮೂಲಕ ಸಭೆಗೆ ಹೋಗಲಿಲ್ಲವಾದ್ದರಿಂದ ಅವರ ಅನುಮತಿ ಪಡೆದು ಈ ವಿಷಯದ ನಿರ್ಣಯ ಮಾಡಬೇಕೆಂದು ತೀರ್ಮಾನವಾಗಿರು[illegible] ಪ್ರಾಂತದವರಿಗೂ ಒಂದೇ ನ್ಯಾಯ ಸಿಗುವಂತೆ ವಿಶಾಲವಾಗಿ ಪರಪ್ರಾಂತದವರಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುವ ಧೋರಣವನ್ನು ಪ್ರಾಂತಿಕ ಸರಕಾರವು ತಳೆಯಬೇಕೆಂಬ ಸಾಮಾನ್ಯ ನಿರ್ಣಯವಾಗುತ್ತದೆ. ಈ ನಿರ್ಣಯವನ್ನು ಬಾಬು ರಾಜೇಂದ್ರ ಪ್ರಸಾದರಿಗೆ ತಿಳಿಸಿ ಅಭಿಪ್ರಾಯ ಪಡೆದು ಆ ಮೇಲೆ ನಿರ್ಣಯ ಪ್ರಕಟವಾಗಬೇಕಾಗಿ ಸಭೆಯ ಅಭಿಪ್ರಾಯವಾಯಿತು. ಅನಂತರ, ಪ್ರವರ್ತಿಸಿದ ಈಗಿನ ಯಹೂದಿ ಮುಸ್ಲಿಮ್ ಪ್ಯಾಲೆಸ್ಟೈನದೊಳಗಿನ ಅರಬರ ಪರಿಸ್ಥಿತಿಯ ವಿಚಾರ ನಡೆಯಿತು. ಗಡಿನಾಡಿನ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಖಾನ ಸಾಹೇಬ ಮಹಮ್ಮದರವರು ಖುದಾಯಿ-ಖಿದಮತಗಾರರಿಗೂ ಕೊಂಗ್ರೆಸ ಕಮಿಟಿಗೂ ಇರಬೇಕಾದ ಸಂಬಂಧವನ್ನು ಚರ್ಚಿಸಿದರು. ಸತ್ಯಾಗ್ರಹದಲ್ಲಿ ಜಪ್ತಾದ ಹೊಲಗಳನ್ನೂ ದಂಡದ ರಕಮುಗಳನ್ನೂ ತಿರುಗಿ ಕೊಡಿಸುವ ಕುರಿತು ಸಾಂಗೋಪಾಂಗ ಚರ್ಚೆ ನಡಿಸಿದರು. ದಂಡದ ರಕಮುಗಳನ್ನು ಕೊಡಿಸಲು ಕಾರ್ಯಕಾರಿ ಮಂಡಳದ ಒಪ್ಪಿಗೆಯಾಗಲಿಲ್ಲ. ಹೊಲಗಳನ್ನು ಹಿಂತಿರುಗಿ ಕೊಡಿಸಲು ಮಂಡಳದ ಒಪ್ಪಿಗೆಯಾಯಿತು. ತ್ರಿಪುರಿಯಲ್ಲಿ ಸೇರಲಿಕ್ಕಿದ್ದ ರಾಷ್ಟ್ರೀಯ ಸಭೆಯ ಅಧಿವೇಶನದ ತಾರೀಖುಗಳ ವಿಷಯ ಬಹಳ ಚರ್ಚೆ ನಡೆಯಿತು. ಮಹಾತ್ಮರ ಗಡಿನಾಡಿನ ಸಂಚಾರದ ಕಾರ್ಯಕ್ರಮ, ಮೋಹರಮ್ಮ ಹಬ್ಬ, ಹೋಳಿ ಹಬ್ಬ, ವರಿಷ್ಠ ಕಾಯಿದೆ ಕೌನ್ಸಿಲಿನ ದಿಲ್ಲಿಯ ಅಧಿವೇಶನ ಮೊದಲಾದವುಗಳ ಮೂಲಕ ಎಲ್ಲರಿಗೂ ಅನುಕೂಲವಾಗುವ ಅವಧಿಯ ಚರ್ಚೆ ನಡೆಯಿತು. ಕೊನೆಗೆ ಮಾರ್ಚ ೯—೧೦—೧೧ನೇಗೆ ರಾಷ್ಟ್ರೀಯ ಸಭೆಯ ಜಾಹೀರ ಅಧಿವೇಶನ ಸೇರಿಸಬೇಕೆಂದು ಗೊತ್ತಾಯಿತು. ವಿಷಯ ನಿರ್ಧಾರಕ ಸಭೆ ತಾ ೭ನೇಯಿಂದಲೂ ಅದಕ್ಕೂ ಪೂರ್ವದಲ್ಲಿ ಕಾರ್ಯಕಾರಿ ಮಂಡಳದ ಸಭೆಯನ್ನು ಸೇರಿಸಬೇಕೆಂದೂ ನಿರ್ಣಯವಾಯಿತು. ಈ ಸಮಯ ಮಹಾತ್ಮರು [illegible] ಗಡಿನಾಡಿನ ಸಂಚಾರದ ಕಾರ್ಯಕ್ರಮ ಮುಂದೂಡಲ್ಪಟ್ಟಿತು. ಮೌಲಾನಾ ಶೌಕತ ಅಲಿಯವರು ನಡಿಸಿದ ರಾಷ್ಟ್ರಸೇವೆಯನ್ನು ಸ್ಮರಿಸಿ ಅವರ ನಿಧನದಿಂದುಂಟಾದ ಪಶ್ಚಾತ್ತಾಪವನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳವು ಪ್ರದರ್ಶಿಸಿತು. ಅನಂತರ ಶ್ರೀ|| ಸುಭಾಸಚಂದ್ರ ಬೋಸರು ಮಹಾತ್ಮರ ಕಡೆಗೆ ಹೋಗಿ ಬೇರೆ ಬೇರೆ ವಿಷಯಗಳ ಚರ್ಚೆಯನ್ನು ನಡಿಸಿದರು. ಮಂಗಳವಾರ ಮುಂಜಾವು ೮|| ಘಂಟೆಗೆ ಪುನಃ ಸಭೆ ಸೇರಿತು. ಮಹಾತ್ಮರು ಆ ಸಭೆಗೆ ಬಿತ್ತೈಸಿದ್ದರು. ಕೊಂಗ್ರೆಸ ಸಭಾಸದರ ಸಂಖ್ಯೆ ಬೆಳೆದ ಹಾಗೆ ಅದರೊಳಗೆ ರಾಷ್ಟ್ರೀಯಸಭೆಯ ಧರ್ಮಲೋಪ ಹೊಂದುತ್ತಿರುವದಾಗಿ ಮಹಾತ್ಮರು ಅಭಿಪ್ರಾಯಪಟ್ಟು, ಅದನ್ನು ಸುಧಾರಿಸುವದಕ್ಕಾಗಿ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ತಕ್ಕ ಜಾಗ್ರತೆಕೊಳ್ಳಬೇಕೆಂದರು. ರಾಷ್ಟ್ರೀಯ ಸಭೆಯೊಳಗೆ ಸ್ವಾರ್ಥಸಾಧಕರ, ವಂಚಕರ, ಹಿಂಸಾಚಾರಿಗಳ ಪ್ರವೇಶ ಬೆಳೆಯುತ್ತದೆಂದೂ ಅದನ್ನು ಪರಿಹರಿಸಲಿಕ್ಕಿಲ್ಲದ್ದರೆ, ರಾಷ್ಟ್ರೀಯಸಭೆಯ ಘಾತವಾಗುವದಾಗಿಯೂ ಮಹಾತ್ಮರ ಅಭಿಪ್ರಾಯವಾಯಿತು. ಈ ದುರಾಚಾರಿಗಳಿಂದ ರಾಷ್ಟ್ರೀಯ ಸಭೆಗೆ ಕ್ಷೇಮವಿಲ್ಲವಾಗಿ ಕಾರ್ಯಕಾರಿ ಮಂಡಳದ ಅಭಿಪ್ರಾಯವಾಯಿತು

MAINTAIN THE DEPTH OF YOUR RESOURCES

Experience tells us that deep rivers become shallow by accumulation of sand and periodical dredging is required to maintain their depth. Likewise the resources of many a family grow shallow by accumulation of debts. These debts however if cleared periodically the depth of the resources can be maintained. Consult us and we shall explain to you the various ways of clearing such debts, to lead a planned life and maintain the depth of the family resources.

THE CANARA INDUSTRIAL & BANKING SYNDICATE LTD.,

Estd :] (INCORPORATED IN BRITISH INDIA) [1925

Head Office: "MUKUND NIVAS", UDIPI, S. INDIA

MEMBER

RESERVE BANK OF INDIA, BANKERS' CLEARING HOUSE BOMBAY

Authorised Capital	Rs 10,00,000	Issued Capital	Rs 8,00,000
Subscribed Capital	Rs 7,74,500	Paid-up Capital	Rs 3,86,880
Reserves	Rs 2,16,700		

Banking Business of every description transacted

ಆದರೆ ಆತುರಿತು ಯಾವ ಪ್ರಕಾರಗಳಿಂದ ಉಪಾಯ ಮಾಡಬೇಕೆಂಬದು ಗೊತ್ತಾಗಲಿಲ್ಲ. ಸಂಸ್ಥಾನಿಕರ ವಿಷಯ ರಾಷ್ಟ್ರೀಯ ಸಭೆಯು ಯಾವ ಧೋರಣವನ್ನಿಡಬೇಕೆಂಬದರ ಕುರಿತು ದೀರ್ಘ ಚರ್ಚೆ ನಡೆಯಿತು. ಸಂಸ್ಥಾನದೊಳಗಿನ ಘಟನೆಗಳಿಂದ ಸಂಪೂರ್ಣವಾಗಿ

ವರು ತಮ್ಮ ಚಳವಳಿ ನಡಿಸತಕ್ಕದ್ದೆಂಬ ಕಾರ್ಯಕಾರಿ ಮಂಡಳದ ಸೂಚನೆ. ಈ ಠರಾವಿನ ತೀರ್ಮಾನದಿಂದ ಸಂಸ್ಥಾನಗಳೊಳಗಿನ ಪ್ರಮುಖರಿಗೆ ಒಳ್ಳೇ ಸಮಾಧಾನವಾಯಿತು. ರೂಪಾಯಿ-ನಾಣ್ಯದ ವರವನ್ನು ೧೬ ಪೆನ್ನಿನ ಬದಲಿಗೆ ೧೮ ಪೆನ್ನಿಗೆ ಏರಿಸಿ ಸರ

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಮಂಕಿ ಗ್ರಾಮದ ಸಣ್ಣಗುಂಡದಲ್ಲಿರುವ ಲಕ್ಷ್ಮೀ ಕೋಂ ನಾರಾಯಣ ನಾಯ್ಕ ಇವಳು ಇದರ ಮೂಲಕ ಯಾವತ್ತೂ ಜನರಿಗೆ ಜಾಹೀರಪಡಿಸುವದೇನಂದರೆ:—

ಕಾದ ನಾರಾಯಣ ಸೋಮಯ್ಯಾ ವರು ಮೃತಪಟ್ಟಿರುತ್ತಾರೆ. ನನ್ನ ಾದ (ನನ್ನ ಮಾವಯ್ಯನವರಾದ) ವಿಟ್ಟಯ್ಯಾ ನಾಯ್ಕ ಇವರು ಕೇ ಕಲವರ ದುರ್ಬೋಧನೆಗೆ ಒಳ ಬೆಸುವ ಇರಾದೆಯಿಂದ ಇದ್ದ ಸ್ಥಿರ- ಪರಾಧೀನ ಮಾಡುವ ದುರಾಲೋ ರಾಗಿ ತಿಳಿದುಬಂದಿದೆ. ನವಿಂದ; ಗುಮ್ಮಯ್ಯ ನಾಯ್ಕ ಕಾಮಕ್ಕೆ ಕೊಡತಕ್ಕ ರೂಪಾಯಿ ೫—೦—೦ ಪ್ಪಾ ಬಿನ್ ಫ್ರೆಂಡಯ್ಯ ನಾಯ್ಕ ವರಿಗೆ ತೋರಿಂಡಿ ಕೊಡುವ ರೂಪಾಯಿ ಈ ಪ್ರಕಾರ ರೂಪಾಯಿ ಒಂದು ನೂರು , ನಮ್ಮ ಖಾಸಗಿ ಬಾಬತು ಗಾಡಿ ತ್ತು ಎರಡು ಬೇರೆಯವರಿಗೆ ಕೊಟ್ಟು, ವರಿಂದ ಹವಾಲೆ ಕೊಟ್ಟು ಚುಕ್ತಾ ನ್ನು ೧೦ ನರಸಿಂಹ ರಾಮ ಮಹಾಲೆ ರಿಗೆ ಕೊಡತಕ್ಕ ಕೆಲವು ರೂಪಾಯಿ ನ್ನಾವರ ಕೋರ್ಟಿನ ಡಿಕ್ರಿಯಾಗಿರುತ್ತ ರತು ನಮಗೆ ಇನ್ನು ಲೇಖ ಅಥವಾ ಇರುವದಿಲ್ಲಾ. ಹಾಗೂ ಇನ್ನುಮುಂ ಬವ ಅವಶ್ಯಕತೆ ಇಲ್ಲಾ. ಹೀಗಿರುತ್ತಾ ಯ್ಯನವರು ಆಸ್ತಿ ನಗ್ಯೆರೆ ಪರಾಧೀನತೆ ಅಥವಾ ಸಾಲ ಮಾಡಿದ್ದಲ್ಲಿ, ಅಂಥ ಧೀನತೆಗಳು, ನನ್ನ ಜೀವನಾಂಶದ ಬರುವಂತಿಲ್ಲಾ ಎಂತಾ ಈ ಜಾಹೀ ಮೂಲಕ ಯಾವತ್ತೂ ಜನರಿಗೆ ತಿಳಿಸಿ ರೀಖು ೧೭—೧೨—೧೯೩೮.

ಎಡಗೈ ಹೆಬ್ಬೆಟ್ಟಿನ ಗುರ್ತ

ಲಕ್ಷ್ಮೀ ಕೋಂ ನಾರಾಯಣ ನಾಯ್ಕ, ಕೆ ವ್ಹೈಕೆ ಸಣ್ಣಗುಂಡ ಶಿವಳದು

ನಾ|| ಪುರಂದರೆಯವರೂ ಇತರ ಕೊಂಗ್ರೆಸ ಪ್ರಾಂತಗಳೊಳಗಿನ ಮಂತ್ರಿಗಳೂ ಬ ದೋಲಿಗೆಯೋಗುವವರಿದ್ದಾರೆ.

— ಮುಂಬಯಿ ಸರಕಾರದ ಜಮಾ-ಖರ್ಚು ಪತ್ರಿಕೆಯು ತಯಾರಾಗುತ್ತಿದೆ. ಮದ್ಯಪಾನೋಚ್ಚಾಟಣ ಪ್ರದೇಶವನ್ನು ವಿಸ್ತಾರಗೊಳಿಸಿ ಇಲಾಖೆಯೊಳಗಿಂದ ಮದ್ಯಪಾನವನ್ನು ಪ್ರತಿಬಂಧಿಸಲಿಕ್ಕೆ ಈ ವರುಷ ಹೆಚ್ಚಿನ ಪ್ರಯತ್ನವಾಗುವದಾಗಿ ಅಬಕಾರಿ ಇಲಾಖೆಯ ಮಂತ್ರಿಗಳಾದ ನಾ|| ಡಾ|| ಗಿಲ್ಡರರವರು ಉದ್ಗರಿಸಿದ್ದಾರೆ. ಋಣವಿಮೋಚನ, ಗ್ರಾಮೋದ್ಧಾರ, ಮದ್ಯಪಾನೋಚ್ಚಾಟಣ ಕಾರ್ಯಗಳಿಗಾಗಿ ೧ ಕೋಟಿ ರೂ. ಖರ್ಚು ಮಾಡುವ ಆಲೋಚನೆ ನಡೆದಿದೆ.

— ತ್ರಿಪುರಿಯಲ್ಲಿ ಕೊಂಗ್ರೆಸ ಅಧಿವೇಶನದ ತಯಾರಿ ಭರದಿಂದ ನಡೆದಿದೆ. ಬಹುತರವಾಗಿ ಇದೇ ಜನವರಿ ೧೫ರೊಳಗೆ ಕಟ್ಟೋಣದ ಕೆಲಸ ಮುಗಿಯುವಂತಿದೆ. ಕೊಂಗ್ರೆಸ ಅಧ್ಯಕ್ಷರ ಮೆರವಣಿಗೆಯು ಸಂಭ್ರಮ ವಿಶೇಷ. ಮುಂಭಾಗದಲ್ಲಿ ಮದ್ದಾನೆಯ ಮೇಲೆ ರಾಷ್ಟ್ರಧ್ವಜ, ಹಿಂಬಾಗದಲ್ಲಿ ಸುಶೋಭಿತವಾಗಿ ಸಿಂಗರಿಸಿದ ೬ ಆನೆಗಳು, ಒಂದು ಆನೆಯ ಮೇಲೆ ಅಂಬಾರಿ ಹಾಕಿ ರಾಷ್ಟ್ರಪತಿಗಳ ಆಸನವೇರ್ಪಡಿಸಲಾಗುವದು. ರಾಷ್ಟ್ರೀಯ ಸಭೆಗೆ ಅರ್ಧ ಲಕ್ಷ ರೂಪಾಯಿ ಖರ್ಚು ಬಂದೀತು. ಭೋಜನದ ವಿಂಗಡನೆಯನ್ನು ಸ್ವಾಗತ ಸಮಿತಿಯವರು ಮಾಡುವದಿಲ್ಲ. ಭೋಜನಾಲಯಗಳೇ ಈ ವ್ಯವಸ್ಥೆಯನ್ನು ನಡಿಸುವವು. ಬೇಕಾದವರು ಬೇಕಾದ ಭೋಜನಾಲಯಗಳಲ್ಲಿ ಹೋಗಿ ಸುಗ್ರಾಸ ಭೋಜನ ಮಾಡಬಹುದು. ಅದಷ್ಟರಮಟ್ಟಿಗ ಖರ್ಚು ಕಡಿಮೆ ಮಾಡಿ ಲೋಕಾನುಕೂಲತೆಗಳನ್ನು ಪೂರೈಸುವದೇ ಸ್ವಾಗತ ಸಮಿತಿಯ ಧ್ಯೇಯ.

— ರಾಜಕೋಟ ಸಂಸ್ಥಾನದ ರಾಕೂರರಿಗ ಹಿಂದು ಸ್ಥಾನ ಸರಕಾರದವರು ಪದಚ್ಯುತ ಮಾಡುವ ಆಲೋಚನ ನಡಿಸಿದ್ದಾರೆಂದು ಸುದ್ದಿ ಹರಡಿದೆ. ಹೀಗೆ ಪದಚ್ಯುತಿ ಮಾಡಲು ತಾವು ಒಪ್ಪಲಾರೆವೆಂದು ಪ್ರಜಾಮಂಡಲದವರು ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ.

— ಒರಿಸಾ ಪ್ರಾಂತದ ತಲಚೇರ ಸಂಸ್ಥಾನದಲ್ಲೂ ರಾಜಪ್ರಜೆಗಳೊಳಗೆ ತಿಕ್ಕಾಟಪ್ರಾರಂಭವಾಗಿದೆ. ಸಂಸ್ಥಾನ ಪ್ರಜಾಮಂಡಳದ ನಾಂಟ್ಯ ಮುಖಂಡರಿಗೆ ಸರೆಹಿಡಿದಿದ್ದಾರೆ.

ಬ್ರಿಟಿಶ-ಫ್ರೆಂಚರೊಳಗೆ ಮನಸ್ತಾಪ!

(೭ನೇ ಪಾನಿನಿಂದ ಮುಂದರಿಸಿದ್ದು)

ಕಾರಣ ಉಗ್ರವಾಗುತ್ತದಿಗಿಯೂ, ಜರ್ಮನ್ ಪತ್ರಿಕೆಗಳೂ ಜರ್ಮನ್ ಪ್ರಮುಖರೂ ಬ್ರಿಟಿಶರಿಗೆ ನಿಷೇಧಿಸುತ್ತಾರಾಗಿಯೂ ಜರ್ಮನಿಗೆ ಸಂಶೈಸುವದು ದುರಾಪಾಸ್ತವೆಂದೂ ತಮ್ಮ ಸ್ವಂತ ಮತ್ತು ಸ್ವಾತಂತ್ರ್ಯ-ಭದ್ರತೆಗಳ ರಕ್ಷಣೆಗಾಗಿ ಮುಂಜಾಗ್ರತೆ ಪಡೆಯಬೇಕೆಂದೂ ಕ್ರೆನಬರ್ನ ದೊರೆಗಳು ಸೂಚಿಸುತ್ತಾರೆ. ಪ್ರತೀಕಾರದ ತಯಾರಿಯನ್ನೇ ಬ್ರಿಟಿಶ ಸರಕಾರವು ನಡಿಸಬೇಕೆಂದು ಕ್ರೆನ್‌ಬರ್ನ ದೊರೆಗಳ ಹೇಳಿಕೆ. ಇದರ ಮೇಲಿಂದ ಗಾಳಿ ಹೇಗೆ ಬೀಸುತ್ತದೆಂದು ತಿಳಿಯುವಂತಿದೆ. ಬ್ರಿಟಿಶ-ಜರ್ಮನ್‌ರ ವೈಷಮ್ಯ, ಫ್ರೆಂಚ-ಇಟಾಲಿಯರ ವೈಷಮ್ಯ, ಫ್ರೆಂಚ-ಜರ್ಮನ್‌ರೊಳಗಿನ ಪ್ರೀತಿ, ಬ್ರಿಟಿಶ-ಇಟಾಲಿಯರೊಳಗಿನ ಸ್ನೇಹಭಾವ, ಹಿಟ್ಲರ ಮುಸೋಲಿನಿಯವರೊಳಗಿನ ಗೆಳೆತನ, ಹೀಗೆಲ್ಲ ಪರಸ್ಪರ ವಿರುದ್ಧವಾದ, ಪರಸ್ಪರ ವಿಸಂಗತವಾದ ಸೂತ್ರಗಳು ಓಡಾಡುತ್ತಿರುವಾಗ ಬ್ರಿಟಿಶ-ಫ್ರೆಂಚರೊಳಗೆ ಮನಸ್ತಾಪವುಂಟಾಗುವದು ಸುಲಕ್ಷಣವಲ್ಲ. ಯುರೋಪಖಂಡದ ಶಾಂತತೆಯ ಪ್ರಯತ್ನಗಳೂ ಸಾರ್ಥಕತೆಯ ನಿದರ್ಶಕವಲ್ಲ! ಇದೊಂದು ಯುರೋಪಖಂಡದ ರಾಜಕಾರಣದಲ್ಲಿ ಉಂಟಾದ ವಿಷಮ ಸ್ಥಿತಿ! ಅಪಾಯ ಸ್ಥಳ!!

ಸಮರ್ಥ ಟೂರಿಂಗ ಟೊಕೀಜ,

ಇವರ

ಕುಮಟಾ ಮುಕ್ಕಾಮಿನಲ್ಲಿ—

ತಾ. 21--12--38 ಬುಧವಾರದಿಂದ

ದಾಮಾಜಿಪಂತ

ಎಂಬ ಭಕ್ತಿರಸಪ್ರಧಾನವಾದ

ಮರಾಠಿ ಚಿತ್ರಪಟವು ತೋರಿಸಲ್ಪಡುವದು.

ನೋಡಲು ಮರೆಯಬೇಡಿರಿ!

ಮೆನೇಜರ.

ಜ್ವರ ಮುಂತಾದ ಜ್ವರಗಳ ಮೇಲೆ,

...ರ್ೀರ

...ರ್ ಉಪಯೋಗಿಸಿರಿ!

ಸೇವಿಸಿ, ಜ್ವರದಂಥ ಬೇನೆಯನ್ನು ಉದ್ಧ ...ಬೇಡಿರಿ. ಬೆಲೆ ಆಣೆ ೧೨

...ಡೋಬಾಮ್

...ನ್ನು, ಸಂಧಿವಾತ, ವಿಷಾರಿ ನೋಣಗಳ ...ವೆ ವಿಕಾರಗಳು ತುಸು ಮಾಲಿಷದಿಂದ ...ಾಗುತ್ತವೆ. ಬೇರೆ ಬಾಮುಗಳಿಂದಾಗುವಂತೆ ...ಳುವದಿಲ್ಲ. ಬೆಲೆ ೩ ೮ ...ಸಿಗುತ್ತವೆ, ಸಿಗದಿದ್ದರೆ ನಮಗೆ ಬರೆಯಿರಿ

ಕರ್ನಾಟಕ ಬ್ರದರ್ಸ,

ಗಿರಗಾಂವ, ಮುಂಬಯಿ, ನಂ ೪

ಪ್ರಾಯ ವಿಸಿ. ಅಹಿಂಸೆಯನ್ನು ಪಾಲಿಸಿ ಸಂಸ್ಥಾನದ

ಜನರಲ್ ಸೆಕ್ರೆಟರಿ ಮತ್ತು ಟ್ರೆಝರರ

ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ.

ಸಾಂಗೋಪಾಂಗ ಚರ್ಚೆ ನಡೆಸಿದರು. ದಂಡದ ರಕಮುಗಳನ್ನು ಕೊಡಿಸಲು ಕಾರ್ಯಕಾರಿ ಮಂಡಳದ ಒಪ್ಪಿಗೆಯಾಗಲಿಲ್ಲ. ಹೊಲಗಳನ್ನು ಹಿಂತಿರುಗಿ ಕೊಡಿಸಲು ಮಂಡಳದ ಒಪ್ಪಿಗೆಯಾಯಿತು. ತ್ರಿಪುರಿಯಲ್ಲಿ

ಕೊಂಗ್ರೆಸ ಕಾರ್ಯಕಾರಿ ಮಂಡಳ

ವರ್ಧೆಯಲ್ಲಿ ರವಿವಾರ ತಾ ೧೧ನೇಗೆ ಪ್ರಾ ಯಿತು. ಈ ಸಭೆಗೆ ಆಂತು ೧೫ ಸಭಾಸದ ಜನರು ಹಾಜರಿದ್ದರು. ಮೌ| ಅಬುಲ್ ಆಝಾದರವರು ಜ್ವರ ಬರುತ್ತಿದ್ದರೂ ರ್ಯದಲ್ಲಿ ಸೇರಿದ್ದರು. ಬಾಬುರಾಜೇಂದ್ರ ಶೇಟ ಜಮನಾಲಾಲ ಬಜಾಜರವರಿಗೆ ಅಸ ಮೂಲಕ ಬರಕೂಡಲಿಲ್ಲ ಗಡಿನಾಡಿನ ಗಾ ಕಾರ್ಯಬಾಹುಳ್ಯದ ಮೂಲಕ ಬರಲಿಲ್ಲ ಆ ತಾಸುಗಳ ತನಕ ಸಭಾಸದರೊಳಗೆ ಬೇರೆ ಬೇ ಯಗಳ ಬಗ್ಗೆ ವಿಚಾರವಿನಿಮಯವಾಯಿತು ಜವಾಹರಲಾಲ ನೆಹರೂರವರಿಂದ ಯುರೋ ದ ಅನುಭವಗಳನ್ನು ಸಭಾಸದರು ಕೇಳಕೊ ಪಂಡಿತ ಜವಾಹರಲಾಲರು ಸ್ವದೇಶ ಪರಿಸ್ಥಿ ಸತಕಾರಿಗಳ ಕಡೆಯಿಂದ ತಿಳಕೊಂಡರು. ಆ ದ ಶ್ರೀ|| ಸುಭಾಷಚಂದ್ರ ಬೋಸರವರು ಕೇ ಯಾದ ಬಳಿಕ ನಡೆದ ಘಟನೆಗಳನ್ನು ಸಮ ಸಿದರು. ಆಮೇಲೆ ಘಿನಕಾನಲು, ಹೈದರಾಬಾ ವಿಶಾರ್ಯವೇಲಾದ ಸಂಸ್ಥಾನಗಳಿಂದ ಒಂದ ಕರಿಸಿಕೊಂಡು ಅಲ್ಲಿಯ ಪರಿಸ್ಥಿತಿಯನ್ನು ಕಾರಿ ಮಂಡಳವು ಕೇಳಿಕೊಂಡಿತು ಆ ಮೇ ಪತ್ರಿಕೆಗಳು ಮನ್ನಿಸಲ್ಪಟ್ಟವು ಕಾರ್ಯದಲಿ ಆಚಾರ್ಯ ಕೃಪಾಲಾನಿಯವರು ಸಭೆಗಾ ಗಿದ ಬಳಿಕ ಶೇಗಾಂವಿಗೆ ಹೋಗಿ ಮಹಾತ್ ಗಡಿನಾಡಿನ ಪರಿಸ್ಥಿತಿಯನ್ನು ಚರ್ಚಿಸಿದರು ಡಿನಲ್ಲಿ ಹಿಂದುಸ್ಥಾನ ಸರಕಾರವು ಪಾಳೆಯಗ ನಿರ್ಬಂಧಿಸುವದಕ್ಕಾಗಿ ಕೋಟ್ಯಾವಧಿ ರೂಪ ಜಾಳು ಮಾಡುತ್ತಿದೆ, ನೂರಾರು ಮಂದಿಗ ತಿ ಕೊಡುತ್ತಿದೆ ಇದ್ದಾಗ್ಯೂ ನೆರೆಹೊರೆಯಲ್ಲಿ ರ ಕಷ್ಟ ತಪ್ಪುವದಿಲ್ಲ, ಆದರಿಂದ ಕೊಂಗ್ರೆಸ ಕಾರಿ ಮಂಡಳವು ದಿಲ್ಲಿಯ ಬಿ| ಆಸಫ್ ಅಲಿ ಅಲ್ಲಿಯ ಪರಿಸ್ಥಿತಿಯನ್ನು ಅಭ್ಯಾಸ ಮಾ ಯನ್ನೊಪ್ಪಿಸುವದಕ್ಕಾಗಿ ನೇಮಿಸಿತ್ತು ಯನ್ನು ಮಹಾತ್ಮರ ಕಡೆಗೆ ಒಯ್ದು ಕೃಪ

MAINTAIN

Experience tells us th
is required to maintain th
of debts These debts how
Consult us and we shall
life and maintain the dep

THE CANARA

Estd.:]

Head Off

RESERVE BA

Authorised Capital
Subscribed Capital

Banking Business of every description transacted

ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ.

(೫ನೇ ಪಾನಿನಿಂದ ಮುಂದರಿಸಿದ್ದು)

ಗಿಯೂ ಅದರಿಂದ ವಿದೇಶೀಯರಿಗೆ ತಮ್ಮ ಸರಕುಗಳನ್ನು ನಮ್ಮ ದೇಶಕ್ಕೆ ರಫ್ತು ಮಾಡಲು ಒಪ್ಪೇ ಅನುಕೂಲವಾಗಿರುವದಾಗಿಯೂ ಕಾರ್ಯಕಾರಿ ಮಂಡಳದ ಅಭಿಪ್ರಾಯವಾಗಿದೆ, ಮತ್ತು ಪಿಸಿಮಯದ ದರವನ್ನು ವಾಂಛನಂತೆ ೧೬ ಪೆನ್ಸಿಗೆ ಇಳಿಸಬೇಕಾಗಿ ಸರ್ಕಾರಿ ದಿವಸಗಳಿಗೆ ಸೂಚಿಸಲಾಯಿತು. ಈಗಿನ ಧೋರಣವೇ ಮುಂದರಿದಲ್ಲಿ ಅನರ್ಥವಾಗುವದಾಗಿಯೂ ಕೊಂಗ್ರೆಸ ಕಮಿಟಿಯ ಅಭಿಪ್ರಾಯವಾಗಿದೆ. ಕಾರ್ಯಕಾರಿ ಮಂಡಳದ ಕೆಲಸ ಮುಗಿದ ಬಳಿಕ ಮೌ| ಅಬುಲ ಕಲಮ ಆಝಾದರವರೂ ಸರದಾರ ವಲ್ಲಭಭಾಯಿ ಪಟೇಲರವರೂ ಪ್ರಾಂತಿಕ ಕೊಂಗ್ರೆಸ ಪ್ರಧಾನ ಮಂಡಳಗಳ ಕುರಿತು ವಿಷಯಗಳನ್ನು ಬೇರೆ ಬೇರೆ ಜನರಿಂದ ಕೇಳಿಕೊಂಡರು. ಗುರುವಾರ ಕಾರ್ಯಕಾರಿ ಮಂಡಳದ ಸಭೆಯಾಗಿ ಕೊಂಗ್ರೆಸ ಸಭಾಸದರ ಪಟ್ಟಿಗಳನ್ನು ಶ ಮಾಡಬೇಕಾಗಿಯೂ ಕಾಲ್ಪನಿಕ ಸಭಾಸದರನ್ನು ರದ್ದುಪಡಿಸಬೇಕಾಗಿಯೂ ನಿರ್ಣಯವಾಗಿದೆ ಕೊಂಗ್ರೆಸ ಕಮಿಟಿಗಳಲ್ಲಿ ಅಧಿಕಾರ ಪಡೆಯಲಿಚ್ಛಿಸುವವರು ೫೦೦೦ ಗಜ ನೂಲು ನೂಲಬೇಕಾಗಿಯೂ ತೀರ್ಮಾನವಾಗಿದೆ. ಪಾಲಿಸ್ತಾನದಲ್ಲಿ ಅರಬರ ಮೇಲೆ ನಡೆದ ಅತ್ಯಾಚಾರಗಳನ್ನು ನಿಷೇಧಿಸಲಾಯಿತು ಜರ್ಮನ್‌ರು ಯಹೂದಿಯರ ಮೇಲೆ ನಡಿಸುವ ಅತ್ಯಾಚಾರಗಳು ನಿಷೇಧಿಸಲ್ಪಟ್ಟವು. ಮುಸ್ಲಿಮ್ ಲೀಗು ಮತ್ತು ಹಿಂದು ಮಹಾಸಭೆಗಳು ಜಾತಿನಿಷ್ಠ ಸಂಸ್ಥೆಗಳಾದ್ದರಿಂದ ಅವುಗಳಲ್ಲಿ ಸಭಾಸದರಿದ್ದವರು ರಾಷ್ಟ್ರೀಯ ಸಭಾಸದರಾಗಿರಕೂಡದೆಂದು ವಿಧಿಸಲಾಯಿತು. ಶುಕ್ರವಾರ ಹಿಂದು–ಮುಸಲ್ಮಾನ ಐಕ್ಯಮತ್ಯದ ಕುರಿತು ವಿಚಾರ ವಿನಿಮಯವಾಯಿತು. ಮುಸ್ಲಿಮ್ ಲೀಗಿನೊಡನೆ ಹಿಂದು–ಮುಸಲ್ಮಾನ ಐಕ್ಯಮತ್ಯದ ಕುರಿತು ರಾಷ್ಟ್ರೀಯ ಸಭೆಯು ಇನ್ನು ಮುಂದೆ ಪ್ರಸ್ತಾಪವನ್ನು ತೆಗೆಯಬಾರದಾಗಿಯೂ ಮುಸಲ್ಮಾನ ಸಮಾಜದೊಡನೆ ಪ್ರತ್ಯಕ್ಷ ಸಂಬಂಧ ಬೆಳಸಿ, ರಾಷ್ಟ್ರೀಯ ಸಭೆಯು ಸಕಲ ಸಮಾಜಗಳ ಪ್ರತಿನಿಧಿ ಸಂಸ್ಥೆಯೆಂದು ಮನಗಾಣಿಸಿ ಮುಸಲ್ಮಾನರನ್ನೂ ಇತರ ಅಲ್ಪಸಂಖ್ಯಾಕರನ್ನೂ ಹೆಚ್ಚಿಚ್ಚಾಗಿ ಸೇರಿಸಿಕೊಂಡು ರಾಷ್ಟ್ರಸ್ವಾತಂತ್ರ್ಯದ ಹೋರಾಟವನ್ನು ನಡೆಸತಕ್ಕದ್ದೆಂದು ತೀರ್ಮಾನವಾಯಿತು. ಬಂಗಾಲದೊಳಗೆ ಈಗ ಮುಸ್ಲಿಮ್ ಲೀಗಿನ ಪ್ರಧಾನ ಮಂಡಳವಿದೆ. ಅಲ್ಲಿ ಕೊಂಗ್ರೆಸ ಮಿಶ್ರ ಪ್ರಧಾನ ಮಂಡಳವನ್ನು ಸ್ಥಾಪಿಸುವ ಕುರಿತು ವಿಚಾರವಿನಿಮಯ ನಡೆಯಿತು. ಕಲಕತ್ತೆಯಿಂದ ಅರ್ಥಸಚಿವರಾದ ನಾ|| ನಲಿನಿರಂಜನ ಸರ್ಕಾರರವರೂ ಶೇಟ ಘನಶ್ಯಾಮದಾಸ ಬಿರ್ಲಾರವರೂ ವರ್ಧೆಗೆ ಬಂದು ಕೊಂಗ್ರೆಸ ಮಿಶ್ರ ಪ್ರಧಾನಮಂಡಳ ಸ್ಥಾಪಿಸುವ ಶಕ್ಯಾಶಕ್ಯತೆಯನ್ನು ಚರ್ಚಿಸಿದರಂತೆ.

ಹೀಗಲ್ಲ ಕೆಲಸ ಪೂರೈಸಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆಯು ವಿಸರ್ಜನೆಯಾಯಿತು.

— ಪುನಃ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಜನವರಿ ತಿಂಗಳಲ್ಲಿ ಸೇರುವದು ಮಹಾತ್ಮರ ಅನುಕೂಲತೆಯಂತೆ ಬಾರ್ಡೋಲಿಯಲ್ಲಿ ಸೇರಬಹುದಾಗಿ ಹೇಳುತ್ತಾರೆ

— ಹಿಂದುಸ್ಥಾನ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಅಪೇಕ್ಷೆಯಂತೆ ರೂಪಾಯಿಯ ಬೆಲೆಯನ್ನು ಇಳಿಸುವದಿಲ್ಲವಾಗಿ ಪ್ರಕಟಿಸಿದೆ. ಇಷ್ಟೇ ಅಲ್ಲ, ಅದನ್ನು ಕಾಪಾಡುವದಕ್ಕಾಗಿ ಬೇಕಾದ ತ್ಯಾಗ ಮಾಡಲು ಹಿಂದುಸ್ಥಾನ ಸರಕಾರವು ಸಿದ್ಧವಿರುವದೆಂದೂ ಪ್ರಕಟವಾಗಿದೆ. ರೂಪಾಯಿ ನಾಣ್ಯದ ಬೆಲೆಯನ್ನು ಇಳಿಸಿದರೆ ಲಾಭವಾಗುವದು ಸಾವಕಾರರಿಗಲ್ಲದೆ, ಬಹುಜನ ಸಮಾಜಕ್ಕಲ್ಲವಾಗಿಯೂ ಹಿಂದುಸ್ಥಾನ ಸರಕಾರದ ಅಭಿಪ್ರಾಯ. ಕೊಂಗ್ರೆಸ ಕಾರ್ಯಕಾರಿ ಮಂಡಳವು ತನ್ನ ನಿರ್ಣಯವನ್ನು ಹೇಗೆ ಅನುಷ್ಠಾನದಲ್ಲಿ ತರುತ್ತದೆ ನೋಡಬೇಕು.

— ಸತ್ಯಾಗ್ರಹ ಕಾಲದಲ್ಲಿ ಜಪ್ತಾದ ಹೊಲಗಳು ಈ ತಿಂಗಳಲ್ಲಿ ಹಿಂತಿರುಗಿ ಸಿಗುವವು. ಬಾರ್ಡೋಲಿಯಲ್ಲಿ ಈ ಬಗ್ಗೆ ಸಮಾರಂಭವಾಗುವದಿದೆ. ಮಹಾತ್ಮರೂ ಸರದಾರ ವಲ್ಲಭಭಾಯಿ ಪಟೇಲರವರೂ ಸ್ವತಃ ನಾಗರಿಲು ಕೋಡು ಕಳವು ಹೊಲಗಳನ್ನು ಹೂಡುವರು ಈ ಸಮಾರಂಭ ನೋಡಲು ಮುಂಬಯಿಯ.

ಆದರೆ ಅದಕ್ಕಾಗಿ ಯಾವ ಪ್ರಕಾರಗಳಿಂದ ಉಪಾಯ ಮಾಡಬೇಕೆಂದು ಗೊತ್ತಾಗಲಿಲ್ಲ. ಸಂಸ್ಥಾನಿಕರ ವಿಷಯ ರಾಷ್ಟ್ರೀಯ ಸಭೆಯು ಯಾವ ಧೋರಣವನ್ನಿಡಬೇಕೆಂಬದರ ಕುರಿತು ದೀರ್ಘ ಚರ್ಚೆ ನಡೆಯಿತು. ಸಂಸ್ಥಾನದೊಳಗಿನ ಘಟನೆಗಳಿಂದ ಸಂಪೂರ್ಣವಾಗಿ ಅಲಿಪ್ತವಾಗಿರುವ ಧೋರಣ ಸಮಯೋಚಿತವಲ್ಲೆಂದು ಅಭಿಪ್ರಾಯವಾಯಿತು. ಆದರೆ, ಸಂಸ್ಥಾನ ಪ್ರಜೆಗಳಿಗೆ ನೆರವಾಗುವದಾದರೆ, ಹೇಗೆ ನೆರವಾಗಬೇಕೆಂಬದೇ ವಿಚಾರ ಪ್ರಶ್ನೆಯಾಗಿತ್ತು. ಸಂಸ್ಥಾನಿಕರ ಬೆಂಬಲಕ್ಕೆ ಸಾರ್ವಭೌಮ ಸರಕಾರವಿದ್ದದರಿಂದ ಸಂಸ್ಥಾನೇತರ ಹಿಂದುಸ್ಥಾನದಲ್ಲಿ ಸಂಸ್ಥಾನ ಪ್ರಶ್ನೆಯನ್ನೆತ್ತಿ ಪ್ರಾಂ|ಕೊಂಗ್ರೆಸ ಪ್ರಧಾನ ಮಂಡಳಗಳ ಕಡೆಯಿಂದ ರಾಜನಾಮೆ ಕೊಡಿಸಿ, ಸಾರ್ವಭೌಮ ಸರಕಾರಕ್ಕೆ ಅಡ್ಡಗಟ್ಟಬೇಕೆಂಬದೊಂದು ರಾಷ್ಟ್ರೀಯ ಸಭೆಯ ಧೋರಣ. ಸಂಸ್ಥಾನಿಕರಿಗೂ ಸಂಸ್ಥಾನ-ಪ್ರಜೆಗಳಿಗೂ ಪ್ರಜಾಹಕ್ಕುಗಳಿಗಾಗಿ ಸಂಗ್ರಾಮ ನಡೆದಾಗ, ಸಾರ್ವಭೌಮ ಸರಕಾರವು ಸಂಸ್ಥಾನಿಕರಿಗೆ ಬೆಂಬಲ ಕೊಡದಂತೆ ಏರ್ಪಾಟು ಮಾಡಬೇಕು. ಪ್ರತ್ಯಕ್ಷ ಸ್ವಯಂ ಸೇವಕರನ್ನು ಕಳಿಸಿ ಸಂಸ್ಥಾನಗಳೊಳಗೆ ಸತ್ಯಾಗ್ರಹ ನಡಿಸಲು ಕೆಲವು ವ್ಯವಹಾರಿಕ ಪ್ರತಿಬಂಧಗಳಿವೆ. ಸಂಸ್ಥಾನದೊಳಗೆ ಹೋಗುವ ಸತ್ಯಾಗ್ರಹಿಗಳಿಗೆ ಸಂಸ್ಥಾನಿಕರು ಸೀಮೆಯ ಮೇಲೆ ಅಡ್ಡಗಟ್ಟಿ ಸೀಮೋಲ್ಲಂಘನ ಮಾಡಗೊಡುವದಿಲ್ಲ. ಆದರಿಂದ ಯಾವ ಪ್ರಕಾರ ಸಂಸ್ಥಾನ-ಪ್ರಜೆಗಳಿಗೆ ನೆರವಾಗಬೇಕೆಂಬದರ ಕುರಿತು ಮಹಾತ್ಮರೂ ಕಾರ್ಯಕಾರಿ ಮಂಡಳದವರೂ ಆಲೋಚನೆ ಮಾಡಿದರು. ಹಿಂದು-ಮುಸಲ್ಮಾನ ಸಮಾಜದೊಳಗೆ ಐಕ್ಯಮತ್ಯ ಮಾಡುವ ದಿಶೆಯಿಂದ ಕೈಕೊಳ್ಳಬೇಕಾದ ಉಪಾಯಗಳ ಚರ್ಚೆ ನಡೆಯಿತು. ಮುಸ್ಲಿಮ್ ಲೀಗು ಜಾತಿ-ನಿಷ್ಠ ಸಂಸ್ಥೆಯಾದ್ದರಿಂದ ಅದನ್ನು ಅಲಕ್ಷಿಸಿ ಈ ಕಾರ್ಯ ನಡಿಸಬೇಕಾಗಿಯೂ ಗೊತ್ತಾಯಿತು. ಮಧ್ಯಾನ್ಹ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಮಹಾತ್ಮರು ಚರ್ಚೆ ಮಾಡುತ್ತಿರುವಾಗ ಬಹಳ ದಣಿದರು; ಅದರಿಂದ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಸಂಕಲ್ಪದಂತೆ ಬಹುಕಾಲ ಅವರಿಂದ ಉಳಿಯಲಾಗಲಿಲ್ಲ. ಕೊಂಗ್ರೆಸ ಪ್ರಧಾನ ಮಂಡಳಗಳ ಮೇಲೆ ಬಂದ ಆರೋಪಗಳ ಕುರಿತು ಚರ್ಚೆ ನಡೆಯಿತು. ಗಡಿನಾಡಿನಲ್ಲಿ ಪ್ರಾಂ|ಕೊಂ| ಕಮಿಟಿಗೂ ಕೊಂಗ್ರೆಸ ಪ್ರಧಾನ ಮಂಡಳಕ್ಕೂ ಉಂಟಾದ ವೈಮನಸ್ಯಗಳನ್ನು ವಿಚಾರಿಸಿ ತತ್ಕಾಲದಲ್ಲಿ ಐಕ್ಯಮತ್ಯವನ್ನುಂಟು ಮಾಡಲು ನೆಹರೂ ಅಬುಲ ಕಲಮು ಆಝಾದರವರು ಗಡಿನಾಡಿಗೆ ಹೋಗಬೇಕಾಗಿ ತೀರ್ಮಾನವಾಯಿತು. ಬುಧವಾರ ಪುನಃ ಕಾರ್ಯಕಾರಿ ಮಂಡಳದ ಸಭೆಯಾಗಿ ಸಂಸ್ಥಾನದೊಳಗಿನ ರಾಷ್ಟ್ರೀಯ ಸಭೆಯ ಧೋರಣದ ಕುರಿತು ತೀರ್ಮಾನ ಕೈಕೊಳ್ಳಲ್ಪಟ್ಟಿತು. ಸಂಸ್ಥಾನ-ಪ್ರಜೆಗಳಲ್ಲಿ ಉಂಟಾದ ಜಾಗೃತಿಯನ್ನು ಕಮಿಟಿಯು ಅಭಿನಂದಿಸುತ್ತದೆ, ಮತ್ತು ಅವರ ವಿಚಾರಗಳು ಇಷ್ಟವೆಂತ ಹರಸುತ್ತದೆ; ಸಂಸ್ಥಾನಿಕರು ನಡಿಸಿದ ಅಮಾನುಷ ಅತ್ಯಾಚಾರಗಳನ್ನು ನಿಷೇಧಿಸುತ್ತದೆ, ಸಂಸ್ಥಾನಿಕರು ಬ್ರಿಟಿಶ ಸರಕಾರದ ಆಶ್ರಯ ಪಡೆದು ಪ್ರಜೆಗಳಿಗೆ ಕಾಡುವದು ವಿಹಿತವಲ್ಲವಾಗಿ ಎಚ್ಚರಿಕೆ ಕೊಡುತ್ತದೆ. ಸಂಸ್ಥಾನ-ಪ್ರದೇಶದಲ್ಲಿ ಸತ್ಯಾಗ್ರಹ ಮಾಡಲು ಸಂಸ್ಥಾನೇತರರು ಸಂಸ್ಥಾನಗಳೊಳಗೆ ಹೋಗುವದರಿಂದ ಲಾಭವಿಲ್ಲವಾಗಿ ಕಾರ್ಯಕಾರಿ ಮಂಡಳದ ಅಭಿಪ್ರಾಯವಿದೆ. ಅಹಿಂಸೆಯನ್ನು ಪಾಲಿಸಿ ಸಂಸ್ಥಾನದವರು ತಮ್ಮ ಚಳವಳಿ ನಡಿಸತಕ್ಕದ್ದಾಗಿಯೂ ಕಾರ್ಯಕಾರಿ ಮಂಡಳದ ಸೂಚನೆ. ಈ ರೀತಿಯ ತೀರ್ಮಾನದಿಂದ ಸಂಸ್ಥಾನಗಳೊಳಗಿನ ಪ್ರಮುಖರಿಗೆ ಒಳ್ಳೇ ಸಮಾಧಾನವಾಯಿತು. ರೂಪಾಯಿ-ನಾಣ್ಯದ ದರವನ್ನು ೧೬ ಪೆನ್ನಿನ ಬದಲಿಗೆ ೧೮ ಪೆನ್ನಿಗೆ ಏರಿಸಿ ಸರಕಾರವು ಹಿಂದುಸ್ಥಾನದ ಒಕ್ಕಲಿಗರಿಗೆ ಮತ್ತು ಜನರಿಗೆ ಕಳೆದ ೭ ವರ್ಷಗಳಿಂದ ನಷ್ಟಪಡಿಸಿರುವದಾ

(ಚಿಕ್ಕ ಪುರವಣಿ ನೋಡಿರಿ)

ಪ್ರಕಟಣೆ.

ಉತ್ತರ ಕನ್ನಡ ಜಿಲ್ಹಾ ಬೇಲೀಫರ ಸಂಘ, ಕುಮಟಾ.

ಪುಣೆಯಲ್ಲಿ ಸೇರಲಿಕ್ಕಿದ್ದ ಮುಂಬಯಿ ಇಲಾಖಾ ಬೇಲೀಫರ ಸ್ವಾಗತ ಸಮಿತಿಯಿಂದ ಬರೆದುಬಂದ ಮೇರೆಗೆ, ಈ ಜಿಲ್ಹೆಯೊಳಗಿನ ಕಾರವಾರ, ಕುಮಟಾ, ಹೊನ್ನಾವರ, ಶಿರ್ಶಿ ಈ ನಾಲ್ಕು ಕೋರ್ಟುಗಳಲ್ಲಿ ಕೆಲಸ ಮಾಡುವ ಬೇಲೀಫರು ಕುಮಟೆಯಲ್ಲಿ ರಾ|| ನರಸಿಂಹ ಗೋವಿಂದ ಶಾನಭಾಗ, ಬಿ.ಎ., ಎಲ್.ಎಲ್.ಬಿ., ವಕೀಲ, ಕುಮಟಾ ಇವರ ಅಧ್ಯಕ್ಷತೆಯಲ್ಲಿ ತಾ. ೧೧—೧೨—೧೯೩೮ನೇಗೆ ಸಭೆಸೇರಿ ಬೇಲೀಫರ ದೂರುಗಳನ್ನು ಪರಿಹರಿಸಿಕೊಳ್ಳುವದಕ್ಕಾಗಿಯೂ ನ್ಯಾಯ್ಯ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವದಕ್ಕಾಗಿಯೂ ಕಾಯಿದೆಸಮ್ಮತವಾಗಿ ಪ್ರಯತ್ನ ಮಾಡುವ ದೆಸೆಯಿಂದ, ಮೇಲ್ಕಾಣಿಸಿದಂತೆ, ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸಂಘದ ಕಾರ್ಯಕಾರಿ ಮಂಡಳ ಈ ಕೆಳಗಿನಂತೆ ಇರುತ್ತದೆ:—

೧. ನರಸಿಂಹ ಗೋವಿಂದ ಶಾನಭಾಗ, ಬಿ.ಎ., ಎಲ್.ಎಲ್.ಬಿ., ವಕೀಲ, ಕುಮಟಾ (ಅಧ್ಯಕ್ಷ). ೨ ಮಂಜನಾಥ ನಾಗಪ್ಪ ನಾಯ್ಕ, ಹೊನ್ನಾವರ, ೩. ಅಬ್ದುಲ್ಲ ಸಮ್ಮದ ವ|| ಅಬ್ದುಲ್ಲ ಜಬ್ಬಾರ, ಶಿರ್ಶಿ. ೪ ನಾಗಪ್ಪಾ ಹನುಮಂತ ನಾಯ್ಕ, ಕುಮಟಾ. ೫. ಪುರ್ಸು ನಾರಾಯಣ ನಾಯ್ಕ, ಕಾರವಾರ ೬. ಕಾಶೀನಾಥ ನಾಗಪ್ಪಾ, ಬ್ರೆಂಚ್ ಸೆಕ್ರೆಟರಿ, ಕಾರವಾರ. ೭. ವೆಂಕಪ್ಪಾ ಕೃಷ್ಣ ಗೌರಯ್ಯಾ, ಬ್ರೆಂಚ್ ಸೆಕ್ರೆಟರಿ, ಕುಮಟಾ. ೮ ಗೋವಿಂದ ಜಿ ಅವುಸಾರಕರ, ಬ್ರೆಂಚ್ ಸೆಕ್ರೆಟರಿ, ಹೊನ್ನಾವರ. ೯. ಅಬ್ದುಲ್ಲ ಖಾದರ ವ|| ಅಬ್ದುಲ್ ಮಹಮ್ಮದ ಶೇಖ, ಬ್ರೆಂಚ ಸೆಕ್ರೆಟರಿ, ಶಿರ್ಶಿ. ೧೦ ನಾರಾಯಣ ಹರಿ ನಾಯ್ಕ, ಜನರಲ್ ಸೆಕ್ರೆಟರಿ ಮತ್ತು ಟ್ರೆಝರರ, ಕುಮಟಾ

ಇದೇ ಬರುವ ಡಿಸೆಂಬರ ತಾ. ೨೫—೨೬ನೇಗೆ ಪುಣೆಯಲ್ಲಿ ಸೇರಲಿದ್ದ ಇಲಾಖಾ ಬೇಲೀಫರ ಸಭೆಗೆ ಈ ಸಂಘದ ತರ್ಫೆನಿಂದ ಜನರಲ್ ಸೆಕ್ರೆಟರಿ ಇವರಿಗೂ ರಾ| ದತ್ತಾತ್ರಯ ಶಿವರಾವ ಮಾವಿನಕುರ್ವೆ, ಹೊನ್ನಾವರ ಇವರಿಗೂ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದೆ.

ಈ ಸಂಘದಲ್ಲಿ ಜಿಲ್ಹೆಯೊಳಗಿನ ಬೇಲೀಫರೆಲ್ಲರೂ ಸಭಾಸದರಾಗಿ ಸೇರಿ ಸಂಘದ ಕಾರ್ಯಕ್ಷಮತೆಯನ್ನು ಬೆಳೆಸಿ ನಮ್ಮ ವರ್ಗದ ಹಿತ ಕಾಪಾಡಬೇಕಾಗಿ ವಿನಂತಿಯಿರುತ್ತದೆ. ಸಂಘಕ್ಕೆ ಸಲ್ಲುವ ಹಣವನ್ನು ಈ ಕೆಳಗೆ ಸಹಿ ಮಾಡುವವರ ಕಡೆ ವಸೂಲ ಕೊಟ್ಟು ಪಾವತಿ ಪಡೆಯತಕ್ಕದ್ದು.

ಕುಮಟಾ, ತಾ. ೧೫ ೧೨-೧೯೩೮.

ನಾರಾಯಣ ಹರಿ ನಾಯ್ಕ,
ಜನರಲ್ ಸೆಕ್ರೆಟರಿ ಮತ್ತು ಟ್ರೆಝರರ.

ಜಾಹೀರ ನೋಟೀಸು.

ಹೊನ್ನಾವರ ತಾಲೂಕ ಮಂಕಿ ಗ್ರಾಮದ ಸಣ್ಣಗುಂದದಲ್ಲಿರುವ ಲಕ್ಷ್ಮೀ ಕೋಂ ನಾರಾಯಣ ನಾಯ್ಕ ಇವಳು ಇದರ ಮೂಲಕ ಯಾವತ್ತೂ ಜನರಿಗೆ ಜಾಹೀರಪಡಿಸುವದೇನಂದರೆ:—

ನನ್ನ ಗಂಡನಾದ ನಾರಾಯಣ ಸೋಮಯ್ಯಾ ನಾಯ್ಕ ಎಂಬವರು ಮೃತಪಟ್ಟಿರುತ್ತಾರೆ. ನನ್ನ ಗಂಡನ ತಂದೆಯಾದ (ನನ್ನ ಮಾವಯ್ಯನವರಾದ) ಸೋಮಯ್ಯಾ ವಿಟ್ಲಯ್ಯಾ ನ್ಯಾಕ ಇವರು ತೀರ ಮುದುಕರಾಗಿದ್ದು, ಕೆಲವರ ದುರ್ಬೋಧನೆಗೆ ಒಳಗಾಗಿ ನನಗೆ ವಂಚಿಸುವ ಇರಾದೆಯಿಂದ ಇದ್ದ ಸ್ಥಿರ-ಚರಾಸ್ತಿಯನ್ನು, ಪರಾಧೀನ ಮಾಡುವ ದುರಾಲೋಚನೆ ನಡಿಸಿದ್ದಾರಾಗಿ ತಿಳಿದುಬಂದಿದೆ. ನಮ್ಮಿಂದ, ಗಣಪತಿ ಬಿನ್ ಗುಮ್ಮಯ್ಯ ನಾಯ್ಕ ತಾಳಮಕ್ಕಿ ಇವರಿಗೆ ಲೀಜ ಕೊಡತಕ್ಕ ರೂಪ್ಯ ೫—೦—೦ ಹಾಗೂ, ದೇವಪ್ಪಾ ಬಿನ್ ಫೊಂತಯ್ಯ ನಾಯ್ಕ ಸಣ್ಣಗುಂದ ಇವರಿಗೆ ತೋಂಡಿ ಕೊಡುವ ರೂಪ್ಯ ೫೦—೦—೦ ಈ ಪ್ರಕಾರ ರೂಪ್ಯಾ ಒಂದು ನೂರು ಘಾಲೀಕತ ಬಗ್ಗೆ, ನಮ್ಮ ಖಾಸಗಿ ಬಾಬತು ಗಾಡಿ ಹೊಡೆಯುವ ಎತ್ತು ಎರಡು ಬೇರೆಯವರಿಗೆ ಕೊಟ್ಟು, ಎತ್ತು ಕೊಂಡವರಿಂದ ಹವಾಲೆ ಕೊಟ್ಟು ಚುಕ್ತಾ ಆಗಿರುತ್ತದೆ. ಇನ್ನು ರಾ. ನರಸಿಂಹ ರಾವ ಮಹಾಲೆ ಭಣಸಾಲಿ ಇವರಿಗೆ ಕೊಡತಕ್ಕ ಕೆಲವು ರೂಪಾಯಿಗಳ ಬಗ್ಗೆ ಹೊನ್ನಾವರ ಕೋರ್ಟಿನ ಡಿಕ್ರಿಯಾಗಿರುತ್ತದೆ. ಇದರ ಹೊರತು ನಮಗೆ ಇನ್ನು ಲೀಜ ಅಥವಾ ತೋಂಡಿ ಸಾಲ ಇರುವದಿಲ್ಲಾ. ಹಾಗೂ ಇನ್ನುಮುಂದೆ ಸಾಲ ತೆಗೆಯುವ ಅವಶ್ಯಕತೆ ಇಲ್ಲಾ. ಹೀಗಿರುತ್ತಾ, ನನ್ನ ಮಾವಯ್ಯನವರು ಆಸ್ತಿ ವಗೈರೆ ಪರಾಧೀನತೆ ಮಾಡಿದ್ದಲ್ಲಿ, ಅಥವಾ ಸಾಲ ಮಾಡಿದ್ದಲ್ಲಿ, ಅಂಥ ಪೋಕಳ ಪರಾಧೀನತೆಗಳು, ನನ್ನ ಜೀವನಾಂಶದ ಹಕ್ಕಿಗೆ ಭಾದಕ ಬರುವಂತಿಲ್ಲಾ ಎಂತಾ ಈ ಜಾಹೀರ ನೋಟೀಸಿನ ಮೂಲಕ ಯಾವತ್ತೂ ಜನರಿಗೆ ತಿಳಿಸಿರುತ್ತದೆ. ತಾರೀಖು ೧೭—೧೨—೧೯೩೮.

× ಈ ಎಡಗೈ ಹೆಬ್ಬೆಟ್ಟಿನ ಗುರ್ತ
ಲಕ್ಷ್ಮೀ ಕೋಂ ನಾರಾಯಣ ನ್ಯಾಕ,
ಮಂಕಿ ಪೈಕಿ ಸಣ್ಣಗುಂದ ಇವಳದು.

ಶೀತಜ್ವರ, ಚಳಿಜ್ವರ ಮುಂತಾದ ಜ್ವರಗಳ ಮೇಲೆ,

ಕರ್ಣಿಕ

ಎಗ್ಯುಮಿಕ್ಶ್ಚರ್ ಉಪಯೋಗಿಸಿರಿ !

ಸಿಕ್ಕ ಸಿಕ್ಕ ಔಷಧ ಸೇವಿಸಿ, ಜ್ವರವಂಥ ಬೇನೆಯನ್ನು ಉದ್ಧ ಬೆಳೆಸಬೇಡಿರಿ. ಬೆಲೆ ಆಣೆ ೧೨.

ಇಂಡೋಬಾಮ್

ತಲೆಶೂಲಿ, ಮೈನೋವು, ಸಂಧಿವಾತ, ವಿಷಾರಿ ಸೊಣಗಳ ಕಡಿತ ಮೊದಲಾದ ವಿಕಾರಗಳು ತಾಸು ಮಳಮುದಿಂದ ಒಳತಾಗಿ ಹಾಸಿಯಾಗುತ್ತವೆ. ಬೇರೆ ಬಾಮುಗಳಿಂದಾಗುವಂತೆ ಅನಾವಶ್ಯಕ ಉರಿ ಏಳುವದಿಲ್ಲ. ಬೆಲೆ ಆ ೪.

ಎಲ್ಲಿ ಅಂಗಡಿಗಳಲ್ಲಿ ಸಿಗುತ್ತದೆ, ಸಿಗದಿದ್ದರೆ ನಮಗೆ ಬರೆಯಿರಿ.

ಕರ್ಣಿಕ ಬ್ರದರ್ಸ್,
ಗಿರಗಾಂವ, ಮುಂಬಯಿ, ನಂ. ೪.

ಕಾಸಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರ ಮಾರ್ಗಶೀರ್ಷ ಬ। ೧೩ರ, ಸೋಮವಾರ.

ಸಹಕಾರ ಸಂಘಗಳೂ ಋಣವಿಮೋಚನೆಯೂ

ಋಣವಿಮೋಚನ ಸಮಸ್ಯೆಯಲ್ಲಿ ಸಹಕಾರ ಸಂಘಗಳ ಧೋರಣವನ್ನೇ ಪ್ರಾಮುಖ್ಯವಾಗಿ ವಿಚಾರಿಸುವದವಶ್ಯ. ಯಾಕೆಂದರೆ, ಈವಾಗ ಸಹಕಾರ ಸಂಘಗಳೇ ದೊಡ್ಡ ಸಾವಕಾರರೆಂದು ನಮ್ಮ ನಿಶ್ಚಿತಾಭಿಪ್ರಾಯ. ಸಾವಕಾರರ ದೃಷ್ಟಿಗೆ ಸಾಲ ಕೊಂಡ ಸಾಲಿಗರದೇ ಪೇಚಾಟ. ಲೋಕೋಪಕಾರಿ ಲೋಕೋದ್ಧಾರಕ ಸಹಕಾರ ಸಂಘಗಳಲ್ಲಿ ಸಾಲಗಾರರೂ ಸಾಲಗಾರರಿಗೆ ಹೊಣೆ ನಿಂತ ಜಾಮೀನದಾರರೂ ಪೇಚಾಡುತ್ತಿದ್ದಾರೆ. ಸಹಕಾರ ಸಂಘಗಳ ಚಾಲಕರು ಸ್ವಾರ್ಥಸಾಧನೆಗಾಗಿ ಸಾಲಗಾರರ ಒಳಸಂಚಿನಲ್ಲಿ ಸೇರಿ ತರತರದಿಂದ ಕುಹಕ ನಡಿಸಿ ತಮಗಾಗದ ನಿಷ್ಕಪಟ ಜನರನ್ನು ದಣಿಸಿದ ಕಥೆ ವರ್ಣಿಸಿದರೆ ಅದೊಂದು ಗ್ರಂಥವೇ ಆಗಬಹುದು. ಅವನ್ನು ವರ್ಣಿಸಲು ಈವಾಗ ಅಸಾಧ್ಯ, ಅಪ್ರಸ್ತುತ. ಸಾವಕಾರರಿಗಿಂತ ಸಹಕಾರ ಸಂಘಗಳ ಋಣಭಾರದ ವ್ಯಾಪ್ತಿ ವ್ಯಾಪಕವಿದೆಂದೂ ಸಹಕಾರ ಸಂಘಗಳನ್ನು ಅಲಕ್ಷಿಸಿ ಋಣವಿಮೋಚನೆಯ ಸಮಸ್ಯೆಯನ್ನು ವಿಚಾರಿಸಲೆಳಸುವದು ತಪ್ಪೆಂದೂ ಸಮೂದಿಸುವದೇ ನಮ್ಮ ಉದ್ದೇಶ. ಸಹಕಾರ ಸಂಘಗಳ ಸೇವಾ ದಯಾಗುವಂತೆ ಋಣವಿಮೋಚನ ಸಮಸ್ಯೆಯನ್ನು ವಿಚಾರಿಸಬೇಕೆಂದು ನಾವು ಒತ್ತಿ ಹೇಳುತ್ತೇವೆ.

ಪರಸ್ಪರ ಸಹಕಾರ ಸಂಘಗಳು ಸರಕಾರ ನಿರ್ಮಿತ ಸಂಸ್ಥೆಗಳು. ಲೋಕಹಿತವಾಗಬೇಕೆಂದು ಸರಕಾರದಿಂದ ಈ ಸಂಸ್ಥೆಗಳಿಗೆ ಬೇರೆ ಬೇರೆ ಅನುಕೂಲತೆಗಳು ಮಾಡಿಕೊಡಲ್ಪಟ್ಟಿವೆ. ಲೋಕೋಪಕಾರದ ಹೆಸರಿನ ಮೂಲಕ ಈ ಸಂಘಗಳ ಮೇಲೆ ಸರಕಾರದ ಮಮತೆ ವಿಶೇಷ. ನಿರೀಕ್ಷಣೆಯಂತೆ ಈ ಸಂಘಗಳಿಂದ ಲೋಕಹಿತ ಸಾಧಿಸಲಿಲ್ಲ. ಚಾಲಕರ ಭ್ರಷ್ಟಾಚಾರವೇ ಕಾರಣವಾಗಿರಲಿ, ಸಹಕಾರ ಇಲಾಖೆಯ ದುರ್ಲಕ್ಷವೇ ಕಾರಣವಾಗಿರಲಿ, ಆ ಚರ್ಚೆ ಈವಾಗ ನಾವು ಮಾಡಬಯಸುವದಿಲ್ಲ. ಸಹಕಾರ ಇಲಾಖೆಯವರು ಚಾಲಕರ ದೊಡ್ಡಸ್ತಿಕೆಗೆ ಮರುಳಾಗದೆ ನಿಷ್ಕಲಚಿತ್ತದಿಂದಲೂ ನಿಸ್ಪೃಹತನದಿಂದಲೂ ಸಹಕಾರ ಸಂಘಗಳ ಆಡಳಿತೆಯನ್ನು ನಿರೀಕ್ಷಿಸಿದ್ದರೆ, ಇಂದಿನ ಅನರ್ಥ ಒದಗುತ್ತಿರಲಿಲ್ಲವೆಂದು ನಮ್ಮದೊಂದು ಭಾವನೆ. ಆತ್ಮನಿರೀಕ್ಷಣೆ ಮಾಡಿದರೆ ಸಹಕಾರ ಇಲಾಖೆಯ ಅಧಿಕಾರಿಗಳಾದರೂ ಈ ಮಾತನ್ನು ಒಪ್ಪುವರೆಂದು ನಮ್ಮ ನಂಬಿಗೆ. ಹೇಳುವ ತಾತ್ಪರ್ಯವಿಷ್ಟೇ: ಸಹಕಾರ ಸಂಘಗಳ ಚಾಲಕರು ಅಧಿಕಾರದ ದುರುಪಯೋಗ ಮಾಡುವಾಗ ಸಹಕಾರ-ಅಧಿಕಾರಿಗಳು ಜಾಗ್ರತೆ ಕೊಳ್ಳಲಿಲ್ಲ, ಆದರಿಂದ ಇಂದಿನ ಅವಸ್ಥೆಗೆ ಸಂಘಗಳ ಚಾಲಕರಂತೆಯೇ ಸಹಕಾರ ಇಲಾಖೆಯವರೂ ಹೊಣೆಗಾರರಿದ್ದಾರೆ. ಹೊಣೆಗಾರಿಕೆಯ ಪಂಚಾಯಿತಿಯಲ್ಲಿ ಯಾರ ಪಾಲು ಹೆಚ್ಚು, ಯಾರ ಪಾಲು ಕಡಿಮೆ ಎಂಬ ಸಂಗತಿಯನ್ನು ಪರ್ಯಾಲೋಚಿಸುವದನವಶ್ಯಕ. ಈಗಿನ ಅವಸ್ಥೆಯನ್ನು ಹೋಗಲಾಡಿಸಲು ಸಹಕಾರ ಸಂಘಗಳೂ ಸರಕಾರವೂ ಹೊಣೆ ಇವೆಯೆಂದು ಹೇಳುವದೇ ನಮ್ಮ ಉದ್ದೇಶ. ಸಹಕಾರ ಸಂಘಗಳಿಂದ ಸಾಲ ಪಡೆದ ಸಾಲಿಗಾರರಿಗೆ ಸಾಲದ ಮೊಬಲಗನ್ನು ಕಡಿಮೆ ಮಾಡುವಾಗ ಸರಕಾರವು ಸಹಕಾರ ಸಂಘಗಳ ಭದ್ರತೆಯನ್ನು ಲಕ್ಷಿಸಬೇಕಾಗಿ ಸೂಚಿಸುತ್ತದೆ. ಸಾಲ ಪಡೆದ ಸಾಲಗಾರರಿಗೆ ಸಾಲದ ಮೊಬಲಗಿನಲ್ಲಿ ರಿಯಾಯತಿ ಕೊಡಬೇಕೆಂದು ಸಿದ್ಧವಾದಾಗ್ಯೂ ಸಂಘದ ಸ್ಥಿತಿ ತಕ್ಕಷ್ಟು ಭದ್ರವಾಗಿರದ ಪ್ರಸಕ್ತಿಯಲ್ಲಿ ಆ ಪ್ರಕಾರ ರಿಯಾಯತಿ ಕೊಡಬಾರದಾಗಿ ಸರಕಾರದ ಅಭಿಪ್ರಾಯವಿದೆ. ಸಾಲಗಾರರಿಂದ ಬರಬೇಕಾದ ಹಿಂದಿನ ಬಡ್ಡಿಯನ್ನು ಲಾಭದಲ್ಲಿ ಜಮೆ ಹಿಡಿದು ಆ ಪ್ರಕಾರ ಲಾಭವನ್ನು ಹಂಚಿಕೊಂಡ ಸಂಘಗಳಲ್ಲಿ ಆ ವರ್ಷಗಳಲ್ಲಿ ಸಲ್ಲತಕ್ಕ ಬಡ್ಡಿಯಲ್ಲಿ ಸೂಟ ಸಿಗಬೇಕೆಂದು ಹೇಳುವದು ಅವ್ಯವಹಾರಿಕವೆಂದು ಸರಕಾರದ ಅಭಿಪ್ರಾಯ. ಈ ಸರಕಾರದ ಸಿದ್ಧಾಂತವೇ ನಮಗೆ ಗ್ರಾಹಿಕವಾಗಲೊಲ್ಲ. ಋಣವಿಮೋಚನೆಯ ಸಮಸ್ಯೆಯ ಪ್ರಧಾನ ವಿಚಾರ ಋಣಭಾರಪೀಡಿತ ಸಾಲಗಾರರ ಅನುಕೂಲತೆಯದು, ಅಲ್ಲದೆ ಋಣಭಾರ ಕಾರಣವಾದ ಸಹಕಾರ ಸಂಘ ಭದ್ರತೆಯ ವಿಚಾರ ಈ ಸಮಸ್ಯೆಯಲ್ಲಿ ಸೊಬಡಿಯಾಗುವದಿಲ್ಲ. ಸಹಕಾರ ಸಂಘಗಳ ಭದ್ರತೆ ಕಡಿಮೆಯಾದಲ್ಲಿ ಅವನ್ನು ಭದ್ರಪಡಿಸುವ ವಿಚಾರವನ್ನೇ ಸರಕಾರವು ತಳೆಯಬೇಕು, ಹೊರತು ಸಾಲಗಾರರಿಗೆ ಸಿಗಬಹುದಾದ ರಿಯಾಯತಿಗಳನ್ನು ಇಲ್ಲಗಳೆಯಕೂಡದು. ಇದನ್ನು ನಾವು ಸಿದ್ಧಾಂತ ದೃಷ್ಟಿಯಿಂದ ವಾದಿಸುವದಿಲ್ಲ. ಸಾಲಗಾರ-ಸಾವಕಾರರೊಳಗಿನ ಕೊಡ-ಕೊಳ್ಳುವ ವ್ಯವಹಾರದಲ್ಲಿ ಸರಕಾರವು ಸಾವಕಾರರ ಐಪತ್ತಿನ ವಿಚಾರವನ್ನೇ ಎಷ್ಟಕ್ಕೂ ಮಾಡುವದಿಲ್ಲ. "ನುಂಗಿದವ ಕಾರಬೇಕ; ಕಾರುವದ ನುಂಗುವದರ ಪ್ರತಿಕ್ರಿಯೆ" ಹೀಗೆ ವಾದಿಸಿ, ಸರಕಾರವು ಸಾವಕಾರರಿಗೆ ಯಾವದೇ ಪರಿಯಿಂದ ಪ್ರಯೋಜನ ಕೊಡುವದಿಲ್ಲ. ಸಾವಕಾರರು ಅಳಿದರೋ ಉಳಿದರೋ ಎಂಬ ಭಾವನೆಯೇ ಸರಕಾರಕ್ಕೆ ಸೋಂಕುವದಿಲ್ಲ. ಸಹಕಾರ ಸಂಘಗಳ ಸ್ವತ್ವಾಂತವನ್ನು ಪರಾಂಬರಿಸಿದರೆ, ಸಾವಕಾರರಿಗಿಂತ ಸುಗಾಲಾಗಿ ಅವು ಅನರ್ಥ ಮಾಡಿವೆಯೆಂದು ಸರಕಾರವು ಈವಾಗ ಮನಗಂಡಿರಬೇಕು. ಅಂದ ಬಳಿಕ, ಸಂಘಗಳ ಭದ್ರತೆಯ ವಿಚಾರದಿಂದ ಸಾಲಗಾರರ ಲೋಕಕ್ಕೆ ರಕ್ಷಿಸಲೋಸುಗ ಸರಕಾರವು ಪ್ರಯತ್ನಪಡುತ್ತದೆಂದು ಹೇಳುವದು ವಾಸ್ತವವಲ್ಲ. ಅಕ್ಕಿ ಸರಿಯಾಗದಂತೆ, ಅಕ್ಕನ ಮಕ್ಕಳು ಬಡವಾಗದಂತೆ ಲೋಕಸುಖವನ್ನು ಕಲ್ಪಿಸುವ ಯೋಜನೆ ಲೋಕಾಪಹಾಸ್ಯ ವಿಷಯವಾದಾಗ, ಇಂಥ ಯೋಜನೆ ಯುಕ್ತಿಯಾಗದೆಂದು ಯಾರಾದರೂ ಎಣಿಸಿದರೇನು ಆಶ್ಚರ್ಯವಲ್ಲ! ವಸ್ತುಸ್ಥಿತಿಯೇ ಹಾಗೆ!

ಸಹಕಾರ ಸಂಘಗಳ ಐದಕ್ತನ್ನು ಬೆಳಸಬೇಕೆಂಬ ಮಾತು ನಮಗೊಪ್ಪಿಗೆ. ಅದಕ್ಕಾಗಿ ಸಂಘಗಳು ತ್ಯಾಗ ಮಾಡಬೇಕು. ಸ್ವಯಂಸ್ಫೂರ್ತಿಯಿಂದ ಸಂಘಗಳು ತ್ಯಾಗ ಮಾಡುವರೆಂದು ಸರಕಾರವು ಎಣಿಸಕೂಡದು. ಮನುಷ್ಯ ಸ್ವಭಾವವೇ ಸ್ವಾರ್ಥಸಾಧನೆಯದಿರುವಾಗ, ಚಾಲಕರು ಪರೋಪಕಾರಿ ಸನ್ಯಾಸಿಗಳಲ್ಲದಿರುವಾಗ, ತಾವಾಗಿ ಅವರು ಸ್ವಾರ್ಥತ್ಯಾಗ ಮಾಡದಿದ್ದರೆ ಅದೇನು ಅಸ್ವಾಭಾವಿಕವೆಂದೆಣಿಸಬರದು. ಆದರಿಂದ ಸರಕಾರವು ಅವಶ್ಯವಿದ್ದರೆ ಒಂದು ಕಾನೂನನ್ನೇ ಮಾಡಿ ೧೦ ವರ್ಷಗಳ ತನಕ ಸಂಘಗಳು ಲಾಭವನ್ನು ಹಂಚಿಕೊಳ್ಳಬಾರದಾಗಿಯೂ ಲಾಭದ ಮೊಬಲಗನ್ನು ಸಂಪೂರ್ಣವಾಗಿ ಋಣಪರಿಹಾರ ಕಾರ್ಯಕ್ಕೇ ವಿನಿಯೋಗಿಸಬೇಕಾಗಿಯೂ ವಿಧಿಸಬೇಕು. ಸಂಘಗಳಲ್ಲಿರುವ ಬೇರೆ ಬೇರೆ ನಿಧಿಗಳನ್ನೆಲ್ಲ ರದ್ದುಪಡಿಸಿ ಋಣಪರಿಹಾರದ ಒಂದೇ ಒಂದು ನಿಧಿಯನ್ನು ಸಂಗ್ರಹಿಸಬೇಕು. ನಿಧಿ ಸಂಗ್ರಹವಾಗುವ ವರೆಗೆ ಸಹಕಾರ ಸಂಘಗಳಿಗೆ ರಿಯಾಯತಿ ಕೊಡಲು ದ್ರವ್ಯಾಭಾವವಾದರೆ ಸರಕಾರವು ದ್ರವ್ಯಸಹಾಯ ನೀಡಬೇಕು. ಹೇಗೂ ಮಾಡಿರಿ, ಸಹಕಾರ ಸಂಘ ಮತ್ತು ಸಾವಕಾರರೆಂಬ ಭೇದಗಳನ್ನು ಕಲ್ಪಿಸಿ ನ್ಯಾಯದಂತೆ ಸಾಲಗಾರರಿಗೆ ಸಿಗತಕ್ಕ ರಿಯಾಯತಿಗಳಲ್ಲಿ ನ್ಯೂನತೆಗಳನ್ನುಂಟು ಮಾಡಬೇಡಿರಿ; ಇಷ್ಟೇ ನಮ್ಮ ವಿನಂತಿ.

ಸಹಕಾರ ಸಂಘಗಳ ಭದ್ರತೆಗೆ ಭಂಗ ಬರದಂತೆ ಸಾಲಗಾರರಿಗೆ ರಿಯಾಯತಿ ಕೊಡಬೇಕೆಂಬ ಸರಕಾರದ ಅಪ್ಪಣೆ ನಿಶ್ಚಯಾತ್ಮಕವಲ್ಲ. ಇದರಿಂದ ಚಾಲಕರಿಗೆ ಪಕ್ಷಪಾತ ಮಾಡಲು ಒಳ್ಳೇ ಅನುಕೂಲವಿದೆ. ಆಡಳಿತೆ ಮಾಡುವವರ ಮೇಲೆ ಆಕ್ಷೇಪವನ್ನೆತ್ತುವವರಿಗೆ ರಿಯಾಯತಿ ಕೊಡಲು ಚಾಲಕರು ಒಡಂಬಡದಿರುವದುಂಟು, ಇಂಥವರಿಗೆ ರಿಯಾಯತಿ ಕೊಟ್ಟಲ್ಲಿ ಸಂಘದ ಭದ್ರತೆ ಒಮ್ಮೆಲೇ ಭಂಗ ಹೊಂದಿ ಇಡೀ ಸಂಘವೇ ಮುಳುಗಿಹೋಗುವ ಭೀತಿಯುಂಟಾಗುತ್ತದೆ. ಆಡಳಿತೆದಾರರಾಗಲಿ, ಅವರ ಮರ್ಜಿ ಕಾಯುವವರಾಗಲಿ ಸಂಘಕ್ಕೆ ಸುಲಿದರೂ ಆ ಪರಿವೆ ಆಡಳಿತೆದಾರರಿಗಿಲ್ಲ. ಇದರಿಂದ ಸರಕಾರವು ನಿಶ್ಚಿತ ಹುಕುಮುಗಳನ್ನು ಹೊರಡಿಸಬೇಕು. ಯುಕ್ತ ಕಂಡಲ್ಲಿ ಪ್ರತಿಯೊಂದು ಜಿಲ್ಲೆಗೆ ಈ ಕೆಲಸಕ್ಕಾಗಿ ಒಂದೊಂದು ಇಸಮನ್ನು ನೇಮಿಸಿ ಈ ಕಾರ್ಯವನ್ನು ನಡಿಸಬಹುದು. ಸಹಕಾರ ಸಂಘಗಳು ಲೋಕಸಂಸ್ಥೆಗಳೆಂದೂ ಅವುಗಳಲ್ಲಿ ಕೈಹಾಕುವದು ಲೋಕಶಾಹಿಯ ಮನ್ವಂತರಕ್ಕೆ ಅನುಚಿತವಾದದ್ದೆಂದೂ ಸರಕಾರವು ಎಣಿಸಕೂಡದು. ಈ ಮೊದಲೇ ಹೇಳಿದಂತೆ, ಸಂಘಗಳು ಸರಕಾರನಿರ್ಮಿತ ಸಂಸ್ಥೆಗಳಾದ್ದರಿಂದಲೂ ಸರಕಾರಿ ಅಧಿಕಾರಿಗಳ ತಾತ್ಸಾರದಿಂದಲೂ ಕಾಯಿದೆಯಿಂದ ಸಂಘಗಳಿಗೆ ಕೊಟ್ಟ ಅನುಕೂಲತೆಗಳ ದುಷ್ಪ್ರಯೋಜನದಿಂದ ಈಗಿನ ಅನರ್ಥವುಂಟಾದ್ದರಿಂದಲೂ ಸರಕಾರವು ಅತಂತ್ರತೆಯನ್ನು ಸರಿಪಡಿಸಲಿಕ್ಕೂ ಅನರ್ಥವನ್ನು ಪರಿಹರಿಸಲಿಕ್ಕೂ ರಾಜಶಕ್ತಿಯ ಪ್ರಯೋಗ ಮಾಡಲೇಬೇಕು. ಸಂಘಗಳ ಚಾಲಕರ ಸ್ವಾಧೀನಕ್ಕೆ ಸಾಲಗಾರ ಲೋಕರಕ್ಷಣೆಯ ಕಾರ್ಯವನ್ನು ಒಪ್ಪಿಸಕೂಡದು; ಇದರಿಂದ ಕ್ಷೇಮವಾಗದೆಂದೇ ನಾವು ಎಣಿಸುತ್ತೇವೆ

ನಮ್ಮ ಮಹಾಮಂತ್ರಿಗಳ ಕರ್ನಾಟಕ ಸಂಚಾರ.

"ಕೊಂಗ್ರೆಸ್ಸು ಎಲ್ಲರ ಸಂಸ್ಥೆ. ಕೊಂಗ್ರೆಸ ಸರಕಾರವಾದರೂ ಎಲ್ಲ ಜನರ ಬಗ್ಗೆ ದುಡಿಯುತ್ತಿದೆ."

"ಕೊಂಗ್ರೆಸ ಶಿಸ್ತು ಪಾಲಿಸಿರಿ. ಕೊಂಗ್ರೆಸ ಶಿಸ್ತಿನ ಸಲುವಾಗಿ ಇಂದು ನಾನು ಮುಖ್ಯಮಂತ್ರಿಯಾಗಿದ್ದರೆ, ನಾಳೆ ಹಿಂಡಲಗಿ ಜೈಲು ಸೇರಬಹುದು"

ಬೆಳಗಾಂವ ಜಿಲ್ಲೆಯ ಸಂಚಾರವನ್ನು ಮುಗಿಸಿ ತಾ. ೬ ೭ ಮಂಗಳವಾರ ಸಂಜೆ ೫ ಘಂಟೆಗೆ ನಾ|| ಬಾಳಾಸಾಹೇಬ ಖೇರರವರು ಧಾರವಾಡಕ್ಕೆ ತಲ್ಪಿದರು. ಊರ ಜನರೆಲ್ಲರೂ ಉತ್ಸಾಹದಿಂದ ಅವರ ಹಾದಿ ಕಾಯುತ್ತಿದ್ದರು ಮಂತ್ರಿವರ್ಯರು ಬಂದವರೇ ಆರಳೆ ವ್ಯಾಪಾರಿ ಸಂಘದ ಮೈದಾನದಲ್ಲಿ ನಡೆಯುತ್ತಿದ್ದ ಕುಸ್ತಿಗಳನ್ನು ನೋಡಹೋದರು. ಒಂದು ಕುಸ್ತಿಯನ್ನು ನೋಡಿ ಆದ ಬಳಿಕ ಸಚಿವೋತ್ತಮರ ಕೈಯಿಂದ ಗೆದ್ದ ಮಲ್ಲರಿಗೆ ಮೆಚ್ಚುಗೆಗಳನ್ನು ಕೊಡಿಸಲಾಯಿತು. ಮೆಚ್ಚುಗೆಗಳನ್ನು ಕೊಡುವ ಮೊದಲು ನಾ|| ಖೇರರವರು "ನಿಮ್ಮ ಕುಸ್ತಿ ನೋಡಿ ಆನಂದವಾಯಿತು ಎಲ್ಲರೂ ನಿಮ್ಮ ಹಾಗೆ ಸಶಕ್ತರಾಗಬೇಕು ಬಾಪಟ ಹರ ಕ್ಷಯರೋಗ ಶುಶ್ರೂಷಾ ನಿಧಿಯ ಸಹಾಯಕ್ಕೆ ಈ ಕುಸ್ತಿಗಳು ನಡೆದಿವೆ. ಈ ಮಹಾರೋಗ ಪರಿಹಾರಕ್ಕೆ ನೀವು ಸಹಾಯ ಮಾಡುತ್ತಿದ್ದುದು ತೀರ ಅಭಿನಂದನೀಯ" ಎಂದು ಭಾಷಣ ಮಾಡಿದರು

ಅಲ್ಲಿಂದ ಮಂತ್ರಿವರ್ಯರು ಕರ್ನಾಟಕ ಪ್ರಾಂತಿಕ ಕೊಂ|| ಕಮಿಟಿಯ ಕಚೇರಿಗೆ ಹೋಗಿ ಕೊಂಗ್ರೆಸ ಕೆಲಸಗಾರರ ಕೂಡ ಮಾತನಾಡಿದರು ಕಚೇರಿಯು ಹೆಂಗಸರಿಂದಲೂ ಗಂಡಸರಿಂದಲೂ ತುಂಬಿಹೋಗಿತ್ತು. ನಾ|| ಖೇರರವರು ಕನ್ನಡದಲ್ಲಿ ಭಾಷಣ ಮಾಡಿ, ಕೊಂಗ್ರೆಸ ಶಿಸ್ತು ಪಾಲಿಸಿದರೆ ಅಲ್ಪ ಸ್ವಲ್ಪ ಲಾಭವಾಗುವದೆಂತಲೂ, ಕೊಂಗ್ರೆಸ ಶಿಸ್ತಿನ ಸಲುವಾಗಿ ಇಂದು ಮಹಾಮಂತ್ರಿಗಳಾದ ತಾವು ನಾಳೆ ಪ್ರಸಂಗ ಬಂದರೆ ಹಿಂಡಲಗಿ ಸೆರೆಮನೆಯಲ್ಲಿ ಸೆರೆಯಾಳಾಗಿ ಉಳಿಯಬಹುದೆಂತಲೂ, ನಾಟಕದಲ್ಲಿ ಅರಸರ ಭೂಮಿಕೆ ನಟಿಸಿದವನು ನಾಟಕ ಮುಗಿದ ಮೇಲೆ ಸಾಮಾನ್ಯ ಮನುಷ್ಯನಾಗುವಂತೆಯೇ ತಮ್ಮ ಸ್ಥಿತಿಯಿರುತ್ತದೆಂತಲೂ, ಸ್ಥಾನಮಾನಗಳನ್ನೆಣಿಸದೆ ಕೊಂಗ್ರೆಸ ತತ್ತ್ವಗಳನನುಸರಿಸಿ ಕೆಲಸ ಮಾಡುವದೇ ಎಲ್ಲರ ಕರ್ತವ್ಯವಿರುತ್ತದೆಂತಲೂ ಬಲು ಮಾರ್ಮಿಕವಾಗಿ ಬೋಧ ಮಾಡಿದರು ಕರ್ನಾಟಕ ಕೊಲೇಜಿನ ಬಿ. ಎಸ್. ಸಿ ಅಭ್ಯಾಸ ಕ್ರಮದಲ್ಲಿ ಈಗ ಪದಾರ್ಥ ವಿಜ್ಞಾನ ಶಾಸ್ತ್ರ ಮತ್ತು ಸಸ್ಯಶಾಸ್ತ್ರ ಈ ವಿಷಯಗಳನ್ನು ಮುಖ್ಯ ವಿಷಯಗಳನ್ನಾಗಿ ಕಲಿಯಲು ವ್ಯವಸ್ಥೆಯಿಲ್ಲ ಆ ವ್ಯವಸ್ಥೆ ಮಾಡಿಕೊಡಬೇಕೆಂದು ಬಿನ್ನವಿಸಲು ರಾ|| ದಾತಾರ ಬಳವಂತರಾಯರು ಒಂದು ಶಿಷ್ಟಮಂಡಳ ತಂದಿದ್ದರು ರಾ|| ದಾತಾರರವರು ಮರಾಠಿಯಲ್ಲಿ ಮಾತಾಡಹತ್ತಿದ ಕೂಡಲೆ ನಾ|| ಖೇರರವರು "ನನಗೆ ಕನ್ನಡ ಬರುತ್ತದೆ, ಕನ್ನಡದಲ್ಲೇ ಹೇಳಿರಿ" ಎಂದು ನುಡಿದರು ಮತ್ತು ಶಿಷ್ಟರ ಹೇಳಿಕೆ ಕೊಂಡು ಆ ಬಗ್ಗೆ ವಿಚಾರ ಮಾಡುತ್ತೇನೆಂದು ಅಶ್ವಾಸನೆ ಕೊಟ್ಟರು ಆ ಮೇಲೆ ಕರ್ನಾಟಕ ವಿದ್ಯಾವರ್ಧಕ ಸಂಘ, ಟ್ರೇನಿಂಗ ಕೊಲೇಜ, ಹಿಂದೀ ಶಿಕ್ಷಕ ಶಾಲೆ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳ ಮುಂತಾದ ಹಲವು ಸಂಸ್ಥೆಗಳಿಗೆ ಸಂದರ್ಶನ ಕೊಟ್ಟರು ಟ್ರೇನಿಂಗ ಕೊಲೇಜಿನಲ್ಲಿ ಚಿತ್ರಕಲಾಭುವನದಲ್ಲಿಯೂ ತೋಟದಲ್ಲಿಯೂ ತರತರದ ಬಣ್ಣಗಳ ಮಣ್ಣುಗಳಿಂದ ತಯಾರಿಸಿದ ನಕಾಶೆಗಳನ್ನೂ ಚಿತ್ರಗಳನ್ನೂ ಕಂಡು ಸಚಿವೋತ್ತಮರಿಗೆ ಸಂತೋಷವಾಯಿತು ಈ ಎಲ್ಲ ಸಂಸ್ಥೆಗಳಿಗೆ ಭೆಟ್ಟಿ ಕೊಟ್ಟು ನಾ|| ಬಾಳಾಸಾಹೇಬರು ೬|| ಘಂಟೆಗೆ ಕಡಪಾ ಮೈದಾನದಲ್ಲಿ ಕೂಡಿದ್ದ ಸಾರ್ವಜನಿಕ ಸಭೆಗೆ ಬಂದರು. ಇಡೀ ಮೈದಾನು ಜನರಿಂದ ಕಿಕ್ಕಿರಿದು ತುಂಬಿತ್ತು. ಶಾಂತತೆ ಕಾಯುವದು ಕಷ್ಟವಾಗುತ್ತಿತ್ತು. ಮುಖ್ಯ ಮಂತ್ರಿಗಳಿಗೆ ಅಲ್ಲಿ ೨೮ ಸಂಸ್ಥೆಗಳು ಪೂಮಾಲೆಗಳನ್ನೂ ೬ ಸಂಸ್ಥೆಗಳು ಮಾನಪತ್ರಗಳನ್ನೂ ಅರ್ಪಿಸಿ ಸತ್ಕರಿಸಿದವು ನಗರ ಸಭೆಯವರೂ ತಮ್ಮದೊಂದು ಮಾನಪತ್ರವನ್ನರ್ಪಿಸಿ ಕೊಂಗ್ರೆಸ ಮಂತ್ರಿಮಂಡಳದ ಕಾರ್ಯವನ್ನು ತುಂಬಾ ಹೊಗಳಿದರು ಮತ್ತು ಧಾರವಾಡ ನಗರಕ್ಕೆ ನೀರಿನ ಪೂರೈಕೆ ಮಾಡಲು ಸಹಾಯ ಮಾಡಬೇಕೆಂದು ಕೋರಿದರು ಲಿಂಗಾಯತ ಎಜ್ಯುಕೇಶನ್ ಸೊಸಾಯಟಿಯವರು ತಾವಿತ್ತ ಮಾನಪತ್ರದಲ್ಲಿ ಘಟಕಳ ಬಂದರದ ಸುಧಾರಣೆ ಮಾಡಬೇಕೆಂದು ಬೇಡಿಕೆ ಮಾಡಿದ್ದರು ಎಲ್ಲ ಮಾನಪತ್ರಗಳಿಗೆ ಉತ್ತರ ಕೊಡುತ್ತ ಮಂತ್ರಿವರ್ಯರು ನುಡಿದದ್ದೇನಂದರೆ 'ನಿಮಗೆ ಕನ್ನಡದಲ್ಲಿ ಉತ್ತರ ಕೊಡಬೇಕಿತ್ತು ಆದರೆ ನಾನು ಕನ್ನಡ ಮಾತು ಬಿಟ್ಟು ೪೦ ವರ್ಷಗಳಾದವು. ಆದ್ದರಿಂದ ಕನ್ನಡದಲ್ಲಿ ನನ್ನ ಹೃದ್ಗತ ಬಿಚ್ಚಿ ಹೇಳುವದು ನನಗೆ ಶಕ್ಯವಿಲ್ಲ ಕಾರಣ ಹಿಂದಿಯಲ್ಲಿ ಹೇಳುವೆನು ಆ ಬಗ್ಗೆ ಕ್ಷಮಿಸಿರಿ. ಹಾದಿಯಲ್ಲಿ ಅನೇಕ ರೈತರು ನನ್ನನ್ನು ಕಾಣಲು ಬಂದಿದ್ದರು ಅವರಿಗೆ ಅಸಮಾಧಾನಗೊಳಿಸಿ ಬರಲಿಕ್ಕೆ ನನ್ನಿಂದಾಗಲಿಲ್ಲ ಅದ್ದರಿಂದ ಇಲ್ಲಿ ಬರಲು ತಡವಾಯಿತು ಈ ಬಗ್ಗೆ ನನಗೆ ಕ್ಷಮಿಸಬೇಕು (ಇಲ್ಲಿ ಶ್ರೋತೃಗಳಾದರೆಂಬವರು ಎದ್ದು 'ಕನ್ನಡದಲ್ಲಿ ಭಾಷಣ ಮಾಡಿರಿ' ಎಂದು ಹೇಳಿದರು ಅದಕ್ಕೆ) ಸುಮ್ಮಗೆ ಕುಳಿತುಕೊಳ್ಳಿರಿ. ಹಿಂದೀ ಭಾಷೆ ರಾಷ್ಟ್ರಭಾಷೆಯಿರುತ್ತದೆ ಅದನ್ನು ಕಲಿಯಬೇಕು" ಈ ಪ್ರಕಾರ ಪ್ರಸ್ತಾವನೆ ಮಾಡಿ ಮಂತ್ರಿಮಂಡಳವು ಮಾಡಲಿರುವ ಮತ್ತು ಮಾಡಲಿಕ್ಕಿರುವ ಲೋಕಸೇವೆಯ ಕಾರ್ಯಗಳನ್ನು ವಿವರಿಸಿದರು ಮತ್ತು ಅಸೋಗಾ ನೀರಾವರಿ ಯೋಜನೆಯು ಪೂರ್ಣವಾದಲ್ಲಿ ಧಾರವಾಡ ನಗರದ ನೀರಿನ ಕೊರತೆ ಕಡಿಮೆಯಾಗುವದೆಂದು ಭರವಸೆ ಕೊಟ್ಟರು. ಸಭೆಯಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ನೆರೆದದ್ದನ್ನು ಹೊಗಳುತ್ತ ನಾ|| ಖೇರರವರು ಹೇಳಿದ್ದೇನಂದರೆ "ಹೆಂಗಳೆಯರಿಗೆ ನನ್ನ ಧನ್ಯವಾದಗಳು. ನಮ್ಮ ಕಾರ್ಯದಲ್ಲಿ ಅವರು ಸಹಾಯ ಮಾಡಿದರೆ ನಮಗೆ ಜಯ ಬೇಗನೇ ಸಿಗುವದು ಎಲ್ಲರೂ ಕೊಂಗ್ರೆಸ್ಸಿಗೆ ಸಹಾಯ ಮಾಡಬೇಕು" ಧಾರವಾಡದ ಸಭೆಯನ್ನು ಮುಗಿಸಿ ಮಾನ್ಯ ಮಂತ್ರಿಗಳು ತಮ್ಮ ಪರಿವಾರದೊಂದಿಗೆ ಹುಬ್ಬಳ್ಳಿಗೆ ಹೊರಟರು

ಕಾರ್ಯಕ್ರಮದಂತೆ ಮಂತ್ರಿಗಳು ಹುಬ್ಬಳ್ಳಿಗೆ ರಾತ್ರಿ ೯ ಘಂಟೆಗೆ ತಲ್ಪಬೇಕಿತ್ತು. ಆದರೆ ಅಲ್ಲಿ ಮುಟ್ಟುವಷ್ಟರಲ್ಲಿ ೧೦ ಘಂಟೆ ಬಡಿಯಿತು ನೆಹರೂ ಚೌಕಿನಲ್ಲಿ ೩೦ ಸಾವಿರ ಜನರು ಕೂಡಿದ್ದರು. ಚಾತಕ ಪಕ್ಷಿಗಳಂತೆ ನಾ|| ಖೇರರವರ ಆಗಮನ ನಿರೀಕ್ಷಿಸುತ್ತಿದ್ದರು ಮಂತ್ರಿಗಳು ತಲ್ಪುತ್ತಲೇ ಸಭೆಗೆ ಆರಂಭವಾಯಿತು. ಪ್ರಾಂತಾಧ್ಯಕ್ಷರು ತಡವಾದ ಬಗ್ಗೆ ಕ್ಷಮೆ ಬೇಡಿ, "ಇದು ಬಾಳಾಸಾಹೇಬರ ತಪ್ಪಲ್ಲ. ಕಾರ್ಯಕ್ರಮ ರಚಿಸಿದ ನಮ್ಮ ತಪ್ಪು ಹಾದಿಯಲ್ಲಿ ಅಲ್ಲಲ್ಲಿ ಸಾವಿರಾರು ಜನರು ಬಾಳಾಸಾಹೇಬರ ದರ್ಶನ ತಕ್ಕೊಳ್ಳಲು ಬರುತ್ತಿದ್ದರು ಅವರಿಗೆ ನಾಲ್ಕು ಅಕ್ಕರತೆಯ ಮಾತುಗಳನ್ನು ಹೇಳದೆ ಮುಂದಾಗಲು ಸದ್ಗುಣಿಯ ಮಂತ್ರಿಗಳಿಂದ ಆಗಲಿಲ್ಲ" ಎಂದು ನುಡಿದರು ಆ ಬಳಿಕ ೬೫ ಬೇರೆ ಬೇರೆ ಸಂಸ್ಥೆಗಳ ಪರವಾಗಿ ಪೂಮಾಲೆಗಳೂ ಮಾನಪತ್ರಗಳೂ ಅರ್ಪಿಸಲ್ಪಟ್ಟವು ಹುಬ್ಬಳ್ಳಿಯ ನಗರ ಸಭೆಯವರೂ ತಮ್ಮದೊಂದು ಮಾನಪತ್ರ ಕೊಡಬೇಕೆಂದು ಪ್ರಯತ್ನಿಸಿದ್ದರು! ಆದರೆ ನಗರ ಸಭೆಯು ಮಾನಪತ್ರ ಸ್ವೀಕರಿಸಲಿಕ್ಕೆ ಈಗ ಸಮಯವಿಲ್ಲೆಂದು ಅವರಿಗೆ ತಿಳಿಸಲಾಗಿತ್ತು! ನಾ|| ಖೇರರ ಸತ್ಯಾರ್ಥ ಲಿಮಿಂಗ್ಟನ್ ಹಾಯಸ್ಕೂಲಿನಲ್ಲಿ ನಗರ ಸಭೆಯ ಆಳುಗಳಿಂದ ಕೆಲವೊಂದು ಸ್ವಚ್ಛತೆ ಮಾಡಿಸುತ್ತಿದ್ದ ಆರೋಗ್ಯ ತಪಾಸಣೆ ಅಧಿಕಾರಿಗಳಿಗೆ ನಗರ ಸಭೆಯ ಕಾರ್ಯಕಾರಿ ಮಂಡಳದ ಚೇರಮನ್ನ ದೀವಟಿಯವರು "ಯಾರ ಅಪ್ಪಣೆಯಿಂದ ನೀವು ಇಲ್ಲಿ ಕೆಲಸ ಮಾಡುತ್ತಿದ್ದೀರಿ?" ಎಂದು ಬೆದರಿಸಿ ಓಡಿಸಿದರೆಂದು ಪ್ರಕಟವಾಗಿದೆ ಇಂತಹ ಉಚ್ಛೃಂಖಲ ವೃತ್ತಿಯ ನಗರ ಸಭೆಯವರ ಸತ್ಕಾರವನ್ನು ಶೀಲವಂತ ಸಚಿವೋತ್ತಮರು ಹೇಗೆ ಸ್ವೀಕರಿಸಬೇಕು? ಎಲ್ಲ ಮಾನಪತ್ರಗಳಿಗೆ ಉತ್ತರ ಕೊಡುವಾಗ ಮುಖ್ಯ ಪ್ರಧಾನರು ಹೇಳಿದ್ದೇನಂದರೆ "ಒಬ್ಬ ರಾಜನಿಗೆ ಮಾಡುವಂತಹ ಸ್ವಾಗತ ನೀವು ನನಗೆ ಮಾಡಿದ್ದೀರಿ ಅದು ನನ್ನ ವ್ಯಕ್ತಿಯ ಸ್ವಾಗತವಲ್ಲ ೫೦ ವರ್ಷಗಳಿಂದ ರಾಷ್ಟ್ರಸೇವೆ ಮಾಡುತ್ತ ಬಂದ ರಾಷ್ಟ್ರಸಭೆಯ ಸತ್ಕಾರವಿದೆಂದು ತಿಳಿಯುತ್ತೇನೆ ೧|| ವರ್ಷದ ಹಿಂದೆ ನಮ್ಮ ಮುಂದೆ ಬಹಳ ಗಡಬಡದ ಪ್ರಶ್ನೆ ಉದ್ಭವಿಸಿತ್ತು ಹೊಸ ರಾಜ್ಯ ಘಟನೆಯಂತೆ ಸಿಕ್ಕ ಅಲ್ಪ ಸ್ವಲ್ಪ ಅಧಿಕಾರ ಸ್ವೀಕರಿಸಬೇಕೋ ಬೇಡವೋ ಎಂಬದೇ ಆ ಪ್ರಶ್ನೆ ಬಹಳ ಜನರು ಬಹಳ ವಿಧಗಳಿಂದ ಕೊಂಗ್ರೆಸಿಗೆ ವಿರೋಧ ಮಾಡಿದರು ದೇಶದಲ್ಲಿ ಕೊಂಗ್ರೆಸ್ಸಿಗೆ ಬೆಂಬಲವಿಲ್ಲೆಂದು ಹೇಳಿದರು. ಆದರೆ ಚುನಾವಣೆಗಳಲ್ಲಿ ಎಲ್ಲ ಭ್ರಾಂತಿಯ ನಿರಸನವಾಯಿತು. ಇಂದು ೯ ಪ್ರಾಂತಗಳಲ್ಲಿ ಕೊಂಗ್ರೆಸ್ಸಿಗೆ ಬಹುಮತ ಸಿಕ್ಕಿದೆ ಮಂತ್ರಿಪದ ಸ್ವೀಕಾರಕ್ಕೂ ಅನೇಕರು ವಿರೋಧ ಬಗೆದರು. ಆದರೆ ಮಹಾತ್ಮರ ತಪೋಬಲದ ಪ್ರಭಾವದ ಮುಂದೆ ಯಾರ ಕಾಟವೂ ಸಾಗಲಿಲ್ಲ! ಮಂತ್ರಿಪದ ಸ್ವೀಕಾರದಿಂದ ಸ್ವರಾಜ್ಯ ಸಮೀಪ ಬರುವದೆಂದು ಅವರು ಹೇಳಿದ್ದರಿಂದ ನಾವು ಅಧಿಕಾರ ಸ್ವೀಕಾರ ಮಾಡಿದೆವು. ಈ ೧|| ವರ್ಷಗಳಲ್ಲಿ ನಾವು ಮಾಡಿದಂಥ ಸುಧಾರಣೆಗಳನ್ನು ನೋಡಿರಿ ಶಿಕ್ಷಣ ಪದ್ಧತಿಯನ್ನು ಬದಲಿಸಿ ವರ್ಧಾ-ಶಿಕ್ಷಣ ಯೋಜನೆ ಕಾರ್ಯರೂಪಕ್ಕೆ ತರಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ರೈತರ ಸ್ಥಿತಿ ಸುಧಾರಿಸಲು ನಾವು ಯತ್ನಿಸುತ್ತಿದ್ದೇವೆ ಜನತೆಯಲ್ಲಿ ಪೂರ್ಣ ಜಾಗೃತಿಯಾಗಿದೆ ಜನತೆಯ ಬಗ್ಗೆ ನಾವು ದುಡಿಯುತ್ತಿದ್ದೇವೆ ನಮಗೆ ಅನೇಕ ತರದ ಅಡ್ಡಿಗಳಾಗುತ್ತಿವೆ ಸ್ವರಾಜ್ಯವು ಯಾರೊಬ್ಬರ ಸಲುವಾಗಿ ಇರುವದಿಲ್ಲ ಎಲ್ಲರ ಬಗ್ಗೆ ಸ್ವರಾಜ್ಯ ಬೇಕು. ಕೊಂಗ್ರೆಸ್ಸು ಯಾರೊಬ್ಬರ ಸಂಸ್ಥೆಯಲ್ಲ, ಎಲ್ಲ ಜನರ ಸಂಸ್ಥೆಯದು ಅಂತೆಯೇ ನಾವು ಪ್ರಾಂತದ ಎಲ್ಲರ ಬಗ್ಗೆ ದುಡಿಯುತ್ತಿದ್ದೇವೆ. ನಮಗೆ ನೀವು ಬೆಂಬಲ ಕೊಡಬೇಕು. ೪೦ ವರ್ಷಗಳ ಹಿಂದೆ ನಾನು ಕುಂದಗೋಳದಲ್ಲಿದ್ದೆ ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಬಹಳ ವ್ಯತ್ಯಾಸವಿದೆ ಆಗ ಹೆಂಗಳೆಯರು ಮನೆಬಿಟ್ಟು ಹೊರಗೆ ಬರುತ್ತಿದ್ದಿಲ್ಲ. ಹಿಂದೀ ಸ್ತ್ರೀಯರ ಸ್ಥಿತಿಯಂತೂ ಬಹಳ ಶೋಚನೀಯವಿತ್ತು. ಈಗ ಅವರು ನಮಗೆ ನೆರವಾಗುತ್ತಿದ್ದಾರೆ ಗಂಡಸರಿಗೆ ಸ್ವರಾಜ್ಯ ಬೇಕಾಗುವಷ್ಟೇ ಅವರಿಗೂ ಸ್ವರಾಜ್ಯ ಬೇಕಾಗಿದೆ" ಇತ್ಯಾದಿ ಈ ಸಭೆಯನ್ನು ಮುಗಿಸಿ ಮಂತ್ರಿಗಳು ರಾತ್ರಿಯ ವಿಶ್ರಾಂತಿಯ ಬಗ್ಗೆ ಹರಿಜನ ಬಾಲಿಕಾಶ್ರಮಕ್ಕೆ ಹೋದರು

ಬುಧವಾರ ಮುಂಜಾನೆ ನೂರಾರು ಜನರು ನಾ|| ಖೇರರನ್ನು ಕಾಣಬಂದಿದ್ದರು ಕುಂದಗೋಳದ ಕೆಲ ನಾಗರಿಕರೂ ಬಂದಿದ್ದರು ಅವರ ಪ್ರೇಮಸತ್ಕಾರ ಕೇಳಿಕೊಂಡಾದ ಮೇಲೆ ಮುಖ್ಯ ಮಂತ್ರಿಗಳಿಗೆ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷ ರಾ|| ದಾತಾರ ಬಳವಂತರಾಯರು ಎರಡು ಮನವಿಗಳನ್ನು ಸಾದರಪಡಿಸಿ ಆ ಬಗ್ಗೆ ಕೆಲವು ಸ್ಪಷ್ಟೀಕರಣ ಮಾಡಿದರು ಮೊದಲನೇ ಮನವಿಯಲ್ಲಿ ಈ ಕೆಳಗಿನ ಬೇಡಿಕೆಗಳಿದ್ದವು -- (೧) ಆಂಧ್ರ ಪ್ರಾಂತದ ಪ್ರಾಂತೀಕರಣದ

ಬಗ್ಗೆ ಮದ್ರಾಸ ಸರಕಾರವು ಪ್ರಯತ್ನ ನಡಿಸಿದೆ ಮುಂಬಯಿ ಸರಕಾರವು ಕರ್ನಾಟಕ ಪ್ರಾಂತದ ಸಮಸ್ಯೆಯನ್ನು ಕೂಡಲೆ ಕೈಕೊಳ್ಳಬೇಕು (೨) ವರ್ಷದೊಳಗಿನ್ನು ಮುಂಬಯಿ ಸರಕಾರವು ಕರ್ನಾಟಕಕ್ಕೆ ಬರಬೇಕು (೩) ಕಮೀಶನರರ ಕಚೇರಿಯು ಬೆಳಗಾಂವಿಯಲ್ಲೇ ಉಳಿಯಬೇಕು (೪) ಬೆಳಗಾಂವಿ ಜಿಲ್ಲೆಯ ಮತದಾರ ಯಾದಿಗಳು ಕನ್ನಡದಲ್ಲಿ ಪ್ರಕಟವಾಗಬೇಕು (೫) ಸರಕಾರವು ನಿಯಮಿಸುವ ಕಮಿಟಿಗಳಲ್ಲಿ ಕನ್ನಡಿಗರಿಗೆ ಯೋಗ್ಯ ಪ್ರಾತಿನಿಧ್ಯ ಸಿಗಬೇಕು. (೬) ಕಾರವಾರ ಜಿಲ್ಲೆಯ ಅಭಿವೃದ್ಧಿಯ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು ಈ ಮನವಿಗೆ ಮುಖ್ಯ ಪ್ರಧಾನರು ಕೊಟ್ಟ ಉತ್ತರವಿಂತಿದೆ - (೧) ಕರ್ನಾಟಕ ಏಕೀಕರಣಕ್ಕೆ ಸಾರ್ವತ್ರಿಕ ಬೆಂಬಲವಿದೆಯೆಂಬುದರ ಕುರಿತು ತಿಲಮಾತ್ರ ಸಂಶಯವಿಲ್ಲ ನಾ|| ರಾಜಗೋಪಾಲಾಚಾರ್ಯರು ಆಂಧ್ರದ ಬಗ್ಗೆ ಮಾಡುವದನ್ನು ನಾವು ಕರ್ನಾಟಕದ ಬಗ್ಗೆ ಮಾಡುತ್ತಿದ್ದೇವೆ ಸುಮ್ಮನೆ ನಮ್ಮ ಬಗ್ಗೆ ಅವಿಶ್ವಾಸ ತಳೆಯಬೇಡಿರಿ. ನಾನು ಕೊಂಗ್ರೆಸ ಸೇವಕ ನನಗೆ ಯಾರ ಪಕ್ಷಪಾತವಿಲ್ಲ. (೨) ಮುಂಬಯಿ ಸರಕಾರವು ಕರ್ನಾಟಕಕ್ಕೆ ಬರುವದು ಶಕ್ಯ ಕಾಣುವದಿಲ್ಲ ಆದರೆ ಕೆಲವು ಮಂತ್ರಿಗಳು ಕರ್ನಾಟಕದಲ್ಲೂ ಗುಜರಾಥದಲ್ಲೂ ಬಂದುಹೋಗುವಂತೆ ವ್ಯವಸ್ಥೆ ಮಾಡಬಹುದು (೩) ಕಮೀಶನರರ ಸ್ಥಾನಗಳನ್ನೇ ಕಡಿಮೆ ಮಾಡಬೇಕೆಂಬ ವಿಚಾರದಲ್ಲಿ ನಾವಿದ್ದೇವೆ ಅವನ್ನು ಇಡುವದೇ ಆದರೆ ಬೆಳಗಾವಿಯ ಕಚೇರಿ ತೆಗೆಯದಂತೆ ಆಲೋಚಿಸಬಹುದು (೪) ಬೆಳಗಾವಿಯ ಎಲ್ಲ ಮತದಾರ ಯಾದಿಗಳನ್ನು ಕನ್ನಡದಲ್ಲೂ ಅವಶ್ಯವಿದ್ದಲ್ಲಿ ಪುನಃ ಮರಾಠಿಯಲ್ಲೂ ಪ್ರಕಟಿಸಬೇಕೆಂಬ ಸೂಚನೆಯ ವಿಚಾರ ಅವಶ್ಯ ಮಾಡುತ್ತೇನೆ. (೫) ಸರಕಾರ ಕಮಿಟಿಗಳಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯ ಸಿಗಲಿಲ್ಲೆಂಬ ಮಾತಿನಲ್ಲಿ ಹುರುಳಿಲ್ಲ. ಒಂದುವೇಳೆ ಸಿಗಬೇಕಾದ ಜನರ ನೇಮಣೂಕಿಯಾಗದಿರಬಹುದು. (ಇಲ್ಲಿ ಡಾ|| ಪಾಟೀಲರು ಸ್ಪಷ್ಟೀಕರಣ ಮಾಡಿ, ಹೆಸರಿಗೆ ಕನ್ನಡಿಗರಿದ್ದು ಉಪಯೋಗವಿಲ್ಲ. ಕರ್ನಾಟಕದ ಪೃಥ ಪರಿಚಯವಿದ್ದವರ ನೇಮಣೂಕಿಯಾಗಬೇಕು ಎಂದು ವಾದಿಸಿದರು ನಾ|| ಖೇರರು ಆ ಮಾತು ಒಪ್ಪಿದರು) (೬) ಕಾರವಾರ ಜಿಲ್ಲೆಯ ವಿಷಯ ಮಹತ್ವದ್ದಿದೆ ಆ ಬಗ್ಗೆ ಅವಶ್ಯ ವಿಚಾರ ಮಾಡಿ ಹಿಂದಿನಿಂದ ತಿಳಿಸುವೆನು ಈ ಪ್ರಕಾರ ಒಂದು ಮನವಿಯು ಇತ್ಯರ್ಥವಾಯಿತು ಇನ್ನೊಂದು ಮನವಿಯಲ್ಲಿ ಶಿಕ್ಷಕರು ಈ ಕೆಳಗೆ ಕಾಣಿಸಿದ ಬೇಡಿಕೆಗಳನ್ನು ಮುಂದಿಟ್ಟಿದ್ದರು — (೧) ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜು ಸ್ಥಾಪಿಸಬೇಕೆಂದು ಸರಕಾರದವರು ನಿಶ್ಚಯಿಸಿದ ಬಗ್ಗೆ ಅಭಿನಂದನೆ ಈ ಕಾಲೇಜು ಉತ್ತಮ ಸ್ಥಳದಲ್ಲಿ ತೆರೆಯಲ್ಪಡುವದೆಂದು ನಂಬಿಗೆಯಿದೆ. ಧಾರವಾಡದಲ್ಲಿ ಅದನ್ನು ತೆರೆಯಬೇಕೆಂದು ನಡಿಸಿದ ಚಳವಳಿಯ ಬಗ್ಗೆ ಸಂಶಯಕೊಳ್ಳಬಾರದು. ಈ ಕಾಲೇಜು ಮುಖ್ಯವಾಗಿ ಕನ್ನಡಿಗರ ಸಲುವಾಗಿ ಇರುತ್ತಿರುವಾಗ ಅದರಲ್ಲಿ ಕನ್ನಡ ಬಾರದ ಶಿಕ್ಷಕರಿರುವದು ಉಚಿತವಲ್ಲ ಶಿಕ್ಷಕರು ಕನ್ನಡಿಗರೇ ಇರುವಂತೆ ನೋಡಬೇಕು. (೨) ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ. ಎಸ್‌ಸಿ ವಿದ್ಯಾರ್ಥಿಗಳಿಗೆ ಪದಾರ್ಥವಿಜ್ಞಾನ ಶಾಸ್ತ್ರ ಮತ್ತು ಸಸ್ಯಶಾಸ್ತ್ರ ಇವೆರಡು ವಿಷಯಗಳನ್ನು ಮುಖ್ಯ ವಿಷಯಗಳನ್ನಾಗಿ ಕಲಿಯುದಕ್ಕೆ ಅವಕಾಶ ಮಾಡಿಕೊಡಬೇಕು (೩) ಕರ್ನಾಟಕದಲ್ಲಿ ಕೆಲಸ ಮಾಡುವ ವಿದ್ಯಾಧಿಕಾರಿಗಳು ಕನ್ನಡ ಬಲ್ಲವರಿರಬೇಕು. (೪) ಗುಜರಾಥಿ-ಮರಾಠಿಗಳಂತೆ ಕನ್ನಡ ಭಾಷೆಯಲ್ಲೂ ಆಕಾಶವಾಣಿಯ ಮೂಲಕ ಶಿಕ್ಷಣಪ್ರಸಾರ ಮಾಡುವ ವ್ಯವಸ್ಥೆಯಾಗಬೇಕು. (೫) ಎಷ್ಟೋ ಸರಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಇನ್ನೂ ಶಿಕ್ಷಣವು ಇಂಗ್ಲಿಷ ಭಾಷೆಯಿಂದಲೇ ನಡೆಯುತ್ತಿದೆ. ಇಂಗ್ಲಿಷ ಬಿಟ್ಟು ಇನ್ನುಳಿದ ವಿಷಯಗಳನ್ನು ಪ್ರಾಂತ ಭಾಷೆಯಿಂದಲೇ ಕಲಿಸುವಂತೆ ವ್ಯವಸ್ಥೆ ಮಾಡಬೇಕು (೬) ಕೊಲ್ಲಾಪುರ ಜಿಲ್ಲೆಯ ಕನ್ನಡ ಊರುಗಳಲ್ಲಿ ಕನ್ನಡ ಶಾಲೆಗಳನ್ನು ತೆರೆಯಬೇಕು ಈ ಮನವಿಗೆ ನಾ|| ಖೇರರು ಈ ಕೆಳಗಿನಂತೆ ಉತ್ತರ ಕೊಟ್ಟರು - (೧) ಟ್ರೇನಿಂಗ ಕಾಲೇಜಿನ ಪೂರ್ಣ ವಿವರಗಳನ್ನು ನೋಡಿಕೊಂಡವಿನಾ ಈ ಬಗ್ಗೆ ಏನೂ ಹೇಳಲಾರೆ. (೨) ಕರ್ನಾಟಕದಲ್ಲಿ ಕೆಲಸ ಮಾಡುವ ಎಲ್ಲ ವಿದ್ಯಾಧಿಕಾರಿಗಳಿಗೆ - ಎಜ್ಯುಕೇಶನಲ್ ಇನ್ಸಪೆಕ್ಟರರಿಗೆ ಸಹ - ಕನ್ನಡ ಬರಬೇಕೆಂಬ ಮಾತಿಗೆ ನನ್ನ ಒಪ್ಪಿಗೆಯಿದೆ. (೩) ಕರ್ನಾಟಕ ಕಾಲೇಜಿನಲ್ಲಿ ನೀವು ಹೇಳಿದ ವಿಷಯಗಳ ಶಿಕ್ಷಣದ ಕುರಿತು ಆಲೋಚನೆ ಮಾಡುವೆನು (೪) ಆಕಾಶವಾಣಿಯ ಮೂಲಕ ಕನ್ನಡ ನುಡಿಯ ಪ್ರಸಾರ ಮಾಡುವ ಕುರಿತು ನಾವು ಕೇಂದ್ರ-ಸರಕಾರಕ್ಕೆ ಬರೆದಿದ್ದೇವೆ (೫) ಬೋಧಭಾಷೆಯ ಸೂಚನೆಯನ್ನು ನಾನು ಸಹಾನುಭೂತಿಯಿಂದ ವಿಚಾರಿಸುವೆನು (೬) ಕೊಲ್ಲಾಪುರ ಜಿಲ್ಲೆಯಲ್ಲಿ ಕನ್ನಡ ಶಾಲೆಗಳನ್ನು ತೆರೆಯುವ ವಿಷಯದಲ್ಲೂ ಕೋರ್ಟ-ಕಚೇರಿಗಳಲ್ಲಿ ಕನ್ನಡಕ್ಕೆ ಮನ್ನಣೆ ಕೊಡುವ ವಿಷಯದಲ್ಲೂ ವಿಚಾರ ಮಾಡಲಾದೀತು. ಈ ಪ್ರಕಾರ ಏಕೀಕರಣ ಶಿಷ್ಟರ ಸಂದರ್ಶನ ಮುಗಿಸಿ, ಹರಿಜನರ ಶಿಷ್ಟಮಂಡಳಕ್ಕೆ ಭೆಟ್ಟಿಕೊಟ್ಟರು ಮತ್ತು ಹರಿಜನ ಬಾಲಿಕೆಯರ ಕೈಗಾರಿಕೆಗಳನ್ನು ನೋಡಿಕೊಂಡು, ಬಾಲ-ಬಾಲಿಕೆಯರ ಸಾಂಘಿಕ ಆಟಗಳನ್ನೂ, ಕವಾಯತನ್ನೂ ನೋಡಲು ಲಿಮಿಂಗ್ಟನ್ ಹೈಸ್ಕೂಲಿಗೆ ಹೋದರು. ಚಿಕ್ಕ ಹುಡುಗರ ಆಟ ನೋಡಿ ಮಂತ್ರಿಗಳಿಗೆ ಪರಮ ಹರುಷವಾಯಿತು ಇಂತಹ ಸತ್ಕಾರ್ಯಗಳಿಗೆ ಹುಬ್ಬಳ್ಳಿಯ ನಗರ ಸಭೆಯವರು ಏಕೆ ಸಹಾಯ ಮಾಡಬಾರದೆಂದೂ ಅವರು ಉದ್ಗರಿಸಿದರು' ಅಲ್ಲಿಂದ ಮುಂದೆ ಹೆಣ್ಣುಮಕ್ಕಳ ದವಾಖಾನೆಯ ಅಡಿಗಲ್ಲು ಇಟ್ಟು, ಕಲಘಟಗಿ, ತಡಸ ಮೊದಲಾದ ಊರುಗಳನ್ನು ಸಂದರ್ಶಿಸಿ ಧಾರವಾಡಕ್ಕೆ ಬಂದು ಶಿಕ್ಷಣ ಪರಿಷತ್ತಿನ ಉದ್ಘಾಟನೆ ಮಾಡಿ ಹಾಗೆಯೇ ಬೆಳಗಾವಿಗೆ ಹೋದರು. ಪುಣೆಗೆ ಹೊರಡುವಾಗ ಈ ಸಂಚಾರದಿಂದ ತಮಗೆ ಬಹಳ ಆನಂದವಾಯಿತೆಂತಲೂ ಬಹಳ ದಿನ ಪರಸ್ಥಳದಲ್ಲುಳಿದ ಪ್ರೀತಿಯ ಮಗನು ತಿರುಗಿ ಬಂದು ತಾಯಿಯನ್ನು ಕಾಣುವಾಗ ಆತನಿಗಾಗುವಷ್ಟು ಆನಂದ ತಮಗಾಯಿತೆಂತಲೂ ನಾಮದಾರರು ಉದ್ಗರಿಸಿದ್ದು ಕೇಳಿಬಂತು.

SERVICE & PROMPTNESS

A Feature and a Fact with the "POPULAR"

M. VENKATESH PAI,
Banker

Sri Krishna Bhavan,
Mangalore,
25th July, 1938.

The Managing Director
The Popular Insurance Co., Ltd.,
MANGALORE

Policy No 40.

Dear Sir,

I very much appreciate your promptness in settling the claim in less than a week in respect of the above policy on the life of my late lamented Father-in-law, Sri Nagar Vasudeva Shenoy who passed away on the 19th instant

I quite appreciate too the service you rendered the claimant in voluntarily forwarding the Claim Papers and assisting in their completion Then the cheque for Rs 2,558—7—0 is delivered to the claimant and all within the short period of 6 days.

This spirit of service and promptitude evinced by the 'POPULAR' is highly laudable and it is but proper that the Company should be 'POPULAR' It should naturally bring home to the public immense advantages of getting insured with a local Life Office and I would certainly recommend the Company to all

I wish the Company a brilliant career of usefulness and prosperity.

Yours faithfully,
(Sd.) M. Venkatesha Pai.

The Company requires influential Ladies and Gentlemen to work as Agents on most remunerative terms including hereditary renewals.

Apply to:-

THE POPULAR INSURANCE CO. LIMITED,
Head Office: MANGALORE.
Branch: *PROSPECT CHAMBERS, Hornby Road, BOMBAY.*

ಸಹಕಾರ ಸಂಘಗಳ ಮೇಲಿನ ಮಮತೆಯ ಮೂಲಕ ಸರಕಾರವು ಋಣವಿಮೋಚನ ಕಾನೂನಿನ ಕಕ್ಷೆಯೊಳಗಿಂದ ಸಹಕಾರ ಸಂಘಗಳನ್ನು ಪೃಥಕ್ಕರಿಸಬಾರದೆಂದೂ ಅವುಗಳ ಮೇಲೆಯೇ ಸರಕಾರದ ಹೆಚ್ಚಿನ ಲಕ್ಷವಿರಬೇಕೆಂದೂ ನಾವು ಇಂದಿಗೆ ಈ ವಿಷಯವನ್ನು ಕೊಂಚ ವಿಸ್ತಾರದಿಂದ ಪರಾಂಬರಿಸಿದ್ದೇವೆ. ಸಹಕಾರ ಸಂಘಗಳೇ ಹೆಚ್ಚಿನ ಸಾಲಕ್ಕೆ ಕಾರಣವೆಂದು ನಾವಾಗಿ ಈಗ ಸಮೂದಿಸಬೇಕಾಗಿಲ್ಲ. ಸಾಲ ಹುಟ್ಟುವ ಅನುಕೂಲತೆಗಳಿಂದ ಸಾಲ ಹುಟ್ಟದವರಿಗೆ, ವಿಲಾಸಿಗಳಿಗೆ, ವಿಹಾರಿಗಳಿಗೆ, ದುಂದುಗಾರರಿಗೆ ಸಂಘಗಳಿಂದ ಸುಲಭ ಸಾಲ ಸಿಗುವ ಅನುಕೂಲತೆಗಳು ದೊರೆತವು. ಚಾಲಕರು ಸ್ವಾರ್ಥಪರಾಯಣರೂ, ಭ್ರಷ್ಟರೂ ಅಧಿಕಾರಾರೂಢರಾಗಿ ಪತ್ತಿಲ್ಲದವರಿಗೆ ತಾರತಮ್ಯ ವಿಚಾರವಿಲ್ಲದೆ ಸಾಲ ಕೊಟ್ಟು ಜಾಮೀನದಾರರಿಗೆ ಸಂಘದ ಪಾಶದಲ್ಲಿ ಸೇರಿಸಿಕೊಳ್ಳಾಡಿಸುತ್ತಿದ್ದಾರೆ. ಎಲ್ಲರಿಗಿಂತ ಇಂಥ ಜಾಮೀನದಾರ-ಸಾಲಗಾರರೇ ಋಣವಿಮೋಚನೆಯ ಪ್ರಯೋಜನ ಪಡೆಯಲರ್ಹರು. ಆದರಿಂದ ಸರಕಾರವು ಋಣವಿಮೋಚನ ಕಾನೂನನ್ನು ಸಂಘಟಿಸುವಾಗ, ಋಣಭಾರಪೀಡಿತರಾಗಿರುವ ಸಹಕಾರ ಸಂಘಗಳ ಸಾಲಗಾರರಿಗೂ ಜಾಮೀನದಾರರಿಗೂ ವಿಮೋಚನವಾಗುವಂತೆ ಏರ್ಪಡಿಸಬೇಕಾಗಿ ನಾವು ಮುಂದಾಗಿಯೇ ಸೂಚಿಸಿದ್ದೇವೆ. ಈ ವಿಚಾರವನ್ನು ಸರಕಾರವು ಗ್ರಹಿಸಿ ತಕ್ಕ ಏರ್ಪಾಟನ್ನು ತ್ವರ್ಯವೇ ಮಾಡಬೇಕಾಗಿ ನಮ್ಮ ವಿನಂತಿ.

ಬ್ರಿಟಿಶ-ಫ್ರೆಂಚರೊಳಗೆ ಮನಸ್ತಾಪ!

[ನಿರೀಕ್ಷಕನು ಬರೆದುದು.]

ನಾನು ಮೊದಲೇ ಹೇಳಲಿಲ್ಲವೇ; ಬ್ರಿಟಿಶ-ಫ್ರೆಂಚರೊಳಗೆ ಮನಸ್ತಾಪವುಂಟಾಗುವದೆಂದು! ಜೀವದ ಗೆಳೆಯರು ಜೀವದ ಮೇಲೆ ಪ್ರಸಂಗ ಬಂದಾಗ ಶತ್ರುಗಳಾಗುತ್ತಾರೆ. ಆತ್ಮರಕ್ಷಣೆಗಾಗಿ ಇಂಥ ಪ್ರಸಂಗ ಬರುವದು ಸಹಜ. ಆಫ್ರಿಕೆಯೊಳಗಿನ ವಸಾಹತುಗಳ ವಿಷಯದಲ್ಲಿ ಮುಸೊಲಿನಿಯವರಿಗೂ ಫ್ರೆಂಚ ಸರಕಾರಕ್ಕೂ ವಿರೋಧವುಂಟಾದರೆ, ಬ್ರಿಟಿಶ ಸರಕಾರವು ಫ್ರಾನ್ಸ ದೇಶಕ್ಕೆ ನೆರವಾಗಲು ಬದ್ಧವಿಲ್ಲವೆಂದು ಮುಖ್ಯ ಪ್ರಧಾನರು ಸೋಮವಾರ ಪಾರ್ಲಿಮೆಂಟಿನಲ್ಲಿ ಉದ್ಗರಿಸಿದರು. ಇದನ್ನು ಫ್ರೆಂಚ ಪತ್ರಿಕೆಗಳು ತೀವ್ರವಾಗಿ ನಿಷೇಧಿಸಿ, ಈ ಉದ್ಗಾರದಿಂದ ಫ್ರೆಂಚ ವಿರೋಧಕರಿಗೆ ಪುಟ ದೊರಕಿತೆಂದು ಫ್ರೆಂಚ ಪತ್ರಿಕೆಗಳ ಅಂಬೋಣ. ಇತಾಲಿಯ ಪತ್ರಿಕೆಗಳಿಗೆ ಆನಂದವಾಗುವದು ಸಹಜ. ಚೆಂಬರಲೇನರ ಧೋರಣದಿಂದ ನಿಜಸ್ಥಿತಿ ಹೊಳೆದು ಫ್ರೆಂಚರು ವಿವೇಕಿಗಳಾಗುವರೆಂದು ರೋಮದೊಳಗಿನ ಪತ್ರಿಕೆಗಳ ಅಂಬೋಣ. ಚೆಂಬರಲೇನರ ಶಬ್ದಾರ್ಥ ಹೀಗಿದ್ದಿಲ್ಲವಾಗಿಯೂ, ಇತಾಲಿಯೊಡನೆ ಯುದ್ಧವಾಗುವ ಪ್ರಸಕ್ತಿಯಲ್ಲಿ ಫ್ರೆಂಚ ಸರಕಾರಕ್ಕೆ ಸಹಾಯ ಮಾಡ ಹೋಗುವ ಕಾರಣ ಇಲ್ಲವೆಂಬ ಸಂಗತಿಯನ್ನಷ್ಟು ಚೆಂಬರಲೇನರು ಉಲ್ಲೇಖಿಸಿದ್ದರಾಗಿಯೂ ಫ್ರೆಂಚರ ಮೇಲೆ ಪ್ರಸಂಗ ಬಂದಲ್ಲಿ ಬ್ರಿಟಿಶರು ತಮ್ಮಷ್ಟಕ್ಕೆ ಮಿಕಿ ಮಿಕಿ ನೋಡುತ್ತ ಉಳಿಯಲಿಕ್ಕಿಲ್ಲವಾಗಿಯೂ ಬಲ್ಲವರು ಹೇಳುತ್ತಾರಂತೆ! ಚೆಂಬರಲೇನರು ಜನವರಿಯಲ್ಲಿ ರೋಮಕ್ಕೆ ಹೋಗುತ್ತಾರೆ. ಆ ಸಮಯ ಆಫ್ರಿಕೆಯೊಳಗಿನ ವಸಾಹತು, ಸ್ಪೇನದೊಳಗಿನ ಅಂತಃಕಲಹ, ಸುಯೇಜ ಕಾಲುವೆ, ಹಬಸಿ ದೇಶದ ಉದ್ಧಾರ; ಇವೇ ಮೊದಲಾದ ವಿಷಯಗಳು ಪ್ರಾಮುಖ್ಯವಾಗಿ ಚರ್ಚಿಸಲ್ಪಡುವವು. ಹಬಸಿ ಜನಾಂಗವನ್ನು ಮುಸೊಲಿನಿಯವರು ಪಾದಾಕ್ರಾಂತ ಮಾಡಿಕೊಂಡ ಮೂಲಕ ಇತಾಲಿಗೂ ಹಬಸಿ ದೇಶಕ್ಕೂ ಸುಯೇಜ ಕಾಲುವೆಯ ಮುಖಾಂತರ ಹೆಚ್ಚಿನ ವ್ಯವಹಾರವುಂಟಾಗಿದೆ. ಸುಯೇಜ ಕಾಲುವೆಯ ಹಾಸಲುಗಳನ್ನು ಈಗಿದ್ದಂತೆ ವಸೂಲ ಕೊಟ್ಟು ಹಬಸಿ ದೇಶದಿಂದ ಲಾಭ ಪಡೆಯಲು ಮುಸೊಲಿನಿಯವರಿಗೆ ಅನುಕೂಲವಿಲ್ಲ. ಆದರಿಂದ ಆ ದರಗಳನ್ನು ಈಗ ಇಳಿಸಬೇಕಾಗಿಯೂ ಹಬಸಿ ದೇಶದ ಒಡೆತನದಿಂದ ಉಂಟಾದ ಸ್ಥಿತ್ಯಂತರವನ್ನನುಲಕ್ಷಿಸಿ ಸುಯೇಜ ಕಾಲುವೆಯ ಆಡಳಿತೆಯಲ್ಲಿ ತಕ್ಕ ತಿದ್ದುಪಾಟು ಆಗಬೇಕಾಗಿಯೂ ಮುಸೊಲಿನಿಯವರ ನಿಗ್ರಹವಿದೆ. ಟ್ಯೂನಿಸ, ಕೊರ್ಸಿಕಾ, ನೈಸ ಪ್ರದೇಶಗಳ ಜೊತೆಗೆ ಸುಯೇಜ ಕಾಲುವೆಯ ಸಮಸ್ಯೆಯುಂಟಾಗಿದೆ. ಬ್ರಿಟಿಶರು ಯುರೋಪಖಂಡದ ಶಾಂತಿಗಾಗಿ ಈ ಎಲ್ಲ ವಿಷಯಗಳನ್ನು ನಿರ್ಮಲಚಿತ್ತದಿಂದ ಅಂದರೆ ಈಗಿನ ಪರಿಸ್ಥಿತಿಯಲ್ಲಿ ಮುಸೊಲಿನಿ ಪಕ್ಷಪಾತಿಯಾಗಿ ವಿಚಾರಿಸುವರು. ಫ್ರೆಂಚರಂತು ಒಂದು ಇಂಚು ಪ್ರದೇಶವನ್ನು ಪರರಿಗೆ ಒಪ್ಪಿಸಲೊಪ್ಪುವದಿಲ್ಲವಾಗಿ ಮುಖ್ಯ ಪ್ರಧಾನರಾದ ಡಲೆಡೇರ್‌ರವರು ನಿರ್ಧಾರದಿಂದ ನುಡಿಯುತ್ತಾರೆ. ಟ್ಯೂನಿಸದೊಳಗಿನ ಇತಾಲಿ-ಫ್ರೆಂಚ ಪ್ರಜೆಗಳೊಳಗೆ ವೈಮನಸ್ಸುಂಟಾಗಿದೆ. ಇತಾಲಿಯರನ್ನು ದಬ್ಬುವದಕ್ಕಾಗಿ ಫ್ರೆಂಚ ಸರಕಾರವು ದಬ್ಬಾಳಿಕೆಯನ್ನು ಕೈಕೊಂಡಿದೆ. ಇದನ್ನು ಇತಾಲಿಯೊಳಗಿನ ಪತ್ರಿಕೆಗಳು ನಿಷೇಧಿಸುತ್ತವೆ. ಟ್ಯೂನಿಸದಲ್ಲಿ ಭೀಕರ ಪರಿಸ್ಥಿತಿಯುಂಟಾಗಿದೆ.

ಜರ್ಮನಿಯ ಉತ್ತರ ಸೀಮೆಯಲ್ಲಿ ಮೆಮೆಲ್ ಪ್ರಾಂತವಿದೆ. ಇದು ಮೊದಲು ಜರ್ಮನ್ ಪ್ರದೇಶ. ಮಹಾಯುದ್ಧದ ಒಡಂಬಡಿಕೆಯ ಕಾಲಕ್ಕೆ ಇದನ್ನು ಲಿಥುಯಾನಿಯಾ ಜನಾಂಗಕ್ಕೆ ಆಡಳಿತೆಗಾಗಿ ಒಪ್ಪಿಸಿತ್ತು. ತಮ್ಮ ಪ್ರದೇಶ ತಮಗೊಪ್ಪಿಸಬೇಕಾಗಿ ಹಿಟ್ಲರರ ಆಗ್ರಹ. ಇಲ್ಲಿ ಕಳೆದ ವಾರ ಇಲೆಕ್ಶನುಗಳಾದವು. ಜರ್ಮನ್ ಪ್ರತಿನಿಧಿಗಳದೇ ಪ್ರಚಂಡ ಬಹುಮತ. ಜರ್ಮನಿಗೆ ಸೇರಬೇಕೆಂದು ಅವರೆಲ್ಲರ ಅಭಿಪ್ರಾಯ. ಆದರೆ ಅದಕ್ಕೆ ಲಿಥುಯಾನಿಯಾ ಜನಾಂಗದ ಒಪ್ಪಿಗೆಯಿಲ್ಲ. ಮೆಮೆಲ್ ಪ್ರದೇಶವನ್ನು ಲಿಥುಯಾನಿಯಾದವರೇ ಆಳಬೇಕೆಂದು ಬ್ರಿಟನ್, ಫ್ರಾನ್ಸ, ಇತಾಲಿ, ಜಪಾನ ಜನಾಂಗಗಳು ವಿಧಿಸಿದ್ದುಂಟು. ಇದನ್ನು ಜರ್ಮನಿಗೊಪ್ಪಿಸಿದರೆ ತಮ್ಮ ಹಿತಸಂಬಂಧಗಳಿಗೆ ಬಾಧೆ ಬಂತೆಂದು ಬರ್ಲಿನ್‌ದೊಳಗಿನ ಬ್ರಿಟಿಶ-ಫ್ರೆಂಚ ರಾಯಭಾರಿಗಳು ಜರ್ಮನಿಯ ವಿದೇಶ ಸಚಿವರಿಗೆ ಕಂಡು ದೂರಿಕೊಂಡರು. "ಇದನ್ನು ನಾವು ಪಡೆಯುವದೇ," ಎಂಬದಾಗಿ ಹಿಟ್ಲರರ ನಿರ್ಧಾರ! ಟ್ಯೂನಿಶ ಪ್ರಕರಣದಲ್ಲಿಯೂ ಸುಯೇಜ ಕಾಲುವೆಯ ಪ್ರಕರಣದಲ್ಲಿಯೂ ತಮಗೆ ಜರ್ಮನ್‌ರು ನೆರವಾಗಬೇಕೆಂದು ಮೆಮೆಲ್ ಪ್ರದೇಶವನ್ನು ಹಿಟ್ಲರರಿಗೊಪ್ಪಿಸುವ ರಾಜಕಾರಣದಲ್ಲಿ ಮುಸೊಲಿನಿಯವರು ಬೆಂಬಲ ಕೊಡುತ್ತಾರೆ. ಬಹುತರವಾಗಿ ಮೆಮೆಲ್ ಪ್ರಾಂತ ಹಿಟ್ಲರರ ವಶವಾಯಿತೆಂದು ನಾನೆಣಿಸುತ್ತೇನೆ. ಮೆಮೆಲ್ ಪ್ರದೇಶ ಜರ್ಮನಿಯ ವಶವಾದರೆ ಜರ್ಮನ್‌ರೂ ರಶ್ಯರೂ ನೆರೆಹೊರೆಯವರಾಗುತ್ತಾರೆ. ಇವೆರಡೂ ಜನಾಂಗಗಳೊಳಗೆ ತುಂಬ ಮತ್ಸರವಿರುವದರಿಂದ ಮೆಮೆಲ್ ಪ್ರಾಂತವನ್ನು ಪಡೆದರೂ ಹಿಟ್ಲರನು ಸುಮ್ಮಗಿರಲಾರನು. ರುಮಾನಿಯಾ ಪ್ರಕರಣ ಈವಾಗ ತಣಿದಂತೆಯೇ! ರುಮಾನಿಯಾ ದೇಶದೊಡನೆ ವಿನಿಮಯ ಪದ್ಧತಿಯಿಂದ ವ್ಯಾಪಾರ ಮಾಡುವ ತಹನಾಮೆಯಾಗಲಿದೆ; ರುಮಾನಿಯಾದಿಂದ ಜರ್ಮನಿಯು ಪಡೆಯುವ ಸರಕುಗಳ ಬೆಲೆಯನ್ನು ಜರ್ಮನಿಯಲ್ಲಿ ತಯಾರಾಗುವ ಸರಕುಗಳಿಂದಲೇ ತೀರಿಸಬೇಕೆಂದು ತಹನಾಮೆಯಾಗಲಿದೆ. ಈ ತಹನಾಮೆಯ ವಿಶೇಷವೆಂದರೆ: ಜರ್ಮನಿಯು ಕೊಡಲೊಪ್ಪುವ ಸರಕನ್ನು ರುಮಾನಿಯಾ ದೇಶವು ಕೊಂಡು ಜರ್ಮನಿಗೆ ಬೇಕಾದ ಸರಕುಗಳನ್ನು ರುಮಾನಿಯಾ ದೇಶವು ಪೂರೈಸುವದು!! ಕೊಡುವ-ಕೊಳ್ಳುವ ಸರಕುಗಳನ್ನು ನಿಶ್ಚಯಿಸುವ ಸರ್ವಾಧಿಕಾರ ಜರ್ಮನ್‌ರದೇ! ಅಂದ ಬಳಿಕ, ರುಮಾನಿಯಾ ಜನಾಂಗ ಸ್ವತಂತ್ರವಾಗಿದ್ದರೂ, ವ್ಯವಹಾರದಿಂದ ಜರ್ಮನಿಗೆ ಆಧೀನವಾದದ್ದೇ! ಬ್ರಿಟಿಶರು ಪಡೆದ ವಸಾಹತುಗಳನ್ನು ಜರ್ಮನ್‌ರು ಹಿಂತಿರುಗಿ ಪಡೆಯುವ ಬಹು ದೊಡ್ಡ ವ್ಯೂಹ ರಚಿಸಿದ್ದಾರೆ. ಆಫ್ರಿಕೆಯ ವಸಾಹತುಗಳಲ್ಲಿ ಜರ್ಮನ್ ಪಕ್ಷದವರು ತಮ್ಮ ಸಂಪ್ರದಾಯದ ಪ್ರಚಾರ ನಡಿಸುತ್ತಿದ್ದಾರೆ. ದಕ್ಷಿಣ ಆಫ್ರಿಕೆಯ ಪ್ರಿಟೋರಿಯಾದಲ್ಲಿ ಜರ್ಮನ್-ಪಕ್ಷಪಾತಿಗಳು ದಕ್ಷಿಣ ಆಫ್ರಿಕೆಯ ಸೈನ್ಯ ಇಲಾಖೆಯ ಮಂತ್ರಿಗಳಿಗೆ ಇಂಗ್ಲಿಷಿನಲ್ಲಿ ಮಾತಾಡಗೊಡಲಿಲ್ಲ; ಗದ್ದಲ ಮಾಡಿ ಸುಮ್ಮಗಿರಿಸಿದರು. ಲಂಡನಿನೊಳಗೆ ಇರುವ ಜರ್ಮನ್ ಕಂಪನಿಗಳು ತಮ್ಮಲ್ಲಿದ್ದ ಬ್ರಿಟಿಶ ಮತ್ತು ಯಹೂದಿ ನೌಕರರನ್ನು ಒಮ್ಮೆಲೇ ಪದಚ್ಯುತ ಮಾಡಿದವು. ಬ್ರಿಟಿಶ ರಾಜ್ಯದಲ್ಲಿ ಬ್ರಿಟಿಶ ಪ್ರಜೆಗಳಿಗೆ ಅನ್ಯಾಯವಾಗುವ ಸಂದರ್ಭದಲ್ಲಿ ಅವರಿಗೆ ರಕ್ಷಿಸುವ ಅಧಿಕಾರ ಕಾಯಿದೆಯಂತೆ ಬ್ರಿಟಿಶ ಸರಕಾರಕ್ಕಿರುವದಿಲ್ಲವಾಗಿ ಪ್ರಧಾನರು ಪಾರ್ಲಿಮೆಂಟ ಸಭೆಯಲ್ಲಿ ಉತ್ತರ ಕೊಟ್ಟರು. ಕಳೆದ ಬುಧವಾರ ವಿದೇಶ ಪತ್ರಿಕಾ ಸಂಘದ ಭೋಜನ ಸಮಾರಂಭವಾಯಿತು. ಆ ಸಮಯದಲ್ಲಿ ಮುಖ್ಯ ಪ್ರಧಾನರಾದ ಚೆಂಬರಲೇನರವರು ಜರ್ಮನ್ ಪತ್ರಿಕೆಗಳ ಧೋರಣವನ್ನು ಟೀಕಿಸಿದ ಬಗ್ಗೆ ಜರ್ಮನ್‌ರು ಸಮಾರಂಭವನ್ನು ಬಹಿಷ್ಕರಿಸಿದರು; ಜರ್ಮನ್ ರಾಯಭಾರಿಗಳು ಸಹ ಚಿತ್ತೈಸಿದ್ದಿಲ್ಲ. ಜರ್ಮನ್ ಸರಕಾರವು ಸ್ತ್ರೀಯರಿಗಾಗಿ ವಸಾಹತು-ಶಾಲೆಯನ್ನು ಸ್ಥಾಪಿಸಿ ಜರ್ಮನ್-ಹುಡುಗಿಯರಿಗೆ ವಸಾಹತುಗಳಲ್ಲಿ ಹೇಗೆ ನಡಕೊಳ್ಳಬೇಕೆಂಬದರ ಕುರಿತು ಶಿಕ್ಷಣ ಕೊಡುವ ಏರ್ಪಾಟು ಮಾಡಿದೆ! ಈ ಪ್ರಕಾರ ವಸಾಹತು-ರಾಜಕಾರಣವು ಪ್ರಕ್ಷುಬ್ಧವಾಗಿದೆ. ಫ್ರೆಂಚರ ವಸಾಹತುಗಳನ್ನು ಮುಸೊಲಿನಿಯವರಿಗೆ ಒಪ್ಪಿಸಿ ಮುಸೊಲಿನಿಯವರ ಬೆಂಬಲದಿಂದ ಬ್ರಿಟಿಶರು ತಮ್ಮ ವಸಾಹತುಗಳನ್ನು ಕಾಪಾಡಿಕೊಳ್ಳುವ ದುರಾಲೋಚನೆಯಲ್ಲಿದ್ದಾರೆ. ಈ ಯುಕ್ತಿ ಫಲಕಾರಿಯಾದೀತೆಂದು ನಾ ಹೇಳಲಾರೆ. ಕ್ರೆನಬರ್ನ ದೊರೆಗಳು ರಾಜಪಕ್ಷ-ಸಂಘದ ಕನ್ಸರ್ವೇಟಿವ್ಹ ಎಸೋಸಿಯೇಶನಿನ ಸಭೆಯಲ್ಲಿ ಭಾಷಣ ಮಾಡುವಾಗ ವಿದೇಶ ರಾಜ

[ಚಿಕ್ಕ ಪುರವಣಿ ನೋಡಿರಿ.]

ಸ್ಥಾನಿಕ ವೃತ್ತಾಂತ.

ಕುಮಟಾ— ಚನ್ನಾಗಿ ಚಳಿ ಬೀಳುತ್ತಿದೆ. ಹವಾಮಾನ ತಕ್ಕಮಟ್ಟಿಗೆ ನೆಟ್ಟಗಿದೆ. ಆದಾಗ್ಯೂ ಜ್ವರ ದಿಂಗಳ ಬೇನೆ ಇನ್ನೂ ಹಿಂದಾಗಲಿಲ್ಲ.

ಜಿಲ್ಹಾಧಿಕಾರಿಗಳಾದ ರಾ| ಬಬಲೇಯವರು ಮೊನ್ನೆ ರವಿವಾರ ಬೆಳಗಿನ ೯ ಘಂಟೆಗೆ ಇಲ್ಲಿ ಬಂದು ಮುಕ್ಕಾಂ ಮಾಡಿದ್ದಾರೆ. ಕಲೆಕ್ಟರರ ಮುಕ್ಕಾಮು ಇಲ್ಲಿ ತಾ ೨೪ನೇ ತನಕ ಉಂಟು. ಜಿಲ್ಹಾಧಿಪರು ತಮ್ಮ ಭಾವ ರಾ| ಮಧ್ವರಾವ ಬೇಪ್ರಾರರವರ ವಿವಾಹಕ್ಕಾಗಿ ಹೈದರಾಬಾದಿಗೆ ಹೋದವರು ನೆಟ್ಟಗೆ ಇಲ್ಲಿ ಬಂದು ತಲ್ಪಿದ್ದಾರೆ.

ಇಲ್ಲಿಯ ನಗರ ಸಭೆಯ ಚುನಾವಣೆಯನ್ನು ಕೊಂಗ್ರೆಸ ಪರವಾಗಿ ಹೋರಾಡಿಸಬೇಕೆಂದು ಕುಮಟೆಯ ಕೆಲ ಯುವಕರು ಜಿಲ್ಹಾ ಕೊಂ| ಕಮಿಟಿಗೆ ಅರ್ಜಿ ಮಾಡಿದ ಸಂಗತಿ "ವೃತ್ತ"ದಲ್ಲಿ ಈ ಹಿಂದೆ ಪ್ರಕಟವಾಗಿದೆಯಷ್ಟೇ. ಜಿಲ್ಹಾ ಕಮಿಟಿಯವರು ಆ ಅರ್ಜಿಯನ್ನು ಇಲ್ಲಿಯ ನಗರ ಕೊಂಗ್ರೆಸ ಕಮಿಟಿಯ ಅಭಿಪ್ರಾಯಕ್ಕಾಗಿ ಕಳಿಸಿ ಕೊಟ್ಟಿದ್ದರೆಂದು ತಿಳಿಯುತ್ತದೆ. ಅದರಂತೆ ನಗರ ಕೊಂಗ್ರೆಸ ಕಮಿಟಿಯವರು ಸಭೆ ಸೇರಿ ಚುನಾವಣೆಯಲ್ಲಿ ಕೊಂಗ್ರೆಸ ಕಮಿಟಿಯ ಪರವಾಗಿ ಸೇರಬೇಕೆಂದು ಶಿಫಾರಸು ಮಾಡಿರುತ್ತಾರೆಂತಲೂ ಈ ವಿಷಯದಲ್ಲಿ ಚರ್ಚೆ ಮಾಡಲಿಕ್ಕೆ ಜಿಲ್ಹಾ ಕೊಂ| ಕಮಿಟಿಯ ಕಾರ್ಯಕಾರಿ ಮಂಡಳವು ಇದೇ ಬರುವ ತಾ ೨೩ನೇ ಶುಕ್ರವಾರ ಮಧ್ಯಾನ್ಹ ೨ ಘಂಟೆಗೆ ಇಲ್ಲಿಯ ಕೊಂಗ್ರೆಸ ಭುವನದಲ್ಲಿ ಕೂಡುವದಾಗಿಯೂ ತಿಳಿದು ಬರುತ್ತದೆ.

ನಾ| ಸೂರಿಯವರ ಈ ಜಿಲ್ಹೆಯೊಳಗಿನ ಸಂಚಾರದ ಕಾರ್ಯಕ್ರಮ ರದ್ದಾಗಿದೆ, ಬೆಳಗಾವಿಯಿಂದಲೇ ನಾಮದಾರರು ಮುಂಬಯಿಗೆ ಹಿಂತಿರುಗುತ್ತಾರೆಂದು ತಿಳಿಯುತ್ತದೆ.

೧೯೩೭ನೇ ಇಸ್ವಿಯ ಉತ್ತಮ ಗ್ರಾಮಸುಧಾರಣಾ ಕಾರ್ಯ ಮಾಡಿದ ಬಗ್ಗೆ ದಕ್ಷಿಣ ಭಾಗದಲ್ಲಿ ಕೊಡಮಾಡಿದ ಸರ್ ಫ್ರೆಡರಿಕ್ ಸ್ಕೈಕ್ಸ ಗ್ರಾಮಸುಧಾರಣಾ ಢಾಲು ಕಲ್ಲಬ್ಬೆ ಗ್ರಾಮಕ್ಕೆ ಕೊಡಬೇಕೆಂದು ಮುಂಬಯಿ ಸರಕಾರದವರು ನಿರ್ಣಯಿಸಿದ್ದಾರೆ. ಕಲ್ಲಬ್ಬೆ ಗ್ರಾಮದವರು ಸ್ವಾವಲಂಬನದಿಂದ ಸರ್ವಾಂಗೀಣ ಪ್ರಗತಿ ಮಾಡಿಕೊಂಡಿರುತ್ತಾರೆಂತಲೂ, ಊರ ಸ್ವಚ್ಛತೆ ಕಾಪಾಡಿಕೊಂಡಿರುತ್ತಾರೆಂತಲೂ, ಆವಶ್ಯವಿದ್ದಲ್ಲಿ ರಸ್ತೆಗಳನ್ನು ರಚಿಸಿದ್ದಾರೆಂತಲೂ, ಹಲವು ಹಳೇ ಕೆರೆ ಬಾವಿಗಳನ್ನು ದುರುಸ್ತ ಮಾಡಿದ್ದಾರೆಂತಲೂ, ಕಬ್ಬು ಮತ್ತು ಭತ್ತಗಳ ಸುಧಾರಿಸಿದ ಬೀಜಗಳನ್ನು ಉಪಯೋಗಿಸಿ ಹಾಗೂ ಬೆಳ್ಳಿ ಮಾಡುವ ಹೊಸ ಸಾಹಿತ್ಯವನ್ನು ಉಪಯೋಗಿಸಿ ಬೇಸಾಯ ಸುಧಾರಣೆ ಮಾಡಿರುತ್ತಾರೆಂತಲೂ, ಶಾಲೆಯಲ್ಲಿ ಸೂರ್ಯನಮಸ್ಕಾರ ಪದ್ಧತಿಯಿಂದ ವ್ಯಾಯಾಮ ಮಾಡುವ ಕ್ರಮ ಅಮಲಿನ ತಂದಿರುತ್ತಾರೆಂತಲೂ, ಬಾಲವಿವಾಹ ಪದ್ಧತಿಯನ್ನು ನಿಲ್ಲಿಸಿದ್ದಾರೆಂತಲೂ, ಸಮಾರಂಭಗಳಲ್ಲಿ ಅನಾವಶ್ಯಕ ಖರ್ಚು ಮಾಡಕೂಡದೆಂದು ನಿಯಮಗಳನ್ನು ಮಾಡಿ ಅದರಂತೆ ನಡೆಯುತ್ತಿದ್ದಾರೆಂತಲೂ, ಬೆತ್ತ-ಬಿದುರುಗಳಿಂದ ಬುಟ್ಟಿ ಮಾಡುವ ಕಲೆಯನ್ನು ಪ್ರಚಾರದಲ್ಲಿ ತಂದು ಔದ್ಯೋಗಿಕ ಪ್ರಗತಿ ಮಾಡಿರುತ್ತಾರೆಂತಲೂ, ಸರಕಾರದವರು ಮಂಜೂರ ಮಾಡಿರುವ ನಿಯಮಾವಳಿಯಂತೆ ನಡೆದು ಗ್ರಾಮಸುಧಾರಣೆ ಮಾಡುವ ಪ್ರಯತ್ನ ನಡೆಸಿರುತ್ತಾರೆಂತಲೂ ಸರಕಾರವು ನಮೂದಿಸಿರುತ್ತದೆ.

ಪ್ರಾಂತಾಧ್ಯಕ್ಷರಾದ ದೇ| ಭ| ಗಂಗಾಧರರಾವ ದೇಶಪಾಂಡೇಯವರು ಇತ್ತ ಕಡೆಗೆ ಸಂಚಾರಕ್ಕೆ ಬಂದಾಗ, ತಾ ೨೬ನೇಗೆ ಅವರ ಹಸ್ತದಿಂದ ಚಂದಾವರದಲ್ಲಿ ಕನ್ನಡ ಪ್ರಾಥಮಿಕ ಶಾಲೆಯ ಶಂಕುಸ್ಥಾಪನೆ ಮಾಡಿಸಲಾಯಿತು. ಶಾಲೆಯ ಕಟ್ಟಡದ ಬಗ್ಗೆ ನಿಧಿಯೊಂದು ಕೂಡಿಸಲಾಗಿದೆ. ಈ ನಿಧಿಗೆ ಈ ತನಕ ರೂ ೩೫೧-೬-೦ ದೊರೆತಿವೆ. ವಂತಿಕೆ ಕೊಟ್ಟವರಲ್ಲಿ ಈ ಮುಂದೆ ಕಾಣಿಸಿದವರು ಪ್ರಮುಖರಿದ್ದಾರೆ:- ರಾ| ಸೋರಾಬ ಇಂಜಿನಿಯರ ರೂ ೫೧, ಡಾ| ವ್ಹಿ ಕೇ ಚಂದಾವರಕರ ರೂ ೫೧, ರಾ| ಎಸ್ ಎಸ್ ಬಲಸೇಕರ ರೂ ೨೫, ರಾ ಡಿ ಎನ್ ಸ್ಥಳೇಕರ ರೂ ೨೫, ರಾ| ಎಸ್ ಎಮ್ ಮಾಸೂರಕರ ರೂ ೨೦, ದೇ| ಭ| ಗಂಗಾಧರರಾವ ದೇಶಪಾಂಡೇ ರೂ ೧೦, ರಾ| ಈ ಎಸ್ ಮಾಸೂರಕರ ರೂ ೧೦, ರಾ ಎಲ್ ಕೇ ಶಾನಭಾಗ ರೂ ೧೦, ರಾ| ಡಿ ವ್ಹಿ ನಾಡಕರ್ಣಿ ರೂ, ೧೦. ಮುಂಬಯಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರಾ| ವಿಠ್ಠಲರಾವ ನಾರಾಯಣರಾವ ಚಂದಾವರಕರರು ಈ ನಿಧಿಗೆ ರೂ ೫೦೦ ಕೊಡುವ ಆಶ್ವಾಸನೆ ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಕಳೆದ ತಾ ೧೪ರ "ವೃತ್ತ"ದಲ್ಲಿ ಪ್ರಕಟವಾದ ರಾ| ಗಾಂವಕಾರ ಬೀರಣ್ಣಾ ನಾಯ್ಕರ ಪತ್ರವನ್ನನುಲಕ್ಷಿಸಿ ನಾಡುಮಾಸ್ಕೇರಿಯ ಶ್ರೀ ಶಾಂತಿಕಾ ಪರಮೇಶ್ವರಿ ದೇವಿಯ ನಾಲು ಭಜಕರು ಬರೆದು ತಿಳಿಸುವದೇನಂದರೆ — "ರಾ| ಬೀರಣ್ಣಾ ನಾಯ್ಕರ ಬರೆವಣಿಗೆ ನೋಡಿ ಸೋಜಿಗವೆನಿಸಿತು. ಶ್ರೀ ಶಾಂತಿಕಾ ಪರಮೇಶ್ವರಿ, ಶ್ರೀ ಬೀರದೇವ ಮತ್ತು ಕಲಶ ದೇವರ ಗುಡಿಗಳು ಜೀರ್ಣವಾಗಿ ೧೫-೨೦ ವರ್ಷಗಳಿಂದವು ಕೆಲವು ಉತ್ಸವಗಳನ್ನು ದೇವರ ಅಪ್ಪಣೆಯಾದ್ದರಿಂದ ನಿಲ್ಲಿಸಿತ್ತು. ನವರಾತ್ರಿ ಪೂಜೆ, ಹೊಸ್ತಲಹಬ್ಬ ಇವು ನಡಿಯುತ್ತಿದ್ದವು. ಈಗಿನ ಮೊಕ್ತೇಸರರು ಪ್ರಯತ್ನಪಟ್ಟು ಗುಡಿಗಳನ್ನು ಕಟ್ಟಿಸಿ ಶಾಂತಿಹೋಮ ಮಾಡಿಸಿದ್ದಾರೆ. ಗಾಂವಕಾರ-ಮೊಕ್ತೇಸರರಲ್ಲಿ ತಕ್ರಾರುಗಳಿಲ್ಲ. ಅಳೀಹಬ್ಬ, ಮಾಸ್ತಿಪೂಜೆ ಇವು ಗ್ರಾಮಕ್ಕೆ ಸಂಬಂಧವಿದ್ದ ಸಂಗತಿಗಳಲ್ಲ. ಗಾಂವಕಾರ ಕುಟುಂಬದವರು ತಮ್ಮ ಪರವಾಗಿ ಯಾರೊಬ್ಬರಿಗೆ ನೇಮಕ ಮಾಡಿ ಕೆಲಸ ಮಾಡಿದರೆ ಎಲ್ಲ ಕೆಲಸ ಸುಸೂತ್ರ ನಡೆಯುವಂತಿವೆ. ಶ್ರೀ ದೇವರು ಅವರಿಗೂ ಜನರಿಗೂ ಸದ್ಬುದ್ಧಿ ಕೊಟ್ಟು ಎಲ್ಲ ಸೇವಾ-ವಿನಿಯೋಗಗಳನ್ನು ಸರಿಯಾಗಿ ನಡಿಸಿಕೊಳ್ಳಲೆಂದು ಪ್ರಾರ್ಥಿಸುತ್ತೇವೆ" ಇತ್ಯಾದಿ.

ಹೊನ್ನಾವರ— ತಾ. ೧೩ನೇಗೆ ಸಹಕಾರ ಸಂಘಗಳ ರಜಿಸ್ಟ್ರಾರರು ಇಲ್ಲಿಯ ಅರ್ಬನ್ ಬೇಂಕಿಗೆ ಭೆಟ್ಟಿ ಕೊಟ್ಟು ತಪಾಸಣೆ ಮುಗಿಸಿದರು. ಹೊಸ ಚಾಲಕ ಮಂಡಳದ ಚುನಾವಣೆ ಇನ್ನೂ ಆಗಲಿಲ್ಲೆಂಬ ಮಾತು ಅವರಿಗೆ ತಿಳಿಯಿತು. ಆಗ ಇದೇ ಬರುವ ತಾ ೧೫-೧-೧೯೩೯ರೊಳಗೆ ಗುಪ್ತ ಮತದಾನ ಪದ್ಧತಿಯಿಂದ ಹೊಸ ಚಾಲಕರ ಆಯ್ಕೆ ಮಾಡುವ ವ್ಯವಸ್ಥೆ ಮಾಡಬೇಕಾಗಿ ಚೆಅರಮನ್ನರಿಗೆ ಅಪ್ಪಣೆಯಾಗಿದೆ. ಸಾಹೇಬರು ಬಂದಾಗ ಜಿಲ್ಹಾಧ್ಯಕ್ಷ ರಾ| ಶಾಸ್ತ್ರಿಯವರೂ ಬೇಂಕಿಗೆ ಬಂದಿದ್ದರು. ಈಗ ಕೋರ್ಟುಗಳಲ್ಲಿ ನ್ಯಾಯಾಧೀಶರು ಸಾವಕಾರರಿಗೆ ೩-೪ ಸಲೆ ಬಡ್ಡಿ ಕೊಡಿಸುತ್ತಾರೆಂತಲೂ ಬೇಂಕಿನ ಬಡ್ಡಿಯ ದರವನ್ನು ೪-೪ಕ್ಕೆ ಇಳಿಸಬಹುದಾಗಿಯೂ ಸೂಚನೆ ಮಾಡಿದರು. ಬೇಂಕಿನವರು ಈ ವರ್ಷ ೭॥ಯಂತೆ ಲಾಭ ಹಂಚಿಕೊಂಡಿದ್ದಾರೆಂತಲೂ ಇಷ್ಟು ದೊಡ್ಡ ಪ್ರಮಾಣದ ಮೇಲೆ ಇನ್ನಾವ ಸಹಕಾರಸಂಸ್ಥೆಯೂ ಲಾಭ ಹಂಚಿರುವದಿಲ್ಲವಾಗಿಯೂ ಒಪ್ಪಿರು ಸೂಚಿಸಿದರು. ಸಾಹೇಬರು ಪಕ್ಷ-ಪಂಗಡಗಳನ್ನು ಮಾಡಿಕೊಳ್ಳದೆ ಒಮ್ಮನಸ್ಸಿನಿಂದ ಲೋಕಮತಾನುವರ್ತಿಯಾಗಿ ದುಡಿಯಿರೆಂದು ನಾಲ್ಕು ಸವಿ ಮಾತುಗಳನ್ನು ಹೇಳಿ ತೆರಳಿ ಹೋದರು. ಸಾಹೇಬರ ಅಪ್ಪಣೆಯಂತೆ ಬರುವ ತಾ. ೧೫ರೊಳಗೆ ಹೊಸ ಚಾಲಕರ ಚುನಾವಣೆಯಾಗಬೇಕು. ಅದರ ಮತದಾರರ ಯಾದಿಯು ಇನ್ನೂ ಹೊರಬಿದ್ದಿರುವದಿಲ್ಲ.

ಇಲ್ಲಿಯ ಮ್ಯುನಿಸಿಪಾಲಿಟಿಯ ಚೆಅರಮನ್‌ರಾದ ರಾ| ಪಿ ಜಿ ಫರ್ನಾಂಡೀಸರವರು ಮಧುಮೇಹವಿಕಾರದಿಂದ ಬುಧವಾರ ಕ್ರಿಸ್ತವಾಸಿಗಳಾದರೆಂದು ತಿಳಿಸಲು ವಿಷಾದವಾಗುತ್ತದೆ. ಕ್ರಿಸ್ತವಾಸಿಗಳು ಸರಳ ಸ್ವಭಾವದವರಾಗಿದ್ದು ಲೋಕಹಿತಕಾಂಕ್ಷಿಗಳಾಗಿದ್ದರು. ಮೃತಾತ್ಮರಿಗೆ ಶಾಂತಿ ದೊರೆಯಲಿ.

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್‌ಕ್ಯೂರ್

ಲಿವ್ಹರ್ ಮತ್ತು ಯಕೃತ್ ವಿಕಾರಗಳ ಮೇಲೆ ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ:- ಅರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ.

ಶಿರಸಿ— ಈ ವಿಪರೀತ ಕಳ್ಳರ ಕಾಟ ಮಿಗಿಲಾಗಿದೆ ಜಿಲ್ಹಾ ಪೋಲೀಸ ಸಾಹೇಬರ ಮುಕ್ಕಾಮು ಈಗ ಇಲ್ಲಿದೆ.

ಅಡಿಕೆ ಧಾರಣೆ ಕಾಸು ಏರಿದೆ ಇನ್ನೂ ಏರುವ ಲಕ್ಷಣಗಳು ತೋರುವದರಿಂದ ವ್ಯಾಪಾರಿಗಳು ಕೈಬಿಟ್ಟು ವ್ಯಾಪಾರ ಮಾಡುವದಿಲ್ಲ.

ಕಳೆದ ಶುಕ್ರವಾರ ಶ್ರೀ ಮಾರಿಮ್ಮನವರ ಕಾರ್ತಿಕೋತ್ಸವವಾಯಿತು. ಉತ್ಸವದ ಕಾಲಕ್ಕೆ ರಾ॥ ರಾಮಾನಂದ ಕಾಮತರ ಅದ್ಭುತ ಶಕ್ತಿಪ್ರಯೋಗಗಳಾದವು. ಶ್ರೀ ದೇವರ ಭಂಡಾರದಿಂದ ಅವರಿಗೆ ಬಹುಮಾನ ಕೊಡಲಾಯಿತೆಂದು ತಿಳಿಯುತ್ತದೆ

ಕಾರವಾರ— ಕಾರವಾರ ವಿಭಾಗದ ಅಸಿಸ್ಟಂಟ ಕಲೆಕ್ಟರರಾದ ರಾ॥ ವೆಂಕಟಪ್ಪಯ್ಯನವರಿಗೆ ವರ್ಗವಾದಂತೆ ಅವರ ಸ್ಥಳದಲ್ಲಿ ರಾ॥ ಎಲ್. ಜಿ. ರಾಜವಾಡೇಯವರು ಬಂದಿದ್ದಾರೆ.

ಹಿಂದೆ ನಮ್ಮ ಜಿಲ್ಹೆಯಲ್ಲಿ ಡೆಪ್ಯುಟಿ ಇನ್ಸಪೆಕ್ಟರರಾಗಿದ್ದ ಮತ್ತು ಕೆಲವು ವರ್ಷಗಳ ಹಿಂದೆಯೇ ಸೇವಾನಿವೃತ್ತರಾಗಿದ್ದ ಮಿ। ಫರ್ನಾಂಡೀಸರವರು ಕಳೆದ ಶುಕ್ರವಾರ ತಾ. ೧೬ ಕ್ಕೆ ಕ್ರಿಸ್ತವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ

ಪ್ರವಾಸಿ ಜನರಿಗೆ

ಊಟ-ಉಪಚಾರಗಳ

ಉತ್ತಮ ವ್ಯವಸ್ಥೆ.

ಮಾಧವಾಶ್ರಮ,

ಕಾರವಾರ.

ಮಧ್ಯವರ್ತೀ ಸ್ಥಳ,

ಉತ್ಕೃಷ್ಟ ಊಟ,

ಉತ್ತಮ ಹವೆಯ ಕೋಣೆಗಳು,

ಊಟ-ಉಳಕೊಳ್ಳುವ ಅನುಕೂಲತೆ!

ಚಕ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಿಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು.

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ, ಹೊಟ್ಟೆ ದೊಡ್ಡದಾಗುವಿಕೆ, ಹಸುರು ನರಗಳು, ಕಾಮಿಲೆ, ಗಡ್ಡೆರೋಗ, ಕೋವೆರೋಗ, ಕೈ-ಕೈ ಬಾವುಗಳಿಗೆ ದಿವ್ಯೌಷಧ!

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3.

ಏತಕ್ಕೆ ಚಿಂತಿಸುವಿರಿ?



ಅನೇಕ ಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ವರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ। ಬಿ ಎನ್. ಶ್ರೀನಿವಾಸರಾವ್,
ಲಿವ್ವರ್ ಸ್ಪೆಶಲಿಸ್ಟ,
ಎಂ. ವಿ. ಪ್ರಾಸಾದಿಕ ಔಷಧಾಲಯ,
ಶಿವಮೊಗ್ಗಾ

ಇವರಲ್ಲಿ ವಿಚಾರಿಸಿರಿ

ಏಜಂಟ—

ಸುಬ್ರಾಯ ಸೀತಾರಾಮ ಹೆಗಡೆ, ಶಿರ್ಸಿ

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,

ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! ಮಿತವಾದ ದರಗಳು! ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವೀಸುಗಳು ಈ ವರೆಗೆ ಕಾಸರಕೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದು, ತಾರೀಕು 28—4—1938ರಿಂದ **ಕಾಸರಕೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು. ದಕ್ಷಿಣ ಕನ್ನಡ ಜಿಲ್ಹೆಯಿಂದ ಬೆಳಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಿಗೆ ತಲಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತವೆ. ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಮಿತ ದರ! — ನಿಶ್ಚಿತ ಸಮಯ!! — ನೌಕರರ ವಿನಯ-ನಮ್ರತೆ!!!

ಇವುಗಳಲ್ಲವೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,
UDIPI. S. KANARA.

ವಾರ್ತೆಗಳು.

(೨ನೇ ಪಾನದಿಂದ ಮುಂದುವರಿಸಿದ್ದು)

ಾರವು ಕೂಡಲೆ ಹೊರಹೋಗಬೇಕಾಗಿ ವಿಧಿಸಿದಂ ಯೇ ೦ || ಅಲಿಖಾನರವರು ಮಂಗಳವಾರ ಲಂಡನ್‌ಗೆ ಹೋಗಿ ತಲ್ಪಿದ್ದಾರೆ ೦ | ಅಲಿಖಾನರು ಹೊರಹೋಗಬೇಕೆಂದು ವಿಧಿಸಿದ ಹುಕುಮಿನ ಮೇಲೆ ತಾರೀಕು ಇಲ್ಲ ಫ್ರೆಂಚ ಪ್ರಧಾನರ ಸಹಿ ಇಲ್ಲ ೦| ಅಲಿಖಾನರವರು ಪಂಜಾಬ ಪ್ರಾಂತದ ಕರ್ನಾಲ ಪ್ರಾಂತದ ನಿವಾಸಿಗಳು ಜಹಗೀರದಾರರು | ಉಮದ್ರಾರು ಅಲಿಖಾನರವರ ಮಗಂದಿರು ಫ್ರೆಂಚ ಸರಕಾರವು ಇವರ ಮೇಲೆ ಏನೋ ಒಂದು ಸಂದೇಹ ಹಿಡಿದು ಕೊಂಡಿಟ್ಟಿರು ಇವರು ಇಕೋಲ್ ಹೂಟ್ಸ ಇಟೂಡ್ಸ ಇಂಟರ ನೆಶನೇಲದಲ್ಲಿ ಕಲಿಯುತ್ತಾರೆ ಖರ್ಚಿಗೆ ಹಣ ತರಿಸುವ ಪ್ರಯತ್ನ ಮಾಡಿದರ ೦ | ಅಲಿಖಾನರವರು ಪಂಜಾಬದಿಂದ ಹಣ ಒರವ ಸಂಗತಿಯನ್ನು ತಮ್ಮ ಸದ್ದಿದ್ದ ಬೇಂಕ ಪುಸ್ತಕಗಳ ಮೇಲಿಂದ ಸಮಾಧಾನ ಮಾಡಿದರು ಆದರೂ ಸರಕಾರಕ್ಕೆ 'ನಿಮ್ಮ ಮೇಲೆ ಆಕ್ಷೇಪವಿಲ್ಲ ಬೇರೊಬ್ಬರ ಅಂಬೋಣದ ಮೇರೆಗೆ ನಿಮಗೆ ಹೊರಹಾಕುವ ಹುಕುಮು ಆಗುತ್ತದೆ" ಹೀಗೆ ಪೋಲೀಸರು ೦ | ಅಲಿಖಾನರವರಿಗೆ ಹೇಳಿದರು ಈ ಪ್ರಕಾರ ಹೇಳಿದ್ದು ಮಾಡಲಸಾಧ್ಯ ಹೊರಹಾಕಲಾಗಿ ೦ ಅಲಿಖಾನರವರು ಲಂಡನಿಗೆ ಹೋಗಿ, ಬ್ರಿಟಿಶ ರಾಯಭಾರಿಗಳ ಭೆಟ್ಟಿಯಾದರು ಕೆಲ ಸಮಯದ ಬಳಿಕ ಪಾರೀಸ ಪಟ್ಟಣಕ್ಕೆ ಹೋಗಬಹುದೆಂದು ರಾಯಭಾರಿಗಳು ಅಪ್ಪಣೆ ಕೊಟ್ಟರು ಹಾಗಿಯೇ ಅಲಿಖಾನರವರು ಪಾರೀಸ ಪಟ್ಟಣಕ್ಕೆ ಹಿಂತಿರುಗಿದರು ಬೇಕಷ್ಟು ಕಾಲ ಪಾರೀಸದಲ್ಲಿ ಉಳಿಯಬಹುದೆಂದು ಫ್ರೆಂಚ ಸರಕಾರದ ಹುಕುಮು ಆಗಿರುವದಾಗಿ ಪೋಲೀಸ ಅಧಿಕಾರಿಗಳು ತಿಳಿಸಿದ್ದರು ಆದಾಗ್ಯೂ ಕಳೆದ ಸೋಮವಾರ ಕೂಡಲೇ ಹೊರಟು ಹೋಗಬೇಕಾಗಿ ಫ್ರೆಂಚ ಸರಕಾರದ ಹುಕುಮು ! ಪಾರೀಸದೊಳಗಿನ ಬ್ರಿಟಿಶ ರಾಯಭಾರಿಗಳ ಕಡೆಗೆ ಮಧ್ಯಸ್ಥಿಕೆ ನಡಿಸಿ ಒಂದು ಹಪ್ತೆ ಅವಧಿಯನ್ನಾದರು ಸಂಪಾದಿಸಿ ಕೊಟ್ಟಲ್ಲಿ ಹೊರಡಿಸುವ ವ್ಯವಸ್ಥೆ ಮಾಡಲನುಕೂಲವಾಗುವದಾಗಿ ೦ ಅಲಿಖಾನರವರೂ ಪರಿಪರಿಯಿಂದ ಹೇಳಿಕೊಂಡರೂ ರಾಯಭಾರಿಗಳು ಒಪ್ಪಲಿಲ್ಲ "ತ್ವರಿತ ಪಾರೀಸ ಇಲ್ಲಿಂದ ಹೋಗಿಬಿಡಿ" ಹೀಗೆ ಅವರು ಹೇಳಿದರು ೦ ಅಲಿಖಾನರವರಿಗೆ ಒಮ್ಮೆಲೆ ಹೊರಹಾಕಿರುವ ವಿಧಿ ಮತ್ತು ಈ ಕುರಿತು ಪಾರ್ಲಮೆಂಟಿನಲ್ಲಿ ಪ್ರಶ್ನೆ ಕೇಳಲು ಪಾರೀಸದೊಳಗಿನ ಬ್ರಿಟಿಶ ರಾಯಭಾರಿಯಿಂದ ಮಾಹಿತಿ ತರಿಸಲಾಗುವದೆಂದು ಬ್ರಿಟಿಶ ಪ್ರಧಾನ ಮಂಡಳದ ಪರವಾಗಿ ಉತ್ತರ ಕೊಡಲಾಗಿದೆ ವಿದೇಶಗಳಲ್ಲಿ ಹಿಂದೀಯರಿಗೆ ಬ್ರಿಟಿಶ ಸರಕಾರದ ರಕ್ಷಣ ಪಡಿಲ್ಲವೆಂದು ಜನಾಭಿಪ್ರಾಯವಾಗಿದೆ

— ಆಗಾಗೊಳಗೆ ಕಾಂಗ್ರೆಸ ಪಕ್ಷವು ಸ್ವತಂತ್ರ ಕ್ವಾಡವಾಂಡರ ಸರಕಾರ ಮಾಡಿ ಸ್ಥಾಪಿಸಿದ ಸಮ್ಮಿಶ್ರ ಪ್ರಧಾನ ಮಂಡಳದ ವಿರುದ್ಧ ಯುದ್ಧ ಯ ... ಪಂಜಾಬ ಪ್ರಧಾನ ಮಂಡಳಕೆ ದುರ್ಭಾಗ್ಯದ ಕೆಟ್ಟ ಸೂಚಿಸಿದ ಅಸಂಬ್ಲಿಯು ... ಕಾಂಗ್ರೆಸ ಪಕ್ಷದ ಒಳ ಸಿದ್ಧ ... ಸಭಾಸದರು ... ಪ್ರಧಾನ ಮಂಡ ದ ಸಹಿತ ... ಬಿಡಗಡೆ ಮಾಡಲಿಕ್ಕಿಲ್ಲ ... !!

ಶ್ರೀ ಭುವನೇಶ್ವರಿ ಪ್ರಸನ್ನ ||

ಶ್ರೀ ಭುವನೇಶ್ವರೀ ಸ್ಪಿನಿಂಗ ಲೂಮ್ಸ, ಗೋಕರ್ಣ.

(ಉತ್ತರ ಕನ್ನಡ)

ಬನ್ನಿರಿ! ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ!! ಬನ್ನಿರಿ!!!

ಇಲ್ಲಿಯ ಕೈಮಗ್ಗದಲ್ಲಿ ತಯಾರಾದ ಮಾಲುಗಳನ್ನು ಒಮ್ಮೆ ನೋಡಿರಿ!

ಪಕ್ಕಾ ಬಣ್ಣ! ಖಾತ್ರಿ ಮಾಲು!! ಜಿಲಿ ಕಡಿಮೆ!!!

ನಮ್ಮ ಮಗ್ಗದಲ್ಲಿ

ತರತರದ ಧೋತರಗಳು ನವನಮೂನೆಯ ಶೀರೆಗಳು, ಕಿರಿಗೆಗಳು, ಪಂಜಿಗಳು

ಇವಲ್ಲದೆ ಇನ್ನೂ ಅನೇಕ ಹೊಸ ಹೊಸ ನಮೂನೆಯ ಜವಳಿಗಳು

ರೋಕಾಗಿಯೂ ಬಿಕ್ಕಿಯಾಗಿಯೂ ಯೋಗ್ಯ ಬೆಲೆಗೆ ಸಿಗುತ್ತವೆ

ಮಾಲಿನ ಬಣ್ಣದ ಬಗ್ಗೆ ಗ್ಯಾರಂಟಿ.

ಆರ್ಡರಿನ ಜೊತೆಗೆ ಅರ್ಧ ಹಣ ಮುಂಗಡ ಕೊಟ್ಟಲ್ಲಿ

ಒಂದು ತಿಂಗಳಲ್ಲಿ ಆರ್ಡರಿನಂತೆ ಮಾಲು ಪೂರೈಸಲಾದೀತು

☞ ಕೈಯಿಂದ ನೆಯ್ದ ನೂಲು ಕೊಂಡುಕೊಳ್ಳುತ್ತೇವೆ ಇಷ್ಟಪಟ್ಟವರಿಗೆ ಆ ನೂಲಿನಿಂದ ಬೇಕಾದ ಬಟ್ಟೆಗಳನ್ನು ತಯಾರಿಸಿ ಕೊಡುತ್ತೇವೆ

ನಮ್ಮಲ್ಲಿ ಮಾಲು ಖರೀದಿಸುವಲ್ಲಿ ಬಣ್ಣ ಎಲ್ಲವೂ ಖಾತ್ರಿಯಾಗುವದು

ಡಿ. ಎನ್ ಗೋಪಿಭಟ್ಟ,
ಪ್ರೊಪ್ರಾಯಟರ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ [ಪೊಟ್ಟಣಕ್ಕೆ 0 1 0

ಶ್ರೀಕರ ಕಸ್ತೂರೀ ಮಾತ್ರೆ.

ಸುವಾಸನೆಯುಳ್ಳ ಈ ಮಾತ್ರೆ ಮಕ್ಕಳ ಮತ್ತು ದೊಡ್ಡವರ ನಗಡಿ, ಕೆಮ್ಮು, ಅಜೀರ್ಣ, ಜ್ವರ ಮುಂತಾದವುಗಳಿಗೆ ಸಿದ್ಧೌಷಧ ಬೆಲೆ 0—4—0 0—2—0

ಶ್ರೀಕರ ಬಾಲಸಂಜೀವಿನಿ.

ಒಕ್ಕ ಮಕ್ಕಳ ಮಂದಜ್ವರ, ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—4—0

ದೊರೆಯುವ ಸ್ಥಳ ಹೊನ್ನಾವರ ಕಲ್ಯಾಣಪುರ ಬ್ರದರ್ಸ ಕುಮಟಾ ದೇವಪ್ಪಾ ಅಯ್ಯು ನಾಯ್ಕ, ದಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ವಸ್ತಿಕ ಫಾರ್ಮಸಿ

ಪತ್ತೆ ನಂಜನಗೂಡು ಸದ್ವೈದ್ಯಶಾಲಾ, ಬ್ರೆಂಚ್ ರಥಬೀದಿ, ಮಂಗಳೂರು.

ಬನ್ನಿರಿ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೋಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ವರ್ಗದ ಪರಊರಿನ ಪ್ರವಾಸಿಕರಿಗೂ ಹುಬ್ಬಳ್ಳಿ, ಧಾರವಾಡ ಬೆಳಗಾಂವ ಕಡೆಗೆ ಹೋಗುವ ಟ್ರಿಪ್ಪಲರಿಗೂ ಉಳಕೊಳ್ಳಲಿಕ್ಕೂ ಇತರ ಉಪಹಾರಕ್ಕೂ ಬಹಳ ಸೌಕರ್ಯವೃದ್ಧಾಗಿ ಇತ್ತೀಚಿಗ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ಜಾಹೀರ ನೋಟೀಸು.

ಪಾರ್ವತಿ ಕೋಂ ನಾರಾಯಣ ನಾಯ್ಕ ಇವರು ತಾರೀಖು ೧೨—೧೨—೧೯೩೮ನೇ 'ಕಾನಡಾ ವೃತ್ತ'ದ ಪಂಚಿಕೆಯಲ್ಲಿ ಜಾಹೀರಪಡಿಸಿದ ನೋಟೀಸಿಗೆ ಉತ್ತರವಾಗಿ ನಾರಾಯಣ ಕೃಷ್ಣ ನಾಯ್ಕ ಬಸ್ತಿಕೇರಿ, ಸಾಕೀನ ಹಿರೇಗುತ್ತಿ ಇವನು ಈ ಮೂಲಕ ತಿಳಿಸುವದೇನಂದರೆ — ನನ್ನ ಮದುವೆಯ ಹೆಂಡತಿಯಾಗಿರುತ್ತಿರುವ ಪಾರ್ವತಿ ಕೋಂ ನಾರಾಯಣ ನಾಯ್ಕ ಇವಳಿಗೆ, ನಾನು ನಿಷ್ಕಾರಣವಾಗಿ ಹೊಡೆದು ಬಡಿದು ದುಃಖಪತ್ತು ಕೊಟ್ಟಿದ್ದಾಗಲಿ, ಅವಳ ಮೈಮೇಲಿನ ಚಿನ್ನದ ಯಾ ಇತರೇ ಜಾತಿಯ ದಾಗಿನೆಗಳನ್ನು ಕಸಕೊಂಡದ್ದಾಗಲಿ, ಗರ್ಭಿಣಿಯಾದ ಅವಳನ್ನು ನನ್ನ ಮನೆಯಿಂದ ಹೊರಗೆ ಹಾಕಿದ್ದಾಗಲಿ ಇರುವದಿಲ್ಲ ಹಾಗೆ ಮಾಡುವ ಕಾರಣವು ಸಹ ನನಗೆ ಇದ್ದಿಲ್ಲ ಮತ್ತು ಇರುವದಿಲ್ಲ ಅವಳಿಗೆ ಲಗ್ನದ ಕಾಲದಲ್ಲಿ ನನ್ನ ಮನೆಯಿಂದ ಹಾಕಿದ ಚಿನ್ನದ ಸುವರ್ಣಾಭರಣಗಳು ಅವಳ ತಾಬಾದಲ್ಲಿ ಇರುತ್ತವೆ ಸದ್ರಿಯವಳಿಗೆ ಅವಳ ತಂದೆಯ ಮನೆಯಿಂದ ಯಾವದೇ ಕಾಲದಲ್ಲಿ ಏನೊಂದು ಆಭರಣಗಳನ್ನು ಹಾಕಿರುವದಿಲ್ಲ ಸದ್ರಿಯವಳು ತನ್ನ ಜೀವನಾಂಶದ ಬಗ್ಗೆ ಕಲಂ ನಡಿಸುವ ತಯಾರಿಯಲ್ಲಿದ್ದ ಸಂಗತಿ ನನಗೆ ಗೊತ್ತಿದ್ದದ್ದಾಗಲಿ ಅವಳಿಗೆ ಜೀವನಾಂಶ ಸಿಗಬಾರದೆಂಬುವ ಉದ್ದೇಶ್ಯದಿಂದ ನನ್ನ ಆಸ್ತಿ ಪರಾಧೀನ ಮಾಡುವ ಇಚ್ಛೆಯಿಂದ ನಾನು ಇದ್ದದ್ದಾಗಲಿ ಇರುವದಿಲ್ಲ ಅವಳಿಗೆ ಯಾವದೇ ತರದಿಂದ ವಂಚನೆ ಮಾಡುವ ಇರಾದೆ ನನ್ನದಿದ್ದಿಲ್ಲ ಮತ್ತು ಇರುವದಿಲ್ಲ ಒಬ್ಬಂಟಿಗನಾದ ನನ್ನ ಬಾಳ್ವೆಯನ್ನು ಹಾಳು ಮಾಡುವ ದುರುದ್ದೇಶ್ಯದಿಂದ ಸದ್ರಿಯವಳ ತಂದೆ ತಾಯಿಯವರು, ತನ್ನ ಮಗಳು ನಿರಪರಾಧಿಯಳೆಂತಾ ತೋರಿಕೆಗೆ ಪ್ರತ್ಯಕ್ಷ ಕಾಣಿಸುವ ದೆಸೆಯಿಂದ ಸದ್ರಿಯವಳಿಗೆ ದುರ್ಬೋಧನೆ ಕೊಟ್ಟು, ನಿರಾಧಾರವಾದ ಮತ್ತು ಸುಳ್ಳು ಮಜಕೂರಿನ ನೋಟೀಸು ಕೊಡಿಸಿದ್ದಿರುತ್ತದೆ ಸದ್ರಿ ಜಾಹೀರ ನೋಟೀಸು ನನಗೆ ಏನೊಂದು ತರದಿಂದ ಬಾಧಿಸಲಾರದು

ಈ ಹಿಂದೆ ಅನೇಕಾವರ್ತಿ ಸದ್ರಿ ಪಾರ್ವತಿ ಇವಳು ತನ್ನ ತಂದೆ ತಾಯಿಯವರ ದುರ್ಬೋಧನೆಗೆ ಒಳಪಟ್ಟು, ನನ್ನ ಅನುಮತಿ ಶಿವಾಯ ನನ್ನ ಮನೆಯನ್ನು ಬಿಟ್ಟು, ತಂದೆ ಮನೆಯಲ್ಲಿ ಉಳಕೊಂಡಾಗ್ಯೂ ಕೂಡಾ, ಅವಳ ಬಾಳುವೆಯನ್ನು ಹಾಳು ಮಾಡಬಾರದೆಂಬ ಸದುದ್ದೇಶ್ಯದಿಂದ, ಗೃಹಸ್ಥರ ಮಧ್ಯಾಂತರ ಪಂಚಾಯತಿ ಮಾಡಿಸಿ, ಅವಳನ್ನು ನಾನು ನನ್ನ ಮನೆಗೆ ಖುಷಿಯಿಂದ ಕರಿಸಿಕೊಂಡಾಗ್ಯೂ ಕೂಡಾ ಇತ್ತೀಚೆಗೆ ಅವಳು ತನ್ನ ತಂದೆ ಮನೆಯಲ್ಲಿ ಉಳಕೊಂಡಿರುತ್ತಾಳೆ ಪುನಃ ನನ್ನ ಮನೆಗೆ ಬಂದು ಉಳಕೊಳ್ಳಲಿಕ್ಕೆ ಅನೇಕಾವರ್ತಿ ಅವಳಿಗೆ ಹೇಳಿ ಕಳುಹಿಸಿದಾಗ್ಯೂ ಕೂಡಾ ಅವಳು ಬರಲಿಲ್ಲ ಮತ್ತು ಬರುವ ಮನಸ್ಸಿನಲ್ಲಿ ಸಹ ಇರುವದಿಲ್ಲ ನನ್ನ ಮನಸ್ಸಿನ ವಿರುದ್ಧವಾಗಿ ತನ್ನ ತಂದೆಯ ಮನೆಯಲ್ಲೇ ಉಳಕೊಂಡಿರುತ್ತಾಳೆ

ಕಾರಣ ಸದ್ರಿಯವಳು ಇದೇ ಬರುವ ೧೯೩೮ನೇ ಇಸ್ವಿ ಡಿಸೆಂಬರ ೩೧ನೇ ತಾರೀಖಿನೊಳಗಾಗಿ ನನ್ನ ಮನೆಯಿಂದ ಲಗ್ನ ಕಾಲದಲ್ಲಿ ಹಾಕಿದ ಆಭರಣ ಸಹಿತವಾಗಿ ನನ್ನ ಮನೆಗೆ ಬಂದು ನನ್ನ ಹತ್ತಿರ ವಾಡಿಕೆಯಂತೆ ಉಳಿದು ಬಾಳ್ವೆ ಮಾಡಿಕೊಂಡು ಬರತಕ್ಕದ್ದು ಇದಕ್ಕೆ ತಪ್ಪಿದ್ದಲ್ಲಿ ಅವಳನ್ನು ನನ್ನ ಮನೆಗೆ ಬರಮಾಡಿಕೊಳ್ಳುವರೇ ಕಾಯಿದೆಯಂತೆ ಕಲಂ ನಡಿಸಬೇಕಾಗುವದು ಅಂಥಾ ಪ್ರಸಂಗದಲ್ಲಿ ನನಗೆ ಆ ಬಗ್ಗೆ ತಗಲುವ ಖರ್ಚು ವಗೈರೆಗಳಿಗೆ ಸದ್ರಿ ಪಾರ್ವತಿ ಮತ್ತು ಅವಳಿಗೆ ಶ್ಯಾಮೀಲ ಆಗಿರುವ ಅವಳ ತಂದೆ-ತಾಯಿಯರು ಜವಾಬದಾರರಾಗಬೇಕಾಗುವದು ಸದ್ರಿ ಸಂಗತಿ ಸದ್ರಿ ಪಾರ್ವತಿ ಮತ್ತು ಅವಳ ತಂದೆ ತಾಯಿ ಮತ್ತು ಅವರಿಗೆ ಸಂಬಂಧಪಟ್ಟ ಇನ್ನುಳಿದ ಜನರ ನಜರಿಗೆ ನಾನು ಈ ಮೂಲಕ ತಂದಿರುತ್ತೇನೆ ತಿಳಿಯುವದು

ತಾರೀಖು ೧೯—೧೨—೧೯೩೮

ನಾರಾಯಣ ಕೃಷ್ಣ ನಾಯ್ಕ, ಹಿರೇಗುತ್ತಿ

ಅಬ್ಬಬ್ಬಾ! ಏನು ತಲೆ ಸಿಡಿತ, ಏನು ಜಾಡ್ಯ, ಕೆಟ್ಟ

ಡಾಕ್ಟರರ ಡೋಜ ಸಹ ನಿಷ್ಫಲ !!

ಮಿತ್ರಾ, **ಲೋಕಮಾನ್ಯ** ಘಮಘಮಿಸುವ ಸಿಂಗಲ ಡೋಜೀ ಬಿಡಬೇಡ! ಚಹದ ... ಸಾಕು !!!

ಏನು ಉಪಯೋಗ? ಜೀವಕ್ಕೆ ಹಿತಕರ ರೋಗಪ್ರತಿಬಂಧಕ! ತುಷ್ಟಿ ಪುಷ್ಟಿ ಕ್ಷುಧಾ ಶಾಂತಿಯನ್ನೀಯುವದೇ ಈ ನಾಮಾಂಕಿತ ಚಹದ ಪುಟ್ಟ ಗುಣ! ಶ್ವಾಸಕಾಸ ಉಬ್ಬಸ, ಕೆಮ್ಮು ಇತ್ಯಾದಿಗಳ ತತ್ಕಾಲ ಶಮನ! ಶೌಚ ಅಂತು ಸಾಫ! ಬರೇ ೧೫ ದಿವಸಗಳ ಪ್ರಯೋಗ! ನಿನ್ನ ತೂಕದಲ್ಲಿ ಅಭಿವೃದ್ಧಿ !! ಅದೇ ರೀತಿ ಮುಂದರಿಸು ನಿನ್ನ ಪುಷ್ಟ ನಿಸ್ತೇಜ ಕಾಯ ದೃಢವಾಗಿ ತೇಜಸ್ವಿಗಿ ಪರಿವರ್ತಿಸುವದು ಇದು ವೇದವಾಕ್ಯ ನಂಬು ಡಾಕ್ಟರ ಸರ್ಟಿಫಿಕೇಟುಗಳ ತಖ್ತ್ಯಾಂತ ನೋಡು ರತ್ತಲ ೧ಕ್ಕೆ ಬರೇ 0—10—0 ಡಿಸ್ಟ್ರಿಕ್ಟದಲ್ಲಿ ಸಿಗುವ ಒಂದೇ ಸ್ಥಳ -

ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ

501 ದೃಢವಾಗಿ ನಿಲ್ಲುವದು,

ನಿಧಾನವಾಗಿ ಕರಗುವದು.

ಇತರ ಸಾಬೂನುಗಳು ಬೇಗನೇ ಕರಗುತವೃ.

501 ಸಾಬೂನು ವಸ್ತ್ರಗಳನ್ನು ಹೆಚ್ಚಾಗಿ ಶುಭ್ರಪಡಿಸುವದಲ್ಲದೆ ಹಣವನ್ನು ಸಹ ಉಳಿಸುವದೆಂಬುವದು ವಿವೇಕವಂತರಿಗೆ ತಿಳಿದ ವಿಷಯವೇ ಇದು ದೃಢವಾಗಿದ್ದು ಉಪಯೋಗಿಸಲು ಮಿತವಾಗಿ ಕರಗುವದು ಇತರ ಸಾಬೂನುಗಳಲ್ಲಿ ಸೇರಿರುವದರಿಂದ ಶೀಘ್ರದಲ್ಲಿಯೇ ಖರ್ಚಾಗುವದು 501 ಸಾಬೂನನ್ನು ತೆಗೆದು ಅದರ ಸತ್ಯವನ್ನು ಪರೀಕ್ಷಿಸಿರಿ ನಿಮ್ಮ ವ್ಯಾಪಾರಿಯ ಅಂಗಡಿ ಮೇಲೆ ಹೋಗುವಾಗ ಈ ಸಾಬೂನನ್ನು ಕೊಳ್ಳಿರಿ ಇದು ನಿಜವಾಗಿ ಸ್ವದೇಶಿಯಾದ ಸಾಬೂನು

ವಿವೇಕದಿಂದ ಕೊಳ್ಳಿರಿ



501 ವಸ್ತ್ರಗಳನ್ನು ಶುಭ್ರಪಡಿಸುವ ಸಾಬೂನನ್ನು ಕೊಳ್ಳಿರಿ

ಇವರಲ್ಲಿ ಪಡು ಕೊಳ್ಳಬಹುದು ಇಲ್ಲ

ಟಾಂಕೋ ಸೇಲ್ಸ್ ಡಿಪಾರ್ಟಮೆಂಟು,

೧, ಸಂಟ್ರಲ್ ಸ್ಟ್ರೀಟ, ಬೆಂಗಳೂರು

ದಿ ಟಾಟಾ ಆಯಿಲ್ ಮಿಲ್ಸ್ ಕಂ|| ಲಿ||

ಇವರಿಂದ ತಯಾರಾದುದು

ಟಾಟಾಪುರಂ ಮತ್ತು ಬೊಂಬಾಯಿ

ಟಾಟಾರವರ ಉತ್ಪತ್ತಿ

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವಾಗಿರುತ್ತದೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನೂ, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ (ವಾತ, ಪಿತ್ತ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಟವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಧಾರಣ ಶಕ್ತಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನರಗಳ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ಮುಂತಾದ ರೋಗಗಳಿಗೆ ಅತ್ಯಂತವು ಗುಣಕಾರಿಯಾಗುತ್ತದೆ

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತ ಆದ ನಂತರ (ಮಿಸ ಎರಡಾವರ್ತಿ) ಹಿಂದೊಂದು ಔಂಸಿನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧ ಯಾವದೇ ತರದ ರೋಗಗಳು ಮುಂದೆ ಆಗದೆ ದೇಹದ ಸಂತೆ ನವತಾರುಣ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇರೆ ಪವರು ಪತ್ರವ್ಯವಹಾರ ಮಾಡಬೇಕು

೧೬ ಔಂಸ ಬಾಟ್ಲಿ ಕ್ಕೆ ರೂ ೧—೪—೦.
,, ಬಾಟ್ಲಿ ಕ್ಕೆ ರೂ ೬—೧೨—೦.
,, ಬಾಟ್ಲಿ ಕ್ಕೆ ರೂ ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿರಿಷ್ಟ, ಕುಷ್ಮಾಂಡಪಾಕ, ಮೃದ್ವೀಕಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾಸವ, ಲೋಹಾಸವ, ನಾರಾಯಣ ತೈಲ, ಹಿತಪಿನಗರ ತೈಲ ಬ್ರಹ್ಮಿ ಭೃಂಗರಾಜ ತೈಲ ಮೊದಲಾದ ಶಾಸ್ತ್ರೀಯ ಔಷಧಗಳು ತಯಾರ ಸಿಗುತ್ತವೆ ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ.—

ಪಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ.— ಕುಮಟಾ. (ಉ. ಕನ್ನಡ)

ಶ್ರೀ ಧೂತಪಾಪೇಶ್ವರ ರಸಾಯನ ಔಷಧಿ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಉತ್ತಮ ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ

ABHRALOHA

ಮಾರಾಟದ ಏಜೆಂಟರು— ಕಾರವಾರ - ಮೆಸರ್ಸ ಮುಜುಮದಾರ-ಕಸಬೇಕರಬ್ರದರ್ಸ. ಅಂಕೋಲಾ ದಿ ಸ್ಟೋರ್ಸ ಡಿಪೋ ॥ ಕುಮಟಾ ದೇವಪ್ಪಾ ಅಯ್ಯುನಾಯ್ಕ । ಹೊನ್ನಾವರ - ಕಲ್ಯಾಣಪುರ ಬ್ರದರ್ಸ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ: **1908.**

ಈ ಕಂಪನಿಯು ೯ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರತುಗಳೂ ಬಹಳ ಸೋಯಿಯುಳ್ಳ ಇವೆ ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟ ನ ನಿಯಮಗಳಂತೆ ಬಿಮಾ ಬದ್ಧರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros
K. N Nayak.
Honavar Agent -
R. V. Prabhu

K. Padmanabha Rao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬಾಟ್ಲಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೨-೮-೦ ವಿ. ಪಿ ೦-೨-೦

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ - ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg. No. B 1270. Monday, 26th December, 1938.

ವರ್ಷ ೨೧

ಕಾನಡಾವೃತ್ತ

ಸಂಚಿಕೆ ೨೫

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಮುದ್ರಾಕ್ಷರದ (೧೫ ಎಮ್ ಉದ್ದ) ೩ ಸಾಲುಗಳವರೆಗೆ ರೂ.1-0-0 ಆ ನಂತ್ರ ಪ್ರತಿಸಾಲಿಗೆ 0-2-0 ಚಿತ್ರಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸರುಕ್ಷ ತಿಳಿಸಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ. ತಾರೀಖು ೨೬ ಮಾಹೆ ಡಿಶಂಬರ ಸನ್ ೧೯೩೮ನೇ ಇಸವಿ)*-

PROBABLY WE CAN HELP.

Banks render special services of many kinds but two chief functions of a bank are to receive money on deposit from the investing public and to grant loans to businessmen and enterprises as temporary additions to their working capital. In order that the depositors' money should be safe and always available it is necessary that only safe loans should be granted. The way to ensure the saftey of a loan is to obtain from the borrower some security or as it is usually known collateral which is pledged to the bank and such loans are called secured loans. Collateral may be either gold, produce of various kinds, shares of a prosperous company, documentary trade bills, or a life insurance policy with sufficient surrender value.

We grant only secured loans. Subject to this condition the large resources of this bank and the expert services of its staff are always available to businessmen and trading concerns.

Estd: 1906

RESOURCES OVER A CRORE.

CANARA BANK, LIMITED.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:— ಕುಂದಾಪುರ. ದ. ಕ.

ಬ್ರಾಂಚುಗಳು:— ಶಿವಮೊಗ್ಗಾ, ಕುಂದಾಪುರ, ತರಿಕೆರಿ, ಸೋಮವಾರಪೇಟೆ, ಬೈಂದೂರು, ಕಡೂರು, ಕೋಟೇಶ್ವರ, ಕುಮಟಾ, ವೀರರಾಜೇಂದ್ರಪೇಟೆ, ಗೋಕರ್ಣ, ಅಂಕೋಲಾ.

ಎಲ್ಲಾ ವಿಧದ ಬೇಂಕಿಂಗ್ ವ್ಯವಹಾರಗಳು ಒಳ್ಳೇ ಸವಲತ್ತಿನಿಂದ ನಡಿಸಲ್ಪಡುವವು.

ಫಿಕ್ಸೆಡ್, ಸೇವಿಂಗ್ಸ ಬೇಂಕ್, ಕರೆಂಟ್ ವಗೈರೆ ಡಿಪೋಜಿಟುಗಳು ಸ್ವೀಕರಿಸಲ್ಪಡುವವು.

ಈ ಬೇಂಕಿನ ಶಾಖೆಗಳ ಮೇಲೂ ಮತ್ತು ಮುಂಬಯಿ, ಮದ್ರಾಸು, ಮಂಗಳೂರು, ಮೈಸೂರು, ಕೊಚ್ಚಿ, ಕಣ್ಣಾನೂರು ವಗೈರೆ ವ್ಯಾಪಾರದ ಕೇಂದ್ರಸ್ಥಳಗಳಲ್ಲಿರುವ ಈ ಬೇಂಕಿನ ಬೇಂಕರರ ಮೇಲೂ ಡ್ರಾಫ್ಟುಗಳು ಕೊಡಲ್ಪಡುವವು.

ಕುಂದಾಪುರ,
4—10—1938.

The Agricultural & Industrial Bank, Ltd.

ಹಿಂದೀ ರಾಜಕಾರಣ ಯಾವಲ್ಲಿಗೆ?

[ನಿರೀಕ್ಷಕನು ಬರೆದುದು]

“ಹಿಂದೀ ರಾಜಕಾರಣ ಯಾವಲ್ಲಿಗೆ’ ಈ ಪ್ರಶ್ನೆಯನ್ನೇ ನಾನಿಂದಿಗೆ ಕೇಳಬಯಸಿದ್ದೇನೆ. ಅದೇ ನಮ್ಮ ಗೆಲ್ಲರಿಗೆ ಬೇಕಾದದ್ದು. ಹಿಂದುಸ್ಥಾನದೊಳಗೆ ಬೇರೆ ಬೇರೆ ಸಮಸ್ಯೆಗಳು ಈವಾಗ ಉಂಟಾಗುತ್ತಿವೆ. ಸಂಯುಕ್ತರಾಜ್ಯ ಸಂಘಟನೆಯ ಪ್ರಶ್ನೆಯೊಂದು ಸಂಸ್ಥಾನಿಕರ ಸಮಸ್ಯೆ ಎರಡನೇದು, ಇವೇ ಮುಖ್ಯ ಪ್ರಶ್ನೆಗಳು. ಈಗ ದಿಲ್ಲಿಯಲ್ಲಿ ಮಧ್ಯವರ್ತಿ ಕಾಯಿದೆ ಕೌನ್ಸಿಲು, ಕೌನ್ಸಿಲ ಆಫ್ ಸ್ಟೇಟ ಯಾನೆ ಹಿರಿಯರ ಸಭೆ, ಹೀಗೆ ಎರಡು ಕಾಯಿದೆ ಸಭೆಗಳಿವೆ. ಅವುಗಳನ್ನು ರದ್ದುಪಡಿಸಿ, ಅವುಗಳ ಬದಲಿಗೆ ಸಂಸ್ಥಾನಿಕರ ಪ್ರತಿನಿಧಿಗಳ ಸೇರಿಕೆಯಿಂದ ಹಿಂದುಸ್ಥಾನದ ಪ್ರತಿನಿಧಿಗಳುಳ್ಳ ಒಂದು ಸಭೆ, ಮತ್ತೊಂದು ಮೇಲ್ಸಭೆ, ಹೀಗೆ ಸಭೆಗಳನ್ನು ಸ್ಥಾಪಿಸಬೇಕಾಗಿ ಹೊಸ ರಾಜ್ಯಘಟನೆಯಲ್ಲಿ ನಮೂದಿದೆ. ಈ ಸಭೆಗಳಿಗೆ ಸೈನ್ಯ ಇಲಾಖೆಯ ಖರ್ಚು ಮಾಡಲಿಕ್ಕೆ ಅಧಿಕಾರವಿಲ್ಲ, ಅದನ್ನು ಸರ್ವಾಧಿಪತಿಗಳೇ ನಿರಂಕುಶವಾಗಿ ನಡಿಸತಕ್ಕದ್ದು. ಮೇಲ್ಸಭೆಯಲ್ಲಿ ನಿರಂಕುಶ ಸರಕಾರದ್ದೇ ಪ್ರಾಬಲ್ಯ, ಈ ಸಭೆಗೆ ಆಯ-ವ್ಯಯದ ಪಾರುಪತ್ಯಾಧಿಕಾರ ಒಪ್ಪಿಸೋಣಾಗಿದೆ. ಈ ಸಭೆಯು ಸರಕಾರಕ್ಕೆ ಅಧೀನವಾಗಿ ನಡೆಯಬೇಕು. ಹೀಗೆ ನಡೆಯದಿದ್ದಲ್ಲಿ ಸಭೆಯ ನಿರ್ಣಯಗಳನ್ನು ರದ್ದುಪಡಿಸಿ ಸ್ವೇಚ್ಛೆಯಂತೆ ನಡೆಯುವ ಸರ್ವಾಧಿಕಾರ ಸರ್ವಾಧಿಪತಿಗಳಿಗುಂಟು. ಈ ಘಟನೆ ರಾಷ್ಟ್ರೀಯ ಸಭೆಗೆ ಮಾನ್ಯವಿಲ್ಲ, ಇದನ್ನು ರಾಷ್ಟ್ರೀಯ ಸಭೆಯು ಧಿಕ್ಕರಿಸಿದೆ. ಇದನ್ನು ಮುರಿದು ಬಿಡುವ ಅಟ್ಟಹಾಸ ಹಿಡಿದಿದೆ. ಈವಾಗ ಈ ಪ್ರಶ್ನೆಗೆ ಒಳ್ಳೇ ಕಳೆ ಏರಿದೆ. ಈ ಘಟನೆಯನ್ನು ಒಂದೆರಡು ವರ್ಷಗಳಲ್ಲಿ ಸ್ಥಾಪಿಸಬೇಕೆಂದ ಸಾಮ್ರಾಜ್ಯ ಸರಕಾರವು ನಿರ್ಧರಿಸಿರುವದಾಗಿ ಉಪಮಂತ್ರಿ ಬ್ರಿಟ್ಲಂಡ ದೊರೆಗಳು ಪಾರ್ಲಿಮೆಂಟಿನಲ್ಲಿ ಉದ್ಗರಿಸಿದರು. ಸೋಮವಾರ ತಾರೀಖು ೧೯ ನೇ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳಾದವು. ಆಗ ಲಕ್ನೋ ಈ ಘಟನೆಯಲ್ಲಿ ತಿದ್ದುಪಾಟ ಮಾಡುವ ವಿಚಾರ ಸಾಮ್ರಾಜ್ಯ ಸರಕಾರಕ್ಕಿಲ್ಲವೆಂದು ತಿಳಿಸೋಣಾಗಿದೆ. ಸಾಮಾನ್ಯ ಕಲಕತ್ತೆಯಲ್ಲಿಯು ಯುರೋಪಿಯನ್ ವರ್ತಕ ಸಂಘದ ವಾರ್ಷಿಕ ಸಭೆಯಾಯಿತು. ಈ ಸಭೆಗೆ ಸರ್ವಾಧಿಪತಿಗಳು ಹಾಜರಾಗಿ ಹಿಂದುಸ್ಥಾನದ ರಾಜ್ಯಧೋರಣವನ್ನು ಪ್ರಕಟಿಸುವ ಸಂಪ್ರದಾಯ. ಈ ಬಾರಿ ಲಿನ್‌ಲಿಥ್‌ಗೋ ದೊರೆಗಳು ದೀರ್ಘ ಭಾಷಣ ಮಾಡಿ ಸಂಯುಕ್ತರಾಜ್ಯಘಟನೆಯನ್ನು ಸ್ಥಾಪಿಸುವದು ನಿಶ್ಚಯವಂತಲೂ, ಅದನ್ನು ರಾಷ್ಟ್ರೀಯ ಸಭೆಯು ಸ್ವೀಕರಿಸಬೇಕಾಗಿ ಇದರಿಂದ ಹಿತವಿರುವದಾಗಿಯೂ ತಾವು ಸಹಾನುಭೂತಿಯಿಂದಲೂ, ಹಿಂದುಸ್ಥಾನದ ಹಿತದ ದೃಷ್ಟಿಯಿಂದಲೂ ನಡೆಕೊಳ್ಳುವವಾಗಿಯೂ, ಹಿಂದುಸ್ಥಾನದೊಳಗೆ ಐಕ್ಯವೃತ್ತಿ ಐಕ್ಯಸಂವರ್ಧನವಾಗಿ ಹಿಂದುಸ್ಥಾನವು ಪ್ರಬಲ ಜನಾಂಗವಾಗಬೇಕೆಂಬ ದೀರ್ಘಾಲೋಚನೆಯಿಂದ ಈ ಘಟನೆ ತಯಾರಿಸಲ್ಪಟ್ಟಿರುವದಾಗಿಯೂ ಇದನ್ನು ಅಂಗೀಕರಿಸಿದ್ದಲ್ಲಿ ಹಿಂದುಸ್ಥಾನದ ಅಭ್ಯುದಯವಾಗುವದಾಗಿಯೂ, ತಿರಸ್ಕಾರ ಮಾಡಬಾರದಾಗಿಯೂ, ಸರ್ವಾಧಿಪತಿಗಳು ವಿನಂತಿ ಮಾಡಿಕೊಳ್ಳುತ್ತಾರೆ. ಸಂಯುಕ್ತ ರಾಜ್ಯಘಟನೆಯಲ್ಲಿ ಒಳಗೊಂಡ ಹಿಂದುಸ್ಥಾನದ ಹಿತದ ಕ್ರಮಗಳು ರಾಷ್ಟ್ರೀಯ ಸಭೆಯವರಿಗೆ ತಿಳಿಯಲಿಲ್ಲವಾಗಿಯೂ ತಪ್ಪು ಗ್ರಹಿಕೆಯಾಗಿರುವದಾಗಿಯೂ, ತಪ್ಪು ಗ್ರಹಿಕೆಯನ್ನು ದೂರಪಡಿಸಿಕೊಳ್ಳಬೇಕಾಗಿಯೂ, ಸರ್ವಾಧಿಪತಿಗಳ ಮೇಲ್ಸೂಚನೆ. ಯುರೋಪಖಂಡದೊಳಗಿನ ಜನಗಳೊಳ ವಿತುಷ್ಟ ಬೆಳೆದು ಕಠಿಣ ಪ್ರಸಂಗ ಒದಗಿತೇನೋ ನಿಜ! ಆದರೆ ಅದರಿಂದ ಹಿಂದುಸ್ಥಾನದ ರಾಜಧೋರಣದಲ್ಲಿ, ಎಳ್ಳಷ್ಟೂ ಅಭ್ಯಂತರವುಂಟಾಗಲಿಲ್ಲವೆಂದು ದೊರೆಗಳು ಸಾರಿಹೇಳಿದರು. ಸರ್ವಾಧಿಪತಿಗಳ ಭಾಷಣವನ್ನು ನಾನು ಕೊಂಚ ವಿಸ್ತಾರವಾಗಿಯೇ ಹೇಳಿದ್ದೇನೆ. ಸರ್ವಾಧಿಪತಿಗಳ ಅಂಬೋಣ ಜನರಿಗೆ ಸರಿಯಾಗಿ ತಿಳಿದು ತಕ್ಕ ಗ್ರಹಿಕೆಯಾಗಬೇಕೆಂದು ನನ್ನ ಅಪೇಕ್ಷೆ. ಈ ವಿನಂತಿಗಳಿಂದ, ಆಗ್ರಹಗಳಿಂದ ಸ್ನೇಹಭಾವದ ವಚನಗಳಿಂದ, ಸವಿ ಸವಿ ಮಾತುಗಳಿಂದ ಹಿಂದೀಯರಿಗೆ ಸಮಾಧಾನವಾಗದೆಂದು ಲಂಡನಿನೊಳಗಿನ ‘ಮೆಂಚೆಸ್ಟರ ಗಾರ್ಡಿಯನ್’ ಪತ್ರಕರ್ತರು ಅಭಿಪ್ರಾಯಪಡುತ್ತಾರೆ. ಶ್ರೀ| ಸತ್ಯಮೂರ್ತಿಗಳಂತೂ ಸರ್ವಾಧಿಪತಿಗಳ ಸವಿ ಸವಿ ಮಾತುಗಳಿಂದ ಸಮಾಧಾನವಾಗಲಿಕ್ಕಿಲ್ಲವಾಗಿಯೂ, ಸವಿ ಮಾತುಗಳಲ್ಲೇನಾದರೂ ಅರ್ಥವಿದ್ದರೆ, ಹಿಂದಹಿತಕಾಂಕ್ಷೆಯಿದ್ದರೆ ಮಹಾತ್ಮರಿಗೆ ಕರೆಸಿಕೊಂಡು ಅವರ ಆಲೋಚನೆಯಿಂದ ರಾಜ್ಯಘಟನೆಯಲ್ಲಿ ಅವಶ್ಯವಿದ್ದ ತಿದ್ದುಪಾಟಗಳನ್ನು ಮಾಡಬೇಕಾಗಿಯೂ ಸೂಚಿಸಿದ್ದಾರೆ. ‘ನಂಬಿಗೆ ಇಟ್ಟವನ ಅಂದರೆ ಕಲ್ಯಾಣವಾಗುವದು” ಎಂಬುದಾಗಿ ಸರ್ವಾಧಿಪತಿಗಳು ಮಾಡುವ ಉಪದೇಶ ನಿರರ್ಥಕವೆಂದೂ, ಸಂಯುಕ್ತ ರಾಜ್ಯಘಟನೆಯ ಮೂಲಬೀಜ ಅಪನಂಬಿಗೆಯದೆಂದೂ ಶ್ರೀ|| ಸತ್ಯಮೂರ್ತಿಗಳ ಸಿದ್ಧಾಂತ. ಬ್ರಿಟಿಶ ಹಿಂದೀಯರೊಳಗಿನ ಸಂಬಂಧಗಳು ಪರಸ್ಪರ ವಿರುದ್ಧವಂದೆಣಿಸಿ, ಅವುಗಳಿಗೆ ಹಿಂದೀಯರು ವಿರೋಧ ಮಾಡುವರೆಂದೆಣಿಸಿ ಅದನ್ನು ಎದುರಿಸುವದಕ್ಕಾಗಿ ಕಾಯಿದೆ ಸಭೆಗಳಲ್ಲಿ ಸಂಸ್ಥಾನಿಕರಿಗೆ ಸೇರಿಸಿಕೊಳ್ಳಲಿಗಿದೆಯೆಂದೂ, ಆಯ-ವ್ಯಯ ಪತ್ರಿಕೆಯ ಸರ್ವಾಧಿಕಾರ, ಸೈನ್ಯಾಧಿಕಾರ ಸರ್ವಾಧಿಪತಿಗಳೊಬ್ಬರ ಕೈಯಲ್ಲಿ ಕೇಂದ್ರೀಕೃತವಾಗಿರುವದಾಗಿಯೂ, ಶ್ರೀ|| ಸತ್ಯಮೂರ್ತಿಗಳು ಪ್ರತಿಪಾದಿಸಿ, ಸಂಯುಕ್ತ ರಾಜ್ಯಘಟನೆಯನ್ನು ರಾಷ್ಟ್ರೀಯ ಸಭೆಯವರು ಎಷ್ಟಕ್ಕೂ ಸ್ವೀಕರಿಸಲಾರರೆಂದು ಖಂಡಿತ ಹೇಳಿದರು. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಶ್ರೀ| ಸುಭಾಷಚಂದ್ರ ಬೋಸರವರಂತೂ ಸಂಯುಕ್ತ ರಾಜ್ಯಘಟನೆಯ ಕಡುವಿರೋಧಕರು! ಆ ಘಟನೆಯ ಸರ್ವನಾಶ ಮಾಡುವದಕ್ಕಾಗಿ ರಾಷ್ಟ್ರಪತಿಗಳು ಭೀಷ್ಮಪ್ರತಿಜ್ಞೆಯನ್ನೇ ಮಾಡಿದ್ದಾರೆ. “ಈತನಕ ನಾವು ಸುಮ್ಮಗಿದ್ದೇವೆ, ಅಲಿಪ್ತರಾಗಿದ್ದೇವೆ. ಈ ಧೋರಣ ಈವಾಗ ಸಾಕು! ನಾವು ಈಗ ಮುಂದಡಿಯನ್ನಿಟ್ಟು ಸಂಯುಕ್ತ ಘಟನೆಯ ಮೇಲೆ ದಾಳಿ ಹೂಡಬೇಕು. ಆ ಕುರಿತು ಉಪಾಯ-ಯೋಜನೆ ಮಾಡಬೇಕು. ಸಂಯುಕ್ತ ರಾಜ್ಯಘಟನೆಯ ಸರ್ವನಾಶವನ್ನೇ ಬಗೆದರೆ ಸಾಲದು, ಪೂರ್ಣ ಸ್ವರಾಜ್ಯವನ್ನು ಸಂಪಾದಿಸುವ ಪ್ರಯತ್ನ ಮಾಡಬೇಕು. ನಿಷೇಧವಾಚಕ ಯತ್ನಗಳನ್ನು ವಿಧಿವಾಚಕದಲ್ಲಿ ಪರಿಣಮಿಸಬೇಕು” ಹೀಗೆ ಶ್ರೀ| ಸುಭಾಷರು ಸಂಕಲ್ಪಿಸಿದ್ದಾರೆ. ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಮಯ ಮಹಾತ್ಮರಿಗೂ, ಸುಭಾಷಚಂದ್ರ ಬೋಸರಿಗೂ ಈ ಕುರಿತು ವಿಚಾರ ವಿನಿಮಯ ನಡೆಯಿತು. ಸರದಾರ ವಲ್ಲಭಭಾಯಿ ಪಟೇಲ, ಪಂಡಿತ ಜವಾಹಿರಲಾಲ ನೆಹರು, ಮೌ| ಅಬುಲ್ ಕಲಮ್ ಆಝಾದ, ಮೊದಲಾದ ಪ್ರಮುಖರೊಡನೆ ರಾಷ್ಟ್ರಪತಿಗಳು ವಿಚಾರವಿನಿಮಯ ಮಾಡಿದರು. ರಾ ಸಭೆಯ ಪ್ರಮುಖರು ಈ ವಿಚಾರದಲ್ಲಿಯೇ ಈಗ ಮಗ್ನರಾಗಿದ್ದಾರೆ. ಆತ್ಮಸಂರಕ್ಷಣೆಯ ಧೋರಣವನ್ನು ತ್ಯಜಿಸಿ, ಸಾಗಿ ಹೋಗುವ ವಿಚಾರಮಾಡುತ್ತಿದ್ದಾರೆ. ಸಂಯುಕ್ತ ರಾಜ್ಯಘಟನೆಯನ್ನು ನಿರ್ದಿಷ್ಟ ಅವಧಿಯಲ್ಲಿ ಬ್ರಿಟಿಶ ಸರಕಾರವು ರದ್ದುಪಡಿಸದಿದ್ದರೆ ರಾಷ್ಟ್ರೀಯ ಸಭೆಯು ಸತ್ಯಾಗ್ರಹವನ್ನು ಹೂಡುವದೆಂದು ಜಾಹೀರನಾಮೆಯನ್ನು ಹೊರಡಿಸಬೇಕಾಗಿ ಶ್ರೀ| ಸುಭಾಷರ ಕಲ್ಪನೆಯಿರುತ್ತದಂತೆ! “ಯುರೋಪಖಂಡದೊಳಗಿನ ವಾತಾವರಣ ಇನ್ನೂ ಪ್ರಕ್ಷುಬ್ಧವಾಗುವದು, ಇದೇ ಸಮಯ ಹಿಂದುಸ್ಥಾನಕ್ಕನುಕೂಲ! ಹೀಗೆ ಸಹ ಶ್ರೀ| ಸುಭಾಷರ ಅಭಿಪ್ರಾಯ, ನಿಶ್ಚಿತ ಯೋಜನೆ ಸದ್ಯದಲ್ಲೇ ತಯಾರಾಗುವದೆಂದು ನಾನು ಹೇಳಬಲ್ಲೆ. ಸಂಯುಕ್ತ ಘಟನೆಯನ್ನು ಎದುರಿಸಿ ನಡಿಸಬೇಕೆಂಬ ವಿಚಾರ ನಿಶ್ಚಯವಾಗಿದೆ. ಹೇಗೆಂಬುದೇ ಸಮಸ್ಯೆ!

ಸಂಸ್ಥಾನಿಕರ ಬಗ್ಗೆ ಮಹಾತ್ಮರು ತೀರ ಉದ್ವಿಗ್ನರಾಗಿದ್ದಾರೆ. ರಾಷ್ಟ್ರೀಯ ಸಭೆಯು ಅಲಿಪ್ತತೆಯ ಧೋರಣವನ್ನು ಇನ್ನು ತಳೆಯುವದು. ಸಂಸ್ಥಾನಿಕರು ಕೈಕೊಂಡ ದಬ್ಬಾಳಿಕೆಯನ್ನು ನೋಡಿ, ಮಹಾತ್ಮರು ವಿಷಣ್ಣವದನರಾಗಿದ್ದಾರೆ. ರಾಜಕೋಟ, ಧೇನಕಾನಲ, ತ್ರಾವಣಕೋರ, ಹೈದರಾಬಾದ ಸಂಸ್ಥಾನಗಳಲ್ಲಿ ವಿದ್ಯಾರ್ಥಿಗಳಿಗೂ, ಲೋಕಪ್ರಮುಖರಿಗೂ, ಜನಸಾಮಾನ್ಯರಿಗೂ ನಿರಂಕುಶ ಪ್ರಭುತ್ವವನ್ನು ಸ್ಥಿರಪಡಿಸುವದಕ್ಕಾಗಿ ಸಂಸ್ಥಾನಿಕರು ಅಮಾನುಷ ಅತ್ಯಾಚಾರಗಳನ್ನು ಆಚರಿಸುತ್ತಿದ್ದಾರೆ. ಸಂಸ್ಥಾನಿಕರಿಗೂ, ಸಂಸ್ಥಾನ ಪ್ರಜೆಗಳಿಗೂ, ನಡೆದ ಆಂದೋಲನದಲ್ಲಿ ತಾವು ಕೈಹಾಕುವದಿಲ್ಲವೆಂದು ಸಾಮ್ರಾಜ್ಯ ಸರಕಾರವು ನುಡಿಯುತ್ತದೇನೋ ಅಹುದು, ಆದರೆ ಸಾಮ್ರಾಜ್ಯ ಸರಕಾರದ ಪ್ರೇರಣೆಯಿಂದಲೇ ಸಂಸ್ಥಾನಿಕರು ಲೋಕ-ಪ್ರಮುಖರಿಗೆ ದಣಿಸುತ್ತಿದ್ದಾರೆ. ಆದರಿಂದ ರಾಷ್ಟ್ರೀಯ ಸಭೆಯು ಸಾಮ್ರಾಜ್ಯ ಸರಕಾರದ ನಿರಂಕುಶ ಅಧಿಕಾರವನ್ನು ಕಾಪಾಡಬಯಸುವ ಸಂಸ್ಥಾನಿಕರಿಗೂ, ಇದಿರಾಗುವ ತಯಾರಿಯನ್ನು ನಡಿಸುತ್ತಿದ್ದಾರೆ! ಶ್ರೀ| ಸುಭಾಷರು ನುಡಿದಂತೆ ಸಂಸ್ಥಾನಿಕರ ಪ್ರಾಬಲ್ಯ ಮುಗಿದಿಲ್ಲ. ರಾ ಸಭೆಯು ಸಂಸ್ಥಾನಪ್ರಜೆಗಳಿಗೆ ಬೆಂಬಲಕೊಟ್ಟರೆ ಸಂಸ್ಥಾನಿಕರು ಮಣಿಯಲೇಬೇಕು. ಕಾಲವೇ ಬದಲಿದೆ. ಆದಕ್ಕನುಸಾರವಾಗಿ ಆಚಾರ-ವಿಚಾರಗಳು ಬದಲಬೇಕು. ಸಂಸ್ಥಾನಿಕರು ಸ್ವಹಿತ-ಸ್ವಲೋಕಹಿತಗಳನ್ನು ಆಲೋಚಿಸಿ ರಾಷ್ಟ್ರೀಯ ಸಭೆಯ ಜೊತೆಗೆ ಸಹಕರಿಸುವರೆಂದು ನಂಬಿಗೆ! ಇಲ್ಲವಾದರೆ ಬ್ರಿಟಿಶ ಸಾಮ್ರಾಜ್ಯ ಸರಕಾರದಂತೆಯೇ ಇವರದೂ ಗತಿಯಾಗದಿರದೆಂದು ಶ್ರೀ|| ಸುಭಾಷರು ನುಡಿಯುತ್ತಾರೆ. ಇದು ಸಂಸ್ಥಾನ ರಾಜಕಾರಣದ ಮಾತು!

ಇನ್ನು ಕೊಂಗ್ರೆಸ ರಾಜಕಾರಣವನ್ನು ಹೇಳುವೆನು. ಈಗ ಮುಂಬಯಿ, ಮದ್ರಾಸ, ಮಧ್ಯಪ್ರಾಂತ,

ಸಂಯುಕ್ತಪ್ರಾಂತ, ಬಿಹಾರ, ಓರಿಸಾ, ಆಸಾಮ, ಗಡಿನಾಡು ಹೀಗೆ ೮ ಪ್ರಾಂತಗಳಲ್ಲಿ ಕೊಂಗ್ರೆಸ ರಾಜ್ಯಭಾರ ನಡೆದಿದೆ. ಬಂಗಾಲ ಪ್ರಾಂತದಲ್ಲಿ ಕೊಂಗ್ರೆಸ ಪಕ್ಷವು ಮೌಲಾನಾ ಹಕ್ಕ ಪಕ್ಷದ ಮೇಲೆ ದಾಳಿಯನ್ನೆಬ್ಬಿಸಿದೆ. ಆಯ-ವ್ಯಯ ಇಲಾಖೆಯ ಮಂತ್ರಿಗಳಾದ ನಾಮದಾರ ಸರಕಾರರವರು ವರ್ಧಾದಲ್ಲಿ ಮೌಲಾನಾ ಅಬುಲ ಕಲಮ ಅಝಾದ ಮತ್ತು ಮಹಾತ್ಮರೊಡನೆ ಬಂಗಾಲದ ಪರಿಸ್ಥಿತಿಯನ್ನು ಸಮಗ್ರ ಆಲೋಚಿಸಿ, ಹಾಗೆಯೇ ಮುಂಬಯಿಗೆ ಬಂದು, ಸರದಾರ ವಲ್ಲಭಭಾಯಿ ಪಟೇಲ, ಶ್ರೀ|| ಭುಲಾಭಾಯಿ ದೇಸಾಯಿಯವರೊಡನೆ ವಿಚಾರ ವಿನಿಮಯ ಮಾಡಿ ಕಲಕತ್ತೆಗೆ ತೆರಳಿದ್ದಾರೆ. ಮಹಾತ್ಮರೂ, ಮೌ|| ಅಬುಲ ಕಲಮ್ ಅಝಾದರೂ ತಮ್ಮ ಅಭಿಪ್ರಾಯವನ್ನು ಒರೆದು ಕಳುಹಿದಂತಾಗಿಯೂ ನಾಮದಾರ ಸರಕಾರರು ಯಾವ ರೀತಿ ನಡೆಯಬೇಕೆಂಬುದು ತಿಳಿಸಿದ್ದಾರಾಗಿಯೂ ಹೇಳುತ್ತಾರೆ. ಬಂಗಾಲ ಸರಕಾರದ ಮಂತ್ರಿಮಂಡಳದ ಮೇಲೆ ಅಪನಂಬಿಗೆಯ ಠರಾವನ್ನು ಸೂಚಿಸಿ, ಅದನ್ನು ಎಸೆಂಬ್ಲಿಯಲ್ಲಿ ಮನ್ನಿಸಿಕೊಂಡು ಕೊಂಗ್ರೆಸ ವಿರೋಧಿ ಮೌಲನಾ ಹಕ್ಕ ಮಂತ್ರಿಮಂಡಳವನ್ನು ಪದಚ್ಯುತ ಮಾಡಿ, ಕೊಂಗ್ರೆಸ ಪ್ರಧಾನ ಮಂಡಳವನ್ನು ಸ್ಥಾಪಿಸುವ ವಿಚಾರ ನಡೆದಿರುವದಾಗಿ ಹೇಳುತ್ತಾರೆ. ಇವೆಲ್ಲ ತರ್ಕಗಳಿಂದೂ ವಂಗ-ಪ್ರಧಾನ ಮಂಡಳದ ಸ್ಥಿತ್ಯಂತರದ ವಿಚಾರ ನಡೆಯಲಿಲ್ಲವಾಗಿಯೂ ಮೌಲಾನಾ ಅಝಾದರವರ ಪ್ರಕಟಣೆ. ಸಿಂಧ ಪ್ರಾಂತದಲ್ಲಿಯೂ ರಾಷ್ಟ್ರೀಯ ಸಭೆಯ ಪ್ರಧಾನ ಮಂಡಳವನ್ನು ಸ್ಥಾಪಿಸುವ ಹಂಚಿಕೆ ನಡೆದಿದೆ. ರಾಷ್ಟ್ರಪತಿಗಳಾದ ಶ್ರೀ|| ಸುಭಾಷರು ಸಿಂಧ ಪ್ರಾಂತದ ಸಂಚಾರವನ್ನು ಸದ್ಯಕ್ಕೇ ಮುಗಿಸಿ ಬಂದಿದ್ದಾರೆ. ಅಲ್ಲಿಯ ಪರಿಸ್ಥಿತಿಯನ್ನು ಕೂಲಂಕಷವಾಗಿ ಗ್ರಹಿಸಿಕೊಂಡಿದ್ದಾರೆ. ಆದರಿಂದ ಬಂಗಾಲ ಮತ್ತು ಸಿಂಧ ಪ್ರಾಂತಗಳು ರಾಷ್ಟ್ರೀಯ ಸಭೆಯ ಸ್ವಾಧೀನವಾಗಬಹುದಂತೆ! ಆ ವೇಳೆ ಉಳಿದದ್ದು ಒಂದೇ ಒಂದು ಪಂಜಾಬ ಪ್ರಾಂತ! ಇಡೀ ಹಿಂದುಸ್ಥಾನ ಕೊಂಗ್ರೆಸ ಸ್ವಾಧೀನವಾದಾಗ ಪಂಜಾಬ ಪ್ರಾಂತವನ್ನು ಸ್ವಾಧೀನಪಡಿಸಿಕೊಳ್ಳುವ ಪರಾಕ್ರಮವನ್ನು ತಾವು ಮಾಡಿತೋರಿಸುವೆವೆಂದು ಶ್ರೀ|| ಸುಭಾಷಚಂದ್ರ ಬೋಸರು ಮಹಾತ್ಮರ ಕಡೆ ತಿಳಿಸಿದರಂತೆ! ಮಹಾತ್ಮರು ಇದು ಕಠಿಣ ಕೆಲಸವೆಂದೂ ಅಸಾಧ್ಯ ಕೆಲಸವೆಂದೂ ಉದ್ಗರಿಸಿದರಂತೆ! ವೃದ್ಧ-ತರುಣರೊಳಗಿನ ದೃಷ್ಟಿಭೇದವಿದೆಂದು ಶ್ರೀ|| ಸುಭಾಷರು ಗಾಂಭೀರ್ಯದಿಂದ ನುಡಿದು ಅದನ್ನು ಸಾಗಿಸುವ ಪುರುಷಾರ್ಥವನ್ನು ತಾವು ಮಾಡಿತೋರಿಸುವ ವಚನ ಕೊಟ್ಟಿದ್ದಾರಂತೆ! ಮೇಲಾಗಿ ೧೧ ಪ್ರಾಂತಗಳಲ್ಲಿ ರಾಷ್ಟ್ರೀಯ ಸಭೆಯ ಪ್ರಭುತ್ವವಿರುವಾಗ ಆಚೆ ಗಡಿನಾಡ, ಈಚೆ ಸಿಂಧ ಪ್ರಾಂತ, ಸುತ್ತು ಮುತ್ತು ಸಂಯುಕ್ತ ಪ್ರಾಂತ ಹೀಗೆ ಕೊಂಗ್ರೆಸು ಪಂಜಾಬ ಪ್ರಾಂತಕ್ಕೆ ಮುತ್ತಿಗೆ ಹಾಕಿದಾಗ ಪಂಜಾಬ ಪ್ರಾಂತದೊಳಗ ಸರ್ ಶಿಕಂದರ ಹಯಾದಖಾನರವರು ಬಹುಕಾಲ ಕೊಂಗ್ರೆಸ ವಿರೋಧಿಯಾಗಿ ರಾಜ್ಯವಾಳುವದು ಸುಲಭವಲ್ಲ. ಈ ಪ್ರಕಾರ ಹಿಂದುಸ್ಥಾನದ ಸಕಲ ಪ್ರಾಂತಗಳಲ್ಲಿ ಕೊಂಗ್ರೆಸ ಪ್ರಧಾನ ಮಂಡಳಗಳು ಸ್ಥಾಪಿಸಲ್ಪಟ್ಟಾಗ ಇವುಗಳನ್ನೆಲ್ಲ ವಿರೋಧಿಸಿ, ಸಂಯುಕ್ತ ರಾಜ್ಯಘಟನೆಯನ್ನು ಬ್ರಿಟಿಶ ಸಾಮ್ರಾಜ್ಯ ಸರಕಾರವು ಸ್ಥಾಪಿಸುವದು ಕಠಿಣ! ಹಟದಿಂದ, ಬಲಾತ್ಕಾರದಿಂದ ಸ್ಥಾಪಿಸಿದಾಗ್ಯೂ ಅದನ್ನು ಬಹು ಕಾಲ ಬಾಳಿಸಿಕೊಳ್ಳುವದು ಎಷ್ಟಕ್ಕೂ ಸಾಧ್ಯವಿಲ್ಲ. ರಾಷ್ಟ್ರಪತಿಗಳು ನುಡಿದಂತೆ ಈ ಯೋಜನೆ ಇದೀಗಲೇ ಮೃತಿಯನ್ನೈದಿದೆ. ರೀತಿಯಂತೆ ಉತ್ತರಕ್ರಿಯೆಯೊಂದಾಗಬೇಕು. ದಹನವಾಗಲಿ, ದಫನವಾಗಲಿ ಸದ್ಯಕ್ಕೆ ಒದಗಿಬರದೆನು.

ಇನ್ನೊಂದು ವಿಷಯ ಉಳಿಯಿತು. ತ್ರಿಪುರಿಯಲ್ಲಿ ರಾಷ್ಟ್ರೀಯ ಸಭೆ ಇನ್ನೆರಡು ತಿಂಗಳಲ್ಲಿ ಸೇರುತ್ತಿದೆ. ಅದಕ್ಕೆ ಅಧ್ಯಕ್ಷರಾರು? ಬಂಗಾಲದ ರಾಷ್ಟ್ರೀಯ ಮುಸಲ್ಮಾನ ಸಂಘದ ಪ್ರಮುಖರಾದ ಪ್ರೊ|| ಹುಮಾಯೂನ ಕಬೀರರವರೂ, ಸರ್ ಪ್ರಫುಲ್ಲಚಂದ್ರ ರೇರವರೂ ಶ್ರೀ|| ಸುಭಾಷಚಂದ್ರ ಬೋಸರವರನ್ನೇ ಮುಂದಿನ ವರ್ಷಕ್ಕೆ ಅಧ್ಯಕ್ಷರಾಗಿ ನೇಮಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಈಗಿನ ರಾಜಕಾರಣದೊಳಗಿನ ಮುಖ್ಯ ಮುಖ್ಯ ಸೂತ್ರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ, ಆ ಪ್ರಕಾರ ಉಪಾಯ ಯೋಜನೆ ಮಾಡಬಲ್ಲ ಶ್ರೀ|| ಸುಭಾಷಚಂದ್ರ ಬೋಸರೇ ಅಧಿಕಾರಸ್ಥಾನದಲ್ಲಿರುವದು ಯೋಗ್ಯವೆಂದು ಶ್ರೀ|| ಕಬೀರ-ರೇರವರ ಮತ. ಮೌಲಾನಾ ಅಬುಲ್ ಕಲಮ್ ಅಝಾದರನ್ನೇ ಅಧ್ಯಕ್ಷರನ್ನಾಗಿ ಆರಿಸಬೇಕೆಂದು ಪಂ|| ಜವಾಹಿರಲಾಲ ನೆಹರೂರವರು ಅಭಿಪ್ರಾಯಪಡುತ್ತಾರೆ. ಸರದಾರ ವಲ್ಲಭಭಾಯಿ ಪಟೇಲರು ಅಖಿಲ ಭಾರತೀಯ ಕೊಂಗ್ರೆಸ ಪಾರ್ಲಿಮೆಂಟರಿ ಕಮಿಟಿಯ ಚೆಅರಮನ್ನಿದ್ದದರಿಂದಲೂ, ಮುಂದಿನ ರಾಜಕಾರಣದಲ್ಲಿ ಪ್ರಾಂತಿಕ ಕೊಂಗ್ರೆಸ ಪ್ರಧಾನ ಮಂಡಳಗಳಿಗೆ ಸಲಹೆ ಕೊಟ್ಟು ಸ್ವರಾಜ್ಯ ಸಂಗ್ರಾಮ ನಡಿಸಬೇಕಾದ್ದರಿಂದಲೂ ಸರದಾರ ವಲ್ಲಭಭಾಯಿ-ಪಟೇಲರೇ ಅಧ್ಯಕ್ಷರಾಗುವದು ಉಚಿತವೆಂದು ಹಲವರ ಅಭಿಪ್ರಾಯ. ಆದರೆ ಮೌಲಾನಾ ಅಬುಲ್ ಕಲಮ ಅಝಾದರವರು ಅಧ್ಯಕ್ಷರಾಗಬಹುದಾಗಿ ಹೇಳುತ್ತಾರೆ. ಮೌ|| ಅಝಾದರವರು ಮುಸಲ್ಮಾನ ಪ್ರಮುಖರಿದ್ದು ನಿತಾಂತ ರಾಷ್ಟ್ರೀಯ ಪ್ರವೃತ್ತಿಯವರು, ಕೊಂಗ್ರೆಸ ಪ್ರಧಾನ ಮಂಡಳಗಳ ರಚನೆ, ಘಟನೆಗಳಲ್ಲಿ ಆಸಕ್ತಿಯಿಂದ ದುಡಿದು ಕೆಲಸ ಮಾಡಿದವರು ಸರದಾರ ವಲ್ಲಭಭಾಯಿ ಪಟೇಲರು. ಅಖಿಲ ಭಾರತೀಯ ಕೊಂಗ್ರೆಸ ಪಾರ್ಲಿಮೆಂಟರಿ ಕಮಿಟಿಯ ಚೆಅರಮನ್ನಿದ್ದಾಗ್ಯೂ ಮೌ|| ಅಝಾದರವರು ಮುಸಲ್ಮಾನ ಸಮಾಜದ ಮಟ್ಟಿಗೆ ಸರ್ವಾಧಿಕಾರ ಪಡೆದ ಮಹನೀಯರು. ಮಹಾತ್ಮರಿಗೆ ಮುಸಲ್ಮಾನ ಸಮಾಜದ ಹಿತವನ್ನು ಸಾಧಿಸಲು ಮೌ|| ಅಝಾದರವರು ಕೊಟ್ಟ ಸಲಹೆಯೇ ಪ್ರಾಧಾನ್ಯ! ಮೌಲಾನಾರವರು ಕೊಂಗ್ರೆಸ ಕಾರ್ಯಕಾರಿ ಮಂಡಳದ ಇಸ್ಲಾಮ ಇಲಾಖೆಯ ಪ್ರಧಾನರೆಂದು ಬೆ|| ಜಿನ್ನಾರವರು ಮೊನ್ನೆ ಮಂಗಳವಾರ ಹೊರಡಿಸಿದ ಪ್ರಕಟಣೆ ಪತ್ರಿಕೆಯಲ್ಲಿ ಮೌ|| ಅಝಾದರವರಿಗೆ ಹೀಯಾಳಿಸುತ್ತಾರೆ. ಇದರ ಮೇಲಿಂದ ಮೌ|| ಅಝಾದರವರ ಯೋಗ್ಯತೆ, ಗೌರವ, ಪ್ರತಿಷ್ಠೆಗಳು ಅಸಾಮಾನ್ಯವೆಂದು ಹೊಳೆಯುವಂತಿವೆ. ಮಹಾತ್ಮರು ಇವರನ್ನೇ ಅಧ್ಯಕ್ಷರಾಗಿ ನೇಮಿಸಲು ಅನುಕೂಲರಿದ್ದಾರೆಂದು ಹೇಳುತ್ತಾರೆ. ಆದರಿಂದ ಬಹುತರವಾಗಿ ಮೌ|| ಅಝಾದರವರೇ ಅಧ್ಯಕ್ಷರಾಗಬಹುದೆಂದು ಊಹೆ! ಬೆ|| ಮಹಮ್ಮದಅಲ್ಲಿ ಜಿನ್ನಾರವರ ಉಲ್ಲೇಖ ಮಾಡದಿದ್ದರೆ ಅವರು ಮುನಿಯುವರು. ಆದರಿಂದ ಅವರದೊಂದು ಧೋರಣವನ್ನು ಉಲ್ಲೇಖಿಸಿ ಬಿಡುವೆನು. ಸರ್ವಾಧಿಪತಿಗಳು ರಾಷ್ಟ್ರೀಯ ಸಭೆಗೆ ಸಂಯುಕ್ತ ರಾಜ್ಯಘಟನೆಯನ್ನು ಸ್ವೀಕರಿಸಲು ಮಾಡಿದ ವಿನಂತಿಯಿಂದ ಬೆ|| ಜಿನ್ನಾರವರು ರೇಗಿದ್ದಾರೆ. ತಮ್ಮ ಮುಸ್ಲಿಮ ಲೀಗೂ ಹಿಂದುಸ್ಥಾನದೊಳಗಿನ ರಾಜಕಾರಣದೊಳಗೆ ಲಕ್ಷಿಸಬೇಕಾದ ಸಂಸ್ಥೆಯೆಂದು ಅವರು ನುಡಿದು ರಾಷ್ಟ್ರೀಯ ಸಭೆಯ ಪ್ರಸ್ಥವನ್ನು ಹಳಿಯುತ್ತಾರೆ. ಬೆ|| ಜಿನ್ನಾರವರು ಸಂಯುಕ್ತ ರಾಜ್ಯಘಟನೆಗೆ ಅನುಕೂಲರಿಲ್ಲ. ಇದೊಂದು ಶುಭ ಲಕ್ಷಣ!

ಹೀಗೆಲ್ಲ ಹಿಂದೀ ರಾಜಕಾರಣದೊಳಗಿನ ಸೂತ್ರಗಳು ಓಡಾಡುತ್ತಿವೆ. ಫಲಿತಾಂಶವೇನೆಂದು ನಾ ಹೇಳಲಾರೆ. ಲೋಕಶಾಹಿಯ ಮನ್ವಂತರದಲ್ಲಿ ಲೋಕಶಾಹಿಯ ವಿಜಯವಾಗುವದು ಖಂಡಿತ! ನಿರಂಕುಶಪ್ರಭುತ್ವದ ಆಯುರ್ದಾಯ ಕ್ಷೀಣವಾಗಿದೆ. ಇಷ್ಟೊಂದು ಮಾತನ್ನು ಇಂದಿಗೆ ನಮೂದಿಸಿಬಿಡುತ್ತೇನೆ.

ನೋಟೀಸು.

ಮೆ|| ಕಲೇಕ್ಟರ ಸಾ|| ಬಾ|| ಜಿಲ್ಲಾ ಕಾನಡಾ ಇವರ ಆಫೀಸಿನಿಂದಾ—

ಸರಕಾರಿ ಹುಕುಂ ರೆವಿನ್ಯು ಡಿಪಾರ್ಟಮೆಂಟ ನಂಬರ 7159/33—9964-B / 17—11—1938 ನೇದರಂತೆ ಹೀಗೆ ತಿಳಿಸುವದರಲ್ಲಿ ಬರುತ್ತದಲ್ಲಾ:—

ಸತ್ಯಾಗ್ರಹದ ಚಳವಳಿಯಲ್ಲಿ ಫೊರಫೀಟ ಆದ ಜಮೀನುಗಳನ್ನು ಫೊರಫೀಟ ಆಗುವ ಕಾಲಕ್ಕೆ ಆ ಜಮೀನುಗಳ ಮೇಲೆ ಇದ್ದ ಬೋಜಾ ಊರ್ಜಿತಗೊಳಿಸಿ ಪರತ ಬಿಟ್ಟುಕೊಡತಕ್ಕದ್ದಿರುತ್ತದೆ. ಆದ್ದರಿಂದ ಇಂಥ ಬೋಜಾದ ಹಕ್ಕು ಇದ್ದವರು ಸದ್ರೀ ತಮ್ಮ ಬೋಜಾದ ಹಕ್ಕನ್ನು ಆಯಾ ಗ್ರಾಮದ ರೆಕಾರ್ಡ ಆಫ್ ರಾಯಟ್ಸದಲ್ಲಿ ದಾಖಲ ಮಾಡಿಸಿಕೊಳ್ಳಬೇಕು

Sd **D. S. BAKHLE.**
Collector of Kanara.

ಅಬ್ಬಬ್ಬಾ! ಏನು ತಲೆ ನಡತ, ಏನು ಜಾಡ್ಯ, ಕೆಟ್ಟ
ಡಾಕ್ಟರರ ಡೋಜ ಸಹ ನಿಷ್ಫಲ!!
ಮಿತ್ರಾ, **ಲೋಕಮಾನ್ಯ** ಘಮಘಮಿಸುವ ಒಂಗಲ ಡೋಜೇ
ಚಿಮರಬೇಡ! **ಚಹದ** ಸಾಕು!!!
ಏನು ಉಪಯೋಗ? ಜೀವಕ್ಕೆ ಹಿತಕರ ರೋಗಪ್ರತಿಬಂಧಕ! ತುಷ್ಟಿ ಪುಷ್ಟಿ ಕ್ಷುಧಾ ಶಾಂತಿಯನ್ನೀಯುವದೇ ಈ ನಾಮಾಂಕಿತ ಚಹದ ಹುಟ್ಟುಗುಣ! ಶ್ವಾಸಕಾಸ, ಉಬ್ಬಸ, ಕೆಮ್ಮು ಇತ್ಯಾದಿಗಳ ತತ್ಕಾಲ ಶಮನ! ಶೌಚ ಅಂತು ಸಾಫ! ಬರೇ ೧೫ ದಿವಸಗಳ ಪ್ರಯೋಗ! ನಿನ್ನ ತೂಕದಲ್ಲಿ ಅಭಿವೃದ್ಧಿ!! ಅದೇ ರೀತಿ ಮುಂದರಿಸು. ನಿನ್ನ ಶುಷ್ಕ ನಿಸ್ತೇಜ ಕಾಯ ದೃಢವಾಗಿ ಸತೇಜನ್ನಾಗಿ ಪರಿವರ್ತಿಸುವದು. ಇದು ವೇದವಾಕ್ಯ. ನಂಬು. ಡಾಕ್ಟರ ಸರ್ಟಿಫಿಕೇಟುಗಳ ತಖ್ತ್ಯಾಂಶ ನೋಡು. ರಾತ್ಲ ೧ಕ್ಕೆ ಬರೇ 0—10—0 ಡಿಸ್ಟ್ರಿಕ್ಟದಲ್ಲಿ ದೊರೆಯುವ ಒಂದೇ ಸ್ಥಳ-
ದಿ ನ್ಯೂ ಸಪ್ಲಾಯ ಏಜನ್ಸಿ, ಕುಮಟಾ.

ಸುಪಾ ಪರಿಷತ್ತು.

ಮುಂಬಯಿ ಸರಕಾರದ ನಿರ್ಣಯಗಳು.

ತಾ. ೨೧-೫-೩೮ನೇಗೆ ಮುಂಬಯಿ ಸರಕಾರದ ಭೂಕಂದಾಯ ಮಂತ್ರಿಗಳ ನಿಮಂತ್ರಣೆಯ ಮೇರೆಗೆ ಮುಲ್ಕಿ-ಜಂಗಲ ಮತ್ತು ಲೋಕಪ್ರಮುಖರ ಸುಪೆಯೊಳಗಿನ ಸಭೆಯಲ್ಲಿ ಆದ ನಿರ್ಣಯಗಳಿಗನುಸಾರವಾಗಿ ತಾ. ೨೫-೧೧-೧೯೩೮ನೇಗೆ ಮುಲ್ಕಿ ಇಲಾಖೆಯ ಸರಕಾರಿ ರಠಾವ ನಂ. ೮೭೯೧/೩೩ನೇದು ಹೊರಡಿಸೋಣಾಗಿದೆ. ಅದರ ವಿವರವೇನೆಂದರೆ.-

೧. ಕಾಡು ಪಶುಗಳ ಹಾವಳಿ.

ಡಿ|| ಮೆಜಿಸ್ಟ್ರೇಟರಿಂದ ತುಬಾಕಿ ಲೈಸನ್ಸ ಪಡೆದ ಕಾನಡಾ ಜಿಲ್ಹೆಯ ನಿವಾಸಿಗಳಿಗೆ ಕಾದಿಟ್ಟ ಅಡವಿಯಲ್ಲಿ ಬೇಟೆಯಾಡುವ ಲಾಯಸನ್ಸನ್ನು ಉಚಿತವಾಗಿ ಪಡೆಯುವ ಅಧಿಕಾರವುಂಟು. ಅದನ್ನವರು ದಕ್ಷಿಣ ಭಾಗದ ಕನ್ಸರ್ವೇಟರರಿಗೆ ಅರ್ಜಿ ಮಾಡಿ ಪಡೆಯತಕ್ಕದ್ದು. ಬ್ಲಾಕ್ ಪದ್ಧತಿ ಇರುವಲ್ಲಿ ಇಂಥವರು ಹಳ್ಳಿಯಿಂದ ೩ ಮೈಲಿನೊಳಗೆ ಇರುವ ಅಡವಿಯಲ್ಲಿ ಬೇಟೆಯಾಡಬಹುದು. ಬ್ಲಾಕ್ ಪದ್ಧತಿ ಇಲ್ಲದಿದ್ದಲ್ಲಿ ಇಡೀ ತಾಲೂಕಿನೊಳಗಿನ ಕಾದಿಟ್ಟ ಅಡವಿಯಲ್ಲಿ ಅವರು ಬೇಟೆಯಾಡಬಹುದು.

೨ ಸಾಗುವಳಿ ಮತ್ತು ನಿವಾಸಸ್ಥಾನದ ಸುತ್ತುಮುತ್ತಲಿರುವ ಅಡವಿಯನ್ನು ಕಡಿದು ತೆಗೆಯುವ ವಿಷಯ.

ಸಾರ್ವಜನಿಕ ಆರೋಗ್ಯರಕ್ಷಣೆಗಾಗಿ, ಬೆಳೆಯ ರಕ್ಷಣೆಗಾಗಿ ಉಳಕೊಳ್ಳುವ ಮತ್ತು ಸಾಗುವಳಿಯಾಗುವ ಪ್ರದೇಶದ ಸುತ್ತುಮುತ್ತು ಕೆಲವು ಸ್ವತಂತ್ರ ಪ್ರದೇಶವಿಡುವದು ಅವಶ್ಯವುಂಟು ದಂಡೆಗುಂಟದ ಪ್ರದೇಶದಲ್ಲಿ ಅಡವಿ ಕಡಿಯುವ ಪ್ರಸಂಗವಿಲ್ಲ. ಒಳಪ್ರದೇಶದಲ್ಲಿ ಅಡವಿ ಬೆಳಕೊಂಡಿದ್ದಲ್ಲಿ ಇಂಥ ಪ್ರಸಂಗವುಂಟು. ಘಟ್ಟದ ಮೇಲಿನ ತಾಲೂಕುಗಳಲ್ಲಿಯೂ, ಡಿವ್ಹಿಜನಲ್ ಫೊರೆಸ್ಟ ಆಫೀಸರರ ಆಲೋಚನೆಯಿಂದ ಕಲೆಕ್ಟರರು ನಿಶ್ಚಯಿಸಬಹುದಾದ ಘಟ್ಟದ ಕೆಳಗಿನ ಹಳ್ಳಿಗಳಲ್ಲಿಯೂ, ಈ ಕೆಳಗೆ ವಿವರಿಸಿದ ಸವಲತ್ತುಗಳಿರಬೇಕು :-

(೧) ತೇಗಿಲ್ಲದ ಪ್ರದೇಶಗಳಲ್ಲಿ— ವಸತಿಪ್ರಧಾನ ಗ್ರಾಮಗಳ ಸುತ್ತುಮುತ್ತು ಅರ್ಧ ಮೈಲು ಅಚೆ-ಈಚೆ ಇರುವ ಅಡವಿಯನ್ನು ಕಡಿದು ತೆಗೆಯಬಹುದು ಮತ್ತು ಸಾಗುವಳಿ ಪ್ರಧಾನ ಹೊಲಗಳ ಸುತ್ತುಮುತ್ತು ಕಾಲುಮೈಲು ಅಡವಿಯನ್ನು ಕಡಿದು ತೆಗೆಯಬಹುದು. ವಸತಿ ಪ್ರಧಾನವಿಲ್ಲದ ಗ್ರಾಮಗಳಲ್ಲಿ ಜನರು ವಸತಿ ಮಾಡಿದ ಭಾಗದ ಸುತ್ತುಮುತ್ತು ಕಾಲು ಮೈಲಿನೊಳಗಿರುವ ಮತ್ತು ೫ ಎಕ್ರೆ ತೋಟ ಇಲ್ಲವೆ ೨೫ ಎಕ್ರೆ ತರಿ ಸಾಗುವಳಿ ಕ್ಷೇತ್ರದ ಸುತ್ತುಮುತ್ತು ⅛ ಮೈಲಿನಲ್ಲಿರುವ ಅಡವಿಯನ್ನು ಕಡಿದು ತೆಗೆಯಬಹುದು.

ಟೀಪು— ೨೦ ಎಕ್ರೆ ತೋಟ ಮತ್ತು ೧೦೦ ಎಕ್ರೆ ತರಿ ಇಷ್ಟು ಸಾಗುವಳಿ ಪ್ರಧಾನ ಪ್ರದೇಶವೆಂದು ಎಣಿಸಲ್ಪಟ್ಟಿದೆ ಇಷ್ಟು ಕ್ಷೇತ್ರವಿರುವ ಯಾವದೇ ಹಳ್ಳಿಯು ವಸತಿಪ್ರಧಾನ ಹಳ್ಳಿಯೆಂದು ಎಣಿಸಲ್ಪಡುವದು ಲೋಕಸಂಖ್ಯೆ ಎಷ್ಟಿದ್ದರೂ ಅದರ ಗಣನೆಯಾಗಲಿಕ್ಕಿಲ್ಲ ೫ ಎಕ್ರೆ ತರಿ ೧ ಎಕ್ರೆ ತೋಟಕ್ಕೆ ಸರಿಯಾಗಿದೆಂದು ಎಣಿಸಲ್ಪಡುತ್ತದೆ.

(೨) ತೇಗಿನ ಪ್ರದೇಶಗಳಲ್ಲಿ- ಗುಂದ, ನಿರಸೋಲ ಮತ್ತು ಹಳಿಯಾಳ, ಮುಂಡಗೋಡ ಪ್ರದೇಶಗಳಲ್ಲಿ ಜನವಸತಿಯುಳ್ಳ ಭಾಗಗಳಲ್ಲಿ ಒಂದು ಫರ್ಲಾಂಗಿನೊಳಗೆ ಬೆಳೆದ ಕಿರಿಝಾಡಿ ಮಾತ್ರ ತೆಗೆಯಲ್ಪಡುವದು. ತೇಗು, ಗಂಧ, ಸೀಸಮ್, ಕರಿಮುತ್ತಲ, ಹೊನ್ನೆ, ಮತ್ತಿ, ನಂದಿ ಮರಗಳು ಕಡಿಯಲ್ಪಡಲಿಕ್ಕಿಲ್ಲ. ಪಶ್ಚಿಮ ವಿಭಾಗದಲ್ಲಿ ಖೈರಮರಗಳು ಕಡಿಯಲ್ಪಡಲಿಕ್ಕಿಲ್ಲ ಹೀಗೆ ಪ್ರದೇಶ ಬಿಟ್ಟು ಉಳಿದ ಸ್ಥಳಗಳಲ್ಲಿ ತೇಗು ಮೊದಲಾದ ಯಾವತ್ತೂ ಮರಗಳು ಕಡಿಯಲ್ಪಡುವವು

(೩) ಈ ಹುಕುಮುಗಳಂತೆ ಅಡವಿ ಕಡಿಸುವ ವಿವಾಟಿನ ಕುರಿತು ಸರಕಾರದ ಆಲೋಚನೆ ನಡೆದಿದೆ. ಅಡವಿ ಕಡಿದ ಬಳಿಕ ಅದನ್ನು ಜಂಗಲ ಸೀಮೆಯಿಂದ ಪೃಥಕ್ಕರಿಸಬೇಕೇನೆಂಬದರ ಕುರಿತು ಸಹ ಆಲೋಚನೆಯಾಗುವದು.

(೪) ಮೇಲೆ ೨ನೇ ಕಲಮಿನಲ್ಲಿ ವಿವರಿಸಿದಂತೆ ಕಿರಿಝಾಡಿ ಕಡಿದು ತೆಗೆದ ಪ್ರದೇಶ ಕಾನ-ಬೆಟ್ಟ ಪ್ರದೇಶವಾಗಿದ್ದರೆ ಆ ಪ್ರದೇಶದಲ್ಲಿ ಪುಕ್ಕಟೆಯಾಗಿ ಮೆಣಸು ಬೆಳಸಲಿಕ್ಕೆ ಅಪ್ಪಣೆಯಾಗುವದು ಇದಲ್ಲದೆ, ಈ ಪ್ರದೇಶದಲ್ಲಿ ನೀಲಗಿರಿ ಎಣ್ಣೆಯ ಗಿಡಗಳನ್ನು ನೆಡಲು ಹಳ್ಳಿಗರು ಅಪೇಕ್ಷಿಸುವಲ್ಲಿ ಅವರಿಗೆ ಜಂಗಲ ಇಲಾಖೆಯವರು ಆ ಗಿಡಗಳನ್ನು ಪೂರೈಸುವರು

(೫) ಗ್ರಾಮಗಳ ಸುತ್ತುಮುತ್ತು ೧ ಮೈಲು ಪ್ರಾಕಾರದೊಳಗೆ ತೇಗಿನ ತೋಟಗಳು ಬೆಳಸಲ್ಪಡಲಿಕ್ಕಿಲ್ಲ ಹಳಿಯಾಳ-ಮುಂಡಗೋಡ [illegible] ಮಾತ್ರ ಈ ಪ್ರಾಕಾರ ಅರ್ಧ ಮೈಲು ಆಗುವದು. ತಾ. ೧೯-೭-೩೭ನೇಗೆ ಮುಂಬಯಿ ಸರಕಾರವು ಹೊರಡಿಸಿದ ಹುಕುಮುಗಳನ್ನು ಉಲ್ಲಂಘಿಸಿ ತೇಗು ನೆಟ್ಟಲ್ಲಿ ಅವನ್ನು ಜಂಗಲ ಇಲಾಖೆಯವರು ತಮ್ಮ ಖರ್ಚಿನಿಂದ ಕಡಿಸಿ ತೆಗೆಯುವರು

(೬) ಜಂಗಲು ಕಡಿದ ಬಳಿಕ ಅದನ್ನು ಪುನಃ ಬೆಳೆಯುವಂತೆ ಮುಚ್ಚುವ ಅವಧಿ ಯಾವದೇ ಪ್ರದೇಶದಲ್ಲಿ ೫ ವರ್ಷಗಳಿಗೆ ಮಿಕ್ಕಿರಲಾರದು. ಪುನಃ ಕಾಡು ಬೆಳೆಯಲಿಕ್ಕೆ ವಿಳಂಬವಾಗುವ ಪ್ರದೇಶದಲ್ಲಿ ಕನ್ಸರ್ವೇಟರರು ವಿಶೇಷ ಹುಕುಮುಗಳನ್ನು ಹೊರಡಿಸಿ ಅವಧಿಯನ್ನು ೧೦ ವರ್ಷಗಳ ತನಕ ಬೆಳಸಬಹುದು. ಹೀಗೆ ಮುಚ್ಚಿದ ಅಡವಿಗಳಲ್ಲಿ ದನಗಳು ಯಾವಾಗಲೂ ಮೇಯಲಡ್ಡಿಯಿಲ್ಲ

೩. ಬೆಟ್ಟಗಳು.

೧ ಎಕ್ರೆ ತೋಟಕ್ಕೆ ೯ ಎಕ್ರೆ ಬೆಟ್ಟದಂತೆ ಬೆಟ್ಟವನ್ನು ತೋಟಗಾರರಿಗೆ ಕೊಡಲು ತಾ. ೨೪-೨-೩೮ನೇಗೆ ಹುಕುಮುಗಳು ಈ ಮೊದಲೇ ಹೊರಟಿವೆ. ಈ ಪ್ರಕಾರ ಬೆಟ್ಟ ಬಿಟ್ಟುಕೊಡಲು ಬೆಟ್ಟದ ಅಭಾವವಿದ್ದಲ್ಲಿ ಕಾನ ಪ್ರದೇಶದಿಂದ ಇಲ್ಲವೆ ಇತರ ಜಂಗಲ-ಪ್ರದೇಶದಿಂದ ಬೆಟ್ಟ ಬಿಟ್ಟುಕೊಡಬೇಕು. ಬೆಟ್ಟದೊಳಗಿರುವ ಜೇನು-ಹುಟ್ಟು ಬೆಟ್ಟದವರವೇ; ಹೊರತು ಸರಕಾರದ್ದಲ್ಲ ಹಾಡಿ-ಪ್ರದೇಶಗಳು ಇನ್ನು ಮುಂದೆ ಬೆಟ್ಟ ಪ್ರದೇಶವೆಂದೆಣಿಸಲ್ಪಡುವವು ಮತ್ತು ಹಾಡಿಗಳಿಗೆ ಬೆಟ್ಟದ ನಿಯಮಗಳು ಅನ್ವಯಿಸುವಂತೆ ಹೊಸ ನಿಯಮಗಳು ಮಾಡಲ್ಪಡುವವು.

೪. ಅಡವಿಗಳನ್ನು ಸುಡುವದು.

(೧) ಪ್ರತಿ ೩ ವರ್ಷಗಳಿಗೊಮ್ಮೆ ಎಲ್ಲ ಅಡವಿ ಪ್ರದೇಶದಲ್ಲಿ ಗ್ರಾಮದ ಸುತ್ತುಮುತ್ತು ೧ ಮೈಲು ಪ್ರಾಕಾರದಲ್ಲಿರುವ ಭಾಗದಲ್ಲಿ ಬೆಂಕಿ ಹಚ್ಚಲಿಕ್ಕೆ ಅಪ್ಪಣೆಯುಂಟು. ಗ್ರಾಮ-ನಿವಾಸಿಗಳ ಆಲೋಚನೆಯಿಂದ ಜಂಗಲ ಇಲಾಖೆಯವರು ಅಡವಿ ಸುಡುವ ಕ್ರಮವನ್ನು ಕೈಕೊಳ್ಳುವರು.

(೨) ಮ್ಯಾನರ ಜಂಗಲುಗಳಲ್ಲಿ ಗಿಡ-ಮರಗಳಿಲ್ಲದ ಪ್ರದೇಶಗಳನ್ನು ಹುಲ್ಲು ಬೆಳೆಯಲಿಕ್ಕನುಕೂಲವಾಗುವ ದೆಸೆಯಿಂದ ಜನರು ಪ್ರತಿ ಏಪ್ರಿಲ್-ಮೇ ತಿಂಗಳುಗಳಲ್ಲಿ ಸುಡಬಹುದು.

(೩) ಹೀಗೆ ಸುಟ್ಟ ಪ್ರದೇಶದೊಳಗೆ ಮೊದಲಿನ ೨ ವರ್ಷ ಕುಂಬ್ರಿ ಬೆಳಸಸಿಗುವದು ಆ ಮೇಲೆ ಈ ಪ್ರದೇಶದಲ್ಲಿ ಗ್ರಾಮ-ನಿವಾಸಿಗಳು ಇಷ್ಟವಿದ್ದಂತೆ ಬೆಳೆ ಬೆಳಸಿಕೊಂಡು ಪ್ರಯೋಜನ ಪಡೆಯಬಹುದು!

೪. ಕಾಳಿ ಮರ, ಗಂಧದ ಮರ, ಬೆತ್ತ, ಬಿದುರುಗಳ ವಿಷಯ ಅನುಕೂಲ್ಯಗಳು.

(೧) ಕಾಳಿಮರ— ತಾ. ೨೪-೨-೩೮ನೇ ಸರಕಾರಿ ರಠಾವಿನಂತೆ ಹೊನ್ನಾವರ ತಾಲೂಕಿನಲ್ಲಿಯೂ ಭಟಕಳ ಪೇಟೆಯಲ್ಲಿಯೂ ಅಘನಾಶಿನಿ ಹೊಳೆಯ ದಕ್ಷಿಣ ಭಾಗದ ಕುಮಟಾ ತಾಲೂಕಿನಲ್ಲಿಯೂ ಬಡವರಿಗೆ ಅಂದರೆ ಪ್ರಾಯಸ್ಥರಿಗೆ ೧ ಮರ, ಮತ್ತು ೧೨ ವರ್ಷದ ಒಳಗಿನ ಮಕ್ಕಳಿಗೆ ½ ಮರ; ಹೀಗೆ ಮರಗಳನ್ನು ಪುಕ್ಕಟೆಯಾಗಿ ಕೊಡಬೇಕೆಂದು ನಿರ್ಣಯಿಸೋಣಾಗಿದೆ. ಆದರೆ ವರ್ಷಕ್ಕೆ ಈ ಪ್ರಕಾರ ೧೪,೦೦ಕ್ಕೆ ಮಿಕ್ಕಿ ಮರಗಳನ್ನು ಕೊಡಬರಲಿಕ್ಕಿಲ್ಲ ಯಾಕೆಂದರೆ ಇವಕ್ಕೂ ಮಿಕ್ಕಿ ಕೊಟ್ಟಲ್ಲಿ ಇದೇ ಪ್ರಕಾರ ಮರಗಳನ್ನು ವರ್ಷವರ್ಷವೂ ಕೊಡುತ್ತಿರಲು ಸಾಧ್ಯವಾಗಲಿಕ್ಕಿಲ್ಲ. ಬಡತನದ ಕುರಿತು ಮಾಮಲೇದಾರರಿಂದಾಗಲಿ, ಮಹಾಲಕರಿಗಳಿಂದಾಗಲಿ ಸರ್ಟಿಫಿಕೇಟು ಪಡೆದವರಿಗೆ ರೇಂಜರರು ೧೪೦೦ ಮರಗಳ ತನಕ ಕಡಿದೊಯ್ಯಲು ಅಪ್ಪಣೆ ಕೊಡುವರು. ಪ್ರತಿ ವರ್ಷ ೧೪೦೦ ಮರಗಳಿಗೆ ಮಿಕ್ಕಿ ಮಾಮಲೇದಾರ-ಮಹಾಲ್ಕರಿಯವರು ಸರ್ಟಿಫಿಕೇಟುಗಳನ್ನು ಹೊರಡಿಸದಂತೆ ಕಲೆಕ್ಟರರು ಜಾಗ್ರತೆ ಕೊಳ್ಳತಕ್ಕದ್ದು.

(೨) ಗಂಧದ ಮರ- ಗಂಧದ ಕೆಲಸ ಮಾಡುವವರಿಗೆ ಸವಲತ್ತಿನ ದರದಿಂದ ಗಂಧದ ಕಟ್ಟಿಗೆ ಕೊಡಲ್ಪಡುವದು. ೧ ಮನೆತನಕ್ಕೆ ೩ ಮಣ ಗಂಧ ಈ ದರದಿಂದ ಕೊಡಲಾಗುವದು. ಗಂಧದ ಕೆಲಸ ಮಾಡುವವರ ಸಹಕಾರ ಸಂಘಗಳಿದ್ದಲ್ಲಿ ಸಂಘದ ಸಭಾಸದರ ಒಂದೊಂದು ಮನೆಯವರಿಗೆ ೫-೬ ಮಣದಂತೆ ಗಂಧದ ಕಟ್ಟಿಗೆ ಸಿಗುವದು.

ಸವಲತ್ತಿಯ ದರವೆಂದರೆ ಪೇಟೆ-ದರದ ಅರ್ಧದಷ್ಟು. ಈ ದರವನ್ನು ಕನ್ಸರ್ವೇಟರರು ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಪ್ರಕಟಿಸುವರು.

(೩) ಬುಟ್ಟಿ-ಚಾಪೆ-ಕಸಬರಿಗೆ ಮೊದಲಾದವುಗಳನ್ನು ಮನೆಯ ಉಪಯೋಗಕ್ಕಾಗಿ ಇಲ್ಲವೆ ಗ್ರಾಮ-ಕೈಗಾರಿಕೆಗಳಿಗಾಗಿ ಎಷ್ಟು ಹಳ್ಳಿಯವರು ಎಷ್ಟು ತರದ ಹುಲ್ಲು-ಬೆತ್ತಗಳನ್ನು ಅಡವಿಯಿಂದ ಉಚಿತವಾಗಿ ತರಬಹುದು ಆದರೆ ಮಾಂಟಕ್ಕೆ ಈ ಸವಲತ್ತು ಅನ್ವಯಿಸುವದಿಲ್ಲ

೬. ಗಿಡಗಳನ್ನು ನೆಡುವದು.

(೧) ಇಂಜಿನಿಯರ ಖಾತೆಯ ಮಾರ್ಗಗಳ ಪಕ್ಕಗಳಲ್ಲಿ ಗಂಪ್ಲೂಟು ಆಚೆ-ಈಚೆ ಇದ್ದ ಮರಗಳು ಕಡಿಯಲ್ಪಡುತ್ತಿವೆ. ಅಂತೆಯೇ ಜಿಲ್ಹಾ ಬೋರ್ಡುಗಳ ಮಾರ್ಗಗಳ ಆಚೆಈಚೆಗಿರುವ ಮರಗಳೂ ಕಡಿಯಲ್ಪಡುವವು.

(೨) ಈಗ ಜಂಗಲ ಇಲಾಖೆಯ ಆಧೀನದಲ್ಲಿಲ್ಲದ ಪ್ರದೇಶದಲ್ಲಿ ತೆಂಗು-ಮಾವು ಮೊದಲಾದ ಹಣ್ಣು-ಹಂಪಲುಗಳ ಗಿಡಗಳನ್ನು ನೆಡಲು ಸಾಧ್ಯವಿದ್ದಲ್ಲಿ ಅಂದ ಪ್ರದೇಶ ತಕ್ಕ ಕರಾರಿನ ಮೇಲೆ ಜನರಿಗೆ ಕೊಡಲ್ಪಡುವದು. ಆದರೆ ಹೀಗೆ ಹಣ್ಣು-ಹಂಪಲ ನೆಡಲಿಕ್ಕೆ ಬೇರೆ ಪ್ರದೇಶಗಳೇ ಇಲ್ಲದಿದ್ದಲ್ಲಿ ಇಲ್ಲವೆ ಈಗಿದ್ದ ಪ್ರದೇಶದೊಳಗೆ ಹಣ್ಣು-ಹಂಪಲಗಳನ್ನು ನೆಟ್ಟು ಜನರು ಸಂಪೂರ್ಣ ಪ್ರಯೋಜನಪಡೆಯುವಲ್ಲಿ ಸಾರಿಮರಗಳನ್ನ ಕಡಿದ ಬಳಿಕ, ಆ ಪ್ರದೇಶವನ್ನು ಪ್ರಯೋಗಾರ್ಥವಾಗಿ ತೆಂಗು-ಮಾವು ಮೊದಲಾದ ಹಣ್ಣು-ಹಂಪಲಗಳ ಗಿಡಗಳನ್ನು ನೆಡಲು ಜನರಿಗೆ ಕೊಡಬೇಕು.

ಗೌಡ ಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ.

೧೯೩೮-೩೯ನೇ ಸಾಲಿನ ಅಧಿಕಾರಿ ಮಂಡಳ. ಅಧ್ಯಕ್ಷ- ಡಾ॥ ಪ. ಪ್ಪಿ. ಬಾಳಿಗಾ. ಚೇಅರಮನ- ಡಾ॥ ಯು. ಪಿ. ರಾವ್. ಕಾರ್ಯದರ್ಶಿ ರಾ॥ ಜಿ ಎಸ್. ಗುಡಾಳ, ಡಿ. ಎಸ್. ಗಾಯತೊಂಡೆ. ಕೋಶಾಧಿಕಾರಿ- ರಾ॥ ಎಸ್ ಆರ್. ಪೈ, ಎಸ್. ಎಸ್. ವಾಗಳೆ. ಸಭಾಸದರು ರಾ॥ ಆರ್. ಕೇ ಪ್ರಭು, ಸುಜೀರ ಪುಂಡ್ಲೀಕ ನಾಯಕ, ಕೆ. ಪ್ಪಿ. ಶ್ಯಾನಭಾಗ, ಮುರಲೀಧರ ವಿಠೋಬ ಶೇಣವಿ, ಪಿ. ಪಿ. ಮಹಾಲೆ. ಸ್ಥಾನಿಕ ಪ್ರತಿನಿಧಿಗಳು- ಕಾರವಾರ- ರಾ॥ ಕೇ. ಆರ್. ಹಳದೀಪುರಕರ, ಜೇ ಪಿ ಶೇಣವಿ, ಮಾಧವ ಎಸ್. ಹಳದೀಪೂರ; ಅಂಕೋಲಾ- ರಾ॥ ಶ್ರೀನಿವಾಸ ಗಾಂಪುರಂಗ ಕಾಮತ, ಕೃಷ್ಣ ರಾಮಚಂದ್ರ ಹೆಗಡೆ, ಕುಮಟಾ- ರಾ॥ ಕೆ. ಪಿ. ಪ್ರಭು, ದೇವಪ್ಪಾ ಕಾಂತು ನಾಯಕ; ಹೊನ್ನಾವರ- ರಾ॥ ವೆಂಕಟ್ರಮಣ ವಿಠ್ಠಲ ಶ್ಯಾನಭಾಗ, ಅನಂತ ಮರ್ತ ಶ್ಯಾನಭಾಗ; ಶಿರ್ಶಿ- ರಾ॥ ಎಸ್ ಎನ್. ಕೇಶವೈನ್, ಮುಲ್ಕಿ- ಡಾ॥ ರಾಯಪ್ಪ ಕಾಮತ, ರಾ॥ ಯು. ಕೃಷ್ಣರಾವ್.

ಜಾಹೀರ ನೋಟೀಸು.

ದಿ ಸಾಣಿಕಟ್ಟಾ ಕೋ-ಓಪರೇಟಿವ್ ಸೋಲ್ಟ ಸೇಲ ಸೊಸೈಟಿ ಲಿಮಿಟೆಡ್, ಸಾಣಿಕಟ್ಟಾದ ಈ ಕೆಳಗಿನ ಮಾಲ್ಕಿಯ ಆಸ್ತಿಗಳನ್ನು ಮಾರುವದದೆ- ಕಾರಣ ಈ ಆಸ್ತಿಗಳನ್ನು ಕ್ರಯಕ್ಕೆ ಕೊಳ್ಳುವರೇ ಇಚ್ಛಿಸುವವರು ಸೊಸೈಟಿಯ ಹತ್ತರ ಪತ್ರವ್ಯವಹಾರ ಮಾಡುವರೇ ವಿನಂತಿ. ಯೋಗ್ಯ ಧಾರಣೆ ಬಾರದಿದ್ದಲ್ಲಿ ಈ ಆಸ್ತಿಗಳನ್ನು ಇದೇ **2-4-1939**ನೇ ದಿವಸ ಸೊಸೈಟಿಯ ಆಫೀಸಿನಲ್ಲಿ (ಕುಮಟಾ ತಾಲೂಕ ಪೈಕಿ ಸಾಣಿಕಟ್ಟೆಯಲ್ಲಿ) ಜಾಹೀರ ಲಿಲಾಂ ಏಲಂ ಮಾಡಲ್ಪಡುವವು. ಹೆಚ್ಚಿನ ಸವಾಲು ಧಾರರ ಸವಾಲು ಸೊಸೈಟಿಯ ಮೆನೇಜಿಂಗ ಕಮಿಟಿಯಲ್ಲಿ 10—4—1939ನೇದರ ಒಳಗೆ ಕಾಯಂ ಮಾಡುವದರಲ್ಲಿ ಬರುವದು ಆಸ್ತಿಯ ವರ್ಣನೆ:—

(1) ಹೊನ್ನಾವರ ತಾಲೂಕ ಹೇರಂಗಡೀ ಗ್ರಾಮದ ಆಸ್ತಿ:—

ಸ. ನಂಬ್ರ.	ಕ್ಷೇತ್ರ.	ಆಕಾರ.	ಇದರಲ್ಲಿಯ ಸವಸ್ಯಾಕ
279	6—33—0	37—9—0	6/7 ಅಂಶ ಮಾಲ್ಕಿ ಹಕ್ಕು.

(2) ಹೊನ್ನಾವರ ತಾಲೂಕ ಸರಳಗಿ ಗ್ರಾಮದ ಆಸ್ತಿ:—

ಸ. ನಂಬ್ರ	ಕ್ಷೇತ್ರ	ಆಕಾರ					
19	1—24—0	7—6—0	ಪೈಕಿ	ಸವಸ್ಯಾಕ	4/8	ಅಂಶ ಮಾಲ್ಕಿ	ಹಕ್ಕು.
25	1—23—0	7—14—0	〃	〃	12/24	〃	〃
27	0—30—0	3—12—0	〃	〃	4/8	〃	〃
40	2—38—0	7—13—0	〃	〃	2/4	〃	〃
45	1—13—0	6—1—0	〃	〃	2/4	〃	〃
48	3—0—0	13—9—0	〃	〃	12/24	〃	〃
49	2—23—0	10—8—0	〃	〃	4/24	〃	〃
50	0—27—0	2—8—0	〃	〃	4/8	〃	〃
52-2	1—35—0	2—1—1	〃	〃	4/24	〃	〃
53	1—18—0	4—15—4	〃	〃	12/24	〃	〃
54	6—21—0	6—5—0	〃	ಪೂರಾ ಮಾಲ್ಕಿ ಹಕ್ಕು			
57	6—8—0	11—4—0	〃	12/24 ಮಾಲ್ಕಿ ಹಕ್ಕು			
58	4—13—0	18—2—0	〃	12/24 〃 〃			
61-1	0—1—0	0—11—0	〃	12/24 〃 〃			
61-3	4—5—0	11—13—15	〃	12/24 〃 〃			

(3) ಅಂಕೋಲಾ ತಾಲೂಕ ಪೈಕಿ ಅಗರಗೋಣ ಗ್ರಾಮದ ಆಸ್ತಿಯ ವಿವರವು:—

ಸ. ನಂಬ್ರ.	ಕ್ಷೇತ್ರ.	ಆಕಾರ	
46 ಪೈಕಿ	0—6—0	0—11—6	ಇವುಗಳಲ್ಲಿಯ ಸಂಪೂರ್ಣ ಮಾಲ್ಕಿ ಹಕ್ಕು.
168 ಪೈಕಿ	0—33—0	4—15—0	〃
171	1—3—0	6—4—0	〃
239 ಪೈಕಿ	0—8—14	1—4—0	〃
260 ಪೈಕಿ	0—23—0	3—1—0	〃
263	0—24—0	3—4—0	〃

ಈ ರೀತಿ ಸ್ಥಳಗಳಾಗಿರುತ್ತವೆ. ಹೆಚ್ಚಿಗೆ ಮಾಹಿತಿ ಬೇಕಾದವರು ಸೊಸೈಟಿಯ ಆಫೀಸಿಗೆ ಪತ್ರ ವ್ಯವಹಾರ ಮಾಡಬಹುದು. ಯಾ ಪ್ರತ್ಯಕ್ಷ ಬಂದು ಮಾಹಿತಿಕೊಳ್ಳಬಹುದು.

V. G. NADKARNY,
Secretary,
The Sanikatta Co-operative Salt Sale Society. Ltd.
Post SANIKATTA

Sanikatta,
14—12—1938.

ಪ್ರವಾಸಿ ಜನರಿಗೆ

ಊಟ-ಉಪಚಾರಗಳ

ಉತ್ತಮ ವ್ಯವಸ್ಥೆ.

ಮಾಧವಾಶ್ರಮ

ಕಾರವಾರ.

ಮಧ್ಯವರ್ತಿ ಸ್ಥಳ;

ಉತ್ಕೃಷ್ಟ ಊಟ,

ಉತ್ತಮ ಹವೆಯ ಕೋಣೆಗಳು,

ಊಟ-ಉಳಕೊಳ್ಳುವ ಅನುಕೂಲತೆ!

ಶ್ರೀ ಷಣ್ಮುಖ ಆಯುರ್ವೇದ ಚಿಕಿತ್ಸಾಲಯ.

ಕ್ಷಯ, ಅಪಸ್ಮಾರ, ಕುಷ್ಟ, ಪ್ರಮೇಹ, ಮಹಾವಾತ ಇತ್ಯಾದಿ ಸಣ್ಣ-ದೊಡ್ಡ ಯಾವತ್ತೂ ರೋಗಗಳಿಗೆ ಔಷಧಗಳನ್ನು ಕೊಟ್ಟು ರೋಗಮುಕ್ತರನ್ನಾಗಿ ಮಾಡುವೆವು. ಇವಲ್ಲದೆ ಆಯುರ್ವೇದೋಕ್ತ ಅನೇಕ ತೈಲ್ಯ, ಘೃತ, ಲೇಹ, ಭಸ್ಮಾದಿಗಳು ಮಾರಾಟಕ್ಕೂ ಸಿದ್ಧವಾಗಿರುವವು.
☞ ಪ್ರತ್ಯೇಕವಾಗಿ ಆರ್ಡರ ಮಾಡಿದರೆ ಆಯಾ ಔಷಧಗಳನ್ನು ತಯಾರ ಮಾಡಿ ಕೊಡುವೆವು

ಮಾಲಕ :- ಕೇ. ರಾಮ ಪಂಡಿತ, ಪೋ. ಕುಮಟಾ. ಜಿ. ಉ ಕಾನಡಾ.

ಪತ್ರಕರ್ತರ ಮುಡಿಗನ್ನಡಿ.

ಗ ಜಿಲ್ಹಾಧಿಪರಾದ ರಾ|| ಬಿಷಿಲೇಯುವರು ನಮ್ಮ ಕುಮಟಾ ಮ್ಯುನಿಸಿಪಾಲಿಟಿಯವರಿಗೆ ಮಾಡಿದ ಸದುಪದೇಶ ವಿಚಾರಾರ್ಹವಿದೆ. ಮ್ಯುನಿಸಿಪಲಿಟಿಯಲ್ಲಿ ಲೋಕಸೇವೆಯ ನಿಮಿತ್ತದಿಂದ ಸಭಾಸದರಾಗಿ ಸೇರಿದವರು ಮತ್ಸರಪರಿತರಾದರೆ ಜಿಲ್ಹಾಧಿಪರಿಂದ ದಕ್ಷಅಧಿಕಾರಿಯಬುದ್ಧಿ ಸಮಯಗಳಅಪವ್ಯಯವಾಗುತ್ತದೆಂದು ಜಿಲ್ಹಾಧಿಪರು ವಿವರಿಸಿ ಸದಸ್ಯರಿಗೆ ಮ್ಯುನಿಸಿಪಾಲಿಟಿಯೊಳಗ ಲೋಕಸೇವೆಯ ಪ್ರವೃತ್ತಿ ಹಿಡಿದು ನಿಸ್ಪೃಹರಾಗಿ ದುಡಿಯಲು ಉಪದೇಶ ಮಾಡಿದ್ದಾರೆ. ವ್ಯಕ್ತಿ ಗೌರವ ವ್ಯಕ್ತಿ ದ್ವೇಷ ವ್ಯಕ್ತಿ ಕಲಹ ವ್ಯಕ್ತಿ ವಿವಾದಗಳನ್ನು ತೀರಿಸಿಕೊಳ್ಳುವದಕ್ಕಾಗಿ ಮ್ಯುನಿಸಿಪಾಲಿಟಿಯೊಳಗೆ ಸೇರುವದಲ್ಲವಾಗಿಯೂ ಅವನ್ನು ಆಯಾ ಸ್ಥಳದಲ್ಲಿಯೇ ನಡಿಸತಕ್ಕದ್ದೆಂದೂ ಮ್ಯುನಿಸಿಪಾಲಿಟಿಯು ಲೋಕಸೇವೆಯ ಪವಿತ್ರ ಕ್ಷೇತ್ರವಾದ್ದರಿಂದ ಲೋಕಸೇವೆಯನ್ನೇ ಹೆಗ್ಗುರಿಯಾಗಿಟ್ಟುಕೊಂಡು ದುಡಿಯಬೇಕಾಗಿಯೂ ಬೋಧಿಸಿದ್ದಾರೆ. ಜಿಲ್ಹಾಧಿಪರು ಕುಮಟಾ ಮ್ಯುನಿಸಿಪಾಲಿಟಿಯ ಸಭಾಸದರ ವಿದ್ಯಮಾನ ಜಿಲ್ಹೆಯೊಳಗಿನ ಯಾವತ್ತೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಈ ಸದುಪದೇಶ ಮಾಡಿದ್ದಾರೆಂದು ನಾವು ಎಣಿಸುತ್ತೇವೆ. ಸ್ಥಾನಿಕ ಸ್ವರಾಜ್ಯ ಸ್ಥಾಪನೆಯ ಮೂಲ ಉದ್ದೇಶವೇ ಬೇರೆ ಈವಾಗ ಆದರಿಂದ ಜನಸಾಮಾನ್ಯರಲ್ಲಿ ಉಂಟಾದ ಪರಿಣಾಮವೇ ಬೇರೆ! ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇಲೆಕ್ಶನುಗಳಲ್ಲಿಯೂ ಆಡಳಿತೆಯಲ್ಲಿಯೂ ಲೋಕಸೇವೆಯನ್ನು ಕಣ್ಮರೆ ಮಾಡಿ, ಪಕ್ಷಗೌರವ ಜಾತಿಗೌರವ, ಆತ್ಮಪ್ರತಿಷ್ಠೆಗಳಿಗಾಗಿ ಸಭಾಸದರು ಪ್ರಯತ್ನ ನಡಿಸುವದನ್ನು ನಾವು ನೋಡುತ್ತೇವೆ. ನಿರಪೇಕ್ಷ ಸೇವೆಗಾಗಿ ಯಾರೂ ಇಲೆಕ್ಶನಿನಲ್ಲಿ ಹೋರಾಡುವದಿಲ್ಲ. ಈ ಮಾತು ಎಲ್ಲರ ಅನುಭವಸಿದ್ಧ.

ಶ್ರೀ ಮಹಾತ್ಮರಾದರೂ ತಮ್ಮ ಮಟ್ಟಿಗೆ ಇದೇ ಅಭಿಪ್ರಾಯದವರು. ಮೊನ್ನೆ ಪ್ರಕಟಗೊಂಡ 'ಹರಿಜನ' ಪತ್ರಿಕೆಯಲ್ಲಿ ಜಿಲ್ಹಾ ಬೋರ್ಡುಗಳ ವಿಷಯ ಮಹಾತ್ಮರು ಬರೆದ ಲೇಖವನ್ನೋದಿದರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪಟಿನರಗಳನ್ನು ಆಮೂಲಾಗ್ರ ಶಿಸ್ತುಪಡಿಸಗೊಳಿಸುವದು ಅವಶ್ಯವೆಂದು ಕಾಣುತ್ತದೆ. ಇವುಗಳಿಂದ ಜನರ ಮೇಲೆ ನಿರರ್ಥಕವಾದ ತೆರಿಗೆಯ ಹೊರೆಯು ಬೀಳುತ್ತದೆ. ಸಭಾಸದರು ವಾದವಿವಾದ ವಾಗ್ವಾದಗಳನ್ನು ಬೆಳೆಸಿ ಕಾಲಹರಣ ಮಾಡುತ್ತಾರೆ. ನಿಜ ರಚನೆಯಿಂದ ಲೋಕಸೇವಾ ಪ್ರೇರಿತರಾಗಿ ಬೋರ್ಡಿನಲ್ಲಿ ಸೇರಿಕೊಂಡ ಸಭಾಸದರಿಗೆ ತಕ್ಕ ಕೆಲಸವಿಲ್ಲ. ಹೀಗೆ ಮಹಾತ್ಮರ ಮುಖಮುದ್ರೆಬಂದ ಮತ್ತು ಸರಕಾರ ಜಿಲ್ಹಾ ಬೋರ್ಡುಗಳ ಸೇವಾವೆಗಳ ಮೇಲಿಂದ ಬರೆಯುತ್ತಾರೆ. ಈ ಗಂಭೀರ ಉತ್ಪನ್ನ ಮಾರ್ಗಗಳನ್ನು ಕಾಪಾಡಲು ತಕ್ಕಷ್ಟಿಲ್ಲ. ಸುದೈವ ಜಿಲ್ಹಾ ಬೋರ್ಡಿನಲ್ಲಿ ಕೊಂಗ್ರೆಸ ಪಕ್ಷದ ಬಹುಮತವಿದೆ, ಅವರಿಗೆ ಲೋಕಸೇವಾ ಪಾಠ ಇಂಬಿಲ್ಲದೆ ಅವರು ಮಹಾತ್ಮರ ಸಲಹೆ ಕೇಳಿದರು. ರಾಷ್ಟ್ರೀಯ ಪಂಥದಲ್ಲಿ ಸಭಾಸದರು ಸರ್ವಸ್ಫೂರ್ತಿಯಿಂದ ಸ್ವತಃ ಮಾರ್ಗಗಳ ದುರುಸ್ತಿಯನ್ನು ಮಾಡುವಂತೆ ಒಂದು ಯೋಜನೆಯನ್ನು ತಯಾರಿಸಿದ್ದೇವೆ. ಹರಿಜ ಬೇಕು "ಹೀಗವರು ಮಹಾತ್ಮರ ಕಡೆ ಪ್ರಾರ್ಥಿಸಿಕೊಳ್ಳಲು ಮಹಾತ್ಮರು ನವಿವಷ್ಟೇನಂದರೆ 'ರಾಷ್ಟ್ರೀಯ ಎರಡಲ್ಲಿಷ್ಟ' ಲೋಕಸೇವೆ ಮಾಡುವದು ಜಾಹೀರಾಗುತ್ತದೆ. ನಿಮ್ಮ ಪ್ರಪಂಚವನ್ನು ನೋಡಿಕೊಂಡು ಸಭಾಸದರಿರುವ ಅವಧಿಯಲ್ಲಿ ನಿಯಮಿತ ಕಾಲ ನೀವು ಲೋಕಸೇವೆ ಮಾಡಬೇಕ, ಆ ಯಿದೆಯಂತೆ ಅವಶ್ಯ ವಿದ್ಯಾಗ ಸಭೆಸೇರಿ ವಿಷಯಗಳನ್ನು ಮಂಜೂರಮಾಡಿಕೊಳ್ಳತಕ್ಕದ್ದು, ಉದ್ಧಟವಾದ ವಿವಾದಗಳನ್ನು ಮಾಡಿಕೊಳ್ಳಕೂಡದ, ಚಿಕ್ಕ ಪುಟ್ಟ ನಾಮಕಾರಿಗಳಿಗಾಗಿ ಕಲಹ ನಡಿಸಕೂಡದು. ಸ್ಥಿರ ಅಂಶವಕೆ ಪದಕದ ಸ್ಥಾನಿಕರೆಂದೆಣಿಸಿಕೊಂಡು ನೀವು ದುಡಿಯಬೇಕು. ಶಾಲೆಗಳನ್ನು ದಕ್ಷತೆಯಿಂದ ನಡಿಸಬೇಕ. ಜನರಿಗೆ ಆರೋಗ್ಯಪಾಠಗಳನ್ನು ಕಲಿಸಬೇಕು. ಕಡಕರಿಗೆ ಮದ್ಯಪಾನ ಒಲ್ಲದವರಾಗಿ ಗೊಳಿಸಲು ಯತ್ನಿಸಬೇಕ. ರಾತ್ರಿ ಶಾಲೆಗಳನ್ನು ತೆರೆದು ಪ್ರೌಢರಿಗೆ ಕಲಿಸಬೇಕು. ಸ್ವಯಂಸ್ಫೂರ್ತಿಯಿಂದ ಲೋಕಸೇವೆ ನಡಿಸಿ ಜನರಿಗೆ ಸ್ವೋದಾಹರಣೆ ಹಾಕಿಕೊಟ್ಟರೆ ಮಾತ್ರ ಮತದಾರರು ನಿಮಗೆ ಆರಿಸಿ ಕಳಿಸಿದ್ದು ಸಾರ್ಥಕವಾದೀತು!" ಮಹಾತ್ಮರು ಈ ಪ್ರಕಾರ ಸಭಾಸದರೊಳಗ ಸೇವಾ ಪ್ರವೃತ್ತಿ ಮಿಗಿಲಾಗುವಂತೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಪಟಿನಗಳಲ್ಲಿ ತಿದ್ದುಪಾಟ ಮಾಡಲು ಸೂಚಿಸಿದ್ದಾರೆ. ಈಗಿನ ಮಟ್ಟಿಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ನಿರರ್ಥಕವೆಂದೇ ಮಹಾತ್ಮರ ಅಭಿಪ್ರಾಯ, ಆಳವಾಗಿ ಪರ್ಯಾಲೋಚಿಸುವವರು ಇವು ಅನಿಷ್ಟವೆಂದಾಗಲಿ, ಅರಿಷ್ಟವೆಂದಾಗಲಿ ಕರೆ ಹೊಡೆಯದಿರರು. ಇಲೆಕ್ಶನ್ ಕಾಲದಲ್ಲಿ ಕಂಡುಬರುವ ರಕ್ತಪಾತ, ವಂಚನೆ, ದ್ವೇಷ ಮತ್ಸರ ಮೊದಲಾದ ವಿಕಾರಗಳ ವಿಚಾರ ಮಾಡಿದರೆ ಸ್ಥಾನಿಕ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ನಂಜನಗೂಡು ಟೂತ್ ಪೌಡರ್. (ರಿಜಿಸ್ಟರ್ಡ)

ಹಲ್ಲುಗಳನ್ನು ಶುಭ್ರವಾಗಿಡುವದರಲ್ಲೂ, ಗಟ್ಟಿಪಡಿಸುವದರಲ್ಲೂ ಜಗತ್ಪ್ರಸಿದ್ಧವಾಗಿದೆ

ಶ್ರೀಕರ ಕಸ್ತೂರೀ ಮಾತ್ರೆ. [ಪೊಟ್ಟಣಕ್ಕೆ 0 1-0

ಸುವಾಸನೆಯುಳ್ಳ ಈ ಮಾತ್ರೆಗಳು ಮಕ್ಕಳ ಮತ್ತು ದೊಡ್ಡವರ ನೆಗಡಿ ಕೆಮ್ಮು, ಅಜೀರ್ಣ, ಜ್ವರ ಮುಂತಾದ್ದಕ್ಕೆ ಶ್ರೇಷ್ಠ ಔಷಧವಾಗಿದೆ ಬೆಲೆ 0—4—0 0—2—0

ಶ್ರೀಕರ ಬಾಲಸಂಜೀವಿನಿ.

ಚಿಕ್ಕ ಮಕ್ಕಳ ಮಂದಜ್ವರ ಶೀತಜ್ವರ, ಎಳವು ಇತ್ಯಾದಿ ರೋಗಗಳಿಗೆ ಸಂಜೀವನ ಬೆಲೆ 0—4—0
ದೊರೆಯುವ ಸ್ಥಳ ಹೊನ್ನಾವರ ಕಲ್ಯಾಣಪೂರ ಬ್ರದರ್ಸ, ಕುಮಟಾ ದೇವಪ್ಪಾ ಅಯ್ಯಪ್ಪ ನಾಯ್ಕ, ದಿ ನ್ಯೂ ಸಪ್ಲಾಯ ಏಜನ್ಸಿ, ದಿ ಸ್ಪೆಷಲ್ ಫಾರ್ಮಸಿ
ಪತ್ತೆ ನಂಜನಗೂಡು ಸದ್ವೈದ್ಯಶಾಲಾ ಬ್ರೆಂಚ್ ರಥಬೀದಿ, ಮಂಗಳೂರು.

ಚಿತ್ರಬಿಂದು

ಮಕ್ಕಳಮರಣವನ್ನು ತಪ್ಪಿಸುವುದು.

(ರಿಜಿಸ್ಟರ್ಡ) (ಲಿವರ ಕ್ಯೂರ್)

ಏಜನ್ಸಿ ಕಲಕತ್ತಾ, ಮುಂಬಯಿ, ಮದ್ರಾಸ, ಬೆಂಗಳೂರು, ಮಂಗಳೂರು

Spleen and Liver Enlargement for Children.

ಮಕ್ಕಳ ಯಕೃತ್, ಪ್ಲೀಹ ಹೊಟ್ಟೆ ದೊಡ್ಡದಾಗುವಿಕೆ ಹಸುರು ನರಗಳು, ಕಾಮಿಲೆ ಗಡ್ಡೆರೋಗ, ಕೋಮರೋಗ, ಮೈ ಕೈ ಬಾವುಗಳಿಗೆ ದಿವ್ಯೌಷಧ !

1 ತಿಂಗಳಿಗೆ ಸಾಕಾಗುವ ಔಷಧದ ಬೆಲೆ ರೂ 3

ಏತಕ್ಕೆ ಚಿಂತಿಸುವಿರಿ ?

ಅಸೇತುಹಿಮಾಚಲದ ವರೆಗೂ 43 ವರುಷಗಳಿಂದ ಕೀರ್ತಿ ಪಡೆದಿರುವ ಮಕ್ಕಳ ಸ್ಪ್ಲೀನ ಮತ್ತು ಲಿವ್ಹರ್ ವ್ಯಾಧಿಗಳಿಗೆ ಇದೊಂದೇ ರಾಜಔಷಧವಾಗಿದೆ

ಡಾ| ವಿ ಎನ್ ಶ್ರೀನಿವಾಸರಾವ್
ಲಿವ್ಹರ್ ಸ್ಪೆಶಲಿಸ್ಟ,
ಎಂ ವಿ ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ

ಇವರಲ್ಲಿ ವಿಚಾರಿಸಿರಿ

ಏಜಂಟ —
ಸುಬ್ರಾಯ ಸೀತಾರಾಮ ಹೆಗಡೆ,ಶಿರ್ಶಿ

ಸ್ಥಳೀಯ ಸ್ವರಾಜ್ಯ ಸಂಸ್ಥೆಗಳನ್ನು ರದ್ದುಪಡಿಸುವದೇ ಲೇಸೆಂದು ನಮಗನಿಸುತ್ತದೆ ಮೂಲ ಸಕ್ಷಂಕಲ್ಪಕ್ಕನುಸಾರವಾಗಿ ರೂಪಾಂತರವಾಗುವವರೆಗೆ ಈ ಸಂಸ್ಥೆಗಳನ್ನು ನಿಲ್ಲಿಸಿದರೂ ಬಾಧಕವಿಲ್ಲ, ಜನರಿಗೂ ಅಹಿತವಾಗದು ಮಹಾಶ್ಮರ ವನೋಭೂಮಿಯೊಳಗೆ ವಿಚಾರಕ್ರಾಂತಿಯುಂಟಾದ್ದರಿಂದ ಇವುಗಳ ಸುಧಾರಣೆಯ ಕಾಲ ತೀರ ಸಮೀಪಿಸಿ ಬಂದಿದೆಂದು ನಮ್ಮ ಗ್ರಹಿಕೆ

---

೩ ಬೆಳಗಾವಿ ಜಿಲ್ಹಾ ಲೋಕಲ್ ಬೋರ್ಡಿನ ಮಾನಪತ್ರಕ್ಕೆ ಉತ್ತರ ಕೊಡುವಾಗ, ಇಂಜನಿಯರ ಇಲಾಖೆಯ ಮಂತ್ರಿಗಳಾದ ನಾ|| ನೂರಿಯವರು ನಮ್ಮ ಜಿಲ್ಹೆಯೊಳಗಿನ ವಿದ್ಯುತ್ ಕಾರಖಾನೆಗಳ ಕುರಿತು ಆಡಿದ ಮಾತುಗಳು ವಿಚಾರಾರ್ಹವಿವೆ ಗೇರಸಪ್ಪೆಯೊಳಗೆ ವಿದ್ಯುತ್-ಕಾರಖಾನೆಯನ್ನು ಸ್ಥಾಪಿಸುವ ವಿಚಾರ ಸದ್ಯಕ್ಕೆ ಮುಂಬಯಿ ಸರಕಾರಕ್ಕಿಲ್ಲವಾಗಿ ನಮ್ಮ ಅಭಿಪ್ರಾಯ ಚೀಫ ಇಂಜನಿಯರರಿಗೂ, ಇಂಜನಿಯರ ಇಲಾಖೆಯ ಇತರ ಯಜ್ಞದರ್ಶಿಗಳಿಗೂ, ವಿದ್ಯುತ್-ಇಂಜನಿಯರರಿಗೂ ನಾ|| ರು ಗೇರಸಪ್ಪೆಗೆ ಕಳುಹಿ ಮೈಸೂರ ಸರಕಾರದೊಡನೆ ಅಗ್ಗ ದರದಿಂದ ವಿದ್ಯುಚ್ಛಕ್ತಿಯನ್ನು ಪಡೆಯುವ ಕರಾರು ಮಾಡಿಕೊಂಡು, ಕಾರಖಾನೆಯ ಸಕಲ ಅಧಿಕಾರಗಳನ್ನು ಮೈಸೂರು ಸರಕಾರಕ್ಕೇ ಒಪ್ಪಿಸುವ ವಿಚಾರ ಕೈಕೊಳ್ಳಲ್ಪಟ್ಟಿದೆ ಮೈಸೂರು ಸರಕಾರದ ಧೋರಣದ ಮೇಲಿಂದ ಆ ಯೋಜನೆಯಲ್ಲಿ ಮುಂಬಯಿ ಸರಕಾರವು ಸೇರಲೊಪ್ಪದಿದ್ದದ್ದು ಇಷ್ಟವೆಂದು ನಮ್ಮ ಗ್ರಹಿಕೆ ನೆರೆ ಹೊರೆಯ ಪ್ರದೇಶದವರಿಗೆ ಅಗ್ಗ ದರದಿಂದ ವಿದ್ಯುಚ್ಛಕ್ತಿ ಪೂರೈಕೆಯಾಗುತ್ತಿದ್ದರೆ ನಮ್ಮ ಕಾರ್ಯಭಾಗವಾಯಿತು ವಿಶೇಷ ಖರ್ಚು ಬೀಳದೆ ಇಷ್ಟು ಕಾರ್ಯ ಸಾಧಿಸಿಕೊಂಡ ಬಗ್ಗೆ ನಾ|| ನೂರಿಯವರು ಅಭಿನಂದನಾರ್ಹರು ಕಾಳಿ ನದಿಗೆ ಒಡ್ಡು ಹಾಕಿ ನಮ್ಮ ಜಿಲ್ಹೆಯೊಳಗೆ ವಿದ್ಯುತ್ ಕಾರಖಾನೆಯೊಂದು ಹೊರಡಿಸುವ ವಿಚಾರ ನಡೆದಿರುವದಾಗಿ ನಾ|| ನೂರಿಯವರು ನುಡಿಯುತ್ತಾರೆ ಬೆಳಗಾವಿ ಜಿಲ್ಹೆಯ ಅಸೋಗಾ ಯೋಜನೆಗಿಂತ ಈ ಯೋಜನೆಗೆ ಕಡಿಮೆ ಖರ್ಚು ತಗಲುವದೆಂದು ನಾ|| ನೂರಿಯವರ ಭಾಷಣದ ಮೇಲಿಂದ ನಾವು ಅನುಮಾನಿಸುತ್ತೇವೆ ಅಸೋಗಾ ಯೋಜನೆಗೆ ೪ ಕೋಟಿ ರೂಪಾಯಿಗಳ ವೆಚ್ಚ ಹಿಡಿಯುವದೆಂದು ಅಂದಾಜು ಮಾಡಲಾಗಿದೆ, ಆ ಯೋಜನೆಯನ್ನು ಕೈಕೊಳ್ಳಬೇಕೆಂದು ಬೆಳಗಾವಿ ಜಿಲ್ಹೆಯವರ ಆಗ್ರಹವಿರುವದು ಸಹಜ ಆದರೆ, ನಮ್ಮ ಜಿಲ್ಹೆ ಮೂಲೆಗುಂಪಾಗಿಬಿದ್ದ ಪ್ರದೇಶ, ಕಾಡುಗಳ ಬೀಡು ಈ ತನಕ ಈ ಪಾರ್ಶ್ವದಲ್ಲಿ ಸರಕಾರದ ಅನಾಸ್ಥೆ. ಸರಕಾರಕ್ಕೆ ನಮ್ಮ ಜಿಲ್ಹೆಯೊಳಗಿಂದ ವಿಪುಲ ಉತ್ಪತ್ತಿ ದೊರೆಯುತ್ತಿದ್ದಾಗ್ಯೂ ನಮಗೆ ಪ್ರತಿಫಲ ದೊರೆತದ್ದು ತೀರ ಕಡಿಮೆಯೇ ! ನೂತನವಾಗಿ ಪ್ರಾರಂಭಿಸಿದ ನೀರಾವರಿ-ಯೋಜನೆಯಲ್ಲಿ ನಮ್ಮ ಜಿಲ್ಹೆಯ ಪಾಲಿಗೆ ಒಂದೂ ಯೋಜನೆ ಬರಲಿಲ್ಲವೆಂಗಿ ಸರಕಾರವು ಕಳೆದ ವಾರ ಹೊರಡಿಸಿದ ಪ್ರಕಟಣೆಯ ಮೇಲಿಂದ ಕಾಣಬರುವದು ಆದರಿಂದ ಮುಂಬಯಿ ಸರಕಾರವು ಕಾಳಿ ನದಿಯ ದಂಡೆಗುಂಟ ವಿದ್ಯುತ್ ಕಾರಖಾನೆ ಸ್ಥಾಪಿಸುವ ಯೋಜನೆಯನ್ನಾದರೂ ಸ್ಥಿರಪಡಿಸುವದಾಗಿ ನಾವು ಕೋರುತ್ತೇವೆ ವಿಚಾರ ಮಾಡದೆ ತಾವು ಯಾವದೇ ಯೋಜನೆಯನ್ನು ಕೈಕೊಳ್ಳುವದಿಲ್ಲವಾಗಿ ನಾ|| ನೂರಿಯವರು ಆಶ್ವಾಸನೆ ಕೊಟ್ಟಿದ್ದಾರೆ ಇದರ ಮೇಲಿಂದ ಬೇಗಾವಿಯವರ ದಾಕ್ಷಿಣ್ಯ ನಿರರ್ಥಕವಾಗುವದೆಂದು ನಮ್ಮ ನಂಬಿಗೆ

(೧೩ನೇ ಪುಟದಿಂದ ಮುಂದರಿಸಿದ್ದು)

ಸುಶಾ— ಸುಶೆಯ ಪೇಠೆಯ ಮುಖ್ಯ ಸ್ಥಳ ಇಲ್ಲಿಯ ಶಾಲೆಯಲ್ಲಿ ೬೦ಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳಿದ್ದಾರೆ ಆದರೆ ಶಾಲೆಗೆ ಪ್ರಶಸ್ತವಾದೊಂದು ಮನೆಯಿಲ್ಲ ಈಗಿರುವ ಮನೆಯ ವರ್ಣನೆ ಮಾಡಿ ತೀರದು (ಮನೆಯೊಳಗೆ ಬೆಳಕಿಲ್ಲ, ಗಾಳಿಯಿಲ್ಲ' ಶಾಲೆಯಲ್ಲಿ ಕೂಡ್ರಲು ಹುಡುಗರು ಹೇಸುತ್ತಾರೆ ' ನೆರೆಯಲ್ಲಿಯೇ ಹೊಳೆಯಿದೆ, ಮಳೆಗಾಲದಲ್ಲಿ ಹುಡುಗರೆಲ್ಲಾದರೂ ಹೊಳೆಗೆ ಹೋಗಿ ಅಪಘಾತಗಳಾಗುವ ಸಂಭವವಿದೆ ಶಾಲೆಯ ಹಿಂದೆಯೇ ದಿಬ್ಬವುಂಟು ಅಲ್ಲಿ ಹಾವುಗಳ ಬೀಡಿದೆ ಮೂತ್ರವಿಸರ್ಜನೆಗೆ ಹೋದ ಹುಡುಗರು ಹಲವು ಸಾರೆ ಹಾವುಗಳನ್ನು ಕಂಡಿದ್ದಾರೆ ಹಾವು ಹೊಳೆಗಳ ಹೆದರಿಕೆಯಿಂದ ಅನೇಕ ಪಾಲಕರು ತಮ್ಮ ಮಕ್ಕಳಗೆ ಶಾಲೆಗೆ ಕಳಿಸಲೊಪ್ಪುವದಿಲ್ಲ ಶಾಲಾ ಬೋರ್ಡಿನವರೂ ಅಧಿಕಾರಿಗಳೂ ಇತ್ತ ಲಕ್ಷಕೊಟ್ಟು ಶಾಲೆಯ ಬಗ್ಗೆ ಬೇರೊಂದು ಪ್ರಶಸ್ತ ಮನೆಯ ವ್ಯವಸ್ಥೆ ಮಾಡಬಾರದೇ ?

| ಶ್ರೀ ಭುವನೇಶ್ವರಿ ಪ್ರಸನ್ನ ||

ಶ್ರೀ ಭುವನೇಶ್ವರೀ ವ್ಹೀವಿಂಗ ಲೂಮ್ಸ್, ಗೋಕರ್ಣ.

(ಉತ್ತರ ಕನ್ನಡ)

ಬನ್ನಿರಿ! ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ ! ! ಬನ್ನಿರಿ ! ! !

ಇಲ್ಲಿಯ ಕೈಮಗ್ಗದಲ್ಲಿ ತಯಾರಾದ ಮಾಲುಗಳನ್ನು ಒಮ್ಮೆ ನೋಡಿರಿ !

ಪಕ್ಕಾ ಬಣ್ಣ ! ಖಾತ್ರಿ ಮಾಲು ! ! ಬೆಲೆ ಕಡಿಮೆ ! ! !

ನಮ್ಮ ಮಗ್ಗದಲ್ಲಿ

ತರತರದ ಧೋತರಗಳು ನವನಮೂನೆಯ ಶೀರೆಗಳು, ಕರಿಗಳು, ಪಂಚೆಗಳು

ಇವಲ್ಲದೆ ಇನ್ನೂ ಅನೇಕ ಹೊಸ ಹೊಸ ನಮೂನೆಯ ಜವಳಿಗಳು

ಠೋಕಾಗಿಯೂ ಚಿಲ್ಲರೆಯಾಗಿಯೂ ಯೋಗ್ಯ ಬೆಲೆಗೆ ಸಿಗುತ್ತವೆ

ಮಾಲಿನ ಬಣ್ಣದ ಬಗ್ಗೆ ಗ್ಯಾರಂಟಿ.

ಆರ್ಡರಿನ ಜೊತೆಗೆ ಅರ್ಧ ಹಣ ಮುಂಗಡ ಕೊಟ್ಟಲ್ಲಿ

ಒಂದು ತಿಂಗಳಲ್ಲಿ ಆರ್ಡರಿನಂತೆ ಮಾಲು ಪೂರೈಸಲಾದೀತು

☞ ನಾವು ಕೈಯಿಂದ ತೆಗೆದ ನೂಲು ಕೊಂಡುಕೊಳ್ಳುತ್ತೇವೆ ಇಷ್ಟಪಟ್ಟವರಿಗೆ ಆ ನೂಲಿನಿಂದ ಬೇಕಾದ ಒಟ್ಟಿಗಳನ್ನು ತಯಾರಿಸಿ ಕೊಡುತ್ತೇವೆ

ನಮ್ಮಲ್ಲಿ ಮಾಲು ಖರೀದಿಸಿದಲ್ಲಿ ತಾವೇ ಎಲ್ಲವೂ ಖಾತ್ರಿಯಾಗುವದು

ಡಿ ಎನ್ ಗೋಪಿಭಟ್ಟ,
ಪ್ರೊಪ್ರೈಟರ

MAINTAIN THE DEPTH OF YOUR RESOURCES

Experience tells us that deep rivers become shallow by accumulation of sand and periodical dredging is required to maintain their depth Likewise the resources of many a family grow shallow by accumulation of debts These debts however if cleared periodically the depth of the resources can be maintained Consult us and we shall explain to you the various ways of clearing such debts to lead a planned life and maintain the depth of the family resources

THE CANARA INDUSTRIAL & BANKING SYNDICATE LTD.,

Estd] (INCORPORATED IN BRITISH INDIA) [1925

Head Office: "MUKUND NIVAS", UDIPI, S. INDIA

MEMBER

RESERVE BANK OF INDIA, BANKERS' CLEARING HOUSE BOMBAY

Authorised Capital	Rs 10 00 000	Issued Capital	Rs 8 00 000
Subscribed Capital	Rs 7,74 500	Paid up Capital	Rs 3,86,880

Reserves Rs 2,16 700

Banking Business of every description transacted.

ಕಾನಡಾವೃತ್ತ.

ಮಿತಿ ಬಹುಧಾನ್ಯ ಸಂವತ್ಸರ ಪುಷ್ಯ ಶು॥ ೪ರ್ಥಿ, ಸೋಮವಾರ

ಸುಪಾ ಪರಿಷತ್ತಿನ ಫಲಿತಾಂಶ.

ಕಳೆದ ನೋ॥ ತಿಂಗಳಲ್ಲಿ ಭೂಕಂದಾಯ ಮಂತ್ರಿಗಳಾದ ನಾ॥ ಮೊರಾರಜಿ ದೇಸಾಯಿಯವರು ನಮ್ಮ ಜಿಲ್ಲೆಯನ್ನು ಸಂಚರಿಸಿ ಸುಪೆಯೊಳಗೆ ಪರಿಷತ್ತನ್ನು ಸೇರಿಸಿ ವನದುಃಖ ನಿವಾರಣೆಯ ಆಲೋಚನೆ ಮಾಡಿದ್ದರಷ್ಟೇ! ಆ ಕುರಿತು ಮುಂಬಯಿ ಸರಕಾರವು ಹೊರಡಿಸಿದ ನಿರ್ಣಯಗಳನ್ನು ನಾವು ಬೇರೊಂದೆಡೆ ಪ್ರಕಟಿಸಿದ್ದೇವೆ. ಅವುಗಳನ್ನೋದಿ ಬಹುಜನಸಮಾಜದ ಸಮಾಧಾನವಾಗುವವೆಂದು ನಮ್ಮ ನಂಬಿಗೆ. ನಾ॥ ದೇಸಾಯಿಯವರು ವನದುಃಖಗಳನ್ನು ನಿವಾರಿಸಲು ಈಗಿನ ಪರಿಸ್ಥಿತಿಯಮಟ್ಟಿಗೆ ಪರಮಾವಧಿಯ ಪ್ರಯತ್ನ ಮಾಡಿರುತ್ತಾರೆಂದೇ ನಮ್ಮ ಅಭಿಪ್ರಾಯ. ಯಾರೂ ಹೀಗೆಯೇ ಅಭಿಪ್ರಾಯ ಪಡೆಯದಿರರು. ಗ್ರಾಮ-ಪ್ರಮುಖರು ಈ ನಿರ್ಣಯಗಳನ್ನು ಅಭ್ಯಾಸ ಮಾಡಿ ಹಳ್ಳಿಗರಿಗೂ ತಿಳಿಹೇಳಿ ಅವುಗಳಿಂದ ತಕ್ಕ ಪ್ರಯೋಜನ ಪಡೆಯಬೇಕೆಂದು ನಾವು ಸೂಚಿಸುತ್ತೇವೆ.

ಜಂಗಲುಗಳ ಮೇಲೆ ಮುಖ್ಯ ಆರೋಪಗಳೆರಡು: ಕಾಡು ಪಶುಗಳ ಆಶ್ರಯ, ಅನಾರೋಗ್ಯಕರ ಹವೆ. ಇವೆರಡೂ ಅರಿಷ್ಟಗಳನ್ನು ಪರಿಹರಿಸಲು ಮುಂಬಯಿ ಸರಕಾರವು ಈ ನಿರ್ಣಯಗಳನ್ನು ಕೈಕೊಂಡಿದೆ. ಕಾಡಿಟ್ಟ ಬೆಟ್ಟದಲ್ಲಿ ೩ ಮೈಲು ಪ್ರಾಕಾರದೊಳಗೆ ಬೇಟೆಯಾಡಗೊಟ್ಟ ಅಪ್ಪಣೆಯಿಂದ ಕಾಡು-ಪಶುಗಳ ಉಪದ್ರವ ಬಹುಮಟ್ಟಿಗೆ ಕುಗ್ಗುವದೆಂದು ನಾವು ಹೇಳಬಲ್ಲೆವು. ಹೊಲಗಳ ಅಂಚಿನಲ್ಲಿರುವ ಕಾಡಿಟ್ಟ ಬೆಟ್ಟದ ಆಶ್ರಯ ಪಡೆದು ಜನ-ಜಾನುವಾರಗಳಿಗೆ ಪೀಡಿಸುವ ಹಂದಿ-ಹುಲಿ ಮೊದಲಾದ ಶ್ವಾಪದಗಳಿಗೆ ಹೊಸ ಕಟ್ಟಳೆಗಳ ಏರ್ಪಾಟಿನಿಂದ ತಕ್ಕ ಶಾಸನ ಮಾಡಲು ತುಂಬಾ ಇಂಬು ದೊರೆತಿದೆ. ನರಿ, ಮೊಲ ಮೊದಲಾದ ಪ್ರಾಣಿಗಳಿಗೂ ಹೊಲಗಳಲ್ಲಿ ಹಾವಳಿ ಮಾಡಲು ಈಗ ಕಠಿಣವಾಗುವದು. ಅಡವಿಯನ್ನು ಕಡಿದು ತೆಗೆಯುವ ಏರ್ಪಾಟಿನಿಂದ ಶ್ವಾಪದಗಳಿಗೆ ಸಿಗುವ ಆಶ್ರಯ ತಪ್ಪಿ ಹೊಲಗಳಂತು ಸುರಕ್ಷಿತವಾಗುವವು. ಪಟ್ಟೆಡವಿಯ ಮೂಲಕ ಹನಿಯೊಳಗುಂಟಾಗುವ ತಂಪು ದೂರವಾಗಿ ಗ್ರಾಮಗಳೊಳಗಿನ ಆರೋಗ್ಯ ಸುಧಾರಣೆಯಾಗಿ ಚಳಿಜ್ವರದ ವ್ಯಾಧಿ ಬಹುಮಟ್ಟಿಗೆ ಪರಿಹಾರ ಹೊಂದುವದೆಂದು ನಮ್ಮ ನಂಬಿಗೆ. ಅಡವಿಯ ಸಾನ್ನಿಧ್ಯದಿಂದ ಹಳ್ಳಿಗರಿಗೆ ಮೈ-ಹೊಟ್ಟೆಗೆ ಒದಗುವ ಕಷ್ಟಗಳು ದೂರವಾಗಿ ಗ್ರಾಮಜೀವನವು ಸುಖದಾಯಕವಾಗುವದು. ಕಾರಣಾಂತರದಿಂದ ಗ್ರಾಮತ್ಯಾಗ ಮಾಡಿ ಪಟ್ಟಣಗಳಲ್ಲಿ ಹೊಟ್ಟೆ-ಬಟ್ಟೆಗಾಗಿ ಅಲೆದಾಡುತ್ತಿದ್ದ ಜನರು ಪುನಃ ಗ್ರಾಮಗಳಲ್ಲಿ ನೆಲಿಸಲು ಈ ಯೋಜನೆಯಿಂದ ತುಂಬಾ ಅನುಕೂಲವಾಗುವದೆಂದು ಎಣಿಸಿ ನಾ॥ ಮೊರಾರಜಿ ದೇಸಾಯಿಯವರಿಗೆ ನಾವು ಮನದಣಿ ಧನ್ಯವಾದಗಳನ್ನರ್ಪಿಸುತ್ತೇವೆ.

ಬೆಟ್ಟದ ಕುರಿತು ಮುಂಬಯಿ ಸರಕಾರವು ಹೊರಡಿಸಿದ ಹುಕುಮುಗಳು ಶ್ಲಾಘನೀಯವಿವೆ. ಬೆಟ್ಟದೊಳಗೆ ಹುಟ್ಟುವ ಜೇನು-ಹುಟ್ಟು ತೋಟಿಗರದೇ ಎಂದು ತಿಳಿಸಲು ತುಂಬಾ ಸಂತೋಷ! ಕಾನ-ಬೆಟ್ಟಗಳಲ್ಲಿ ಮೆಣಸು ಬೆಳೆಸಲು ಕೊಟ್ಟ ಅಪ್ಪಣೆಯಿಂದಲೂ, ಕುಮರಿ ಬೆಳೆಸಲು ಸಿಗುವ ಅನುಕೂಲತೆಯಿಂದಲೂ ನಿರ್ಜನವಾಗಿರುವ ಗ್ರಾಮಗಳು ಪುನಃ ಅಭಿವೃದ್ಧಿ ಹೊಂದಲಾಸ್ಪದವಾಗುವದು. ಮನೆ-ಬಾಗಿಲುಗಳಲ್ಲಿ ವಿಪುಲವಾಗಿ ಅಡವಿಯಿದ್ದು ಬೆತ್ತ, ಬಿದುರು ತುಂಬಾ ಬೆಳೆಯುತ್ತಿದ್ದಾಗ್ಯೂ ಅವನ್ನು ತಂದು ಮನೆಯ ಉಪಯೋಗ ಮಾಡಲು ತರತರದ ನಿರ್ಬಂಧಗಳಿದ್ದವು. ಮೆಟ್ಟು-ಮೆಟ್ಟಿಗೆ ಪಂಚನಾಮೆಗಳಾಗುತ್ತಿದ್ದವು! ದಂಡ ತೆತ್ತು ತೋಟಿಗರು ಹಣ್ಣಾಗುತ್ತಿದ್ದರು; ಒಂದಿಗೂ ಅತನವಂತು ಹೇಳಬಾರದಲ್ಲ! ಬಡ ಬಿದ್ದ ಹಳ್ಳಿಗರ ಅಜ್ಞಾನ, ಪ್ರಕೃತಿತನ, ಸರಳ ಸ್ವಭಾವ, ಜಂಗಲ ಇಲಾಖೆಯ ಚಿಕ್ಕ ಪುಟ್ಟ ಅಧಿಕಾರಿಗಳ ಅಧಿಕಾರದರ್ಪ, ಭ್ರಷ್ಟಾಚಾರ, ಜಂಗಲ ಕಟ್ಟಳೆಯ ಕಾಠಿಣ್ಯ ಮೊದಲಾದ ಕಾರಣಗಳ ಮೂಲಕ ಗ್ರಾಮ-ಜೀವನ ಕಠಿಣವಾಗಿದ್ದಿತು. ಅಡವಿಗಳ ನೆರೆಹೊರೆಯಲ್ಲಿಯೇ, ಅಡವಿ-ಸಾಹಿತ್ಯಗಳಿಗಾಗಿ ಗ್ರಾಮ ನಿವಾಸಿಗಳು ಗೋಳಿಡುವ ಪ್ರಸಂಗವಿದ್ದಿತು. ಅಡವಿ-ಗ್ರಾಮಗಳ ಅಭ್ಯುದಯ ಸ್ವಾಭಾವಿಕವಾಗಿ ಅಡವಿ-ಸಾಹಿತ್ಯಗಳ ಮೇಲೆಯೇ ಅವಲಂಬಿಸಿರುತ್ತದೆ. ಅಡವಿ ಸಾಹಿತ್ಯಗಳಿಂದಲೇ ಆ ಅಡವಿ-ಗ್ರಾಮದವರು ಬೇರೆ ಬೇರೆ ಕಲಾಕೌಶಲ್ಯಗಳನ್ನೂ ಕೈಗಾರಿಕೆಗಳನ್ನೂ ಕೈಕೊಂಡು ಜೀವನ ಸಾಗಿಸುವ ಪರಂಪರೆಯವರು. ಆ ಪರಂಪರೆ ಜಂಗಲಕಾರಭಾರದಲ್ಲಿ ನಿಂತುಹೋದದ್ದರಿಂದ ಒಂದು ಕಾಲದಲ್ಲಿ ಅಭ್ಯುದಯ-ಸಮೃದ್ಧಿಗಳ ಶಿಖರವನ್ನೇರಿ ಕೀರ್ತಿಹೊಂದಿದ ನಮ್ಮ ಗ್ರಾಮಗಳು ಈವಾಗ ನಿರ್ಜನವಾಗಿ, ಅಡವಿಪಾಲಾಗಿ ಹೋಗುವ ಪ್ರಸಂಗ ಬಂದೊದಗಿತು. ನಾ॥ ದೇಸಾಯಿಯವರು ವಸ್ತುಸ್ಥಿತಿಯನ್ನು ಪರಾಂಬರಿಸಿ ಅಡವಿ-ಸಾಹಿತ್ಯಗಳಿಂದ ಅಡವಿ-ಗ್ರಾಮದವರಿಗೆ ಪ್ರಯೋಜನ ದೊರೆಯುವಂತೆ ಏರ್ಪಾಟು ಮಾಡಿದ್ದಾರೆ. ಇದನ್ನು ತಿಳಿಸಲು ನಮಗೆ ಆನಂದವೆನಿಸುತ್ತದೆ. ಮತ್ತು ಈ ಸ್ಥಿತ್ಯಂತರವನ್ನು ಒದಗಿಸಿ ತಂದ ಕಾಂಗ್ರೆಸ ಪ್ರಧಾನ ಮಂಡಳಕ್ಕೆ ನಾವು ತುಂಬಾ ಹರಸುತ್ತೇವೆ.

ಬಹುಜನಸಮಾಜಕ್ಕೂ ನಮ್ಮದೊಂದು ವಿನಂತಿಯಿದೆ. ಅಡವಿಯು ಬೇಸಾಯನಾಶಕವೆಂಬ ವಿಚಾರವನ್ನು ಅವರು ಸಂಪೂರ್ಣವಾಗಿ ತ್ಯಜಿಸಬೇಕು. ಕಳೆದ ಅಕ್ಟೋಬರ ತಿಂಗಳಲ್ಲಿ ಬೆಳಗಾವಿಯಲ್ಲಿ ಸೇರಿದ ರೇಂಜರರ ಸಭೆಯಲ್ಲಿ ಅಧ್ಯಕ್ಷರಾದ ರಾ॥ ಡಿ. ಎಸ್. ಕ್ಯಾಕಿಣಿಯವರು ನುಡಿದಂತೆ, ಅಡವಿ ಅದೊಂದು ರಾಷ್ಟ್ರದ ಐಶ್ವರ್ಯ! ಜನಾಂಗದ ಅಭ್ಯುದಯ, ಉದ್ದಿಮೆ, ಹವಾಮಾನ ಇವು ಅಡವಿಗಳ ಮೇಲೆಯೇ ಅವಲಂಬಿಸಿರುತ್ತದೆ. ರಾ॥ ಕ್ಯಾಕಿಣಿಯವರು ನುಡಿದಂತೆ, ಜಂಗಲಗಳು ಮಾನವನ ಘಾತಕ್ಕಾಗಿ ನಿರ್ಮಾಣವಾಗಿವೆಂಬದೊಂದು ಭಾವನೆ ಜನಸಾಮಾನ್ಯರಲ್ಲಿ ರೂಢವಾಗಿದೆಂದು ನಾವೊಪ್ಪುತ್ತೇವೆ. ಅಡವಿಯನ್ನು ಒಮ್ಮೆಲೇ ಕಡಿದು ತೆಗೆಯಬೇಕಾಗಿ ಜನರು ವಿಕಾರವಶರಾಗಿ ಉದ್ಗರಿಸುತ್ತಾರೆಂಬ ಮಾತನ್ನೂ ನಾವು ಒಪ್ಪುತ್ತೇವೆ. ಅದಕ್ಕೆ ಹಳ್ಳಿಗರ ಅಜ್ಞಾನವಷ್ಟೇ ಕಾರಣವಲ್ಲ, ನಿರ್ದಯ ಜಂಗಲ ಆಡಳಿತೆಯೂ ಒಂದು ಕಾರಣ. ಈವಾಗ ಹೊಸ ಮನ್ವಂತರ ಪ್ರಾದುರ್ಭೂತವಾಗಿದೆ. ಅಡವಿಗಳು ಮಾನವನ ಘಾತ ಮಾಡಲು ಸಿದ್ಧವಿಲ್ಲ. ಮಾನವನ ಉದ್ಧಾರಗೈಯ್ಯಲು ಜಂಗಲ ಅಧಿಕಾರಿಗಳು ಸಂತೋಷಪಡುತ್ತಾರೆ. ಅಡವಿಗಳ ರಕ್ಷಣೆಯನ್ನು ಬೇಸಾಯಕ್ಕೂ ಗ್ರಾಮನಿವಾಸಿಗಳಿಗೂ ಅನುಕೂಲವಾಗುವಂತೆ ನಡಿಸಲು ಸಿದ್ಧರಿದ್ದಾರೆ. ದಕ್ಷಿಣ ವಿಭಾಗದ ಕನ್ಸರ್ವೇಟರರಾದ ವಿ. ಪೊಲ್ಲಕರವರು ರೇಂಜರರ ಪರಿಷತ್ತಿನ ವೃತ್ತಾಂತವನ್ನು ಸಮಾಲೋಚಿಸುವಾಗ, ರೇಂಜರರು ಲೋಕಪ್ರಮುಖರೊಡನೆ ಸಹಕಾರ ಮಾಡಿ ಅಡವಿಯಿಂದ ಪ್ರಯೋಜನ ಪಡೆಯಬಹುದಾದ ಮಾರ್ಗವನ್ನು ತೋರಿಸಿಕೊಡಬೇಕಾಗಿ ಸೂಚಿಸಿದ್ದಾರೆ. ಜಂಗಲ ಅಧಿಕಾರಿಗಳ ದೃಷ್ಟಿಕೋನವು ಈವಾಗ ಈ ರೀತಿ ಅವಸ್ಥಾಂತರ ಹೊಂದಿರುವಾಗ, ಜನರು ಅಡವಿ-ಆಡಳಿತೆಯವರ ಕುರಿತು ಇನ್ನೂ ಸಂದೇಹಪಡುವದು ಅನುಚಿತವೆಂದು ನಮ್ಮ ಅಭಿಪ್ರಾಯ, ಅಕ್ಷೇಮಕಾರಿಯೆಂದೂ ನಮ್ಮ ಗ್ರಹಿಕೆ. ಜಂಗಲ ಇಲಾಖೆಯು ಮಾನವನ ಸಂಸಾರವನ್ನು ಸುಖಮಯಗೊಳಿಸಲು ಯಾವತ್ತೂ ಪ್ರಕಾರಗಳಿಂದ ನೆರವಾಗಲು ಒಗ್ಗಾಲಿನ ಮೇಲೆ ಸಿದ್ಧವಿದೆ. ಬಹುಜನಸಮಾಜದವರು ಹಿಂದಿನಂತೆಯೇ ಈಗಲೂ ಪೂರ್ವಗ್ರಹದೂಷಿತರಾಗಿರುವದು ಸರಿಯಾಗಲಾರದೆಂದು ನಮ್ಮ ಎಣಿಕೆ.

ಸುಪಾ ಪರಿಷತ್ತಿನ ಫಲಿತಾಂಶವಿಷ್ಟೇ: ಜಂಗಲ ಇಲಾಖೆಯು ಗ್ರಾಮ-ನಿವಾಸಿಗಳ ಸುಖಕ್ಕಾಗಿ ಬೇಕಾದ ಅನುಕೂಲ್ಯಗಳನ್ನು ಪೂರೈಸಲು ಒಪ್ಪುತ್ತದೆ. ಮಾನವನು ನಾಶ ಮಾಡತಿಲ್ಲವೆ ಮಾನವಹಿತದ ಪರಿವೆ ಹಿಡಿಯದೆ ಅಡವಿಯನ್ನು ಬೆಳಸಲು ಅಡವಿಖಾತೆ ಒಡಂಬಡುವದಿಲ್ಲ. ಅಡವಿ ಪಾಲನೆ ಲೋಕಸುಖದ ಒಂದು ಅಂಗವೆಂದೆಣಿಸಿ ನಡಿಸಲು ಜಂಗಲ ಇಲಾಖೆಯು ತಯಾರಿದೆ. ಅಡವಿಯ ಸರ್ವನಾಶದಿಂದ ಮಾನವನಿಗೆ ಹಿತವಿಲ್ಲ. ಅಡವಿಯ ಬೆಳವಣಿಗೆಯ ಮೇಲೆ ಸರ್ಪಕಟಾಕ್ಷವನ್ನಿಡುವದಾಗಲೀ, ಅಡವಿಯ ನಾಶವನ್ನೇ ಧ್ಯಾನಿಸುತ್ತಿರುವದಾಗಲೀ ಕ್ಷೇಮಕರವಲ್ಲ. ಇವೆರಡೂ ವಿಪರೀತ-ವಿಸಂಗತ ಕಲ್ಪನೆಗಳು. ಅಡವಿಯ ಬೆಳವಣಿಗೆಯನ್ನು ಮಾನವ ಪ್ರಪಂಚಕ್ಕೆ ಪೋಷಕವಾಗುವಂತೆ ನಡಿಸಲು ಮುಂಬಯಿ ಸರಕಾರವು ಈ ನಿರ್ಣಯಗಳಿಂದ ಒಪ್ಪಿಕೊಂಡಿದೆ. ಗ್ರಾಮ-ಪ್ರಮುಖರು ನಿರ್ಮಲಚಿತ್ತದಿಂದ ವಿಚಾರ ಮಾಡಿ ಅಡವಿಯ ಘಾತವನ್ನು ಬಗೆಯದೆ, ಸ್ವ-ಹಿತ ವಿಚಾರ ಹಿಡಿದು ಅಡವಿಯಿಂದ ಸಿಗಬಹುದಾದ ಹೆಚ್ಚಿಚ್ಚಿನ ಪ್ರಯೋಜನಗಳನ್ನು ಪಡೆಯಬೇಕಾಗಿಯೂ ಆ ಕುರಿತು ಅವಶ್ಯವಿದ್ದ ಸಲಹೆ—ಸೂಚನೆಗಳನ್ನು ಜಂಗಲ ಅಧಿಕಾರಿಗಳಿಗೆ ನೀಡಬೇಕಾಗಿಯೂ ನಾವು ಸೂಚಿಸಿ, ಪುನಃ ನಾ॥ ದೇಸಾಯಿಯವರಿಗೂ ನಾ॥ರೊಡನೆ ಸಹಕರಿಸಿದ ಕನ್ಸರ್ವೇಟರ ಮೊದಲಾದ ಜಂಗಲ ಅಧಿಕಾರಿಗಳಿಗೂ, ಕಮಿಶನರ ಮೊದಲಾದ ಮುಲ್ಕಿ ಅಧಿಕಾರಿಗಳಿಗೂ, ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ರಾ॥ ಗಂಗಾಧರರಾವ ಮೊದಲಾದ ಲೋಕಪ್ರಮುಖರಿಗೂ ಅಭಿನಂದಿಸುತ್ತೇವೆ.

ಮುಸೋಲಿನಿಯವರು ಮುನಿದರು!

[ನಿರೀಕ್ಷಕನು ಬರೆದುದ್ದು.]

ಮುಸೋಲಿನಿಯವರು ಮುನಿದರು! ಈ ವಾರದ ಮುಖ್ಯ ವಾರ್ತೆ ಇದೇ!! ಇತಾಲಿಗೂ ಫ್ರೆಂಚರಿಗೂ ೧೯೩೫ನೇ ಇಸ್ವಿಯಲ್ಲಿ ಆದ ಒಡಂಬಡಿಕೆಯ ಕರಾರನ್ನು ಮುಸೋಲಿನಿಯವರು ರದ್ದುಪಡಿಸಿದ್ದೇವಾಗಿ ಫ್ರೆಂಚ ಸರಕಾರಕ್ಕೆ ಶುಕ್ರವಾರ ರಾತ್ರೆ ತಿಳಿಸಲಾಗಿದೆ. ಇದು ಸುಲಕ್ಷಣವಲ್ಲವೆಂದು ನನ್ನ ಅಂಬೋಣ. ಟ್ಯುನಿಸ, ಕೊರ್ಸಿಕಾ, ನಾಯ್ಸ ಪ್ರದೇಶಗಳನ್ನು ಫ್ರೆಂಚರಿಂದ ಸೆಳೆಕೊಳ್ಳುವದಕ್ಕಾಗಿ ಮುಸೋಲಿನಿಯವರು ಪ್ರಯತ್ನಪಡುತ್ತಿದ್ದಾರೆಂದು ನಾನು ಈ ಮೊದಲೇ ತಿಳಿಸಿದ್ದೇನೆ. ಒಂದು ಇಂಚು ಅಂಗುಲ ಪ್ರದೇಶ ಇತಾಲಿಗೆ ಒಪ್ಪಿಸಲಿಕ್ಕಿಲ್ಲವೆಂದು ಫ್ರೆಂಚ ಸರಕಾರದ ವಿದೇಶ ಪ್ರಧಾನರಾದ ಮಿ|| ಬೋನೆಟ್‌ರವರು ಪ್ರಕಟಿಸಿದ್ದಾರೆ. "ನಾವದನ್ನು ನೋಡಿಕೊಳ್ಳುತ್ತೇವೆ!" ಎಂದು ಇತಾಲಿಯ ಸಿನೋರ ಗ್ಯಾಡಾರವರು ತಮ್ಮ 'ಗೊರ್ನೇಲ ಡಿ ಇತಾಲಿಯಾ' ಪತ್ರಿಕೆಯಲ್ಲಿ ಬರೆದು ಫ್ರೆಂಚ ಸರಕಾರಕ್ಕೆ ಆಹ್ವಾನ ಕೊಟ್ಟಿದ್ದಾರೆ. ಫ್ರಾನ್ಸ ದೇಶದಲ್ಲಿ ವಾಸಿಸುವ ಇತಾಲಿಯರಿಗೆಲ್ಲ ಆಸ್ತಿ-ಪಾಸ್ತಿಗಳನ್ನೆಲ್ಲ ಮಾರಾಟ ಮಾಡಿ ಫ್ರಾನ್ಸ ದೇಶವನ್ನು ಬಿಟ್ಟು ಸ್ವದೇಶಕ್ಕೆ ಮರಳಿ ಬರುವಂತೆ ಮುಸೋಲಿನಿಯವರು ಆಜ್ಞೆ ಹೊರಡಿಸಿದ್ದಾರೆ. ಭೂಮಧ್ಯ ಸಮುದ್ರವನ್ನು ಇತಾಲಿಯ ಕೆರೆಯನ್ನಾಗಿ ಮಾರ್ಪಡಿಸಿ ಪ್ರಾಚೀನ ರೋಮ ಸಾಮ್ರಾಜ್ಯದ ಉದ್ಧಾರಗೈಯ್ಯಲು ಮುಸೋಲಿನಿಯವರು ಆಲೋಚಿಸುತ್ತಾರೆಂದು ಮಿ|| ಕ್ರೇಲ್ಸಫರ್ಡರವರು ಬರೆಯುತ್ತಾರೆ. ಭೂಮಧ್ಯ ಸಮುದ್ರಕ್ಕೆ ಹೊಂದಿಕೆಯಾಗಿರುವ ಆಫ್ರಿಕೆಯ ಉತ್ತರ-ಪಾರ್ಶ್ವವನ್ನು ಪಾದಾಕ್ರಾಂತ ಮಾಡಿಕೊಂಡನಕ ಭೂಮಧ್ಯ ಸಮುದ್ರದ ಸರ್ವಾಧಿಕಾರ ಮುಸೋಲಿನಿಯವರಿಗೆ ಪ್ರಾಪ್ತವಾಗಲಾರದು. ಆದರಿಂದ ಫ್ರೆಂಚರ ಟ್ಯುನಿಸ ವಸಾಹತಿನ ಮೇಲೂ, ಬ್ರಿಟಿಶರ ಈಜಿಪ್ತ ದೇಶದ ಮೇಲೂ ಮುಸೋಲಿನಿಯವರ ಕಣ್ಣು! ಸುಯೇಜ ಕಾಲುವೆಯ ಆಡಳಿತೆಯಲ್ಲಿಯೂ ಅವರು ಸೇರಿಕೊಂಡು ಬ್ರಿಟಿಶ—ಫ್ರೆಂಚರಿಗೆ ಅಡ್ಡಗಟ್ಟುವ ತಯಾರಿಯನ್ನು ಮುಸೋಲಿನಿಯವರು ನಡಿಸಿದ್ದಾರೆ. ಈ ಕಾರಸ್ಥಾನದಲ್ಲಿ ಹಿಟ್ಲರರ ಪೂರ್ಣ ಸಹಾನುಭೂತಿ ಮುಸೋಲಿನಿಯವರಿಗಿರುವದಾಗಿ ನಾನು ಹೇಳುವದಗತ್ಯವಿಲ್ಲ! ಫ್ರೆಂಚರಿಗೂ ಮುಸೋಲಿನಿಯವರಿಗೂ ಯುದ್ಧವೊದಗಿದ್ದಲ್ಲಿ ಜರ್ಮನ್‌ರು ಇತಾಲಿಯ ಪಕ್ಷಪಾತಿಯಾಗಿ ಹೋರಾಡುವರೆಂದು ಬರ್ಲಿನ್‌ದೊಳಗಿನ 'ಫ್ರೆಂಕ್ ಫರ್ಟರ ಝಿಟುಂಗ' ಪತ್ರಿಕೆಯು ಬರೆಯುತ್ತದೆ. ಸುಯೇಜ ಕಾಲುವೆಯ ಈಗಿನ ಆಡಳಿತೆ ಜರ್ಮನ್ ಹಿತಘಾತಕವಿರುತ್ತದೆಂದೂ ಅದನ್ನು ಸರಿಪಡಿಸಬೇಕೆಂದೂ ಅದರೊಳಗೆ ತಮ್ಮದೂ ಸೇರಿಕೆಯಾಗಬೇಕೆಂದೂ ಜರ್ಮನ್ ಪತ್ರಿಕೆಗಳು ಪ್ರಚಾರ ಮಾಡತೊಡಗಿವೆ. ಜನವರಿ ತಿಂಗಳಲ್ಲಿ ಬ್ರಿಟಿಶ ಮುಖ್ಯ ಮಂತ್ರಿಗಳು ರೋಮ-ಯಾತ್ರೆಯನ್ನು ಕೈಕೊಳ್ಳುವಾಗ ಈ ಪರಿ ಇತಾಲಿ-ಫ್ರೆಂಚ ಸರಕಾರಗಳೊಳಗೆ ವಿತುಷ್ಟವಾದದ್ದು ಬ್ರಿಟಿಶರ ದುರ್ದೈವ! ಈ ಪ್ರಕಾರ ಬ್ರಿಟಿಶ ಮುಖ್ಯ ಪ್ರಧಾನರಾದ ಚೆಂಬರಲೇನರೂ, ವಿದೇಶ ಪ್ರಧಾನರಾದ ಹೆಲಿಫೆಕ್ಸ ದೊರೆಗಳೂ ಹಿಟ್ಲರ-ಮುಸೋಲಿನಿ ರಾಕ್ಷಸರಿಗೆ ಸಂತೈಸಲು ನಡಿಸಿದ ಪ್ರಯತ್ನಗಳು ನಿರರ್ಥಕವಾದವೆಂದೂ ಅವನ್ನು ಇನ್ನೂ ಮುಂದರಿಸಲೆಳಸುವದು ದಡ್ಡತನವೆಂದೂ ರೋಮ-ಯಾತ್ರೆಯನ್ನು ಅವರು ಕೈಕೊಳ್ಳಬಾರದಾಗಿಯೂ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಕಾಲಿಕಾರ ಪಕ್ಷದವರೂ ಮಿ|| ಲೊಯಿಡ್ ಜೋರ್ಜ ಪ್ರಭೃತಿ ಉದಾರಮತವಾದಿಗಳೂ ಮುಖ್ಯ ಪ್ರಧಾನರ ಬಗ್ಗೆ ಅವಿಶ್ವಾಸದ ಠರಾವನ್ನು ಸೂಚಿಸಿ ಒಳಿತಾಗಿ ಥಳಿಸಿದರು! ಪ್ರಧಾನ ಪಕ್ಷದ ಬಹುಮತವಿದ್ದದರಿಂದ, ಅವಿಶ್ವಾಸದ ಠರಾವು ಬಿದ್ದುಹೋದರೂ ಬ್ರಿಟಿಶ ಲೋಕಮತ ಪ್ರಕ್ಷುಬ್ಧವಾಗಿದೆಯೆಂದು ತಿಳಿಯುವಂತಿದೆ. "ಫ್ರೆಂಚರ ಮೇಲೆ ಇತಾಲಿಯರು ಸಾಗಿಬಂದರೆ ಬ್ರಿಟಿಶರು ಫ್ರೆಂಚರಿಗೆ ನೆರವಾಗುವರೋ ಇಲ್ಲವೋ?" ಎಂಬ ಪ್ರಶ್ನೆಗೆ ಉತ್ತರ ಸಿಗಲೇಬೇಕಾಗಿ ಸಭಾಸದರು ಆಗ್ರಹ ಹಿಡಿದು ಕೇಳಲು, "ಫ್ರೆಂಚ ಸರಕಾರವು ತೀರ ಸಮಾಧಾನಪಡುತ್ತದೆಂದು ನಾನು ನಂಬುತ್ತೇನೆ" ಹೀಗೆ ಅನಿಶ್ಚಿತ ಉತ್ತರ ಕೊಟ್ಟು ಚೆಂಬರಲೇನರು ಪಾರಾದರು! "ನಾವು ನೆರವಾಗುವದು ಖಂಡಿತ!" ವೆಂದಾಗಲಿ "ನಾವು ನೆರವಾಗಲಾರೆವೆಂ"ದಾಗಲಿ ಯಾವದೊಂದು ನಿಶ್ಚಿತ ಉತ್ತರ ಕೊಡಲಿಲ್ಲ! ಫ್ರೆಂಚ ಸರಕಾರವು ಏನು ಕೇಳಿತು? ಚೆಂಬರಲೇನರು ಏನು ಉತ್ತರ ಕೊಟ್ಟರು? ಫ್ರೆಂಚರಿಗೆ ಹೇಗೆ ಸಮಾಧಾನವಾಯಿತು? ಎಂಬದನ್ನು ಫ್ರೆಂಚರು ಬಲ್ಲರು! ಚೆಂಬರಲೇನರು ಬಲ್ಲರು! ನಾನರಿಯೆ!! ಫ್ರೆಂಚರು ತೀರ ಸಮಾಧಾನಪಡುತ್ತಾರೆಂದು ಚೆಂಬರಲೇನರು ಹೇಳುತ್ತಾರೆ! ಆಗಲೊಲ್ಲದೇಕೆ? ನಾನೂ ಹಾಗೆಯೇ ಸಮಾಧಾನಪಡುತ್ತೇನೆ! ಅಸಮಾಧಾನದ ವಿಷಯಗಳನ್ನು ಜನರು ತಿಳಿಕೊಂಡರಾಯಿತು!!

ಮಧ್ಯ ಯುರೋಪ ಖಂಡದಲ್ಲಿ ಹಿಟ್ಲರರು ಪುನಃ ಪುಂಡಾಟಿಕೆಯನ್ನು ಪ್ರಾರಂಭಿಸಿದ್ದಾರೆ. ರುಥೇನಿಯಾ ಪ್ರದೇಶವನ್ನೂ, ಪೋಲಂಡ ಜನಾಂಗಕ್ಕೆ ಸೇರಿದ ಯುಕ್ರೇನಿಯಾ ಪ್ರಾಂತವನ್ನೂ ಕೈವಶ ಮಾಡಿಕೊಳ್ಳುವದಕ್ಕಾಗಿ ಹಿಟ್ಲರರು ಕುಹಕಗಳನ್ನು ನಡಿಸಿದ್ದಾರೆ. ಲಂಡನಿನ 'ಸಂಡೇ ಟೈಮ್ಸ' ಪತ್ರಿಕೆಯ ಬರ್ಲಿನ್‌ದೊಳಗಿನ ಸುದ್ದಿಗಾರರು ಈ ಗೌಪ್ಯಸ್ಫೋಟವಮಾಡಿದ್ದಾರೆ. ಜರ್ಮನಿಯ ಪೂರ್ವ ಪಾರ್ಶ್ವದಲ್ಲಿ ಯುಕ್ರೇನಿಯರ ವಸತಿಯಿದೆ. ೪೦ ಸಾವಿರ ಯುಕ್ರೇನಿಯರ ಪಥಕವನ್ನು ತಯಾರಿಸಿ ಪೋಲಂಡ ದೇಶದೊಳಗಿನ ಯುಕ್ರೇನಿಯಾ ಪ್ರಾಂತವನ್ನು ಕೈವಶ ಮಾಡಿಕೊಂಡು ಸ್ವರಾಜ್ಯ ಅಲ್ಲಿ ಸ್ಥಾಪಿಸಬೇಕಾಗಿ ಹಿಟ್ಲರರು ಯುಕ್ರೇನಿಯರಿಗೆ ಪ್ರಚೋದನೆ ಕೊಡುತ್ತಿದ್ದಾರೆ. ಪೋಲಂಡ, ರಶಿಯಾ, ರುಮಾನಿಯಾದೊಳಗಿನ ಯುಕ್ರೇನಿಯರನ್ನೆಲ್ಲ ಒಟ್ಟುಗೂಡಿಸಿ ಒಂದು ಯುಕ್ರೇನಿಯ ಸಂಸ್ಥಾನವನ್ನು ತಮ್ಮ ಅಧಿರಾಜ್ಯದಲ್ಲಿ ಸ್ಥಾಪಿಸಿಕೊಂಡು ಜರ್ಮನ್ ಸಾಮ್ರಾಜ್ಯ ವಿಸ್ತರಿಸಿ ಹಿಟ್ಲರರು ಇಡೀ ಯುರೋಪಖಂಡದ ಸಾರ್ವಭೌಮರಾಗುವ ಉಪಾಯ ಮಾಡಿದ್ದಾರೆ! ಪೋಲಂಡದೊಳಗಿನ ಪಾರ್ಲಿಮೆಂಟಿನಲ್ಲಿ ಯುಕ್ರೇನ ಪ್ರಾಂತಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬ ಠರಾಯಿದಿ ಹಿಟ್ಲರನ ಪ್ರೇರಣೆಯಿಂದ ಬುಧವಾರ ಸೂಚಿಸಲಾಗಿತ್ತು. ಪೋಲಂಡ ಜನಾಂಗದ ರಾಜ್ಯಘಟನೆಗೆ ಇದು ವಿರೋಧಕವಾದ್ದರಿಂದ ಇದನ್ನು ಪಾರ್ಲಿಮೆಂಟಿನಲ್ಲಿ ಸೂಚಿಸಲು ಸಭಾಪತಿಗಳು ಅಪ್ಪಣೆ ಕೊಡಲಿಲ್ಲ. ರಶ್ಯ-ಪೋಲಂಡ ಸರಕಾರಗಳು ಒಕ್ಕಟ್ಟಾಗಿ ಹಿಟ್ಲರನಿಗೆ ಎದುರಾಗುವ ತಯಾರಿ ನಡಿಸಿವೆಯೆಂದು ಲಂಡನಿನ 'ಡೇಲಿ ಟೆಲಿಗ್ರಾಫ' ಪತ್ರಿಕೆಯ ಮೊಸ್ಕೋದೊಳಗಿನ ರಾಜಕೀಯ ಸುದ್ದಿಗಾರರು ಪ್ರಕಟಿಸುತ್ತಾರೆ. ತೋರಗಾಣಿಕೆಗೆ ಈ ತಹನಾಮೆ ವ್ಯಾಪಾರದ್ದು. ನಿಜವಾಗಿ ರಾಜಕಾರಣದ ದೃಷ್ಟಿಯಿಂದಲೇ ತಹನಾಮೆಯಾಗಿರುವದಾಗಿ ಸುದ್ದಿಗಾರರ ಅಭಿಪ್ರಾಯ.

ರಶ್ಯರಿಗೆ ಈ ಪಾರ್ಶ್ವದಲ್ಲಿ ಸೇರಲು ಇದೇ ಈ ಜಪಾನಿಯರು ತೊಂದರೆಯನ್ನುಂಟು ಮಾಡಿದ್ದಾರೆ. ಜಪಾನ ಮತ್ತು ರಶ್ಯ ದೇಶಗಳೊಳಗಿನ ಸಮುದ್ರ ಭಾಗದಲ್ಲಿ ೧೯೨೮ನೇ ಇಸ್ವಿಯಲ್ಲಿ ಮೀನು-ಶಿಕಾರಿಯ ತಹನಾಮೆಯಾಗಿತ್ತು. ಈ ತಹನಾಮೆಗನ್ವಯವಾಗಿ ಕೆಲ ಭಾಗದಲ್ಲಿ ಜಪಾನಿಯರೂ ಕೆಲ ಭಾಗದಲ್ಲಿ ರಶ್ಯರೂ ಮೀನು ಹಿಡಿಯುತ್ತಿದ್ದರು. ರಶ್ಯರು ಈ ತಹನಾಮೆಯನ್ನು ರದ್ದುಪಡಿಸಿ ಕೆಲ ಭಾಗವನ್ನು ನೌಕಾದಲದ ಓಡ್ಯಾಟಕ್ಕೆ ಅನುಕೂಲವಾಗುವಂತೆ ಕಾಪಾಡಿಕೊಳ್ಳಲೆಳಸುತ್ತಾರೆ. ಜಪಾನ ದೇಶದ ಮುಖ್ಯ ಜೀವನ ಮೀನು! ಅದಕ್ಕೆ ಬಾಧೆ ಬಟ್ಟಲ್ಲಿ ಜಪಾನ ಸರಕಾರವು ಸುಮ್ಮನಿರಲಾರದು! ಈಗಾಗಲೇ ಉತ್ತರ ಚೀನ ಪಾರ್ಶ್ವದಿಂದ ಉತ್ತರ ಮಂಚೂರಿಯಾ ಕಡೆಗೆ ಜಪಾನಿ ಸೈನ್ಯ ಪಥಕಗಳು ರವಾನೆಯಾಗಿವೆ. ಬದ್ಧಿಪೂರ್ವಕವಾಗಿಯೇ ಇವು ರವಾನಿಸಲ್ಪಟ್ಟಿವೆಯೆಂದು ಸೈನ್ಯಗಳ ಓಡಾಟವನ್ನು ನಿರೀಕ್ಷಿಸುವವರು 'ರ್‍ಯೂಟರ' ವಾರ್ತಾವಾಹಕರ ಬಳಿ ಉದ್ಗರಿಸಿದರು. ರಶ್ಯ ರಾಯಭಾರಿಗಳೊಡನೆ ಮೀನು ಹಿಡಿಯುವ ಹಕ್ಕಿಗಾಗಿ ಜಪಾನದ ಮುಖ್ಯ ಪ್ರಧಾನರೂ ಯುದ್ಧ ವಿದೇಶ ಪ್ರಧಾನರೂ ಚರ್ಚೆ ನಡಿಸುತ್ತಿದ್ದಾರೆ. ಬಹುತರವಾಗಿ ಈ ವಾದ ಒಡಂಬಡಿಕೆಯಿಂದ ಪರಿಹಾರ ಹೊಂದುವ ಲಕ್ಷಣ ತೋರುವದಿಲ್ಲ. ಜಪಾನಿ ನೌಕಾದಲವು ಮೀನು-ಶಿಕಾರಿ ಹಕ್ಕುಗಳ ಪಾಲನೆಗಾಗಿ ಸಾಗಿಹೋಗಲು ಸಜ್ಜಾಗಿ ನಿಂತಿದೆ. ಚೀನ ದೇಶದೊಳಗೆ ಜಪಾನಿಯರ ಪುಂಡಾಟಿಕೆ ನಿಲ್ಲಿಸುವದಕ್ಕಾಗಿ ರಶ್ಯರು ಚೀನ ದೇಶಕ್ಕೆ ನೆರವಾಗುತ್ತಿದ್ದಾರೆ. ಇದು ಜಪಾನಿಯರಿಗೆ ಮಾನ್ಯವಿಲ್ಲ. ಚೀನ ದೇಶದ ಪಾಲಕ-ಪೋಷಕತನ ತಮ್ಮದೇ ಎಂದೂ ಅದರೊಳಗೆ ಅನ್ಯರ್‍ಯಾರೂ ಪ್ರವೇಶಿಸಕೂಡದೆಂದೂ ಜಪಾನಿಯರ ಹಟ-ನಿಗ್ರಹ! ಆದರೆ, ಬ್ರಿಟನ್-ಅಮೇರಿಕಾ ಸರಕಾರಗಳು ಚೀನಿಯರಿಗೆ ೧ ಕೋಟಿ ಪವನಿನ ಸಾಲ ಕೊಟ್ಟು ನೆರವಾಗುವ ನಿರ್ಧಾರ ಮಾಡಿವೆ. ಇದರಿಂದ ಜಪಾನಿಯರು ಬ್ರಿಟನ್-ಅಮೇರಿಕೆಯವರ ಮೇಲೆ ಸಿಡುಕಾರುತ್ತಾರೆ! ಬ್ರಿಟಿಶ ಸಾಮ್ರಾಜ್ಯವನ್ನು ಏಶಿಯಾ ಖಂಡದೊಳಗಿಂದ ನಿರ್ನಾಮ ಮಾಡುವ ಸಮಯ ಬಂದೊದಗಿದೆಂದು ಟೋಕಿಯೋದೊಳಗಿನ 'ಕೋಕುಮಿನ್ ಶಿಂಬೂನ' ಪತ್ರಿಕೆಯ ಆರ್ಭಟ! ಜಪಾನದ ಮುಖ್ಯ ಪ್ರಧಾನರಾದ ರಾಜಪುತ್ರ ಕೊನೊಯಿರವರು ಚೀನ-ಜಪಾನ ದೇಶಗಳೊಳಗೆ ಸಹಕಾರವಿರುವಂತೆ ಅನ್ಯರೂ ದುಡಿಯಬೇಕಾಗಿ ಆಕಾಶವಾಣಿಯ ಮೂಲಕ ಗುರುವಾರ-ರಾತ್ರೆ ಸಾರುತ್ತಾರೆ.

ಹೀಗೆ ಈ ವಾರದಲ್ಲಿ ವಿದೇಶ ರಾಜಕಾರಣದೊಳಗೆ ಅನಪೇಕ್ಷಿತ ಘಟನೆಗಳು ಒದಗಿ ಬಂದಿವೆ. ಮೊಸ್ಕೋದೊಳಗಿನ 'ಜರ್ನಲ್ ಡಿ ಮೊಸ್ಕೊ' ಪತ್ರಿಕೆಯು, "ಸಪ್ಟಂಬರ ತಿಂಗಳಿಗಿಂತ ಈಗಿನ ಸ್ಥಿತಿ ಮತ್ತಷ್ಟು ಭಯಾನಕವಾಗಿದೆ! ಚೆಂಬರಲೇನರ ಸ್ವಾರ್ಥತ್ಯಾಗ ನಿರರ್ಥಕವಾಯಿತು!" ಹೀಗೆ ಅಭಿಪ್ರಾಯಪಡುತ್ತಿದುದಾಗ, ನಾನೇನು ಹೇಳಲಿ?

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಬಹಳ ಬೀಳುತ್ತಿದೆ ಮಿತಿ ಮೀರಿದ ಚಳಿ, ಕೂವೆಲ್ಲ ಜ್ವರಾದಿ ರೋಗಗಳಿವೆ

ಜಿಲ್ಹಾಧಿಪರಾದ ರಾ। ಬಹಿರೇಯವರು ಇಲ್ಲಿಯ ಕೆಲಸ ತೀರಿಸಿಕೊಂಡು ಶುಕ್ರವಾರ ಅಪರಾಹ್ನ ಕಾರವಾರಕ್ಕೆ ತೆರಳಿದರು ಅಂದು ಮ್ಯುನಿಸಿಪಾಲಿಟಿಗೆ ಹೋಗಿ ಸಭಾಸದರಿಗೆ ನಾಲ್ಕು ಬುದ್ಧಿ-ಮಾತುಗಳನ್ನು ಹೇಳಿದರು " ಮ್ಯುನಿಸಿಪಾಲಿಟಿಯಲ್ಲಿ ಪಕ್ಷದ್ವೇಷ ಮಾಡಿಕೊಂಡು ಬಡಿದಾಟ ಮಾಡುವದು ಉಚಿತವಲ್ಲ ಮ್ಯುನಿಸಿಪಾಲಿಟಿ ಲೋಕಸೇವೆಯ ಸಂಸ್ಥೆ, ಲೋಕಪ್ರತಿನಿಧಿಗಳು ನೀವು ಪಕ್ಷದ್ವೇಷವಿದ್ದರೆ ಕೋರ್ಟಿಗೆ ಹೋಗಿ ಜಗಳಾಡಿರಿ ಕೆಲವರು ರಾಜಿನಾಮೆ ಕೊಡುತ್ತೇವಾಗಿ ಬರೆದು ನನಗೆ ಬೆದರಿಸುತ್ತಾರೆ ಅವರು ರಾಜಿನಾಮೆ ಕೊಡಲಿದ್ದಿಯಲ್ಲ ಇತ್ತ ೬ ತಿಂಗಳಲ್ಲಿ ನನ್ನ ಮುಕ್ಕಾಲು ಪಾಲು ಸಮಯ ನಿಮ್ಮ ಮ್ಯುನಿಸಿಪಾಲಿಟಿಯ ಆಕ್ಷೇಪ ನಿವಾರಣೆಗೇ ವ್ಯಯವಾಗುತ್ತಿದೆ ಮೇಲಿಂದ ಮೇಲೆ ನಿನಾಂವಿ ಅರ್ಜಿಗಳು ಬರುತ್ತಿವೆ, ಇದು ತರವಲ್ಲ, ಪಕ್ಷಾಂಧರಾಗಬೇಡಿರಿ, ಲೋಕಸೇವೆಯ ಹೆಗ್ಗುರಿ ಹಿಡಿದು ದುಡಿಯಿರಿ ನಾನು ಇಲ್ಲಿ ಬಹು ದಿವಸ ಉಳಿಯುವನೆಂದು ಹೇಳಲಾರೆ ಇದೇ ನನ್ನ ಕೊನೆಯ ಭೆಟ್ಟಿಯಾಗಬಹುದು ಕಲೆಕ್ಟರ ನಾತೆಯಿಂದ ನಾನು ಈ ಮಾತು ನಿಮಗೆ ಹೇಳಲಿಲ್ಲ ವ್ಯಕ್ತಿ-ನ ತೆಯಿಂದ ಈ ಮಾತುಗಳನ್ನು ತಿಳಿಸಿದ್ದೇನೆ ನೀವೆಲ್ಲರೂ ಸುಜ್ಞರೇ " ಈ ಪ್ರಕಾರ ಹೇಳಿ ಕಲೆಕ್ಟರು ಮ್ಯುನಿಸಿಪಾಲಿಟಿಯ ಕಾರ್ಯಕ್ರಮ ಮುಗಿಸಿದರು ರಾಜಿನಾಮೆ ಕೊಡುತ್ತೇವಾಗಿ ಹೆದರಿಸಿದ ಸಭಾಸದರ್‍ಯಾರೆಂದು ಕಲೆಕ್ಟರರು ಉಲ್ಲೇಖಿಸಲಿಲ್ಲ

ಇಲ್ಲಿ ಶುಕ್ರವಾರ, ಶನಿವಾರ ಜಿಲ್ಹಾ ಕೊಂಗ್ರೆಸ ಕಮಿಟಿ, ತಾಲೂಕಾ ಕೊಂಗ್ರೆಸ ಕಮಿಟಿಗಳ ಸಭೆಗಳಾದವು ಜಿಲ್ಹಾ ಕೊಂಗ್ರೆಸ ಕಮಿಟಿಯಲ್ಲಿ ಮುಖ್ಯವಾಗಿ ಸುಬಾ-ಪರಿಷತ್ತಿನ ಫಲಿತಾಂಶವೆಂದು ಸರಕಾರವು ಹೊರಡಿಸಿದ ಜಾಹೀರನಾಮೆಯ ಚರ್ಚೆಯಾಯಿತು ಗ್ರಾಮಗಳಿಗೆ ಹೊಂದಿಕೆಯಾಗಿರುವ ಅಡವಿಯನ್ನು ಕಡಿದು ತೆಗೆಯುವ ಕುರಿತು ವಿಶೇಷ ಚರ್ಚೆ ನಡೆಯಿತು ಈ ಅಡವಿ ಪ್ರದೇಶವನ್ನು ಜನರೇ ಕಡಕೊಳ್ಳಬೇಕಾಗಿ ಸರಕಾರದ ಪ್ರಕಟಣೆ ! ಖರ್ಚು ಕೊಡಲು ಸರಕಾರಕ್ಕೆ ಸಾಧ್ಯವಿಲ್ಲ ಆದರಿಂದ ಜಿಲ್ಹಾ ಕೊಂಗ್ರೆಸ ಕಮಿಟಿಯವರು ಸರಕಾರಕ್ಕೂ ಜನರಿಗೂ ಅನುಕೂಲವಾಗುವಂತೆ ಒಂದು ಯೋಜನೆ ತಯಾರಿಸಿ ಕಳುಹಬೇಕೆಂದು ನಿರ್ಣಯವಾಯಿತು ಮಾರ್ಗ ಮತ್ತು ಸಂಕಗಳ ಕುರಿತು ಜಿಲ್ಹೆಯೊಳಗಿನ ಪರಿಸ್ಥಿತಿಯನ್ನು ಸಮಾಲೋಚಿಸಿ ವರದಿ ಮಾಡಲಿಕ್ಕೆ ಒಂದು ಮಂಡಳ ನೇಮಿಸಲ್ಪಟ್ಟಿತು ಇಲ್ಲಿಯ ಮ್ಯುನಿಸಿಪಾಲಿಟಿಯ ಇಲೆಕ್ಶನ ಕುರಿತು ಯುಕ್ತಕಂಡ ಕ್ರಮ ಕೈಕೊಳ್ಳಲು ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ರಾ ವಾಮನರಾವ ಹೊದ್ದೆಯವರದೊಂದು ಮಂಡಳ ನೇಮಿಸಲ್ಪಟ್ಟಿತು ಈ ಮೂವರು ಇಲ್ಲಿಯ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಯಾವದೇ ಪಕ್ಷಕ್ಕೆ ಸೇರದ ಸ್ವತಂತ್ರ ಉಮೇದುವಾರರನ್ನು ಇಲೆಕ್ಶನದಲ್ಲಿ ನಿಲ್ಲಿಸಬೇಕೆಂದು ಗೊತ್ತಾಗಿರುತ್ತದೆ ತಾಲೂಕಾ ಕೊಂಗ್ರೆಸ ಕಮಿಟಿಯ ಸಭೆಯಲ್ಲಿ ಅಡವಿಯನ್ನು ಕಡಿದು ತೆಗೆಯುವ ಕುರಿತು ಮೂವರದೊಂದು ಪ್ರಚಾರ ಮಂಡಳ ನೇಮಿಸಲಾಗಿದೆ ಹೊಸ ಪ್ರಾಥಮಿಕ ಶಾಲೆಗಳನ್ನು ಹೊರಡಿಸಬೇಕಾದ ಸ್ಥಳಗಳ ಚೌಕಸಿ ಮಾಡಲಿಕ್ಕೂ ಒಂದು ಸಮಿತಿ ನೇಮಿಸಲ್ಪಟ್ಟಿದೆ ಇತರ ಮಾಮೂಲ ಕೆಲಸಗಳು ನಡೆದು ಸಭೆಗಳು ವಿಸರ್ಜನ ಹೊಂದಿದವು

ಇಲ್ಲಿಯ ರಾ ಬಾಬಾ ಪ್ರಭು ಪೈ ಇವರು ೧ನೇ ವರ್ಷದ ಎಲ್ ಸಿ ಪಿ ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ

ಇಲ್ಲಿಯ ಮ್ಯುನಿಸಿಪಾಲಿಟಿ ದವಾಖಾನೆಯ ಡಾ। ಕಾರ್ನಾಡವರು ಇನ್ನು ೩-೪ ತಿಂಗಳುಗಳಲ್ಲಿ ಪೆನ್ಶನು ಪಡೆಯುತ್ತಾರೆ ಅವರ ಸ್ಥಳದಲ್ಲಿ ಭಟಕಳ ಆಸ್ಪತ್ರಿಯ ಡಾ। ಎನ್ ವ್ಹಿ ಕವಲಗುದ್ದರವರಿಗೆ ನೇಮಿಸಿಕೊಳ್ಳುವಂತೆ ಮ್ಯುನಿಸಿಪಾಲಿಟಿಯವರು ಪ್ರಯತ್ನ ನಡೆಸಬೇಕಾಗಿ ಇಲ್ಲಿಯ ಕೆಲವು ನಾಗರಿಕರು ಸೂಚಿಸುತ್ತಾರೆ ಈ ಊರು ಮಧ್ಯಸ್ಥಳವಾದ್ದರಿಂದ ಡಾ। ಕವಲಗುದ್ದರವರನ್ನು ಇಲ್ಲಿ ನೇಮಿಸಿದರೆ ಜಿಲ್ಹೆಯೊಳಗಿನ ಎಲ್ಲ ಭಾಗಗಳ ಜನರಿಗೆ ಅನುಕೂಲವಾಗುವಂತಿದೆ

ದಕ್ಷಿಣ ಭಾಗದ ಕಮಿಶನರರು ಈ ತಾಲೂಕಿನ ಗೋಕರ್ಣ ಗ್ರಾಮದಲ್ಲಿ ಮುಂದಿನ ವಾರ ತಾ ೩ನೇಯಿಂದ ೫ರ ವರೆಗೆ ಮುಕ್ಕಾಮು ಮಾಡುತ್ತಾರೆ

ತಾ ೧೯ನೇಯಿಂದ ಇಲ್ಲಿಯ ಕನ್ನಡ ಶಾಲೆಯಲ್ಲಿ ಹಿಂದುಸ್ತಾನಿ ವರ್ಗಗಳು ಪ್ರಾರಂಭವಾಗಿವೆ ಇದರಂತೆಯೇ ಎಲ್ಲ ತಾಲೂಕ ಶಾಲೆಗಳಲ್ಲಿಯೂ ಅಂದಿನಿಂದ ರಾಷ್ಟ್ರಭಾಷೆ ಕಲಿಸುವ ಏರ್ಪಾಟಾಗಿರುತ್ತದೆ ಡಿ। ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟಿವ್ ಆಫೀಸರರಾದ ರಾ। ಕಸಬೇಕರರವರು ಈ ತಾಲೂಕಿನ ಶಾಲೆಗಳನ್ನು ತಪಾಸ ಮಾಡಿ ಸಿದ್ದಾಪುರಕ್ಕೆ ಹೋದರು

ಗೋಕರ್ಣ ಪೈಕಿ ತದಿಗೇರಿಯಲ್ಲಿ ಕೋಳಿ-ಜೂಜು ನಡೆಯುತ್ತದೆ ಇದರಿಂದ ಜನರಿಗೆ ನಷ್ಟ-ಕಷ್ಟ ! ಪೋಲೀಸರು ಸುಮ್ಮಗೇಕೆ ? ತಾರಮಕ್ಕಿಯಲ್ಲಿ ಒಬ್ಬ ಗೌಡನ ಹಿತ್ತಲಲ್ಲಿರುವ ಕೊಟ್ಟಿಗೆ ಚಪ್ಪರದಲ್ಲಿ ಜುಗಾರ ಮಂಡವಿದ್ದ ಹಾಗೆ ಆಗಿಂದಾಗ ಗದ್ದಲವಾಗುತ್ತದೆ ಪೋಲೀಸರಿಗೆ ಈ ಸಂಗತಿ ತಿಳಿಯಲಿಲ್ಲವೇನು ? ಹೀಗೆ ಗೋಕರ್ಣಸ್ಥರು ಪ್ರಶ್ನಿಸುತ್ತಾರೆ

ಹೊನ್ನಾವರ— (ತಾ ೨೪-೧೨-೧೯೩೪) ನಿನ್ನೆ ರಾತ್ರೆ ಇಲ್ಲಿಯ ಬಂದರದ ಮೇಲಿನ ಒಂದು ಅಂಗಡಿಯಲ್ಲಿ ಚಮತ್ಕಾರಿಕ ಕಳವು ! ಅಂಗಡಿಯ ಹಲಗೆ ಕಿತ್ತು ನಗದಿ ಹಣವಿಟ್ಟ ಪೆಟ್ಟಿಗೆ ಮಾತ್ರ ಒಯ್ಯಲಾಗಿದೆ ಸಮೀಪ ಮ್ಯುನಿಸಿಪಲ್ ನಾಕೆ, ಹೆರೆ-ಹೊರೆಯಲ್ಲಿ ಮನೆಗಳು ಇರುವ ಸ್ಥಳವಿದು ! ಪೋಲೀಸರು ತಪಾಸ ನಡಿಸಿದ್ದಾರೆ

ಅಂತೂ ಅರ್ಬನ್ ಬೇಂಕಿನ ಚಾಲಕರು ಹೊಸ ಪದ್ಧತಿಯಂತೆ ಡ್ಯಾರೆಕ್ಟರರನ್ನು ಆರಿಸುವ ನಿಶ್ಚಯ ಮಾಡಿದರು, ಪ್ರಾಥಮಿಕ ಮತದಾರರ ಯಾದಿ ಪ್ರಕಟವಾಗಿದೆ ಈ ಯಾದಿಯಲ್ಲಿ ಹೆಸರು ತಪ್ಪಿದವರು ತಾ ೬-೧-೧೯೩೫ನೇದರೊಳಗಾಗಿ ಅರ್ಜಿ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ

ಊರವರು ಹೊರಡಿಸಿದ ನ್ಯೂ ಇಂಗ್ಲಿಷ ಶಾಲೆ ಈಗ ವಿಶ್ವವಿದ್ಯಾಲಯದಿಂದ ಮನ್ನಿಸಲಾಗಿದೆ.

ಇಲ್ಲಿಯ ಹತ್ತು ಜನರ ಮರವೊಳಗೆ ಇಲ್ಲಿಯ ಗುಡಗಾರರು ತಯಾರಿಸಿದ ಹಸ್ತಕೌಶಲ್ಯದ ಜಿನಸುಗಳ ಪ್ರದರ್ಶನವು ಗ್ರಾಮೋದ್ಯೋಗ ಸಂಘದ ವತಿಯಿಂದ ನಡೆದಿದೆ ಕಲಾಪ್ರಿಯರು ಆಶ್ರಯ ಕೊಟ್ಟು ಪ್ರೋತ್ಸಾಹಿಸಬೇಕು.

ಕಡತೋಕೆಯವರೊಬ್ಬರು ಜಿಲ್ಹಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷ ರಾ। ಶಿವರಾವ ಶಾಸ್ತ್ರಿಯವರ ಅಧ್ಯಕ್ಷೀಯ ಆಯ್ಕೆ ಕಾಯಿದೆ ಸಮ್ಮತವಾಗಿ ನಡೆಯಲಿಲ್ಲೆಂದು ಆಕ್ಷೇಪಿಸಿ ಹೊನ್ನಾವರ ಸಬಜಜ್ಜ ಕೋರ್ಟಿನಲ್ಲಿ ದಾಖಲಪಡಿಸಿದ ದಾವೆಯನ್ನು ಸಬಜಜ್ಜರು ಖರ್ಚು ಸಹಿತ ತೆಗೆದುಹಾಕಿದ್ದಾರೆ.

ಮಂಕಿ— ಬಹಳ ಗಾಳಿ ಬೀಸುತ್ತಿದೆ ಜೂಜಿನ ಕಾಟವಂತೂ ನಡೆದೇ ಇದೆ

ವಾಡಿಕೆಯಂತೆ ತಾ ೧೮ನೇಗೆ ಕ್ರೈಸ್ತ ಬಾಂಧವರ ಫೀಸ್ತ (ಜಾತ್ರೆ) ಯಾಯಿತು, ಈ ಜಾತ್ರೆಯಲ್ಲಿ ಕೋಳಿಗಳ ಜೂಜಾಟ ಆಗುವದು ವಹಿವಾಟಿನ ಪದ್ಧತಿ ! ಈ ವರ್ಷವೂ ದೊಡ್ಡ ಪ್ರಮಾಣದ ಮೇಲೆ ಜೂಜಾಟ ನಡೆಯಿತು ! ಒಮ್ಮೊಮ್ಮೆ ಹೊಡೆದಾಟ-ಬಡಿದಾಟಗಳೂ ಆದವೆಂದು ತಿಳಿಯುತ್ತದೆ ! ಪೋಲೀಸರೂ ಗ್ರಾಮಸ್ಥರೂ ಜೂಜಾಟ ನಿಲ್ಲಿ

ಮಕ್ಕಳಿಗೆ ವರಪ್ರದಾನ

ಜಮ್ಮಿ ವೆಂಕಟರಮಣಯ್ಯನವರ

ಲಿವ್ಹರ್‌ಕ್ಯೂರ್

ಲಿವ್ಹರ್ ಮತ್ತು ಯಕೃತ್

ವಿಕಾರಗಳ ಮೇಲೆ

ಅಮೋಘವಾದ ಉಪಾಯ.

ಎಲ್ಲಾ ಔಷಧ ವ್ಯಾಪಾರಿಗಳಲ್ಲಿ

ಸಿಗುತ್ತೆ.

— ಅಥವಾ —

ಜಮ್ಮಿ ವೆಂಕಟರಮಣಯ್ಯ

ಲಿವ್ಹರ ಮತ್ತು ಸ್ಪ್ಲೀನ ಸ್ಪೆಶಲಿಸ್ಟ,

ಮೈಲಾಪುರ-ಮದ್ರಾಸ ಇವರಿಂದ ತರಿಸಿಕೊಳ್ಳಿರಿ.

ಶಾಖೆ.— ಆರ್ಕಾಟ ಶ್ರೀನಿವಾಸಾಚಾರ ಬೀದಿ, ಬೆಂಗಳೂರು ಸಿಟಿ

ಸಲು ಏನೂ ಪ್ರಯತ್ನ ಮಾಡಲಿಲ್ಲ! ಕಾಂಗ್ರೆಸ ರಾಜ್ಯ ಭಾರವನ್ನಾದರೂ ಈ ಜಂಜಾಟಗಳು ನಿಲ್ಲಬಹುದೆಂದು ಜನರ ಅಪೇಕ್ಷೆಯಿತ್ತು

ಶಿರಸಿ — ಚಳಿ ಬಹಳ, ಮೇಲಿಂದ ಮೇಲೆ ಮೋಡಗಳು ಆಗುತ್ತವೆ

ಇಲ್ಲಿಯ ವಯೋವೃದ್ಧ ವಕೀಲರೂ ತೋಟಿಗಾರ ಸಂಘದ ಚಾಲಕರೂ ಆಗಿದ್ದ ರಾ॥ ಮಧ್ವರಾವ ಜಡೆಯವರು ಮೊನ್ನೆ ಶನಿವಾರ ಬೆಳಿಗ್ಗೆ ಒಮ್ಮಿಂದೊಮ್ಮೆ ಹೃದಯಕ್ರಿಯೆ ನಿಂತು ದೈವಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ ಶುಕ್ರವಾರ ದಿವಸ ಅವರು ತಮ್ಮ ಕೋರ್ಟಿನ ಹಾಗೂ ಸಂಘದ ಕೆಲಸಗಳನ್ನು ನಿತ್ಯನೇಮದಂತೆ ಮಾಡಿದ್ದರು. ಪರಮೇಶ್ವರನು ಮೃತಾತ್ಮದ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ

ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟರಾದ ಮಿ॥ ಬರ್ನಾರ್ಡರವರು ರಾ॥ ಕಾಮತರ ವ್ಯಾಯಾಮ ಶಾಲೆಗೆ ಭೆಟ್ಟಿಯನ್ನಿತ್ತು, ರಾ॥ ಕಾಮತರ ದೇಹಸಂವರ್ಧಕ ಕಾರ್ಯವನ್ನು ಬಹಳ ಕೊಂಡಾಡಿದರು ಶಾಲೆಗೆ ಒಂದು ಭಾರ ಮಾಪಕ ಯಂತ್ರವನ್ನು ತರಿಸಿಕೊಡುತ್ತೇವೆಂದು ಸಾಹೇಬರು ಹೇಳಿರುತ್ತಾರಂತೆ

ಓರ್ವ ಹರಿಜನ ನಾಗರಿಕರು ಬರೆಯುತ್ತಾರೆ " ಶಿರಸಿ ಪೌರ-ಸಭೆಯವರು ವಿದ್ಯುದ್ದೀಪಗಳನ್ನು ಹಚ್ಚುವ ಆಲೋಚನೆ ನಡಿಸಿದ್ದಾರೆಂದು ತಿಳಿಯುತ್ತದೆ ವಿದ್ಯುದ್ದೀಪಗಳನ್ನು ತಂದರೆ ಈಗ ದೀಪಗಳ ಬಗ್ಗೆ ತಗಲುವ ಖರ್ಚು ಮೂರು-ನಾಲ್ಕು ಪಾಲು ಬೆಳೆಯುವದು ಬಡ ಮಧ್ಯಮ ವರ್ಗದವರಿಗೂ ಅವುಗಳ ಮೋಹ ಬಿದ್ದು ಊರ ತುಂಬ ವಿದ್ಯುದ್ದೀಪಗಳೇ ಆಗುವವು ಜನತೆಯ ಖರ್ಚು ವಿಪರೀತ ಬೆಳೆಯುವದು ವಿದ್ಯುದ್ದೀಪ ಬೇಡೆನ್ನುವವರ ಖರ್ಚೂ ನೀಗಿಸಾಗುವದು ನಮ್ಮ ಬಡ ಊರಿಗೆ ಶ್ರೀಮಂತಿಕೆಯ ಈ ವಿಲಾಸ ಬೇಡ ವಿದ್ಯುದ್ದೀಪಗಳನ್ನು ಹಚ್ಚುವ ಮುಂಚೆ ಪೌರ-ಸಭೆಯವರು ಈ ಕೆಳಗಿನ ಕೊರತೆಗಳನ್ನು ಮೊದಲು ನೀಗಿಸಬೇಕಾಗಿ ಅವಶ್ಯವೆಂದರೆ — ಊರಲ್ಲಿ ಬಹಳ ಕಡೆ ಸರಿಯಾದ ರಸ್ತೆಗಳಿಲ್ಲ, ಗಟಾರುಗಳಂತೂ ಎಲ್ಲೂ ಸರಿಯಿಲ್ಲ, ಅನೇಕ ರಸ್ತೆಗಳು ತೀರ ಕೆಟ್ಟುಹೋಗಿವೆ ಊರಲ್ಲಿ ಸಾಕಷ್ಟು ದೀಪದ ಕಂಬಗಳಿಲ್ಲ, ಸಾಕಷ್ಟು ನೀರಿನ ಪೂರವಠೆಯಿಲ್ಲ, ಹರಿಜನರ ಕೇರಿಯಲ್ಲಿ ಒಂದೂ ಬಾವಿಯಿಲ್ಲ, ಊರೊಳಗಿನ ಕೆರೆಗಳು ಹಾಳಾಗಿ ಹೋಗಿವೆ, ಅವುಗಳ ವ್ಯವಸ್ಥೆಯಿಲ್ಲ, ಶೌಚಕೂಪಗಳ ವ್ಯವಸ್ಥೆ ಸರಿಯಿಲ್ಲ, ಚಿಕಿತ್ಸಾಲಯದಲ್ಲಿ ಸಾಕಷ್ಟು ಔಷಧಗಳ ಸಂಗ್ರಹವಿಲ್ಲ, ಬಡವರ ಕಡೆ ಅಲ್ಲಿ ಯೋಗ್ಯ ಲಕ್ಷ ಕೊಡಲಾಗುವದಿಲ್ಲ, ಬಹುಸಂಖ್ಯ ಹುಡುಗರಿಗೆ ಮಾಧ್ಯಮಿಕ ಶಿಕ್ಷಣ ಸಿಗುವದಿಲ್ಲ, ಬಡವರಿಗೆ ಉದ್ಯೋಗಗಳಿಲ್ಲ ಇವೆಲ್ಲ ಕೊರತೆಗಳನ್ನು ನೀಗಿಸುವದನ್ನು ಬಿಟ್ಟು ಪೌರ ಸಭೆಯವರು ಶ್ರೀಮಂತಿಕೆಯ ವಿದ್ಯುದ್ದೀಪಗಳ ಮೋಹಕ್ಕೆ ಮರುಳಾಗಬಾರದೆಂದು ಸೂಚಿಸುತ್ತೇನೆ ಇತ್ಯಾದಿ.

ಅವರ್ಸೆ — (ತಾ ೨೧-೧೨-೧೯೩೮) ಕಳೆದ ತಾ ೧೭ನೇಗೆ ಕಾರವಾರದ ಸಿವ್ಹಿಲ್ ಸರ್ಜನರು ಇಲ್ಲಿ ಬಂದಿದ್ದರು ಅವರ್ಸೆಯು ಅಂಕೋಲಾ ತಾಲೂಕಿನಲ್ಲಿ ಒಂದು ಮುಖ್ಯ ಹಳ್ಳಿಯಾಗಿರುತ್ತದೆಂತಲೂ, ಈ ಭಾಗದ ಕೇಂದ್ರ ಸ್ಥಳವಾಗಿರುತ್ತದೆಂತಲೂ ಇಲ್ಲೊಂದು ದವಾಖಾನೆ ತೆರೆಯಬೇಕೆಂತಲೂ ನಾಗರಿಕರು ಅವರೆಡೆಗೆ ಮನವಿ ಮಾಡಿಕೊಂಡರು ಅದಕ್ಕೆ ಸಾಹೇಬರು "ಸರಕಾರವು, ಇಡೀ ಜಿಲ್ಲೆಯಲ್ಲಿ ೧೫ ದವಾಖಾನೆಗಳನ್ನು ತೆರೆಯತಕ್ಕದ್ದೆಂದು ಸರಕಾರದವರ ಸಂಕಲ್ಪ, ಈಗಾಗಲೇ ಹದಿನೈದೂ ಸ್ಥಳಗಳು ಹಂಚಿಹೋಗಿವೆ ನೀವು ಜಿಲ್ಲಾ ಲೋಕಲ್ ಬೋರ್ಡಿಗೆ ಅರ್ಜಿ ಮಾಡಿರಿ ಮುಂದೆ ನಿಮಗೊಂದು ದವಾಖಾನೆ ಸಿಗಬಹುದು" ಎಂದು ಉತ್ತರ ಕೊಟ್ಟರು ಅದರಂತೆ ನಾಗರಿಕರು ಜಿಲ್ಲಾ ಬೋರ್ಡಿಗೆ ಮನವಿ ಮಾಡುವವರಿದ್ದಾರೆ

ಗ್ರಾಮ ಸುಧಾರಣಾ ಕಮಿಟಿಯವರು ಹಟ್ಟಿಕೇರಿಯಿಂದ ವೇಲಾಯರ ಕೇರಿಯ ವರೆಗೆ ಹೊಸ ರಸ್ತೆ ಮಾಡಲು ಪ್ರಯತ್ನಿಸಿದ್ದಾರೆ ಸರಕಾರದವರು ಆ ಬಗ್ಗೆ ರೂ ೫೦ ಮಂಜೂರ ಮಾಡಿದ್ದಾರೆ ಲೋಕಲ್ ಬೋರ್ಡ ರಸ್ತೆಯಿಂದ ರಾ॥ ನರಸಿಂಹ ಹೆಗಡೆಯವರ ಅಂಗಡಿಯ ಬದಿಗೆ ಹೋಗುವ ದಾರಿ ಬಹಳ ಹಾಳಾಗಿದೆ ಬೇಸಿಗೆಯಲ್ಲಿ ಉಸುಬಿನಲ್ಲೂ ಮಳೆಗಾಲದಲ್ಲಿ ಕೆಸರಲ್ಲಿಯೂ ಕಾಲುಗಳು ಹುಗಿಯುವದರಿಂದ ನಡಿಯಲಾಗುವದಿಲ್ಲ ಕಮಿಟಿಯವರು ಈ ರಸ್ತೆಯನ್ನೂ ದುರುಸ್ತ ಮಾಡಿಸಬೇಕು, ಎಂದು ಆ ಕಡೆಯ ಜನರು ಅಪೇಕ್ಷಿಸುತ್ತಾರೆ

ಕಾರವಾರ — ತಾ ೨೦-೧೨-೩೮ನೇಗೆ ಇಲ್ಲಿಯ ತಾಲೂಕ ಕಾಂಗ್ರೆಸ ಕಮಿಟಿಯ ಸಭೆಯಾಗಿ ಆದ ಠರಾವುಗಳ್ಯಾವವೆಂದರೆ ಈ ತಾಲೂಕಿನಲ್ಲಿ ಆದ ಕಾಂಗ್ರೆಸ ಸಭಾಸದರ ಸಂಖ್ಯೆ ತೀರ ಕಡಿಮೆ ಇದ್ದು ತಾಲೂಕಿನೊಳಗೆ ಪೃಥಕ್ ಪೃಥಕ್ ಸಂಘಗಳನ್ನು ಸ್ಥಾಪಿಸಿ ಪ್ರತಿನಿಧಿಗಳನ್ನಾರಿಸಲು ಅನಾನುಕೂಲವಿದ್ದುದರಿಂದ ಇಡೀ ತಾಲೂಕಿನಿಂದ ೩ ಜನ ಪ್ರತಿನಿಧಿಗಳನ್ನು ಆರಿಸಿ ಜಿಲ್ಲಾ ಕಾಂಗ್ರೆಸ ಕಮಿಟಿಗೆ ಕಳಿಸಬೇಕೆಂದು ಗೊತ್ತಾಯಿತು. ಮೂರಕ್ಕೆ ಮಿಕ್ಕಿ ಉಮೇದ್ವಾರರ ಅರ್ಜಿಗಳು ದಾಖಲಾದ್ದಲ್ಲಿ ಮೂರು ಕಡೆ ಮತದಾನ-ಸ್ಥಳಗಳನ್ನು ಮಾಡಿ ಇಲೆಕ್ಶನು ನಡಿಸಬೇಕೆಂದು ಗೊತ್ತಾಯಿತು ಹಳ್ಳಿ-ಹಳ್ಳಿಗಳಲ್ಲಿ ಶಿಕ್ಷಣ ಪ್ರಸಾರ ಮಂಡಳಗಳನ್ನು ಸ್ಥಾಪಿಸಬೇಕೆಂದು ಗೊತ್ತಾಯಿತು ಈ ಮಂಡಳದ ಮೇಲೆ ಕೆಲಸ ಮಾಡಲಿಕ್ಕೆ ಒಪ್ಪಿಗೆ ಇರುವವರಿಗೆ ತಮ್ಮ ಹೆಸರು ತಿಳಿಸಲು ವರ್ತಮಾನಪತ್ರದ ಮುಖಾಂತರ ವಿನಂತಿ ಮಾಡಿಕೊಳ್ಳಬೇಕಾಗಿ ಠರಾಯಿಸಿತು ಈ ತಾಲೂಕಿನಲ್ಲಿ ಮದ್ಯನಿರೋಧನವಾಗುವ ಸಂಭವವಿದ್ದದರಿಂದ ಈ ಕಾರ್ಯದಲ್ಲಿ ಉತ್ಸಾಹದಿಂದ ದುಡಿಯಬಲ್ಲವರು ತಮ್ಮ ಒಪ್ಪಿಗೆಯನ್ನು ತಿಳಿಸುವಂತೆ ವರ್ತಮಾನಪತ್ರದ ಮುಖಾಂತರ ವಿನಂತಿ ಮಾಡಿಕೊಳ್ಳಬೇಕಾಗಿ ಠರಾಯಿಸಿತು ಹೀಗೆ ಒಪ್ಪಿಗೆ ತಿಳಿಸಿದವರ ಸಭೆಯನ್ನು ಸೇರಿಸಿ ಆಯಾ ಕಾರ್ಯ ಮಾಡಲು

BHUVANENDRA PRODUCTS, LTD.

KATAPADI. S. K.

ಭುವನೇಂದ್ರ ಪಂಚರತ್ನಗಳು.

ಭುವನೇಂದ್ರ ಚ್ಯವನಪ್ರಾಶ :— ಕ್ಷಯದ ಪ್ರಥಮಾವಸ್ಥೆ, ಶ್ವಾಸಕಾಸ, ನರಗಳ ದುರ್ಬಲತೆ ಇವುಗಳಿಗೆ ಗುಣಕಾರಿ

ಭುವನೇಂದ್ರ ದಶಮೂಲಾರಿಷ್ಟ:— ಪ್ರಸವಾನಂತರ ಸ್ತ್ರೀಯರಿಗೆ ಅತ್ಯವಶ್ಯ. ಇದು ಕಸ್ತೂರಿ ಮಿಶ್ರಿತ.

ಭುವನೇಂದ್ರ ಅಶೋಕಾರಿಷ್ಟ :— ಸ್ತ್ರೀಯರ ಸಮಸ್ತ ವ್ಯಾಧಿಗಳಿಗೂ ರಾಮಬಾಣ

ಭುವನೇಂದ್ರ ದ್ರಾಕ್ಷಾಸವ :— ಶಕ್ತಿವರ್ಧಕ, ಪ್ರಾಣದಾಯಕ, ರಕ್ತವೃದ್ಧಿ ಮಾಡಿ ಆಹ್ಲಾದವನ್ನುಂಟು ಮಾಡುವದು

ಭುವನೇಂದ್ರ ಕೃಷ್ಣಾರಕ್ :— ಸಮಸ್ತ ಚರ್ಮವ್ಯಾಧಿಗಳಿಗೂ ಖಾತ್ರಿ ಗುಣಕಾರಿ ಹೊಟ್ಟೆಯಲ್ಲಿಯೂ ಉಪಯೋಗಿಸುವ ದಿವ್ಯೌಷಧ

ನಮ್ಮಲ್ಲಿ ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಬಗೆಬಗೆಯ ಆಸವಾರಿಷ್ಟಗಳು, ಲೇಹ್ಯಗಳು, ತೈಲಗಳು, ವಟಿ, ಮಾತ್ರೆ, ಗುಗ್ಗುಳ, ಭಸ್ಮಾದಿಕಗಳು ಸದಾ ಸಿದ್ಧವಿರುವವು.

ಪ್ರತಿನಿಧಿಗಳಿಲ್ಲದ ಕಡೆಯಲ್ಲಿ ಏಜಂಟರು ಬೇಕಾಗಿದ್ದಾರೆ ಧಾರಾಳ ಕಮಿಶನ್; ವಿಪುಲ ಸೌಕರ್ಯ, ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ನಮ್ಮ ಏಜಂಟರು:—

ಭಟ್ಕಳ — ವಾಮನ ಗಣಪಯ್ಯ ಶ್ಯಾನಭಾಗ, ಮರ್ಚಂಟ

ಅಂಕೋಲಾ — ವೇದಮೂರ್ತಿ ಹನುಮಭಟ್ಟ ಕೇಶವ ಭಟ್ಟ.

ಕಾರವಾರ — ದಾಮೋದರ ನಾಗಪ್ಪ ಶ್ಯಾನಭಾಗ, ಮರ್ಚಂಟ

ಹೊನ್ನಾವರ — ಕಾಮತ ಸ್ಟೋರ್ಸ್

ಗೋಕರ್ಣ .— ಎಮ್. ವ್ಹಿ. ಬಸ್ತಿಕರ, ಮರ್ಚಂಟ

ಶಿರಸಿ — ಆರ್. ವ್ಹಿ. ಧಾಕಪ್ಪ, ಕೆಮಿಸ್ಟ.

ವಿಳಾಸ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಬ್ರೆಂಚ್ ಆಫೀಸು. ಕುಮಟಾ. ಉ. ಕ. OR BHUVANENDRA PRODUCTS LTD. Head Office: KATAPADI, S. K.

ಮಂಡಳಿಗಳನ್ನು ಸ್ಥಾಪಿಸಬೇಕೆಂದು ಗೊತ್ತಾಯಿತು. ಶಿಕ್ಷಣ ಪ್ರಸಾರ ಮಂಡಳಿ, ಮದ್ಯನಿರೋಧಕ ಮಂಡಳಿಗಳಲ್ಲಿ ಕೆಲಸ ಮಾಡಬಯಸುವವರು ತಾರೀಖ ೫ ೧ ೯ನೇದರೊಳಗೆ ತಮ್ಮ ಒಪ್ಪಿಗೆಯನ್ನು ಕಾರವಾರ ತಾಲೂಕ ಕೊಂಗ್ರೆಸ ಕಮೀಟಿಯ ಕಾರ್ಯದರ್ಶಿಗಳ ಕಡೆಗೆ ಬರೆಕೊಳ್ಳಬೇಕಾಗಿ ಕಾರ್ಯದರ್ಶಿಗಳು ವಿನಂತಿ ಮಾಡುತ್ತಾರೆ.

ಮುಂದಿನ ಪಕ್ಷದಲ್ಲಿ ದಕ್ಷಿಣ ಭಾಗದ ಕನಿರಾಶನವರು ಈ ಜಿಲ್ಲೆಯಲ್ಲಿ ಸಂಚರಿಸುವವರಿದ್ದಾರೆ. ಅವರ ಸಂಚಾರ ಕ್ರಮ ಈ ಕೆಳಗಿನಂತಿದೆ. ಡಿಶಂಬರ ತಾ ೨೭ರಿಂದ ಜನವರಿ ತಾ ೧ರ ವರೆಗೆ ಕಾರವಾರ, ೩, ೪ರಿಂದ ೫ರ ವರೆಗೆ ಗೋಕರ್ಣ, ತಾ ೬ಕ್ಕೆ ಗಂಗಸಪ್ಪೆ, ತಾ ೭ಕ್ಕೆ ಸಿದ್ದಾಪುರ, ತಾ ೮ಕ್ಕೆ ಪುನಃ ಗೇರಸಪ್ಪೆ, ತಾ ೯ಕ್ಕೆ ಪುನಃ ಸಿದ್ದಾಪುರ.

ನಮ್ಮ ಇದೀ ಜಿಲ್ಲೆಯಿಂದ ಆರಿಸಲ್ಪಡುವ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸದಸ್ಯ- (ಇವರೇ ತ್ರಿಪುರಿಯಲ್ಲಾಗುವ ಕೊಂಗ್ರೆಸ್ಸಿಗೆ ಪ್ರತಿನಿಧಿಗಳಾಗಿ ಹೋಗುವರು) ಆದುದರ ವ್ಯವಸ್ಥಾಪಕರಾಗಿ (ರಿಟರ್ನಿಂಗ್ ಆಫೀಸರ) ರಾ॥ ದೇಶಪಾಂಡೆ ಕೊಪ್ಪಿಕರ ಇವರಿಗೆ ನೇಮಿಸಲಾಗಿದೆ.

ಬಿಣಗೆ— (ತಾ ೨೪-೧೨-೩೮) ಕಾರವಾರ ಬಾಂಬ ರಸ್ತೆಯ ಬಗ್ಗೆ ಖಡಿ ತಯಾರಿಸುವ ಕುರಿತು ಬೆಳಗಾವ ಬದಿಯ ನೂರಾರು ಕಲ್ಲು ಕುಟ್ಟಿಗ ಜನರಿಗೆ ತಂದು, ರಸ್ತೆ ಗುತ್ತಿಗೆದಾರರು ಇಲ್ಲಿಯ ದೇವರಬೋಳೆ ಗುಡ್ಡದ ಮೇಲೆ ಸುರಂಗಗಳನ್ನು ಹಾಕಿ ಕರಿಕಲ್ಲು ತೆಗಿಸುತ್ತಿದ್ದಾರೆ. ದಿನಾಲು ೨-೩ ಸಾರೆ, ಸರತಿಯೊಂದಕ್ಕೆ ೨೦-೩೦ ಸುರಂಗಗಳಂತೆ, ಸುರಂಗಗಳು ಸುಡಲ್ಪಡುತ್ತಿವೆ. ಆ ಸುರಂಗಗಳ ಗಡಗಡಾಟದಿಂದ ಗರ್ಭಿಣಿಗಳ ಗರ್ಭಗಳಿಗೂ, ಅಸ್ವಸ್ಥರಿದ್ದವರ ಹೃದಯಕ್ಕೂ ಭಯಂಕರ ಪೆಟ್ಟುಗಳುದ್ಭವಿಸಿ? ಒಮ್ಮೊಮ್ಮೆ ಸುರಂಗದಿಂದ ಆಕಾಶದಲ್ಲಿ ಹಾರಿದ ಕಲ್ಲುಗಳು ಜನವಸತಿಯಿದ್ದ ಊರ ಭಾಗದಲ್ಲಿ ಬಂದು ಬೀಳುತ್ತಿವೆ. ಸುರಂಗ ಹಾಕುವ ಸ್ಥಳದಿಂದ ೮ ೧೦ ಮಾರು ಅಂತರದಲ್ಲಿಯೇ ರಾಲೆಯಿದೆ. ಹುಡುಗರು ಮೂತ್ರವಿಸರ್ಜನೆಗಾಗಿ ಈ ಬೋಳೆಯ ಅಂಚಿಗೆ ಹೋಗುತ್ತಾರೆ. ಅವರಿಗೂ ಬೋಳೆಯ ಮೇಲೆ ಇಲ್ಲವೆ ಬದಿಯಿಂದ ತಿರುಗಾಡುವ ಜನ ಜಾನುವಾರಗಳಿಗೂ ಈ ಸುರಂಗಗಳಿಂದ ಅಪಘಾತ ಗುವ ಸಂಭವ ಬಹಳವುಂಟು. ಜಿಲ್ಲಾಧಿಕಾರಿಗಳು ಇತ್ತ ಲಕ್ಷ್ಯಕೊಟ್ಟು ಊರಿಂದ ಬಹಳ ದೂರದಲ್ಲಿ ಸುರಂಗ ಹಾಕುವಂತೆ ಈ ಜನರಿಗೆ ಅಪ್ಪಣೆ ಕೊಡುವದು ತೀರ ಅವಶ್ಯವಿದೆ. ಮೊನ್ನೆ ಒಂದು ಸುರಂಗ ಸುಡದೆ ಇದ್ದಂತೆ ಮುಂದೆ ಹಾರಿಯಿಂದ ಕಲ್ಲು ತೋಡುವಾಗ ಹಾರಿ-ಕಲ್ಲುಗಳ ಘರ್ಷಣದಿಂದ ಉಂಟಾದ ಬೆಂಕಿ ಕಿಡಿ ತಗಲಿ ಆ ಸುರಂಗವು ಒಮ್ಮೆಲೇ ಹಾರಿತು ಮತ್ತು ಕಲ್ಲು ತೋಡುವವನಿಗೂ ಸಮೀಪದಲ್ಲಿದ್ದ ಒಬ್ಬ ಹೆಂಗಸಿಗೂ ಚಲೋ ಪೆಟ್ಟಾಯಿತು. ಸುದೈವದಿಂದ ಸುರಂಗವು ಒಡೆಯಲಿಲ್ಲ, ಸುಟ್ಟು ಹಾರಿತಷ್ಟೇ! ಇಲ್ಲವಾದರೆ ಇಬ್ಬರೂ ಸಾವಿಗೆ ತುತ್ತಾಗುತ್ತಿದ್ದರು.

ಇಲ್ಲಿಯ ರಾ॥ ಕೃಷ್ಣನಾಯಕರ ಮನೆಯಲ್ಲಿ ಕಳೆದ ತಾ ೧೨ನೇ ದಿನ ರಾತ್ರಿ ಒಂದು ದೊಡ್ಡ ಕಳವಾಗಿ ರೂ. ೧೨೦೦ ರಷ್ಟು ಬೆಳ್ಳಿ-ಭಂಗಾರಗಳ ಡಾಗಿನೆಗಳು ಕಳವಾಗಿ ಹೋಗಿದ್ದವು. ಕೂಡಲೆ ಪೋಲೀಸರು ಬಂದು ವಿಶೇಷ ಶ್ರಮಪಟ್ಟಿದ್ದರಿಂದ ೪ ೫ ದಿನಗಳಲ್ಲಿಯೇ ಕಳವಿನ ಪತ್ತೆ ಹತ್ತಿತು ಮತ್ತು ಎಲ್ಲ ಡಾಗಿನೆಗಳು ಸಿಕ್ಕವು. ಪೆಂಗುಲೇ ಬದಿಯ ದತ್ತು ಎಂಬವನಿಗೆ ಪೋಲೀಸರು ಹಿಡಿದಿದ್ದಾರೆ. ಆತನು ಹಿಂದೊಮ್ಮೆ ಸೆರೆಮನೆವಾಸ ಅನುಭವಿಸಿ ಬಂದವನಿರುತ್ತಾನಂತೆ. ಇತ್ತಲಾಗಿ ಆತನು ಈ ಊರಲ್ಲಿ ವೈದ್ಯ ಮಾಂತ್ರಿಕನಾಗಿ ತಿರುಗುತ್ತಿದ್ದನು.

ಹಳಿಯಾಳ— ಇಂಗ್ಲಿಷ ಶಾಲೆಯ ಮಾಹಿತಿ ಇದ್ದ ಒಬ್ಬರು ಬರೆಯುವದೇನೆಂದರೆ - ಇಲ್ಲಿಯ ಮ್ಯುನಿಸಿಪಾಲಿಟಿಯವರು ಶಿವಾಜಿ ಶಾಲೆಯೊಳಗಿನ ೪ ಮತ್ತು ೫ನೇಯ ಇಯತ್ತೆಗಳಿಗೆ ಸರಕಾರಿ ಮನ್ನಣೆ ಪಡೆಯುವ ದೆಸೆಯಿಂದ ಬೋರ್ಡಿನ ಕಡೆ ಇಂಗ್ಲಿಷ ವರ್ಗಗಳನ್ನು ಬೇಡುತ್ತಾರೆ. ೪ನೇ ಇಯತ್ತೆಗೆ ಕಳೆದ ೨ ವರ್ಷಗಳ ವರೆಗೆ ಸರಕಾರದ ಮನ್ನಣೆಯಿತ್ತು. ವರ್ಗಗಳನ್ನು ಮ್ಯುನಿಸಿಪಾಲಿಟಿಯವರು ಸರಿಯಾಗಿ ನಡಿಸದೆ ಹಾಳುಗೆಡಹಿದ್ದರಿಂದ ವಿದ್ಯಾ ಇಲಾಖೆಯವರು ಮನ್ನಣೆಯನ್ನು ಹಿಂತೆಗೆದುಕೊಂಡಿದ್ದಿರುತ್ತದೆ. ಮ್ಯುನಿಸಿಪಾಲಿಟಿ ಕಡೆಯಿಂದ ಸುಸೂತ್ರವಾಗಿ ೪ ೫ನೇ ಇಯತ್ತೆಗಳನ್ನು ನಡಿಸಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವೆರಡು ಇಯತ್ತೆಗಳನ್ನು ನಡಿಸುವದಕ್ಕಾಗಿ ಈ ಊರವರು ಮ್ಯುನಿಸಿಪಾಲಿಟಿಗೆ ಒಪ್ಪಿಸಿದ ರೂ ೫೦೦೦ ನಿಧಿಯನ್ನು ಜಿಲ್ಲಾ ಬೋರ್ಡಿಗೆ ಒಪ್ಪಿಸಬೇಕಾಗಿ. ೩-೪ ವರ್ಷಗಳ ಹಿಂದೆ ಮ್ಯುನಿಸಿಪಾಲಿಟಿಯಲ್ಲಿ ಠರಾವು ಪಾಸವಾದದ್ದುಂಟು. ಆ ಕಾಲದಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷರು ಒಪ್ಪಲಿಲ್ಲ. ೪-೫ ಇಯತ್ತೆಗಳ ಫೀ ಉತ್ಪನ್ನದಿಂದ ಖರ್ಚು ಪೂರೈಸುವಂತೆ ಉಂಟು. ಕಡಿಮೆ ಬಿದ್ದಲ್ಲಿ ರೂ ೫೦೦೦ದ ಬಡ್ಡಿ ಇದೆ. ಮ್ಯುನಿಸಿಪಾಲಿಟಿಯವರು ಹಟಮಾರಿಯಾಗಲಾಗದು. ನಿರ್ಮಲಚಿತ್ತದಿಂದ ವಿಚಾರಿಸಿ, ವಿದ್ಯಾರ್ಥಿಗಳ ಹಿತಬಯಸಿ ಇವೆರಡು ಇಯತ್ತೆಗಳನ್ನು ಜಿಲ್ಲಾ ಬೋರ್ಡಿಗೆ ಒಪ್ಪಿಸುವದು ಲೇಸು. ಈಗಿನ ೩ ಇಯತ್ತೆಗಳಂತೆಯೇ ಇವೆರಡು ಇಯತ್ತೆಗಳು ಒಟ್ಟಾಗಿ ನಡೆದು ವಿದ್ಯಾರ್ಥಿಗಳಿಗೆ ಅನುಕೂಲವಾಗುವದು. ೪ ೫ನೇ ಇಯತ್ತೆಗಳ ಅಡಳಿತ ಮ್ಯುನಿಸಿಪಾಲಿಟಿಯ ಇಲೆಕ್ಷನ್ ಪರಿಣಾಮದ ಮೇಲೆ ಅಡಿ-ಮೇಲೆ ಆಗಿ ತೀರ ಕೆಟ್ಟುಹೋಗಿದೆ. ಅಧಿಕಾರಾರೂಢ ಪಕ್ಷದ ಸ್ವೇಚ್ಛಾಚಾರದಿಂದ ಶಿವಾಜಿ ಶಾಲೆ ಸರಿಯಾಗಿ ನಡೆಯುವದಿಲ್ಲ; ನಡೆಯುವದೆಂಬ ಆಶೆಯೂ ಇಲ್ಲ" ಇತ್ಯಾದಿ.

ಕಳೆದ ತಾ. ೨೦ನೇಗೆ ಗ್ರಾಮದೇವರ ಗುಡಿಯಲ್ಲಿ ಶ್ರೀ ಹಳ್ಳಿಕೇರಿ ನಿಂಗಪ್ಪನವರ ಅಧ್ಯಕ್ಷತೆಯಲ್ಲಿ ತಾಲೂಕ ಕೊಂಗ್ರೆಸ ಕಮಿಟಿಯ ಸಾಧಾರಣ ಸಭೆಯಾಗಿ, ಕಳೆದ ವರ್ಷದ ಲೆಕ್ಕ-ವರದಿಗಳ ಸ್ವೀಕಾರವೂ ಹೊಸ ಕಾರ್ಯಕಾರಿಗಳ ಆಯ್ಕೆಯೂ ಆದವು. ರಾ॥ ರಾಮರಾವ ಬದ್ರಿಯವರು ಅಧ್ಯಕ್ಷರಾಗಿಯೂ, ರಾ॥ ರಾಂಕಾರಾಮ ದ್ಯಾ..

WANTED

An Organiser for North Kanara on Salary & Commission with head-quarters at KARWAR or KUMTA.

Experienced men need apply

To

THE POPULAR INSURANCE CO., LTD.,

H. O. MANGALORE.

Branch:

Prospect Chambers,
Hornby Road.
Fort, BOMBAY

ಮಾಡತಕ್ಕದು ಕೋಶಪಾಲಕರಾಗಿಯೂ ರಾ|| ಬಸವಂತಪ್ಪಾ ಬಸಲಿಂಗಪ್ಪಾ ಕಿತ್ತೂರರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಈಮೇಲಿನ ಅಧಿಕಾರಿಗಳಲ್ಲದೆ ಕಾರ್ಯಕಾರಿ ಮಂಡಳದಲ್ಲಿ ರಾ|| ಎಚ್ ಕೇ ಪಾಟೀಲ ಮುಂಗರವಾಡ, ರಾಮಸಿಂಗ ದೌಲತಸಿಂಗ, ಕೃಷ್ಣಾಜಿ ರಾಮಚಂದ್ರ ಲಾಡ, ಅನಂತರಾವ ತೇರಗಾಂವಕರ, ಗಣಪತ ಮುಕುಂದ ಗಿರಿ, ಹೀಗೆ ೫ ಜನ ಬೇರೆ ಸದಸ್ಯರಿದ್ದಾರೆ ಜಿಲ್ಲಾ ಕೊಂ|| ಕಮಿಟಿಗೆ ರಾ|| ಎಚ್ ಕೇ ಪಾಟೀಲರು ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿದ್ದಾರೆ ಕಳೆದ ಸಾಲಿನ ಲೆಕ್ಕದಲ್ಲಿ ಕೊನೆಯ ಶಿಲ್ಕು (ಸೊಸೈಟಿಯಲ್ಲಿ ರೂ ೧೩೫-೬-೩ ಮತ್ತು ಕಾರ್ಯದರ್ಶಿಗಳ ಕೈಯ್ಯಲ್ಲಿ ರೂ ೪ ೬-೦ ಕೂಡಾ) ರೂ ೧೦೯-೧೨-೩ ಇದೆ

ಯಲ್ಲಾಪುರ— ಚಳಿ ಬಹಳ ರೈತರು ಗದ್ದೆ ಕೊಯಲಿನಲ್ಲಿ ತೊಡಗಿದ್ದಾರೆ ಬೇಸಾಯ ಕಾಮಗಾರರು ಒಕ್ಕಲಿಗರಿಗೆ ಹೊಸ ಹೊಸ ಜಾತಿಯ ಭತ್ತ, ಕಾಯಿಪಲ್ಲೆ ಗಳ ಬೀಜ ಹಂಚುತ್ತಿದ್ದಾರೆ

ಇಲ್ಲಿಯ ಜಂಗಲ ಇಲಾಖೆಯವರಿಗೂ ಇಂಜಿನಿಯರ ಖಾತೆಯ ಓವ್ಹರಸೀಯರರಿಗೂ ತಂಟೆಯುಂಟಾಗಿದೆ ಮೋಟಾರು ಮಾರ್ಗಗಳ ಎಡಬಲಕ್ಕಿರುವ ಗಿಡ ಮರಗಳನ್ನು ಕಡಿದು ಮೋಟಾರದವರಿಗೆ ರಸ್ತೆ ಸ್ಪಷ್ಟ ಕಾಣುವಂತೆ ಮಾಡಬೇಕೆಂದು ಸರಕಾರದವರು ನಿರ್ಣಯಿಸಿದ ಮೇಲೆಗೆ ಜಂಗಲ ಇಲಾಖೆಯವರು ರಸ್ತೆ ಅಂಚಿನ ಭಾಗದಲ್ಲಿರುವ ಬೆಲೆ ಬಾಳುವ ಇಮಾರತ ಕಟ್ಟಿಗೆಯ ಮರಗಳನ್ನು ಕಡಿದು ತೆಗೆದು, ಇನ್ನುಳಿದ ಗಿಡ ಮರಗಳ ಸಹಿತ ಆ ಭಾಗವನ್ನು ಇಂಜಿನಿಯರ ಇಲಾಖೆಯವರಿಗೆ ಒಪ್ಪಿಸಿದರು ಅದರಂತೆ ಇಂಜಿನಿಯರ ಖಾತೆಯವರು ಅಲ್ಲಿದ್ದ ಮರಗಳನ್ನು ಕಡಿಸಿ ಸ್ವಚ್ಛಗೊಳಿಸಿದ್ದರು ಈಗ ಇಂಜಿನಿಯರ ಇಲಾಖೆಯವರು ಇಲ್ಲೊಂದು ಸ್ಟೋರ ರೂಮಿನ ಉಗ್ರಾಣ ಕಟ್ಟುತ್ತಿದ್ದಾರೆ ಇನ್ನೊಂದು ಇಮಾರತಿನ ಮಾಡಿನ ದುರುಸ್ತಿಯೂ ನಡೆಯುತ್ತಿದೆ ಈ ಕೆಲಸಗಳನ್ನು ಗುತ್ತಿಗೆ ಕೊಡದೆ ಓವ್ಹರಸೀಯರರು ಖಾತೆಯವರಿಂದಲೇ ಮಾಡಿಸಬೇಕೆಂದು ನಿಶ್ಚಯಿಸಿದ್ದಾರೆ ಈ ಎರಡು ಇಮಾರತುಗಳ ಉಪಯೋಗಕ್ಕೆ ಬರಬಹುದಾದಂಥ ಎಳೆಗಳನ್ನು ನಾಟುಗಳನ್ನು ಓವ್ಹರಸೀಯರರು ಮೇಲೆ ಹೇಳಿದ ರಸ್ತೆ-ಭಾಗದಲ್ಲಿ ಕಡಿದ ಕಟ್ಟಿಗೆಯೊಳಗಿಂದ ತರುತ್ತಿದ್ದರೆ ಆದರೆ ಜಂಗಲ ಕಾನೂನಿನಂತೆ ಸದರಿ ಕಟ್ಟಿಗೆಯನ್ನು ಸ್ಥಳಾಂತರ ಮಾಡಲಿಕ್ಕೆ ಜಂಗಲ ಖಾತೆಯವರಿಂದ ತೆಗೆದುಕೊಳ್ಳಬೇಕಾದ ಪರವಾನಿಯನ್ನು ತೆಗೆದುಕೊಂಡಿರುವದಿಲ್ಲವಂತೆ! ಎಳೆ ನಾಟುಗಳಿಗೆ ಜಂಗಲ ಇಲಾಖೆಯವರ ಮುದ್ರೆಗಳನ್ನು ಹಾಕಿಸಿಕೊಂಡಿರುವದಿಲ್ಲವಂತೆ! ಅಂಥ ಕಟ್ಟಿಗೆಯನ್ನು ಕೊರೆಯಲಿಕ್ಕೆ ಉಗ್ರಾಣದ ಸಮೀಪ ಒಂದು ಘಡ ಮಾಡಿದ್ದಾರೆ ಬಹಳ ಕಟ್ಟಿಗೆಯನ್ನು ಕೊರೆದು ಹಾಕಿದ್ದಾರೆ ಈ ಬಗ್ಗೆ ಅವಶ್ಯವುಳ್ಳ ಪರವಾನಿಯನ್ನು ಓವ್ಹರಸೀಯರರು ತಕ್ಕೊಂಡಿರುವದಿಲ್ಲವಂತೆ! ಎಳೆ ನಾಟುಗಳನ್ನು ಹೇರಿಕೊಂಡು ಗಾಡಿಗಳು ರಾತ್ರಿಯ ಕತ್ತಲೆಯಲ್ಲಿ ಬರುತ್ತವಂತೆ! ತಾ ೨೧ನೇ ರಾತ್ರಿ ಇಂಥಹದೊಂದು ಗಾಡಿಯನ್ನು ಗಾರ್ಡರೊಬ್ಬರು ಹಿಡಿದು ಪಂಚನಾಮೆ ಮಾಡಿದ್ದಾರೆ ಆ ಗಾಡಿಯಲ್ಲಿ ಸೀಸಂ ಜಾತಿಯ ಒಂದು ನಾಟು ಸಹ ಸಿಕ್ಕಿದೆಯಂತೆ! ಕಾನೂನು ಬಲ್ಲ ಓವ್ಹರಸೀಯರರು ಈ ಪ್ರಕಾರ ಕಾನೂನು ಭಂಗ ಮಾಡಬಹುದೇ? ಎಂದು ಜನರು ಕೇಳುತ್ತಾರೆ ಓವ್ಹರಸೀಯರರ ಒಳ-ಅಂತರಂಗಗಳೇನಾದರೂ ಇರಬಹುದೇ? ಎಂತಲೂ ಮಾತಾಡುತ್ತಿದ್ದಾರೆ. ಜಂಗಲ ಇಲಾಖೆಯವರು ಓವ್ಹರಸೀಯರರ ಈ ಕಾನೂನು ಭಂಗವನ್ನು ಮುಚ್ಚಬಾರದೆ ಆ ಕುರಿತು ಕೊನೆಯ ತನಕ ಕ್ರಮ ಕೈಕೊಳ್ಳಬೇಕೆಂತಲೂ ಅಪೇಕ್ಷಿಸುತ್ತಾರೆ

(೭ನೇ ಪಾನದ ಮೇಲೆ ಮುಂದುವರಿದೆ)

ಬನ್ನಿರಿ! —|| ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ||— ನೋಡಿರಿ!!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೋಟೆಲ್,

ಮಹಾಶಯರೇ, ಕುಮಟಾ. (ಉ. ಕನ್ನಡ.)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಗೃಹಸ್ಥರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೋಟೆಲ್"ದಲ್ಲಿ ಒಂದು ಅನುಭವ ಪಡೆಯಿರಿ!

ಸೂಚನೆ — ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾ ಲಿ ಕ.

ದಿ ಹನುಮಾನ್ ಟ್ರಾನ್ಸಪೋರ್ಟ ಕಂಪೆನಿ, ಲಿಮಿಟೆಡ್,

ಉಡುಪಿ. ದ. ಕನ್ನಡ.

ಹೊಸ ಬಸ್ಸುಗಳು! | ಮಿತವಾದ ದರಗಳು! | ಹೊಸ ಲ್ಯಾನು!!

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯ ಧ್ಯೇಯ.

ನಿಯಮಿತ ಕಾಲಕ್ಕೆ ಸರಿಯಾಗಿ ಬಿಡುವ ಸರ್ವಿಸುಗಳು

ನಮ್ಮ ಕಂಪನಿಯ ಬಸ್ಸು ಸರ್ವಿಸುಗಳು ಈ ವರೆಗೆ ಕಾಸರಗೋಡ ವರೆಗೆ ಮಾತ್ರ ಚಲಾವಣೆಯಲ್ಲಿದ್ದವು. ತಾರೀಕು 28—4—1938ರಿಂದ **ಕಾಸರಗೋಡಿನಿಂದ ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ ವರೆಗೆ** ಚಲಾವಣೆಯಾಗುವಂತೆ ಸುವ್ಯವಸ್ಥೆಯನ್ನು ಮಾಡಿರುವೆವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಳಿಗ್ಗೆ ಹೊರಟರೆ ಅದೇ ದಿನ ಸಾಯಂಕಾಲದೊಳಗೆ ನಿರಾಯಾಸವಾಗಿ ಕಾರವಾರಕ್ಕೆ ತಲುಪುವಂತೆ ಯೋಗ್ಯ ಏರ್ಪಾಡು ಮಾಡಿರುತ್ತದೆ ನಿಮಗೆ ಅಸೌಕರ್ಯ ಉಂಟಾದಲ್ಲಿ ದಯವಿಟ್ಟು ನಮಗೆ ತಿಳಿಸಿದ್ದಲ್ಲಿ ಅವುಗಳಿಗೆ ಯೋಗ್ಯ ಗಮನ ಕೊಡುವೆವು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮಿತ ದರ! = ನಿಶ್ಚಿತ ಸಮಯ!! = ನೌಕರರ ವಿನಯ-ನಮ್ರತೆ!!!

ಇವುಗಳಲ್ಲದೇ ಪ್ರಯಾಣಿಕರಿಗೆ ಬೇಕಾದದ್ದು?

THE HANUMAN TRANSPORT CO., LTD.,

UDIPI. S. KANARA.

ಈ ಕೆಳಗಿನ ಮುಂಬಯಿ ಗವ್ಹರ್ನಮೆಂಟ ಜನರಲ ಡಿಪಾರ್ಟಮೆಂಟಿನ ಜಾಹೀರನಾಮೆಯನ್ನು ಪುನಃ ಪ್ರಕಟಿಸಿರುತ್ತದೆ.

"ಜನರಲ ಡಿಪಾರ್ಟಮೆಂಟ

ಮುಂಬಯಿ ಕೆಸಲ ತಾ. 29-11-1938.

ಜಾಹೀರನಾಮೆ.

ನಂಬರ 5123— ಮುಂಬಯಿ ಡಿಸ್ಟ್ರಿಕ್ಟ ಮ್ಯುನಿಸಿಪಲ್ ಆಕ್ಟ 1901 (ಮುಂಬಯಿ III-1901) ದ ಕಲಂ 8 ನೇದ್ರ ಪೋಟ ಕಲಂ (1) ರ ಪ್ರಕಾರ ಮುಂಬಯಿ ಸರಕಾರವು ಹೀಗೆ ಪ್ರಕಟಿಸುತ್ತದಲ್ಲಾ:-

ಸರಕಾರಿ ನೋಟಿಫಿಕೇಶನ್ ಜನರಲ ಡಿಪಾರ್ಟಮೆಂಟ ನಂಬ್ರ 1323/11-4-1885 ಮತ್ತು ಅದರಲ್ಲಿ ಆಗಿಂದಾಗ್ಯೆ ಆದ ತಿದ್ದುಪಡಿ ಪ್ರಕಾರ ಈ ವರೆಗೆ ಹಂಗಾಮಿ ಮ್ಯುನಿಸಿಪಾಲಿಟಿ ಎಂತಾ ಇರುವ ಈ ಕೆಳಗೆ ಕಾಣಿಸಿದ ಗೋಕರ್ಣ ಗ್ರಾಮದ ಸ್ಥಾನಿಕ ಪ್ರದೇಶವನ್ನು ಸದ್ರಿ ಎಕ್ಟಿನ ಕಲಂ 4 ಮತ್ತು 7ರಂತೆ ಗೋಕರ್ಣದ ಮ್ಯುನಿಸಿಪಲ ಡಿಸ್ಟ್ರಿಕ್ಟ ಎಂತಾ ಕಾಯಂ ತರೀಕ ಮ್ಯುನಿಸಿಪಲ ಡಿಸ್ಟ್ರಿಕ್ಟ ಮಾಡಬೇಕೆಂತಾ ಸರಕಾರವು ಯೋಜನೆ ಮಾಡಿರುತ್ತದೆ.

ಸದ್ರಿ ಸ್ಥಾನಿಕ ಮ್ಯುನಿಸಿಪಲ ಡಿಸ್ಟ್ರಿಕ್ಟ ಹದ್ದಿನ ಗಡಿಯು ಉತ್ತರಕ್ಕೆ ಆಲದ ಕೆರೆಹತ್ತರ ಗೋಕರ್ಣ-ಹನೇಹಳ್ಳಿ ರಸ್ತೆಯ ಮೇಲೆ ಕೂಡ್ರಿಸಿದ ಮ್ಯುನಿಸಿಪಲ ಹದ್ದಿನ ಕಲ್ಲಿನಿಂದ ಸ ನಂ. 81 ಮತ್ತು 83 ನೇದರ ದಕ್ಷಿಣ ಮೇರೆಗುಂಟ ನಂತರ ಸ. ನಂ. 83 ನೇದರ ಆಗ್ನೇಯ ಮೂಲೆಯಿಂದಾ ಹೊರಟ ರೇಷೆ ಸ. ನಂ. 84 ನೇದರ ಒಳಗೆ ಹಾದು ಸ ನಂ. 211ನೇದರ ನೈಋತ್ಯ ಮೂಲೆಗೆ ಕೂಡುತ್ತದೆ. ನಂತರ ಸ. ನಂ. 211, 212, 213, 214, 245-5, 245-7, 215-8, 245-9, 259, 257, 256, 1592, 253, 254, 234, 277, 278, 286, (ಭಾಗ) 309 ಮತ್ತು 305 ನೇ ನಂಬರುಗಳ ದಕ್ಷಿಣದ ಗಡಿಗುಂಟ ಮತ್ತು ಸ ನಂ. 316, 317 ಮತ್ತು 337 ರಲ್ಲಿ ಹರಿದು ಹೋಗುವ ಆಲದಕೆರೆ ಹಳ್ಳದಗುಂಟ ಇರುವ ರೇಷೆಯು

ಟೀಪು:— ಸ. ನ. 84 ಮತ್ತು 286 ನೇದರ ಕೆಲವು ಭಾಗವು ಮ್ಯುನಿಸಿಪಲ ಡಿಸ್ಟ್ರಿಕ್ಟಿನ ಹದ್ದಿನಲ್ಲಿ ಬರುತ್ತದೆ.

ಪೂರ್ವಕ್ಕೆ—

ಮ್ಯುನಿಸಿಪಲ ಹದ್ದಿನಲ್ಲಿ ಕೂಡ್ರಿಸಿದ "ಮುಂಡಬಸವ" ದೇವಸ್ಥಾನದ ಹತ್ತರ ಗೋಕರ್ಣ ಮಾದನಗೇರಿ ರಸ್ತೆಯ ಮೇಲೆ ಕೂಡ್ರಿಸಿದ ಮ್ಯುನಿಸಿಪಲ ಹದ್ದಿನ ಗಡಿಕಲ್ಲಿನಿಂದ, ಸ. ನ 339 344, 343, 1523, 1524, 1519, 1499, 1498 ಮತ್ತು 653 ನೇ ನಂಬರುಗಳ ಪಶ್ಚಿಮ ಗಡಿಗುಂಟ ಹೋಗುವ ರೇಷೆಯು.

ದಕ್ಷಿಣಕ್ಕೆ—

ಸ. ನ. 658, 657, 827 (ಬೆಟ್ಟ) 21 (ಈ ಬೆಟ್ಟ ನಂಬರದ ಸ್ವಲ್ಪ ಭಾಗ ಮ್ಯುನಿಸಿಪಲ ಹದ್ದಿನಲ್ಲಿ ಬರುತ್ತದೆ) 809 (ಬೆಟ್ಟ) 2, 810 ಬೆಟ್ಟ 1, 815, 816, 813, 814, 815, 827 ಬೆಟ್ಟ 10 ಇವುಗಳ ಉತ್ತರ ಮೇರೆಯು ನಂತರ ಸ. ನಂ. 827 ಬೆಟ್ಟ 9ರ ವಾಯುವ್ಯ ಮೂಲೆಯಿಂದ ಸ. ನ. 827 (ಬೆಟ್ಟ) 6, 827-A ಇವುಗಳ ಒಳಗಿಂದಾ ಹಾದು ಬರುವ ರೇಷೆಯ. ಸ. ನಂ 849 ನೇದರ ಈಶಾನ್ಯ ಮೂಲೆಗೆ ಕೂಡುತ್ತದೆ. ನಂತರ ಸ ನಂ 849 ನೇದರ ಮತ್ತು ಅರಬೀ ಸಮುದ್ರದ ಉತ್ತರ ರೇಷೆಯು (ಬೆಟ್ಟ ಸ. ನಂ. 827-6 ಮತ್ತು 827-A ಇವುಗಳ ಭಾಗಗಳು ಮ್ಯುನಿಸಿಪಲ್ ಹದ್ದಿನಲ್ಲಿ ಬರುತ್ತವೆ

ಪಶ್ಚಿಮಕ್ಕೆ— ಅರಬೀ ಸಮುದ್ರ.

ಕಾಯಮ ಮುನಸಿಪಲ್ ಡಿಸ್ಟ್ರಿಕ್ಟ ಮಾಡಬೇಕೆಂತಾ ಯೋಜನೆ ಮಾಡಿದ ಪ್ರದೇಶವನ್ನು ತೋರಿಸುವ ನಕಾಶೆಯನ್ನು ಕಾನಡಾ ಜಿಲ್ಲಾದ ಕಲೇಕ್ಟರರ ಕಚೇರಿಯಲ್ಲಿಯೂ, ಗೋಕರ್ಣ ಮ್ಯುನಿಸಿಪಾಲಿಟಿಯ ಕಚೇರಿಯಲ್ಲಿಯೂ ಜನರಿಗೆ ನೋಡಲಿಕ್ಕೆ ಮೋಕಳೀಕ ಇಡತಕ್ಕದ್ದು

ಸದ್ರಿ ಯೋಜನೆಯ ಬಗ್ಗೆ ಯಾರಿಗೆ ಏನಾದರೂ ತಕರಾರು ಮಾಡತಕ್ಕದ್ದು ಇದ್ದಲ್ಲಿ ಈ ಜಾಹೀರನಾಮೆ ತಾರೀಖಿನಿಂದಾ ಎರಡು ತಿಂಗಳ ಮುದ್ದತ್ತಿನೊಳಗೆ ಮ ಕಲೇಕ್ಟರ ಸಾ. ಬಾ ಜಿಲ್ಲಾ ಕಾನಡಾ ಇವರಿಗೆ ಕಾರಣ ಸಹಿತಾ ಒರಪದ ಮೂಲಕವಾಗಿ ತಮ್ಮ ತಕರಾರನ್ನು ತಿಳಿಸತಕ್ಕದ್ದು.

(ಮುಂಬಯಿ ಪ್ರಾಂತದ ನೇ ನಾ. ಗವ್ಹರ್ನರರ ಆಜ್ಞೆಯ ಮೇರೆಗೆ)

ವ್ಹಿ. ಎಸ್. ಭಡೆ,

'ಸೆಕ್ರೆಟರಿ ನಿಸಪಕ ಸರಕಾರ.'

ಕಾರವಾರ,
20-12-1938.

ಡಿ. ಎಸ್. ಬಿಷ್ಲಿ,

ಕಲೇಕ್ಟರ ಆಫ್ ಕೆನರಾ

ವಾರ್ತೆಗಳು.

— ಯುರೋಪ ಖಂಡದಲ್ಲಿ ಈಗ ಬಹಳ ಚಳಿ! ವಿಪರೀತ ಚಳಿ!! ಇಂಗ್ಲಂಡ ದೇಶದಲ್ಲಿ ಮಂಜು ಸುರಿಯುತ್ತಿದೆ! ಎಲ್ಲೆಲ್ಲಿಯೂ ಮಂಜು ಹಾಸಿದಂತಾಗಿದೆ. ಆದರಿಂದ ಎಲ್ಲ ಕೆಲಸಗಳು ನಿಂತುಬಿಟ್ಟವೆ. ಸೈಬೀರಿಯಾ ಪಾರ್ಶ್ವದಿಂದ ಶೀತಗಾಳಿ ಬೀಸುತ್ತಿದೆ. ೧೦ ವರ್ಷಗಳಲ್ಲಿ ಇಷ್ಟು ಚಳಿ ಬೀಳಲಿಲ್ಲ ಸ್ವಿಟ್ಸರ್ಲಂಡದಲ್ಲಿಯೂ ಇದೇ ಗತಿ! ಬಲ್ಗೇರಿಯಾದಲ್ಲಿ ಚಳಿಯಿಂದ ೧೦ ಜನರು ತೀರಿಕೊಂಡರು! ಕತುಂಬ ಮಾರ್ಗಗಳ ಮೇಲೆ ಅಡ್ಡಾಡಲಾಗುವದಿಲ್ಲ. ಗುಡ್ಡ ಪ್ರದೇಶದಲ್ಲಿ ೮ ಅಡಿ ಮಂಜು ಕೂತುಕೊಂಡಿದೆ. ಫ್ರಾನ್ಸ ದೇಶದೊಳಗೆ ಚಳಿಯಿಂದ ಅನೇಕ ಚಮತ್ಕಾರಗಳು ಒದಗಿಬಂದಿವೆ. ಸೀನ ನದಿ ಹೆಪ್ಪುಗಟ್ಟಿತು. ಕೆಲೇದಲ್ಲಿ ಮೋಟಗಳು ಮಂಜುಗಡ್ಡೆಯಾಗಿ ಬೀಳುತ್ತಿವೆ. ಇಡೀ ದೇಶ ತುಂಬ ಚಳಿಗಾಳಿಗಳ ಹಾಹಾಕಾರ!! ೧೦ ಜನರು ತೀರಿಕೊಂಡರು. ಒಂದೆಡೆ ೧೦೦೦ ಸರಾಯಿ ಬಾಟ್ಲಿಗಳು ಶೀತಬಾಧೆಯಿಂದ ಒಡೆದುಹೋದವು. ಕುಡಿಯುವವರಿಗೆ ಬಹಳ ತೊಂದರೆ. ಜರ್ಮನಿಯಲ್ಲಿಯೂ ಇದೇ ಅವಸ್ಥೆ! ಇತ್ತ ೮೩ ವರ್ಷಗಳಲ್ಲಿ ಇಂಥ ಚಳಿಯನ್ನು ಯಾರೂ ಕಾಣಲಿಲ್ಲವಂತೆ! ಎಲ್ಬ-ಮೇನ ನದಿಗಳೂ ಹೆಪ್ಪುಗಟ್ಟುತ್ತಲಿವೆ. ಅಡ್ಡಾಡಲಾಗುವದಿಲ್ಲ. ನದಿಯಲ್ಲಿ ಮೀನ ಹಿಡಿಯಹೋದ ದೋಣಿಗಳು ನದಿಗಳಲ್ಲಿ ಗಟ್ಟಿಯಾಗಿ ನಿಂತಿವೆ ಜನರ ಗೋಳು; ಶೀತ ಪೀಡಿತ ಉತ್ತರ ಸಮುದ್ರ ಮತ್ತು ಬಾಲ್ಟಿಕ ಸಮುದ್ರದೊಳಗಿನ ದ್ವೀಪಗಳಲ್ಲಿ ಜನರಿಗೆ ಅವಶ್ಯವುಳ್ಳ ಆಹಾರ-ಸಾಮುಗ್ರಿಗಳನ್ನು ವಿಮಾನುಗಳಿಂದ ಮುಟ್ಟಿಸುವ ಏರ್ಪಾಟಾಗಿದೆ. ಡಾನ್ಯೂಬ ನದಿಯು ಹೆಪ್ಪುಗಟ್ಟಿರುವದಾಗಿ ವಿಯೆನ್ನಾದ ವಾರ್ತೆ! ಕಪ್ಪು ಸಮುದ್ರ ಗಟ್ಟಿಯಾಯಿತಾಗಿಯೂ ಹಡಗಗಳ ಓಡಾಟಕ್ಕೆ ಅಸಾಧ್ಯವೆಂದೂ ಕೋಲಾಹಲ! ಇಟಾಲಿಯಲ್ಲಿಯೂ ಮಂಜು ಅನರ್ಥವನ್ನೆಬ್ಬಿಸಿದೆ. ಆದರೆ ಜಪಾನಕ್ಕೆ ಆನಂದ. ಚೀನದೊಳಗಿನ ಹಳದಿ ನದಿ ಹೆಪ್ಪುಗಟ್ಟಿದ್ದರಿಂದ ಚೀನ ದೇಶಕ್ಕೂ ರಶ್ಯರಿಗೂ ನದಿಯ ಮುಖಾಂತರ ನಡೆಯುವ ವ್ಯವಹಾರ ನಿಂತುಹೋಗಿದೆ. ನದಿಯು ಹೆಪ್ಪುಗಟ್ಟಿವದಾಗಿಯೂ ಆಮೇಲೆ ವಾಯುವ್ಯ ಪಾರ್ಶ್ವದಲ್ಲಿರುವ ಶಾಂಸಿ, ಲಿಂಗಸಿಯಾ ಗ್ರಾಮಗಳಲ್ಲಿ ಸಾಗಿಹೋಗಬೇಕಾಗಿಯೂ ಜಪಾನಿ ಸೈನ್ಯಾಧಿಕಾರಿಗಳು ಆಲೋಚನೆ ಮಾಡುತ್ತಿದ್ದರು. ಅವರಿಗೆ ಈಗ ಇದೊಂದು ಸುಸಂಧಿಯಾಗಿದೆ ಅಂತು ಈ ಬಾರಿ ಚಳಿಯಿಂದ ಯುರೋಪ ಖಂಡದೊಳಗೆ ಒಳ್ಳೇ ಗಡಿಬಿಡಿ! ಇದರೊಳಗಿಂದ ಬದುಕಿ ಉಳಿದರೆ ಸಾಕಾಗಿದೆ.

— ಅಂತು ತ್ರಾವಣಕೋರ ಬೇಂಕಿನ ಪ್ರಕರಣ ಲಂಡನಿನ ಪ್ರಿವ್ಹಿ ಕೌನ್ಸಿಲಿಗೆ ಮುಟ್ಟಿತು. ಸೋಮವಾರ ಪ್ರಿವ್ಹಿ ಕೌನ್ಸಿಲಿನವರು ಬೇಂಕಿನ ಡೈರೆಕ್ಟರರ ಪರವಾಗಿ ದಾಖಲಮಾಡಿಸಿದ ಅರ್ಜಿಯನ್ನು ವಿಚಾರಕ್ಕೆ ಸ್ವೀಕರಿಸಬೇಕೆಂದು ನಿರ್ಣಯ ಕೊಟ್ಟಿದ್ದಾರೆ. ತ್ರಿವೇಂದ್ರಮ್ ಮೆಜಿಸ್ಟ್ರೇಟರ ಪರವಾಗಿ ಬೆರಿಸ್ಟರರು ವಾದಿಸಿದರು. ಮದ್ರಾಸ ಸರಕಾರದ ಪರವಾಗಿ ಸರಕಾರಿ ವಕೀಲರು ಹಾಜರಿದ್ದರು ಸೆರೆಹಿಡಿದ ಡೈರೆಕ್ಟರರು ಇನ್ನು ಮದ್ರಾಸದೊಳಗೆ ಕೈದುಖಾನೆಯಲ್ಲಿದ್ದಾರೆ ಅರ್ಜಿಯ ವಿಚಾರ ತ್ವರ್ಯ ಮಾಡಿಸಬೇಕೆಂದು

ಪ್ರೀವ್ಹಿ ಕೌನ್ಸಿಲಿನ ತೀರ್ಪಣೆಯಾಗಿದೆ. ಚಳಿಗಾಲ ಮುಗಿದ ಬಳಿಕ ಅರ್ಜಿಯ ವಿಚಾರ ನಡೆಯುವದು.

— ಬೆಂಗಳೂರಿನಲ್ಲಿ ಸರ್ವಾಧಿಪತಿಗಳು ಸಂಚರಿಸ ಹೋಗುತ್ತಾರೆ. ಆ ಸಮಯ ... ಕೊಡುವದಕ್ಕಾಗಿ ಕೆಂಟೋನಮೆಂಟ ಮ್ಯುನಿಸಿಪಲ್ ಕಮೀಟಿಯವರು ೨೦೦೦ ರೂಪಾಯಿ ಮಂಜೂರ ಮಾಡಿದ್ದಾರೆ. ರಾಷ್ಟ್ರೀಯ ಸಭೆಯ ಸಭೆಯ ಅಧ್ಯಕ್ಷರಾದ ಶ್ರೀ|| ಸುಭಾಸಚಂದ್ರ ಬೋಸರವರು ಚಿತ್ಯ್ರಸುತ್ತಾರಾದ್ದರಿಂದ ೧೦೦ ರೂಪಾಯಿ ಖರ್ಚುಮಾಡಿ ಅವರಿಗೆ ಮಾನಪತ್ರವನ್ನ ರ್ಪಿಸಬೇಕೆಂದು ಸಭಾಸದರೊಬ್ಬರು ಸೂಚಿಸಲು ಕೆಂಟೋನಮೆಂಟಿಗೆ ಸಂಬಂಧಪಡದ ಅಧಿಕಾರಿಗಳಿಗೆ ಸತ್ಕರಿಸಲು ಕಾಯಿದೆ ಇಲ್ಲವೆಂದು ಅಧ್ಯಕ್ಷರು ಹೇಳಿ ಆ ಸೂಚನೆಯನ್ನು ಸೂಚಿಸಗೊಡಲಿಲ್ಲ. ಈ ಕಮೀಟಿಗೆ ಕಲೆಕ್ಟರರು ಅಧ್ಯಕ್ಷರು.

— ಧಾರವಾಡದೊಳಗೆ ಜಿಲ್ಹಾ ಬೋರ್ಡಿನ ಇಲೆಕ್ಷನುಗಳು ಮುಗಿದವು. ಒಂಟು ಸಭಾಸದರ ಸಂಖ್ಯೆ ೪೮. ರಾಷ್ಟ್ರೀಯ ಸಭೆಯ ಪರವಾಗಿ ಇಲೆಕ್ಷನಿನಲ್ಲಿ ಉಮೇದ್ವಾರರಿಗೆ ನಿಲ್ಲಿಸಲಾಗಿತ್ತು. ಅಂತು ೩೬ ಮಂದಿ ಕೊಂಗ್ರೆಸ ಉಮೇದ್ವಾರರು ಆರಿಸಿಬಂದಿರುತ್ತಾರೆ. ಇವರೊಳಗೆ ಅವಿರೋಧವಾಗಿ ಆರಿಸಿಬಂದವರ ಸಂಖ್ಯೆ ೧೫. ಧಾರವಾಡ ಜಿಲ್ಹಾ ಕೊಂಗ್ರೆಸ ಕಮಿಟಿಗೆ ಇದೊಂದು ಭೂಷಣ !

— ದಿವಂಗತ ಡಾ|| ಅನಸಾರಿಯವರ ಪತ್ನಿಯರಾದ ಬೇಗಮ ಅನಸಾರಿಯವರು ಇತ್ತ ಬಹುದಿವಸಗಳಿಂದ ಯಕೃತ್ವಿಕಾರದಿಂದ ಅಸ್ವಸ್ಥರಿದ್ದರು. ಅವರು ಬುಧವಾರ ತೀರಿಕೊಂಡರು. ರಾಷ್ಟ್ರೀಯ ಚಳವಳಿಯಲ್ಲಿ ಮೌಲಾನಾರವರಿಗೆ ಬೇಗಮರು ತುಂಬಾ ನೆರವಾಗಿದ್ದರು.

— ತ್ರಿಪುರಿಯಲ್ಲಿ ೫೨ನೇ ರಾಷ್ಟ್ರೀಯ ಸಭೆಯ ಅಧಿವೇಶನದ ತಯಾರಿ ರಭಸದಿಂದ ನಡೆದಿದೆ. ರಾಷ್ಟ್ರೀಯ ಸಭೆಯ ಸ್ಥಳಕ್ಕೆ ವಿಷ್ಣುದತ್ತ ನಗರವೆಂದು ಹೆಸರಿಡಲಾಗಿದೆ. ಮಹಾಕೋಸಲ ಪ್ರಾಂತದಲ್ಲಿ ಶ್ರೀ|| ವಿಷ್ಣುದತ್ತರು ಒಳ್ಳೇ ರಾಷ್ಟ್ರಸೇವೆಯನ್ನು ನಡಿಸಿ, ಕೀರ್ತಿವಂತರಾದವರು. ಈಗ ತ್ರಿಪುರಿಯಲ್ಲಿ ತಂತಿ, ಟಪಾಲ, ಟೆಲಿಫೋನ ಕಚೇರಿಗಳು ಸ್ಥಾಪನೆಹೊಂದಿವೆ. ಬಿಡಾರಗಳು ಕಟ್ಟಿಸಲ್ಪಟ್ಟಿವೆ. ಕುಟುಂಬ ಸಹಿತ ಉಳಕೊಳ್ಳ ಬರುವ ಪ್ರತಿನಿಧಿಗಳಿಗೆ ಎರಡು ಪ್ರಕಾರಗಳ ಬಿಡಾರ: ಒಂದಕ್ಕೆ ಬಿಡಾರಿಗೆ ರೂ. ೫೦; ಇನ್ನೊಂದಕ್ಕೆ ರೂ. ೧೦೦, ಹೀಗೆ ಬಾಡಿಗೆ ಇಡಲಾಗಿದೆ. ಇತರೇ ಜನರಿಗೆ ಮಂಚ ಸಹಿತ ರೂ. ೬ ಭಾಡಿಗೆ ಉಂಟು. ಪ್ರೇಕ್ಷಕರಿಗೆ ತಿಕೀಟಿನ ದರ ರೂಪಾಯಿ ೧ರಿಂದ ೧೦೦ ರ ವರೆಗೆ, ಪ್ರತಿಷ್ಠಿತರಿಗೆ ರೂ. ೨೫೦, ರೂ. ೫೦೦, ರೂ. ೧೦೦೦; ರೂ. ೫,೦೦೦ ಹೀಗೆ ತಿಕೀಟುಗಳು ಇಡಲಾಗಿವೆ. ವಿಷ್ಣುದತ್ತನಗರದಲ್ಲಿ ೨೫೦ ಅಂಗಡಿ-ಮಳಿಗೆಗಳ ವ್ಯವಸ್ಥೆ ಇದೆ. ಅವಕ್ಕೆ ರೂ. ೫೦ರಿಂದ ೧೫೦ರ ತನಕ ಭಾಡಿಗೆ. ಅಧ್ಯಕ್ಷರ ಮೆರವಣಿಗೆಗಾಗಿ ೫೨ ಆನೆಗಳನ್ನು ಅಂದಚಂದವಾಗಿ ಸಿಂಗರಿಸಿ ಅಂಬಾರಿ ಸಹಿತ ಪೂರೈಸಲು ಸಿರ್ಗುಜಾದ ಮಹಾರಾಜರು ಒಪ್ಪಿಕೊಂಡಿದ್ದಾರೆ. ಎಲ್ಲ ಸಿಂಗಾರದ ಖರ್ಚನ್ನು ಮಹಾರಾಜರೇ ಪೂರೈಸುವರು. ಪ್ರದರ್ಶನವನ್ನು ಮಹಾತ್ಮರು ಮಾರ್ಚ ೧ನೇ ತಾರೀಖಿಗೆ ತೆರೆಯುವರು. ಪ್ರದರ್ಶನ ಸ್ಥಳ ಝೇಂಡಾ ಚೌಕ ಮತ್ತು ರಾಷ್ಟ್ರೀಯ ಸಭಾಮಂಟಪದ ನೆರೆಹೊರೆಯಲ್ಲಿದೆ. ಪ್ರದರ್ಶನದಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಕಲಾಕೌಶಲ್ಯಗಳ ಪ್ರದರ್ಶನವಾಗುವದು. ಒಕ್ಕಲಿಗರ, ಹರಿಜನರ-ಹಿಂದುಳಿದವರ, ಸ್ತ್ರೀಯರ ಇವರೆಲ್ಲರ ಉದ್ಧಾರಕ್ಕೆ ಸಂಬಂಧಿಸಿದ ಯಾವತ್ತು ಮಾಹಿತಿ ಪ್ರದರ್ಶನದಲ್ಲಿ ಇಡಲ್ಪಡುವದು. ಇದಲ್ಲದೆ ಮದ್ಯಪಾನೋಚ್ಚಾಟಣ, ಆರೋಗ್ಯರಕ್ಷಣೆ, ರಾಷ್ಟ್ರಭಾಷೆ, ಬೇಸಾಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯೂ ಪೂರೈಸಲ್ಪಡುವದು. ಅವಶ್ಯವುಳ್ಳ ನಕಾಶೆಗಳೂ, ಚಿತ್ರಗಳೂ, ಪಟಗಳೂ ತಯಾರಿಸಲ್ಪಡುತ್ತಿವೆ. ತ್ರಿಪುರಿಯೊಳಗಿನ ಕೊಂಗ್ರೆಸು ತೀರ ಮಾದರಿಯ ಕೊಂಗ್ರೆಸ್ಸಾಗುವದೆಂದು ಹೇಳುತ್ತಾರೆ. ಮಾದರಿಯದಾಗಬೇಕೆಂದು ಮಹಾತ್ಮರ ಅಪೇಕ್ಷೆ!!

— ಮುಂಬಯಿ ಮ್ಯುನಿಸಿಪಾಲಿಟಿಯವರು ಅನಾಥ ಹುಡುಗರಿಗಾಗಿ ಒಂದು ವಸಾಹತನ್ನು ಸ್ಥಾಪಿಸುವ ವಿಚಾರ ನಡಿಸಿದ್ದಾರೆ. ಇದಕ್ಕಾಗಿ ಮುಂಬಯಿ ಪಟ್ಟಣದ ಹೊರಗೆ ೧೦೦ ಎಕ್ರೆ ಸ್ಥಳವನ್ನು ಕೊಂಡುಕೊಳ್ಳಬೇಕೆಂದು ನಿಶ್ಚಯವಾಗಿದೆ. ಇದಕ್ಕಾಗಿ ರೂ. ೪ ಲಕ್ಷ ಖರ್ಚು ಮಾಡಬೇಕೆಂದು ಗೊತ್ತಾಗಿದೆ. ಮುಂಬಯಿಯಲ್ಲಿ ಮಾರ್ಗಗಳ ಮೇಲೆ ಅಲೆದಾಡುವ ನಿರಾಧಾರಿ ಮತ್ತು ಬಿಕ್ಕೆ ಬೇಡುವ ಮಕ್ಕಳಿಗೆ ಈ ವಸಾಹತಿಯಲ್ಲಿಟ್ಟು ೩ ವರ್ಷಗಳ ತನಕ ಬೇಸಾಯ ಮತ್ತು ಕೈಗಾರಿಕೆಗಳು ಕಲಿಸಲ್ಪಡುವವು. ಇದೀಗ ೭೫೦ ಮಂದಿ ಹುಡುಗರಿಗೆ ವ್ಯವಸ್ಥೆಯಾಗುವದು. ಲಂಡನಿನೊಳಗಿನ ಮ್ಯುನಿಸಿಪಾಲಿಟಿಯವರು ಇಂಥ ವಸಾಹತುಗಳನ್ನು ಬಹುಕಾಲದಿಂದ ನಡಿಸುತ್ತಿದ್ದಾರೆ. ಆ ಮಾದರಿಯ ಮೇಲೆಯೇ ಈ ವಸಾಹತು ನಿರ್ಮಾಣ ಹೊಂದುವವು. ಗೃಹಮಂತ್ರಿ ... ಮ ನಾ|| ಮುನಶಿಯವರೂ, ಸಮಾಜ ಸೇವಕರೂ ಯೋಜನೆಯನ್ನು ತಯಾರಿಸುತ್ತಿದ್ದಾರೆ. ಇನ್ನು ೨-೩ ತಿಂಗಳುಗಳಲ್ಲಿ ಈ ಯೋಜನೆ ಕಾರ್ಯರೂಪದಲ್ಲಿ ಒಡುವದು.

— ರವಿವಾರ ತಾರೀಖ ೧೮ನೇಗೆ ಅಲಹಾಬಾದದೊಳಗಿನ ವಿಶ್ವವಿದ್ಯಾಲಯದ ಸಭಾ ಮಂದಿರದಲ್ಲಿ ಮಹಾತ್ಮರ ತೈಲಚಿತ್ರ ಸ್ಥಾಪಿಸುವ ಸಮಾರಂಭ ಸಂಭ್ರಮದಿಂದ ನೆರವೇರಿತು. ಅಹಿಂಸೆಯಿಂದಲೇ ನಮ್ಮ ಉದ್ಧಾರವಾಗಬೇಕೆಂದು ಮಹಾತ್ಮರು ಸಂದೇಶ ಕಳಿಸಿದ್ದರು. ಮಹಾತ್ಮರ ಸ್ಮರಣೆ ಚಿತ್ರಪಟಕ್ಕಿಂತ ಅಂತಃಕರಣಪಟಲದ ಮೇಲೆ ಒಡಮೂಡಿರಬೇಕೆಂದು ರಾಷ್ಟ್ರಪತಿಗಳಾದ ಸುಭಾಸಚಂದ್ರ ಬೋಸರವರು ಸಂದೇಶ ಕಳಿಸಿದ್ದರು. ಮಹಾತ್ಮರ ಸ್ವದೇಶೋದ್ಧಾರ ಕಾರ್ಯವನ್ನು ನೆನಿಸಿ, ಅವರ ತತ್ವಗಳನ್ನು ಹಿಂಬಾಲಿಸಲು ತೈಲ-ಚಿತ್ರವು ಆಗಿಂದಾಗ ಪ್ರೇರಣೆ ಕೊಡಲೆಂದು ಪಂಡಿತ ಜವಾಹಿರಲಾಲ ನೆಹರೂರವರು ತಮ್ಮ ಸಂದೇಶದಲ್ಲಿ ನಮೂದಿಸಿದ್ದರು. ಅನಾವರಣ ಸಮಾರಂಭ ಮಾಡುವಾಗ ಸಂಯುಕ್ತ ಪ್ರಾಂತದ ಎಸೆಂಬ್ಲಿಯ ಸಭಾಪತಿಗಳಾದ ಶ್ರೀ| ಪುರುಷೋತ್ತಮದಾಸ ಟಂಡನ್‌ರವರು ಮಹಾತ್ಮರ ಗುಣವರ್ಣನೆ ಮಾಡಿ ಅವರ ವಚನಗಳನ್ನು ಪಾಲಿಸಿ ನಡಕೊಂಡರೆ ಹಿಂದುಸ್ಥಾನದ ಉದ್ಧಾರವಾಗುವದಾಗಿ ವಿದ್ಯಾರ್ಥಿಗಳಿಗೆ ಬೋಧಿಸಿ, ತೈಲ-ಚಿತ್ರವನ್ನು ಆನಂದೋತ್ಸಾಹದಿಂದ ಅನಾವರಣ ಮಾಡಿದರು.

— ಶ್ರೀ ಕಾಶಿ ಕ್ಷೇತ್ರದೊಳಗಿನ ಹಿಂದು ವಿಶ್ವವಿದ್ಯಾಲಯದ ಪದವಿದಾನ ಸಮಾರಂಭವು ಶನಿವಾರ ವಿಶ್ವವಿದ್ಯಾಲಯದಲ್ಲಿ ಒಳ್ಳೇ ಸಂಭ್ರಮದಿಂದ ನಡೆಯಿತು. ೬೭೦ ಮಂದಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪದವಿಗಳನ್ನೂ ಪದಕಗಳನ್ನೂ ವಿದ್ಯಾಲಯದ ಉಪಕುಲಪತಿಗಳಾದ ಪಂಡಿತ ಮದನ ಮೋಹನ ಮಾಲವೀಯರವರು ಅರ್ಪಿಸಿ ಸಕಲರಿಗೂ ಹರಸಿದರು. ಆ ಮೇಲೆ ಡಾ| ಸರ ಸರ್ವಪಳ್ಳಿ ರಾಧಾಕೃಷ್ಣರವರು ಪದವೀಧರರಿಗೆ ಸದ್ಬೋಧೆಯನ್ನಿತ್ತರು: ವಿದ್ಯಾಲಯದಲ್ಲಿ ಸಂಪಾದಿಸಿದ ವಿದ್ಯೆಯನ್ನು ಪ್ರಪಂಚದಲ್ಲಿ ಉಪಯೋಗಿಸಿಕೊಂಡರೆ ಮಾತ್ರ ಅದು ಸಾರ್ಥಕವೆಂದು ಡಾ|ರು ತಿಳಿಸಿ, ನೀತಿಯೇ ನಮ್ಮ ಸಕಲ ಚಟುವಟಿಕೆಗಳ ಮೂಲಾಧಾರವಿರಬೇಕೆಂದೂ, ನೀತಿಯ ತ್ಯಾಗ ಮಾಡಿ ಪಾಶ್ಚಾತ್ಯ ಜನಾಂಗಗಳು ವರ್ತಿಸತೊಡಗಿದ್ದರಿಂದ ಈವಾಗ ಯುದ್ಧಭೀತಿಯುಂಟಾಗಿ ಸರ್ವನಾಶವಾಗುವ ಪ್ರಸಂಗ ಬಂದಿರುವದಾಗಿಯೂ ಡಾ|ರು ಹೇಳಿ, ಪಾಶ್ಚಾತ್ಯ ಸಂಸ್ಕೃತಿಯನ್ನೂ ಅದಕ್ಕನುಸಾರವಾಗಿ ಆಚಾರ-ವಿಚಾರಗಳನ್ನೂ ನಡಿಸಹೋಗದೆ, ನೀತಿಯನ್ನೇ ಸಕಲ ವ್ಯವಹಾರಗಳಲ್ಲಿ ಅನುಸರಿಸಿ, ಜೀವನವನ್ನು ಸಾರ್ಥಕಗೊಳಿಸಬೇಕೆಂಬರ್ಥದ ಸ್ಫೂರ್ತಿದಾಯಕ ಭಾಷಣ ಮಾಡಿದರು. ಈ ಸಮಯ ಬಿಕಾನೇರದ ಮಹಾರಾಜರು ರೂ. ೨೫೦೦೦, ಕೋಟಲಿಯ ಮಹಾರಾಜರು ರೂ. ೫೦೦೦೦, ದರ್ಭಾಂಗಾದ ಮಹಾರಾಜಾಧಿರಾಜರು ರೂ. ೫೦೦೦೦ ಹೀಗೆ ೧| ಲಕ್ಷ ರೂ.ಗಳನ್ನು ವಿಶ್ವವಿದ್ಯಾಲಯಕ್ಕೆ ಅರ್ಪಿಸಿದರು.

— ಮುಂಬಯಿಯ ಡಾ| ರಾಜಬಲ್ಲಿ ವಿಶ್ರಾಮ ಪಟೇಲ, ಎಮ್. ಡಿ ಎಫ್. ಆರ್. ಸಿ. ಎಸ್. ರವರು ಶುಕ್ರವಾರ ತಾ. ೧೬ನೇಗೆ ತೀರಿಕೊಂಡರು; ಡಾಕ್ಟರರು ಧರ್ಮಾತ್ಮರು, ರಾಷ್ಟ್ರೀಯರು, ಮಹಾತ್ಮರ ಅನುಯಾಯಿಗಳು, ಧರ್ಮನಿಷ್ಠ ಮುಸಲ್ಮಾನರು; ತೀರ ಬಡತನದಿಂದ ಶ್ರೀಮಂತರಾದ ಪರಾಕ್ರಮಶಾಲಿಗಳು. ೩ ವರ್ಷ ಪ್ರಾಯದಲ್ಲೇ ಇವರ ತಾಯಿ-ತಂದೆಗಳು ತೀರಿಕೊಂಡರು. ಅನಾಥರಿದ್ದದರಿಂದ ಮಾರ್ಗದ ಮೇಲೆ ಹಚ್ಚಿದ ದೀಪಗಳಿಂದ ಓದಿ, ಅಭ್ಯಾಸಮಾಡಿದ್ದಾರೆ. ಶಿಕ್ಷಣ ಕೊಟ್ಟು ಸಂಪಾದನೆ ಮಾಡಿ ತಮ್ಮ ವೈದ್ಯಕ ಶಿಕ್ಷಣಕ್ರಮವನ್ನು ಮುಗಿಸಿ ಲಂಡನಿಗೆ ಹೋಗಿ ಎಮ್. ಡಿ., ಎಫ್. ಆರ್. ಸಿ. ಎಸ್ ಮೊದಲಾದ ವೈದ್ಯಜ್ಞಾನ ಸಂಪಾದನೆಯ ಪದವಿಯನ್ನು ಪಡೆದು ಮುಂಬಯಿಯಲ್ಲಿ ಬಹಳ ಸಂಪಾದನೆ ಮಾಡಿದರು. ಅಸಹಕಾರದಲ್ಲಿ ಡಾ||ರು ಮಹಾತ್ಮರ ಕಡೆ ರೂ ೫೦,೦೦೦ಗಳನ್ನು ಕೊಟ್ಟು ಲೋಕಕಾರ್ಯಕ್ಕೆ ಉಪಯೋಗಿಸಲು ಹೇಳಿದರು. ಇದಲ್ಲದೆ ಅನೇಕ ವಿದ್ಯಾರ್ಥಿಗಳಿಗೂ, ಅನಾಥರಿಗೂ, ಬಡವರಿಗೂ ದ್ರವ್ಯಸಹಾಯ ಮಾಡಿ ಒಳ್ಳೇ ಉಪಕಾರ ಮಾಡಿದ್ದಾರೆ. ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ತನು-ಮನ-ಧನದಿಂದ ದುಡಿದಿದ್ದಾರೆ. ಖಾದಿಯ ಮೇಲೆ ಡಾ|ರಿಗೆ ನಿತಾಂತ ನಿಷ್ಠೆ! ಮರಣೋತ್ತರ ಮೈಮೇಲೆ ಖಾದಿ-ಅರಿವೆಯ ಹೊದಿಕೆ ಹಾಕಿ ತಮ್ಮ ಉತ್ತರಕ್ರಿಯೆಯ ವಿಧಿಯನ್ನು ನಡಿಸಬೇಕಾಗಿ ಇವರು ವಿಧಿಸಿದ್ದರು. ಇವರಿಗೆ ೬ ಜನ ಗಂಡು ಮಕ್ಕಳು, ಒಂದು ಹುಡುಗಿ. ಒಬ್ಬ ಮಗಂದಿರು ಲಂಡನಿನಲ್ಲಿ ಡಾಕ್ಟರಿ ನಡಿಸುತ್ತಾರೆ. ಮಹಾತ್ಮರು ವಿಧವೆ ಝೆನಾಬರವರಿಗೆ ಕಳಿಸಿದ ದುಃಖಪ್ರದರ್ಶಕ ಸಂದೇಶದಲ್ಲಿ ಡಾಕ್ಟರರ ಪರಂಪರೆಯನ್ನು ಕುಟುಂಬದವರು ಪಾಲಿಸಬೇಕಾಗಿ ಕೋರುತ್ತಾರೆ

— ಮುಂಬಯಿಯೊಳಗೆ ಸೇರಲಿಕ್ಕಿದ್ದ ಪ್ರಾಂತಿಕ ಎಸೆಂಬ್ಲಿಯ ಅಧಿವೇಶನದಲ್ಲಿ ಒಕ್ಕಲತನದ ಕಾನೂನು, ಋಣಪರಿಹಾರ ಕಾನೂನುಗಳ ಪ್ರಾಥಮಿಕ ಚರ್ಚೆ ಮುಗಿದ ಬಳಿಕ ಕಾನೂನುಗಳನ್ನು ವಿವರಪೂರ್ವಕ ವಿಚಾರಿಸಿ, ತಿದ್ದುಪಾಟುಗಳನ್ನು ಸೂಚಿಸುವ ದೆಸೆಯಿಂದ ಆಲೋಚನಾ ಮಂಡಳಗಳು ನೇಮಿಸಲ್ಪಡುವವು ಮತ್ತು ಅಧಿವೇಶನವು ವಿಸರ್ಜಿಸಲ್ಪಡುವದು. ಜಮಾ-ಖರ್ಚು ಪತ್ರಿಕೆಯನ್ನು ಚರ್ಚಿಸುವ ಅಧಿವೇಶನ ಮಾರ್ಚ ತಿಂಗಳಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನದ ಕಾರ್ಯಕ್ರಮ ತಪ್ಪಿಸಿ ಇಡಲ್ಪಡುವದು. ಜಮಾ-ಖರ್ಚು ಪತ್ರಿಕೆಯ ಚರ್ಚೆಯಾಗಿ, ಒಕ್ಕಲತನ-ಋಣಪರಿಹಾರ ಕಾನೂನುಗಳಾಗಲು ಅವಧಿ ಕಳೆಯುವದರಿಂದ ಒಕ್ಕಲಿಗರ ವಿರುದ್ಧ ಹೊರಡಿಸಿದ ಸಾಲ-ವಸೂಲಿಯ ಕ್ರಮಗಳಿಗೆ ಇನ್ನು ೧ ವರ್ಷದ ತನಕ ಅವಧಿ ಕೊಡಬೇಕೆಂದು ಮುಂಬಯಿ ಸರಕಾರದ ನಿರ್ಣಯವಾಗಿರುವದಾಗಿ ತಿಳಿಯುತ್ತದೆ.

ಶ್ರೀ

'ದಶಮೂಲಾರಿಷ್ಟ.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರ ಕಡೆಗೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡು ಬರುವದುಂಟೇ? ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನು ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ಪಾಂಡು,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಶೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶಕ್ತಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ವಂಶದ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವ ಮುಂತಾದ ರೋಗಗಳಿಗೆ ಅತ್ಯಂತ ಗುಣಕಾರಿಯಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ.— ಪ್ರಸೂತಿ ಆದನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸು ಮಾತ್ರ ೧೨ ದಿವಸಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾಳೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ. ೧—೪—೦.

,, ಬಾಟ್ಲಿ ೬ಕ್ಕೆ ರೂ. ೬—೧೨—೦.

,, ಬಾಟ್ಲಿ ೧೨ಕ್ಕೆ ರೂ. ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಪುಷ್ಪ ಕೂಷ್ಮಾಂಡಪಾಕ, ವೃದ್ಧಿವಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಅನೇಕ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ. —

ಪಿ. ಅಚ್ಯುತ ಪಂಡಿತ,

ಮಾಲಕ,

ಆರ್ಯಧನ್ವಂತರಿ ಔಷಧಾಲಯ,

ಪೋಸ್ಟ:— ಕುಮಟಾ. (ಉ. ಕನ್ನಡ)

ಶ್ರೀ ಧನ್ವಂತರಿ ಪಾಂಡುರಂಗ ರಸಾಯನ ಶಾಲೆ ಕಾರಖಾನೆ

— TRADE MARK —

ಪನವೇಲ ಕುಲಾಬಾ

— ಈ ಸಂಸ್ಥೆಯ —

ಬಾಣಂತಿತನದಲ್ಲಿ ಮತ್ತು ಅಶಕ್ತತೆಯಮೇಲೆ ಉಪಯುಕ್ತ ಔಷಧವು

ಅಭ್ರಲೋಹ

ABHRALOHA

ದೊರೆಯುವ ಸ್ಥಳ— ಕಾರವಾರ - ಮೆಸರ್ಸ ಮುಜುಮದಾರ-ಕಸಬೇಕರ ಬ್ರದರ್ಸ. ಅಂಕೋಲಾ - ದಿ ಸ್ಟೇಶನರಿ ಡಿಪೋ ॥ ಕುಮಟಾ - ದೇವಪ್ಪ ಅಯ್ಯಪ್ಪನಾಯ್ಕ ॥ ಹೊನ್ನಾವರ - ಕಲ್ಯಾಣಪುರ ಬ್ರದರ್ಸ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ. ಲಿಮಿಟೆಡ್

ಸ್ಥಾಪನೆ: 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳ ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
K. N Nayak.
Honavar Agent -
R. V. Prabhu

K. Padmanabha Rao & Sons.
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮತ್ತು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ಪ್ಲಾಸ್ಟಿಕ ೪ ಆಣೆ ಡಜನ್ ೧ಕ್ಕೆ ರೂ. ೩-೮-೦. ವಿ. ಪಿ. ೦-೩-೦

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪೋರ್ಟಟೌನ, ಮದರಾಸ.

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.